ಕರ್ನಾಟಕ ಸರ್ಕಾರ

## ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

## ಮತ್ತು

# ಭಾಷಣಗಳು



೧೦

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ -೧೩೯
ವಿಚಾರ ಸಾಹಿತ್ಯಮಾಲೆ -೪೨

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

ಸಂಪುಟ ೧೦

## ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೧೦)

## ಸಿದ್ಧಾರ್ಥ ಗೌತಮ – ಬೋಧಿಸತ್ವನು ಹೇಗೆ ಬುದ್ಧನಾದನು?
## ಪರಿವರ್ತನೆಯ ಪ್ರಚಾರ
## ಬುದ್ಧ ಬೋಧಿಸಿದ್ದು ಏನು?

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 10** — Kannada translation of the Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Third Edition: 2015; Pp. xxx+548; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ: ೨೦೧೫
ಪುಟಗಳು : xxx + ೫೪೮
ಬೆಲೆ : ರೂ. ೫೦/–
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ|| ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ|| ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು – ೫೬೦ ೦೨೭
ದೂ: ೦೮೦–೨೨೨೩೪೦೬೬, ೦೮೦–೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೦೫.೦೬.೨೦೧೫

ಸಿಎಂ/ಪಿಎಸ್/೧೫೦/೨೦೧೫

## ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

**(ಸಿದ್ದರಾಮಯ್ಯ)**

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟುಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿ ನಿಲಯಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯಮಾಡಿಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಹೆಚ್.ಆಂಜನೇಯ)**

ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೬೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮುದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದುಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

**(ಡಾ. ಎನ್.ಎಸ್. ಚನ್ನಪ್ಪಗೌಡ)**

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

## ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು–ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ ಜೀವಿತ–

ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ–ಕಿರಿಯ ಲೇಖಕರುಗಳು ಹತ್ತಾರು ಜೀವನ–ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಝಫ್ಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ! ಸಂಘಟನೆ !! ಹೋರಾಟ!!! (Educate ! Organize!! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ–ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ, ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪–೩–೨೦೦೮).

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨–೬–೨೦೦೮ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯–೮–೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ–ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗಾಗಲೇ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ:

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಈಗ ೧೦ ರಿಂದ ೧೪ ರವರೆಗಿನ ಸಂಪುಟಗಳ ಪರಿಷ್ಕೃತ ಆವೃತ್ತಿಗಳನ್ನು ಹಾಗೂ ಹೊಸದಾಗಿ ಅನುವಾದಿಸಿ ಪ್ರಕಟಿಸಲಾಗುತ್ತಿರುವ ೧೯ ಮತ್ತು ೨೦ನೆಯ ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಕಾರ್ಯಗಳಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀ ಎಸ್.ಆರ್. ಗೌತಮ್ (ಸಂ. ೧೦; ಭಾಗಗಳು ೧–೩ ಮತ್ತು ಸಂ. ೧೪, ಭಾಗ ೨)

೨. ಶ್ರೀ ಜೆ.ಎನ್. ಶಾಮರಾವ್ (ಸಂ. ೧೧; ಭಾಗಗಳು ೧–೨)

೩. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೧೨; ಭಾಗಗಳು ೧–೨)

೪. ಶ್ರೀ ಕೃಷ್ಣ ಮೂರ್ತಿ ಸಿರ್ಸಿ (ಸಂ. ೧೩; ಭಾಗಗಳು ೧–೨; ಸಂ. ೧೪ ಭಾಗ ೧(ಅ) ಮತ್ತು (ಆ))

೫. ಶ್ರೀಮತಿ ಅಕ್ಷತಾ ದೇಶಪಾಂಡೆ ಮತ್ತು ಶ್ರೀಮತಿ ಸುಮಾ ದ್ವಾರಕನಾಥ (ಸಂ. ೧೯)

೬. ಶ್ರೀಮತಿ ಶ್ಯಾಮಲಾ ಮಾಧವ್ ಮತ್ತು ಶ್ರೀ ವಿರೂಪಾಕ್ಷ ಕುಲಕರ್ಣಿ (ಸಂ. ೨೦)

ಇವರೆಲ್ಲರ ಸಹಾಯ–ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ವಿಶೇಷವಾಗಿ, ಹನ್ನೊಂದನೆಯ ಸಂಪುಟದ ಈ ಭಾಗದಲ್ಲಿ ಕಾಣಿಸಿಕೊಂಡಿರುವ ಪಾಳಿ ಭಾಷೆಯ ಶಬ್ದಗಳ ಸರಿಯಾದ ಉಚ್ಚಾರಣೆಯನ್ನು ಹಾಗೂ ಅಂಕಿತನಾಮಗಳ ಶಿಷ್ಟ ರೂಪಗಳನ್ನೂ ತಿಳಿಸಿಕೊಟ್ಟು ಉಪಕರಿಸಿರುವ ಹಾಗೂ ಪಠ್ಯ ಭಾಗದ ಸುಲಲಿತ ಓದಿಗೆ ನೆರವಾಗಿರುವ ಸನ್ಮಾನ್ಯ ಶತಾವಧಾನಿ ಆರ್. ಗಣೇಶ್ ಅವರಿಗೆ ನಮ್ಮ ಕೃತಜ್ಞತೆಗಳು.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ–ಸಹಕಾರ–ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಆಯುಕ್ತರಾದ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೆ ನಮ್ಮ ಕೃತಜ್ಞತೆಗಳು.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ವಿದ್ವಾಂಸರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ.ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ.ಎಲ್.ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**

ಅಧ್ಯಕ್ಷ

ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಡಾ. ಅಂಬೇಡ್ಕರರು ಜಾತ್ಯತೀತ, ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲ ವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದರು, ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೆ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರೂ ಆಗಿದ್ದರಲ್ಲದೆ, ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿಪದ್ಧತಿ, ಅಸ್ಪೃಶ್ಯತೆ, ಬಡತನ, ಮುಂತಾದ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ 'ಜಾತಿ ನಿರ್ಮೂಲನೆ'; 'ಶೂದ್ರರು ಯಾರು', 'ಅಸ್ಪೃಶ್ಯರು ಯಾರು, ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು'?; 'ರೂಪಾಯಿಯ ಸಮಸ್ಯೆ', 'ಪಾಕಿಸ್ತಾನ ಅಥವಾ ಭಾರತದ ವಿಭಜನೆ' ಪ್ರಮುಖವಾಗಿವೆ. 'ಬುದ್ಧ ಮತ್ತು ಅವನ ಧಮ್ಮ' ಇದು ಅವರ ಮರಣೋತ್ತರ ಪ್ರಕಟಣೆ, ಇವುಗಳೂ ಅಲ್ಲದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿ ವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ॥ ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ॥ ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೇ ಬರೆದಿದ್ದಾರೆ. ಅವರ ಬರವಣಿಗೆಯ ಕೆಲ ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ, ನಡೆಸಿಕೊಂಡು ಬಂದ ಪಾಕ್ಷಿಕಗಳಾದ 'ಸಮತಾ', 'ಜನತಾ' ಮತ್ತು 'ಬಹಿಷ್ಕೃತ ಭಾರತ' ಇವುಗಳಲ್ಲಿ ಮರಾಠಿಯಲ್ಲಿಯೇ ಅಗ್ರಲೇಖನಗಳಾಗಿ ಬಂದಿವೆ. ಅವರು ಮಾಡಿದ

ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ॥ ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ರಲ್ಲಿಯೇ ಪ್ರಕಟಿಸಿದರು. ನಂತರ ೧೯೨೩ರಿಂದ ೧೯೫೬ರ ವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಇವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ. ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನಸಭೆಗಳಲ್ಲಿ, ನಂತರ ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ॥ ಅಂಬೇಡ್ಕರ್ ಅವರ ವಿಚಾರಗಳು ಅಂದೂ ಅಲ್ಲದೆ ಇಂದೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಕಾಲಕ್ರಮೇಣ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲದಾಗಿದೆ. ಅವುಗಳೆಲ್ಲವು ಸಂಪೂರ್ಣವಾಗಿ ಅಳಿದುಹೋಗುವ ಅಪಾಯ ಇದೆ. ಇದನ್ನರಿತ ಮಹಾರಾಷ್ಟ್ರ ಸರ್ಕಾರದವರೂ ಡಾ. ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಅವಶ್ಯ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪು–ರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟಣಾ ಸಮಿತಿ, ಮಹಾರಾಷ್ಟ್ರ ಸರ್ಕಾರ ಎಂಬ ಸಮಿತಿಯನ್ನು ರಚಿಸಿ, ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೬ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಇದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್ ಅವರ ಪರಿಶ್ರಮ ಮುಖ್ಯ ಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಎಲ್ಲಾ ಬರಹಗಳನ್ನು ಸಂಗ್ರಹಿಸಿ "ಡಾ. ಬಾಬಾಸಾಹೇಬ್ ಅಂಬೇಡ್ಕರ್ – ಬರೆಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು, ಇದುವರೆಗೆ ಒಟ್ಟು ಹದಿನಾಲ್ಕು ಸಂಪುಟಗಳನ್ನು ಪ್ರಕಟಿಸಿದೆ. ಇದುವರೆಗೆ ಪ್ರಕಟವಾದ ಹದಿನಾಲ್ಕು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರೆಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ 'ಜಾತಿ ನಿರ್ಮೂಲನೆ', 'ಭಾಷಾವಾರು ಪ್ರಾಂತ್ರ್ಯಗಳು', 'ರಾನಡೆ, ಗಾಂಧಿ, ಜಿನ್ನಾ', 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು', 'ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ' ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ, ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಹಿಂದೂ ಧರ್ಮ ದರ್ಶನ', 'ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ'; 'ಭಾರತ ಮತ್ತು ಸಮತಾವಾದದ ಪೂರ್ವಭಾವಿ

ಆವಶ್ಯಕತೆಗಳು'; 'ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್' ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹ ವಾಲೆ 'ಹಿಂದೂ ಧರ್ಮದ ಒಗಟುಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೇಲಕಾಲ ತಡಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಇದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು ಅವರ ಮಹಾಪ್ರಬಂಧ "ರೂಪಾಯಿಯ ಸಮಸ್ಯೆ" ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ "ಶೂದ್ರರು ಯಾರು? ಅವರು ಹಿಂದೂ ಆರ್ಯ ಸಮಾಜದ ನಾಲ್ಕನೆಯ ವರ್ಣ ಹೇಗಾದರು?" ಮತ್ತು "ಅಸ್ಪೃಶ್ಯರು ಯಾರು? – ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?" ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್‌ಮುದ್ರಿಸಲಾಗಿದೆ. ೧೯೯೦ರಲ್ಲಿ ಪ್ರಕಟಿಸಲಾದ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ "ಪಾಕಿಸ್ತಾನ ಅಥವಾ ಭಾರತದ ವಿಭಜನೆ"ಯ ಪುನರ್‌ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂದಿನ ಸಂಪುಟಗಳಲ್ಲಿ ಗವರ್ನರ್ ಜನರಲ್ ಪರಿಷತ್ತು, ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨–೧೯೪೬), "ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು?" ಹಾಗೂ "ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ"; (೯ನೆಯ ಸಂಪುಟ, ೧೯೯೧), ಮುಂಬಯಿಯ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರಹಗಳು; ಮತ್ತು ಇತರ ಸಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟ (೧೯೯೧)ದಲ್ಲಿ ಅವರು ಗವರ್ನರ್–ಜನರಲ್‌ರವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ. ೧೯೯೨ರಲ್ಲಿ ಪ್ರಕಟವಾಗಿರುವ ೧೧ನೆಯ ಸಂಪುಟವು "ಬುದ್ಧ ಮತ್ತು ಅವನ ಧಮ್ಮ" ಗ್ರಂಥದ ಪುನರ್ ಮುದ್ರಣ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ "ಪ್ರಾಚೀನ ಭಾರತದ ವಾಣಿಜ್ಯ" "ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ", "ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು", 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು', 'ವೀಸಾಕ್ಕಾಗಿ ಕಾದಿದ್ದು', ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯಕ್ತವೂ ಆಗಿದೆ. ಇದರಲ್ಲಿ ಡಾ. ಅಂಬೇಡ್ಕರ್‌ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಪಾತ್ರದ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ನೀಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳನ್ನು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮನಗಂಡು ಅವುಗಳಿಗೆ ಡಾ. ಅಂಬೇಡ್ಕರ್‌ರು ನೀಡಿದ ವಿವರಣೆಗಳೂ ಸೇರಿವೆ. ೧೯೯೫ರಲ್ಲಿ ಪ್ರಕಟವಾಗಿರುವ ೧೪ನೆಯ ಸಂಪುಟವು ಎರಡು ಭಾಗಗಳಿದ್ದು ಇವೆರಡೂ ಭಾಗಗಳಲ್ಲಿ ಡಾ. ಅಂಬೇಡ್ಕರ್‌ರು ಸ್ವತಂತ್ರ ಭಾರತದ ಸಂತ್ತಿನಲ್ಲಿ ಮಂಡಿಸಿದ ಮಹತ್ತರವಾದ ಮಸೂದೆ ಎನಿಸಿದ 'ಹಿಂದೂ ಕೋಡ್ ಬಿಲ್' ಬಗ್ಗೆ ಪೂರ್ಣ ಪರಿಚಯವಿದೆ. ಈ ಮಸೂದೆಯ ರೂಪುರೇಷೆಗಳು ಮತ್ತು ಅದರ ಬಗ್ಗೆ ಡಾ. ಅಂಬೇಡ್ಕರ್‌ರು ನೀಡಿದ ವಿವರಣೆ ಮತ್ತು ನಂತರ ಜರುಗಿದ ಚರ್ಚೆಗಳ ಸಂಪೂರ್ಣ ವಿವರಣೆ ಈ ಸಂಪುಟದ ಎರಡೂ ಭಾಗಗಳಲ್ಲಿ ಲಭ್ಯವಿವೆ.

ಡಾ॥ ಅಂಬೇಡ್ಕರ್ ಅವರ ಅಮೂಲ್ಯ ಸಮಗ್ರ ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ॥ ಅಂಬೇಡ್ಕರ್ ಅವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಅವರ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಅವಶ್ಯಕತೆಯನ್ನು ಮೊಟ್ಟಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

೧) ಡಾ॥ ಎ.ಎಂ. ರಾಜಶೇಖರಯ್ಯ – ಸಂಪಾದಕರು

೨) ಡಾ॥ ಸಿದ್ಧಲಿಂಗಯ್ಯ – ಸದಸ್ಯರು

೩) ಶ್ರೀ ದೇವನೂರು ಮಹಾದೇವ – ಸದಸ್ಯರು

೪) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಬೆಂಗಳೂರು – ಸದಸ್ಯ ಕಾರ್ಯದರ್ಶಿ

ಸಮಿತಿಯ ಪ್ರಥಮ ಸಭೆ ೩೦–೮–೧೯೮೮ರಂದು ಬೆಂಗಳೂರಿನಲ್ಲಿ ಸೇರಿ ಡಾ॥ ಅಂಬೇಡ್ಕರ್ ಅವರ ಪ್ರಕಟಿತ ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ ಮತ್ತು ಅವುಗಳಲ್ಲಿ ಕೆಲವು ಲಭ್ಯವಿಲ್ಲದಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨–೫–೧೯೮೯ರ ತಮ್ಮ ಪತ್ರದಲ್ಲಿ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಅನಂತರ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು. ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ॥ ಅಂಬೇಡ್ಕರ್ ಅವರ ಬರಹಗಳ ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದುವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅದರ ಆಳವಾದ ಅಧ್ಯಯನ ಮತ್ತು ಮನನ ಅವಶ್ಯ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ, ಶೈಲಿ, ಪರಿಭಾಷಾ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

(೧) ಡಾ॥ ಆರ್.ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೨) ಡಾ॥ ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು

(೩) ದಿ. ಶ್ರೀ ವೈ.ಎಂ.ಸಿ. ಶರ್ಮ ಅಂದಿನ ಅಧ್ಯಕ್ಷರು, ಕರ್ನಾಟಕ ರಾಜಭಾಷಾ ಆಯೋಗ, ಬೆಂಗಳೂರು ನಂತರ ದಿ. ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದ ಬಳಕೆ, ಭಾಷೆ, ಶೈಲಿ ಮುಂತದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮ ತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಿ ಹೆಚ್ಚು ಶ್ರಮವಹಿಸಿ ಭಾಷಾಂತರದ ಮಟ್ಟವನ್ನು ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗುತ್ತಿರುವ ಈ ಸಂಪುಟವು ಡಾ. ಅಂಬೇಡ್ಕರರ ಜೀವನದ ಅತ್ಯಂತ ಮಹತ್ವದ ಅವಧಿಗೆ ಸಂಬಂಧಪಟ್ಟದ್ದಾಗಿದೆ. 'ನಾನು ಹಿಂದೂವಾಗಿ ಸಾಯಲಾರೆ' ಎಂದು ಹೇಳಿದ್ದ ಡಾ. ಅಂಬೇಡ್ಕರ್ ತಮ್ಮ ಪರಿನಿರ್ವಾಣಕ್ಕೆ ಸ್ವಲ್ಪ ಮೊದಲು ಲಕ್ಷಾಂತರ ಅನುಯಾಯಿಗಳ ಜೊತೆಯಲ್ಲಿ ಹಿಂದೂಧರ್ಮದಿಂದ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು. ಮಾನವನ ದುಃಖ ದುಮ್ಮಾನಗಳಿಗೆಲ್ಲ ಪರಿಹಾರ ತೋರಿದ ಮಾರ್ಗದಾತ ಭಗವಾನ್ ಬುದ್ಧನನ್ನು ಅನುಸರಿಸಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಾನವನ ಎಲ್ಲ ಸಂಕಟಗಳಿಗೂ ಪರಿಹಾರ ಬೌದ್ಧಧರ್ಮದಲ್ಲಿದೆ ಎಂದು ಸಾರಿದರು. ಬೌದ್ಧಧರ್ಮದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯು ಇದೆ ಎಂದು ಡಾ. ಅಂಬೇಡ್ಕರ್ ನಂಬಿದ್ದರು. ಬುದ್ಧನ ಪ್ರಕಾರ ಪ್ರಪಂಚದಲ್ಲಿ ದುಃಖವಿದೆ. ಅವನು ಶೋಷಣೆ ಎಂಬ ಪದವನ್ನು ಬಳಸಿಲ್ಲ. ಆದರೆ ದುಃಖದ ಆಧಾರದ ಮೇಲೆ ತನ್ನ ಧರ್ಮದ ತಳಹದಿಯನ್ನು ನಿರ್ಮಿಸಿದನು. 'ದುಃಖ' ಎಂಬ ಪದವನ್ನು 'ಆಸ್ತಿ' ಎಂಬ ಅರ್ಥದಲ್ಲಿ ಬುದ್ಧ ಬಳಸಿದ್ದಾನೆ. ಬುದ್ಧ ಯಾವುದೇ ಭಿಕ್ಷುವು ಆಸ್ತಿಯನ್ನು ಹೊಂದಿರಬಾರದೆಂದನು.

ಆದ್ದರಿಂದ ದುಃಖದ ನಿವಾರಣೆಗೆ ಅಂದರೆ ಖಾಸಗಿ ಆಸ್ತಿಯ ನಿವಾರಣೆಗೆ ಬೌದ್ಧರ ಮಾರ್ಗವೇ ಸೂಕ್ತ ಎಂಬುದು ಡಾ. ಅಂಬೇಡ್ಕರರ ಅಭಿಪ್ರಾಯ. ಹನ್ನೊಂದನೆಯ ಸಂಪುಟದಲ್ಲಿ ಬುದ್ಧ ಮತ್ತು ಅವನ ಧಮ್ಮದ ಬಗ್ಗೆ ಡಾ. ಅಂಬೇಡ್ಕರ್ ಅವರ ಪಾಂಡಿತ್ಯಪೂರ್ಣ ವಿಚಾರಧಾರೆ ಪ್ರಕಟವಾಗಿದೆ. ಇದರಲ್ಲಿ ಪಾಳಿ ಶಬ್ದಗಳು, ವಿಪುಲವಾಗಿ ಬಂದಿವೆ. ಅದರ ಕನ್ನಡ ಶಬ್ದಗಳನ್ನು ಕೆಲವೆಡೆ ಈ ಸಂಪುಟದಲ್ಲಿ ನೀಡಲಾಗಿದೆ.

ಬುದ್ಧ ಮತ್ತು ಅವನ ಧಮ್ಮವು ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿದೆ. ಈಗ ಪ್ರಕಟವಾಗುತ್ತಿರುವ ಬುದ್ಧ ಮತ್ತು ಅವನ ಧಮ್ಮದ ಭಾಷಾಂತರವು ಬಹಳ ಚೆನ್ನಾಗಿ ಬಂದಿದೆ.

ಈ ಸಂಪುಟದ ಭಾಷಾಂತರವನ್ನು ಆಸಕ್ತಿಯಿಂದ ಮಾಡಿಕೊಟ್ಟಿರುವ ಎಲ್ಲಾ ವಿದ್ವಾಂಸರಿಗೆ ಸಂಪಾದಕ ಸಮಿತಿ ಆಭಾರಿಯಾಗಿದೆ. ಭಾಷಾಂತರದ ಪರಿಷ್ಕರಣ ಕಾರ್ಯವನ್ನು ಹಿರಿಯ ವಿದ್ವಾಂಸರೂ, ತಜ್ಞರೂ ಆದ ಡಾ. ದೇ. ಜವರೇಗೌಡ ಅವರು ಬಹಳ ಆಸಕ್ತಿಯಿಂದ ಮಾಡಿಕೊಟ್ಟದ್ದಕ್ಕಾಗಿ ಸಂಪಾದಕ ಸಮಿತಿ ಅವರಿಗೆ ಚಿರಋಣಿಯಾಗಿದೆ. ಈ ಸಂಪುಟದ ಭಾಷಾಂತರ ಮತ್ತು ಪ್ರಕಟಣ ಕಾರ್ಯದಲ್ಲಿ ಆಸಕ್ತಿ ವಹಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ವೈ.ಕೆ. ಮುದ್ದುಕೃಷ್ಣ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಸಂಪಾದಕ ಸಮಿತಿ ಆಭಾರಿಯಾಗಿದೆ. ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯದವರಿಗೆ ನಮ್ಮ ಧನ್ಯವಾದಗಳು.

**ಡಾ|| ಎ.ಎಂ. ರಾಜಶೇಖರಯ್ಯ**
ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


| | |
|---|---|
| ಸಂದೇಶಗಳು | v |
| ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ | x |
| ಎರಡನೇ ಮುದ್ರಣಕ್ಕೆ ಮುನ್ನುಡಿ | xiv |
| ಮೂರನೇ ಮುದ್ರಣಕ್ಕೆ ಮುನ್ನುಡಿ | xv |
| ಸಂಪಾದಕೀಯ | xvi |

**ಭಾಗ – ೧**

**ಪರ್ವ–೧**

| | |
|---|---|
| **ಸಿದ್ಧಾರ್ಥ ಗೌತಮ – ಬೋಧಿಸತ್ವನು ಹೇಗೆ ಬುದ್ಧನಾದನು?** | ೧ |
| ವಿಭಾಗ ೧ : ಹುಟ್ಟಿದಂದಿನಿಂದ ಪರಿವ್ರಾಜಕತ್ವದವರೆಗೆ | ೩ |
| ವಿಭಾಗ ೨ : ಶಾಶ್ವತ ಪರಿತ್ಯಾಗ | ೪೩ |
| ವಿಭಾಗ ೩ : ಹೊಸ ಬೆಳಕಿನ ಅನ್ವೇಷಣೆ | ೫೫ |
| ವಿಭಾಗ ೪ : ಜ್ಞಾನೋದಯ ಮತ್ತು ಹೊಸ ದರ್ಶನದ ಆವಿರ್ಭಾವ | ೬೫ |
| ವಿಭಾಗ ೫ : ಬುದ್ಧ ಮತ್ತು ಅವನ ಪೂರ್ವಿಕರು | ೭೩ |
| ವಿಭಾಗ ೬ : ಬುದ್ಧ ಮತ್ತು ಅವನ ಸಮಕಾಲೀನ ಚಿಂತಕರು | ೮೭ |
| ವಿಭಾಗ ೭ : ಹೋಲಿಕೆ ಮತ್ತು ವ್ಯತ್ಯಾಸ | ೯೩ |

**ಪರ್ವ–೨**

| | |
|---|---|
| **ಪರಿವರ್ತನೆಯ ಪ್ರಚಾರ** | **೯೯** |
| **ಭಾಗ : ೧ ಬುದ್ಧ ಮತ್ತು ಅವನ ವಿಷಾದ ಯೋಗ** | |
| ೧. ಬೋಧಿಸುವುದೋ ಬೇಡವೋ? | ೧೦೧ |
| ೨. ಬ್ರಹ್ಮ ಸರ್ವಂಪತಿಯಿಂದ ಸುವಾರ್ತೆಯ ಘೋಷಣೆ | ೧೦೩ |
| ೩. ಪರಿವರ್ತನೆಯ ಎರಡು ಪ್ರಕಾರಗಳು | ೧೦೩ |
| **ಭಾಗ : ೨ ಪರಿವ್ರಾಜಕರ ಪರಿವರ್ತನೆ** | **೧೦೫** |
| ೧. ಸಾರನಾಥಕ್ಕೆ ಆಗಮನ | ೧೦೭ |
| ೨. ಬುದ್ಧನ ಪ್ರಥಮೋಪದೇಶ | ೧೦೮ |

೩. ಬುದ್ಧನ ಪ್ರಥಮೋಪದೇಶ (ಮುಂದುವರಿದುದು) ೧೧೦
೪. ಬುದ್ಧನ ಪ್ರಥಮೋಪದೇಶ (ಮುಂದುವರಿದುದು) ೧೧೧
೫. ಬುದ್ಧನ ಪ್ರಥಮೋಪದೇಶ (ಮುಂದುವರಿದುದು) ೧೧೪
೬. ಬುದ್ಧನ ಪ್ರಥಮೋಪದೇಶ (ಮುಕ್ತಾಯ) ೧೧೫
೭. ಪರಿವ್ರಾಜಕರ ಪ್ರತಿಕ್ರಿಯ ೧೧೫

**ಭಾಗ : ೩ ಮೇಲ್ವರ್ಗದವರ ಹಾಗೂ ಪೂಜ್ಯರ ಪರಿವರ್ತನೆ** **೧೧೯**

೧. ಯಶಸ್‌ನ ಪರಿವರ್ತನೆ ೧೨೧
೨. ಕಶ್ಯಪರ ಪರಿವರ್ತನೆ ೧೨೩
೩. ಸಾರಿಪುತ್ರ ಮತ್ತು ಮೌದ್ಗಲಾಯನರ ಪರಿವರ್ತನೆ ೧೨೬
೪. ಬಿಂಬಸಾರನ ಪರಿವರ್ತನೆ ೧೨೮
೫. ಅನಂತಪಿಂಡಿಕನ ಪರಿವರ್ತನೆ ೧೩೦
೬. ದೊರೆ ಪ್ರಸೇನಜಿತನ ಪರಿವರ್ತನೆ ೧೩೩
೭. ಜೀವಕನ ಪರಿವರ್ತನೆ ೧೩೫
೮. ರಾಷ್ಟ್ರಪಾಲನ ಪರಿವರ್ತನೆ ೧೩೬

**ಭಾಗ : ೪ ಮನೆಯ ಕರೆ**

೧. ಶುದ್ಧೋದನ ಮತ್ತು ಅವನ ಕೊನೆಯ ದರ್ಶನ ೧೪೫
೨. ಯಶೋಧರೆ ಮತ್ತು ರಾಹುಲರ ಭೇಟಿ ೧೪೭
೩. ಶಾಕ್ಯರಿಂದ ಸ್ವಾಗತ ೧೪೯
೪. ಮಗನನ್ನು ಗೃಹಸ್ಥನಾಗಿ ಮಾಡುವ ಕೊನೆಯ ಪ್ರಯತ್ನ ೧೫೨
೫. ಬುದ್ಧನ ಉತ್ತರ ೧೫೩
೬. ಮಂತ್ರಿಯ ಉತ್ತರ ೧೫೪
೭. ಬುದ್ಧನ ನಿರ್ಧಾರ ೧೫೬

**ಭಾಗ : ೫ ಪರಿವರ್ತನ ಪ್ರಚಾರ – ಪುನರಾರಂಭ**

೧. ಗ್ರಾಮ್ಯ ಪ್ರದೇಶದ ಬ್ರಾಹ್ಮಣರ ಪರಿವರ್ತನೆ ೧೬೧
೨. ಉತ್ತರಾವತಿಯ ಬ್ರಾಹ್ಮಣರ ಪರಿವರ್ತನೆ ೧೬೩

**ಭಾಗ : ೬ ಕೆಳವರ್ಗದವರ ಹಾಗೂ ದೀನರ ಪರಿವರ್ತನೆ**

೧. ಕ್ಷೌರಿಕ ಉಪಾಲಿಯ ಪರಿವರ್ತನೆ ೧೬೭
೨. ಪೌರಕಾರ್ಮಿಕ ಸುನೀತನ ಪರಿವರ್ತನೆ ೧೬೭
೩. ಶೋಭಕ ಮತ್ತು ಸುಪ್ರಿಯ ಎಂಬ ಅಸ್ಪೃಶ್ಯರ ಪರಿವರ್ತನೆ ೧೬೮
೪. ಸುಮಂಗಲ ಮತ್ತು ಇತರ ಕೆಳಜಾತಿಯವರ ಪರಿವರ್ತನೆ ೧೬೯
೫. ಕುಷ್ಠರೋಗಿ ಸುಪ್ರಬುದ್ಧನ ಪರಿವರ್ತನೆ ೧೭೦

**ಭಾಗ : ೭ ಸ್ತ್ರೀಯರ ಪರಿವರ್ತನೆ**

೧. ಮಹಾಪ್ರಜಾಪತಿ ಗೋತಮಿ, ಯಶೋಧರೆ ಮತ್ತು ಆಕೆಯ ಒಡನಾಡಿಗಳ ಪರಿವರ್ತನೆ ೧೭೫
೨. ಪ್ರಕೃತಿ ಎಂಬ ಚಂಡಾಲಿಕೆಯ ಪರಿವರ್ತನೆ ೧೮೮

**ಭಾಗ : ೮ ಪತಿತರ ಮತ್ತು ಅಪರಾಧಿಗಳ ಪರಿವರ್ತನೆ**
೧. ಅಲೆಮಾರಿಯ ಪರಿವರ್ತನೆ ೧೮೫
೨. ದರೋಡೆಕಾರ ಅಂಗಲೀಮಾಲನ ಪರಿವರ್ತನೆ ೧೮೬
೩. ಇತರ ಅಪರಾಧಿಗಳ ಪರಿವರ್ತನೆ ೧೮೯
೪. ಪರಿವರ್ತನೆಯ ಗಂಡಾಂತರ ೧೯೦

**ಪರ್ವ–೩**

**ಬುದ್ಧ ಬೋಧಿಸಿದ್ದು ಏನು?** ೧೯೩

**ಭಾಗ : ೧ ಆತನ ಧಮ್ಮದಲ್ಲಿ ಆತನ ಸ್ಥಾನ**
೧. ಬುದ್ಧ ತನ್ನದೇ ಆದ ಧರ್ಮದಲ್ಲಿ ತನಗೆ ಯಾವುದೇ ಸ್ಥಾನ ಬಯಸಲಿಲ್ಲ ೧೯೫
೨. ಬುದ್ಧ ಮೋಕ್ಷದ ವಾಗ್ದಾನ ಮಾಡಲಿಲ್ಲ. ತಾನು ಮಾರ್ಗದಾತನೇ ಹೊರತು ಮೋಕ್ಷದಾತನಲ್ಲ ಎಂದು ನುಡಿದನು. ೧೯೭
೩. ಬುದ್ಧನು ತನಗಾಗಲೀ ತನ್ನ ಧರ್ಮಕ್ಕಾಗಲೀ ಯಾವ ದೈವಿಕತೆಯನ್ನು ಬಯಸಲಿಲ್ಲ. ಧರ್ಮ ಮಾನವನಿಂದ ಮಾನವನಿಗಾಗಿ ಶೋಧಿತವಾಯಿತು. ಅದು ದೈವಪ್ರಣೀತ (ಅಪೌರುಷೇಯ)ವಲ್ಲ. ೨೦೧

**ಭಾಗ : ೨ ಬುದ್ಧ ಧಮ್ಮದ ಬಗ್ಗೆ ವಿವಿಧ ದೃಷ್ಟಿಕೋನಗಳು**
೧. ಇತರರು ಅರ್ಥಮಾಡಿಕೊಂಡಂತೆ ಬುದ್ಧನ ಬೋಧನೆ ೨೦೫
೨. ಬುದ್ಧ ತಾನೇ ಮಾಡಿದ ವರ್ಗೀಕರಣ ೨೦೬

**ಭಾಗ : ೩ ಧರ್ಮ ಎಂದರೇನು?**
೧. ಜೀವನದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದೇ ಧರ್ಮ ೨೦೯
೨. ಜೀವನದಲ್ಲಿ ಪರಿಪೂರ್ಣತೆಯನ್ನು ಪಡೆಯುವುದೇ ಧರ್ಮ ೨೧೧
೩. ನಿರ್ವಾಣದಲ್ಲಿ ಬದುಕುವುದೇ ಧರ್ಮ ೨೧೨
೪. ದುರಾಸೆಯನ್ನು ತ್ಯಜಿಸುವುದೇ ಧರ್ಮ ೨೧೭
೫. ಎಲ್ಲ ಸಂಯುಕ್ತ ವಸ್ತುಗಳೂ ಅಶಾಶ್ವತ ಎಂದು ನಂಬುವುದೇ ಧರ್ಮ ೨೧೮
೬. ಕರ್ಮವೇ ನೈತಿಕ ವ್ಯವಸ್ಥೆಯ ಸಾಧನ ಎಂದು ನಂಬುವುದೇ ಧರ್ಮ ೨೧೯

**ಭಾಗ : ೪ ಯಾವುದು ಧರ್ಮ ಅಲ್ಲ**
೧. ಅತಿಮಾನುಷ ಶಕ್ತಿಯಲ್ಲಿ ನಂಬಿಕೆ ಇಡುವುದು ಧರ್ಮ ಅಲ್ಲ ೨೨೫
೨. ಈಶ್ವರನಲ್ಲಿ (ದೇವರಲ್ಲಿ) ನಂಬಿಕೆ ಇರುವುದು ಧರ್ಮದ ಮುಖ್ಯ ಅಂಶವಿಲ್ಲ ೨೨೬
೩. ಬ್ರಹ್ಮನೊಂದಿಗೆ ಒಂದಾಗುವುದರ ಮೇಲೆ ಆಧಾರಿತವಾದ ಧರ್ಮ ಸುಳ್ಳು ಧರ್ಮವಾಗಿದೆ ೨೩೦
೪. ಆತ್ಮದಲ್ಲಿ ನಂಬಿಕೆ ಇಡುವುದು ಧರ್ಮವಲ್ಲ ೨೩೩
೫. ಯಜ್ಞಗಳಲ್ಲಿ ನಂಬಿಕೆಯಿರುವುದು ಧರ್ಮವಲ್ಲ ೨೩೮
೬. ಊಹೆಯ ಮೇಲೆ ನಿಂತ ನಂಬಿಕೆ ಧರ್ಮವಲ್ಲ ೨೪೨
೭. ಧರ್ಮದ ಗ್ರಂಥಗಳನ್ನು ಓದುವುದು ಧರ್ಮವಲ್ಲ ೨೪೪
೮. ಧರ್ಮಗ್ರಂಥಗಳು ದೋಷಾತೀತವೆಂದು ನಂಬುವುದು ಧರ್ಮವಲ್ಲ ೨೪೭

**ಭಾಗ : ೫ ಸದ್ಧರ್ಮ ಎಂದರೆ ಏನು?** ೨೫೧
೧. ಪರಿಚ್ಛೇದ ೧ : ಸದ್ಧರ್ಮದ ಕಾರ್ಯಗಳು ೨೫೩
೨. ಪರಿಚ್ಛೇದ ೨ : ಧಮ್ಮ ಸದ್ಧರ್ಮವಾಗಲು ಪ್ರಜ್ಞೆಯನ್ನು ಬೆಳೆಸಬೇಕು. ೨೫೮
೩. ಪರಿಚ್ಛೇದ ೩ : ಧರ್ಮ ಸದ್ಧರ್ಮವಾಗಬೇಕಾದರೆ ಮೈತ್ರಿಯನ್ನು ಬೆಳೆಸಬೇಕು ೨೬೪
೪. ಪರಿಚ್ಛೇದ ೪ : ಧರ್ಮ ಸದ್ಧರ್ಮವಾಗಬೇಕಾದರೆ ಸಾಮಾಜಿಕ ಅಡೆತಡೆಗಳನ್ನು ಕೆಡಿವಿಹಾಕಬೇಕು ೨೬೯

**ಪರ್ವ–೪**

**ಧರ್ಮ ಮತ್ತು ಧಮ್ಮ**

ಭಾಗ ೧ : ಧರ್ಮ ಮತ್ತು ಧಮ್ಮ ೨೭೯
ಭಾಗ ೨ : ಪಾರಿಭಾಷಿಕ ಶಬ್ದಗಳು ಮೂಲಭೂತ ವ್ಯತ್ಯಾಸವನ್ನು ಹೇಗೆ ಮರೆಮಾಡುತ್ತವೆ? ೨೯೧
ಭಾಗ ೩ : ಬೌದ್ಧ ಜೀವನ ಮಾರ್ಗ ೩೧೫
ಭಾಗ ೪ : ಬುದ್ಧನ ಉಪದೇಶಗಳು ೩೩೫

**ಪರ್ವ – ೫**

**ಸಂಘ**

೧. ಸಂಘ ಮತ್ತು ಅದರ ವ್ಯವಸ್ಥೆ ೩೭೫
೨. ಸಂಘಕ್ಕೆ ಪ್ರವೇಶ ೩೭೬
೩. ಭಿಕ್ಷು ಮತ್ತು ಅವನ ವ್ರತಗಳು ೩೭೭
೪. ಭಿಕ್ಷು ಮತ್ತು ಸಂಘ–ವಿರೋಧಿ ದುರಾಚಾರಗಳು ೩೭೮
೫. ಭಿಕ್ಷು ಮತ್ತು ನಿಗ್ರಹಗಳು ೩೭೯
೬. ಭಿಕ್ಷು ಮತ್ತು ಸದಾಚಾರದ ನಿಯಮಗಳು ೩೭೯
೭. ಭಿಕ್ಷು ಮತ್ತು ದುರಾಚಾರಗಳ ವಿಚಾರಣೆ ೩೭೯
೮. ಭಿಕ್ಷು ಮತ್ತು ತಪ್ಪೊಪ್ಪಿಗೆ ೩೮೦

**ಭಾಗ : ೨ ಭಿಕ್ಷುವನ್ನು ಕುರಿತ ಬುದ್ಧನ ಪರಿಕಲ್ಪನೆ**

೧. ಭಿಕ್ಷು ಹೇಗಿರಬೇಕೆಂಬುದನ್ನು ಕುರಿತ ಬುದ್ಧನ ಪರಿಕಲ್ಪನೆ ೩೮೫
೨. ಭಿಕ್ಷು ಮತ್ತು ಸಂನ್ಯಾಸಿ ೩೮೭
೩. ಭಿಕ್ಷು ಮತ್ತು ಬ್ರಾಹ್ಮಣ ೩೯೧
೪. ಭಿಕ್ಷು ಮತ್ತು ಉಪಾಸಕ ೩೯೨

**ಭಾಗ : ೩ ಭಿಕ್ಷುವಿನ ಕರ್ತವ್ಯಗಳು**

೧. ಪರಿವರ್ತಿಸುವುದು ಭಿಕ್ಷುವಿನ ಕರ್ತವ್ಯ ೩೯೭
೨. ಪವಾಡಗಳ ಮೂಲಕ ಪರಿವರ್ತನೆ ಸಲ್ಲದು ೩೯೮
೩. ಬಲಪ್ರಯೋಗದಿಂದ ಪರಿವರ್ತನೆ ಸಲ್ಲದು ೪೦೧
೪. ಧರ್ಮ ಪ್ರಚಾರ ಮಾಡಲು ಭಿಕ್ಷು ಹೋರಾಡಬೇಕು ೪೦೪

**ಭಾಗ : ೪ ಭಿಕ್ಷು ಮತ್ತು ಸಾಮಾನ್ಯ ಜನರು**

೧. ಭಿಕ್ಷೆಯ ಬಂಧನ ೪೦೭

೨. ಪರಸ್ಪರ ಪ್ರಭಾವ ೪೦೭
೩. ಭಿಕ್ಷುವಿನ ಧರ್ಮ ಮತ್ತು ಉಪಾಸಕನ ಧರ್ಮ ೪೦೮

**ಭಾಗ : ೫ ಸಾಮಾನ್ಯರಿಗೆ ವಿನಯ**
೧. ಶ್ರೀಮಂತರಿಗೆ ವಿನಯ ೪೧೫
೨. ಗೃಹಸ್ಥರಿಗೆ ವಿನಯ ೪೧೬
೩. ಮಕ್ಕಳಿಗೆ ವಿನಯ ೪೧೯
೪. ಶಿಷ್ಯನಿಗೆ ವಿನಯ ೪೨೦
೫. ದಂಪತಿಗಳಿಗೆ ವಿನಯ ೪೨೦
೬. ಸ್ವಾಮಿ ಮತ್ತು ಭೃತ್ಯರಿಗೆ ವಿನಯ ೪೨೦
೭. ತೀರ್ಮಾನಗಳು ೪೨೧
೮. ಹುಡುಗಿಯರಿಗೆ ವಿನಯ ೪೨೧

**ಪರ್ವ – ೬**
**ಬುದ್ಧ ಮತ್ತು ಅವನ ಸಮಕಾಲೀನರು**
**ಭಾಗ : ೧ ಬುದ್ಧನಿಗೆ ಉಪಕಾರ ಮಾಡಿದವರು**
೧. ಬಿಂಬಸಾರನ ದಾನ ೪೨೭
೨. ಅನಾಥ ಪಿಂಡಿಕನ ದಾನ ೪೨೮
೩. ಜೀವಕನ ದಾನ ೪೨೯
೪. ಆಮ್ರಪಾಲಿಯ ದಾನ ೪೩೦
೫. ವಿಶಾಖಳ ಔದಾರ್ಯ ೧೩೨

**ಭಾಗ : ೨ ಬುದ್ಧನ ಶತ್ರುಗಳು**
೧. ಥಳುಕಿನಿಂದ ಪರಿವರ್ತನೆ ಎಂಬ ಆರೋಪ ೪೩೯
೨. ಪರಾವಲಂಬಿ ಎಂಬ ಆರೋಪ ೪೪೦
೩. ಸುಖೀ ಕುಟುಂಬಗಳನ್ನು ಒಡೆದನೆಂಬ ಆರೋಪ ೪೪೧
೪. ಜೈನರು ಮತ್ತು ಕೊಲೆಯ ಸುಳ್ಳು ಆರೋಪ ೪೪೨
೫. ಜೈನರು ಹಾಗೂ ಅನೈತಿಕತೆಯ ಸುಳ್ಳು ಆರೋಪ ೪೪೩
೬. ದೇವದತ್ತನೆಂಬ ದಾಯಾದಿ ಮತ್ತು ಶತ್ರು ೪೪೫
೭. ಬ್ರಾಹ್ಮಣರು ಮತ್ತು ಬುದ್ಧ ೪೪೭

**ಭಾಗ : ೩ ಬುದ್ಧನ ತತ್ತ್ವಗಳ ವಿರೋಧಿಗಳು**
೧. ಸಂಘಕ್ಕೆ ಮುಕ್ತ ಅವಕಾಶ ನೀಡುವುದರ ವಿರೋಧಿಗಳು ೪೫೭
೨. ನಿಯಮಗಳ ಟೀಕಾಕಾರರು ೪೫೭
೩. ಅಹಿಂಸಾತತ್ತ್ವದ ಟೀಕಾಕಾರರು ೪೫೮
೪. ಸದ್ಗುಣವನ್ನು ಬೋಧಿಸುತ್ತಾನೆ ಮತ್ತು ಖಿನ್ನತೆಯನ್ನು ಸೃಷ್ಟಿಸುತ್ತಾನೆ ಎಂಬ ಆರೋಪ ೪೬೧
೫. ಆತ್ಮ ಮತ್ತು ಪುನರ್–ಜನ್ಮ ಸಿದ್ಧಾಂತದ ಟೀಕಾಕಾರರು ೪೬೪
೬. ದೇಹಾತ್ಮ ವಿನಾಶವಾದಿ ಎಂಬ ಆಪಾದನೆ ೪೬೪

**ಭಾಗ : ೪ ಸ್ನೇಹಿತರು ಹಾಗೂ ಅಭಿಮಾನಿಗಳು**
೧. ಬ್ರಾಹ್ಮಣಿಯಾದ ಧನಂಜನನಿಯ ಭಕ್ತಿ ೪೬೭
೨. ವಿಶಾಖಳ ನಿಷ್ಠೆ ೪೬೮
೩. ಮಲ್ಲಿಕಾಳ ಭಕ್ತಿ ೪೭೧
೪. ಗರ್ಭಿಣಿಯೊಬ್ಬಳ ಹೆಬ್ಬಯಕೆ ೪೭೩
೫. ಕೆನಿಯನ ಸ್ವಾಗತ ೪೭೫
೬. ಪ್ರಸೇನಜಿತನು ಭಗವಾನರನ್ನು ಪ್ರಶಂಸಿಸಿದ್ದು ೪೭೬

**ಪರ್ವ – ೭**
**ಯಾತ್ರಿಕನ ಅಂತಿಮ ಪ್ರಯಾಣ**
**ಭಾಗ : ೧ ಆತ್ಮೀಯರೊಂದಿಗೆ ಭೇಟಿ**
೧. ಬುದ್ಧನ ಪ್ರವಚನ ಕೇಂದ್ರಗಳು ೪೭೯
೨. ಬುದ್ಧನು ಭೇಟಿ ನೀಡಿದ ಸ್ಥಳಗಳು ೪೭೯
೩. ತಾಯಿ ಹಾಗೂ ಮಗನ ನಡುವೆ, ಹೆಂಡತಿ ಮತ್ತು ಗಂಡನ ನಡುವೆ ಕೊನೆಯ ಭೇಟಿ ೪೮೧
೪. ತಂದೆ–ಮಗನ ಕೊನೆಯ ಭೇಟಿ ೪೮೧
೫. ಬುದ್ಧ ಹಾಗೂ ಸಾರಿಪುತ್ರನ ಕೊನೆಯ ಭೇಟಿ ೪೮೨

**ಭಾಗ : ೨ ವೈಶಾಲಿಯಿಂದ ನಿರ್ಗಮನ**
೧. ವೈಶಾಲಿಗೆ ವಿದಾಯ ೪೮೭
೨. ಪಾವಾದಲ್ಲಿ ತಂಗಿದ್ದು ೪೮೮
೩. ಕುಶೀನಾರಾಕ್ಕೆ ಆಗಮನ ೪೮೯

**ಭಾಗ : ೩ ಬುದ್ಧನ ಕೊನೆಯ ದಿನಗಳು**
೧. ಉತ್ತರಾಧಿಕಾರಿಯ ನೇಮಕ ೪೯೩
೨. ಕೊನೆಯ ಅನುಯಾಯಿ ೪೯೪
೩. ಕೊನೆಯ ಮಾತುಗಳು ೪೯೬
೪. ಆನಂದನ ಶೋಕ ೪೯೮
೫. ಮಲ್ಲರ ಶೋಕ ಮತ್ತು ಭಿಕ್ಷುವೊಬ್ಬನ ಸಂತಸ ೫೦೦
೬. ಅಂತಿಮ ಕ್ರಿಯೆಗಳು ೫೦೧
೭. ಚಿತಾಭಸ್ಮಕ್ಕಾಗಿ ಕಲಹ ೫೦೨
೮. ಬುದ್ಧನಿಗೆ ನಿಷ್ಠೆ ೫೦೩

**ಪರ್ವ – ೮**
**ಸಿದ್ಧಾರ್ಥ ಗೌತಮನೆಂಬ ವ್ಯಕ್ತಿ**
**ಭಾಗ : ೧ ಸಿದ್ಧಾರ್ಥ ಗೌತಮನ ವ್ಯಕ್ತಿತ್ವ**
೧. ಸಿದ್ಧಾರ್ಥನ ಚಹರೆ ೫೦೭
೨. ಪ್ರತ್ಯಕ್ಷದರ್ಶಿಗಳ ಸಮರ್ಥನೆ ೫೦೮
೩. ಸಿದ್ಧಾರ್ಥನ ನಾಯಕತ್ವ ಸಾಮರ್ಥ್ಯ ೫೧೯

**ಭಾಗ : ೨ ಬುದ್ಧನ ಮಾನವೀಯತೆ**


೧. ಬುದ್ಧನ ಕಾರುಣ್ಯ–ಮಹಾಕಾರುಣಿಕ ೫೧೩
೨. ನೊಂದವರ ದುಃಖನಿವಾರಕ ೫೧೪
೩. ರೋಗಿಗಳ ಬಗ್ಗೆ ಬುದ್ಧನ ಕಾಳಜಿ ೫೧೫
೪. ಅಸಹಿಷ್ಣುಗಳ ಬಗ್ಗೆ ಬುದ್ಧನ ಸಹಿಷ್ಣುತೆ ೫೧೯
೫. ಬುದ್ಧನ ಸಮಾನತಾ ಭಾವನೆ ಹಾಗೂ ಸಮನತಾಚರಣೆ ೫೨೧


**ಭಾಗ : ೩ ಬುದ್ಧನ ಇಷ್ಟಾನಿಷ್ಟಗಳು**


೧. ಬುದ್ಧನಿಗೆ ದಾರಿದ್ರ್ಯದ ಬಗ್ಗೆ ಇದ್ದ ದ್ವೇಷ ೫೨೫
೨. ಗಳಿಸಿಡುವ ಪ್ರವೃತ್ತಿಯ ಬಗ್ಗೆ ಬುದ್ಧನ ದ್ವೇಷ ೫೨೬
೩. ಸುಂದರವಾದುದನ್ನು ಕಂಡಾಗ ಬುದ್ಧನ ಸಂತೋಷ ೫೨೭
೪. ಮನೋಹರವಾಗಿರುವುದರ ಬಗ್ಗೆ ಬುದ್ಧನ ಪ್ರೀತಿ ೫೨೮


**ಉಪಸಂಹಾರ**


೧. ಬುದ್ಧನ ಹಿರಿಮೆಯ ಪ್ರಶಂಸೆ ೫೩೧
೨. ಬುದ್ಧ ಧರ್ಮದ ಪ್ರಸಾರಕ್ಕೆ ಪಣ ತೊಡೋಣ ೫೩೪
೩. ಬುದ್ಧನ ತಾಯ್ನಾಡಿನಲ್ಲಿ ಹುಟ್ಟುವಂತಾಗಲಿ ಎಂಬ ಪ್ರಾರ್ಥನೆ ೫೩೪

**ವಿಷಯಸೂಚಿ** ೫೩೭

# ಭಾಗ - ೧

## ಪರ್ವ-೧

### ಸಿದ್ಧಾರ್ಥ ಗೌತಮ – ಬೋಧಿಸತ್ವನು ಹೇಗೆ ಬುದ್ಧನಾದನು?

# ಪರ್ವ – ೧

# ಸಿದ್ಧಾರ್ಥ ಗೌತಮ - ಬೋಧಿಸತ್ವನು ಹೇಗೆ ಬುದ್ಧನಾದನು

ವಿಭಾಗ ೧ : ಹುಟ್ಟಿದಂದಿನಿಂದ ಪರಿವ್ರಾಜಕತ್ವದವರೆಗೆ
ವಿಭಾಗ ೨ : ಶಾಶ್ವತ ಪರಿತ್ಯಾಗ
ವಿಭಾಗ ೩ : ಹೊಸ ಬೆಳಕಿನ ಅನ್ವೇಷಣೆ
ವಿಭಾಗ ೪ : ಜ್ಞಾನೋದಯ ಮತ್ತು ಹೊಸ ದರ್ಶನದ ಆವಿರ್ಭಾವ
ವಿಭಾಗ ೫ : ಬುದ್ಧ ಮತ್ತು ಅವನ ಪೂರ್ವಿಕರು
ವಿಭಾಗ ೬ : ಬುದ್ಧ ಮತ್ತು ಅವನ ಸಮಕಾಲೀನ ಚಿಂತಕರು
ವಿಭಾಗ ೭ : ಹೋಲಿಕೆ ಮತ್ತು ವ್ಯತ್ಯಾಸ

## ವಿಭಾಗ ೧

# ಹುಟ್ಟಿದಂದಿನಿಂದ ಪರಿವ್ರಾಜಕತ್ವದವರೆಗೆ

## ೧. ಅವನ ಕುಲ

೧. ಕ್ರಿ.ಪೂ. ಆರನೇ ಶತಮಾನದ ಪೂರ್ವದಲ್ಲಿ ಉತ್ತರ ಭಾರತವೆಲ್ಲವೂ ಒಂದೇ ಸಾಮ್ರಾಜ್ಯವಾಗಿರಲಿಲ್ಲ.

೨. ದೇಶವು ಅನೇಕ ಸಣ್ಣ ಮತ್ತು ದೊಡ್ಡ ರಾಜ್ಯಗಳಾಗಿ ಹಂಚಿಹೋಗಿದ್ದಿತು. ಅವುಗಳಲ್ಲಿ ಕೆಲವು ರಾಜಪ್ರಭುತ್ವಕ್ಕೆ ಒಳಪಟ್ಟಿದ್ದರೆ, ಮತ್ತೆ ಕೆಲವು ರಾಜಪ್ರಭುತ್ವೇತರ ವ್ಯವಸ್ಥೆಗೆ ಒಳಪಟ್ಟಿದ್ದವು.

೩. ಹದಿನಾರು ರಾಜ್ಯಗಳು ರಾಜಪ್ರಭುತ್ವಕ್ಕೆ ಒಳಪಟ್ಟಿದ್ದುವು. ಅವುಗಳೆಂದರೆ ಅಂಗ, ಮಾಗದ, ಕಾಶಿ, ಕೋಸಲ, ವ್ರಜಿ, ಮಲ್ಲ, ಛೇದಿ, ವತ್ಸ, ಕುರು, ಪಾಂಚಾಲ, ಮತ್ಸ್ಯ, ಸೌರಸೇನ, ಆಸ್ಮಾಕ, ಆವಂತಿ, ಗಾಂಧಾರ, ಕಾಂಭೋಜ.

೪. ರಾಜನಿಗೆ ಒಳಪಡದ ಪ್ರಭುತ್ವಗಳೆಂದರೆ ಕಪಿಲವಸ್ತುವಿನ ಶಾಖ್ಯರು, ಪವ ಮತ್ತು ಕುಷಿನಾರಾ ಮಲ್ಲರು, ವೈಶಾಲಿಯ ಲಿಚ್ಛವಿಗಳು, ಮಿಥಿಲೆಯ ವಿದೇಹಿಗಳು, ರಾಮಗಾಮದ ಕೊಲಿಯರು, ಅಲ್ಲಕಾಪದ ಬುಲಿಗಳು, ರೇಸಪುಟ್ಟದ ಕಳಂಗರು, ಪಿಪ್ಪಲವನದ ಮೌರ್ಯರು ಮತ್ತು ಸುಂಸುಮಾರ ಬೆಟ್ಟದ ಮೇಲೆ ತಮ್ಮ ರಾಜಧಾನಿಯನ್ನು ನಿರ್ಮಿಸಿಕೊಂಡಿದ್ದ ಭಗ್ಗರು.

೫. ರಾಜನಿಗೆ ಸೇರಿದ್ದ ರಾಜ್ಯಗಳನ್ನು ಜನಪದ ಎಂದೂ ರಾಜಪ್ರಭುತ್ವಕ್ಕೊಳಪಡದ ರಾಜ್ಯಗಳನ್ನು ಸಂಘ ಅಥವಾ ಗಣ ಎಂದೂ ಕರೆಯಲಾಗುತ್ತಿತ್ತು.

೬. ಕಪಿಲವಸ್ತುವಿನ ಶಾಕ್ಯರ ರಾಜ್ಯಾಡಳಿತದ ವ್ಯವಸ್ಥೆಯು ಗಣತಂತ್ರವಾಗಿದ್ದಿತೋ ಅಥವಾ ಸ್ವಲ್ಪ ಜನಾಧಿಪತ್ಯದ ರೂಪದಲ್ಲಿದ್ದಿತೋ (oligarchy) ಎಂಬ ಬಗ್ಗೆ, ಹೆಚ್ಚಿನ ವಿಚಾರ ತಿಳಿದಿಲ್ಲ.

೭ ಆದಾಗ್ಯೂ, ಶಾಕ್ಯರ ಗಣತಂತ್ರದಲ್ಲಿ ಆಡಳಿತ ನಡೆಸುವ ಅನೇಕ ಕುಟುಂಬಗಳಿದ್ದು, ಸರದಿಯ ಪ್ರಕಾರ ರಾಜ್ಯಾಡಳಿತವನ್ನು ನಡೆಸುತ್ತಿದ್ದವು.

೮. ಆಡಳಿತ ನಡೆಸುವ ಕುಟುಂಬದ ಪ್ರಮುಖನನ್ನು 'ರಾಜ' ಎಂದು ಕರೆಯಲಾಗುತ್ತಿದ್ದಿತು.

೯. ಸಿದ್ಧಾರ್ಥ ಗೌತಮನು ಹುಟ್ಟಿದಾಗ, ರಾಜನಾಗುವ ಸರದಿ ಶುದ್ದೋಧನನದಾಗಿದ್ದಿತು.

೧೦. ಶಾಕ್ಯರ ರಾಜ್ಯವು ಭಾರತದ ಈಶಾನ್ಯ ಭಾಗದಲ್ಲಿದ್ದಿತು. ಅದೊಂದು ಸ್ವತಂತ್ರ ರಾಜ್ಯವಾಗಿದ್ದಿತು. ಆದರೆ ಕಾಲಾನಂತರ ಕೋಸಲ ದೇಶದ ರಾಜನು ಶಾಕ್ಯರ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಿದ್ದನು.

೧೧. ಈ ಸಾರ್ವಭೌಮತ್ವದ ಫಲವಾಗಿ ಶಾಕ್ಯ ದೇಶವು ಕೋಸಲ ರಾಜನ ಒಪ್ಪಿಗೆಯಿಲ್ಲದೆ ಕೆಲವೊಂದು ಪರಮಾಧಿಕಾರಗಳನ್ನು ಚಲಾಯಿಸದಂತಾಗಿತ್ತು.

೧೨. ಅಂದಿನ ಕಾಲದಲ್ಲಿದ್ದ ರಾಜ್ಯಗಳಲ್ಲೆಲ್ಲಾ ಕೋಸಲವು ಬಲಿಷ್ಠ ಸಾಮ್ರಾಜ್ಯವೆನಿಸಿದ್ದಿತು. ಹಾಗೆಯೇ, ಮಗಧ ಸಾಮ್ರಾಜ್ಯವು ಪ್ರಬಲವಾಗಿದ್ದಿತು. ಕೋಸಲ ಸಾಮ್ರಾಜ್ಯದ

ಪಸನೇದಿ ಮತ್ತು ಮಗಧ ಸಾಮ್ರಾಜ್ಯದ ಬಿಂಬಸಾರ ಇಬ್ಬರೂ ಸಿದ್ಧಾರ್ಥ ಗೌತಮನ ಸಮಕಾಲೀನರು.

## ೨. ಅವನ ವಂಶ ಪರಂಪರೆ

೧. ಶಾಕ್ಯ ರಾಜ್ಯದ ರಾಜಧಾನಿಯ ಹೆಸರು ಕಪಿಲವಸ್ತು. ಬಹುಶಃ ಮಹಾನ್ ವಿಚಾರವಾದಿ ಕಪಿಲನಿಂದಾಗಿ ಎಂಬ ಈ ಹೆಸರು ಬಂದಿರಬಹುದು.

೨. ಕಪಿಲವಸ್ತುವಿನಲ್ಲಿ ಜಯಸೇನ ಎಂಬ ಹೆಸರಿನ ಒಬ್ಬ ಶಾಕ್ಯನಿದ್ದನು. ಸಿನಹು ಅವನ ಮಗ. ಸಿನಹುವಿಗೆ ಕಚ್ಛಣಳೊಂದಿಗೆ ವಿವಾಹವಾಗಿದ್ದಿತು. ಸಿನಹುವಿಗೆ ಶುದ್ಧೋದನ, ಧೋತೋದನ, ಸಕ್ಕೋದನ, ಸುಕ್ಲೋದನ, ಅಮಿತೋದನ ಎಂಬ ಐದು ಜನ ಗಂಡುಮಕ್ಕಳಿದ್ದರು. ಈ ಐದು ಜನರೊಂದಿಗೆ ಅವರಿಗೆ ಅಮಿತ ಮತ್ತು ಪಮಿತ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದರು.

೩. ಈ ಕುಟುಂಬದ ಗೋತ್ರ ಆದಿತ್ಯ.

೪. ಶುದ್ಧೋದನನಿಗೆ ಮಹಾಮಾಯೆಯೊಂದಿಗೆ ವಿವಾಹವಾಗಿದ್ದಿತು. ಅವಳ ತಂದೆಯ ಹೆಸರು ಅಂಜನ ಮತ್ತು ತಾಯಿಯ ಹೆಸರು ಸುಲಕ್ಷಣ. ಕೋಲಿಯ ವಂಶದ ಅಂಜನನು ದೇವದಾಹ ಎಂಬ ಹಳ್ಳಿಯಲ್ಲಿ ವಾಸವಾಗಿದ್ದನು.

೫. ಶುದ್ಧೋದನನು ಬಹುದೊಡ್ಡ ಸೈನ್ಯವುಳ್ಳ ಪರಾಕ್ರಮಿ. ಶುದ್ಧೋದನನ ಶೌರ್ಯ, ಸಾಹಸಗಳಿಂದಾಗಿ ಅವನಿಗೆ ಎರಡನೇ ವಿವಾಹಕ್ಕೂ ಅನುಮತಿ ದೊರೆತಿದ್ದಿತು. ಅವನು ಮಹಾಪ್ರಜಾಪತಿಯನ್ನು ವಿವಾಹವಾದನು. ಅವಳು ಮಹಾಮಾಯೆಯ ಅಕ್ಕ.

೬. ಶುದ್ಧೋದನನು ಶ್ರೀಮಂತನಾಗಿದ್ದನು. ಅವನ ಅಧೀನದಲ್ಲಿ ವಿಸ್ತಾರವಾದ ಭೂಮಿಯೂ, ಆಶ್ರಯದಲ್ಲಿ ಅಪಾರವಾದ ಸೇವಕ ವರ್ಗವೂ ಇದ್ದಿತು. ಅವನು ತನ್ನ ಭೂಮಿಯನ್ನು ಉಳಲು ಒಂದು ಸಾವಿರ ನೇಗಿಲುಗಳನ್ನು ಹೊಡೆಸುತ್ತಿದ್ದನು ಎಂದು ಹೇಳಲಾಗುತ್ತದೆ.

೭ ಅವನು, ಬಹಳ ಭೋಗಜೀವನವನ್ನು ನಡೆಸುತ್ತಿದ್ದು, ಅನೇಕ ಅರಮನೆಗಳನ್ನು ಹೊಂದಿದ್ದನು.

## ೩. ಅವನ ಜನನ

೧. ಶುದ್ಧೋದನನ ಮಗನೇ ಸಿದ್ಧಾರ್ಥ ಗೌತಮ. ಅವನ ಜನನದ ಹಿನ್ನೆಲೆ ಇಂತಿದೆ:

೨. ಆಷಾಢ ಮಾಸದಲ್ಲಿ ಒಂದು ವಾರ್ಷಿಕ ನಡುಬೇಸಿಗೆ ಹಬ್ಬವನ್ನು ಆಚರಿಸುವುದು, ಶಾಕ್ಯರ ಸಂಪ್ರದಾಯ. ಆಳುವ ರಾಜನ ಕುಟುಂಬವೂ ಮೊದಲುಗೊಂಡು ದೇಶದ ಶಾಕ್ಯರೆಲ್ಲರೂ ಈ ಹಬ್ಬವನ್ನು ಆಚರಿಸುತ್ತಿದ್ದರು.

೩. ಈ ಹಬ್ಬವನ್ನು ಏಳು ದಿನಗಳ ಕಾಲ ಆಚರಿಸುವುದು ವಾಡಿಕೆಯಾಗಿದ್ದಿತು.

೪. ಒಮ್ಮೆ ಮಹಾಮಾಯೆಯು ಈ ಹಬ್ಬವನ್ನು ಪುಷ್ಪ ಹಾಗೂ ಸುಗಂಧದ್ರವ್ಯಗಳನ್ನು ಬಳಸಿ, ಮಾದಕ ದ್ರವ್ಯವನ್ನು ಸೇವಿಸದೆ ಅತ್ಯಂತ ಸಂಭ್ರಮ ಮತ್ತು ವೈಭವದಿಂದ ಆಚರಿಸಲು ನಿರ್ಧರಿಸಿದಳು.

೫. ಹಬ್ಬದ ಏಳನೇ ದಿನ ಅವಳು ಬೇಗನೆ ಎದ್ದು, ಪನ್ನೀರಿನಲ್ಲಿ ಸ್ನಾನ ಮಾಡಿ, ನಾಲ್ಕು ಲಕ್ಷದಷ್ಟು ನಾಣ್ಯಗಳನ್ನು ಬಡಬಗ್ಗರಿಗೆ ದಾನ ಮಾಡಿ, ಅಮೂಲ್ಯವಾದ ವಜ್ರ, ವೈಢೂರ್ಯ–ಯುಕ್ತವಾದ ಆಭರಣಗಳನ್ನು ತೊಟ್ಟು, ಅತ್ಯುತ್ತಮ ಆಹಾರವನ್ನು ಸೇವಿಸಿ, ಉಪವಾಸದ ದಿನಗಳ ಪ್ರತಿಜ್ಞಾವಿಧಿಗಳನ್ನು ಈಡೇರಿಸುವ ಹೊಣೆ ಹೊತ್ತು, ಅತ್ಯಂತ ಸುಂದರವಾಗಿ ಅಲಂಕರಿಸಿಕೊಂಡು, ರಾಜನ ಶಯ್ಯಾಗೃಹವನ್ನು ನಿದ್ರಿಸುವ ಸಲುವಾಗಿ ಪ್ರವೇಶಿಸಿದಳು.

೬. ಆ ರಾತ್ರಿ ಶುದ್ಧೋದನ ಮತ್ತು ಮಹಾಮಾಯೆಯರ ಸಂಸರ್ಗದಿಂದಾಗಿ, ಮಹಾಮಾಯೆಯು ಗರ್ಭವತಿಯಾದಳು. ರಾಜನ ಸುಪ್ಪತ್ತಿಗೆಯಲ್ಲಿ ಗಾಢ ನಿದ್ರೆಯಲ್ಲಿ ಮಲಗಿದ್ದಾಗ, ಅವಳಿಗೊಂದು ಸ್ವಪ್ನವಾಯಿತು.

೭. ಗಾಢ ನಿದ್ರೆಯಲ್ಲಿದ್ದ ಅವಳನ್ನು, ಚತುರ್‌ಲೋಕದ ರಕ್ಷಕರಾದ ದೇವತೆಗಳು ಮೇಲೆತ್ತಿಕೊಂಡು ಹೋಗಿ, ಹಿಮಾಲಯ ಪರ್ವತದ ಸಮತಲ ಪ್ರದೇಶದಲ್ಲಿನ ಸಾಲವೃಕ್ಷವೊಂದರ ನೆರಳಿನಲ್ಲಿ ಮಲಗಿಸಿ, ಪಕ್ಕದಲ್ಲಿ ನಿಂತರು.

೮. ಚತುರ್‌ಲೋಕದ ರಕ್ಷಕರ ಪತ್ನಿಯರು ಅವಳ ಬಳಿಬಂದು, ಅವಳನ್ನು ಮಾನಸ ಸರೋವರಕ್ಕೆ ಕರೆದೊಯ್ದರು.

೯. ಅಲ್ಲಿ ಅವಳಿಗೆ ಸ್ನಾನ ಮಾಡಿಸಿ, ಸುಗಂಧ ದ್ರವ್ಯವನ್ನು ಪೂಸಿ, ದೇವನೋರ್ವನ ಸಂದರ್ಶನಕ್ಕೆ ಯೋಗ್ಯವಾದ ರೀತಿಯಲ್ಲಿ ಅವಳನ್ನು ಪುಷ್ಪಗಳಿಂದ ಶೃಂಗರಿಸಿದರು.

೧೦. ಆಗ ಸುಮೇಧನೆಂಬ ಬೋಧಿಸತ್ವನು ಅಲ್ಲಿ ಪ್ರತ್ಯಕ್ಷನಾಗಿ, "ನಾನು ಈ ಭೂಮಿಯಲ್ಲಿ ನನ್ನ ಕೊನೆಯ ಮತ್ತು ಅಂತಿಮ ಜನ್ಮ ತಾಳಲು ನಿರ್ಧರಿಸಿದ್ದೇನೆ. ನೀನು ನನ್ನ ತಾಯಿಯಾಗುವೆಯಾ?" ಎಂದನು. ಅದಕ್ಕೆ ಅವಳು "ನಾನು ಅತ್ಯಂತ ಸಂತೋಷದಿಂದ ಒಪ್ಪುತ್ತೇನೆ" ಎಂದು ಹೇಳಿದಳು. ಅಷ್ಟರಲ್ಲಿ ಮಹಾಮಾಯೆಗೆ ನಿದ್ರೆಯಿಂದ ಎಚ್ಚರವಾಯಿತು.

೧೧. ಮರುದಿನ ಬೆಳಿಗ್ಗೆ ತನಗಾದ ಈ ಸ್ವಪ್ನವನ್ನು ಅವಳು ಶುದ್ಧೋದನನಿಗೆ ಹೇಳಿದಳು. ಈ ಸ್ವಪ್ನದ ಅರ್ಥವನ್ನರಿಯದ ಶುದ್ಧೋದನನು ಭವಿಷ್ಯವಾಣಿಯನ್ನು ವಿವರಿಸಬಲ್ಲ ಪ್ರಸಿದ್ಧರಾದ ಎಂಟು ಜನ ಬ್ರಾಹ್ಮಣರನ್ನು ಕರೆಸಿದನು.

೧೨. ರಾಮ, ಧಗ, ಲಕ್ಕಣ, ಮಂತಿ, ಯನ್ನ, ಸುಯಮ, ಸುಭೋಗ ಮತ್ತು ಸುದತ್ತ ಎಂಬ ಎಂಟು ಜನ ಬ್ರಾಹ್ಮಣರನ್ನು ಸೂಕ್ತ ರೀತಿಯಲ್ಲಿ ಸತ್ಕರಿಸಲು ಅವನು ಸಿದ್ಧತೆ ನಡೆಸಿದನು.

೧೩. ನೆಲವನ್ನು ಪುಷ್ಪಗಳಿಂದ ಅಲಂಕರಿಸಿ ಅವರಿಗಾಗಿ ಉನ್ನತವಾದ ಆಸನಗಳನ್ನು ಸಿದ್ಧಗೊಳಿಸಿದನು.

೧೪. ಅವನು ಆ ಬ್ರಾಹ್ಮಣರ ಪಾತ್ರೆಗಳನ್ನು ಚಿನ್ನ ಬೆಳ್ಳಿಗಳಿಂದ ತುಂಬಿಸಿ, ಹಾಲು, ತುಪ್ಪ, ಮಧುಪರ್ಕದಿಂದ ಕೂಡಿದ ಶಾಲ್ಯಾನ್ನವನ್ನು ನೀಡಿ, ಅವರಿಗೆ ನವವಸ್ತ್ರ, ಕಪಿಲವರ್ಣದ ಹಸುಗಳು ಮುಂತಾದ ಇತರ ಬಹುಮಾನಗಳನ್ನು ಕೊಟ್ಟನು.

೧೫. ಬ್ರಾಹ್ಮಣರು ತೃಪ್ತಿಹೊಂದಿದ ಮೇಲೆ, ಶುದ್ಧೋದನನು ಮಹಾಮಾಯೆಯು ಕಂಡ ಕನಸನ್ನು ಅವರಿಗೆ ವಿವರಿಸಿ, "ಅದರ ಅರ್ಥವೇನು ಎಂಬುದನ್ನು ನನಗೆ ತಿಳಿಯಪಡಿಸಬೇಕು" ಎಂದು ಅವರನ್ನು ಕೇಳಿಕೊಂಡನು.

೧೬. ಆಗ ಬ್ರಾಹ್ಮಣರು ಹೇಳಿದರು : "ದೊರೆಯೇ, ನೀನು ಗಾಬರಿಯಾಗಬೇಕಾಗಿಲ್ಲ. ನಿನಗೊಬ್ಬ ಮಗ ಹುಟ್ಟುತ್ತಾನೆ. ಅವನು ಗೃಹಸ್ಥನಾದರೆ ಈ ಜಗಕ್ಕೆಲ್ಲ ಚಕ್ರವರ್ತಿಯಾಗುತ್ತಾನೆ. ಅವನೇನಾದರೂ ಗೃಹ

ತ್ಯಾಗ ಮಾಡಿ ಅನಿಕೇತನನಾಗಿ ಸಂನ್ಯಾಸಿಯಾದರೆ ಅವನು ಈ ಜಗತ್ತಿನ್ನ ಮಾಯೆಯನ್ನು ನೀಗುವಂತಹ ಬುದ್ಧನಾಗುತ್ತಾನೆ."

೧೭. ಹತ್ತು ತಿಂಗಳ ಕಾಲ ಎಣ್ಣೆ ತುಂಬಿದ ಕೊಡದಂತೆ ಬೋಧಿಸತ್ವನನ್ನು ತನ್ನ ಗರ್ಭದಲ್ಲಿ ಧರಿಸಿದ ಮಹಾಮಾಯೆಯು ಹೆರಿಗೆಯ ಕಾಲ ಸಮೀಪಿಸಿದಂತೆ, ಹೆರಿಗೆಗಾಗಿ ತನ್ನ ತೌರುಮನೆಗೆ ಹೋಗಲು ಬಯಸಿದಳು. ಅವಳು ತನ್ನ ಗಂಡನೊಂದಿಗೆ "ನಾನು ನನ್ನ ತಂದೆಯ ನಗರವಾದ ದೇವದಾಹಕ್ಕೆ ಹೋಗಬಯಸುತ್ತೇನೆ" ಎಂದಳು.

೧೮. "ನಿನ್ನ ಬಯಕೆಯಂತೆಯೇ ಆಗಲಿ" ಎಂಬುದಾಗಿ ಶುದ್ಧೋದನನು ಹೇಳಿ, ಚಿನ್ನದ ಪಲ್ಲಕ್ಕಿಯಲ್ಲಿ ಅವಳನ್ನು ಕುಳ್ಳಿರಿಸಿ ದೊಡ್ಡ ಪರಿವಾರದೊಂದಿಗೆ ಅವಳನ್ನು ಅವಳ ತಂದೆಯ ಮನೆಗೆ ಕಳುಹಿಸಿಕೊಟ್ಟನು.

೧೯. ದೇವದಾಹಕ್ಕೆ ಹೋಗುವ ದಾರಿಯಲ್ಲಿ ಮಹಾಮಾಯೆಯು ಮನೋಹರವಾದ ಸಾಲ, ವೃಕ್ಷಗಳು ಹೂಬಿಡುವ ಹಾಗೂ ಹೂಬಿಡದ ಇತರ ವೃಕ್ಷ ಸಮೂಹವನ್ನು ಹಾದು ಹೋಗಬೇಕಾಗಿದ್ದಿತು. ಅದು ಲುಂಬಿನಿವನ ಎಂದು ಪ್ರಸಿದ್ಧವಾಗಿತ್ತು.

೨೦. ಪಲ್ಲಕ್ಕಿಯು ಲುಂಬಿನಿವನದಲ್ಲಿ ಸಾಗಿಹೋಗುತ್ತಿದ್ದಾಗ, ಅದು ಸ್ವರ್ಗದ ಚಿತ್ತಾಲತಾ ವನದಂತೆ ಅಥವಾ ಶೂರನಾದ ಮಹಾರಾಜನನ್ನು ಸ್ವಾಗತಿಸಲು ಸಿದ್ಧಗೊಂಡ ಉದ್ಯಾನವನದಂತೆ ಕಾಣುತ್ತಿದ್ದಿತು.

೨೧. ಅಲ್ಲಿಯ ಮರಗಿಡಗಳು ಬುಡದಿಂದ ತುದಿಯವರೆಗೂ ಹೂವು–ಹಣ್ಣುಗಳಿಂದ ತುಂಬಿಕೊಂಡಿದ್ದವು; ಬಣ್ಣಬಣ್ಣದ ಅಸಂಖ್ಯಾತ ದುಂಬಿಗಳು ಚಿತ್ರವಿಚಿತ್ರ ಧ್ವನಿಗಳನ್ನು ಹೊರಡಿಸುತ್ತಿದ್ದವು; ವಿವಿಧ ಪಕ್ಷಿಸಂಕುಲಗಳು ಸುಮಧುರವಾಗಿ ಹಾಡುತ್ತಿದ್ದವು.

೨೨. ನಿಸರ್ಗದ ಆ ಸೌಂದರ್ಯವನ್ನು ನೋಡಿದ ಮಹಾಮಾಯೆಯು ಅಲ್ಲಿ ಸ್ವಲ್ಪಕಾಲ ತಂಗಿದ್ದು ಕ್ರೀಡೆಯಲ್ಲಿ ತೊಡಗಲು ಬಯಸಿದಳು. ಪಲ್ಲಕ್ಕಿಯನ್ನು ಹೊತ್ತ ಹರಿಕಾರರಿಗೆ ಆ ಸಾಲವೃಕ್ಷದ ವನದಲ್ಲಿ ಸ್ವಲ್ಪಕಾಲ ನಿಲ್ಲುವಂತೆ ಅಪ್ಪಣೆ ಮಾಡಿದಳು.

೨೩. ಪಲ್ಲಕ್ಕಿಯಿಂದ ಇಳಿದ ಮಹಾಮಾಯೆಯು, ಒಂದು ಬೃಹತ್ ಸಾಲವೃಕ್ಷದ ಬುಡದ ಬಳಿ ನಡೆದುಬಂದಳು. ತಂಗಾಳಿಯ ಮೃದುಸ್ಪರ್ಶದಿಂದ ಮೇಲೆ ಕೆಳಗೆ ತೂಗಾಡುತ್ತಿದ್ದ ಮರದ ಕೊಂಬೆಗಳನ್ನು ಹಿಡಿದುಕೊಳ್ಳಬಯಸಿದಳು.

೨೪. ಸುಯೋಗದಿಂದ ಕೊಂಬೆಯೊಂದು ಕೈಗೆಟಕುವಷ್ಟು ಸಮೀಪಕ್ಕೆ ತೂಗಿ ಬಂದಾಗ ತುದಿಗಾಲ ಮೇಲೆ ನಿಂತ ಅವಳು ಆ ಕೊಂಬೆಯನ್ನು ಹಿಡಿದಳು. ಕೂಡಲೇ ಮೇಲೇರಿದ ಕೊಂಬೆಯೊಂದಿಗೆ ಅವಳೂ ಮೇಲೇರಿದಳು. ಅಲುಗಾಟದಿಂದಾಗಿ ಅವಳಿಗೆ ಹೆರಿಗೆಯ ನೋವು ಕಾಣಿಸಿಕೊಂಡಿತು. ಸಾಲವೃಕ್ಷದ ಕೊಂಬೆಯನ್ನು ಕೈಯಲ್ಲಿ ಹಿಡಿದು ನಿಂತಿದ್ದಾಗಲೇ ಮಹಾಮಾಯೆಗೆ ಗಂಡುಮಗುವಿನ ಜನನವಾಯಿತು.

೨೫. ಕ್ರಿಸ್ತಪೂರ್ವ ೫೬೩ನೇ ವರ್ಷದ ವೈಶಾಖ ಪೂರ್ಣಿಮೆಯ ದಿನದಂದು ಈ ರೀತಿ ಆ ಮಗುವಿನ ಜನನವಾಯಿತು.

೨೬. ಶುದ್ಧೋದನ ಮತ್ತು ಮಹಾಮಾಯೆಯರ ವಿವಾಹವಾಗಿ ಬಹುಕಾಲ ಕಳೆದಿದ್ದರೂ, ಅವರಿಗೆ ಮಕ್ಕಳಾಗಿರಲಿಲ್ಲ. ಕೊನೆಗೆ ಮಗನೊಬ್ಬನು ಹುಟ್ಟಿದಾಗ ಸಂಭ್ರಮಗೊಂಡ ಶುದ್ಧೋದನ ಮತ್ತು ಅವನ ಕುಟುಂಬದವರು ಮಾತ್ರವಲ್ಲದೆ, ಒಟ್ಟು ಶಾಕ್ಯವಂಶದವರೆಲ್ಲರೂ ಆ ಮಗುವಿನ ಜನನೋತ್ಸವವನ್ನು ಸಂತೋಷ ಮತ್ತು ಸಂಭ್ರಮಗಳೊಂದಿಗೆ ಆಚರಿಸಿದರು.

೨೭. ಆ ಮಗುವಿನ ಜನನವಾದಾಗ ಕಪಿಲವಸ್ತುವನ್ನು ಆಳುವ ಸರದಿ ಶುದ್ಧೋದನನದಾಗಿದ್ದರಿಂದ, ಅವನನ್ನು ರಾಜನೆಂದೇ ಕರೆಯುತ್ತಿದ್ದರು. ಹಾಗಾಗಿ ಈ ಮಗುವನ್ನು ಸಹಜವಾಗಿಯೇ ರಾಜಕುಮಾರ ಎಂದೇ ಕರೆದರು.

## ೪. ಅಸಿತನ ಆಗಮನ

೧. ರಾಜಕುಮಾರನು ಹುಟ್ಟಿದ ವೇಳೆಯಲ್ಲಿ ಹಿಮಾಲಯ ಪರ್ವತದಲ್ಲಿ ಅಸಿತ ಎಂಬ ಒಬ್ಬ ಮಹಾನ್ ಋಷಿ ವಾಸವಾಗಿದ್ದನು.

೨. ಅಸಿತನು ಆಕಾಶದಾದ್ಯಂತ ದೇವತೆಗಳು 'ಬುದ್ಧ' ಎಂದು ಘೋಷಿಸುತ್ತಿದ್ದುದನ್ನೂ, ಅದರ ಮಾರ್ದನಿಯನ್ನೂ ಕೇಳಿದನು; ಅವರು ಉಡುಗೆತೊಡುಗೆಗಳನ್ನು ಬೀಸುತ್ತಾ ಅತ್ತಿಂದಿತ್ತ ಓಡಾಡುತ್ತಿರುವುದನ್ನು ಗಮನಿಸಿದನು. ನಾನೂ ಸಹ ಬುದ್ಧನು ಜನಿಸಿದ ನಾಡನ್ನು ನೋಡಬಾರದೇಕೆ ಎಂಬ ಬಯಕೆ ಅವನಲ್ಲಿ ಮೂಡಿತು.

೩. ಅಸಿತನು ತನ್ನ ದಿವ್ಯದೃಷ್ಟಿಯಿಂದ ಜಂಬೂ ದ್ವೀಪವನ್ನೆಲ್ಲ ಹುಡುಕಿ, ಶುದ್ಧೋದನನ ಮನೆಯಲ್ಲಿ ಜನಿಸಿರುವ ತೇಜಸ್ವಿಯಾದ ಮಗುವನ್ನು ಗಮನಿಸಿದ ಮತ್ತು ಆ ಮಗುವಿನ ಜನನದಿಂದಾಗಿ ಈಗ ದೇವತೆಗಳೆಲ್ಲರೂ ಆನಂದಭರಿತರಾಗಿದ್ದಾರೆ ಎಂಬುದನ್ನು ತಿಳಿದ.

೪. ಮಹರ್ಷಿ ಅಸಿತನು ತಮ್ಮ ಸೋದರಳಿಯನಾದ ನರದತ್ತನೊಂದಿಗೆ ಹೊರಟು ರಾಜ ಶುದ್ಧೋದನನ ಅರಮನೆಯ ಬಾಗಿಲಿಗೆ ಬಂದು ನಿಂತನು.

೫. ಅಷ್ಟರಲ್ಲಿ ಅದಾಗಲೇ ಲಕ್ಷಾಂತರ ಜನ ಅರಮನೆಯ ಬಾಗಿಲಲ್ಲಿ ಸೇರಿರುವುದನ್ನು ಅಸಿತನು ಕಂಡನು. ಅವನು ಅಲ್ಲಿದ್ದ ದ್ವಾರಪಾಲಕರ ಬಳಿಗೆ ಹೋಗಿ "ಅಯ್ಯಾ, ನೀವು ರಾಜರ ಬಳಿಗೆ ಹೋಗಿ ಅರಮನೆಯ ಬಾಗಿಲಲ್ಲಿ ಒಬ್ಬ ಋಷಿ ಕಾಯುತ್ತಿದ್ದಾರೆ ಎಂಬುದಾಗಿ ತಿಳಿಸಿರಿ" ಎಂದು ಹೇಳಿದನು.

೬. ಆಗ ದ್ವಾರಪಾಲಕನು ಶುದ್ಧೋದನನ ಬಳಿಗೆ ಬಂದು ಕೈಜೋಡಿಸಿ, "ಓ ರಾಜನೇ, ಅರಮನೆಯ ಬಾಗಿಲಲ್ಲಿ ಹಿರಿಯರೂ ವೃದ್ಧರೂ ಆದ ಋಷಿಯೊಬ್ಬರು ನಿಂತಿದ್ದಾರೆ ಮತ್ತು ಅವರು ತಮ್ಮ ದರ್ಶನಾಕಾಂಕ್ಷಿಗಳಾಗಿದ್ದಾರೆ" ಎಂದು ನಿವೇದಿಸಿಕೊಂಡನು.

೭. ರಾಜನು ಋಷಿ ಅಸಿತನಿಗಾಗಿ ಒಂದು ಆಸನವನ್ನು ಸಿದ್ಧಗೊಳಿಸಿ, "ಆ ಋಷಿಗಳನ್ನು ಕರೆತನ್ನಿ" ಎಂಬುದಾಗಿ ದ್ವಾರಪಾಲಕನಿಗೆ ಹೇಳಿದನು. ದ್ವಾರಪಾಲಕನು ಹೊರಬಂದು ಋಷಿಗಳನ್ನು ಕುರಿತು, "ದಯಮಾಡಿ ಒಳಗೆ ಬನ್ನಿ" ಎಂದನು.

೮. ಅಸಿತನು ರಾಜನ ಬಳಿ ಬಂದು ನಿಂತು, "ಓ ರಾಜನೇ, ನಿನಗೆ ಜಯವಾಗಲಿ, ನೀನು ದೀರ್ಘಾಯುವಾಗು, ಸತ್ಯವಂತನಾಗಿ ರಾಜ್ಯಪಾಲನೆ ಮಾಡು" ಎಂದು ಹರಸಿದನು.

೯. ಶುದ್ಧೋದನನು ಭಕ್ತಿಪೂರ್ವಕವಾಗಿ ಅಸಿತನ ಪಾದಕ್ಕೆ ನಮಿಸಿ, ಅವನನ್ನು ಆಸನಾರೂಢರಾಗುವಂತೆ ಪ್ರಾರ್ಥಿಸಿದನು. ಅವನು ಸುಖಾಸೀನರಾದ ನಂತರ, ಶುದ್ಧೋದನನು ಹೇಳಿದನು: "ಋಷಿವರ್ಯರೇ, ಈ ಮೊದಲು ನಾನು ತಮ್ಮನ್ನು ಕಂಡ ನೆನಪಿಲ್ಲ. ತಾವು ಬಂದ ಕಾರಣವನ್ನು ತಿಳಿಯಲು ಕಾತುರನಾಗಿದ್ದೇನೆ, ದಯಮಾಡಿ ತಿಳಿಸಿ ಎಂದನು."

೧೦. "ಓ ರಾಜನೇ, ನಿನಗೆ ಒಬ್ಬ ಸುಪುತ್ರನ ಜನನವಾಗಿದೆ. ಆ ಮಗುವನ್ನು ನೋಡಲೋಸುಗ ನಾನು

ಇಲ್ಲಿಗೆ ಬಂದಿದ್ದೇನೆ" ಎಂದು ಅಸಿತನು ಹೇಳಿದನು.

೧೧. "ಮಹರ್ಷಿಗಳೇ, ಆ ಮಗು ನಿದ್ದೆಯಲ್ಲಿದೆ. ತಾವು ಅದು ಏಳುವವರೆಗೂ ಕಾಯಲು ಸಾಧ್ಯವೇ?" ಎಂದು ಶುದ್ಧೋದನನು ಕೇಳಿದನು. ಅದಕ್ಕೆ ಅಸಿತನು, "ರಾಜನೇ, ನಾನು ಹೆಚ್ಚು ಹೊತ್ತು ಕಾಯಬೇಕಾಗಿಲ್ಲ. ಏಕೆಂದರೆ ಅಂತಹ ಮಹಿಮಾನ್ವಿತರು ನಿದ್ದೆಯಲ್ಲಿ ತೊಡಗುವುದಿಲ್ಲ. ಸದಾ ಜಾಗ್ರತರಾಗಿರುವುದೇ ಅವರ ಸ್ವಭಾವ" ಎಂದನು.

೧೨. ಅಷ್ಟರಲ್ಲಿ ಶ್ರೇಷ್ಠರಾದ ಅಸಿತ ಮಹರ್ಷಿಗಳ ಮೇಲಿನ ಅನುಕಂಪದಿಂದ ಆ ಮಗು ಎಚ್ಚರಗೊಳ್ಳುವ ಸೂಚನೆ ನೀಡಿತು.

೧೩. ಮಗು ಎಚ್ಚರಗೊಂಡುದನ್ನು ಕಂಡ ಶುದ್ಧೋದನನು ಮಗುವನ್ನು ಎರಡೂ ಕೈಗಳಿಂದ ಬಿಗಿಯಾಗಿ ಅಪ್ಪಿ ಹಿಡಿದು ಅದನ್ನು ಋಷಿಗಳ ಸನ್ನಿಧಿಗೆ ತಂದನು.

೧೪. ಅಸಿತನು ಮಗುವನ್ನು ಚೆನ್ನಾಗಿ ಪರೀಕ್ಷಿಸಿ, ಮಹಾಪುರುಷನಿಗಿರಬೇಕಾದ ಮೂವತ್ತೆರಡು ಲಕ್ಷಣಗಳನ್ನು ಮತ್ತು ಎಂಭತ್ತು ಉಪಲಕ್ಷಣಗಳನ್ನು ಆ ಮಗು ಪಡೆದಿದ್ದು ಶಕ್ರ, ಬ್ರಹ್ಮರ ಶರೀರಕ್ಕಿಂತಲೂ ಶ್ರೇಷ್ಠವಿದ್ದು, ಅವರಿಗಿಂತಲೂ ಕೋಟ್ಯಂತರ ಪಾಲು ಹೆಚ್ಚು ದಿವ್ಯಪ್ರಭೆಯನ್ನೂ ಹೊಂದಿರುವುದನ್ನು ಕಂಡನು. "ಇದು ಈ ಜಗತ್ತಿನಲ್ಲಿ ಜನಿಸಿದ ಒಂದು ಅದ್ಭುತ ಶಿಶು" ಎಂದು ಹೇಳಿ, ತಮ್ಮ ಆಸನದಿಂದ ಮೇಲೆದ್ದು ಆ ಮಗುವಿಗೆ ಪ್ರದಕ್ಷಿಣೆ ಮಾಡಿ ಅದರ ಪಾದಕ್ಕೆ ನಮಿಸಿದರು. ಆ ಮಗುವನ್ನು ಕೈಗೆತ್ತಿಕೊಂಡು ಧ್ಯಾನಾಸಕ್ತರಾದರು.

೧೫. ಗೌತಮನಿಗಿದ್ದಂತಹ ಮೂವತ್ತೆರಡು ಲಕ್ಷಣಗಳನ್ನು ಪಡೆದ ಯಾವುದೇ ವ್ಯಕ್ತಿಗೆ ತನ್ನ ಮುಂದೆ ಇರಬಹುದಾದ ಭವಿಷ್ಯಗಳು ಎರಡೇ ಎರಡು ಎಂಬುದು ಅಸಿತನಿಗೆ ಚೆನ್ನಾಗಿ ಗೊತ್ತಿದ್ದಿತು. "ಅವನೇನಾದರೂ ಗೃಹಸ್ಥನಾದರೆ ವಿಶ್ವದ ಚಕ್ರಾಧಿಪತಿ ಆಗುತ್ತಾನೆ. ಗೃಹ ತ್ಯಾಗ ಮಾಡಿ ಸಂನ್ಯಾಸಿಯಾದರೆ ಅವನು ಬೋಧಿಸತ್ವನಾದ ಪೂರ್ಣ ಬುದ್ಧನಾಗುತ್ತಾನೆ."

೧೬. ಆ ಮಗುವು ಗೃಹಸ್ಥನಾಗಿ ಉಳಿಯಲಾರನೆಂಬುದನ್ನು ಅಸಿತನು ಚೆನ್ನಾಗಿ ಮನಗಂಡನು.

೧೭. ಅವನು ಮಗುವನ್ನು ನೋಡುತ್ತಾ ನಿಟ್ಟುಸಿರುಬಿಟ್ಟು ಕಣ್ಣೀರು ಸುರಿಸುತ್ತಾ ನಿಂತನು.

೧೮. ಅಸಿತನು ನಿಟ್ಟುಸಿರುಬಿಡುತ್ತಾ ಕಣ್ಣೀರಿಡುವುದನ್ನು ಶುದ್ಧೋದನನು ಗಮನಿಸಿದನು.

೧೯. ಅವನು ಕಣ್ಣೀರಿಡುವುದನ್ನು ನೋಡಿ ಭಯಕಂಪಿತನಾದ ಶುದ್ಧೋದನನು ದುಃಖದಿಂದ ಅಸಿತನನ್ನು ಕುರಿತು ಈ ರೀತಿ ಪ್ರಶ್ನಿಸಿದನು, "ಓ ಮಹರ್ಷಿಗಳೇ, ನೀವೇಕೆ ಈ ರೀತಿ ನಿಟ್ಟುಸಿರುಬಿಡುತ್ತಾ ರೋದಿಸುತ್ತಿದ್ದೀರಿ? ಈ ಮಗುವಿಗೆ ಭವಿಷ್ಯದಲ್ಲಿ ಯಾವುದೇ ದುರ್ವಿಧಿಯ ಭಯವಿಲ್ಲವಷ್ಟೆ?"

೨೦. ಅದಕ್ಕೆ ಅಸಿತನು ರಾಜನನ್ನು ಕುರಿತು ಈ ರೀತಿ ಹೇಳಿದನು; "ಓ ರಾಜನೇ, ನಾನು ಮಗುವಿಗಾಗಿ ಕಣ್ಣೀರಿಡುತ್ತಿಲ್ಲ. ಅವನಿಗೆ ಯಾವ ಅನಿಷ್ಟದ ಭಯವೂ ಇಲ್ಲ. ಆದರೆ ನಾನು ನನಗಾಗಿ ಕಣ್ಣೀರಿಡುತ್ತಿದ್ದೇನೆ."

೨೧. "ಅದೇಕೆ?" ಎಂದು ಶುದ್ಧೋದನನು ಕೇಳಿದನು. ಅದಕ್ಕೆ ಅಸಿತನು ಹೇಳಿದನು: "ನನಗೆ ವಯಸ್ಸಾಯಿತು. ಮುದುಕನಾಗಿದ್ದೇನೆ. ಈ ಹುಡುಗ ಬುದ್ಧನಾಗಿ ಪರಮೋಚ್ಚ ಪರಿಪೂರ್ಣ ಜ್ಞಾನಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆ ರೀತಿ ಜ್ಞಾನಿಯಾಗುವ ಇವನು ಹಿಂದೆ ಜಗತ್ತಿನ ಯಾವ ಜೀವವೂ ಮಾಡಿರದ ರೀತಿಯಲ್ಲಿ ಬೋಧನೆಯ ಪೂರ್ಣ ಚಕ್ರವನ್ನೇ ತಿರುಗಿಸಿಬಿಡುತ್ತಾನೆ; ಜಗತ್ತಿನ ಕಲ್ಯಾಣ ಮತ್ತು ಸುಖಸಂತೋಷಗಳಿಗಾಗಿ ತನ್ನ ಬೋಧನೆಯನ್ನು ಬೋಧಿಸುತ್ತಾನೆ.

೨೨. "ಅವನು ಬೋಧಿಸುವ ಧಾರ್ಮಿಕ ಜೀವನ, ಮಧ್ಯ ಅಂತ್ಯಗಳಲ್ಲಿಯೂ ಶುಭಕರವಾಗಿದ್ದು, ಶಬ್ದಾರ್ಥದಲ್ಲಿ ಮಾತ್ರವಲ್ಲದೆ, ಭಾವಾರ್ಥದಲ್ಲಿಯೂ ಪರಿಪೂರ್ಣವೂ ಪರಿಶುದ್ಧವೂ ಆಗಿರುತ್ತದೆ.

೨೩. "ಜಗತ್ತಿನ ಯಾವುದೇ ಒಂದು ಭಾಗದಲ್ಲಿ ಶತಮಾನಗಳಿಗೊಮ್ಮೆ ಮೂಡುವ ಔದುಂಬರ ಪುಷ್ಪದಂತೆ, ಯುಗಯುಗಾಂತರಗಳ ನಂತರ ಜಗದ್ವಂದ್ಯನಾದ ಬುದ್ಧನೊಬ್ಬನ ಜನನ ಇಲ್ಲಿ ಆಗಿದೆ. ಓ ರಾಜನೇ, ಪರಿಪೂರ್ಣವಾದ ಜ್ಞಾನವನ್ನು ಇವನು ನಿಸ್ಸಂಶಯವಾಗಿ ಗಳಿಸುತ್ತಾನೆ ಮತ್ತು ಅಸಂಖ್ಯಾತ ಜನರನ್ನು ದುಃಖಸಾಗರದಿಂದ ಪಾರುಮಾಡಿ ಅವರನ್ನು ಸುಖಿಗಳನ್ನಾಗಿ ಮಾಡುತ್ತಾನೆ.

೨೪. "ಆದರೆ ಆ ಬುದ್ಧನನ್ನು ನಾನು ನೋಡಲಾರೆನು. ಆದ್ದರಿಂದ ಓ ರಾಜನೇ, ಅವನನ್ನು ಪೂಜಿಸಲಾರೆನಲ್ಲಾ ಎಂಬ ದುಃಖದಿಂದ ನಿಟ್ಟುಸಿರುಬಿಟ್ಟು ಕಣ್ಣೀರಿಡುತ್ತಿದ್ದೇನೆ."

೨೫. ಮಹಾರಾಜನು ಮಹರ್ಷಿಗಳಾದ ಅಸಿತ ಮತ್ತು ಅವನ ಸೋದರಳಿಯ ನರದತ್ತನಿಗೆ ಯುಕ್ತ ಆಹಾರವನ್ನೂ ನೀಡಿ, ಉಡಿಗೆ ತೊಡಿಗೆಗಳನ್ನು ಕೊಟ್ಟು, ಬಲಪ್ರದಕ್ಷಿಣೆ ಬಂದು ನಮಸ್ಕರಿಸಿದನು.

೨೬. ಆಗ ಅಸಿತನು ನರದತ್ತನಿಗೆ ಈ ರೀತಿ ಹೇಳಿದನು: "ಈ ಮಗುವು ಬುದ್ಧನಾಗಿದ್ದಾನೆ ಎಂಬ ವಿಚಾರವನ್ನು ಕೇಳಿದ ಕೂಡಲೆ ನೀನು ಅವನ ಬೋಧನೆಗೆ ಶರಣಾಗಬೇಕು. ಅದು ನಿನ್ನ ಸುಖ, ಶಾಂತಿ ಮತ್ತು ಕ್ಷೇಮಕ್ಕೆ ಕಾರಣವಾಗುತ್ತದೆ." ನಂತರ ರಾಜನಿಂದ ಬೀಳ್ಕೊಂಡು ಅಸಿತನು ತಮ್ಮ ಆಶ್ರಮದತ್ತ ನಡೆದನು.

## ೫. ಮಹಾಮಾಯೆಯ ಸಾವು

೧. ಐದನೇ ದಿನ ಆ ಮಗುವಿಗೆ ನಾಮಕರಣ ಜರುಗಿತು. ಮಗುವಿಗೆ ಸಿದ್ಧಾರ್ಥ ಎಂದು ನಾಮಕರಣ ಮಾಡಲಾಯಿತು. ಅವನ ವಂಶದ ಹೆಸರು ಗೌತಮ ಎಂದು. ಆದ್ದರಿಂದ ರೂಢಿಯಲ್ಲಿ ಅವನನ್ನು ಸಿದ್ಧಾರ್ಥ ಗೌತಮ ಎಂದು ಕರೆಯಲಾಯಿತು.

೨. ಮಗುವಿನ ಜನನ ಮತ್ತು ನಾಮಕರಣದ ಸಂಭ್ರಮದ ನಡುವೆ ಮಹಾಮಾಯೆಗೆ ಇದ್ದಕಿದ್ದಂತೆ ಅನಾರೋಗ್ಯವಾಗಿ ಅದು ಗಂಭೀರ ಸ್ಥಿತಿಯನ್ನು ಮುಟ್ಟಿತು.

೩. ತನ್ನ ಅಂತ್ಯಕಾಲ ಸಮೀಪಿಸುತ್ತಿದೆ ಎಂಬುದನ್ನರಿತ ಅವಳು ಶುದ್ಧೋದನ ಮತ್ತು ಪ್ರಜಾಪತಿಯನ್ನು ಬಳಿಗೆ ಕರೆದು ಅವರಿಗೆ ಈ ರೀತಿ ಹೇಳಿದಳು: "ನನ್ನ ಮಗನ ವಿಚಾರದಲ್ಲಿ ಅಸಿತ ಋಷಿಗಳು ಹೇಳಿದ ಭವಿಷ್ಯ ಖಂಡಿತ ನಿಜವಾಗುತ್ತದೆ. ಆದರೆ ಅದು ಈಡೇರುವುದನ್ನು ನೋಡಲು ನಾನಿರುವುದಿಲ್ಲವಲ್ಲ ಎಂಬುದೇ ನನ್ನ ವ್ಯಥೆ."

೪. "ನನ್ನ ಮಗು ಬಹು ಬೇಗ ತಾಯಿಯಿಲ್ಲದ ತಬ್ಬಲಿಯಾಗುತ್ತದೆ. ನನ್ನ ನಂತರ ನನ್ನ ಮಗುವನ್ನು ಜೋಪಾನ ಯಾರು ಮಾಡುತ್ತಾರೆಯೇ ಸರಿಯಾಗಿ ನೋಡಿಕೊಂಡು, ಅವನ ಭವಿಷ್ಯಕ್ಕೆ ತಕ್ಕನಾಗಿ ಬೆಳೆಸುತ್ತಾರೆಯೇ ಎಂಬ ಬಗ್ಗೆ ನನ್ನ ಮನಸ್ಸಿನಲ್ಲಿ ಸ್ವಲ್ಪವೂ ಆತಂಕ ಇಲ್ಲ."

೫. "ನೋಡಮ್ಮ ಪ್ರಜಾಪತಿ, ಈ ಮಗುವನ್ನು ನಿನ್ನ ವಶಕ್ಕೆ ಒಪ್ಪಿಸುತ್ತಿದ್ದೇನೆ. ನೀನು ಅವನನ್ನು ತಾಯಿಗಿಂತಲೂ ಹೆಚ್ಚಾಗಿ ಪ್ರೀತಿಸುತ್ತೀ ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ."

೬. "ಈಗ ನನಗಾಗಿ ದುಃಖಿಸಬೇಡಿ. ನನ್ನ ಸಾವಿಗೆ ಅನುಮತಿ ಕೊಡಿ. ಭಗವಂತನ ಕರೆ ಬಂದಿದೆ ಮತ್ತು ಅವನ ದೂತರು ನನ್ನನ್ನು ಕರೆದೊಯ್ಯಲು ಕಾಯುತ್ತಿದ್ದಾರೆ." ಈ ಮಾತನ್ನು ಹೇಳುತ್ತಾ

ಮಹಾಮಾಯೆಯು ಕೊನೆಯುಸಿರೆಳೆದಳು. ಶುದ್ಧೋದನ ಮತ್ತು ಪ್ರಜಾಪತಿ ಇಬ್ಬರೂ ತುಂಬ ದುಃಖಿತರಾದರು ಮತ್ತು ಬಹುವಾಗಿ ರೋದಿಸಿದರು.

೭. ಸಿದ್ಧಾರ್ಥನು ಕೇವಲ ಏಳು ದಿನದ ಮಗುವಾಗಿದ್ದಾಗ ತನ್ನ ತಾಯಿಯನ್ನು ಕಳೆದುಕೊಂಡನು.

೮. ಸಿದ್ಧಾರ್ಥನಿಗೆ ನಂದ ಎಂಬ ತಮ್ಮನಿದ್ದನು. ಅವನು ಶುದ್ಧೋದನನಿಗೆ ಮಹಾಪ್ರಜಾಪತಿಯಲ್ಲಿ ಜನಿಸಿದ ಮಗ.

೯. ಸಿದ್ಧಾರ್ಥನಿಗೆ ಅನೇಕ ಸೋದರ ಸಂಬಂಧಿಗಳಿದ್ದರು. ಮಹಾನಾಮ ಮತ್ತು ಅನುರುದ್ಧ ಅವನ ಚಿಕ್ಕಪ್ಪ ಸುಕ್ಲೋಧನನ ಮಕ್ಕಳು. ಆನಂದನು ಅಮಿತೋದನನೆಂಬ ಚಿಕ್ಕಪ್ಪನ ಮಗ. ದೇವದತ್ತನು ಅಮಿತ ಎಂಬ ಚಿಕ್ಕಮ್ಮನ ಮಗ. ಮಹಾನಾಮನು ಸಿದ್ಧಾರ್ಥನಿಗಿಂತಲೂ ದೊಡ್ಡವನು ಮತ್ತು ಆನಂದನು ಚಿಕ್ಕಪ್ಪ ಅಮಿತೋದನನ ಮಗ. ದೇವದತ್ತನು ಚಿಕ್ಕಮ್ಮ ಅಮಿತಳ ಮಗ. ಮಹಾನಾಮನು ಸಿದ್ಧಾರ್ಥನಿಗಿಂತಲೂ ದೊಡ್ಡವನು ಮತ್ತು ಆನಂದನು ಇವನಿಗಿಂತಲೂ ಚಿಕ್ಕವನು.

೧೦. ಸಿದ್ಧಾರ್ಥನು ಅವರುಗಳ ಸಹವಾಸದಲ್ಲಿ ಬೆಳೆದನು.

## ೬. ಬಾಲ್ಯ ಮತ್ತು ಶಿಕ್ಷಣ

೧. ಸಿದ್ಧಾರ್ಥನು ನಡೆಯಲು ಮತ್ತು ಮಾತನ್ನಾಡಲು ಕಲಿತಮೇಲೆ, ಶಾಕ್ಯವಂಶದ ಹಿರಿಯರು ಸೇರಿ ಈ ಬಾಲಕನನ್ನು ಗ್ರಾಮದೇವತೆಯಾದ ಅಭಯಳ ದೇವಸ್ಥಾನಕ್ಕೆ ಕರೆದುಕೊಂಡು ಹೋಗಲು ಶುದ್ಧೋದನನಿಗೆ ಸೂಚಿಸಿದರು.

೨. ಶುದ್ಧೋದನನು ಅದಕ್ಕೆ ಒಪ್ಪಿ ಬಾಲಕನಿಗೆ ಉಡುಗೆ ತೊಡಿಸಿ ಸಿದ್ಧಗೊಳಿಸಲು ಮಹಾಪ್ರಜಾಪತಿಗೆ ಸೂಚಿಸಿದನು.

೩. ದೇವಾಲಯಕ್ಕೆ ಕರೆದೊಯ್ಯಲು ಅವನನ್ನು ಚಿಕ್ಕಮ್ಮ ಸಿದ್ಧಗೊಳಿಸುತ್ತಿದ್ದಾಗ, ಸಿದ್ಧಾರ್ಥನು ಮಧುರವಾದ ತನ್ನ ವಾಣಿಯಲ್ಲಿ "ನನ್ನನ್ನು ಎಲ್ಲಿಗೆ ಕರೆದೊಯ್ಯುತ್ತೀರ" ಎಂದು ಕೇಳಿದನು. ದೇವಾಲಯಕ್ಕೆ ಕರೆದೊಯ್ಯುತ್ತಿದ್ದಾರೆ ಎಂಬುದನ್ನು ಕೇಳಿ ಅವನು ನಕ್ಕನು. ಅಂತೂ ಶಾಕ್ಯ ವಂಶದ ಪದ್ಧತಿಗನುಗುಣವಾಗಿ ದೇವಸ್ಥಾನಕ್ಕೆ ಹೋಗಿಬಂದನು.

೪. ಸಿದ್ಧಾರ್ಥನು ತನ್ನ ಎಂಟನೇ ವಯಸ್ಸಿನಲ್ಲಿ ಶಿಕ್ಷಣವನ್ನು ಆರಂಭಿಸಿದನು.

೫. ಮಹಾಮಾಯೆಯು ಕಂಡ ಕನಸನ್ನು ಅರ್ಥೈಸಲು ಈ ಮೊದಲು ಶುದ್ಧೋದನನು ಆಹ್ವಾನಿಸಿದ್ದ ಎಂಟು ಜನ ಬ್ರಾಹ್ಮಣರು ಇವನ ಮೊದಲ ಬೋಧಕರಾದರು.

೬. ಆ ಪಂಡಿತರು ತಮಗೆ ತಿಳಿದಿದ್ದನ್ನು ಬೋಧಿಸಿದ ಮೇಲೆ, ಶುದ್ಧೋದನನು ಉದ್ದಿಕ್ಕ ದೇಶದ ಶ್ರೇಷ್ಠ ವಂಶಜನೂ, ಭಾಷಾಶಾಸ್ತ್ರ, ವ್ಯಾಕರಣ, ವೇದವೇದಾಂಗಗಳು ಮತ್ತು ಉಪನಿಷತ್ತಿನಲ್ಲಿ ಪಾರಂಗತನೆನಿಸಿದ್ದ, ಸಬ್ಬಮಿತ್ತನೆಂಬ ಗುರುವಿಗೆ ಹೇಳಿಕಳುಹಿಸಿದನು. ಶುದ್ಧೋದನನು ಸುವರ್ಣಕಲಶದಿಂದ ಧಾರೆಯೆರೆದು ವಿಧಿವತ್ತಾಗಿ ಹುಡುಗನನ್ನು ಶಿಕ್ಷಣಕ್ಕಾಗಿ ಗುರುಗಳ ವಶಕ್ಕೆ ವಹಿಸಿಕೊಟ್ಟನು. ಸಿದ್ಧಾರ್ಥನಿಗೆ ಇವರು ಎರಡನೇ ಗುರು.

೭. ಗೌತಮನು ಅವರಿಂದ ಅಂದಿನ ಎಲ್ಲ ದಾರ್ಶನಿಕ ಸಿದ್ಧಾಂತಗಳ ಪೂರ್ಣ ಪಾಂಡಿತ್ಯವನ್ನು ಗಳಿಸಿದನು.

೮. ಇದರ ಜೊತೆಗೆ ಕಪಿಲವಸ್ತುವಿನಲ್ಲಿ ತನ್ನ ಆಶ್ರಮವನ್ನು ಹೊಂದಿದ್ದ ಅಲಾರಕಲಮನ ಶಿಷ್ಯನಾದ ಭಾರಧ್ವಾಜ ಎಂಬುವವರಿಂದ ಚಿತ್ತದ ಏಕಾಗ್ರತೆ ಮತ್ತು ಧ್ಯಾನದ ಅಭ್ಯಾಸಕ್ರಮವನ್ನು ಸಿದ್ಧಾರ್ಥನು ಕಲಿತನು.

## ೭. ಚಿಕ್ಕಂದಿನ ಸ್ವಭಾವಗಳು

೧. ಅವನು ತನ್ನ ತಂದೆಯ ಕೃಷಿಕ್ಷೇತ್ರಕ್ಕೆ ಹೋದಾಗ, ಅಲ್ಲಿ ತನಗೇನೂ ಕೆಲಸವಿಲ್ಲದಿದ್ದಾಗ, ಪ್ರಶಾಂತ ಸ್ಥಳ ಒಂದರಲ್ಲಿ ಕುಳಿತು ಧ್ಯಾನದ ಅಭ್ಯಾಸದಲ್ಲಿ ತೊಡಗುತ್ತಿದ್ದನು.

೨. ಅವನ ಬೌದ್ಧಿಕ ಬೆಳವಣಿಗೆಗೆ ಬೇಕಾದುದೆಲ್ಲವನ್ನೂ ದೊರಕಿಸಿಕೊಟ್ಟಮೇಲೆ ಕ್ಷತ್ರಿಯನಿಗೆ ಬೇಕಾದ ಶಸ್ತ್ರಾಸ್ತ್ರ ಶಿಕ್ಷಣದ ಬಗ್ಗೆ ಅಲಕ್ಷ್ಯ ವಹಿಸಲಿಲ್ಲ.

೩. ತನ್ನ ಮಗನ ಬೌದ್ಧಿಕ ವಿಕಾಸಕ್ಕೆ ಪ್ರೋತ್ಸಾಹ ಕೊಟ್ಟು ಅವನ ಪುರುಷಯೋಗ್ಯ ಪ್ರವೃತ್ತಿಯನ್ನು ಅನಾದರಿಸಬಾರದೆಂಬ ಅರಿವು ಶುದ್ಧೋದನನಿಗೆ ಚೆನ್ನಾಗಿದ್ದಿತು.

೪. ಸಿದ್ಧಾರ್ಥ ಬಹು ಮೃದು ಸ್ವಭಾವದವನು. ಮನುಷ್ಯನನ್ನು ಶೋಷಿಸುವುದನ್ನು ಅವನು ಒಪ್ಪುತ್ತಿರಲಿಲ್ಲ.

೫. ಇವನು ಒಮ್ಮೆ ತನ್ನ ಕೆಲವು ಮಿತ್ರರೊಂದಿಗೆ ತನ್ನ ತಂದೆಯ ಕೃಷಿಕ್ಷೇತ್ರಕ್ಕೆ ಹೋದಾಗ, ಅಲ್ಲಿ ಕೆಲವು ಕಾರ್ಮಿಕರು ಉರಿಬಿಸಿಲಿನಲ್ಲಿ ಅರೆಬೆತ್ತಲೆಯಲ್ಲಿ ಹೊಲವನ್ನು ಉಳುವುದು, ಬದುಹಾಕುವುದು, ಮರಕಡಿಯುವ ಕೆಲಸದಲ್ಲಿ ನಿರತರಾಗಿದ್ದುದನ್ನು ಕಂಡನು.

೬. ಇದನ್ನು ಕಂಡು ಇವನ ಮನಸ್ಸು ತುಂಬ ನೊಂದಿತು.

೭. ಅವನು ತನ್ನ ಸ್ನೇಹಿತರನ್ನು ಕುರಿತು, ಒಬ್ಬ ಮನುಷ್ಯ ಇನ್ನೊಬ್ಬನನ್ನು ಶೋಷಿಸುವುದು ಸರಿಯೇ? 'ಕಾರ್ಮಿಕರು ದುಡಿಯಬೇಕು; ಯಜಮಾನರು ಅವರ ದುಡಿಮೆಯ ಫಲವನ್ನು ಅನುಭವಿಸಬೇಕು ಎಂಬುದು ಯಾವ ನ್ಯಾಯ?' ಎಂದು ಕೇಳಿದನು.

೮. ಅದಕ್ಕೆ ಏನು ಉತ್ತರ ಕೊಡಬೇಕೆಂಬುದು ಅವನ ಸ್ನೇಹಿತರಿಗೆ ತಿಳಿಯಲಿಲ್ಲ. ಏಕೆಂದರೆ ಕಾರ್ಮಿಕ ಹುಟ್ಟಿರುವುದೇ ಯಜಮಾನನ ಸೇವೆಗಾಗಿ; ನನ್ನ ಯಜಮಾನನಿಗೆ ಸೇವೆ ಮಾಡುವ ಮೂಲಕ ಅವನು ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾನೆ ಅಷ್ಟೆ ಎಂಬ ಪುರಾತನ ಸಿದ್ಧಾಂತದಲ್ಲಿ ನಂಬಿಕೆಯಿದ್ದವರು ಆ ಸ್ನೇಹಿತರು.

೯. ಶಾಕ್ಯರು ವಪ್ರಮಂಗಳ ಎಂಬ ಹಬ್ಬವೊಂದನ್ನು ಆಚರಿಸುವುದು ಸಂಪ್ರದಾಯ. ಬಿತ್ತನೆಯ ದಿನದಂದು ಆಚರಿಸುವ ಗ್ರಾಮೀಣ ಹಬ್ಬ ಇದು. ಆ ದಿನ ಪ್ರತಿಯೊಬ್ಬ ಶಾಕ್ಯನೂ ತಾನೇ ನೇಗಿಲನ್ನು ಹಿಡಿದು ಭೂಮಿಯನ್ನು ಉಳಬೇಕು ಎಂಬುದು ಒಂದು ವಿಧಿವತ್ತಾದ ನಿಯಮ.

೧೦. ಸಿದ್ಧಾರ್ಥನು ಈ ನಿಯಮವನ್ನು ತಪ್ಪದೇ ಪಾಲಿಸುತ್ತಿದ್ದನು; ತಾನೇ ಸ್ವತಃ ಉಳುಮೆ ಮಾಡುತ್ತಿದ್ದನು.

೧೧. ವಿದ್ಯಾವಂತನಾದರೂ ಸಹ ಅವನು ಶಾರೀರಕ ಶ್ರಮವನ್ನು ಎಂದೂ ನಿಕೃಷ್ಟವಾಗಿ ಕಂಡವನಲ್ಲ.

೧೨. ಕ್ಷತ್ರಿಯ ವಂಶಜನಾದ ಅವನು ಶಸ್ತ್ರಾಸ್ತ್ರಗಳ ಬಳಕೆ ಹಾಗೂ ಧನುರ್ವಿದ್ಯೆಯಲ್ಲಿ ಶಿಕ್ಷಣ ಪಡೆದನು. ಆದರೆ ಅವನು ಅನವಶ್ಯಕವಾಗಿ ಹಿಂಸಿಸುವುದನ್ನು ಬಯಸುತ್ತಿರಲಿಲ್ಲ.

೧೩. ಅವನು ಬೇಟೆಗಾರರ ತಂಡವನ್ನೇ ಸೇರುತ್ತಿರಲಿಲ್ಲ. "ನಿನಗೆ ಹುಲಿಯನ್ನು ಕಂಡರೆ ಭಯವೇ?" ಎಂದು ಅವನ ಸ್ನೇಹಿತರು ಕೇಳಿದರೆ, ಅದಕ್ಕೆ ಅವನು "ನೀವು ಕೇವಲ ಕ್ರೂರಿಯಾದ ಹುಲಿಯನ್ನು

ಮಾತ್ರವೇ ಕೊಲ್ಲುತ್ತಿಲ್ಲ, ನಿರುಪದ್ರವಿಯಾದ ಜಿಂಕೆ ಮೊಲಗಳನ್ನೂ ಕೊಲ್ಲುತ್ತೀರಿ ಎಂಬುದನ್ನು ನಾನು ಬಲ್ಲೆ" ಎಂದು ಮಾರುತ್ತರ ಕೊಡುತ್ತಿದ್ದನು.

೧೪. "ಬೇಟೆಯಾಡಲು ಅಲ್ಲದಿದ್ದರೂ, ನಿನ್ನ ಸ್ನೇಹಿತರು ಎಷ್ಟು ಚೆನ್ನಾಗಿ ಗುರಿಯಿಟ್ಟು ಬಾಣವನ್ನು ಹೊಡೆಯಬಲ್ಲರು ಎಂಬುದನ್ನು ನೋಡಲು ನಮ್ಮೊಂದಿಗೆ ಬಾ" ಎಂದು ಅವನ ಸ್ನೇಹಿತರು ಅವನನ್ನು ಕರೆಯುತ್ತಿದ್ದರು. "ಆ ಮುಗ್ಧ ಪ್ರಾಣಿಗಳನ್ನು ಕೊಲ್ಲುವುದನ್ನು ನಾನು ನೋಡಲಾರೆ" ಎಂದು ಸಿದ್ಧಾರ್ಥನು ಅವರ ಆಹ್ವಾನವನ್ನು ನಿರಾಕರಿಸುತ್ತಿದ್ದನು.

೧೫. ಸಿದ್ಧಾರ್ಥನ ಈ ಮನೋಧರ್ಮವನ್ನು ನೋಡಿ ಪ್ರಜಾಪತಿ ಗೌತಮಿಯು ತುಂಬ ನೊಂದುಕೊಳ್ಳುತ್ತಿದ್ದಳು.

೧೬. ಅವನೊಂದಿಗೆ ಅವಳು ಈ ರೀತಿ ಚರ್ಚಿಸುತ್ತಿದ್ದಳು: "ನೀನು ಕ್ಷತ್ರಿಯನಾಗಿದ್ದು ಯುದ್ಧ ಮಾಡುವುದು ನಿನ್ನ ಕರ್ತವ್ಯ ಎಂಬುದನ್ನೇ ಮರೆತಿದ್ದೀಯ. ಯುದ್ಧ ಕಲೆಯನ್ನು ಕಲಿಯಲು ಬೇಟೆಯಾಡುವುದೊಂದೇ ಸರಿಯಾದ ಮಾರ್ಗ. ಏಕೆಂದರೆ ಬೇಟೆಯಾಡುವುದರಿಂದ ನಿಖರವಾಗಿ ಗುರಿಯಿಡುವುದನ್ನು ಕಲಿಯಬಹುದು. ಬೇಟೆಯಾಡುವುದು ಕ್ಷತ್ರಿಯರಿಗೆ ಸಾಧನರಂಗವಿದ್ದಂತೆ."

೧೭. ಸಿದ್ಧಾರ್ಥನು ಆಗಾಗ್ಗೆ ಗೌತಮಿಯನ್ನು ಕೇಳುತ್ತಿದ್ದ: "ಅಮ್ಮ, ಕ್ಷತ್ರಿಯರು ಏತಕ್ಕಾಗಿ ಯುದ್ಧ ಮಾಡಬೇಕು?"; ಅದಕ್ಕೆ ಗೌತಮಿಯು ಹೇಳುತ್ತಿದ್ದಳು: "ಏಕೆಂದರೆ ಅದು ಅವರ ಕರ್ತವ್ಯ."

೧೮. ಅವಳ ಈ ಉತ್ತರದಿಂದ ಸಿದ್ಧಾರ್ಥನಿಗೆ ತೃಪ್ತಿ ಎಂದೂ ಆಗುತ್ತಿರಲಿಲ್ಲ. "ಅಲ್ಲ, ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಕೊಲ್ಲುವುದು ಹೇಗೆ ಕರ್ತವ್ಯವಾಗಬಲ್ಲದು ಎಂಬುದನ್ನು ನನಗೆ ಸರಿಯಾಗಿ ತಿಳಿಯುವಂತೆ ಹೇಳು" ಎಂಬುದಾಗಿ ವಾದಿಸುತ್ತಿದ್ದನು. ಅದಕ್ಕೆ ಗೌತಮಿಯ ವಾದವೆಂದರೆ: "ಕೊಲ್ಲದಿರುವುದು ಸನ್ಯಾಸಿಗೆ ಸರಿ. ಕ್ಷತ್ರಿಯರಾದವರು ಹೋರಾಡಲೇಬೇಕು. ಅವರು ಹೋರಾಡದಿದ್ದರೆ ರಾಷ್ಟ್ರವನ್ನು ರಕ್ಷಿಸುವವರು ಯಾರು?"

೧೯. "ಆದರೆ, ಅಮ್ಮಾ, ಎಲ್ಲ ಕ್ಷತ್ರಿಯರು ಪರಸ್ಪರ ಪ್ರೀತಿಸುವುದಾದರೆ ಯಾವ ಹಿಂಸೆಯೂ ಇಲ್ಲದೆ ತಮ್ಮ ತಮ್ಮ ರಾಷ್ಟ್ರವನ್ನು ತಾವು ರಕ್ಷಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೇ?"; ಆಗ ಗೌತಮಿಯು ನಿರುತ್ತರಳಾಗಿ ಅವನಿಗೆ ಸರಿಕಂಡ ಅಭಿಪ್ರಾಯ ತಳೆಯಲು ಅವನಿಗೇ ಬಿಡುತ್ತಿದ್ದಳು.

೨೦. ಅವನು ತನ್ನ ಸ್ನೇಹಿತರನ್ನು ತನ್ನೊಂದಿಗೆ ಧ್ಯಾನದ ಅಭ್ಯಾಸದಲ್ಲಿ ತೊಡಗಲು ಪ್ರೇರಿಸುತ್ತಿದ್ದನು. ಸೂಕ್ತ ಆಸನಗಳನ್ನು ಅವರಿಗೆ ಕಲಿಸುತ್ತಿದ್ದನು. ಒಂದು ವಿಷಯದಲ್ಲಿ ಮನಸ್ಸನ್ನು ಕೇಂದ್ರಿಕರಿಸುವುದನ್ನು ಹೇಳಿಕೊಡುತ್ತಿದ್ದನು. "ನನಗೆ ಸುಖ ದೊರೆಯಲಿ, ನನ್ನ ಬಂಧು-ಬಾಂಧವರೆಲ್ಲರೂ ಸುಖದಿಂದಿರಲಿ, ಎಲ್ಲ ಜೀವಜಂತುಗಳೂ ಸುಖವಾಗಿರಲಿ" ಎಂಬಂಥ ವಿಷಯಗಳನ್ನು ಕುರಿತು ಧ್ಯಾನಿಸುವಂತೆ ಅವನು ಅವರಿಗೆ ಸಲಹೆ ಮಾಡುತ್ತಿದ್ದನು.

೨೧. ಆದರೆ ಅವನ ಸ್ನೇಹಿತರು ಇವನ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಇವನ ಮಾತನ್ನು ಕೇಳಿ ಅವರು ನಕ್ಕುಬಿಡುತ್ತಿದ್ದರು.

೨೨. ಕಣ್ಣುಮುಚ್ಚಿ ಧ್ಯಾನಕ್ಕೆ ಕುಳಿತಾಗ ಅವರಿಗೆ ತಾವು ಧ್ಯಾನಿಸಬೇಕಾದ ವಿಷಯದ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ಸಾಧ್ಯವಾಗುತ್ತಿರಲಿಲ್ಲ. ಅವರಲ್ಲಿ ಕೆಲವರು ಬೇಟೆಯ ಜಿಂಕೆಯನ್ನೋ ಇಲ್ಲವೇ ಸಿಹಿತಿಂಡಿಯನ್ನೋ ಕುರಿತು ಧ್ಯಾನಿಸುತ್ತಿದ್ದರು.

೨೩. ಧ್ಯಾನದ ವಿಚಾರದಲ್ಲಿ ಅವನಿಗಿದ್ದ ವಿಶೇಷವಾದ ಆಸಕ್ತಿಯನ್ನು ಅವನ ತಂದೆತಾಯಿಯರು ಒಪ್ಪುತ್ತಿರಲಿಲ್ಲ.

ಇದು ಕ್ಷತ್ರಿಯರ ಜೀವನಕ್ರಮಕ್ಕೆ ವಿರುದ್ಧವಾದದ್ದು ಎಂದು ಅವರು ತಿಳಿದಿದ್ದರು.

೨೪. ಶ್ರೇಷ್ಠವಾದ ವಿಷಯಗಳನ್ನು ಕುರಿತು ಧ್ಯಾನಿಸುವುದರಿಂದ ವಿಶ್ವಪ್ರೇಮಕ್ಕೆ ಅದು ಕಾರಣವಾಗುತ್ತದೆ ಎಂದು ಸಿದ್ಧಾರ್ಥನು ನಂಬಿದ್ದನು. ಅವನು ತನ್ನ ನಿಲುವನ್ನು ಸಮರ್ಥಿಸಲು ಈ ರೀತಿ ಹೇಳುತ್ತಿದ್ದನು: "ನಾವು ಜೀವಂತ ವಸ್ತುವನ್ನು ಕುರಿತು ಆಲೋಚಿಸುವಾಗ, ಅವುಗಳನ್ನು ಭೇದಭಾವದಿಂದ ಮತ್ತು ಪಕ್ಷಪಾತ ಭಾವದಿಂದ ನೋಡುತ್ತೇವೆ. ನಾವು ಸ್ನೇಹಿತರನ್ನು ವೈರಿಗಳಿಂದ ಪ್ರತ್ಯೇಕಿಸಿ ನೋಡುತ್ತೇವೆ. ಸಾಕು ಪ್ರಾಣಿಗಳನ್ನು ಕಾಡು ಪ್ರಾಣಿಗಳಿಂದ ಭಿನ್ನವಾಗಿ ಗುರುತಿಸುತ್ತೇವೆ. ನಾವು ನಮ್ಮ ಸ್ನೇಹಿತರನ್ನು ಮತ್ತು ಸಾಕುಪ್ರಾಣಿಗಳನ್ನು ಪ್ರೀತಿಸುತ್ತೇವೆ ಮತ್ತು ವೈರಿಗಳನ್ನೂ ಕಾಡುಪ್ರಾಣಿಗಳನ್ನೂ ದ್ವೇಷಿಸುತ್ತೇವೆ."

೨೫. "ನಾವು ನಮ್ಮಲ್ಲಿರುವ ಈ ಭೇದಭಾವನೆಯನ್ನು ಗೆಲ್ಲಬೇಕು. ಹಾಗೆ ಗೆಲ್ಲಬೇಕಾದರೆ ನಾವು ನಮ್ಮ ಧ್ಯಾನಾವಸ್ಥೆಯಲ್ಲಿ ನಮ್ಮ ಈ ದೈನಂದಿನ ಸ್ವಭಾವವನ್ನು ಮೀರಿ ಬೆಳೆಯಲು ಕಲಿಯಬೇಕು." ಇದು ಅವನ ಚಿಂತನೆಯ ಸ್ವರೂಪ.

೨೬. ಅವನ ಬಾಲ್ಯಾವಸ್ಥೆಯಲ್ಲಿಯೇ ಇಂತಹ ಅತಿ ಸೂಕ್ಷ್ಮವಾದ ಅನುಕಂಪ ಅವನಲ್ಲಿ ತುಂಬಿದ್ದಿತು.

೨೭. ಒಮ್ಮೆ ಅವನು ತನ್ನ ತಂದೆಯ ಕೃಷಿಕ್ಷೇತ್ರಕ್ಕೆ ಹೋಗಿ ಅಲ್ಲಿ ಒಂದು ಮರದ ಕೆಳಗೆ ನಿಸರ್ಗದ ಶಾಂತಿ ಸೌಂದರ್ಯವನ್ನು ಸವಿಯುತ್ತಾ ಕುಳಿತನು. ಆಗ ಒಂದು ಪಕ್ಷಿಯು ಆಕಾಶದಿಂದ ನೇರವಾಗಿ ಅವನ ಮುಂದೆ ಬಿದ್ದಿತು.

೨೮. ಆ ಪಕ್ಷಿಯು ತನ್ನ ಶರೀರಕ್ಕೆ ನೆಟ್ಟಿದ್ದ ಬಾಣದಿಂದಾಗಿ ದಾರುಣವಾದ ನೋವಿನಿಂದ ಕಂಪಿಸುತ್ತಿತ್ತು.

೨೯. ಸಿದ್ಧಾರ್ಥನು ಆ ಪಕ್ಷಿಯ ನೆರವಿಗೆ ಧಾವಿಸಿದನು. ಅವನು ಆ ಬಾಣವನ್ನು ತೆಗೆದು ಅದರ ಗಾಯಕ್ಕೆ ಉಪಚಾರ ಮಾಡಿ ಆ ಪಕ್ಷಿಗೆ ಕುಡಿಯಲು ನೀರನ್ನು ಕೊಟ್ಟನು. ಆ ಪಕ್ಷಿಯನ್ನು ಎತ್ತಿಕೊಂಡು ತನ್ನ ಹೊದಿಕೆಯನ್ನು ಅದಕ್ಕೆ ಹೊದಿಸಿ ಅದನ್ನು ತನ್ನ ಎದೆಗೊತ್ತಿಕೊಂಡು ಅದಕ್ಕೆ ಶಾಖವನ್ನು ಕೊಟ್ಟನು.

೩೦. ಈ ಮುಗ್ಧಪಕ್ಷಿಗೆ ಯಾರು ಬಾಣವನ್ನು ಹೊಡೆದಿರಬಹುದು ಎಂಬುದಾಗಿ ಸಿದ್ಧಾರ್ಥನು ಯೋಚಿಸತೊಡಗಿದನು. ಅಷ್ಟರಲ್ಲಿ ತನ್ನ ಸೋದರ ಸಂಬಂಧಿ ದೇವದತ್ತನು ಬಿಲ್ಲುಬಾಣಗಳೊಂದಿಗೆ ಅಲ್ಲಿಗೆ ಬಂದನು. ತಾನು ಆಕಾಶದಲ್ಲಿ ಹಾರುತ್ತಿದ್ದ ಪಕ್ಷಿಯೊಂದಕ್ಕೆ ಬಾಣ ಹೊಡೆದನೆಂದೂ, ಅದಕ್ಕೆ ಆ ಬಾಣ ತಗುಲಿ ಅದು ನೋವಿನಿಂದ ಸ್ವಲ್ಪ ದೂರ ಹಾರಿ ಬಂದು ಇಲ್ಲೇ ಎಲ್ಲಿಯೋ ಬಿದ್ದಿತೆಂದೂ, ಆ ಪಕ್ಷಿಯನ್ನು ನೀನೇನಾದರೂ ಕಂಡೆಯಾ ಎಂದು ಸಿದ್ಧಾರ್ಥನನ್ನು ಕೇಳಿದನು.

೩೧. ಸಿದ್ಧಾರ್ಥನು ತಾನು ಆ ಪಕ್ಷಿಯನ್ನು ನೋಡಿದೆನೆಂದು ಹೇಳಿ, ಆ ವೇಳೆಗೆ ನೋವಿನಿಂದ ಚೇತರಿಸಿಕೊಂಡಿದ್ದ ಆ ಪಕ್ಷಿಯನ್ನು ಅವನಿಗೆ ತೋರಿಸಿದನು.

೩೨. ಆ ಪಕ್ಷಿಯನ್ನು ತನಗೆ ಕೊಡಬೇಕೆಂದು ದೇವದತ್ತನು ತಗಾದೆ ಮಾಡಿದನು. ಸಿದ್ಧಾರ್ಥನು ಅದಕ್ಕೆ ಒಪ್ಪಲಿಲ್ಲ. ಆಗ ಅವರಿಬ್ಬರ ನಡುವೆ ತೀವ್ರ ವಾಗ್ವಾದವೇ ನಡೆಯಿತು.

೩೩. ಆ ಪಕ್ಷಿಯನ್ನು ಕೊಂದವನು ತಾನಾದ್ದರಿಂದ ಬೇಟೆಯ ನಿಯಮಾನುಸಾರ ತಾನು ಅದರ ಒಡೆಯನಾಗಿದ್ದು, ಅದು ತನಗೇ ಸೇರಬೇಕು ಎಂದು ದೇವದತ್ತನು ವಾದಿಸಿದನು.

೩೪. ಸಿದ್ಧಾರ್ಥನು ಆ ನಿಯಮದ ಸತ್ಯತೆಯನ್ನೇ ನಿರಾಕರಿಸಿದನು. ಯಾರು ಆ ಜೀವಿಯನ್ನು ರಕ್ಷಿಸಿದರೋ ಅವರಿಗೆ ಅದರ ಒಡೆತನ ಲಭಿಸುತ್ತದೆ. ಕೊಲ್ಲುವವನು ಹೇಗೆ ಅದರ ಒಡೆಯನಾಗುತ್ತಾನೆ? ಎಂದು ಅವನು ವಾದಿಸಿದನು.

೩೫. ಇವರಿಬ್ಬರಲ್ಲಿ ಯಾರೊಬ್ಬರೂ ಸೋಲುವಂತೆ ಕಾಣಲಿಲ್ಲ. ವಿಷಯವನ್ನು ಪಂಚಾಯಿತಿಗೆ

ವಹಿಸಬೇಕಾಯಿತು. ಪಂಚಾಯಿತರು ಸಿದ್ಧಾರ್ಥನ ತೀರ್ಮಾನವನ್ನೇ ಎತ್ತಿಹಿಡಿದರು.

೩೬. ಇದರಿಂದಾಗಿ ದೇವದತ್ತನು ಸಿದ್ಧಾರ್ಥನ ಖಾಯಂ ವೈರಿಯಾದನು. ಗೌತಮನಲ್ಲಿ ಜೀವದಯೆ ಅದೆಷ್ಟಿತ್ತೆಂದರೆ ಅವನು ಒಂದು ಮುಗ್ಧಜೀವಿಯ ಪ್ರಾಣವನ್ನು ರಕ್ಷಿಸಲು ತನ್ನ ಸೋದರ ಸಂಬಂಧಿಯ ವಿಶ್ವಾಸವನ್ನು ಕಳೆದುಕೊಳ್ಳಲು ಸಿದ್ಧನಿದ್ದನು.

೩೭. ಇವು ಸಿದ್ಧಾರ್ಥ ಗೌತಮನ ಬಾಲ್ಯಾವಸ್ಥೆಯಲ್ಲಿ ಕಂಡುಬಂದ ಕೆಲವು ಗುಣವಿಶೇಷಗಳು.

## ೮. ವಿವಾಹ

೧. ದಂಡಪಾಣಿ ಎಂಬ ಶಾಕ್ಯನಿಗೆ ಯಶೋಧರ ಎಂಬ ಮಗಳಿದ್ದಳು. ಅವಳು ತನ್ನ ಶೀಲ ಮತ್ತು ಸೌಂದರ್ಯಕ್ಕೆ ಹೆಸರಾಗಿದ್ದಳು.

೨. ಯಶೋಧರೆಗೆ ಹದಿನಾರು ವರ್ಷ ವಯಸ್ಸಾಗಿದ್ದಿತು ಮತ್ತು ದಂಡಪಾಣಿಯು ಅವಳ ಮದುವೆಯ ಆಲೋಚನೆಯಲ್ಲಿದ್ದನು.

೩. ದಂಡಪಾಣಿಯು ಸಂಪ್ರದಾಯದ ಪ್ರಕಾರ ತನ್ನ ಮಗಳ ಸ್ವಯಂವರಕ್ಕೆ ನೆರೆಹೊರೆಯ ಎಲ್ಲ ರಾಷ್ಟ್ರಗಳ ಯುವಕರಿಗೂ ಆಹ್ವಾನವನ್ನು ಕಳುಹಿಸಿದನು.

೪. ಸಿದ್ಧಾರ್ಥ ಗೌತಮನಿಗೂ ಆಹ್ವಾನ ಹೋಯಿತು.

೫. ಸಿದ್ಧಾರ್ಥ ಗೌತಮನಿಗೂ ಹದಿನಾರು ವರ್ಷ ತುಂಬಿದ್ದಿತು. ಅವನ ತಂದೆತಾಯಿಯರು ಅವನ ವಿವಾಹಕ್ಕೆ ಅಷ್ಟೇ ಉತ್ಸುಕರಾಗಿದ್ದರು.

೬. ಅವರು ಸ್ವಯಂವರಕ್ಕೆ ಹೋಗಿ ಯಶೋಧರೆಯ ಕೈಹಿಡಿಯಲು ಸಿದ್ಧಾರ್ಥನಿಗೆ ಸೂಚಿಸಿದರು. ಆತನೂ ತಂದೆತಾಯಿಯರ ಮಾತಿನಂತೆ ನಡೆದುಕೊಳ್ಳಲು ಒಪ್ಪಿದನು.

೭ ಅಲ್ಲಿ ನೆರೆದಿದ್ದ ಯುವಕರಲ್ಲೆಲ್ಲಾ ಸಿದ್ಧಾರ್ಥ ಗೌತಮನನ್ನೇ ಯಶೋಧರೆಯು ಆರಿಸಿದಳು.

೮. ದಂಡಪಾಣಿಗೆ ಅಷ್ಟೇನೂ ಸಂತೋಷವಾಗಲಿಲ್ಲ. ಈ ಮದುವೆಯು ಯಶಸ್ವಿಯಾಗುವ ವಿಚಾರದಲ್ಲಿ ಅವನಿಗೆ ಸಂದೇಹವಿದ್ದಿತು.

೯. ಸಿದ್ಧಾರ್ಥನು ಸಾಧುಸಂತರ ಜೊತೆ ಹೆಚ್ಚಾಗಿ ಕಾಲ ಕಳೆಯುತ್ತಾನೆಂದೂ ಏಕಾಂತವನ್ನು ಬಯಸುತ್ತಾನೆಂದೂ ಅವನಿಗೆ ತಿಳಿದಿದ್ದಿತು. ಅಂಥವನು ಗೃಹಸ್ಥನಾಗಿ ಯಶಸ್ವಿಯಾಗುತ್ತಾನೆಯೇ ಎಂಬುದು ಅವನ ಸಂದೇಹ.

೧೦. ಸಿದ್ಧಾರ್ಥನನ್ನು ಹೊರತು ಬೇರೆ ಯಾರನ್ನೂ ವಿವಾಹವಾಗುವುದಿಲ್ಲ ಎಂದು ನಿಶ್ಚಯಿಸಿದ್ದ ಯಶೋಧರೆಯು, ಸಿದ್ಧಾರ್ಥನು ಸಾಧು–ಸಂತರ ಸಂಘದಲ್ಲಿರುವುದು ಅಪರಾಧವೇ? ಎಂದು ತಂದೆಯನ್ನೇ ಪ್ರಶ್ನಿಸಿದಳು. ಅವಳ ದೃಷ್ಟಿಯಲ್ಲಿ ಅದು ತಪ್ಪು ಎಂದೆನಿಸಲಿಲ್ಲ.

೧೧. ನನ್ನ ಮಗಳು ಸಿದ್ಧಾರ್ಥನನ್ನು ಹೊರತು ಬೇರಾರನ್ನೂ ಮದುವೆಯಾಗಲು ಒಪ್ಪುವುದಿಲ್ಲ ಎಂಬುದನ್ನು ಮನಗಂಡ ಯಶೋಧರೆಯ ತಾಯಿಯು, ಆ ಮದುವೆಗೆ ಸಮ್ಮತಿಸುವಂತೆ ತನ್ನ ಗಂಡನಿಗೆ ಹೇಳಿದಳು. ಅದರಂತೆ ದಂಡಪಾಣಿಯು ಅವರಿಬ್ಬರ ವಿವಾಹಕ್ಕೆ ಸಮ್ಮತಿಸಿದನು.

೧೨. ಇದರಿಂದಾಗಿ ಗೌತಮನ ಪ್ರತಿಸ್ಪರ್ಧಿಗಳು ನಿರಾಶರಾದುದು ಮಾತ್ರವಲ್ಲದೆ, ಇದರಿಂದ ತಮಗೆ ಅವಮಾನವಾಯಿತೆಂದು ತಿಳಿದರು.

೧೩. ಯಶೋಧರೆಯು ತನ್ನ ಪತಿಯನ್ನು ಆರಿಸುವಾಗ ನ್ಯಾಯವಾಗಿ ಒಂದು ಸ್ಪರ್ಧೆಯನ್ನು ಏರ್ಪಡಿಸಬೇಕಾಗಿದ್ದಿತು ಎಂದು ಅವರು ಬಯಸಿದರು. ಆದರೆ ಅವಳು ಹಾಗೆ ಮಾಡಲಿಲ್ಲ.

೧೪. ಯಶೋಧರೆಯು ಸಿದ್ಧಾರ್ಥನನ್ನು ಮದುವೆಯಾಗಲು ದಂಡಪಾಣಿಯು ಒಪ್ಪಲಾರನೆಂದು ಅವರೆಲ್ಲರೂ ಸ್ವಲ್ಪ ಸುಮ್ಮನಿದ್ದರು. ಆಗ ತಮ್ಮ ಬಯಕೆ ಕೈಗೂಡಬಹುದೆಂದು ಅವರು ಭಾವಿಸಿದರು.

೧೫. ಯಾವಾಗ ದಂಡಪಾಣಿಯು ಅವರ ಮದುವೆಗೆ ಒಪ್ಪಿದನೋ ಆಗ, ಅವರು ಮುಂದೆ ಬಂದು ಬಿಲ್ಲುವಿದ್ಯೆಯ ಪಂದ್ಯವೊಂದನ್ನು ನಡೆಸಬೇಕೆಂದು ಒತ್ತಾಯಿಸಿದರು. ದಂಡಪಾಣಿಯು ಇದಕ್ಕೆ ಒಪ್ಪಲೇಬೇಕಾಯಿತು.

೧೬. ಸಿದ್ಧಾರ್ಥನು ಮೊದಲಿಗೆ ಇಂತಹ ಪಂದ್ಯಕ್ಕೆ ಸಿದ್ಧನಿರಲಿಲ್ಲ. ಆದರೆ ಇದಕ್ಕೆ ಒಪ್ಪದಿದ್ದರೆ ಅವನ ತಂದೆ ಮತ್ತು ಅವನ ವಂಶಕ್ಕೆ ಹಾಗೂ ಯಶೋಧರೆಗೂ ಅಪಕೀರ್ತಿ ತಟ್ಟುತ್ತದೆ ಎಂದು ಸಿದ್ಧಾರ್ಥನ ಸಾರಥಿ ಇವನಿಗೆ ತಿಳಿಯಹೇಳಿದನು.

೧೭. ಈ ವಿವರಣೆಯ ಮಹತ್ವನ್ನರಿತ ಸಿದ್ಧಾರ್ಥನು, ಆ ಪಂದ್ಯದಲ್ಲಿ ಭಾಗವಹಿಸಲು ಒಪ್ಪಿದನು.

೧೮. ಪಂದ್ಯ ಆರಂಭವಾಯಿತು. ಪ್ರತಿಯೊಬ್ಬ ಅಭ್ಯರ್ಥಿಯೂ ಸರದಿಯಂತೆ ತನ್ನ ಕುಶಲತೆಯನ್ನು ಪ್ರದರ್ಶಿಸಿದನು.

೧೯. ಗೌತಮನ ಸರದಿ ಕೊನೆಯಲ್ಲಿ ಬಂದಿತು. ಆದರೆ ಅವನದೇ ಅತ್ಯಂತ ನಿಖರವಾದ ಗುರಿಸಾಧನೆ ಎಂದು ಸಾರಲಾಯಿತು.

೨೦. ಅನಂತರ ಅವರಿಬ್ಬರ ನಡುವೆ ವಿವಾಹ ನೆರವೇರಿತು. ಶುದ್ಧೋದನ ಮತ್ತು ದಂಡಪಾಣಿ ಇಬ್ಬರೂ ಸಂತೋಷಪಟ್ಟರು. ಅದೇ ರೀತಿ ಯಶೋಧರೆ ಮತ್ತು ಮಹಾಪ್ರಜಾಪತಿಯೂ ಸಂತಸಗೊಂಡರು.

೨೧. ಮದುವೆಯಾದ ದೀರ್ಘಕಾಲದ ನಂತರ ಯಶೋಧರನಿಗೆ ಒಂದು ಗಂಡುಮಗುವಿನ ಜನನವಾಯಿತು. ಆ ಮಗುವಿಗೆ ರಾಹುಲ ಎಂದು ಹೆಸರಿಟ್ಟರು.

## ೯. ಮಗನನ್ನು ರಕ್ಷಿಸಲು ತಂದೆ ಮಾಡಿದ ಉಪಾಯಗಳು

೧. ತನ್ನ ಮಗ ಸಿದ್ಧಾರ್ಥನು ವಿವಾಹವಾಗಿ ಗೃಹಸ್ಥಾಶ್ರಮವನ್ನು ಪ್ರವೇಶಿಸಿದುದನ್ನು ನೋಡಿ ರಾಜನು ಸಂತೋಷಪಟ್ಟಿದ್ದರೂ ಸಹ, ಅಸಿತ ಋಷಿಯ ಭವಿಷ್ಯವಾಣಿಯು ಸದಾ ಅವನ ಮನಸ್ಸನ್ನು ಕೊರೆಯುತ್ತಿದ್ದಿತು.

೨. ಆ ಭವಿಷ್ಯವಾಣಿಯು ನಿಜವಾಗುವುದನ್ನು ತಪ್ಪಿಸಲು ಸಿದ್ಧಾರ್ಥನನ್ನು ಭೌತಿಕ ಸುಖಭೋಗದಲ್ಲಿ ತನ್ನನ್ನು ತಾನು ಮರೆಯುವಂತೆ ಮಾಡಲು ರಾಜನು ಆಲೋಚಿಸಿದನು.

೩. ಆ ಉದ್ದೇಶದಿಂದ ಶುದ್ಧೋದನನು ತನ್ನ ಮಗನಿಗಾಗಿ ಚಳಿಗಾಲ, ಬೇಸಗೆ ಮತ್ತು ಮಳೆಗಾಲಗಳಿಗೆ ತಕ್ಕಂತೆ ಮೂರು ಭವ್ಯವಾದ ಅರಮನೆಗಳನ್ನು ಕಟ್ಟಿಸಿ, ಪ್ರಣಯಾಸಕ್ತಿಗೆ ಪ್ರೇರಕವಾದ ಎಲ್ಲ ಪರಿಕರಗಳೊಂದಿಗೆ ಅವುಗಳನ್ನು ಸಜ್ಜುಗೊಳಿಸಿದನು.

೪. ಪ್ರತಿಯೊಂದು ಅರಮನೆಯ ಸುತ್ತಲೂ ವಿವಿಧ ರೀತಿಯ ಸುಂದರವಾದ ಗಿಡಮರ ಹೂಗಳುಳ್ಳ ಉದ್ಯಾನವನವನ್ನು ನಿರ್ಮಿಸಿದನು.

೫. ಅವನ ಅರಮನೆಯ ಪುರೋಹಿತ ಉದಯನೊಂದಿಗೆ ಸಮಾಲೋಚಿಸಿ, ರಾಜಕುಮಾರನಿಗೆ ಅತಿಸುಂದರವಾದ ಯುವತಿಯರನ್ನೊಳಗೊಂಡ ಒಂದು ಅಂತಃಪುರವನ್ನು ರಚಿಸಲು ಯೋಚಿಸಿದನು.

೬. ಅಂತಃಪುರದ ಕನ್ಯೆಯರು ರಾಜಕುಮಾರನನ್ನು ವಿಷಯಾಸಕ್ತನಾಗುವಂತೆ ಮಾಡಲು ಅವರಿಗೆ ಸೂಕ್ತ ರೀತಿಯ ತರಬೇತಿಯನ್ನು ಕೊಡಲು ಉದಯನಿಗೆ ಶುದ್ಧೋದನನು ಹೇಳಿದನು.

೭. ಅಂತಃಪುರಕ್ಕೆ ತಕ್ಕ ಕನ್ಯೆಯರನ್ನು ಆರಿಸಿದ ಮೇಲೆ ಅವರು ಹೇಗೆ ರಾಜಕುಮಾರನನ್ನು ಪ್ರಲೋಭನೆಗೊಳಪಡಿಸಬೇಕು ಎಂಬುದನ್ನು ಉದಯನು ಅವರಿಗೆ ಬೋಧಿಸಿದನು.

೮. ಅವರನ್ನು ಕುರಿತು ಉದಯನು ಹೀಗೆ ಹೇಳಿದನು: "ನೀವು ವಶೀಕರಣ ವಿದ್ಯೆಯನ್ನು ಚೆನ್ನಾಗಿ ಬಲ್ಲವರು. ಕಾಮಕ್ರೀಡೆಯ ಭಾಷೆ ನಿಮಗೆ ಗೊತ್ತು. ನೀವು ಸುಂದರಿಯರಾಗಿರುವುದು ಮಾತ್ರವಲ್ಲದೆ ಪುರುಷನನ್ನು ಆಕರ್ಷಿಸುವ ಕಲೆಯಲ್ಲಿ ಪರಿಣಿತರಾಗಿದ್ದೀರಿ.

೯. "ನೀವು ನಿಮ್ಮ ಸಂಮೋಹಕತೆಯಿಂದ ಎಲ್ಲ ವ್ಯಾಮೋಹಗಳನ್ನೂ ಗೆದ್ದ ಋಷಿಗಳನ್ನೂ ಮೋಹಗೊಳಿಸಿ, ಸ್ವರ್ಗದ ಅಪ್ಸರೆಯರಿಗೆ ಒಲಿದ ದೇವತೆಗಳನ್ನೂ ನಿಮ್ಮ ಮೋಹಪಾಶದಲ್ಲಿ ಬಂಧಿಸಬಲ್ಲಿರಿ.

೧೦. "ಹೃದಯದಲ್ಲಿ ಮೋಹಕ ಭಾವನೆಗಳನ್ನು ಮೂಡಿಸುವ ನಿಮ್ಮ ಚಾತುರ್ಯ, ನಿಮ್ಮ ಬೆಡಗು ಬಿನ್ನಾಣ, ನಿಮ್ಮ ಮೈಸೊಗಸು ಮತ್ತು ಸೌಂದರ್ಯದಿಂದಾಗಿ ಹೆಂಗಸರೂ ನಿಮ್ಮಲ್ಲಿ ಮೋಹಪರವಶರಾಗುತ್ತಾರೆ. ಅಂದಮೇಲೆ ಇನ್ನು ಗಂಡಸರ ಪಾಡೇನು?

೧೧. "ನೀವು ಪ್ರತಿಯೊಬ್ಬರೂ ನಿಮ್ಮ ನಿಮ್ಮ ರಂಗದಲ್ಲಿ ಪರಿಪೂರ್ಣವಾದ ಕೌಶಲ್ಯವನ್ನು ಪಡೆದವರಾದ್ದರಿಂದ, ನಮ್ಮ ರಾಜಕುಮಾರನನ್ನು ಗೆದ್ದು ನಿಮ್ಮ ಪ್ರೇಮಪಾಶದಲ್ಲಿ ಬಂಧಿಸುವುದು ನಿಮಗೆ ಅಸಾಧ್ಯವೇನಲ್ಲ.

೧೨. "ಪ್ರೇಮದ ಅನುಭವವೇ ಇಲ್ಲದೆ ನಾಚಿಕೆಯಿಂದ ಕಣ್ಣುಮುಚ್ಚಿ ಕೂರುವ ನವವಧುವಿನ ಮುಕ್ಕಲುತನದ ನಡತೆ ನಿಮಗೆ ಶೋಭಿಸುವುದಿಲ್ಲ.

೧೩. "ಈ ಮಹಾಶೂರನ ಕೀರ್ತಿ ಅದೆಷ್ಟೇ ಮಹತ್ತ್ವದ್ದಿರಲಿ, 'ನಿಮ್ಮಲ್ಲಿರುವ ಹೆಣ್ಣಿನ ಶಕ್ತಿ ಅಪಾರವಾದದ್ದು' ಎಂಬ ದೃಢ ನಿಶ್ಚಯ ಸದಾ ನಿಮ್ಮ ಮನಸ್ಸಿನಲ್ಲಿರಲಿ.

೧೪. "ಹಿಂದೆ ಒಂದು ಕಾಲದಲ್ಲಿ ದೇವತೆಗಳಿಂದಲೂ ಸೋಲಿಸಲಾಗದ ಮಹರ್ಷಿಯೊಬ್ಬನನ್ನು ಸಾಧಾರಣ ವೇಶ್ಯೆ ಕಾಶಿ ಎಂಬುವವಳು ಮೋಹಿಸಿ ಗೆದ್ದು, ಅವನನ್ನು ಮೆಟ್ಟಿ ನಿಂತಳು.

೧೫. "ಮಹರ್ಷಿ ವಿಶ್ವಾಮಿತ್ರನು ತಪಸ್ಸಿನಲ್ಲಿ ಮೈಮರೆತಿದ್ದಾಗ ಘೃತಾಚಿ ಎಂಬ ಅಪ್ಸರೆಯು ಅವನನ್ನು ಸೆರೆಹಿಡಿದು, ಹೊತ್ತೊಯ್ದು ಹೋಗಿ ಹತ್ತುವರ್ಷಗಳ ಕಾಲ ಅರಣ್ಯದಲ್ಲಿ ಬಂಧಿಸಿಟ್ಟಿದ್ದಳು.

೧೬. "ಈ ರೀತಿ ಅನೇಕ ಋಷಿಗಳನ್ನು ಹೆಂಗಸರು ಮೋಹಪರವಶರನ್ನಾಗಿ ಮಾಡಿರುವಾಗ, ಯೌವ್ವನದ ಮೊದಲ ಹಂತದಲ್ಲಿರುವ ಕೋಮಲ ಶರೀರದ ಈ ರಾಜಕುಮಾರನ ಮಾತಿನ್ನೇನು?

೧೭. "ನಿಜಸ್ಥಿತಿ ಈ ರೀತಿಯಿರುವಾಗ, ನೀವು ನಿರ್ಭಯರಾಗಿ ನಿಮ್ಮ ಪ್ರಯತ್ನಗಳಿಂದ ರಾಜನ ಮುಂದಿನ ಸಂತಾನ ನಿಲ್ಲದಿರುವಂತೆ ಮಾಡಿ.

೧೮. "ಸಾಧಾರಣವಾದ ಹೆಂಗಸು ಸಾಮಾನ್ಯ ಪುರುಷನನ್ನು ಮೋಹಪರವಶನಾಗುವಂತೆ ಮಾಡಬಲ್ಲಳು. ಆದರೆ ಶ್ರೇಷ್ಠರೂ ಸ್ಥಿರಚಿತ್ತರೂ ಆದವರನ್ನು ಮೋಹಪರವಶರಾಗುವಂತೆ ಮಾಡಿ, ಜಯಶೀಲಳಾಗುವವರೇ ನಿಜವಾದ ಹೆಂಗಸರು."

## ೧೦. ರಾಜಕುಮಾರನನ್ನು ಗೆಲ್ಲುವಲ್ಲಿ ಹೆಂಗಸರ ಸೋಲು

೧. ಉದಯನನ ಈ ಮಾತುಗಳನ್ನು ಕೇಳಿದ ಹೆಂಗಸರು ಆತ್ಮವಿಶ್ವಾಸವನ್ನು ಕುದುರಿಸಿಕೊಂಡು ರಾಜಕುಮಾರನನ್ನು ಗೆಲ್ಲಲು ಮುಂದೆ ಬಂದರು.

೨. ಆಕರ್ಷಕವಾದ ಕುಡಿನೋಟ, ತಿದ್ದಿದ ಹುಬ್ಬು, ಮೋಹಕ ನಗು, ನಯವಾದ ನಡೆ–ನುಡಿಗಳಿಂದ ಅಂತಃಪುರದ ಆ ಹುಡುಗಿಯರಲ್ಲಿ ಅಷ್ಟೇನೂ ಆತ್ಮವಿಶ್ವಾಸವಿರಲಿಲ್ಲ.

೩. ಆದರೆ ಅವರು, ರಾಜಾಗುರುವಿನ ಆಣತಿ, ರಾಜಕುಮಾರನ ಮೃದು ಸ್ವಭಾವದ ಅರಿವು, ಅಮಲು ಮತ್ತು ಪ್ರಣಯಗಳಿಂದ ಕೂಡಲೇ ಅತ್ಮವಿಶ್ವಾಸವನ್ನು ಗಳಿಸಿಕೊಂಡರು.

೪. ನಂತರ ಕಾರ್ಯನಿರತರಾದ ಹೆಂಗಳೆಯರು ಹಿಮವತ್ ಅರಣ್ಯದಲ್ಲಿ ಹೆಣ್ಣಾನೆಗಳ ಹಿಂಡಿನೊಂದಿಗೆ ಮದಗಜವು ಓಡಾಡುವಂತೆ ರಾಜಕುಮಾರನು ಕಾಡಿನಲ್ಲಿ ವಿಹರಿಸುವಂತೆ ಮಾಡಿದರು.

೫. ಆಗ ಅವನು ಸುಂದರವನದಲ್ಲಿ ಅಪ್ಸರೆಯರಿಂದ ಸುತ್ತುವರಿಯಲ್ಪಟ್ಟ ಸೂರ್ಯನಂತೆ ಪ್ರಕಾಶಮಾನವಾಗಿ ಕಂಗೊಳಿಸಿದನು.

೬. ಕಾಮೋದ್ರೇಕಗೊಂಡ ಕೆಲವು ಹೆಂಗಸರು ಸುದೃಢವಾದ ತಮ್ಮ ವಕ್ಷದ್ವಯಗಳಿಂದ ರಾಜಕುಮಾರನನ್ನು ಮೃದುವಾಗಿ ಒತ್ತಿಹಿಡಿದರು.

೭. ಇನ್ನು ಕೆಲವರು ತಾವು ಜಾರಿಬೀಳುವಂತೆ ನಟಿಸಿ ಅವನನ್ನು ಬಲವಾಗಿ ತಬ್ಬಿಕೊಂಡು ಬಳ್ಳಿಯಂತೆ ಬಳುಕುವ ತಮ್ಮ ನಳಿದೋಳುಗಳಿಂದ ಅವನನ್ನು ಬಿಗಿದಪ್ಪಿದರು.

೮. ಇನ್ನು ಕೆಲವರು ಮೋಹಕವಾದ ಮದ್ಯದ ವಾಸನೆಯನ್ನು ಸೂಸುವ ಕೆಂಪಾದ ತಮ್ಮ ಕೆಳದುಟಿಯನ್ನು ಚಾಚುತ್ತಾ "ನನ್ನ ಅಂತರಂಗದ ರಹಸ್ಯವನ್ನು ಕೇಳು ಬಾ" ಎಂದು ಅವನಿಗೆ ಕಿವಿಯಲ್ಲಿ ಉಸುರಿದರು.

೯. ಮತ್ತೆ ಕೆಲವರು ಮೈಗೆಲ್ಲ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡು, ಅವನಿಗೆ ಆದೇಶಿಸುವಂತೆ ರಾಜಕುಮಾರನ ಎರಡು ಕೈಗಳನ್ನೂ ಹಿಡಿದು, "ನಾವಿಬ್ಬರೂ ಜೊತೆಗೂಡಿ ಪ್ರೇಮಾರಾಧನೆಯಲ್ಲಿ ತೊಡಗೋಣ ಬನ್ನಿ" ಎಂದು ಆಹ್ವಾನಿಸುತ್ತಿದ್ದರು.

೧೦. ಇನ್ನೂ ಕೆಲವರು ತಮ್ಮ ನೀಲಿಬಣ್ಣದ ಮೇಲುಡಿಗೆಯನ್ನು ಬೇಕೆಂತಲೇ ಉನ್ಮತ್ತರಂತೆ ಜಾರಿಸಿ ಹೊಳೆಯುವ ದಂತಪಂಕ್ತಿಗಳೊಂದಿಗೆ ಚಾಚಿದ ನಾಲಿಗೆಯೊಂದಿಗೆ ಪ್ರೇಮದ ಆಸ್ವಾದನೆಗಾಗಿ ಮುಂದೆ ಬಂದರು.

೧೧. ಇನ್ನು ಕೆಲವರು ಬಹಳ ನವುರಾದ ಬಟ್ಟೆಯನ್ನು ತೊಟ್ಟು ದೇಹವನ್ನು ಪ್ರದರ್ಶಿಸುತ್ತಾ ಚಿನ್ನದ ಕಾಲ್ಗೆಜ್ಜೆಗಳನ್ನು ಝುಂಕಿಸುತ್ತಾ ಅತ್ತಿಂದಿತ್ತ ಸುಳಿದಾಡಿದರು.

೧೨. ಮತ್ತೆ ಕೆಲವರು ಮಾವಿನ ಬಿಲ್ಲನ್ನು ಕೈಯಲ್ಲಿ ಹಿಡಿದು ತಮ್ಮ ತುಂಬಿದ ಎದೆಯನ್ನು ಚಿನ್ನದ ಕಲಶದಂತೆ ಪ್ರದರ್ಶಿಸಿದರು.

೧೩. ಕಮಲದಂಥ ಕಣ್ಣಿನ ಕೆಲವರು, ಕಮಲದ ಹೂಗಳನ್ನು ಕೈಯಲ್ಲಿ ಹಿಡಿದು, ಕಮಲದ ಸುಪ್ಪತ್ತಿಗೆಯಿಂದ ಹೊರಬೀಳುತ್ತಾ ಕಮಲದಂತಹ ಮುಖವುಳ್ಳ ರಾಜಕುಮಾರನ ಪಕ್ಕದಲ್ಲಿ ಕಮಲದ ದೇವತೆ ಪದ್ಮಳಂತೆ ನಿಂತರು.

೧೪. ಇನ್ನು ಕೆಲವರು ಬಹುಮಧುರವಾದ ಸಂಗೀತದೊಂದಿಗೆ ಹಾವಭಾವಗಳನ್ನು ಪ್ರದರ್ಶಿಸುತ್ತಾ, "ನೀನು ಅದೆಷ್ಟು ಭಾವುಕನಾಗಬಲ್ಲೆ" ಎಂದು ಅವನನ್ನು ಪ್ರಚೋದಿಸುತ್ತಿದ್ದರು.

೧೫. ಇನ್ನು ಕೆಲವರು ತಮ್ಮ ಪ್ರಸನ್ನವಾದ ಮುಖವನ್ನು ಎರಡು ಕೈಗಳಿಂದ ಹಿಡಿದು ಕಣ್ಣಿನ ಹುಬ್ಬನ್ನು ನಿಮಿರಿಸುತ್ತ ಅವನ ಪರಾಕ್ರಮವನ್ನು ಅನುಕರಿಸುತ್ತಿದ್ದರು.

೧೬. ಸುಂದರ ಉಬ್ಬಿದ ಎದೆಯುಳ್ಳ ಮತ್ತೊಬ್ಬಳು ಕಿವಿಯ ಆಭರಣಗಳನ್ನು ಕುಣಿಸುತ್ತಾ, "ನನ್ನನ್ನು ಮುಟ್ಟಬಲ್ಲಿರಾ ಸ್ವಾಮಿ" ಎನ್ನುವಂತೆ ಗಟ್ಟಿಯಾಗಿ ನಗುತ್ತಿದ್ದಳು.

೧೭. ಕೆಲವರು ಪುಷ್ಪಹಾರದಿಂದ ಅವನನ್ನು ಬಂಧಿಸಿದರೆ ಮತ್ತೆ ಕೆಲವರು ಮಾವಟಿಗನು ಅಂಕುಶದಿಂದ ಆನೆಯನ್ನು ಪ್ರಚೋದಿಸುವಂತೆ ತಮ್ಮ ಮೃದುವಾದ ಪ್ರಚೋದಕ ನುಡಿಗಳಿಂದ ರಾಜಕುಮಾರನನ್ನು ಚುಚ್ಚಿ ನುಡಿಯುತ್ತಿದ್ದರು.

೧೮. ಮತ್ತೊಬ್ಬಳು ಮಾವಿನ ತಳಿರನ್ನು ಕೈಯಲ್ಲಿ ಹಿಡಿದು ಮದೋನ್ಮತ್ತಳಾಗಿ ಕುಣಿಯುತ್ತಾ "ಈ ತಳಿರನ್ನು ಮುಟ್ಟಬನ್ನಿ" ಎಂದು ಕುಮಾರನನ್ನು ಆಹ್ವಾನಿಸುತ್ತಿದ್ದಳು.

೧೯. ಇನ್ನೊಬ್ಬಳು ಪುರುಷನ ಭಂಗಿಯಲ್ಲಿ ನಡೆಯುತ್ತಾ, "ಹೆಣ್ಣಿನಿಂದ ಜಯಿಸಲ್ಪಟ್ಟವನೇ ಹೋಗು, ಈ ಜಗತ್ತನ್ನೂ ಗೆಲ್ಲು" ಎನ್ನುತ್ತಿದ್ದಳು.

೨೦. ಉನ್ಮತ್ತಗೊಂಡ ಮತ್ತೊಬ್ಬಳು ನೀಲಿಬಣ್ಣದ ತನ್ನ ಕಮಲ ನೇತ್ರಗಳನ್ನು ಅತ್ತಿತ್ತ ತಿರುಗಿಸುತ್ತಾ ಅಸ್ಪಷ್ಟ ನುಡಿಗಳಿಂದ ರಾಜಕುಮಾರನನ್ನು ಕುರಿತು ಈ ರೀತಿ ಹೇಳಿದಳು:

೨೧. "ನನ್ನ ಪ್ರೀತಿಯ ದೊರೆಯೇ, ಇಲ್ಲಿ ನೋಡು. ಮಕರಂದ ತುಂಬಿದ ಹೂಗಳಿಂದ ಶೋಭಿಸುವ ಈ ಮಾವಿನ ಮರದ ಸುವರ್ಣಪಂಜರದಲ್ಲಿ ಸಿಲುಕಿರುವ ಈ ಕೋಗಿಲೆ ಅದೆಷ್ಟು ಮಧುರವಾಗಿ ಹಾಡುತ್ತದೆ.

೨೨. "ಪ್ರೇಮಿಗಳ ವಿರಹ ತಾಪವನ್ನು ಹೆಚ್ಚಿಸುವ ಈ ಅಶೋಕ ವೃಕ್ಷವನ್ನು ಬಂದು ನೋಡು, ಇಲ್ಲಿ ದುಂಬಿಗಳು ಬೇಗೆಗೆ ಸಿಕ್ಕಿ ಝೇಂಕರಿಸುತ್ತಿರುವಂತೆ ಕಾಣುತ್ತಿದೆ.

೨೩. "ಇಲ್ಲಿ ನೋಡು ಕೃಶವಾದ ಮಾವಿನ ಕೊಂಬೆಯೊಂದು ತಬ್ಬಿದ ತಿಲಕ ವೃಕ್ಷವು ಹಳದಿವರ್ಣದ ಸುಗಂಧದ್ರವ್ಯಗಳಿಂದ ಶೃಂಗರಿಸಲ್ಪಟ್ಟ ಹೆಣ್ಣೊಬ್ಬಳಿಂದ ಆಲಿಂಗಿಸಲ್ಪಟ್ಟ ಶ್ವೇತವಸ್ತ್ರಧಾರಿಯಾದ ಪುರುಷನಂತೆ ಕಾಣುತ್ತಿದೆ.

೨೪. "ಇಲ್ಲಿ ಗಮನಿಸು, ಹೂತುಂಬಿದ ಕುರುಬಾಕ ವೃಕ್ಷವು ಸಾರವತ್ತಾದ ತನ್ನ ಪರಿಮಳದಿಂದ ಪ್ರಕಾಶಿಸುತ್ತ ಹೆಣ್ಣಿನ ಉಗುರಿನ ಬಣ್ಣಕ್ಕೆ ನಾಚಿ ಬಾಗಿ ನಿಂತಿದೆಯೋ ಎಂಬಂತೆ ಕಾಣುತ್ತಿದೆ.

೨೫. "ಇಲ್ಲಿ ಬಂದು ನೋಡು, ಮೈತುಂಬ ಚಿಗುರಿನಿಂದ ಕೂಡಿದ ಈ ಎಳೆಯದಾದ ಅಶೋಕವೃಕ್ಷವು ನಮ್ಮ ಹಸ್ತದ ಸೌಂದರ್ಯಕ್ಕೆ ನಾಚಿ ನಿಂತಿರುವಂತೆ ಕಾಣುತ್ತಿದೆ.

೨೬. "ಇಲ್ಲಿ ನೋಡು, ಸಿಂಧುವರಲತೆಗಳಿಂದ ಆವೃತವಾದ ಈ ಕಲ್ಯಾಣಿಯು ಶ್ವೇತಾಂಬರಿಯಾದ ಸುಂದರ ಯುವತಿಯು ಸುಖಾಸೀನಳಾಗಿರುವಂತೆ ಕಾಣುತ್ತಿದೆ.

೨೭. "ಹೆಣ್ಣಿನ ಸಾರ್ವಭೌಮತ್ವದ ಮಹಿಮೆಯನ್ನು ನೋಡು, ಆ ಕಡೆ ನೀರಿನಲ್ಲಿ ಬಾತುಕೋಳಿಯು ತನ್ನ ಸಂಗಾತಿಯ ಹಿಂದೆ ಸೇವಕನಂತೆ ಅದನ್ನು ಅನುಸರಿಸಿ ಹೋಗುತ್ತಿದೆ.

೨೮. "ಉನ್ಮತ್ತಗೊಳಿಸುವ ಕೋಗಿಲೆಯ ನಾದಮಾಧುರ್ಯಕ್ಕೆ ಮನಸೋತು ಆಕರ್ಷಣೆಗೊಂಡ ಮತ್ತೊಂದು ಕೋಗಿಲೆಯು ಏರುಧ್ವನಿಯಲ್ಲಿ ಕೂಗುತ್ತಿರುವುದನ್ನು ಕಿವಿಗೊಟ್ಟು ಕೇಳು ಬಾ.

೨೯. "ಈ ನಾದವೇ ವಿಶ್ವವು ವಸಂತ ಋತು ಸೃಷ್ಟಿಸುವ ಪಕ್ಷಿಸಂಕುಲದ ಮಾತುಕತೆಯೇ ಹೊರತು ನಾನೆಷ್ಟು ಬುದ್ಧಿಶಾಲಿ ಎಂದು ಭ್ರಮಿಸುವ ಮಾನವನ ಆಲೋಚನೆಯಿಂದ ಬಂದುದಲ್ಲ.

೩೦. ಈ ರೀತಿ ಪ್ರೇಮಾತಿರೇಕಕ್ಕೆ ಒಳಗಾದ ಆ ಯುವತಿಯರು ರಾಜಕುಮಾರನ ಮೇಲೆ ನಾನಾ ರೀತಿಯ ಯುಕ್ತಿಗಳಿಂದ ದಾಳಿ ಮಾಡಿದರು.

೩೧. ಈ ಎಲ್ಲ ಆಕ್ರಮಣಗಳ ನಡುವೆ ಆತ್ಮಸಂಯಮ ಗಳಿಸಿದ್ದ ರಾಜಕುಮಾರನು ಪ್ರಸನ್ನನಾಗಲೂ ಇಲ್ಲಿ ಕಿರುನಗೆಯನ್ನೂ ಬೀರಲಿಲ್ಲ.

೩೨. ಅವರ ನೈಸಜ್ವರೂಪವೇನೆಂಬುದನ್ನು ಬಲ್ಲ ರಾಜಕುಮಾರನು ಸ್ವಲ್ಪವೂ ವಿಚಲಿತನಾಗದೆ ದೃಢವಾದ ಮನಸ್ಸಿನಿಂದ ಅಂತರ್‌ಮುಖಿಯಾಗಿ ಚಿಂತಿಸುತ್ತಿದ್ದನು.

೩೩. "ಈ ಯೌವ್ವನ ಎಂಬುದು ನಶ್ವರವಾದದ್ದು. ಮುಪ್ಪು ಈ ಎಲ್ಲ ಸೌಂದರ್ಯವನ್ನು ನಾಶಗೊಳಿಸುತ್ತದೆ ಎಂಬ ಅರಿವು ಉಂಟಾಗದಿರಲು ಈ ಹೆಣ್ಣುಮಕ್ಕಳಿಗೆ ಏನು ಕೊರತೆ?"

೩೪. ಈ ರೀತಿಯ ಪ್ರಲೋಭನೆಗಳ ಚೆಲ್ಲಾಟ ತಿಂಗಳುಗಟ್ಟಲೆ ವರ್ಷಗಟ್ಟಲೆ ನಡೆದರೂ ಅದರಿಂದ ಅವನ ಮೇಲೆ ಯಾವ ಪರಿಣಾಮವೂ ಆಗಲಿಲ್ಲ.

## ೧೧. ರಾಜಕುಮಾರನಿಗೆ ಪ್ರಧಾನಿಯ ಬುದ್ಧಿವಾದ

೧. ರಾಜಕುಮಾರನು ಆ ಯುವತಿಯರ ಆಕರ್ಷಣೆಗೆ ಮಣಿಯಲಿಲ್ಲವೆಂಬುದನ್ನೂ, ಅವರು ಸೋತುಹೋದರೆಂಬುದನ್ನು ಉದಯನನು ಮನಗಂಡನು.

೨. ರಾಜನೀತಿಯಲ್ಲಿ ಕುಶಲನೆನಿಸಿದ್ದ ಉದಯನನು ರಾಜಕುಮಾರನೊಂದಿಗೆ ಮಾತನಾಡಲು ಬಯಸಿದನು.

೩. ರಾಜಕುಮಾರನನ್ನು ಏಕಾಂತದಲ್ಲಿ ಭೇಟಿಮಾಡಿದ ಉದಯನನು "ಮಹಾರಾಜರು ನನ್ನನ್ನು ನಿನಗೆ ಯೋಗ್ಯನಾದ ಮಿತ್ರನೆಂದು ಆರಿಸಿರುವುದರಿಂದ ನಾನು ಮನಬಿಚ್ಚಿ ನಿನ್ನೊಂದಿಗೆ ಕೆಲವು ವಿಚಾರಗಳನ್ನು ಕುರಿತು ಮಾತನಾಡಬೇಕಾಗಿದೆ" ಎಂದು ಮಾತು ಆರಂಭಿಸಿದನು.

೪. "ಅಹಿತಕರವಾದ ಕಾರ್ಯದಲ್ಲಿ ತೊಡಗದಂತೆ ನೋಡಿಕೊಳ್ಳುವುದು, ಹಿತಕರವಾದ ಕಾರ್ಯಗಳಲ್ಲಿ ತೊಡಗುವಂತೆ ಮಾಡುವುದು ಮತ್ತು ದುರ್ದೆಸೆಗೆ ಈಡಾಗದಂತೆ ಕಾಪಾಡುವುದು –ಇವು ಮೂರು ಒಬ್ಬ ಸನ್ಮಿತ್ರನ ಕರ್ತವ್ಯಗಳು.

೫. "ನಾನು ನಿನ್ನ ನಿಜವಾದ ಸ್ನೇಹಿತನೆಂದು ವಾಗ್ದಾನ ಮಾಡಿದ ಮೇಲೆಯೂ ನೀನು ಮಾನವ ಸಹಜವಾದ ಜೀವನಕ್ರಮದಿಂದ ವಿಮುಖನಾಗುತ್ತಿರುವುದನ್ನು ಕಂಡೂ ಸುಮ್ಮನಿದ್ದರೆ ಸ್ನೇಹಿತನೇ ಆಗುವುದಿಲ್ಲ.

೬. "ಪುರುಷನಾದವನು ಒಂದು ಹೆಣ್ಣನ್ನು ತಂತ್ರದಿಂದಲಾದರೂ ಒಲಿಸಿಕೊಳ್ಳುವುದು ಯುಕ್ತ; ಇದು ಅಪಕೀರ್ತಿಯಿಂದ ಪಾರಾಗಲೂ ಹಾಗೂ ಸುಖಭೋಗಕ್ಕೂ ಸಹಕಾರಿ.

೭. ಸಜ್ಜನಿಕೆ ಮತ್ತು ಅವಳ ಆಸೆಗಳನ್ನು ಈಡೇರಿಸುವುದು ಹೆಣ್ಣಿನ ಹೃದಯವನ್ನು ಗೆದ್ದುಬಿಡುತ್ತವೆ. ಸದ್ಗುಣಗಳು ಪ್ರೇಮವನ್ನು ಅರಳಿಸುತ್ತವೆ ಮತ್ತು ಹೆಂಗಸರು ಪುರುಷರ ಗೌರವಕ್ಕೆ ಮಾರುಹೋಗುತ್ತಾರೆ.

೮. "ಓ ವಿಶಾಲ ನೇತ್ರ ರಾಜಕುಮಾರನೇ, ಒಂದು ವೇಳೆ ನಿನ್ನ ಹೃದಯ ಸಮ್ಮತಿಸದಿದ್ದರೂ ಸಹ, ನಿನ್ನ ಸೌಂದರ್ಯಕ್ಕೆ ಒಪ್ಪುವ ರೀತಿಯಲ್ಲಿ ಈ ಹೆಂಗಳೆಯರನ್ನು ಸಂತೋಷಪಡಿಸುವುದು ನಿನ್ನ ಕರ್ತವ್ಯವಲ್ಲವೆ?

೯. "ಸಭ್ಯತೆಯು ಹೆಣ್ಣಿಗೆ ಸುಗಂಧಲೇಪನವಿದ್ದಂತೆ. ಸ್ವಚ್ಛತೆಯು ಹೆಣ್ಣಿಗೆ ಹಿರಿದಾದ ಭೂಷಣ; ಸೌಜನ್ಯವಿಲ್ಲದ ಸೌಂದರ್ಯವು ಪುಷ್ಪವಿಲ್ಲದ ವನವಿದ್ದಂತೆ.

೧೦. "ಸೌಜನ್ಯವಿದ್ದಮಾತ್ರಕ್ಕೆ ಪ್ರಯೋಜನವೇನು? ಹೃದಯ ತುಂಬಿದ ಭಾವನೆಗಳ ಸಹಕಾರವೂ ಅದಕ್ಕಿರಬೇಕು. ಕಷ್ಟಸಾಧ್ಯ ಎಂದೆನಿಸಿದ ಲೌಕಿಕ ಸುಖಗಳು ನಿನ್ನ ಮುಂದಿರುವಾಗ ನೀನು ಅವುಗಳನ್ನು ನಿರಾಕರಿಸಬಾರದು.

೧೧. "ಸುಖಾನುಭವವು ಮಿಕ್ಕೆಲ್ಲ ವಿಷಯಗಳಿಗಿಂತಲೂ ಹಿರಿದಾದದ್ದು ಎಂದು ತಿಳಿದ ಪುರಂದರನು (ಇಂದ್ರನು) ಪ್ರಾಚೀನಕಾಲದಲ್ಲಿ ಗೌತಮನ ಹೆಂಡತಿಯಾದ ಅಹಲ್ಯೆಯನ್ನೇ ಮೋಹಿಸಿದ.

೧೨. "ಅದೇ ರೀತಿ, ಅಗಸ್ತ್ಯನು ಸೋಮನ ಹೆಂಡತಿಯಾದ ರೋಹಿಣಿಯನ್ನು ಮೋಹಿಸಿದ; ಇಂತಹ ಸ್ಥಿತಿ ಲೋಪಮುದ್ರೆಗೂ ಒದಗಿತು ಎಂದು ಶ್ರುತಿ ಹೇಳುತ್ತದೆ.

೧೩. "ಮಹಾಸಂಯಮಿ ಎಂದೆನಿಸಿದ ಬೃಹಸ್ಪತಿ ಮರುತನ ಮಗಳೂ ಔತತ್ಯನ ಹೆಂಡತಿಯೂ ಆದ ಮಮತಳಲ್ಲಿ ಭರದ್ವಾಜನ ಜನನಕ್ಕೆ ಕಾರಣನಾದನು.

೧೪. "ಬೃಹಸ್ಪತಿಯ ಹೆಂಡತಿಯು ತರ್ಪಣ ನೀಡುತ್ತಿದ್ದಾಗ ಚಂದ್ರನು ಅವಳನ್ನು ಪ್ರೇಮಿಸಿ ಅವಳಿಂದ ದೈವೀಸಂಪನ್ನನಾದ ಬುಧನ ಜನನಕ್ಕೆ ಕಾರಣನಾದನು.

೧೫. "ಅದೇ ರೀತಿ ಪುರಾತನ ಕಾಲದಲ್ಲಿ ಕಾಮಾತುರನಾದ ಪರಾಶರಮುನಿಯು ವರುಣನ ಮಗನ ಮಗಳು ಕನ್ಯೆಯಾದ ಕಾಳಿಯೊಂದಿಗೆ ಯಮುನಾ ನದಿಯ ದಡದಲ್ಲಿ ಕಾಮಕೇಳಿಯಲ್ಲಿ ತೊಡಗಿದನು.

೧೬. "ವಶಿಷ್ಠ ಮಹರ್ಷಿಯು ಕಾಮುಕನಾಗಿ, ಕೀಳುಕುಲದ ಹೆಣ್ಣೆನಿಸಿದ ಅಕ್ಷಮಾಲಳಿಂದ ಕಪಿಂಗ್ಲಾದನೆಂಬ ಮಗನನ್ನು ಪಡೆದನು.

೧೭. "ದ್ರಷ್ಟಾರನೆನಿಸಿದ ರಾಜ ಯಯಾತಿಯು ತನ್ನ ಯೌವ್ವನ ಅಳಿದುಹೋದ ಮೇಲೆಯೂ ಅಪ್ಸರಕನ್ಯೆ ವಿಶ್ವಕಿಯೊಂದಿಗೆ ಕೈತ್ರಾರ್ಥ ವನದಲ್ಲಿ ಕಾಮಕೇಳಿಯಲ್ಲಿ ತೊಡಗಿದ್ದನು.

೧೮. "ಅದೇ ರೀತಿ, ಕುರುವಂಶದ ರಾಜನಾದ ಪಾಂಡುವು ತನ್ನ ಹೆಂಡತಿಯೊಂದಿಗೆ ಸಂಭೋಗ ಮಾಡಿದರೆ ತನಗೆ ಸಾವು ಖಂಡಿತ ಬರುತ್ತದೆಂಬುದನ್ನು ತಿಳಿದಿದ್ದೂ ಸಹ, ಮಾದ್ರಿಯ ಸೌಂದರ್ಯ ಮತ್ತು ಸೌಶೀಲ್ಯದಿಂದ ಉನ್ಮಾದಗೊಂಡು ಕಾಮಭೋಗದಲ್ಲಿ ತೊಡಗಿದನು.

೧೯. "ಇಂತಹ ಮಹಾಪರಾಕ್ರಮಿಗಳಾದವರು ಭೋಗಾಪೇಕ್ಷೆಯಿಂದ ಕೀಳುಕಾಮನೆಗಳ ಬೆನ್ನು ಹತ್ತಿದರು ಎಂದಾದ ಮೇಲೆ, ಅವರು ಅಷ್ಟೊಂದು ಸುತ್ಯಾರ್ಹರಾದುದು ಹೇಗೆ?

೨೦. "ಆದರೆ, ಯುವಕನಾದ ನೀನು ಶಕ್ತಿ, ಸೌಂದರ್ಯಗಳನ್ನು ಪಡೆದಿದ್ದು, ಇಡೀ ಜಗತ್ತು ಅನುರಕ್ತವಾಗಿರುವ, ಆದರೆ ನಿನಗೆ ಸಹಜವಾಗಿ ದೊರೆತಿರುವ ಈ ಸುಖಭೋಗಗಳನ್ನು ನಿರಾಕರಿಸುತ್ತಿದ್ದೀಯೆ."

## ೧೨. ಪ್ರಧಾನಿಗೆ ರಾಜಕುಮಾರನ ಉತ್ತರ

೧. ಪವಿತ್ರ ಸಂಪ್ರದಾಯವನ್ನು ಆಧರಿಸಿದ ಕೇವಲ ತೋರಿಕೆಗೆ ಸರಿಕಾಣುವ ಈ ಎಲ್ಲ ಮಾತುಗಳನ್ನು ಕೇಳಿದ ಮೇಲೆ ರಾಜಕುಮಾರನು ಮೇಘನಾದದಂತಹ ಗಂಭೀರ ಧ್ವನಿಯಲ್ಲಿ ಈ ರೀತಿ ಉತ್ತರಿಸಿದನು:

೨. "ಪ್ರೇಮದ ಅಭಿವ್ಯಕ್ತಿಯನ್ನು ನಿರೂಪಿಸುವ ಈ ನಿಮ್ಮ ವಿವರಣೆ ನಿಮಗೆ ಒಪ್ಪುವಂತೇನೋ ಇದೆ; ಆದರೆ ನೀವು ನನ್ನನ್ನು ತಪ್ಪಾಗಿ ತಿಳಿದಿರುವುದು ಎಲ್ಲಿ ಎಂಬುದನ್ನು ನಾನು ನಿಮಗೆ ಮನಗಾಣಿಸುತ್ತೇನೆ.

೩. "ಲೌಕಿಕ ವಸ್ತುಗಳನ್ನು ನಾನು ಅಲ್ಲಗಳೆಯುತ್ತಿಲ್ಲ ಮತ್ತು ಅವುಗಳಿಂದ ಇಡೀ ಮನುಕುಲ ಬಂಧಿತವಾಗಿದೆಂಬುದನ್ನೂ ನಾನು ಬಲ್ಲೆ. ಈ ಜಗತ್ತು ನಶ್ವರ ಎಂಬ ಅರಿವುಳ್ಳ ನನ್ನ ಮನಸ್ಸು ಆ ವಸ್ತುಗಳಲ್ಲಿ ಸುಖವನ್ನು ಕಾಣದಾಗಿದೆ ಅಷ್ಟೆ.

೪. "ಹೆಣ್ಣಿನ ಸೌಂದರ್ಯ ಶಾಶ್ವತವೆನ್ನುವಂತಿದ್ದರೂ ಸಹ ಕಾಮಾಭಿಲಾಷೆಗಳಲ್ಲಿ ತೃಪ್ತಿಪಡುವುದು ಜ್ಞಾನಿಯಾದವನಿಗೆ ಶೋಭಿಸುವುದಿಲ್ಲ.

೫. "ನೀವು ಹೇಳಿದಂತೆ ಅನೇಕ ಮಹನೀಯರೂ ಸಹ ಲೌಕಿಕ ಕಾಮನೆಗಳಿಗೆ ಬಲಿಯಾದರೂ, ಅವರೇನೂ ಅವುಗಳಿಂದ ತಪ್ಪು ಹಾದಿ ಹಿಡಿಯಲಿಲ್ಲ. ವಿನಾಶವು ಅವರ ವಿಧಿಯಾಗಿತ್ತು.

೬. "ಎಲ್ಲಿ ವಿನಾಶವಿದೆಯೋ ಅಥವಾ ಎಲ್ಲಿ ಲೌಕಿಕ ವಸ್ತುಗಳಲ್ಲಿ ಅನುರಾಗವಿರುತ್ತದೆಯೋ ಅಥವಾ ಆತ್ಮಸಂಯಮದ ಅಭಾವವಿರುತ್ತದೆಯೋ, ಅಲ್ಲಿ ನಿಜವಾದ ಶ್ರೇಷ್ಠತೆಯಿರಲಾರದು.

೭. "ಹೆಣ್ಣನ್ನು ತಂತ್ರದಿಂದಲಾದರೂ ಒಲಿಸಿಕೊಳ್ಳವುದು ಯುಕ್ತ ಎಂದು ನೀವು ಹೇಳಿದಿರಿ; ಆ ತಂತ್ರದ ಬಗ್ಗೆ, ಅದು ಸೌಜನ್ಯಸಹಿತವಾಗಿದ್ದರೂ ನನಗೆ ಬೇಡ.

೮. "ಹೆಣ್ಣಿನ ಬಯಕೆಗಳನ್ನು ಈಡೇರಿಸ ಬೇಕೆನ್ನುವುದು, ಅಲ್ಲಿ ಸತ್ಯತೆ ಇಲ್ಲದಿದ್ದರೆ, ಅದೂ ನನಗೆ ಸರಿಕಾಣುವುದಿಲ್ಲ. ಹೃದಯಪೂರ್ವಕವೂ ಸಹಜವೂ ಆದ ಅನುಬಂಧವಿಲ್ಲದಿದ್ದರೆ ನಾನು ಅದನ್ನು 'ಸಲ್ಲದ್ದು' ಎಂದು ಕರೆಯುತ್ತೇನೆ.

೯. "ಭಾವೋದ್ರೇಕದಿಂದ ಪರವಶಗೊಂಡ, ಅಸತ್ಯವಾದದ್ದನ್ನೇ ನಂಬುವ, ವ್ಯಾಮೋಹದಿಂದ, ಪರವಶಗೊಂಡ, ಲೌಕಿಕ ವಸ್ತುಗಳ ದೋಷಗಳಿಗೆ ಕಾರಣವಾದ ಜೀವದಲ್ಲಿ, ಮೋಸಗೊಳಿಸುವುದಕ್ಕೆ ಏನಿದೆ?

೧೦. "ಕಾಮಾತುರರಾಗಿ ಒಬ್ಬರು ಮತ್ತೊಬ್ಬರನ್ನು ಮೋಸಗೊಳಿಸುವುದಾದರೆ, ಆಗ ಪುರುಷರು ಸ್ತ್ರೀಯರ ಗೌರವಕ್ಕೆ ಮತ್ತು ಸ್ತ್ರೀಯರು ಪುರುಷರ ಗೌರವಕ್ಕೆ ಅನರ್ಹರೆನಿಸುತ್ತಾರೆಯೇ?

೧೧. "ವಸ್ತುಸ್ಥಿತಿ ಇದಾದ್ದರಿಂದ ನೀವು ತುಚ್ಛವಾದ ಈ ಸುಖಭೋಗದ ಕಡೆಗೆ ನನ್ನನ್ನು ಸೆಳೆಯಲಾರಿರಿ."

೧೨. ರಾಜಕುಮಾರನ ಈ ದೃಢ ಸಂಕಲ್ಪವನ್ನು ಕಂಡು ಉದಯನನು ಸುಮ್ಮನಾದನು ಮತ್ತು ಈ ವಿಚಾರವನ್ನು ಅವನ ತಂದೆಗೆ ವರದಿ ಮಾಡಿದನು.

೧೩. ತನ್ನ ಮಗನ ಮನಸ್ಸು ಇಂದ್ರಿಯ ಭೋಗದಿಂದ ವಿಮುಖಗೊಂಡಿರುವ ವಿಚಾರವನ್ನು ತಿಳಿದ ಶುದ್ಧೋದನನು ಇಡೀ ರಾತ್ರಿ ನಿದ್ದೆ ಮಾಡದಾದನು. ಹೃದಯಕ್ಕೆ ತಾಕಿದ ಬಾಣದಿಂದ ತಪಿಸುವ ಗಜದಂತೆ ಅವನು ಬಹು ವೇದನೆಗೊಂಡನು.

೧೪. ಅವನು ಮತ್ತು ಅವನ ಮಂತ್ರಿಗಳು ಸಿದ್ಧಾರ್ಥನಲ್ಲಾಗಿರುವ ಅಲೌಕಿಕದ ಕಡೆಯ ಈ ತಿರುವನ್ನು ತಪ್ಪಿಸಿ, ಯಾವುದಾದರೂ ಮಾರ್ಗದಿಂದ ಅವನು ಲೌಕಿಕ ಭೋಗದಲ್ಲಿ ಅನುರಕ್ತನಾಗುವಂತೆ ಮಾಡಲು ಸಾಧನೋಪಾಯಗಳನ್ನು ಕುರಿತು ಮತ್ತೊಮ್ಮೆ ಚಿಂತಿಸತೊಡಗಿದರು. ಈವರೆಗೆ ಅವರು ಪ್ರಯತ್ನಿಸಿದ ಮಾರ್ಗಗಳ ಹೊರತು ಬೇರೆ ಯಾವ ಮಾರ್ಗವೂ ಅವರಿಗೆ ಕಾಣಲಿಲ್ಲ.

೧೫. ವ್ಯರ್ಥವಾಗಿ ಸರ್ವಾಭರಣಗಳನ್ನು ತೊಟ್ಟು ಸುಗಂಧಪುಷ್ಪಗಳನ್ನು ಮುಡಿದ, ನಿಷ್ಫಲಷವಾದ ಪ್ರೇಮದ ಹಾವಭಾವಗಳಿಂದ ಕೂಡಿದ, ತಮ್ಮ ಹೃದಯದಾಳದಲ್ಲಿ ಪ್ರೇಮವನ್ನೂ ಬಚ್ಚಿಟ್ಟುಕೊಂಡ ಆ ರಾಣಿವಾಸವನ್ನು ವಿಸರ್ಜಿಸಲಾಯಿತು.

## ೧೩. ಶಾಕ್ಯ ಸಂಘಕ್ಕೆ ಪ್ರವೇಶ

೧. ಶಾಕ್ಯರು ತಮ್ಮದೇ ಆದ ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದರು. ಇಪ್ಪತ್ತು ವರ್ಷಗಳನ್ನು ದಾಟಿದ ಪ್ರತಿಯೊಬ್ಬ ಶಾಕ್ಯ ಯುವಕನೂ ಈ ಸಂಘದಲ್ಲಿ ದೀಕ್ಷೆ ಪಡೆದು ಅದರ ಸದಸ್ಯನಾಗಬೇಕಾಗಿದ್ದಿತು.

೨. ಸಿದ್ಧಾರ್ಥ ಗೌತಮನಿಗೆ ಇಪ್ಪತ್ತು ವರ್ಷ ತುಂಬಿದ್ದಿತು. ಅವನು ಆ ಸಂಘವನ್ನು ಸೇರಿ ಅದರ ಸದಸ್ಯತ್ವವನ್ನು ಪಡೆಯಲು ಅದು ಸೂಕ್ತವಾದ ಕಾಲವಾಗಿದ್ದಿತು.

೩. ಶಾಕ್ಯರು ಸಭೆ ಸೇರುವ ಜಾಗವನ್ನು ಸಂಸ್ಥಾಘರ್ ಎಂದು ಕರೆಯಲಾಗುತ್ತಿತ್ತು. ಅದು ಕಪಿಲವಸ್ತುವಿನಲ್ಲಿದ್ದು, ಸಂಘದ ಅಧಿವೇಶನವು ಆ ಸಂಸ್ಥಾಘರ್‌ನಲ್ಲಿ ನಡೆಯುತ್ತಿದ್ದಿತು.

೪. ಸಿದ್ಧಾರ್ಥನಿಗೆ ಸಂಘದ ಸದಸ್ಯನನ್ನಾಗಿ ದೀಕ್ಷೆ ನೀಡಲು ಸಂಘ ಅಧಿವೇಶನವನ್ನು ಕರೆಯುವಂತೆ ಪುರೋಹಿತರನ್ನು ಶುದ್ಧೋದನನು ಕೇಳಿಕೊಂಡನು.

೫. ಅದರಂತೆ ಕಪಿಲವಸ್ತುವಿನ ಸಂಸ್ಥಾಘರ್‌ನಲ್ಲಿ ಶಾಕ್ಯರ ಸಂಘದ ಸಭೆ ಸೇರಿತು.

೬. ಸಂಘದ ಸಮ್ಮೇಳನದಲ್ಲಿ ಸಿದ್ಧಾರ್ಥನನ್ನು ಸಂಘದ ಸದಸ್ಯನನ್ನಾಗಿ ಸ್ವೀಕರಿಸಲು ಪುರೋಹಿತರು ಸೂಚಿಸಿದರು.

೭. ಶಾಕ್ಯ ಸೇನಾಪತಿಯು ತನ್ನ ಆಸನದಿಂದ ಮೇಲೆದ್ದು ಸಂಘವನ್ನು ಉದ್ದೇಶಿಸಿ ಈ ರೀತಿ ಹೇಳಿದನು: "ಶಾಕ್ಯ ವಂಶದ ಶುದ್ಧೋದನನ ಕುಟುಂಬದಲ್ಲಿ ಜನಿಸಿದ ಸಿದ್ಧಾರ್ಥ ಗೌತಮನು ಈ ಸಂಘದ ಸದಸ್ಯನಾಗಲು ಬಯಸಿದ್ದಾನೆ. ಅವನಿಗೆ ಇಪ್ಪತ್ತು ವರ್ಷ ವಯಸ್ಸು ತುಂಬಿದ್ದು, ಸಂಘದ ಸದಸ್ಯನಾಗಲು ಎಲ್ಲ ರೀತಿಯಲ್ಲಿಯೂ ಅರ್ಹನಾಗಿದ್ದಾನೆ. ಆದ್ದರಿಂದ ತಾವು ಆತನನ್ನು ಸಂಘದ ಸದಸ್ಯನಾಗಿ ಸ್ವೀಕರಿಸಬೇಕೆಂದು ನಾನು ಸೂಚಿಸುತ್ತೇನೆ. ಇದನ್ನು ವಿರೋಧಿಸುವವರು ಯಾರಾದರೂ ಇದ್ದರೆ ಮಾತಾಡಬಹುದು."

೮. ಇದನ್ನು ವಿರೋಧಿಸಿ ಯಾರೂ ಮಾತನಾಡಲಿಲ್ಲ. ಸೇನಾಪತಿಯು "ಎರಡನೇ ಸಾರಿ ಕೇಳುತ್ತಿದ್ದೇನೆ ಇದನ್ನು ವಿರೋಧಿಸುವವರು ಯಾರಾದರೂ ಇದ್ದರೆ ಮಾತಾಡಬಹುದು" ಎಂದನು.

೯. ಸಭೆಯನ್ನು ವಿರೋಧಿಸಿ ಯಾರೂ ಮಾತನಾಡಲಿಲ್ಲ. ಮತ್ತೆ ಸೇನಾಪತಿಯು "ಮೂರನೇ ಸಾರಿ ಕೇಳುತ್ತಿದ್ದೇವೆ, ಇದನ್ನು ವಿರೋಧಿಸುವವರು ಯಾರಾದರೂ ಇದ್ದರೆ ಮಾತನಾಡಬಹುದು" ಎಂದನು.

೧೦. ಮೂರನೇ ಸಾರಿಯೂ ಯಾರಿಂದಲೂ ವಿರೋಧ ಬರಲಿಲ್ಲ.

೧೧. ಶಾಕ್ಯರ ಸಂಘದ ಕಾರ್ಯವಿಧಾನದ ಪ್ರಕಾರ ಯಾವುದೇ ಸೂಚನೆಯು ಮಂಡನೆಯಾಗದೆ ಅದನ್ನು ಕುರಿತು ಚರ್ಚೆ ನಡೆಯುವಂತಿರಲಿಲ್ಲ ಮತ್ತು ಮೂರು ಸಾರಿ ಒಪ್ಪಿಗೆ ಪಡೆಯದೆ ಅದು ಅಂಗೀಕಾರವಾಗುತ್ತಿರಲಿಲ್ಲ.

೧೨. ಸೇನಾಪತಿಯಿಂದ ಬಂದ ಸೂಚನೆಯು ಯಾವ ವಿರೋಧವೂ ಇಲ್ಲದೆ ಮೂರು ಸಾರಿ ಒಪ್ಪಿಗೆ ಪಡೆದದ್ದರಿಂದ ಸಿದ್ಧಾರ್ಥನು ವಿಧ್ಯುಕ್ತವಾಗಿ ಶಾಕ್ಯ ಸಂಘದ ಸದಸ್ಯನಾದನು ಎಂದು ಪ್ರಕಟಿಸಲಾಯಿತು.

೧೩. ಅನಂತರ ಶಾಕ್ಯರ ಪುರೋಹಿತರು ಎದ್ದುನಿಂತು ಸಿದ್ಧಾರ್ಥನನ್ನು ಎದ್ದುನಿಲ್ಲುವಂತೆ ಸೂಚಿಸಿದರು.

೧೪. ಅವರು ಸಿದ್ಧಾರ್ಥನನ್ನು ಕುರಿತು, "ನಿನ್ನನ್ನು ಈ ಸಂಘದ ಸದಸ್ಯನನ್ನಾಗಿ ಮಾಡಿ ಈ ಸಂಘವು ನಿನ್ನನ್ನು ಗೌರವಿಸಿದೆ ಎಂಬುದನ್ನು ನೀನು ಮನಗಂಡಿದ್ದೀಯಾ?" ಎಂದನು. ಅದಕ್ಕೆ ಸಿದ್ಧಾರ್ಥನು "ಅಹುದು ಸ್ವಾಮಿ" ಎಂದನು.

೧೫. ಆಗ ಪುರೋಹಿತರು "ಸಂಘದ ಸದಸ್ಯತ್ವದ ಹೊಣೆಗಾರಿಕೆಗಳೇನೆಂಬುದು ನಿನಗೆ ತಿಳಿದಿದೆಯೇ?" ಎಂದರು. "ಕ್ಷಮಿಸಿ ಸ್ವಾಮಿ, ನನಗೆ ಅದು ತಿಳಿಯದು. ಆದರೆ ಅದನ್ನು ತಿಳಿಯಲು ನನಗೆ ಸಂತೋಷವೆನಿಸುತ್ತದೆ" ಎಂದು ಸಿದ್ಧಾರ್ಥನು ಉತ್ತರಿಸಿದನು.

೧೬. "ಸಂಘದ ಸದಸ್ಯನಾಗಿ ನಿನ್ನ ಕರ್ತವ್ಯಗಳೇನೆಂಬುದನ್ನು ಮೊದಲು ನಿನಗೇ ಹೇಳುವೆ" ಎಂದ ಪುರೋಹಿತನು ಅವುಗಳನ್ನು ಒಂದೊಂದಾಗಿ ವಿವರಿಸತೊಡಗಿದರು: "(೧)ಶಾಕ್ಯರ ಹಿತರಕ್ಷಣೆಯನ್ನು ತನ್ನ ತನು ಮನಧನದ ಮೂಲಕ ಮಾಡಬೇಕು. (೨) ಸಂಘದ ಸಭೆಗಳಿಗೆ ತಪ್ಪದೆ ಹಾಜರಾಗಬೇಕು. (೩) ಸಂಘದ ಕಾರ್ಯವಿಧಾನದಲ್ಲಿ ಕಂಡುಬರುವ ಲೋಪ ದೋಷಗಳನ್ನು ನಿಷ್ಪಕ್ಷಪಾತವಾಗಿ ಹೊರಗೆಡವಬೇಕು. (೪) ನಿನ್ನ ಮೇಲೆ ಆರೋಪ ಮಾಡಿದಾಗ ನೀನು ಕೋಪಗೊಳ್ಳಬಾರದು, ನೀನು ತಪ್ಪು ಮಾಡಿದ್ದರೆ ನೀನು ಅದನ್ನು ಒಪ್ಪಿಕೊಳ್ಳಬೇಕು. ಅದು ಇಲ್ಲವಾದರೆ ನಿರ್ದೋಷಿ ಎಂದು ಹೇಳಬೇಕು."

೧೭. ಪುರೋಹಿತರು, ತಮ್ಮ ವಿವರಣೆಯನ್ನು ಮುಂದುವರಿಸುತ್ತಾ ಹೀಗೆ ಹೇಳಿದರು: "ನಿನ್ನನ್ನು ಸಂಘ ಸದಸ್ಯತ್ವದಿಂದ ಅನರ್ಹಗೊಳಿಸುವ ಕಾರಣಗಳೇನೆಂಬುದನ್ನು ಈಗ ಹೇಳುತ್ತೇನೆ, ಕೇಳು – (೧) ನೀನು ಅತ್ಯಾಚಾರ ಮಾಡಿದರೆ ಆಗ ನೀನು ನಿನ್ನ ಸದಸ್ಯತ್ವವನ್ನು ಕಳೆದುಕೊಳ್ಳುತ್ತೀಯ. (೨) ನೀನು ಕೊಲೆಯನ್ನು ಮಾಡಿದರೆ ನೀನು ಸದಸ್ಯನಾಗಿ ಉಳಿಯಲಾರೆ (೩) ನೀನು ಕಳ್ಳತನ ಮಾಡಿದರೆ ಸಂಘದ ಸದಸ್ಯನಾಗಿ ಉಳಿಯಲಾರೆ. (೪) ನೀನು ಸುಳ್ಳು ಸಾಕ್ಷ್ಯ ಹೇಳಿದರೆ ನಿನ್ನ ಸದಸ್ಯತ್ವವನ್ನು ಕಳೆದುಕೊಳ್ಳುತ್ತೀಯೆ."

೧೮. ಆಗ ಸಿದ್ಧಾರ್ಥನು ಹೇಳಿದನು: "ಸ್ವಾಮಿ, ತಾವು ಶಾಕ್ಯ ಸಂಘದ ಶಾಕ್ಯನ ನಿಯಮಾವಳಿಗಳನ್ನು ಹೇಳಿದ್ದಕ್ಕಾಗಿ ನಾನು ತಮಗೆ ಋಣಿಯಾಗಿದ್ದೇನೆ. ನಾನು ಆ ನಿಯಮಗಳನ್ನು ಅಕ್ಷರಶಃ ಮನಃಪೂರ್ವಕವಾಗಿ ಪಾಲಿಸಲು ಶಕ್ತಿಮೀರಿ ಯತ್ನಿಸುತ್ತೇನೆ."

## ೧೪. ಸಂಘದೊಂದಿಗೆ ಸಂಘರ್ಷ

೧. ಸಿದ್ಧಾರ್ಥನು ಶಾಕ್ಯಸಂಘದ ಸದಸ್ಯನಾಗಿ ಎಂಟು ವರ್ಷಗಳು ಕಳೆದವು.

೨. ಅವನು ಸಂಘದ ನಿಷ್ಠಾವಂತ ಸದಸ್ಯನಾಗಿದ್ದನು. ಅವನು ತನ್ನ ವೈಯಕ್ತಿಕ ವಿಷಯಗಳಲ್ಲಿ ವಹಿಸುವಷ್ಟೇ ಆಸಕ್ತಿಯನ್ನು ಸಂಘದ ವಿಷಯಗಳಲ್ಲಿಯೂ ವಹಿಸುತ್ತಿದ್ದನು. ಸಂಘದ ಸದಸ್ಯನಾಗಿ ಅವನ ನಡತೆ ಆದರ್ಶಪ್ರಾಯವಾಗಿದ್ದಿತು. ಅವನು ಎಲ್ಲರ ಪ್ರೀತಿ ಗೌರವವನ್ನು ಗಳಿಸಿದ್ದನು.

೩. ಅವನ ಸದಸ್ಯತ್ವದ ಎಂಟನೆಯ ವರ್ಷದಲ್ಲಿ ನಡೆದ ಘಟನೆಯಿಂದಾಗಿ ಶುದ್ಧೋದನನ ಕುಟುಂಬಕ್ಕೆ ಒಂದು ದೊಡ್ಡ ಆಘಾತವಾಗಿ ಸಿದ್ಧಾರ್ಥನ ಬದುಕಿನಲ್ಲಿ ಒಂದು ಸಂದಿಗ್ಧತೆಗೆ ಕಾರಣವಾಯಿತು.

೪. ಆ ದುರಂತದ ಉಗಮ ಹೀಗಿದೆ.

೫. ಶಾಕ್ಯರ ರಾಜ್ಯದ ಪಕ್ಕದಲ್ಲಿಯೇ ಕೋಲಿಯರ ರಾಜ್ಯವಿದ್ದಿತು. ಈ ಎರಡು ರಾಜ್ಯಗಳನ್ನು ರೋಹಿಣಿ ನದಿಯು ಬೇರ್ಪಡಿಸಿದ್ದಿತು.

೬. ರೋಹಿಣಿ ನದಿಯ ನೀರನ್ನು ಶಾಕ್ಯರು ಮತ್ತು ಕೋಲಿಯರು ವ್ಯವಸಾಯಕ್ಕೆ ಬಳಸುತ್ತಿದ್ದರು. ಪ್ರತಿ

ಋತುವಿನಲ್ಲಿ ರೋಹಿಣಿ ನದಿ ನೀರನ್ನು ಯಾರು ಮೊದಲು ತೆಗೆದುಕೊಳ್ಳಬೇಕು ಮತ್ತು ಎಷ್ಟು ನೀರನ್ನು ತೆಗೆದುಕೊಳ್ಳಬಹುದು ಎಂಬ ಬಗ್ಗೆ ಅವರಲ್ಲಿ ವಿವಾದ ಉಂಟಾಗುತ್ತಿದ್ದಿತು. ಈ ವಿವಾದಗಳಿಂದಾಗಿ ಜಗಳಗಳಾಗುತ್ತಿದ್ದವು; ಕೆಲವೊಮ್ಮೆ ಅವು ದಾರಿತಪ್ಪುತ್ತಿದ್ದವು.

೭. ಸಿದ್ಧಾರ್ಥನು ಇಪ್ಪತ್ತೆಂಟು ವರ್ಷದವನಿದ್ದಾಗ ಶಾಕ್ಯರ ಸೇವಕರು ಮತ್ತು ಕೋಲಿಯರ ಸೇವಕರ ನಡುವೆ ಒಂದು ದೊಡ್ಡ ಘರ್ಷಣೆಯೇ ಆಯಿತು. ಅದರಿಂದಾಗಿ ಎರಡು ಕಡೆಯವರೂ ಗಾಯಗೊಂಡರು.

೮. ಇದನ್ನು ತಿಳಿದ ಶಾಕ್ಯರು ಮತ್ತು ಕೋಲಿಯರು ಈ ಸಮಸ್ಯೆಯ ಅಂತಿಮ ಪರಿಹಾರಕ್ಕಾಗಿ ಯುದ್ಧ ಒಂದೇ ಸರಿಯಾದ ಮಾರ್ಗ ಎಂದು ನಿರ್ಣಯಿಸಿದರು.

೯. ಶಾಕ್ಯರ ಸೇನಾಪತಿಯು ಕೋಲಿಯರ ಮೇಲೆ ಯುದ್ಧ ಹೂಡುವ ವಿಚಾರವನ್ನು ಪರಿಶೀಲಿಸಲು ಸಭೆಯನ್ನು ಕರೆದನು.

೧೦. ಸಂಘದ ಸದಸ್ಯರನ್ನು ಕುರಿತು ಸೇನಾಪತಿಯು ಈ ರೀತಿ ಹೇಳಿದನು: "ಕೋಲಿಯರು ನಮ್ಮ ಜನರ ಮೇಲೆ ಆಕ್ರಮಣ ನಡೆಸಿದ್ದಾರೆ. ಅವರನ್ನು ಹಿಮ್ಮೆಟ್ಟಿಸಬೇಕಾಗಿದೆ. ಇಂತಹ ಆಕ್ರಮಣ ಕೋಲಿಯರಿಂದ ಅನೇಕ ಸಾರಿ ನಡೆದಿದೆ. ನಾವು ಇಲ್ಲಿಯವರೆಗೂ ಅದನ್ನು ಸಹಿಸಿದ್ದಾಯಿತು. ಆದರೆ ಇನ್ನು ಮೇಲೆ ಸುಮ್ಮನಿರಲು ಸಾಧ್ಯವಿಲ್ಲ. ಇದನ್ನು ನಿಲ್ಲಿಸಲೇಬೇಕು. ಅದಕ್ಕೆ ನಮಗುಳಿದಿರುವ ಒಂದೇ ಒಂದು ಮಾರ್ಗವೆಂದರೆ ಕೋಲಿಯರೊಂದಿಗೆ ಯುದ್ಧ ಸಾರುವುದು. ಆದ್ದರಿಂದ ಅವರ ಮೇಲೆ ಯುದ್ಧವನ್ನು ಸಾರಬೇಕೆಂದು ಸೂಚಿಸುತ್ತೇನೆ. ಇದನ್ನು ವಿರೋಧಿಸುವವರು ಈಗ ಮಾತನಾಡಬಹುದು."

೧೧. ಸಿದ್ಧಾರ್ಥ ಗೌತಮನು ತನ್ನ ಆಸನದಿಂದ ಮೇಲೆದ್ದು ನಿಂತು ಮಾತನಾಡಲು ತೊಡಗಿದನು: "ನಾನು ಈ ಠರಾವನ್ನು ವಿರೋಧಿಸುತ್ತೇನೆ. ಯುದ್ಧದಿಂದ ಯಾವ ಸಮಸ್ಯೆಯೂ ಪರಿಹಾರವಾಗುವುದಿಲ್ಲ. ಯುದ್ಧ ಸಾರುವುದರಿಂದ ನಮ್ಮ ಉದ್ದೇಶ ಸಾರ್ಥಕವಾಗುವುದಿಲ್ಲ. ಅದು ಮತ್ತೊಂದು ಯುದ್ಧಕ್ಕೆ ಬೀಜ ಬಿತ್ತುತ್ತದೆ. ಕೊಂದವನನ್ನು ಕೊಲ್ಲಲು ಮತ್ತೊಬ್ಬನು ಹುಟ್ಟಿಕೊಳ್ಳುತ್ತಾನೆ. ಆಕ್ರಮಿಸಿಕೊಂಡವನನ್ನು ಆಕ್ರಮಿಸಲು ಮತ್ತೊಬ್ಬ ಆಕ್ರಮಣಕಾರನು ಬರುತ್ತಾನೆ ಖಂಡಿತ; ಲೂಟಿಕೋರನನ್ನೂ ಲೂಟಿ ಮಾಡಲು ಮತ್ತೊಬ್ಬನು ಸಿದ್ಧನಿರುತ್ತಾನೆ."

೧೨. ಸಿದ್ಧಾರ್ಥ ಗೌತಮನು ಮುಂದುವರೆಸಿದನು: "ಕೋಲಿಯರ ಮೇಲೆ ಯುದ್ಧ ಮಾಡಲು ಸಂಘವು ಅವಸರ ಬೀಳಬಾರದು ಎಂದು ನನಗನ್ನಿಸುತ್ತದೆ. ಇದರಲ್ಲಿ ತಪ್ಪು ಯಾರದು ಎಂಬುದನ್ನು ಬಹು ಎಚ್ಚರದಿಂದ ಪರಿಶೋಧಿಸಿ ನಿರ್ಣಯಿಸಬೇಕು. ನಮ್ಮವರಿಂದಲೂ ಆಕ್ರಮಣ ನಡೆದಿದೆ ಎಂದು ನಾನು ತಿಳಿದಿದ್ದೇನೆ. ಈ ಮಾತು ನಿಜವೇ ಆದಲ್ಲಿ, ಆಗ ನಾವು ನಿರ್ದೋಷಿಗಳೆನಿಸುವುದಿಲ್ಲ."

೧೩. ಆಗ ಸೇನಾಪತಿಯು ಹೇಳಿದನು: "ಅಹುದು, ನಮ್ಮ ಜನರೂ ಆಕ್ರಮಣ ನಡೆಸಿದ್ದಾರೆ. ಆದರೆ ನದಿಯ ನೀರನ್ನು ಮೊದಲು ಬಳಸಬೇಕಾದವರು ನಾವು ಎಂಬುದನ್ನು ಮರೆಯಬಾರದು."

೧೪. ಆಗ ಸಿದ್ಧಾರ್ಥ ಗೌತಮನು ಹೇಳಿದನು: "ನಾವು ಸಂಪೂರ್ಣವಾಗಿ ನಿರ್ದೋಷಿಗಳಲ್ಲ ಎಂಬುದು ಇದರಿಂದ ತಿಳಿಯುತ್ತದೆ. ಅದಕ್ಕಾಗಿ ನನ್ನ ಸೂಚನೆಯೇನೆಂದರೆ, ನಾವು ನಮ್ಮಿಂದ ಇಬ್ಬರು ಪ್ರತಿನಿಧಿಗಳನ್ನು ಆರಿಸೋಣ, ಕೋಲಿಯರು ಇಬ್ಬರನ್ನು ಆರಿಸಿ ಕಳುಹಿಸಲಿ. ಈ ನಾಲ್ಕು ಜನ ಸೇರಿ

ಐದನೆಯವನೊಬ್ಬನನ್ನು ಆರಿಸಲಿ. ಒಟ್ಟು ಈ ಐದು ಜನ ಸೇರಿ ಈ ನೀರಿನ ಸಮಸ್ಯೆಗೆ ಪರಿಹಾರ ಹುಡುಕಲಿ."

೧೫. ಸಿದ್ಧಾರ್ಥ ಗೌತಮನ ಈ ತಿದ್ದುಪಡಿಗೆ ಸಭಿಕರಿಂದ ಸೂಕ್ತ ರೀತಿಯಲ್ಲಿ ಅನುಮೋದನೆ ದೊರೆಯಿತು. ಆದರೆ ಸೇನಾಪತಿಯು ಸಿದ್ಧಾರ್ಥನ ಸಲಹೆಯನ್ನು ವಿರೋಧಿಸುತ್ತಾ ಈ ರೀತಿ ಹೇಳಿದನು. "ಕೋಲಿಯರನ್ನು ಸೂಕ್ತ ರೀತಿಯಲ್ಲಿ ಶಿಕ್ಷಿಸದ ಹೊರತು ಅವರ ಈ ಉಪಟಳ ನಿಲ್ಲುವುದಿಲ್ಲ."

೧೬. ಆದ್ದರಿಂದ ಮೂಲ ನಿರ್ಣಯ ಮತ್ತು ತಿದ್ದುಪಡಿ ಎರಡನ್ನೂ ಮತಕ್ಕೆ ಹಾಕಲಾಯಿತು. ಮೊದಲಿಗೆ ಸಿದ್ಧಾರ್ಥನು ಸೂಚಿಸಿದ ತಿದ್ದುಪಡಿಯನ್ನು ಮತಕ್ಕೆ ಹಾಕಲಾಯಿತು. ಅದು ಅತ್ಯಧಿಕ ಬಹುಮತದಿಂದ ಬಿದ್ದುಹೋಯಿತೆಂದು ಸಾರಲಾಯಿತು.

೧೭. ಅನಂತರ ಸೇನಾಪತಿಯು ತನ್ನ ಮೂಲ ನಿರ್ಣಯವನ್ನು ಮತಕ್ಕೆ ಹಾಕಿದನು. ಸಿದ್ಧಾರ್ಥ ಗೌತಮನು ಅದನ್ನು ವಿರೋಧಿಸಲು ಮತ್ತೆ ಎದ್ದು ನಿಂತನು. "ಈ ಮೂಲ ನಿರ್ಣಯವನ್ನು ಒಪ್ಪಬಾರದೆಂದು ನಾನು ಸಂಘದ ಸದಸ್ಯರನ್ನು ಪ್ರಾರ್ಥಿಸುತ್ತೇನೆ. ಶಾಕ್ಯರು ಮತ್ತು ಕೋಲಿಯರು ಪರಸ್ಪರ ಸಮೀಪದ ಬಂಧುಗಳು. ಅವರು ಪರಸ್ಪರರನ್ನು ನಾಶಗೊಳಿಸುವುದು ಅವಿವೇಕದ ಕ್ರಮವಾಗುತ್ತದೆ."

೧೮. ಸಿದ್ಧಾರ್ಥನ ಈ ವಾದವನ್ನು ಸೇನಾಪತಿಯು ಮತ್ತೆ ವಿರೋಧಿಸಿದನು. ಕ್ಷತ್ರಿಯರಾದವರು ಯುದ್ಧದಲ್ಲಿ ಇವರು ನಮ್ಮ ಬಂಧುಗಳು ಅವರು ಪರಕೀಯರು ಎಂದು ಭೇದ ಮಾಡಬಾರದೆಂದೂ, ಅವರು ತಮ್ಮ ರಾಜ್ಯದ ಹಿತಕ್ಕಾಗಿ ತಮ್ಮ ಸೋದರರೊಂದಿಗೆ ಹೋರಾಡಬೇಕೆಂದು ಒತ್ತಿಹೇಳಿದನು.

೧೯. "ಯಜ್ಞಯಾಗಾದಿಗಳನ್ನು ಮಾಡುವುದು ಬ್ರಾಹ್ಮಣನ ಕರ್ತವ್ಯ. ಹೋರಾಡುವುದು ಕ್ಷತ್ರಿಯರ ಕರ್ತವ್ಯ. ವ್ಯಾಪಾರ ಮಾಡುವುದು ವೈಶ್ಯನ ವೃತ್ತಿ ಮತ್ತು ಸೇವೆಯ ದುಡಿಮೆಯಲ್ಲಿ ತೊಡಗುವುದು ಶೂದ್ರನ ಕರ್ತವ್ಯ. ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಗಳಲ್ಲಿ ತೊಡಗುವುದು ಉತ್ತಮ. ಧರ್ಮಶಾಸ್ತ್ರಗಳ ವಿಧಿ ಇದು."

೨೦. ಸಿದ್ಧಾರ್ಥನು ಈ ರೀತಿ ಉತ್ತರ ಹೇಳಿದನು. "ನಾನು ತಿಳಿದಿರುವಂತೆ ಧರ್ಮಶಾಸ್ತ್ರವು ದ್ವೇಷವನ್ನು ದ್ವೇಷದಿಂದ ಪರಿಹರಿಸಬಹುದು ಎಂದು ಹೇಳುವುದಿಲ್ಲ. ಪ್ರೇಮದಿಂದ ಮಾತ್ರ ಅದನ್ನು ಗೆಲ್ಲಬಹುದು."

೨೧. ಇದನ್ನು ಕೇಳಿ ತಾಳ್ಮೆಗೆಟ್ಟ ಸೇನಾಪತಿಯು ಈ ರೀತಿ ಹೇಳಿದನು: "ಇಂತಹ ತಾತ್ವಿಕ ಚಿಂತನೆಯಲ್ಲಿ ತೊಡಗುವುದರಿಂದ ಈಗ ಉಪಯೋಗವಿಲ್ಲ. ಮುಖ್ಯ ವಿಷಯವೆಂದರೆ, ಸಿದ್ಧಾರ್ಥನು ನನ್ನ ನಿಲುವಳಿಯನ್ನು ವಿರೋಧಿಸುತ್ತಿದ್ದಾನೆ. ಅದರ ವಿಚಾರದಲ್ಲಿ ಸಂಘದ ಸದಸ್ಯರ ಅಭಿಪ್ರಾಯವೇನೆಂಬುದನ್ನು ಮತ ಚಲಾವಣೆಯಿಂದ ಈಗ ನಿರ್ಣಯಿಸೋಣ."

೨೨. ಅದರಂತೆ ಸೇನಾಪತಿಯು ತನ್ನ ನಿಲುವಳಿಯನ್ನು ಮತಕ್ಕೆ ಹಾಕಿದನು. ಅತ್ಯಂತ ಬಹುಮತದಿಂದ ಅದು ಒಪ್ಪಿಗೆ ಪಡೆಯಿತು.

## ೧೫. ದೇಶಭ್ರಷ್ಟನಾಗುವ ಬಯಕೆ

೧. ಯುದ್ಧಕ್ಕೆ ಸಜ್ಜುಗೊಳ್ಳುವ ಯೋಜನೆಯನ್ನು ಪರಿಶೀಲಿಸಲು ಶಾಕ್ಯ ಸಂಘದ ಮತ್ತೊಂದು ಸಭೆಯನ್ನು ಸೇನಾಪತಿಯು ಮರುದಿನ ಕರೆದನು.

೨. ಸಂಘದ ಸಭೆ ಸೇರಿದಾಗ, ಕೋಲಿಯರ ಮೇಲೆ ನಾವು ಯುದ್ಧಕ್ಕೆ ತೊಡಗಲು ಶಾಕ್ಯರಲ್ಲಿರುವ ಇಪ್ಪತ್ತು ಮತ್ತು ಐವತ್ತರ ನಡುವಿನ ವಯಸ್ಸಿನ ಪುರುಷರೆಲ್ಲರೂ ಶಸ್ತ್ರಸನ್ನದ್ಧರಾಗಬೇಕು ಎಂದು ಘೋಷಿಸಲು ಅನುಮತಿ ನೀಡಬೇಕೆಂದು ಸೂಚನೆಯನ್ನು ಮಂಡಿಸಿದರು.

೩. ಹಿಂದಿನ ಸಭೆಯಲ್ಲಿ ಕೋಲಿಯರ ಮೇಲೆ ಯುದ್ಧ ಸಾರಬೇಕೆಂಬ ಸೂಚನೆಯ ಪರವಾಗಿದ್ದವರು ಮತ್ತು ವಿರೋಧವಾಗಿದ್ದವರೆಲ್ಲರೂ ಇಂದಿನ ಸಭೆಯಲ್ಲಿ ಹಾಜರಿದ್ದರು.

೪. ಸೇನಾಪತಿಯ ನಿಲುವಳಿಯ ಪರವಾಗಿ ಮತ ಚಲಾಯಿಸಿದ್ದವರಿಗೆ ಈಗಿನ ಈ ಸೂಚನೆಯನ್ನು ಒಪ್ಪಲು ಯಾವ ತೊಂದರೆಯೂ ಕಾಣಲಿಲ್ಲ. ಹಿಂದಿನ ತಮ್ಮ ನಿಲುವಿಗೆ ಇದು ಸಮಂಜಸವಾಗಿದ್ದಿತು.

೫. ಆದರೆ ಹಿಂದಿನ ಆ ನಿಲುವಳಿಯನ್ನು ವಿರೋಧಿಸಿ ಸಿದ್ಧಾರ್ಥನ ತಿದ್ದುಪಡಿಯನ್ನು ಒಪ್ಪಿದ್ದ ಅಲ್ಪಸಂಖ್ಯಾತ ಸದಸ್ಯರಿಗೆ ಈಗಿನ ಈ ನಿರ್ಣಯಕ್ಕೆ ತಲೆಬಾಗುವುದೇ ಅಥವಾ ಬೇಡವೇ ಎಂಬ ಸಂದಿಗ್ಧತೆ ಮೂಡಿತು.

೬. ಈ ಅಲ್ಪಸಂಖ್ಯಾತರು ಬಹುಸಂಖ್ಯಾತರ ನಿರ್ಣಯಕ್ಕೆ ಮಣಿಯಬಾರದೆಂದು ನಿರ್ಣಯಿಸಿದರು. ಆ ಉದ್ದೇಶದಿಂದಲೇ ಇಂದಿನ ಸಭೆಯಲ್ಲಿ ಅವರು ಹಾಜರಿದ್ದರು. ದುರ್ದೈವದ ವಿಚಾರವೇನೆಂದರೆ, ತಮ್ಮ ಈ ನಿರ್ಣಯವನ್ನು ನೇರವಾಗಿ ಹೇಳುವ ಧೈರ್ಯ ಅವರಲ್ಲಿ ಯಾರಿಗೂ ಇರಲಿಲ್ಲ. ಬಹುಸಂಖ್ಯಾತರ ನಿರ್ಣಯವನ್ನು ವಿರೋಧಿಸುವುದರ ಕೆಟ್ಟ ಪರಿಣಾಮವೇನಾಗಬಹುದೆಂಬುದನ್ನು ಅವರು ಅರಿತಿದ್ದರೆಂದು ಕಾಣುತ್ತದೆ.

೭ ತನ್ನ ಬೆಂಬಲಿಗರೆಲ್ಲರೂ ಮೌನವಾಗಿ ಕುಳಿತಿದ್ದುದನ್ನು ಕಂಡು ಸಿದ್ಧಾರ್ಥನು ಎದ್ದುನಿಂತು ಈ ರೀತಿ ಹೇಳಿದನು: "ಸ್ನೇಹಿತರೆ, ನಿಮಗೆ ಇಷ್ಟವಾದುದನ್ನು ನೀವು ಮಾಡಿ. ಬಹು ಸಂಖ್ಯಾತರ ಅಭಿಪ್ರಾಯ ನಿಮ್ಮ ಪರವಾಗಿರುವುದೂ ನಿಜ. ಆದರೆ ನಾವು ಯುದ್ಧಕ್ಕೆ ಸಿದ್ಧರಾಗಬೇಕೆಂಬ ನಿಮ್ಮ ಸೂಚನೆಯನ್ನು ನಾನು ವಿರೋಧಿಸುತ್ತೇನೆ. ನಾನು ನಿಮ್ಮ ಸೈನ್ಯದೊಂದಿಗೆ ಸೇರಿ ನಿಮ್ಮ ಯುದ್ಧದಲ್ಲಿ ಖಂಡಿತ ಭಾಗಿಯಾಗುವುದಿಲ್ಲ."

೮. ಸಿದ್ಧಾರ್ಥ ಗೌತಮನಿಗೆ ಸೇನಾಪತಿಯು ಕೊಟ್ಟ ಉತ್ತರ ಇದು; "ನಿನ್ನನ್ನು ಸಂಘಕ್ಕೆ ಸದಸ್ಯನಾಗಿ ಸೇರಿಸಿಕೊಳ್ಳುವಾಗ ನೀನು ಮಾಡಿರುವ ಪ್ರತಿಜ್ಞೆಗಳ ಜ್ಞಾಪಕ ನಿನಗಿರಲಿ. ನೀನು ಸಮಾಜದ ಅವಹೇಳನಕ್ಕೆ ಗುರಿಯಾಗುತ್ತೀಯೆ."

೯. ಸಿದ್ಧಾರ್ಥ ಹೇಳಿದನು: "ನಾನು ತನು–ಮನ–ಧನಗಳ ಮೂಲಕ ಶಾಕ್ಯರ ಹಿತರಕ್ಷಣೆ ಮಾಡುತ್ತೇನೆ ಎಂಬುದಾಗಿ ವಚನ ಕೊಟ್ಟಿದ್ದೇನೆ. ಆದರೆ ಈಗ ಮಾಡಬೇಕೆಂದಿರುವ ಯುದ್ಧದಿಂದ ಶಾಕ್ಯರ ಹಿತರಕ್ಷಣೆ ಆಗುತ್ತದೆಂದು ನನಗೆ ಅನ್ನಿಸುವುದಿಲ್ಲ. ಶಾಕ್ಯರ ಹಿತರಕ್ಷಣೆಯ ಮುಂದೆ ನನಗಾಗುವ ಅವಮಾನ ದೊಡ್ಡದಲ್ಲವಷ್ಟೇ?"

೧೦. ಕೋಲಿಯರೊಂದಿಗಿನ ಈ ಕಲಹದಿಂದಾಗಿ ಶಾಕ್ಯರು ಕೋಸಲ ದೇಶದ ದೊರೆಗೆ ಹೇಗೆ ಅಧೀನರಾಗಿದ್ದಾರೆಂಬುದನ್ನು ನೆನಪಿಸುವ ಮೂಲಕ ಸಿದ್ಧಾರ್ಥನು ಅವರಿಗೆ ಎಚ್ಚರಿಕೆ ನೀಡಿದನು: "ಈಗ ನಡೆಯುವ ಯುದ್ಧ ಕೋಸಲದ ದೊರೆಯು ಶಾಕ್ಯರ ಸ್ವಾತಂತ್ರ್ಯವನ್ನು ಮತ್ತಷ್ಟು ಮೊಟಕುಗೊಳಿಸಲು ಹೆಚ್ಚಿನ ಅವಕಾಶ ನೀಡುತ್ತದೆಂಬುದನ್ನೂ ಊಹಿಸುವುದು ಕಷ್ಟವೇನಲ್ಲ."

೧೧. ಸಿಟ್ಟುಗೊಂಡ ಸೇನಾಪತಿಯು ಸಿದ್ಧಾರ್ಥನನ್ನು ಕುರಿತು ಈ ರೀತಿ ಹೇಳಿದನು: "ನಿನ್ನ ಈ ವಾಕ್‌ಚಾತುರ್ಯ ನಿನಗೆ ನೆರವಾಗದು. ಸಂಘದ ಬಹುಸಂಖ್ಯಾತರ ನಿರ್ಣಯಕ್ಕೆ ನೀನು

ತಲೆಬಾಗಲೇಬೇಕು. ಈ ಸಂಘವು ಕೋಸಲ ರಾಜನ ಅಪ್ಪಣೆಯಿಲ್ಲದೆ ಯಾವುದೇ ತಪ್ಪಿತಸ್ಥನನ್ನು ಗಲ್ಲಿಗೇರಿಸುವುದಕ್ಕಾಗಲಿ, ಗಡಿಪಾರು ಮಾಡುವುದಕ್ಕಾಗಲಿ ಅಧಿಕಾರ ಪಡೆದಿಲ್ಲವಾದ್ದರಿಂದ ಒಂದು ವೇಳೆ ಅಂತಹ ಯಾವುದೇ ಶಿಕ್ಷೆಯನ್ನು ಈ ಸಂಘವು ನಿನಗೆ ವಿಧಿಸಿದರೆ, ಕೋಸಲ ದೇಶದ ದೊರೆಯು ಅದನ್ನು ಮನ್ನಿಸಲಾರ ಎಂದು ನೀನು ನಚ್ಚಿರುವಂತಿದೆ."

೧೨. "ಆದರೆ ಜ್ಞಾಪಕವಿರಲಿ, ಈ ಸಂಘವು ನಿನ್ನನ್ನು ಬೇರೆ ರೀತಿಯಿಂದಲಾದರೂ ಶಿಕ್ಷಿಸಬಲ್ಲದು. ಸಂಘವು ನಿನ್ನ ಮನೆತನಕ್ಕೆ ಸಾಮೂಹಿಕ ಬಹಿಷ್ಕಾರವನ್ನು ವಿಧಿಸಬಹುದು ಮತ್ತು ನಿಮ್ಮ ಕುಟುಂಬದ ಆಸ್ತಿಯನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳಬಹುದು. ಇದಕ್ಕೆ ಕೋಸಲ ದೇಶದ ದೊರೆಯ ಒಪ್ಪಿಗೆಯನ್ನೇನು ಸಂಘವು ಪಡೆಯಬೇಕಾಗಿಲ್ಲ."

೧೩. ಕೋಲಿಯರ ಮೇಲೆ ಯುದ್ಧ ಮಾಡಬೇಕೆಂಬ ಸಂಘದ ನಿರ್ಣಯವನ್ನು ವಿರೋಧಿಸುವುದರಿಂದ ಆಗಬಹುದಾದ ಪರಿಣಾಮಗಳನ್ನು ಸಿದ್ಧಾರ್ಥನು ಚೆನ್ನಾಗಿ ಮನಗಂಡನು. ಈಗ ಅವನ ಮುಂದೆ ಮೂರು ಸಾಧ್ಯತೆಗಳಿದ್ದವು. ಸೈನ್ಯವನ್ನು ಸೇರಿ ಯುದ್ಧದಲ್ಲಿ ತೊಡಗುವುದು: ಗಲ್ಲಿಗೇರಿಸುವ ಅಥವಾ ಗಡಿಪಾರು ಶಿಕ್ಷೆಯನ್ನು ಒಪ್ಪಿಕೊಳ್ಳುವುದು. ತನ್ನ ಕುಟುಂಬದ ಸದಸ್ಯರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಈಡುಮಾಡಿ ಅವರ ಆಸ್ತಿಯನ್ನೆಲ್ಲ ಮುಟ್ಟುಗೋಲಿಗೆ ಗುರಿಮಾಡುವುದು.

೧೪. ಮೊದಲನೆಯ ಸಾಧ್ಯತೆಯನ್ನು ಅವನು ಧೃಡವಾಗಿ ನಿರಾಕರಿಸಿದನು. ಮೂರನೆಯ ಸಾಧ್ಯತೆಯು ಸಾಧುವಲ್ಲ ಎಂದು ಅವನಿಗೆ ಅನಿಸಿತು. ಆದ್ದರಿಂದ ಈ ಮೂರರಲ್ಲಿ ಎರಡನೆಯದೇ ಸೂಕ್ತವಾದದ್ದು ಎಂದು ಅವನು ನಿಶ್ಚಯಿಸಿದನು.

೧೫. ಅದರಂತೆ ತನ್ನ ಅಂತಿಮ ನಿರ್ಧಾರವನ್ನು ಸಂಘಕ್ಕೆ ಈ ರೀತಿ ತಿಳಿಸಿದನು: "ದಯವಿಟ್ಟು ನನ್ನ ಕುಟುಂಬದವರನ್ನು ಶಿಕ್ಷಿಸಬೇಡಿ. ಸಾಮಾಜಿಕ ಬಹಿಷ್ಕಾರಕ್ಕೆ ಈಡುಮಾಡಿ ಅವರನ್ನು ಇಲ್ಲದ ಸಂಕಟಕ್ಕೆ ಗುರಿಮಾಡಬೇಡಿ. ಅವರ ಜೀವನೋಪಾಯದ ಏಕೈಕ ಸಾಧನವಾದ ಭೂಮಿಯನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ನಿರಾಧಾರಿಗಳಾಗಿ ಮಾಡಬೇಡಿ. ಅವರು ನಿರ್ದೋಷಿಗಳು, ತಪ್ಪು ಮಾಡಿರುವವನು ನಾನು. ಆ ತಪ್ಪಿಗಾಗಿ ನಾನೊಬ್ಬನೇ ಶಿಕ್ಷೆಯನ್ನು ಅನುಭವಿಸಬೇಕು. ನನ್ನನ್ನು ಗಲ್ಲಿಗೇರಿಸಿ ಇಲ್ಲವೆ ಗಡಿಪಾರು ಮಾಡಿ. ನಾನು ನನ್ನ ರಕ್ಷಣೆಗಾಗಿ ಖಂಡಿತ ಕೋಸಲ ದೇಶದ ರಾಜನ ಮೊರೆಹೋಗುವುದಿಲ್ಲ."

## ೧೬. ಪರಿವ್ರಾಜಕ – ಹೊರನಡೆದ

೧. ಆಗ ಸೇನಾಪತಿಯು ಹೇಳಿದನು : "ನಿನ್ನ ಈ ಬಯಕೆಯನ್ನು ನಾವು ಒಪ್ಪುವುದು ಕಷ್ಟ. ಏಕೆಂದರೆ, ನೀನು ಸ್ವ–ಇಚ್ಛೆಯಿಂದಲೇ ಗಲ್ಲಿಗೇರಿದ ಅಥವಾ ಗಡಿಪಾರಾದ ವಿಚಾರ ಕೋಸಲ ದೇಶದ ದೊರೆಯ ಕಿವಿಯನ್ನಂತೂ ಮುಟ್ಟಿಯೇ ಮುಟ್ಟುತ್ತದೆ. ಸಂಘವೇ ಈ ಶಿಕ್ಷೆಯನ್ನು ವಿಧಿಸಿದೆ ಎಂದು ತಿಳಿದು ರಾಜನು ಸಂಘದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು."

೨. ಆಗ ಸಿದ್ಧಾರ್ಥನು ಹೇಳಿದನು: "ಅದಕ್ಕೆ ನಾನು ಒಂದು ಸುಲಭವಾದ ಪರಿಹಾರವನ್ನು ಸೂಚಿಸುತ್ತೇನೆ. ನಾನು ಪರಿವ್ರಾಜಕ ವ್ರತವನ್ನು ಅಂಗೀಕರಿಸಿ ನಾನಾಗಿಯೇ ಈ ರಾಜ್ಯವನ್ನು ಬಿಟ್ಟು ಹೊರಡುತ್ತೇನೆ. ಅದು ಒಂದು ರೀತಿಯಲ್ಲಿ ದೇಶಭ್ರಷ್ಟತೆ."

೩. ಈ ಸಲಹೆ ಸರಿಯಾದದ್ದೆಂದು ಸೇನಾಪತಿಗೆ ಕಂಡಿತು. ಆದರೆ ನಿಜವಾಗಿಯೂ ಸಿದ್ಧಾರ್ಥನು ಹಾಗೆ ನಡೆದುಕೊಳ್ಳುತ್ತಾನೆಯೇ ಎಂಬ ಸಂಶಯ ಸೇನಾಪತಿಯ ಮನಸ್ಸಿನಲ್ಲಿದ್ದಿತು.

೪. ಆದ್ದರಿಂದ ಅವನು ಸಿದ್ಧಾರ್ಥನನ್ನು ಕೇಳಿದನು: "ನೀನು ನಿನ್ನ ತಂದೆ ತಾಯಿಯರ ಮತ್ತು ಹೆಂಡತಿಯ ಅನುಮತಿಯಿಲ್ಲದೆ ಹೇಗೆ ಪರಿವ್ರಾಜಕನಾಗುತ್ತೀಯ?"

೫. ಅವರ ಅನುಮತಿಯನ್ನು ಪಡೆಯಲು ಎಲ್ಲ ರೀತಿಯಿಂದಲೂ ಪ್ರಯತ್ನಿಸುವುದಾಗಿ ಸೇನಾಪತಿಗೆ ಸಿದ್ಧಾರ್ಥನು ಭರವಸೆಯಿತ್ತನು. "ಅವರ ಒಪ್ಪಿಗೆ ದೊರೆಯಲಿ, ಬಿಡಲಿ; ನಾನು ಈ ರಾಜ್ಯವನ್ನು ಕೂಡಲೇ ಬಿಟ್ಟು ಹೊರಡುತ್ತೇನೆ ಎಂಬುದಾಗಿ ಪ್ರಮಾಣ ಮಾಡಿ ಹೇಳುತ್ತೇನೆ" ಎಂದನು.

೬. ಸಿದ್ಧಾರ್ಥನು ಕೊಟ್ಟ ಸಲಹೆಯೇ ಸೂಕ್ತವಾದ ಪರಿಹಾರ ಎಂಬುದನ್ನು ಮನಗಂಡ ಸಂಘದ ಸದಸ್ಯರು ಅದಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿದರು.

೭. ಸಮಿತಿಯ ಅಂದಿನ ಕಾರ್ಯಕಲಾಪಗಳು ಮುಗಿದು ಸದಸ್ಯರು ಮೇಲೇಳುವುದರಲ್ಲಿದ್ದಾಗ, ಒಬ್ಬ ಶಾಕ್ಯ ಯುವಕನು ಮೇಲೆದ್ದು, "ನಾನು ಬಹು ಮುಖ್ಯವಾದ ಸಂಗತಿಯೊಂದನ್ನು ಹೇಳಲಿದ್ದೇನೆ, ದಯವಿಟ್ಟು ಆಲಿಸಿರಿ" ಎಂದನು.

೮. ಮಾತನಾಡಲು ಅವನಿಗೆ ಅಪ್ಪಣೆ ದೊರಕಿದ ಮೇಲೆ ಅವನು ಹೇಳಿದನು: "ಸಿದ್ಧಾರ್ಥ ಗೌತಮನು ತನ್ನ ವಚನದಂತೆ ಈ ಕೂಡಲೇ ದೇಶವನ್ನು ತೊರೆದು ಹೋಗುತ್ತಾನೆಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಆದರೂ ಸಹ ನನಗೆ ಸರಿಕಾಣದ ಈ ಒಂದು ಪ್ರಶ್ನೆ ಉಳಿದೇ ಉಳಿಯುತ್ತದೆ.

೯. "ಈಗ ಸಿದ್ಧಾರ್ಥನಂತೂ ದೇಶವನ್ನು ತೊರೆದು ಹೋಗುತ್ತಾನೆ. ಆಗ ನೀವು ಕೋಲಿಯರ ಮೇಲೆ ಮಾಡಬೇಕೆಂದಿರುವ ಯುದ್ಧವನ್ನು ಕೂಡಲೇ ಆರಂಭಿಸಬಲ್ಲಿರಾ?

೧೦. "ಈ ವಿಚಾರವನ್ನು ಕುರಿತು ಸಂಘವು ಮತ್ತಷ್ಟು ವಿವರವಾಗಿ ಯೋಚಿಸುವುದು ಅವಶ್ಯವೆಂದು ನನಗೆ ತೋರುತ್ತದೆ. ಸಿದ್ಧಾರ್ಥನು ದೇಶವನ್ನು ತೊರೆದುಹೋದ ವಿಚಾರ ಕೋಸಲ ದೇಶದ ದೊರೆಯನ್ನು ಮುಟ್ಟಿಯೇ ಮುಟ್ಟುತ್ತದೆ. ಕೂಡಲೇ ಶಾಕ್ಯರು ಕೋಲಿಯರ ಮೇಲೆ ಯುದ್ಧಕ್ಕೆ ತೊಡಗಿದರೆ, ಸಿದ್ಧಾರ್ಥನು ಯುದ್ಧವನ್ನು ವಿರೋಧಿಸುವುದಕ್ಕಾಗಿಯೇ ದೇಶವನ್ನು ತೊರೆದುಹೋಗಿದ್ದಾನೆ ಎಂದು ಕೋಸಲ ದೇಶದ ದೊರೆಯು ಸುಲಭವಾಗಿ ಗ್ರಹಿಸುತ್ತಾನೆ. ಇದರಿಂದ ನಮಗೆ ಒಳಿತೇನೂ ಆಗುವುದಿಲ್ಲ.

೧೧. "ಆದ್ದರಿಂದ ಸಿದ್ಧಾರ್ಥನು ದೇಶವನ್ನು ತೊರೆದುಹೋದ ನಂತರ, ಸ್ವಲ್ಪಕಾಲ ಅವಕಾಶ ಕೊಟ್ಟು, ಅನಂತರ ನಮ್ಮ ಘರ್ಷಣೆಯನ್ನು ಆರಂಭಿಸಿದರೆ, ಆಗ ಕೋಸಲ ದೊರೆ ಈ ಎರಡು ಘಟನೆಗಳ ನಡುವೆ ಯಾವ ಸಂಬಂಧವನ್ನೂ ಕಲ್ಪಿಸಲಾರ."

೧೨. ಇದು ನಿಜವಾಗಿಯೂ ಮಹತ್ವದ ಸೂಚನೆ ಎಂಬುದನ್ನು ಸಂಘವು ಗುರುತಿಸಿತು. ಯುಕ್ತವಾದ ವಿಷಯವಾದ ಕಾರಣ ಸಂಘವು ಹೆಚ್ಚು ಚರ್ಚೆಯಿಲ್ಲದೆ ಅದಕ್ಕೆ ಒಪ್ಪಿಗೆಯನ್ನು ಸೂಚಿಸಿತು.

೧೩. ಈ ರೀತಿ ಶಾಕ್ಯಸಂಘದ ಬಹುವಿಪತ್ಕಾರಕವಾದ ಅಧಿವೇಶನವು ಕೊನೆಗೊಂಡಿತು. ಯುದ್ಧವನ್ನು ವಿರೋಧಿಸುತ್ತಿದ್ದು, ಅದನ್ನು ಹೇಳಲಾರದ ಅಲ್ಪಸಂಖ್ಯೆಯ ಸದಸ್ಯರು, ಹೆಚ್ಚಿನ ಘರ್ಷಣೆಗೆ ಅವಕಾಶವಿಲ್ಲದಂತೆ, ಈ ಅಧಿವೇಶನ ಕೊನೆಗೊಂಡಿತಲ್ಲಾ ಎಂದು ನಿಟ್ಟುಸಿರುಬಿಟ್ಟರು.

## ೧೭. ಬೀಳ್ಕೊಡುಗೆಯ ನುಡಿ

೧. ಶಾಕ್ಯ ಸಂಘದ ಸಭೆಯಲ್ಲಿ ನಡೆದ ಕಲಾಪಗಳ ವಿವರಗಳು ಸಿದ್ಧಾರ್ಥನು ಮನೆಗೆ ಹಿಂತಿರುಗುವುದಕ್ಕೆ ಬಹುಮುಂಚಿತವಾಗಿಯೇ ಅವನ ಅರಮನೆಯನ್ನು ಮುಟ್ಟಿದ್ದವು.

೨. ಅರಮನೆಯನ್ನು ತಲುಪಿದ ರಾಜಕುಮಾರನು ತನ್ನ ತಂದೆತಾಯಿಯರು ತೀವ್ರ ದುಃಖದಿಂದ ಕಣ್ಣೀರಿಡುತ್ತಿರುವುದನ್ನು ಗಮನಿಸಿದನು.

೩. ಶುದ್ಧೋದನನು ಹೇಳಿದನು: "ನಾವು ಯುದ್ಧದ ಕೆಟ್ಟ ಪರಿಣಾಮಗಳನ್ನು ಕುರಿತು ಮಾತನಾಡುತ್ತಿದ್ದೆವು. ಆದರೆ ನೀನು ಇಷ್ಟು ದೂರ ಹೋಗುತ್ತೀಯಾ ಎಂದುಕೊಂಡಿರಲಿಲ್ಲ."

೪. ಅದಕ್ಕೆ ಸಿದ್ಧಾರ್ಥನು ಈ ರೀತಿ ಉತ್ತರಿಸಿದನು: "ಅಂದಿನ ಘಟನೆಗಳು ಈ ರೀತಿಯ ತಿರುವು ಪಡೆಯುತ್ತವೆ ಎಂದು ನಾನೂ ತಿಳಿದಿರಲಿಲ್ಲ. ನಾನು ನನ್ನ ವಾದದಿಂದ ಶಾಕ್ಯರನ್ನು ಶಾಂತಿಯ ಕಡೆಗೆ ಒಲಿಸಿಕೊಳ್ಳುತ್ತೇನೆ ಎಂದು ಆಶಿಸಿದ್ದೆ.

೫. "ದುರ್ದೈವವಶಾತ್, ನಮ್ಮ ಸೇನಾಧಿಕಾರಿಗಳು ಜನರ ಭಾವನೆಗಳನ್ನು ಅದೆಷ್ಟು ಉದ್ರೇಕಗೊಳಿಸಿದ್ದರೆಂದರೆ, ನಮ್ಮ ಯಾವ ವಾದವೂ ಅವರ ಮೇಲೆ ಯಾವ ಪರಿಣಾಮವನ್ನು ಬೀರದೆ ಹೋದವು.

೬. "ನಾನು ಅಂದಿನ ಸನ್ನಿವೇಶವು ಮತ್ತಷ್ಟು ದುಸ್ಥಿತಿ ತಲುಪುವುದನ್ನು ಹೇಗೆ ತಪ್ಪಿಸಿದೆನು ಎಂಬುದನ್ನು ತಾವು ಅರಿತಿದ್ದೀರೆಂದು ತಿಳಿಯುತ್ತೇನೆ. ಸತ್ಯ ಮತ್ತು ನ್ಯಾಯವನ್ನು ಪ್ರತಿಪಾದಿಸಿದ ನಾನು ಅದರ ಪರಿಣಾಮವಾಗಿ ಬರುವ ಶಿಕ್ಷೆಯನ್ನು ನಾನೊಬ್ಬನೇ ಅನುಭವಿಸಬೇಕು ಎಂಬ ನಿಲುವನ್ನು ನಾನು ಸಮರ್ಥವಾಗಿ ಸಾಧಿಸುವಲ್ಲಿ ಯಶಸ್ವಿಯಾದೆನು."

೭. ಇದರಿಂದ ಶುದ್ಧೋದನನಿಗೆ ತೃಪ್ತಿಯಾಗಲಿಲ್ಲ. "ಆದ್ದರಿಂದ ನಮ್ಮ ಮೇಲಾಗಬಹುದಾದ ಪರಿಣಾಮವನ್ನು ನೀನು ಯೋಚಿಸಲಿಲ್ಲ" ಎಂದನು. ಅದಕ್ಕೆ ಸಿದ್ಧಾರ್ಥನು, "ಆದ್ದರಿಂದಲೇ ನಾನು ಪರಿವ್ರಾಜಕನಾಗಲು ನಿರ್ಣಯಿಸಿದೆನು. ಶಾಕ್ಯರು ನಿಮ್ಮ ಭೂಮಿಕಾಣಿಯನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಂಡಿದ್ದರೆ, ಅದರ ಪರಿಣಾಮ ಏನಾಗುತ್ತಿದ್ದಿತೆಂಬುದನ್ನು ಸ್ವಲ್ಪ ಯೋಚಿಸಿ ನೋಡಿ."

೮. "ನೀನೆ ಇಲ್ಲದಿದ್ದಾಗ ನಮಗೆ ಈ ಭೂಮಿಯಿಂದ ಪ್ರಯೋಜನವಾದರೂ ಏನು?" ಎಂದು ಶುದ್ಧೋದನನು ರೋದಿಸತೊಡಗಿದನು. "ಒಟ್ಟು ನಮ್ಮ ಕುಟುಂಬವೇ ಶಾಕ್ಯರ ರಾಜ್ಯವನ್ನು ತೊರೆದು ನಿನ್ನೊಂದಿಗೆ ದೇಶತ್ಯಾಗಮಾಡಬಾರದೇಕೆ?"

೯. ಅಳುತ್ತಿದ್ದ ಪ್ರಜಾಪತಿ ಗೌತಮಿ ಶುದ್ಧೋದನನೊಂದಿಗೆ ವಾದದಲ್ಲಿ ಸೇರಿಕೊಳ್ಳುತ್ತ, ಹೇಳಿದಳು "ನಾನು ಒಪ್ಪುತ್ತೇನೆ ನಮ್ಮನ್ನೆಲ್ಲ ಇಲ್ಲಿ ಹೀಗೆ ಬಿಟ್ಟು ನೀನು ಏಕಾಂಗಿಯಾಗಿ ಹೇಗೆ ಹೋಗಬಲ್ಲೆ?"

೧೦. ಸಿದ್ಧಾರ್ಥನು ಹೇಳಿದನು: "ಅಮ್ಮ, ನೀನು ಕ್ಷತ್ರಿಯನ ತಾಯಿಯೆಂದು ಹೆಮ್ಮೆಯಿಂದ ಯಾವಾಗಲೂ ಹೇಳಿಕೊಳ್ಳುತ್ತಿರಲಿಲ್ಲವೇ? ಆದ್ದರಿಂದ ಈಗ ನೀನು ಶೂರಳಂತೆ ವರ್ತಿಸಬೇಕು. ಈ ರೀತಿ ದುಃಖಿಸುವುದು ನಿನ್ನಂತಹವಳಿಗೆ ತರವಲ್ಲ. ನಾನು ಯುದ್ಧರಂಗಕ್ಕೆ ಹೋಗಿ ಸತ್ತುಹೋಗಿದ್ದರೆ ಏನು ಮಾಡುತ್ತಿದ್ದೆ? ಆಗಲೂ ನೀನು ಈ ರೀತಿ ದುಃಖಿಸುತ್ತಿದ್ದೆಯೇನು?"

೧೧. ಅದಕ್ಕೆ ಗೌತಮಿಯು ಹೇಳಿದಳು: "ಇಲ್ಲ, ಆದರೆ ಆ ಸಾವು ಕ್ಷತ್ರಿಯನಿಗೆ ತಕ್ಕುದಾಗಿರುತ್ತಿದ್ದಿತು. ಆದರೆ ನೀನು ಈಗ ಕಾಡಿಗೆ ಹೋಗಿ ಜನಸಮೂಹದಿಂದ ದೂರವಿದ್ದು ಬದುಕಲು ಹೊರಟಿದ್ದೀಯ. ನಾವು ಇಲ್ಲಿ ಶಾಂತಿಯಿಂದಿರುವುದು ಹೇಗೆ? ನಮ್ಮನ್ನೂ ನಿನ್ನ ಜೊತೆ ಕರೆದುಕೊಂಡು ಹೋಗು ಎಂದು ಹೇಳುತ್ತಿದ್ದೇನೆ."

೧೨. ಅದಕ್ಕೆ ಅವನು ಹೇಳಿದನು: "ನಿಮ್ಮನ್ನೆಲ್ಲಾ ನನ್ನ ಜೊತೆ ಹೇಗೆ ಕರೆದುಕೊಂಡು ಹೋಗಲಿ? ನಂದನು ಇನ್ನೂ ಕಿರಿಯ ಬಾಲಕ; ನನ್ನ ಮಗನಾದ ರಾಹುಲನು ಈಗತಾನೇ ಹುಟ್ಟಿದ್ದಾನೆ. ಅವರನ್ನೆಲ್ಲ ಇಲ್ಲಿ ಬಿಟ್ಟು ನೀನು ನನ್ನೊಂದಿಗೆ ಬರಬಲ್ಲೆಯಾ?"

೧೩. ಗೌತಮಿಗೆ ಈ ಮಾತಿನಿಂದ ತೃಪ್ತಿಯಾಗಲಿಲ್ಲ. ಅದಕ್ಕೆ ಅವಳು ಹೇಳಿದಳು: "ನಾವೆಲ್ಲರೂ ಶಾಕ್ಯರ ರಾಜ್ಯವನ್ನು ತ್ಯಜಿಸಿ ಕೋಸಲ ರಾಜರ ರಕ್ಷಣೆಗೆ ಆ ರಾಜ್ಯಕ್ಕೆ ಹೋಗಲು ಸಾಧ್ಯ."

೧೪. ಸಿದ್ಧಾರ್ಥನು ಹೇಳಿದನು: "ಓ, ತಾಯಿಯೆ! ಶಾಕ್ಯರು ಏನೆಂದುಕೊಂಡಾರು? ಇದು ರಾಜದ್ರೋಹ ಎಂದು ಅವರು ಪರಿಗಣಿಸುವುದಿಲ್ಲವೆ? ಜೊತೆಗೆ, ನಾನು ನನ್ನ ಪರಿವ್ರಾಜಕ ಬದುಕಿಗೆ ನಿಜವಾದ ಕಾರಣವನ್ನು ನನ್ನ ಯಾವುದೇ ಮಾತು ಅಥವಾ ನಡೆಯ ಮೂಲಕ ಕೋಸಲದ ರಾಜನಿಗೆ ತಿಳಿಸುವುದಿಲ್ಲ ಎಂದು ಸಂಘದ ಸದಸ್ಯರಿಗೆ ಮಾತುಕೊಟ್ಟು ಬಂದಿದ್ದೇನೆ.

೧೫. "ಹಾಗಾಗಿ ನಾನೊಬ್ಬನೇ ಒಂಟಿಯಾಗಿ ಕಾಡಿನಲ್ಲಿ ವಾಸಿಸಬೇಕಾಗಬಹುದು. ಕಾಡಿನಲ್ಲಿ ಒಂಟಿಯಾಗಿ ಬಾಳುವುದು ಮೇಲೊ ಇಲ್ಲವೆ ಕೋಲಿಯರ ಹತ್ಯೆಗೆ ಕಾರಣವಾಗುವುದು ಮೇಲೋ, ಯೋಚಿಸಿ ನೋಡು."

೧೬. ಆಗ ಶುದ್ಧೋದನನು ಹೇಳಿದನು: "ಶಾಕ್ಯ ಸಂಘವು ಯುದ್ಧವನ್ನು ಇನ್ನೂ ಕೆಲವು ಕಾಲ ಮುಂದೂಡಲು ನಿರ್ಧರಿಸಿರುವಾಗ ನೀನೇಕೆ ಈ ರೀತಿ ಆತುರಪಡುತ್ತಿದ್ದೀಯ?

೧೭. "ಬಹುಶಃ ಈ ಘರ್ಷಣೆ ಆರಂಭವಾಗದೆಯೂ ಇರಬಹುದು. ಆದ್ದರಿಂದ ನೀನು ಈ ಪರಿವ್ರಾಜಕ ಬದುಕನ್ನು ಏಕೆ ಮುಂದೂಡಬಾರದು? ಮುಂದೆ ನೀನು ಶಾಕ್ಯರ ನಡುವೆಯೇ ಉಳಿಯಲು ಸಂಘದ ಒಪ್ಪಿಗೆಯನ್ನು ಪಡೆಯಬಹುದು."

೧೮. ಈ ಸೂಚನೆ ಸಿದ್ಧಾರ್ಥನಿಗೆ ಸಹ್ಯವೆನಿಸಲಿಲ್ಲ. ಅದಕ್ಕೆ ಅವನು ಹೇಳಿದನು: "ನಾನು ಪರಿವ್ರಾಜಕನಾಗುತ್ತೇನೆ ಎಂದು ವಚನವಿತ್ತುದರಿಂದಾಗಿ ಕೋಲಿಯರೊಂದಿಗಿನ ತಮ್ಮ ಹೋರಾಟವನ್ನು ಮುಂದೂಡಲು ಶಾಕ್ಯ ಸಂಘವು ನಿರ್ಣಯಿಸಿತು ಎಂಬ ಅಂಶವನ್ನು ನಾವು ಮರೆಯಬಾರದು.

೧೯. "ನಾನು ಪರಿವ್ರಾಜಕ ಧರ್ಮವನ್ನು ಸ್ವೀಕರಿಸಿದ ಮೇಲೆ ಸಂಘವು ಮಾಡಿರುವ ಯುದ್ಧದ ನಿರ್ಣಯವನ್ನು ಬದಲಾಯಿಸುವಂತೆ ಸಂಘವನ್ನು ಒತ್ತಾಯಿಸಬಹುದು. ಇದೆಲ್ಲವೂ ನಾನು ಮೊದಲು ಪರಿವ್ರಾಜಕನಾಗುವುದನ್ನು ಅವಲಂಬಿಸಿದೆ.

೨೦. "ನಾನು ವಚನವಿತ್ತಿದ್ದೇನೆ. ಅದನ್ನು ನಾನು ನೆರವೇರಿಸಲೇಬೇಕು. ನಾನು ವಚನಭ್ರಷ್ಟನಾದರೆ ಅದರ ಪರಿಣಾಮ ನಮ್ಮ ಮೇಲೆ ಮಾತ್ರವಲ್ಲದೆ ಶಾಂತಿ ಸ್ಥಾಪನೆಯ ನಮ್ಮ ಉದ್ದೇಶದ ಮೇಲೆಯೂ ಆಗುತ್ತದೆ.

೨೧. "ಅಮ್ಮ, ನೀನು ಈಗ ನನ್ನ ದಾರಿಗೆ ಅಡ್ಡ ಬರಬೇಡ. ನೀನು ನನಗೆ ಒಪ್ಪಿಗೆಯಿತ್ತು ಆಶೀರ್ವದಿಸು. ಈಗ ನಡೆಯುತ್ತಿರುವುದೆಲ್ಲವೂ ಒಳ್ಳೆಯದಕ್ಕೇ"

೨೨. ಗೌತಮಿ ಮತ್ತು ಶುದ್ಧೋದನ ಇಬ್ಬರೂ ಸುಮ್ಮನಾದರು.

೨೩. ಅಲ್ಲಿಂದ ಸಿದ್ಧಾರ್ಥನು ಯಶೋಧರೆಯ ಕೊಠಡಿಗೆ ಹೋದನು. ಅವಳನ್ನು ನೋಡಿದ ಮೇಲೆ ಅವಳಿಗೆ ಏನು ಹೇಳಬೇಕು, ಹೇಗೆ ಹೇಳಬೇಕು ಎಂಬುದು ತಿಳಿಯದೆ, ಮೌನವಾಗಿ ನಿಂತನು. ಆಗ ಅವಳೇ ಆ ಮೌನವನ್ನು ಮುರಿದು ಮಾತನಾಡಿದಳು: "ಕಪಿಲವಸ್ತುವಿನ ಸಂಘದ ಸಭೆಯಲ್ಲಿ ನಡೆದುದೆಲ್ಲವನ್ನು ನಾನು ಕೇಳಿದ್ದೇನೆ."

೨೪. ಆಗ ಅವನು ಅವಳನ್ನು ಕುರಿತು, "ಯಶೋಧರ, ನಾನು ಪರಿವ್ರಾಜಕನಾಗಬೇಕೆಂಬ ನನ್ನ ನಿರ್ಣಯ ನಿನಗೇನೆನಿಸುತ್ತದೆ, ಹೇಳು" ಎಂದನು.

೨೫. ಈ ಮಾತನ್ನು ಕೇಳಿ ಅವಳು ಕುಸಿದು ಬೀಳಬಹುದು ಎಂದು ಅವನು ಭಾವಿಸಿದ್ದನು. ಆದರೆ ಅಂತಹುದೇನೂ ಆಗಲಿಲ್ಲ.

೨೬. ತನ್ನ ಭಾವನೆಗಳನ್ನೆಲ್ಲಾ ನಿಯಂತ್ರಿಸಿಕೊಂಡು, ಅವಳು ಹೇಳಿದಳು: "ನಿಮ್ಮ ಸ್ಥಾನದಲ್ಲಿ ನಾನೇ ಇದ್ದರೂ ಬೇರೇನು ಮಾಡಲು ಸಾಧ್ಯವಿದ್ದಿತು? ಕೋಲಿಯರ ಮೇಲೆ ಯುದ್ಧ ಮಾಡಲು ನಾನು ಖಂಡಿತ ಒಪ್ಪುತ್ತಿರಲಿಲ್ಲ.

೨೭. "ನಿಮ್ಮ ನಿರ್ಣಯ ಸರಿಯಾಗಿದೆ ಮತ್ತು ನನ್ನ ಸಮ್ಮತಿಯಿದೆ, ಸಹಕಾರವೂ ಇದೆ. ನಾನೂ ನಿಮ್ಮೊಂದಿಗೆ ಪರಿವ್ರಾಜಕ ಧರ್ಮವನ್ನು ಸ್ವೀಕರಿಸಬಹುದಾಗಿದ್ದಿತು. ಆದರೆ ರಾಹುಲನನ್ನು ನೋಡಿಕೊಳ್ಳಬೇಕಾಗಿರುವುದರಿಂದ ನಾನು ಹಾಗೆ ಮಾಡಲಾರೆ.

೨೮. "ಪರಿಸ್ಥಿತಿಯೂ ಆ ಹಂತ ಮುಟ್ಟಬಾರದಾಗಿದ್ದಿತು. ನಾವು ದಿಟ್ಟತನದಿಂದ ಧೈರ್ಯವಾಗಿ ಪರಿಸ್ಥಿತಿಯನ್ನು ಎದುರಿಸೋಣ. ನೀವು ನಿಮ್ಮ ತಂದೆತಾಯಿಯರು ಮತ್ತು ಮಗುವಿನ ವಿಚಾರದಲ್ಲಿ ಆತಂಕಪಡಬೇಡಿ. ನನ್ನಲ್ಲಿ ಜೀವವಿರುವವರೆಗೂ ನಾನು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೇನೆ.

೨೯. "ನೀವು ನಿಮಗೆ ಹತ್ತಿರವಾದ ಬಂಧುಬಾಂಧವರನ್ನೆಲ್ಲ ತ್ಯಜಿಸಿ ಪರಿವ್ರಾಜಕ ಧರ್ಮವನ್ನು ಸ್ವೀಕರಿಸುತ್ತಿರುವುದರಿಂದ, ಮಾನವತೆಗೆ ಕ್ಷೇಮವನ್ನುಂಟುಮಾಡುವಂತಹ ಹೊಸ ಜೀವನ-ಪಥವನ್ನು ನೀವು ಕಾಣುವಂತಾಗಲಿ ಎಂದು ಹಾರೈಸುತ್ತೇನೆ."

೩೦. ಸಿದ್ಧಾರ್ಥ ಗೌತಮನು ತುಂಬಾ ಪ್ರಭಾವಿತನಾದನು. ಯಶೋಧರೆಯು ಎಂತಹ ಉದಾರಶೀಲಳು, ಶೌರ್ಯಸಂಪನ್ನಳು, ದೃಢಚಿತ್ತಳು ಎಂಬುದನ್ನು ತಾನು ಹಿಂದೆಂದೂ ಕಾಣದಷ್ಟು ಚೆನ್ನಾಗಿ ಈಗ ಗ್ರಹಿಸಿದನು. ಅವಳನ್ನು ಹೆಂಡತಿಯಾಗಿ ಪಡೆದ ತಾನು ಅದೆಷ್ಟು ಅದೃಷ್ಟಶಾಲಿ. ಈಗ ವಿಧಿ ತಮ್ಮಿಬ್ಬರನ್ನೂ ಬೇರ್ಪಡಿಸುತ್ತಿದೆಯಲ್ಲ ಎಂದುಕೊಂಡು ರಾಹುಲನನ್ನು ಕರೆತರುವಂತೆ ಆಕೆಗೆ ಹೇಳಿದನು. ಪಿತೃವಾತ್ಸಲ್ಯದ ತುಂಬುನೋಟದಿಂದ ಮಗುವನ್ನು ಒಮ್ಮೆ ನೋಡಿ ಅಲ್ಲಿಂದ ಹೊರನಡೆದನು.

## ೧೮. ತನ್ನ ಮನೆಯನ್ನು ಬಿಟ್ಟುಹೊರಟನು

೧. ಕಪಿಲವಸ್ತುವಿನಲ್ಲಿ ತಮ್ಮ ಆಶ್ರಮವನ್ನು ಹೊಂದಿದ್ದ ಭಾರದ್ವಾಜ ಋಷಿಗಳಿಂದ ಪರಿವ್ರಾಜಕ ದೀಕ್ಷೆಯನ್ನು ಕೈಗೊಳ್ಳಲು ಸಿದ್ಧಾರ್ಥನು ಯೋಚಿಸಿದನು. ಅದರಂತೆ ಮರುದಿನ ನಸುಕಿಗೇ ಎದ್ದು ತನ್ನ ಪ್ರೀತಿಯ ಅಶ್ವವಾದ ಕಂಥಕನನ್ನು ಏರಿ ನೆಚ್ಚಿನ ಸೇವಕ ಚನ್ನನ ಜೊತೆಯಲ್ಲಿ ನಡೆದುಬರುತ್ತಿರಲು ಭಾರದ್ವಾಜರ ಆಶ್ರಮಕ್ಕೆ ಹೊರಟನು.

೨. ಅವನು ಆಶ್ರಮವನ್ನು ಸಮೀಪಿಸುತ್ತಿದ್ದಂತೆ ಸ್ತ್ರೀ–ಪುರುಷರನೇಕರು ಆಶ್ರಮದ ಹೆಬ್ಬಾಗಿಲಿನಲ್ಲಿ ಸಾಲುಗಟ್ಟಿನಿಂತು ಹೊಸ ಮದುವಣಿಗನನ್ನು ಸ್ವಾಗತಿಸುವಂತೆ ಇವನನ್ನು ಸ್ವಾಗತಿಸಿದರು.

೩. ಆಶ್ಚರ್ಯಚಕಿತರಾದ ಅವರು ಅವನ ಸಮೀಪ ಬಂದು ಕಮಲದಳದಂತಹ ತಮ್ಮ ಕೈಗಳನ್ನು ಜೋಡಿಸಿ ಭಕ್ತಿಗೌರವಗಳಿಂದ ಅವನಿಗೆ ನಮಿಸಿದರು.

೪. ಭಾವೋದ್ರೇಕದಿಂದ ಮೈಮರೆತ ಆ ಜನರು ಅವನನ್ನು ಸುತ್ತುವರಿದು ನೆಟ್ಟ ದೃಷ್ಟಿಯಿಂದ ಪ್ರೀತಿ ತುಂಬಿದ ಕಣ್ಣುಗಳಿಂದ ನೋಡಿದರು.

೫. ಜನ್ಮತಃ ಆಭರಣ ಶೋಭಿತವೆನ್ನುವಂತೆ ಕಾಂತಿಯುಕ್ತವಾದ ಅವನ ಶರೀರ ಲಾವಣ್ಯವನ್ನು ಗಮನಿಸಿದ ಕೆಲವು ಹೆಂಗಸರು ಇವನನ್ನು ಕಾಮನ ಅವತಾರವೆಂದೇ ಭಾವಿಸಿದರು.

೬. ಮತ್ತೆ ಕೆಲವರು ಅವನ ಸುಕುಮಾರ ಶರೀರವನ್ನು ಮತ್ತು ಅವನ ಗಾಂಭೀರ್ಯವನ್ನು ಕಂಡು ಚಂದ್ರನು ತನ್ನ ಪ್ರಶಾಂತ ಕಿರಣಗಳೊಂದಿಗೆ ಭೂಮಿಗೆ ಇಳಿದುಬಂದಿದ್ದಾನೋ ಎಂದುಕೊಂಡರು.

೭ ಮತ್ತೆ ಕೆಲವರು ಅವನ ಸೌಂದರ್ಯಕ್ಕೆ ಮಾರುಹೋಗಿ, ಅವನನ್ನು ನುಂಗುವಂತೆ ಆಕಳಿಸುತ್ತಾ ಒಬ್ಬರನ್ನೊಬ್ಬರು ನೋಡುತ್ತಾ ಮೆಲ್ಲಗೆ ನಿಟ್ಟುಸಿರುಬಿಟ್ಟರು.

೮. ಹೆಂಗಸರಂತೂ ಬಿಟ್ಟ ಕಣ್ಣು ಬಿಟ್ಟಂತೆ ಅವನನ್ನೇ ದೃಷ್ಟಿಸುತ್ತಾ ನಿಂತರು. ಅವರಿಂದ ಮಾತೇ ಹೊರಡದಾಯಿತು. ನಗು ನಂದಿತು. ಅವನು ಪರಿವ್ರಾಜಕನಾಗುತ್ತಾನೆಂಬುದನ್ನು ತಿಳಿದು ಅವರು ದಿಗ್ಭ್ರಮೆಗೊಂಡು ಅವನನ್ನು ಸುತ್ತುವರಿದು ನಿಂತರು.

೯. ಸಿದ್ಧಾರ್ಥನು ಬಹಳ ಪ್ರಯಾಸಪಟ್ಟು ಆ ಗುಂಪಿನ ನಡುವೆ ದಾರಿ ಬಿಡಿಸಿಕೊಂಡು ಆಶ್ರಮದ್ವಾರವನ್ನು ಪ್ರವೇಶಿಸಿದನು.

೧೦. ತಾನು ಪರಿವ್ರಾಜಕ ಧರ್ಮವನ್ನು ಸ್ವೀಕಾರ ಮಾಡುವ ಸಮಯದಲ್ಲಿ ಶುದ್ಧೋದನ ಮತ್ತು ಪ್ರಜಾಪತಿ ಗೌತಮಿಯರು ಹಾಜರಿರುವುದು ಸಿದ್ಧಾರ್ಥನಿಗೆ ಇಷ್ಟವಿರಲಿಲ್ಲ. ಏಕೆಂದರೆ ಅವರು ದುಃಖದ ಭಾರಕ್ಕೆ ಕುಸಿದುಹೋಗುತ್ತಾರೆಂದು ತಿಳಿದಿದ್ದನು. ಆದರೆ ಅವನಿಗೆ ತಿಳಿಯದಂತೆ ಅವರಿಬ್ಬರೂ ಈ ಮೊದಲೇ ಆಶ್ರಮಕ್ಕೆ ಬಂದು ಸೇರಿದ್ದರು.

೧೧. ಅವನು ಆಶ್ರಮದ ದ್ವಾರವನ್ನು ಪ್ರವೇಶಿಸಿದ ಕೂಡಲೇ ಆ ಜನಸಮೂಹದಲ್ಲಿ ತನ್ನ ತಂದೆ ತಾಯಿಯರನ್ನು ಸಿದ್ಧಾರ್ಥನು ಕಂಡನು.

೧೨. ಅವನು ತನ್ನ ತಂದೆತಾಯಿಯರನ್ನು ಕಂಡಕೂಡಲೇ ಅವರ ಬಳಿಗೆ ಹೋಗಿ ಅವರ ಆಶೀರ್ವಾದವನ್ನು ಬೇಡಿದನು. ಅವರು ಅದೆಷ್ಟು ಭಾವಪರವಶರಾದರೆಂದರೆ ಅವರ ಬಾಯಿಯಿಂದ ಮಾತೇ ಹೊರಡದಾಯಿತು. ಅವರು ಅವನನ್ನು ತಬ್ಬಿ ಅತ್ತುಅತ್ತೂ ಅವನನ್ನು ಕಣ್ಣೀರಿನಲ್ಲಿಯೇ ಮೀಯುವಂತೆ ಮಾಡಿದರು.

೧೩. ಚನ್ನನು ಕಂಥಕನನ್ನು ಆಶ್ರಮದ ಮರವೊಂದಕ್ಕೆ ಕಟ್ಟಿ ಮೌನವಾಗಿ ನಿಂತಿದ್ದನು. ಶುದ್ಧೋದನ ಮತ್ತು ಪ್ರಜಾಪತಿಯರು ಕಣ್ಣೀರಿಡುವುದನ್ನು ಕಂಡು ಅವನೂ ಭಾವಪರವಶನಾಗಿ ಅಳತೊಡಗಿದನು.

೧೪. ಬಹಳ ಕಷ್ಟಪಟ್ಟು ತನ್ನ ತಂದೆತಾಯಿಯರಿಂದ ಬಿಡಿಸಿಕೊಂಡು ಬಂದ ಸಿದ್ಧಾರ್ಥನು ಚನ್ನನಿದ್ದ ಸ್ಥಳಕ್ಕೆ ಬಂದನು. ತಾನು ಧರಿಸಿದ್ದ ಅರಮನೆಯ ವೇಷಭೂಷಣಗಳನ್ನು ಕಳಚಿ ಚನ್ನನಿಗೆ ಕೊಟ್ಟು ಅವುಗಳನ್ನು ಅರಮನೆಗೆ ತಲುಪಿಸಲು ಸೂಚಿಸಿದನು.

೧೫. ನಂತರ ಪರಿವ್ರಾಜಕ ಧರ್ಮಕ್ಕೆ ತಕ್ಕಂತೆ ಮುಂಡನ ಮಾಡಿಸಿಕೊಂಡನು. ಅವನ ಸೋದರಸಂಬಂಧಿ

ಮಹಾನಾಮನು ಪರಿವ್ರಾಜಕನಿಗೊಪ್ಪುವ ಉಡುಪು ಮತ್ತು ಭಿಕ್ಷಾಪಾತ್ರೆಯನ್ನು ತಂದಿದ್ದನು. ಸಿದ್ಧಾರ್ಥನು ಆ ಉಡುಪನ್ನು ಧರಿಸಿ ಭಿಕ್ಷಾಪಾತ್ರೆಯನ್ನು ಕೈಯಲ್ಲಿ ಹಿಡಿದನು.

೧೬. ಈ ರೀತಿ ಪರಿವ್ರಾಜಕನಿಗೆ ಬೇಕಾದ ಎಲ್ಲ ಸಿದ್ಧತೆಗಳೊಂದಿಗೆ, ಭಾರದ್ವಾಜದ ಬಳಿ ಹೋಗಿ ತನಗೆ ದೀಕ್ಷೆಯನ್ನೀಯಬೇಕೆಂದು ಅವರಲ್ಲಿ ಪ್ರಾರ್ಥಿಸಿದನು.

೧೭. ಭಾರದ್ವಾಜ ಮುನಿಗಳು ತಮ್ಮ ಶಿಷ್ಯರೊಂದಿಗೆ ಸೇರಿ ದೀಕ್ಷಾವಿಧಿಗಳೆಲ್ಲವನ್ನು ನೆರವೇರಿಸಿ, ಸಿದ್ಧಾರ್ಥ ಗೌತಮನು ಪರಿವ್ರಾಜಕನಾದನು ಎಂದು ಪ್ರಕಟಿಸಿದರು.

೧೮. ಸಂಘಕ್ಕೆ ತಾನು ಕೊಟ್ಟ ಎರಡು ವಚನಗಳಂತೆ ಸಿದ್ಧಾರ್ಥನು ಪರಿವ್ರಾಜಕನಾದ ಕೂಡಲೇ, ತಡಮಾಡದೆ ಶಾಕ್ಯರ ಸಾಮ್ರಾಜ್ಯದಿಂದ ಹೊರನಡೆಯಬೇಕೆಂಬುದನ್ನು ನೆನಪಿಸಿಕೊಂಡು ಪರಿವ್ರಾಜಕ ದೀಕ್ಷೆ ಮುಗಿದ ಕೂಡಲೇ, ತನ್ನ ಪಯಣವನ್ನು ಆರಂಭಿಸಿದನು.

೧೯. ಅಂದು ಆಶ್ರಮದಲ್ಲಿ ಎಂದಿಗಿಂತ ಹೆಚ್ಚು ಜನಸಮೂಹ ನೆರೆದಿದ್ದಿತು. ಏಕೆಂದರೆ ಗೌತಮನು ಪರಿವ್ರಾಜಕನಾಗುವ ಪರಿಸ್ಥಿತಿಗಳು ಅಸಾಧಾರಣವಾಗಿದ್ದವು. ರಾಜಕುಮಾರನು ಆಶ್ರಮದಿಂದ ಹೊರಬಂದಕೂಡಲೇ ಆ ಜನಸಮೂಹ ಅವನನ್ನು ಹಿಂಬಾಲಿಸಿತು.

೨೦. ಅವನು ಕಪಿಲವಸ್ತುವನ್ನು ಬಿಟ್ಟು ಅನೋಮ ನದಿಯ ಕಡೆ ಪ್ರಯಾಣ ಬೆಳೆಸಿದನು. ಅವನು ಹಿಂತಿರುಗಿ ನೋಡಿದಾಗ, ಆ ಜನಸ್ತೋಮ ಅವನನ್ನು ಹಿಂಬಾಲಿಸುತ್ತಿರುವುದನ್ನು ಕಂಡನು.

೨೧. ಅವನು ಅಲ್ಲಿ ಸ್ವಲ್ಪ ನಿಂತು ಆ ಜನರನ್ನು ಉದ್ದೇಶಿಸಿ ಈ ರೀತಿ ಹೇಳಿದನು: "ಸೋದರ ಸೋದರಿಯರೆ, ನೀವು ನನ್ನನ್ನು ಈ ರೀತಿ ಹಿಂಬಾಲಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಶಾಕ್ಯರು ಮತ್ತು ಕೋಲಿಯರ ನಡುವಿನ ಕಲಹವನ್ನು ಪರಿಹರಿಸುವಲ್ಲಿ ನಾನು ಸೋತಿದ್ದೇನೆ. ನೀವು ಇದರ ಪರಿಹಾರಕ್ಕಾಗಿ ಜನಾಭಿಪ್ರಾಯವನ್ನು ಮೂಡಿಸುವಲ್ಲಿ ಸಫಲರಾದರೆ ನೀವು ಯಶಸ್ವಿಯಾಗಬಹುದು. ಆದ್ದರಿಂದ ನೀವು ಒಳ್ಳೆಯವರಂತೆ ಹಿಂತಿರುಗಿ". ಅವನ ಈ ಕರೆಯನ್ನು ಕೇಳಿದ ಆ ಜನಸ್ತೋಮ ನಿಧಾನವಾಗಿ ಹಿಂತಿರುಗತೊಡಗಿತು.

೨೨. ಶುದ್ಧೋದನ ಮತ್ತು ಗೌತಮಿಯರೂ ಸಹ ಅರಮನೆಗೆ ಹಿಂತಿರುಗಿದರು.

೨೩. ಸಿದ್ಧಾರ್ಥನು ತ್ಯಜಿಸಿದ್ದ ಉಡುಪುಗಳನ್ನು ನೋಡಲಾರದೆ ಗೌತಮಿಯು ಕಣ್ಣೀರಿಟ್ಟಳು. ಅವುಗಳನ್ನು ತಾವರೆಕೊಳದಲ್ಲಿ ಎಸೆಯುವಂತೆ ಹೇಳಿದಳು.

೨೪. ಸಿದ್ಧಾರ್ಥ ಗೌತಮನು ಪರಿವ್ರಾಜಕ ಧರ್ಮವನ್ನು ಸ್ವೀಕರಿಸಿದಾಗ ಕೇವಲ ಇಪ್ಪತ್ತೊಂಬತ್ತು ವರ್ಷ ವಯಸ್ಸಾಗಿದ್ದಿತು, ಅಷ್ಟೆ.

೨೫. ಜನ ಅವನನ್ನು ಮೆಚ್ಚಿಕೊಂಡು ನಿಟ್ಟುಸಿರುಬಿಡುತ್ತಾ ಹೀಗೆ ಹೇಳಿದರು: "ಇವನೊಬ್ಬ ಶ್ರೇಷ್ಠ ವಂಶದ ಶಾಕ್ಯ. ಅವನ ತಂದೆತಾಯಿಯರು ಉದಾರಚರಿತರು, ಅವರಲ್ಲೂ ಸಾಕಷ್ಟು ಶ್ರೀಮಂತಿಕೆ ಇದ್ದಿತು. ಯೌವ್ವನದ ಹೊಸತನದಲ್ಲಿದ್ದ ಅವನ ಮೈಮನಸ್ಸು ಸುಶಿಕ್ಷಿತ. ಎಲ್ಲ ಭೋಗ–ಭಾಗ್ಯಗಳನ್ನೂ ಹೊಂದಿದ್ದ ಅವನು, ಜಗತ್ತಿನಲ್ಲಿ ಶಾಂತಿ ಕಾಪಾಡಲು ಹಾಗೂ ಸಹ ಮಾನವನಿಗೆ ಸದ್ಭಾವನೆ ತೋರಲು ಹೋಗಿ ತನ್ನ ಬಂಧುಬಾಂಧವದೊಂದಿಗೆ ಹೋರಾಡಿದನು.

೨೬. ಈ ಶಾಕ್ಯ ಯುವಕ ತನ್ನ ಬಂಧುಬಾಂಧವರ ಮಾತಿಗೆ ಒಪ್ಪದೆ, ಅವರ ವಿರೋಧವನ್ನು ಕಟ್ಟಿಕೊಂಡು, ಸ್ವ–ಇಚ್ಛೆಯಿಂದ, ಶ್ರೀಮಂತಿಕೆಯನ್ನು ತ್ಯಜಿಸಿ ಬಡತನವನ್ನು, ಸೌಕರ್ಯಗಳನ್ನು ಬಿಟ್ಟು ಭಿಕ್ಷೆಯನ್ನು, ಅರಮನೆಯನ್ನು ಬಿಟ್ಟು ಅನಿಕೇತನನಾಗಿ ತನಗೆ ತಾನೇ ಶಿಕ್ಷೆಯನ್ನು ವಿಧಿಸಿಕೊಳ್ಳಲು ಬಯಸಿದವನು.

ತನ್ನವರು ತನ್ನದು ಎಂಬುದು ಯಾವುದೂ ಇಲ್ಲದೆ, ಕೇವಲ ಏಕಾಂಗಿಯಾಗಿ ಬದುಕನ್ನು ಸಾಗಿಸುತ್ತಿದ್ದಾನೆ.

೨೭. ಸ್ವ–ಇಚ್ಛೆಯಿಂದ ಮಾಡಿದ ಮಹಾತ್ಯಾಗ ಅವನದು. ಅವನ ಈ ಮಹಾಶೌರ್ಯದ, ಧೈರ್ಯದ ಕೆಲಸಕ್ಕೆ ಸರಿಸಮನಾದುದು ಜಗತ್ತಿನಲ್ಲಿ ಬೇರೊಂದಿಲ್ಲ. ಅವನನ್ನು ಶಾಕ್ಯಮುನಿ ಅಥವಾ ಶಾಕ್ಯಸಿಂಹ ಎಂದು ಕರೆಯಬೇಕು."

೨೮. ಶಾಕ್ಯ ಕನ್ಯೆಯಾದ ಕಿಸಾಗೋತಮಿ ಹೇಳಿದ ಮಾತು ಅದೆಷ್ಟು ಸತ್ಯ. ಸಿದ್ಧಾರ್ಥ ಗೌತಮನನ್ನು ಕುರಿತು ಅವಳು ಈ ರೀತಿ ಹೇಳಿದಳು: "ಇಂತಹ ಮಗನನ್ನು ಹೆತ್ತ ತಾಯಿ ಪುಣ್ಯವಂತಳು. ಇಂತಹ ಮಗನನ್ನು ಪಡೆದ ತಂದೆ ಪುಣ್ಯಶಾಲಿ. ಇಂತಹ ಗಂಡನ ಕೈಹಿಡಿದ ಹೆಂಡತಿಯೇ ನಿಜಕ್ಕೂ ಧನ್ಯಳು."

## ೧೯. ರಾಜಕುಮಾರ ಮತ್ತು ಅವನ ಸೇವಕ

೧. ಚನ್ನನೂ ಸಹ ಕಂಥಕನೊಂದಿಗೆ ಹಿಂತಿರುಗಿ ಮನೆಗೆ ಹೋಗಬೇಕಾಗಿದ್ದಿತು. ಆದರೆ ಅವನು ಹಿಂದಿರುಗಲು ನಿರಾಕರಿಸಿದನು. ಅವನು ರಾಜಕುಮಾರನನ್ನು ಕಂಥಕನೊಂದಿಗೆ ಅನೋಮ ನದಿಯ ದಡದವರೆಗಾದರೂ ತಲುಪಿಸಿ ಬರುತ್ತೇನೆಂದು ಹಟ ಹಿಡಿದನು. ಅವನ ಹಟಕ್ಕೆ ಮಣಿದ ಗೌತಮನು ಒಪ್ಪಲೇಬೇಕಾಯಿತು.

೨. ಪ್ರಯಾಣವನ್ನು ಮುಂದುವರಿಸಿ ಅವರು ಅನೋಮ ನದಿಯ ದಡವನ್ನು ಮುಟ್ಟಿದರು.

೩. ಆಗ ಚನ್ನನ ಕಡೆ ತಿರುಗಿ ಗೌತಮನು ಹೇಳಿದನು: "ಸನ್ಮಿತ್ರನೇ, ನಿನಗೆ ನನ್ನಲ್ಲಿರುವ ಭಕ್ತಿಯ ಕಾರಣ ನೀನು ಇಲ್ಲಿಯವರೆಗೂ ಅನುಸರಿಸಿ ಬಂದಿದ್ದೀಯ. ನಿನ್ನ ಯಜಮಾನನಲ್ಲಿ ಇಷ್ಟೊಂದು ಪ್ರೀತಿ ವಾತ್ಸಲ್ಯವುಳ್ಳ ನೀನು ನನ್ನನ್ನು ಪೂರ್ಣವಾಗಿ ಗೆದ್ದುಬಿಟ್ಟಿದ್ದೀಯ.

೪. "ನನ್ನ ವಿಚಾರದಲ್ಲಿ ನಿನಗಿರುವ ಉದಾತ್ತ ಭಾವನೆಗಳನ್ನು ನೋಡಿ ನನಗೆ ಸಂತೋಷವಾಗಿದೆ. ಆದರೆ ನಿನಗೆ ಯಾವ ಬಹುಮಾನವನ್ನೂ ಕೊಡುವ ಶಕ್ತಿಯೂ ಈಗ ನನಗಿಲ್ಲ.

೫. "ತಮಗೆ ಸೂಕ್ತ ಬಹುಮಾನ ಕೊಡುವಂತಹವರ ವಿಚಾರದಲ್ಲಿ ಯಾರು ತಾನೆ ಗೌರವಯುತವಾಗಿ ನಡೆದುಕೊಳ್ಳುವುದಿಲ್ಲ? ಆದರೆ ಯಾವ ಮನುಷ್ಯ ಅದೃಷ್ಟಹೀನನಾಗುತ್ತಾನೋ ಅವನ ವಿಚಾರದಲ್ಲಿ ಬಂಧುಗಳೂ ದೂರ ಸರಿಯುತ್ತಾರೆ.

೬. "ತಂದೆಯು ತನ್ನ ಕುಟುಂಬದ ಶ್ರೇಯಸ್ಸಿಗಾಗಿ ತನ್ನ ಮಗನನ್ನು ಲಾಲಿಸಿ ಪಾಲಿಸುತ್ತಾನೆ. ಮಗನು ತನ್ನ ತಂದೆಯನ್ನು ಗೌರವಿಸುವುದು ತನ್ನ ಮುಂದಿನ ಕ್ಷೇಮಕ್ಕಾಗಿ. ಜಗತ್ತಿನಲ್ಲಿ ಮನುಷ್ಯನು ಕರುಣೆ ತೋರಿಸುವುದು ಅನ್ಯರು ತನ್ನ ಬಗ್ಗೆ ಕರುಣೆ ತೋರಲೆಂಬ ನಿರೀಕ್ಷೆಯಿಂದ. ಯಾವ ಉದ್ದೇಶವೂ ಇಲ್ಲದ ನಿಸ್ವಾರ್ಥಿಗಳಾಗಿರುವುದು ಎಲ್ಲಿಯೂ ಕಾಣಸಿಗರು.

೭. "ಆದರೆ ನೀನು ಅದಕ್ಕೆ ಅಪವಾದವಾಗಿದ್ದೀಯ. ಇನ್ನು ನೀನು ಈ ಕುದುರೆಯೊಂದಿಗೆ ಹಿಂತಿರುಗು.

೮. "ಈಗಲೂ ಪ್ರೀತಿಯ ವಿಶ್ವಾಸದಿಂದ ಹರ್ಷಚಿತ್ತನಾಗಿರು. ರಾಜನಿಗೆ ತನ್ನ ನೋವನ್ನು ಹಂಚಿಕೊಳ್ಳುವವರು ಬೇಕಾಗಿದೆ.

೯. "ನಾನು ಸಿಟ್ಟಿನಿಂದಾಗಲಿ ಅಥವಾ ಅವರ ಪ್ರೇಮದ ಅಭಾವದಿಂದಾಗಲಿ ಇಲ್ಲವೇ ಸ್ವರ್ಗದ

ಬಯಕೆಯಿಂದಾಗಲಿ ಅವರನ್ನು ಬಿಟ್ಟುಬಂದಿಲ್ಲ ಎಂಬುದನ್ನು ನೀನು ರಾಜನಿಗೆ ತಿಳಿಸು.

೧೦. "ಮನೆಯನ್ನು ತ್ಯಜಿಸಿ ಬಂದಿರುವ ನನಗಾಗಿ ಅವರು ದುಃಖಿಸುವುದು ಇನ್ನು ಸಾಕು; ಜೊತೆಗೂಡಿ ಅದೆಷ್ಟೇ ಕಾಲ ಬದುಕಿದ್ದರೂ, ಒಂದಲ್ಲ ಒಂದು ದಿನ ಬೇರ್ಪಡಲೇಬೇಕಲ್ಲವೆ?

೧೧. "ಅಗಲುವಿಕೆಯು ನಿಶ್ಚಿತ ಎಂದಾದಮೇಲೆ, ಪ್ರೀತಿಪಾತ್ರರಾದವರಿಂದ ಆಗಾಗ್ಗೆ ಬೇರ್ಪಡದಿರಲು ಸಾಧ್ಯವೇ?

೧೨. "ಒಬ್ಬ ಮನುಷ್ಯನು ಸತ್ತಮೇಲೆ ಅವನ ಆಸ್ತಿ ಐಶ್ವರ್ಯಕ್ಕೆ ಅನೇಕ ಜನ ಹಕ್ಕುದಾರರು ಬರುತ್ತಾರೆ. ಆದರೆ ಅವನ ಶ್ರೇಷ್ಠ ಗುಣಧರ್ಮಗಳಿಗೆ ಉತ್ತರಾಧಿಕಾರಿಗಳು ಸಿಕ್ಕುವುದು ಬಹುಕಷ್ಟ; ಇಲ್ಲವೇ ಇಲ್ಲ ಎಂದು ಹೇಳಿದರೂ ತಪ್ಪಲ್ಲ.

೧೩. "ನನ್ನ ತಂದೆಯನ್ನ ಈಗ ಯಾರಾದರೂ ನೋಡಿಕೊಳ್ಳಬೇಕಾಗಿದೆ. 'ಅವನು ಅಕಾಲದಲ್ಲಿ ಬಿಟ್ಟುಹೋದ' ಎನ್ನಬಹುದು ಅವರು. ಆದರೆ ಕರ್ತವ್ಯಕ್ಕೆ ಕಾಲ ಅಕಾಲ ಎಂಬುದಿಲ್ಲ.

೧೪. "ಪ್ರಿಯಮಿತ್ರನೇ, ನೀನು ನನ್ನ ತಂದೆಯನ್ನು ಇಂಥ ಮಾತುಗಳಿಂದ ಸಂತೈಸು; ನೀನು ಎಲ್ಲ ರೀತಿಯಿಂದಲೂ ಪ್ರಯತ್ನಿಸಿ ಅವರು ನನ್ನನ್ನು ನೆನಪಿಸಿಕೊಳ್ಳದಂತೆ ಮಾಡು.

೧೫. "ನನ್ನ ತಾಯಿಯು ಬಹಳ ಶ್ರೇಷ್ಠಳು. ಮಾತಿನಿಂದ ವಿವರಿಸಲಾರದಷ್ಟು ಶ್ರೇಷ್ಠಳು. ಅಂತಹ ತಾಯಿಯ ವಾತ್ಸಲ್ಯಕ್ಕೆ ನಾನು ಖಂಡಿತ ಅನರ್ಹ ಎಂಬುದನ್ನು ಅವಳಿಗೆ ಮನವರಿಕೆಯಾಗುವಂತೆ ನೀನು ಪದೇಪದೇ ಅವಳಿಗೆ ಹೇಳು."

೧೬. ಇದೆಲ್ಲವನ್ನು ಕೇಳಿದ ಮೇಲೆ ದುಃಖದಿಂದ ಗದ್ಗದಿತನಾದ ಚನ್ನನು ಕೈಮುಗಿದು ಈ ರೀತಿ ಹೇಳಿದನು:

೧೭. "ಓ ಧಣಿಯೇ, ನೀವು ನಿಮ್ಮ ಪ್ರೀತಿಪಾತ್ರರಾದವರಿಗೆ ಉಂಟುಮಾಡುತ್ತಿರುವ ವೇದನೆಯನ್ನು ನೋಡಿ ನನ್ನ ಮನಸ್ಸು ಆಳವಾದ ಕೆಸರಿನಲ್ಲಿ ಹೂತುಹೋಗುತ್ತಿರುವ ಆನೆಯಂತಾಗಿದೆ.

೧೮. "ನಿಮ್ಮ ಈ ದೃಢಸಂಕಲ್ಪವನ್ನು ಕಂಡು ಉಕ್ಕಿನ ಹೃದಯದವರಿಗೂ ಕಣ್ಣೀರು ಮಿಡಿಯುತ್ತದೆ. ಇನ್ನು ಪ್ರೀತಿಯಿಂದ ಮಿಡಿಯುತ್ತಿರುವ ಹೃದಯದವರ ಗತಿಯೇನು?

೧೯. "ಅರಮನೆಯ ಸುಪ್ಪತ್ತಿಗೆಯ ಮೇಲೆ ಮಲಗಬೇಕಾದ ಈ ಕೋಮಲ ಶರೀರವೆಲ್ಲಿ! ಒರಟು ದರ್ಜೆಯ ಹುಲ್ಲಿನಿಂದ ಕೂಡಿದ ಈ ಮುಕ್ತ ಅರಣವೆಲ್ಲಿ!

೨೦. "ಓ ರಾಜಕುಮಾರನೇ, ನಿನ್ನ ಈ ದೃಢಸಂಕಲ್ಪವನ್ನು ಕಂಡಮೇಲೆ, ಯಾವ ಮನಸ್ಸಿನೊಂದಿಗೆ ದುಃಖದಲ್ಲಿ ಮುಳುಗಿಹೋಗಿರುವ ಕಪಿಲವಸ್ತುವಿಗೆ ಈ ಕುದುರೆಯೊಂದಿಗೆ ಹಿಂತಿರುಗಲಿ?

೨೧. "ತನ್ನ ಮಗನ ವಿಚಾರದಲ್ಲಿ ಅಷ್ಟೊಂದು ಮಮತೆಯುಳ್ಳ ವಾತ್ಸಲ್ಯಮಯಿಯಾದ, ವೃದ್ಧ ರಾಜನನ್ನು ನೀನು ಒಬ್ಬ ನಾಸ್ತಿಕನು ಧರ್ಮವನ್ನು ನಿರಾಕರಿಸುವಂತೆ ಖಂಡಿತ ನಿರಾಕರಿಸಬಾರದಿತ್ತು.

೨೨. "ಮತ್ತು ನಿನ್ನ ಬಲತಾಯಿ ನಿನ್ನ ಬೆಳವಣಿಗೆಯ ಭಾರವನ್ನೆಲ್ಲ ಹೊತ್ತವಳು, ಅವಳನ್ನು ನೀನೊಬ್ಬ ಕೃತಘ್ನನಂತೆ ಮರೆಯುತ್ತಿಲ್ಲವಷ್ಟೆ!

೨೩. "ಪ್ರಖ್ಯಾತ ವಂಶದಲ್ಲಿ ಹುಟ್ಟಿ, ಸಕಲ ಗುಣಸಂಪನ್ನೆಯೆನಿಸಿ, ಪತಿಪರಾಯಣೆಯಾಗಿದ್ದು, ಏಕಮಾತ್ರ ಕುವರನ ತಾಯಿಯಾದ ನಿನ್ನ ಧರ್ಮಪತ್ನಿಯನ್ನು ನೀನು ತ್ಯಜಿಸುತ್ತಿಲ್ಲವಷ್ಟೆ?

೨೪. "ಧರ್ಮ ಮತ್ತು ನೀತಿಯ ಹಿರಿಮೆಯನ್ನು ಬಲ್ಲ ನೀನು ಯಶೋಧರೆಯ ಕಂದನಾದ, ಎಲ್ಲರ ಮೆಚ್ಚುಗೆಯ ಮಗುವೆನಿಸಿದ ರಾಹುಲನನ್ನು, ನೀತಿಗೆಟ್ಟ ದುಂದುಗಾರನೊಬ್ಬನು, ಅತುಲ ಐಶ್ವರ್ಯವನ್ನು ತೊರೆದುಹೋಗುವಂತೆ ಹೋಗುವುದು ಸರಿಯೆ?

೨೫. "ಓ ಸ್ವಾಮಿಯೆ, ನೀನು ನಿನ್ನ ಬಂಧುವರ್ಗ ಮತ್ತು ರಾಜ್ಯವೈಭವ ತೊರೆದುಹೋಗಲು ದೃಢಸಂಕಲ್ಪ ಮಾಡಿರಬಹುದು, ಆದರೆ ನಿನ್ನ ಪದಕಮಲವನ್ನು ಆಶ್ರಯಿಸಿರುವ ನನ್ನನ್ನು, ಈ ರೀತಿ ತೊರೆದು ಹೋಗುವುದು ನಿನಗೆ ಸಮ್ಮತವೇ?

೨೬. "ನಿನ್ನನ್ನು ಈ ಕಾಡಿನಲ್ಲಿ ಬಿಟ್ಟು, ಈ ಹೃದಯದ ಬೇಗೆಯನ್ನು ಹೊತ್ತು ನಾನು ನಗರಕ್ಕೆ ಹೇಗೆ ಹಿಂತಿರುಗಲಿ?

೨೭. "ನಾನು ನಿನ್ನನ್ನು ಬಿಟ್ಟು ಹಿಂತಿರುಗಿದರೆ ನಿನ್ನ ತಂದೆ ನನ್ನನ್ನು ಏನೆಂದು ಕರೆದಾರು, ಮತ್ತು ನಿನ್ನ ಹೆಂಡತಿಗೆ ಯಾವ ಶುಭವಾರ್ತೆಯನ್ನು ಹೋಗಿ ಹೇಳಲಿ?

೨೮. "ನೀನು ಹೇಳುತ್ತಿರುವಂತೆ 'ರಾಜನಿಗೆ ತಕ್ಕ ಮಗನಲ್ಲ ಎಂದು ಎಂಬ ಮಾತನ್ನು ತಾಯಿ ಮತ್ತೆ ಮತ್ತೆ ಹೇಳು' ಯಾರಾದರೂ ನಂಬುತ್ತಾರೆಯೆ?" ಮುಂದುವರಿದು, ಚನ್ನನು ಹೇಳಿದನು: "ನಾನು ನಿರ್ಲಜ್ಜ ಹೃದಯನಾಗಿ ನಿನ್ನ ವಿಚಾರದಲ್ಲಿ ಇಲ್ಲಸಲ್ಲದ್ದನ್ನೆಲ್ಲಾ ಹೇಳಿದರೂ ಸಹ ನಿನ್ನ ತಂದೆ ಎಂದಿಗೂ ನಂಬುವುದಿಲ್ಲ.

೨೯. "ಸದಾ ಅನುಕಂಪ ಹೃದಯಿಯಾದ, ದಯಾಮಯಿಯಾದ ಯಾಕೆ ನೀನು ನಿನ್ನ ಪ್ರೀತಿಪಾತ್ರರಾದ ಎಲ್ಲರ ಪ್ರೀತಿಯನ್ನು ನಿರಾಕರಿಸುವುದು ನಿನಗೆ ಶೋಭಿಸುವುದಿಲ್ಲ; ನನ್ನ ಮೇಲೆ ಕರುಣೆಯಿಂದಾದರೂ ನೀನು ಹಿಂತಿರುಗಿ ನಡೆ."

೩೦. ಚನ್ನನ ನೊಂದ ಈ ನುಡಿಗಳನ್ನು ಕೇಳಿದ ಗೌತಮನು ಅತ್ಯಂತ ಕರುಣೆಯಿಂದ ಚನ್ನನಿಗೆ ಈ ರೀತಿ ಹೇಳಿದನು:

೩೧. "ನಿನ್ನಿಂದ ನಾನು ದೂರ ಹೋಗುತ್ತಿದ್ದೇನೆಂಬ ಭಾವನೆಯನ್ನು ದೂರಮಾಡು ಮಿತ್ರನೆ; ಅನೇಕ ಜನ್ಮಾಂತರಗಳಿಗೆ ಸಿಕ್ಕಿದ ಈ ಭವದ ಬದಲಾವಣೆ ಬದುಕಿನಲ್ಲಿ ಅನಿವಾರ್ಯ.

೩೨. "ವಾತ್ಸಲ್ಯಕ್ಕೆ ಸಿಕ್ಕಿ ನಿಮ್ಮಂತಹ ಬಂಧುಬಾಂಧವರಿಂದ ಈಗ ಬೇರೆಯಾಗದಿದ್ದರೂ, ಮುಂದೆ ಸಾವು ಅನಿವಾರ್ಯವಾಗಿ ನಮ್ಮಗಳನ್ನು ಬೇರ್ಪಡಿಸುತ್ತದೆ.

೩೩. "ನನ್ನನ್ನು ಅತ್ಯಂತ ನೋವಿನಿಂದ ಹೆತ್ತ ನನ್ನ ಆ ತಾಯಿ ಈಗ ನನಗೆ ಏನಾಗಿದ್ದಾಳೆ? ನಾನು ಅವಳಿಗೆ ಏನಾಗಿದ್ದೇನೆ?

೩೪. "ಪಕ್ಷಿಗಳು ತಾವು ಕಟ್ಟಿದ ಗೂಡಿನಲ್ಲಿ ಪರಸ್ಪರ ಸಂಧಿಸಿ, ಬೆಳಗಾದಾಗ ಬೇರ್ಪಟ್ಟು ಒಂದನ್ನೊಂದು ತೊರೆದುಹೋಗುವಂತೆ, ಜೊತೆಗೂಡಿದ ಜೀವಿಗಳೆಲ್ಲ ಒಂದಲ್ಲ ಒಂದು ದಿನ ಬೇರ್ಪಡಲೇಬೇಕು.

೩೫. "ಮೋಡಗಳು ಆಕಾಶದಲ್ಲಿ ಸಂಧಿಸಿ, ಗಾಳಿ ಬಂದಾಗ ಚದುರಿಹೋಗುವಂತೆ ಜೀವಿಗಳೂ ಒಮ್ಮೆ ಜೊತೆಗೂಡಿ ನಂತರ ಚದುರುತ್ತವೆ.

೩೬. "ಈ ಜಗತ್ತಿನಲ್ಲಿ ಪ್ರತಿಯೊಂದೂ ಮತ್ತೊಂದರ ಆಶಾಭಂಗ ಮಾಡಿ, ಬೇರ್ಪಟ್ಟು ಹೋಗುತ್ತಿರುವುದರಿಂದ, ಜೊತೆಗೂಡಿದಾಗ ನಾವು ಯಾವುದನ್ನೂ ನಮ್ಮದೆಂದು ಭ್ರಮಿಸಬಾರದು. ಅದರಿಂದ ತುಂಬ ದುಃಖವಾಗುತ್ತದೆ.

೩೭. "ಬದುಕಿನ ನಿಜಸ್ಥಿತಿ ಈ ರೀತಿ ಇರುವಾಗ, ಸನ್ಮಿತ್ರನೆ, ಇನ್ನು ದುಃಖಿಸದೆ ಹಿಂದಿರುಗುವುದು ಒಳ್ಳೆಯದು; ನಿನ್ನ ಈ ಪ್ರೇಮದ ಸೆಳೆತ ಇನ್ನೂ ಉಳಿದೇ ಇರುವುದಾದರೆ ಸದ್ಯಕ್ಕೆ ನೀನು ಹಿಂದಿರುಗಿ ಹೋಗಿ ಮತ್ತೊಮ್ಮೆ ಯಾವಾಗಲಾದರೂ ಬಾ.

೩೮. "ಇನ್ನು ನನ್ನನ್ನು ನಿಂದಿಸದೆ ಹಿಂತಿರುಗಿ ಹೋಗಿ, ಕಪಿಲವಸ್ತುವಿನ ಜನರಿಗೆ 'ಅವನ ಕೊನೆಯ

ನಿರ್ಣಯವನ್ನು ತಿಳಿದು ಅವನ ವಿಚಾರದಲ್ಲಿರುವ ನಿಮ್ಮ ವಾತ್ಸಲ್ಯವನ್ನು ಮರೆತುಬಿಡಿ' ಎಂಬುದಾಗಿ ಹೇಳು."

೩೯. ಯಜಮಾನ ಮತ್ತು ಸೇವಕನ ನಡುವಿನ ಈ ಸಂವಾದವನ್ನ ಕೇಳುತ್ತಿದ್ದ ಆ ಶ್ರೇಷ್ಠ ಜಾತಿಯ ಕುದುರೆ ಕಂಥಕನು ಗೌತಮನ ಪಾದವನ್ನು ನೆಕ್ಕುತ್ತಾ ದುಃಖದ ಕಣ್ಣೀರು ಸುರಿಸಿತು.

೪೦. ತೆಳುವಾದ ಚರ್ಮದಿಂದ ರೂಪುಗೊಂಡ ಮೃದು ಹಸ್ತದ ಮೇಲೆ ಸ್ವಸ್ತಿಕದ ಶುಭ ಚಿಹ್ನೆಯನ್ನು ಪಡೆದಿದ್ದ ಗೌತಮನು ತನ್ನ ಕೈಬೆರಳುಗಳಿಂದ ಕುದುರೆಯ ಮೈದಡವುತ್ತಾ ಸ್ನೇಹಿತನನ್ನು ಸಂಬೋಧಿಸುವಂತೆ ಕುದುರೆಗೆ ಹೇಳಿದನು:

೪೧. "ಕಂಥಕನೇ, ಕಣ್ಣೀರಿಡಬೇಡ, ಸೈರಿಸಿಕೋ, ನಿನ್ನ ಶ್ರಮಕ್ಕೂ ತಕ್ಕ ಪ್ರತಿಫಲ ದೊರೆಯಲಿದೆ."

೪೨. ಇನ್ನು ತಾನು ಅವನಿಂದ ಹೊರಡುವ ಕಾಲ ಸಮೀಪಿಸಿತೆಂದರಿತ ಚನ್ನನು ಕಾಶಾಯಧಾರಿಯಾದ ಗೌತಮನಿಗೆ ತನ್ನ ಭಕ್ತಿಯ ಪ್ರಣಾಮಗಳನ್ನರ್ಪಿಸಿದನು.

೪೩. ನಂತರ ಚನ್ನ ಮತ್ತು ಕಂಥಕರಿಂದ ಬೀಳ್ಕೊಂಡ ಗೌತಮನು ತನ್ನ ದಾರಿಯಲ್ಲಿ ತಾನು ಹೊರಟನು.

೪೪. ತನ್ನ ಒಡೆಯನು ರಾಜ್ಯಕೋಶಗಳೆಲ್ಲವನ್ನೂ ತೊರೆದು ಕಾಷಾಯಧಾರಿಯಾಗಿ, ವೈರಾಗ್ಯ ಸಾಮ್ರಾಜ್ಯವನ್ನು ಪ್ರವೇಶಿಸಿದ್ದನ್ನು ಕಂಡ ಸೇವಕನು, ತನ್ನ ಕೈಗಳನ್ನು ಮೇಲಕ್ಕೆತ್ತಿ ತೀವ್ರವಾಗಿ ರೋದಿಸುತ್ತಾ ನೆಲಕ್ಕುರುಳಿದನು.

೪೫. ಹಿಂತಿರುಗಿ ನೋಡುತ್ತಾ, ಗಟ್ಟಿಯಾಗಿ ಅಳುತ್ತಾ, ತನ್ನ ಕೈಗಳಿಂದ ಕಂಥಕನನ್ನು ತಬ್ಬಿಕೊಂಡು, ಅಸಹಾಯಕನಾಗಿ ಹಲುಬುತ್ತಾ ಪ್ರಯಾಣವನ್ನು ಆರಂಭಿಸಿದನು.

೪೬. ದಾರಿಯುದ್ದಕ್ಕೂ ಚನ್ನನು ಯೋಚಿಸುತ್ತಾ ಕಣ್ಣೀರಿಡುತ್ತಾ, ಎಡವುತ್ತಾ, ಬೀಳುತ್ತಾ, ತನ್ನ ವ್ಯಾಮೋಹಕ್ಕಾಗಿ ತಾನೇ ನಿಟ್ಟುಸಿರಿಡುತ್ತಾ ರಸ್ತೆಯಲ್ಲಿ ಏನೆಲ್ಲವನ್ನು ಮಾಡುತ್ತಾ ತಾನು ಏನು ಮಾಡುತ್ತಿದ್ದೇನೆಂಬುದನ್ನು ಅರಿಯದೆ ದಾರಿ ಸವೆಸಿದನು.

## ೨೦. ಚನ್ನನು ಹಿಂತಿರುಗಿದುದು

೧. ಗೌತಮನು ಅರಣ್ಯ ಪ್ರವೇಶಿಸಿದ ಮೇಲೆ ಈ ರೀತಿ ಚನ್ನನು ದುಃಖಾತಿಶಯದಿಂದ ನೊಂದ ತನ್ನ ಮನಸ್ಸನ್ನು ನಾನಾ ರೀತಿಯಿಂದ ಶಮನಗೊಳಿಸಲು ರಸ್ತೆಯ ವಿವಿಧ ಬಗೆಗಳಲ್ಲಿ ಯತ್ನಿಸಿದನು.

೨. ಚನ್ನನು ಕಂಥಕನೊಂದಿಗೆ ಕೇವಲ ಒಂದು ದಿನದಲ್ಲಿ ಪ್ರಯಾಣ ಮಾಡಬಹುದಾದ ದೂರವನ್ನು ತನ್ನ ಒಡೆಯನ ನೋವಿನ ಭಾರವನ್ನು ಹೊತ್ತ ಮನಸ್ಸಿನಿಂದಾಗಿ ಎಂಟು ದಿನದವರೆಗೂ ನಡೆದೂ ನಡೆಯದಂತೆ ಸವೆಸಿದನು.

೩. ಕಂಥಕನು ಧೈರ್ಯವಾಗಿ ನಡೆದನಾದರೂ, ತನ್ನೆಲ್ಲಾ ಶಕ್ತಿಯನ್ನು ನೀಗಿಕೊಂಡವನಾಗಿ ಪ್ರಯಾಸದಿಂದ ಹೆಜ್ಜೆ ಇಡುತ್ತಿದ್ದನು; ಮೈತುಂಬ ಒಡವೆಗಳ ಶೃಂಗಾರ ಕಂಥಕನಿಗಿದ್ದರೂ ತನ್ನ ಯಜಮಾನನಿಲ್ಲದ ಕಾರಣ ಸೌಂದರ್ಯಹೀನನಂತಾಗಿದ್ದನು.

೪. ತನ್ನ ಯಜಮಾನನು ಹೋದ ದಾರಿಯ ಕಡೆ ಪದೇಪದೇ ಹಿಂತಿರುಗಿ ನೋಡುತ್ತಾ ಆ ಮೂಕಪ್ರಾಣಿಯು ದುಃಖದ ಧ್ವನಿಯಿಂದ ಹಸಿವು-ತೃಷೆಗಳನ್ನು ಮರೆತು ಮೊದಲಿನಂತೆ, ಹುಲ್ಲು-ನೀರನ್ನು ಮುಟ್ಟದೆ ದಾರಿ ಸಾಗುತ್ತಿದ್ದಿತು.

೫. ಕೊನೆಗೂ ಅವರಿಬ್ಬರೂ ಗೌತಮನಿಲ್ಲದೆ ಶೂನ್ಯಗೊಂಡಿದ್ದ ಕಪಿಲವಸ್ತುವನ್ನು ತಲುಪಿದರು. ಅವರ ದೇಹ ಮಾತ್ರ ನಗರವನ್ನು ತಲುಪಿತ್ತು; ಆತ್ಮವಲ್ಲ.

೬. ಹೂಗಳಿಂದ ತುಂಬಿದ್ದ ಮರಗಿಡಗಳು, ಕಮಲದಿಂದ ಆವೃತವಾದ ಕೊಳಗಳು ನಗರವನ್ನು ತುಂಬಿದ್ದರೂ ಜನಗಳು ಮಾತ್ರ ದುಃಖಸಾಗರದಲ್ಲಿ ಮುಳುಗಿಹೋಗಿದ್ದರು.

೭. ಇವರಿಬ್ಬರೂ ಕಾಂತಿಹೀನವಾಗಿ, ಕಣ್ಣೀರಿನಿಂದ ನಿಸ್ತೇಜವಾದ ಕಣ್ಣುಗಳಿಂದ ನಗರವನ್ನು ಪ್ರವೇಶಿಸಿದ್ದನ್ನು ಕಂಡು ಜನ ಮತ್ತಷ್ಟು ದುಃಖಿತರಾದರು.

೮. ಶಾಕ್ಯವಂಶದ ಹೆಮ್ಮೆಯ ಕುಮಾರನಾದ ಗೌತಮನನ್ನು ಮರಳಿ ಕರೆತರದೆ ಬರಿಗೈಯಲ್ಲಿ ಬಂದ ಇವರನ್ನು ಕಂಡು ನಗರದ ಜನರೆಲ್ಲರೂ ಮತ್ತೊಮ್ಮೆ ರೋದಿಸಿದರು.

೯. ಕುಪಿತಗೊಂಡ ಜನ ಚನ್ನನನ್ನು ರಸ್ತೆಯಲ್ಲಿ ಹಿಂಬಾಲಿಸುತ್ತಾ, ಕಣ್ಣೀರಿಡುತ್ತಾ, ಅವನನ್ನು ಕೇಳಿದರು: "ರಾಜವಂಶದ ಸೌಭಾಗ್ಯದಂತಿದ್ದ ಆ ನಮ್ಮ ರಾಜಕುಮಾರನೆಲ್ಲಿ?"

೧೦. "ರಾಜಕುಮಾರನಿಲ್ಲದ ಈ ನಗರ ಒಂದು ಅರಣ್ಯಸಮಾನ ಮತ್ತು ಈಗ ಅವನಿರುವ ಆ ಅರಣ್ಯವೇ ನಗರ; ಅವನಿಲ್ಲದ ಈ ನಗರದಲ್ಲಿ ನಮಗೆ ಯಾವ ಆಕರ್ಷಣೆಯೂ ಉಳಿದಿಲ್ಲ."

೧೧. "ರಾಜಕುಮಾರ ಹಿಂತಿರುಗಿ ಬಂದ" ಎಂದು ಸ್ತ್ರೀಯರು ಕಿಟಕಿಗಳಲ್ಲಿ ಸಾಲುಗಟ್ಟಿ ನಿಂತರು. ಕುದುರೆಯ ಬೆನ್ನು ಖಾಲಿ ಇದ್ದುದನ್ನು ನೋಡಿ, ಕಿಟಕಿಗಳನ್ನು ಮುಚ್ಚಿ, ಗಟ್ಟಿಯಾಗಿ ಅಳತೊಡಗಿದರು.

## ೨೧. ದುಃಖದಲ್ಲಿ ಮುಳುಗಿದ ಕುಟುಂಬ

೧. ಗೌತಮನನ್ನು ಚನ್ನನು ಹೇಗಾದರೂ ಒಪ್ಪಿಸಿ ಕರೆತರಬಹುದೆಂದು ನಂಬಿ, ಅವನ ನಿರೀಕ್ಷೆಯಲ್ಲಿದ್ದ ಶುದ್ಧೋದನನ ಕುಟುಂಬ ತುದಿಗಾಲಿನಲ್ಲಿ ನಿಂತು ಅವನಿಗಾಗಿ ಕಾಯುತ್ತಿತ್ತು.

೨. ಕಂಥಕನು ಅರಮನೆಯ ಕುದುರೆಯ ಲಾಯವನ್ನು ಹೊಕ್ಕಮೇಲೆ ತನ್ನ ನೋವು ಅರಮನೆಗೆಲ್ಲ ಕೇಳಿಸುವಂತೆ ಜೋರಾಗಿ ಕೆನೆಯಿತು.

೩. ರಾಜನ ಅಂತಃಪುರದ ಸಮೀಪವಿದ್ದ ಜನ ಇದನ್ನು ಕೇಳಿ "ಕಂಥಕನು ಕೆನೆಯುವುದನ್ನು ಕೇಳಿದರೆ ರಾಜಕುಮಾರನು ಹಿಂತಿರುಗಿರುವಂತಿದೆ'' ಎಂದು ತಮ್ಮತಮ್ಮಲ್ಲಿಯೇ ಅಂದುಕೊಂಡರು.

೪. ದುಃಖದ ಭಾರದಿಂದ ಮೂರ್ಛೆಹೋಗಿದ್ದ ಹೆಂಗಸರು ಇದನ್ನು ಕೇಳಿ ಎಚ್ಚೆತ್ತು ರಾಜಕುಮಾರನನ್ನು ಕಾಣುತ್ತೇವೆಂಬ ಸಂತೋಷದಿಂದ ಅರಮನೆಯಿಂದ ಹೊರಕ್ಕೆ ಓಡಿಬಂದರು. ಆದರೆ ರಾಜಕುಮಾರನಿಲ್ಲದೆ ನಿಂತಿದ್ದ ಕಂಥಕನನ್ನು ಕಂಡು ಅವರು ಮತ್ತಷ್ಟು ನಿರಾಶರಾದರು.

೫. ತನ್ನ ಸಂಯಮವನ್ನೆಲ್ಲ ಕಳೆದುಕೊಂಡ ಗೌತಮಿಯು ಮತ್ತೊಮ್ಮೆ ಮೂರ್ಛೆಗೊಂಡು ಚೇತರಿಸಿಕೊಳ್ಳುತ್ತಾ ಹೀಗೆ ಹೇಳಿದಳು:

೬. "ನಿಡಿದಾದ ತೋಳುಗಳುಳ್ಳ, ಸಿಂಹಸದೃಶವಾದ ನಿಲುವುಳ್ಳ, ವೃಷಭ ನೇತ್ರನೂ, ಸುವರ್ಣದಂತೆ ಪ್ರಕಾಶಮಾನನೂ, ವಿಶಾಲವಾದ ವಕ್ಷಸ್ಥಳವನ್ನೂ ಪಡೆದ, ಡಮರುಗದಂತೆ ಅಥವಾ ಮೇಘನಾದದಂತೆ ಘರ್ಜಿಸಬಲ್ಲ ಆ ಶೂರನು, ಪರ್ಣಕುಟಿಯಲ್ಲಿ ವಾಸಿಸುವುದಾದರೂ ಹೇಗೆ?

೭. "ಉತ್ತಮ ಚಾರಿತ್ರ್ಯದ ಅಸಮಾನ ಶೂರನಾದ ರಾಜಕುಮಾರನು ನಮ್ಮಿಂದ ದೂರವಾದ ಮೇಲೆ ಈ ಜಗತ್ತು ನಮಗೆ ಶೂನ್ಯವೆನಿಸಿದೆ.

೮. "ಮೃದುವಾದ ಚರ್ಮವನ್ನು ಹೊದ್ದು, ಕೇಂದ್ರದಲ್ಲಿ ಚಕ್ರಾಕಾರದ ಮುದ್ರೆಯನ್ನು ಪಡೆದ, ಕಣಕಾಲು ಮುಚ್ಚಿದ, ಕಮಲಸದೃಶವಾದ ಆ ಪಾದದ್ವಯಗಳು, ಕಲ್ಲುಮುಳ್ಳುಗಳಿಂದ ತುಂಬಿದ ಆ ಕಾಡುದಾರಿಯಲ್ಲಿ ಅದು ಹೇಗೆ ನಡೆದಾವು?

೯. "ಅರಮನೆಯ ಪಲ್ಲಂಗದ ಮೃದುಸ್ಪರ್ಶದಲ್ಲಿ ಕುಳಿತೋ, ಮಲಗಿಯೋ ಇರಬೇಕಾದ, ಬೆಲೆಬಾಳುವ ಉಡುಪು ಧರಿಸಿದ, ಶ್ರೀಗಂಧದ ಸುಗಂಧವನ್ನು ಪೂಸಿದ ಆ ಪುರುಷಸಿಂಹನ ಶರೀರವು, ಆ ಕಾಡಿನ ಶೀತೋಷ್ಣಗಳನ್ನು, ಬಿಸಿಲು ಮಳೆಯನ್ನು, ಹೇಗೆ ತಾನೇ ಸಹಿಸೀತು?

೧೦. "ಯೌವ್ವನ, ಸೌಂದರ್ಯ, ತನ್ನ ರಾಜವಂಶದ ಹಿರಿಮೆಗರಿಮೆಗಳನ್ನು ಪಡೆದು, ಶೌರ್ಯಸಾಹಸಗಳ ಜೊತೆಗೆ ಸಜ್ಜನಿಕೆ ಮತ್ತು ಎಂದೂ ಯಾರನ್ನೂ ಕೇಳದ, ಆದರೆ ಕೊಡಲು ಸದಾ ಸಿದ್ಧವಿದ್ದ ರಾಜಕುಮಾರನು, ಅನ್ಯರಿಂದ ಹೇಗೆ ತಾನೇ ಭಿಕ್ಷೆಯನ್ನು ಬೇಡಿಯಾನು?

೧೧. "ಅರಮನೆಯ ಸುವರ್ಣಖಚಿತವಾದ ನಿರ್ಮಲ ಮಂಚದಲ್ಲಿ ನಿದ್ರಿಸಿ ಸಂಗೀತದ ನಾದಮಾಧುರ್ಯದಿಂದ ಮುಂಜಾನೆಗೆ ಎಚ್ಚರಗೊಳ್ಳುತ್ತಿದ್ದ ಅವನು ಸಂನ್ಯಾಸಿಯಾಗಿ ಒರಟಾದ ಕಾವಿಯ ಕಾಷಾಯವನ್ನು ಧರಿಸಿ ಒರಟು ನೆಲದಮೇಲೆ ಮಲಗಿ ಹೇಗೆ ನಿದ್ರಿಸಬಹುದು?"

೧೨. ಈ ದಯನೀಯ ವಿಲಾಪವನ್ನು ಕೇಳಿದ ಹೆಂಗಳೆಯರು ದುಃಖದಿಂದ ಉಮ್ಮಳಗೊಂಡು ಒಬ್ಬರನ್ನೊಬ್ಬರು ತಬ್ಬಿಹಿಡಿದು, ಅಲುಗಾಡಿಸಲ್ಪಟ್ಟ ತರುಲತೆಗಳ ಪುಷ್ಪದಿಂದ ಜೇನುತುಪ್ಪವು ಸುರಿಯುವಂತೆ ಕಣ್ಣೀರು ಸುರಿಸಿದರು.

೧೩. ಯಶೋಧರೆಯೂ ಸಹ ಗೌತಮನ ವನವಾಸಕ್ಕೆ ತಾನೇ ಅನುಮತಿ ಕೊಟ್ಟಿದ್ದೇನೆಂಬುದನ್ನು ಮರೆತು ದಿಗ್ಭ್ರಾಂತಳಾಗಿ ನೆಲದ ಮೇಲೆ ಬಿದ್ದುಬಿಟ್ಟಳು.

೧೪. "ಅವನ ಸಹಧರ್ಮಿಣಿಯಾದ ನನ್ನನ್ನು ರಾಜಕುಮಾರನು ಅದು ಹೇಗೆ ತೊರೆದುಹೋದನು? ನನ್ನನ್ನು ವಿಧವೆಯಂತೆ ಮಾಡಿಹೋಗಿದ್ದಾನೆ. ಅವನ ಅರ್ಧಾಂಗಿ ಎಂದೆನಿಸಿದ ನನ್ನನ್ನು ಅವನ ಈ ನೂತನ ಜೀವನದಲ್ಲಿ ಸಹಭಾಗಿಯಾಗಿ ಕರೆದೊಯ್ಯಬಹುದಿತ್ತು.

೧೫. "ನನಗೆ ಸ್ವರ್ಗದ ಬಯಕೆ ಖಂಡಿತಾ ಇಲ್ಲ. ಆದರೆ ನನ್ನ ಏಕೈಕ ಬಯಕೆಯೆಂದರೆ, ನನ್ನ ಪ್ರಿಯಕರನು ಇಹಪರಗಳೆರಡರಲ್ಲಿಯೂ ನನ್ನನ್ನು ಕೈಬಿಡದಂತಿರಬೇಕು ಎಂಬುದು.

೧೬. "ಪ್ರಸನ್ನವದನನೂ, ವಿಶಾಲನೇತ್ರನೂ ಆದ ನನ್ನ ಪತಿಯನ್ನು ನೋಡಲು ನಾನು ಯೋಗ್ಯಳಲ್ಲದಿರಬಹುದಾದರೂ ಈ ಬಡಪಾಯಿ ರಾಹುಲ ತನ್ನ ತಂದೆಯ ತೊಡೆಯ ಮೇಲೇರಿ ನಲಿದಾಡಬಾರದೆ?

೧೭. "ಅಯ್ಯೋ, ಬುದ್ಧಿಶಾಲಿಯೂ ಶೂರನೂ ಆದ ಅವನ ಮನಸ್ಸು ಬಹು ನಿಷ್ಠುರವಾಗಿರುವಂತಿದೆ. ಅವನೆಷ್ಟು ಸುಂದರನೋ ಮನಸ್ಸು ಅಷ್ಟೇ ಕಠಿಣ. ತನ್ನ ತೊದಲುನುಡಿಗಳಿಂದ ವೈರಿಯ ಮನಸ್ಸನ್ನೂ ಸೂರೆಗೊಳ್ಳಬಲ್ಲ ಈ ಹಸುಳೆಯನ್ನು ಯಾರು ತಾನೇ ಉದ್ದೇಶಪೂರ್ವಕವಾಗಿ ತೊರೆದು ಹೋದಾರು?

೧೮. "ನನ್ನ ಹೃದಯವನ್ನು ಕಲ್ಲಿನಿಂದಲೋ ಇಲ್ಲವೇ ಉಕ್ಕಿನಿಂದಲೋ ಮಾಡಿರುವುದಾಗಿರಬೇಕೆನಿಸುತ್ತದೆ. ಇಲ್ಲವಾದಲ್ಲಿ ಅದರ ಒಡೆಯನು ಎಲ್ಲ ಸುಖಸಂತೋಷಗಳಿಗೆ ತಕ್ಕನಾದವನು ರಾಜವಂಶದ ಎಲ್ಲಾ ವೈಭೋಗವನ್ನು ತೊರೆದು, ಅನಾಥನಂತೆ ಕಾಡಿಗೆ ಹೋದುದನ್ನು ನೋಡಿ, ಅದು ಬಿರಿದು

ಹೋಗಬೇಕಾಗಿತ್ತು. ಆದರೆ ನಾನೇನು ಮಾಡಲಿ? ನನ್ನ ಈ ವೇದನೆಯನ್ನು ನಾನು ಸಹಿಸಲಾರದವಳಾಗಿದ್ದೇನೆ."

೧೯. ಈ ರೀತಿ ವೇದನೆಯಿಂದ ಬಸವಳಿದು ಗಟ್ಟಿಯಾಗಿ ಯಶೋಧರೆಯು ರೋದಿಸತೊಡಗಿದಳು. ಸ್ವಭಾವತಃ ಅವಳ ಆತ್ಮಸಂಯಮ ಈಗ ಇಲ್ಲವಾಯಿತು. ಇಂದಿನ ಈ ದಾರುಣ ಸ್ಥಿತಿಯಲ್ಲಿ ಅವಳು ತನ್ನ ನಿಗ್ರಹ ಶಕ್ತಿಯನ್ನೇ ಕಳೆದುಕೊಂಡಿದ್ದಳು.

೨೦. ತನ್ನ ಈ ನೋವಿನ ಅತಿರೇಕದಿಂದ ರೋದಿಸುತ್ತಾ ಭೂಮಿಯ ಮೇಲೆ ಬಿದ್ದು ಹೊರಳಾಡುವ ಯಶೋಧರೆಯನ್ನು ಕಂಡ ಹೆಂಗಸರೆಲ್ಲರೂ, ಬಿರುಮಳೆಗೆ ಸಿಕ್ಕಿದ ಕಮಲದಂತೆ ಕಣ್ಣೀರ ಕೋಡಿಹರಿಸಿದರು.

೨೧. ಚನ್ನ ಮತ್ತು ಕಂಥಕರು ಹಿಂತಿರುಗಿದ ವಾರ್ತೆ ಮತ್ತು ತಮ್ಮ ಮಗನು ತಳೆದ ದೃಢ ನಿಶ್ಚಯದ ವಿಚಾರವನ್ನು ಕೇಳಿದ ಶುದ್ಧೋದನನು ಮತ್ತಷ್ಟು ದುಃಖಿತನಾಗಿ ಭೂಮಿಗೆ ಕುಸಿದುಹೋದನು.

೨೨. ಈ ರೀತಿ ಮಗನ ವಿರಹದಿಂದ ವಿಚಲಿತನಾದ ರಾಜನನ್ನು ಅವನ ಪರಿವಾರದವರು ಕೈಹಿಡಿದೆತ್ತಿದರು. ಅಶ್ರು ತುಂಬಿದ ಕಣ್ಣುಗಳಿಂದ ಶುದ್ಧೋದನನು ಆ ಕುದುರೆಯನ್ನು ನೋಡಿ, ನೆಲದ ಮೇಲೆ ಬಿದ್ದು ಇನ್ನಷ್ಟು ಜೋರಾಗಿ ಅಳತೊಡಗಿದನು.

೨೩. ನಂತರ ದುಃಖದಿಂದ ಚೇತರಿಸಿಕೊಂಡು ಮೇಲೆದ್ದು, ದೇವಾಲಯವನ್ನು ಹೊಕ್ಕು, ಶುದ್ಧೋದನನು ಮಂಗಳಕರ ಪೂಜಾದಿ ಕರ್ಮಗಳನ್ನು ನೆರವೇರಿಸಿ, ತನ್ನ ಮಗನು ಕ್ಷೇಮದಿಂದ ಹಿಂತಿರುಗುವಂತಾಗಲಿ ಎಂದು ಹರಕೆಗಳನ್ನು ಕಟ್ಟಿಕೊಂಡನು.

೨೪. ಹೀಗೆ ಶುದ್ಧೋದನ, ಗೌತಮಿ ಮತ್ತು ಯಶೋಧರೆಯರು "ಓ ದೇವರೆ, ಎಷ್ಟು ಕಾಲದ ಬಳಿಕ ನಾವು ಅವನನ್ನು ನೋಡುತ್ತೇವೆ?" ಎಂದುಕೊಳ್ಳುತ್ತಾ ಕಾಲವನ್ನು ನೂಕತೊಡಗಿದರು.

# ವಿಭಾಗ : ೨
# ಶಾಶ್ವತ ಪರಿತ್ಯಾಗ

೧. ಬುದ್ಧ ಮತ್ತು ಅವನ ವಿಷಾದ ಯೋಗ
೨. ಪರಿವ್ರಾಜಕರ ಪರಿವರ್ತನೆ
೩. ಉತ್ತಮರ ಹಾಗೂ ಪೂಜ್ಯರ ಪರಿವರ್ತನೆ
೪. ತೌರಿನ ಕರೆ
೫. ಮತ್ತೊಮ್ಮೆ ಪರಿವರ್ತನೆಯ ಪ್ರಚಾರ
೬. ಕೆಳವರ್ಗದವರ ಹಾಗೂ ದೀನರ ಪರಿವರ್ತನೆ

# ೧. ಕಪಿಲವಸ್ತುವಿನಿಂದ ರಾಜಗೃಹಕ್ಕೆ

೧. ಕಪಿಲವಸ್ತುವನ್ನು ಬಿಟ್ಟುಹೊರಟ ಸಿದ್ಧಾರ್ಥನು ಮಗಧ ರಾಜ್ಯದ ರಾಜಧಾನಿಯಾದ ರಾಜಗೃಹಕ್ಕೆ ಹೋಗಲು ಯೋಚಿಸಿದನು.

೨. ಅದರ ರಾಜ ಬಿಂಬಿಸಾರ. ಅದನ್ನು ದೊಡ್ಡ ದೊಡ್ಡ ದಾರ್ಶನಿಕರೂ ಪ್ರಖ್ಯಾತ ಚಿಂತಕರೂ ತಮ್ಮ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡಿದ್ದರು.

೩. ಮನಸ್ಸಿನಲ್ಲಿ ಈ ಯೋಚನೆಯನ್ನು ಹೊತ್ತು ತುಂಬಿಹರಿಯುತ್ತಿದ್ದ ಗಂಗಾನದಿಯ ಪ್ರವಾಹಕ್ಕೂ ಅಂಜದೆ ಅದನ್ನು ದಾಟಿದನು.

೪. ಆ ದಾರಿಯಲ್ಲಿ ಅವನು ಬ್ರಾಹ್ಮಣ ಸಂನ್ಯಾಸಿಯಾದ ಸಾಖಿಯ ಆಶ್ರಮದಲ್ಲಿ, ಅನಂತರ ಮತ್ತೊಬ್ಬ ಬ್ರಾಹ್ಮಣ ಸಂನ್ಯಾಸಿಯಾದ ಪದ್ಮ ಎಂಬುವವರ ಆಶ್ರಮದಲ್ಲಿ, ಅನಂತರ ರೈವತ ಎಂಬ ಬ್ರಾಹ್ಮಣ ಋಷಿಯ ಆಶ್ರಮದಲ್ಲಿ ಕೆಲವು ಕಾಲ ತಂಗಿದನು. ಅವರೆಲ್ಲರಿಂದ ಅವನಿಗೆ ಸೂಕ್ತ ರೀತಿಯ ಸಹಕಾರ ದೊರೆಯಿತು.

೫. ಪುರುಷರೆಲ್ಲರಲ್ಲಿ ಅಸಾಧಾರಣವೆನಿಸುವ ಇವನ ಶ್ರೀಮದ್ ಗಾಂಭೀರ್ಯದ ಸುಂದರ ವ್ಯಕ್ತಿತ್ವವನ್ನು ಕಂಡ ಆ ಪ್ರಾಂತ್ಯದ ಜನರಿಗೆ ಇವನು ಸಂನ್ಯಾಸಿಯ ಉಡುಪನ್ನು ಧರಿಸಿರುವುದು ಒಂದು ರೀತಿಯಲ್ಲಿ ಆಶ್ಚರ್ಯವೆನಿಸಿತು.

೬. ಇವನನ್ನು ಕಂಡಕೂಡಲೇ ದಾರಿಯಲ್ಲಿ ಸಾಗುತ್ತಿದ್ದ ಜನ ಅಲ್ಲಿಯೇ ಸ್ತಬ್ಧರಾಗಿ ನಿಂತರು; ನಡೆಯುತ್ತಿದ್ದ ಜನ ಅವನನ್ನು ಹಿಂಬಾಲಿಸಿ ನಡೆಯತೊಡಗಿದರು; ಮಂದಗತಿಯಲ್ಲಿ ನಡೆದುಹೋಗುತ್ತಿದ್ದ ಜನ ಅವನ ಹಿಂದೆ ಓಡತೊಡಗಿದರು; ಕುಳಿತಿದ್ದವರು ಚಕ್ಕನೆ ಎದ್ದುನಿಂತರು.

೭. ಕೆಲವು ಜನ ಗೌರವದಿಂದ ಕೈಜೋಡಿಸಿ ನಮಿಸಿದರು. ಮತ್ತೆ ಕೆಲವರು ಪೂಜ್ಯಭಾವದಿಂದ ತಲೆಬಾಗಿ ವಂದಿಸಿದರು. ಇನ್ನು ಕೆಲವರು ಬಹು ಪ್ರೀತಿಯಿಂದ ಅವನನ್ನು ಮಾತನಾಡಿಸಿದರು – ಹೀಗೆ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಿಂದ ಅವನಿಗೆ ಗೌರವ ತೋರಿಸಿದರು.

೮. ವಿಲಾಸಿಗಳಂತೆ ಆಡಂಬರದ ಉಡುಪು ತೊಟ್ಟ ಜನ ಅವನನ್ನು ನೋಡಿ ನಾಚಿದರು; ಒಣ ಹರಟೆಯಲ್ಲಿ ಕಾಲ ಕಳೆಯುತ್ತಿದ್ದ ಜನ ಮಾತಿಲ್ಲದೆ ಮೌನಿಗಳಾದರು; ಅಲ್ಲಿ ಯಾರೊಬ್ಬರ ಮನಸ್ಸಿನಲ್ಲಿಯೂ ಅಯುಕ್ತ ವಿಚಾರಗಳು ಸುಳಿಯಲಿಲ್ಲ.

೯. ಅವನ ಹಣೆ, ಕಣ್ಣಿನ ಹುಬ್ಬು, ಅವನ ಬಾಯಿ ಅವನ ಹಸ್ತ ಮತ್ತು ಪಾದಗಳು, ಅವನ ನಿಲುವಿನ ಮಾಟ, ಇವುಗಳಲ್ಲಿ ಯಾವುದೊಂದನ್ನೂ ಯಾರೇ ಗಮನಿಸಿದರೂ ಅವರಿಗರಿವಿಲ್ಲದೆ ಅವರ ದೃಷ್ಟಿ ಅಲ್ಲಿಯೇ ನಾಟಿಹೋಗುತ್ತಿದ್ದಿತು.

೧೦. ಶ್ರಮಸಾಧ್ಯವಾದ ಬಹುದೀರ್ಘಕಾಲದ ಪ್ರಯಾಣದ ನಂತರ, ಪಂಚಮಹಾಪರ್ವತಗಳಿಂದ ಅಲಂಕೃತವಾಗಿ ಸುರಕ್ಷಿತವಾದ ಹಾಗೂ ಬಹುಮಂಗಳಕರವೂ ಆದ ಸ್ಥಳಗಳಿಂದ ಕೂಡಿದ ರಾಜಗೃಹವನ್ನು ಗೌತಮನು ತಲಪಿದನು.

೧೧. ರಾಜಗೃಹವನ್ನು ಮುಟ್ಟಿದಮೇಲೆ ಪಾಂಡವರ ಬೆಟ್ಟ ಎಂದು ಕರೆಯಲಾಗುವ ಬೆಟ್ಟದ ಬುಡದಲ್ಲಿ ತನ್ನ ವಾಸಕ್ಕಾಗಿ ಪರ್ಣಕುಟೀರವೊಂದನ್ನು ನಿರ್ಮಿಸಿಕೊಂಡನು.

೧೨. ಕಪಿಲವಸ್ತುವಿನಿಂದ ರಾಜಗೃಹಕ್ಕೆ ಕಾಲುದಾರಿಯ ಮೂಲಕ ಸುಮಾರು ನಾಲ್ಕುನೂರು ಮೈಲು ದೂರ.

೧೩. ಇಷ್ಟು ದೀರ್ಘವಾದ ಪ್ರಯಾಣವನ್ನು ಸಿದ್ಧಾರ್ಥನು ಕಾಲುನಡೆಯಲ್ಲಿಯೇ ಸಾಗಿಬಂದಿದ್ದನು.

## ೨. ದೊರೆ ಬಿಂಬಿಸಾರ ಮತ್ತು ಅವನ ಬುದ್ಧಿವಾದ

೧. ಸಿದ್ಧಾರ್ಥನು ಮರುದಿನ ಎದ್ದು ಭಿಕ್ಷಾಪಾತ್ರೆಯನ್ನು ಹಿಡಿದು ನಗರಕ್ಕೆ ಭಿಕ್ಷೆಗಾಗಿ ಹೊರಟನು. ಅವನನ್ನು ಕಂಡು, ಅಪಾರ ಪುರಜನರು ಅವನ ಸುತ್ತ ನೆರೆದರು.

೨. ಮಗಧ ರಾಜ್ಯದ ದೊರೆಯಾದ ಶ್ರೇಣಿಯ ಬಿಂಬಿಸಾರನು ತನ್ನ ಅರಮನೆಯ ಸಮೀಪ ಇಷ್ಟೊಂದು ಜನ ನೆರೆದಿರುವುದನ್ನು ಕಂಡು, ಅದಕ್ಕೆ ಕಾರಣವೇನೆಂದು ಕೇಳಿದನು; ರಾಜ ಪರಿವಾರದವನೊಬ್ಬನು ಬಂದು ಅವನಿಗೆ ಈ ರೀತಿ ವರದಿ ಒಪ್ಪಿಸಿದನು:

೩. "ಶಾಕ್ಯವಂಶದ ರಾಜಕುಮಾರನನ್ನು ಕುರಿತು ಈ ಮೊದಲೇ ಬ್ರಾಹ್ಮಣ ಜ್ಯೋತಿಷ್ಯರು ಹೇಳಿದಂತೆ, ಜಗತ್ತಿನ ಚಕ್ರಾಧಿಪತಿಯೋ ಇಲ್ಲವೇ ಮಹಾಜ್ಞಾನಿಯೋ ಆಗಬೇಕಾಗಿದ್ದ ಸಿದ್ಧಾರ್ಥನು ಸಂನ್ಯಾಸಿಯಾಗಿ ಇಲ್ಲಿಗೆ ಬಂದಿದ್ದಾನೆ. ಜನರೆಲ್ಲಾ ನೆರೆದು ಅವನನ್ನು ನೋಡುತ್ತಿದ್ದಾರೆ."

೪. ಈ ಮಾತನ್ನು ಕೇಳಿದ ಬಿಂಬಿಸಾರನು ಮನಸ್ಸಿನಲ್ಲಿಯೇ ಅದರ ಅರ್ಥವನ್ನು ಗ್ರಹಿಸಿ, ಕೂಡಲೇ ಆ ದೂತನಿಗೆ 'ಅವನು ಎಲ್ಲಿಗೆ ಹೋಗುತ್ತಿದ್ದಾನೆಂದು ತಿಳಿದು ಬಾ' ಎಂದು ಹೇಳಿದನು. ಆಜ್ಞೆಯನ್ನು ಸ್ವೀಕರಿಸಿದ ಆ ದೂತನು ಗೌತಮನನ್ನು ಅನುಸರಿಸಿ ನಡೆದನು.

೫. ಏಕಾಗ್ರಚಿತ್ತದಿಂದ, ನೇಗಿಲಿನ ನೊಗದಷ್ಟು ದೂರ ಮಾತ್ರ ನೋಡುತ್ತಾ ನಿಧಾನವಾಗಿ ಹೆಜ್ಜೆಯಿಡುತ್ತಾ ತನ್ನ ಇಂದ್ರಿಯ ಹಾಗೂ ಅಲೆದಾಡುವ ಆಲೋಚನೆಗಳನ್ನು ನಿಯಂತ್ರಿಸಿಕೊಂಡು, ಆ ಶ್ರೇಷ್ಠ ಭಿಕ್ಷುಕನು ಮೆಲುಧ್ವನಿಯಲ್ಲಿ ಭಿಕ್ಷೆಯನ್ನು ಬೇಡುತ್ತಾ ಹೊರಟನು.

೬. ಗೌತಮನು ತನಗೆ ದೊರೆತ ಭಿಕ್ಷೆಯನ್ನು ಸಮೀಪದಲ್ಲಿದ್ದ ಏಕಾಂತ ಸ್ಥಳವೊಂದಕ್ಕೆ ಕೊಂಡೊಯ್ದು ಅಲ್ಲಿಯೇ ತಿಂದು ನಂತರ ಪಾಂಡವಪರ್ವತವನ್ನು ಹತ್ತಿದನು.

೭. ಬಹುದಟ್ಟವಾಗಿ ಬೆಳೆದ ಲೋಧ್ರವೃಕ್ಷಗಳಿಂದ ಆವೃತ್ತವಾದ ಆ ಅರಣ್ಯದಲ್ಲಿ ನವಿಲುಗಳ ಕುಣಿತದ ಝೇಂಕಾರ ಮಾರ್ದನಿಸುತ್ತಿರಲು, ಕೆಂಬಣ್ಣದ ಉಡುಪನ್ನು ಧರಿಸಿದ ಗೌತಮನು ಪೂರ್ವದಿಗಂತದಲ್ಲಿ ಮೂಡಿಬಂದ ಮನುಕುಲದ ಸೂರ್ಯನಂತೆ ಪ್ರಕಾಶಿಸಿದನು.

೮. ರಾಜದೂತನು ಇದನ್ನೆಲ್ಲ ಕಂಡು ರಾಜ ಬಿಂಬಿಸಾರನಲ್ಲಿ ಬಂದು ವರದಿಯನ್ನು ಒಪ್ಪಿಸಿದನು. ಆಗ ರಾಜನು ಮಿತ ಪರಿವಾರದೊಂದಿಗೆ ಅತಿಗೌರವದಿಂದ ಸಿದ್ಧಾರ್ಥನಿದ್ದ ಜಾಗಕ್ಕೆ ಹೊರಟನು.

೯. ಪರ್ವತೋಪಮವಾದ ಔನ್ನತ್ಯದಿಂದ ರಾಜನು ಆ ಬೆಟ್ಟವನ್ನೇರಿದನು.

೧೦. ಚಲಿಸುವ ಪರ್ವತದ ಶಿಖರವೇ ತಾನಾಗಿ ಇಂದ್ರಿಯಗಳನ್ನು ನಿಗ್ರಹಿಸಿ ದೇದೀಪ್ಯಮಾನವಾಗಿ ಪದ್ಮಾಸನದಲ್ಲಿ ಕುಳಿತಿದ್ದ ಗೌತಮನನ್ನು ರಾಜನು ಕಂಡನು.

೧೧. ಸುಂದರ ಶರೀರನೂ, ಶಾಂತಚಿತ್ತನೂ ಆದ ಗೌತಮನನ್ನು ಜನಾನುರಾಗಿಯೆನಿಸಿದ್ದ ರಾಜನು ಆಶ್ಚರ್ಯಚಕಿತನಾಗಿ ಪ್ರೀತಿ ಗೌರವದಿಂದ ನೋಡಿದನು.

೧೨. ಬಿಂಬಿಸಾರನು ಪ್ರೀತಿಪೂರ್ವಕವಾಗಿ ಗೌತಮನನ್ನು ಕಂಡು ಅವನ ಕ್ಷೇಮ ಸಮಾಚಾರಗಳನ್ನು ವಿಚಾರಿಸಿದನು. ಗೌತಮನು ಗೌರವಯುತವಾಗಿ ಸೌಮ್ಯತೆಯಿಂದ ತನ್ನ ಶರೀರ ಮತ್ತು ಮನಸ್ಸಿನ ಸುಕ್ಷೇಮವನ್ನು ರಾಜನಿಗೆ ವಿವರಿಸಿದನು.

೧೩. ರಾಜನು ಸ್ವಚ್ಛವಾಗಿದ್ದ ಬಂಡೆಯೊಂದರ ಮೇಲೆ ಕುಳಿತು ತನ್ನ ಮನಸ್ಸಿನ ಅನಿಸಿಕೆಗಳನ್ನು ಗೌತಮನಿಗೆ ಹೇಳತೊಡಗಿದನು:

೧೪. "ವಂಶದ ಪರಂಪರೆಯಿಂದ ನಿಮ್ಮ ಕುಟುಂಬದೊಂದಿಗೆ ನಾನು ನಿಕಟವಾದ ಬಾಂಧವ್ಯವನ್ನು ಬೆಳೆಸಿಕೊಂಡುಬಂದವನಾದ್ದರಿಂದ, ನನಗೆ ನೀನು ಮಗನ ಸಮಾನನಾಗಿರುವುದರಿಂದ, ನಿನ್ನೊಂದಿಗೆ ಕೆಲವು ವಿಚಾರಗಳನ್ನು ವಾತ್ಸಲ್ಯಪೂರ್ವಕವಾಗಿ ಹೇಳುವ ಬಯಕೆಯಾಗಿದೆ. ಅದನ್ನು ಕೇಳು.

೧೫. "ಸೂರ್ಯವಂಶದಲ್ಲಿ ಪ್ರಸಿದ್ಧವೆನಿಸಿದ ರಾಜಮನೆತನದಲ್ಲಿ ಜನಿಸಿದ ನೀನು, ಸ್ಫುರದ್ರೂಪಿಯಾಗಿದ್ದು, ನವಯೌವ್ವನದಲ್ಲಿದ್ದು, ರಾಜ್ಯವಿಸ್ತಾರದ ಹಂಬಲಕ್ಕೆ ಬದಲಾಗಿ, ಈ ವೈರಾಗ್ಯ ನಿನಗೆ ಎಲ್ಲಿಂದ ಬಂತು, ಎಂಬುದೇ ನನಗೆ ಅರ್ಥವಾಗುತ್ತಿಲ್ಲ.

೧೬. "ರಕ್ತಚಂದನ ದ್ರವ್ಯಗಳಿಂದ ಲೇಪನಗೊಳ್ಳಬೇಕಾದ ನಿನ್ನ ಶರೀರದ ಈ ಅಂಗಾಂಗಗಳು, ಸಂನ್ಯಾಸಿಗೊಪ್ಪುವ ಕೆಂಪುಬಣ್ಣದ ಈ ಒರಟುಬಟ್ಟೆಯ ಸ್ಪರ್ಶವನ್ನು ಸಹಿಸಲಾರವು. ಪ್ರಜೆಗಳ ರಕ್ಷಣೆಯ ಭಾರವನ್ನು ಹೊರಬೇಕಾದ ನಿನ್ನ ಈ ಬಾಹುಗಳು ಬೇರೆಯವರು ನೀಡುವ ಭಿಕ್ಷೆಯನ್ನು ಹಿಡಿದು ತಿರುಗಬಾರದು.

೧೭. "ವಿನಯವಂತ ಯುವಕನೆ, ಒಂದು ವೇಳೆ ನಿನಗೆ ನಿನ್ನ ತಂದೆಯ ರಾಜ್ಯವನ್ನು ಸ್ವೀಕರಿಸುವ ಬಯಕೆಯಿಲ್ಲವಾದರೆ, ನನ್ನ ರಾಜ್ಯದ ಅರ್ಧಭಾಗವನ್ನು ನಿನಗೆ ನಾನು ಕೊಡುತ್ತೇನೆ. ನೀನು ಅದನ್ನು ಉದಾರತೆಯಿಂದ ಈಗಲೇ ಸ್ವೀಕರಿಸು.

೧೮. "ನೀನು ಈ ರೀತಿ ಮಾಡುವುದರಿಂದ ನಿನ್ನ ಜನರಿಗೆ ಯಾವ ರೀತಿಯಿಂದಲೂ ಬೇಸರವಾಗುವುದಿಲ್ಲ ಮತ್ತು ಕಾಲಾನುಕಾಲದಲ್ಲಿ ಎಲ್ಲ ಸಾಮ್ರಾಟ ಅಧಿಕಾರವೂ ಕೊನೆಯಲ್ಲಿ ಶಾಂತಿಯನ್ನರಸುವುದು ಇದ್ದೇ ಇದೆ. ಆದ್ದರಿಂದ ನೀನು ನನ್ನ ಮೇಲೆ ಇಷ್ಟರಮಟ್ಟಿಗೆ ದಯೆ ತೋರಿಸಿ ಈ ರಾಜ್ಯವನ್ನು ಸ್ವೀಕರಿಸು. ಸಜ್ಜನರ ಸಹಕಾರದಿಂದ ಜಗತ್ತಿನಲ್ಲಿ ಒಳ್ಳೆಯದು ದೃಢಗೊಳ್ಳುತ್ತದೆ.

೧೯. "ನಿನ್ನ ವಂಶದ ಪ್ರತಿಷ್ಠೆಯ ಕಾರಣ, ನೀನು ನನ್ನ ಈ ಸಲಹೆಯನ್ನು ಸ್ವೀಕರಿಸಲಾರೆಯಾದರೆ, ನೀನು ನನ್ನವನಾಗಿ ನನ್ನ ಮಿತ್ರಪಕ್ಷವನ್ನು ಸೇರಿ, ನಿನ್ನ ಬಾಹುಬಲದೊಂದಿಗೆ, ನನ್ನ ಸೈನ್ಯಸಮೇತ, ಶತ್ರುಗಳೊಂದಿಗೆ ಹೋರಾಡಿ ರಾಜ್ಯವನ್ನು ಗಳಿಸು.

೨೦. "ಇವುಗಳಲ್ಲಿ ಯಾವುದಾದರೂ ಒಂದು ದಾರಿಯನ್ನು ಆರಿಸಿಕೊ. ಧರ್ಮದ ನಿಯಮಗಳಿಗನುಸಾರವಾಗಿ ಧರ್ಮ, ಅರ್ಥ, ಕಾಮಗಳನ್ನು ಅನುಭವಿಸಬೇಕು. ಮೊದಲು ಕಾಮ ಉಳಿದವು ನಂತರದ ಕ್ರಮದಲ್ಲಿ ಅನುಭವಿಸು. ಇನ್ನು ಮನುಷ್ಯನು ಗತಿಸಿದ ಮೇಲೆ ಈ ವಿಶ್ವಕ್ಕೆ ಸಂಬಂಧಿಸಿದಂತೆ, ಅವನು ಶೂನ್ಯವಾಗುತ್ತಾನೆ.

೨೧. "ನೀನು ಬದುಕಿನ ಈ ಮೂರು ಪುರುಷಾರ್ಥಗಳನ್ನು ಸಾಧಿಸಿ ನಿನ್ನ ವ್ಯಕ್ತಿತ್ವದ ಸಾರ್ಥಕತೆಯನ್ನು ಸಂಪಾದಿಸು; ಧರ್ಮ, ಅರ್ಥ, ಕಾಮ ಎಂಬ ಈ ಪುರುಷಾರ್ಥಗಳ ಸಾಧನೆಯಿಂದ ಮಾನವ

ಜೀವನದ ಅಂತಿಮ ಉದ್ದೇಶ ಪೂರ್ಣವಾಗುತ್ತದೆ ಎಂದು ಹೇಳಲಾಗಿದೆ.

೨೨. ''ಬಿಲ್ಲುಬಾಣಗಳನ್ನು ಹಿಡಿಯಲು ಯೋಗ್ಯವಾದ ಈ ಬಲಿಷ್ಠ ಬಾಹುಗಳನ್ನು ನಿಷ್ಪ್ರಯೋಜಕಗೊಳಿಸಬೇಡ. ನಿನ್ನ ಈ ಬಲಿಷ್ಠ ಬಾಹುಗಳು ಈ ಭೂಮಿಯನ್ನು ಮಾತ್ರವೇ ಏಕೆ, ಮೂರು ಲೋಕಗಳನ್ನೂ ಗೆಲ್ಲಬಲ್ಲವು.

೨೩. "ನಾನು ಈ ಮಾತನ್ನು ಕೇವಲ ವಾತ್ಸಲ್ಯ ಮತ್ತು ಪ್ರೀತಿಯಿಂದ ಹೇಳುತ್ತಿದ್ದೇನೆಯೇ ಹೊರತು ರಾಜ್ಯದಾಹದಿಂದಾಗಲೀ ಅಥವಾ ನಿನ್ನನ್ನು ಭಿಕ್ಷುಕನ ಈ ಉಡುಪಿನಲ್ಲಿ ಕಂಡು ಅಹಂಕಾರದಿಂದಾಗಲೀ ಹೇಳುತ್ತಿಲ್ಲ. ನಾನು ಅನುಕಂಪದಿಂದ ಕಣ್ಣೀರಿಡುತ್ತಿದ್ದೇನೆ.

೨೪. "ಯೌವ್ವನದ ನಿನ್ನ ಸೌಂದರ್ಯವು ಕುಂದಿಹೋಗಿ, ಮುಪ್ಪು ಆವರಿಸುವ ಮುನ್ನ, ನಿನ್ನ ರಾಜವಂಶಕ್ಕೆ ಒಪ್ಪುವ ರೀತಿಯಲ್ಲಿ ನೀನು ಸುಖ ಸಂತೋಷಗಳನ್ನು ಅನುಭವಿಸು. ನಂತರ ನಿನ್ನಾಸೆಯಂತೆ ಸಂನ್ಯಾಸವನ್ನು ಸ್ವೀಕರಿಸಬಹುದು.

೨೫. "ಧರ್ಮದ ಲಾಭವನ್ನು ಗಳಿಸಲು ಮುಪ್ಪು ಸೂಕ್ತವಾದ ಕಾಲ. ಇಂದ್ರಿಯ ಭೋಗಗಳನ್ನು ಅನುಭವಿಸಲು ಮುಪ್ಪು ನಿಸ್ಸಹಾಯಕ; ಆದ್ದರಿಂದಲೇ ಕಾಮವು ಯೌವ್ವನಕ್ಕೂ, ಅರ್ಥವು ಮಧ್ಯವಯಸ್ಸಿಗೂ, ಧರ್ಮವು ಮುಪ್ಪಿಗೂ ಸೇರಿದ್ದು ಎಂದು ಹೇಳಲಾಗಿದೆ.

೨೬. ಇಂದಿನ ಪ್ರಪಂಚದಲ್ಲಿ ಯೌವ್ವನವು ಧರ್ಮ ಮತ್ತು ಅರ್ಥದ ಶತ್ರು; ಸುಖಬೋಗಗಳಿಂದ ನಾವು ಅವುಗಳನ್ನು ಎಷ್ಟೇ ರಕ್ಷಿಸಿದರೂ, ಹಿಡಿಯಲಾಗದು. ಸುಖಭೋಗಗಳನ್ನು ಕಂಡ ಕೂಡಲೇ ಯೌವ್ವನಿಗರು ಅವುಗಳನ್ನು ವಶಪಡಿಸಿಕೊಳ್ಳುತ್ತಾರೆ.

೨೭. ಮುಪ್ಪು ಚಿಂತನೆಗೆ ಪ್ರೇರಕ; ಗಂಭೀರವೂ ಶಾಂತವೂ ಆದುದು; ಅಲ್ಪ ಪ್ರಯತ್ನದಿಂದಲೇ, ಅನಿವಾರ್ಯವಾಗಿ, ನಿರ್ಭಾವುಕವಾಗಬಲ್ಲದು ಹಾಗೂ ನಾಚಿಕೆಗೇಡಿನದೂ ಹೌದು.

೨೮. "ಇಂದ್ರಿಯ ವಿಕಾರಗಳಿಗೆ ಅಧೀನರಾಗಿ, ಬಾಹ್ಯ ವಸ್ತುಗಳ ಆಕರ್ಷಣೆಗೆ ಸಿಕ್ಕಿ, ಚಂಚಲ ಸ್ವಭಾವದಿಂದ ದೂರದೃಷ್ಟಿಯಿಲ್ಲದೆ ಮೋಸ ಹೋಗುವಂತಹ ಯೌವ್ವನಾವಸ್ಥೆಯನ್ನು ದಾಟಿ ನಿಂತ ಮನುಷ್ಯನು, ದುರ್ಗಮವಾದ ಅರಣ್ಯವನ್ನು ದಾಟಿ ಬಂದಂತೆ, ತೃಪ್ತಿಯ ನಿಟ್ಟುಸಿರನ್ನು ಬಿಡುತ್ತಾನೆ.

೨೯. "ಆದ್ದರಿಂದ, ಎಚ್ಚರವಿಲ್ಲದ, ತಿಳಿಗೇಡಿತನದ, ಚಂಚಲ ಸ್ವಭಾವದ ಯೌವ್ವನಾವಸ್ಥೆಯು ಕೇವಲ ಭೋಗಕ್ಕೆ ಮೀಸಲಾಗಿರುವುದರಿಂದ, ಇಂದ್ರಿಯ ನಿಗ್ರಹಕ್ಕೆ ಸೂಕ್ತವಲ್ಲದ ಈ ಯೌವ್ವನಾವಸ್ಥೆಯು ಬೇಗ ದಾಟಿ ಹೋಗಲಿ.

೩೦. "ಅಥವಾ ಒಂದು ವೇಳೆ ಧರ್ಮವೇ ನಿನ್ನ ಏಕೈಕ ಗುರಿಯಾದರೆ ಯಜ್ಞ ಯಾಗಾದಿಗಳನ್ನು ಮಾಡು– ಅದು ಅತ್ಯುನ್ನತ ಸ್ವರ್ಗಕ್ಕೇರಲು ನಿನ್ನ ವಂಶದ ಅನಾದಿಕಾಲದ ಸಂಪ್ರದಾಯ.

೩೧. "ಆತ್ಮಸಂಯಮದಿಂದ ಮಹಾಋಷಿಗಳು ಸಾಧಿಸಿದ ಗುರಿಯನ್ನೇ ಚಿನ್ನದ ಕಂಕಣವನ್ನು ತೊಟ್ಟು, ವಜ್ರ–ವೈಢೂರ್ಯಗಳನ್ನು ಧರಿಸಿ, ಆಕರ್ಷಕವಾದ ವೈಭವದ ನಡುವೆ ಬದುಕಿದ್ದ ರಾಜಋಷಿಗಳು, ಯಜ್ಞಯಾಗಗಳಿಂದ ಸಾಧಿಸಿರುತ್ತಾರೆ."

## ೩. ಬಿಂಬಸಾರನಿಗೆ ಗೌತಮನ ಉತ್ತರ

೧. ಈ ರೀತಿ ಮಗಧ ಸಾಮ್ರಾಜ್ಯದ ರಾಜನಾದ ಬಿಂಬಸಾರನು ಇಂದ್ರನಂತೆ ದೃಢವಾಗಿ ಒಳ್ಳೆಯ ಮಾತುಗಳನ್ನಾಡಿದರು. ಅದನ್ನೆಲ್ಲ ಕೇಳಿದ ರಾಜಕುಮಾರನಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಅವನು ಬೆಟ್ಟದಷ್ಟು ದೃಢವಾಗಿದ್ದನು.

೨. ಮಗಧ ಸಾಮ್ರಾಜ್ಯದ ಚಕ್ರವರ್ತಿಯ ಈ ಮಾತುಗಳನ್ನು ಕೇಳಿದ ಗೌತಮನು ಸ್ನೇಹಪೂರ್ವಕವಾಗಿ, ಸ್ವಸ್ಥಚಿತ್ತನಾಗಿ, ಏಕಪ್ರಕಾರವಾಗಿ ಈ ರೀತಿ ಉತ್ತರಿಸಿದನು:

೩. "ನೀವು ಹೇಳಿದ ಈ ಮಾತುಗಳು ಅತ್ಯಂತ ಸಹಜವಾಗಿಯೇ ಇವೆ. ಓ ರಾಜನೇ! ಸಿಂಹಧ್ವಜದ ಲಾಂಛನವನ್ನು ಪಡೆದ ಪ್ರಸಿದ್ಧ ವಂಶದಲ್ಲಿ ಜನಿಸಿದ ನೀವು, ನಿಮ್ಮ ಸ್ನೇಹಿತರ ವಿಚಾರದಲ್ಲಿ ಅಪಾರ ಪ್ರೀತಿಯುಳ್ಳವರು; ಆದ್ದರಿಂದ ನೀವು ನನ್ನಂತಹ ಸ್ನೇಹಿತರ ವಿಚಾರದಲ್ಲಿ ಈ ರೀತಿ ಪ್ರೀತಿಯಿಂದ ವ್ಯವಹರಿಸುವುದು ಸುಸಂಗತವಾಗಿಯೇ ಇದೆ.

೪. "ದುರುದ್ದೇಶವುಳ್ಳವರಲ್ಲಿ ತಮ್ಮ ವಂಶದ ಪ್ರಗತಿಗೆ ಕಾರಣವಾಗುವಂತಹ ಒಳ್ಳೆಯ ಗುಣಗಳು ಬೆಳೆಯದೆ ನಶಿಸಿಹೋಗುತ್ತವೆ. ಸದುದ್ದೇಶವುಳ್ಳ ಸಜ್ಜನರು ಮಾತ್ರ ತಮ್ಮ ವಂಶಜರ ಸದ್ಗುಣಗಳನ್ನು ಬೆಳೆಸುತ್ತಾ, ತಮ್ಮ ವಂಶದ ಸ್ನೇಹವರ್ಧನೆಗೆ ಕಾರಣವಾಗುವಂತಹ ಕಾರ್ಯಗಳನ್ನು ಮುಂದುವರಿಸುತ್ತಾರೆ.

೫. "ಸ್ನೇಹಿತರಿಗೆ ದುರ್ದೆಶೆ ಬಂದಾಗಲೂ, ಅವರ ವಿಚಾರದಲ್ಲಿ ಏಕರೂಪವಾಗಿ ವರ್ತಿಸುವವರನ್ನು, ನಾನು ನಿಜವಾದ ಸ್ನೇಹಿತರೆಂದು ಹೃದಯಪೂರ್ವಕವಾಗಿ ಭಾವಿಸುತ್ತೇನೆ. ಒಬ್ಬ ಮನುಷ್ಯನು ಸಂಪದ್ಭರಿತನಾಗಿ ಉತ್ಕರ್ಷ ಸ್ಥಿತಿಯಲ್ಲಿರುವಾಗ, ಅವನೊಂದಿಗೆ ಸ್ನೇಹಿತರಾಗಿರಲು ಎಲ್ಲರೂ ಬಯಸುತ್ತಾರೆ.

೬. "ಯಾರು ಶ್ರೀಮಂತಿಕೆಯನ್ನು ಗಳಿಸಿ ತನ್ನ ಐಶ್ವರ್ಯವನ್ನು ಸ್ನೇಹಿತರು ಮತ್ತು ಧರ್ಮಕಾರ್ಯಗಳಿಗೆ ಬಳಸುತ್ತಾರೋ, ಅವರ ಐಶ್ವರ್ಯಕ್ಕೆ ನಿಜವಾದ ಘನತೆ ಬರುತ್ತದೆ ಮತ್ತು ಒಂದುವೇಳೆ ಆ ಐಶ್ವರ್ಯ ಕ್ಷೀಣಿಸಿದರೂ ಅದರಿಂದ ಯಾವ ನೋವೂ ಆಗುವುದಿಲ್ಲ.

೭. "ಓ ರಾಜನೆ, ನನ್ನ ವಿಚಾರದಲ್ಲಿ ನೀವು ಕೊಟ್ಟ ಸಲಹೆ ಪರಿಶುದ್ಧ ಪ್ರೇಮ ಮತ್ತು ಔದಾರ್ಯದಿಂದ ಕೂಡಿದೆ; ನಾನು ಅತ್ಯಂತ ಗೌರವದಿಂದ ಸ್ನೇಹಪೂರ್ವಕವಾಗಿ ತಮಗೆ ಈ ರೀತಿ ಉತ್ತರ ಕೊಡುತ್ತಿದ್ದೇನೆಯೇ ಹೊರತು ತಾವು ಅನ್ಯಥಾ ಭಾವಿಸಬಾರದು.

೮. "ನನಗೆ ಸರ್ಪಗಳ ಭಯವಿಲ್ಲ, ಸ್ವರ್ಗದಿಂದ ಮೂಡಿಬರುವ ಸಿಡಿಲಿನ ಭಯವಿಲ್ಲ. ಗಾಳಿಯಿಂದ ರಾಚಿ ಬರುವ ಉರಿಯ ಭಯವಿಲ್ಲ. ಆದರೆ ಲೌಕಿಕ ಸುಖದ ಭೋಗವಸ್ತುಗಳನ್ನು ಕಂಡರೆ ನನಗೆ ಎಲ್ಲಿಲ್ಲದ ಭಯ.

೯. "ನಮ್ಮ ಸಂತಸ ಮತ್ತು ಐಶ್ವರ್ಯಗಳನ್ನು ದೋಚುವ ಈ ಲೌಕಿಕ ಭೋಗವಸ್ತುಗಳು, ಜಗತ್ತಿನಲ್ಲಿ ಶೂನ್ಯವೂ ಭ್ರಮೆಯೂ ಎಂಬಂತೆ ತೇಲುತ್ತಾ ಮನುಷ್ಯನ ಮನಸ್ಸನ್ನು ಮೋಹಪರವಶನನ್ನಾಗಿ ಕೊನೆಯಲ್ಲಿ ಅವನ ಆತ್ಮವನ್ನೇ ತಮ್ಮ ಆವಾಸ ಸ್ಥಾನವನ್ನಾಗಿ ಮಾಡಿಕೊಳ್ಳುತ್ತದೆ.

೧೦. "ಭೋಗಾಪೇಕ್ಷೆಯ ಜನ ಸ್ವರ್ಗಲೋಕಕ್ಕೆ ಹೋದರೂ ಅಲ್ಲಿ ಸುಖವಾಗಿ ಇರಲಾರರು. ಇನ್ನು ಮರ್ತ್ಯಲೋಕದಲ್ಲಿದ್ದರೆ ಅವರ ಪಾಡು ಹೇಳುವಂತೆಯೇ ಇಲ್ಲ. ಭೋಗದ ತೃಷೆಗೆ ಸಿಕ್ಕಿದವನು ಎಂದೂ ತೃಪ್ತಿಹೊಂದಲಾರ. ಬಿರುಗಾಳಿ ಮತ್ತು ಉರುವಲಿನ ಜೊತೆಯ ಬೆಂಕಿಯಂತೆ.

೧೧. "ಭೋಗಾಪೇಕ್ಷೆಯಷ್ಟು ವಿಪತ್ಕಾರಕವಾದದ್ದು ಈ ಜಗತ್ತಿನಲ್ಲಿ ಬೇರೊಂದಿಲ್ಲ. ಮೋಹವಶರಾದ ಜನ ಭೋಗದ ಪೂರ್ಣ ಉಪಾಸಕರಾಗುತ್ತಾರೆ; ಒಮ್ಮೆ ಈ ಭೋಗದ ನೈಜ ಸ್ವರೂಪವನ್ನರಿತು ಕೆಟ್ಟದ್ದಕ್ಕೆ ಅಂಜುವಂತಾದರೆ, ಅಂತಹ ಪ್ರಜ್ಞಾವಂತ ಮನುಷ್ಯನು ತಿಳಿದೂ ಕೆಟ್ಟದ್ದನ್ನು ಬಯಸುವನೆ?

೧೨. "ಸಾಗರದ ತುದಿಯವರೆಗೂ ಇರುವ ಭೂಮಿಯೆಲ್ಲವೂ ತನಗೆ ದೊರೆತರೂ ರಾಜನಾದವನು ಸಾಗರದಿಂದ ಆಚೆಗೆ ಇರುವ ಭೂಮಿಯನ್ನು ಆಕ್ರಮಿಸಲು ಬಯಸುತ್ತಾನೆ; ಸಮುದ್ರದ ಮೇಲೆ ಸುರಿಯುವ ಮಳೆಯಿಂದ ತೃಪ್ತಿಗೊಳ್ಳದ ಮಹಾಸಾಗರದಂತೆ, ಮಾನವನ ಭೋಗಾಸಕ್ತಿ ಎಂದೆಂದಿಗೂ ತೃಪ್ತಿಗೊಳ್ಳುವುದಿಲ್ಲ.

೧೩. "ಸ್ವರ್ಗದಿಂದ ಸುವರ್ಣದ ಮಳೆ ಸುರಿಸಿ, ಜಗತ್ತಿನ ಸಕಲ ಸಾಮ್ರಾಜ್ಯಗಳನ್ನು ಗೆದ್ದು, ಶಕ್ರನ ಅರ್ಧ ಸಿಂಹಾಸನವನ್ನೇ ಆಕ್ರಮಿಸಿಕೊಂಡಾಗಲೂ, ಮಂಧಾತ್ರಿಗೆ ಲೌಕಿಕ ವಸ್ತುಗಳ ದಾಹ ಹಿಂಗಲಿಲ್ಲ.

೧೪. "ವೃತ್ರನಿಗೆ ಹೆದರಿ ಇಂದ್ರನು ತಲೆಮರೆಸಿಕೊಂಡಿದ್ದಾಗ, ನಹುಷನು ಇಂದ್ರನ ದೇವಲೋಕವನ್ನೇ ತಾನು ಆಳಿ, ದೇವಋಷಿಗಳು ತನ್ನ ಪಲ್ಲಕ್ಕಿಯನ್ನು ಹೊರುವಂತೆ ಮಾಡಿದರೂ ನಹುಷನಿಗೆ ತೃಪ್ತಿ ದೊರೆಯಲಿಲ್ಲ.

೧೫. "ಕಾಷಾಯಧಾರಿಗಳಾಗಿ ಕಂದಮೂಲಗಳನ್ನು ತಿನ್ನುತ್ತಾ, ಹಾವಿನಂತೆ ಇಳಿಬಿದ್ದ ಜಟೆಯನ್ನು ಧರಿಸಿ, ಅಲೌಕಿಕ ಸಾಧನೆಯಲ್ಲಿ ತೊಡಗಿದ ಋಷಿಗಳನ್ನೂ ಮರಳುಗೊಳಿಸಬಲ್ಲ, ಈ ಭೋಗಾಸಕ್ತಿಯ ಹೆಸರಿನ ಶತ್ರುಗಳನ್ನು ಯಾರು ತಾನೇ ಬಯಸುತ್ತಾರೆ.

೧೬. "ಭೌತಿಕ ಸುಖದ ಆಸಕ್ತಿಯಿಂದ, ಲೌಕಿಕ ವಸ್ತುಗಳನ್ನು ಆಶ್ರಯಿಸಿರುವ, ಜನರ ವೇದನೆಯನ್ನು ಕಂಡು ಕೇಳಿದ ಮೇಲೆ, ಆತ್ಮಸಂಯಮಿಯಾದವನು ಅವುಗಳನ್ನು ಪೂರ್ಣವಾಗಿ ನಿರಾಕರಿಸುತ್ತಾನೆ.

೧೭. "ಲೌಕಿಕ ಭೋಗದಲ್ಲಿ ಗೆಲುವನ್ನು ಪಡೆಯುವುದು ಎಂದರೆ ಅದು ಕೇವಲ ವಿಪತ್ತಿಗೆ ಕಾರಣವಾಗುತ್ತದೆ. ಏಕೆಂದರೆ ಮಾನವನು ತಾನು ಬಯಸುವ ಭೋಗವಸ್ತುಗಳನ್ನು ಪಡೆದಂತೆಲ್ಲಾ ತಾನು ಅದರಿಂದ ಉನ್ಮತ್ತನಾಗುತ್ತಾನೆ. ಅಂತಹ ಉನ್ಮಾದಾವಸ್ಥೆಯಲ್ಲಿ ತಾನು ಮಾಡಬಾರದ್ದನ್ನೆಲ್ಲಾ ಮಾಡುತ್ತಾನೆ. ಅದರಿಂದ ಮತ್ತಷ್ಟು ಆಘಾತಗೊಂಡು ಅತ್ಯಂತ ದುರವಸ್ಥೆಗೆ ಬೀಳುತ್ತಾನೆ.

೧೮. "ಈ ಲೌಕಿಕ ಭೋಗದ ವಸ್ತುಗಳನ್ನು ಕಷ್ಟದಿಂದ ಆರ್ಜಿಸಿ ಅನುಭವಿಸಿದರೂ, ಕೊನೆಯಲ್ಲಿ ಅವು ನಮ್ಮನ್ನೇ ಮೋಸಗೊಳಿಸಿ, ತಾವು ಬಂದ ದಿಕ್ಕಿಗೇ ಹಿಂತಿರುಗುವುವು. ಇಂತಹ ಅಲ್ಪಕಾಲದ ಸುಖಕ್ಕಾಗಿ ಪ್ರಾಜ್ಞನಾದ ಆತ್ಮಸಂಯಮಿಯು ಮೋಹಪರವಶನಾಗುತ್ತಾನೆಯೇ?

೧೯. "ಒಣಹುಲ್ಲಿನ ಪಂಜಿನಂಥ ಈ ಲೌಕಿಕ ಸುಖಗಳನ್ನು ಯಾವ ಸಂಯಮಿಯೂ ಬಯಸುವುದಿಲ್ಲ. ಈ ಭೋಗದ ವಸ್ತುಗಳನ್ನು ಬಯಸಿ ನಾವು ಕೈಹಿಡಿದಷ್ಟೂ ಅವು ನಮ್ಮನ್ನು ಕೆರಳಿಸಿ ಅತೃಪ್ತಿಯತ್ತ ಕೊಂಡೊಯ್ಯುತ್ತವೆ.

೨೦. "ರಾಜಮಹಾರಾಜರೂ ಸೇರಿದಂತೆ ಎಲ್ಲರನ್ನೂ ದುಃಖದಲ್ಲಿ ತೊಳಲಿಸುವ ಈ ಭೋಗವಸ್ತುಗಳೆಂಬ ಮಾಂಸದ ಚೂರುಗಳಿಂದ ಆತ್ಮಸಂಯಮಿಯಾದವನು ತೃಪ್ತಿಹೊಂದುವನೇ?

೨೧. "ನಮ್ಮ ಇಂದ್ರಿಯಗಳಂತೆಯೇ, ಭೋಗವಸ್ತುಗಳೂ ಸಹ, ಅವುಗಳನ್ನು ಬಯಸಿ ಹೋದವರನ್ನು ಪೂರ್ಣವಾಗಿ ಮೋಸಗೊಳಿಸಬಲ್ಲವು; ಸಂಯಮಶೀಲನಾದವನು ಎಂದಿಗಾದರೂ ಇವುಗಳಿಂದ ತೃಪ್ತಿಯನ್ನು ಬಯಸುತ್ತಾನೆಯೇ?

೨೨. "ಕೆರಳಿದ ಕ್ರೂರ ಸರ್ಪದಂತೆ, ತಾನು ಕಚ್ಚಿದವರನ್ನು ನಾಶಗೊಳಿಸುವ ಈ ಲೌಕಿಕ ಭೋಗಗಳಿಂದ,

ಆತ್ಮಸಂಯಮಿಯು ಎಂದಾದರೂ ತೃಪ್ತಿಯನ್ನು ಪಡೆಬಲ್ಲನೆ?

೨೩. "ಹಸಿದ ನಾಯಿಯು ತೃಪ್ತಿ ಸಿಕ್ಕದಿದ್ದರೂ ಒಂದು ಎಲುಬಿನ ಚೂರನ್ನು ಕಡಿಯುವಂತೆ ಮಾನವನು ಲೌಕಿಕ ಭೋಗಗಳಿಂದ ತೃಪ್ತಿ ದೊರೆಯದಿದ್ದರೂ ಅವುಗಳನ್ನು ಅನುಭವಿಸಬಯಸುತ್ತಾನೆ. ಆತ್ಮಸಂಯಮಿಯಾದವನು ಅಸ್ಥಿಪಂಜರದಂಥ ಈ ಭೋಗ ವಸ್ತುಗಳಿಂದ ಎಂದಾದರೂ ಸುಖವನ್ನರಸುತ್ತಾನೆಯೇ?

೨೪. "ಭೋಗಾಪೇಕ್ಷೆಯಿಂದ ತನ್ನ ವಿವೇಕವನ್ನು ಕುರುಡಾಗಿಸಿಕೊಂಡಿರುವ ಅವುಗಳ ಆಸೆಗೆ ಕಡುದಾಸನಾಗಿರುವ ದೌರ್ಭಾಗ್ಯ ಮನುಷ್ಯನು ಆಸೆಯ ದಾಸನಾಗಿ ಬದುಕಿರುವಾಗಲೇ ಸತ್ತಂತಿರುತ್ತಾನೆ.

೨೫. "ಸಂಗೀತದ ಆಕರ್ಷಣೆಗೆ ಸಿಕ್ಕಿದ ಜಿಂಕೆಯು ತನ್ನ ವಿನಾಶವನ್ನು ತಾನೇ ತಂದುಕೊಳ್ಳುತ್ತದೆ. ದೀಪದ ಬೆಳಕಿನ ಆಕರ್ಷಣೆಗೆ ಸಿಕ್ಕಿದ ಪತಂಗವು ಬೆಂಕಿಗೆ ಆಹುತಿಯಾಗುತ್ತದೆ. ಮಾಂಸದ ಆಕರ್ಷಣೆಗೆ ಸಿಕ್ಕಿದ ಮೀನು ಗಾಳಕ್ಕೆ ಸಿಕ್ಕಿ ನಾಶವಾಗುತ್ತದೆ. ಹೀಗೆ ಲೌಕಿಕ ಸುಖಗಳು ಕೊನೆಯಲ್ಲಿ ದುಃಖವನ್ನು ಉಂಟುಮಾಡುತ್ತವೆ.

೨೬. " 'ಲೌಕಿಕ ವಸ್ತುಗಳಿಂದ ಸುಖ ದೊರೆಯುತ್ತದೆ' ಎಂಬುದಾಗಿ ಸಾಮಾನ್ಯ ಅಭಿಪ್ರಾಯ; ಆದರೆ ಯಾವುದೇ ವಸ್ತುವೂ ಸುಖಕ್ಕೆ ಅರ್ಹವಲ್ಲ; ಒಳ್ಳೆಯ ಉಡುಗೆ–ತೊಡುಗೆಗಳು ಮುಂತಾದ ಭೋಗದ ಸಲಕರಣೆಗಳು ಕೇವಲ ನೋವು ಪರಿಹಾರಗಳಷ್ಟೆ.

೨೭. "ಬಾಯಾರಿಕೆಯನ್ನು ಪರಿಹರಿಸಲು ನೀರು ಬೇಕು; ಹಸಿವನ್ನು ನಿವಾರಿಸಲು ಆಹಾರ ಬೇಕು; ಗಾಳಿ, ಬಿಸಿಲು ಮತ್ತು ಮಳೆಯಿಂದ ರಕ್ಷಿಸಿಕೊಳ್ಳಲು ಮನೆಯ ಆಶ್ರಯ ಬೇಕು; ಹಾಗೆಯೇ ಶೀತ ಮತ್ತು ನಗ್ನತೆಯಿಂದ ರಕ್ಷಣೆ ಪಡೆಯಲು ಉಡುಪು ಬೇಕು.

೨೮. "ಹಾಗೆಯೇ ಮಲಗಲು ಹಾಸಿಗೆ ಬೇಕು. ಪ್ರಯಾಣದ ಆಯಾಸ ಪರಿಹಾರಕ್ಕೆ ರಥ ಬೇಕು; ನಿಲ್ಲುವ ನೋವು ಪರಿಹಾರಕ್ಕೆ ಪೀಠ ಬೇಕು; ಹಾಗೆಯೇ ಮಲಿನತೆ ಪರಿಹಾರಕ್ಕೆ, ಆರೋಗ್ಯ ಮತ್ತು ಶಕ್ತಿಗಾಗಿ ಸ್ನಾನ ಬೇಕು.

೨೯. "ಆದ್ದರಿಂದ ಈ ಪಾಪದ ವಸ್ತುಗಳು ಮನುಷ್ಯನ ನೋವನ್ನು ಉಪಶಮನಗೊಳಿಸುತ್ತವೆಯೇ ಹೊರತು ಅವುಗಳಿಂದ ಆನಂದ ದೊರೆಯುವುದಿಲ್ಲ; ನೋವಿಗೆ ಉಪಶಮನಗಳಂತಿರುವ ಈ ಭೋಗದ ವಸ್ತುಗಳನ್ನು ಪ್ರಜ್ಞಾವಂತನಾದವನು ಎಂದಿಗೂ ಸುಖದ ಸಾಧನಗಳು ಎಂದು ಭಾವಿಸುವನೆ?

೩೦. "ಪಿತ್ತಜ್ವರದಿಂದ ಬಳಲುತ್ತಿರುವವನಿಗೆ ತಣ್ಣೀರಿನ ಪಟ್ಟಿಯನ್ನು ಹಾಕುವುದು ಸುಖಕರವೆನಿಸುತ್ತದೆ. ಈ ರೀತಿ ನೋವನ್ನು ಉಪಶಮನಗೊಳಿಸಲು ಪ್ರಯತ್ನಿಸುವಾಗ ಲಭಿಸುವ ಉಪಶಾಂತಿಯನ್ನು ಅವನು ಸುಖ ಎಂದು ಕರೆಯುತ್ತಾನೆ.

೩೧. "ನಮಗೆ ಲಭಿಸುವ ಸುಖದಲ್ಲಿ ತಾರತಮ್ಯವಿರುವುದಾದ್ದರಿಂದ, ಅದನ್ನು ನಾನು ಆನಂದ ಎಂದು ಕರೆಯುವುದಿಲ್ಲ. ಯಾವ ಪರಿಸ್ಥಿತಿಗಳಿಂದ ನಮಗೆ ಲೌಕಿಕ ಸುಖ ಲಭಿಸುತ್ತದೆಯೋ ಅವುಗಳೇ ನಮಗೆ ದುಃಖವನ್ನೂ ಉಂಟುಮಾಡುತ್ತವೆ.

೩೨. "ಭಾರಿ ಉಡುಪುಗಳು, ಸುಗಂಧ ಬೀರುವ ಕೆಂದಾಳೆ ಮರಗಳು, ಚಳಿಗಾಲದಲ್ಲಿ ಪ್ರಿಯವೆನಿಸುತ್ತವೆ. ಆದರೆ ಬೇಸಗೆಯಲ್ಲಿ ಅವು ಮುಜುಗರವೆನಿಸುತ್ತವೆ. ಚಂದ್ರನ ಬೆಳದಿಂಗಳು ಮತ್ತು ಶ್ರೀಗಂಧದ ಮರ ಇವು ಬೇಸಗೆಯಲ್ಲಿ ಬಹುಪ್ರಿಯವೆನಿಸಿದರೆ, ಚಳಿಗಾಲದಲ್ಲಿ ಅಪ್ರಿಯವಾಗುತ್ತವೆ.

೩೩. "ಲಾಭ–ನಷ್ಟ ಮುಂತಾದ ಪ್ರಸಿದ್ಧ ದ್ವಂದ್ವಗಳು ಪ್ರತಿಯೊಂದು ಈ ಜಗತ್ತಿನಲ್ಲಿ ಪರಸ್ಪರ ಅಭೇದ್ಯವೆಂಬಂತೆ

ಜೊತೆಗೂಡಿ ಬರುತ್ತವೆ. ಆದ್ದರಿಂದಲೇ ಈ ಜಗತ್ತಿನಲ್ಲಿ ಯಾವ ಮನುಷ್ಯನೂ ನಿರಂತರವಾಗಿ ಸುಖಿಯಾಗಿಯಾಗಲೀ ಅಥವಾ ದುಃಖಿಯಾಗಿಯಾಗಲೀ ಇರಲಾರ.

೩೪. "ಸುಖದುಃಖಗಳು ಹೀಗೆ ಜೊತೆಜೊತೆಯಾಗಿರುವುದನ್ನು ನೋಡಿ ನಾನು ದೊರೆತನ ಮತ್ತು ಗುಲಾಮಗಿರಿ ಈ ಎರಡೂ ಒಂದೇ ರೀತಿಯವು ಎಂದು ತಿಳಿಯುತ್ತೇನೆ. ದೊರೆಯಾದವನು ಸದಾ ಪ್ರಸನ್ನವದನನಾಗಿರುವುದಿಲ್ಲ. ಅಂತೆಯೇ ಒಬ್ಬ ಗುಲಾಮನು ಸದಾ ನೋವಿನಿಂದ ಅಳುವುದೂ ಇಲ್ಲ.

೩೫. "ರಾಜನಾದವನು ವ್ಯಾಪಕ ಹೊಣೆಗಾರಿಕೆಗಳನ್ನು ಹೊರಬೇಕಾದ್ದರಿಂದ ಅವನ ನೋವುಗಳು ಹೆಚ್ಚಾಗಿರುತ್ತವೆ. ರಾಜನಾದವನು ಗೂಟದಂತಿದ್ದು ಜಗತ್ತಿನ ಹಿತಕ್ಕಾಗಿ ನೋವನ್ನು ಸಹಿಸುತ್ತಾನೆ.

೩೬. "ಪರಿತ್ಯಜಿಸಲು ಅರ್ಹನಾದ ರಾಜಪದವಿಯನ್ನು ನಂಬಿ, ಮೋಸದ ಮಾರ್ಗಗಳನ್ನು ಅವಲಂಬಿಸಿದರೆ, ಅದು ಅವನ ದುರ್ದೈವ. ಒಂದು ವೇಳೆ, ಅದನ್ನೂ ನಂಬದೆ, ಪುಕ್ಕಲುತನದಿಂದ ರಾಜ್ಯಭಾರ ಮಾಡುವುದರಲ್ಲಿ ಯಾವ ರೀತಿಯ ಪುರುಷಾರ್ಥವಿದೆ?

೩೭ "ಇಡೀ ಜಗತ್ತನ್ನೇ ಗೆದ್ದ ರಾಜನು ಯಾವುದೋ ಒಂದು ರಾಜಧಾನಿಯಲ್ಲಿ ಅದರಲ್ಲಿಯೂ ಯಾವುದೋ ಒಂದು ನಗರದಲ್ಲಿ ವಾಸ ಮಾಡುತ್ತಾನೆ. ಮತ್ತು ಅಲ್ಲಿಯೂ ಅವನ ವಾಸಕ್ಕೆ ಬೇಕಾದದ್ದು ಒಂದು ಕೊಠಡಿ ಮಾತ್ರ. ರಾಜಪ್ರಭುತ್ವ ಎಂದರೆ, ಬೇರೆಯವರಿಗಾಗಿ ಪಡುವ ಶ್ರಮವಷ್ಟೆ?

೩೮. "ಅವನು ರಾಜನಾದರೂ ಒಮ್ಮೆ ತೊಡುವುದು ಒಂದೇ ಒಂದು ಜೊತೆ ಉಡುಪು ಮಾತ್ರ ಮತ್ತು ತಿನ್ನುವುದು ಹಸಿವನ್ನು ನೀಗಿಸುವಷ್ಟು ಆಹಾರ ಮಾತ್ರ; ರಾಜನಿಗೆ ಬೇಕಾದುದು ಒಂದೇ ಆಸನ; ಒಂದೇ ಹಾಸಿಗೆ. ಉಳಿದ ಹೆಚ್ಚುಗಾರಿಕೆಗಳೆಲ್ಲವೂ ಕೇವಲ ಪ್ರತಿಷ್ಠೆಗಾಗಿ ಮಾತ್ರ.

೩೯. "ಈ ವಸ್ತು ವೈಭವಗಳು ಮನುಷ್ಯನ ತೃಪ್ತಿಗೆ ಬೇಕಾದುವಾದರೆ, ನನ್ನಮಟ್ಟಿಗೆ ಆ ರಾಜ್ಯಭಾರ ಇಲ್ಲದೆಯೇ ತೃಪ್ತನಾಗಿರಬಲ್ಲೆ; ಒಬ್ಬ ಮನುಷ್ಯನಿಗೆ ಈ ಜಗತ್ತಿನಲ್ಲಿ ತೃಪ್ತಿ ಎಂಬುದು ದೊರೆತರೆ ಇನ್ನೂ ಮಿಕ್ಕ ಹೆಚ್ಚುಗಾರಿಕೆಗಳು ಅನವಶ್ಯಕವಲ್ಲವೆ?

೪೦. "ಸುಖಕ್ಕೆ ಸಾಧನವಾಗುವಂತಹ, ಮಂಗಳಕರವಾದ ಮಾರ್ಗವನ್ನು ಗಳಿಸಿದವನು, ಇಂತಹ ಭೌತಿಕ ಸುಖಗಳಿಂದ ಮೋಸ ಹೋಗಲಾರ. ತಾವು ಮೊದಲೇ ತಿಳಿಸಿದಂತೆ ನಾವಿಬ್ಬರೂ ತುಂಬ ಆತ್ಮೀಯರಾದ್ದರಿಂದ ಈ ಲೌಕಿಕ ಸುಖಕ್ಕೆ ಏನಾದರೂ ಬೆಲೆಯೆಂಬುದಿದೆಯೇ ಎಂಬುದನ್ನು ದಯವಿಟ್ಟು ತಿಳಿಸಿ?

೪೧. "ನಾನು ಯಾರ ಮೇಲೂ ಕೋಪಗೊಂಡು ಮನೆಬಿಟ್ಟವನಲ್ಲ ಅಥವಾ ನನ್ನ ಕಿರೀಟವು ವೈರಿಯ ಬಾಣದಿಂದ ಮುರಿದುಬಿದ್ದುದರಿಂದ ಹೊರಗೆ ಬಂದವನಲ್ಲ: ಅಥವಾ ನಾನು ಬೇರೆ ಯಾವುದೋ ಹಿರಿದಾದ ಕೀರ್ತಿಯನ್ನು ಬಯಸಿದವನಲ್ಲ; ಆದ್ದರಿಂದ ನಿಮ್ಮ ಈ ಸಲಹೆಯನ್ನು ನಿರಾಕರಿಸುತ್ತೇನೆ.

೪೨. "ಸುಗಂಧವನ್ನು ಬೀರುವ ಕ್ರೂರ ಸರ್ಪದಿಂದ ಬಿಡುಗಡೆ ಪಡೆದು ಬಂದವನಂತೆ ಅಥವಾ ಧಗಧಗಿಸುವ ಹುಲ್ಲಿನ ಬೇಗೆಯಿಂದ ದಾಟಿಬಂದವನು ಲೌಕಿಕ ಭೋಗಗಳಿಂದ ಈಗ ಹೊರಬಂದವನು ಅದನ್ನು ಪುನಃ ಎಂದಿಗೂ ಬಯಸಲಾರ.

೪೩. "ಕಣ್ಣಿದ್ದವನು ಕುರುಡನನ್ನು ನೋಡಿ ಅಸೂಯೆಪಡುವನು, ಸ್ವತಂತ್ರನಾದವನು ಬಂಧಿತನಾದವನನ್ನು ಶ್ರೀಮಂತನಾದವನು ದರಿದ್ರನನ್ನು, ಚಿತ್ತಸ್ವಾಸ್ಥ್ಯವುಳ್ಳವನು ಹುಚ್ಚನನ್ನು ಕಂಡು ಅಸೂಯೆಪಡುವರು. ಲೌಕಿಕ ವಸ್ತುಗಳಿಗೆ ಅಂಟಿಬಿದ್ದವನನ್ನು ಕಂಡು ಪ್ರಾಜ್ಞನಾದವನು ಅಸೂಯೆಪಡುವನು.

೪೪. "ಸ್ನೇಹಿತರೇ ಭಿಕ್ಷುಕನನ್ನು ನೋಡಿ ಯಾರೂ ಕನಿಕರಿಸಬೇಕಾಗಿಲ್ಲ. ಅವನಿಗೆ ಅತಿಶ್ರೇಷ್ಠವಾದ ಸುಖವಿದೆ, ಪೂರ್ಣ ಶಾಂತಿಯಿದೆ ಮತ್ತು ಇನ್ನು ಮುಂದೆ ಅವನ ದುಃಖಗಳು ಹಿಂಗಿಹೋಗುತ್ತವೆ.

೪೫. "ಅತ್ಯಂತ ಶ್ರೀಮಂತಿಕೆಯಿದ್ದರೂ ಮತ್ತಷ್ಟು ಬೇಕೆಂಬ ದಾಹವುಳ್ಳವನನ್ನು ನೋಡಿ ಕನಿಕರಿಸಬೇಕು. ಇಲ್ಲಿ ಯಾರಿಗೆ ಮನಶ್ಶಾಂತಿ ದೊರೆತಿಲ್ಲವೊ ಅಂತಹವರು ಬದುಕಿನ ಮುಂದೆಲ್ಲಾ ದುಃಖವನ್ನೇ ಅನುಭವಿಸುತ್ತಾರೆ.

೪೬. "ಈವರೆಗೆ ತಾವು ನನಗೆ ಹೇಳಿದ ಮಾತುಗಳೆಲ್ಲವೂ ತಮ್ಮ ಸ್ವಭಾವ, ತಮ್ಮ ಜೀವನಕ್ರಮ ಮತ್ತು ಕುಟುಂಬದ ನಂಬಿಕೆಗಳಿಗೆ ಅನುಗುಣವಾಗಿವೆ; ಹಾಗೆಯೇ ನನ್ನ ಇಚ್ಛೆಯಂತೆ ನಾನು ನಡೆಯಬೇಕೆಂಬ ನನ್ನ ಸಂಕಲ್ಪವೂ ಸಹ ನನ್ನ ಸ್ವಭಾವ, ಜೀವನಕ್ರಮ ಮತ್ತು ನನ್ನ ಕುಟುಂಬದ ನಂಬಿಕೆಗಳಿಗನುಗುಣವಾಗಿದೆ."

## ೪. ಗೌತಮನ ಉತ್ತರ (ಮುಂದುವರಿದುದು)

೧. "ಜೀವನದ ಹೋರಾಟದಲ್ಲಿ ನಾನು ಗಾಯಗೊಂಡಿದ್ದೇನೆ ಮತ್ತು ಶಾಂತಿಗಾಗಿ ಹಂಬಲಿಸಿ, ಹೊರಬಂದಿದ್ದೇನೆ; ಈ ಭವಲೋಕದ ನೋವುಗಳಿಂದ ನಾನು ಪಾರಾದರೆ ಸಾಕಾಗಿದೆ. ನನಗೆ ಸ್ವರ್ಗದ ಸಾಮ್ರಾಜ್ಯವನ್ನು ಕೊಟ್ಟರೂ ನನಗೆ ಅದು ಬೇಡ. ಮಾನವರ ನಡುವಿನ ಲೌಕಿಕ ಸುಖದ ಮಾತಿನ್ನೇಕೆ?

೨. "ಓ ದೊರೆಯೇ, ನೀವು ವಿವರಿಸಿದಂತೆ ಮಾನವಜನ್ಮದ ಪರಮೋಚ್ಚ ಗುರಿಗಳಾದ ಮೂರು ಪುರುಷಾರ್ಥಗಳು ನನ್ನ ದೃಷ್ಟಿಯಲ್ಲಿ ಕೇವಲ ದುಃಖದ ಸಾಧನಗಳಷ್ಟೆ! ಅವು ವಿನಾಶವಾಗುವಂಥವು. ಅವುಗಳಿಂದ ಎಂದಿಗೂ ತೃಪ್ತಿ ದೊರೆಯಲಾರದು.

೩. "ನೀವು ಹೇಳುವಂತೆ ಯೌವ್ವನವು ಪರಿವರ್ತನಶೀಲವಾದ್ದರಿಂದ, ವೈರಾಗ್ಯವನ್ನು ಗಳಿಸಲು ಮುಪ್ಪಿನವರೆಗೂ ಕಾಯಬೇಕು ಎಂಬ ಮಾತು ಸರಿಯಾದದ್ದಲ್ಲ; ಏಕೆಂದರೆ ಮುಪ್ಪು ಅನಿಶ್ಚಿತವಾಗಬಹುದು ಮತ್ತು ಯೌವ್ವನ ನಿಶ್ಚಿತವಾಗಲೂಬಹುದು.

೪. "ವಿಧಿಯೆಂಬುದು ಬಹುಚಾತುರ್ಯದಿಂದ ಈ ಜಗತ್ತನ್ನು ಎಲ್ಲ ಕಾಲದಲ್ಲಿಯೂ ತನ್ನ ಅಧೀನದಲ್ಲಿಟ್ಟುಕೊಂಡು ನಡೆಸುತ್ತಿರುವುದರಿಂದ, ಶಾಂತಿಯನ್ನರಸುವ ವಿವೇಕಿಯು ಸಾವು ಯಾವಾಗ ಬರುವುದೆಂಬುದು ಗೊತ್ತಿಲ್ಲದೆ, ಎಂದೋ ಬರುವ ಮುಪ್ಪಿಗಾಗಿ ಕಾದು ಕುಳಿತಿರುತ್ತಾನೆಯೇ?

೫. "ಮೃತ್ಯು ಎಂಬ ಬೇಟೆಗಾರನು ವಯೋಮಾನವೆಂಬ ಅಸ್ತ್ರವನ್ನು ಹಿಡಿದು ರೋಗರುಜಿನಗಳೆಂಬ ಬಾಣಗಳನ್ನು ಬಿಡುತ್ತಾ, ಅರಣ್ಯವೆಂಬ ವಿಧಿಯ ಕಡೆ ಜಿಂಕೆಯಂತೆ ಓಡುತ್ತಿರುವ ಜೀವಿಗಳನ್ನು ಕೊಲ್ಲುತ್ತಾ ಬೇಟೆಯಾಡುತ್ತಿರುವಾಗ, ಬಹು ದೀರ್ಘ ಕಾಲ ಮುಪ್ಪಿನವರೆಗೂ ಬದುಕುತ್ತೇನೆ ಎಂದು ಯಾರು ತಾನೇ ನಂಬಲು ಸಾಧ್ಯ?

೬. "ಆದ್ದರಿಂದ, ಯೌವ್ವನದ ಮಗನಾಗಲೀ, ಮುಪ್ಪಿನ ತಂದೆಯಾಗಲೀ, ಮಗುವಾಗಲೀ, ಅದು ಯಾರೇ ಆಗಲಿ ಅವರು ತಡಮಾಡದೆ ದಯಾಮಯನಾದ ಧರ್ಮಗುರುವಿನ ಮಾರ್ಗದರ್ಶನದಲ್ಲಿ ಸಾಧನೆಯಲ್ಲಿ ತೊಡಗುವುದು ಯುಕ್ತ.

೭. "ನೀವು ಕೊಟ್ಟ ಮತ್ತೊಂದು ಸೂಚನೆಯೆಂದರೆ, ನಿಮ್ಮ ವಂಶದ ಪೂರ್ವಜರು ಮಾಡಿದಂತೆ

ಧಾರ್ಮಿಕ ವಿಧಿಗಳಾದ ಯಜ್ಞಯಾಗಾದಿಗಳನ್ನು ಮಾಡಿ ಅವುಗಳಿಂದ ಲಭಿಸುವ ಮಹತ್ತ್ವದ ಫಲಗಳನ್ನು ಅನುಭವಿಸುವುದು. ಅಂತಹ ಯಜ್ಞಯಾಗಾದಿಗಳಿಗೆ ನನ್ನ ವಂದನೆಗಳು! ಇತರರನ್ನು ಹಿಂಸಿಸಿ ಅದರಿಂದ ಲಭಿಸುವ ಫಲ ನನಗೆ ಬೇಡ.

೮. "ಪ್ರತಿಫಲಾಪೇಕ್ಷೆಯಿಂದ ಕೇವಲ ಅಸಹಾಯಕವಾದ ಜೀವಿಗಳನ್ನು ಕೊಲ್ಲುವುದು, ಸಹೃದಯನೂ ದಯಾಶೀಲನೂ ಆದ ಮನುಷ್ಯನಿಗೆ ಅನುಚಿತವಾದದ್ದು; ಅದರಿಂದ ಶಾಶ್ವತ ಸ್ವರ್ಗವೇ ಲಭಿಸಿದರೂ ಅದು ಸಲ್ಲದು.

೯. "ನಿಜವಾದ ಧರ್ಮದಲ್ಲಿ ಆತ್ಮಸಂಯಮ, ನಿಷ್ಕಾಮ ಸೇವೆ, ನೈತಿಕ ಸಾಧನಮಾರ್ಗಗಳಂಥ ಬೇರೊಂದು ರೀತಿನೀತಿಗಳು ಇಲ್ಲದಿದ್ದಾಗಲೂ ಸಹ, ಪ್ರಾಣಿವಧೆಯಂಥ ಯಜ್ಞಯಾಗಗಳ ಮೂಲಕವೇ ಉನ್ನತ ಫಲಗಳು ಸಾಧ್ಯ ಎಂಬ ಮಾತನ್ನು ಅನುಸರಿಸಲಾಗುವುದಿಲ್ಲ.

೧೦. "ಮತ್ತೊಂದು ಜೀವಿಯನ್ನು ಹಿಂಸಿಸುವ ಮೂಲಕ ಇಹಲೋಕದ ಸುಖ ದೊರೆಯುವುದೆಂಬ ಮಾತು ಅನುಕಂಪ ಜೀವಿಯಾದ ಪ್ರಜ್ಞಾವಂತನಿಗೆ ಅಸಹ್ಯಕರವಾಗಿ ಕಾಣುತ್ತದೆ; ಇನ್ನು ಅದರಿಂದ ನಮ್ಮ ಕಣ್ಣಿಗೆ ಕಾಣದ ಪರಲೋಕದ ಸುಖ ದೊರೆಯುತ್ತದೆ ಎಂಬ ಮಾತು ಮತ್ತೇಗೆ ಕಾಣಬಹುದು?

೧೧. "ಓ ದೊರೆಯೇ, ಭವಿಷ್ಯದ ಫಲಾಪೇಕ್ಷೆಗಾಗಿ ಕಾರ್ಯ ಕೈಗೊಳ್ಳಲು ಯಾರೂ ನನ್ನನ್ನು ಸೆಳೆಯಬಾರದು. ನನಗೆ ಪುನರ್ಜನ್ಮದಲ್ಲಿ ಹೆಚ್ಚಿನ ಆಕರ್ಷಣೆಯಿಲ್ಲ; ಮೇಘದಿಂದ ಸುರಿಯುವ ಮಳೆಯ ರಭಸಕ್ಕೆ ಸಿಕ್ಕಿ ನಲುಗಿದ ಸಸಿಗಳಂತೆ ಆ ನಂಬಿಕೆಗಳು ಅನಿಶ್ಚಿತತೆಯಿಂದ ಹೊಯ್ದಾಡುತ್ತವೆ."

೧೨. ದೊರೆಯು ಕೈಜೋಡಿಸಿ ಈ ರೀತಿ ಹೇಳಿದನು: "ಯಾವ ಅಡ್ಡಿ–ಆತಂಕವೂ ಇಲ್ಲದೆ ನಿನ್ನ ಬಯಕೆ ಕೈಗೂಡಲಿ. ನೀನು ಮಾಡಬಯಸಿರುವುದೆಲ್ಲವನ್ನೂ ನೀನು ಮಾಡುವಂತಾಗಲಿ. ಇನ್ನು ಮೇಲೆ ನಿನ್ನ ಕೃಪೆ ಸದಾ ನನ್ನ ಮೇಲಿರಲಿ."

೧೩. ಮತ್ತೊಮ್ಮೆ ತಮ್ಮನ್ನು ಭೇಟಿ ಮಾಡುವ ಗೌತಮನ ಖಚಿತ ಭರವಸೆಯೊಂದಿಗೆ ರಾಜನು ತನ್ನ ಪರಿವಾರದೊಂದಿಗೆ ಹಿಂತಿರುಗಿದನು.

## ೫. ಶಾಂತಿಯ ವಾರ್ತೆ

೧. ಗೌತಮನು ರಾಜಗೃಹದಲ್ಲಿ ತಂಗಿರುವಾಗಲೇ ಬೇರೆ ಐದು ಜನ ಪರಿವ್ರಾಜಕರು ಬಂದು ಗೌತಮನ ಕುಟೀರದ ಬಳಿ ತಮ್ಮ ಕುಟೀರಗಳನ್ನು ನಿರ್ಮಿಸಿಕೊಂಡರು.

೨. ಈ ಐದು ಜನ ಪರಿವ್ರಾಜಕರೆಂದರೆ ಕೌಂಡಿನ್ಯ, ಅಶ್ವಜಿತ್, ಕಾಶ್ಯಪ, ಮಹಾನಾಮ ಮತ್ತು ಭಾದುಕ.

೩. ಗೌತಮನ ಈ ವೇಷವನ್ನು ನೋಡಿ ಚಕಿತಕರಾದ ಅವರೂ ಯಾವ ಕಾರಣಕ್ಕಾಗಿ ಅವನು ಪರಿವ್ರಾಜಕ ವೃತ್ತಿಯನ್ನು ಕೈಗೊಂಡಿರಬಹುದು ಎಂದು ಆಶ್ಚರ್ಯಪಟ್ಟರು.

೪. ಅವರೂ ಸಹ ಚಕ್ರವರ್ತಿ ಬಿಂಬಿಸಾರನಂತೆ ಇವನನ್ನು ನಾನಾ ರೀತಿಯಲ್ಲಿ ಪ್ರಶ್ನಿಸಿದರು.

೫. ತಾನು ಪರಿವ್ರಾಜಕನಾಗಲು ಕಾರಣವಾದ ಸನ್ನಿವೇಶಗಳನ್ನೆಲ್ಲ ಅವನು ವಿವರಿಸಿದ ಮೇಲೆ ಅವರು ಹೇಳಿದರು: "ನಾವು ಈ ವಿಚಾರಗಳನ್ನೆಲ್ಲಾ ಕೇಳಿದ್ದೇವೆ. ನೀನು ಅರಮನೆಯನ್ನು ತೊರೆದು ಬಂದಮೇಲೆ ಅಲ್ಲಿ ಏನು ನಡೆಯಿತು ಎಂಬುದು ನಿನಗೆ ತಿಳಿದಿದೆಯೇ?" ಎಂದರು.

೬. ಸಿದ್ಧಾರ್ಥ ಹೇಳಿದ: "ಇಲ್ಲ." ಆಗ ಅವರು ಕಪಿಲವಸ್ತುವಿನಿಂದ ಹೊರಟು ಅವನು ಬಂದ ಮೇಲೆ ಶಾಕ್ಯರು ಕೋಲಿಯರ ವಿರುದ್ಧ ಯುದ್ಧ ಹೂಡಬಾರದೆಂದು ಒಂದು ದೊಡ್ಡ ಚಳವಳಿಯೇ ನಡೆಯಿತೆಂದು ಹೇಳಿದರು.

೭. ಕಪಿಲವಸ್ತುವಿನ ಸ್ತ್ರೀ–ಪುರುಷರು, ಮಕ್ಕಳು–ಮರಿಗಳಾದಿಯಾಗಿ ಬಾವುಟಗಳನ್ನು ಹಿಡಿದು "ಕೋಲಿಯರು ನಮ್ಮ ಸೋದರರು", "ಸೋದರರಾದವರು ಪರಸ್ಪರ ಕಲಹ ಮಾಡುವುದು ತಪ್ಪು", "ಸಿದ್ಧಾರ್ಥ ಗೌತಮನ ದೇಶತ್ಯಾಗವನ್ನು ಮರೆಯಬೇಡಿ" ಎಂದೆಲ್ಲಾ ಕೂಗುತ್ತಾ ಮೆರವಣಿಗೆಯೊಂದಿಗೆ ಪ್ರದರ್ಶನಗಳನ್ನು ನಡೆಸಿದರು.

೮. ಈ ಚಳುವಳಿಯ ಫಲವಾಗಿ ಶಾಕ್ಯ ಸಂಘವು ತನ್ನ ಸದಸ್ಯರ ಸಭೆಯನ್ನು ಕರೆದು ತಮ್ಮ ಹಿಂದಿನ ನಿರ್ಣಯವನ್ನು ಕುರಿತು ಪುನರಾಲೋಚಿಸಬೇಕಾಯಿತು. ಈ ಸಾರಿಯ ಸಭೆಯಲ್ಲಿ ಬಹುಜನ ಸದಸ್ಯರು ಕೋಲಿಯರೊಂದಿಗೆ ರಾಜಿ ಮಾಡಿಕೊಳ್ಳಲು ಬಯಸಿದರು.

೯. ಆಗ ಸಂಘವು ಐದು ಜನ ಶಾಕ್ಯರನ್ನು ತಮ್ಮ ಪ್ರತಿನಿಧಿಗಳಾಗಿ ಆರಿಸಿ ಕೋಲಿಯರೊಂದಿಗೆ ಶಾಂತಿಸಂಧಾನ ನಡೆಸಲು ಅವರ ಬಳಿ ಕಳುಹಿಸಬೇಕೆಂದು ನಿರ್ಣಯಿಸಿತು.

೧೦. ಇದನ್ನು ಕೇಳಿದ ಕೋಲಿಯರು ತುಂಬಾ ಸಂತೋಷಗೊಂಡರು. ಅವರೂ ಸಹ ಶಾಕ್ಯರ ಪ್ರತಿನಿಧಿಗಳೊಂದಿಗೆ ವ್ಯವಹರಿಸಲು ಐದು ಜನ ಕೋಲಿಯರನ್ನು ತಮ್ಮ ಪ್ರತಿನಿಧಿಗಳಾಗಿ ಆರಿಸಿದರು.

೧೧. ಎರಡೂ ಕಡೆಯ ಈ ಪ್ರತಿನಿಧಿಗಳು ಸೇರಿ ಚರ್ಚಿಸಿ ರೋಹಿಣಿ ನದಿಯ ನೀರಿನ ವ್ಯಾಜ್ಯವನ್ನು ತೀರ್ಮಾನಿಸಲು, ಪೂರ್ಣಾಧಿಕಾರವುಳ್ಳ ಒಂದು ಕಾಯಂ ಪಂಚಾಯಿತರ ಮಂಡಲಿಯನ್ನು ಸ್ಥಾಪಿಸಲು ಒಪ್ಪಿ, ಆ ಮಂಡಲಿಯ ತೀರ್ಮಾನಕ್ಕೆ ಎರಡು ಕಡೆಯವರೂ ಬದ್ಧರಾಗಿರಬೇಕೆಂದು ನಿರ್ಣಯಿಸಿದರು. ಹೀಗಾಗಿ, ಯುದ್ಧದ ಭಯವು ಶಾಂತಿಯಲ್ಲಿ ಕೊನೆಗೊಂಡಿತು.

೧೨. ಕಪಿಲವಸ್ತುವಿನಲ್ಲಿ ನಡೆದ ಈ ಘಟನೆಗಳನ್ನು ವಿವರಿಸಿದ ಆ ಪರಿವ್ರಾಜಕರು ಗೌತಮನಿಗೆ ಹೇಳಿದರು: "ನೀನು ಇನ್ನು ಪರಿವ್ರಾಜಕನಾಗಿ ಮುಂದುವರಿಯುವ ಅವಶ್ಯಕತೆಯಿಲ್ಲ. ನೀನು ಹಿಂತಿರುಗಿ ಹೋಗಿ ನಿನ್ನ ತಂದೆತಾಯಿಯರನ್ನು ಸೇರಿಸಿಕೊಳ್ಳಬಾರದೇಕೆ?"

೧೩. ಅದಕ್ಕೆ ಸಿದ್ಧಾರ್ಥನು ಹೇಳಿದನು. "ಈ ಶುಭವಾರ್ತೆಯನ್ನು ತಿಳಿದು ನನಗೆ ಸಂತೋಷವೇನೋ ಆಗಿದೆ. ಇದು ನನಗಾದ ಗೆಲುವು ನಿಜ. ಆದರೂ ನಾನು ಮನೆಗೆ ಹಿಂತಿರುಗಿ ಹೋಗಲಾರೆ. ನಾನು ಹೋಗಬಾರದು. ನಾನು ಪರಿವ್ರಾಜಕನಾಗಿ ಮುಂದುವರಿಯುತ್ತೇನೆ."

೧೪. ಆಗ ಗೌತಮನು ಆ ಐದು ಪರಿವ್ರಾಜಕರನ್ನು ಅವರ ಮುಂದಿನ ಕಾರ್ಯಕ್ರಮವೇನು ಎಂದು ಕೇಳಿದನು. ಅವರು ಉತ್ತರಿಸಿದರು: "ನಾವು ತಪಸ್ಸು ಮಾಡಲು ನಿರ್ಧರಿಸಿದ್ದೇವೆ. ನೀವೇಕೆ ನಮ್ಮನ್ನು ಸೇರಬಾರದು?" ಅದಕ್ಕೆ ಸಿದ್ಧಾರ್ಥ ಉತ್ತರವಾಗಿ "ಶೀಘ್ರವಾಗಿ; ನಾನು ಮೊದಲಿಗೆ ಬೇರೆ ಬೇರೆ ಮಾರ್ಗಗಳನ್ನು ಪರಿಶೀಲಿಸಬೇಕಾಗಿದೆ" ಎಂದನು.

೧೫. ಆಗ ಆ ಐದು ಜನ ಪರಿವ್ರಾಜಕರು ಸಿದ್ಧಾರ್ಥನನ್ನು ಬಿಟ್ಟು ಹೊರಟುಹೋದರು.

# ೬. ಸಮಸ್ಯೆಗೊಂದು ಹೊಸ ನೋಟ

೧. ಶಾಕ್ಯರು ಮತ್ತು ಕೋಲಿಯರು ತಮ್ಮ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಲು ನಿಶ್ಚಯಿಸಿರುವುದನ್ನು ಪರಿವ್ರಾಜಕರಿಂದ ತಿಳಿದ ಗೌತಮನಲ್ಲಿ ಸಾಕಷ್ಟು ತಳಮಳ ಉಂಟಾಯಿತು.

೨. ಏಕಾಂತದಲ್ಲಿ, ಇನ್ನು ಮುಂದೆ ತಾನು ಪರಿವ್ರಾಜಕನಾಗಿ ಮುಂದುವರಿಯಲು ಇನ್ನೇನಾದರೂ ಕಾರಣ ಉಳಿದಿದೆಯೇ ಎಂಬ ವಿಚಾರವನ್ನು ಕುರಿತು ತನ್ನಲ್ಲಿ ತಾನೇ ಚಿಂತಿಸತೊಡಗಿದನು.

೩. ನಾನು ನನ್ನ ಜನರನ್ನು ಬಿಟ್ಟುಬಂದದ್ದು ಏತಕ್ಕಾಗಿ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡನು.

೪. ಅವನು ಯುದ್ಧವನ್ನು ವಿರೋಧಿಸುವುದಕ್ಕಾಗಿ ತನ್ನ ಮನೆಯನ್ನು ಬಿಟ್ಟು ಬಂದಿದ್ದನು. "ತಮಗೆ ಯುದ್ಧ ಬೇಡ ಎಂದ ಮೇಲೆ ನನಗೆ ಮತ್ತೆ ಯಾವ ಸಮಸ್ಯೆ ಉಳಿದಿದೆ? ಯುದ್ಧದ ಸಮಸ್ಯೆ ಕೊನೆಗೊಂಡದ್ದರಿಂದ ನನ್ನ ಸಮಸ್ಯೆಗಳೆಲ್ಲಾ ಕೊನೆಗೊಂಡಂತಾಯಿತೆ?"

೫. ಈ ವಿಚಾರವನ್ನು ಕುರಿತು ಆಳವಾಗಿ ಆಲೋಚಿಸಿದ ಮೇಲೆ ನನ್ನ ಸಮಸ್ಯೆ ಪೂರ್ಣವಾಗಿ ಕೊನೆಗೊಂಡಿಲ್ಲ ಎಂಬ ಅರಿವು ಅವನಿಗಾಯಿತು.

೬. "ಯುದ್ಧದ ಸಮಸ್ಯೆ ಮುಖ್ಯವಾಗಿ ಮಾನವನ ಸಂಘರ್ಷದ ಒಂದು ಸಮಸ್ಯೆ. ಇದು ದೊಡ್ಡ ಸಮಸ್ಯೆಯ ಒಂದು ಭಾಗ ಮಾತ್ರ.

೭. "ಇಂತಹ ಸಂಘರ್ಷ ರಾಜರಾಜರುಗಳು ಮತ್ತು ರಾಷ್ಟ್ರ–ರಾಷ್ಟ್ರಗಳ ನಡುವೆ ಮಾತ್ರವೇ ನಡೆಯುವಂತಹುದಲ್ಲ, ಇದು ಪ್ರಸಿದ್ಧರು, ಬ್ರಾಹ್ಮಣರು, ಗೃಹಸ್ಥರು, ತಾಯಿ–ಮಗ, ತಂದೆ–ಮಗ, ಸೋದರ–ಸೋದರಿಯರ ನಡುವೆಯೂ ಮತ್ತು ಸ್ನೇಹಿತರ ನಡುವೆಯೂ ನಡೆಯುತ್ತದೆ.

೮. "ರಾಷ್ಟ್ರ–ರಾಷ್ಟ್ರಗಳ ನಡುವಿನ ಕಲಹವು ಸಂದರ್ಭಾನುಸಾರ ನಡೆಯುವಂತಹುದು. ಆದರೆ ವರ್ಗ ಸಂಘರ್ಷ ನಿರಂತರವಾಗಿ ನಡೆಯುತ್ತದೆ. ಇದು ಜಗತ್ತಿನ ಎಲ್ಲ ರೀತಿಯ ದುಃಖ–ದುಮ್ಮಾನಗಳಿಗೂ ಕಾರಣವಾಗಿದೆ.

೯. "ಅಹುದು; ನಾನು ಯುದ್ಧದ ಕಾರಣದಿಂದ ಮನೆಯನ್ನು ಬಿಟ್ಟು ಹೊರಬಂದೆನು. ಶಾಕ್ಯರು ಮತ್ತು ಕೋಲಿಯರ ನಡುವೆ ಯುದ್ಧಕ್ಕೆ ಪರಿಹಾರ ದೊರೆತಿದೆಯಾದರೂ ನಾನು ಮಾತ್ರ ಹಿಂತಿರುಗಿ ಮನೆಗೆ ಹೋಗಲಾರೆ. ನನ್ನ ಸಮಸ್ಯೆ ಈಗ ತುಂಬಾ ವಿಶಾಲಗೊಂಡಿರುವಂತೆ ನನಗೆ ಕಾಣುತ್ತದೆ. ಸಾಮಾಜಿಕ ಸಂಘರ್ಷದ ಸಮಸ್ಯೆಗೆ ನಾನು ಈಗ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ.

೧೦. "ಇಲ್ಲಿಯವರೆಗೆ ಬೆಳೆದುಬಂದಿರುವ ಪುರಾತನ ದಾರ್ಶನಿಕ ಸಿದ್ಧಾಂತಗಳು ಈ ಸಮಸ್ಯೆಗೆ ಯಾವ ಪರಿಹಾರವನ್ನು ಸೂಚಿಸಬಲ್ಲವು?

೧೧. "ಇವುಗಳಲ್ಲಿ ಯಾವುದಾದರೂ ಒಂದು ಸಾಮಾಜಿಕ ಸಿದ್ಧಾಂತವನ್ನು ಗೌತಮನು ಒಪ್ಪಬಲ್ಲನೇ?"

೧೨. ಇದೆಲ್ಲವನ್ನು ಖುದ್ದಾಗಿ ತಾನೇ ಪರೀಕ್ಷಿಸಿ ನೋಡಲು ಸಿದ್ಧಾರ್ಥನು ನಿರ್ಧರಿಸಿದನು.

## ವಿಭಾಗ : ೩

# ಹೊಸ ಬೆಳಕಿನ ಅನ್ವೇಷಣೆ

೧. ಭೃಗುಮುನಿಗಳ ಆಶ್ರಮದಲ್ಲಿ ತಂಗಿದ್ದು
೨. ಸಾಂಖ್ಯದರ್ಶನದ ಅಧ್ಯಯನ
೩. ಸಮಾಧಿ ಮಾರ್ಗದಲ್ಲಿ ಶಿಕ್ಷಣ
೪. ತಪಶ್ಚರ್ಯೆಯ ಅಭ್ಯಾಸ
೫. ತಪಶ್ಚರ್ಯೆಯ ಪರಿತ್ಯಾಗ

# ೧. ಭೃಗುಮುನಿಗಳ ಆಶ್ರಮದಲ್ಲಿ ತಂಗಿದುದು

೧. ಸಾಧನೆಯ ವಿವಿಧ ಮಾರ್ಗಗಳನ್ನು ಅನುಸರಿಸುವ ಉದ್ದೇಶದಿಂದ ಗೌತಮನು ರಾಜಗೃಹವನ್ನು ಬಿಟ್ಟು ಆರಾದಕಲಂ ಅವರನ್ನು ಭೇಟಿ ಮಾಡಲು ಹೊರಟನು.

೨. ದಾರಿಯಲ್ಲಿ ಸಾಗುವಾಗ ಭೃಗುಮುನಿಗಳ ಆಶ್ರಮವನ್ನು ಕಂಡು ಕುತೂಹಲದಿಂದ ಆಶ್ರಮವನ್ನು ಹೊಕ್ಕನು.

೩. ಆಶ್ರಮವಾಸಿಗಳಾದ ತಪೋಧನರೂ ಜ್ಞಾನಿಗಳೂ ಎನಿಸಿದ ಬ್ರಾಹ್ಮಣರು ಕಾಡಿಗೆ ಹೋಗಿ ಹೂ, ದರ್ಭೆ, ಸಮಿತ್ತು ಇವುಗಳನ್ನು ಸಂಗ್ರಹಿಸಿ, ಅದೇ ತಾನೇ ಆಶ್ರಮಕ್ಕೆ ಹಿಂತಿರುಗಿ ಬಂದಿದ್ದರು. ಅವರು ತಮ್ಮ ಕುಟೀರಗಳಿಗೆ ಹಿಂದಿರುಗದೆ, ಸಿದ್ಧಾರ್ಥನನ್ನು ನೋಡಲು ಹೋದರು.

೪. ಆಶ್ರಮವಾಸಿಗಳಿಂದ ಸೂಕ್ತ ರೀತಿಯಲ್ಲಿ ಸ್ವಾಗತ ಪಡೆದ ಗೌತಮನು ಆಶ್ರಮದ ಗುರುಹಿರಿಯರಿಗೆ ತನ್ನ ಭಕ್ತಿ–ಗೌರವವನ್ನು ಸೂಚಿಸಿದನು.

೫. ಮುಕ್ತಿಯನ್ನು ಬಯಸಿ ಬಂದ ಈ ಪ್ರಾಜ್ಞನಾದ ಸಿದ್ಧಾರ್ಥನು ಆಶ್ರಮದಲ್ಲಿ ನೆರೆದಿದ್ದ ಮುಮುಕ್ಷುಗಳ ಪವಿತ್ರವಾದ ಸಹಯೋಗದೊಂದಿಗೆ ಆಶ್ರಮದ ಪರಿಸರವನ್ನೆಲ್ಲಾ ಸುತ್ತಿಬಂದನು.

೬. ಆ ಪವಿತ್ರವಾದ ವಾತಾವರಣದಲ್ಲಿ ತಪೋನಿರತರು ನಾನಾ ರೀತಿಯ ಅಧ್ಯಾತ್ಮ ಸಾಧನೆಯಲ್ಲಿ ತೊಡಗಿರುವುದನ್ನು, ಮೊದಲ ಬಾರಿಗೆ ಗೌತಮನು ಬಹು ವಿನೀತ ಭಾವದಿಂದ ನೋಡಿದನು.

೭. ತಪಸ್ಸಾಧನೆಯಲ್ಲಿ ಪರಿಣಿತನೆನಿಸಿದ್ದ ಭೃಗುಮುನಿಯು ನಾನಾ ರೀತಿಯ ತಪಸ್ಸಿನ ಮಾರ್ಗಗಳು ಮತ್ತು ಅವುಗಳಿಂದ ಲಭಿಸುವ ಪ್ರತಿಫಲಗಳನ್ನು ಕುರಿತು ಗೌತಮನಿಗೆ ಈ ರೀತಿ ವಿವರಿಸಿದನು:

೮. "ತಪಸ್ಸಾಧನೆಯಲ್ಲಿ ತೊಡಗಿರುವ ಸಾಧಕರು ಶಾಸ್ತ್ರಗ್ರಂಥಗಳಲ್ಲಿ ಹೇಳಿರುವಂತೆ ಬೇಯಿಸದೆ ಇರುವ ನೀರಿನಿಂದ ಬೆಳೆಯುವ ಆಹಾರ, ಹಣ್ಣು–ಹಂಪಲು, ಗೆಡ್ಡೆ–ಗೆಣಸುಗಳನ್ನು ಮಾತ್ರ ಸ್ವೀಕರಿಸಬೇಕು. ತಪಸ್ಸಾಧನಾಕ್ರಮದಲ್ಲಿ ವ್ಯತ್ಯಾಸಗಳಿರುವಂತೆ ಅವರ ಆಹಾರ ಕ್ರಮದಲ್ಲಿಯೂ ವ್ಯತ್ಯಾಸಗಳಿರಬೇಕಾಗುತ್ತದೆ.

೯. "ಕೆಲವು ಸಾಧಕರು ಪಕ್ಷಿಗಳಂತೆ ಆರಿಸಿ ತಂದ ಕಾಳುಗಳನ್ನು ತಿಂದು ಜೀವಿಸುತ್ತಾರೆ, ಕೆಲವರು ಜಿಂಕೆಯಂತೆ ಹುಲ್ಲನ್ನು ತಿನ್ನುತ್ತಾರೆ, ಮತ್ತೆ ಕೆಲವರು ಹಾವುಗಳಂತೆ ಗಾಳಿಯನ್ನು ಸೇವಿಸಿ ಹುತ್ತವನ್ನು ಹೊಕ್ಕು ಬದುಕುತ್ತಾರೆ.

೧೦. "ಕೆಲವರು ಬೀಸುವ ಕಲ್ಲಿನಿಂದ ಬೀಸಿದ ಆಹಾರವನ್ನು ಬಳಸಿದರೆ, ಮತ್ತೆ ಕೆಲವರು ಆಹಾರವನ್ನು ಹಲ್ಲಿನಿಂದ ಜಗಿದು ಮಾತ್ರ ತಿನ್ನುತ್ತಾರೆ. ಇನ್ನು ಕೆಲವರು ಬೇಯಿಸಿದ ಆಹಾರದಿಂದ ಬಸಿದ ಗಂಜಿಯನ್ನು ಮಾತ್ರವೇ ಸೇವಿಸುತ್ತಾರೆ.

೧೧. "ಜಟಾಧಾರಿಗಳಾದ ಕೆಲವರು ತಮ್ಮ ಜಟೆಯನ್ನು ಸದಾ ನೀರಿನಲ್ಲಿ ನೆನೆಸುತ್ತಾ ನೀರಿನಲ್ಲಿ ಮುಳುಗಿ ದಿನಕ್ಕೆ ಎರಡು ಬಾರಿ ಶ್ಲೋಕಗಳನ್ನು ಪಠಿಸುತ್ತಾ ಅಗ್ನಿಗೆ ಹವಿಸ್ಸನ್ನು ಕೊಡುತ್ತಾರೆ; ಇನ್ನು ಕೆಲವು ಸಾಧಕರು ಮೀನಿನಂತೆ ನೀರಿನಲ್ಲಿ ಮುಳುಗುತ್ತಾ ಆಮೆಗಳಿಂದ ಮೈಕೆರೆಸಿಕೊಂಡು ಧ್ಯಾನಸಕ್ತರಾಗಿರುತ್ತಾರೆ.

೧೨. "ಈ ರೀತಿ ಒಂದು ನಿರ್ದಿಷ್ಟ ಕಾಲದವರೆಗೆ ಶರೀರ ದಂಡನೆಯನ್ನೊಳಗೊಂಡ ಸಾಧನೆಯಲ್ಲಿ

ತೊಡಗಿದವರು ನೋವಿನ ಈ ಮಾರ್ಗದ ಮೂಲಕ ಸಂತೋಷ ಪಡೆಯುವರು; ಅದು ಕೆಳಮಟ್ಟದ್ದಾದರೇ ಅವರ ಪ್ರಕಾರ ನೋವು ಶ್ರೇಷ್ಠತೆಯ ಮೂಲ. ಅದರ ಫಲವಾಗಿ ಮರ್ತ್ಯಲೋಕದ ಭೋಗಭಾಗ್ಯಗಳನ್ನು ಪಡೆಯುತ್ತಾರೆ. ಸ್ವರ್ಗದ ಸುಖ–ಭೋಗಗಳನ್ನು ಗಳಿಸುತ್ತಾರೆ."

೧೩. ಇದನ್ನೆಲ್ಲಾ ಕೇಳಿದ ಮೇಲೆ ಗೌತಮನು ಹೇಳಿದನು: "ನಾನು ಇಂತಹ ಆಶ್ರಮವನ್ನು ನೋಡಿದುದು ಇದೇ ಮೊದಲು ಮತ್ತು ಈ ಸಾಧನೆಯ ತಪಸ್ಸಿನ ರೀತಿ–ನೀತಿಗಳು ನನಗೆ ಒಂದೂ ತಿಳಿಯದು.

೧೪. "ಸದ್ಯಕ್ಕೆ ಇಷ್ಟು ಮಾತ್ರ ತಮಗೆ ನಾನು ಹೇಳಬಲ್ಲೆ; ನಿಮ್ಮ ಈ ಎಲ್ಲ ಸಾಧನೆಯ ಉದ್ದೇಶ ಸ್ವರ್ಗವನ್ನು ಗಳಿಸುವುದೇ ಆಗಿದೆ. ಆದರೆ ನನ್ನ ಗುರಿ, ಮಾನವನ ಈ ಜೀವನಕ್ಕಂಟಿದ ಕೆಡಕುಗಳಿಗೆ ಕಾರಣವೇನೆಂಬುದನ್ನು ತಿಳಿದು, ಅದಕ್ಕೊಂದು ಪರಿಹಾರವನ್ನು ಕಂಡುಕೊಳ್ಳುವುದು. ಆದ್ದರಿಂದ ತಮ್ಮಿಂದ ಬೀಳ್ಕೊಡಲು ನನಗೆ ಅಪ್ಪಣೆ ಕೊಡಿ. ನಾನು ಸಾಂಖ್ಯಸಿದ್ಧಾಂತವನ್ನು ಕಲಿತು, ಸಮಾಧಿ ಮಾರ್ಗದಲ್ಲಿ ಶಿಕ್ಷಣ ಪಡೆದು ನನ್ನ ಈ ಸಮಸ್ಯೆಗೆ ಅದರಲ್ಲಿ ಪರಿಹಾರ ದೊರೆಯಬಹುದೆ ಎಂಬುದನ್ನು ಪರೀಕ್ಷಿಸಬೇಕಾಗಿದೆ.

೧೫. "ತಪೋಸಾಧನೆಯಲ್ಲಿ ನಿರತರಾದ ತಾವು ನನಗೆ ತಮ್ಮ ಆಶ್ರಮದಲ್ಲಿ ಆಶ್ರಯವಿತ್ತು ನನ್ನ ವಿಚಾರದಲ್ಲಿ ಅತಿಶಯವಾದ ಪ್ರೇಮವಾತ್ಸಲ್ಯವನ್ನು ತೋರಿಸಿದ್ದೀರಿ. ಈಗ ತಮ್ಮಿಂದ ಬೀಳ್ಕೊಂಡು ಇಲ್ಲಿಂದ ಹೊರಡಬೇಕಾದರೆ ನನಗೆ ನಾನು ನನ್ನ ಬಂಧು–ಬಳಗದವರನ್ನು ಬಿಟ್ಟು ಹೊರಟಾಗ ಆದಷ್ಟೇ ದುಃಖ ಈಗ ಆಗುತ್ತಿದೆ.

೧೬. "ನಾನು ಇಲ್ಲಿಂದ ಹೊರಟಿರುವುದು ಇಲ್ಲಿ ನನಗೆ ಒಗ್ಗಲಿಲ್ಲ ಅಥವಾ ಇಲ್ಲಿನವರ ನಡತೆ ಹೊಂದಿಕೆ ಬರಲಿಲ್ಲ ಎಂಬ ಯಾವ ಕಾರಣದಿಂದಲೂ ಅಲ್ಲ. ಈ ಹಿಂದಿನ ಮಹರ್ಷಿಗಳು ಸಾಧಿಸಿ ತೋರಿಸಿದ ಮಾರ್ಗದಲ್ಲಿ ತಾವುಗಳೂ ತಮ್ಮ ಸಾಧನೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದೀರಿ.

೧೭. "ಆ ವಿಷಯದಲ್ಲಿ ಪ್ರವೀಣರೆನಿಸಿದ ಆರಾದಕಲಂ ಮುನಿಯ ಕಡೆ ನಾನು ತೆರಳುತ್ತೇನೆ."

೧೮. ಗೌತಮನ ಈ ದೃಢ ನಿರ್ಧಾರವನ್ನು ಕಂಡು ಭೃಗುಮುನಿಗಳು "ಅಯ್ಯಾ ರಾಜಕುಮಾರನೇ, ನಿನ್ನ ಉದ್ದೇಶ ಬಹು ಘನತರವಾದದ್ದು. ಯುವಕನಾದ ನೀನು ಸ್ವರ್ಗ ಮತ್ತು ಮೋಕ್ಷ ಈ ಎರಡರ ನಡುವಿನ ಅಂತರವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಮೋಕ್ಷ ಸಾಧನೆಯನ್ನೇ ನಿನ್ನ ಬದುಕಿನ ಧ್ಯೇಯವಾಗಿ ಅಂಗೀಕರಿಸಿದ್ದೀಯ. ನೀನು ನಿಜವಾಗಿಯೂ ಶೂರನೇ.

೧೯. "ನಿನ್ನ ಈ ಉದ್ದೇಶ ಸಾಧನೆಯ ಬಗ್ಗೆ ನಿಶ್ಚಿತವೆನಿಸಿದ್ದರೆ, ನೀನು ತಡಮಾಡದೆ ವಿಂಧ್ಯಕೋಷ್ಠಕಕ್ಕೆ ಹೋಗು; ಅಲ್ಲಿ ದಿವ್ಯಾನಂದದ ಸಾಕ್ಷಾತ್ಕಾರವನ್ನು ಗಳಿಸಿರುವ ಋಷಿ ಆರಾದರು ಇದ್ದಾರೆ.

೨೦. "ನೀನು ಅವರಿಂದ ಆ ಸಾಧನೆಯ ಮಾರ್ಗವನ್ನೇನೋ ತಿಳಿಯಬಲ್ಲೆ. ಆದರೆ ಅವರ ಸಿದ್ಧಾಂತವನ್ನು ತಿಳಿದಮೇಲೆಯೂ ನೀನು ನಿನ್ನ ಸಾಧನೆಯನ್ನು ಮುಂದುವರಿಸಬೇಕಾಗುತ್ತದೆ ಎಂದು ನನಗೆ ತೋರುತ್ತದೆ."

೨೧. ಗೌತಮನು ಭೃಗುಮುನಿಗಳಿಗೆ ವಂದಿಸಿ, ಆಶ್ರಮವಾಸಿಗಳಿಗೆಲ್ಲಾ ನಮಿಸಿ ಹೊರಟನು. ಆಶ್ರಮವಾಸಿಗಳು ಸೌಜನ್ಯದ ವಿಧಿಗಳನ್ನು ಪೂರೈಸಿ ಗೌತಮನನ್ನು ಬೀಳ್ಕೊಂಡು ಆಶ್ರಮಕ್ಕೆ ಹಿಂತಿರುಗಿದರು.

## ೨. ಸಾಂಖ್ಯ ದರ್ಶನದ ಅಧ್ಯಯನ

೧. ಭೃಗು ಮುನಿಗಳ ಆಶ್ರಮದಿಂದ ಹೊರಟ ಗೌತಮನು ಆರಾದ ಕಲಮರ ಆವಾಸ ಸ್ಥಾನವನ್ನು ಹುಡುಕಿಕೊಂಡು ಹೊರಟನು.

೨. ಆರಾದ ಕಲಮರು ವೈಶಾಲಿಯಲ್ಲಿ ವಾಸಿಸುತ್ತಿದ್ದರು. ವೈಶಾಲಿಯನ್ನು ತಲುಪಿದ ಗೌತಮನು ಅಲ್ಲಿ ಅವರ ಆಶ್ರಮವನ್ನು ಪ್ರವೇಶಿಸಿದನು.

೩. ಆರಾದ ಕಲಮರನ್ನು ಭೇಟಿ ಮಾಡಿದ ಗೌತಮನು "ನನಗೆ ತಮ್ಮ ಸಿದ್ಧಾಂತ ಮತ್ತು ಅದರ ಸಾಧನ ಮಾರ್ಗವನ್ನು ಕುರಿತು ಉಪದೇಶಿಸಬೇಕು" ಎಂದು ಪ್ರಾರ್ಥಿಸಿದನು.

೪. ಆಗ ಆರಾದ ಕಲಮರು ಹೇಳಿದರು: "ನಿನಗೆ ಸುಸ್ವಾಗತ. ನಿನ್ನಂತಹ ಸೂಕ್ಷ್ಮಮತಿಗಳಿಗೆ ನನ್ನ ಸಿದ್ಧಾಂತವನ್ನು ಗ್ರಹಿಸಲು ಹೆಚ್ಚು ಕಾಲ ಬೇಕಾಗುವುದಿಲ್ಲ. ನೀನು ಅದನ್ನು ಮನಗಂಡು ಬೇಗ ಕಲಿತು ಅದನ್ನು ಪಾಲಿಸಬಲ್ಲೆ.

೫. "ಇಂತಹ ಶ್ರೇಷ್ಠ ಸಿದ್ಧಾಂತವನ್ನು ಸಾಧಿಸಲು ನೀನು ಖಂಡಿತ ಸಮರ್ಥನಿದ್ದೀಯ."

೬. ಆರಾದರ ಈ ಮಾತುಗಳನ್ನು ಕೇಳಿದ ರಾಜಕುಮಾರನು ಅತ್ಯಂತ ಸಂತೋಷಗೊಂಡು ಈ ರೀತಿ ಹೇಳಿದನು:

೭. "ತಾವು ನನ್ನ ವಿಚಾರದಲ್ಲಿ ತೋರುತ್ತಿರುವ ಅತಿಯಾದ ಪ್ರೀತಿಯನ್ನು ನೋಡಿ ಅಪೂರ್ಣ ತಿಳಿವಳಿಕೆಯ ನನ್ನಲ್ಲಿ ಈಗಾಗಲೇ ಪರಿಪೂರ್ಣತೆಯನ್ನು ಗಳಿಸಿರುವೆನೇನೋ ಎನ್ನುವಷ್ಟು ಆತ್ಮವಿಶ್ವಾಸ ಮೂಡಿದೆ.

೮. "ಆದ್ದರಿಂದ, ತಾವು ತಮ್ಮ ಸಿದ್ಧಾಂತವೇನೆಂಬುದನ್ನು ಬೋಧಿಸುವ ಕೃಪೆ ತೋರುವಿರಾ?"

೯. ಆರಾದರು ಹೇಳಿದರು : "ನಿನ್ನ ಶ್ರೇಷ್ಠ ಸ್ವಭಾವ, ಪ್ರಾಮಾಣಿಕತೆ ಮತ್ತು ನಿಷ್ಠೆ ಹಾಗೂ ದೃಢಮನೋಭಾವವನ್ನು ನೋಡಿದ ನನಗೆ ನಿನ್ನ ಪಾತ್ರಾಪಾತ್ರತೆಯನ್ನು ಗುರುತಿಸಲು ಯಾವುದೇ ಪೂರ್ವಭಾವಿ ಪರೀಕ್ಷೆಯನ್ನು ನಡೆಸಬೇಕಾಗಿಲ್ಲ ಎಂದೆನಿಸುತ್ತದೆ."

೧೦. "ಉತ್ತಮ ಶ್ರೋತೃವೆನಿಸಿರುವ ನೀನು ನಮ್ಮ ಸಿದ್ಧಾಂತವನ್ನು ಕೇಳು".

೧೧. ನಂತರ ಗೌತಮನಿಗೆ ಸಾಂಖ್ಯದರ್ಶನದ ಪ್ರಮುಖ ತತ್ತ್ವಗಳನ್ನು ಆರಾದ ಕಲಮರು ವಿವರಿಸಿದರು.

೧೨. ಉಪದೇಶದ ಪೂರ್ಣ ಪಾಠ ಮುಗಿದ ಮೇಲೆ ಗುರುಗಳು ಗೌತಮನಿಗೆ ಈ ರೀತಿ ಹೇಳಿದರು:

೧೩. "ಓ ಗೌತಮನೇ, ಇವಿಷ್ಟು ನಮ್ಮ ಸಿದ್ಧಾಂತದ ಪ್ರಮುಖ ತತ್ತ್ವಗಳು. ನಾನು ಅವುಗಳನ್ನು ನಿನಗೆ ಸಂಕ್ಷೇಪವಾಗಿ ತಿಳಿಯಹೇಳಿದ್ದೇನೆ."

೧೪. ಆರಾದ ಕಲಮರು ನೀಡಿದ ಸಾಂಖ್ಯ ಸಿದ್ಧಾಂತದ ಸ್ಪಷ್ಟ ನಿರೂಪಣೆಯಿಂದ ಗೌತಮನು ತುಂಬಾ ಸಂತೋಷಪಟ್ಟನು.

## ೩. ಸಮಾಧಿಮಾರ್ಗದಲ್ಲಿ ತರಬೇತಿ

೧. ತಾನು ಪರಿಹರಿಸಬೇಕಾದ ಮೂಲ ಸಮಸ್ಯೆಗೆ ಸೂಕ್ತವಾದ ಉತ್ತರವನ್ನು ಹುಡುಕಲು ವಿವಿಧ ಮಾರ್ಗಗಳನ್ನು ಪರೀಕ್ಷಿಸುತ್ತಿದ್ದಾಗ, ಧ್ಯಾನಮಾರ್ಗದ (ಮನಸ್ಸನ್ನು ಏಕಾಗ್ರಗೊಳಿಸುವುದು) ಅದರ ಪೂರ್ಣ ಪರಿಚಯವನ್ನು ಪಡೆಯುವುದು ಅವಶ್ಯಕವೆಂದು ಅರಿತನು.

೨. ಧ್ಯಾನಮಾರ್ಗದಲ್ಲಿ ಮೂರು ಸಂಪ್ರದಾಯಗಳು ಪ್ರಚಲಿತವಿದ್ದವು.

೩. ಆ ಮೂರು ಸಂಪ್ರದಾಯಗಳಲ್ಲಿಯೂ ಸಮಾನವಾಗಿದ್ದ ಅಂಶವೆಂದರೆ ಧ್ಯಾನವನ್ನು ಸಾಧಿಸುವಲ್ಲಿ ಸಾಧನವಾಗಿ ಉಸಿರಾಟವನ್ನು ನಿಯಂತ್ರಿಸುವುದು ಒಂದು ಕ್ರಮ.

೪. ಒಂದು ಸಂಪ್ರದಾಯದವರು ಅನಾಪನಸತಿ ಎಂದು ಕರೆಯಲಾಗುವ ಉಸಿರಾಟದ ನಿಯಂತ್ರಣವನ್ನು ಅನುಸರಿಸುತ್ತಿದ್ದರು.

೫. ಇನ್ನೊಂದು ಸಂಪ್ರದಾಯದವರು ಇದನ್ನು ಪ್ರಾಣಾಯಾಮ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಉಸಿರಾಟದ ಪ್ರಕ್ರಿಯೆಯಲ್ಲಿ ಮೂರು ಅಂಗಗಳಿವೆ. (೧) ಉಸಿರನ್ನು ಒಳಕ್ಕೆ ಎಳೆದುಕೊಳ್ಳುವುದು (ಪೂರಕ), (೨) ಉಸಿರನ್ನು ಒಳಗೆ ಬಿಗಿಹಿಡಿಯುವುದು (ಕುಂಭಕ), (೩) ಉಸಿರನ್ನು ಹೊರಕ್ಕೆ ಬಿಡುವುದು (ರೇಚಕ). ಇನ್ನು ಮೂರನೇ ಸಂಪ್ರದಾಯವನ್ನು ಸಮಾಧಿ ಸಂಪ್ರದಾಯ ಎಂದು ಕರೆಯಲಾಗಿದೆ.

೬. ಅರಾಡಕಾಲಾಯಮರು ಧ್ಯಾನಮಾರ್ಗದ ಸಾಧನೆಯಲ್ಲಿ ಪರಿಣಿತರೆಂದು ಪ್ರಸಿದ್ಧಿ ಪಡೆದಿದ್ದರು. ಆದ್ದರಿಂದ ಅವರ ಮಾರ್ಗದರ್ಶನದಲ್ಲಿ ಧ್ಯಾನಮಾರ್ಗದಲ್ಲಿ ತರಬೇತಿ ಪಡೆಯುವುದು ಸೂಕ್ತವೆಂದು ಗೌತಮನಿಗೆ ಅನ್ನಿಸಿತು.

೭. ಹಾಗಾಗಿ ತಾವು ಕೃಪೆ ಮಾಡಿ ನನಗೆ ಧ್ಯಾನಮಾರ್ಗದಲ್ಲಿ ತರಬೇತಿ ಕೊಡಬೇಕೆಂದು ಗೌತಮನು ಆರಾಡಕಾಲಾಯಮರನ್ನು ಪ್ರಾರ್ಥಿಸಿದನು.

೮. "ತುಂಬ ಸಂತೋಷದಿಂದ" ಎಂದು ಅರಾಡಕಾಲಾಯಮರು ಸಮ್ಮತಿಸಿದರು.

೯. ಅರಾಡಕಾಲಾಯಮರು ಅವನಿಗೆ ತಮ್ಮ ಧ್ಯಾನಮಾರ್ಗದ ತಂತ್ರಗಳನ್ನು ಬೋಧಿಸಿದರು. ಅದರಲ್ಲಿ ಏಳು ಹಂತಗಳಿದ್ದವು.

೧೦. ಗೌತಮನು ಇದರ ಸಾಧನೆಯಲ್ಲಿ ದಿನನಿತ್ಯವೂ ತೊಡಗಿದನು.

೧೧. ಧ್ಯಾನಮಾರ್ಗದ ಸಾಧನೆಯಲ್ಲಿ ಪೂರ್ಣ ಪ್ರಭುತ್ವವನ್ನು ಗಳಿಸಿದ ಮೇಲೆ, ಇದರಲ್ಲಿ ಹೆಚ್ಚಿನದೇನಾದರೂ ಕಲಿಯಬೇಕಾದದ್ದು ಇದೆಯೇ ಎಂಬುದಾಗಿ ಗೌತಮನು ಅರಾಡಕಾಲಾಯಮರನ್ನು ಕೇಳಿದನು.

೧೨. "ಇಲ್ಲ ಮಿತ್ರನೇ, ನನಗೆ ತಿಳಿದದ್ದೆಲ್ಲವನ್ನೂ ನಾನು ನಿನಗೆ ಕಲಿಸಿದ್ದೇನೆ" ಎಂಬುದಾಗಿ ಅರಾಡಕಾಲಾಯಮರು ಗೌತಮನಿಗೆ ಹೇಳಿದರು. ಗೌತಮನು ಅವರಿಂದ ಬೀಳ್ಕೊಂಡನು.

೧೩. ಅರಾಡಕಾಲಾಯಮರು ರೂಪಿಸಿದ ಧ್ಯಾನಮಾರ್ಗಕ್ಕಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಲು ನೆರವಾಗಬಲ್ಲ ಸಾಧನಮಾರ್ಗವನ್ನು ಉದ್ದಕ ರಾಮಪುತ್ತ ಎಂಬ ಯೋಗಿಯು ತಿಳಿದಿದ್ದಾನೆ ಎಂಬ ಸುದ್ದಿ ಗೌತಮನ ಕಿವಿಗೆ ಮುಟ್ಟಿತು.

೧೪. ಆ ಮಾರ್ಗವನ್ನು ಸಾಧಿಸಿ ಸಮಾಧಿಯ ಅತ್ಯುನ್ನತ ಸ್ಥಿತಿಯನ್ನು ಮುಟ್ಟಬೇಕೆಂದು ಗೌತಮನು ಬಯಸಿದನು. ಅಂತೆಯೇ ಅವನು ಉದ್ದಕ ರಾಮಪುತ್ತನ ಆಶ್ರಮಕ್ಕೆ ಹೋಗಿ ಅವರ ಮಾರ್ಗದರ್ಶನದಲ್ಲಿ ಸಾಧನೆಯಲ್ಲಿ ತೊಡಗಿದನು.

೧೫. ಗೌತಮನು ಅತ್ಯಲ್ಪಕಾಲದಲ್ಲಿಯೇ ಉದ್ದಕರು ಕಲಿಸಿದ ಧ್ಯಾನದ ಎಂಟನೇ ಹಂತವನ್ನು ಮುಟ್ಟಿದನು. ಈ ಸಾಧನೆಯಲ್ಲಿ ಪರಿಪೂರ್ಣತೆಯನ್ನು ಗಳಿಸಿದ ಮೇಲೆ ರಾಮಪುತ್ರರನ್ನು ಕುರಿತು, ಅರಾಡಕಾಲಾಯಮರನ್ನು ಕೇಳಿದ್ದಂತೆ, "ಇದಕ್ಕಿಂತಲೂ ಹೆಚ್ಚಿನದೇನಾದರೂ ಕಲಿಯುವುದಿದೆಯೇ?" ಎಂದು ಕೇಳಿದನು.

೧೬. ಅದಕ್ಕೆ ಉತ್ತರವಾಗಿ ಉದ್ದಕ ರಾಮಪುತ್ರರು ಹೇಳಿದರು: "ಸ್ನೇಹಿತನೆ, ಇದಕ್ಕಿಂತ ಹೆಚ್ಚಿನದನ್ನು ಬೋಧಿಸಲು ನನ್ನಲ್ಲಿ ಏನೂ ಇಲ್ಲ."

೧೭. ಅರಾಡಕಾಲಾಯಮ ಮತ್ತು ಉದ್ದಕ ರಾಮಪುತ್ರರು ಧ್ಯಾನಮಾರ್ಗದ ಸಾಧನೆಯಲ್ಲಿ ಪರಿಪೂರ್ಣತೆಯನ್ನು ಗಳಿಸಿದವರೆಂದು ಕೋಶಲ ರಾಜ್ಯದಲ್ಲಿಯೇ ಪ್ರಸಿದ್ಧರಾಗಿದ್ದರು. ಆದರೆ ಮಗಧ ರಾಜ್ಯದಲ್ಲಿ ಧ್ಯಾನಮಾರ್ಗದಲ್ಲಿ ಪರಿಣಿತಿ ಪಡೆದ ಇನ್ನೂ ಕೆಲವರಿದ್ದಾರೆ ಎಂಬ ವಿಚಾರ ಗೌತಮನಿಗೆ ತಿಳಿದು ಅವರ ಸಂಪ್ರದಾಯಗಳನ್ನೂ ಕಲಿಯಬೇಕೆಂದು ಯೋಚಿಸಿದನು.

೧೮. ಅದರಂತೆ, ಗೌತಮನು ಮಗಧ ರಾಜ್ಯಕ್ಕೂ ಹೋದನು.

೧೯. ಅವರು ಅನುಸರಿಸುತ್ತಿದ್ದ ಧ್ಯಾನಮಾರ್ಗವೂ ಸಹ ಪ್ರಾಣಾಯಾಮವನ್ನೇ ಆಧರಿಸಿದ್ದರೂ ಅದು ಕೋಸಲ ದೇಶದ ಪದ್ಧತಿಗಿಂತ ಭಿನ್ನವಾಗಿದ್ದಿತು.

೨೦. ಆ ತಂತ್ರವು ಉಸಿರಾಟವನ್ನು ನಿಯಂತ್ರಿಸುವ ಬದಲು ಉಸಿರಾಟವನ್ನು ನಿಲ್ಲಿಸಿ ಮನಸ್ಸಿನ ಏಕಾಗ್ರತೆಯನ್ನು ಗಳಿಸುವುದಾಗಿತ್ತು.

೨೧. ಈ ತಂತ್ರವನ್ನು ಕಲಿತನು. ಗೌತಮನು ಉಸಿರಾಟವನ್ನು ನಿಲ್ಲಿಸಿ ಮನಸ್ಸಿನ ಏಕಾಗ್ರತೆಯನ್ನು ಗಳಿಸಲು ಹೋದಾಗ ಅವನ ಕಿವಿಗಳನ್ನೇ ಭೇದಿಸುವಂತಹ ಶಬ್ದ ಮೂಡಿಬಂದು, ಹರಿತವಾದ ಚಾಕುವಿನಿಂದ ಅವನ ತಲೆಯನ್ನೇ ಇರಿಯುವಂತಹ ಅನುಭವ ಅವನಿಗಾಯಿತು.

೨೨. ಅದು ಬಹು ಕಷ್ಟಕರವಾದ ಸಾಧನೆ. ಆದರೆ ಗೌತಮನು ಇದರಲ್ಲಿಯೂ ಪರಿಣತಿಯನ್ನು ಸಾಧಿಸದೆ ಬಿಡಲಿಲ್ಲ.

೨೩. ಇವಿಷ್ಟು ಸಮಾಧಿಮಾರ್ಗದ ಸಾಧನೆಯಲ್ಲಿ ಅವನು ಗಳಿಸಿದ ಅನುಭವ.

## ೪. ತಪಶ್ಚೆರ್ಯೆಯ ಅಭ್ಯಾಸ

೧. ಸಾಂಖ್ಯ ಮತ್ತು ಸಮಾಧಿ ಮಾರ್ಗಗಳನ್ನು ಗೌತಮನು ಅಭ್ಯಾಸ ಮಾಡಿದನಾದರೂ ಭೃಗುಮುನಿಗಳ ಆಶ್ರಮದಲ್ಲಿ ತಪಶ್ಚರ್ಯೆವನ್ನು ಅಭ್ಯಾಸ ಮಾಡದೆ, ಅವರ ಆಶ್ರಮವನ್ನು ಬಿಟ್ಟುಬಂದಿದ್ದನು.

೨. ತಪಸ್ಸಿನ ಮಾರ್ಗವನ್ನು ತಾನೇ ಅಭ್ಯಾಸ ಮಾಡದ ಹೊರತು ಅದನ್ನು ಕುರಿತು ಅಧಿಕೃತವಾಗಿ ಮಾತನಾಡಲು ಸಾಧ್ಯವಾಗುವುದಿಲ್ಲ ಎಂದು ಗೌತಮನಿಗೆ ಅನಿಸಿತು.

೩. ಅದಕ್ಕಾಗಿ ಗೌತಮನು ಗಯ ಪಟ್ಟಣಕ್ಕೆ ಹೊರಟನು. ಅಲ್ಲಿ ಸುತ್ತಮುತ್ತ ಪರೀಕ್ಷಿಸಿ ಗಯ ಸಂಸ್ಥಾನದ ರಾಜಗುರುವಾದ ನೆಗಾರಿಯ ಆಶ್ರಮವಿದ್ದ ಉರುವೇಲುವಿನಲ್ಲಿ ತಪಸ್ಸಾಧನೆಗಾಗಿ ನೆಲೆನಿಂತನು. ಅದು ನೈರಾಂಜನ ನದಿಯ ದಡದಲ್ಲಿ ಈ ಸಾಧನೆಗೆ ಪ್ರಶಸ್ತವೆನಿಸಿ ಪ್ರಶಾಂತವಾದ ಏಕಾಂತ ಸ್ಥಳವಾಗಿದ್ದಿತು.

೪. ಉರುವೇಲುವಿನಲ್ಲಿ, ಶಾಂತಿವಾರ್ತೆಯನ್ನು ತಂದಿದ್ದ, ರಾಜಗೃಹದಲ್ಲಿ ಇವನನ್ನು ಸಂಧಿಸಿದ್ದ, ಆ ಐದು ಜನ ಪರಿವ್ರಾಜಕರನ್ನು ಕಂಡನು. ಅವರೂ ಸಹ ತಪಸ್ಸಾಧನೆಯಲ್ಲಿ ತೊಡಗಿದ್ದರು.

೫. ಆ ಭಿಕ್ಷುಗಳು ಇವನನ್ನು ಸಂಧಿಸಿ ತಮ್ಮನ್ನು ಅವನೊಂದಿಗೆ ಸೇರಿಸಿಕೊಳ್ಳಲು ಕೇಳಿಕೊಂಡರು. ಅದಕ್ಕೆ ಗೌತಮನು ಒಪ್ಪಿದನು.

೬. ಅಂದಿನಿಂದ ಗೌತಮನನ್ನು ಅವರು ಭಕ್ತಿಗೌರವಗಳಿಂದ ಕಂಡು ಅವನನ್ನು ಗುರುವಿನೋಪಾದಿಯಲ್ಲಿ ಸೇವಿಸತೊಡಗಿದರು.

೭. ಗೌತಮನು ಅಭ್ಯಾಸ ಮಾಡುತ್ತಿದ್ದ ದೇಹದಂಡನೆ ಮತ್ತು ಆತ್ಮಸಂಯಮ ಮಾರ್ಗಗಳು ಅತ್ಯಂತ ಕಠೋರವಾಗಿದ್ದವು.

೮. ಕೆಲವೊಮ್ಮೆ ಅವನು ದಿನಕ್ಕೆ ಎರಡು ಮನೆಗಳಿಗೆ ಆದರೆ, ಏಳು ಮನೆಗಳಿಗೆ ಹೆಚ್ಚಿಲ್ಲದಂತೆ ಮಾತ್ರ ಭಿಕ್ಷೆಗೆ ಹೋಗಿ ಎರಡು ತುತ್ತಿನಿಂದ ಹಿಡಿದು ಏಳು ತುತ್ತಿನವರೆಗೆ ಮಾತ್ರ ಆಹಾರವನ್ನು ಸ್ವೀಕರಿಸುತ್ತಿದ್ದನು.

೯. ದಿನವೊಂದಕ್ಕೆ ಅವನು ಒಂದು ಸಣ್ಣ ತಟ್ಟೆಯಷ್ಟು, ಆದರೆ ಏಳು ಸಣ್ಣ ತಟ್ಟೆಗಳಿಗೆ ಮೀರದಂತೆ ಮಾತ್ರ ಆಹಾರವನ್ನು ತಿಂದು ಜೀವಿಸಿದ್ದನು.

೧೦. ಒಮ್ಮೊಮ್ಮೆ ಅವನು ದಿನಕ್ಕೆ ಒಂದೇ ಊಟ ಅಥವಾ ಎರಡು ದಿನಕ್ಕೊಮ್ಮೆ, ವಾರಕ್ಕೊಮ್ಮೆ, ಎರಡು ವಾರಕ್ಕೊಮ್ಮೆ ಊಟ ಮಾಡುತ್ತಿದ್ದುದೂ ಉಂಟು. ಹೀಗೆ ಅವನು ಆಹಾರದ ವಿಚಾರದಲ್ಲಿ ಅತ್ಯಂತ ಸಂಯಮದಿಂದಿದ್ದನು.

೧೧. ತನ್ನ ತಪಸ್ಸಾಧನೆಯು ಮುಂದುವರಿದಂತೆಲ್ಲಾ ಹಸಿ ನಾರುಬೇರು, ಕಾಡು ಧಾನ್ಯ ಮತ್ತು ಅಕ್ಕಿ, ನುಚ್ಚಿನ ಹೊಟ್ಟು, ಜಲ ಸಸ್ಯ, ಅಕ್ಕಿಯ ಹೊಟ್ಟಿನ ಒಳಗಿನ ಕೆಂಪು ತಾಡು, ಅಕ್ಕಿಯ ಗಂಜಿ ಅಥವಾ ಎಣ್ಣೆ ಕಾಳುಗಳ ಹಿಟ್ಟು ಇವೇ ಅವನ ಆಹಾರವಾಗಿದ್ದವು.

೧೨. ಕೆಲಕಾಲ ಕಾಡು ಗೆಡ್ಡೆ-ಗೆಣಸು, ಮರದಿಂದ ಬಿದ್ದ ಹಣ್ಣು-ಹಂಪಲು ಇವುಗಳನ್ನೇ ತಿಂದು ಬದುಕಿದನು.

೧೩. ಸೆಣಬಿನ ಬಟ್ಟೆಯ ಮೇಣಗಪಟದ ಚಿಂದಿ, ಕೃಷ್ಣಾಮೃಗದ ತೊಗಲು, ಹುಲ್ಲು, ಮರದ ತೊಗಟೆಯ ಪಟ್ಟೆ ಮನುಷ್ಯ ಅಥವಾ ಪ್ರಾಣಿಗಳ ಕೂದಲು ಅಥವಾ ಗೂಬೆಯ ರೆಕ್ಕೆಗಳಿಂದ ಮಾಡಿದ ಕಂಬಳಿ ಅವನ ಉಡುಗೆತೊಡುಗೆಗಳಾದವು.

೧೪. ಅವನು ತನ್ನ ತಲೆ ಮತ್ತು ಗಡ್ಡದ ಕೂದಲನ್ನು ಕೈಯಿಂದ ತಾನೇ ಲುಂಚನ ಮಾಡಿಕೊಳ್ಳುತ್ತಿದ್ದನು. ಎರಡು ಬಾಹುಗಳನ್ನೂ ಮೇಲೆತ್ತಿ ನಿಂತು ದಿನಗಟ್ಟಲೆ ಧ್ಯಾನದಲ್ಲಿ ತೊಡಗುತ್ತಿದ್ದನು. ಇಲ್ಲವೇ ಪದ್ಮಾಸನದಲ್ಲಿ ಕುಳಿತು ನಿಶ್ಚಲವಾಗಿಬಿಡುತ್ತಿದ್ದನು.

೧೫. ತಪಸ್ಸಾಧನೆಯ ಮಾರ್ಗದಲ್ಲಿ ತನ್ನ ದೇಹವನ್ನು ಎಷ್ಟು ದಂಡಿಸಬಹುದೋ ಅಷ್ಟನ್ನೂ ವಿವೇಕಯುತನಾಗಿ ವಿವಿಧ ರೀತಿಗಳಲ್ಲಿ ದಂಡಿಸತೊಡಗಿದನು.

೧೬. ಅವನಲ್ಲಿ ಎಷ್ಟು ಜುಗುಪ್ಸೆ ಮನೆಮಾಡಿತೆಂದರೆ, ಅವನ ದೇಹದ ಮೇಲೆ ತಾನಾಗಿಯೇ ಉದುರಿಬೀಳುವವರೆಗೆ ವರ್ಷಗಟ್ಟಲೆ ಕೊಳೆ ಮತ್ತು ಕಲ್ಮಷಗಳು ಕೂತಿದ್ದವು.

೧೭. ಅವನು ಅರಣ್ಯದ ಎಷ್ಟು ಭೀಕರ ಒಳಜಾಗದಲ್ಲಿ ವಾಸಿಸುತ್ತಿದ್ದನೆಂದರೆ, ಅವಿವೇಕಿ ಕೂಡ ಭಯದಿಂದ ರೋಮಾಂಚನನಾಗದೇ ಅರಣ್ಯದ ಅಷ್ಟು ಭಯಂಕರ ಒಳಜಾಗವನ್ನು ಪ್ರವೇಶಿಸಲಾರ.

೧೮. ಕೃಷ್ಣಪಕ್ಷಗಳಲ್ಲಿ ಚಳಿಗಾಲದ ಕುಳಿರ್ಗಾಳಿಯ ಕಾರಿರುಳನ್ನು ಬಟ್ಟಬಯಲಿನಲ್ಲಿ ಒಂಟಿಯಾಗಿ ಕಳೆದರೆ, ಹಗಲಿನಲ್ಲಿ ದಟ್ಟ ಅರಣ್ಯದ ನಡುವೆ ಇದ್ದು ಕಳೆದನು.

೧೯. ಮಳೆಗಾಲಕ್ಕೆ ಮುನ್ನ ಬರುವ ಕಡು ಬೇಸಗೆಯ ಹಗಲನ್ನು ಉರಿಬಿಸಿಲಿನಲ್ಲಿದ್ದು ಕಳೆದರೆ, ರಾತ್ರಿಯನ್ನು ಉಸಿರು ಕಟ್ಟುವಂತಹ ದಟ್ಟ ಅರಣ್ಯದಲ್ಲಿ ಕಳೆದನು.

೨೦. ಸ್ಮಶಾನದಲ್ಲಿ ಅರೆಬೆಂದ ಮೂಳೆಗಳನ್ನು ತಲೆದಿಂಬಾಗಿ ಮಾಡಿಕೊಂಡು ಅನೇಕ ರಾತ್ರಿಗಳನ್ನು ಕಳೆದನು.

೨೧. ಅನಂತರ ದಿನಕ್ಕೆ ಒಂದೇ ಒಂದು ಕಾಳನ್ನು ಮಾತ್ರ ತಿಂದು ಬದುಕಿದರೆ ಮತ್ತೆ ಕೆಲವು ದಿನ ಒಂದು

ಎಳ್ಳುಕಾಳನ್ನು ಮಾತ್ರವೇ ತಿಂದು ಇಲ್ಲವೇ ಒಂದು ಅಕ್ಕಿಯ ಕಾಳನ್ನು ಸೇವಿಸಿ ದಿನಗಳೆದನು.

೨೨. ಅವನು ದಿನಕ್ಕೆ ಒಂದೇ ಒಂದು ಹಣ್ಣನ್ನು ತಿಂದು ಬದುಕಲು ತೊಡಗಿದಾಗ ಅವನ ಶರೀರ ತುಂಬಾ ಕ್ಷೀಣಿಸಿಹೋಯಿತು.

೨೩. ಅವನ ಹೊಟ್ಟೆಯನ್ನು ಮುಟ್ಟಲು ಹೋದರೆ ಅದು ಅವನ ಬೆನ್ನನ್ನು ಮುಟ್ಟುತ್ತಿದ್ದಿತು. ಬೆನ್ನು ಮುಟ್ಟಲು ಹೋದರೆ, ಅದು ಹೊಟ್ಟೆಯನ್ನು ಮುಟ್ಟುತ್ತಿತ್ತು. ಹೀಗೆ ಅವನ ಬೆನ್ನೆಲುಬು ಹೊಟ್ಟೆಗೆ ಅಂಟಿಹೋಗಿದ್ದಿತು. ಅವನು ತನ್ನ ಆಹಾರವನ್ನು ಅತ್ಯಂತ ಕಡಿಮೆ ಪ್ರಮಾಣಕ್ಕೆ ಇಳಿಸಿದ್ದರ ಪರಿಣಾಮ ಇದು.

## ೫. ತಪಶ್ಚರ್ಯೆಯ ಪರಿತ್ಯಾಗ

೧. ಗೌತಮನು ಸಾಧಿಸಿದ ಅತಿ ಸಂಯಮ ಮತ್ತು ಶರೀರ ದಂಡನೆಯ ಈ ಮಾರ್ಗ ಅತ್ಯಂತ ಕಠಿಣವಾಗಿದ್ದಿತು. ಈ ಸಾಧನೆ ಆರು ವರ್ಷಗಳ ಕಾಲ ನಡೆಯಿತು.

೨. ಆರು ವರ್ಷದ ಕೊನೆಯಲ್ಲಿ ಅವನು ಚಲಿಸಲಾರದಷ್ಟು ಕೃಶಗೊಂಡನು.

೩. ಇಷ್ಟಾದರೂ ಅವನಿಗೆ ಯಾವ ಹೊಸ ಬೆಳಕಾಗಲೀ ಅಥವಾ ಅವನ ಮನಸ್ಸಿಗೆ ಜಗತ್ತಿನ ದುಃಖಕ್ಕೆ ಸೂಕ್ತವಾದ ಪರಿಹಾರವಾಗಲೀ ಹೊಳೆದಂತೆ ಕಾಣಲಿಲ್ಲ.

೪. "ನಿಷ್ಕಾಮಕ್ಕಾಗಲಿ, ಸಮ್ಯಕ್ ಜ್ಞಾನಕ್ಕಾಗಲಿ, ಮೋಕ್ಷಕ್ಕಾಗಲಿ ಈ ಮಾರ್ಗ ಸಲ್ಲದು" ಎಂದು ಅವನು ಮನಗಂಡನು.

೫. "ಕೆಲವರು ಲೌಕಿಕ ಸುಖ–ಭೋಗಗಳನ್ನು ಪಡೆಯಲು ಈ ಜಗತ್ತಿನಲ್ಲಿ ಶ್ರಮಿಸುತ್ತಾರೆ ಮತ್ತೆ ಕೆಲವರು ಸ್ವರ್ಗದ ಸುಖಕ್ಕಾಗಿ ಶ್ರಮಿಸುತ್ತಾರೆ; ಹೀಗಾಗಿ ಎಲ್ಲ ಜೀವ ಜಂತುಗಳು ಆಸೆಯ ಬಲೆಯಲ್ಲಿ ಸಿಕ್ಕಿ ತಮ್ಮ ಗುರಿಯನ್ನು ಮುಟ್ಟದೆ ಕೇವಲ ಸುಖದ ಹಂಬಲದಿಂದ ದುಃಖದಲ್ಲಿ ಮುಳುಗಿಹೋಗುತ್ತಾರೆ."

೬. "ನನಗೂ ಇಂತಹುದೇ ಏನೊ ಒಂದು ಆಗಿದೆಯಲ್ಲವೆ?"

೭. "ನಾನು ಈ ರೀತಿಯ ಪ್ರಯತ್ನವನ್ನು ದೂಷಿಸುತ್ತಿಲ್ಲ – ಉನ್ನತ ಸಾಧನೆ ಎನಿಸಿರುವ ಈ ಮಾರ್ಗದ ಮೂಲ ಧ್ಯೇಯಗಳನ್ನೇ ಪಕ್ಕಕ್ಕೆ ಎಸೆಯುತ್ತಿದೆ."

೮. "ನನ್ನ ಪ್ರಶ್ನೆಯೇನೆಂದರೆ, 'ಶರೀರ ದಂಡನೆಯನ್ನೇ ಧರ್ಮವೆನ್ನಬಹುದೇ?"

೯. "ಶರೀರವು ಮನಸ್ಸಿನ ನಿಯಂತ್ರಣದಂತೆ ಕೆಲಸ ಮಾಡುತ್ತದೆ; ಇಲ್ಲವೇ ನಿಶ್ಚಲವಾಗಿರುತ್ತದೆ. ಆದ್ದರಿಂದ ಮನಸ್ಸಿನ ಆಲೋಚನೆಗಳನ್ನು ಸಂಯಮಗೊಳಿಸುವುದು ಹೆಚ್ಚು ಪರಿಣಾಮಕಾರಿ – ಆಲೋಚನೆ ಇಲ್ಲದ ಶರೀರವು ನಾಯಿಯಿದ್ದಂತೆ."

೧೦. "ದೇಹವೊಂದನ್ನೇ ಪರಿಗಣಿಸುವುದಾದರೆ ಆಹಾರದ ಪರಿಶುದ್ಧತೆಯಿಂದಲೇ ಶ್ರೇಷ್ಠತೆಗಳಿಸಬಹುದಿತ್ತೇನೋ; ಆದರೆ, ಕರ್ತೃವಿನಲ್ಲಿಯೂ ಶ್ರೇಷ್ಠತೆ ಇರಬೇಕು. ಅದರಿಂದ ಆಗುವ ಒಳಿತಾದರೂ ಏನು?"

೧೧. "ಹಸಿವು ಬಾಯಾರಿಕೆಗಳಿಂದ ನಿಶ್ಶಕ್ತನಾದ ವ್ಯಕ್ತಿಗೆ ಆತ್ಮಸಂಯಮ ಸಾಧ್ಯವಿಲ್ಲದಾಗಿ ಹೊಸಬೆಳಕನ್ನು ಕಾಣುವುದು ಸಾಧ್ಯವಾಗದು."

೧೨. "ಪರಮಶಾಂತಿಯನ್ನು ಪಡೆಯದ ಮನುಷ್ಯನು ತನ್ನ ಮೂಲಕವೇ ತಲುಪಬೇಕಾದ ಅಂತ್ಯವನ್ನು ಹೇಗೆ ತಾನೇ ತಲಪಬಲ್ಲ?"

೧೩. "ಶರೀರದ ನಿಯತ ಅವಶ್ಯಕತೆಗಳನ್ನು ತೃಪ್ತಿಪಡಿಸುವುದರಿಂದ ಅಂತರಂಗದ ನಿಜವಾದ ಶಾಂತಿ ಮತ್ತು ಮನಸ್ಸಿನ ಸಂಯಮವನ್ನು ಗಳಿಸಬಹುದು."

೧೪. ಗೌತಮನು ಸಾಧನೆಯಲ್ಲಿ ತೊಡಗಿದ್ದ ಈ ಸಮಯದಲ್ಲಿ ಉರುವೇಲ ನಗರದಲ್ಲಿ ಸೇನಾನಿ ಎಂಬ ಹೆಸರಿನ ಗೃಹಸ್ಥನೊಬ್ಬನು ವಾಸಿಸುತ್ತಿದ್ದನು. ಅವನಿಗೆ ಸುಜಾತ ಎಂಬ ಮಗಳಿದ್ದಳು.

೧೫. ಸುಜಾತಳು ತನಗೆ ಒಂದು ಗಂಡು ಮಗುವಾದರೆ ತಾನು ಪ್ರತಿವರ್ಷವೂ ಆಲದ ವೃಕ್ಷಕ್ಕೆ ಪೂಜೆ ಸಲ್ಲಿಸುತ್ತೇನೆ ಎಂದು ಹರಸಿಕೊಂಡಿದ್ದಳು.

೧೬. ಅವಳ ಹರಕೆಯು ಕೈಗೂಡಿದುದರಿಂದ ತನ್ನ ಸೇವಕಿ ಪುನ್ನ ಎಂಬುವವಳನ್ನು ಪೂಜೆಯ ಸ್ಥಳವನ್ನು ಸಿದ್ಧಗೊಳಿಸಲು ಆಲದ ಮರದ ಬಳಿ ಕಳುಹಿಸಿದಳು.

೧೭. ಆಲದ ವೃಕ್ಷದ ಕೆಳಗೆ ಧ್ಯಾನಾಸಕ್ತನಾಗಿ ಕುಳಿತಿದ್ದ ಗೌತಮನನ್ನು ಕಂಡ ಆ ಸೇವಕಿಯು ಅವನನ್ನು ಆ ವೃಕ್ಷದೇವತೆಯ ಅವತಾರವೆಂದೇ ತಿಳಿದಳು.

೧೮. ಸುಜಾತಳು ತಾನು ವೃಕ್ಷದ ಪೂಜೆಗೆಂದು ಸಿದ್ಧಗೊಳಿಸಿ ತಂದಿದ್ದ ಆಹಾರವನ್ನು ಚಿನ್ನದ ಬಟ್ಟಲಿನಲ್ಲಿಟ್ಟು ಗೌತಮನಿಗೆ ಅರ್ಪಿಸಿದಳು.

೧೯. ಗೌತಮನು ಆಹಾರದ ಆ ಬಟ್ಟಲನ್ನು ತೆಗೆದುಕೊಂಡು ಸಮೀಪದ ನದಿಯ ದಡಕ್ಕೆ ಹೋಗಿ ಸರ್ಪತೀರ್ಥಕ ಎಂಬ ಸ್ನಾನಘಟ್ಟದಲ್ಲಿ ಮಿಂದು ಆಹಾರವನ್ನು ಸ್ವೀಕರಿಸಿದನು.

೨೦. ಈ ರೀತಿಯಾಗಿ ಅವನ ತಪಸ್ಸಾಧನೆ ಕೊನೆಗೊಂಡಿತು.

೨೧. ಗೌತಮನು ತಪಸ್ಸು ಮತ್ತು ದೇಹದ ದಂಡನೆಯ ಜೀವನವನ್ನು ತೊರೆದನೆಂದು ತಿಳಿದು ಅವನ ಮೇಲೆ ಕುಪಿತರಾದ ಆ ಐದು ಜನ ಸಂನ್ಯಾಸಿ ಮಿತ್ರರು, ಗೌತಮನನ್ನು ತೊರೆದು ಹೊರಟುಹೋದರು.

# ವಿಭಾಗ : ೪

# ಜ್ಞಾನೋದಯ ಮತ್ತು ಹೊಸ ದರ್ಶನದ ಆವಿರ್ಭಾವ

೧. ಹೊಸ ಬೆಳಕಿಗಾಗಿ ಧ್ಯಾನ
೨. ಜ್ಞಾನೋದಯ
೩. ಹೊಸ ಧರ್ಮದ ಆವಿಷ್ಕಾರ
೪. ಬೋಧಿಸತ್ವನಾಗಿದ್ದ ಗೌತಮನು ಸಮ್ಯಕ್ ಜ್ಞಾನವನ್ನು ಗಳಿಸಿ ಬುದ್ಧನಾದುದು

# ೧. ಹೊಸ ಬೆಳಕಿಗಾಗಿ ಧ್ಯಾನ

೧. ಆಹಾರ ಸೇವನೆಯಿಂದ ನವಚೇತನಗೊಂಡ ಗೌತಮನು ಈವರೆಗಿನ ತನ್ನ ಅನುಭವಗಳನ್ನು ಕುರಿತು ಆಲೋಚಿಸತೊಡಗಿದನು. ಎಲ್ಲ ಮಾರ್ಗಗಳು ಫಲಕಾರಿಯಾಗಲಿಲ್ಲ ಎಂದು ಅವನಿಗನ್ನಿಸಿತು.

೨. ಆ ಸೋಲು ಎಷ್ಟು ಪೂರ್ಣವಾಗಿತ್ತೆಂದರೆ ಬೇರೆ ಯಾರಿಗಾದರೂ ಆಗಿದ್ದರೆ ಅವರು ನಿರಾಶೆಯಿಂದ ಕುಂದಿಹೋಗುತ್ತಿದ್ದರು. ಅವನಿಗೆ ದುಃಖವೇನೋ ಆಗಿದ್ದಿತು. ಆದರೆ ನಿರಾಶೆಯ ಸ್ಪರ್ಶ ಅವನಿಗಾಗದಂತೆ ಕಾಣಲಿಲ್ಲ.

೩. ಒಂದು ಸರಿಯಾದ ಮಾರ್ಗವನ್ನು ಕಾಣುತ್ತೇನೆಂಬ ಆಶಯ ಅವನಲ್ಲಿದ್ದಿತು. ಸುಜಾತಳು ಕೊಟ್ಟುಹೋದ ಆಹಾರವನ್ನು ತಿಂದು ಮಲಗಿದ ಆ ರಾತ್ರಿಯಲ್ಲಿ ಗೌತಮನಿಗೆ ಐದು ಕನಸುಗಳು ಬಿದ್ದುವು. ಅವನು ಎಚ್ಚೆತ್ತಮೇಲೆ ಆ ಕನಸುಗಳನ್ನು ವ್ಯಾಖ್ಯಾನಿಸಿ ನೋಡಿದಾಗ ತನಗೆ ಜ್ಞಾನೋದಯವಾಗುವುದು ಖಂಡಿತ ಎಂದು ಅವನಿಗೇ ಅನ್ನಿಸಿತು.

೪. ತನ್ನ ಭವಿಷ್ಯವನ್ನು ಮುಂಗಾಣಲು ಪ್ರಯತ್ನಿಸಿದ್ದುಂಟು. ಸುಜಾತಳ ಸೇವಕಿ ತಂದಿಟ್ಟಿದ್ದ ಆಹಾರದ ಪಾತ್ರೆಯನ್ನು ನೈರಂಜಾ ನದಿಯಲ್ಲಿ ಎಸೆದು "ನನಗೆ ಜ್ಞಾನೋದಯ ಲಭಿಸುತ್ತದೆ ಎಂದಾದರೆ ಈ ಪಾತ್ರೆಯು ನೀರಿನಲ್ಲಿ ತೇಲುತ್ತಾ ಹೋಗಲಿ. ಇಲ್ಲವಾದರೆ ಮುಳುಗಿಹೋಗಲಿ" ಎಂದನು. ಆ ಪಾತ್ರೆಯು ಪ್ರವಾಹಕ್ಕೆ ಎದುರಾಗಿ ತೇಲುತ್ತಾ ಹೋಗಿ ಕಾಲ ಎಂಬ ನಾಗರಾಜನ ಗೃಹದ ಬಳಿ ಮುಳುಗಿಹೋಯಿತು.

೫. ವಿಶ್ವಾಸ ಮತ್ತು ದೃಢ ಸಂಕಲ್ಪವನ್ನು ಹೊತ್ತು ಉರುವೇಲು ನಗರವನ್ನು ತೊರೆದು ಹೊರಟ ಗೌತಮನು ಗಯಾನಗರದ ರಾಜಮಾರ್ಗವನ್ನು ಆ ದಿನ ಸಂಜೆಯ ವೇಳೆಗೆ ತಲುಪಿದನು. ಅಲ್ಲಿ ಒಂದು ಆಲದ ಮರವನ್ನು ಕಂಡನು. ಆ ವೃಕ್ಷದ ಕೆಳಗೆ ಒಂದು ಹೊಸ ಬೆಳಕಿನ ಅರುಣೋದಯಕ್ಕಾಗಿ ಹಾಗೂ ತನ್ನ ಸಮಸ್ಯೆಯನ್ನು ಪರಿಹರಿಸಲು ಮಾರ್ಗ ಕಂಡುಕೊಳ್ಳಲು ಧ್ಯಾನಾಸಕ್ತನಾಗಿ ಕುಳಿತುಕೊಳ್ಳಲು ಯೋಚಿಸಿದನು.

೬. ನಾಲ್ಕು ದಿಕ್ಕುಗಳಲ್ಲಿ ಪ್ರತಿಯೊಂದನ್ನು ಪ್ರಯತ್ನಿಸಿದ ನಂತರ ಎಲ್ಲ ದೋಷಗಳ ನಿವಾರಣೆಗಾಗಿ ಎಲ್ಲ ಮಹರ್ಷಿಗಳು ಆಯ್ಕೆಮಾಡಿಕೊಂಡ ಪೂರ್ವ ದಿಕ್ಕನ್ನೇ ಆಯ್ಕೆಮಾಡಿಕೊಂಡನು.

೭. ಗೌತಮನು ಆ ವೃಕ್ಷದ ಕೆಳಗೆ ಪದ್ಮಾಸನದಲ್ಲಿ ಗಟ್ಟಿಯಾಗಿ ಕುಳಿತುಕೊಂಡನು. ಜ್ಞಾನೋದಯವನ್ನು ಗಳಿಸಬೇಕೆಂಬ ದೃಢಸಂಕಲ್ಪದಿಂದ ತನಗೆ ತಾನೇ ಈ ರೀತಿ ಹೇಳಿಕೊಂಡನು, "ನನ್ನ ಚರ್ಮದ ಸ್ನಾಯುಗಳೆಲ್ಲಾ ಬತ್ತಿ, ಮೂಳೆಗಳು ಒಣಗಿಹೋಗಿ, ರಕ್ತಮಾಂಸಗಳೆಲ್ಲವೂ ಹಿಂಗಿಹೋದರೂ ಸಹ, ನಾನು ಪೂರ್ಣ ಜ್ಞಾನೋದಯವಾಗುವವರೆಗೂ ಈ ಜಾಗವನ್ನು ಬಿಟ್ಟು ಕದಲುವುದಿಲ್ಲ."

೮. ಆಲದ ಮರದ ಕೆಳಗೆ ಧ್ಯಾನಾಸಕ್ತನಾದ ಗೌತಮನ ತಪಸ್ಸಿನ ಪ್ರಭಾವದಿಂದ ಜಾಗೃತಗೊಂಡ ಗಜಪತಿಯ ಗಾಂಭೀರ್ಯವನ್ನು ಹೊತ್ತ ನಾಗರ ದೊರೆಯಾದ ಕಾಳ ಮತ್ತು ಅವನ ಪತ್ನಿ ಸುವರ್ಣಪ್ರಭಾಸ ಇವನು ಬಯಸುವ ಪರಿಪೂರ್ಣ ಜ್ಞಾನವನ್ನು ಖಂಡಿತ ಗಳಿಸುತ್ತಾನೆ ಎಂದು ಈ ರೀತಿ ಘೋಷಿಸಿದರು:

೯. "ನಿನ್ನ ಪಾದದ ತುಳಿತಕ್ಕೆ ಭೂಮಿಯು ನಡುಗಿ ಮಾರ್ದನಿಸುತ್ತಿದೆ; ನಿನ್ನ ತಪಸ್ಸಿನ ದಿವ್ಯ ತೇಜಸ್ಸು ಸೂರ್ಯನ ಪ್ರಭೆಯಂತೆ ಎಲ್ಲೆಲ್ಲಿಯೂ ವ್ಯಾಪಿಸಿದೆ; ಆದ್ದರಿಂದ ನಿನ್ನ ಸಾಧನೆಯ ಫಲ ನಿನಗೆ ಖಂಡಿತ ಲಭಿಸುತ್ತದೆ.

೧೦. "ಓ ಕಮಲನೇತ್ರನಾದ ರಾಜಕುಮಾರನೆ, ಆಕಾಶದಲ್ಲಿ ಹಾರಾಡುತ್ತಿರುವ ಪಕ್ಷಿಸಮೂಹವು ನಿನಗೆ ಭಕ್ತಿಯ ನಮನವನ್ನು ಸಲ್ಲಿಸುತ್ತಿದೆ. ಆಗಸದಲ್ಲಿ ಬೀಸುತ್ತಿರುವ ತಂಗಾಳಿಯು ನಿನಗೆ ತಂಪೆರೆದು ನಿನ್ನ ಗುರಿಸಾಧನೆಗೆ ನೆರವಾಗುತ್ತಿದೆ."

೧೧. ಅವನು ಧ್ಯಾನಾಸಕ್ತನಾಗಿ ಈ ರೀತಿ ಕುಳಿತಾಗ, ಪುರಾಣಗಳಲ್ಲಿ ಹೇಳಿರುವ ಕಾಮನ ಸಂತಾನವೆನಿಸಿದ ರಾಗದ್ವೇಷಾದಿ ದುಷ್ಟಶಕ್ತಿಗಳು ಮತ್ತು ದುರ್ಗುಣಗಳು ಅವನ ಮನಸ್ಸನ್ನು ಆವರಿಸತೊಡಗಿದವು.

೧೨. ಈ ಕಾಮನೆಗಳು ತನ್ನನ್ನು ಪರವಶಗೊಳಿಸಿ ತನ್ನ ಉದ್ದೇಶವನ್ನು ವಿಫಲಗೊಳಿಸಬಹುದೆಂಬ ಭಯ ಗೌತಮನಿಗೆ ಉಂಟಾಯಿತು.

೧೩. ಆದ್ದರಿಂದ ಅವನು ತನ್ನೆಲ್ಲ ಧೈರ್ಯವನ್ನು ತಂದುಕೊಂಡು, ಮಾರನಿಗೆ ಹೇಳಿದನು. "ನನ್ನಲ್ಲಿ ಶ್ರದ್ಧೆ, ಸಾಮರ್ಥ್ಯ ಮತ್ತು ಶೌರ್ಯ ಇವು ಸಾಕಷ್ಟಿವೆ. ದುಷ್ಟಶಕ್ತಿಗಳಾದ ನೀವು ನನ್ನನ್ನು ಖಂಡಿತ ಗೆಲ್ಲಲಾರಿರಿ. ಬಿರುಗಾಳಿಯು ನದಿಯ ಪ್ರವಾಹವನ್ನು ಒಣಗಿಸಬಹುದು. ಆದರೆ ನಾನು ಈಗ ಮಾಡಿರುವ ದೃಢಸಂಕಲ್ಪವನ್ನು ಯಾವ ಕಾರಣದಿಂದಲೂ ನೀವು ಪಡೆಯಲಾರಿರಿ. ಈ ಜೀವನರಂಗದಲ್ಲಿ ಸೋಲನ್ನನುಭವಿಸುವುದಕ್ಕಿಂತ ಸಾಧನೆಯ ರಣರಂಗದಲ್ಲಿ ಸಾಯುವುದೇ ನನಗೆ ಮೇಲೆನಿಸುತ್ತದೆ."

೧೪. ಕಾಗೆಯೊಂದು ಮಾಂಸದ ಚೂರಿನಂತೆ ಕಾಣುವ ಕೆಂಪುಕಲ್ಲಿನ ಶಿಲೆಯೊಂದನ್ನು ಕಂಡು "ಈ ಮಾಂಸದ ಚೂರು ಮೃದುವಾಗಿಯೂ ರುಚಿಯಾಗಿಯೂ ಇರಬಹುದು" ಎಂದು ಭ್ರಮಿಸಿ ಮುನ್ನುಗ್ಗುವಂತೆ ಕೆಟ್ಟ ವ್ಯಾಮೋಹಗಳೂ ಸಹ ಗೌತಮನ ಮನಸ್ಸನ್ನು ಆಕ್ರಮಿಸಿಕೊಂಡವು.

೧೫. ಅಲ್ಲಿ ಯಾವ ಸವಿಯನ್ನೂ ಕಾಣದೆ ಹಿಂದಿರುಗುವ ಕಾಗೆಯಂತೆ, ನಿರಾಶೆಗೊಂಡ ಆ ವ್ಯಾಮೋಹಗಳು ಗೌತಮನಿಂದ ದೂರಸರಿದವು.

## ೨. ಜ್ಞಾನೋದಯ

೧. ತಾನು ಧ್ಯಾನಕ್ಕೆ ಕೂಡುವ ಮುನ್ನ ನಲವತ್ತು ದಿನಕ್ಕೆ ಸಾಕಾಗುವಷ್ಟು ಆಹಾರವನ್ನು ಗೌತಮನು ಅಲ್ಲಿ ಸಂಗ್ರಹಿಸಿದ್ದನು.

೨. ತನ್ನ ಮನಸ್ಸನ್ನು ಚಂಚಲಗೊಳಿಸಲು ಯತ್ನಿಸಿದ ಕೆಟ್ಟ ವ್ಯಾಮೋಹಗಳನ್ನು ಚದುರಿಸಿ ಓಡಿಸಿದ ನಂತರ, ಗೌತಮನು ಆಹಾರವನ್ನು ಸೇವಿಸಿ ಶಕ್ತಿಯನ್ನು ಪಡೆದುಕೊಂಡನು; ಹೀಗೆ ಜ್ಞಾನೋದಯವನ್ನು ಗಳಿಸುವ ಉದ್ದೇಶದಿಂದ ಧ್ಯಾನಕ್ಕೆ ತನ್ನನ್ನು ಅಣಿಗೊಳಿಸಿಕೊಂಡನು.

೩. ನಾಲ್ಕು ವಾರಗಳ ಸತತ ಧ್ಯಾನದಿಂದ ಗೌತಮನಿಗೆ ಜ್ಞಾನೋದಯವಾಯಿತು. ಈ ಜ್ಞಾನೋದಯಕ್ಕೆ ಅವನು ನಾಲ್ಕು ಹಂತಗಳನ್ನು ದಾಟಿ ಬರಬೇಕಾಯಿತು.

೪. ಮೊದಲ ಹಂತದಲ್ಲಿ ಅವನು ಬುದ್ಧಿ ಮತ್ತು ಪರೀಕ್ಷೆ ಕುರಿತು ಅನುಸಂಧಾನ ಮಾಡಿದನು. ಅವನು ಏಕಾಂತದಲ್ಲಿದ್ದುದರಿಂದ ಇದರ ಸಾಧನೆ ಅವನಿಗೆ ಸುಲಭವಾಯಿತು.

೫. ಎರಡನೇ ಹಂತದಲ್ಲಿ ಅವನು ಮನಸ್ಸಿನ ಏಕಾಗ್ರತೆಯನ್ನು ಸೇರಿಸಿಕೊಂಡನು.
೬. ಮೂರನೇ ಹಂತದಲ್ಲಿ ಚಿತ್ತಶಾಂತಿ ಮತ್ತು ಸಾವಧಾನತೆಗಳನ್ನು ತನ್ನ ನೆರವಿಗೆ ಬರಮಾಡಿಕೊಂಡನು.
೭. ಕೊನೆಯದಾದ ನಾಲ್ಕನೇ ಹಂತದಲ್ಲಿ ಚಿತ್ತಶಾಂತಿಗೆ ನಿರ್ಮಲತ್ವವನ್ನು, ಸಾವಧಾನವಾಗಿ ಚಿತ್ತಸ್ವಾಸ್ಥ್ಯವನ್ನು ಮೈಗೂಡಿಸಿಕೊಂಡನು.
೮. ಈ ರೀತಿ ಮನಸ್ಸಿನ ಏಕಾಗ್ರತೆ, ಪರಿಶುದ್ಧತೆ, ನಿರ್ಮಲತೆ, ಕಳಂಕರಹಿತತೆ, ಕುಶಲತೆ, ದಕ್ಷತೆ, ದೃಢತೆ, ಸ್ಥಿರಚಿತ್ತತೆಯನ್ನು ಗಳಿಸಿಕೊಂಡ ಗೌತಮನು ತನ್ನ ಬದುಕಿನ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದಕ್ಕೆ ಪರಿಹಾರವನ್ನು ಹುಡುಕುವುದರಲ್ಲಿ ನಿಮಗ್ನನಾದನು.
೯. ನಾಲ್ಕನೇ ವಾರದ ಕೊನೆಯ ದಿನದ ರಾತ್ರಿಯಲ್ಲಿ ಅವನಿಗೆ ಬೆಳಕು ಕಂಡಿತು. ಸಮಸ್ಯೆಗಳು ಎರಡು ಎಂಬುದು ಅವನಿಗೆ ಮನವರಿಕೆಯಾಯಿತು. ಬದುಕು ದುಃಖಮಯವಾದದ್ದು ಎಂಬುದು ಮೊದಲನೆಯ ಸಮಸ್ಯೆಯಾದರೆ, ಈ ದುಃಖವನ್ನು ಹೋಗಲಾಡಿಸಿ ಮನುಷ್ಯನನ್ನು ಸುಖಿಯನ್ನಾಗಿಸುವ ಮಾರ್ಗ ಯಾವುದು ಎಂಬುದು ಎರಡನೆಯ ಸಮಸ್ಯೆ.
೧೦. ನಾಲ್ಕು ವಾರಗಳ ಕಾಲದ ಧ್ಯಾನದ ನಂತರ ಕೊನೆಯಲ್ಲಿ ಅಂಧಕಾರ ತೊಲಗಿ ಜ್ಯೋತಿ ಬೆಳಗಿತು; ಅಜ್ಞಾನವು ದೂರವಾಗಿ ಸುಜ್ಞಾನವು ಪ್ರಕಾಶಗೊಂಡಿತು. ಅವನಿಗೆ ಒಂದು ಹೊಸ ಮಾರ್ಗದ ದರ್ಶನವಾಯಿತು.

## ೩. ಹೊಸ ಧರ್ಮದ ಆವಿಷ್ಕಾರ

೧. ಗೌತಮನು ಜ್ಞಾನೋದಯವನ್ನು ಬಯಸಿ ಧ್ಯಾನಾಸಕ್ತನಾದಾಗ ಅವನು ಸಾಂಖ್ಯದರ್ಶನದ ಪ್ರಭಾವಕ್ಕೆ ಒಳಗಾಗಿದ್ದನು.
೨. ಈ ಜಗತ್ತು ನೋವು ಮತ್ತು ದುಃಖದಿಂದ ತುಂಬಿದೆ ಎಂಬುದು ನಿರ್ವಿವಾದದ ವಿಚಾರ ಎಂದು ಅವನು ತಿಳಿದಿದ್ದನು.
೩. ಈ ದುಃಖವನ್ನು ಹೋಗಲಾಡಿಸುವುದು ಹೇಗೆ ಎಂಬುದನ್ನು ಕುರಿತು ಗೌತಮನು ಆಸಕ್ತನಾಗಿದ್ದನು. ಸಾಂಖ್ಯದರ್ಶನದಲ್ಲಿ ಇದಕ್ಕೆ ಬೇಕಾದ ಪರಿಹಾರ ಅವನಿಗೆ ಕಂಡಿರಲಿಲ್ಲ.
೪. ಆದ್ದರಿಂದ ದುಃಖವನ್ನು ಪರಿಹರಿಸುವ ಮಾರ್ಗವನ್ನು ಕುರಿತು ಅವನು ಗಮನವಿಟ್ಟು ಚಿಂತಿಸಿದನು.
೫. ಅವನು ಕೇಳಿದ ಮೊದಲನೇ ಪ್ರಶ್ನೆ : "ಪ್ರತಿಯೊಬ್ಬ ಮನುಷ್ಯನೂ ಅನುಭವಿಸುತ್ತಿರುವ ನೋವು ಮತ್ತು ದುಃಖದ ಕಾರಣವೇನು?"
೬. ಅವನ ಎರಡನೆಯ ಪ್ರಶ್ನೆ : "ಈ ದುಃಖವನ್ನು ಪರಿಹರಿಸುವುದು ಹೇಗೆ?"
೭. ಈ ಎರಡು ಪ್ರಶ್ನೆಗಳಿಗೂ ಅವನಿಗೆ ಉತ್ತರ ದೊರಕಿತು. ಅದೇ 'ಸಮ್ಮಬೋಧಿ' ಅಥವಾ 'ಸಮ್ಯಕ್‌ಜ್ಞಾನ'.
೮. ಆಲದ ಮರದ ಕೆಳಗೆ ಅವನಿಗೆ ಈ ಜ್ಞಾನ ಲಭಿಸಿದ್ದರಿಂದ ಆ ವೃಕ್ಷವನ್ನು ಬೋಧಿವೃಕ್ಷ ಎಂದು ಕರೆಯಲಾಗಿದೆ.

## ೪. ಬೋಧಿಸತ್ವನಾಗಿದ್ದ ಗೌತಮನು ಸಮ್ಯಕ್‌ಜ್ಞಾನವನ್ನು ಗಳಿಸಿ ಬುದ್ಧನಾದುದು

೧. ಜ್ಞಾನೋದಯ ಲಭಿಸುವ ಮುನ್ನ ಗೌತಮನು ಕೇವಲ ಬೋಧಿಸತ್ವನಾಗಿದ್ದನು. ಜ್ಞಾನೋದಯವಾದ ನಂತರ ಅವನು ಬುದ್ಧನಾದನು.

೨. ಬೋಧಿಸತ್ವ ಎಂದರೇನು ಮತ್ತು ಬೋಧಿಸತ್ವ ಯಾರು?

೩. ಬುದ್ಧನಾಗಲು ಬಯಸುವವನೇ ಬೋಧಿಸತ್ವನು.

೪. ಬೋಧಿಸತ್ವನಾದವನು ಹೇಗೆ ಬುದ್ಧನಾಗುತ್ತಾನೆ?

೫. ಬೋಧಿಸತ್ವನು ಹತ್ತು ಜನ್ಮಗಳ ಕಾಲ ನಿರಂತರವಾಗಿ ಬುದ್ಧನಾಗುವ ಬಯಕೆಯನ್ನು ಹೊತ್ತು ಬಂದಿರಬೇಕು. ಬೋಧಿಸತ್ವನು ಬುದ್ಧನೆನಿಸಲು ಅರ್ಹತೆಗಳನ್ನು ಗಳಿಸಲು ಏನು ಮಾಡಬೇಕು?

೬. ಅವನು ತನ್ನ ಮೊದಲನೇ ಜನ್ಮದಲ್ಲಿ ಸಂತೋಷ(ಮುದಿತ)ವನ್ನು ಆರ್ಜಿಸಬೇಕು. ಅಕ್ಕಸಾಲಿಗನು ಬೆಳ್ಳಿಯಲ್ಲಿ ಬೆರೆತ ಕಲ್ಮಶಗಳನ್ನು ಮೂಸೆಯಲ್ಲಿ ಊದಿ ತೆಗೆಯುವಂತೆ ಬೋಧಿಸತ್ವನಾಗುವವನು ತನ್ನಲ್ಲಡಗಿದ ಕೆಟ್ಟ ಗುಣಗಳನ್ನು ದೂರೀಕರಿಸಿದಾಗ, ಮೋಡರಹಿತವಾದ ಆಕಾಶದಲ್ಲಿ ಚಂದ್ರನು ಹೊಳೆಯುವಂತೆ ಶಾಂತಸ್ವಭಾವದ ಈತನು ಜಗತ್ತನ್ನೇ ಪ್ರಶಾಂತಗೊಳಿಸುತ್ತಾನೆ. ಅವನ ಮನಸ್ಸಿನಿಂದ ಆನಂದವು ಉಕ್ಕಿಹರಿದು ಎಲ್ಲ ಜೀವರಿಗೂ ಲೇಸನ್ನೇ ಉಂಟುಮಾಡುವಂತೆ ಪ್ರೇರೇಪಿಸುತ್ತದೆ.

೭. ಅವನು ತನ್ನ ಎರಡನೇ ಜನ್ಮದಲ್ಲಿ ನಿರ್ಮಲತ್ವ ವಿಮಲವನ್ನು ಆರ್ಜಿಸುತ್ತಾನೆ. ಭೋಗಾಸಕ್ತಿಯ ಎಲ್ಲ ಬಯಕೆಗಳೂ ಅವನಲ್ಲಿ ನಂದಿಹೋಗುತ್ತವೆ. ಈ ಹಂತದಲ್ಲಿ ಬೋಧಿಸತ್ವನು ಅತ್ಯಂತ ದಯಾಪರನಾಗುತ್ತಾನೆ. ಜನರ ಅವಗುಣಗಳನ್ನು ಎಂದಿಗೂ ತಿರಸ್ಕರಿಸಲಾರ ಮತ್ತು ಅನ್ಯರ ಸದ್ಗುಣಗಳನ್ನು ಶ್ಲಾಘಿಸಲಾರ.

೮. ಬೋಧಿಸತ್ವನು ತನ್ನ ಮೂರನೇ ಜನ್ಮದಲ್ಲಿ ತೀಕ್ಷ್ಣವಾದ ಕಾಂತಿ(ಪ್ರಭಾಕರಿ)ಯನ್ನು ಗಳಿಸುತ್ತಾನೆ. ಅವನ ಚಿತ್‌ಶಕ್ತಿಯು ಕನ್ನಡಿಯಂತೆ ಹೊಳೆಯುತ್ತದೆ. ಅವನಿಗೆ ಈಗ ಅನತ್ತ ಮತ್ತು ಅನಿಕ್ಕಗಳ ಸತ್ಯತೆಯ ಪೂರ್ಣ ಅರಿವಾಗುತ್ತದೆ. ಅವನಲ್ಲಿ ಬೋಧಿಜ್ಞಾನದ ಬಯಕೆ ನಿಶಿತಗೊಂಡು ಅವನು ಅದಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧನಾಗುತ್ತಾನೆ.

೯. ಅವನ ನಾಲ್ಕನೇ ಜನ್ಮದಲ್ಲಿ ಪ್ರಖರ ಪ್ರಜ್ಞೆ (ಅರ್ಶಿಷ್ಮತಿ) ಹಂತವನ್ನು ತಲುಪುತ್ತಾನೆ. ಈ ಜನ್ಮದಲ್ಲಿ ಬೋಧಿಸತ್ವನು ಅಷ್ಟಾಂಗಯುಕ್ತವಾದ ಸಾಧನೆ, ಚತುರ್‌ವಿಧ ಸಮಾಧಿ, ನಾಲ್ಕು ರೀತಿಯ ವಾಕ್‌ಸಿದ್ಧಿ, ಚತುರ್‌ವಿಧ ಸಂಕಲ್ಪಸಿದ್ಧಿ ಮತ್ತು ಪಂಚವಿಧ–ಸದಾಚಾರಗಳ ಸಾಧನೆಯನ್ನು ಸ್ಥಿರಗೊಳಿಸಿಕೊಳ್ಳುತ್ತಾನೆ.

೧೦. ಬೋಧಿಸತ್ವನು ತನ್ನ ಐದನೇ ಜನ್ಮದಲ್ಲಿ ಸುದುರ್ಜಯವನ್ನು ಸಾಧಿಸಿ ಪಡೆಯುತ್ತಾನೆ. ಅವನೀಗ ಸಾಪೇಕ್ಷ ಮತ್ತು ಪರಮಗಳ ಸಂಬಂಧವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುತ್ತಾನೆ.

೧೧. ತನ್ನ ಆರನೇ ಜನ್ಮದಲ್ಲಿ ಬೋಧಿಸತ್ವನು ಅಭಿಮುಖಿ ಎಂಬ ಹಂತವನ್ನು ಬಂದು ಮುಟ್ಟುತ್ತಾನೆ. ಈ ಹಂತದಲ್ಲಿ ಅವನಿಗೆ ಪ್ರತಿಯೊಂದು ವಸ್ತುವಿನ ವಿಕಾಸ ಮತ್ತು ಅವುಗಳ ಕಾರಣ, ಹನ್ನೆರಡು ವಿಧಾನಗಳು ಗ್ರಾಹ್ಯವಾಗುತ್ತದೆ; ಅಭಿಮುಖ ಎಂಬ ಈ ಜ್ಞಾನದ ವಿಕಾಸದಿಂದ ಬೋಧಿಸತ್ವನ ಹೃದಯದಲ್ಲಿ ಅವಿದ್ಯೆಗೆ ಒಳಗಾದ ಎಲ್ಲ ಜೀವಿಗಳ ವಿಚಾರದಲ್ಲಿಯೂ ಸಹಜವಾದ ಅನುಕಂಪ ಮೂಡುತ್ತದೆ.

೧೨. ಬೋಧಿಸತ್ವನು ತನ್ನ ಏಳನೆಯ ಜನ್ಮದಲ್ಲಿ ದುರಂಗಮ ಎಂದೆನಿಸುತ್ತಾನೆ. ಕಾಲ, ದೇಶಗಳನ್ನು

ಮೀರಿದವನಾಗುತ್ತಾನೆ; ಅನಂತದಲ್ಲಿ ಒಂದಾಗುತ್ತಾನೆ. ಎಲ್ಲ ಜೀವಜಂತುಗಳ ಮೇಲಿನ ಅನುಕಂಪದಿಂದಾಗಿ ಇವನು ನಾಮರೂಪಗಳ ಪ್ರಜ್ಞೆಯನ್ನು ಇನ್ನೂ ಉಳಿಸಿಕೊಂಡಿರುತ್ತಾನೆ. ಜಗತ್ತಿನ ಎಲ್ಲ ವ್ಯಾಮೋಹಗಳನ್ನೂ ಗೆದ್ದು ನಿರ್ಲಿಪ್ತನಾಗಿರುವುದರಿಂದ ವಿಷಯಾಸಕ್ತಿಗಳು ಅವನನ್ನು ಮುಟ್ಟಲಾರವು. ಅವನು ಈಗ ತನ್ನ ಸಹಮಾನವರ ಆಸೆಆಕಾಂಕ್ಷೆಗಳನ್ನು ತಣಿಸಬಲ್ಲ. ಅವನು ಈಗ ದಯೆ, ಸಹನೆ, ಔಚಿತ್ಯಪೂರ್ಣ ಜ್ಞಾನ, ಸಾಮರ್ಥ್ಯ, ಶಾಂತಿ, ಪ್ರಜ್ಞತೆ ಮತ್ತು ಪರಮಜ್ಞಾನದ ಸಾಕಾರಮೂರ್ತಿಯಂತಾಗುತ್ತಾನೆ.

೧೩. ಈ ಜನ್ಮದಲ್ಲಿ ಅವನಿಗೆ ಧರ್ಮದ ಪೂರ್ಣ ಅರಿವು ದೊರೆತಿತು. ಆದರೆ ಅದನ್ನು ಅವನು ಜನತೆಗೆ ತಿಳಿಯುವಂತೆ ವಿವರಿಸಬೇಕಾಗಿತ್ತು. ಅದರಲ್ಲೂ ಅವನು ಜಾಣ್ಮೆ ಮತ್ತು ಸಹನೆಯನ್ನು ಹೊಂದಬೇಕಿತ್ತು. ಇವನಿಗೆ ಜನರು ಏನೇ ಮಾಡಿದರೂ ಇವನು ಸಮಚಿತ್ತದಿಂದ ಸಹಿಸಬೇಕು. ಏಕೆಂದರೆ ಅವರನ್ನು ಆವರಿಸಿರುವ ಅಜ್ಞಾನದ ನೈಜ ಸ್ವರೂಪ ಇವನಿಗೆ ತಿಳಿದಿರುತ್ತದೆ. ಎಲ್ಲ ಜೀವಿಗಳ ಒಳತಿಗಾಗಿ ಅವನು ತನ್ನ ಶಕ್ತಿಯನ್ನು ಎಂದಿಗೂ ಕುಂದಿಸದೆ ಮತ್ತು ವಿವೇಕದಿಂದ ತನ್ನ ಮನಸ್ಸನ್ನು ಹಿಂತೆಗೆಯದೆ ಇರುವುದರಿಂದ, ಯಾವುದೇ ದುರ್ಘಟನೆಯೂ ಅವನನ್ನು ಸತ್ಯಮಾರ್ಗದಿಂದ ಎಂದೂ ಹಿಮ್ಮೆಟ್ಟಿಸಲಾರದಾಯಿತು.

೧೪. ಎಂಟನೇ ಜನ್ಮದಲ್ಲಿ ಬೋಧಿಸತ್ವನು ಅಚಲನಾಗುತ್ತಾನೆ. ಅಚಲತೆಯ ಈ ಸ್ಥಿತಿಯಲ್ಲಿ ಅವನ ಎಲ್ಲ ಹೋರಾಟಗಳೂ ಅಂತ್ಯಗೊಳ್ಳುತ್ತವೆ. ಒಳಿತನ್ನು ಸಹಜವಾಗಿ ಅನುಸರಿಸುತ್ತಾನೆ; ಅವನು ಕೈಗೊಂಡ ಎಲ್ಲ ಕೆಲಸಗಳೂ ಜಯಪ್ರದವಾಗುತ್ತವೆ.

೧೫. ಬೋಧಿಸತ್ವನು ತನ್ನ ಒಂಭತ್ತನೆಯ ಜನ್ಮದಲ್ಲಿ ಸಾಧುಮತಿಯಾಗುತ್ತಾನೆ. ಇದು ಅವನು ಎಲ್ಲ ಧರ್ಮ ಮತ್ತು ದರ್ಶನಗಳೆಲ್ಲವನ್ನು ಬೇಧಿಸಿ, ಅವುಗಳನ್ನು ಜಯಿಸುವ ಹಾಗೂ ಕಾಲಾತೀತನಾಗುವ ಹಂತ.

೧೬. ತನ್ನ ಹತ್ತನೇ ಜನ್ಮದಲ್ಲಿ ಬೋಧಿಸತ್ವನು ಧರ್ಮ ಮೇಘನಾಗುತ್ತಾನೆ. ಈ ಸ್ಥಿತಿಯಲ್ಲಿ ಬುದ್ಧನಾದವನಿಗೆ ಲಭಿಸುವ ದಿವ್ಯದೃಷ್ಟಿ ಲಭಿಸುತ್ತದೆ.

೧೭. ತಾನು ಬುದ್ಧನಾದಾಗ ತನಗೆ ಅತ್ಯಗತ್ಯವಾಗುವ ಈ ಹತ್ತು ಶಕ್ತಿಗಳನ್ನು ಬೋಧಿಸತ್ವನು ಹೀಗೆ ಸಂಪಾದಿಸಿಕೊಳ್ಳುತ್ತಾನೆ.

೧೮. ಈ ರೀತಿ ಹಂತದಿಂದ ಹಂತಕ್ಕೆ ವಿಕಾಸಗೊಂಡ ಬೋಧಿಸತ್ವನು ಈ ಹತ್ತು ರೀತಿಯ ದಿವ್ಯ ಶಕ್ತಿಗಳನ್ನು ಗಳಿಸುವುದರ ಜೊತೆಗೆ ಈ ಪರಾಮಿತಗಳನ್ನು ಪರಿಪೂರ್ಣವಾಗಿ ಸಾಧನೆಯಾಗುವವರೆಗೆ ಅಭ್ಯಾಸ ಮಾಡಬೇಕು.

೧೯. ಒಂದು ಪರಾಮಿತವೆಂದರೆ ಒಂದು ಜನ್ಮಪರ್ಯಂತ ಒಂದೇ ಪರಾಮಿತವನ್ನು ಹಂತಹಂತವಾಗಿ ಸಾಧಿಸಿ ಅದರಲ್ಲಿ ತಜ್ಞತೆಯನ್ನು ಗಳಿಸಬೇಕು. ಒಂದು ಜನ್ಮಪೂರ್ತಿ ಒಂದು ಪರಾಮಿತದ ಸಾಧನೆಯಾಗಬೇಕು. ಒಂದರದು ಸ್ವಲ್ಪ, ಮತ್ತೊಂದರದು ಸ್ವಲ್ಪ ಹೀಗಾಗಬಾರದು.

೨೦. ಬೋಧಿಸತ್ವನಲ್ಲಿ ಇಮ್ಮಡಿ ಸಾಮರ್ಥ್ಯವಿದ್ದಾಗ ಮಾತ್ರ ಅವನು ಬುದ್ಧನಾಗುವ ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಾನೆ. ಬುದ್ಧನ ಸ್ಥಿತಿಯನ್ನು ಮುಟ್ಟುವುದೇ ಬೋಧಿಸತ್ವನ ಪರಮ ಗುರಿ.

೨೧. ಜಾತಕ ಕಥೆಗಳಲ್ಲಿ ಬರುವ ಬೋಧಿಸತ್ವನ ಜನ್ಮಾಂತರದ ಕಥೆಗಳು ಸ್ಥೂಲದಲ್ಲಿ ನೋಡಿದರೆ ಬ್ರಾಹ್ಮಣ ಧರ್ಮದಲ್ಲಿ ಬರುವ ದೇವರ ಅವತಾರಗಳಿಗೆ ಸಮಾನಾಂತರವಾಗಿರುವಂತೆ ಕಾಣುತ್ತವೆ.

೨೨. ಅತ್ಯಂತ ಪರಿಶುದ್ಧತೆಯನ್ನು ಗಳಿಸುವುದೇ ಜೀವನದ ಪರಮೋದ್ದೇಶ ಎಂಬುದನ್ನು ಜಾತಕ ಕಥೆಗಳು ಆಧರಿತವಾಗಿವೆ.

೨೩. ದೇವರ ಅವತಾರ ಸಿದ್ಧಾಂತದಲ್ಲಿ ದೇವರು ಅವತಾರವೆತ್ತುವಾಗ ಪರಿಶುದ್ಧವಾಗಿರಬೇಕಾದುದು ಅಗತ್ಯವಿಲ್ಲ. ಬ್ರಾಹ್ಮಣೀಯ ಅವತಾರ ಸಿದ್ಧಾಂತ ಹೇಳುವುದೆಂದರೆ ದೇವರು ಸ್ವತಃ ಅನೀತಿವಂತನೂ, ಅಶುದ್ಧನೂ ಆಗಿದ್ದರೂ, ವಿವಿಧ ಅವತಾರಗಳೆನ್ನೆತ್ತಿ ತನ್ನ ಭಕ್ತರನ್ನು ಉದ್ಧರಿಸುತ್ತಾನೆ.

೨೪. ಬುದ್ಧನೆನಿಸುವ ಮುನ್ನ ಬೋಧಿಸತ್ವನಾದವನು ಹತ್ತುಜನ್ಮಗಳನ್ನು ಎತ್ತಬೇಕು ಎಂಬ ಈ ಸಿದ್ಧಾಂತಕ್ಕೆ ಸರಿಸಮನಾದ ಸಿದ್ಧಾಂತ ಬೇರೆಲ್ಲಿಯೂ ಕಾಣಬರುವುದಿಲ್ಲ. ಯಾವ ಧರ್ಮದಲ್ಲಿಯೂ ಅದರ ಸಂಸ್ಥಾಪಕನೆನಿಸಿಕೊಂಡವನು ಇಷ್ಟೆಲ್ಲ ಕಠಿಣವಾದ ಪರೀಕ್ಷೆಗಳನ್ನು ಗೆದ್ದು ಬರಬೇಕು ಎಂದು ವಿಧಿಸಿಲ್ಲ.

# ವಿಭಾಗ : ೫
# ಬುದ್ಧ ಮತ್ತು ಅವನ ಪೂರ್ವಿಕರು

೧. ಬುದ್ಧ ಮತ್ತು ವೈದಿಕ ಋಷಿಗಳು
೨. ದಾರ್ಶನಿಕ ಕಪಿಲಮುನಿ
೩. ಬ್ರಾಹ್ಮಣಗಳು
೪. ಉಪನಿಷತ್ತುಗಳು ಮತ್ತು ಅವುಗಳ ಬೋಧನೆ

# ೧. ಬುದ್ಧ ಮತ್ತು ವೈದಿಕ ಋಷಿಗಳು

೧. ವೇದಗಳು ಎಂದರೆ ಮಂತ್ರಗಳ ಒಂದು ಸಂಗ್ರಹ. ಇವುಗಳನ್ನು ಪಠಿಸಿದವರನ್ನು ಋಷಿಗಳು ಎಂದು ಕರೆಯಲಾಗಿದೆ.

೨. ಈ ವೇದ ಮಂತ್ರಗಳು ದೇವತೆಗಳಾದ ಇಂದ್ರ, ಅಗ್ನಿ, ಸೋಮ, ಈಶಾನ, ಪ್ರಜಾಪತಿ, ಬ್ರಹ್ಮ, ಮಹಿದ್ಧಿ, ಯಮ ಮುಂತಾದವರನ್ನು ಕುರಿತ ಪ್ರಾರ್ಥನೆಗಳು.

೩. ಈ ಸ್ತೋತ್ರಗಳು ವೈರಿಗಳಿಂದ ರಕ್ಷಣೆ, ಐಶ್ವರ್ಯದ ಕೊಡುಗೆ, ಅಹಾರ, ಮಾಂಸ ಮತ್ತು ಮದ್ಯಗಳ ಅರ್ಪಣೆಗಾಗಿ ಭಕ್ತರು ಮಾಡಿದ ಪ್ರಾರ್ಥನೆಗಳು.

೪. ವೇದಗಳಲ್ಲಿ ಅಂತಹ ಹೆಚ್ಚಿನ ದಾರ್ಶನಿಕ ಚಿಂತನೆ ಕಾಣುವುದಿಲ್ಲ. ಆದರೆ ವೇದಗಳ ಕಾಲದ ಕೆಲವು ಋಷಿಗಳು ಸ್ವಲ್ಪಮಟ್ಟಿನ ದಾರ್ಶನಿಕ ಚಿಂತನೆಯಲ್ಲಿ ತೊಡಗಿದ್ದ ನಿದರ್ಶನಗಳು ಅಲ್ಲಲ್ಲಿ ಕಾಣಬರುತ್ತವೆ.

೫. ವೇದಗಳ ಕಾಲದ ಕೆಲವು ಋಷಿಗಳೆಂದರೆ (೧) ಅಘಮರ್ಷಣ, (೨) ಪ್ರಜಾಪತಿ ಪರಮೇಷ್ಠಿ, (೩) ಬ್ರಾಹ್ಮಣಸ್ಪತಿ ಅಥವಾ ಬೃಹಸ್ಪತಿ, (೪) ಅನಿಲ, (೫) ದೀರ್ಘತಮಸ್, (೬) ನಾರಾಯಣ, (೭) ಹಿರಣ್ಯಗರ್ಭ ಮತ್ತು (೮) ವಿಶ್ವಕರ್ಮ.

೬. ವೇದಗಳ ಕಾಲದ ಈ ದಾರ್ಶನಿಕ ಋಷಿಗಳ ಪ್ರಮುಖ ಸಮಸ್ಯೆಗಳೆಂದರೆ:– ಈ ಜಗತ್ತು ಹೇಗೆ ಆರಂಭವಾಯಿತು? ಈ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತು ಹೇಗೆ ರೂಪುಗೊಂಡವು? ಅವುಗಳ ಅಸ್ತಿತ್ವ ಮತ್ತು ಅವುಗಳ ನಡುವಿನ ಸಾಮರಸ್ಯಕ್ಕೆ ಕಾರಣವೇನು? ಈ ವಿಶ್ವದ ಕರ್ತೃ ಯಾರು ಮತ್ತು ಅದರ ನಿಯಾಮಕ ಎಲ್ಲಿದ್ದಾನೆ? ಈ ವಿಶ್ವವು ಎಲ್ಲಿಂದ ಮೂಡಿ ಬಂದಿತು ಮತ್ತು ಎಲ್ಲಿ ಲಯಗೊಳ್ಳುತ್ತದೆ?

೭. ಅಘಮರ್ಷಣನ ಪ್ರಕಾರ ಈ ಜಗತ್ತು ತಪಸ್ಸಿನಿಂದ (ತಾಪ) ಹುಟ್ಟಿತು. ತಪಸ್ಸೆಂಬುದು ಶಾಶ್ವತ ತತ್ತ್ವ ಮತ್ತು ಸತ್ಯದ ಉಗಮಕ್ಕೆ ಕಾರಣವಾದ ಒಂದು ಸೃಜನಶೀಲ ತತ್ವ. ಇವುಗಳಿಂದ ತಮಸ್ಸು ಅಂದರೆ ರಾತ್ರಿ ಉದಿಸಿಬಂದಿತು. ಈ ತಮಸ್ಸಿನಿಂದ ಜಲ ಉತ್ಪತ್ತಿಯಾಯಿತು ಮತ್ತು ಅದರಿಂದ ಕಾಲ ಹುಟ್ಟಿತು. ಕಾಲದಿಂದ ಸೂರ್ಯಚಂದ್ರರು, ಸ್ವರ್ಗ–ಮರ್ತ್ಯಗಳು, ಆಕಾಶ–ಅಂತರಿಕ್ಷಗಳು, ಹಗಲು–ರಾತ್ರಿಗಳು ಜನಿಸಿದವು.

೮. ಬೃಹಸ್ಪತಿಯು ಪ್ರಕಾರ ನಿರ್ಜೀವದಿಂದ ಉತ್ಪತ್ತಿಯಾದುದು ಜೀವ. ಅವನ ಅಸ್ತಿತ್ವ ಎಂದರೆ ಅನಂತ ಎಂದೇ ಅರ್ಥ. ಮೂಲದಲ್ಲಿ ಇಲ್ಲದಿರುವಿಕೆಯಿಂದ ಇರುವಿಕೆ ಹುಟ್ಟಿಬಂದದ್ದು ಅಸತ್ ಎಂಬುದು ಎಲ್ಲ ಸತ್‌ನ ಹಾಗೂ ಎಲ್ಲ ಸಾಧ್ಯದ ಆದರೆ ಅಸನ್ (ಅನಸ್ತಿತ್ವ)ನ ಶಾಶ್ವತ ಆಧಾರ.

೯. ಪ್ರಜಾಪತಿ ಪರಮೇಷ್ಠಿಯು 'ಜೀವಿಯು ನಿರ್‌ಜೀವಿಯಿಂದ ಹೇಗೆ ಬರಲು ಸಾಧ್ಯ?' ಎಂಬ ಸಮಸ್ಯೆಯೊಂದಿಗೆ ತನ್ನ ಚಿಂತನೆಯನ್ನು ಆರಂಭಿಸಿದನು. ಅವನ ದೃಷ್ಟಿಯಲ್ಲಿ ಇದೊಂದು ಅಸಂಬದ್ಧವಾದ ಪ್ರಶ್ನೆ. ಆದ್ದರಿಂದ ಅವನ ಪ್ರಕಾರ ನೀರು 'ಜೀವಿ'ಯ ಮೂಲವಸ್ತು. ಏಕೆಂದರೆ ನೀರು ಮೂಲವಸ್ತುವು, ಜೀವವೂ ಅಲ್ಲ, ನಿರ್ಜೀವವೂ ಅಲ್ಲ.

೧೦. ಪರಮೇಷ್ಠಿಯ ಪ್ರಕಾರ ವಸ್ತು ಮತ್ತು ಚೇತನಗಳ ನಡುವೆ ಯಾವ ಭೇದವೂ ಇಲ್ಲ. ನೀರಿನಲ್ಲಡಗಿರುವ ತತ್ವ ಎಂದರೆ, ಅವನು ಕಾಮ, ಅನಂತ ವಾಂಛೆ ಎಂದು ಕರೆದ ಅಂತರ್ಗತ ತತ್ತ್ವದಿಂದಾಗಿ ವಿಶ್ವದ ಈ ಎಲ್ಲ ರೂಪ ವೈವಿಧ್ಯಗಳೂ ಮೂಡಿಬಂದಿವೆ ಎಂಬುದು ಅವನ ಮತ.

೧೧. ಅನಿಲ ಎಂಬ ಮತ್ತೊಬ್ಬ ವೈದಿಕ ದಾರ್ಶನಿಕನ ಪ್ರಕಾರ ವಿಶ್ವದ ಮೂಲಧಾತು ಗಾಳಿ ಅಥವಾ ವಾಯು. ಚಲನಶಕ್ತಿಯೇ ವಾಯುವಿನ ಮೂಲ ಸ್ವರೂಪ. ಅದು ಉತ್ಪತ್ತಿ ತತ್ತ್ವದಿಂದ ಸಂಪನ್ನವಾಗಿದೆ.

೧೨. ದೀರ್ಘಾತ್ಮ ಎಂಬ ಚಿಂತಕನ ಪ್ರಕಾರ ಈ ವಿಶ್ವದ ಜೀವವಸ್ತುಗಳೆಲ್ಲವೂ ಮೂಲತಃ ಸೂರ್ಯನನ್ನು ಅವಲಂಬಿಸಿ ಬದುಕುತ್ತವೆ. ಸೂರ್ಯನಲ್ಲಿ ಅಂತರ್ಗತವಾಗಿರುವ ಅನಂತ ಶಕ್ತಿಯಿಂದಾಗಿ ಅದು ನಿರಂತರವಾಗಿ ಚಲಿಸುತ್ತಿರುತ್ತವೆ ಎಂಬುದು ಇವನ ತತ್ತ್ವ.

೧೩. ಸೂರ್ಯನು ಬೂದುಬಣ್ಣದ ಮೂಲದ್ರವ್ಯದಿಂದ ಕೂಡಿರುವಂತೆಯೇ ಮಿಂಚು ಮತ್ತು ಅಗ್ನಿಯೂ ಅದೇ ಬಣ್ಣವನ್ನು ಪಡೆದಿವೆ.

೧೪. ಮಿಂಚು, ಬೆಂಕಿ, ಸೂರ್ಯ ಇವು ನೀರಿನ ಬೀಜರೂಪಗಳು. ಈ ನೀರು ಸಸ್ಯ ಜಗತ್ತಿಗೆಲ್ಲ ಆಧಾರವಾದ್ದರಿಂದ ಇದು ವಿಶ್ವದ ಎಲ್ಲ ಚರಾಚರಗಳಿಗೂ ಬೀಜರೂಪವಾದದ್ದು ಎಂಬುದು ದೀರ್ಘಾತ್ಮನ ಸಿದ್ಧಾಂತ.

೧೫. ನಾರಾಯಣನ ಪ್ರಕಾರ ಪುರುಷ ಅಂದರೆ ದೇವರು ವಿಶ್ವದ ಆದಿ ಕಾರಣ. ಆ ಮೂಲಪುರುಷನಿಂದ ಸೂರ್ಯ, ಚಂದ್ರ, ಭೂಮಿ, ಅಗ್ನಿ, ವಾಯು, ಆಕಾಶ, ದೇಶ, ಋತುಗಳು, ಸೂಕ್ಷ್ಮ ಜೀವಿಗಳು, ಪ್ರಾಣಿ ಪಕ್ಷಿಗಳು ಮಾನವ ಮತ್ತು ಅವನ ಎಲ್ಲ ಆಚಾರಗಳು ಮೂಡಿಬಂದಿವೆ.

೧೬. ಸಿದ್ಧಾಂತದ ದೃಷ್ಟಿಯಿಂದ ನೋಡಿದರೆ ಹಿರಣ್ಯಗರ್ಭ ಸಿದ್ಧಾಂತವು ಪರಮೇಷ್ಠಿ ಮತ್ತು ನಾರಾಯಣರು ಪ್ರತಿಪಾದಿಸಿದ ಸಿದ್ಧಾಂತಗಳ ನಡುವಿನ ಒಂದು ಸಿದ್ಧಾಂತದಂತೆ ಕಾಣುತ್ತದೆ. ಹಿರಣ್ಯಗರ್ಭ ಎಂದರೆ ಸುವರ್ಣ ಬೀಜ. ವಿಶ್ವಕ್ಕೆಲ್ಲ ಕಾರಣವೆನಿಸಿದ ಆ ಸುವರ್ಣಬೀಜದಿಂದ ಎಲ್ಲ ಇತರ ಶಕ್ತಿಗಳು ಮತ್ತು ದೈವಿಕ, ಭೌತಿಕ ಜೀವಿಗಳು ರೂಪುಗೊಂಡವು ಎಂಬುದು ಈ ಸಿದ್ಧಾಂತದ ಸಾರ.

೧೭. ಹಿರಣ್ಯಗರ್ಭ ಎಂದರೆ ಅಗ್ನಿ. ಸೌರವ್ಯೂಹದ ಕೇಂದ್ರ ತತ್ತ್ವವಾಗಿರುವ ಅಗ್ನಿಯು ಈ ವಿಶ್ವದ ಅಸ್ತಿತ್ವಕ್ಕೆ ಮೂಲ ಕಾರಣವೆನಿಸಿದೆ ಎಂಬುದು ಇದರ ಮತ.

೧೮. ವಿಶ್ವಕರ್ಮನ ದೃಷ್ಟಿಯಲ್ಲಿ ಈ ವಿಶ್ವದ ರಚನೆಗೆ ಮೂಲ ವಸ್ತು ಜಲವೆಂದೂ, ಅದಕ್ಕೆ ಅಂತರ್ಗತ ಚಲನಶೀಲತೆ ಇದೆ ಎಂದು ಹೇಳಿ, ಇಡೀ ವಿಶ್ವವೇ ಅದರಿಂದ ಉತ್ಪತ್ತಿಯಾಗಿದೆ ಎಂಬುದು ಅಸಮರ್ಪಕ ಹಾಗೂ ಅತೃಪ್ತಿಕರವಾಗಿದೆ. ಬದಲಾವಣೆಯ ಅಂತರ್ಗತ ತತ್ತ್ವ ಆಧಾರಿತವಾದ ಮೂಲವಸ್ತು ಜಲವೇ ಆಗಿದ್ದಲ್ಲಿ, ಜಲ ಯಾವ ಜೀವಿಯಿಂದ ಅಸ್ತಿತ್ವಕ್ಕೆ ಬಂದಿತು, ಯಾವುದರಿಂದ ತನ್ನ ಚನಲಶೀಲತೆಯನ್ನು ಪಡೆಯಿತು, ಅದರ ಉತ್ಪತ್ತಿ ತತ್ತ್ವ, ಧಾತು ವಸ್ತುಗಳು, ಅದರ ನಿಯಮಗಳೇ ಮೊದಲಾದುದೆಲ್ಲಕ್ಕೆ ವಿವರಣೆ ಬೇಕಾಗುತ್ತದೆ.

೧೯. ಆದ್ದರಿಂದ ವಿಶ್ವಕರ್ಮನ ಪ್ರಕಾರ ದೇವರು ಮೂಲ ಚೇತನ ಶಕ್ತಿ. ದೇವರೇ ಮೊದಲು ಮತ್ತು ದೇವರೇ ಕೊನೆ. ಅವನು ಈ ಗೋಚರ ಜಗತ್ತಿಗಿಂತ ಮೊದಲೇ ಇದ್ದವನು. ಈ ವಿಶ್ವದ ರಚನೆ ನಿಯಾಮನುಕ ದೇವನೊಬ್ಬನೇ. ದೇವರು ಏಕ ಮತ್ತು ಏಕೈಕ; ಅವನು ಅರಿಯೋ ನಿಜ; ಅವನಲ್ಲಿಯೇ ಎಲ್ಲ ಚರಾಚರವು ಇವೆ. ಅವನೇ ಮಾನಸಿಕವಾಗಿ ಬಲಿಷ್ಠ; ಪರಮ ಶಕ್ತಿವಂತ. ಅವನು ಸೃಷ್ಟಿಕರ್ತನೂ ಅಹುದು, ಲಯಕರ್ತನೂ ಅಹುದು. ತಂದೆಯಂತೆ ನಮ್ಮ ಜನಕನಾಗಿ, ಮತ್ತು ಲಯಕರ್ತನಾಗಿ

ಎಲ್ಲದರ ವಿಧಿಯನ್ನು ಬಲ್ಲವ.

೨೦. ವೈದಿಕ ಋಷಿಗಳೆಲ್ಲರೂ ಪೂಜ್ಯರು ಮತ್ತು ಪ್ರಾಜ್ಞರು ಎಂದು ಬುದ್ಧ ತಿಳಿಯಲಿಲ್ಲ. ಅವನ ಪ್ರಕಾರ ಹತ್ತು ಜನ ವೈದಿಕ ಋಷಿಗಳು ಮಾತ್ರ ಅತಿಪುರಾತನರಿದ್ದು ಅವರುಗಳೇ ವೈದಿಕಮಂತ್ರಗಳ ಕರ್ತೃಗಳು ಎಂದು ಪರಿಗಣಿಸಿದ್ದನು.

೨೧. ಆದರೆ ವೈದಿಕ ಮಂತ್ರಗಳಲ್ಲಿ ಮನುಷ್ಯನ ನೈತಿಕ ಪ್ರಗತಿಗೆ ಕಾರಣವಾಗುವ ಯಾವ ಅಂಶವೂ ಅವನಿಗೆ ಕಂಡುಬರುವುದಿಲ್ಲ.

೨೨. ಅವನ ದೃಷ್ಟಿಯಲ್ಲಿ ಈ ವೇದಗಳು ಮರಳುಗಾಡಿನಂತೆ ವ್ಯರ್ಥವಾಗಿದ್ದವು.

೨೩. ಆದ್ದರಿಂದ, ಬುದ್ಧನು, ಮಂತ್ರಗಳನ್ನು ಜ್ಞಾನವುಳ್ಳವಲ್ಲವೆಂದೂ ಅಥವಾ ಅದರಲ್ಲಿ ಅನುಸರಿಸುವಂತಹುದು ಏನೂ ಇಲ್ಲವೆಂದು ನಿರಾಕರಿಸಿದನು.

೨೪. ಅದೇ ರೀತಿ ಬುದ್ಧನಿಗೆ ವೈದಿಕ ಮುನಿಗಳು ಕಂಡ ದರ್ಶನದಲ್ಲಿ ಗಮನೀಯ ಅಂಶಗಳು ಹೆಚ್ಚಾಗಿ ಕಾಣಲಿಲ್ಲ. ಅವರು ಸತ್ಯಕ್ಕಾಗಿ ಹುಡುಕಾಡಿದ್ದಾರೆಯೇ ಹೊರತು ಅದನ್ನು ಮುಟ್ಟಿದಂತೆ ಕಾಣುವುದಿಲ್ಲ.

೨೫. ಅವರ ಸಿದ್ಧಾಂತಗಳು ಕೇವಲ ಅವರ ಕಲ್ಪನೆಗಳಂತಿದ್ದು ಅವು ತರ್ಕ ಆಧಾರಿತವೂ ಅಲ್ಲ; ವಾಸ್ತವ ಸಂಗತಿಗಳನ್ನು ಆಧರಿಸಿಯೂ ಇಲ್ಲ. ಅವರು ಕೊಟ್ಟ ದಾರ್ಶನಿಕ ಸಿದ್ಧಾಂತದಿಂದ ಯಾವ ಸಾಮಾಜಿಕ ಮೌಲ್ಯವೂ ಜನಿಸಿ ಬಂದಿಲ್ಲ.

೨೬. ಆದ್ದರಿಂದ ವೈದಿಕ ಋಷಿಗಳಿಂದ ಮೂಡಿಬಂದ ತಾತ್ತ್ವಿಕದರ್ಶನವು ನಿಷ್ಪ್ರಯೋಜಕವೆಂದು ಅದನ್ನು ಬುದ್ಧನು ತಿರಸ್ಕರಿಸಿದನು.

## ೨. ದಾರ್ಶನಿಕ ಕಪಿಲಮುನಿ

೧. ಭಾರತದ ಪ್ರಾಚೀನ ಕಾಲದ ದಾರ್ಶನಿಕರಲ್ಲಿ ಸರ್ವಶ್ರೇಷ್ಠನಾದವನೆಂದರೆ ಕಪಿಲಮುನಿ.

೨. ಅವನ ದರ್ಶನ ಸಿದ್ಧಾಂತವು ಬಹು ವಿಶಿಷ್ಟವಾದುದಾದ್ದರಿಂದ ಅವನು ದಾರ್ಶನಿಕ ಜಗತ್ತಿನಲ್ಲಿ ತನ್ನದೇ ಆದ ಒಂದು ಉನ್ನತ ಸ್ಥಾನವನ್ನು ಗಳಿಸಿದ್ದಾನೆ. ಅವನ ದರ್ಶನ ಸಾಂಖ್ಯ ದರ್ಶನವೆಂದು ಪ್ರಸಿದ್ಧವಾಗಿದೆ.

೩. ಅವನ ದರ್ಶನದ ಕೆಲವು ಸಿದ್ಧಾಂತಗಳು ನಿಜವಾಗಿಯೂ ಆಶ್ಚರ್ಯವನ್ನು ಹುಟ್ಟಿಸುವಂತಿವೆ.

೪. ಸತ್ಯವು ದೃಷ್ಟಾಂತಗಳಿಂದ ಪ್ರತಿಪಾದಿಸಲ್ಪಡಬೇಕು. ಇದು ಸಾಂಖ್ಯ ಸಿದ್ಧಾಂತದ ಮೊದಲ ತತ್ತ್ವ. ದೃಷ್ಟಾಂತವಿಲ್ಲದೆ ಸತ್ಯವಿಲ್ಲ.

೫. ಸತ್ಯದ ಪ್ರತಿಪಾದನೆಯಲ್ಲಿ ಪ್ರತ್ಯಕ್ಷ ಮತ್ತು ಅನುಮಾನ ಎಂಬ ಎರಡು ರೀತಿಯ ಪ್ರಮಾಣಗಳನ್ನು ಕಪಿಲನು ಮಾನ್ಯ ಮಾಡಿದನು.

೬. ಪ್ರತ್ಯಕ್ಷ ಎಂಬುದು ಅಸ್ತಿತ್ವದಲ್ಲಿರುವ ವಸ್ತುವನ್ನು ಇಂದ್ರಿಯಗಳ ಮೂಲಕ ಅವಲೋಕಿಸಿ ಮನಸ್ಸಿನಿಂದ ಗ್ರಹಿಸುವುದು.

೭. ಅನುಮಾನ ಎಂಬುದು ಮೂರು ರೀತಿ. ಮೊದಲನೆಯದು ಕಾರಣದಿಂದ ಕಾರ್ಯ ಮೋಡ ಇದೆ ಅಂದರೆ ಮಳೆ ಬರುತ್ತದೆ ಎಂದು ನಿರ್ಣಯಿಸುವಂತೆ. ಎರಡನೆಯದು ಕಾರ್ಯವನ್ನು ನೋಡಿ

ಕಾರಣವನ್ನು ನಿರ್ಣಯಿಸುವುದು. ತುಂಬಿ ಹರಿಯುವ ನದಿಯನ್ನು ನೋಡಿ ಬೆಟ್ಟದಲ್ಲಿ ಮಳೆಯಾಗಿದೆ ಎಂಬಂತೆ. ಮೂರನೆಯದು ಉಪಮಾನಗಳ ಮೂಲಕ. ಸ್ಥಳಾಂತರಗೊಳ್ಳುವ ಮನುಷ್ಯ ಚಲಿಸುತ್ತಿರುವಂತೆ ಸ್ಥಳಾಂತರಗೊಳ್ಳುವ ನಕ್ಷತ್ರಗಳೂ ಚಲಿಸುತ್ತಿರಬೇಕು ಎಂಬಂತೆ.

೮. ಕಪಿಲನ ಮುಂದಿನ ಮೂಲತತ್ತ್ವ–ಕಾರಣತತ್ತ್ವ–ಸೃಷ್ಟಿ ಮತ್ತು ಅದರ ಕಾರಣ.

೯. ಈ ಜಗತ್ತನ್ನು ಸೃಷ್ಟಿಸಲು ಒಬ್ಬ ಸೃಷ್ಟಿಕರ್ತನಿರಬೇಕೆಂಬುದನ್ನು ಕಪಿಲನು ನಿರಾಕರಿಸಿದನು. ಅವನ ಪ್ರಕಾರ ಸೃಷ್ಟಿಯಲ್ಲಿ ಕಾಣುವ ಯಾವುದೇ ವಸ್ತುವಾಗಲೀ, ಅದು ಸೃಷ್ಟಿಗೊಳ್ಳುವ ಮುನ್ನ, ಮಡಕೆಯು ಮಣ್ಣಿನಲ್ಲಿ, ಬಟ್ಟೆಯು ದಾರದಲ್ಲಿ ಇರುವಂತೆ, ಅಸ್ತಿತ್ವದಲ್ಲಿರುತ್ತದೆ.

೧೦. ಈ ವಾದದ ಸಹಾಯದಿಂದ ಕಪಿಲನು ಈ ವಿಶ್ವವು ಒಬ್ಬ ಜೀವನಿಂದ ಸೃಷ್ಟಿಸಲ್ಪಟ್ಟಿತು ಎಂಬ ವಾದವನ್ನು ಅಲ್ಲಗಳೆದನು.

೧೧. ಅವನು ತನ್ನ ಈ ಸಿದ್ಧಾಂತಕ್ಕೆ ಪೋಷಕವಾಗಿ ಮತ್ತೆ ಕೆಲವು ವಾದಗಳನ್ನು ಮುಂದಿಡುತ್ತಾನೆ.

೧೨. ಅಸ್ತಿತ್ವದಲ್ಲಿಲ್ಲದ ವಸ್ತುವಿನಿಂದ ಯಾವುದೇ ಕಾರ್ಯವು ಸಾಧ್ಯವಾಗಲಾರದು. ಜಗತ್ತಿನಲ್ಲಿ ಹೊಸ ಸೃಷ್ಟಿ ಎಂಬುದು ಅಸಾಧ್ಯ. ಯಾವುದೇ ಸಿದ್ಧವಾದ ವಸ್ತುವು ಅದರ ರಚನೆಯಲ್ಲಿ ಬಳಸಲಾದ ಮೂಲ ವಸ್ತುಗಳಿಗಿಂತಲೂ ಭಿನ್ನವಲ್ಲ. ಸಿದ್ಧವಸ್ತುವು ಅದರ ಮೂಲವಸ್ತುವಿನಲ್ಲಿ ಕಾರಣರೂಪದಲ್ಲಿ ಅಂತರ್ಗತವಾಗಿರಬೇಕು. ಒಂದು ನಿರ್ದಿಷ್ಟವಾದ ಮೂಲವಸ್ತುವಿನಿಂದ ಅದಕ್ಕನುಗುಣವಾದ ವಸ್ತುವೇ ರೂಪಗೊಳ್ಳುತ್ತದೆ. ವಿಶಿಷ್ಟವಾದ ವಸ್ತುವು ಮಾತ್ರ ವಿಶಿಷ್ಟವಾದ ಫಲವನ್ನೇ ಕೊಡಬಲ್ಲದು.

೧೩. ಹಾಗಾದರೆ ನಮ್ಮ ಇಂದ್ರಿಯಾನುಭವಕ್ಕೆ ದೊರೆಯುವ ಈ ಜಗತ್ತಿಗೆ ಮೂಲವಾದ ಆಧಾರ ಯಾವುದು?

೧೪. ಅದಕ್ಕೆ ಕಪಿಲ ಮಹರ್ಷಿಯು ಕೊಟ್ಟ ಉತ್ತರ, ನಮ್ಮ ಈ ಜಗತ್ತು ವ್ಯಕ್ತ ಮತ್ತು ಅವ್ಯಕ್ತ ವಸ್ತುಗಳಿಂದ ರೂಪಗೊಂಡಿದೆ.

೧೫. ವ್ಯಕ್ತವಾಗಿರುವ ವಸ್ತುಗಳು ಮೂಲಭೂತವಾದ ಅವ್ಯಕ್ತ ವಸ್ತುಗಳಿಗೆ ಕಾರಣವಾಗಲಾರವು.

೧೬. ಪ್ರತಿಯೊಂದು ಭಿನ್ನ ವಸ್ತುವೂ ರೂಪದ ಪರಿಮಿತಿಗೆ ಒಳಪಟ್ಟಿರುವುದರಿಂದ ಅವು ವಿಶ್ವಕ್ಕೆ ಕಾರಣವಾದ ಸ್ವರೂಪಕ್ಕೆ ಸರಿಸಮನಾಗಲಾರವು.

೧೭. ಪ್ರತಿಯೊಂದು ವಸ್ತುವೂ ಒಂದು ಮತ್ತೊಂದರೊಂದಿಗೆ ಸದೃಶವಾಗಿದ್ದು ಒಂದು ಮತ್ತೊಂದರ ಅಂತಿಮ ಆಧಾರ ಎಂದು ಪರಿಗಣಿಸಲಾಗದು. ಮಿಗಿಲಾಗಿ ಅವು ಮೂಲವಸ್ತುವಿನಿಂದ ಮೂಡಿಬಂದಿರುವುದರಿಂದ ಅವು ಅದೇ ಮೂಲಕ್ಕೆ ಕಾರಣವಾಗಲಾರವು.

೧೮. ಪರಿಣಾಮದ ಕಾರಣದಲ್ಲಿದ್ದ ಅಂಶಗಳು ವ್ಯಕ್ತಗೊಳ್ಳುತ್ತವಾದರೂ, ಪರಿಣಾಮವು ಕಾರಣದಿಂದ ಭಿನ್ನವಾಗಿರುತ್ತದೆ ಎಂದು ಕಪಿಲನು ಪ್ರತಿವಾದಿಸಿದನು. ಆದ್ದರಿಂದ ವಿಶ್ವವು ತಾನೇ ಅಂತಿಮ ಕಾರಣವಾಗಲಾರದು. ಅದು ಬೇರೊಂದು ಆತ್ಯಂತಿಕ ಕಾರಣದಿಂದ ಉಗಮವಾಗಿರಬೇಕು.

೧೯. ಅವ್ಯಕ್ತವು ಏಕೆ ಗೋಚರವಾಗುವುದಿಲ್ಲವೆಂದೂ ಗ್ರಾಹ್ಯವಾಗಬಹುದಾದ ಚಲನೆಯನ್ನು ಅದು ಏಕೆ ತೋರುವುದಿಲ್ಲ ಎಂಬ ಪ್ರಶ್ನೆಗೆ ಕಪಿಲನು ಈ ರೀತಿ ಉತ್ತರ ಹೇಳಿದ್ದಾನೆ:

೨೦. "ಅದಕ್ಕೆ ಒಂದಕ್ಕಿಂತಲೂ ಹೆಚ್ಚು ಕಾರಣಗಳಿರಬಹುದು. ಅದು ಅತ್ಯಂತ ಸೂಕ್ಷ್ಮ ರೂಪದಲ್ಲಿದ್ದು ಅನೇಕ ಸೂಕ್ಷ್ಮ ವಸ್ತುಗಳಂತೆ ಅದೂ ಅಗೋಚರವಿರಬಹುದು; ಅದು ನಮ್ಮಿಂದ ಅತಿ ದೂರದಲ್ಲಿದ್ದು ನಮಗೆ ಅಗೋಚರವೆನಿಸಬಹುದು, ಇಲ್ಲವೇ ನಮಗೆ ಅತಿ ಸಮೀಪವಿರುವ ಕಾರಣ ಅದು ನಮ್ಮ

ಕಣ್ಣಿಗೆ ಕಾಣದಂತಿರಬಹುದು ಅಥವಾ ಮೂರನೆಯ ಯಾವುದೋ ವಸ್ತು ಅಡ್ಡಬರುವುದರಿಂದ ಅದು ನಮಗೆ ಅಗೋಚರವಾಗಿರಬಹುದು; ಅದರಂತದೆ ಯಾವುದೋ ವಸ್ತುವಿನೊಂದಿಗೆ ಬೆರೆತುಹೋಗಿರುವುದರಿಂದ ಅದು ನಮಗೆ ಕಾಣದಿರಬಹುದು, ಇಲ್ಲವೇ ಅತ್ಯಂತ ಪ್ರಕಾಶಮಾನವಾದ ಬೆಳಕಿನಲ್ಲಿ ಇದು ಮುಚ್ಚಿಹೋಗಿರಲೂಬಹುದು; ಮತ್ತು ಕಾಣುವ ನಮ್ಮ ಮನಸ್ಸಿನ ಮತ್ತು ಇಂದ್ರಿಯಗಳ ದೋಷದಿಂದಾಗಿ ಅಥವಾ ಕುರುಡುತನದಿಂದಾಗಿ ಅದು ನಮಗೆ ಅವ್ಯಕ್ತವಾಗಿರಬಹುದು."

೨೧. "ಈ ವಿಶ್ವದ ಅಸ್ತಿತ್ವಕ್ಕೆ ಕಾರಣವೇನು ಮತ್ತು ವಿಶ್ವದ ವ್ಯಕ್ತ ಅಥವಾ ಅವ್ಯಕ್ತ ಭಾಗದ ನಡುವೆ ಇರುವ ವ್ಯತ್ಯಾಸವೇನು?" ಎಂಬುದಾಗಿ ಪ್ರಶ್ನಿಸಿದಾಗ ಕಪಿಲನು ಕೊಟ್ಟ ಉತ್ತರ ಹೀಗಿದೆ:

೨೨. "ಕಾರಣವಿರುವಂತೆ ವ್ಯಕ್ತಕ್ಕೂ ಅವ್ಯಕ್ತಕ್ಕೂ ಕಾರಣ ಒಂದಿರುತ್ತದೆ. ಆದರೆ ಈ ಎರಡು ರೀತಿಯ ವಸ್ತುಗಳಿಗೂ ಆಧಾರವಾದ ಮೂಲವು ಕಾರಣರಹಿತವೂ ಸ್ವತಂತ್ರವೂ ಆಗಿರುತ್ತದೆ.

೨೩. "ವ್ಯಕ್ತ ವಸ್ತುಗಳು ಅನೇಕ ರೀತಿಯಲ್ಲಿದ್ದು ಅವು ಕಾಲ, ದೇಶಗಳಿಗೆ ಅಧೀನವಾಗಿರುತ್ತವೆ. ಅವುಗಳ ಮೂಲವು ಏಕವೂ, ನಿತ್ಯವೂ, ಸರ್ವವ್ಯಾಪಿಯೂ ಆಗಿರುತ್ತದೆ. ವ್ಯಕ್ತ ವಸ್ತುಗಳು ಕ್ರಿಯಾಶೀಲವೂ, ಪ್ರತ್ಯೇಕವೂ ಆಗಿರುತ್ತದೆ. ಆದರೆ ಇವುಗಳಿಗೆ ಆಧಾರವಾದ ಮೂಲಭೂತ ತತ್ತ್ವವು ಅಖಂಡವೂ ಕ್ರಿಯಾರಹಿತವೂ ಆಗಿರುತ್ತದೆ."

೨೪. ಅವ್ಯಕ್ತದ ಬೆಳವಣಿಗೆಯ ಪ್ರಕ್ರಿಯೆ ಸತ್ವ, ರಜಸ್ ಮತ್ತು ತಮಸ್ಸೆಂಬ ಮೂರು ಗುಣಗಳ ಚಟುವಟಿಕೆಗಳಿಂದಾಗುತ್ತದೆ. ಇವುಗಳನ್ನು ತ್ರಿಗುಣಗಳು ಎಂದು ಕರೆಯಲಾಗಿದೆ.

೨೫. ಈ ತ್ರಿಗುಣಗಳಲ್ಲಿ ಮೊದಲನೆಯದಾದ ಸತ್ವಗುಣವು ತೇಜಸ್ಸಿನಿಂದ ಕೂಡಿರುತ್ತದೆ ಮತ್ತು ಎಲ್ಲವನ್ನೂ ಪ್ರಕಾಶಗೊಳಿಸುವಂತಿದ್ದು, ಅದು ಮನುಷ್ಯನಿಗೆ ಸಂತಸವನ್ನು ನೀಡುತ್ತದೆ. ಎರಡನೆಯದಾದ ರಜೋಗುಣವು ಚಲನೆಗೆ ಪ್ರೇರಕವಾಗಿದ್ದು ಮನುಷ್ಯನನ್ನು ಕ್ರಿಯಾಶೀಲಗೊಳಿಸುತ್ತದೆ. ಮೂರನೆಯದಾದ ತಮೋಗುಣವು ಮಂದಸ್ವಭಾವದಲ್ಲಿದ್ದು ನಿರ್ಬಂಧವನ್ನುಂಟುಮಾಡಿ, ಜಡತ್ವ ಮತ್ತು ಔದಾಸೀನ್ಯತೆಗೆ ಕಾರಣವಾಗುತ್ತದೆ.

೨೬. ಈ ಮೂರು ಗುಣಗಳು ಬಹುಮಟ್ಟಿಗೆ ಜೊತೆಗೂಡಿಯೇ ಕೆಲಸ ಮಾಡುವಂತಿದ್ದು, ಒಂದು ಮತ್ತೊಂದರೊಂದಿಗೆ ಸ್ಪರ್ಧಿಸುತ್ತಾ ಪರಸ್ಪರ ಬೆರೆತು ಸಹಯೋಗದೊಂದಿಗೆ ಕೆಲಸ ಮಾಡುತ್ತವೆ. ಅವು ಉರಿಯುವ ದೀಪದಲ್ಲಿ ಎಣ್ಣೆ, ಬತ್ತಿ ಮತ್ತು ಜ್ಯೋತಿ ಇದ್ದಂತೆ.

೨೭. ಈ ತ್ರಿಗುಣಗಳ ನಡುವೆ ಸಮತೋಲನವಿದ್ದು ಒಂದು ಮತ್ತೊಂದರೊಂದಿಗೆ ಸ್ಪರ್ಧೆಗಿಳಿಯದಿದ್ದಾಗ ಈ ವಿಶ್ವವು ಅಚೇತನಾತ್ಮಕವಾಗಿದ್ದು ವಿಕಾಸರಹಿತವಾಗಿರುತ್ತದೆ.

೨೮. ಈ ತ್ರಿಗುಣಗಳ ನಡುವೆ ಸಮತೋಲನ ತಪ್ಪಿ ಅವುಗಳಲ್ಲಿ ಸ್ಪರ್ಧೆಯುಂಟಾದಾಗ ಸಚೇತನಾತ್ಮಕವಾದ ಈ ವಿಶ್ವದ ವಿಕಾಸಕ್ಕೆ ನಾಂದಿಯಾಗುತ್ತದೆ.

೨೯. ಈ ಗುಣಗಳ ನಡುವೆ ಅಸಮತೋಲನ ಏಕೆ ಉಂಟಾಗುತ್ತದೆ ಎಂಬ ಪ್ರಶ್ನೆಗೆ ಕಪಿಲನ ಉತ್ತರವೆಂದರೆ– ಈ ತ್ರಿಗುಣಗಳ ನಡುವಿನ ಸಮತೋಲನ ತಪ್ಪಲು ಮೂಲ ಕಾರಣ ದುಃಖ.

೩೦. ಇವಿಷ್ಟು ಕಪಿಲನ ಸಾಂಖ್ಯ ಸಿದ್ಧಾಂತದ ಪ್ರಮುಖ ತತ್ತ್ವಗಳು.

೩೧. ಸಾಂಖ್ಯ ಸಿದ್ಧಾಂತವು ಬುದ್ಧನ ಮೇಲೆ ಬೇರೆಲ್ಲ ಸಿದ್ಧಾಂತಗಳಿಗಿಂತಲೂ ಹೆಚ್ಚು ಪ್ರಭಾವ ಬೀರಿತು.

೩೨. ಬುದ್ಧನಿಗೆ ಕಪಿಲನ ಸಿದ್ಧಾಂತವು ವಾಸ್ತವಾಂಶಗಳಿಂದ ಕೂಡಿದ್ದು, ಹೆಚ್ಚು ತರ್ಕಬದ್ಧವಾಗಿರುವಂತೆ ಕಂಡಿತು.

೩೩. ಆದರೆ, ಕಪಿಲ ಹೇಳಿದುದನ್ನೆಲ್ಲಾ ಅವನು ಒಪ್ಪಲಿಲ್ಲ. ಕಪಿಲನ ಸಿದ್ಧಾಂತದಲ್ಲಿ ಕಂಡ ಮೂರು ವಿಷಯಗಳನ್ನು ಮಾತ್ರ ಬುದ್ಧನು ಸ್ವೀಕರಿಸಿದನು.

೩೪. ಸತ್ಯವು ಯಾವಾಗಲೂ ಪ್ರಮಾಣವನ್ನು ಆಧರಿಸಿ ನಿಂತಿರಬೇಕು ಮತ್ತು ಚಿಂತನೆಯು ವೈಚಾರಿಕತೆಯನ್ನು ಆಧರಿಸಬೇಕು ಎಂಬುದು ಬುದ್ಧನಿಗೆ ಸರಿಯೆನಿಸಿತು.

೩೫. ದೇವರು ಇದ್ದಾನೆ ಮತ್ತು ಅವನು ಈ ಜಗತ್ತನ್ನು ಸೃಷ್ಟಿಸಿದ್ದಾನೆ ಎಂಬ ಕಲ್ಪನೆ ತರ್ಕಬದ್ಧವೂ ಅಲ್ಲ, ವಾಸ್ತವ ಆಧಾರಗಳೂ ಇಲ್ಲ ಎಂದು ಬುದ್ಧನೂ ತಿಳಿದನು.

೩೬. ಈ ಜಗತ್ತಿನಲ್ಲಿ ದುಃಖ ತುಂಬಿದೆ ಎಂಬ ವಾದವನ್ನು ಒಪ್ಪಿದನು.

೩೭. ಕಪಿಲನ ಸಿದ್ಧಾಂತದಲ್ಲಿ ಕಂಡ ಉಳಿದ ಅಂಶಗಳನ್ನು ತನಗೆ ಅಪ್ರಕೃತ ಎಂದು ಬುದ್ಧನು ಬದಿಗೊತ್ತಿದನು.

## ೩. ಬ್ರಾಹ್ಮಣಗಳು

೧. ವೇದಗಳ ನಂತರ ಬರುವ ಧಾರ್ಮಿಕ ಗ್ರಂಥಗಳೇ ಬ್ರಾಹ್ಮಣಗಳು. ಇವುಗಳನ್ನು ಪವಿತ್ರ ಗ್ರಂಥಗಳು ಎಂದೇ ನಂಬಲಾಗಿದೆ. ಒಂದು ರೀತಿಯಲ್ಲಿ ಬ್ರಾಹ್ಮಣಗಳು ವೇದದ ಒಂದು ಭಾಗವೆಂದೇ ಪರಿಗಣಿತವಾಗಿವೆ. ಈ ಎರಡನ್ನೂ ಒಟ್ಟಿಗೆ ಸೇರಿಸಿ ಅವುಗಳನ್ನು ಶೃತಿ ಎಂದು ಕರೆಯಲಾಗಿದೆ.

೨. ನಾಲ್ಕು ರೀತಿಯ ಪ್ರಮೇಯಗಳನ್ನು ಬ್ರಾಹ್ಮಣಗಳ ಸಿದ್ಧಾಂತವು ಆಧರಿಸಿದೆ.

೩. ಅದರ ಮೊದಲನೇ ಪ್ರಮೇಯವೆಂದರೆ, ವೇದಗಳು ಪವಿತ್ರ ಗ್ರಂಥಗಳು ಮಾತ್ರವಲ್ಲದೆ, ಅವು ದೋಷರಹಿತವಾಗಿದ್ದು, ಅವುಗಳನ್ನು ಯಾರೂ ಪ್ರಶ್ನಿಸಲಾಗದು.

೪. ಬ್ರಾಹ್ಮಣಗಳಲ್ಲಿ ಪ್ರತಿಪಾದಿತವಾದ ಎರಡನೇ ಪ್ರಮೇಯವೆಂದರೆ ಆತ್ಮದ ಜನ್ಮಾಂತರ ಮತ್ತು ಅದರಿಂದ ಬಿಡುಗಡೆ ಅಂದರೆ ಆತ್ಮನಿಗೆ ಮೋಕ್ಷ ಲಭಿಸಬೇಕಾದರೆ ವೈದಿಕ ಕರ್ಮಗಳನ್ನು ಆಚರಿಸುತ್ತಾ ವೇದೋಕ್ತ ಕರ್ಮಗಳಾದ ಯಜ್ಞ–ಯಾಗಾದಿಗಳನ್ನು ಮಾಡಿ ಬ್ರಾಹ್ಮಣರಿಗೆ ದಾನ ದಕ್ಷಿಣೆಗಳನ್ನು ಕೊಡಬೇಕು.

೫. ಬ್ರಾಹ್ಮಣಗಳು ವೇದಗಳಲ್ಲಿರುವಂತೆ ಆದರ್ಶ ಧರ್ಮದ ಸಿದ್ಧಾಂತಗಳಷ್ಟೇ ಅಲ್ಲದೆ, ಅವು ಆದರ್ಶಸಮಾಜಕ್ಕೂ ಒಂದು ಸಿದ್ಧಾಂತವನ್ನು ಹೊಂದಿದ್ದವು.

೬. ಇದು ವೇದಗಳಲ್ಲಿ ಅಂತರ್ಗತವಾಗಿದ್ದು, ವೇದಗಳು ದೋಷರಹಿತವೂ, ಅವುಗಳ ಅಧಿಕಾರವು ಪ್ರಶ್ನಾತೀತವೂ ಆಗಿರುವುದರಿಂದ, ಚಾತುರ್ವರ್ಣ ಎಂಬ ಸಮಾಜ ಪದ್ಧತಿ ನಿರ್ಬಂಧಕಾರಿಯೂ ಪ್ರಶ್ನಾತೀತವೂ ಆಗಿದೆ.

೭. ಈ ರೀತಿಯ ಚಾತುರ್ವರ್ಣ ವ್ಯವಸ್ಥೆಯು ಕೆಲವು ನಿರ್ದಿಷ್ಟ ನಿಯಮಗಳನ್ನು ಆಧರಿಸಿದೆ.

೮. ಅದರ ಮೊದಲನೆಯ ನಿಯಮವೆಂದರೆ ಒಟ್ಟು ಸಮಾಜವನ್ನು – (೧) ಬ್ರಾಹ್ಮಣ, (೨) ಕ್ಷತ್ರಿಯ, (೩) ವೈಶ್ಯ, (೪) ಶೂದ್ರ ಎಂಬ ನಾಲ್ಕು ವರ್ಗಗಳಾಗಿ ವಿಂಗಡಿಸಬೇಕು.

೯. ಅದರ ಎರಡನೇ ನಿಯಮವೇನೆಂದರೆ ಈ ನಾಲ್ಕು ವರ್ಗಗಳ ನಡುವೆ ಸಾಮಾಜಿಕ ಸಮಾನತೆ ಇರಬಾರದು. ಅವು ಶ್ರೇಣೀಕೃತ ಅಸಮಾನತೆಯ ನಿಯಮದಿಂದ ಒಟ್ಟುಗೂಡಿಸಲ್ಪಡಬೇಕು.

೧೦. ಬ್ರಾಹ್ಮಣರು ತುದಿಯಲ್ಲಿದ್ದು ಅವರ ಕೆಳಗೆ ಆದರೆ ವೈಶ್ಯರ ಮೇಲೆ ಕ್ಷತ್ರಿಯರಿರಬೇಕು. ಕ್ಷತ್ರಿಯರಿಗಿಂತ ಕೆಳಗೆ ಶೂದ್ರರಿಗಿಂತ ಮೇಲೆ ವೈಶ್ಯರು ಬರಬೇಕು. ಶೂದ್ರರು ಈ ಎಲ್ಲರಿಗಿಂತ ಕೆಳಗಿರಬೇಕು.

೧೧. ಈ ನಾಲ್ಕು ವರ್ಣದವರು ಅವರ ಹಕ್ಕು–ವಿಶೇಷಾಧಿಕಾರಿಗಳ ವಿಚಾರದಲ್ಲಿ ಎಂದಿಗೂ ಸರಿಸಮಾನರಾಗಿರಲಿಲ್ಲ. ಶ್ರೇಣೀಕೃತ ಅಸಮಾನತೆಯ ನಿಯಮಕ್ಕೆ ಹಕ್ಕು ಮತ್ತು ವಿಶೇಷಾಧಿಕಾರಿಗಳ ಪ್ರಶ್ನೆಯು ಒಳಪಟ್ಟಿದ್ದಿತು.

೧೨. ಬ್ರಾಹ್ಮಣನು ತಾನು ಬಯಸುವ ಎಲ್ಲ ಹಕ್ಕು–ವಿಶೇಷಾಧಿಕಾರಗಳನ್ನೂ ಪಡೆದಿದ್ದನು. ಆದರೆ ಕ್ಷತ್ರಿಯನು ಬ್ರಾಹ್ಮಣನು ಪಡೆಯುವಂತಹ ಎಲ್ಲ ಹಕ್ಕು ಮತ್ತು ವಿಶೇಷಾಧಿಕಾರಗಳನ್ನು ತಾನು ಪಡೆಯಲಾರ ಮತ್ತು ವೈಶ್ಯನಿಗಿಂತಲೂ ಹೆಚ್ಚು ಹಕ್ಕು–ವಿಶೇಷಾಧಿಕಾರಗಳನ್ನು ಕ್ಷತ್ರಿಯನು ಪಡೆಯಲು ಅರ್ಹನಾಗಿರುತ್ತಾನೆ. ವೈಶ್ಯನಿಗೆ ಶೂದ್ರನಿಗಿಂತಲೂ ಹೆಚ್ಚಿನ ಹಕ್ಕು–ವಿಶೇಷಾಧಿಕಾರಗಳುಂಟು. ಆದರೆ ವೈಶ್ಯನು ಕ್ಷತ್ರಿಯನು ಅನುಭವಿಸುವ ಹಕ್ಕು–ವಿಶೇಷಾಧಿಕಾರಗಳು ತನಗೂ ಬೇಕೆಂದು ಬಯಸಬಾರದು. ಶೂದ್ರನಿಗೆ ಯಾವ ರೀತಿಯ ಹಕ್ಕೂ ಇಲ್ಲ. ಅವನಿಗೆ ವಿಶೇಷಾಧಿಕಾರವಂತೂ ಇಲ್ಲ. ವಿಶೇಷಾಧಿಕಾರವೆಂದರೆ ಅವನು ತನಗಿಂತ ಮೇಲಿನ ಮೂರು ವರ್ಣದವರಿಗೂ ಯಾವ ರೀತಿಯಿಂದಲೂ ನೋವಾಗದಂತೆ ಬದುಕುವುದು.

೧೩. ಚಾತುರ್ವರ್ಣದ ಮೂರನೇ ನಿಯಮವು ಅವರ ಉದ್ಯೋಗದ ವಿಭಜನೆಗೆ ಸಂಬಂಧಿಸಿದ್ದು. ಬ್ರಾಹ್ಮಣನ ವೃತ್ತಿಯೇನೆಂದರೆ: ಅಧ್ಯಯನ, ಅಧ್ಯಾಪನ ಮತ್ತು ಧಾರ್ಮಿಕ ವಿಧಿವಿಧಾನಗಳ ಆಚರಣೆ. ಕ್ಷತ್ರಿಯನ ವೃತ್ತಿಯೇನೆಂದರೆ, ಯುದ್ಧದಲ್ಲಿ ಹೋರಾಡುವುದು. ಇನ್ನು ವೈಶ್ಯನದು ವ್ಯಾಪಾರ ವೃತ್ತಿ. ಶೂದ್ರನಿಗೆ ಮೇಲಿನ ಮೂರೂ ವರ್ಗಗಳ ಸೇವೆಯನ್ನು ಮಾಡುವುದೇ ವೃತ್ತಿ. ಬೇರೆ ಬೇರೆ ವರ್ಗಗಳಿಗೆ ವಹಿಸಲಾದ ಈ ವೃತ್ತಿಗಳು ಪರಸ್ಪರ ಪ್ರತ್ಯೇಕವೆನಿಸಿದ್ದು ಒಂದು ವರ್ಗದವರು ಮತ್ತೊಂದು ವರ್ಗದ ವೃತ್ತಿಯನ್ನು ಅತಿಕ್ರಮಿಸಬಾರದು.

೧೪. ಚಾತುರ್ವರ್ಣದ ನಾಲ್ಕನೇ ಪ್ರಮೇಯವೆಂದರೆ ಶಿಕ್ಷಣದ ಹಕ್ಕುಗಳನ್ನು ಕುರಿತದ್ದು. ಈ ನಾಲ್ಕು ವರ್ಣಗಳಲ್ಲಿ ಮೊದಲಿನ ಮೂರು ವರ್ಣದವರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರಿಗೆ ಶಿಕ್ಷಣ ಪಡೆಯುವ ಹಕ್ಕು ಇದ್ದಿತು. ಶೂದ್ರರಾದವರಿಗೆ ಶಿಕ್ಷಣದ ಹಕ್ಕನ್ನೂ ನಿರಾಕರಿಸಲಾಗಿದ್ದಿತು. ಈ ಚಾತುರ್ವರ್ಣ ವ್ಯವಸ್ಥೆಯಲ್ಲಿ ಕೇವಲ ಶೂದ್ರರಿಗೆ ಮಾತ್ರ ಶಿಕ್ಷಣದ ಹಕ್ಕನ್ನು ನಿರಾಕರಿಸಲಿಲ್ಲ. ಹೆಂಗಸರಿಗೆ ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಕ್ಕೆ ಸೇರಿದ ಎಲ್ಲ ಹೆಂಗಸರಿಗೂ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗಿದ್ದಿತು.

೧೫. ಚಾತುರ್ವರ್ಣಗಳ ಐದನೆಯ ಪ್ರಮೇಯವೂ ಇದ್ದಿತು. ಅದೇ ಆಶ್ರಮ ಧರ್ಮ. ಇದರ ಪ್ರಕಾರ ಮನುಷ್ಯನ ಜೀವಮಾನವನ್ನು ನಾಲ್ಕು ಹಂತಗಳಾಗಿ ವಿಭಜಿಸಲಾಗಿದ್ದಿತು. ಮೊದಲನೇ ಹಂತವನ್ನು ಬ್ರಹ್ಮಚರ್ಯ ಎಂದೂ, ಎರಡನೆಯ ಹಂತವನ್ನು ಗೃಹಸ್ಥ ಎಂದೂ, ಮೂರನೇ ಹಂತವನ್ನು ವಾನಪ್ರಸ್ಥ ಎಂದೂ ಮತ್ತು ನಾಲ್ಕನೆಯ ಹಂತವನ್ನು ಸಂನ್ಯಾಸ ಎಂದೂ ಕರೆಯಲಾಗಿದ್ದಿತು.

೧೬. ಮೊದಲನೆಯ ಹಂತದ ಉದ್ದೇಶವೇನೆಂದರೆ ಅಧ್ಯಯನ ಮತ್ತು ಶಿಕ್ಷಣ. ಎರಡನೇ ಹಂತದ ಉದ್ದೇಶ ವಿವಾಹಿತನಾಗಿ ಗೃಹಸ್ಥ ಜೀವನವನ್ನು ನಡೆಸುವುದು. ಮೂರನೇ ಹಂತದ ಗುರಿ ಏನೆಂದರೆ ವ್ಯಕ್ತಿಯು ಸಂಸಾರದಿಂದ ಮುಕ್ತನಾಗಿ ಆದರೆ ಮನೆಯನ್ನು ಬಿಡದೆ, ಏಕಾಂತದ ಚಿಂತನೆಗಾಗಿ ವನವಾಸದ ಜೀವನಕ್ಕೆ ಸಿದ್ಧತೆಯನ್ನು ಗಳಿಸುವುದು. ಇನ್ನು ಕೊನೆಯ ಹಂತದ ಉದ್ದೇಶವೆಂದರೆ ವ್ಯಕ್ತಿಯು ಭಗವಂತನನ್ನು ಹುಡುಕುತ್ತಾ ಅವನಲ್ಲಿ ಲೀನವಾಗುವುದನ್ನು ಸಾಧ್ಯವಾಗಿಸುವುದು.

೧೭. ಈ ಆಶ್ರಮ ಧರ್ಮದ ಪ್ರಯೋಜನ ಕೇವಲ ಮೊದಲಿನ ಮೂರು ವರ್ಗಕ್ಕೆ ಸೇರಿದ ಗಂಡಸರಿಗೆ

ಮಾತ್ರ ಲಭಿಸುವಂತಹುದು. ಮೊದಲ ಹಂತವು ಶೂದ್ರರಿಗೆ ಮತ್ತು ಹೆಂಗಸರಿಗೆ (ಎಲ್ಲ ವರ್ಣದ) ಮುಕ್ತವಾಗಿರಲಿಲ್ಲ. ಅಂತೆಯೇ ಕೊನೆಯ ಹಂತವೂ ಕೂಡ ಶೂದ್ರರು ಮತ್ತು ಹೆಂಗಸರು (ಎಲ್ಲ ವರ್ಣದ) ಮುಕ್ತವಾಗಿರಲಿಲ್ಲ.

೧೮. ಚಾತುರ್ವರ್ಣ ಎಂದು ಕರೆಯಲಾಗಿದ್ದ ಆದರ್ಶ ಸಮಾಜದ ದೈವೀಕ ವ್ಯವಸ್ಥೆ ಈ ರೀತಿ ಇದ್ದಿತು. ಬ್ರಾಹ್ಮಣರು ನಿಯಮವನ್ನು ಆದರ್ಶಗೊಳಿಸಿ, ಅದರಲ್ಲಿ ಯಾವುದೇ ಬಿರುಕು, ಅಥವಾ ಛಿದ್ರತೆ ತಲೆದೋರದಂತೆ, ಆ ಆದರ್ಶವನ್ನೂ ಸಫಲಗೊಳಿಸಿಕೊಂಡರು.

೧೯. ಇನ್ನು ಬ್ರಾಹ್ಮಣಗಳಲ್ಲಿ ಪ್ರತಿಪಾದಿತವಾಗಿರುವ ನಾಲ್ಕನೇ ಪ್ರಮೇಯವೆಂದರೆ ಅದು ಕರ್ಮಸಿದ್ಧಾಂತ. ಇದು ಜನ್ಮಾಂತರ ತತ್ತ್ವದ ಒಂದು ಅಂಗ. ಮನುಷ್ಯನ ಆತ್ಮವು ಮತ್ತೊಂದು ಜನ್ಮವನ್ನು ಹೊತ್ತು ಹೊಸ ಶರೀರದೊಂದಿಗೆ ಯಾವ ಜಾಗದಲ್ಲಿ ಹುಟ್ಟುತ್ತದೆ ಎಂಬ ಪ್ರಶ್ನೆಗೆ ಉತ್ತರವೇ ಬ್ರಾಹ್ಮಣಗಳ ಕರ್ಮಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಹಿಂದಿನ ಜನ್ಮದಲ್ಲಿ ಒಬ್ಬ ವ್ಯಕ್ತಿಯು ಮಾಡಿದ ಪಾಪಪುಣ್ಯಗಳಿಗನುಗುಣವಾಗಿ ಅವನಿಗೆ ಮುಂದಿನ ಜನ್ಮವು ಲಭಿಸುತ್ತದೆ. ಅಂದರೆ ಅದು ಹಿಂದಿನ ಜನ್ಮದ ಕರ್ಮವನ್ನು ಆಧರಿಸಿರುತ್ತದೆ.

೨೦. ಈ ಬ್ರಾಹ್ಮಣಗಳಲ್ಲಿ ಪ್ರತಿಪಾದಿಸಿದ ಮೊದಲನೆಯ ಪ್ರಮೇಯವನ್ನು ಬುದ್ಧನು ಬಹಳ ಪ್ರಬಲವಾಗಿ ವಿರೋಧಿಸಿದನು. ವೇದಗಳು ದೋಷಾತೀತವಾದ್ದರಿಂದ ಅವುಗಳ ಅಧಿಕಾರವನ್ನು ಪ್ರಶ್ನಿಸಬಾರದು ಎಂಬ ತತ್ತ್ವವನ್ನು ಬುದ್ಧನು ತಿರಸ್ಕರಿಸಿದನು.

೨೧. ಅವನ ಪ್ರಕಾರ ಯಾವುದೂ ದೋಷಾತೀತವಲ್ಲ; ಅಂತಿಮವಲ್ಲ. ಪ್ರತಿಯೊಂದು ಅಗತ್ಯಬಿದ್ದಾಗ ಮರುಪರೀಕ್ಷೆಗೆ ಹಾಗೂ ಮರುಪರಿಗಣನೆಗೆ ಒಳಪಡಲೇಬೇಕು.

೨೨. ಮನುಷ್ಯನು ನಿಜವಾದ ಸತ್ಯವನ್ನು ತಿಳಿಯಬೇಕು. ಅವನ ಬದುಕಿನಲ್ಲಿ ವಿಚಾರ ಸ್ವಾತಂತ್ರ್ಯಕ್ಕೆ ಬಹಳ ಮಹತ್ತ್ವವಿದೆ. ವಿಚಾರ ಸ್ವಾತಂತ್ರ್ಯವು ಸತ್ಯಾನ್ವೇಷಣೆಯ ಏಕೈಕ ಸಾಧನ ಎಂಬುದು ಅವನಿಗೆ ಖಚಿತವಾಗಿತ್ತು.

೨೩. ವೇದಗಳು ವಿವಾದೀತ ಎಂಬ ಮಾತು ಮನುಷ್ಯನ ವಿಚಾರ ಸ್ವಾತಂತ್ರ್ಯವನ್ನು ಪೂರ್ಣವಾಗಿ ಹರಣ ಮಾಡುತ್ತದೆ.

೨೪. ಈ ಕಾರಣದಿಂದ ಬ್ರಾಹ್ಮಣಗಳಲ್ಲಿ ಪ್ರತಿಪಾದಿಸಿದ ಈ ಪ್ರಮೇಯವು ಬುದ್ಧನಿಗೆ ಅಸಮ್ಮತವೆನಿಸಿತು.

೨೫. ಬ್ರಾಹ್ಮಣಗಳಲ್ಲಿ ಪ್ರತಿಪಾದಿತವಾದ ಎರಡನೇ ಪ್ರಮೇಯವೂ ಸಹ ಅಷ್ಟೇ ಅಸಮ್ಮತವೆನಿಸಿತು. ಯಜ್ಞದಿಂದ ಒಳಿತಾಗುತ್ತದೆ ಎಂಬ ಮಾತನ್ನು ಬುದ್ಧನು ಒಪ್ಪಿದ್ದನು. ಆದರೆ ಯಜ್ಞದಲ್ಲಿ ನಿಜವಾದ ಯಜ್ಞ ಯಾವುದು ಮತ್ತು ಮೋಸದ ಯಜ್ಞ ಯಾವುದು ಎಂಬುದರ ಅರಿವಿರಬೇಕು ಎಂದು ಅವನು ಬಯಸಿದನು.

೨೬. ಇತರರ ಒಳಿತಿಗಾಗಿ ತ್ಯಾಗ ಮಾಡುವುದು ಎಂಬ ಅರ್ಥದಲ್ಲಿ ಮಾಡುವ ಯಜ್ಞವು ನಿಜವಾದ ಯಜ್ಞವೆಂದು ಅವನು ಕರೆದನು. ಕೇವಲ ತನ್ನ ಸ್ವಹಿತಕ್ಕಾಗಿ ಪ್ರಾಣಿವಧೆಯನ್ನು ಮಾಡಿ ದೇವರಿಗೆ ಅರ್ಪಿಸುವ ಯಜ್ಞವನ್ನು ಬುದ್ಧನು ಮೋಸದ 'ಯಜ್ಞ' ಎಂದು ಕರೆದನು.

೨೭. ಬ್ರಾಹ್ಮಣಗಳ ಬಹುಪಾಲು ಯಜ್ಞಗಳಲ್ಲಿ ದೇವರ ಒಲುಮೆಗಾಗಿ ಪ್ರಾಣಿವಧೆ ನಡೆಯುತ್ತಿದ್ದಿತು. ಅಂತಹ ಯಜ್ಞಗಳನ್ನು ಮೋಸದ ಯಜ್ಞಗಳು ಎಂದು ಕರೆದು ಅವುಗಳನ್ನು ಬುದ್ಧನು ಖಂಡಿಸಿದನು. ಮೋಕ್ಷ ಸಾಧನೆಗಾಗಿ ಇಂಥ ಯಜ್ಞಗಳನ್ನು ಮಾಡುವುದನ್ನೂ ಬುದ್ಧನು ಒಪ್ಪಲಿಲ್ಲ.

೨೮. ಯಜ್ಞಗಳಲ್ಲಿ ನಡೆಯುತ್ತಿದ್ದ ಈ ಪ್ರಾಣಿಬಲಿಯನ್ನು ಕಂಡು ಯಜ್ಞವಿರೋಧಿಗಳು ಬ್ರಾಹ್ಮಣರನ್ನು ಕುರಿತು "ಯಜ್ಞದಲ್ಲಿ ಬಲಿಯಾದ ಪ್ರಾಣಿಯು ಸ್ವರ್ಗಕ್ಕೆ ಹೋಗುವುದು ನಿಜವಾದರೆ, ನೀವು ನಿಮ್ಮ ತಂದೆಯನ್ನೇ ಬಲಿಕೊಟ್ಟು ಅವರನ್ನು ನೇರವಾಗಿ ಸ್ವರ್ಗಕ್ಕೆ ಏಕೆ ಕಳುಹಿಸಬಾರದು" ಎಂದು ಅಪಹಾಸ್ಯ ಮಾಡುತ್ತಿದ್ದರು.

೨೯. ಈ ಅಭಿಪ್ರಾಯವನ್ನು ಬುದ್ಧನು ಮನಸಾರೆ ಒಪ್ಪಿದನು.

೩೦. ಪ್ರಾಣಿವಧೆಯನ್ನು ಮನ್ನಿಸುವ ಯಜ್ಞಕರ್ಮವು ಬುದ್ಧನಿಗೆ ಅಸಹ್ಯವೆನಿಸಿದಂತೆ, ಬ್ರಾಹ್ಮಣಗಳಲ್ಲಿ ಪ್ರತಿಪಾದಿತವಾದ ವರ್ಣಧರ್ಮವೂ ಜಿಗುಪ್ಸೆ ಹುಟ್ಟಿಸಿತು.

೩೧. ಬ್ರಾಹ್ಮಣ ಧರ್ಮದಲ್ಲಿನ ಚಾತುರ್ವರ್ಣ ವ್ಯವಸ್ಥೆಯನ್ನು ಬುದ್ಧನು ಅಸಹಜವಾದ ಸಾಮಾಜಿಕ ಸಿದ್ಧಾಂತ ಎಂದು ನಿರಾಕರಿಸಿದನು. ಅದರ ವರ್ಗಸಂಯೋಜನೆಯು ಕಡ್ಡಾಯವೂ, ನಿರಂಕುಶವೂ ಆಗಿದ್ದಿತು. ಅದು ಹೇಳಿ ಮಾಡಿಸಿದ ಸಮಾಜವಾಗಿದ್ದಿತು. ಬುದ್ಧನು ಮುಕ್ತವೂ ಸ್ವತಂತ್ರವೂ ಆದ ಸಮಾಜವನ್ನು ಬಯಸಿದನು.

೩೨. ಬ್ರಾಹ್ಮಣ ಸಮಾಜವು ರೂಪಿಸಿದ ಈ ವರ್ಣವ್ಯವಸ್ಥೆಯು ಸ್ಥಿರಗೊಂಡಂತಹ ಒಂದು ಸಾಮಾಜಿಕ ವ್ಯವಸ್ಥೆ. ಇದರ ಪ್ರಕಾರ ಒಮ್ಮೆ ಬ್ರಾಹ್ಮಣನಾದವನು ಜೀವನಪರ್ಯಂತ ಬ್ರಾಹ್ಮಣನಾಗಿಯೂ, ಒಮ್ಮೆ ವೈಶ್ಯನಾದವನು ಸದಾ ವೈಶ್ಯನಾಗಿಯೂ ಮತ್ತು ಒಮ್ಮೆ ಶೂದ್ರನಾದವನು ಸದಾ ಶೂದ್ರನಾಗಿಯೂ ಇರಬೇಕು. ಹುಟ್ಟಿನಿಂದಾದ ಆಕಸ್ಮಿಕ ಕಾರಣಕ್ಕಾಗಿ ವ್ಯಕ್ತಿಯ ಸಾಮಾಜಿಕ ಸ್ಥಾನಮಾನಗಳು ನಿರ್ಣಯಗೊಳ್ಳುತ್ತವೆ. ಒಬ್ಬ ವ್ಯಕ್ತಿಯ ಹೀನ ಕೃತ್ಯಗಳು ಮತ್ತು ಕೆಟ್ಟ ಚಾರಿತ್ರ ಅದೆಷ್ಟೇ ಕೀಳುಮಟ್ಟದ್ದಾಗಿದ್ದರೂ ಅದರಿಂದಾಗಿ ಅವನ ಸಾಮಾಜಿಕ ಸ್ಥಾನ ಕೀಳಾಗುವುದಿಲ್ಲ. ಒಬ್ಬ ವ್ಯಕ್ತಿಗೆ ಅದೆಷ್ಟೇ ಸಚ್ಚಾರಿತ್ರ್ಯವಿದ್ದರೂ ಮೇಲಕ್ಕೇರಲಾರ ಮೌಲ್ಯ ಮತ್ತು ವಿಕಾಸಕ್ಕೆ ಅದರಲ್ಲಿ ಅವಕಾಶವಿರಲಿಲ್ಲ.

೩೩. ಸಾಮಾಜಿಕ ಅಸಮತೆಯೆಂಬುದು ಎಲ್ಲ ಸಮಾಜದಲ್ಲಿಯೂ ಇರುತ್ತದೆ ನಿಜ. ಆದರೆ ಬ್ರಾಹ್ಮಣ ಸಮಾಜದಲ್ಲಿ ಅದರ ಸ್ವರೂಪವೇ ಬೇರೆ. ಬ್ರಾಹ್ಮಣ ಸಮಾಜವು ಪ್ರತಿಪಾದಿಸಿದ ಅಸಮತೆಯು ಒಂದು ಅಧಿಕೃತ ಧಾರ್ಮಿಕ ಸಿದ್ಧಾಂತ. ಇದು ಬೆಳೆದು ರೂಪುಗೊಂಡ ಸಿದ್ಧಾಂತವಲ್ಲ. ಅದಕ್ಕೆ ಸಮಾನತೆಯಲ್ಲಿ ವಿಶ್ವಾಸವಿರಲಿಲ್ಲ. ವಾಸ್ತವವಾಗಿ ಇದು ಸಮಾನತೆಯ ವಿರೋಧಿಯಾಗಿದ್ದಿತು.

೩೪. ಬ್ರಾಹ್ಮಣ ಧರ್ಮವು ಕೇವಲ ಅಸಮತೆಯನ್ನು ಒಪ್ಪಿ ಸುಮ್ಮನಾಗಲಿಲ್ಲ. ಅದರ ಹೃದಯವಿರುವುದು ವರ್ಗೀಕೃತ ಅಸಮತೆಯಲ್ಲಿ. ಅದರ ಆತ್ಮವಿದ್ದುದು ಶ್ರೇಣೀಕೃತ ಅಸಮಾನತೆಯಲ್ಲಿ.

೩೫. ಈ ರೀತಿಯ ವರ್ಗೀಕೃತ ಅಸಮತೆಯಿಂದ ಸಾಮಾಜಿಕ ಸಾಮರಸ್ಯಕ್ಕೆ ಬದಲಾಗಿ ವರ್ಗವರ್ಗಗಳ ನಡುವಿನ ದ್ವೇಷ ಏರುತ್ತಾ ಹೋಗುತ್ತದೆ ಎಂದು ಬುದ್ಧನು ಗ್ರಹಿಸಿದನು. ಉನ್ನತ ವರ್ಗದವರು ಕೆಳವರ್ಗದವರನ್ನು ತಾತ್ಸಾರ ಭಾವದಿಂದ ನೋಡುವುದರಿಂದ ಇದರ ಫಲವಾಗಿ ಸಾಮಾಜಿಕ ವಿರಸ ಶಾಶ್ವತವಾಗುತ್ತದೆ ಎಂದು ಅವನು ತಿಳಿದನು.

೩೬. ಚಾತುರ್ವರ್ಣ ಸಿದ್ಧಾಂತದಲ್ಲಿ ಈ ನಾಲ್ಕು ವರ್ಣಗಳ ಕಸುಬು ಸ್ಪಷ್ಟವಾಗಿ ನಿರ್ಧರಿಸಲ್ಪಟ್ಟಿದ್ದವು. ತಮಗೆ ಬೇಕಾದ ವೃತ್ತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವೂ ಇರಲಿಲ್ಲ. ಈ ರೀತಿ ವೃತ್ತಿಯನ್ನು ನಿರ್ದಿಷ್ಟಗೊಳಿಸುವಾಗ ವ್ಯಕ್ತಿಯ ಕುಶಲತೆಯನ್ನು ಗಮನಿಸಿದೆ ಕೇವಲ ಅವನ ಹುಟ್ಟಿಗೆ ಅನುಗುಣವಾಗಿ ನಿರ್ಣಯಿಸಲಾಗುತ್ತಿದ್ದಿತು.

೩೭. ಈ ಚಾತುರ್ವರ್ಣ ಸಿದ್ಧಾಂತವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿದ ಬುದ್ಧನು ಬ್ರಾಹ್ಮಣಗಳಲ್ಲಿ

ಪ್ರತಿಪಾದಿತವಾದ ಈ ಸಾಮಾಜಿಕ ವ್ಯವಸ್ಥೆಗೆ ಆಧಾರವಾದ ದಾರ್ಶನಿಕ ತತ್ತ್ವಗಳು, ಸ್ವಾರ್ಥದಿಂದಲ್ಲದಿದ್ದರೂ ತಪ್ಪು ತಿಳುವಳಿಕೆಯಿಂದ ಕೂಡಿವೆ ಎಂಬುದನ್ನು ಬಹುಬೇಗ ಕಂಡುಕೊಂಡನು.

೩೮. ಈ ಸಿದ್ಧಾಂತದಲ್ಲಿ ಸರ್ವರ ಹಿತ ಮತ್ತು ಸರ್ವರ ಸುಖವನ್ನು ಕಾಪಾಡುವ ಪ್ರಯತ್ನ ಇಲ್ಲ ಎಂಬುದು ಬುದ್ಧನಿಗೆ ಸ್ಪಷ್ಟವಾಯಿತು. ಕೆಲವೇ ಜನರ ಸುಖಕ್ಕಾಗಿ ಬಹು ಜನರು ಶ್ರಮಿಸಬೇಕು ಎಂಬುದು ಈ ಸಿದ್ಧಾಂತದ ಮೂಲ ಉದ್ದೇಶ. ಅತಿಮಾನವರೆನಿಸಿದ ಒಂದು ವರ್ಗದ ಜನರ ಸೇವೆಗಾಗಿ ರೂಪಗೊಂಡ ಒಂದು ಸಾಮಾಜಿಕ ವ್ಯವಸ್ಥೆ ಇದು ಎಂದು ಅವನು ಮನಗಂಡನು.

೩೯. ಇದು ದುರ್ಬಲರನ್ನು ಶೋಷಣೆ ಮಾಡಿ ಅವರನ್ನು ತುಳಿದು, ಸದಾ ದೈನ್ಯದಲ್ಲಿಡಲು ಮಾಡಿದ ಒಂದು ಪ್ರಯತ್ನ ಎಂದು ಬುದ್ಧನು ತಿಳಿದನು.

೪೦. ಬ್ರಾಹ್ಮಣಗಳಲ್ಲಿ ಪ್ರತಿಪಾದಿಸಿದ ಕರ್ಮ ಸಿದ್ಧಾಂತವು ದುರ್ಬಲರಲ್ಲಿ ಕಾಣಬಹುದಾದ ಬಂಡಾಯ ಪ್ರವೃತ್ತಿಯನ್ನು ಪೂರ್ಣವಾಗಿ ಹೀರಿಬಿಡಲು ಮಾಡಿದ ಒಂದು ಲೆಕ್ಕಾಚಾರ ಎಂದು ಬುದ್ಧನಿಗೆ ಅನಿಸಿತು. ಮನುಷ್ಯನು ಅನುಭವಿಸುತ್ತಿರುವ ದುಃಖಕ್ಕೆ ಅವನಲ್ಲದೇ ಬೇರೆ ಯಾರೂ ಕಾರಣರಲ್ಲ. ಬಂಡಾಯ ಪ್ರವೃತ್ತಿಯಿಂದ ಮನುಷ್ಯನು ದುಃಖದ ಸ್ವರೂಪವನ್ನು ಎಂದಿಗೂ ಬದಲಾಯಿಸಲಾರನು. ಏಕೆಂದರೆ ಈ ಜನ್ಮದ ನಮ್ಮ ದುಃಖವು ನಮ್ಮ ಹಿಂದಿನ ಕರ್ಮದ ಫಲವಾಗಿದ್ದಿತು.

೪೧. ಬ್ರಾಹ್ಮಣಗಳ ಈ ಸಾಮಾಜಿಕ ಸಿದ್ಧಾಂತದಿಂದ ಹೆಚ್ಚು ಆಘಾತವನ್ನು ಅನುಭವಿಸಿದ ಎರಡು ವರ್ಗದ ಜನರೆಂದರೆ ಶೂದ್ರರು ಮತ್ತು ಎಲ್ಲ ವರ್ಣದ ಸ್ತ್ರೀಯರು. ಆದರೆ ಇವರು ವರ್ಣ ಸಿದ್ಧಾಂತದ ವಿರುದ್ಧ ಬಂಡಾಯವೇಳಲು ಶಕ್ತರಾಗಿರಲಿಲ್ಲ.

೪೨. ವಿದ್ಯಾಭ್ಯಾಸದ ಅವಕಾಶದಿಂದ ವಂಚಿತರಾಗಿದ್ದ ಈ ವರ್ಗದ ಜನ ತಮ್ಮ ಈ ದುರ್ಗತಿಗೆ ಕಾರಣವೇನೆಂಬುದನ್ನು ತಿಳಿಯದಷ್ಟು ಅಜ್ಞಾನಿಗಳಾಗಿದ್ದರು. ಬ್ರಾಹ್ಮಣ ಧರ್ಮವು ತಮ್ಮ ಬದುಕಿನ ಮಹತ್ತ್ವವನ್ನೇ ತಮ್ಮಿಂದ ದೋಚಿಬಿಟ್ಟಿದೆ ಎಂಬುದನ್ನು ಅವರು ತಿಳಿಯಲಾರದವರಾಗಿದ್ದರು. ಆ ಜನ ಬ್ರಾಹ್ಮಣ ಧರ್ಮದ ವಿರುದ್ಧ ತಿರುಗಿ ಬೀಳುವ ಬದಲು ಆ ಧರ್ಮದ ನಮ್ರ ಪ್ರತಿಪಾದಕರಾದರು.

೪೩. ತನ್ನ ಸ್ವಾತಂತ್ರ್ಯ ಸಾಧನೆಗಾಗಿ ಶಸ್ತ್ರಾಸ್ತ್ರಗಳನ್ನು ಹಿಡಿಯುವುದು ಮನುಷ್ಯನಿಗಿರುವ ಅತ್ಯಂತ ಕೊನೆಯ ಮಾರ್ಗ. ಆದರೆ, ಶೂದ್ರರಿಗೆ ಶಸ್ತ್ರಾಸ್ತ್ರಗಳನ್ನು ಹಿಡಿಯುವ ಸ್ವಾತಂತ್ರ್ಯವೂ ಇರಲಿಲ್ಲ.

೪೪. ಬ್ರಾಹ್ಮಣ ಧರ್ಮದ ಸ್ವಾರ್ಥ ಪ್ರಬಲ ಕ್ಷತ್ರಿಯರ ಕ್ರೌರ್ಯ ಮತ್ತು ವೈಶ್ಯರ ಶ್ರೀಮಂತಿಕೆಯ ಸಂಚಿನ ಫಲವಾಗಿ ಶೂದ್ರರು ಅಸಹಾಯಕ ಬಲಿಪಶುಗಳಾದರು.

೪೫. ಇದನ್ನು ತಿದ್ದಬಹುದೆ? ಅದು ದೈವದತ್ತವಾಗಿ ಬಂದ ಸಾಮಾಜಿಕ ವ್ಯವಸ್ಥೆಯಾದುದರಿಂದ ಅದನ್ನು ಸುಧಾರಿಸುವುದು ಅಸಾಧ್ಯ ಎಂದು ಅವರು ತಿಳಿದರು. ಆದ್ದರಿಂದ ಇದನ್ನು ಕೊನೆಗಾಣಿಸುವುದೊಂದೇ ಇದಕ್ಕೆ ಪರಿಹಾರ ಎಂದಾಯಿತು.

೪೬. ಈ ಎಲ್ಲ ಕಾರಣಗಳಿಂದಾಗಿ ಬುದ್ಧನು ಈ ಬ್ರಾಹ್ಮಣ ವಾದವನ್ನೂ ಸಹಜ ಬದುಕಿಗೆ ವಿರುದ್ಧವಾದುದೆಂದು ಅದನ್ನು ನಿರಾಕರಿಸಿದನು.

## ೪. ಉಪನಿಷತ್ತುಗಳು ಮತ್ತು ಅವುಗಳ ಬೋಧನೆ

೧. ಉಪನಿಷತ್ತು ಈ ನಾಡಿನ ದಾರ್ಶನಿಕ ಸಾಹಿತ್ಯದ ಮತ್ತೊಂದು ಭಾಗ. ಅದು ವೇದಗಳ ಅಂಗವಲ್ಲ. ಅದು ಒಂದು ಸ್ವತಂತ್ರ ಚಿಂತನೆ.

೨. ಆದರೂ ಸಹ ಅದು ಧಾರ್ಮಿಕ ಸಾಹಿತ್ಯದ ಒಂದು ಭಾಗವೇ ಆಗಿದ್ದಿತು.

೩. ಉಪನಿಷತ್ತುಗಳ ಸಂಖ್ಯೆ ಬಹಳವಿದ್ದು ಅವುಗಳಲ್ಲಿ ಕೆಲವು ಪ್ರಮುಖವಲ್ಲ. ಉಳಿದವು ಅಷ್ಟು ಪ್ರಮುಖವಲ್ಲ.

೪. ಅವುಗಳಲ್ಲಿ ಕೆಲವು ವೈದಿಕ ಸಂಪ್ರದಾಯ ಹಾಗೂ ಬ್ರಾಹ್ಮಣರ ಪೌರೋಹಿತ್ಯಶಾಹಿಯ ವಿರುದ್ಧವಾಗಿಯೂ ಇವೆ.

೫. ವೇದಗಳ ಅಧ್ಯಯನ ವೆಂದರೆ ಅಜ್ಞಾನ ಅಥವಾ ಆವಿದ್ಯೆಯನ್ನು ಕುರಿತ ಅಧ್ಯಯನವೆಂದು ಅವುಗಳೆಲ್ಲವುಗಳ ಒಮ್ಮತ.

೬. ಚತುರ್ವೇದಗಳು ಮತ್ತು ಅವುಗಳಲ್ಲಿ ಪ್ರತಿಪಾದಿತವಾಗಿರುವ ವಿಜ್ಞಾನವು ಅಷ್ಟೇನೂ ಉನ್ನತ ಮಟ್ಟದ್ದಲ್ಲ ಎಂಬುದನ್ನು ಎಲ್ಲ ಉಪನಿಷತ್ತುಗಳೂ ಒಪ್ಪುತ್ತವೆ.

೭. ಅವುಗಳೆಲ್ಲ ವೇದಗಳ ದೈವಮೂಲವನ್ನು ಪ್ರಶ್ನಿಸುತ್ತವೆ.

೮. ಬ್ರಾಹ್ಮಣ ಧರ್ಮದಲ್ಲಿ ಬಹು ಮಹತ್ತ್ವವೆನಿಸಿದ ಯಜ್ಞಯಾಗಾದಿಗಳ ಅಲೌಕಿಕ ಶಕ್ತಿ, ಶವಸಂಸ್ಕಾರ ಮತ್ತು ಉತ್ತರ ಕ್ರಿಯೆ ಇವುಗಳ ಧಾರ್ಮಿಕ ಮಹತ್ತ್ವ ಹಾಗೂ ಬ್ರಾಹ್ಮಣರಿಗೆ ಕೊಡಬೇಕಾದ ದಾನ–ದಕ್ಷಿಣೆ ಇವುಗಳ ಔಚಿತ್ಯವನ್ನು ಉಪನಿಷತ್ತಿನಲ್ಲಿ ಪ್ರಶ್ನಿಸಲಾಗಿದೆ.

೯. ಆದಾಗ್ಯೂ, ಉಪನಿಷತ್ತುಗಳಿಗೆ ಸಂಬಂಧಿಸಿದಂತೆ ಇವು ಯಾವುವೂ ಮಹತ್ತ್ವದ ವಿಷಯಗಳಲ್ಲ ಉಪನಿಷತ್ತುಗಳ ಚಿಂತನೆ ಬ್ರಹ್ಮತತ್ತ್ವ ಮತ್ತು ಆತ್ಮತತ್ತ್ವಗಳಿಗೆ ಕೇಂದ್ರೀಕೃತವಾಗಿದೆ.

೧೦. ಬ್ರಹ್ಮ ಎಂಬುದು ಈ ವಿಶ್ವವನ್ನು ಒಗ್ಗೂಡಿಸುವ ಸರ್ವವ್ಯಾಪ್ತಿಯಾದ ತತ್ತ್ವವಾಗಿದ್ದು, ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದರಿಂದ ಆತ್ಮನಿಗೆ ಮೋಕ್ಷ ಸಾಧನೆ ಆಗುತ್ತದೆ ಎಂಬುದು ಉಪನಿಷತ್ತಿನ ತತ್ತ್ವ.

೧೧. ಬ್ರಹ್ಮವು ಒಂದು ಸತ್ಯವಾಗಿದ್ದು ಆತ್ಮವು ಬ್ರಹ್ಮವೇ ಆಗಿದೆ ಎಂಬುದು ಉಪನಿಷತ್ತಿನ ಸಿದ್ಧಾಂತ. ತಾನೂ ಬ್ರಹ್ಮನೇ ಎಂಬುದನ್ನು ಮನಗಾಣದಿರಲು ಅದಕ್ಕಿರುವ ಉಪಾದಿಗಳೇ ಕಾರಣ ಎಂಬುದು ಇವುಗಳ ತತ್ತ್ವ.

೧೨. ಬ್ರಹ್ಮ ಎಂಬುದು ಸತ್ಯವೋ ಎಂಬ ಪ್ರಶ್ನೆಗೆ ಉತ್ತರವು ಉಪನಿಷತ್ತನ್ನು ಕುರಿತ ಒಪ್ಪಿಗೆಯನ್ನು ಅವಲಂಬಿಸಿದೆ.

೧೩. ಬ್ರಹ್ಮವು ಒಂದು ಸತ್ಯ ಎಂಬುದನ್ನು ಪ್ರತಿಪಾದಿಸಲು ಬೇಕಾದ, ಸಮರ್ಥವಾದ ಆಧಾರಗಳು ಬುದ್ಧನಿಗೆ ಉಪನಿಷತ್ತಿನಲ್ಲಿ ಕಾಣಲಿಲ್ಲ. ಆದ್ದರಿಂದ ಅವನು ಉಪನಿಷತ್ತಿನ ತತ್ತ್ವವನ್ನೂ ಒಪ್ಪಲಿಲ್ಲ.

೧೪. ಇಂತಹ ಮೂಲಭೂತ ಪ್ರಶ್ನೆಗಳನ್ನು, ಉಪನಿಷತ್ತಿನ ಋಷಿಗಳನ್ನು ಕುರಿತು, ಬುದ್ಧನಿಗೆ ಮೊದಲು ಬೇರೆಯವರೂ ಕೇಳಿದ್ದರು.

೧೫. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಬಹು ಪ್ರಾಜ್ಞನೆನಿಸಿದ್ದ ಯಾಜ್ಞವಲ್ಕ್ಯ ಮಹರ್ಷಿಯನ್ನು ಕುರಿತು ಇಂತಹ ಪ್ರಶ್ನೆಗಳನ್ನು ಕೇಳಲಾಗಿದ್ದಿತು.

೧೬. "ಬ್ರಹ್ಮ ಎಂದರೇನು?", "ಆತ್ಮ ಎಂದರೇನು?" ಎಂಬ ಪ್ರಶ್ನೆಗಳನ್ನು ಅಲ್ಲಿ ಅವನಿಗೆ ಕೇಳಲಾಗಿದೆ.

ಅದಕ್ಕೆ ಅವನು ಕೊಟ್ಟ ಉತ್ತರ, "ನೇತಿ! ನೇತಿ! ನನಗೆ ತಿಳಿಯದು, ನನಗೆ ತಿಳಿಯದು" ಎಂದು.

೧೭. "ಅಂದಮೇಲೆ ಯಾರಿಗೂ ತಿಳಿಯದ ಒಂದು ತತ್ತ್ವ ಅದು ಹೇಗೆ ಸತ್ಯವೆನಿಸುತ್ತದೆ?" – ಇದು ಬುದ್ಧನ ಪ್ರಶ್ನೆ. ಹೀಗಾಗಿ ಉಪನಿಷತ್ತಿನ ಮೂಲ ತತ್ತ್ವವು ಕೇವಲ ಕಾಲ್ಪನಿಕವಾದದ್ದು ಎಂದು ಅದನ್ನು ನಿರಾಕರಿಸಲು ಬುದ್ಧನಿಗೆ ಕಷ್ಟವಾಗಲಿಲ್ಲ.

## ವಿಭಾಗ : ೬

# ಬುದ್ಧ ಮತ್ತು ಅವನ ಸಮಕಾಲೀನ ಚಿಂತಕರು

೧. ಬುದ್ಧನ ಸಮಕಾಲೀನ ಚಿಂತಕರು
೨. ತನ್ನ ಸಮಕಲೀನ ಚಿಂತಕರ ಬಗ್ಗೆ ಬುದ್ಧನ ಅಭಿಪ್ರಾಯ

# ೧. ಬುದ್ಧನ ಸಮಕಾಲೀನ ಚಿಂತಕರು

೧. ಬುದ್ಧನು ಪರಿವ್ರಾಜಕನಾದ ಕಾಲದಲ್ಲಿ ದೇಶದಲ್ಲಿ ಒಂದು ಮಹತ್ತ್ವದ ವೈಚಾರಿಕ ಕ್ಷೋಭೆಯುಂಟಾಗಿದ್ದಿತು. ಅಂದಿಗೆ ಪ್ರಚಲಿತವಿದ್ದ ಬ್ರಾಹ್ಮಣ ದರ್ಶನದ ಜೊತೆಗೆ ಅದಕ್ಕೆ ವಿರುದ್ಧವಾಗಿ ಅರವತ್ತೆರಡು ವಿವಿಧ ದಾರ್ಶನಿಕ ಸಂಪ್ರದಾಯಗಳು ತಲೆಯೆತ್ತಿ ನಿಂತಿದ್ದವು. ಅವುಗಳಲ್ಲಿ ಆರು ಸಂಪ್ರದಾಯಗಳು ಮಹತ್ತ್ವಪೂರ್ಣವಾಗಿದ್ದು ಇಲ್ಲಿ ಅವು ನಮ್ಮ ಗಮನವನ್ನು ಸೆಳೆಯುವಂತಿವೆ.

೨. ಅವುಗಳಲ್ಲಿ ಒಂದಕ್ಕೆ ಪುರಾಣ ಕಸ್ಸಪನು ಪ್ರಧಾನನೆನಿಸಿದ್ದನು. ಅವನು ಪ್ರತಿವಾದಿಸಿದ ಸಿದ್ಧಾಂತವನ್ನು ಅಕ್ರಿಯವಾದ ಎಂದು ಕರೆಯಲಾಗಿದೆ. ಅವನ ಪ್ರಕಾರ ಯಾವ ಕರ್ಮವೂ ಆತ್ಮವನ್ನು ತಟ್ಟುವುದಿಲ್ಲ. ಒಬ್ಬನು ತಾನೇ ಮಾಡಬಹುದು. ಒಬ್ಬನು ಮತ್ತೊಬ್ಬನನ್ನು ಹಿಂಸಿಸಬಹುದು ಅಥವಾ ಬೇರೊಬ್ಬನಿಂದ ಕೊಲ್ಲಿಸಲೂಬಹುದು. ಒಬ್ಬನು ಕಳ್ಳತನ, ದರೋಡೆ, ವ್ಯಭಿಚಾರವನ್ನು ಮಾಡಬಹುದು. ಬೇರೆಯವರಿಂದ ಅವುಗಳನ್ನು ಮಾಡಿಸಿಲೂಬಹುದು. ಒಬ್ಬನು ಸುಳ್ಳು ಹೇಳಬಹುದು ಅಥವಾ ಬೇರೊಬ್ಬರು ಸುಳ್ಳುಹೇಳುವಂತೆ ಮಾಡಲೂಬಹುದು. ಇದಾವುದೂ ಆತನಿಗೆ ತಟ್ಟುವುದಿಲ್ಲ. ಎಷ್ಟೇ ಸ್ವೇಚ್ಛಾಚಾರದ ಕೃತ್ಯವಾದರೂ ಅದರಿಂದ ಯಾವ ರೀತಿಯ ಪಾಪವೂ ಅವನ ಆತ್ಮವನ್ನು ತಟ್ಟುವುದಿಲ್ಲ. ಅಂತೆಯೇ ಎಷ್ಟೇ ಒಳ್ಳೆಯ ಕೃತ್ಯವಾದರೂ ಆತ್ಮಕ್ಕೆ ಯಾವ ಪುಣ್ಯವೂ ಲಭಿಸುವುದಿಲ್ಲ. ಆತ್ಮನ ಮೇಲೆ ಇವ್ಯಾವುಗಳ ಕ್ರಿಯೆ ಇರುವುದಿಲ್ಲ. ಒಬ್ಬ ಮನುಷ್ಯನು ಸತ್ತಮೇಲೆ ಅವನು ಯಾವ ಯಾವ ಮೂಲದ್ರವ್ಯಗಳಿಂದ ಮಾಡಲ್ಪಟ್ಟಿರುವನೋ ಅವು ಆಯಾ ಮೂಲದ್ರವ್ಯಗಳನ್ನು ಸೇರಿ ಲಯಗೊಳ್ಳುತ್ತವೆ. ಮನುಷ್ಯನು ಸತ್ತನಂತರ ಅವನ ಶರೀರವಾಗಲಿ, ಆತ್ಮವಾಗಲಿ ಯಾವುದೊಂದೂ ಉಳಿಯುವುದಿಲ್ಲ.

೩. ಆಗ ಪ್ರಚಲಿತವಿದ್ದ ಮತ್ತೊಂದು ಸಂಪ್ರದಾಯದ ಹೆಸರು ನಿಯತಿವಾದ ಎಂದು. ಇದರ ಪ್ರಮುಖ ಚಿಂತಕನ ಹೆಸರು ಮಖಾಲಿ ಘೋಶಾಲ. ಅವನ ಸಿದ್ಧಾಂತವು ಒಂದು ರೀತಿಯ ವಿಧಿವಾದವಿದ್ದಂತಿದೆ. ಅವನ ಪ್ರಕಾರ ಯಾರೊಬ್ಬರೂ ಏನನ್ನೂ ಮಾಡಲಾರರು ಅಥವಾ ಬಿಡಲಾರರು. ಘಟನೆಗಳು ನಡೆಯುತ್ತವೆ. ಯಾರೂ ಅವುಗಳನ್ನೂ ಘಟಿಸುವಂತೆ ಮಾಡಲಾರ. ಯಾರೊಬ್ಬರೂ ದುಃಖವನ್ನು ನಿವಾರಿಸಲಾರರು ಅದನ್ನು ಕಡಿಮೆ ಮಾಡಿಕೊಳ್ಳಲಾರರು ಇಲ್ಲವೇ ಹೆಚ್ಚಿಸಿಕೊಳ್ಳಲಾರರು. ಪ್ರತಿಯೊಬ್ಬರೂ ಜಗತ್ತಿನ ಅನುಭವಗಳ ತಮ್ಮ ಪಾಲನ್ನು ಅನುಭವಿಸಲೇಬೇಕು.

೪. ಮೂರನೆಯ ಸಂಪ್ರದಾಯದ ಹೆಸರು ಉಚ್ಛೇದವಾದ ಎಂದು. ಅಜಿತ ಕೇಶಕಂಬಲ ಎಂಬ ಚಿಂತಕನು ಇದರ ನೇತಾರ. ಅವನ ಈ ಸಿದ್ಧಾಂತವು ಒಂದು ರೀತಿಯ ಸರ್ವನಾಶವಾದ. ಯಜ್ಞಯಾಗಗಳನ್ನು ಅಲ್ಲಗಳೆದ ಇವನು ಆತ್ಮವು ಸಂತಸಪಡಲು ಅಥವಾ ದುಃಖಪಡಲು ಯಾವುದೇ ಕರ್ಮಕ್ಕೆ ಫಲಾಫಲಗಳೆಂಬುವುವು ಇಲ್ಲ. ಸ್ವರ್ಗವೂ ಇಲ್ಲ. ನರಕವೂ ಇಲ್ಲ. ಮಾನವ ಜಗತ್ತಿನಲ್ಲಿನ ಕೆಲವೊಂದು ದುಃಖದ ಮೂಲದ್ರವ್ಯಗಳಿಂದ ಮಾಡಲ್ಪಟ್ಟಿದ್ದಾನೆ. ಆದ್ದರಿಂದ ಆತ್ಮ ಅದರಿಂದ ಪಾರಾಗಲಾರದು. ಜಗತ್ತಿನಲ್ಲಿನ ಯಾವುದೇ ಸುಖದುಃಖಗಳಿಂದ ಆತ್ಮ ಪಾರಾಗಲಾರದು ಎಂದು ಬೋಧಿಸಿದನು. ಈ ದುಃಖ ಅಥವಾ ನೋವು ಎಂಬುದು ತಾನೇತಾನಾಗಿ ಕೊನೆಗೊಳ್ಳುವುದು.

ಆತ್ಮವು ಮಹಾಕಲ್ಪಗಳ ಎಂಭತ್ತನಾಲ್ಕು ಲಕ್ಷ ಜನ್ಮಾಂತರಗಳನ್ನು ಪಡೆದು ಬರಬೇಕು. ಆಗ ಮಾತ್ರ ಆತ್ಮನ ಈ ದುಃಖ ಮತ್ತು ನೋವು ಕೊನೆಗೊಳ್ಳುತ್ತದೆ. ಅದಕ್ಕೆ ಮೊದಲು ಯಾವ ಮಾರ್ಗದಿಂದಲೂ ಆತ್ಮಕ್ಕೆ ಅಂಟಿಬಂದಿರುವ ನೋವು ಕೊನೆಗೊಳ್ಳಲಾರದು. ಇದು ಅವನ ಸಿದ್ಧಾಂತ.

೫. ಅಂದಿಗೆ ಪ್ರಚಲಿತವಿದ್ದ ನಾಲ್ಕನೇ ವಾದವನ್ನು ಅನ್ಯೋನ್ಯವಾದ ಎಂದು ಕರೆಯಲಾಗಿದ್ದಿತು. ಪಕುದ್ಧ ಕಚ್ಚಯಾನ ಎಂಬುವವನೇ ಈ ಸಿದ್ಧಾಂತದ ಮೂಲ ಪುರುಷ. ಅವನ ಪ್ರಕಾರ ಜೀವದ ರಚನೆಯಲ್ಲಿ ಪೃಥ್ವಿ, ಅಪ್, ತೇಜಸ್, ವಾಯು, ಸುಖ, ದುಃಖ ಮತ್ತು ಆತ್ಮ ಎಂಬ ಏಳು ಮೂಲದ್ರವ್ಯಗಳು ಅಡಗಿವೆ. ಈ ಏಳು ದ್ರವ್ಯಗಳು ಪ್ರತಿಯೊಂದು ಮತ್ತೊಂದರಿಂದ ಭಿನ್ನವಿದ್ದು ಸ್ವತಂತ್ರವಾಗಿರುತ್ತವೆ. ಒಂದು ಮತ್ತೊಂದನ್ನು ಯಾವ ರೀತಿಯಲ್ಲಿಯೂ ಬಾಧಿಸಲಾರದು. ಅವು ಸ್ವಂತ ಅಸ್ತಿತ್ವವನ್ನೂ ಹೊಂದಿದ್ದು, ಅವು ಶಾಶ್ವತವಾಗಿದೆ. ಒಬ್ಬ ಮನುಷ್ಯನ ತಲೆಯನ್ನು ಕಡಿದ ಮಾತ್ರಕ್ಕೆ ಆ ಮನುಷ್ಯನನ್ನು ಕೊಲ್ಲಲಾರ. ಆ ಕತ್ತಿಯು ಆ ಏಳು ದ್ರವ್ಯಗಳನ್ನು ಹೊಕ್ಕು ಹೊರಬಂದಂತಾಗುವುದೆಯಷ್ಟೇ.

೬. ಸಂಜಯ ಬೇಲಪುತ್ತ ಎಂಬುವವನು ತನ್ನದೇ ಆದ ಒಂದು ಸ್ವತಂತ್ರ ಸಂಪ್ರದಾಯವನ್ನು ಪ್ರತಿಪಾದಿಸಿದನು. ಅದನ್ನು ವಿಕ್ಷೇಪವಾದ ಎಂದು ಕರೆಯಲಾಗಿದ್ದು ಅದು ಒಂದು ರೀತಿಯ ಸಂದೇಹವಾದದಂತಿದೆ. ಸಂಜಯ ಬೇಲಪುತ್ರನು ತನ್ನ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಿದನು: "ನನ್ನನ್ನು ಯಾರಾದರೂ ಸ್ವರ್ಗ ಎಂಬುದು ಇದೆಯೇ ಎಂದು ಕೇಳಿದರೆ ಆಗ ನಾನು ನನಗೆ ಏನನ್ನಿಸುತ್ತದೆಯೋ ಅದನ್ನು ಹೇಳುತ್ತೇನೆ. ಇದೆ ಅನ್ನಿಸಿದರೆ ಇದೆ ಅನ್ನುತ್ತೇನೆ. ಇಲ್ಲ ಎನಿಸಿದರೆ ಇಲ್ಲ ಅನ್ನುತ್ತೇನೆ. ಅಂತೆಯೇ ಯಾರಾದರೂ ಈ ಮಾನವನು ಸೃಷ್ಟಿಗೊಂಡದ್ದು ಹೇಗೆ, ಅವನು ತನ್ನ ಕರ್ಮಫಲವಾಗಿ ಸುಖ–ದುಃಖಗಳನ್ನು ಅನುಭವಿಸಬೇಕೇ ಹಾಗೂ ಮನುಷ್ಯನು ಸತ್ತಮೇಲೆ ಅವನ ಆತ್ಮವು ಅಮರವಾಗುತ್ತದೆಯೇ ಎಂದೆಲ್ಲ ಕೇಳಿದರೆ ಈ ಎಲ್ಲವುಗಳಿಗೆ ಇಲ್ಲ ಎಂಬುದೇ ನನ್ನ ಉತ್ತರ ಏಕೆಂದರೆ ಅವು ಅಸ್ತಿತ್ವದಲ್ಲಿಯೇ ಇಲ್ಲ."

೭.. ಆರನೆಯ ದಾರ್ಶನಿಕವಾದದ ಹೆಸರು ಚಾತುರ್ಯಾಮಸಂವರವಾದ ಎಂದು. ಈ ಸಿದ್ಧಾಂತವನ್ನು ಪ್ರತಿಪಾದಿಸಿ ಮಹಾವೀರ ಅಥವಾ ನಿಗಂತನಾಥಪುತ್ತನು ಗೌತಮನ ಹಿರಿಯ ಸಮಕಾಲೀನನಾಗಿದ್ದು, ಗೌತಮನು ಬೆಳಕನ್ನು ಅರಸುತ್ತಿದ್ದ ಕಾಲದಲ್ಲಿ ಇವನೂ ಜೀವಂತವಾಗಿದ್ದನು. ಅವನ ಬೋಧನೆಯ ಪ್ರಕಾರ ಜೀವನು ತಾನು ಹಿಂದಿನ ಜನ್ಮ ಮತ್ತು ಈಗಿನ ಜನ್ಮಗಳಲ್ಲಿ ಮಾಡಿದ ಪಾಪಕರ್ಮಗಳಿಗನುಸಾರವಾಗಿ ಮುಂದಿನ ಜನ್ಮ ಅಂದರೆ ಪುನರ್‌ಜನ್ಮವನ್ನು ಪಡೆಯುತ್ತಾನೆ. ತಪಶ್ಚರ್ಯದಿಂದ ಮನುಷ್ಯನು ಪಾಪಮುಕ್ತನಾಗಬಲ್ಲನು. ಆದ್ದರಿಂದ ಸಾಧಕರಾದವರು ಈ ಜನ್ಮದಲ್ಲಿ ಯಾವ ಪಾಪಕರ್ಮವನ್ನೂ ಮಾಡದೆ, ೧) ಕೊಲ್ಲದಿರುವುದು ೨) ಕದಿಯದಿರುವುದು ೩) ಸುಳ್ಳು ಹೇಳದಿರುವುದು ಮತ್ತು ೪) ಆಸೆಯನ್ನು ಹೊಂದದಿರುವುದು ಮತ್ತು ಬ್ರಹ್ಮಚರ್ಯ ಪಾಲಿಸುವುದು. ಈ ಚಾತುರ್ಯಾಮ ಧರ್ಮಗಳನ್ನು ಪಾಲಿಸಿ ಜನ್ಮಾಂತರವನ್ನು ಕೊನೆಗೊಳಿಸಬೇಕು ಎಂದು ಮಹಾವೀರನು ಬೋಧಿಸಿದನು.

## ೨. ತನ್ನ ಸಮಕಾಲೀನರ ಚಿಂತಕರ ಬಗ್ಗೆ ಬುದ್ಧನ ಅಭಿಪ್ರಾಯ

೧. ಬುದ್ಧನು ತನ್ನ ಸಮಕಾಲೀನ ನವದಾರ್ಶನಿಕರ ಯಾವ ಬೋಧನೆಯನ್ನೂ ಒಪ್ಪಲಿಲ್ಲ.

೨. ಕಾರಣವಿಲ್ಲದೆ ಬುದ್ಧನು ಅವರುಗಳ ವಾದವನ್ನು ನಿರಾಕರಿಸಲೂ ಇಲ್ಲ. ಅವುಗಳನ್ನು ನಿರಾಕರಿಸಲು ಬುದ್ಧನು ಕೊಟ್ಟ ಕಾರಣಗಳೆಂದರೆ:

೩. ಪುರಾಣ ಕಶ್ಯಪ ಅಥವಾ ಪಕುದ್ಧ ಕಚ್ಚಯಾನನ ವಾದಗಳನ್ನು ಸತ್ಯವೆಂದು ಒಪ್ಪುವುದಾದರೆ ಆಗ ಯಾರು ಬೇಕಾದರೂ ಹಿಂಸೆಯೇ ಮೊದಲಾದ ಯಾವ ಕೆಟ್ಟ ಕಾರ್ಯವನ್ನಾದರೂ ಮಾಡಬಹುದು ಎಂದಾಗುತ್ತದೆ. ಯಾವ ಸಾಮಾಜಿಕ ಜವಾಬ್ದಾರಿ ಅಥವಾ ಪರಿಹಾರದ ಪರಿವೆ ಇಲ್ಲದೆ ಯಾರು ಯಾರನ್ನಾದರೂ ಕೊಲ್ಲಬಹುದು ಎನ್ನುವವರೆಗೂ ಈ ವಾದವು ನಮ್ಮನ್ನು ಕೊಂಡೊಯ್ಯಬಲ್ಲುದು.

೪. ಮಖಾಲಿ ಘೋಶಾಲನ ವಾದವು ನಿಜ ಎಂದಾದರೆ, ಆಗ ಮನುಷ್ಯನು ಕೇವಲ ಅದೃಷ್ಟದ ದಾಸನಾಗುತ್ತಾನೆ. ಅವನು ತನ್ನನ್ನು ತಾನು ಮುಕ್ತಗೊಳಿಸಿಕೊಳ್ಳಲಾರ.

೫. ಅಜಿತ ಕೇಶಕಂಬಲನ ಸಿದ್ಧಾಂತವು ನಿಜ ಎಂದು ಒಪ್ಪುವುದಾದರೆ, ಆಗ ಮನುಷ್ಯನು ಮಾಡಬಹುದಾದ ಒಂದೇ ಒಂದು ಕಾರ್ಯವೆಂದರೆ ತಿನ್ನುವುದು, ಕುಡಿಯುವುದು ಮತ್ತು ಸುಖಲೋಲುಪನಾಗಿರುವುದು ಎಂದಾಗುತ್ತದೆ.

೬. ಸಂಜಯ ಬಾಲಪುತ್ರನ ನಿರೂಪಣೆ ಸರಿ ಎಂದಾದರೆ, ಆಗ ಮನುಷ್ಯನು ಯಾವ ನಿರ್ದಿಷ್ಟವಾದ ಒಂದು ಸಿದ್ಧಾಂತವನ್ನೂ ಒಪ್ಪದೆ ಅಸಹಾಯಕನಂತೆ ಆಕಾಶದಲ್ಲಿ ತೇಲಬೇಕಾಗುತ್ತದೆ.

೭. ಇನ್ನು ನಿಗಂತನಾಥಪುತ್ರ ಅಥವಾ ಮಹಾವೀರನ ಸಿದ್ಧಾಂತವನ್ನು ಸತ್ಯ ಎಂದು ಒಪ್ಪುವುದಾದರೆ, ಆಗ ಮನುಷ್ಯನ ಜೀವನವು ಕೇವಲ ದೇಹದಂಡನೆ ಮತ್ತು ತಪಶ್ಚರ್ಯೆಕ್ಕೆ ಮೀಸಲಿದ್ದು, ಮನುಷ್ಯನು ತನ್ನ ಸಹಜ ಪ್ರವೃತ್ತಿಗಳು ಮತ್ತು ಆಸೆ ಆಕಾಂಕ್ಷೆಗಳನ್ನೆಲ್ಲ ಹತ್ತಿಕ್ಕಬೇಕಾಗುತ್ತದೆ.

೮. ಹೀಗಾಗಿ ಅವನ ಸಮಕಾಲೀನ ದಾರ್ಶನಿಕರು ಸೂಚಿಸಿದ ಯಾವ ಮಾರ್ಗವೂ ಬುದ್ಧನಿಗೆ ಸರಿಯೆನಿಸಲಿಲ್ಲ. ಈ ಸಿದ್ಧಾಂತಗಳು ನಿಸ್ಸಹಾಯಕರು ಮತ್ತು ಅಜಾಗರೂಕರು, ಅಸಹಾಯಕರು ಮಾಡಿದ ಚಿಂತನೆಗಳಂತೆ ಅವನಿಗೆ ಕಾಣಿಸಿದವು. ಆದ್ದರಿಂದ ಬುದ್ಧನು ಬೇರೆಲ್ಲಿಯಾದರೂ ಬೆಳಕನ್ನು ಕಾಣಲು ನಿರ್ಧರಿಸಿದನು.

## ವಿಭಾಗ : ೭

# ಹೋಲಿಕೆ ಮತ್ತು ವ್ಯತ್ಯಾಸ

೧. ಅವನು ನಿರಾಕರಿಸಿದುದು
೨. ಅವನು ಪರಿಷ್ಕರಿಸಿದುದು
೩. ಅವನು ಸ್ವೀಕರಿಸಿದುದು

## ೧. ಅವನು ನಿರಾಕರಿಸಿದುದು

೧. ಬುದ್ಧನು ತನ್ನ ಶಾಸನವನ್ನು ನಿರೂಪಿಸಿದ ಕಾಲದಲ್ಲಿ ಜನರ ಮನಸ್ಸನ್ನು ಕೆಲವು ವಿಚಾರಗಳು ಗಟ್ಟಿಯಾಗಿ ಹಿಡಿದುಕೊಂಡಿದ್ದವು ಎಂಬ ಮಾತನ್ನು ಈ ದಾರ್ಶನಿಕ ಮತ್ತು ಧಾರ್ಮಿಕ ಸಮೀಕ್ಷೆಯು ತೋರಿಸಿಕೊಡುತ್ತದೆ. ಆ ವಿಚಾರಗಳೆಂದರೆ:

(i) ವೇದಗಳಲ್ಲಿ ದೋಷವಿಲ್ಲವೆಂಬ ನಂಬಿಕೆ.

(ii) ಮೋಕ್ಷದಲ್ಲಿ – ಅಂದರೆ, ಆತ್ಮವು ಮತ್ತೆ ಹುಟ್ಟುವುದಿಲ್ಲ ಎಂಬ ನಂಬಿಕೆ.

(iii) ಮೋಕ್ಷವನ್ನು ಪಡೆಯಲು ಯಜ್ಞಯಾಗಾದಿಗಳು ಪರಿಣಾಮಕಾರಿಯಾದ ಮಾರ್ಗವೆಂಬ ನಂಬಿಕೆ.

(iv) ಸಮಾಜ ವ್ಯವಸ್ಥೆಗೆ ಚಾತುರ್ವರ್ಣ ಆವಶ್ಯಕವೆಂಬ ನಂಬಿಕೆ.

(v) ವಿಶ್ವವು ಈಶ್ವರನಿಂದ ಸೃಷ್ಟಿಯಾಗಿದೆ ಮತ್ತು ಬ್ರಹ್ಮ–ತತ್ತ್ವವು ಇದರ ತಳಹದಿ ಎಂಬ ನಂಬಿಕೆ.

(vi) ಆತ್ಮದಲ್ಲಿ ನಂಬಿಕೆ.

(vii) ಆತ್ಮಗಳು ಸಂಸಾರದಲ್ಲಿ (ಭವಚಕ್ರದಲ್ಲಿ) ಸಂಚರಿಸುತ್ತಾ ಇರುತ್ತವೆ ಎಂಬ ನಂಬಿಕೆ.

(viii) ಕರ್ಮ ಸಿದ್ಧಾಂತದಲ್ಲಿ, ಅಂದರೆ ಮನುಷ್ಯನ ಈಗಿನ ಸ್ಥಿತಿಯು ಅವನು ತನ್ನ ಹಿಂದಿನ ಜನ್ಮದಲ್ಲಿ ಮಾಡಿದ ಕೆಲಸಗಳಿಂದ ನಿರ್ಧರಿಸಲ್ಪಟ್ಟಿದೆ ಎಂಬ ನಂಬಿಕೆ.

೨. ಬುದ್ಧನು ತನ್ನ ಶಾಸನದ ತತ್ತ್ವಗಳನ್ನು ನಿರೂಪಿಸುವಾಗ ಈ ಹಳೆಯ ನಂಬಿಕೆಗಳ ಕಂತೆಗೆ ತನ್ನದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸಿದನು.

೩. ಅವನು ನಿರಾಕರಿಸಿದ ವಿಚಾರಗಳು ಈ ಕೆಳಗಿನಂತಿವೆ.

(i) ನಾನು ಎಲ್ಲಿಂದ ಬಂದಿದ್ದೇನೆ, ಎಲ್ಲಿಗೆ ಹೋಗುತ್ತಿದ್ದೇನೆ ಮತ್ತು ನಾನು ಯಾರು ಎಂಬ ಪ್ರಶ್ನೆಗಳಲ್ಲಿ ನಿರತವಾಗಿರುವುದನ್ನು ಅವನು ಖಂಡಿಸಿದನು.

(ii) ಆತ್ಮದ ವಿಚಾರವಾಗಿ ಅವನು ಪಾಖಂಡಿತನವನ್ನು ನಿರಾಕರಿಸಿದನಲ್ಲದೆ, ಅದು ದೇಹ, ಸಂವೇದನೆ, ಸಂಕಲನ ಅಥವಾ ಚೇತನವೆಂದು ತರ್ಕಿಸುವುದನ್ನೂ ಅವನು ವಿರೋಧಿಸಿದನು.

(iii) ಕೆಲವು ಧಾರ್ಮಿಕ ಗುರುಗಳು ಪ್ರಚಾರ ಮಾಡುತ್ತಿದ್ದ ಎಲ್ಲ ಶೂನ್ಯವಾದೀಯ ವಿಚಾರಗಳನ್ನೂ ಅವನು ವಿರೋಧಿಸಿದನು.

(iv) ಪಾಖಂಡಿಗಳ ಅಭಿಪ್ರಾಯಗಳನ್ನು ಅವನು ಖಂಡಿಸಿದನು.

(v) ವಿಶ್ವದ ವಿಕಾಸಕ್ಕೆ ಒಂದು ನಿರ್ದಿಷ್ಟ ಕಾಲದ ಪ್ರಾರಂಭವಿದೆಯೆಂಬ ವಾದವನ್ನೂ ಅವನು ನಿರಾಕರಿಸಿದನು.

(vi) ಮನುಷ್ಯನನ್ನು ಈಶ್ವರನೇ ಸೃಷ್ಟಿಸಿದನು ಅಥವಾ ಬ್ರಹ್ಮನ ದೇಹದಿಂದ ಮನುಷ್ಯ ಹುಟ್ಟಿದನೆಂಬ ಮಾತನ್ನು ಅವನು ನಿರಾಕರಿಸಿದನು.

(vii) ಆತ್ಮವಿದೆಯೆಂಬ ಮಾತನ್ನು ಅವನು ಕಡೆಗಣಿಸಿದನು ಅಥವಾ ಅಲ್ಲಗಳೆದನು.

## ೨. ಅವನು ಪರಿಷ್ಕರಿಸಿದುದು

೧. (i) ಕಾರ್ಯಕಾರಣ ಸಿದ್ಧಾಂತವೆಂಬ ಮಹಾ ಸಿದ್ಧಾಂತವನ್ನೂ, ಅದರ ಉಪಸಿದ್ಧಾಂತಗಳನ್ನೂ ಅವನು ಒಪ್ಪಿಕೊಂಡನು.

(ii) ವಿಧಿವಾದವನ್ನೂ, ಯಾರೋ ಒಬ್ಬ ದೇವರು ಮನುಷ್ಯನಿಗೂ ಪ್ರಪಂಚಕ್ಕೂ ಏನಾಗಬೇಕೆಂಬುದನ್ನು ಪೂರ್ವನಿರ್ಧಾರ ಮಾಡುತ್ತಾನೆಂಬ, ಅಷ್ಟೇ ಮೂರ್ಖ ಸಿದ್ಧಾಂತವನ್ನು ಅವನು ಅಲ್ಲಗಳೆದನು.

(iii) ಯಾವುದೋ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ದುಃಖವನ್ನುಂಟುಮಾಡುವ ಶಕ್ತಿಯಿದೆ, ಅವು ಈಗಿನ ಪ್ರಯತ್ನಗಳನ್ನು ನಿಷ್ಫಲಗೊಳಿಸುತ್ತವೆ ಎಂಬ ಸಿದ್ಧಾಂತವನ್ನೂ ಅವನು ತಿರಸ್ಕರಿಸಿದನು. ಕರ್ಮವು ಒಂದು ವಿಧಿ ಎಂಬುದನ್ನು ಅವನು ಅಲ್ಲಗಳೆದನು. ಹಳೆಯ ಕರ್ಮ ಸಿದ್ಧಾಂತಕ್ಕೆ ಬದಲಾಗಿ ಹೆಚ್ಚು ವೈಜ್ಞಾನಿಕವಾದ ಕರ್ಮ ಸಿದ್ಧಾಂತವನ್ನು ಮಂಡಿಸಿದನು. ಹಳೇ ಸೀಸೆಯಲ್ಲಿ ಹೊಸ ಮದ್ಯವನ್ನು ತುಂಬಿದನು.

(iv) ಸಂಸಾರ (ಭವಚಕ್ರ) ಸಿದ್ಧಾಂತದ ಬದಲು ಪುನರ್ಜನ್ಮ ಸಿದ್ಧಾಂತವನ್ನು ಮಂಡಿಸಿದನು.

(v) ಮೋಕ್ಷ ಸಿದ್ಧಾಂತದ ಬದಲು ನಿಬ್ಬಾಣ ಸಿದ್ಧಾಂತವನ್ನು ಮಂಡಿಸಿದನು.

೨. ಹೀಗೆ, ಬುದ್ಧನ ಶಾಸನವು ಒಂದು ಹೊಸದೇ ಆದ ಶಾಸನವಾಗಿದೆ. ಅದರಲ್ಲಿದ್ದ ಅಲ್ಪಸಲ್ಪ ಹಳೆಯ ಅಂಶಗಳು ಪರಿಷ್ಕೃತವಾಗಿವೆ ಅಥವಾ ಪುನರ್‌ನಿರೂಪಿತವಾಗಿವೆ.

## ೩. ಅವನು ಸ್ವೀಕರಿಸಿದುದು

೧. ಪ್ರತಿಯೊಂದಕ್ಕೂ ಮನಸ್ಸೇ ಕೇಂದ್ರವೆಂದು ಗುರುತಿಸಿದುದು ಅವನ ಬೋಧನೆಗಳಲ್ಲಿ ಕಾಣುವ ಪ್ರಥಮ ವಿಶಿಷ್ಟತೆ.

೨. ಮನಸ್ಸೇ ವಸ್ತುಗಳಿಗಿಂತ ಮೊದಲು. ಅದೇ ಅವುಗಳನ್ನು ಆಳುತ್ತದೆ ಹಾಗೂ ಸೃಷ್ಟಿಸುತ್ತದೆ. ಮನಸ್ಸನ್ನು ತಿಳಿದುಕೊಂಡರೆ ಎಲ್ಲ ವಸ್ತುಗಳನ್ನೂ ತಿಳಿದುಕೊಂಡಂತೆ.

೩. ಎಲ್ಲ ಸಾಮರ್ಥ್ಯಗಳಿಗೂ ಮನಸ್ಸೇ ನಾಯಕ. ಅದೇ ಮುಖ್ಯವಾದುದು. ತನ್ನೆಲ್ಲ ಸಾಮರ್ಥ್ಯಗಳಿಂದ ಮಾಡಲ್ಪಟ್ಟದೇ ಮನಸ್ಸು.

೪. ನಾವು ಮೊದಲು ಗಮನಕೊಡಬೇಕಾದುದು ಮನಸ್ಸಿನ ಸಂಸ್ಕರಣಕ್ಕೆ.

೫. ನಮ್ಮ ಒಳಗಿನಿಂದ ಹುಟ್ಟುವ ಎಲ್ಲ ಶುಭ ಮತ್ತು ಅಶುಭಗಳಿಗೂ ಮತ್ತು ಹೊರಗಿನಿಂದ ಎರಗುವ ಎಲ್ಲ ತೊಂದರೆಗಳಿಗೂ ಮನಸ್ಸೇ ಚಿಲುಮೆ ಎಂಬುದು ಅವನ ಬೋಧನೆಗಳ ಎರಡನೇ ಮುಖ್ಯ ಲಕ್ಷಣ.

೬. ಕೆಡಕು ಎಂಬುದೇನಿದೆ, ಅದಕ್ಕೆ ಸಂಬಂಧಿಸಿದುದೇನಿದೆ, ಅದಕ್ಕೆ ಸೇರಿದುದೇನಿದೆ–ಅದೆಲ್ಲ ಮನಸ್ಸಿನಲ್ಲೇ

ಹುಟ್ಟುತ್ತದೆ. ಒಳ್ಳೆಯದೆಂಬುದೇನಿದೆ, ಅದಕ್ಕೆ ಸಂಬಂಧಿಸಿದುದೇನಿದೆ, ಅದಕ್ಕೆ ಸೇರಿದುದೇನಿದೆ– ಅದೆಲ್ಲ ಮನಸ್ಸಿನಲ್ಲೇ ಹುಟ್ಟುತ್ತದೆ.

೭. ಯಾರಾದರೂ ಸಂಕುಚಿತ ಬುದ್ಧಿಯಿಂದ ಮಾತಾಡಿದರೆ ಅಥವಾ ವರ್ತಿಸಿದರೆ, ದುಃಖವು ಅವರನ್ನು ಹಿಂಬಾಲಿಸುತ್ತದೆ – ಗಾಡಿಯನ್ನೆಳೆಯುವ ಎತ್ತುಗಳನ್ನು ಚಕ್ರಗಳು ಹಿಂಬಾಲಿಸುವಂತೆ. ಆದುದರಿಂದ ಮನಸ್ಸಿನ ಶುದ್ಧೀಕರಣವೇ ಧರ್ಮದ ಸಾರ.

೮. ಎಲ್ಲ ಪಾಪಕೃತ್ಯಗಳನ್ನು ವರ್ಜಿಸಬೇಕೆಂಬುದೇ ಅವನ ಬೋಧನೆಯ ಮೂರನೆಯ ಮುಖ್ಯ ಲಕ್ಷಣ.

೯. ನಿಜವಾದ ಧರ್ಮವು ಧಾರ್ಮಿಕ ತತ್ತ್ವಗಳ ಆಚರಣೆಯಲ್ಲಿದೆಯೇ ಹೊರತು ಧಾರ್ಮಿಕ ಗ್ರಂಥಗಳಲ್ಲಿ ಅಲ್ಲ, ಎಂಬುದೇ ಅವನ ಬೋಧನೆಯ ನಾಲ್ಕನೆಯ ಲಕ್ಷಣ.

೧೦. ಯಾರಾದರೂ ಬುದ್ಧನ ಧರ್ಮವು ಅವನ ಸ್ವಂತ ಸೃಷ್ಟಿಯಲ್ಲ ಎಂದು, ಯಾರಾದರೂ ಹೇಳಿಯಾರೆ?

# ಪರ್ವ – ೨
# ಪರಿವರ್ತನೆಯ ಪ್ರಚಾರ

## ಭಾಗ : ೧
## ಬುದ್ಧ ಮತ್ತು ಅವನ ವಿಷಾದ ಯೋಗ

೧. ಬೋಧಿಸುವುದೋ ಬೇಡವೋ?
೨. ಬ್ರಹ್ಮ ಸರ್ವಂಪತಿಯಿಂದ ಸುವಾರ್ತೆಯ ಘೋಷಣೆ
೩. ಪರಿವರ್ತನೆಯ ಎರಡು ಪ್ರಕಾರಗಳು

## ೧. ಬೋಧಿಸುವುದೋ ಅಥವಾ ಬೇಡವೋ?

೧. ಜ್ಞಾನೋದಯವಾದ ಮೇಲೆ ಹಾಗೂ ತನ್ನ ಮಾರ್ಗವನ್ನು ರೂಪಿಸಿಕೊಂಡಮೇಲೆ, ಬುದ್ಧನ ಮನಸ್ಸಿನಲ್ಲಿ ಒಂದು ಸಂಶಯ ಹುಟ್ಟಿತು. ತನ್ನ ಸಿದ್ಧಾಂತವನ್ನು ಬೇರೆಯವರಿಗೆ ಬೋಧಿಸಬೇಕೋ ಅಥವಾ ತನ್ನ ವೈಯಕ್ತಿಕ ಪರಿಪೂರ್ಣತೆಗೋಸ್ಕರ ಉಳಿದ ಜೀವನವನ್ನು ಮುಡಿಪಾಗಿಡಬೇಕೋ?

೨. ಅವನು ಹೀಗೆ ಯೋಚಿಸಿದ: "ನನಗೆ ಹೊಸ ಸಿದ್ಧಾಂತ ಸಿಕ್ಕಿರುವುದೇನೋ, ನಿಜ. ಆದರೆ ಸಾಮಾನ್ಯ ಜನರು ಅದನ್ನು ಒಪ್ಪಿಕೊಳ್ಳುವುದೂ, ಆಚರಿಸುವುದೂ ಬಹಳ ಕಷ್ಟ. ವಿವೇಕಿಗಳಿಗೂ ಅದು ಬಹಳ ಸೂಕ್ಷ್ಮ.

೩. "ದೇವರು, ಆತ್ಮ, ಮುಂತಾದ ಸಂಕೋಲೆಗಳಿಂದ ಜನತೆ ಬಿಡುಗಡೆ ಹೊಂದುವುದು ಕಠಿಣ. ಯಜ್ಞ–ಯಾಗಾದಿಗಳಲ್ಲಿನ ನಂಬಿಕೆಯನ್ನು ತೊರೆಯುವುದೂ ಜನತೆಗೆ ಬಹಳ ಕಷ್ಟ. ಕರ್ಮ ಸಿದ್ಧಾಂತದಲ್ಲಿನ ನಂಬಿಕೆಯನ್ನು ತ್ಯಜಿಸುವುದೂ ಜನತೆಗೆ ಕಡುಕಷ್ಟ.

೪. "ಆತ್ಮದ ಅಮರತ್ವದಲ್ಲಿನ ನಂಬಿಕೆಯನ್ನು ತೊರೆಯುವುದು ಜನರಿಗೆ ಕಠಿಣ; ಹಾಗೂ ಸ್ವತಂತ್ರ ವಸ್ತುವೆಂಬ ಆತ್ಮವು ಇಲ್ಲ. ಮತ್ತು ಸತ್ತನಂತರ ಅದು ಉಳಿದಿರಲು ಸಾಧ್ಯವಿಲ್ಲವೆಂಬ ನನ್ನ ಸಿದ್ಧಾಂತವನ್ನು ಅವರು ಒಪ್ಪಿಕೊಳ್ಳುವುದೂ ಕಠಿಣ.

೫. "ಜನತೆಗೆ ಸ್ವಾರ್ಥತೆಯಲ್ಲೇ ಆಸಕ್ತಿ ಇದೆ; ಅದರಲ್ಲೇ ಆನಂದ ಕಾಣುತ್ತದೆ. ಸ್ವಾರ್ಥತೆಗಿಂತ ನಿಸ್ವಾರ್ಥತೆಯೇ ಮೇಲು ಎಂಬ ನನ್ನ ಸಿದ್ಧಾಂತವನ್ನು ಜನತೆ ಒಪ್ಪಿಕೊಳ್ಳುವುದು ಕಠಿಣ.

೬. "ನನ್ನ ಸಿದ್ಧಾಂತವನ್ನು ನಾನು ಬೋಧಿಸಿದರೂ, ಜನರು ಅದನ್ನು ಅರ್ಥಮಾಡಿಕೊಳ್ಳದಿರಬಹುದು. ಅರ್ಥಮಾಡಿಕೊಂಡರೂ ಅದನ್ನು ಒಪ್ಪಿಕೊಳ್ಳದಿರಬಹುದು; ಒಪ್ಪಿಕೊಂಡರೂ ಅದನ್ನು ಆಚರಿಸದಿರಬಹುದು; ಆಗ ಇದರಿಂದಾಗಿ ಅವರಿಗೆ ವೃಥಾ ಬೇಸರ ಮತ್ತು ನನಗೇ ವ್ಯಥೆಯಾದೀತು.

೭. "ಸಂನ್ಯಾಸಿಯಂತೆ ಪ್ರಪಂಚದಿಂದ ದೂರ ಉಳಿದು, ನನ್ನ ಸಿದ್ಧಾಂತವನ್ನು ನನ್ನ ಸ್ವಂತ ಆತ್ಮೋನ್ನತಿಗೆ ಏಕೆ ಬಳಸಿಕೊಳ್ಳಬಾರದು?" ಎಂದು ತನ್ನನ್ನು ತಾನೇ ಕೇಳಿಕೊಂಡ ಬುದ್ಧ. "ಕಡೇಪಕ್ಷ, ನನ್ನೊಬ್ಬನಿಗಾದರೂ ಒಳ್ಳೆಯದಾದೀತು."

೮. ಹೀಗೆ ಯೋಚಿಸಿದಾಗ, ಅವನ ಮನಸ್ಸು ಸಿದ್ಧಾಂತವನ್ನು ಬೋಧಿಸುವುದನ್ನು ಬಿಟ್ಟು ನಿವೃತ್ತಿಯ ಕಡೆಗೆ ಹರಿಯತೊಡಗಿತು.

೯. ಆಗ ಬುದ್ಧನ ಮನಸ್ಸಿನಲ್ಲಿ ನಡೆಯುತ್ತಿದ್ದ ತುಮುಲವನ್ನು ತಿಳಿದ ಬ್ರಹ್ಮ ಸರ್ವಂಪತಿಯು ಹೀಗೆ ಯೋಚಿಸಿದ: "ಪ್ರಪಂಚವು ನಿಜವಾಗಿಯೂ ನಾಶದ ಕಡೆಗೆ ಹೋಗುತ್ತಿದೆ, ಸಂಪೂರ್ಣ ಜ್ಞಾನೋದಯವನ್ನು ಪಡೆದ ತಥಾಗತನು ಒಂದು ವೇಳೆ ತನ್ನ ಸಿದ್ಧಾಂತವನ್ನು ಬೋಧಿಸುವುದರ ಬದಲು ನಿವೃತ್ತಿಯ ಕಡೆಗೆ ತಿರುಗಿದರೆ, ಪ್ರಪಂಚವು ನಿಜವಾಗಿಯೂ ನಾಶವಾಗುತ್ತದೆ."

೧೦. ಹೀಗೆ ಕಳವಳಗೊಂಡ ಬ್ರಹ್ಮ ಸರ್ವಂಪತಿಯು ಬ್ರಹ್ಮಲೋಕವನ್ನು ಬಿಟ್ಟು ಬುದ್ಧನ ಮುಂದೆ ಕಾಣಿಸಿಕೊಂಡ ಹಾಗೂ ತನ್ನ ಮೇಲುದವನ್ನು ಒಂದು ಭುಜದ ಮೇಲೆ ಹಾಕಿಕೊಂಡು ಕೈಮುಗಿಯುತ್ತಾ

ಬಗ್ಗಿ ಹೀಗೆ ಹೇಳಿದ: "ಈಗ ನೀನು ಹಿಂದಿನ ಸಿದ್ಧಾರ್ಥ ಗೌತಮನಲ್ಲ. ಈಗ ನೀನು ಬುದ್ಧ. ಪೂರ್ಣ ಜ್ಞಾನವನ್ನು ಪಡೆದ ಜ್ಞಾನಿ, ನೀನು. ನೀನೇ ತಥಾಗತ. ಹೀಗಿರುವಾಗ, ನೀನು ಪ್ರಪಂಚಕ್ಕೆ ಜ್ಞಾನವನ್ನು ನೀಡಲು ಹೇಗೆ ನಿರಾಕರಿಸುತ್ತೀಯೆ? ತಪ್ಪು ಮಾಡುತ್ತಿರುವ ಮನುಕುಲವನ್ನು ರಕ್ಷಿಸಲು ಏಕೆ ನಿರಾಕರಿಸುತ್ತೀ?

೧೧. "ಸಿದ್ಧಾಂತವನ್ನು ಕೇಳದ ಅಶುದ್ಧ ಜನರು ಅಧೋಗತಿಗೆ ಹೋಗುತ್ತಿದ್ದಾರೆ."

೧೨. ಮುಂದುವರಿದು ಬ್ರಹ್ಮ ಸರ್ವಂಪತಿಯು ಹೇಳಿದ : "ಭಗವಾನ್ ತಮಗೆ ಗೊತ್ತಿರುವಂತೆ, ಮಗಧ ದೇಶದಲ್ಲಿ ಹಿಂದೆ ಅನೇಕ ಉದ್ದೇಶಪೂರಿತ ತಪ್ಪುಗಳಿಂದ ಕೂಡಿದ ಸಿದ್ಧಾಂತಗಳು ಬೋಧಿಸಲ್ಪಟ್ಟವು.

೧೩. "ಅಂತಹ ಜನರಿಗೆ ಭಗವಾನರು ತಮ್ಮ ಅಮರ ಸಿದ್ಧಾಂತದ ಬಾಗಿಲನ್ನೂ ತೆರೆಯುವುದಿಲ್ಲವೇ?"

೧೪. "ಹೇಗೆ ಒಬ್ಬ ವ್ಯಕ್ತಿ ಕಲ್ಲುಬಂಡೆಗಳಿಂದ ಕೂಡಿದ ಬೆಟ್ಟದ ತುದಿಗೆ ಹೋಗಿ, ತನ್ನ ಸುತ್ತಲಿರುವ ಜನರನ್ನು ನೋಡುತ್ತಾನೋ, ಹಾಗೆಯೇ ಎಲ್ಲರಿಗಿಂತ ಮೇಲೆ ಹೋಗಿರುವ, ಶುದ್ಧ ಜ್ಞಾನವನ್ನು ಪಡೆದಿರುವ ತಾವು ಹಾಗೂ ದುಃಖವನ್ನು ಜಯಿಸಿರುವ ತಾವು, ದುಃಖವನ್ನು ಅನುಭವಿಸುತ್ತಿರುವ ಹಾಗೂ ಕೆಳಗಿರುವವರ ಮೇಲೆ ಕೃಪಾಕಟಾಕ್ಷವನ್ನು ಬೀರಬೇಕು.

೧೫. "ಅಯ್ಯಾ ವೀರನೇ, ಎದ್ದೇಳು; ಅಜೇಯನೇ, ಸೇನಾಪತಿಯೇ, ಸಕಲ ಜನ್ಮ ಋಣಗಳನ್ನು ತೀರಿಸಿದವನೇ, ಪ್ರಪಂಚಕ್ಕೆ ನುಗ್ಗು, ಅದಕ್ಕೆ ಬೆನ್ನು ತಿರುಗಿಸಬೇಡ.

೧೬. "ಭಗವಾನನು, ದಯೆಯಿಂದ ಮಾನವರಿಗೂ ದೇವತೆಗಳಿಗೂ ತನ್ನ ಸುವಾರ್ತೆಗಳನ್ನು ಬೋಧಿಸಲು ಇಚ್ಛಿಸುವಂತಾಗಲಿ."

೧೭. ಅದಕ್ಕೆ ಬುದ್ಧನ ಉತ್ತರ ಈ ರೀತಿ ಇತ್ತು: "ಸಮರ್ಥನೂ ನರೋತ್ತಮನೂ ಆದ ಬ್ರಹ್ಮನೇ, ನನ್ನ ಸಂದೇಶವನ್ನು ನಾನು ಏಕೆ ಬೋಧಿಸುತ್ತಿಲ್ಲವೆಂದರೆ, ನನಗೆ ಒಂದು ವ್ಯಥೆಯು ಕಾಡುತ್ತಿದೆ."

೧೮. ಆದರೆ, ಪ್ರಪಂಚದಲ್ಲಿ ಬಹಳ ದುಃಖವಿರುವುದನ್ನು ಮನಗಂಡ ಬುದ್ಧನು, ತಾನು ಸಂನ್ಯಾಸಿಯಂತೆ ಕೈಕಟ್ಟಿಕುಳಿತುಕೊಳ್ಳುವುದು ಅಥವಾ 'ಏನಾದರಾಗಲೀ, ತನಗೇನು?' ಎಂದು ಸುಮ್ಮನಿರುವುದು ತಪ್ಪು ಎಂದರಿತನು.

೧೯. ಸಂನ್ಯಾಸವು ನಿಷ್ಪ್ರಯೋಜಕವೆಂಬುದು ಅವನಿಗೆ ಅರಿವಾಯಿತು. ಪ್ರಪಂಚದಿಂದ ಪಲಾಯನ ಮಾಡಲು ಪ್ರಯತ್ನಿಸುವುದು ನಿಷ್ಪ್ರಯೋಜಕ. ಸಂನ್ಯಾಸಿಯೂ ಸಹ ಅದರಿಂದ ತಪ್ಪಿಸಿಕೊಳ್ಳಲಾರ. ಇಲ್ಲಿ ಅಗತ್ಯವಾದುದೇನೆಂದರೆ, ಪ್ರಪಂಚದಿಂದ ತಪ್ಪಿಸಿಕೊಳ್ಳುವುದಲ್ಲ. ಪ್ರಪಂಚವನ್ನು ಬದಲಾಯಿಸುವುದು ಮತ್ತು ಅದನ್ನು ಉತ್ತಮಗೊಳಿಸುವುದು.

೨೦. ತಾನು ಪ್ರಪಂಚವನ್ನು ತ್ಯಜಿಸಿದುದು ದುಃಖದಲ್ಲಿ ಕೊನೆಗೊಂಡ ಅನೇಕ ತೊಳಲಾಟಗಳಿಂದಾಗಿ ಹಾಗೂ ಅವುಗಳಿಗೆ ಪರಿಹಾರ ಗೊತ್ತಿಲ್ಲದ್ದರಿಂದಾಗಿ. ತನ್ನ ಸಿದ್ಧಾಂತದ ಪ್ರಚಾರದಿಂದಾಗಿ ದುಃಖ ನಿವಾರಣೆ ಸಾಧ್ಯವಾಗುವುದಾದರೆ, ನಿಷ್ಕ್ರಿಯ ಮೂರ್ತಿಯಂತೆ ಸುಮ್ಮನೆ ಕುಳಿತುಕೊಳ್ಳುವುದರ ಬದಲು, ಪ್ರಪಂಚಕ್ಕೆ ಹಿಂತಿರುಗಿ ಅದರ ಸೇವೆ ಮಾಡುವುದು ತನ್ನ ಕರ್ತವ್ಯವೆಂಬುದು ಅವನಿಗೆ ಮನವರಿಕೆಯಾಯಿತು.

೨೧. ಆದುದರಿಂದ ಬುದ್ಧನು ಬ್ರಹ್ಮ ಸಹಂಪತಿಯ ವಿಜ್ಞಾಪನೆಯನ್ನು ಮನ್ನಿಸಿ, ಜನತೆಗೆ ತನ್ನ ಸಿದ್ಧಾಂತವನ್ನು ಬೋಧಿಸಲು ನಿರ್ಣಯಿಸಿದನು.

## ೨. ಬ್ರಹ್ಮ ಸರ್ವಂಪತಿಯಿಂದ ಸುವಾರ್ತೆಯ ಘೋಷಣೆ

೧. “ಜನತೆಗೆ ಬುದ್ಧನು ತನ್ನ ಸಿದ್ಧಾಂತವನ್ನು ಬೋಧಿಸುವಂತೆ ಮನವೊಲಿಸಲು ನಾನೊಬ್ಬ ನಿಮಿತ್ತನಾಗಿದ್ದೇನೆ” ಎಂದು ಬ್ರಹ್ಮ ಸರ್ವಂಪತಿಯು ಬಹಳ ಸಂತೋಷಪಟ್ಟನು. ಅವನು ಬುದ್ಧನಿಗೆ ನಮಸ್ಕರಿಸಿ, ಬಲಮುಖವಾಗಿ ಪ್ರದಕ್ಷಿಣೆ ಮಾಡಿ, ಮತ್ತೊಮ್ಮೆ ಅವನನ್ನು ನೋಡಿ, ನಿರ್ಗಮಿಸಿದನು.

೨. ಹಿಂತಿರುಗುವಾಗ ದಾರಿಯಲ್ಲಿ ಈ ರೀತಿ ಘೋಷಿಸುತ್ತಾ ಹೋದನು: “ಒಳ್ಳೆಯದು ಬಂದಿದ್ದಕ್ಕೆ ಸಂತೋಷಪಡಿ. ನಮ್ಮ ಭಗವಾನ್ ಬುದ್ಧನು ಪ್ರಪಂಚದ ಎಲ್ಲ ಅನಿಷ್ಟಗಳ ಮತ್ತು ದುಃಖಗಳ ಮೂಲವನ್ನು ಹುಡುಕಿದ್ದಾನೆ. ಅವನಿಗೆ ಪರಿಹಾರವೂ ಗೊತ್ತು.

೩. “ಬುದ್ಧನು ಬಳಲಿದವರಿಗೂ ದುಃಖತಪ್ತರಿಗೂ ಸಮಾಧಾನವನ್ನು ಕರುಣಿಸುತ್ತಾನೆ. ಯುದ್ಧದಲ್ಲಿ ನೊಂದವರಿಗೂ ಶಾಂತಿಯನ್ನು ಕೊಡುತ್ತಾನೆ. ನಿರಾಶಗೊಂಡವರಿಗೆ ಧೈರ್ಯವನ್ನು ಕೊಡುತ್ತಾನೆ. ತುಳಿಯಲ್ಪಟ್ಟವರಿಗೂ ಕೆಳವರ್ಗದವರಿಗೂ ವಿಶ್ವಾಸ ಮತ್ತು ಭರವಸೆಯನ್ನು ಕೊಡುತ್ತಾನೆ.

೪. “ಜೀವನದ ಕಷ್ಟಗಳಲ್ಲಿ ನೊಂದವರೆ, ಹೋರಾಟ ಮಾಡುತ್ತಾ ಸಹಿಸಿಕೊಳ್ಳುವವರೆ, ನ್ಯಾಯಕ್ಕಾಗಿ ಹಾತೊರೆಯುತ್ತಿರುವವರೆ, ಈ ಸುವಾರ್ತೆಯಿಂದ ಸಂತಸಪಡಿ.

೫. “ಘಾಸಿಯಾಗಿರುವವರೆ, ನಿಮ್ಮ ನಿಮ್ಮ ಗಾಯಗಳನ್ನು ಗುಣಪಡಿಸಿಕೊಳ್ಳಿ; ಹಸಿದಿರುವವರೆ, ಹೊಟ್ಟೆ ತುಂಬಾ ಉಣ್ಣಿ; ಬಳಲಿರುವವರೆ, ವಿಶ್ರಮಿಸಿ; ಬಾಯಾರಿದವರೆ, ನಿಮ್ಮ ಬಾಯಾರಿಕೆಯನ್ನು ತೀರಿಸಿಕೊಳ್ಳಿ; ಕತ್ತಲೆಯಲ್ಲಿರುವವರೆ, ಬೆಳಕನ್ನು ಹುಡುಕಿ; ಖಿನ್ನಮನಸ್ಕರೇ, ಸಂತೋಷಪಡಿ.

೬. “ಅವನ ತತ್ತ್ವದಲ್ಲಿ ಪರಿತ್ಯಕ್ತರನ್ನೂ ಅನಾಥರನ್ನೂ ನಮ್ಮ ಗುಂಪಿಗೆ ಸೇರಿಸಿಕೊಳ್ಳುವಂತೆ ಪ್ರೇರೇಪಿಸುವ, ಕೆಳವರ್ಗದವರನ್ನು ಮೇಲೆತ್ತುವಂತೆ ಪ್ರೇರೇಪಿಸುವ, ನಿರ್ಗತಿಕರಿಗೂ ಶೋಷಿತರಿಗೂ ಸಮಾನತೆಯನ್ನು ಕೊಟ್ಟು ಅಭಿವೃದ್ಧಿಯ ಕಡೆಗೆ ಹೋಗುವಂತೆ ಪ್ರೇರೇಪಿಸುವ, ಒಂದು ಹಂಬಲವಿದೆ.

೭. “ಅವನ ಸಿದ್ಧಾಂತವು ಒಂದು ಸದಾಚಾರದ ಸಿದ್ಧಾಂತ ಮತ್ತು ಸದಾಚಾರವನ್ನು ಭೂಮಿಯ ಮೇಲೆ ಸ್ಥಾಪಿಸಬೇಕೆಂಬುದೇ ಅವನ ಧ್ಯೇಯ.

೮. “ಸತ್ಯ, ಪೂರ್ಣಸತ್ಯ, ಸತ್ಯದ ಹೊರತು ಮತ್ತೇನೂ ಇಲ್ಲ – ಇದೇ ಅವನ ಸಿದ್ಧಾಂತ.

೯. “ಬುದ್ಧನು ಪೂಜ್ಯ ಏಕೆಂದರೆ, ಅವನದು ವಿಚಾರಮಾರ್ಗ ಹಾಗೂ ಕುರುಡು ನಂಬಿಕೆಯಿಂದ ಬಿಡುಗಡೆ ಪಡೆಯುವುದೇ ಅವನ ದಾರಿ. ಬುದ್ಧನು ಪೂಜ್ಯನಾದುದರಿಂದ ಅವನು ಮಧ್ಯಮ ಮಾರ್ಗವನ್ನು ಬೋಧಿಸುತ್ತಾನೆ. ಪೂಜ್ಯನಾದ ಅವನು ಸದಾಚಾರದ ತತ್ತ್ವಗಳನ್ನು ಬೋಧಿಸುತ್ತಾನೆ. ಪೂಜ್ಯನಾದ ಬುದ್ಧನು ನಿರ್ವಾಣದ ಶಾಂತಿಯನ್ನು ಬೋಧಿಸುತ್ತಾನೆ. ಪೂಜ್ಯನಾದ ಬುದ್ಧನು, ಸಹಜೀವಿಗಳು ಮೋಕ್ಷ ಪಡೆಯಲಿ ಎಂಬ ಉದ್ದೇಶದಿಂದ ಪ್ರೀತಿ, ಕರುಣೆ ಹಾಗೂ ಸಹಚರ್ಯವನ್ನೂ ಬೋಧಿಸುತ್ತಾನೆ.”

## ೩. ಪರಿವರ್ತನೆಯ ಎರಡು ಪ್ರಕಾರಗಳು

೧. ಬುದ್ಧನ ಬೋಧನಾ ಯೋಜನೆಯಲ್ಲಿ ಪರಿವರ್ತನೆಗೆ ಎರಡು ಅರ್ಥಗಳಿವೆ.

೨. ಸಂಘವೆಂದು ಕರೆಯಿಸಿಕೊಳ್ಳುವ ಭಿಕ್ಕುಗಳ ಒಕ್ಕೂಟಕ್ಕೆ ಪರಿವರ್ತನೆ.

೩. ಎರಡನೆಯದಾಗಿ, ಗೃಹಸ್ಥನನ್ನು ಉಪಾಸಕನಾಗಿ ಅಥವಾ ಬುದ್ಧ ಧರ್ಮದ ಸಾಮಾನ್ಯ ಅನುಯಾಯಿಯಾಗಿ ಪರಿವರ್ತನೆ.

೪. ನಾಲ್ಕು ಅಂಶಗಳಲ್ಲಿ ಬಿಟ್ಟರೆ, ಭಿಕ್ಕುಗಳ ಜೀವನಕ್ಕೂ ಉಪಾಸಕರ ಜೀವನಕ್ಕೂ ಯಾವ ವ್ಯತ್ಯಾಸವೂ ಇಲ್ಲ.

೫. ಉಪಾಸಕನು ಗೃಹಸ್ಥನಾಗಿಯೇ ಉಳಿಯುತ್ತಾನೆ. ಭಿಕ್ಕು ಮನೆಯಿಲ್ಲದೆ ಅಲೆಯುತ್ತಾನೆ.

೬. ಉಪಾಸಕ, ಭಿಕ್ಕುಗಳಿಬ್ಬರೂ ತಮ್ಮ ಜೀವನದಲ್ಲಿ ಕೆಲವು ನಿಯಮಗಳನ್ನು ಪಾಲಿಸಬೇಕು.

೭. ಭಿಕ್ಕುಗಳಿಗೆ ವ್ರತಗಳಿರುತ್ತವೆ – ಅದನ್ನು ಮುರಿದರೆ, ಅವನಿಗೆ ಶಿಕ್ಷೆಯಾಗುತ್ತದೆ. ಉಪಾಸಕರಿಗೆ, ಕೇವಲ ನಿಯಮಗಳಿರುತ್ತವೆ. ಅದನ್ನು ಅವನು ತನ್ನ ಶಕ್ತ್ಯಾನುಸಾರ ಪಾಲಿಸಬೇಕು.

೮. ಉಪಾಸಕನಿಗೆ ಆಸ್ತಿ ಇರಬಹುದು, ಆದರೆ ಭಿಕ್ಕುವಿಗೆ ಇರಬಾರದು.

೯. ಉಪಾಸಕನಾಗಲು ಯಾವುದೇ ವಿಧಿಯನ್ನು ಆಚರಿಸಬೇಕಿಲ್ಲ.

೧೦. ಭಿಕ್ಕುವಾಗಲು ಉಪಸಂಪದವೆಂಬ ವಿಧಿಯನ್ನು ಆಚರಿಸಬೇಕು.

೧೧. ಬುದ್ಧನು ತನ್ನ ಬಳಿ ಬಂದವರಲ್ಲಿ, ಅವರ ಅರ್ಹತೆಗನುಗುಣವಾಗಿ ಕೆಲವರನ್ನೂ ಭಿಕ್ಕುಗಳಾಗಿಯೂ, ಕೆಲವರನ್ನು ಉಪಾಸಕರನ್ನಾಗಿಯೂ ಪರಿವರ್ತಿಸಿದ.

೧೨. ಉಪಾಸಕನು ಯಾವಾಗ ಬೇಕಾದರೂ ಭಿಕ್ಕುವಾಗಬಹುದಿತ್ತು.

೧೩. ಆದರೆ ಒಮ್ಮೆ ಭಿಕ್ಕುವಾದವನು ಮಹಾವ್ರತಗಳನ್ನು ಮುರಿದರೆ ಅಥವಾ ಸಂಘದ ಸದಸ್ಯತ್ವವನ್ನು ತ್ಯಜಿಸಿದರೆ, ಅವನು ಭಿಕ್ಕುವಾಗಿ ಮುಂದುವರಿಯಲು ಸಾಧ್ಯವಿರಲಿಲ್ಲ.

೧೪. ಈ ಮುಂದಿನ ಪುಟಗಳಲ್ಲಿ ಬರುವ ಹೆಸರಿನವರನ್ನು ಮಾತ್ರ ಬುದ್ಧನು ಪರಿವರ್ತಿಸಿದನೆಂದು ತಿಳಿಯಬಾರದು.

೧೫. ತನ್ನ ಸಂಘಕ್ಕೆ ಸೇರಿಸಿಕೊಳ್ಳಲು ಅಥವಾ ತನ್ನ ಧರ್ಮವನ್ನು ಬೋಧಿಸಲು, ಬುದ್ಧನು ಜನರಲ್ಲಿ ಜಾತಿಭೇದವನ್ನಾಗಲಿ ಅಥವಾ ಲಿಂಗಭೇದವನ್ನಾಗಲಿ ಮಾಡಲಿಲ್ಲ ಎಂದು ತೋರಿಸಲು ಮಾತ್ರ ಕೆಲವು ನಿದರ್ಶನಗಳನ್ನು ಆಯ್ದುಕೊಳ್ಳಲಾಗಿದೆ.

# ಭಾಗ : ೨
# ಪರಿವ್ರಾಜಕರ ಪರಿವರ್ತನೆ

೧. ಸಾರನಾಥಕ್ಕೆ ಆಗಮನ
೨. ಬುದ್ಧನ ಪ್ರಥಮೋಪದೇಶ
೩. ಬುದ್ಧನ ಪ್ರಥಮೋಪದೇಶ (ಮುಂದುವರಿದುದು)
೪. ಬುದ್ಧನ ಪ್ರಥಮೋಪದೇಶ (ಮುಂದುವರಿದುದು)
೫. ಬುದ್ಧನ ಪ್ರಥಮೋಪದೇಶ (ಮುಂದುವರಿದುದು)
೬. ಬುದ್ಧನ ಪ್ರಥಮೋಪದೇಶ (ಮುಕ್ತಾಯ)

# ೧. ಸಾರನಾಥಕ್ಕೆ ಆಗಮನ

೧. ತನ್ನ ಸಿದ್ಧಾಂತವನ್ನು ಜನರಿಗೆ ಬೋಧಿಸಬೇಕೆಂದು ನಿರ್ಣಯಿಸಿದ ಬುದ್ಧನು "ಈ ಸಿದ್ಧಾಂತವನ್ನು ಮೊದಲು ಯಾರಿಗೆ ಬೋಧಿಸಲಿ?" ಎಂದು ತನ್ನನ್ನು ಪ್ರಶ್ನಿಸಿಕೊಂಡ. ಆಗ ಅವನ ಮನಸ್ಸಿನಲ್ಲಿ ವಿದ್ಯಾವಂತನೆಂದೂ, ವಿವೇಕಿಯೆಂದೂ, ಬುದ್ಧಿವಂತನೆಂದೂ, ನಿರ್ಮಲ ಚಾರಿತ್ರನೆಂದೂ ತಾನು ಆರಾಧಿಸುತ್ತಿದ್ದ ಆಲಾರ ಕಲಮ ಸುಳಿದನು. "ಅವನಿಗೆ ಈ ಸಿದ್ಧಾಂತವನ್ನು ಮೊದಲು ಉಪದೇಶಿಸಿದರೆ ಹೇಗೆ?" ಆದರೆ ಆಲಾರ ಕಲಮ ಆ ವೇಳೆಗಾಗಲೇ ತೀರಿಕೊಂಡಿದ್ದನೆಂದು ಹೇಳಿದರು.

೨. ಆಗ ಅದನ್ನು ಉದ್ದಕ ರಾಮಪುತ್ತನಿಗೆ ಉಪದೇಶಿಸಲು ಯೋಚಿಸಿದನು. ಆದರೆ ಅವನೂ ಸತ್ತಿದ್ದ.

೩. ಆಗ ಅವನು ನಿರಂಜನದಲ್ಲಿ ತನ್ನ ಜೊತೆ ತಪಸ್ಸನ್ನಾಚರಿಸುತ್ತಿದ್ದ ಮತ್ತು ತಾನು ತಪಸ್ಸನ್ನು ತ್ಯಜಿಸಿದ್ದಕ್ಕೆ ತನ್ನೊಂದಿಗೆ ಕೋಪಗೊಂಡು ಬಿಟ್ಟುಹೋದ ಐವರು ಸಹಚರರನ್ನೂ ಜ್ಞಾಪಿಸಿಕೊಂಡ.

೪. "ಅವರು ನನಗಾಗಿ ಬಹಳ ಮಾಡಿದರು: ನನ್ನ ಸೇವೆ ಮಾಡಿದರು, ನನ್ನನ್ನು ಚೆನ್ನಾಗಿ ನೋಡಿಕೊಂಡರು; ಅವರಿಗೆ ಮೊದಲು ನನ್ನ ಸಿದ್ಧಾಂತದ ಉಪದೇಶ ಮಾಡಿದರೆ ಹೇಗೆ?" ಎಂದುಕೊಂಡ.

೫. ಆಗ ಅವರ ಬಗ್ಗೆ ವಿಚಾರಿಸತೊಡಗಿದ. ಅವರು ಸಾರನಾಥದ ಇಸಿಲಪಟ್ಟಣದ ಜಿಂಕೆಯ ವನದಲ್ಲಿ ವಾಸಿಸುತ್ತಿದ್ದಾರೆಂದು ತಿಳಿಯಿತು. ಅವನು ಅವರನ್ನು ಹುಡುಕಿಕೊಂಡು ಹೊರಟ.

೬. ಅವನು ಬರುವುದನ್ನು ನೋಡಿದ ಐವರು ಅವನಿಗೆ ಸುಖಾಗಮನ ಬಯಸದಿರಲು ತೀರ್ಮಾನಿಸಿದರು. ಅವರಲ್ಲಿ ಒಬ್ಬ ಹೇಳಿದ: "ಸ್ನೇಹಿತರೆ, ತಪಸ್ಸನ್ನು ತ್ಯಜಿಸಿ, ಸಂಪತ್ತನ್ನೂ ಸುಖವನ್ನೂ ಅರಸುತ್ತಿದ್ದ ಗೌತಮನೆಂಬ ಸಂನ್ಯಾಸಿ ಬರುತ್ತಿದ್ದಾನೆ. ಅವನು ಪಾಪವನ್ನು ಮಾಡಿದ್ದಾನೆ. ಆದುದರಿಂದ, ನಾವು ಅವನಿಗೆ ಸುಖಾಗಮನ ಬಯಸಬಾರದು. ಅವನಿಗೆ ಗೌರವಸೂಚಕವಾಗಿ ಏಳಲೂಬಾರದು. ಅವನ ಬಟ್ಟೆ ಮತ್ತು ಭಿಕ್ಷಾಪಾತ್ರೆಯನ್ನು ತೆಗೆದಿಡಲೂ ಬಾರದು. ಅವನಿಗೆ ಕೇವಲ ಒಂದು ಆಸನ ಬಿಟ್ಟು ಕೊಡೋಣ. ಬೇಕಾದರೆ ಕುಳಿತುಕೊಳ್ಳಲಿ." ಇದಕ್ಕೆ ಅವರೆಲ್ಲರೂ ಒಪ್ಪಿದರು.

೭ ಆದರೆ ಬುದ್ಧ ಹತ್ತಿರ ಬಂದಾಗ, ಆ ಐದು ಪರಿವ್ರಾಜಕನಿಗೆ ತಮ್ಮ ನಿರ್ಣಯಕ್ಕೆ ಬದ್ಧರಾಗಲು ಸಾಧ್ಯವಾಗಲಿಲ್ಲ. ಅವರೆಲ್ಲ ಬುದ್ಧನ ವ್ಯಕ್ತಿತ್ವದಿಂದ ಎಷ್ಟು ಪ್ರಭಾವಿತರಾದರೆಂದರೆ, ಅವರೆಲ್ಲರೂ ಎದ್ದುನಿಂತರು. ಒಬ್ಬ ಅವನ ಭಿಕ್ಷಾಪಾತ್ರೆಯನ್ನು ತೆಗೆದುಕೊಂಡ, ಮಗದೊಬ್ಬ ಅವನ ವಸ್ತ್ರವನ್ನು ತೆಗೆದುಕೊಂಡ, ಮಗದೊಬ್ಬ ಆಸನವನ್ನು ಸಿದ್ಧಪಡಿಸಿದ, ಮತ್ತೊಬ್ಬ ಅವನ ಪಾದಗಳನ್ನು ತೊಳೆಯಲು ನೀರು ತಂದ.

೮. ಕರೆಯದಲೆ ಬಂದವನಿಗೆ ನಿಜವಾಗಿಯೂ ಅದೊಂದು ಅದ್ಭುತ ಸುಸ್ವಾಗತವಾಗಿತ್ತು.

೯. ಹೀಗೆ ಯಾರು ಅವನನ್ನು ತಿರಸ್ಕರಿಸಬೇಕೆಂದಿದ್ದರೋ ಅವರೇ ಪ್ರಾರ್ಥಿಸುವಂತಾದರು.

## ೨. ಬುದ್ಧನ ಪ್ರಥಮೋಪದೇಶ

೧. ಪರಸ್ಪರರಿಗೆ ಶುಭಾಶಯಗಳನ್ನು ಹೇಳಿದಮೇಲೆ ಆ ಐದು ಪರಿವ್ರಾಜಕರು, 'ನಿಮಗೆ ಇನ್ನೂ ಸಂನ್ಯಾಸದಲ್ಲಿ ನಂಬಿಕೆ ಇದೆಯೇ?' ಎಂದು ಬುದ್ಧನನ್ನು ಪ್ರಶ್ನಿಸಿದರು. ಇದಕ್ಕೆ ಬುದ್ಧನು ಇಲ್ಲವೆಂದು ಉತ್ತರಿಸಿದನು.

೨. ಅವನು 'ಸುಖವನ್ನು ಅರಸುವ ಮಾರ್ಗ', 'ದೇಹದಂಡನ ಮಾರ್ಗ' ಎಂಬ ಎರಡು ರೀತಿಯ ವೈಪರೀತ್ಯಗಳಿವೆಯೆಂದನು.

೩. ನಾವು ನಾಳೆ ಸಾಯುತ್ತೇವೆಯಾದ್ದರಿಂದ, ತಿನ್ನೋಣ, ಕುಡಿಯೋಣ, ಎಂದು ಒಬ್ಬ ಅಂದರೆ, ಇನ್ನೊಬ್ಬ ಎಲ್ಲ ವಾಸನೆಗಳನ್ನೂ ನಾಶಮಾಡಿ. ಏಕೆಂದರೆ ಅವು ನಮ್ಮ ಪುನರ್ಜನ್ಮಕ್ಕೆ ಕಾರಣವಾಗುತ್ತವೆ ಎನ್ನುತ್ತಾನೆ. ಇವೆರಡರಿಂದಲೂ ಪ್ರಯೋಜನವಿಲ್ಲ ಎಂದು ಬುದ್ಧನು ಇವೆರಡನ್ನೂ ತಿರಸ್ಕರಿಸಿದನು.

೪. ಅವನಿಗೆ ಮಧ್ಯಮ ಮಾರ್ಗ (ಮಜ್ಝಿಮ ಪತಿಪದ)ದಲ್ಲಿ ನಂಬಿಕೆಯಿತ್ತು. ಆ ಮಾರ್ಗ ಸುಖದ ಮಾರ್ಗವೂ ಅಲ್ಲ, ದೇಹದಂಡನೆಯ ಮಾರ್ಗವೂ ಅಲ್ಲ.

೫. ಅವನು ಪರಿವ್ರಾಜಕರಿಗೆ ಹೇಳಿದ: "ನಿಮ್ಮ ಆತ್ಮವು ಪ್ರವೃತ್ತವಾಗಿದ್ದು ಪ್ರಾಪಂಚಿಕ ಸುಖಗಳಿಗಾಗಲಿ ದೇವಲೋಕದ ಆನಂದಕ್ಕಾಗಲೀ ಹಾತೊರೆಯುತ್ತಿದ್ದರೆ, ನೀವು ಮಾಡಿದ ದೇಹದಂಡನೆಯೆಲ್ಲ ವ್ಯರ್ಥವಲ್ಲವೆ? ಇದಕ್ಕೆ ಉತ್ತರ ಹೇಳಿ". ಪರಿವ್ರಾಜಕರು "ನೀವು ಹೇಳುವುದು ಸರಿ" ಎಂದರು.

೬. "ಕಾಮದ ಬೆಂಕಿಯನ್ನು ಆರಿಸುವಲ್ಲಿ ಯಶಸ್ವಿಯಾಗಲು ಸಹಾಯ ಮಾಡದ ದೇಹದಂಡನೆಯ ದರಿದ್ರ ಜೀವನ ನಡೆಸಿದರೆ, ಅಂತಹ ಆತ್ಮದಿಂದ ಹೇಗೆ ಬಿಡುಗಡೆ ಪಡೆಯುತ್ತೀರಿ?" ಎಂದು ಕೇಳಿದ್ದಕ್ಕೆ ಅವರು "ನೀವು ಹೇಳುವುದು ಸರಿ" ಎಂದರು.

೭ "ನಿಮ್ಮಲ್ಲಿರುವ ಆತ್ಮವನ್ನು ಜಯಿಸಿದರೆ ಮಾತ್ರ, ನೀವು ಕಾಮದಿಂದ ಬಿಡುಗಡೆ ಹೊಂದುತ್ತೀರಿ. ಆಗ ನೀವು ಪ್ರಾಪಂಚಿಕ ಸುಖಗಳಿಗೆ ಹಾತೊರೆಯುವುದಿಲ್ಲ. ಆಗ ಮಾತ್ರ ಸ್ವಾಭಾವಿಕ ಆಸೆಗಳ ಪೂರೈಕೆಯು ನಿಮ್ಮನ್ನು ಅಪವಿತ್ರಗೊಳಿಸುವುದಿಲ್ಲ. ಆಗ ನಿಮ್ಮ ದೇಹದ ಅಗತ್ಯಕ್ಕನುಗುಣವಾಗಿ ನೀವು ತಿನ್ನಿರಿ, ಕುಡಿಯಿರಿ.

೮. "ಎಲ್ಲ ರೀತಿಯ ವಿಷಯಲೋಲುಪತೆಯೂ ನಮ್ಮನ್ನು ಅಶಕ್ತರನ್ನಾಗಿಸುತ್ತದೆ. ವಿಷಯಲೋಲುಪನು ತನ್ನ ಆಸೆಗಳ ಗುಲಾಮ. ಎಲ್ಲ ಸುಖಾಪೇಕ್ಷೆಯೂ ಕನಿಷ್ಠ ಮತ್ತು ಕ್ಷುದ್ರ. ಆದರೆ ಜೀವನದ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಅನಿಷ್ಟವಲ್ಲ; ದೇಹವನ್ನೂ ಆರೋಗ್ಯವನ್ನೂ ಕಾಪಾಡಿಕೊಳ್ಳುವುದು ನಿಮ್ಮ ಕರ್ತವ್ಯ; ಅಲ್ಲದಿದ್ದರೆ, ನಿಮ್ಮ ಚಿತ್ತವನ್ನು ಸದೃಢವಾಗಿಯೂ ನಿರ್ಮಲವಾಗಿಯೂ ಇಟ್ಟುಕೊಳ್ಳಲಾಗಲಿ, ಜ್ಞಾನದೀಪ ಉರಿಯುತ್ತಿರುವಂತೆ ಇಟ್ಟುಕೊಳ್ಳಲಾಗಲೀ ಸಾಧ್ಯವಿಲ್ಲ.

೯. "ಪರಿವ್ರಾಜಕರೇ, ಇಲ್ಲಿ ಎರಡು ವಿಪರೀತಗಳಿರುವುದನ್ನು ಗಮನಿಸಿ. ನಮ್ಮ ಆಸೆಗಳ ಅದರಲ್ಲೂ, ಐಂದ್ರಿಕ ಸುಖಗಳ ಆಸೆಗಳ ಮೂಲಕ ವಿಷಯಗಳ ಕಡೆಗೆ ಆಕರ್ಷಿಸಲ್ಪಟ್ಟು, ಅವುಗಳಲ್ಲೇ ಅಭ್ಯಾಸಬಲದಿಂದ ಆಸಕ್ತರಾಗುವುದು, ಆ ಆಸೆಗಳನ್ನು ಕೀಳುಮಟ್ಟದ ಮತ್ತು ಅಸಂಸ್ಕೃತ ರೀತಿಯಲ್ಲಿ ಪೂರೈಸಿಕೊಳ್ಳುವುದು ಒಂದು ಮಾರ್ಗ. ಇದರ ಆಚರಣೆ ಅಯೋಗ್ಯ, ನಿಷ್ಪ್ರಯೋಜಕ ಮತ್ತು ರೂಢಿಯಾದ ಅಭ್ಯಾಸ; ಮತ್ತೊಂದೆಡೆ ಕಷ್ಟಕಾರಕವೂ ಅಯೋಗ್ಯವೂ ಮತ್ತು ನಿಷ್ಪ್ರಯೋಜಕವಾದ ಸಂನ್ಯಾಸ ದೇಹದಂಡನೆಯ ಸಂನ್ಯಾಸ ಮಾರ್ಗ. ನೀವು ಎರಡನ್ನೂ ಅನುಸರಿಸಬಾರದು.

೧೦. "ಇವೆರಡು ವೈಪರೀತ್ಯಗಳಿಂದ ದೂರವಿರುವ ಮಧ್ಯಮ ಮಾರ್ಗವೊಂದಿದೆ. ನಾನು ಬೋಧಿಸುವುದು ಆ ಮಾರ್ಗವನ್ನೇ – ಇದನ್ನು ತಿಳಿಯಿರಿ."

೧೧. ಆ ಐದು ಪರಿವ್ರಾಜಕರು ಅವನು ಹೇಳಿದುದನ್ನು ಗಮನವಿಟ್ಟು ಕೇಳಿದರು. ಬುದ್ಧನ ಮಧ್ಯಮ ಮಾರ್ಗದ ವಿಷಯವಾಗಿ ಏನು ಹೇಳಬೇಕೆಂದು ತಿಳಿಯದೆ ನಾವು ನಿಮ್ಮನ್ನು ಬಿಟ್ಟುಹೋದಮೇಲೆ ನೀವೇನು ಮಾಡಿದಿರಿ ಎಂದು ಕೇಳಿದರು. ಆಗ ಬುದ್ಧನು ತಾನು ಹೇಗೆ ಗಯೆಗೆ ಹೋದೆ, ಅಲ್ಲಿ ಅರಳಿಮರದ ಕೆಳಗೆ ಹೇಗೆ ಧ್ಯಾನಾಸಕ್ತನಾಗಿ ಕುಳಿತಿದ್ದೆ, ನಾಲ್ಕು ವಾರಗಳ ಧ್ಯಾನದ ನಂತರ ತನಗೆ ಹೇಗೆ ಜ್ಞಾನೋದಯವಾಯಿತು, ಅದರ ಪರಿಣಾಮವಾಗಿ ಹೇಗೆ ತಾನು ಜೀವನದ ಹೊಸ ಮಾರ್ಗವನ್ನು ಕಂಡುಹಿಡಿದೆ, ಎಂಬುದನ್ನು ಅವರಿಗೆ ತಿಳಿಸಿದ.

೧೨. ಇದನ್ನು ಕೇಳಿದ ಪರಿವ್ರಾಜಕರಿಗೆ ಈ ಹೊಸ ಮಾರ್ಗದ ಬಗ್ಗೆ ವಿಶೇಷ ಕುತೂಹಲವುಂಟಾಗಿ, ಅದನ್ನು ತಮಗೆ ಬೋಧಿಸುವಂತೆ ವಿನಂತಿಸಿಕೊಂಡರು.

೧೩. ಇದಕ್ಕೆ ಬುದ್ಧನು ಒಪ್ಪಿದನು.

೧೪. ತನ್ನ ಮಾರ್ಗ ಅಥವಾ ಧರ್ಮದಲ್ಲಿ ಪರಮಾತ್ಮನಾಗಲಿ ಆತ್ಮನಾಗಲಿ ಇಲ್ಲ; ಮರಣೋತ್ತರ ಜೀವನಕ್ಕೂ ತನ್ನ ಧಮ್ಮಕ್ಕೂ ಸಂಬಂಧವಿಲ್ಲ. ಯಜ್ಞಯಾಗಾದಿಗಳಿಗೂ ತನ್ನ ಧಮ್ಮಕ್ಕೂ ಸಂಬಂಧವಿಲ್ಲ ಎಂದು ಹೇಳುವ ಮೂಲಕ ತನ್ನ ಉಪದೇಶವನ್ನು ಪ್ರಾರಂಭಿಸಿದನು.

೧೫. ಮನುಷ್ಯ; ಇಹಜೀವನದಲ್ಲಿ ಮನುಷ್ಯ–ಮನುಷ್ಯನಿಗಿರುವ ಸಂಬಂಧ ಅವನ ಧಮ್ಮದ ಕೇಂದ್ರವಾಗಿದೆ.

೧೬. ಬುದ್ಧನು ಇದೇ ತನ್ನ ಮೊದಲ ಮೂಲತತ್ತ್ವವೆಂದು ಹೇಳಿದನು.

೧೭. ಅವನ ಎರಡನೇ ಮೂಲತತ್ತ್ವವು: ಮನುಷ್ಯರು ದುಃಖ, ಕಷ್ಟ ಮತ್ತು ಬಡತನದಲ್ಲಿ ಬದುಕಿದ್ದಾರೆ; ಪ್ರಪಂಚವು ದುಃಖಮಯವಾಗಿದೆ; ಆ ದುಃಖವನ್ನು ಹೇಗೆ ನಿವಾರಿಸಬೇಕೆಂಬುದೇ ಧಮ್ಮದ ಏಕೈಕ ಗುರಿಯಾಗಿದೆ. ಇದನ್ನು ಬಿಟ್ಟು ಧಮ್ಮವೇ ಇಲ್ಲ ಎನ್ನುವುದು.

೧೮. ದುಃಖದ ಅಸ್ತಿತ್ವವನ್ನು ಗುರುತಿಸುವುದು ಮತ್ತು ದುಃಖ ನಿವಾರಣಾ ಮಾರ್ಗವನ್ನು ತೋರಿಸುವುದು ಅವನ ಧಮ್ಮದ ತಳಹದಿ.

೧೯. ಧಮ್ಮಕ್ಕೆ ಇದೊಂದೇ ತಳಹದಿ, ಇದೊಂದೇ ಸಮರ್ಥನೆ. ಇದನ್ನು ಗಣನೆಗೆ ತೆಗೆದುಕೊಳ್ಳದ ಧಮ್ಮ ಧಮ್ಮವೇ ಅಲ್ಲ.

೨೦. "ಎಲೈ ಪರಿವ್ರಾಜಕರೇ, ಪ್ರಪಂಚದಲ್ಲಿರುವ ದುಃಖವೂ ಅದರ ನಿವಾರಣೆಯೂ ಧರ್ಮದ ಮುಖ್ಯ ಸಮಸ್ಯೆಯೆಂದು ಯಾವ ಸಂನ್ಯಾಸಿಗಳು ಅಥವಾ ಬ್ರಾಹ್ಮಣರು (ಧರ್ಮಬೋಧಕರು) ತಿಳಿಯುವುದಿಲ್ಲವೋ, ಅಂಥ ಸಂನ್ಯಾಸಿ ಅಥವಾ ಬ್ರಾಹ್ಮಣರು ನನ್ನ ದೃಷ್ಟಿಯಲ್ಲಿ ಸಂನ್ಯಾಸಿಗಳು ಅಥವಾ ಬ್ರಾಹ್ಮಣರೆಂದೆನಿಸಿಕೊಳ್ಳಲಾರರು; ಅಂತಹವರು ಧಮ್ಮದ ನಿಜವಾದ ಅರ್ಥವನ್ನು ಈ ಜನ್ಮದಲ್ಲಿ ತಿಳಿದುಕೊಳ್ಳಲಾರರು."

೨೧. ಆಗ ಪರಿವ್ರಾಜಕರು ಅವನನ್ನು ಕೇಳಿದರು: "ದುಃಖದ ಅಸ್ತಿತ್ವವನ್ನು ಗುರುತಿಸುವುದು ಮತ್ತು ದುಃಖ ನಿವಾರಣೆಯೇ ನಿನ್ನ ಧಮ್ಮದ ತಳಹದಿಯಾಗಿದ್ದರೆ, ನಿನ್ನ ಧಮ್ಮವು ಹೇಗೆ ದುಃಖವನ್ನು ನಿವಾರಿಸುತ್ತದೆಯೆಂಬುದನ್ನು ತಿಳಿಸು."

೨೨. ಆಗ ಬುದ್ಧ ಅವರಿಗೆ ಹೀಗೆ ತಿಳಿಸಿದ: "ನನ್ನ ಧಮ್ಮದ ಪ್ರಕಾರ, ಪ್ರತಿಯೊಬ್ಬ ವ್ಯಕ್ತಿಯೂ (೧) ಶುದ್ಧತಾ ಮಾರ್ಗವನ್ನು, (೨) ಸದಾಚಾರದ ಮಾರ್ಗವನ್ನು, (೩) ಸದ್ಗುಣಗಳ ಮಾರ್ಗವನ್ನು

ಅನುಸರಿಸಿದರೆ, ಅದೇ ದುಃಖವನ್ನು ಕೊನೆಗಾಣಿಸುತ್ತದೆ.”

೨೩. ಇನ್ನೂ ಮುಂದುವರಿದು, ತಾನು ಅಂಥ ಧಮ್ಮವನ್ನು ಕಂಡುಹಿಡಿದಿರುವುದಾಗಿ ಹೇಳಿದ.

## ೩. ಬುದ್ಧನ ಪ್ರಥಮೋಪದೇಶ (ಮುಂದುವರಿದುದು)
## ಶುದ್ಧತಾ ಮಾರ್ಗ

೧. ಆಗ ಪರಿವ್ರಾಜಕರು ತನ್ನ ಆ ಧಮ್ಮವನ್ನು ವಿಶದವಾಗಿ ತಿಳಿಸುವಂತೆ ಬುದ್ಧನನ್ನು ಕೇಳಿಕೊಂಡರು.

೨. ಬುದ್ಧನಿಗೆ ಹಾಗೆ ಮಾಡಲು ಸಂತೋಷವೆನಿಸಿತು.

೩. ಅವರಿಗೆ ಶುದ್ಧತೆಯ ಮಾರ್ಗವನ್ನು ಕುರಿತು ಮೊದಲು ಬೋಧಿಸಿದನು.

೪. “ಒಬ್ಬ ವ್ಯಕ್ತಿಯು ತಾನು ಒಳ್ಳೆಯವನಾಗಿರಬೇಕೆಂದರೆ ಕೆಲವು ತತ್ತ್ವಗಳನ್ನು ಜೀವನದ ತತ್ತ್ವಗಳೆಂದು ಪರಿಗಣಿಸಬೇಕು ಎಂದು ತನ್ನ ಶುದ್ಧತಾ ಮಾರ್ಗವು ಬೋಧಿಸುತ್ತದೆ” – ಎಂದು ಬುದ್ಧನು ಪರಿವ್ರಾಜಕರಿಗೆ ಹೇಳಿದನು.

೫. “ನನ್ನ ಶುದ್ಧತಾ ಮಾರ್ಗದಿಂದ ಪರಿಗಣಿಸಲ್ಪಟ್ಟ ಜೀವನ ತತ್ತ್ವಗಳು ಹೀಗಿವೆ: ಹಿಂಸಿಸಬಾರದು ಅಥವಾ ಕೊಲ್ಲಬಾರದು, ಕದಿಯಬಾರದು ಅಥವಾ ಬೇರೆಯವರಿಗೆ ಸೇರಿದ ಯಾವ ವಸ್ತುವನ್ನೂ ತೆಗೆದುಕೊಳ್ಳಬಾರದು, ಸುಳ್ಳು ಹೇಳಬಾರದು, ಕಾಮದಲ್ಲಿ ನಿರತನಾಗಬಾರದು, ಮದ್ಯಪಾನದಲ್ಲಿ ನಿರತನಾಗಬಾರದು.

೬. “ಪ್ರತಿಯೊಬ್ಬ ಮನುಷ್ಯನೂ ಈ ತತ್ತ್ವಗಳನ್ನು ಪರಿಗಣಿಸುವುದು ಬಹಳ ಆವಶ್ಯಕ. ಏಕೆಂದರೆ, ಪ್ರತಿಯೊಬ್ಬನೂ ತಾನು ಮಾಡಿದುದೆಲ್ಲವನ್ನೂ ಅಳೆಯಲು ಒಂದು ಮಾನದಂಡವನ್ನಿಟ್ಟುಕೊಳ್ಳಬೇಕು. ನನ್ನ ಬೋಧನೆಯ ಪ್ರಕಾರ ಈ ತತ್ತ್ವಗಳೇ ಅಂಥ ಮಾನದಂಡಗಳು.

೭ “ಎಲ್ಲೆಲ್ಲಿಯೂ ಪತಿತರಿದ್ದಾರೆ. ಆದರೆ ಪತಿತರಲ್ಲಿ ಈ ಮಾನದಂಡವಿರುವ ಪತಿತರು ಮತ್ತು ಮಾನದಂಡವಿಲ್ಲದ ಪತಿತರು ಎಂದು ಎರಡು ವರ್ಗಗಳಿವೆ.

೮. “ಮಾನದಂಡವಿಲ್ಲದ ಪತಿತರಿಗೆ ತಾನು ಪತಿತನೆಂಬುದು ಗೊತ್ತಿರುವುದಿಲ್ಲ. ಆದ್ದರಿಂದ ಅವನು ಯಾವಾಗಲೂ ಪತಿತನಾಗೇ ಇರುತ್ತಾನೆ. ಆದರೆ ಮಾನದಂಡವಿರುವ ಪತಿತನು ತಾನು ಮೇಲೇಳಲು ಪ್ರಯತ್ನಿಸುತ್ತಾನೆ. ಏಕೆ? ಏಕೆಂದರೆ ತಾನು ಹೀನಸ್ಥಿತಿಯಲ್ಲಿರುವುದರ ಅರಿವು ಅವನಿಗಿದೆ.

೯. “ಮನುಷ್ಯನ ಜೀವನವನ್ನು ನಿಯಂತ್ರಿಸಲು ಬೇಕಾದ ಮಾನದಂಡ ಇರುವುದಕ್ಕೂ ಇಲ್ಲದಿರುವುದಕ್ಕೂ ಇರುವ ವ್ಯತ್ಯಾಸ ಇದೆ. ಮಾನದಂಡವಿಲ್ಲದಿರುವುದು ಮುಖ್ಯವೇ ಹೊರತು ಮನುಷ್ಯ ಪತಿತನಾಗಿರುವುದಲ್ಲ.

೧೦. “ಪರಿವ್ರಾಜಕರೇ, ಈ ತತ್ತ್ವಗಳು ಜೀವನದ ಮಾನದಂಡಗಳೆಂದು ಏಕೆ ಪರಿಗಣಿತವಾಗಬೇಕು? ಎಂದು ನೀವು ಪ್ರಶ್ನಿಸಬಾರದು.”

೧೧. “ಒಂದು ವೇಳೆ ನೀವೇ ‘ಈ ತತ್ತ್ವಗಳು ವ್ಯಕ್ತಿಗೆ ಒಳ್ಳೆಯವೇ?’ ಎಂದಾಗಲಿ, ‘ಅವು ಸಮಾಜಕ್ಕೆ ಒಳ್ಳೆಯದನ್ನುಂಟುಮಾಡುತ್ತವೆಯೇ?’ ಎಂದು ಕೇಳಿಕೊಂಡರೆ, ನಿಮ್ಮ ಪ್ರಶ್ನೆಗೆ ಉತ್ತರ ಸಿಕ್ಕುತ್ತದೆ.”

೧೨. “ಒಂದು ವೇಳೆ ಈ ಪ್ರಶ್ನೆಗಳಿಗೆ ಕೊಡುವ ಉತ್ತರಗಳು ಹೌದೆಂದಾದರೆ, ಆಗ ನನ್ನ ಶುದ್ಧತಾ ಮಾರ್ಗದ ತತ್ತ್ವಗಳು ನಿಜವಾದ ಜೀವನದ ಮಾನದಂಡವೆಂಬುದು ಸಿದ್ಧವಾಗುತ್ತದೆ.”

## ೪. ಬುದ್ಧನ ಪ್ರಥಮೋಪದೇಶ (ಮುಂದುವರಿದುದು)
## ಅಷ್ಟಾಂಗ ಮಾರ್ಗ ಅಥವಾ ಸದಾಚಾರದ ಮಾರ್ಗ

೧. ಅನಂತರ ಬುದ್ಧನು ಪರಿವ್ರಾಜಕರಿಗೆ ಅಷ್ಟಾಂಗ ಮಾರ್ಗವನ್ನು ಕುರಿತು ಹೇಳಿದನು. ತನ್ನ ಅಷ್ಟಾಂಗ ಮಾರ್ಗದಲ್ಲಿ ಎಂಟು ಅಂಗಗಳಿರುವುದಾಗಿ ಹೇಳಿದ.

೨. ತನ್ನ ಬೋಧನೆಯನ್ನು ಸಮ್ಮಾ ದಿಟ್ಟಿ (ಸಮ್ಯಗ್‌ದೃಷ್ಟಿ)ಯ ವಿವರಣೆಯೊಂದಿಗೆ ಪ್ರಾರಂಭಿಸಿದನು. ಇದೇ ಅಷ್ಟಾಂಗ ಮಾರ್ಗದ ಮೊಟ್ಟ ಮೊದಲನೆಯ ಹಾಗೂ ಅಗ್ರಗಣ್ಯ ಅಂಶ.

೩. ಬುದ್ಧ ಹೇಳಿದ: "ಸಮ್ಮಾ ದಿಟ್ಟಿಯ ಪ್ರಾಮುಖ್ಯತೆಯನ್ನು ಅರಿಯಬೇಕಾದರೆ:

೪. "ಎಲೈ ಪರಿವ್ರಾಜಕರೇ, ಪ್ರಪಂಚವೊಂದು ಸೆರೆಮನೆ. ಮನುಷ್ಯನು ಈ ಸೆರೆಮನೆಯಲ್ಲಿ ಒಬ್ಬ ಸೆರೆಯಾಳು ಎಂಬುದನ್ನು ಅರಿತುಕೊಳ್ಳಬೇಕು.

೫. "ಈ ಸೆರೆಮನೆಯಲ್ಲಿ ಬರಿ ಕತ್ತಲಿದೆ. ಅಲ್ಲಿ ಎಷ್ಟು ಕತ್ತಲಿದೆಯೆಂದರೆ, ಸೆರೆಯಾಳುಗಳಿಗೆ ಅಲ್ಲಿರುವ ಏನೂ ಯಥಾರ್ಥವಾಗಿ ಕಾಣುವುದಿಲ್ಲ. ಸೆರೆಯಾದವನಿಗೆ ತಾನು ಸೆರೆಯಾಳೆಂಬುದೂ ಗೊತ್ತಿಲ್ಲ.

೬. "ವಾಸ್ತವವಾಗಿ, ಅವನು ದೀರ್ಘಕಾಲ ಆ ಕತ್ತಲಲ್ಲೇ ಇರುವುದರಿಂದ, ಕುರುಡನಾಗಿದ್ದಾನೆ, ಅಷ್ಟೇ ಅಲ್ಲ; ಬೆಳಕಿನಂತಹ ವಿಚಿತ್ರ ವಸ್ತು ಇರಬಹುದೇ ಎಂಬ ಸಂದೇಹವೂ ಸಹ ಅವನಿಗಿದೆ.

೭. "ಮನಸ್ಸು ಎಂಬ ಒಂದೇ ಸಾಧನದ ಮೂಲಕ ಮನುಷ್ಯನಿಗೆ ಬೆಳಕು ಬರಲು ಸಾಧ್ಯವಿದೆ.

೮. "ಆದರೆ ಈ ಕಾರಾಗೃಹವಾಸಿಗಳ ಮನಸ್ಸು ಈ ಉದ್ದೇಶವನ್ನು ಕೈಗೂಡಿಸುವ ಪರಿಪೂರ್ಣ ಸಾಧನವೇನಲ್ಲ.

೯. "ಆ ಮನಸ್ಸು ಎಷ್ಟು ಸ್ವಲ್ಪ ಬೆಳಕನ್ನೂ ಒಳಗೆ ಬಿಡುತ್ತದೆಯೆಂದರೆ, ಕಣ್ಣಿದ್ದವರಿಗೆ ಇನ್ನೂ ಕತ್ತಲೆಯಿರುವುದು ತಿಳಿಯುತ್ತದೆ.

೧೦. "ಆ ಮನಸ್ಸಿನ ಸ್ವಭಾವವು ಅಷ್ಟೊಂದು ದೋಷಪೂರಿತವಾಗಿದೆ.

೧೧. "ಆದರೆ ಪರಿವ್ರಾಜಕರೆ, ಈ ಸೆರೆಯಾಳುಗಳ ದೃಷ್ಟಾಂತವು ಅದು ಕಾಣುವಷ್ಟು ನಿರಾಶಾದಾಯಕವಾಗಿಲ್ಲ.

೧೨. "ಏಕೆಂದರೆ ಮನುಷ್ಯನಲ್ಲಿ ಸಂಕಲ್ಪ ಎಂಬುದೊಂದಿದೆ. ಆ ಸಂಕಲ್ಪದಲ್ಲಿ ಸರಿಯಾದ ಪ್ರೇರಣೆಗಳು ಹುಟ್ಟಿದರೆ, ಅದು ಚೇತರಿಸಿಕೊಂಡು ಮುಂದೆ ಸಾಗುತ್ತದೆ.

೧೩. "ನಮ್ಮ ಸಂಕಲ್ಪದಲ್ಲಿ ಹುಟ್ಟಿದ ಪ್ರೇರಣೆಗಳನ್ನು ಯಾವ ದಿಕ್ಕಿನಲ್ಲಿ ನಡೆಸಿಕೊಂಡು ಹೋಗಬೇಕೆಂಬಷ್ಟು ಬೆಳಕು ಬಂದಾಗ, ಮನುಷ್ಯ ಅವುಗಳನ್ನು ಸರಿಯಾದ ದಿಕ್ಕಿನಲ್ಲಿ ನಡೆಸಿಕೊಂಡು ಹೋಗಿ, ಸ್ವಾತಂತ್ರ್ಯವನ್ನೂ ಪಡೆಯಬಲ್ಲನು.

೧೪. "ಹೀಗೆ ಮನುಷ್ಯ ಬಂದಿಯಾಗಿದ್ದರೂ, ಸ್ವತಂತ್ರನೂ ಆಗಿರಬಾರದು. ಕೊನೆಗೆ ಅವನನ್ನು ಸ್ವಾತಂತ್ರ್ಯದೆಡೆಗೆ ಕರೆದೊಯ್ಯುವಂತಹ ಮೊದಲ ಹೆಜ್ಜೆಯನ್ನು ಅವನು ಯಾವಾಗಬೇಕಾದರೂ ಇಡಬಹುದು.

೧೫. "ಏಕೆಂದರೆ, ಮನುಷ್ಯನ ಮನಸ್ಸನ್ನು ಯಾವ ದಿಕ್ಕಿನಲ್ಲಿ ಬೇಕಾದರೂ ಚಲಿಸುವಂತೆ ಅದಕ್ಕೆ ಶಿಕ್ಷಣ ಕೊಡಬಹುದು. ಜೀವನವೆಂಬ ಗೃಹದಲ್ಲಿ ಮನಸ್ಸೇ ನಮ್ಮನ್ನು ಕಾರಾಗೃಹವಾಸಿಗಳನ್ನಾಗಿ ಮಾಡಬಲ್ಲದು. ಮನಸ್ಸು ನಮ್ಮನ್ನು ಅಲ್ಲಿಯೇ ಸದಾ ಇರುವಂತೆ ಮಾಡಬಲ್ಲುದು.

೧೬. "ಆದರೆ ಯಾವುದನ್ನು ಮನಸ್ಸು ಮಾಡುತ್ತದೆಯೋ, ಮನಸ್ಸೇ ಅದನ್ನು ಅಳಿಸಲೂಬಹುದು. ಮನಸ್ಸು ಮನುಷ್ಯನಿಗೆ ದುಃಖವನ್ನು ತಂದಿರುವಂತೆ, ಸರಿಯಾದ ಶಿಕ್ಷಣ ಪಡೆದ ಮನಸ್ಸು ಅವನಿಗೆ ಸ್ವಾತಂತ್ರ್ಯವನ್ನು ತರಬಲ್ಲದು.

೧೭. "ಇದೇ ಸಮ್ಮಾ ದಿಟ್ಟಿಯು ಮಾಡುವ ಕೆಲಸ."

೧೮. ಆಗ ಪರಿವ್ರಾಜಕರು "ಸಮ್ಮಾ ದಿಟ್ಟಿಯ ಗುರಿಯೇನು?" ಎಂದು ಕೇಳಿದರು. ಇದಕ್ಕೆ ಉತ್ತರವಾಗಿ ಬುದ್ಧನು "ಅವಿಜ್ಜೆ(ಅವಿದ್ಯೆ)ಯ ನಾಶವೇ ಸಮ್ಮಾ ದಿಟ್ಟಿಯ ಗುರಿ. ಅದು ಮಿಚ್ಛಾ ದಿಟ್ಟಿ(ಮಿಥ್ಯಾ ದೃಷ್ಟಿ)ಗೆ ವಿರುದ್ಧವಾದುದು."

೧೯. "ಅವಿಜ್ಜೆಯೆಂದರೆ – ಉದಾತ್ತ ಸತ್ಯಗಳನ್ನು, ದುಃಖದ ಇರುವಿಕೆಯನ್ನೂ ಮತ್ತು ದುಃಖ ನಿವಾರಣೆಯನ್ನೂ ಅರಿಯಲು ವಿಫಲವಾಗುವುದು.

೨೦. "ಯಜ್ಞಯಾಗಾದಿಗಳು ಫಲಕಾರಿಯೆಂಬ ನಂಬಿಕೆಯನ್ನು ತೊರೆಯುವುದು, ಶಾಸ್ತ್ರಗಳು ಪವಿತ್ರವೆಂಬುದರಲ್ಲಿ ಅಪನಂಬಿಕೆ ಸಮ್ಮಾ ದಿಟ್ಟಿಗೆ ಆವಶ್ಯಕ.

೨೧. "ಮೂಢ ನಂಬಿಕೆಗಳನ್ನು ಅತಿಮಾನುಷ ವಾದವನ್ನೂ ತೊರೆಯುವುದು ಸಮ್ಮಾ ದಿಟ್ಟಿಗೆ ಆವಶ್ಯಕ.

೨೨. "ವಾಸ್ತವ ಅಥವಾ ಅನುಭವದ ಆಧಾರವಿಲ್ಲದ ಕೇವಲ ಊಹೆಗಳ ಮೇಲೆ ಎಲ್ಲ ಸಿದ್ಧಾಂತಗಳನ್ನು ತ್ಯಜಿಸುವುದು ಸಮ್ಮಾ ದಿಟ್ಟಿಗೆ ಆವಶ್ಯಕ.

೨೩. "ಸಮ್ಮಾ ದಿಟ್ಟಿಗೆ ಬೇಕಾದುದು ಮುಕ್ತ ಮನಸ್ಸು, ಮುಕ್ತ ಆಲೋಚನೆ.

೨೪. "ಪ್ರತಿಯೊಬ್ಬ ಮನುಷ್ಯನಿಗೂ ಧ್ಯೇಯಗಳೂ ಆಸೆ–ಆಕಾಂಕ್ಷೆಗಳೂ ಇರುತ್ತವೆ. ಸಮ್ಮಾ ಸಂಕಪ್ಪೋ (ಸಮ್ಯಗ್ ಸಂಕಲ್ಪ), ಅಂಥ ಧ್ಯೇಯ, ಆಸೆ–ಆಕಾಂಕ್ಷೆಗಳು ಮಹತ್ತರವೂ ಶ್ಲಾಘನೀಯವೂ ಆಗಿರಬೇಕಲ್ಲದೆ, ಕೀಳೂ ಹಾಗೂ ಅಯೋಗ್ಯವೂ ಆಗಿರಬಾರದೆಂದು ಬೋಧಿಸುತ್ತದೆ.

೨೫. "ಸಮ್ಮಾ ವಾಚ (ಸಮ್ಯಗ್ ವಾಚ) ಹೀಗೆ ಬೋಧಿಸುತ್ತದೆ :
(೧) ಸತ್ಯವಾದುದನ್ನು ಮಾತ್ರ ನುಡಿಯಬೇಕು. (೨) ಅಸತ್ಯವನ್ನು ನುಡಿಯಬಾರದು. (೩) ಬೇರೆಯವರ ಬಗೆಗೆ ಕೆಟ್ಟದ್ದನ್ನು ಆಡಬಾರದು. (೪) ಚಾಡಿ ಹೇಳಬಾರದು. (೫) ಸಹಜೀವಿಗಳಿಗೆ ಕೋಪದ ಭಾಷೆಯನ್ನೂ, ಬೈಗುಳವನ್ನೂ ಉಪಯೋಗಿಸಬಾರದು. (೬) ಎಲ್ಲರೊಡನೆ ಸದ್ಭಾವನೆಯಿಂದ, ದಯೆಯಿಂದ ಮಾತನಾಡಬೇಕು. (೭) ಕಾಡುಹರಟೆ, ಮೂರ್ಖತನದ ಭಾಷೆಯಲ್ಲಿ ನಿರತನಾಗಬಾರದು, ಅರ್ಥಪೂರ್ಣವೂ ಉದ್ದೇಶಪೂರಿತವೂ ಆದ ಮಾತನಾಡಬೇಕು.

೨೬. "ಸಮ್ಯಗ್ ವಾಚದ ಆಚರಣೆಯು ಭಯ ಅಥವಾ ಪಕ್ಷಪಾತದ ಫಲವಾಗಿರಬಾರದು. ತನಗಿಂತ ಉತ್ತಮರು ಏನೆಂದುಕೊಳ್ಳುವರೋ ಎಂದಾಗಲಿ ಅದರಿಂದುಂಟಾಗುವ ನಷ್ಟದ ಬಗೆಗಾಗಲೀ ಚಿಂತಿಸಬಾರದು.

೨೭. "ಸಮ್ಯಗ್ ವಾಚವು ಉತ್ತಮರ ಆಜ್ಞೆಯಾಗಲೀ, ಅದರಿಂದ ಉಂಟಾಗುವ ವೈಯಕ್ತಿಕ ಲಾಭಕ್ಕಾಗಲಿ ಆಗಿರಬಾರದು.

೨೮. "ಸಮ್ಮಾ ಕಮ್ಮಾಂತೊ (ಸಮ್ಯಗ್ ಕರ್ಮಾಂತ) ನಮಗೆ ಸದ್ವರ್ತನೆಯನ್ನು ಕಲಿಸುತ್ತದೆ. ನಮ್ಮ ಎಲ್ಲ ಕ್ರಿಯೆಗಳೂ ಬೇರೆಯವರ ಭಾವನೆಗಳಿಗೂ ಹಕ್ಕುಗಳಿಗೂ ನಾವು ಗೌರವ ತೋರಿಸಬೇಕು ಎಂಬ ತತ್ತ್ವದ ಮೇಲೆ ನಿಂತಿವೆ ಎಂಬುದನ್ನು ಅದು ಬೋಧಿಸುತ್ತದೆ.

೨೯. "ಸಮ್ಮಾ ಕಮ್ಮಾಂತೋದ ಮಾನದಂಡ ಯಾವುದು? ಯಾವ ವರ್ತನಾ ಮಾರ್ಗವು ಅಸ್ತಿತ್ವದ ಮೂಲ ನಿಯಮಗಳಿಗನುಗುಣವಾಗಿದೆಯೋ ಅದೇ ಅದರ ಮಾನದಂಡ.

೩೦. "ಒಬ್ಬ ವ್ಯಕ್ತಿಯ ಕ್ರಿಯೆಗಳು ಆ ನಿಯಮಗಳಿಗನುಗುಣವಾಗಿದ್ದರೆ, ಅವು ಸಮ್ಮಾ ಕಮ್ಮಾಂತೋ ನಿಯಮಗಳಿಗನುಗುಣವಾಗಿವೆ ಎಂದರ್ಥ.

೩೧. "ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅನ್ನವನ್ನು ತಾನೇ ದುಡಿಯಬೇಕು. ಆದರೆ ಅನ್ನವನ್ನು ದುಡಿಯಲು ಅನೇಕ ಮಾರ್ಗಗಳಿವೆ. ಅದರಲ್ಲಿ ಕೆಲವು ಸನ್ಮಾರ್ಗಗಳು, ಮತ್ತೆ ಕೆಲವು ದುರ್ಮಾರ್ಗಗಳು. ಬೇರೆಯವರಿಗೆ ಹಿಂಸೆ ಅಥವಾ ಅನ್ಯಾಯ ಮಾಡದೆ ದುಡಿಯುವ ಮಾರ್ಗಗಳು ಸನ್ಮಾರ್ಗಗಳು. ಇದು ಸಮ್ಮಾ ಆಜೀವೊ (ಸಮ್ಯಗ್ ಆಜೀವ).

೩೨. "ಸಮ್ಮಾ ವ್ಯಾಯಾಮೋ (ಸಮ್ಯಗ್ ವ್ಯಾಯಾಮ = ಸರಿಯಾದ ಪ್ರಯತ್ನ) ಎಂದರೆ ಅವಿಜ್ಜೆಯನ್ನು ನಿವಾರಿಸಲು ಮೊದಲ ಪ್ರಯತ್ನ; ನೋವಿನ ಈ ಕಾರಾಗೃಹವನ್ನು ತೆರೆದು ಹೊರಹೋಗಲು ಅದರ ಬಾಗಿಲ ಬಳಿಗೆ ಹೋಗುವುದು.

೩೩. "ಸಮ್ಯಗ್ ವ್ಯಾಯಾಮಕ್ಕೆ ನಾಲ್ಕು ಉದ್ದೇಶಗಳಿವೆ.

೩೪. "ಅಷ್ಟಾಂಗ ಮಾರ್ಗಕ್ಕೆ ವಿರೋಧಿಯಾದ ಮನೋಸ್ಥಿತಿಗಳನ್ನು ತಡೆಗಟ್ಟುವುದು ಮೊದಲನೆಯದು.

೩೫. "ಈಗಾಗಲೇ ಅಂಥ ಮನೋಸ್ಥಿತಿಗಳಿದ್ದರೆ, ಅವುಗಳನ್ನು ದಮನ ಮಾಡುವುದು ಎರಡನೆಯದು.

೩೬. "ಅಷ್ಟಾಂಗ ಮಾರ್ಗದ ನಿಯಮಗಳನ್ನು ಪೂರೈಸಲು ಸಹಾಯಕವಾಗುವಂತಹ ಮನೋಸ್ಥಿತಿಗಳನ್ನು ಹೊಂದುವಂತೆ ಮಾಡುವುದು ಮೂರನೆಯದು.

೩೭. "ಅಂಥ ಸ್ಥಿತಿಗಳು ಈ ಮೊದಲೇ ಇದ್ದರೆ, ಅಂಥವುಗಳನ್ನು ಮತ್ತಷ್ಟು ಬೆಳೆಸುವುದು ಮತ್ತು ಹೆಚ್ಚಿಸುವುದು ನಾಲ್ಕನೆಯದು.

೩೮. "ಸಮ್ಮಾ ಸತ್ತಿಯೆಂದರೆ ಸಾವಧಾನತೆ ಮತ್ತು ವಿಚಾರಪರತೆ ಎಂದರೆ ಮನಸ್ಸು ಸದಾ ಜಾಗೃತರಾಗಿರುವುದು ಕೀಳು ಆಸೆಗಳ ಬಗ್ಗೆ ಜಾಗರೂಕತೆಯಿಂದ ಇರುವುದಕ್ಕೆ ಸಮ್ಮಾ ಸತ್ತಿ ಎಂಬುದು ಮತ್ತೊಂದು ಹೆಸರು.

೩೯. "ಎಲೈ ಪರಿವ್ರಾಜಕರೆ, ಸಮ್ಮಾ ದಿಟ್ಟಿ, ಸಮ್ಮಾ ಸಂಕಪ್ಪೋ, ಸಮ್ಮಾ ವಾಚ, ಸಮ್ಮಾ ಕಮ್ಮಾಂತೋ, ಸಮ್ಮಾ ಆಜೀವೋ, ಸಮ್ಮಾ ವ್ಯಾಯಮೋ ಮತ್ತು ಸಮ್ಮಾ ಸತ್ತಿ – ಇವುಗಳನ್ನು ಸಾಧಿಸುವ ದಾರಿಯಲ್ಲಿ ಬರುವ ಐದು ಸಂಕೋಲೆಗಳು ಅಥವಾ ಅಡ್ಡಿ–ಆತಂಕಗಳಿರುತ್ತವೆ.

೪೦. "ಈ ಐದು ಅಡ್ಡಿಗಳೆಂದರೆ – ಲೋಭ, ದುಷ್ಟಸಂಕಲ್ಪ, ಆಲಸ್ಯ ಮತ್ತು ಜಡತೆ, ಸಂಶಯ ಮತ್ತು ಅನಿಶ್ಚಿತತೆ. ಆದುದರಿಂದ ಈ ಅಡ್ಡಿ ಆತಂಕಗಳು ನಿಜಕ್ಕೂ ಒಂದು ರೀತಿಯ ಸಂಕೋಲೆಗಳಾಗಿದ್ದು, ಇವುಗಳನ್ನು ನಾವು ಜಯಿಸಬೇಕು. ಅವುಗಳನ್ನು ಗೆಲ್ಲಲು ಇರುವ ಮಾರ್ಗವೆಂದರೆ ಸಮಾಧಿ. ಪರಿವ್ರಾಜಕರೇ, ಸಮ್ಮಾ ಸಮಾಧಿಯೆಂದರೆ, ಸಮಾಧಿಯಲ್ಲ ನೆನಪಿರಲಿ. ಅದೇ ಸಂಪೂರ್ಣವಾಗಿ ಬೇರೆಯಾದುದು.

೪೧. "ಸಮಾಧಿ ಎಂದರೆ ಕೇವಲ ಮನಸ್ಸಿನ ಏಕಾಗ್ರತೆ. ಅದೂ ಸಹ ಈ ಐದು ಅಡ್ಡಿಗಳನ್ನು ತಡೆಹಿಡಿಯುವ ಸ್ವಪ್ರಚೋದಿತ ಧ್ಯಾನ ಸ್ಥಿತಿಗೆ ನಮ್ಮನ್ನು ಒಯ್ಯುತ್ತದೆ, ಎಂಬುದೇನೋ ನಿಜ.

೪೨. "ಆದರೆ ಈ ಧ್ಯಾನ ಸ್ಥಿತಿಯು ತಾತ್ಕಾಲಿಕ. ಆದ್ದರಿಂದ ಅಡ್ಡಿಗಳನ್ನು ತಡೆಹಿಡಿಯುವುದೂ ಸಹ ತಾತ್ಕಾಲಿಕವೇ. ನಮಗೆ ಬೇಕಾಗಿರುವುದು ಮನಸ್ಸಿನ ಕಡೆಗೆ ನಾವು ಶಾಶ್ವತವಾಗಿ ತಿರುಗುವುದು. ಅಂತಹ ಶಾಶ್ವತ ಮಾನಸಿಕ ಸ್ಥಿತಿ ಸಮ್ಮಾ ಸಮಾಧಿಯಿಂದ ಮಾತ್ರ ಸಾಧ್ಯ.

೪೩. "ಅಡ್ಡಿಗಳನ್ನು ತಾತ್ಕಾಲಿಕವಾಗಿ ಶಮನ ಮಾಡುವುದರಿಂದ ಬರಿ ಸಮಾಧಿಯು ಅಭಾವಾತ್ಮಕ (negative) ಎನಿಸಿಕೊಳ್ಳುತ್ತದೆ. ಅದು ಮಾನಸಿಕ ಶಿಕ್ಷಣವನ್ನು ಒಳಗೊಂಡಿಲ್ಲ. ಆದರೆ ಸಮ್ಮಾ ಸಮಾಧಿಯು ಭಾವಾತ್ಮಕ (Postive). ಅದು ಮನಸ್ಸಿಗೆ ಶಿಕ್ಷಣ ಕೊಟ್ಟು ಏಕಾಗ್ರತೆಯನ್ನು ಕಲಿಸಿಕೊಡುತ್ತದೆ ಹಾಗೂ

ಈ ಏಕಾಗ್ರತೆಯ ಸಮಯದಲ್ಲಿ ಅದು ಒಳ್ಳೆಯ (ಕುಶಲ) ಕರ್ಮಗಳನ್ನು ಕುರಿತು ಯೋಚಿಸುವಂತೆ ಮಾಡುತ್ತದೆ. ಇದರಿಂದಾಗಿ, ಮನಸ್ಸು ಈ ಅಡ್ಡಿಗಳಿಂದ ಹುಟ್ಟುವ ಅಕುಶಲ ಕಮ್ಮ (ಕೆಟ್ಟ) ಕರ್ಮಗಳನ್ನು ಕುರಿತು ಯೋಚಿಸುವ ಮನಸ್ಸಿನ ಅಭ್ಯಾಸವನ್ನು ನಿರ್ಮೂಲನೆ ಮಾಡುತ್ತದೆ.

೪೪. "ಸಮ್ಮಾ ಸಮಾಧಿಯು ಮನಸ್ಸಿಗೆ ಒಳ್ಳೆಯದನ್ನು ಯೋಚಿಸಲು, ಯಾವಾಗಲೂ ಒಳ್ಳೆಯದನ್ನೇ ಯೋಚಿಸಲು ಕಲಿಸಿಕೊಡುತ್ತದೆ. ಸಮ್ಮಾ ಸಮಾಧಿಯು ಒಳ್ಳೆಯದನ್ನು ಮಾಡಲು ಬೇಕಾದ ಇಚ್ಛಾಶಕ್ತಿಯನ್ನು ಮನಸ್ಸಿಗೆ ಕೊಡುತ್ತದೆ."

## ೫. ಬುದ್ಧನ ಪ್ರಥಮೋಪದೇಶ (ಮುಂದುವರಿದುದು)
## ಸದ್ಗುಣಗಳ ಮಾರ್ಗ

೧. ಅನಂತರ ಬುದ್ಧನು ಪರಿವ್ರಾಜಕರಿಗೆ ಸದ್ಗುಣಗಳ ಮಾರ್ಗವನ್ನು ವಿವರಿಸಿದನು.

೨. ಸದ್ಗುಣಗಳ ಮಾರ್ಗವೆಂದರೆ, ಸದ್ಗುಣಗಳನ್ನು ಕಾರ್ಯಗತ ಮಾಡುವುದು ಎಂದು ಅವನು ಅವರಿಗೆ ತಿಳಿಸಿದನು. ಆ ಸದ್ಗುಣಗಳಾವುವೆಂದರೆ : (೧) ಶೀಲ, (೨) ದಾನ, (೩) ಉಪೇಕ್ಖಾ, (೪) ನಿಕ್ಖಾಮ, (೫) ವೀರ್ಯ, (೬) ಖಾಂತಿ, (೭) ಸಚ್ಚ, (೮) ಅಧಿಥಾನ, (೯) ಕರುಣ, ಮತ್ತು (೧೦) ಮೈತ್ರಿ.

೩. ಈ ಗುಣಗಳ ಅರ್ಥವೇನೆಂದು ಪರಿವ್ರಾಜಕರು ಬುದ್ಧನನ್ನು ಕೇಳಿದರು.

೪. ಬುದ್ಧನು ಅವರ ಆಸೆಯನ್ನು ತೀರಿಸಲು ಮುಂದಾದನು.

೫. "ಶೀಲವೆಂದರೆ ನೈತಿಕ ಭಾವನೆ; ಅಂದರೆ, ಕೆಟ್ಟದ್ದನ್ನು ಮಾಡದಿರಲು ಹಾಗೂ ಒಳ್ಳೆಯದನ್ನು ಮಾಡಲು ಇಷ್ಟಪಡುವುದು; ಕೇಡು ಮಾಡಲು ನಾಚಿಕೆಪಡುವುದು, ಶಿಕ್ಷಾಭಯದಿಂದ ಕೇಡು ಮಾಡದಿರುವುದೇ ಶೀಲ, ಶೀಲವೆಂದರೆ ಕೇಡು ಮಾಡುವುದಕ್ಕೆ ಭಯಪಡುವುದು.

೬. "ನಿಕ್ಖಾಮವೆಂದರೆ ಪ್ರಾಪಂಚಿಕ ಸುಖಗಳನ್ನು ತ್ಯಜಿಸುವುದು.

೭ "ದಾನವೆಂದರೆ, ಬೇರೆಯವರ ಒಳಿತಿಗಾಗಿ ಹಾಗೂ ಯಾವ ಲಾಭದ ಆಸೆಯೂ ಇಲ್ಲದೆ ತನಗೆ ಸೇರಿದುದನ್ನು, ರಕ್ತ, ಅಂಗಗಳು, ಕೊನೆಗೆ ಪ್ರಾಣವನ್ನೂ ದಾನ ಮಾಡುವುದು.

೮. "ವೀರ್ಯವೆಂದರೆ ಸರಿಯಾದ ಪ್ರಯತ್ನ. ನಾವು ಯಾವುದನ್ನು ಮಾಡಬೇಕೆಂದು ನಿರ್ಧರಿಸಿದ್ದೇವೆಯೋ ಅದನ್ನು ಹಿಂದಿರುಗಿ ನೋಡದೆ, ಶಕ್ತಿಪೂರ್ವಕವಾಗಿ ಮಾಡುವುದು.

೯. "ಖಾಂತಿಯೆಂದರೆ, ಸಹನೆ. ದ್ವೇಷವನ್ನು ದ್ವೇಷದಿಂದಲೇ ಎದುರಿಸದಿರುವುದೇ ಅದರ ಸತ್. ಏಕೆಂದರೆ ದ್ವೇಷವನ್ನು ದ್ವೇಷದಿಂದ ತಣಿಸಲು ಬರುವುದಿಲ್ಲ. ಅದನ್ನು ಸಹನೆಯಿಂದ ಮಾತ್ರ ತಣಿಸಬಹುದು.

೧೦. "ಸಚ್ಚ ಎಂದರೆ ಸತ್ಯ. ನಾವು ಎಂದೂ ಸುಳ್ಳು ಹೇಳಬಾರದು. ನಮ್ಮ ಮಾತು ಸತ್ಯವಾಗಿರಬೇಕು. ಸತ್ಯವಲ್ಲದೆ ಮತ್ತೇನೂ ಆಗಿರಬಾರದು.

೧೧. "ಅಧಿಥಾನವೆಂದರೆ ಗುರಿ ಮುಟ್ಟಲೇಬೇಕೆಂಬ ದೃಢ ಪ್ರತಿಜ್ಞೆ.

೧೨. "ಕರುಣವೆಂದರೆ, ಮಾನವರಿಗೆ ತೋರಿಸಬೇಕಾದ ಪ್ರೀತಿಪೂರ್ವಕ ಕರುಣೆ.

೧೩. "ಮೈತ್ರಿಯೆಂದರೆ, ಎಲ್ಲರಿಗೂ ಸಹಭಾವನೆಯನ್ನು ವಿಸ್ತರಿಸುವುದು–ಕೇವಲ ಮಿತ್ರರಿಗಷ್ಟೇ ಅಲ್ಲ, ವೈರಿಗಳಿಗೂ ಸಹ, ಮಾನವರಿಗಷ್ಟೇ ಅಲ್ಲ, ಎಲ್ಲ ಜೀವಿಗಳಿಗೂ.

೧೪. "ಉಪೇಕ್ಷಾ ಎಂದರೆ ನಿರ್ಲಕ್ಷ್ಯವಲ್ಲ, ನಿರ್ಮೋಹ. ಅದೊಂದು ಇಚ್ಛೆ ದ್ವೇಷಗಳಿಲ್ಲದ ಮಾನಸಿಕ ಸ್ಥಿತಿ, ಫಲವೇನೇ ಬರಲಿ, ಧೃತಿಗೆಡದೆ, ಕೆಲಸದಲ್ಲಿ ನಿರತನಾಗಿರುವುದು.

೧೫. "ಈ ಸದ್ಗುಣಗಳನ್ನು ವ್ಯಕ್ತಿಯು ತನ್ನ ಪೂರ್ಣಶಕ್ತಿಯನ್ನು ಬಳಸಿಕೊಂಡು ಪಾಲಿಸಬೇಕು. ಅದಕ್ಕೇ ಅವುಗಳಿಗೆ ಪಾರಮಿತ (ಪರಿಪೂರ್ಣ ಸ್ಥಿತಿ)ಗಳೆಂದು ಹೆಸರು."

## ೬. ಬುದ್ಧನ ಪ್ರಥಮೋಪದೇಶ (ಮುಕ್ತಾಯ)

೧. ಧಮ್ಮ(ಧರ್ಮ)ವನ್ನು ಅದು ಏನೇನನ್ನು ಒಳಗೊಳ್ಳುತ್ತದೆ ಎಂಬುದನ್ನು ವಿವರಿಸಿದ ಬುದ್ಧನು ಪರಿವ್ರಾಜಕರನ್ನು ಕೇಳಿದ:

೨. "ನಮ್ಮ ವೈಯಕ್ತಿಕ ಶುದ್ಧತೆ ಪ್ರಪಂಚದ ಒಳಿತಿಗೆ ಬುನಾದಿಯಲ್ಲವೆ?" ಅದಕ್ಕೆ ಅವರು "ನೀವು ಹೇಳುವುದು ಸರಿ" ಎಂದರು.

೩. ಆಗ ಅವನು ಮುಂದುವರಿದು ಹೇಳಿದನು: "ನಮ್ಮ ವೈಯಕ್ತಿಕ ಶುದ್ಧತೆಯು ಲೋಭ, ಮೋಹ, ಅಜ್ಞಾನ, ಜೀವನಾಶ, ಕಳ್ಳತನ, ಹಾದರ ಮತ್ತು ಅಸತ್ಯಗಳಿಂದ ಕಡಿಮೆಯಾಗುವುದಿಲ್ಲವೆ? ಈ ಕೇಡುಗಳನ್ನು ನಿಯಂತ್ರಣದಲ್ಲಿಡಬೇಕಾದರೆ, ವೈಯಕ್ತಿಕ ಶುದ್ಧತೆಯು ತನ್ನ ಬಲವನ್ನು ವರ್ಧಿಸಿಕೊಳ್ಳಬೇಕಾದುದು ಅಗತ್ಯವಲ್ಲವೇ? ಒಬ್ಬ ವ್ಯಕ್ತಿಗೆ ವೈಯಕ್ತಿಕ ಶುದ್ಧತೆಯೇ ಇಲ್ಲದಿದ್ದರೆ, ಅವನು ಒಳಿತಿನ ಸಾಧನ ಹೇಗಾಗಬಲ್ಲ?". ಅದಕ್ಕೆ ಅವರು "ನೀವು ಹೇಳುವುದು ದಿಟ" ಎಂದರು.

೪. "ಇತರರನ್ನು ಗುಲಾಮರನ್ನಾಗಿಸಲು ಅಥವಾ ಅವರ ಮೇಲೆ ಪ್ರಭುತ್ವ ಸಾರುವುದಕ್ಕಾಗಲಿ ಬೇರೆಯವರು ಜೀವನವನ್ನು ದುಃಖಮಯವನ್ನಾಗಿ ಮಾಡುವ ಬಗ್ಗೆ ಏಕೆ ಯೋಚಿಸುವುದಿಲ್ಲ? ಪರಸ್ಪರರೊಂದಿಗೆ ವರ್ತಿಸುವ ಸರಿಯಾದ ರೀತಿ ಅವರಿಗೆ ಗೊತ್ತಿಲ್ಲವಾದುದರಿಂದಲೆ ಅಲ್ಲವೇ?" ಇವೆಲ್ಲದಕ್ಕೂ ಅವರು ಹೌದೆಂದರು.

೫. "ಸರಿಯಾದ ದೃಷ್ಟಿ, ಸರಿಯಾದ ಧ್ಯೇಯ, ಸರಿಯಾದ ಮಾತು, ಸರಿಯಾದ ದುಡಿಮೆ, ಸರಿಯಾದ ಮಾರ್ಗ, ಸರಿಯಾದ ಆಸಕ್ತಿ, ಸರಿಯಾದ ಪ್ರಯತ್ನ, ಸರಿಯಾದ ಸಾವಧಾನತೆ – ಇವುಗಳನ್ನು ಸಂಕ್ಷೇಪವಾಗಿ ಹೇಳಬೇಕೆಂದರೆ, ಅಷ್ಟಾಂಗ ಮಾರ್ಗವನ್ನು ಪ್ರತಿಯೊಬ್ಬನೂ ಅನುಸರಿಸುವ ಮೂಲಕ, ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯ, ತೋರಿಸುವ ಅಮಾನುಷತೆಗಳನ್ನು ನಿವಾರಿಸಲು ಸಾಧ್ಯವಿಲ್ಲವೆ?" ಇದಕ್ಕೆ ಅವರೆಲ್ಲರೂ ಹೌದು ಎಂದರು.

೬. "ನಿರ್ಗತಿಕರ ಹಾಗೂ ಬಡವರ ದುಃಖವನ್ನು ನಿವಾರಿಸಲು ಮತ್ತು ಸರ್ವಜನರ ಹಿತವನ್ನು ವೃದ್ಧಿಸಲು ದಾನ ಮಾಡುವುದು ಅವಶ್ಯಕವಲ್ಲವೆ? ಬಡತನ ಮತ್ತು ನೋವು – ಅವು ಎಲ್ಲೇ ಇರಲಿ – ಅವುಗಳನ್ನು ಶಮನಗೊಳಿಸಲು ಕರುಣೆಯನ್ನು ತೋರಿಸುವುದು ಆವಶ್ಯಕವಲ್ಲವೆ? ನಿಷ್ಕಾಮ ಕರ್ಮಕ್ಕೆ ನಿಕ್ಕಾಮ ಆವಶ್ಯಕವಲ್ಲವೆ? ವೈಯಕ್ತಿಕ ಲಾಭವಿಲ್ಲದಿದ್ದರೂ, ಧೃತಿಗೆಡದ ಪ್ರಯತ್ನ ಮಾಡಬೇಕಾದರೆ, ಉಪೇಕ್ಷೆ ಆವಶ್ಯಕವಲ್ಲವೆ?" ಎಂದು ಸನ್ಮಾರ್ಗದ ಬಗ್ಗೆ ಹೇಳುತ್ತಾ ಪ್ರಶ್ನಿಸಿದನು.

೭. "ಮನುಷ್ಯನಿಗೆ ಪ್ರೀತಿ ಅಗತ್ಯವಲ್ಲವೆ?" ಎಂದು ಕೇಳಿದ್ದಕ್ಕೆ, ಅವರು ಅದಕ್ಕೆ "ಹೌದು" ಎಂದರು.

೮. "ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಪ್ರೀತಿಯೊಂದೇ ಸಾಲದು, ನಮಗೆ ಬೇಕಾದುದು ಮೈತ್ರಿ. ಅದು ಪ್ರೀತಿಗಿಂತ ಹೆಚ್ಚು ವಿಶಾಲ. ಅದಕ್ಕೆ ಮನುಷ್ಯರೊಂದಿಗೆ ಮಾತ್ರವಲ್ಲ,

ಎಲ್ಲ ಜೀವಿಗಳೊಂದಿಗೂ ಸಹಬಾಳ್ವೆ ಎಂಬರ್ಥವಿದೆ. ಅದು ಮನುಷ್ಯರಿಗಷ್ಟೇ ಸೀಮಿತವಾಗಿಲ್ಲ. ಅಂಥ ಮೈತ್ರಿಯ ಅಗತ್ಯವಿಲ್ಲವೆ? ಇದನ್ನು ಬಿಟ್ಟು, ಎಲ್ಲ ಜೀವಿಗಳಿಗೂ ಸಮಾನ ಸುಖ ಕೊಡಬಲ್ಲಂತಹ, ನಮ್ಮ ಮನಸ್ಸನ್ನು ನಿಷ್ಪಕ್ಷಪಾತಿಯಾಗಿಡಬಲ್ಲಂತಹ, ಎಲ್ಲರಿಗೂ ಮುಕ್ತವಾಗಿರುವ, ಎಲ್ಲರನ್ನೂ ಪ್ರೀತಿಯಿಂದ ಕಾಣುವಂತೆ ಮಾಡುವ ಯಾರನ್ನೂ ದ್ವೇಷಿಸದಂತೆ ಮಾಡುವುದಲ್ಲದೆ ಬೇರೇನಿದೆ?"

೯. ಅವರೆಲ್ಲರೂ "ಹೌದು" ಎಂದರು.

೧೦. "ಈ ಎಲ್ಲ ಸದ್ಗುಣಗಳ ಆಚರಣೆಯ ಜೊತೆಗೆ 'ಪ್ರಜ್ಞೆ'ಯೂ ಬೇಕು.

೧೧. "ಪ್ರಜ್ಞೆ ಆವಶ್ಯಕವಲ್ಲವೆ?" ಎಂದು ಕೇಳಿದ್ದಕ್ಕೆ ಪರಿವ್ರಾಜಕರು ಉತ್ತರ ಕೊಡಲಿಲ್ಲ. ಅದಕ್ಕೆ ಉತ್ತರ ಕೊಡುವಂತೆ ಮಾಡಲು ಬುದ್ಧನು ಸದ್ಗುಣಿಯ ಗುಣಗಳಿವು ಎಂದು ತಿಳಿಸಿದನು: "ಕೆಟ್ಟದನ್ನು ಮಾಡಬಾರದು, ಕೆಟ್ಟದ್ದನ್ನು ಯೋಚಿಸಬಾರದು, ಕೆಟ್ಟ ರೀತಿಯಲ್ಲಿ ಗಳಿಸಬಾರದು, ಕೆಟ್ಟದ್ದನ್ನು ಅಥವಾ ಬೇರೆಯವರಿಗೆ ಹಿಂಸೆಯಾಗುವುದನ್ನು ಹೇಳಬಾರದು". ಅವರು ಅದಕ್ಕೆ "ಅದು ಸತ್ಯ" ಎಂದರು.

೧೨. "ಆದರೆ ಕಣ್ಣುಮುಚ್ಚಿಕೊಂಡು ಒಳ್ಳೆಯದು ಮಾಡಿರುವುದನ್ನೂ ಸ್ವಾಗತಿಸಬೇಕೆ?" ಎಂದು ಕೇಳಿದ ಬುದ್ಧ. "ನಾನು ಇಲ್ಲ, ಎನ್ನುತ್ತೇನೆ. ಇದು ಸಾಲದು" ಎಂದು ಪರಿವ್ರಾಜಕರಿಗೆ ಹೇಳಿದ. "ಇಷ್ಟೇ ಸಾಕಿದ್ದರೆ ಒಂದು ಸಣ್ಣ ಮಗು ಯಾವಾಗಲೂ ಒಳ್ಳೆಯದನ್ನು ಮಾಡುತ್ತಿರುತ್ತದೆ ಎಂದು ಘೋಷಿಸಬಹುದು. ಏಕೆಂದರೆ ಮಗುವಿಗೆ ದೇಹವೆಂದರೇನೆಂಬುದೇ ಗೊತ್ತಿಲ್ಲ. ತನ್ನ ಕೈಕಾಲುಗಳಿಂದ ಒದೆಯುವುದನ್ನು ಬಿಟ್ಟು ಮತ್ತಾವ ಕೇಡನ್ನು ಮಾಡಲಂತೂ ಸಾಧ್ಯವಿಲ್ಲ. ಅದಕ್ಕೆ ಮಾತೆಂಬುದೇ ಗೊತ್ತಿಲ್ಲ. ಅಳುವುದನ್ನು ಬಿಟ್ಟರೆ, ಯಾವ ಕೆಟ್ಟ ಮಾತು ಆಡುವುದಂತೂ ಗೊತ್ತೇ ಇಲ್ಲ. ಸಂತೋಷದಿಂದ ಕೂಗುವುದನ್ನು ಬಿಟ್ಟರೆ, ಅದಕ್ಕೆ ಯಾವ ಯೋಚನೆಯೂ ಇಲ್ಲ, ಅದಕ್ಕೆ ದುಡಿಮೆಯೆಂದರೇನು ಗೊತ್ತಿಲ್ಲ. ತಾಯಿಯ ಹಾಲುಕುಡಿಯುವುದನ್ನು ಬಿಟ್ಟರೆ, ಕೆಟ್ಟ ರೀತಿಯಲ್ಲಿ ದುಡಿಯುವುದಂತೂ ಗೊತ್ತೇ ಇಲ್ಲ.

೧೩. "ಆದುದರಿಂದ ಸದ್ಗುಣದ ಮಾರ್ಗವನ್ನು ವಿವೇಕ ಅಥವಾ ಬುದ್ಧಿವಂತಿಕೆಗೆ ಮತ್ತೊಂದು ಹೆಸರಾದ ಪ್ರಜ್ಞೆಯ ಪರೀಕ್ಷೆಗೊಳಪಡಿಸಬೇಕು.

೧೪. "ಪ್ರಜ್ಞಾಪಾರಮಿತ ಏಕೆ ಮುಖ್ಯ ಮತ್ತು ಅಗತ್ಯ ಎಂಬುದಕ್ಕೆ ಮತ್ತೊಂದು ಕಾರಣವೂ ಉಂಟು. ದಾನವೂ ಇರಬೇಕು. ಆದರೆ ಪ್ರಜ್ಞೆಯಿಲ್ಲದಿದ್ದರೆ, ದಾನವು ನಮ್ಮನ್ನು ಎದೆಗುಂದಿಸುತ್ತದೆ. ಕರುಣೆಯೂ ಇರಬೇಕು. ಆದರೆ ಪ್ರಜ್ಞೆಯಿಲ್ಲದಿದ್ದರೆ, ಕರುಣೆಯು ಕೇಡಿಗೆ ಪ್ರೋತ್ಸಾಹ ಕೊಡುವಂತಾದೀತು. ಪಾರಮಿತಾದ ಪ್ರತಿಯೊಂದು ಕಾರ್ಯವೂ ವಿವೇಕಕ್ಕೆ ಹೆಸರಾದ ಪ್ರಜ್ಞಾಪಾರಮಿತಾದಿಂದ ಪರೀಕ್ಷಿಸಲ್ಪಡಬೇಕು.

೧೫. "ದುರ್ನಡತೆಯೆಂದರೇನು, ಅದು ಹೇಗೆ ಹುಟ್ಟುತ್ತದೆ, ಎಂಬುದರ ಜ್ಞಾನ ಮತ್ತು ಪ್ರಜ್ಞೆ ಇರಬೇಕು. ದುರ್ನಡತೆಯೆಂದರೇನು? ಸನ್ನಡತೆಯೆಂದರೇನು? ಎಂಬುದರ ಜ್ಞಾನ ಮತ್ತು ಪ್ರಜ್ಞೆ ಇರಬೇಕು. ಅಂತಹ ಜ್ಞಾನವಿಲ್ಲದೆ, ನಾವು ಮಾಡುವ ಕಾರ್ಯ ಒಳ್ಳೆಯದಿದ್ದರೂ, ನಿಜವಾದ ಒಳ್ಳೆಯತನ ಇರಲು ಸಾಧ್ಯವಿಲ್ಲ. ಅದಕ್ಕೆ ನಾನು ಹೇಳುವುದು ಪ್ರಜ್ಞೆಯು ಆವಶ್ಯಕ ಸದ್ಗುಣ ಎಂದು."

೧೬. ಪರಿವ್ರಾಜಕರಿಗೆ ಈ ಕೆಳಗಿನ ಎಚ್ಚರಿಕೆಯನ್ನು ಕೊಟ್ಟು, ಬುದ್ಧನು ತನ್ನ ಉಪದೇಶವನ್ನು ಮುಗಿಸಿದನು.

೧೭. "ನೀವು ನನ್ನ ಧಮ್ಮವನ್ನು ನಿರಾಶವಾದ ಎಂದು ಕರೆಯುವ ಸಾಧ್ಯತೆಯಿದೆ, ಏಕೆಂದರೆ ಅದು

ದುಃಖದ ಇರುವಿಕೆಯ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತದೆ. ಆದರೆ ನನ್ನ ಧಮ್ಮದ ಬಗೆಗಿನ ಅಂಥ ಅಭಿಪ್ರಾಯ ತಪ್ಪು ಎಂದು ನಾನು ಹೇಳುತ್ತೇನೆ.

೧೮. "ನನ್ನ ಧಮ್ಮ ದುಃಖದ ಇರವನ್ನೇನೋ ಗುರುತಿಸುತ್ತದೆ. ಆದರೆ ಅದು ದುಃಖ ನಿವಾರಣೆಗೆ ಹೆಚ್ಚು ಒತ್ತುಕೊಡುತ್ತದೆ ಎಂಬ ಮಾತನ್ನು ಮರೆಯಬೇಡಿ.

೧೯. "ನನ್ನ ಧಮ್ಮಕ್ಕೆ ಭರವಸೆ ಮತ್ತು ಧ್ಯೇಯ ಎರಡೂ ಇವೆ.

೨೦. "ಅದರ ಗುರಿ ಅವಿಜ್ಜ (ಅವಿದ್ಯೆ)ವನ್ನು, ನಿವಾರಿಸುವುದು ಎಂದರೆ ದುಃಖವಿದೆ ಎಂಬುದರ ಬಗ್ಗೆ ಗೊತ್ತಿಲ್ಲದಿರುವುದು.

೨೧. "ಅದು ಭರವಸೆಯನ್ನು ಕೊಡುತ್ತದೆ ಏಕೆಂದರೆ, ಮಾನವನ ನೋವುಗಳನ್ನು ಕೊನೆಗಾಣಿಸುವ ಮಾರ್ಗವನ್ನು ಅದು ತೋರಿಸುತ್ತದೆ.

೨೨. "ಇದಕ್ಕೆ ನೀವು ಒಪ್ಪುತ್ತೀರೋ ಇಲ್ಲವೋ?" ಎಂದು ಕೇಳಿದ್ದಕ್ಕೆ, ಪರಿವ್ರಾಜಕರು "ಒಪ್ಪುತ್ತೇವೆ" ಎಂದರು.

## ೭. ಪರಿವ್ರಾಜಕರ ಪ್ರತಿಕ್ರಿಯೆ

೧. ಆ ಐದು ಪರಿವ್ರಾಜಕರಿಗೆ ನಿಜವಾಗಿಯೂ ಇದೊಂದು ಹೊಸ ಧಮ್ಮವೆನಿಸಿತು. ಜೀವನದ ಸಮಸ್ಯೆಗಳಿಗೆ ಬುದ್ಧನು ನೀಡಿದ ಈ ಹೊಸ ದೃಷ್ಟಿಕೋನದಿಂದ ಅವರು ಎಷ್ಟು ಪ್ರಭಾವಿತರಾದರೆಂದರೆ, ಅವರೆಲ್ಲರೂ ಒಮ್ಮತದಿಂದ ಹೇಳಿದರು: "ಪ್ರಪಂಚದ ಇತಿಹಾಸದಲ್ಲಿ ಇದುವರೆಗೂ ಯಾವ ಧರ್ಮ ಸಂಸ್ಥಾಪಕನೂ ಮಾನವನ ದುಃಖವನ್ನು ಗುರುತಿಸುವುದೇ ಧರ್ಮದ ನಿಜವಾದ ತಳಹದಿ ಎಂದು ಹೇಳಿರಲಿಲ್ಲ.

೨. "ವಿಶ್ವದ ಇತಿಹಾಸದಲ್ಲೇ ಯಾವ ಧರ್ಮ ಸಂಸ್ಥಾಪಕನೂ ದುಃಖ ನಿವಾರಣೆಯೇ ಧರ್ಮದ ನಿಜವಾದ ಗುರಿ ಎಂದು ಬೋಧಿಸಿರಲಿಲ್ಲ.

೩. "ವಿಶ್ವದ ಇತಿಹಾಸದಲ್ಲೇ, ಇಷ್ಟು ಸರಳ ರೀತಿಯ, ಅತಿಪ್ರಾಕೃತಿಕ ಮತ್ತು ಅತಿಮಾನುಷ ಕರ್ತೃವಿನಿಂದ ಮುಕ್ತವಾದ, ಆತ್ಮ ಮತ್ತು ಪರಮಾತ್ಮರಲ್ಲಿನ ನಂಬಿಕೆಗಳಿಂದಲೂ ಮರಣೋತ್ತರ ನಂಬಿಕೆಯಿಂದಲೂ ಮುಕ್ತವಾದ ಹಾಗೂ ಅವುಗಳಿಗೆ ವಿರುದ್ಧವಾದ ಮೋಕ್ಷಮಾರ್ಗವನ್ನು ಯಾರೂ ಬೋಧಿಸಿಲ್ಲ.

೪. "ವಿಶ್ವದ ಇತಿಹಾಸದಲ್ಲೇ ಇದುವರೆಗೆ ಯಾರೂ ದಿವ್ಯಜ್ಞಾನವನ್ನೊಳಗೊಳ್ಳದ ಧಾರ್ಮಿಕ ಕಾರ್ಯಕ್ರಮವನ್ನು, ಸಾಮಾಜಿಕ ಅಗತ್ಯಗಳ ಪರೀಕ್ಷೆಯಿಂದ ಹುಟ್ಟಿದ – ಆದರೆ ಪರಮಾತ್ಮನ ಆದೇಶಗಳಲ್ಲದ– ಧರ್ಮವನ್ನು ಬೋಧಿಸಿರಲಿಲ್ಲ.

೫. "ವಿಶ್ವದ ಇತಿಹಾಸದಲ್ಲೇ, ಸ್ವಪ್ರಯತ್ನದಿಂದ ಮಾಡಿದ ಧರ್ಮದ ಮೂಲಕ, ಈ ಜನ್ಮದಲ್ಲೇ ಮತ್ತು ಭೂಮಿಯ ಮೇಲೆಯೇ, ಮೋಕ್ಷವೆಂಬ ಆನಂದವನ್ನು ಗಳಿಸಬಹುದು ಎಂದು ಯಾರೂ ಇದುವರೆಗೂ ಬೋಧಿಸಿರಲಿಲ್ಲ!"

೬. ಹೊಸ ಧಮ್ಮದ ವಿಷಯವಾಗಿ ಬುದ್ಧನ ಉಪದೇಶವನ್ನು ತಿಳಿದುಕೊಂಡ ಪರಿವ್ರಾಜಕರು ವ್ಯಕ್ತಪಡಿಸಿದ ಭಾವನೆಗಳಿವು.

೭. ಅತ್ಯಂತ ನೈತಿಕ ಧ್ಯೇಯವನ್ನುಳ್ಳ ಹಾಗೂ ಆಗಿನ ಕಾಲದಲ್ಲಿನ ಬೌದ್ಧಿಕ ಸಂಸ್ಕೃತಿಯನ್ನು ಅಳವಡಿಸಿಕೊಂಡಿಸಿದ್ದ ಬುದ್ಧನಲ್ಲಿ ಅವರು ಒಬ್ಬ ಸುಧಾರಕನನ್ನು ಕಂಡರು. ಅವನಲ್ಲಿದ್ದ ಸ್ವೋಪಜ್ಞತೆಯನ್ನೂ, ವಿವೇಕಯುತ ಧೈರ್ಯವನ್ನೂ ಕಂಡರು; ಅವನಲ್ಲಿದ್ದ ಸಂಪ್ರದಾಯ ವಿರೋಧೀ

ಜ್ಞಾನವನ್ನೂ, ಇಹದಲ್ಲೇ ಈ ಜನ್ಮದಲ್ಲೇ, ಆತ್ಮಶಿಕ್ಷಣ ಮತ್ತು ಆತ್ಮನಿಯಂತ್ರಣದ ಮೂಲಕ ಹೃದಯದ ಆಂತರಿಕ ಬದಲಾವಣೆ ಮೂಲಕ ಮುಕ್ತಿಯನ್ನು ಗಳಿಸಬಹುದೆಂಬ ಸಿದ್ಧಾಂತವನ್ನು ಮನಗಂಡರು.

೮. ಅವನ ಬಗೆಗೆ ಅವರ ಗೌರವ ಎಷ್ಟು ಅಪಾರವಾಯಿತೆಂದರೆ ಅವರು ತಕ್ಷಣವೇ ಅವನಿಗೆ ಶರಣಾಗತರಾಗಿ ತಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಬೇಕೆಂದು ವಿನಂತಿಸಿಕೊಂಡರು.

೯. ಆಗ ಬುದ್ಧನು "ಎಹಿ ಭಿಕ್ಕುವೆ" ("ಭಿಕ್ಷುಗಳೇ ಒಳಗೆ ಬನ್ನಿ") ಎಂಬ ಮಂತ್ರ ಹೇಳಿ, ಅವರನ್ನು ತನ್ನ ಪಂಥಕ್ಕೆ ಸೇರಿಸಿಕೊಂಡನು. ಅವರಿಗೆ ಪಂಚವರ್ಗೀಯ ಭಿಕ್ಕುಗಳೆಂಬ ಹೆಸರು ಬಂದಿತು.

# ಭಾಗ : ೩
# ಮೇಲ್ವರ್ಗದವರ ಹಾಗೂ ಪೂಜ್ಯರ ಪರಿವರ್ತನೆ

೧. ಯಶಸ್‌ನ ಪರಿವರ್ತನೆ
೨. ಕಶ್ಯಪರ ಪರಿವರ್ತನೆ
೩. ಸಾರಿಪುತ್ರ ಮತ್ತು ಮೌದ್ಗಲಾಯನರ ಪರಿವರ್ತನೆ
೪. ಬಿಂಬಸಾರನ ಪರಿವರ್ತನೆ
೫. ಅನಂತಪಿಂಡಿಕನ ಪರಿವರ್ತನೆ
೬. ದೊರೆ ಪ್ರಸೇನಜಿತನ ಪರಿವರ್ತನೆ
೭. ಜೀವಕನ ಪರಿವರ್ತನೆ
೮. ರಾಷ್ಟ್ರಪಾಲನ ಪರಿವರ್ತನೆ

## ೧. ಯಶಸ್‌ನ ಪರಿವರ್ತನೆ

೧. ಬನಾರಸ್ ಪಟ್ಟಣದಲ್ಲಿ ಗಣ್ಯ ವ್ಯಕ್ತಿಯೊಬ್ಬನಿಗೆ ಯಶಸ್ ಎಂಬ ಮಗನಿದ್ದನು. ಅವನು ವಯಸ್ಸಿನಲ್ಲಿ ಚಿಕ್ಕವನೂ, ನೋಡಲು ಅಂದವಾಗಿಯೂ ಇದ್ದನು. ತಂದೆತಾಯಿಗಳಿಗೆ ಮುದ್ದಿನ ಮಗನಾಗಿದ್ದರಿಂದ ಅವನು ಶ್ರೀಮಂತಿಕೆಯಲ್ಲಿ ಉರುಳಾಡುತ್ತಿದ್ದನು. ಅವನಿಗೆ ದೊಡ್ಡ ಪರಿವಾರ ಹಾಗೂ ವಿಶಾಲವಾದ ಅಂತಃಪುರವಿತ್ತು ಮತ್ತು ಅವನು ನೃತ್ಯ, ಕುಡಿತ, ಇಂದ್ರಿಯ ಸುಖಗಳಲ್ಲೇ ತನ್ನ ಕಾಲ ಕಳೆಯುತ್ತಿದ್ದ.

೨. ಕಾಲ ಕಳೆದಂತೆ ಅವನಿಗೆ ಇದೆಲ್ಲ ಬೇಸರವೆನಿಸಿತು. ಈ ಸ್ವಚ್ಛಂದ ಜೀವನದಿಂದ ಹೇಗೆ ತಪ್ಪಿಸಿಕೊಳ್ಳುವುದು? ತಾನು ನಡೆಸುತ್ತಿದ್ದ ಜೀವನಕ್ಕಿಂತ ಉತ್ತಮ ಜೀವನ ರೀತಿ ಇದೆಯೇ? ಅವನಿಗೆ ಏನು ಮಾಡಬೇಕೆಂದು ತಿಳಿಯದೆ, ತನ್ನ ತಂದೆಯ ಮನೆಯನ್ನು ಬಿಟ್ಟುಹೋಗಬೇಕೆಂದು ತೀರ್ಮಾನಿಸಿದನು.

೩. ಒಂದು ರಾತ್ರಿ ತಂದೆಯ ಮನೆಯನ್ನು ಬಿಟ್ಟು ಅಲೆಯತೊಡಗಿದ. ಹೇಗೋ ಅವನು ಇಸಿಪಟ್ಟಣದ ಕಡೆಗೆ ಹೋಗತೊಡಗಿದ.

೪. ಒಂದು ಕಡೆ ಕುಳಿತು ಆಯಾಸಗೊಂಡ ಅವನು ತನಗೆ ತಾನೇ ಹೀಗೆ ಗಟ್ಟಿಯಾಗಿ ಹೇಳಿಕೊಂಡ. “ನಾನು ಎಲ್ಲಿದ್ದೇನೆ, ದಾರಿ ಯಾವುದು? ಅಯ್ಯೋ, ಎಷ್ಟೊಂದು ಕಷ್ಟ! ಅಯ್ಯೊ, ಏನು ಅಪಾಯ!”

೫. ಇದು ನಡೆದದ್ದು, ಪವಿತ್ರಾತ್ಮನು (ಬುದ್ಧನು) ಇಸಿಪಟ್ಟಣದಲ್ಲಿ ಪಂಚವರ್ಗೀಯ ಭಿಕ್ಕುಗಳಿಗೆ ತನ್ನ ಪ್ರಥಮೋಪದೇಶ ಮಾಡಿದ ದಿನದ ರಾತ್ರಿಯಲ್ಲಿ. ಯಶಸ್ ಇಸಿಪಟ್ಟಣದ ಹತ್ತಿರ ಬರುತ್ತಿದ್ದ ಹಾಗೆ, ಇಸಿಪಟ್ಟಣದಲ್ಲೇ ತಂಗಿದ್ದ ಪವಿತ್ರಾತ್ಮನು ಬೆಳಿಗ್ಗೆ ಬೇಗನೇ ಎದ್ದು ತಂಗಾಳಿಯಲ್ಲಿ ಅಡ್ಡಾಡುತ್ತಿದ್ದ. ಆಗ ಪವಿತ್ರಾತ್ಮನು ಮೇಲಿನ ಮಾತುಗಳನ್ನು ಆಡುತ್ತಾ ಬರುತ್ತಿದ್ದ ಗಣ್ಯ ವ್ಯಕ್ತಿಯ ಮಗ ಯಶಸ್‌ನನ್ನು ನೋಡಿದನು.

೬. ಆ ದುಃಖದ ಮಾತುಗಳನ್ನಾಗಲೇ ಕೇಳಿಸಿಕೊಂಡಿದ್ದ ಪೂಜ್ಯನು (ಬುದ್ಧನು) “ಕಷ್ಟವೂ ಇಲ್ಲ, ಅಪಾಯವೂ ಇಲ್ಲ; ಬಾ, ನಿನಗೆ ನಾನು ದಾರಿ ತೋರಿಸುತ್ತೇನೆ” ಎಂದು ಹೇಳಿದನಲ್ಲದೆ, ಯಶಸ್‌ನಿಗೆ ತನ್ನ ಸಿದ್ಧಾಂತವನ್ನು ಉಪದೇಶಿಸಿದನು.

೭. ಇದನ್ನು ಕೇಳಿಸಿಕೊಂಡ ಯಶಸ್‌ನು ಹರ್ಷಚಿತ್ತನೂ ಸಂತೋಷಭರಿತನೂ ಆದನು. ಆಗ ಅವನು ತನ್ನ ರತ್ನಖಚಿತವಾದ ಪಾದುಕೆಗಳನ್ನು ತೆಗೆದಿಟ್ಟು, ಪೂಜ್ಯನ ಬಳಿ ಬಂದು ಕುಳಿತುಕೊಂಡು ಅವನಿಗೆ ಗೌರವಪೂರ್ವಕವಾಗಿ ನಮಸ್ಕರಿಸಿದ.

೮. ಪೂಜ್ಯನ ಮಾತುಗಳನ್ನು ಆಲಿಸಿದ ಯಶಸ್ ತನ್ನನ್ನು ಶಿಷ್ಯನನ್ನಾಗಿ ತೆಗೆದುಕೊಳ್ಳುವಂತೆ ಕೇಳಿಕೊಂಡ.

೯. ಇದಕ್ಕೆ ಸಮ್ಮತಿಸಿದ ಅವನು, ಯಶಸ್ ಭಿಕ್ಕುವಾಗುವಂತೆ ಕೇಳಿದಾಗ ಅದಕ್ಕೆ ಯಶಸ್ ಒಪ್ಪಿಕೊಂಡ.

೧೦. ತಮ್ಮ ಮಗನು ಕಾಣೆಯಾದುದಕ್ಕೆ ಯಶಸ್‌ನ ತಂದೆತಾಯಿಗಳಿಗೆ ಬಹಳ ನೋವುಂಟಾಗಿತ್ತು. ತಂದೆಯು ಶೋಧವನ್ನು ಪ್ರಾರಂಭಿಸಿದ. ಭಗವಾನ್ ಮತ್ತು ಭಿಕ್ಕುವಿನ ವೇಷದಲ್ಲಿದ್ದ ಯಶಸ್ ಕುಳಿತಿದ್ದ ಕಡೆಗೇ ಬಂದ ಯಶಸ್‌ನ ತಂದೆ, ಪೂಜ್ಯನನ್ನು ಕೇಳಿದ: “ನನ್ನ ಮಗ ಯಶಸ್‌ನನ್ನು ನೋಡಿದಿರಾ, ದಯವಿಟ್ಟು ಹೇಳಿ!”

೧೧. ಆಗ ಭಗವಾನ್ ಹೇಳಿದನು: "ಸ್ವಾಮಿ, ಒಳಗೆ ಬನ್ನಿ, ನಿಮ್ಮ ಮಗ ಸಿಕ್ಕುತ್ತಾನೆ." ರಾಜನು ಒಳಗೆ ಬಂದು ತನ್ನ ಮಗನ ಪಕ್ಕದಲ್ಲೇ ಕುಳಿತರೂ, ಅವನ ಗುರುತು ಹತ್ತಲಿಲ್ಲ.

೧೨. ಆಗ ಭಗವಾನನು ಯಶಸ್ ಹೇಗೆ ತನ್ನನ್ನು ಸಂಧಿಸಿದ, ತನ್ನ ಉಪದೇಶವನ್ನು ಕೇಳಿ ಹೇಗೆ ಭಿಕ್ಕುವಾದ ಎಂಬುದನ್ನು ವಿವರಿಸಿದ. ಆಗ ತಂದೆಯು ಮಗನನ್ನು ಗುರುತಿಸಿದನಲ್ಲದೆ ತನ್ನ ಮಗ ಸನ್ಮಾರ್ಗವನ್ನು ಆಯ್ದುಕೊಂಡದ್ದಕ್ಕೆ ಸಂತೋಷಪಟ್ಟನು.

೧೩. "ಮಗೂ, ಯಶಸ್" ಎಂದು ಹೇಳಿದ ತಂದೆ "ನಿನ್ನ ತಾಯಿಯು ನೋವಿನಲ್ಲಿ ಹಾಗೂ ದುಃಖದಲ್ಲಿ ಮುಳುಗಿದ್ದಾಳೆ. ಮನೆಗೆ ಹಿಂದಿರುಗಿ ನಿನ್ನ ತಾಯಿಯ ಜೀವವನ್ನು ಉಳಿಸು."

೧೪. ಆಗ ಯಶಸ್ ಪೂಜ್ಯನ ಕಡೆಗೆ ನೋಡಿದನು ಹಾಗೂ ಪೂಜ್ಯನು ಯಶಸ್ಸನ ತಂದೆಗೆ ಹೀಗೆ ಹೇಳಿದನು: "ಯಶಸ್ ಪ್ರಪಂಚಕ್ಕೆ ಮರಳಿ ಬಂದು ಮೊದಲಿನಂತೆ ಪ್ರಾಪಂಚಿಕ ಸುಖವನ್ನು ಅನುಭವಿಸಲಿ ಎಂಬುದು ನಿಮ್ಮ ಇಚ್ಛೆಯೇನು?"

೧೫. ಇದಕ್ಕೆ ಯಶಸ್‌ನ ತಂದೆ ಉತ್ತರಿಸಿದ: "ನನ್ನ ಮಗ ಯಶಸ್‌ನು ನಿಮ್ಮ ಬಳಿಯೇ ಉಳಿಯುವುದರಿಂದ ಯಾವುದಾದರೂ ರೀತಿಯಲ್ಲಿ ಲಾಭವಾಗುವುದಾದರೆ, ಅವನು ಇಲ್ಲೇ ಉಳಿಯಲಿ." ಯಶಸ್ ಭಿಕ್ಕುವಾಗೇ ಉಳಿಯಲು ಇಚ್ಛಿಸಿದ.

೧೬. ಯಶಸ್‌ನ ತಂದೆ ಹೋಗುವ ಮೊದಲು "ಭಗವಾನರೇ, ಪೂಜ್ಯರೂ ನನ್ನ ಮಗನೂ ನನ್ನ ಮನೆಯಲ್ಲಿ ಕುಟುಂಬದ ಇತರ ಸದಸ್ಯರೊಂದಿಗೆ ಊಟ ಮಾಡಲು ಅನುಮತಿಸಿರಿ" ಎಂದು ವಿನಂತಿಸಿಕೊಂಡ.

೧೭. ಆಗ ಪೂಜ್ಯನು ತನ್ನ ವಸ್ತುಗಳನ್ನು ಧರಿಸಿಕೊಂಡು, ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು, ಯಶಸ್‌ನೊಂದಿಗೆ ಅವನ ತಂದೆಯ ಮನೆಗೆ ಹೋದನು.

೧೮. ಮನೆಯಲ್ಲಿ ಅವರೆಲ್ಲರೂ ಯಶಸ್‌ನ ತಾಯಿಯನ್ನೂ, ಯಶಸ್‌ನ ಹೆಂಡತಿಯನ್ನೂ ಭೇಟಿ ಮಾಡಿದರು. ಊಟವಾದ ನಂತರ ಪವಿತ್ರಾತ್ಮನು ತನ್ನ ಸಿದ್ಧಾಂತವನ್ನು ಆ ಕುಟುಂಬದ ಸದಸ್ಯರಿಗೆ ಬೋಧಿಸಿದನು. ಅವರೆಲ್ಲರಿಗೂ ಸಂತೋಷವಾಗಿ, ಅದಕ್ಕೆ ಶರಣಾಗತರಾಗಲು ವಚನಬದ್ಧರಾದರು.

೧೯. ಬನಾರಸ್‌ನಲ್ಲಿ ಯಶಸ್‌ನಿಗೆ ಶ್ರೀಮಂತ ಮನೆತನಕ್ಕೆ ಸೇರಿದ ನಾಲ್ಕು ಜನ ಸ್ನೇಹಿತರಿದ್ದರು. ಅವರ ಹೆಸರುಗಳು ವಿಮಲ, ಸುಬಾಹು, ಪುಣ್ಯಜಿತ ಮತ್ತು ಗವಂಪತಿ.

೨೦. ಯಶಸ್‌ನು ಬುದ್ಧನಿಗೂ ಅವನ ಧಮ್ಮಕ್ಕೂ ಶರಣಾಗತನಾಗಿದ್ದಾನೆಂದು ಅವನ ಸ್ನೇಹಿತರಿಗೆ ತಿಳಿದಾಗ, ಅವರಿಗೆ ಯಶಸ್‌ನಿಗೆ ಯಾವುದು ಒಳಿತೋ ಅದು ತಮಗೂ ಒಳಿತು ಎನಿಸಿತು.

೨೧. ಆಗ ಅವರು ಯಶಸ್‌ನ ಬಳಿ ಹೋಗಿ, ತಮ್ಮೆಲ್ಲರ ಪರವಾಗಿ ಅವನು ಅವರನ್ನು ಶಿಷ್ಯರನ್ನಾಗಿ ಮಾಡಿಕೊಳ್ಳುವಂತೆ ಕೇಳಿಕೊಳ್ಳಲು ಬುದ್ಧನ ಬಳಿಗೆ ಕಳಿಸಿದರು.

೨೨. ಇದಕ್ಕೆ ಒಪ್ಪಿದ ಯಶಸ್‌ನು ಬುದ್ಧನ ಬಳಿ ಹೋಗಿ, "ಪೂಜ್ಯರೇ, ಧಮ್ಮವನ್ನು ತಾವು ಈ ನನ್ನ ನಾಲ್ಕು ಗೆಳೆಯರಿಗೂ ಬೋಧಿಸಿರಿ" ಎಂದು ಕೇಳಿಕೊಂಡನು. ಭಗವಾನ್ ಇದಕ್ಕೆ ಒಪ್ಪಿದಾಗ, ಯಶಸ್‌ನ ಗೆಳೆಯರು ಧಮ್ಮಕ್ಕೆ ಶರಣಾದರು.

## ೨. ಕಶ್ಯಪರ ಪರಿವರ್ತನೆ

೧. ಬನಾರಸ್‌ನಲ್ಲಿ ಕಶ್ಯಪ ಎಂಬ ಹೆಸರಿನ ಒಂದು ಕುಟುಂಬವಿತ್ತು. ಅದರಲ್ಲಿ ಮೂವರು ಗಂಡುಮಕ್ಕಳಿದ್ದರು. ಅವರೆಲ್ಲರೂ ಉಚ್ಚ ಶಿಕ್ಷಣ ಪಡೆದವರಿದ್ದು, ಕಠಿಣ ಧಾರ್ಮಿಕ ಜೀವನ ನಡೆಸುತ್ತಿದ್ದರು.

೨. ಕೆಲಸಮಯದ ನಂತರ ಹಿರಿಯ ಮಗನಿಗೆ ಸಂನ್ಯಾಸ ದೀಕ್ಷೆ ಪಡೆಯುವ ಯೋಚನೆ ಬಂತು. ಅದರಂತೆ, ಅವನು ಮನೆಯನ್ನು ತ್ಯಜಿಸಿ, ಸಂನ್ಯಾಸ ದೀಕ್ಷೆ ಪಡೆದು ಉರುವೆಲ್ಲದ ಕಡೆಗೆ ಹೊರಟನು. ಹಾಗೂ ಅಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿದನು.

೩. ಅವನ ತಮ್ಮಂದಿರು ಅವನನ್ನೇ ಅನುಸರಿಸಿ, ಅವರೂ ಸಂನ್ಯಾಸಿಗಳಾದರು.

೪. ಅವರೆಲ್ಲರೂ ಅಗ್ನಿಹೋತ್ರಿಗಳಾಗಿದ್ದರು ಅಥವಾ ಅಗ್ನಿಪೂಜಕರಾಗಿದ್ದರು. ಅವರಿಗೆ ಉದ್ದ ಜಡೆ (ಜಟೆ) ಇದ್ದುದರಿಂದ, ಅವರಿಗೆ ಜಟಿಲರೆಂಬ ಹೆಸರೂ ಇತ್ತು.

೫. ಈ ಮೂವರು ಸೋದರರಿಗೆ ಉರುವೆಲ್ಲ ಕಶ್ಯಪ, ನದಿ ಕಶ್ಯಪ (ನಿರಂಜನ ಎಂಬ ನದಿಯ) ಮತ್ತು ಗಯಾ ಕಶ್ಯಪ (ಗಯೆ ಎಂಬ ಹಳ್ಳಿಯವನು) ಎಂಬ ಹೆಸರಿದ್ದವು.

೬. ಇವರಲ್ಲಿ ಉರುವೆಲ್ಲ ಕಶ್ಯಪನಿಗೆ ಐನೂರು ಜನ ಜಟಿಲರು ಅನುಯಾಯಿಗಳಿದ್ದರು. ನದಿ ಕಶ್ಯಪನಿಗೆ ಮುನ್ನೂರು ಜನ ಜಟಿಲರು ಶಿಷ್ಯರಾಗಿದ್ದರು. ಗಯೆ ಕಶ್ಯಪನಿಗೆ ಇನ್ನೂರು ಜನ ಜಟಿಲರಿದ್ದರು. ಇವರಲ್ಲಿ ಮುಖ್ಯನಾದವನು ಉರುವೆಲ್ಲ ಕಶ್ಯಪ.

೭. ಉರುವೆಲ್ಲ ಕಶ್ಯಪನ ಕೀರ್ತಿ ನಾಡಿನ ಉದ್ದಗಲಕ್ಕೂ ಹರಡಿತ್ತು. ಅವನು ಬದುಕಿದ್ದಾಗಲೇ ಮುಕ್ತಿ ಪಡೆದಿದ್ದಾನೆಂಬ ಪ್ರತೀತಿಯಿತ್ತು. ಫಾಲ್ಗುನದಿಯ ದಡದ ಮೇಲಿದ್ದ ಅವನ ಆಶ್ರಮಕ್ಕೆ ದೂರದಿಂದ ಜನರು ಬರುತ್ತಿದ್ದರು.

೮. ಉರುವೆಲ್ಲ ಕಶ್ಯಪನ ಹೆಸರನ್ನೂ ಕೀರ್ತಿಯನ್ನೂ ಕೇಳಿದ್ದ ಭಗವಾನ್ ಬುದ್ಧನು ತನ್ನ ಸಿದ್ಧಾಂತವನ್ನು ಅವನಿಗೆ ಉಪದೇಶಿಸಬೇಕೆಂದು, ಮತ್ತು ಸಾಧ್ಯವಾದರೆ ಅವನನ್ನು ತನ್ನ ಧಮ್ಮಕ್ಕೆ ಪರಿವರ್ತಿಸಬೇಕೆಂದು ಯೋಚಿಸಿದನು.

೯. ಅವನು ಎಲ್ಲಿದ್ದಾನೆಂಬುದನ್ನು ತಿಳಿದುಕೊಂಡ ಭಗವಾನ್ ಬುದ್ಧನು ಉರುವೆಲ್ಲಕ್ಕೆ ಹೋದನು.

೧೦. ಪವಿತ್ರಾತ್ಮನು ಅವನನ್ನು ಸಂಧಿಸಿ, ಅವನಿಗೆ ಉಪದೇಶಿಸಬೇಕು ಹಾಗೂ ಅವನನ್ನು ಪರಿವರ್ತಿಸಬೇಕು ಅಂದುಕೊಂಡು, ಹೀಗೆ ಹೇಳಿದ : "ಕಶ್ಯಪ, ನಿನಗೇನೂ ತೊಂದರೆಯಾಗದಿದ್ದರೆ, ನಾನು ನಿನ್ನ ಆಶ್ರಮದಲ್ಲಿ ಒಂದು ರಾತ್ರಿ ಕಳೆಯಲಿಚ್ಛಿಸುತ್ತೇನೆ."

೧೧. ಇದಕ್ಕೆ ಕಶ್ಯಪನು "ಇದಕ್ಕೆ ನನ್ನ ಒಪ್ಪಿಗೆ ಇಲ್ಲ" ಎಂದು ಹೇಳಿದ. ಮತ್ತೆ ಹೀಗೆ ಹೇಳಿದ: "ಮಚಲಿಂದ ಎಂಬ ಕ್ರೂರ ನಾಗರ ದೊರೆಯು ಈ ಪ್ರದೇಶವನ್ನು ಆಳುತ್ತಿದ್ದಾನೆ. ಅವನಿಗೆ ಭಯಂಕರ ಶಕ್ತಿಗಳಿವೆ. ಅಗ್ನಿಪೂಜಕ ಸಂನ್ಯಾಸಿಗಳೆಲ್ಲ ಅವನಿಗೆ ಕಟ್ಟಾ ವೈರಿಗಳು. ಅವನು ಅವರ ಆಶ್ರಮಗಳಿಗೆ ರಾತ್ರಿ ಬಂದು ಅವರಿಗೆ ವಿಪರೀತ ಹಿಂಸೆ ಕೊಡುತ್ತಾನೆ. ನನಗೆ ಕೊಟ್ಟಂತೆ ನಿನಗೂ ಅವನು ಹಿಂಸೆ ಕೊಡುತ್ತಾನೆಂಬ ಭಯ ನನಗೆ."

೧೨. ನಾಗರು ಪವಿತ್ರಾತ್ಮನ ಗೆಳೆಯರೂ ಅನುಯಾಯಿಗಳೂ ಆಗಿದ್ದರು ಎಂಬ ವಿಷಯ ಕಶ್ಯಪನಿಗೆ ಗೊತ್ತಿರಲಿಲ್ಲ. ಆದರೆ ಪವಿತ್ರಾತ್ಮನಿಗೆ ಅದು ಗೊತ್ತಿತ್ತು.

೧೩. ಆದುದರಿಂದ ಪವಿತ್ರಾತ್ಮನು (ಬುದ್ಧನು) ತನ್ನ ಬೇಡಿಕೆಯನ್ನು ಮತ್ತೊಮ್ಮೆ ಒತ್ತಾಯಿಸುತ್ತಾ ಹೀಗೆ

ಹೇಳಿದನು: "ಅವನು ಪ್ರಾಯಶಃ ನನಗೇನೂ ಹಿಂಸೆ ಮಾಡಲಾರ. ಆದ್ದರಿಂದ, ಕಶ್ಯಪ, ನಿನ್ನ ಅಗ್ನಿ ಕೊಠಡಿಯಲ್ಲಿ ಒಂದು ರಾತ್ರಿಯ ಮಟ್ಟಿಗೆ ಸ್ವಲ್ಪ ಸ್ಥಳ ಕೊಡು."

೧೪. ಕಶ್ಯಪ ಮತ್ತೆ ಅನೇಕ ಕಷ್ಟಗಳ ನೆಪಗಳನ್ನು ಮುಂದೊಡ್ಡಿದನು. ಆದರೆ ಪವಿತ್ರಾತ್ಮನು ತನ್ನ ಬೇಡಿಕೆಯ ಮೂಲಕ ಮತ್ತೆ ಮತ್ತೆ ಒತ್ತಾಯಿಸತೊಡಗಿದನು.

೧೫. ಆಗ ಕಶ್ಯಪ ಹೇಳಿದ : "ನನಗೆ ಯಾವ ವಾದವಿವಾದದಲ್ಲಿಯೂ ಮನಸ್ಸಿಲ್ಲ. ಆದರೆ ನನ್ನವೇ ಆದ ಕೆಲ ಭಯಭೀತಿಗಳಿವೆ. ನಿನಗೆ ಸಂತೋಷವನ್ನು ಕೊಡುವ ದಾರಿಯನ್ನು ಹುಡುಕಿಕೊ."

೧೬. ತಕ್ಷಣವೇ ಪವಿತ್ರಾತ್ಮ ಭಗವಾನನು ಅಗ್ನಿಯನ್ನು ಉರಿಸುತ್ತಿದ್ದ ಕೋಣೆಯ ಒಳಗೆ ಬಂದು ಕುಳಿತುಕೊಂಡ.

೧೭. ಪ್ರತಿದಿನ ಬರುತ್ತಿದ್ದ ಸಮಯಕ್ಕೆ ಆ ದಿನವೂ ನಾಗರ ದೊರೆಯಾದ ಮಚಲಿಂದನು ಕೋಣೆಯೊಳಗೆ ಬಂದನು. ಆದರೆ ಅವನು ಅಲ್ಲಿ ಕಶ್ಯಪನನ್ನು ಕಾಣುವ ಬದಲು ಪವಿತ್ರಾತ್ಮನನ್ನು ಕಂಡನು.

೧೮. ಅಲ್ಲಿ ಕುಳಿತಿದ್ದ ಭಗವಾನನ ಮುಖವು ಶಾಂತಿ ಮತ್ತು ನಿಶ್ಚಲತೆಯಿಂದ ಬೆಳಗುತ್ತಿದ್ದುದನ್ನು ನೋಡಿದ ಮಚಲಿಂದನಿಗೆ, ತಾನು ಯಾವುದೋ ದಿವ್ಯ ಪುರುಷನ ಎದುರಿಗೆ ಕುಳಿತಿರುವಂತೆ ಭಾಸವಾಗಿ, ತನ್ನ ತಲೆಯನ್ನು ಬಗ್ಗಿಸಿ ನಮಸ್ಕರಿಸಿದ ಹಾಗೂ ಪೂಜಿಸತೊಡಗಿದ.

೧೯. ಆ ರಾತ್ರಿ, ತನ್ನ ಅತಿಥಿಗೆ ಏನಾಗಿದೆಯೋ ಎಂಬ ಭಯದಿಂದ ಕಶ್ಯಪನ ನಿದ್ರೆಗೆ ಬಹಳಷ್ಟು ಭಂಗವಾಯಿತು. ತನ್ನ ಅತಿಥಿ ಉರಿದುಹೋಗಿರಬಹುದು ಎಂಬ ಭಯ ಹಾಗೂ ತಪ್ಪು ಕಲ್ಪನೆಯಿಂದ ಅವನು ಇದ್ದನು.

೨೦. ಬೆಳಿಗ್ಗೆಯಾದ ಮೇಲೆ ಕಶ್ಯಪ ಮತ್ತು ಅವನ ಅನುಯಾಯಿಗಳೆಲ್ಲರೂ ಬಂದು ಇಣುಕಿ ನೋಡತೊಡಗಿದರು. ಮಚಲಿಂದನಿಂದ ಗಾಯಗೊಂಡಿದ್ದ ಭಗವಾನನನ್ನು ಕಾಣುವ ಬದಲು ಅವರು ಮಚಲಿಂದನಿಂದ ಪೂಜಿಸಲ್ಪಡುತ್ತಿದ್ದ ಭಗವಾನನ್ನು ಕಂಡರು.

೨೧. ಈ ದೃಶ್ಯವನ್ನು ಕಂಡ ಕಶ್ಯಪನಿಗೆ ತಾನು ಒಂದು ದೊಡ್ಡ ಪವಾಡವನ್ನು ನೋಡುತ್ತಿರುವಂತೆ ಅನಿಸಿತು.

೨೨. ಈ ಪವಾಡದಿಂದ ದಿಗ್ಭ್ರಮೆಗೊಂಡ ಕಶ್ಯಪನು, ಪವಿತ್ರ ಭಗವಾನನು ತನ್ನ ಬಳಿ ಇರಬೇಕೆಂದು ಕೇಳಿಕೊಂಡನಲ್ಲದೆ ತಾನು ಅವನಿಗೊಂದು ಆಶ್ರಮ ಮಾಡಿಕೊಟ್ಟು ಅವನನ್ನು ನೋಡಿಕೊಳ್ಳುವುದಾಗಿ ಭರವಸೆ ಕೊಟ್ಟನು.

೨೩. ಪವಿತ್ರ ಭಗವಾನನು ಉಳಿದುಕೊಳ್ಳಲು ಒಪ್ಪಿದನು.

೨೪. ಆದರೆ ಆ ಇಬ್ಬರಿಗೆ ಬೇರೆ ಬೇರೆ ಉದ್ದೇಶಗಳಿದ್ದವು. ಕಶ್ಯಪನಿಗೆ ಮಚಲಿಂದ ನಾಗನಿಂದ ರಕ್ಷಣೆ ಪಡೆಯಬೇಕೆಂಬ ಉದ್ದೇಶವಿತ್ತು. ಪವಿತ್ರ ಭಗವಾನನಿಗೆ ತನ್ನ ಸಿದ್ಧಾಂತವನ್ನು ಬೋಧಿಸಲು ಕಶ್ಯಪನು ಎಂದಾದರೊಂದು ದಿನ ಅವಕಾಶ ಕೊಟ್ಟಾನು ಎಂಬ ಉದ್ದೇಶವಿತ್ತು.

೨೫. ಆದರೆ ಕಶ್ಯಪ ಅಂಥ ಒಲವನ್ನು ತೋರಿಸಲೇ ಇಲ್ಲ. ಅವನಿಗೆ ಪವಿತ್ರ ಭಗವಾನನು ಕೇವಲ ಒಬ್ಬ ಪವಾಡ ಪುರುಷನೇ ಹೊರತು ಮತ್ತೇನೂ ಅಲ್ಲ ಎನಿಸಿತು.

೨೬. ಒಂದು ದಿನ ಪವಿತ್ರ ಭಗವಾನನೇ ತಾನೇ ಪ್ರಾರಂಭಿಸೋಣ ಎಂದುಕೊಂಡು ಕಶ್ಯಪನನ್ನು ಕೇಳಿದ: "ನೀನು ಅರ್ಹಂತನೇ?"

೨೭. "ನೀನು ಅರ್ಹಂತನಲ್ಲದಿದ್ದರೆ, ಈ ಅಗ್ನಿಹೋತ್ರದಿಂದ ನಿನಗೇನು ಪ್ರಯೋಜನವಾಗುತ್ತದೆ?"

೨೮. ಕಶ್ಯಪ ಹೇಳಿದ : "ಅರ್ಹಂತನಾಗಿರುವುದು ಅಂದರೇನೆಂಬುದೇ ನನಗೆ ಗೊತ್ತಿಲ್ಲ. ಅದನ್ನು ಸ್ವಲ್ಪ ವಿವರಿಸಿ ಹೇಳುತ್ತೀರಾ?"

೨೯. ಆಗ ಭಗವಾನ್ ಕಶ್ಯಪನಿಗೆ ಹೇಳಿದ: "ಅಷ್ಟಾಂಗ ಮಾರ್ಗವನ್ನು ಅನುಸರಿಸುವವನಿಗೆ ಅಡ್ಡಿ ಮಾಡುವ ಎಲ್ಲ ಆಸೆಗಳನ್ನು ಜಯಿಸಿದವನೇ ಅರ್ಹಂತ. ಅಗ್ನಿಹೋತ್ರವು ಮನುಷ್ಯನ ಪಾಪಗಳನ್ನು ತೊಳೆಯಲಾರದು."

೩೦. ಕಶ್ಯಪನು ದುರಭಿಮಾನಿಯಾಗಿದ್ದ. ಆದರೆ ಪವಿತ್ರ ಭಗವಾನನ ವಾದದಲ್ಲಿನ ಶಕ್ತಿಯ ಅರಿವು ಅವನಿಗಾಯಿತು. ತನ್ನ ಮನಸ್ಸನ್ನು ಮೃದು ಹಾಗೂ ನಮ್ರವನ್ನಾಗಿ ಮಾಡಿಕೊಂಡು, ಕೊನೆಗೆ ನಿಜವಾದ ಧರ್ಮದ ವಾಹನವಾಗಲು ನಿರ್ಧರಿಸಿ, ಸರ್ವರಿಂದಲೂ ಗೌರವ ಪಡೆದ ಬುದ್ಧನ ಜ್ಞಾನಕ್ಕೆ ತನ್ನ ಪರಿಮಿತ ಜ್ಞಾನ ಸಮವಲ್ಲವೆಂದು ಒಪ್ಪಿಕೊಂಡನು.

೩೧. ಹೀಗೆ, ಬುದ್ಧನ ತತ್ತ್ವ ಮನದಟ್ಟಾಗಿ, ನಮ್ರತೆಯಿಂದ ಶರಣಾಗಿ, ಉರುವೆಲ್ಲ ಕಶ್ಯಪನು ಪವಿತ್ರ ಭಗವಾನನ ಸಿದ್ಧಾಂತವನ್ನು ಒಪ್ಪಿಕೊಂಡನಲ್ಲದೆ, ಅವನ ಅನುಯಾಯಿಯೂ ಆದನು.

೩೨. ಕಶ್ಯಪನ ಅನುಯಾಯಿಗಳು ತಮ್ಮ ಗುರುವನ್ನು ಅನುಸರಿಸಿ ಅವನಂತೆ ಶರಣಾಗತರಾಗಿ, ಧರ್ಮೋಪದೇಶವನ್ನು ಪಡೆದರು. ಹೀಗೆ ಕಶ್ಯಪ ಮತ್ತು ಅವನ ಅನುಯಾಯಿಗಳೆಲ್ಲರೂ ಪರಿವರ್ತಿತರಾದರು.

೩೩. ಆಗ ಉರುವೆಲ್ಲ ಕಶ್ಯಪನು ತನ್ನ ಸಾಮಾನುಗಳನ್ನೂ ಯಜ್ಞದ ಪಾತ್ರೆಗಳನ್ನೂ ನದಿಗೆ ಬಿಸಾಡಿದನು. ಅವೆಲ್ಲವೂ ಪ್ರವಾಹದಲ್ಲಿ ತೇಲಿಕೊಂಡು ಹೋದವು.

೩೪. ನದಿಯ ಕೆಳಭಾಗದಲ್ಲಿ ವಾಸಿಸುತ್ತಿದ್ದ ನದಿ ಮತ್ತು ಗಯಾ ಕಶ್ಯಪರು ಚೆಲ್ಲಾಪಿಲ್ಲಿಯಾಗಿ ತೇಲಿಹೋಗುತ್ತಿದ್ದ ಬಟ್ಟೆಬರೆಗಳನ್ನು (ಹಾಗೂ ಇವರ ವಸ್ತುಗಳನ್ನು) ನೋಡಿ, "ಇವು ನಮ್ಮ ಅಣ್ಣನಿಗೆ ಸೇರಿದ ವಸ್ತುಗಳು. ಅವನು ಇವನ್ನೆಲ್ಲ ಏಕೆ ಎಸೆದ? ಅವನಲ್ಲೇನೋ ಭಾರೀ ಬದಲಾವಣೆಯಾದಂತಿದೆ" ಎಂದುಕೊಂಡು ಅವರಿಗೆ ಬಹಳ ನೋವು ಹಾಗೂ ಕಾತರ ಉಂಟಾಯಿತು. ಪ್ರತಿಯೊಬ್ಬನೂ ತಮ್ಮೊಂದಿಗೆ ಐನೂರು ಸಹಚರರೊಂದಿಗೆ ಅಣ್ಣನನ್ನು ನೋಡಲು ನದಿಯ ಮೇಲುಭಾಗಕ್ಕೆ ಬಂದರು.

೩೫. ತಮ್ಮ ಅಣ್ಣನನ್ನು, ಸಂನ್ಯಾಸಿಗಳಂತೆ ವೇಷ ಧರಿಸಿದ್ದ ಅವನ ಅನುಯಾಯಿಗಳನ್ನೂ ನೋಡಿದ ಅವರ ಮನಸ್ಸಿನಲ್ಲಿ ವಿಚಿತ್ರ ಯೋಚನೆಗಳು ಬರತೊಡಗಿ ಅವರು ಅದಕ್ಕೆ ಕಾರಣವನ್ನು ಕೇಳತೊಡಗಿದರು. ಆಗ ಉರುವೆಲ್ಲ ಕಶ್ಯಪನು ತಾನು ಬುದ್ಧ ಧರ್ಮಕ್ಕೆ ಪರಿವರ್ತಿತನಾದ ಕತೆಯನ್ನು ಅವರಿಗೆ ಹೇಳಿದನು.

೩೬. "ಹೀಗೆ ನಮ್ಮ ಅಣ್ಣನು ಶರಣಾಗಿರುವುದರಿಂದ, ನಾವೂ ಶರಣಾಗಬೇಕು" ಎಂದು ಅವರು ಹೇಳಿದರು.

೩೭. ತಮ್ಮ ಇಂಗಿತವನ್ನು ಅವರು ತಮ್ಮ ಅಣ್ಣನಿಗೆ ತಿಳಿಸಿದರು. ಆಗ ಅವರು ತಮ್ಮ ಎಲ್ಲ ಅನುಯಾಯಿಗಳನ್ನು ಬುದ್ಧನ ಪ್ರವಚನಕ್ಕೆ ಕರೆತಂದರು. ಆಗ ಬುದ್ಧನು ಅಗ್ನಿಹೋತ್ರಕ್ಕೂ ತನ್ನ ಸಿದ್ಧಾಂತಕ್ಕೂ ಇರುವ ವ್ಯತ್ಯಾಸವನ್ನು ಕುರಿತು ಹೇಳುತ್ತಿದ್ದನು.

೩೮. ಈ ಇಬ್ಬರು ಸೋದರರಿಗೆ ತನ್ನ ಪ್ರವಚನದಲ್ಲಿ ಪವಿತ್ರ ಭಗವಾನನು ಹೀಗೆ ಹೇಳಿದನು : "ಮರಕ್ಕೆ ಮರ ಘರ್ಷಿಸಿದಾಗ ಉಂಟಾಗುವ ಬೆಂಕಿಯಂತೆ, ಅಸ್ಪಷ್ಟ ಯೋಚನೆಗಳು ಬೆಂಕಿಯನ್ನು ಸೃಷ್ಟಿಸಿದಾಗ, ಕಪ್ಪು ಹೊಗೆ ಎಂಬ ಅಜ್ಞಾನ ಮೇಲೇಳುತ್ತದೆ.

೩೯. "ಕಾಮ, ಕ್ರೋಧ, ಭ್ರಮೆ – ಇವೇ ಆ ಬೆಂಕಿ. ಈ ಬೆಂಕಿಯು ಉಳಿದೆಲ್ಲವುಗಳನ್ನು ಆವರಿಸಿಕೊಂಡು

ಸುಡುತ್ತದೆ. ಇದು ನೋವು ಮತ್ತು ದುಃಖಕ್ಕೆ ಕಾರಣವಾಗುತ್ತದೆ.

೪೦. "ಸನ್ಮಾರ್ಗದಲ್ಲಿ ಹೋಗಿ, ಕಾಮ, ಕ್ರೋಧ, ಭ್ರಮೆಗಳನ್ನು ಅಳಿಸಿಹಾಕಿದರೆ, ಸ್ಪಷ್ಟ ನೋಟ, ಜ್ಞಾನ, ಸಚ್ಚಾರಿತ್ರ್ಯ ಹುಟ್ಟುತ್ತವೆ.

೪೧. "ಹೀಗೆ, ಒಬ್ಬ ಮನುಷ್ಯ ಹೃದಯದಲ್ಲಿ ಪಾಪದ ಬಗೆಗೆ ದ್ವೇಷ ಉಂಟಾದರೆ, ಈ ದ್ವೇಷವು ಲೋಭವನ್ನು ನಿವಾರಿಸುತ್ತದೆ, ಲೋಭ ಇಲ್ಲವಾದಾಗ, ನಿರ್ಮೋಹ ಉಂಟಾಗುತ್ತದೆ."

೪೨. ಬುದ್ಧನ ಈ ಉಪದೇಶವನ್ನು ಕೇಳಿದ ಮಹಾಋಷಿಗಳಿಗೆ ಅಗ್ನಿಪೂಜೆಯಲ್ಲಿನ ಆಸಕ್ತಿ ಹೊರಟುಹೋಗಿ, ಅವರು ಬುದ್ಧನ ಶಿಷ್ಯರಾಗಲು ಇಚ್ಛಿಸಿದರು.

೪೩. ಕಶ್ಯಪರ ಪರಿವರ್ತನೆಯು ಪವಿತ್ರ ಭಗವಾನನಿಗೆ ಒಂದು ದೊಡ್ಡ ವಿಜಯವಾಗಿತ್ತು. ಏಕೆಂದರೆ, ಅವರಿಗೆ ಜನರ ಮನಸ್ಸಿನ ಮೇಲೆ ಬಹಳ ಬಲವಾದ ನಿಯಂತ್ರಣವಿತ್ತು.

## ೩. ಸಾರಿಪುತ್ರ ಮತ್ತು ಮೌದ್ಗಲಾಯನ ಪರಿವರ್ತನೆ

೧. ಪವಿತ್ರ ಭಗವಾನನು ರಾಜಗೃಹದಲ್ಲಿದ್ದ ಸಮಯದಲ್ಲಿ, ಅಲ್ಲಿ ಸಂಜಯನೆಂಬ ಒಬ್ಬ ಪ್ರಖ್ಯಾತ ವ್ಯಕ್ತಿ ಇದ್ದನು. ಅವನ ಜೊತೆಯಲ್ಲಿ ಶಿಷ್ಯರೆನಿಸಿಕೊಂಡಿದ್ದ ಇನ್ನೂರಐವತ್ತು ಪರಿವ್ರಾಜಕರ ಒಂದು ಗುಂಪು ಇತ್ತು.

೨. ಆ ಶಿಷ್ಯರಲ್ಲಿ ಸಾರಿಪುತ್ತ ಮತ್ತು ಮೌದ್ಗಲಾಯನ ಎಂಬ ಇಬ್ಬರು ಬ್ರಾಹ್ಮಣ ಯುವಕರೂ ಇದ್ದರು.

೩. ಸಾರಿಪುತ್ರ ಮತ್ತು ಮೌದ್ಗಲಾಯರಿಗೆ ಸಂಜಯನ ಬೋಧನೆಯಿಂದ ತೃಪ್ತಿಯಾಗದೆ ಇನ್ನೂ ಉತ್ತಮವಾದುದನ್ನು ಅರಸುತ್ತಿದ್ದರು.

೪. ಅದೇ ಕಾಲದಲ್ಲಿ ಒಂದು ದಿನ, ಪಂಚವರ್ಗೀಯ ಭಿಕ್ಕುಗಳಲ್ಲಿ ಒಬ್ಬನಾದ ಪೂಜ್ಯ ಅಸ್ಸಾಜಿಯು, ತನ್ನ ಒಳಬಟ್ಟೆಗಳನ್ನೂ ಹೊರಬಟ್ಟೆಗಳನ್ನೂ ಧರಿಸಿ, ಭಿಕ್ಷಾಪಾತ್ರೆಯನ್ನು ಹಿಡಿದು, ಭಿಕ್ಷೆಗೆಂದು ರಾಜಗೃಹ ನಗರವನ್ನು ಪ್ರವೇಶಿಸಿದನು.

೫. ಅಸ್ಸಾಜಿಯ ಪ್ರತಿಷ್ಠಿತ ವರ್ತನೆಯನ್ನೇ ಗಮನಿಸುತ್ತಿದ್ದ ಸಾರಿಪುತ್ರನು ಅದರಿಂದ ಪ್ರಭಾವಿತನಾದ. ಪೂಜ್ಯ ಅಸ್ಸಾಜಿಯನ್ನು ನೋಡಿದ ಸಾರಿಪುತ್ರನು ಹೀಗೆ ಯೋಚಿಸಿದ: "ಪ್ರಪಂಚದಲ್ಲೇ ಶ್ರೇಷ್ಠರಾದ ಸಂನ್ಯಾಸಿಗಳಲ್ಲಿ ಇವರೂ ಒಬ್ಬರು. ಇವರನ್ನು 'ನೀವು ಯಾರ ಹೆಸರಿನಲ್ಲಿ ಲೌಕಿಕವನ್ನು ತ್ಯಜಿಸಿದ್ದೀರಿ? ನಿಮ್ಮ ಗುರುಗಳಾರು? ಯಾರ ಧಮ್ಮವನ್ನು ನೀವು ಪ್ರತಿಪಾದಿಸುತ್ತೀರಿ?' ಎಂದು ಕೇಳಿದರೆ ಹೇಗೆ?"

೬. ಸಾರಿಪುತ್ರನು ಹೀಗೂ ಯೋಚಿಸಿದ: "ಇದನ್ನೆಲ್ಲಾ ಕೇಳಲು ಇದು ಸೂಕ್ತ ಸಮಯವಲ್ಲ; ಈಗ ಭಿಕ್ಷೆ ಕೇಳಲು ಮನೆಯ ಬಳಿಗೆ ಹೋಗಿದ್ದಾರೆ. ಏನನ್ನಾದರೂ ಬಯಸುವವರು ಮಾಡುವಂತೆ ಅವರನ್ನು ಹೆಜ್ಜೆಹೆಜ್ಜೆಗೂ ಅನುಸರಿಸಿದರೆ ಹೇಗೆ?"

೭. ಪೂಜ್ಯ ಅಸ್ಸಾಜಿಯು ರಾಜಗೃಹದಲ್ಲಿ ಭಿಕ್ಷಾಟನೆಯನ್ನು ಮುಗಿಸಿ, ತನ್ನ ಭಿಕ್ಷೆಯೊಂದಿಗೆ ಹಿಂದಿರುಗಿದನು. ಆಗ ಸಾರಿಪುತ್ರನು ಪೂಜ್ಯ ಅಸ್ಸಾಜಿಯಿದ್ದಲ್ಲಿಗೂ ಹೋದನು; ಹಾಗೂ ಅವನ ಬಳಿ ನಮಸ್ಕರಿಸಿ, ಆಶೀರ್ವಾದ ಪಡೆದು, ಅವನ ಬಳಿ ನಿಂತನು.

೮. ಅವನ ಬಳಿ ನಿಂತ ಅಲೆಮಾರಿ ಸಂನ್ಯಾಸಿ ಸಾರಿಪುತ್ರನು ಪೂಜ್ಯ ಅಸ್ಸಾಜಿಗೆ ಹೀಗೆ ಹೇಳಿದ:

"ಸ್ನೇಹಿತರೆ, ನಿಮ್ಮ ಮುಖ ಶಾಂತವಾಗಿದೆ. ನಿಮ್ಮ ಬಣ್ಣ ಶುದ್ಧವೂ ಶಾಂತಿಯುತವಾಗಿಯೂ ಇದೆ. ನೀವು ಯಾರ ಹೆಸರಿನಲ್ಲಿ ಲೌಕಿಕವನ್ನು ತ್ಯಜಿಸಿದ್ದೀರಿ? ನಿಮ್ಮ ಗುರುಗಳಾರು? ನೀವು ಯಾರ ಧರ್ಮವನ್ನು ಬೋಧಿಸುತ್ತೀರಿ?"

೯. ಅಸ್ಸಾಜಿ ಉತ್ತರಿಸಿದರು: "ಗೆಳೆಯಾ, ಶಾಕ್ಯ ವಂಶದ ಮಹಾ ಸಂನ್ಯಾಸಿಯೊಬ್ಬನಿದ್ದಾನೆ. ಆ ಪವಿತ್ರಾತ್ಮನ ಹೆಸರಿನಲ್ಲಿ ನಾನು ಲೌಕಿಕವನ್ನು ತ್ಯಜಿಸಿದ್ದೇನೆ. ಆ ಪವಿತ್ರಾತ್ಮನೇ ನನ್ನ ಗುರು; ಆ ಪವಿತ್ರಾತ್ಮನ ಧಮ್ಮವನ್ನೇ ನಾನು ಅನುಸರಿಸುತ್ತಿರುವುದು."

೧೦. "ಪೂಜ್ಯರೇ, ನಿಮ್ಮ ಗುರುಗಳು ಯಾವ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೆ? ಅವರು ನಿಮಗೆ ಏನನ್ನು ಉಪದೇಶಿಸಿದ್ದಾರೆ?"

೧೧. "ಗೆಳೆಯಾ, ನಾನು ಕೇವಲ ಒಬ್ಬ ಯುವ ಶಿಷ್ಯ. ಇತ್ತೀಚೆಗಷ್ಟೇ ದೀಕ್ಷೆ ಪಡೆದಿದ್ದೇನೆ. ಈ ಧರ್ಮ ಮತ್ತು ಸಾಧನೆಯನ್ನು ಹೊಸದಾಗಿ ಅನುಸರಿಸುತ್ತಿದ್ದೇನೆ. ಧರ್ಮವನ್ನು ವಿವರವಾಗಿ ಹೇಳಲಾರೆ; ಆದರೆ ಹಾಗೆಂದರೇನೆಂಬುದನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ."

೧೨. ಆಗ, ಅಲೆಮಾರಿ ಸಂನ್ಯಾಸಿಯಾದ ಸಾರಿಪುತ್ರನು ಪೂಜ್ಯ ಅಸ್ಸಾಜಿಗೆ ಹೀಗೆ ಹೇಳಿದನು: "ಹಾಗೇ ಆಗಲಿ ಸ್ನೇಹಿತರೆ, ನಿಮಗೆಷ್ಟು ಇಷ್ಟವಾಗುತ್ತದೆಯೋ ಅಷ್ಟು ಹೇಳಿ. ಆದರೆ ಅರ್ಥವನ್ನು ಹೇಳಿ – ನನಗೆ ಅರ್ಥ ಮಾತ್ರ ಬೇಕು. ಪದಗಳ ಬಗ್ಗೆ ಅಷ್ಟೇಕೆ ಚಿಂತೆ?"

೧೩. ಆಗ ಪೂಜ್ಯ ಅಸ್ಸಾಜಿಯು ಬುದ್ಧನ ಬೋಧನೆಯ ಸಾರಾಂಶವನ್ನು ಸಾರಿಪುತ್ತನಿಗೆ ವಿವರಿಸಿ ಹೇಳಿದನು ಹಾಗೂ ಸಾರಿಪುತ್ರನು ಇದರಿಂದ ಪೂರ್ಣವಾಗಿ ಸಂತುಷ್ಟಗೊಂಡನು.

೧೪. ಸಾರಿಪುತ್ರ ಮತ್ತು ಮೌದ್ಗಲಾಯನ ಸೋದರರಲ್ಲದಿದ್ದರೂ, ಸೋದರರಂತೆ ಯಾವಾಗಲೂ ಒಟ್ಟಿಗೇ ಇರುತ್ತಿದ್ದರು. ಅವರು ಪರಸ್ಪರರಿಗೆ ವಚನ ಕೊಟ್ಟಿದ್ದರು. ಯಾರಿಗೆ ಮೊದಲು ಸತ್ಯ ಸಿದ್ಧಿಸುತ್ತದೆಯೋ ಅವರು ಅದನ್ನು ಎರಡನೆಯವನಿಗೆ ತಿಳಿಸಬೇಕಿತ್ತು. ಅದು ಅವರ ನಡುವಿನ ಒಪ್ಪಂದವಾಗಿತ್ತು.

೧೫. ಅದರಂತೆ ಸಾರಿಪುತ್ರನು ಮೌದ್ಗಲಾಯನ ಇದ್ದೆಡೆಗೆ ಹೋದನು. ಅವನು ಸಾರಿಪುತ್ತನನ್ನು ನೋಡಿ ಹೀಗೆ ಹೇಳಿದ: "ಗೆಳೆಯಾ, ನಿನ್ನ ಮುಖ ಶಾಂತವಾಗಿದೆ. ನಿನ್ನ ಬಣ್ಣ ಶುದ್ಧವೂ ಕಾಂತಿಯುತವೂ ಆಗಿದೆ. ಹಾಗಾದರೆ ನಿನಗೆ ಸತ್ಯ ಸಿದ್ಧಿಸಿದೆಯೆ?"

೧೬. "ಹೌದು ಗೆಳೆಯಾ, ನನಗೆ ಸತ್ಯದ ಅರಿವುಂಟಾಗಿದೆ." "ಅದು ಹೇಗಾಯಿತು, ಗೆಳೆಯಾ?" ಆಗ ಸಾರಿಪುತ್ರನು ತನ್ನ ಮತ್ತು ಅಸ್ಸಾಜಿ ನಡುವೆ ಏನು ನಡೆಯಿತೆಂಬುದನ್ನು ತಿಳಿಸಿದನು.

೧೭. ಆಗ ಸಾರಿಪುತ್ರನಿಗೆ ಮೌದ್ಗಲಾಯನ ಹೇಳಿದ: "ಹಾಗಾದರೆ ಗೆಳೆಯಾ, ನಾನೂ ಆ ಪವಿತ್ರಾತ್ಮನನ್ನು ಸೇರಿಕೊಳ್ಳುವೆ. ಆ ಪವಿತ್ರಾತ್ಮನೇ ನಮ್ಮ ಗುರುವಾಗಲಿ."

೧೮. ಸಾರಿಪುತ್ತ ಉತ್ತರಿಸಿದ : "ಗೆಳೆಯಾ, ನಮ್ಮ ದೆಸೆಯಿಂದಾಗಿಯೇ ಈ ಇನ್ನೂರಐವತ್ತು ಅಲೆಮಾರಿ ಪರಿವ್ರಾಜಕರು ಇಲ್ಲಿ ವಾಸಿಸುತ್ತಿರುವುದು; ಅವರಿಗೆ ನಮ್ಮ ಬಗ್ಗೆ ಮಾತ್ರ ಗೌರವವಿದೆ. ಅವರಿಂದ ಬೀಳ್ಕೊಳ್ಳುವ ಮೊದಲು ಅವರಿಗೆ ಹೇಳಿಹೋಗೋಣ. ತಮಗೆ ಸರಿಕಂಡುದನ್ನು ಮಾಡಲಿ."

೧೯. ಅವರಿದ್ದಲ್ಲಿಗೆ ಸಾರಿಪುತ್ರ ಮತ್ತು ಮೌದ್ಗಲಾಯನ ಹೋದರು. ಅವರನ್ನು ಕಂಡು ಹೀಗೆ ಹೇಳಿದರು: "ಗೆಳೆಯರೆ, ನಾವು ಪವಿತ್ರಾತ್ಮನನ್ನು ಸೇರಿಕೊಳ್ಳಲು ಹೋಗುತ್ತಿದ್ದೇವೆ. ಆ ಪವಿತ್ರಾತ್ಮನೇ ನಮ್ಮ ಗುರು."

೨೦. ಅವರು ಉತ್ತರಿಸಿದನು: "ಸ್ವಾಮಿಗಳೇ, ನಿಮ್ಮ ದೆಸೆಯಿಂದಾಗಿಯೇ ನಾವಿಲ್ಲಿ ಇರುವುದು. ನಿಮ್ಮನ್ನು

ಮಾತ್ರ ನಾವು ಗೌರವಿಸುತ್ತೇವೆ. ಸ್ವಾಮಿಗಳೇ, ಆ ಮಹಾ ಶ್ರಮಣನ ಕೈಕೆಳಗೆ ನೀವು ನಿಮ್ಮ ಪವಿತ್ರ ಜೀವನ ನಡೆಸುವುದಾದರೆ, ನಾವೆಲ್ಲರೂ ಹಾಗೆಯೇ ಮಾಡುತ್ತೇವೆ."

೨೧. ಆಗ ಸಾರಿಪುತ್ರ ಮತ್ತು ಮೌದ್ಗಲಾಯ ಸಂಜಯನಿದ್ದಲ್ಲಿಗೆ ಹೋದರು. ಅವನನ್ನು ಸಂಧಿಸಿ, ಹೇಳಿದರು: "ಗೆಳೆಯಾ, ನಾವು ಪವಿತ್ರಾತ್ಮನನ್ನು ಸೇರಿಕೊಳ್ಳಲು ಹೋಗುತ್ತೇವೆ. ಆ ಪವಿತ್ರಾತ್ಮನೇ ನಮ್ಮ ಗುರು."

೨೨. ಸಂಜಯ ಉತ್ತರಿಸಿದ: "ಬೇಡ ಗೆಳೆಯಾ, ಹೋಗಬೇಡ; ನಾವು ಮೂವರೂ ಈ ಸಂಘವನ್ನು ನೋಡಿಕೊಳ್ಳೋಣ."

೨೩. ಎರಡನೇ ಸಾರಿ, ಮೂರನೇ ಸಾರಿ ಸಾರಿಪುತ್ರ ಮತ್ತು ಮೊಗ್ಗಲ್ಲಣ ಹೀಗೆ ಹೇಳಿದರೂ ಸಂಜಯ ಮಾತ್ರ ಮೊದಲಿನಂತೆಯೇ ಉತ್ತರಿಸಿದ.

೨೪. ಆಗ ಸಾರಿಪುತ್ರ ಮತ್ತು ಮೌದ್ಗಲಾಯನ ಇನ್ನೂರಐವತ್ತು ಅಲೆಮಾರಿ ಸಂನ್ಯಾಸಿಗಳನ್ನು ಕರೆದುಕೊಂಡು, ಪವಿತ್ರಾತ್ಮನು ಉಳಿದುಕೊಂಡಿದ್ದ ರಾಜಗೃಹದ ವೇಣುವನಕ್ಕೆ ಹೋದರು.

೨೫. ಆಗ ಪವಿತ್ರಾತ್ಮನು ದೂರದಿಂದ ಬಂದ ಸಾರಿಪುತ್ರ ಮತ್ತು ಮೌದ್ಗಲಾಯರನ್ನು ನೋಡಿದ. ಅವನು ಸಂನ್ಯಾಸಿಗಳನ್ನುದ್ದೇಶಿಸಿ, "ಸಂನ್ಯಾಸಿಗಳೇ, ಇಲ್ಲಿ ಇಬ್ಬರು ಸಂನ್ಯಾಸಿಗಳು ಬರುತ್ತಿದ್ದಾರೆ." ಎಂದು ಸಾರಿಪುತ್ರ ಮತ್ತು ಮೌದ್ಗಲಾಯನರನ್ನು ತೋರಿಸುತ್ತಾ ಹೇಳಿದ. "ಇವರು ನನ್ನ ಮುಖ್ಯ ಶಿಷ್ಯದ್ವಯರೂ, ಶುಭದಾಯಕದ್ವಯರೂ ಆಗಿರುತ್ತಾರೆ."

೨೬. ಅವರು ಬಿದಿರಿನ ವನಕ್ಕೆ ಬಂದು ಪವಿತ್ರಾತ್ಮನಿದ್ದಲ್ಲಿಗೆ ಹೋದರು. ಅವನ ಬಳಿ ಹೋಗಿ, ಅವನ ಕಾಲಿಗೆ ತಲೆಬಾಗಿ ಅವನಿಗೆ ಹೀಗೆ ಹೇಳಿದರು. "ಭಗವಾನ್, ತಮ್ಮಿಂದ ನಮಗೆ ದೀಕ್ಷೆಯಾಗಲಿ."

೨೭. ಆಗ ಪವಿತ್ರಾತ್ಮನು, ಸಾಮಾನ್ಯವಾಗಿ ಹೇಳುವ, ಪ್ರವೇಶ ಕೊಟ್ಟಿರುವುದನ್ನು ಸೂಚಿಸುವ "ಏಹಿ ಭಿಕ್ಕು" ("ಬನ್ನಿ ಭಿಕ್ಕುಗಳೇ") ಎಂಬ ಮಂತ್ರವನ್ನು ಪಠಿಸಿದನು ಮತ್ತು ಸಾರಿಪುತ್ತ ಮತ್ತು ಮೊಗ್ಗಲ್ಲಣ ಮತ್ತು ಆ ಇನ್ನೂರಐವತ್ತು ಜಟಿಲರು ಬುದ್ಧನ ಶಿಷ್ಯರಾದರು.

## ೪. ರಾಜ ಬಿಂಬಿಸಾರನ ಪರಿವರ್ತನೆ

೧. ರಾಜಗೃಹವು ಮಗಧ ರಾಜನಾದ ಸೇನಿಯ ಬಿಂಬಿಸಾರನ ರಾಜಧಾನಿಯಾಗಿತ್ತು.

೨. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜಟಿಲರು ಪರಿವರ್ತಿತರಾದುದನ್ನು ಕೇಳಿದ ಆ ನಗರದವರೆಲ್ಲರೂ ಪವಿತ್ರಾತ್ಮನ ಬಗ್ಗೆಯೇ ಮಾತನಾಡತೊಡಗಿದರು.

೩. ಹೀಗಾಗಿ ಅರಸ ಬಿಂಬಿಸಾರನಿಗೂ ಅವನು ನಗರಕ್ಕೆ ಆಗಮಿಸಿರುವುದು ತಿಳಿಯಿತು.

೪. "ಅತ್ಯಂತ ಸಾಂಪ್ರದಾಯಿಕರೂ ಅತ್ಯಂತ ಹಠವಾದಿಗಳೂ ಆದ ಜಟಿಲರನ್ನು ಪರಿವರ್ತಿಸಿದುದು ಸಣ್ಣ ಕೆಲಸವೇನಲ್ಲ." "ಅದೇನೋ ನಿಜ" ಎಂದುಕೊಂಡ ಅರಸ ಬಿಂಬಿಸಾರ. ಅವನು ಪವಿತ್ರಾತ್ಮನೂ, ಪೂಜ್ಯನೂ, ಪರಮ ಬುದ್ಧನೂ ಇರಬೇಕು; ಜ್ಞಾನ ಮತ್ತು ನಡತೆಯಲ್ಲಿ ಶ್ರೇಷ್ಠನಿರಬೇಕು, ಪ್ರಪಂಚವನ್ನು ತಿಳಿದವನೂ, ಸರ್ವಶ್ರೇಷ್ಠನೂ, ಜನರ ಮಾರ್ಗದರ್ಶಕನೂ, ದೇವ ಮತ್ತು ಮಾನವನ ಗುರುವೂ ಆಗಿರಬೇಕು. ತಾನು ಅರಿತ ಸತ್ಯವನ್ನು ಬೋಧಿಸುತ್ತಿರಬೇಕು.

೫. ಅವನು ಪ್ರಾರಂಭದಲ್ಲಿ ಪ್ರಿಯವಾಗುವ, ಮಧ್ಯದಲ್ಲಿ ಪ್ರಿಯವಾಗುವ, ಅಂತ್ಯದಲ್ಲಿ ಪ್ರಿಯವಾಗುವ, ಅಕ್ಷರಶಃ ಮತ್ತು ಅರ್ಥದಲ್ಲಿ ಪ್ರಿಯವಾಗುವ ಧರ್ಮವನ್ನು ಬೋಧಿಸುತ್ತಿರಬೇಕು; ಅವನು ಪರಿಪೂರ್ಣ, ಶುದ್ಧ ಹಾಗೂ ಪವಿತ್ರ ಜೀವನ ನಡೆಸುವಂತೆ ಉಪದೇಶಿಸುತ್ತಿರಬೇಕು; ಅವನಂಥ ಮನುಷ್ಯನ ದರ್ಶನ ಪಡೆಯುವುದು ಒಳ್ಳೆಯದು."

೬. ಹೀಗೆ ಯೋಚಿಸಿದ ಅರಸ ಬಿಂಬಿಸಾರನು, ಒಂದು ಲಕ್ಷದ ಇಪ್ಪತ್ತು ಸಾವಿರ ಮಗಧದ ಬ್ರಾಹ್ಮಣರನ್ನೂ, ಗೃಹಸ್ಥರನ್ನೂ ಒಡಗೂಡಿ ಪವಿತ್ರಾತ್ಮನಿದ್ದಲ್ಲಿಗೆ ಹೋದನು. ಅವನನ್ನು ಸಂಧಿಸಿ, ಗೌರವಯುತವಾಗಿ ನಮಸ್ಕರಿಸಿ, ಅವನ ಪಾದದ ಬಳಿ ಕುಳಿತುಕೊಂಡನು. ಈ ಒಂದು ಲಕ್ಷ ಇಪ್ಪತ್ತು ಸಾವಿರ ಮಗಧ ಬ್ರಾಹ್ಮಣರು ಮತ್ತು ಗೃಹಸ್ಥರಲ್ಲಿ ಕೆಲವು ಜನರು ಗೌರವಪೂರ್ವಕವಾಗಿ ಪವಿತ್ರಾತ್ಮನಿಗೆ ನಮಸ್ಕರಿಸಿ ಅವನ ಹತ್ತಿರ ಕೆಳಗೆ ಕುಳಿತರು. ಮತ್ತೆ ಕೆಲವರು ಕುಶಲೋಪರಿಗಳನ್ನು ವಿಚಾರಿಸಿ ಪವಿತ್ರಾತ್ಮನ ಬಳಿ ಕೆಳಗೆ ಕುಳಿತರು. ಮತ್ತೆ ಕೆಲವರು ತಮ್ಮ ಹೆಸರು, ಕುಲಗೋತ್ರಗಳನ್ನು ತಿಳಿಸಿ, ಅವನ ಬಳಿ, ಕೆಳಗೆ ಕುಳಿತುಕೊಂಡರು; ಮತ್ತೆ ಕೆಲವರು ಮೌನವಾಗಿ ಅವನ ಬಳಿ, ಕೆಳಗೆ ಕುಳಿತುಕೊಂಡರು.

೭. ಆಗ ಆ ಒಂದು ಲಕ್ಷ ಇಪ್ಪತ್ತು ಸಾವಿರ ಮಗಧ ಬ್ರಾಹ್ಮಣರು ಮತ್ತು ಗೃಹಸ್ಥರು, ಪವಿತ್ರ ಭಗವಾನನ ಜೊತೆಯಲ್ಲಿ ಬಂದ ಸಂನ್ಯಾಸಿಗಳ ಮಧ್ಯದಲ್ಲಿ ಉರುವೆಲ್ಲ ಕಶ್ಯಪನನ್ನೂ ನೋಡಿ ಹೀಗೆ ಯೋಚಿಸಿದರು: "ಇದು ಹೇಗೆ ಸಾಧ್ಯ? ಈ ಮಹಾಸಮಣನು ಉರುವೆಲ್ಲ ಕಸ್ಯಪನ ಕೈಕೆಳಗೆ ಪವಿತ್ರ ಜೀವನ ನಡೆಸುತ್ತಿದ್ದಾನೋ ಅಥವಾ ಉರುವೆಲ್ಲ ಕಶ್ಯಪನು ಈ ಮಹಾಸಮಣನ ಕೈಕೆಳಗೆ ಪವಿತ್ರ ಜೀವನ ನಡೆಸುತ್ತಿದ್ದಾನೆಯೋ?"

೮. ಒಂದು ಲಕ್ಷ ಇಪ್ಪತ್ತು ಸಾವಿರ ಮಗಧ ಬ್ರಾಹ್ಮಣರ ಮತ್ತು ಗೃಹಸ್ಥರ ಮನಸ್ಸಿನಲ್ಲಿ ಎದ್ದ ಈ ಚಿಂತೆಯನ್ನು ತನ್ನ ಮನಸ್ಸಿನಲ್ಲೇ ಅರಿತ ಪವಿತ್ರ ಪೂಜ್ಯನು ಉರುವೆಲ್ಲ ಕಶ್ಯಪನನ್ನು ಕುರಿತು ಹೀಗೆ ಹೇಳಿದನು: "ಎಲೈ ಉರುವೆಲ್ಲ ವಾಸಿಯೇ, ಮಹಾತ್ಮನೆಂದು ಕರೆಯಲ್ಪಡುವ ನೀನು, ನಿನ್ನ ಅಗ್ನಿಪೂಜೆಯನ್ನು ಮರೆಯುವಂಥಾದ್ದೇನನ್ನು ನೋಡಿದೆ? ನೀನು ನಿನ್ನ ಅಗ್ನಿಹೋತ್ರವನ್ನು ಮರೆತದ್ದು ಹೇಗೆ?"

೯. ಕಶ್ಯಪನು ಉತ್ತರಿಸಿದನು: "ರೂಪ, ಶಬ್ದ, ರಸ, ಇಂದ್ರಿಯಗಳಿಗೆ ಬೇಕಾದ ಹೆಂಗಸರು – ಇವುಗಳಷ್ಟೇ ಸಿಕ್ಕುತ್ತವೆ ಎಂದು ಯಜ್ಞಗಳು ಭರವಸೆ ಕೊಡುತ್ತವೆ. ಆದರೆ ಇವುಗಳೆಲ್ಲ ಅಶುದ್ಧವೆಂದು ನನಗೆ ಗೊತ್ತಾದುದರಿಂದ, ಯಜ್ಞಯಾಗಾದಿಗಳಲ್ಲಿ ನನಗೆ ಆಸಕ್ತಿ ಹೋಯಿತು."

೧೦. "ನಿನ್ನದೇನೂ ಅಭ್ಯಂತರವಿಲ್ಲದಿದ್ದರೆ, ನಿನ್ನನ್ನು ಹಾಗೆ ಯೋಚಿಸುವಂತೆ ಮಾಡಿದ್ದೇನು? ತಿಳಿಸು."

೧೧. ಆಗ ಪೂಜ್ಯ ಉರುವೆಲ್ಲ ಕಶ್ಯಪನು ತನ್ನ ಆಸನದಿಂದ ಎದ್ದು, ತನ್ನ ಒಂದು ಭುಜ ಮುಚ್ಚುವಂತೆ ವಸ್ತ್ರವನ್ನು ಸರಿಪಡಿಸಿಕೊಂಡು, ಪವಿತ್ರಾತ್ಮನ ಕಾಲಿಗೆ ತನ್ನ ತಲೆ ತಗುಲುವಂತೆ ಅಡ್ಡಬಿದ್ದು, ಪವಿತ್ರಾತ್ಮನಿಗೆ ಹೇಳಿದ: "ಪವಿತ್ರಾತ್ಮನೇ ನನ್ನ ಗುರು; ನಾನು ಅವನ ಶಿಷ್ಯ." ಆಗ ಆ ಒಂದು ಲಕ್ಷ ಇಪ್ಪತ್ತು ಸಾವಿರ ಮಗಧ ಬ್ರಾಹ್ಮಣರಿಗೂ ಗೃಹಸ್ಥರಿಗೂ "ಉರುವೆಲ್ಲ ಕಶ್ಯಪನು ಮಹಾಸವಣನ ಕೈಕೆಳಗೆ ಪವಿತ್ರ ಜೀವನ ನಡೆಸುತ್ತಿದ್ದಾನೆ" ಎಂದು ತಿಳಿಯಿತು.

೧೨. ಒಂದು ಲಕ್ಷ ಇಪ್ಪತ್ತು ಸಾವಿರ ಮಗಧ ಬ್ರಾಹ್ಮಣರ ಮತ್ತು ಗೃಹಸ್ಥರ ಮನಸ್ಸಿನಲ್ಲಿ ಎದ್ದ ಚಿಂತೆಯನ್ನು ತನ್ನ ಮನಸ್ಸಿನಲ್ಲಿಯೇ ಅರಿತ ಪವಿತ್ರಾತ್ಮನು ಅವರಿಗೆ ತನ್ನ ಧರ್ಮವನ್ನು ಬೋಧಿಸಿದನು. ಕಪ್ಪು ಚುಕ್ಕೆಗಳಿಲ್ಲದ ಬಟ್ಟೆಯು ಹೇಗೆ ಬಣ್ಣಗಳನ್ನು ಸರಿಯಾಗಿ ಪಡೆಯುತ್ತದೆಯೋ, ಹಾಗೆಯೇ ಬಿಂಬಿಸಾರನ

ಮುಖಂಡತ್ವದಲ್ಲಿ ಒಂದು ಲಕ್ಷದ ಹತ್ತು ಸಾವಿರ ಮಗಧ ಬ್ರಾಹ್ಮಣರೂ ಗೃಹಸ್ಥರೂ, ಅಲ್ಲಿ ಕುಳಿತಿದ್ದಂತೆಯೇ, ಶುದ್ಧವಾದ ಹಾಗೂ ನಿರ್ಮಲವಾದ ಧರ್ಮವೆಂಬ ಬಣ್ಣವನ್ನು ಪಡೆದರು. ಉಳಿದ ಹತ್ತು ಸಾವಿರ ಜನರು ತಾವು ಸಾಧಾರಣ ಅನುಯಾಯಿಗಳಾಗುತ್ತೇವೆಂದು ಸಾರಿದರು.

೧೩. ಆಗ ಮಗಧದ ಅರಸ ಸೇನಿಯ ಬಿಂಬಿಸಾರ, ಇದನ್ನೆಲ್ಲಾ ನೋಡಿ, ಧರ್ಮದ ಅರ್ಥವನ್ನು ತಿಳಿದುಕೊಂಡು, ಧರ್ಮದ ಸೂಕ್ಷ್ಮವನ್ನು ಭೇದಿಸಿ, ಅನಿಶ್ಚಿತತೆಯನ್ನು ದೂರ ಮಾಡಿ, ಸಂಶಯಗಳನ್ನು ಕಿತ್ತೊಗೆದು, ಪವಿತ್ರಾತ್ಮನಿಗೆ ಹೀಗೆ ಹೇಳಿದ : "ಭಗವಾನ್, ನಾನು ಹಿಂದೆ ಯುವರಾಜನಾಗಿದ್ದಾಗ, ನನಗೆ ಐದು ಆಸೆಗಳಿದ್ದವು. ಅವುಗಳನ್ನು ಈಗ ಪೂರೈಸಿಕೊಂಡೆ.

೧೪. "ಭಗವಾನ್, ನಾನು ಹಿಂದೆ ಯುವರಾಜನಾಗಿದ್ದಾಗ 'ನಾನು ಅಭಿಷಿಕ್ತ ರಾಜನಾಗಬೇಕು' ಎಂಬ ಆಸೆ ಬಂತು. ಭಗವಾನ್, ಅದು ನನ್ನ ಮೊದಲ ಆಸೆ; ಈಗ ಆ ಆಸೆ ಪೂರೈಸಿದೆ. 'ಪೂಜ್ಯನಾದ ವ್ಯಕ್ತಿ, ಪೂರ್ಣ ಜ್ಞಾನೋದಯವಾದವನು ನನ್ನ ರಾಜ್ಯಕ್ಕೆ ಬರಬೇಕು' ಎಂಬುದು, ಭಗವಾನ್, ನನ್ನ ಎರಡನೆಯ ಆಸೆ; ಅದೂ ಈಗ ನೆರವೇರಿದೆ. 'ಅಂತಹ ಪವಿತ್ರಾತ್ಮನ ಸೇವೆಯನ್ನು ನಾನು ಮಾಡಬೇಕು' ಎಂಬುದು ನನ್ನ ಮೂರನೆಯ ಆಸೆ, ಭಗವಾನ್; ಅದೂ ಸಹ ಕೈಗೂಡಿದೆ. 'ಆ ಪವಿತ್ರಾತ್ಮನು ಧರ್ಮವನ್ನು ನನಗೆ ಉಪದೇಶಿಸಲಿ' ಎಂಬುದು ನನ್ನ ನಾಲ್ಕನೆಯ ಆಸೆ. ಅದೂ ಸಹ ಈಗ ನೆರವೇರಿದೆ. 'ಆ ಪವಿತ್ರಾತ್ಮನ ಧರ್ಮ ನನಗೆ ತಿಳಿಯಲಿ' ಎಂಬುದು ಭಗವಾನ್, ನನ್ನ ಐದನೆಯ ಆಸೆ; ಈ ಆಸೆ ಸಹ ಕೈಗೂಡಿದೆ. ಭಗವಾನ್, ನಾನು ಹಿಂದೆ ಯುವರಾಜನಾಗಿದ್ದಾಗ ಹೊಂದಿದ್ದ ಇವೇ ಆ ಐದು ಆಸೆಗಳು.

೧೫. "ಅದ್ಭುತ, ಭಗವಾನ್! ಅದ್ಭುತ! ತಲೆಕೆಳಗಾಗಿ ಬಿದ್ದಿರುವುದನ್ನು ನಾವು ಮತ್ತೆ ಎಬ್ಬಿಸಿ ಹೇಗೆ ನಿಲ್ಲಿಸುತ್ತೇವೆಯೋ, ಅವ್ಯಕ್ತವಾಗಿರುವುದನ್ನು ಹೇಗೆ ವ್ಯಕ್ತಪಡಿಸುತ್ತೇವೆಯೋ, ದಾರಿ ಕಳೆದುಕೊಂಡಿರುವವರಿಗೆ ಹೇಗೆ ದಾರಿ ತೋರಿಸುತ್ತೇವೆಯೋ, ಕಣ್ಣಿದ್ದವರು ವಸ್ತುಗಳನ್ನು ನೋಡಲು ಅನುಕೂಲವಾಗುವಂತೆ ಕತ್ತಲೆಯಲ್ಲಿರುವವರಿಗೆ ಹೇಗೆ ದೀಪ ಕೊಡುತ್ತೇವೆಯೋ ಹಾಗೆ ಪವಿತ್ರಾತ್ಮನು ಧಮ್ಮವನ್ನು ಅನೇಕ ರೀತಿಯಲ್ಲಿ ಬೋಧಿಸಿದ್ದಾನೆ. ಭಗವಾನ್, ನಾನು ಬುದ್ಧನಿಗೆ ಶರಣಾಗಿದ್ದೇನೆ. ಧರ್ಮಕ್ಕೆ ಶರಣಾಗಿದ್ದೇನೆ, ಭಿಕ್ಷುಗಳ ಸಂಘಕ್ಕೆ ಶರಣಾಗಿದ್ದೇನೆ. ಪವಿತ್ರಾತ್ಮನೇ ನಾನು, ಇವತ್ತಿನಿಂದಲೇ, ನನ್ನ ಜೀವ ಇರುವವರೆಗೂ ಒಬ್ಬ ಸಾಧಾರಣ ಶಿಷ್ಯನಾಗಿ ಶರಣಾಗುತ್ತೇನೆ, ಸ್ವೀಕರಿಸು."

## ೫. ಅನಾಥಪಿಂಡಿಕನ ಪರಿವರ್ತನೆ

೧. ಕೋಸಲ ರಾಜ್ಯದ ರಾಜಧಾನಿಯಾದ ಶ್ರಾವಸ್ತಿಯಲ್ಲಿ ಸುದತ್ತನೆಂಬುವನಿದ್ದ. ಕೋಸಲವನ್ನು ಪಸೆನ್‌ಜಿತ್ (ಪ್ರಸನ್ನಜಿತ) ಎಂಬುವವನು ಆಳುತ್ತಿದ್ದ. ಸುದತ್ತನು ರಾಜನ ಕೋಶಾಧಿಕಾರಿಯಾಗಿದ್ದ. ಬಡವರಿಗೆ ಅವನು ತೋರಿಸುತ್ತಿದ್ದ ಔದಾರ್ಯದಿಂದಾಗಿ, ಅವನಿಗೆ ಅನಾಥಪಿಂಡಿಕನೆಂದು ಹೆಸರಾಯಿತು.

೨. ಭಗವಾನನು ರಾಜಗೃಹದಲ್ಲಿದ್ದಾಗ, ಅನಾಥಪಿಂಡಿಕನು ತನ್ನ ಸ್ವಂತ ಕಾರ್ಯದ ದೆಸೆಯಿಂದಾಗಿ, ಅಲ್ಲಿಗೆ ಹೋಗಬೇಕಾದ ಪ್ರಸಂಗ ಬಂದಿತು. ರಾಜಗೃಹದ ವರ್ತಕ ಸಂಘದ ಮುಖ್ಯಸ್ಥನಾದವನಿಗೆ ಅವನ ಸೋದರಿಯನ್ನು ಕೊಟ್ಟಿತ್ತು. ಅವನು ಅವಳ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದ.

೩. ಅವನು ತನ್ನ ಸೋದರಿಯ ಮನೆಗೆ ಬಂದಾಗ, ವರ್ತಕ ಸಂಘದ ಮುಖ್ಯಸ್ಥನು ಭಗವಾನನಿಗೂ

ಅವನ ಭಿಕ್ಷುಗಳಿಗೂ ಎಷ್ಟು ಪ್ರಮಾಣದ ಅಡುಗೆ ಮಾಡಿಸುವಲ್ಲಿ ನಿರತನಾಗಿದ್ದನೆಂದರೆ, ಅದನ್ನು ನೋಡಿದ ಸುದತ್ತನು ಮದುವೆ ಸಿದ್ಧತೆ ನಡೆಯುತ್ತಿದೆ ಅಥವಾ ರಾಜನನ್ನು ಆಮಂತ್ರಿಸಿರಬೇಕು ಎಂದು ಯೋಚಿಸಿದ.

೪. ಆದರೆ ಸತ್ಯವನ್ನು ತಿಳಿದಾಗ, ಭಗವಾನನನ್ನು ನೋಡಬೇಕು ಎಂಬ ಕುತೂಹಲ ಉಂಟಾಗಿ, ಅದೇ ರಾತ್ರಿ ಪವಿತ್ರಾತ್ಮನನ್ನು ನೋಡಲು ಹೊರಟ.

೫. ಅನಾಥಪಿಂಡಿಕನ ಹೃದಯದ ಅತಿಶಯ ಗುಣವನ್ನು ಗ್ರಹಿಸಿದ ಪವಿತ್ರಾತ್ಮನು ಅವನಿಗೆ ಸಾಂತ್ವನಗೊಳಿಸುವ ಭಾಷೆಯಲ್ಲಿ ಸುಖಾಗಮನ ಬಯಸಿದನು. ತನ್ನ ಸ್ಥಾನದಲ್ಲಿ ಕುಳಿತುಕೊಂಡ ಮೇಲೆ ಅನಾಥಪಿಂಡಿಕನು, ಯಾವುದಾದರೂ ಧಾರ್ಮಿಕ ವಿಷಯದ ಮೇಲೆ ಪ್ರವಚನ ಕೇಳಬೇಕೆಂಬ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದನು.

೬. ಪವಿತ್ರ ಭಗವಾನನು ಅವನ ಇಚ್ಛೆಗೆ ಪ್ರತಿಕ್ರಿಯೆ ತೋರಿಸುತ್ತಾ ಹೀಗೆ ಕೇಳಿದ: "ನಮ್ಮ ಜೀವನವನ್ನು ರೂಪಿಸುವವರಾರು? ಈಶ್ವರನೆಂಬ ವ್ಯಕ್ತಿರೂಪದ ಸೃಷ್ಟಿಕರ್ತನೆ? ಈಶ್ವರನೇ ಅದನ್ನು ಮಾಡುವುದಾದರೆ ಆ ಸೃಷ್ಟಿಕರ್ತನ ಶಕ್ತಿಗೆ ಎಲ್ಲ ಜೀವಿಗಳೂ ಮೌನವಾಗಿ ಶರಣಾಗಬೇಕು. ಅವರೆಲ್ಲ ಕುಂಬಾರನ ಕೈಯಿಂದ ರಚಿತವಾದ ಮಡಕೆಗಳಂತಿರಬೇಕು. ಪ್ರಪಂಚವನ್ನು ಈಶ್ವರನೇ ಮಾಡಿದ್ದರೆ, ದುಃಖ ಅಥವಾ ವಿಪತ್ತು ಅಥವಾ ಪಾಪ–ಇಂಥವಾವೂ ಇರಬಾರದು. ಏಕೆಂದರೆ, ಒಳ್ಳೆಯ ಮತ್ತು ಕೆಟ್ಟ ಕೆಲಸಗಳೆರಡೂ ಅವನಿಂದಲೇ ಉಂಟಾಗುತ್ತವೆ ಎಂದಾಗುತ್ತದೆ. ಹಾಗಿಲ್ಲವಾದರೆ, ಅವನ ಜೊತೆಗೆ ಬೇರೊಂದು ಕಾರಣವಿರಬೇಕು. ಆಗ ಅವನು ಸ್ವಯಂಭೂವಾಗುವುದಿಲ್ಲ. ಆದ್ದರಿಂದ, ಈಶ್ವರನ ಕಲ್ಪನೆಯನ್ನು ಬಿಡಬೇಕಾಗಿದೆ.

೭. "ಅಲ್ಲದೆ, ಸ್ವಯಂಭುವು ಕಾರಣವಾಗಿರಲಾರನೆಂದು ಹೇಳಲಾಗಿದೆ. ಗಿಡವು ಬೀಜದಿಂದ ಹೊರಬರುವಂತೆ, ನಮ್ಮ ಸುತ್ತಮುತ್ತಲಿನ ಎಲ್ಲ ವಸ್ತುಗಳೂ ಒಂದು ಕಾರಣದಿಂದ ಹೊರಬರುತ್ತವೆ. ಒಬ್ಬನೇ ಪರಮಾತ್ಮ ಎಲ್ಲ ರೀತಿಯ ವಸ್ತುಗಳಿಗೂ ಹೇಗೆ ಕಾರಣವಾಗಬಲ್ಲ? ಅದು ಅವೆಲ್ಲವನ್ನು ವ್ಯಾಪಿಸಿದರೆ ಅದೇ ಅವುಗಳನ್ನು ಖಂಡಿತವಾಗಿಯೂ ಸೃಷ್ಟಿಸಲಾರದು.

೮. "ಅಲ್ಲದೆ, ಆತ್ಮವೇ ಸೃಷ್ಟಿಕರ್ತನೆಂದು ಹೇಳಲಾಗುತ್ತದೆ. ಆದರೆ, ಆತ್ಮವೇ ಸೃಷ್ಟಿಕರ್ತನಾದರೆ, ಬರೀ ಸಂತೋಷದಾಯಕ ವಸ್ತುಗಳನ್ನೇಕೆ ಸೃಷ್ಟಿಸಲಿಲ್ಲ? ದುಃಖ ಮತ್ತು ಸುಖದ ಸಂಗತಿಗಳು ವಾಸ್ತವಿಕ ಹಾಗೂ ವಸ್ತುನಿಷ್ಠ. ಅವು ಆತ್ಮನಿಂದ ಮಾಡಲ್ಪಟ್ಟಿರಲು ಹೇಗೆ ಸಾಧ್ಯ?

೯. "ಅಲ್ಲದೆ, ಸೃಷ್ಟಿಕರ್ತನೂ ಇಲ್ಲ, ವಿಧಿಯೂ ಇಲ್ಲ, ಕಾರಣತತ್ವವೂ ಇಲ್ಲ ಎಂಬ ವಾದಕ್ಕೆ ನೀನು ಅಂಟಿಕೊಂಡರೆ, ನಮ್ಮ ಜೀವನವನ್ನು ರೂಪಿಸಿಕೊಳ್ಳುವುದರಿಂದಲೂ, ಧ್ಯೇಯಕ್ಕೆ ತಕ್ಕಂತೆ ಸಾಧನೆಗಳನ್ನು ಹೊಂದಿಸಿಕೊಳ್ಳುವುದರಿಂದಲೂ ಉಪಯೋಗವೇನು?

೧೦. "ಆದ್ದರಿಂದ ಇರುವ ವಸ್ತುಗಳೆಲ್ಲಕ್ಕೂ ಕಾರಣವಿಲ್ಲದೆ ಇಲ್ಲ ಎಂಬುದು ನಮ್ಮ ವಾದ. ಆದರೆ ಈಶ್ವರನಾಗಲಿ, ಪರಮಾತ್ಮನಾಗಲಿ, ಆತ್ಮನಾಗಲಿ, ಕಾರಣವಿಲ್ಲದ ವಿಧಿಯಾಗಲಿ, ಸೃಷ್ಟಿಕರ್ತನಲ್ಲ. ನಮ್ಮ ನಡೆಗಳೇ ಒಳ್ಳೆಯದನ್ನೂ ಕೆಟ್ಟದನ್ನೂ ಉಂಟುಮಾಡುತ್ತವೆ.

೧೧. "ಇಡೀ ವಿಶ್ವವೇ ಕಾರಣತತ್ವ ನಿಯಮಕ್ಕೊಳಪಟ್ಟಿದೆ; ಹೀಗೆ ಸಕ್ರಿಯವಾಗಿರುವ ಕಾರಣಗಳು ಅ–ಮಾನಸಿಕವಲ್ಲ; ಏಕೆಂದರೆ ಚಿನ್ನದಿಂದ ಮಾಡಲ್ಪಟ್ಟ ಲೋಟವು ಯಾವಾಗಲೂ ಚಿನ್ನವಾಗಿಯೇ ಇರುತ್ತದೆ.

೧೨. "ಆದುದರಿಂದ, ಈಶ್ವರನ ಪೂಜೆ, ಈಶ್ವರನ ಪ್ರಾರ್ಥನೆ–ಮುಂತಾದ ಪಾಖಂಡಿತನವನ್ನು ತ್ಯಜಿಸೋಣ, ನಿಷ್ಪ್ರಯೋಜಕ ಸೂಕ್ಷ್ಮ ವಿಚಾರಗಳಲ್ಲೇ ಮುಳುಗಿರುವುದು ಬೇಡ; ಆತ್ಮವನ್ನೂ ನಿಸ್ವಾರ್ಥತೆಯನ್ನೂ ತ್ಯಜಿಸೋಣ; ಎಲ್ಲವೂ ಕಾರಣ ತತ್ವಕ್ಕೆ ಅಧೀನವಾಗಿರುವುದರಿಂದ, ಒಳ್ಳೆಯದನ್ನೇ ಆಚರಿಸೋಣ– ಏಕೆಂದರೆ ನಮ್ಮ ಒಳ್ಳೆಯ ಕೆಲಸಗಳಿಂದ ಒಳ್ಳೆಯ ಫಲಿತಾಂಶವೇ ಬರುತ್ತದೆ."

೧೩. ಆಗ ಅನಾಥಪಿಂಡಿಕ ಹೇಳಿದ : "ಪವಿತ್ರಾತ್ಮನು ಹೇಳಿದ ಸತ್ಯವು ನನಗೆ ಕಾಣುತ್ತಿದೆ. ನಾನು ನನ್ನ ಮನಸ್ಸೆಲ್ಲವನ್ನೂ ಬಿಚ್ಚಿಡಬಯಸುತ್ತೇನೆ. ಭಗವಾನ್, ತಾವು ನನ್ನ ಮಾತನ್ನು ಕೇಳಿದ ಮೇಲೆ ನಾನೇನು ಮಾಡಬೇಕೆಂದು ನನಗೆ ಸಲಹೆ ಕೊಡಿ.

೧೪. "ನಾನು ಯಾವಾಗಲೂ ಕಾರ್ಯನಿರತನಾಗಿರುತ್ತೇನೆ; ಬಹಳಷ್ಟು ಸಂಪತ್ತನ್ನು ಗಳಿಸಿರುವ ನನ್ನನ್ನು ನೋಡಿಕೊಳ್ಳಲು ಹಲವಾರು ಜನರಿದ್ದಾರೆ. ಆದರೂ ನನ್ನ ಕೆಲಸಗಳು ನನಗೆ ಆನಂದ ಕೊಡುತ್ತವೆ ಹಾಗೂ ನಾನು ಅವುಗಳಲ್ಲಿ ಪೂರ್ಣ ಮನಸ್ಸಿಟ್ಟು ಮಾಡುತ್ತೇನೆ. ನನ್ನ ಕೈಕೆಳಗೆ ಅನೇಕ ನೌಕರರಿದ್ದಾರೆ ಮತ್ತು ಅವರೆಲ್ಲರೂ ನನ್ನ ಉದ್ಯೋಗದ ಯಶಸ್ಸನ್ನೇ ಅವಲಂಬಿಸಿದ್ದಾರೆ.

೧೫. "ಈಗ ತಮ್ಮ ಶಿಷ್ಯರು ಸಂನ್ಯಾಸದ ಆನಂದವನ್ನು ಶ್ಲಾಘಿಸುವುದನ್ನೂ, ಪ್ರಾಪಂಚಿಕತೆಯ ಅಸುಖವನ್ನು ಧಿಕ್ಕರಿಸುವುದನ್ನೂ ಕೇಳಿದ್ದೇನೆ. ಅವರು ಹೇಳುತ್ತಾರೆ – ಪವಿತ್ರಾತ್ಮನು ತನ್ನ ರಾಜ್ಯವನ್ನು, ಪಾರಂಪರಿಕವಾಗಿ ಬಂದ ಸಂಪತ್ತನ್ನು ತ್ಯಜಿಸಿ, ಧರ್ಮದ ಹಾದಿಯನ್ನು ಹುಡುಕಿದ್ದಾನೆ. ಹೀಗೆ, ನಿರ್ವಾಣವನ್ನು ಹೇಗೆ ಪಡೆಯಬೇಕೆಂಬುದಕ್ಕೆ ಇಡೀ ವಿಶ್ವಕ್ಕೆ ಒಂದು ಉದಾಹರಣೆಯಾಗಿದ್ದಾನೆ.

೧೬. "ಒಳ್ಳೆಯದನ್ನು ಮಾಡಬೇಕೆಂದೂ, ನನ್ನ ಸಹಚರರಿಗೆ ನಾನೊಂದು ವರವಾಗಬೇಕೆಂದೂ, ನನ್ನ ಹೃದಯ ತವಕಿಸುತ್ತಿದೆ. ಹಾಗಿದ್ದರೆ, ನನ್ನ ಸಂಪತ್ತನ್ನೂ, ನನ್ನ ಮನೆಯನ್ನೂ, ನನ್ನ ವ್ಯಾಪಾರ ವಹಿವಾಟನ್ನು ಬಿಟ್ಟುಕೊಟ್ಟು, ಧಾರ್ಮಿಕ ಜೀವನದ ಆನಂದ ಪಡೆಯಲು ನಿನ್ನಂತೆ ಗೃಹಸ್ಥ ಜೀವನ ತ್ಯಜಿಸಬೇಕೆ, ಎಂದು ಕೇಳುತ್ತಿದ್ದೇನೆ."

೧೭. ಇದಕ್ಕೆ ಪವಿತ್ರಾತ್ಮನು ಹೀಗೆ ಉತ್ತರಿಸಿದನು : "ಆರ್ಯ, ಅಷ್ಟಾಂಗಿಕ ಮಾರ್ಗವನ್ನು ಅನುಸರಿಸುವ ಪ್ರತಿಯೊಬ್ಬನಿಗೂ ಧಾರ್ಮಿಕ ಜೀವನದ ಆನಂದವನ್ನು ಪಡೆಯಲು ಸಾಧ್ಯವಿದೆ. ಸಂಪತ್ತಿಗಾಗಿ ಹಾತೊರೆಯುವವನು, ಅದರಿಂದ ತನ್ನ ಮನಸ್ಸನ್ನು ವಿಷಪೂರಿತವನ್ನಾಗಿ ಮಾಡಿಕೊಳ್ಳುವ ಬದಲು, ಅದನ್ನು ಬಿಸಾಡುವುದೇ ಮೇಲು; ಆದರೆ ಯಾರು ಸಂಪತ್ತಿಗೆ ಆಸೆಪಡದೆ, ಅದನ್ನು ಪಡೆದಿದ್ದು ಅದನ್ನು ಸತ್ಕಾರ್ಯಗಳಿಗೆ ಉಪಯೋಗಿಸುತ್ತಾನೋ, ಅವನು ತನ್ನ ಸಹಚರರಿಗೆ ಒಂದು ವರವಾಗುತ್ತಾನೆ.

೧೮. "ನಿನಗೆ ಹೇಳುವುದೇನೆಂದರೆ – ನೀನು ನಿನ್ನ (ಗೃಹಸ್ಥ) ಆಶ್ರಮದಲ್ಲೇ ಇದ್ದುಕೊಂಡು, ಆಸಕ್ತಿಯಿಂದಲೇ ನಿನ್ನ ವ್ಯಾಪಾರವನ್ನು ನಡೆಸು. ಮನುಷ್ಯರನ್ನು ದಾಸರನ್ನಾಗಿ ಮಾಡುವುದು ಜೀವನ ಮತ್ತು ಸಂಪತ್ತು ಮತ್ತು ಅಧಿಕಾರವಲ್ಲ, ಜೀವನ, ಸಂಪತ್ತು ಮತ್ತು ಅಧಿಕಾರಕ್ಕಾಗಿ ಪಡುವ ಆಸೆ.

೧೯. "ವಿಶ್ರಾಂತ ಜೀವನ ನಡೆಸುವ ಉದ್ದೇಶದಿಂದ ಪ್ರಪಂಚದಿಂದ ನಿವೃತ್ತಿ ಹೊಂದುವ ಭಿಕ್ಷುವಿಗೆ ಯಾವ ಲಾಭವೂ ಇಲ್ಲ. ಏಕೆಂದರೆ ಆಲಸ್ಯ ಖಂಡನೀಯ, ಅಲ್ಲದೆ, ಶಕ್ತಿಹೀನತೆಯನ್ನು ತಿರಸ್ಕರಿಸಬೇಕು.

೨೦. "ತಥಾಗತನ ಧಮ್ಮವು ಗೃಹಸ್ಥ ಜೀವನ ತ್ಯಜಿಸಬೇಕೆಂದಾಗಲಿ ಸಂಸಾರದಿಂದ ನಿವೃತ್ತಿ ಹೊಂದಬೇಕೆಂದಾಗಲಿ ಹೇಳುವುದಿಲ್ಲ – ಅವನಿಗೆ ಆ ಇಚ್ಛೆ ಬರುವವರೆಗೂ ಹಾಗೆ ಮಾಡಬೇಕಾಗಿಲ್ಲ; ತಥಾಗತನ ಧರ್ಮ ಏನು ಹೇಳುತ್ತದೆಯೆಂದರೆ – ಪ್ರತಿಯೊಬ್ಬರೂ ತಮ್ಮ ಆತ್ಮದ ಬಗೆಗಿನ

ಭ್ರಾಂತಿಯನ್ನು ನಿವಾರಿಸಿಕೊಳ್ಳಬೇಕು, ಹೃದಯವನ್ನು ಶುದ್ಧೀಕರಿಸಿಕೊಳ್ಳಬೇಕು, ವೈಭೋಗದ ದಾಹವನ್ನು ತ್ಯಜಿಸಬೇಕು, ಸದಾಚಾರದ ಜೀವನ ನಡೆಸಬೇಕು.

೨೧. "ನಾವು ಏನನ್ನೇ ಮಾಡಿದರೂ – ಪ್ರಪಂಚದಲ್ಲಿದ್ದುಕೊಂಡು ಕರಕುಶಲಗಳಾಗಿರಲಿ, ವರ್ತಕರಾಗಿರಲಿ, ರಾಜನ ಸೇವೆಯ ಅಧಿಕಾರಿಗಳಾಗಿರಲಿ ಅಥವಾ ಲೌಕಿಕದಿಂದ ನಿವೃತ್ತಿ ಹೊಂದಿ ಧಾರ್ಮಿಕ ಧ್ಯಾನದಲ್ಲಿ ನಿರತರಾಗಿರುವವರಾಗಿರಲಿ – ತಾವು ಮಾಡುವ ಕಾರ್ಯವನ್ನು ಹೃತ್ಪೂರ್ವಕವಾಗಿ ಮಾಡಬೇಕು. ಅವರು ಆಸಕ್ತರೂ ಕ್ರಿಯಾಶೀಲರೂ ಆಗಿರಬೇಕು; ಮತ್ತು ಕಮಲ ನೀರಿನಲ್ಲೇ ಬೆಳೆದರೂ ಹೇಗೆ ಅದಕ್ಕೆ ನೀರು ಅಂಟಿಕೊಳ್ಳುವುದಿಲ್ಲವೋ ಹಾಗೆಯೇ, ಅವರು ಅಸೂಯೆ ಮತ್ತು ದ್ವೇಷಗಳಿಲ್ಲದೆ ಜೀವನದಲ್ಲಿ ಹೋರಾಡಿದರೆ, ಪ್ರಪಂಚದಲ್ಲಿದ್ದು ಸ್ವಾರ್ಥಕ್ಕಾಗಿ ಜೀವಿಸದೆ ಸತ್ಯಕ್ಕಾಗಿ ಜೀವಿಸಿದರೆ, ಆಗ ಖಂಡಿತವಾಗಿಯೂ ಸಂತೋಷ, ಶಾಂತಿ ಮತ್ತು ಆನಂದ ಅವರ ಮನಸ್ಸಿನಲ್ಲಿ ಉಳಿಯುತ್ತವೆ."

೨೨. ಅನಾಥಪಿಂಡಿಕನು ಇದೊಂದು ಸರ್ವೋತ್ಕೃಷ್ಟ ಸತ್ಯವೆಂದೂ, ಸರಳ ಹಾಗೂ ವಿವೇಕಜನ್ಯವೆಂದೂ ಗ್ರಹಿಸಿದನು.

೨೩. ಹೀಗೆ ಸತ್ಯ ಸಿದ್ಧಾಂತದಲ್ಲಿ ಅವನ ಮನಸ್ಸು ನೆಲೆಗೊಂಡಿದ್ದರಿಂದ, ಅವನು ಪವಿತ್ರಾತ್ಮನ ಕಾಲಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿ, ಕೈಜೋಡಿಸಿ ಪ್ರಾರ್ಥಿಸಿದನು.

## ೬. ದೊರೆ ಪ್ರಸೇನಜಿತನ ಪರಿವರ್ತನೆ

೧. ಭಗವಾನನು ಬಂದಿದ್ದಾನೆಂದು ತಿಳಿದ ಅರಸ ಪ್ರಸೇನಜಿತನು ತನ್ನ ಪರಿವಾರ ಸಮೇತ ಜೇತವನ ವಿಹಾರಕ್ಕೆ ಹೋದನು. ಕೈಮುಗಿದು ನಮಸ್ಕರಿಸಿ ಅವನು ಹೀಗೆ ಹೇಳಿದನು:

೨. "ನನ್ನ ಪಾಮರ ಹಾಗೂ ಅಪ್ರಸಿದ್ಧ ರಾಜ್ಯಕ್ಕೆ ಮಹಾ ಅದೃಷ್ಟ ಒದಗಿದೆ. ಜಗದೀಶ್ವರನೇ, ಧರ್ಮರಾಜನೇ, ಸತ್ಯಪಾಲನೇ, ನೀನಿರುವಾಗ ವಿಪತ್ತುಗಳೂ ಅಪಾಯಗಳೂ ನನ್ನ ರಾಜ್ಯಕ್ಕೆ ಬರಲು ಹೇಗೆ ಸಾಧ್ಯ?

೩. "ನಿನ್ನ ಪವಿತ್ರ ಲಕ್ಷಣಗಳನ್ನು ನೋಡಿದ್ದೇವೆ. ತಂಪನ್ನೀಯುವ ನೀರಿನಂತಿರುವ ನಿನ್ನ ಬೋಧನೆಯನ್ನು ಕರುಣಿಸು.

೪. "ಲೌಕಿಕ ಲಾಭವು ಚಂಚಲ ಮತ್ತು ನಶ್ವರ. ಆದರೆ ಧಾರ್ಮಿಕ ಲಾಭವು ಶಾಶ್ವತ ಮತ್ತು ಅಕ್ಷಯ. ಲೌಕಿಕ ವ್ಯಕ್ತಿಯು, ಅವನು ರಾಜನಾಗಿದ್ದರೂ, ಯಾವಾಗಲೂ ಕಷ್ಟಗಳಲ್ಲೇ ಇರುತ್ತಾನೆ; ಆದರೆ ಒಬ್ಬ ಸಾಧಾರಣ ಮನುಷ್ಯ ಪವಿತ್ರನಾಗಿದ್ದರೆ, ಅವನ ಮನಸ್ಸಿಗೆ ಶಾಂತಿ ಲಭಿಸುತ್ತದೆ."

೫. ರಾಜನ ಹೃದಯವು ಲೋಭ ಮತ್ತು ವಿಷಯಲೋಲುಪತೆಯಿಂದ ಭಾರವಾಗಿದೆ ಎಂಬುದನ್ನು ಅರಿತ ಬುದ್ಧನು ಈ ಅವಕಾಶವನ್ನೇ ಬಳಸಿಕೊಂಡು ಹೇಳಿದ:

೬. "ಹೀನ ಕುಲದಲ್ಲಿ ಹುಟ್ಟಿದವರಿಗೂ, ಶೀಲವಂತ ಮನುಷ್ಯನನ್ನು ನೋಡಿದ ಕೂಡಲೇ, ಅವನ ಬಗ್ಗೆ ಗೌರವ ಭಾವನೆ ಮೂಡುತ್ತದೆ; ಅಂದಮೇಲೆ, ಹಿಂದಿನ ಜನ್ಮಗಳಲ್ಲಿ ಸಾಕಷ್ಟು ಪುಣ್ಯವನ್ನು ಗಳಿಸುವ ನಿನ್ನಂತಹ ಸ್ವತಂತ್ರ ರಾಜನಿಗೆ ಅಂಥ ಭಾವನೆ ಎಷ್ಟು ಹುಟ್ಟಬಹುದು?

೭. "ಈಗ ನಾನು ಧರ್ಮವನ್ನು ಸಂಕ್ಷಿಪ್ತವಾಗಿ ಹೇಳುತ್ತಾ ಹೋದಂತೆ, ಮಹಾರಾಜರು ಆಲಿಸಿ, ನನ್ನ ಪದಗಳನ್ನು ತೂಗಿನೋಡಿ, ನಾನು ಹೇಳಿದುದನ್ನು ಅಚಲವಾಗಿ ನಂಬಬೇಕು.

೮. "ನಾವು ಮಾಡಿದ ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳು ನಮ್ಮನ್ನು ಸದಾ ನೆರಳಿನಂತೆ ಹಿಂಬಾಲಿಸುತ್ತವೆ.

೯. "ನಮಗೆ ಎಲ್ಲಕ್ಕಿಂತ ಹೆಚ್ಚು ಆವಶ್ಯಕವಾದುದು ಪ್ರೇಮಮಯವಾದ ಹೃದಯ!

೧೦. "ನಮ್ಮ ಒಬ್ಬನೇ ಮಗನನ್ನು ನಾವು ಹೇಗೆ ನೋಡಿಕೊಳ್ಳುತ್ತೇವೆಯೋ, ಹಾಗೆಯೇ ನಿನ್ನ ಜನರನ್ನು ನೋಡಿಕೊಳ್ಳಬೇಕು. ಅವರನ್ನು ತುಳಿಯಬೇಡ, ನಾಶ ಮಾಡಬೇಡ, ನಿನ್ನ ದೇಹದ ಪ್ರತಿಯೊಂದು ಅಂಗವನ್ನು ಸರಿಯಾದ ನಿಯಂತ್ರಣದಲ್ಲಿಟ್ಟುಕೋ; ಸದಾಚಾರವಲ್ಲದ ಸಿದ್ಧಾಂತಗಳನ್ನು ಮರೆತುಬಿಡು ಮತ್ತು ನೇರವಾದ ಹಾದಿಯಲ್ಲಿ ನಡೆ, ಬೇರೆಯವರನ್ನು ತುಳಿದು, ನಿನ್ನನ್ನು ವಿಜೃಂಭಿಸಿಕೊಳ್ಳಬೇಡ, ನರಳುತ್ತಿರುವವರಿಗೆ ಸಾಂತ್ವನ ಮತ್ತು ಸ್ನೇಹವನ್ನು ನೀಡು.

೧೧. "ರಾಜಮರ್ಯಾದೆಯ ಬಗ್ಗೆಯೂ ಚಿಂತಿಸಬೇಡ. ಹೊಗಳುಭಟ್ಟರ ಮೃದುವಚನಗಳನ್ನು ಕೇಳಿಸಿಕೊಳ್ಳಬೇಡ.

೧೨. "ಕಾಟವೆನಿಸುವಷ್ಟು ಅತಿಯಾದ ಕಠಿಣ ಜೀವನ ಬೇಡ. ಆದರೆ ಧರ್ಮವನ್ನು ಕುರಿತು ಧ್ಯಾನಿಸು ಹಾಗೂ ಸದಾಚಾರದ ನಿಯಮಗಳಿಗೆ ಬೆಲೆ ಕೊಡು.

೧೩. "ನಾವು ನಾಲ್ಕು ಕಡೆಗಳಿಂದ ಕಲ್ಲುಬಂಡೆಗಳಂತಿರುವ ದುಃಖ ಮತ್ತು ಅನಿಷ್ಟಗಳಿಂದ ಸುತ್ತುವರಿಯಲ್ಪಟ್ಟಿದ್ದೇವೆ ಹಾಗೂ ಸದ್ಧರ್ಮವನ್ನು ಪರಿಗಣಿಸಿದರೆ ಮಾತ್ರ ಈ ದುಃಖಮಯವಾದ ಬೆಟ್ಟದಿಂದ ತಪ್ಪಿಸಿಕೊಳ್ಳಬಹುದು.

೧೪. "ಹಾಗಾದರೆ, ನ್ಯಾಯವಾಗಿ ನಡೆದುಕೊಳ್ಳುವುದರಿಂದ ಲಾಭವೇನು?

೧೫. "ವಿವೇಕಿಗಳೆಲ್ಲರೂ ದೈಹಿಕ ಸುಖವನ್ನು ತಿರಸ್ಕರಿಸುತ್ತಾರೆ. ಅವರು ಕಾಮವನ್ನು ಇಷ್ಟಪಡುವುದಿಲ್ಲ ಹಾಗೂ ಆಧ್ಯಾತ್ಮಿಕ ಜೀವನದ ಉನ್ನತಿಗೆ ಪ್ರಯತ್ನಿಸುತ್ತಾರೆ.

೧೬. "ಒಂದು ಮರವು ಭಯಂಕರ ಜ್ವಾಲೆಗಳಿಂದ ಉರಿಯುತ್ತಿರಬೇಕಾದರೆ, ಅದರಲ್ಲಿ ಹಕ್ಕಿಗಳು ಬಂದು ಸೇರಲು ಹೇಗೆ ಸಾಧ್ಯ? ಲೋಭಗಳಿದ್ದಲ್ಲಿ ಸತ್ಯವಿರಲಾರದು. ಋಷಿಯೆಂದು ಹೊಗಳಲ್ಪಡುವ ಬುದ್ಧಿವಂತನಿಗೂ ಸಹ ಇಷ್ಟು ವಿವೇಕವಿಲ್ಲದಿದ್ದರೆ, ಅವನು ಅಜ್ಞಾನಿಯೇ ಸರಿ.

೧೭. "ಈ ವಿವೇಕವಿದ್ದವನಿಗೆ ನಿಜವಾದ ಜ್ಞಾನೋದಯವಾಗುತ್ತದೆ. ಇಂತಹ ವಿವೇಕವನ್ನು ಪಡೆಯುವುದೇ ಒಂದು ಗುರಿಯಾಗಬೇಕು. ಅದನ್ನು ನಿರ್ಲಕ್ಷಿಸುವುದೇ ಜೀವನದ ವೈಫಲ್ಯ.

೧೮. "ಎಲ್ಲ ದರ್ಶನಗಳ ಬೋಧನೆಗಳೂ ಇಲ್ಲೇ ಕೇಂದ್ರೀಕೃತವಾಗಬೇಕು. ಏಕೆಂದರೆ ಅದಿಲ್ಲದಿದ್ದರೆ ವೈಚಾರಿಕತೆಯೇ ಇಲ್ಲ.

೧೯. "ಈ ಸತ್ಯವು ಕೇವಲ ಸಂನ್ಯಾಸಿಗಲ್ಲ – ಇದು ಎಲ್ಲರಿಗೂ – ಪುರೋಹಿತರಿಗೆ ಹೇಗೋ ಹಾಗೆ ಸಾಧಾರಣ ಮನುಷ್ಯನಿಗೂ ಅನ್ವಯಿಸುತ್ತದೆ. ಈ ವಿಷಯದಲ್ಲಿ ದೀಕ್ಷೆಯನ್ನು ಸ್ವೀಕರಿಸುವ ಸಂನ್ಯಾಸಿಗೂ, ಕುಟುಂಬದಲ್ಲಿ ವಾಸಿಸುವ ಪ್ರಾಪಂಚಿಕನಿಗೂ ಏನೂ ವ್ಯತ್ಯಾಸವಿಲ್ಲ. ನರಕಕ್ಕೆ ಬೀಳುವ ಸಂನ್ಯಾಸಿಗಳೂ ಇದ್ದಾರೆ, ಋಷಿಗಳ ಸ್ಥಾನಕ್ಕೇರುವ ದೀನ ಗೃಹಸ್ಥರೂ ಇದ್ದಾರೆ.

೨೦. "ಕಾಮದ ಪ್ರವಾಹವು ಎಲ್ಲರಿಗೂ ಬರುವ ಅಪಾಯ. ಅದು ಪ್ರಪಂಚವನ್ನೇ ಸೆಳೆದುಕೊಂಡು ಹೋಗುತ್ತದೆ. ಅದರ ಸುಳಿಯಲ್ಲಿ ಸಿಲುಕಿರುವವನು ತಪ್ಪಿಸಿಕೊಳ್ಳುವಂತಿಲ್ಲ. ಆದರೆ ವಿವೇಕವೆಂಬ ದೋಣಿಯಿದೆ. ಅದರಲ್ಲಿ ಚಿಂತನಾಶಕ್ತಿ ಎಂಬ ಚುಕ್ಕಾಣಿ ಇದೆ. ಮಾರನೆಂಬ ವೈರಿಯ ಧಾಳಿಯಿಂದ ನಿನ್ನ ಆತ್ಮವನ್ನು ರಕ್ಷಿಸಿಕೊಳ್ಳಲು ಧರ್ಮದ ಘೋಷಣೆಯು ನಿನ್ನನ್ನು ಕರೆಯುತ್ತದೆ.

೨೧. "ನಮ್ಮ ಕೆಲಸಗಳ ಫಲದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದ್ದರಿಂದ ಸತ್ಕಾರ್ಯವನ್ನಷ್ಟೇ ಮಾಡೋಣ.

೨೨. "ನಾನು ಕೇಡನ್ನು ಮಾಡುವುದಿಲ್ಲ ಎಂಬ ನಮ್ಮ ಯೋಚನೆಯನ್ನು ಪರೀಕ್ಷಿಸಿಕೊಳ್ಳೋಣ. ಏಕೆಂದರೆ, ನಾವು ಬಿತ್ತಿದ್ದನ್ನೇ ಬೆಳೆಯುತ್ತೇವೆ.

೨೩. "ಬೆಳಕಿನಿಂದ ಕತ್ತಲೆಗೆ ಹೋಗಲು ದಾರಿಗಳಿವೆ ಹಾಗೂ ಕತ್ತಲೆಯಿಂದ ಬೆಳಕಿಗೆ ಹೋಗಲೂ ದಾರಿಗಳಿವೆ. ಮಬ್ಬಿನಿಂದ ಹೆಚ್ಚು ಕತ್ತಲೆಗೆ ಹೋಗಲೂ ದಾರಿಗಳಿವೆ. ನಸುಕಿನಿಂದ ಹೆಚ್ಚು ಬೆಳಕಿಗೆ ಹೋಗಲೂ ದಾರಿಗಳಿವೆ. ವಿವೇಕಿಯು ಹೆಚ್ಚು ಬೆಳಕನ್ನು ಪಡೆಯಲು ಇದ್ದ ಬೆಳಕನ್ನು ಬಳಸಿಕೊಳ್ಳುತ್ತಾನೆ. ಅವನು ಯಾವಾಗಲೂ ಸತ್ಯದ ಜ್ಞಾನದ ಕಡೆಗೆ ಸಾಗುತ್ತಾನೆ.

೨೪. "ಸದ್ವರ್ತನೆ ಹಾಗೂ ವಿವೇಕದ ಮೂಲಕ ನಿಜವಾದ ಶ್ರೇಷ್ಠತೆಯನ್ನು ಪ್ರದರ್ಶಿಸು, ಪ್ರಾಪಂಚಿಕ ವಸ್ತುಗಳ ನಿಸ್ಸಾರತೆಯ ಬಗ್ಗೆ ಯಾವಾಗಲೂ ಧ್ಯಾನಿಸು, ಜೀವನದ ಚಂಚಲತೆಯನ್ನು ಅರಿತುಕೊ.

೨೫. "ಮನಸ್ಸನ್ನು ಉನ್ನತ ಸ್ಥಾನಕ್ಕೇರಿಸು ಹಾಗೂ ಪ್ರಾಮಾಣಿಕ, ವಿಶ್ವಾಸ ಮತ್ತು ಅಚಲ ಧ್ಯೇಯ ಇರಲಿ; ರಾಜಯೋಗ್ಯವಾದ ವರ್ತನೆಯ ನಿಯಮಗಳನ್ನು ಅತಿಕ್ರಮಿಸಬೇಡ; ಮತ್ತು ನಿನ್ನ ಸುಖವು ನಿನ್ನ ಮನಸ್ಸನ್ನವಲಂಬಿಸಬೇಕೇ ಹೊರತು, ಬಾಹ್ಯ ವಸ್ತುಗಳನ್ನಲ್ಲ. ಹೀಗೆ ಮುಂದಿನ ಯುಗಗಳಿಗೆ ನೀನೊಂದು ಒಳ್ಳೆಯ ಉದಾಹರಣೆಯಾಗುತ್ತೀಯ."

೨೬. ಪವಿತ್ರಾತ್ಮನು ಹೇಳಿದ ಎಲ್ಲ ಮಾತುಗಳನ್ನು ಅರಸನು ಗೌರವದಿಂದ ಕೇಳಿಸಿಕೊಂಡನಲ್ಲದೆ, ಅವೆಲ್ಲವನ್ನೂ ತನ್ನ ಹೃದಯದಲ್ಲಿ ನೆನಪಿಟ್ಟುಕೊಂಡು ತಾನು ಓರ್ವ ಸಾಧಾರಣ ಶಿಷ್ಯನಾಗುವುದಾಗಿ ಮಾತು ಕೊಟ್ಟನು.

## ೭. ಜೀವಕನ ಪರಿವರ್ತನೆ

೧. ಜೀವಕನು ಶೆಲ್ವತಿ ಎಂಬ ರಾಜಗೃಹದ ವೇಶ್ಯೆಯೊಬ್ಬಳ ಮಗ.

೨. ಅಕ್ರಮವಾಗಿ ಹುಟ್ಟಿದ ಈ ಮಗುವನ್ನು ಹುಟ್ಟಿದ ಕೂಡಲೇ ಅದನ್ನು ಒಂದು ಬುಟ್ಟಿಯಲ್ಲಿಟ್ಟು, ಆ ಬುಟ್ಟಿಯನ್ನು ತಿಪ್ಪೆಯಲ್ಲಿ ಬಿಸಾಕಲಾಗಿದ್ದಿತು.

೩. ಬಹಳ ಜನರು ತಿಪ್ಪೆಯ ಮೇಲಿದ್ದ ಮಗುವನ್ನು ನೋಡುತ್ತಾ ನಿಂತಿದ್ದರು. ರಾಜಕುಮಾರ ಅಭಯನು ಆ ಮಾರ್ಗವಾಗೇ ಹೋಗಬೇಕಾಗಿ ಬಂತು. ಜನರನ್ನು ಪ್ರಶ್ನಿಸಿದಾಗ, ಅವರು "ಅದಿನ್ನೂ ಜೀವಂತವಿದೆ" ಎಂದರು.

೪. ಈ ಕಾರಣಕ್ಕಾಗಿ ಆ ಮಗುವಿಗೆ "ಜೀವಕ"ನೆಂಬ ಹೆಸರು ಬಂತು. ಅಭಯನು ಅವನನ್ನು ತಂದು ಸಾಕತೊಡಗಿದನು.

೫. ದೊಡ್ಡವನಾದ ಮೇಲೆ ಜೀವಕನು ತಾನು ಹೇಗೆ ರಕ್ಷಿಸಲ್ಪಟ್ಟೆ ಎಂಬುದನ್ನು ತಿಳಿದನು ಹಾಗೂ ತಾನೂ ಇತರರನ್ನು ರಕ್ಷಿಸುವಷ್ಟು ಯೋಗ್ಯತೆಯನ್ನು ಪಡೆಯಬೇಕೆಂಬ ಬಲವಾದ ಇಚ್ಛೆ ಅವನಲ್ಲಿ ಮೂಡಿತು.

೬. ಅಭಯನ ಅನುಮತಿಯಿಲ್ಲದೆ ಹಾಗೂ ಅವನಿಗೆ ಗೊತ್ತಿಲ್ಲದಂತೆ, ಅವನು ತಕ್ಷಶಿಲೆ ವಿಶ್ವವಿದ್ಯಾಲಯಕ್ಕೆ ಹೋಗಿ, ಅಲ್ಲಿ ಏಳು ವರ್ಷಗಳ ಕಾಲ ಔಷಧಶಾಸ್ತ್ರವನ್ನು ಅಭ್ಯಸಿಸಿದನು.

೭. ಅನಂತರ ರಾಜಗೃಹಕ್ಕೆ ಹಿಂತಿರುಗಿ ವೈದ್ಯವೃತ್ತಿಯನ್ನು ಆರಂಭಿಸಿದನು. ಅತ್ಯಲ್ಪ ಕಾಲದಲ್ಲೇ ತನ್ನ ವೃತ್ತಿಯಲ್ಲಿ ಒಳ್ಳೆಯ ಹೆಸರು ಹಾಗೂ ಕೀರ್ತಿಯನ್ನು ಗಳಿಸಿದನು.

೮. ಅವನ ಮೊದಲನೇ ರೋಗಿಯೆಂದರೆ ಸಾಕೇತ ನಗರದ ಶೆಟ್ಟಿಯ ಹೆಂಡತಿ; ಅವಳ ರೋಗವನ್ನು ಗುಣಪಡಿಸಿದ್ದಕ್ಕಾಗಿ, ಅವನು ಹದಿನಾರು ಸಾವಿರ ಕಹಪಣ, ಒಬ್ಬ ಸೇವಕ, ಒಬ್ಬ ಸೇವಕಿ, ಕುದುರೆ ಸಹಿತ ಒಂದು ರಥ – ಇವುಗಳನ್ನು ಪಡೆದನು.

೯. ಅವನ ಸಾಮರ್ಥ್ಯವನ್ನರಿತ ಅಭಯನು ತನ್ನ ರಾಜವಾಡೆಯಲ್ಲೇ ಅವನಿಗೆ ವಾಸಸ್ಥಳ ಕೊಟ್ಟನು.

೧೦. ರಾಜಗೃಹದಲ್ಲಿ ಬಿಂಬಸಾರನಿಗೆ ಬಹಳ ತೊಂದರೆ ಕೊಡುತ್ತಿದ್ದ ಭಗಂದರವನ್ನು ಗುಣಪಡಿಸಿದನು. ಇದಕ್ಕೆ ಪ್ರತಿಯಾಗಿ ಅವನು ಬಿಂಬಸಾರನ ಐನೂರು ಹೆಂಡಂದಿರ ಎಲ್ಲ ಆಭರಣಗಳನ್ನೂ ಪಡೆದಿದ್ದ ಎನ್ನಲಾಗುತ್ತಿತ್ತು.

೧೧. ಜೀವಕನು ಗುಣಪಡಿಸಿದವುಗಳಲ್ಲಿ ಮುಖ್ಯವಾದುವೆಂದರೆ, ರಾಜಗೃಹದ ಸೇಠಿಯೊಬ್ಬನನ್ನು ತಲೆಚಿಪ್ಪು ಕೊರೆದು ಶಸ್ತ್ರಚಿಕಿತ್ಸೆ ಮಾಡಿದುದು; ಬನಾರಸ್ಸಿನ ಸೇಠಿಯೊಬ್ಬನ ಮಗನ ಕರುಳು ಸರಿದು ಪದೇಪದೇ ಉಂಟಾಗುತ್ತಿದ್ದ ತೊಂದರೆಯನ್ನು ನಿವಾರಿಸಿದುದು.

೧೨. ಜೀವಕನು ರಾಜನ ಹಾಗೂ ಅಂತಃಪುರದವರ ವೈದ್ಯನೆಂದು ನೇಮಕಗೊಂಡನು.

೧೩. ಆದರೆ ಜೀವಕನಿಗೆ ಭಗವಾನ್ ಬುದ್ಧನೆಂದರೆ ಬಹಳ ಪ್ರೀತಿ. ಆದುದರಿಂದ ಅವನು ಬುದ್ಧನ ಹಾಗೂ ಅವನ ಸಂಘದ ವೈದ್ಯನೆಂದೂ ಕೆಲಸ ಮಾಡತೊಡಗಿದ.

೧೪. ಅವನು ಭಗವಾನನ ಶಿಷ್ಯನಾದ. ಆದರೆ ಜೀವಕನು ರೋಗಿಗಳನ್ನೂ ಗಾಯಾಳುಗಳನ್ನೂ ನೋಡಿಕೊಳ್ಳಲು ಸ್ವತಂತ್ರವಾಗಿರಲಿ ಎಂಬ ಉದ್ದೇಶದಿಂದ, ಭಗವಾನನು ಅವನನ್ನು ಭಿಕ್ಷುವನ್ನಾಗಿ ಮಾಡಲಿಲ್ಲ.

೧೫. ಬಿಂಬಸಾರನು ತೀರಿಕೊಂಡಾಗ, ಜೀವಕನು ಅವನ ಮಗ ಅಜಾತಶತ್ರುವಿನ ಸೇವೆಯನ್ನು ಮಾಡತೊಡಗಿದನಲ್ಲದೆ, ಅವನು ಪಿತೃಘಾತಕತನ ಮಾಡಿದ ಮೇಲೆ ಅವನನ್ನು ಭಗವಾನನ ಬಳಿ ಕರೆದುಕೊಂಡು ಬರುವಲ್ಲಿ ಮುಖ್ಯಪಾತ್ರ ವಹಿಸಿದ್ದನು.

## ೮. ರಾಷ್ಟ್ರಪಾಲನ ಪರಿವರ್ತನೆ

೧. ಒಂದು ಸಾರಿ ಭಗವಾನನು ಒಂದು ದೊಡ್ಡ ಭಿಕ್ಷುಗಳ ಪರಿವಾರದೊಂದಿಗೆ ಭಿಕ್ಷಾಟನೆಗೆಂದು ಕುರುದೇಶದಲ್ಲಿದ್ದಾಗ, ಥುಲ್ಲಕೋಟ್ಠಿತವೆಂಬ ಪಟ್ಟಣದಲ್ಲಿ ತಂಗಿದ್ದನು.

೨. ಇದು ಕುರುಗಳಿಗೆ ತಿಳಿದಾಗ, ಅವರು ತಮ್ಮ ಗೌರವವನ್ನು ಸಲ್ಲಿಸಲು ಅವನಲ್ಲಿಗೆ ಹೋದರು.

೩. ಅವರೆಲ್ಲರೂ ಕುಳಿತುಕೊಂಡ ಮೇಲೆ, ಭಗವಾನನು ಅವರಿಗೆ ತನ್ನ ಸಿದ್ಧಾಂತವನ್ನು ಬೋಧಿಸಿದನು. ಭಗವಾನನಿಂದ ಉಪದೇಶವನ್ನು ಪಡೆದಮೇಲೆ ಥುಲ್ಲಕೋಟ್ಠಿತದ ಬ್ರಾಹ್ಮಣರ ಮನೆಗಳ ಮುಖ್ಯಸ್ಥರು ಅವನಿಗೆ ಕೃತಜ್ಞತಾಪೂರ್ವಕವಾಗಿ ವಂದಿಸಿ ಎದ್ದು ನಿಂತು, ಗಾಢವಾದ ಗೌರವವನ್ನು ತೋರಿಸಿ ಹೊರಟರು.

೪. ಅಲ್ಲಿ ಕುಳಿತಿದ್ದವರಲ್ಲಿ ರಾಷ್ಟ್ರಪಾಲನೆಂಬ ಯುವಕ ಇದ್ದನು. ಆ ಊರಿನ ಗಣ್ಯ ಕುಟುಂಬಗಳೊಂದರ ಕುಡಿಯಾಗಿದ್ದ ಅವನಿಗೆ, ಈ ಯೋಚನೆ ಬಂದಿತು. "ನನಗೆ ತಿಳಿದಿರುವಂತೆ, ಪೂರ್ಣ, ಶುದ್ಧ, ನಿರ್ಮಲವಾದ, ಉನ್ನತವಾದ ಜೀವನವನ್ನು ಬದುಕಬೇಕೆಂಬ ಹೇಳುವ ಭಗವಾನನ ಸಿದ್ಧಾಂತವನ್ನು ಆಚರಿಸುವುದು ಗೃಹಸ್ಥ ಜೀವನ ನಡೆಸುವವನಿಗೆ ಸುಲಭದ ವಿಷಯವೇನಲ್ಲ."

೫. "ನಾನು, ತಲೆಯನ್ನೂ, ಗಡ್ಡವನ್ನೂ ಬೋಳಿಸಿಕೊಂಡು, ಹಳದಿ ವಸ್ತ್ರವನ್ನು ಉಟ್ಟುಕೊಂಡು, ಗೃಹಸ್ಥಾಶ್ರಮವನ್ನು ತ್ಯಜಿಸಿ ಮನೆಯಿಲ್ಲದ ಸಂನ್ಯಾಸಿಯಂತೆ, ಯಾತ್ರಾರ್ಥಿಯಾದರೆ ಹೇಗೆ!"

೬. ಬಂದಿದ್ದ ಬ್ರಾಹ್ಮಣರು ಇನ್ನೂ ದೂರ ಹೋಗಿರಲಿಲ್ಲ, ಆಗ ರಟ್ಠಪಾಲನು ಮುಂದೆ ಬಂದು, ಬುದ್ಧನಿಗೆ ನಮಸ್ಕರಿಸಿ, ತನ್ನ ಮನಸ್ಸಿನಲ್ಲಿ ಬಂದಿದ್ದ ಯೋಚನೆಯನ್ನು ವ್ಯಕ್ತಪಡಿಸಿದನು ಹಾಗೂ ತನ್ನ ಸಹಚರರಲ್ಲಿ ಒಬ್ಬನನ್ನಾಗಿ ಸೇರಿಸಿಕೊಳ್ಳುವಂತೆ ಕೇಳಿಕೊಂಡ.

೭. "ರಾಷ್ಟ್ರಪಾಲ, ಈ ಹೆಜ್ಜೆಯನ್ನಿಡಲು ನಿನ್ನ ತಂದೆತಾಯಿಗಳ ಅಪ್ಪಣೆ ಪಡೆದಿದ್ದೀಯಾ?" ಎಂದು ಭಗವಾನ್ ಕೇಳಿದನು.

೮. "ಇಲ್ಲ ಸ್ವಾಮಿ."

೯. "ತಂದೆತಾಯಿಗಳ ಅಪ್ಪಣೆ ಪಡೆಯದವರನ್ನು ನಾನು ಸೇರಿಸಿಕೊಳ್ಳುವುದಿಲ್ಲ."

೧೦. "ಸ್ವಾಮಿ, ಅದನ್ನು ಪಡೆಯುವ ಏರ್ಪಾಡು ಮಾಡುತ್ತೇನೆ" ಎಂದು ಎದ್ದ ಯುವಕ. ಬುದ್ಧನಿಂದ ಗೌರವಪೂರ್ವಕವಾಗಿ ಬೀಳ್ಕೊಂಡು, ತನ್ನ ತಂದೆತಾಯಿಗಳ ಬಳಿ ಹೋಗಿ, ಅವರಿಗೆ ತನ್ನ ಯೋಚನೆಗಳನ್ನು ತಿಳಿಸಿದನಲ್ಲದೆ, ಭಿಕ್ಷುವಾಗಲು ಅವರ ಅನುಮತಿ ಕೇಳಿದನು.

೧೧. ಅವನ ತಂದೆತಾಯಿಗಳು ಹೀಗೆ ಉತ್ತರಿಸಿದರು: "ಪ್ರಿಯ ರಾಷ್ಟ್ರಪಾಲನೆ, ನೀನು ನಮ್ಮ ಒಬ್ಬನೇ ಮಗ; ಬಹಳ ಪ್ರೀತಿಪಾತ್ರನಾದವನು; ನೀನು ಸುಖವಾಗಿದ್ದೀಯ; ಸುಖದಲ್ಲೇ ನಿನ್ನನ್ನು ಬೆಳೆಸಿದ್ದೇವೆ, ಕಷ್ಟಗಳ ಅನುಭವವೇ ನಿನಗಿಲ್ಲ, ಹೋಗು. ತಿನ್ನು, ಕುಡಿ, ಸುಖಪಡು. ಸಂತೋಷದಿಂದ ಒಳ್ಳೆಯ ಕೆಲಸ ಮಾಡು. ನಾವು ಅನುಮತಿ ಕೊಡಲು ನಿರಾಕರಿಸುತ್ತೇವೆ.

೧೨. "ನಿನ್ನ ಸಾವು ನಮ್ಮನ್ನು ಅನಾಥರನ್ನಾಗಿ ಮಾಡುತ್ತದೆ. ಅದರಿಂದ ನಮ್ಮ ಜೀವನದಲ್ಲಿ ಏನೂ ಸಂತೋಷವಿಲ್ಲದಂತಾಗುತ್ತದೆ. ನಾವು ಬದುಕಿದ್ದಾಗಲೇ ನೀನು ಮನೆ ಬಿಟ್ಟು ಹೋಗಿ ಮನೆಯಿಲ್ಲದ ಭಿಕ್ಷುವಾಗಲು ನಾವೇಕೆ ಸಮ್ಮತಿಸಬೇಕು?"

೧೩. ರಾಷ್ಟ್ರಪಾಲನು ಎರಡನೇ ಸಾರಿ ಮತ್ತು ಮೂರನೇ ಸಾರಿ, ತನ್ನ ಬೇಡಿಕೆಯನ್ನು ಪುನರುಚ್ಚರಿಸಿದನು; ಆದರೆ ಅವನ ತಂದೆತಾಯಿಗಳು ಅದೇ ರೀತಿ ನಿರಾಕರಿಸಿದರು.

೧೪. ತಂದೆತಾಯಿಗಳ ಅನುಮತಿ ಪಡೆಯುವಲ್ಲಿ ಸೋತ ಆ ಯುವಕ ಬರೀ ನೆಲದ ಮೇಲೆ ಬಿದ್ದುಕೊಂಡು, ತಾನು ಸಾಯಬೇಕು ಇಲ್ಲವೇ ಭಿಕ್ಷುವಾಗಬೇಕು ಎಂದು ಘೋಷಿಸಿದನು.

೧೫. ಅವನು ಭಿಕ್ಷುವಾಗಲು ತಮ್ಮ ಆಕ್ಷೇಪಣೆಗಳನ್ನು ಪುನರುಚ್ಚರಿಸುತ್ತಾ ಅವನ ತಂದೆ–ತಾಯಿಗಳು ಅವನನ್ನು ಮೇಲೇಳಲು ಬೇಡಿಕೊಂಡರು. ಆದರೆ ಆ ಯುವಕ ಒಂದು ಮಾತನ್ನೂ ಆಡಲಿಲ್ಲ. ಅವರು ಎರಡನೇ ಹಾಗೂ ಮೂರನೇ ಸಾರಿ ಬೇಡಿಕೊಂಡರೂ ಅವನು ಒಂದು ಮಾತನ್ನೂ ಆಡಲಿಲ್ಲ.

೧೬. ಆಗ ಆ ತಂದೆತಾಯಿಗಳು ರಟ್ಠಪಾಲನ ಗೆಳೆಯರನ್ನು ಹುಡುಕಿಕೊಂಡು ಹೋಗಿ, ಅವರಿಗೆ ಇದೆಲ್ಲವನ್ನೂ ತಿಳಿಸಿದರು ಹಾಗೂ ತಂದೆತಾಯಿಗಳು ಹೇಳಿದುದನ್ನೇ ಅವರೂ ಅವನಿಗೆ ಹೇಳುವಂತೆ ಅವರನ್ನು ಒತ್ತಾಯಿಸಿದರು.

೧೭. ಅವನ ಗೆಳೆಯರು ಮೂರು ಸಾರಿ ಅವನನ್ನು ಬೇಡಿಕೊಂಡರು. ಆದರೂ ಅವನು ಒಂದು ಮಾತನ್ನೂ ಆಡಲಿಲ್ಲ. ಆಗ ಅವನ ಗೆಳೆಯರು ಆತನ ತಂದೆತಾಯಿಗಳಿಗೆ ಈ ರೀತಿ ವರದಿ ಸಲ್ಲಿಸಿದರು: "ಅವನು ಬರೀ ನೆಲದ ಮೇಲೆ ಬಿದ್ದುಕೊಂಡು, ನಾನು ಸಾಯುತ್ತೇನೆ ಇಲ್ಲವೇ

ಭಿಕ್ಷುವಾಗುತ್ತೇನೆ ಎಂದು ಘೋಷಿಸುತ್ತಿದ್ದಾನೆ. ನೀವು ಅವನಿಗೆ ಅನುಮತಿ ಕೊಡಲು ನಿರಾಕರಿಸಿದರೆ ಅವನು ಜೀವಂತವಾಗಿ ಮೇಲೇಳುವುದೇ ಇಲ್ಲ. ನೀವು ನಿಮ್ಮ ಅನುಮತಿ ಕೊಟ್ಟರೆ, ಭಿಕ್ಷುವಾಗಿ ಅವನನ್ನು ನೋಡಬಹುದು. ಭಿಕ್ಷುವಾಗಬೇಕೆಂಬ ಆಸೆ ಬಿಟ್ಟರೆ ಅವನಿಗೆ ಬೇರೇನು ಆಸೆಯಿದೆ! ಏಕೆ, ಇಲ್ಲಿಗೇ ಹಿಂತಿರುಗಿ ಬರಲು ತಾನೇ? ಆದುದರಿಂದ, ಅವನಿಗೆ ಅನುಮತಿ ಕೊಡಿ" ಎಂದು ಅವರು ಒತ್ತಾಯಿಸಿದರು.

೧೮. "ಆಗಲಿ, ನಾವು ಒಪ್ಪಿಗೆ ಕೊಡುತ್ತೇವೆ. ಆದರೆ, ಅವನು ಭಿಕ್ಷುವಾದ ಮೇಲೆ, ಅವನು ನಮ್ಮನ್ನು ನೋಡಲು ಬರಬೇಕು."

೧೯. ಅನಂತರ ರಾಷ್ಟ್ರಪಾಲನ ಗೆಳೆಯರು ಅವನ ಬಳಿ ಬಂದು, ಅವನ ತಂದೆ–ತಾಯಿಗಳು ಅಪ್ಪಣೆ ಕೊಟ್ಟಿರುವುದಾಗಿಯೂ, ಆದರೆ ಭಿಕ್ಷುವಾದ ಮೇಲೆ ಅವನು ತಂದೆತಾಯಿಗಳನ್ನು ನೋಡಲು ಬರಬೇಕೆಂದೂ ತಿಳಿಸಿದರು.

೨೦. ಆಗ ಆ ಯುವಕ ಮೇಲೆದ್ದನು ಮತ್ತು ಸ್ವಲ್ಪ ಶಕ್ತಿ ಬಂದ ಮೇಲೆ, ಭಗವಾನನ ಬಳಿ ಹೋಗಿ, ನಮಸ್ಕರಿಸಿ, ಒಂದು ಕಡೆ ಕುಳಿತುಕೊಂಡ ನಂತರ ಹೀಗೆ ಹೇಳಿದ : "ನಾನು ಭಿಕ್ಷುವಾಗಲು ತನ್ನ ತಂದೆತಾಯಿಗಳ ಅನುಮತಿ ಪಡೆದಿದ್ದೇನೆ. ನನ್ನನ್ನೂ ಸಂಘಕ್ಕೆ ಸೇರಿಸಿಕೊಳ್ಳಲು ಭಗವಾನರನ್ನು ಕೇಳಿಕೊಳ್ಳುತ್ತಿದ್ದೇನೆ."

೨೧. ಭಗವಾನನ ಆಜ್ಞೆಯಂತೆ ಅವನಿಗೆ ಭಿಕ್ಷುವಾಗಲು ಪ್ರವೇಶ ಹಾಗೂ ದೀಕ್ಷೆ ದೊರೆತವು. ಭಗವಾನನು ತನಗೆ ಇಷ್ಟವಾದಷ್ಟು ಕಾಲ, ಅಂದರೆ, ಹದಿನೈದು ದಿನಗಳವರೆಗೆ ಥುಲ್ಲಕೋಟ್ಠಿತದಲ್ಲಿ ತಂಗಿದ್ದು, ಭಿಕ್ಷಾಟನೆಗೆಂದು ಶ್ರಾವಸ್ತಿಯ ಕಡೆ ಹೊರಟನು. ಅನಾಥಪಿಂಡಿಕನ ಸಂತೋಷಕ್ಕಾಗಿ ಅಲ್ಲಿನ ಜೇತವನದಲ್ಲಿ ಬೀಡುಬಿಟ್ಟನು.

೨೨. ಏಕಾಂಗಿಯಾಗಿ, ಉಳಿದವರಿಂದ ದೂರ ಉಳಿದು, ಕಷ್ಟಪಟ್ಟು, ನಿರುತ್ಸಾಹಿಯಾಗದೆ, ಆತ್ಮವನ್ನು ಶುದ್ಧೀಕರಿಸಿಕೊಂಡ ಪೂಜ್ಯ ರಟ್ಠಪಾಲನು ಶೀಘ್ರವೇ ತನ್ನ ಸಾಧನೆಗೆ ತಕ್ಕ ಪ್ರತಿಫಲವನ್ನು ಪಡೆದನು. ಯಾವ ಪ್ರತಿಫಲಕ್ಕಾಗಿ ಯುವಕರು ತಮ್ಮ ಮನೆಯನ್ನು ಬಿಟ್ಟು ಮನೆಯಿಲ್ಲದೆ ಭಿಕ್ಷುಗಳಾಗುತ್ತಾರೋ ಆ ಶ್ರೇಷ್ಠ ಪ್ರತಿಫಲವು ಶ್ರೇಷ್ಠ ಜೀವನದ ಕಿರೀಟವಾಗಿದೆ.

೨೩. ಅನಂತರ ಅವನು ಭಗವಾನನ ಬಳಿ, ಅವನಿಗೆ ಪ್ರಣಾಮಗಳನ್ನು ಸಲ್ಲಿಸಿದ ನಂತರ, ಒಂದು ಕಡೆ ಕುಳಿತು, ಭಗವಾನನು ಅಪ್ಪಣೆ ಕೊಟ್ಟರೆ, ತನ್ನ ತಂದೆತಾಯಿಗಳನ್ನು ನೋಡಬೇಕೆಂದು ಹೇಳಿದ.

೨೪. ಭಗವಾನನು ತನ್ನ ಹೃದಯದಿಂದ ರಟ್ಠಪಾಲನ ಹೃದಯದಲ್ಲೆದ್ದ ಆಲೋಚನೆಗಳನ್ನು ಗ್ರಹಿಸಿ, ರಾಷ್ಟ್ರಪಾಲನು ತನ್ನ ಸಾಧನೆಯನ್ನು ತ್ಯಜಿಸಿ ಸಾಧಾರಣ ಮನುಷ್ಯನ ಜೀವನಮಟ್ಟಕ್ಕೆ ಇಳಿಯಲಾರನೆಂಬುದನ್ನು ಗುರುತಿಸಿ, ಅವನಿಗೆ ಬೇಕಾದಾಗ ಹೋಗಲು ಅನುಮತಿ ಕೊಟ್ಟನು.

೨೫. ಇದಾದನಂತರ ರಾಷ್ಟ್ರಪಾಲನು ಎದ್ದು, ಭಗವಾನನಿಂದ ಗೌರವಪೂರ್ವಕವಾಗಿ ಬೀಳ್ಕೊಂಡು, ಹಾಸಿಗೆಯನ್ನು ಹೊರಗಿಟ್ಟು, ತನ್ನ ವೇಶ ಮತ್ತು ಭಿಕ್ಷಾಪಾತ್ರೆಯೊಂದಿಗೆ ಹೊರಟನು. ಥುಲ್ಲಕೋಟ್ಠಿತದಲ್ಲಿ ಭಿಕ್ಷಾಟನೆ ಮಾಡಲು ಉದ್ದೇಶಿಸಿದ ಅವನು, ಕುರುರಾಜನ ಜಿಂಕೆಗಳ ವನದಲ್ಲಿ ತಂಗಿದನು.

೨೬. ಮರುದಿನ ಬೆಳಗ್ಗೆಯೇ ತನ್ನ ವಸ್ತ್ರವನ್ನು ಹೊದ್ದು, ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು, ಭಿಕ್ಷೆಗೆಂದು ಊರೊಳಗೆ ಹೋದನು. ಹಾಗೂ ಯಾವ ಭೇದಭಾವವೂ ಇಲ್ಲದೆ ಮನೆಯಿಂದ ಮನೆಗೆ, ತನ್ನ ತಂದೆಯ ಮನೆಗೂ ಹೋದನು.

೨೭. ಒಳಗಡೆ ಪಡಸಾಲೆಯಲ್ಲಿ ತಲೆಬಾಚಿಸಿಕೊಳ್ಳುತ್ತಿದ್ದ ಅವನ ತಂದೆ, ರಾಷ್ಟ್ರಪಾಲ ಬರುವುದನ್ನು ದೂರದಿಂದ ನೋಡಿ ಹೀಗೆ ಹೇಳಿದ: "ನನಗೆ ಇದ್ದ ಒಬ್ಬನೇ ಪ್ರೀತಿಯ ಮಗನನ್ನು ಭಿಕ್ಷುವನ್ನಾಗಿ ಮಾಡಿದವರು ಇದೇ ಬೋಳ ಸಂನ್ಯಾಸಿಗಳು."

೨೮. ಹೀಗಾಗಿ, ರಾಷ್ಟ್ರಪಾಲನಿಗೆ ತನ್ನ ತಂದೆಯ ಮನೆಯಲ್ಲೇ ಏನೂ ಸಿಗಲಿಲ್ಲ. ನಕಾರ ಸಹ ಸಿಗಲಿಲ್ಲ. ಅವನಿಗೆ ಸಿಕ್ಕಿದುದು ಕೇವಲ ಬೈಗುಳ.

೨೯. ಅಷ್ಟರಲ್ಲಿ ಆ ಮನೆಯ ದಾಸಿಯು ಹಿಂದಿನ ದಿನ ಉಳಿದಿದ್ದ ಹಳಸಿದ ಅನ್ನವನ್ನು ಎಸೆಯಲು ಹೊರಗೆ ಬಂದಳು; ಆಕೆಗೆ ರಟ್ಠಪಾಲ ಹೇಳಿದ: "ಸೋದರಿ, ಹೇಗಿದ್ದರೂ ನೀನು ಅದನ್ನು ಎಸೆಯುತ್ತೀಯ, ಅದನ್ನು ನನ್ನ ಪಾತ್ರೆಯಲ್ಲಿ ಹಾಕು."

೩೦. ಹಾಗೆ ಅನ್ನವನ್ನು ಪಾತ್ರೆಯಲ್ಲಿ ಹಾಕುತ್ತಿದ್ದಾಗ, ಆಕೆಗೆ ಅವನ ಕೈಕಾಲುಗಳ ಹಾಗೂ ಧ್ವನಿಯ ಗುರುತು ಹತ್ತಿ, ನೇರವಾಗಿ ಓಡಿಹೋಗಿ ತನ್ನ ಒಡತಿಗೆ 'ಒಡತಿ, ಸಣ್ಣ ಒಡೆಯರು ಹಿಂದಿರುಗಿ ಬಂದಿದ್ದಾರೆ, ತಿಳಿಯಿತೆ? ಎಂದು ತಿಳಿಸಿದಳು.'

೩೧. "ನೀನು ಹೇಳುತ್ತಿರುವುದು ದಿಟವಾದರೆ, ಇನ್ನು ಮೇಲೆ ನೀನು ದಾಸಿಯಲ್ಲ" ಎಂದ ತಾಯಿ, ತಮ್ಮ ಮಗ ಹಿಂದಿರುಗಿ ಬಂದಿದ್ದಾನೆಂಬುದನ್ನು ತಿಳಿಸಲು ತನ್ನ ಗಂಡ ಇದ್ದಲ್ಲಿಗೆ ಲಗುಬಗೆಯಿಂದ ಹೋದಳು.

೩೨. ರಾಷ್ಟ್ರಪಾಲನು ಆ ಹಳಸಿದ ಅನ್ನವನ್ನು ಬೇಲಿಯ ಹತ್ತಿರ ಕುಳಿತು ತಿನ್ನುತ್ತಿರುವಾಗ, ಅವನ ತಂದೆ "ನನ್ನ ಪ್ರೀತಿಯ ಮಗನೆ, ನೀನು ಹಳಸಿದ ಅನ್ನವನ್ನು ತಿನ್ನಬಹುದೆ? ನಿನ್ನ ಸ್ವಂತ ಮನೆಯೊಳಗೆ ನೀನು ಬರಬಾರದಿತ್ತೆ?" ಎಂದು ಆಶ್ಚರ್ಯಪಡುತ್ತಾ ಹೊರಗೆ ಬಂದ.

೩೩. ರಾಷ್ಟ್ರಪಾಲ ಹೇಳಿದ : "ಗೃಹಸ್ಥನೇ 'ನಮ್ಮ ಸ್ವಂತ ಮನೆ' ಎಂದರೇನು? ಮನೆ ಬಿಟ್ಟು ಮನೆಯಿಲ್ಲದೆ ಅಲೆಯುವವರಿಗೆ ಮನೆಯಿರಲು ಹೇಗೆ ಸಾಧ್ಯ? ನಾನು ನಿನ್ನ ಮನೆಗೆ ಬಂದೆ. ಆದರೆ ಅಲ್ಲಿ ನನಗೇನೂ ಸಿಕ್ಕಲಿಲ್ಲ; ನಕಾರ ಸಹ ಸಿಕ್ಕಲಿಲ್ಲ; ನನಗೆ ಸಿಕ್ಕಿದುದು ಕೇವಲ ಬೈಗುಳ."

೩೪. "ಬಾ ಮಗನೇ, ಒಳಗೆ ಹೋಗೋಣ" ಎಂದು ಕರೆದಿದ್ದಕ್ಕೆ ರಟ್ಠಪಾಲನು "ಇಲ್ಲ ಗೃಹಸ್ಥ, ನನ್ನ ಇವತ್ತಿನ ಊಟ ಮುಗಿಯಿತು" ಎಂದು ಉತ್ತರಿಸಿದ.

೩೫. "ಹಾಗಾದರೆ, ನನ್ನ ಮಗನೇ; ನಾಳೆ ಇಲ್ಲೇ ಊಟ ಮಾಡುವುದಾಗಿ ಮಾತು ಕೊಡು."

೩೬. ಪೂಜ್ಯ ರಾಷ್ಟ್ರಪಾಲನು ತನ್ನ ಮೌನದ ಮೂಲಕ ಸಮ್ಮತಿ ಸೂಚಿಸಿದನು.

೩೭. ಆಗ ತಂದೆಯು ಒಳಗೆ ಹೋಗಿ, ಚಾಪೆಗಳ ಕೆಳಗೆ ಹುದುಗಿಸಿಟ್ಟಿದ್ದ ರಾಶಿ ರಾಶಿ ಒಡವೆಗಳನ್ನೂ, ವಜ್ರವೈಢೂರ್ಯಗಳನ್ನೂ ರಟ್ಠಪಾಲನ ಹೆಂಡತಿಯರಾಗಿದ್ದ ತನ್ನ ಸೊಸೆಯಂದಿರು ತಮ್ಮ ಗಂಡ ಮೆಚ್ಚುವಂತೆ ಸೂಕ್ತ ರೀತಿಯಲ್ಲಿ ಧರಿಸಿಕೊಳ್ಳಬೇಕೆಂದೂ ತಿಳಿಸಿದ.

೩೮. ರಾತ್ರಿ ಕಳೆದ ಮೇಲೆ, ಒಂದು ಅಮೋಘ ಭೋಜನ ತಯಾರಿಸಬೇಕೆಂದು ಆಜ್ಞಾಪಿಸಿದ ತಂದೆಯು ಭೋಜನ ಯಾವಾಗ ಸಿದ್ಧವಾಗುತ್ತದೆಯೆಂಬುದನ್ನು ಮಗನಿಗೆ ತಿಳಿಸಿದ. ಮಧ್ಯಾಹ್ನದ ಮೊದಲೇ ಸೂಕ್ತ ವೇಷ ಧರಿಸಿ, ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು ಬಂದ ರಟ್ಠಪಾಲನು ತನಗಾಗಿ ಮೀಸಲಾಗಿದ್ದ ಸ್ಥಾನದಲ್ಲಿ ಕುಳಿತನು.

೩೯. ಇದಾದನಂತರ ಆ ತಂದೆಯು ಮುಚ್ಚಿಟ್ಟಿದ್ದ ತನ್ನ ಸಂಪತ್ತಿನ ರಾಶಿಯನ್ನು ಅನಾವರಣಗೊಳಿಸಲು ಆಜ್ಞಾಪಿಸಿದನು. ಇದಾದನಂತರ ಅವನು "ಇದು ನಿನ್ನ ತಾಯಿಯ ಸಂಪತ್ತು. ಇದು ನಿನ್ನ ತಂದೆಯದು;

ಅದು ನಿಮ್ಮಜ್ಜನಿಂದ ಬಂದುದು. ಇದನ್ನು ನೀನೂ ಅನುಭವಿಸಬಹುದು. ಸತ್ಕಾರ್ಯಗಳಿಗೂ ಉಪಯೋಗಿಸಬಹುದು.

೪೦. "ಬಾ, ನನ್ನ ಮಗನೇ, ನಿನ್ನ ಸಾಧನೆಯನ್ನು ಕೈಬಿಡು; ಸಾಧಾರಣ ಮನುಷ್ಯರ ಕೆಳಮಟ್ಟದ ಜೀವನಕ್ಕೆ ಹಿಂತಿರುಗು. ನೀನೂ ಸಂತೋಷಪಡು. ಬೇರೆಯವರಿಗೂ ಒಳ್ಳೆಯದನ್ನು ಮಾಡು."

೪೧. "ನನ್ನ ಮಾತನ್ನು ಕೇಳುವುದಾದರೆ, ಗೃಹಸ್ಥನೇ, ಈ ರಾಶಿ ಮಾಡಿಟ್ಟಿರುವ ಸಂಪತ್ತನ್ನು ಒಂದು ಗಾಡಿಯಲ್ಲಿ ಹೇರಿಕೊಂಡು ಹೋಗಿ, ಅದನ್ನು ಗಂಗಾನದಿಯಲ್ಲಿ ಮುಳುಗಿಸು. ಯಾಕೆ? ಯಾಕೆಂದರೆ ಆ ಸಂಪತ್ತಿನಿಂದ ನಿನಗೆ ಕೇವಲ ದುಃಖ ಮತ್ತು ಅಶಾಂತಿ, ಕೇಡು, ಮನೋವ್ಯಥೆ, ದೈಹಿಕವ್ಯಾಧಿ ಮತ್ತು ಕಾತರ ಉಂಟಾಗುತ್ತವೆ."

೪೨. ಪೂಜ್ಯ ರಾಷ್ಟ್ರಪಾಲನಿಗೆ ಹಿಂದೆ ಹೆಂಡತಿಯಾಗಿದ್ದವರು ಅವನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, ಯಾವ ದೇವಕನ್ಯೆಯರ ಸಲುವಾಗಿ ಅವನು ಉನ್ನತ ಜೀವನವನ್ನು ನಡೆಸುತ್ತಿದ್ದಾನೋ ಅವರು ಹೇಗಿದ್ದಾರೆ ಎಂದು ಕೇಳಿದರು.

೪೩. "ಯಾವ ಕನ್ಯೆಯರ ಸಲುವಾಗಿಯೂ ಅಲ್ಲ, ಸೋದರಿಯರೆ" ಎಂದ ಅವನು.

೪೪. ತಮ್ಮನ್ನು ಸೋದರಿಯರೆಂದು ಸಂಬೋಧಿಸಿದುದನ್ನು ಗಮನಿಸಿದ ಆ ಹೆಂಗಳೆಯರು ಮೂರ್ಛೆಹೋಗಿ ನೆಲದ ಮೇಲೆ ಬಿದ್ದರು.

೪೫. ರಾಷ್ಟ್ರಪಾಲನು ತನ್ನ ತಂದೆಗೆ ಹೇಳಿದ : "ಗೃಹಸ್ಥನೇ, ನೀನು ಆಹಾರವನ್ನು ಕೊಡುವುದಾದರೆ, ಕೊಡು; ನನಗೆ ತೊಂದರೆ ಕೊಡಬೇಡ."

೪೬. "ಮಗನೇ, ಆಹಾರವು ಸಿದ್ಧವಾಗಿದೆ, ಪ್ರಾರಂಭಿಸು" ಎಂದ ತಂದೆಯು ಆ ಅಮೋಘ ಭೋಜನವನ್ನು ಏನೂ ಕೊರತೆಯಿಲ್ಲದಂತೆ ತನ್ನ ಮಗನಿಗೆ ಹೊಟ್ಟೆ ತುಂಬುವವರೆಗೂ ಬಡಿಸಿದ.

೪೭. ಆಹಾರ ಸ್ವೀಕರಿಸಿದ ನಂತರ ಅವನು ಕುರುರಾಜನ ಜಿಂಕೆಗಳ ವನಕ್ಕೆ ಹೋದ, ಹಾಗೂ ಅಲ್ಲಿ ಮಧ್ಯಾಹ್ನದ ಸೆಖೆಯಿಂದಾಗಿ ಒಂದು ಮರದ ಕೆಳಗೆ ವಿರಮಿಸಿದ.

೪೮. ರಾಜನು ತನ್ನ ಬೇಟೆ ಸಹಾಯಕನಿಗೆ ತಾನು ವನವನ್ನು ನೋಡಲು ಬರುವುದರಿಂದ ಅದನ್ನು ಸ್ವಚ್ಛಗೊಳಿಸಲು ಆಜ್ಞಾಪಿಸಿದ. ವಿಧೇಯನಾದ ಆ ಬೇಟೆ ಸಹಾಯಕನು ತನ್ನ ಕೆಲಸದಲ್ಲಿ ನಿರತನಾಗಿದ್ದಾಗ, ಮಧ್ಯಾಹ್ನದ ಬಿಸಿಲಿನಲ್ಲಿ ಮರದ ಕೆಳಗೆ ಕುಳಿತ ರಾಷ್ಟ್ರಪಾಲನನ್ನು ನೋಡಿದ. ವನವು ಸುವ್ಯವಸ್ಥಿತವಾಗಿದೆ, ಆದರೆ, ಅರಸನಿಂದ ಅನೇಕ ಬಾರಿ ಕೇಳಿದ್ದ ರಟ್ಠಪಾಲನೆಂಬ ಯುವ ಸಂನ್ಯಾಸಿ ಮರದ ಕೆಳಗೆ ಕುಳಿತಿದ್ದಾನೆಂದೂ ಅರಸನಿಗೆ ವರದಿ ಮಾಡಿದ.

೪೯. "ಹಾಗಾದರೆ, ಈ ದಿನ ವನದ ಚಿಂತೆಯನ್ನು ಬಿಡು. ನಾನು ಪೂಜ್ಯರನ್ನು ಸಂಧಿಸುತ್ತೇನೆ" ಎಂದು ರಾಜನು ಹೇಳಿದನು. ಆದುದರಿಂದ, ರಾಜಭೋಜನವನ್ನು ಸಿದ್ಧಪಡಿಸಬೇಕೆಂದು ಆಜ್ಞಾಪಿಸಿ, ಅರಸನು ಒಂದು ರಥವನ್ನು ಹತ್ತಿದನು. ಹಾಗೂ ರಾಷ್ಟ್ರಪಾಲನನ್ನು ನೋಡಲು ರಾಜಮರ್ಯಾದೆಯೊಡನೆ ಮೆರವಣಿಗೆಯಲ್ಲಿ ಊರಿನಿಂದ ಹೊರಬಿದ್ದನು.

೫೦. ಎಷ್ಟು ದೂರ ರಥಸವಾರಿ ಸಾಧ್ಯವೋ ಅಷ್ಟು ದೂರ ರಥದಲ್ಲಿಯೇ ಕ್ರಮಿಸಿ, ಅಲ್ಲಿಂದ ಮುಂದೆ ರಾಜಪರಿವಾರದೊಂದಿಗೆ ಕಾಲ್ನಡಿಗೆಯಲ್ಲಿ ಹೋಗಿ, ಕೊನೆಗೆ ರಾಜನು ರಾಷ್ಟ್ರಪಾಲನಿದ್ದಲ್ಲಿಗೆ ಬಂದನು. ಕುಶಲೋಪರಿ ಆದ ನಂತರ, ಇನ್ನೂ ನಿಂತೇ ಇದ್ದ ರಾಜನು ರಾಷ್ಟ್ರಪಾಲನನ್ನು ಹೂವಿನ ರಾಶಿಯ ಮೇಲೆ ಕುಳಿತುಕೊಳ್ಳುವಂತೆ ಕೇಳಿಕೊಂಡ.

೫೧. "ಇಲ್ಲ ಸ್ವಾಮಿ, ನೀವೇ ಅಲ್ಲಿ ಕುಳಿತುಕೊಳ್ಳಿ; ನನಗೆ ಆಸನವಿದೆ."

೫೨. ತನಗೆ ತೋರಿಸಿದ ಆಸನದಲ್ಲಿ ಕುಳಿತುಕೊಂಡ ರಾಜನು ಹೀಗೆ ಹೇಳಿದ: "ರಾಷ್ಟ್ರಪಾಲ, ನಮ್ಮನ್ನು ತಲೆ ಮತ್ತು ಗಡ್ಡ ಬೋಳಿಸುವಂತೆ, ಹಳದಿ ಬಟ್ಟೆ ತೊಡುವಂತೆ, ಮನೆಯನ್ನು ಬಿಟ್ಟು ಮನೆಯಿಲ್ಲದೆ ಅಲೆಯುವಂತೆ ಪ್ರಚೋದಿಸಲು ನಾಲ್ಕು ಕಾರಣಗಳಿವೆ; ಅವೆಂದರೆ – (೧) ವೃದ್ಧಾಪ್ಯ, (೨) ಅನಾರೋಗ್ಯ, (೩) ಬಡತನ ಮತ್ತು (೪) ಬಂಧುಬಳಗದ ಸಾವು.

೫೩. "ಉದಾಹರಣೆಗೆ ವಯಸ್ಸಾದ, ಮುದುಕನಾದ, ಸಾಕಷ್ಟು ಜೀವನವನ್ನು ಕಂಡ, ವೃದ್ಧಾಪ್ಯಕ್ಕೆ ಗುರಿಯಾದ, ಜೀವನದ ಕೊನೆಯಲ್ಲಿರುವ, ಮನುಷ್ಯನೊಬ್ಬನಿಗೆ ತನ್ನ ಪರಿಸ್ಥಿತಿಯ ಅರಿವಾಗುತ್ತದೆ, ಎನ್ನೋಣ. ಹೊಸ ಸಂಪತ್ತನ್ನು ಗಳಿಸುವುದು ಅಥವಾ ಇರುವ ಸಂಪತ್ತನ್ನು ಅನುಭವಿಸುವುದು ಕಷ್ಟ ಎಂಬ ಅರಿವು ಮೂಡಿದಾಗ ಅವನು ಗೃಹತ್ಯಾಗ ಮಾಡಲು ತೀರ್ಮಾನಿಸುತ್ತಾನೆ. ವೃದ್ಧಾಪ್ಯದ ಜೊತೆಯಲ್ಲಿ ಅನಿವಾರ್ಯವಾಗಿ ಬರುವ ನಷ್ಟವಿದು. ಆದರೆ ನೀನಿನ್ನೂ ಹರೆಯದ ಯುವಕ, ಯೌವನದ ಪ್ರಾಥಮಿಕ ಹಂತದಲ್ಲಿದ್ದೀಯ: ಇದ್ದಲಿನಂತೆ ಕಪ್ಪಗಿರುವ ಕೂದಲಿನ ರಾಶಿ ಇದೆ; ಒಂದು ಬಿಳಿ ಕೂದಲಿಲ್ಲ, ಸುಂದರವಾಗಿದ್ದೀಯ ಬೇರೆ; ಈ ನಷ್ಟ ನಿನ್ನ ವೃದ್ಧಾಪ್ಯದಿಂದ ಬಂದಿದ್ದಲ್ಲ. ಹಾಗಾದರೆ, ಗೃಹತ್ಯಾಗ ಮಾಡಲು ಪ್ರಚೋದಿಸುವಂತಹುದೇನನ್ನು ಅರಿತಿದ್ದೀಯ ಅಥವಾ ನೋಡಿದ್ದೀಯ ಅಥವಾ ಕೇಳಿದ್ದೀಯ?

೫೪. "ಅಥವಾ ರೋಗಿಯಾಗಿರುವ ಅಥವಾ ನೋವಿನಲ್ಲಿರುವ ಅಥವಾ ರೋಗದಿಂದ ಬಹಳ ನರಳುತ್ತಿರುವವನ ಉದಾಹರಣೆ ತೆಗೆದುಕೋ. ಅಂಥವನಿಗೆ ತನ್ನ ಪರಿಸ್ಥಿತಿಯ ಅರಿವಾಗುತ್ತದೆ. ಹೊಸ ಸಂಪತ್ತನ್ನು ಗಳಿಸುವುದು ಅಥವಾ ಇರುವ ಸಂಪತ್ತನ್ನು ಅನುಭವಿಸುವುದು ಕಷ್ಟ ಎಂಬ ಅರಿವು ಅವನಿಗೆ ಮೂಡಿದಾಗ, ಅವನು ಗೃಹತ್ಯಾಗ ಮಾಡಲು ತೀರ್ಮಾನಿಸುತ್ತಾನೆ. ರೋಗದ ಜೊತೆಯಲ್ಲಿ ಅನಿವಾರ್ಯವಾಗಿ ಬರುವ ನಷ್ಟವಿದು. ಆದರೆ ನಿನ್ನನ್ನು ನೋಡಿದರೆ, ನಿನಗೆ ರೋಗವೂ ಇಲ್ಲ, ಕಾಯಿಲೆಯೂ ಇಲ್ಲ. ಶೀಘ್ರ ಕೋಪಿಯೂ ಅಲ್ಲದ, ನಿಷ್ಕರುಣೆಯೂ ಅಲ್ಲದ ನಿನ್ನ ಪ್ರವೃತ್ತಿಗಳು ನಿನ್ನ ಪಚನಶಕ್ತಿಯನ್ನು ಕಾಪಾಡಿಕೊಂಡು ಬಂದಿವೆ. ನಿನ್ನ ನಷ್ಟ ಅನಾರೋಗ್ಯದಿಂದ ಅನಿವಾರ್ಯವಾಗಿ ಬರುವ ನಷ್ಟವಲ್ಲ. ಹಾಗಾದರೆ ಗೃಹತ್ಯಾಗ ಮಾಡಲು ಪ್ರಚೋದಿಸುವಂತಹುದೇನನ್ನು ಅರಿತಿದ್ದೀಯ ಅಥವಾ ನೋಡಿದ್ದೀಯ ಅಥವಾ ಕೇಳಿದ್ದೀಯಾ?

೫೫. "ಅಥವಾ ಒಬ್ಬ ಮೊದಲು ಶ್ರೀಮಂತನಾಗಿದ್ದು, ಬಹಳ ಸಂಪತ್ತನ್ನು ಗಳಿಸಿದವನಾಗಿದ್ದು, ಬಹಳ ಸಾಮರ್ಥ್ಯವುಳ್ಳವನಾಗಿದ್ದು ಅದನ್ನು ನಿಧಾನವಾಗಿ ಕಳೆದುಕೊಂಡವನೊಬ್ಬನಿಗೆ ತನ್ನ ಪರಿಸ್ಥಿತಿಯ ಅರಿವಾಗುತ್ತದೆ ಎನ್ನೋಣ. ಹೊಸ ಸಂಪತ್ತನ್ನು ಗಳಿಸುವುದು ಅಥವಾ ಇರುವ ಸಂಪತ್ತನ್ನು ಅನುಭವಿಸುವುದು ಕಷ್ಟ ಎಂಬ ಅರಿವು ಅವನಲ್ಲಿ ಮೂಡಿದಾಗ ಅವನು ಗೃಹತ್ಯಾಗ ಮಾಡಲು ತೀರ್ಮಾನಿಸುತ್ತಾನೆ. ಹೀಗೆ ದಾರಿದ್ರ್ಯದ ಜೊತೆಯಲ್ಲಿ ಅನಿವಾರ್ಯವಾಗಿ ಬರುವ ನಷ್ಟವಿದು. ಆದರೆ ಪೂಜ್ಯ ರಟ್ಠಪಾಲನು ಇಡೀ ಥುಲ್ಲಕೋಟ್ಠಿತದಲ್ಲೇ ಗಣ್ಯ ಕುಟುಂಬದ ಮಗ ಹಾಗೂ ಪೂಜ್ಯ ರಟ್ಠಪಾಲನಿಗೆ ಯಾವ ಸಂಪತ್ತಿನ ನಷ್ಟವೂ ಆಗಿಲ್ಲ. ಹಾಗಾದರೆ, ಗೃಹತ್ಯಾಗ ಮಾಡಲು ಪ್ರೇರೇಪಿಸುವಂತಹುದೇನನ್ನು ಅರಿತಿದ್ದೀಯ ಅಥವಾ ನೋಡಿದ್ದೀಯ ಅಥವಾ ಕೇಳಿಸಿಕೊಂಡಿದ್ದೀಯ?

೫೬. "ನಾನು ನಿಕೇತನದಿಂದ ಅನಿಕೇತನಕ್ಕೆ ಸಾಗಿರುವುದು ಏಕೆಂದರೆ" ರಾಷ್ಟ್ರಪಾಲನು ಉತ್ತರಿಸಿದ, "ಭಗವಾನ್ ಬುದ್ಧನು ತಾನು ತಿಳಿದ ಮತ್ತು ನೋಡಿದ ಈ ಕೆಳಗಿನ ನಾಲ್ಕು ಸತ್ಯಗಳನ್ನು ತಿಳಿದಿದ್ದೇನೆ,

ನೋಡಿದ್ದೇನೆ ಹಾಗೂ ಕೇಳಿದ್ದೇನೆ.

“(೧) ಪ್ರಪಂಚವು ಯಾವಾಗಲೂ ಸತತವಾದ ಏರಿಳಿತಕ್ಕೂ ಬದಲಾವಣೆಗೂ ಒಳಪಟ್ಟಿದೆ.

(೨) ಪ್ರಪಂಚವನ್ನು ರಕ್ಷಿಸುವವರು ಅಥವಾ ಸಂರಕ್ಷಕರು ಯಾರೂ ಇಲ್ಲ.

(೩) ನಮ್ಮದೆನ್ನುವುದು ಏನೂ ಇಲ್ಲ; ನಮ್ಮ ಹಿಂದೆಯೇ ಎಲ್ಲ ಬಿಟ್ಟುಹೋಗಬೇಕು.

(೪) ಆಸೆಗೆ ಗುಲಾಮನಾದ ವಿಶ್ವವು ಯಾವಾಗಲೂ ಸುಖದ ಕೊರತೆಯನ್ನು ಅನುಭವಿಸುತ್ತಾ ಅದಕ್ಕಾಗಿ ಹಾತೊರೆಯುತ್ತದೆ.”

೫೭. “ಅದ್ಭುತ ! ಅಮೋಘ” ಎಂದ ರಾಜನು “ಭಗವಾನ್ ಹೇಳಿದುದು ಎಷ್ಟೊಂದು ಸತ್ಯ!” ಎಂದು ಉದ್ಗರಿಸಿದನು.

# ಭಾಗ : ೪
# ಮನೆಯ ಕರೆ

೧. ಶುದ್ಧೋದನ ಮತ್ತು ಅವನ ಕೊನೆಯ ದರ್ಶನ
೨. ಯಶೋಧರೆ ಮತ್ತು ರಾಹುಲರ ಭೇಟಿ
೩. ಶಾಕ್ಯರಿಂದ ಸ್ವಾಗತ
೪. ಮಗನನ್ನು ಗೃಹಸ್ಥನಾಗಿ ಮಾಡುವ ಕೊನೆಯ ಪ್ರಯತ್ನ
೫. ಬುದ್ಧನ ಉತ್ತರ
೬. ಮಂತ್ರಿಯ ಉತ್ತರ
೭. ಬುದ್ಧನ ನಿರ್ಧಾರ

## ೧. ಶುದ್ಧೋದನ ಮತ್ತು ಅವನ ಕೊನೆಯ ದರ್ಶನ

೧. ಸಾರಿಪುತ್ತ ಮತ್ತು ಮೊಗ್ಗಲ್ಲಣರ ಪರಿವರ್ತನೆಯ ನಂತರ ಭಗವಾನನು ರಾಜಗೃಹದಲ್ಲಿ ಇನ್ನೂ ಎರಡು ತಿಂಗಳು ತಂಗಿದ್ದನು.

೨. ಭಗವಾನನು ರಾಜಗೃಹದಲ್ಲಿದ್ದಾನೆಂಬುದನ್ನು ತಿಳಿದ, ಅವನ ತಂದೆ ಶುದ್ಧೋದನನು "ನಾನು ಸಾಯುವ ಮೊದಲು ಮಗನನ್ನು ನೋಡಲಿಚ್ಛಿಸುತ್ತೇನೆ. ಬೇರೆಯವರು ಅವನ ಸಿದ್ಧಾಂತದ ಲಾಭ ಪಡೆದಿದ್ದಾರೆ. ಆದರೆ ಅವನ ತಂದೆಗಾಗಲಿ ಅವನ ಬಂಧುಗಳಿಗಾಗಲಿ ಈ ಲಾಭ ದೊರಕಿಲ್ಲ" ಎಂಬ ಸಂದೇಶವನ್ನು ಕಳುಹಿಸಿದನು.

೩. ಈ ಸಂದೇಶವನ್ನು ಒಯ್ದವನು ಶುದ್ಧೋದನನ ಆಸ್ಥಾನಿಕರಲ್ಲೊಬ್ಬನ ಮಗನಾದ ಕಲುದಾಯಿನ್.

೪. ಸಂದೇಶ ತಂದವನು ಹೀಗೆ ಹೇಳಿದ: "ವಿಶ್ವಮಾನ್ಯ ತಥಾಗತನೇ, ನೈದಿಲೆಯು ಸೂರ್ಯನ ಉದಯವನ್ನೇ ಕಾಯುತ್ತಿರುವಂತೆ ನಿನ್ನ ತಂದೆಯು ನಿನ್ನ ಬರವನ್ನೇ ನೋಡುತ್ತಿದ್ದಾನೆ".

೫. ತಂದೆಯ ಈ ಬೇಡಿಕೆಗೆ ಒಪ್ಪಿದ ಪವಿತ್ರಾತ್ಮನು, ತನ್ನ ನೂರಾರು ಶಿಷ್ಯರೊಡಗೂಡಿ ತಂದೆಯ ಮನೆಗೆ ಹೊರಟನು.

೬. ಭಗವಾನನು ನಿಧಾನವಾಗಿ ಪಯಣಿಸಿದ. ಆದರೆ ಕಲುದಾಯಿನ್ ಪವಿತ್ರಾತ್ಮನು ಬರುತ್ತಾನೆಂದೂ, ಆಗಲೇ ಹೊರಟಿದ್ದಾನೆಂದೂ ಶುದ್ಧೋದನನಿಗೆ ತಿಳಿಸಲು ಮುಂದೆ ಹೋದನು.

೭ ಈ ಸುದ್ದಿ ಶಾಕ್ಯದೇಶದಲ್ಲಿ ಬೇಗನೆ ಹರಡಿತು. ಎಲ್ಲರ ಬಾಯಲ್ಲೂ "ಜ್ಞಾನೋದಯ ಪಡೆಯಲು ನಿಕೇತನದಿಂದ ಅನಿಕೇತನಕ್ಕೆ ನಡೆದು ಎಲ್ಲೆಲ್ಲೋ ಅಲೆದಾಡಿ, ಕೊನೆಗೆ ತನ್ನ ಉದ್ದೇಶವನ್ನು ಸಾಧಿಸಿಕೊಂಡ ರಾಜಕುಮಾರ ಸಿದ್ಧಾರ್ಥನು ಕಪಿಲವಸ್ತುವಿನ ತನ್ನ ಮನೆಗೆ ಹಿಂದಿರುತ್ತಿದ್ದಾನೆ" ಎಂಬುದೊಂದೇ ಮಾತು.

೮. ಶುದ್ಧೋದನ ಮತ್ತು ಮಹಾಪ್ರಜಾಪತಿ, ತಮ್ಮ ಬಂಧು ಹಾಗೂ ಮಂತ್ರಿಗಳೊಂದಿಗೆ, ತಮ್ಮ ಮಗನನ್ನು ನೋಡಲು ಹೋದರು. ಅವರು ದೂರದಿಂದಲೇ ತಮ್ಮ ಮಗನನ್ನು ನೋಡಿದಾಗ, ಅವನ ಸೌಂದರ್ಯ ಮತ್ತು ಅವನ ಗಾಂಭೀರ್ಯ ಮತ್ತು ಅವನ ಮುಖ ಕಾಂತಿಯನ್ನು ನೋಡಿ ಮಂತ್ರಮುಗ್ಧರಾದರು. ಅಲ್ಲದೆ, ಮನಸ್ಸಿನಲ್ಲೇ ಆನಂದಪಟ್ಟರು. ಆದರೆ ಅದನ್ನು ಹೇಳಲು ಅವರಲ್ಲಿ ಶಬ್ದಗಳಿರಲಿಲ್ಲ.

೯. ಅವರಿಗೆ 'ಇವನು ನಿಜವಾಗಿಯೂ ನಮ್ಮ ಮಗನೇ' ಅನಿಸಿತು. ಲಕ್ಷಣಗಳೆಲ್ಲವೂ ಸಿದ್ಧಾರ್ಥನವೇ! ಈ ಮಹಾಸಮಣನು ಅವರ ಹೃದಯಕ್ಕೆ ಎಷ್ಟು ಹತ್ತಿರ! ಆದರೂ ಅವರ ಮಧ್ಯೆ ಎಷ್ಟೊಂದು ಅಂತರ! ಈ ಶ್ರೇಷ್ಠ ಮುನಿಯು ಮೊದಲಿನ ನಮ್ಮ ಮಗ ಸಿದ್ಧಾರ್ಥನಲ್ಲ! ಅವನೀಗ ಬುದ್ಧ, ಪವಿತ್ರಾತ್ಮ, ಸರ್ವೋತ್ಕೃಷ್ಟ, ಸತ್ಯ ತಿಳಿದಿರುವ ಭಗವಾನ್ ಮತ್ತು ಮನುಕುಲದ ಗುರು!

೧೦. ತನ್ನ ಮಗನ ಆಧ್ಯಾತ್ಮಿಕ ಔನ್ನತ್ಯವನ್ನು ಪರಿಗಣಿಸಿದ ಶುದ್ಧೋದನನು ತನ್ನ ರಥದಿಂದ ಇಳಿದು, ಅವನಿಗೆ ಮೊದಲು ನಮಸ್ಕರಿಸಿ, ಅನಂತರ ಹೇಳಿದ: "ನಿನ್ನನ್ನು ನೋಡಿ ಆಗಲೇ ಏಳು ವರ್ಷಗಳು ಸಂದವು. ಇಂಥ ಸಮಯಕ್ಕಾಗಿ ನಾವು ಕಾತರದಿಂದ ಕಾಯುತ್ತಿದ್ದೆವು."

೧೧. ಆಗ ಬುದ್ಧನು ತನ್ನ ತಂದೆಯ ಎದುರಿಗೆ ಕುಳಿತ. ಅವನ ತಂದೆ ತನ್ನ ಮಗನನ್ನು ಕುತೂಹಲದಿಂದ ಎವೆಯಿಕ್ಕದೆ ನೋಡಿದ. ಅವನಿಗೆ ತನ್ನ ಮಗನನ್ನು ಹೆಸರು ಹಿಡಿದು ಕರೆಯಬೇಕೆನ್ನಿಸಿದರೂ ಧೈರ್ಯ ಬರಲಿಲ್ಲ. ಮನಸ್ಸಿನಲ್ಲೇ ಮೌನವಾಗಿ ಹೀಗೆಂದುಕೊಂಡ. 'ಸಿದ್ಧಾರ್ಥ, ನಿನ್ನ ವೃದ್ಧ ತಂದೆಯ ಕಡೆಗೆ ಹಿಂದಿರುಗಿ ಬಂದು, ಮತ್ತೆ ಅವನ ಮಗನಂತಿರು'. ಆದರೆ ಮಗನ ನಿಶ್ಚಲ ಮುದ್ರೆಯನ್ನು ಗಮನಿಸಿದ ಅವನು, ತನ್ನ ಭಾವನೆಗಳನ್ನು ಹತ್ತಿಕ್ಕಿದನು. ಆದರೆ ಅವನಿಗೂ ಮಹಾಪ್ರಜಾಪತಿಗೂ ಕಡುದುಃಖವನ್ನು ತಡೆದುಕೊಳ್ಳಲಾಗಲಿಲ್ಲ.

೧೨. ಹೀಗೆ ತಂದೆಯು ಮಗನ ಎದುರಿಗೆ ಕುಳಿತು ದುಃಖದಲ್ಲಿ ಸಂತೋಷಪಡುತ್ತಿದ್ದ ಹಾಗೂ ಸಂತೋಷದಲ್ಲಿ ದುಃಖಪಡುತ್ತಿದ್ದ. ತನ್ನ ಮಗನ ಬಗ್ಗೆ ಅವನಿಗೆ ಹೆಮ್ಮೆ ಎನಿಸುತ್ತಿತ್ತೇನೋ, ನಿಜ. ಆದರೆ ತನ್ನ ಮಗನು ಎಂದೂ ತನ್ನ ಉತ್ತರಾಧಿಕಾರಿಯಾಗಲಾರ ಎಂಬ ಆಲೋಚನೆ ಅವನ ಈ ಹೆಮ್ಮೆಗೆ ಭಂಗ ತಂದಿತು.

೧೩. "ನಾನು ನಿನಗೆ ನನ್ನ ರಾಜ್ಯವನ್ನೇನೋ ಕೊಡಬಲ್ಲೆ" ಎಂದ ರಾಜ. "ಆದರೆ ನಾನು ಹಾಗೆ ಕೊಟ್ಟರೆ, ನೀನು ಅದಕ್ಕೆ ಬೂದಿಯ ಬೆಲೆ ಕೊಡುತ್ತೀಯ."

೧೪. ಇದಕ್ಕೆ ಭಗವಾನನು ಹೇಳಿದನು: "ರಾಜರ ಹೃದಯದ ತುಂಬ ಪ್ರೀತಿ ಇದೆ. ಆದರೆ ಮಗನಿಗಾಗಿ ಬಹಳ ಗಾಢವಾದ ದುಃಖವಿದೆ ಎಂಬುದು ಗೊತ್ತು. ಆದರೆ ನಿಮಗೂ ನೀವು ಕಳೆದುಕೊಂಡಿರುವ ಮಗನಿಗೂ ಇರುವ ಪ್ರೀತಿಯ ಬಂಧನವನ್ನು ನಿಮ್ಮ ಸಹಜೀವಿಗಳೆಲ್ಲರಿಗೂ ಒಂದೇ ಸಮನಾಗಿ ವಿಸ್ತರಿಸಿ, ಆಗ ಸಿದ್ಧಾರ್ಥನಿಗಿಂತ ಹೆಚ್ಚಿನವನನ್ನು ಬರಮಾಡಿಕೊಳ್ಳುತ್ತೀರಿ; ಸತ್ಯ ಸಂದೇಶವನ್ನು ಸಾರುವವನನ್ನು, ಧರ್ಮಬೋಧಕನನ್ನು ಬರಮಾಡಿಕೊಳ್ಳುತ್ತೀರಿ. ಶಾಂತಿ ಹಾಗೂ ನಿರ್ವಾಣವನ್ನು ತರುವವನು ನಿಮ್ಮ ಹೃದಯವನ್ನು ಪ್ರವೇಶಿಸುತ್ತಾನೆ."

೧೫. ತನ್ನ ಮಗ ಬುದ್ಧನು ಉಚ್ಚರಿಸಿದ ಈ ಮೃದು ಮಧುರ ಮಾತುಗಳನ್ನು ಕೇಳಿದ ಶುದ್ಧೋದನ ಸಂತೋಷಾತಿರೇಕದಿಂದ ಕಂಪಿತನಾಗಿ, ಚಪ್ಪಾಳೆಯನ್ನು ಹೊಡೆಯುತ್ತಾ ಆನಂದಭಾಷ್ಪಗಳನ್ನು ಸುರಿಸುತ್ತಾ ಹೀಗೆ ಹೇಳಿದ: "ಇದೊಂದು ಅದ್ಭುತ ಬದಲಾವಣೆ! ಈಗ ನನ್ನ ಅತಿಯಾದ ದುಃಖ ಹೋಯಿತು! ಮೊದಲು ನನ್ನ ದುಃಖಪೂರಿತ ಹೃದಯವು ಭಾರವಾಗಿತ್ತು. ಆದರೆ ಈಗ ನಿನ್ನ ವೈರಾಗ್ಯದ ಫಲವನ್ನು ನಾನು ಅನುಭವಿಸುತ್ತಿದ್ದೇನೆ. ನಿನ್ನ ಭಾರಿ ಸಹಾನುಭೂತಿಯಿಂದಾಗಿ, ನೀನು ಅಧಿಕಾರದ ಸುಖವನ್ನು ತ್ಯಜಿಸಿದುದು ಹಾಗೂ ಧಾರ್ಮಿಕ ಶ್ರದ್ಧೆಯ ಮೂಲಕ ಘನ ಉದ್ದೇಶವನ್ನು ಸಾಧಿಸಿದುದು ಉಚಿತವಾದದ್ದು. ನೀನು ಹೊಸ ಮಾರ್ಗವನ್ನು ಕಂಡುಹಿಡಿದಿರುವುದರಿಂದ, ಮೋಕ್ಷಾರ್ಥಿಗಳಾದ ಎಲ್ಲರಿಗೂ ನಿನ್ನ ಧರ್ಮವನ್ನು ಬೋಧಿಸು."

೧೬. ಶುದ್ಧೋದನನು ತನ್ನ ಮನೆಗೆ ಹಿಂದಿರುಗಿದ. ಬುದ್ಧನು ತನ್ನ ಸಂಗಡಿಗರೊಂದಿಗೆ ಆ ವನದಲ್ಲಿಯೇ ಉಳಿದುಕೊಂಡನು.

೧೭. ಮಾರನೆಯ ದಿನ ಬೆಳಿಗ್ಗೆ ಬುದ್ಧ ತನ್ನ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು, ಕಪಿಲವಸ್ತುವಿನಲ್ಲಿ ಭಿಕ್ಷಾಟನೆ ಮಾಡಲು ಹೊರಟನು.

೧೮. "ಈ ಹಿಂದೆ ತನ್ನ ಪರಿವಾರದೊಂದಿಗೆ ರಥದಲ್ಲಿ ಸಂಚರಿಸುತ್ತಿದ್ದ ಸಿದ್ಧಾರ್ಥನು ಇಂದು ಈ ಪಟ್ಟಣದಲ್ಲಿ ಮನೆಮನೆಗೆ ಭಿಕ್ಷೆ ಕೇಳಲು ಬರುತ್ತಿದ್ದಾನೆ. ಅವನ ಬಟ್ಟೆಯು ಒಂದು ಕೆಂಪು ಮಣ್ಣಿನ ಮುದ್ದೆಯಾಗಿದೆ ಹಾಗೂ ಕೈಯಲ್ಲಿ ಮಣ್ಣಿನ ಪಾತ್ರೆ ಹಿಡಿದಿದ್ದಾನೆ" ಎಂಬ ಸುದ್ದಿ ಹರಡಿತು.

೧೯. ಈ ಅಪರೂಪದ ಸುದ್ದಿಯನ್ನು ಕೇಳಿದ ಶುದ್ಧೋದನನು ಲಗುಬಗೆಯಿಂದ ಬುದ್ಧನಲ್ಲಿಗೆ ಹೋಗಿ "ನೀನೇಕೆ ನನಗೆ ಈ ರೀತಿ ಅವಮಾನ ಮಾಡುತ್ತಿದ್ದೀಯ? ನಿನಗೂ ನಿನ್ನ ಭಿಕ್ಷುಗಳಿಗೂ ನಾನು ಸುಲಭವಾಗಿ ಆಹಾರ ಒದಗಿಸಬಲ್ಲೆನೆಂಬುದು ನಿನಗೆ ಗೊತ್ತಿಲ್ಲವೆ?" ಎಂದು ಕೇಳಿದ.

೨೦. ಆಗ ಭಗವಾನನು ಹೇಳಿದ: "ಅದು ನನ್ನ ಸಂಘದ ಪದ್ಧತಿ."

೨೧. "ಆದರೆ ಇದು ಹೇಗೆ ಸಾಧ್ಯ? ಭಿಕ್ಷೆ ಕೇಳುವವರಲ್ಲಿ ನೀನೊಬ್ಬನಲ್ಲವಲ್ಲ".

೨೨. "ಹೌದು ತಂದೆ," ಎಂದುತ್ತರಿಸಿದ ಭಗವಾನ್, "ನೀನು ಮತ್ತು ನಿಮ್ಮ ಕುಲದವರು ರಾಜವಂಶದವರೆಂದು ಹೇಳಿಕೊಳ್ಳುತ್ತೀರಿ. ಹಾಗೆಯೇ, ನಾನು ಪುರಾತನ ಬುದ್ಧರ ವಂಶದವನು. ಅವರು ಭಿಕ್ಷೆ ಕೇಳುತ್ತಿದ್ದರು ಹಾಗೂ ಭಿಕ್ಷಾಟನೆಯಿಂದಲೇ ಬದುಕುತ್ತಿದ್ದರು."

೨೩. ಇದಕ್ಕೆ ಶುದ್ಧೋದನ ಯಾವುದೇ ಉತ್ತರ ಕೊಡಲಿಲ್ಲ. ಆಗ ಭಗವಂತನೇ ಮುಂದುವರೆದ: "ಯಾರಿಗಾದರೂ ಗುಪ್ತಧನ ಸಿಕ್ಕಿದರೆ, ಅದರಲ್ಲೇ ಅತ್ಯಮೂಲ್ಯವಾದುದನ್ನು ತನ್ನ ತಂದೆಗೆ ಕೊಡಬೇಕೆಂಬ ರೂಢಿಯಿದೆ. ಅದೇ ರೀತಿ, ನಾನು ಪಡೆದಿರುವ ಧರ್ಮವೆಂಬ ಈ ಅಮೂಲ್ಯ ಸಂಪತ್ತನ್ನು ಕೊಡುತ್ತೇನೆ. ಅದನ್ನು ಸಹಿಸಿಕೊಳ್ಳಿ.

೨೪. ಮುಂದುವರೆದು ಭಗವಾನನು ತನ್ನ ತಂದೆಗೆ ಹೇಳಿದನು: "ನಿಮ್ಮ ಕನಸುಗಳಿಂದ ಮುಕ್ತರಾಗಿ, ಸತ್ಯಕ್ಕೆ ನಿಮ್ಮ ಮನಸ್ಸಿನ ಬಾಗಿಲನ್ನು ತೆರೆದರೆ, ನೀವು ಸಶಕ್ತರಾಗಿದ್ದರೆ, ಧರ್ಮವನ್ನು ಆಚರಿಸಿದರೆ, ನಿಮಗೆ ಶಾಶ್ವತ ಸುಖವು ಸಿಕ್ಕುತ್ತದೆ."

೨೫. ಈ ಮಾತುಗಳನ್ನು ಮೌನವಾಗಿ ಆಲಿಸಿದ ಶುದ್ಧೋದನನು ಉತ್ತರಿಸಿದ "ಮಗನೆ! ನೀನು ಹೇಳಿದುದನ್ನು ಆಚರಿಸಲು ಪ್ರಯತ್ನಿಸುತ್ತೇನೆ."

## ೨. ಯಶೋಧರೆ ಮತ್ತು ರಾಹುಲರ ಭೇಟಿ

೧. ನಂತರ ಶುದ್ಧೋದನನು ಪವಿತ್ರ ಭಗವಾನನನ್ನು ಒಳಗೆ ಕರೆದುಕೊಂಡು ಹೋದನು. ಆಗ ಅವನ ಕುಟುಂಬದ ಸದಸ್ಯರೆಲ್ಲ ಅವನನ್ನು ಬಹಳ ಆದರಪೂರ್ವಕವಾಗಿ ಬರಮಾಡಿಕೊಂಡರು.

೨. ಆದರೆ ರಾಹುಲನ ತಾಯಿ ಯಶೋಧರೆ ಹೊರಗೆ ಬರಲಿಲ್ಲ. ಶುದ್ಧೋದನ ಆಕೆಗೆ ಬರುವಂತೆ ಹೇಳಿಕಳುಹಿಸಿದಾಗ ಅವಳು ಹೀಗೆ ಉತ್ತರಿಸಿದಳು: "ಖಂಡಿತವಾಗಿಯೂ ನನಗೇನಾದರೂ ಗೌರವ ಸಲ್ಲುವುದಿದ್ದರೆ, ಸಿದ್ಧಾರ್ಥನೇ ಬಂದು ನನ್ನನ್ನು ನೋಡಲಿ."

೩. ಪವಿತ್ರಾತ್ಮನು ತನ್ನ ಎಲ್ಲ ಬಂಧುಗಳಿಗೂ ಗೆಳೆಯರಿಗೂ ಶುಭಾಶಯ ಸಲ್ಲಿಸಿಯಾದ ಮೇಲೆ ಕೇಳಿದ: "ಯಶೋಧರೆ ಎಲ್ಲಿ?" ಆಕೆ ಬರಲು ಒಪ್ಪುತ್ತಿಲ್ಲವೆಂಬುದನ್ನು ತಿಳಿದ ಭಗವಾನನು ಎದ್ದು ನೇರವಾಗಿ ಅವಳ ಅಂತಃಪುರಕ್ಕೆ ಹೋದ.

೪. ತನ್ನ ಜೊತೆಯಲ್ಲಿ ಯಶೋಧರೆಯ ಅಂತಃಪುರಕ್ಕೆ ಕರೆದುಕೊಂಡು ಹೋಗಿದ್ದ ಸಾರಿಪುತ್ತ ಮತ್ತು ಮೊಗ್ಗಲ್ಲಣರಿಗೆ ಭಗವಾನ್ ಹೇಳಿದ: "ನಾನು ಮುಕ್ತನಾಗಿದ್ದೇನೆ. ಆದರೆ ಯಶೋಧರೆ ಇನ್ನೂ ಮುಕ್ತಳಾಗಿಲ್ಲ. ನನ್ನನ್ನು ಬಹಳ ದಿನಗಳಿಂದ ನೋಡಿಲ್ಲವಾದುದರಿಂದ ಅವಳಿಗೆ ವಿಪರೀತ ದುಃಖವಾಗಿದೆ. ಅವಳು ತನ್ನ ದುಃಖವನ್ನು ಪೂರ್ತಿ ಹರಿಸಲು ಬಿಡದಿದ್ದರೆ ಅವಳ ಹೃದಯ ಒಡೆದುಹೋದೀತು.

ಒಂದು ವೇಳೆ ಅವಳು ಪವಿತ್ರ ತಥಾಗತನನ್ನು ಮುಟ್ಟಿದರೆ, ನೀವು ಅವಳನ್ನು ತಡೆಯಬಾರದು."

೫. ಯಶೋಧರೆ ತನ್ನ ಕೋಣೆಯಲ್ಲಿ ಕುಳಿತುಕೊಂಡು ಭಾರೀ ಚಿಂತೆಯಲ್ಲಿ ಮುಳುಗಿದ್ದಳು. ಪವಿತ್ರ ಭಗವಾನ್ ಪ್ರವೇಶಿಸಿದಾಗ, ತುಂಬಿ ಹರಿಯುವ ಪಾತ್ರೆಯಂತೆ, ಅವಳಿಗೆ ಪ್ರೀತಿ ಉಕ್ಕಿಬಂದು, ತಡೆದುಕೊಳ್ಳಲಾರದಾದಳು.

೬. ತಾನು ಪ್ರೀತಿಸಿದ ವ್ಯಕ್ತಿ ಬುದ್ಧ, ಲೋಕೇಶ್ವರ, ಸತ್ಯಬೋಧಕನೆಂಬುದನ್ನು ಮರೆತು, ಅವನ ಪಾದಗಳನ್ನು ಗಟ್ಟಿಯಾಗಿ ಹಿಡಿದು, ದುಃಖದಿಂದ ಅಳತೊಡಗಿದಳು.

೭. ಶುದ್ಧೋದನನೂ ಅಲ್ಲಿದ್ದಾನೆಂಬುದನ್ನು ಜ್ಞಾಪಿಸಿಕೊಂಡ ಅವಳಿಗೆ ನಾಚಿಕೆಯೆನಿಸಿ, ಎದ್ದು, ಸ್ವಲ್ಪ ದೂರದಲ್ಲಿ ಗೌರವಪೂರ್ವಕವಾಗಿ ಕುಳಿತಳು.

೮. ಶುದ್ಧೋದನ ಯಶೋಧರೆಯ ಪರವಾಗಿ ಕ್ಷಮೆ ಕೋರುತ್ತಾ ಹೇಳಿದನು: "ಇದು ಅವಳ ಗಾಢವಾದ ಪ್ರೀತಿಯಿಂದ ಹುಟ್ಟಿದ್ದಾಗಿದೆ; ಅಲ್ಲದೆ ಇದು ತಾತ್ಕಾಲಿಕ ಭಾವನೆಯಲ್ಲ. ಈ ಏಳು ವರ್ಷಗಳ ಕಾಲ ಗಂಡನನ್ನು ಕಳೆದುಕೊಂಡಿದ್ದಾಗ, ಸಿದ್ಧಾರ್ಥ ತಲೆಬೋಳಿಸಿ ಕೊಂಡಿದ್ದಾನೆಂಬುದನ್ನು ಕೇಳಿದ ಅವಳು ತಾನೂ ಅವನಂತೆಯೇ ಮಾಡಿದಳು; ಅವನು ಸುಗಂಧದ್ರವ್ಯಗಳನ್ನು ಒಡವೆಗಳನ್ನು ಧರಿಸುವುದನ್ನು ಬಿಟ್ಟಿದ್ದಾನೆಂಬುದನ್ನು ಕೇಳಿದ ಆಕೆ, ಅವುಗಳ ಬಳಕೆಯನ್ನು ನಿಲ್ಲಿಸಿದಳು. ತನ್ನ ಗಂಡನಂತೆ, ಮಣ್ಣಿನ ತಟ್ಟೆಯಲ್ಲಿ ನಿಯಮಿತ ವೇಳೆಗಳಲ್ಲಿ ಮಾತ್ರ ಊಟ ಮಾಡುತ್ತಿದ್ದಳು.

೯. "ಇದು ತಾತ್ಕಾಲಿಕ ಭಾವನೆಯೂ ಅಲ್ಲ, ಧೈರ್ಯ ಸಾಲದೆ ಮಾಡಿದುದೂ ಅಲ್ಲ."

೧೦. ಆಗ ಪವಿತ್ರಾತ್ಮನು ತಾನು ಪರಿವ್ರಾಜವನ್ನು ಸ್ವೀಕರಿಸಿದಾಗ ಯಶೋಧರೆ ತೋರಿಸಿದ ಮಹಾನ್ ಗುಣಗಳು ಹಾಗೂ ಅಪಾರ ಧೈರ್ಯದ ಬಗ್ಗೆ ಅವಳಿಗೆ ತಿಳಿಸಿದನು. ಬೋಧಿಸತ್ವನಾಗಿದ್ದ ಗೌತಮನು, ಮಾನವರಿಗೆ ಅತ್ಯುನ್ನತವೆನಿಸಿದ ಧ್ಯೇಯವನ್ನು, ಅಂದರೆ ಜ್ಞಾನೋದಯವನ್ನು ಪಡೆಯಲು ಹಂಬಲಿಸುತ್ತಿದ್ದ ಸಮಯದಲ್ಲಿ, ಅವಳ ಪರಿಶುದ್ಧತೆ, ಅವಳ ಸೌಜನ್ಯ, ಅವಳ ಭಕ್ತಿ, ಅವನಿಗೆ ಅತ್ಯಮೂಲ್ಯವಾಗಿದ್ದವು. ಇದು ಅವಳ ಕರ್ಮ, ಅವಳ ಸತ್ಕಾರ್ಯಗಳ ಫಲವಾಗಿತ್ತು.

೧೧. ಅವಳ ಶೋಕವು ಅವರ್ಣನೀಯವಾಗಿತ್ತು ಹಾಗೂ ಅವಳ ಆಧ್ಯಾತ್ಮಿಕ ಆನುವಂಶೀಕತೆಯನ್ನು ಸುತ್ತುವರಿದಿದ್ದ ಭವ್ಯತೆಯೂ, ತನ್ನ ಜೀವಿತದುದ್ದಕ್ಕೂ ಬೆಳೆಸಿಕೊಂಡು ಬಂದಿದ್ದ ಉದಾತ್ತ ಪ್ರವೃತ್ತಿಗಳೂ ಅವಳನ್ನು ಒಬ್ಬ ವಿಶಿಷ್ಟ ವ್ಯಕ್ತಿಯನ್ನಾಗಿ ಮಾಡಿದ್ದವು.

೧೨. ಆಗ ಯಶೋಧರೆಯು, ಆಗಲೇ ಏಳು ವರ್ಷದವನಾಗಿದ್ದ ರಾಹುಲನಿಗೆ ರಾಜಕುಮಾರನಿಗೆ ತಕ್ಕಂತಹ ವೈಭವಯುತವಾದ ಉಡುಗೆಯನ್ನು ತೊಡಿಸಿ, ಅವನಿಗೆ ಹೀಗೆ ಹೇಳಿದಳು:

೧೩. "ಮಹಾಬ್ರಹ್ಮನಂತೆ ಕಾಂತಿಯುತನಾಗಿ ಕಾಣುವ ಈ ಪವಿತ್ರ ಮನುಷ್ಯನು ನಿನ್ನ ತಂದೆಯು. ಅವನಿಗೆ ಮಹಾ ಸಂಪತ್ತಿನ ಗಣಿಗಳೇ ಇವೆ – ನಾನು ಅವನ್ನು ಇನ್ನೂ ನೋಡಿಲ್ಲ. ಅವನ ಬಳಿ ಹೋಗಿ, 'ನನ್ನನ್ನು ಆ ಸಂಪತ್ತಿಗೆ ಒಡೆಯನನ್ನಾಗಿ ಮಾಡು' ಎಂದು ಬೇಡಿಕೋ. ಏಕೆಂದರೆ ಮಗನಾದವನು ತಂದೆಯಿಂದ ಅವನ ಆಸ್ತಿಯನ್ನು ಪಾರಂಪರ್ಯವಾಗಿ ಪಡೆಯಬೇಕು."

೧೪. ಅದಕ್ಕೆ ರಾಹುಲ ಉತ್ತರಿಸಿದ: "ನನ್ನ ತಂದೆ ಯಾರು? ನನಗೆ ತಂದೆ ಗೊತ್ತಿಲ್ಲ. ನನಗೆ ಗೊತ್ತಿರುವುದು ಶುದ್ಧೋದನ ಮಾತ್ರ."

೧೫. ಯಶೋಧರೆಯು ಮಗನನ್ನು ಎತ್ತಿಕೊಂಡು ಕಿಟಕಿಯ ಬಳಿ ಬಂದು, ಹತ್ತಿರದಲ್ಲೇ ಭಿಕ್ಷುಗಳ ಜೊತೆ ಊಟ ಮಾಡುತ್ತಿದ್ದ ಬುದ್ಧನ ಕಡೆ ಬೆರಳು ಮಾಡಿ ತೋರಿಸಿ, ಅವನೇ ತಂದೆಯೆಂದೂ

ಶುದ್ಧೋದನನಲ್ಲವೆಂದೂ ಹೇಳಿದಳು.

೧೬. ಆಗ ರಾಹುಲ ಅವನಲ್ಲಿಗೆ ಹೋಗಿ ಕತ್ತೆತ್ತಿ ನೋಡಿ, ನಿರ್ಭಯವಾಗಿ ಆದರೆ ಪ್ರೀತಿಯಿಂದ ಹೇಳಿದ:

೧೭. "ನೀನೇ ಅಲ್ಲವೆ, ನನ್ನ ತಂದೆ!" ಅವನ ಬಳಿ ನಿಂತು ಮತ್ತೂ ಹೇಳಿದ: "ಓ ಸಮಣನೆ, ನಿನ್ನ ನೆರಳೂ ಸಹ ಆನಂದಮಯವಾಗಿದೆ!" ಪವಿತ್ರಾತ್ಮನು ಇನ್ನೂ ಮೌನವಾಗೇ ಇದ್ದ.

೧೮. ಊಟವನ್ನು ಮುಗಿಸಿದ ತಥಾಗತನು ಎಲ್ಲರನ್ನೂ ಆಶೀರ್ವದಿಸಿ ಅರಮನೆಯಿಂದ ಹೊರಬಿದ್ದ. ಆದರೆ ರಾಹುಲ ಅವನನ್ನು ಹಿಂಬಾಲಿಸಿ, ಅವನ ಆಸ್ತಿಯನ್ನು ತನಗೆ ಕೊಡುವಂತೆ ಕೇಳಿದ.

೧೯. ಹುಡುಗನನ್ನು ಯಾರೂ ತಡೆಯಲಿಲ್ಲ, ಪವಿತ್ರಾತ್ಮನೂ ಸಹ ತಡೆಯಲಿಲ್ಲ.

೨೦. ಪವಿತ್ರಾತ್ಮನು ಸಾರಿಪುತ್ತನ ಕಡೆಗೆ ತಿರುಗಿ ಹೇಳಿದ: "ನನ್ನ ಮಗ ನನ್ನ ಆಸ್ತಿಯನ್ನು ಕೇಳುತ್ತಿದ್ದಾನೆ. ಅವನಿಗೆ ನಾನು ನಶ್ವರವಾದ, ಕಷ್ಟವನ್ನೂ ದುಃಖವನ್ನೂ ತರುವ ಆಸ್ತಿಯನ್ನು ಕೊಡಲಾರೆ. ಅವನಿಗೆ ನಶ್ವರವಲ್ಲದ ಪವಿತ್ರ ಜೀವನವೆಂಬ ಆಸ್ತಿಯನ್ನು ಕೊಡಬಲ್ಲೆ."

೨೧. ಪವಿತ್ರಾತ್ಮನು ರಾಹುಲನನ್ನು ಕುರಿತು ಗಂಭೀರವಾಗಿ ಹೇಳಿದ: "ಚಿನ್ನ, ಬೆಳ್ಳಿ, ಒಡವೆಗಳು ನನ್ನಲ್ಲಿಲ್ಲ. ಆದರೆ ಆಧ್ಯಾತ್ಮಿಕ ಸಂಪತ್ತನ್ನು ಪಡೆಯಲು ನಿನಗೆ ಇಷ್ಟವಿದ್ದರೆ, ಅವುಗಳನ್ನು ಹೊತ್ತುಕೊಳ್ಳಲು ಹಾಗೂ ರಕ್ಷಿಸಿಕೊಂಡು ಹೋಗಲು ಸಾಕಷ್ಟು ಶಕ್ತನಿದ್ದರೆ, ನಾನು ವಿಫುಲವಾದ ಸಂಪತ್ತನ್ನು ಕೊಡಬಲ್ಲೆ. ನನ್ನ ಆಧ್ಯಾತ್ಮಿಕ ಸಂಪತ್ತೆಂದರೆ ಧರ್ಮದ ಪಥ. ಅತ್ಯುನ್ನತ ಆನಂದ ಪಡೆಯಲು ಅವಶ್ಯಕವಾದ ಆತ್ಮ ಶಿಕ್ಷಣಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಭಿಕ್ಷುಗಳ ಸಂಘಕ್ಕೆ ಪ್ರವೇಶ ಪಡೆಯಲು ನೀನು ಆಶಿಸುತ್ತೀಯಾ?"

೨೨. ರಾಹುಲನು ಇದಕ್ಕೆ "ಹೌದು" ಎಂಬ ದೃಢವಾದ ಉತ್ತರ ಕೊಟ್ಟ.

೨೩. ರಾಹುಲನೂ ಭಿಕ್ಷುಗಳ ಸಂಘವನ್ನು ಸೇರಿದನೆಂಬುದನ್ನು ಕೇಳಿದ ಶುದ್ಧೋದನನು ಬಹಳವಾಗಿ ಶೋಕಿಸಿದನು.

## ೩. ಶಾಕ್ಯರಿಂದ ಸ್ವಾಗತ

೧. ಶಾಕ್ಯರ ದೇಶಕ್ಕೆ ಹಿಂತಿರುಗಿದ ಭಗವಾನನು, ಆ ಪ್ರಜೆಗಳಲ್ಲಿ ಕೆಲವರು ಅವನ ಪರ ಮತ್ತೆ ಕೆಲವರು ಅವನ ವಿರುದ್ಧವಾಗಿರುವುದನ್ನು ಮನಗಂಡನು.

೨. ಹಿಂದೆ ಶಾಕ್ಯರು ಹಾಗೂ ಕೊಲಿಯರ ನಡುವೆ ನಡೆದ ಯುದ್ಧದ ವಿಚಾರದಲ್ಲಿಯೂ ಶಾಕ್ಯ ಸಂಘದಲ್ಲಿ ಮತಭೇದ ಉಂಟಾಗಿದ್ದುದನ್ನು ಅವನು ಜ್ಞಾಪಿಸಿಕೊಂಡ. ಅದರಲ್ಲಿ ಅವನು ಒಂದು ಪ್ರಮುಖ ಪಾತ್ರವಹಿಸಿದ್ದ.

೩. ಅವನ ವಿರುದ್ಧವಾಗಿದ್ದವರು ಈಗಲೂ ಅವನಿಗೆ ಪ್ರಣಾಮಗಳನ್ನು ಸಲ್ಲಿಸಲು ಅವನ ಶ್ರೇಷ್ಠತೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿದರು. ಅವನ ಪರವಾಗಿದ್ದವನು ಮನೆಗೊಬ್ಬೊಬ್ಬ ಮಗನನ್ನು ಬುದ್ಧನ ಪರಿವಾರಕ್ಕೆ ಮುಡಿಪಾಗಿಡಬೇಕೆಂದು ಆಗಲೇ ತೀರ್ಮಾನಿಸಿದ್ದರು. ಇವರು ಸಂಘಕ್ಕೆ ಸೇರಬೇಕೆಂದೂ ರಾಜಗೃಹಕ್ಕೆ ಭಗವಾನನು ಹಿಂದಿರುಗಿದಾಗ ಅವನೊಂದಿಗೆ ಹೊರಡಬೇಕೆಂದೂ ತೀರ್ಮಾನಿಸಿದ್ದರು.

೪. ಮನೆಗೊಬ್ಬ ಮಗನನ್ನು ಮೀಸಲಾಗಿಡಲು ತೀರ್ಮಾನಿಸಿದ ಕುಟುಂಬಗಳಲ್ಲಿ ಅಮಿತೋದನನ ಕುಟುಂಬವೂ ಒಂದು.

೫. ಅಮಿತೋದನಿಗೆ ಇಬ್ಬರು ಗಂಡುಮಕ್ಕಳಿದ್ದರು. ಅನುರುದ್ಧ ಎಂಬ ಬಹಳ ಸೂಕ್ಷ್ಮವಾಗಿ ಬೆಳೆಸಲಾಗಿದ್ದ ಮಗ ಒಬ್ಬ; ಮಹಾನಾಮ ಎಂಬುವವನು ಇನ್ನೊಬ್ಬ.

೬. ಮಹಾನಾಮನು ಅನುರುದ್ಧನ ಬಳಿ ಬಂದು ಹೇಳಿದ: "ನೀನು ಪ್ರಪಂಚ ತ್ಯಾಗ ಮಾಡು. ಇಲ್ಲದಿದ್ದರೆ, ನಾನು ಮಾಡುತ್ತೇನೆ". ಅದಕ್ಕೆ ಅನುರುದ್ಧ "ನಾನು ಬಹಳ ಸೂಕ್ಷ್ಮ. ಗೃಹಸ್ಥ ಜೀವನದಿಂದ ಗೃಹರಹಿತ ಜೀವನಕ್ಕೆ ಹೋಗುವುದು ನನಗೆ ಅಸಾಧ್ಯ. ಆದುದರಿಂದ ನೀನೇ ಮಾಡು" ಎಂದ.

೭. "ಇಲ್ಲಿ ಬಾ ಪ್ರೀತಿಯ ಅನುರುದ್ಧ, ಗೃಹಸ್ಥ ಜೀವನಕ್ಕೆ ಯಾವುದು ಅಮುಖ್ಯ ಎಂಬುದನ್ನು ನಾನು ತಿಳಿಸುತ್ತೇನೆ. ಮೊದಲನೆಯದಾಗಿ, ನೀನು ನೆಲವನ್ನು ಉಳಬೇಕು. ಇದಾದಮೇಲೆ, ಅವುಗಳಲ್ಲಿ ಬಿತ್ತನೆ ಮಾಡಿಸಬೇಕು. ಅದೂ ಆದಮೇಲೆ, ಅವುಗಳಿಗೆ ನೀರು ಹಾಯಿಸಬೇಕು. ಅದೂ ಆದಮೇಲೆ, ಹೊಲಗಳಲ್ಲಿದ್ದ ನೀರನ್ನೂ ಹೊರಕ್ಕೆ ಬಿಡಬೇಕು. ಅದಾದಮೇಲೆ ಕಾಳುಗಳನ್ನು ಪೈರು ಮಾಡಬೇಕು. ಆದಾದಮೇಲೆ ಬೆಳೆಯನ್ನೂ ಕೊಯ್ಯಿಸಬೇಕು. ಇದಾದಮೇಲೆ ಹೊರಕ್ಕೆ ತಂದು ಹಾಕಿಸಬೇಕು. ಇದಾದಮೇಲೆ ಅವೆಲ್ಲವನ್ನೂ ಶಿವುಡು ಕಟ್ಟಿಸಬೇಕು. ಅದಾದಮೇಲೆ, ಅವುಗಳನ್ನು ತುಳಿಸಬೇಕು, ಅದಾದಮೇಲೆ ಒಣಹುಲ್ಲನ್ನು ಬೇರೆಮಾಡಬೇಕು. ಇದಾದಮೇಲೆ ಕಾಳಿನ ಮೇಲಿನ ಹೊಟ್ಟನ್ನು ತೆಗೆಸಬೇಕು. ಅದಾದಮೇಲೆ ಗಾಳಿಗೆ ತೂರಬೇಕು. ಇದಾದಮೇಲೆ ಕಾಳನ್ನು ಕಣಜದಲ್ಲಿಡಬೇಕು. ಇದಾದಮೇಲೆ, ಇದೆಲ್ಲವನ್ನು ಮತ್ತೆ ಮುಂದಿನ ವರ್ಷ ಮಾಡಬೇಕು; ಇದೆಲ್ಲವನ್ನು ವರ್ಷಂಪ್ರತಿ ಮಾಡಬೇಕು.

೮. "ಹೀಗಾಗಿ ಆ ಕೆಲಸ ಮುಗಿಯುವುದೇ ಇಲ್ಲ; ಶ್ರಮಕ್ಕೆ ಕೊನೆಯಿಲ್ಲವೇನೋ ಅನಿಸುತ್ತದೆ. ಓಹ್! ನಮ್ಮ ಕೆಲಸಕ್ಕೆ ಕೊನೆ ಯಾವಾಗ? ನಮ್ಮ ಶ್ರಮದ ಕೊನೆಯನ್ನು ನಾವು ಯಾವಾಗ ಕಾಣುತ್ತೇವೆ? ನಮ್ಮ ಐದು ಇಂದ್ರಿಯಗಳ ಸುಖಗಳನ್ನು ಪಡೆದೂ ರಕ್ಷಿಸಿಕೊಂಡೂ ಯಾವಾಗ ಶಾಂತವಾಗಿ ಬದುಕಬಲ್ಲೆವು? ಹೌದು. ಪ್ರೀತಿಯ ಅನುರುದ್ಧ, ನಮ್ಮ ಕೆಲಸಕ್ಕೆ ಯಾವತ್ತೂ ಕೊನೆಯಿಲ್ಲ. ನಮ್ಮ ಶ್ರಮಕ್ಕೆ ಕೊನೆಯಿರುವಂತೆ ಕಾಣುವುದೇ ಇಲ್ಲ."

೯. "ಗೃಹಸ್ಥನ ಕರ್ತವ್ಯಗಳನ್ನು ನೀನೇ ಮಾಡಲು ಯೋಚನೆ ಮಾಡು. ನಾನೇ ಗೃಹಸ್ಥ ಜೀವನ ತ್ಯಜಿಸಿ ಗೃಹರಹಿತ ಆಶ್ರಮಕ್ಕೆ ಹೋಗುತ್ತೇನೆ' ಎಂದ ಅನುರುದ್ಧ.

೧೦. ಆಗ ಶಾಕ್ಯನಾದ ಅನುರುದ್ಧನು ತನ್ನ ತಾಯಿಯ ಹತ್ತಿರ ಹೋಗಿ ಹೀಗೆ ಹೇಳಿದನು: "ತಾಯಿ, ನಾನು ಗೃಹಸ್ಥ ಜೀವನ ತ್ಯಜಿಸಿ ಗೃಹರಹಿತ ಜೀವನಕ್ಕೆ ಹೋಗಬೇಕೆಂದಿದ್ದೇನೆ. ಹಾಗೆ ಮಾಡಲು ನಿನ್ನ ಅಪ್ಪಣೆ ಕೊಡು."

೧೧. ಶಾಕ್ಯ ಅನುರುದ್ಧನು ಈ ರೀತಿ ಹೇಳಿದಾಗ, ಅವನ ತಾಯಿ ಈ ರೀತಿ ಉತ್ತರಿಸಿದಳು: "ಪ್ರೀತಿಯ ಅನುರುದ್ಧ, ನೀವಿಬ್ಬರೂ ನನ್ನ ಮಕ್ಕಳು, ಹತ್ತಿರದವರು ಮತ್ತು ಪ್ರೀತಪಾತ್ರರು. ನಿಮ್ಮಿಬ್ಬರಲ್ಲಿಯೂ ನಾನು ಕೇಡು ನೋಡಿಲ್ಲ. ಮುಂದೆಂದೋ ನನ್ನ ಇಚ್ಛೆಗೆ ವಿರುದ್ಧ ಸಾವು ಬಂದಾಗಲಷ್ಟೇ ನಾನು ನಿಮ್ಮಿಂದ ಅಗಲಿ ಹೋಗುತ್ತೇನೆ. ಆದರೆ ನೀವಿನ್ನೂ ಬದುಕಿದ್ದಾಗಲೇ ಗೃಹಸ್ಥ ಜೀವನದಿಂದ ಗೃಹರಹಿತ ಜೀವನಕ್ಕೆ ಹೋಗಲು ನಾನು ಹೇಗೆ ಅನುಮತಿ ಕೊಡಲಿ?"

೧೨. ಅನುರುದ್ಧನು ಎರಡನೇ ಸಾರಿ ಈ ಬೇಡಿಕೆಯನ್ನು ಮುಂದಿಟ್ಟಾಗಲೂ ಅವನಿಗೆ ಇದೇ ಉತ್ತರ ಸಿಕ್ಕಿತು. ಮೂರನೇ ಸಾರಿ ಇದೇ ಬೇಡಿಕೆಯನ್ನು ತಾಯಿಯ ಮುಂದಿಟ್ಟನು.

೧೩. ಆಗಿನ ಕಾಲದಲ್ಲಿ ಶಾಕ್ಯ ರಾಜನಾದ ಭದ್ದಿಯ ಎಂಬುವವನು ಶಾಕ್ಯರನ್ನು ಆಳುತ್ತಿದ್ದನು ಹಾಗೂ

ಅವನು ಅನುರುದ್ಧನ ಗೆಳೆಯನಾಗಿದ್ದನು. ಅನುರುದ್ಧನ ತಾಯಿಗೆ ಆ ರಾಜನು ಪ್ರಪಂಚತ್ಯಾಗ ಮಾಡಲಾರನೆಂಬುದು ಗೊತ್ತಿದ್ದುದರಿಂದ ಆಕೆ ಮಗನಿಗೆ ಹೀಗೆ ಹೇಳಿದಳು: "ಪ್ರೀತಿಯ ಅನುರುದ್ಧ, ಶಾಕ್ಯರಾಜ ಭದ್ದಿಯ ಪ್ರಪಂಚವನ್ನು ತ್ಯಜಿಸಲು ಸಿದ್ಧವಾದರೆ, ಅವನೊಂದಿಗೆ ನೀನೂ ಹಾಗೆ ಮಾಡಬಹುದು."

೧೪. ಆಗ ಅನುರುದ್ಧ ಭದ್ದಿಯನಲ್ಲಿಗೆ ಹೋಗಿ ಹೀಗೆ ಹೇಳಿದ: "ಪ್ರಿಯ ಗೆಳೆಯನೇ, ನನ್ನ ಪ್ರಪಂಚ ತ್ಯಾಗವು ನಿನ್ನಿಂದಾಗಿ ತಡೆಯಲ್ಪಟ್ಟಿದೆ."

೧೫. "ಪ್ರಿಯ ಗೆಳೆಯಾ, ಹಾಗಿದ್ದರೆ ಆ ತಡೆಯು ತೆಗೆಯಲ್ಪಡಲಿ. ನಾನೂ ನಿನ್ನ ಜೊತೆಗಿರುತ್ತೇನೆ. ನಿನ್ನಿಚ್ಛೆಯಂತೆ ಪ್ರಪಂಚತ್ಯಾಗ ಮಾಡು."

೧೬. "ಪ್ರಿಯ ಗೆಳೆಯ, ನಾವಿಬ್ಬರೂ ಒಟ್ಟಿಗೇ ಪ್ರಪಂಚ ತ್ಯಾಗ ಮಾಡೋಣ."

೧೭. "ಪ್ರಿಯ ಗೆಳೆಯಾ, ಗೃಹಸ್ಥ ಜೀವನ ತ್ಯಜಿಸುವುದು ನನ್ನಿಂದಾಗದು. ನೀನು ಬೇರೆ ಏನು ಬೇಕಾದರೂ ಹೇಳು, ಮಾಡುತ್ತೇನೆ. ಬೇಕಾದರೆ ನೀನೊಬ್ಬನೆ ಹೋಗು" ಎಂದು ಭದ್ದಿಯ.

೧೮. "ಪ್ರಿಯ ಗೆಳೆಯ, ನನ್ನ ತಾಯಿ ಹೇಳಿದ್ದಾಳೆ. ನೀನು ವಿರಕ್ತನಾದರೆ ನಾನೂ ಆಗಬಹುದಂತೆ. ಈಗ ತಾನೇ ನೀನು 'ನಿನ್ನ ವೈರಾಗ್ಯಕ್ಕೆ ನಾನು ಅಡ್ಡಿಯಾದರೆ, ಆ ಅಡ್ಡಿಯನ್ನು ತೆಗೆಯೋಣ, ನಿನ್ನಿಚ್ಛೆಯಂತೆ ಪ್ರಪಂಚತ್ಯಾಗ ಮಾಡೋಣ' ಎಂದು ಘೋಷಿಸಿದ್ದೀಯ. ಹಾಗಿದ್ದರೆ, ಪ್ರಿಯ ಗೆಳೆಯಾ, ಬಾ, ನಾವಿಬ್ಬರೂ ಒಟ್ಟಿಗೆ ಪ್ರಪಂಚ ತ್ಯಾಗ ಮಾಡೋಣ."

೧೯. ಆಗ ಶಾಕ್ಯ ರಾಜ ಭದ್ದಿಯ ಅನುರುದ್ಧನಿಗೆ ಹೇಳಿದ: "ಪ್ರಿಯ ಗೆಳೆಯಾ, ಇನ್ನೂ ಏಳು ವರ್ಷ ತಡೆ. ಏಳು ವರ್ಷಗಳ ಕೊನೆಗೆ ನಾವಿಬ್ಬರೂ ಒಟ್ಟಿಗೇ ಪ್ರಪಂಚತ್ಯಾಗ ಮಾಡೋಣ."

೨೦. "ಏಳು ವರ್ಷಗಳೆಂದರೆ ಬಹಳವಾಯಿತು. ಪ್ರಿಯ ಗೆಳೆಯಾ! ನಾನು ಏಳು ವರ್ಷಗಳ ಕಾಲ ಕಾಯಲಾರೆ."

೨೧. ಭದ್ದಿಯ ತನ್ನ ಅವಧಿಯನ್ನು ಆರು ವರ್ಷಕ್ಕಿಳಿಸಿದ. ಕೊನೆಗೆ ಒಂದು ವರ್ಷಕ್ಕೆ, ಆಮೇಲೆ ಏಳು ತಿಂಗಳಿಗೆ, ಹೀಗೆ ಇಳಿಸುತ್ತಾ ಬಂದು ಒಂದು ತಿಂಗಳಿಗೆ, ಕೊನೆಗೆ ಒಂದು ಪಕ್ಷಕ್ಕೆ ಇಳಿಸಿದನು. ಆದರೆ ಇದೆಲ್ಲದಕ್ಕೂ ಅನುರುದ್ದನದು ಒಂದೇ ಉತ್ತರ "ಅಷ್ಟು ಸಮಯ ಕಾಯುವುದು ಕಷ್ಟ".

೨೨. ಆಗ ರಾಜ ಹೇಳಿದ : "ಪ್ರಿಯ ಗೆಳೆಯ, ಏಳು ದಿವಸ ತಡೆ. ಅಷ್ಟರೊಳಗೆ ನನ್ನ ರಾಜ್ಯವನ್ನು ನನ್ನ ಮಕ್ಕಳಿಗೂ ನನ್ನ ತಮ್ಮಂದಿರಿಗೂ ವಹಿಸಿಕೊಡುತ್ತೇನೆ."

೨೩. "ಏಳು ದಿವಸ ಬಹಳವೇನಲ್ಲ. ಅಷ್ಟರವರೆಗಾದರೆ ನಾನು ಕಾಯುತ್ತೇನೆ" ಎಂಬುದು ಅವನ ಉತ್ತರವಾಗಿತ್ತು.

೨೪. ಹೀಗೆ, ಶಾಕ್ಯರಾಜ ಭದ್ದಿಯ, ಅನುರುದ್ಧ, ಆನಂದ, ಭಾಗು, ಕಿಂಬಿಲ ಮತ್ತು ದೇವದತ್ತ ಇವರೆಲ್ಲ ಮೊದಲು ವಿನೋದವನಕ್ಕೆ ಹೇಗೆ ಚತುರಂಗದೊಡನೆ ಹೋಗುತ್ತಿದ್ದರೋ, ಹಾಗೆ ಈಗಲೂ ಚತುರಂಗದೊಡನೆ, ಉಪಾಲಿ ಎಂಬ ಕ್ಷೌರಿಕನೊಡಗೂಡಿ, ಅಂದರೆ ಒಟ್ಟು ಏಳು ಜನರು ಹೊರಟರು.

೨೫. ಸ್ವಲ್ಪ ದೂರ ಹೋದನಂತರ ಅವರು ತಮ್ಮ ಪರಿವಾರದವರನ್ನೆಲ್ಲಾ ಹಿಂದಕ್ಕೆ ಕಳಿಸಿ, ನೆರೆಪ್ರಾಂತ್ಯಕ್ಕೆ ಕಾಲಿಟ್ಟರು; ಅಲ್ಲದೆ, ತಮ್ಮ ಎಲ್ಲ ಬೆಲೆಬಾಳುವ ವಸ್ತುಗಳನ್ನೆಲ್ಲ ತೆಗೆದು, ತಮ್ಮ ವಸ್ತ್ರಗಳಲ್ಲೇ ಗಂಟುಕಟ್ಟಿ, ಕ್ಷೌರಿಕ ಉಪಾಲಿಗೆ ಹೇಳಿದರು: "ಪುಣ್ಯಾತ್ಮ ಉಪಾಲಿಯೇ, ಈಗ ನೀನು ಹಿಂತಿರುಗಿ ಕಪಿಲವಸ್ತುವಿಗೆ ಹೋಗು. ಈ ವಸ್ತುಗಳು ನಿನ್ನ ಜೀವಿತಕ್ಕೆ ಸಾಕಾಗುತ್ತದೆ. ನಾವೆಲ್ಲ ಹೋಗಿ ಪವಿತ್ರಾತ್ಮನನ್ನು

ಸೇರಿಕೊಳ್ಳುತ್ತೇವೆ." ಹೀಗೆಂದು ಹೇಳಿ ಅವರೆಲ್ಲ ಮುಂದೆ ಸಾಗಿದರು.

೨೬. ಉಪಾಲಿಯು ಹಿಂದಿರುಗುವ ಉದ್ದೇಶದಿಂದ ಅವರಿಂದ ಬೀಳ್ಕೊಂಡನು.

## ೪. ಮಗನನ್ನು ಗೃಹಸ್ಥನನ್ನಾಗಿ ಮಾಡುವ ಕೊನೆಯ ಪ್ರಯತ್ನ

೧. ಮಗನು ಮತ್ತೊಮ್ಮೆ ಕಾಣಸಿಗದಂತೆ ಹೊರಟುಹೋಗುವ ವಿಷಯವನ್ನು ಕುರಿತು ಶುದ್ಧೋದನನು ಬಹಳವಾಗಿ ದುಃಖಿಸಿದನು.

೨. ಆಗ ಶುದ್ಧೋದನನು ತನ್ನ ಮಂತ್ರಿಯನ್ನೂ ರಾಜಪುರೋಹಿತನನ್ನೂ ಕರೆಯಿಸಿ, ಅವರನ್ನು "ನೀವು ಬುದ್ಧನು ಹಿಂದಿರುಗಿ ಬಂದು ಗೃಹಸ್ಥಾಶ್ರಮವನ್ನು ಸ್ವೀಕರಿಸುವಂತೆ ಒಪ್ಪಿಸಲು ಸಾಧ್ಯವೇ?" ಎಂದು ಕೇಳಿದನು.

೩. ರಾಜನ ಇಚ್ಛೆಯನ್ನು ವಿಧೇಯತೆಯಿಂದ ಪಾಲಿಸಬಯಸಿದ ರಾಜಪುರೋಹಿತನು, ಮಂತ್ರಿಯೊಡಗೂಡಿ, ಬೇಗಬೇಗನೆ ಹೋಗಿ ಬುದ್ಧನನ್ನು ಕೂಡಿಕೊಂಡನು.

೪. ಸೂಕ್ತ ರೀತಿಯಲ್ಲಿ ಗೌರವ ಸಲ್ಲಿಸಿದ ನಂತರ, ಹಾಗೂ ಅವನ ಅಪ್ಪಣೆಯ ಮೇರೆಗೆ ಅವರು ಅವನ ಬಳಿ ಕುಳಿತರು.

೫. ಮರದ ಬುಡದ ಹತ್ತಿರ ಕುಳಿತಿದ್ದ ಭಗವಾನನನ್ನು ಉದ್ದೇಶಿಸಿ ರಾಜಪುರೋಹಿತನು ಹೀಗೆ ನುಡಿದನು:

೬. "ಓ! ರಾಜಕುಮಾರನೇ, ನಿನ್ನ ವಿಯೋಗದ ಬಾಣವು ನಿನ್ನ ತಂದೆಯ ಹೃದಯದ ಆಳಕ್ಕೆ ಚುಚ್ಚಿ, ಕಣ್ಣೀರಿನ ಮಳೆ ಸುರಿಸುತ್ತಿರುವ ನಿನ್ನ ತಂದೆಯ ಅನುಭೂತಿಗಳನ್ನು ಒಂದು ಕ್ಷಣ ಪರಿಗಣಿಸು. ಮನೆಗೆ ಹಿಂದಿರುಗುವಂತೆ ನಿನಗೆ ಅವನು ಹೇಳಿಕಳಿಸಿದ್ದಾನೆ. ಆಗ ಮಾತ್ರ ಅವನು ಶಾಂತವಾಗಿ ಸಾಯಬಹುದು.

೭. "ನನಗೆ ಗೊತ್ತು, ನೀನು ಧರ್ಮದ ಮೇಲೆ ಕೇಂದ್ರೀಕರಿಸಿದ್ದೀಯ. ನೀನು ನಿನ್ನ ಧ್ಯೇಯವನ್ನು ಬದಲಿಸುವುದಿಲ್ಲವೆಂಬುದೂ ನನಗೆ ಗೊತ್ತು. ಆದರೆ, ನೀನು ಅನಿಕೇತನದ ಆಶ್ರಮಕ್ಕೆ ಹೋಗಿರುವುದರಿಂದ, ದುಃಖವು ನನ್ನನ್ನು ಬೆಂಕಿಯ ಜ್ವಾಲೆಯಂತೆ ಸುಡುತ್ತಿದೆ.

೮. "ಕರ್ತವ್ಯ ಪ್ರೇಮಿಯಾದವನೇ ಬಾ; ಕರ್ತವ್ಯಕ್ಕೋಸ್ಕರವಾದರೂ ಈ ನಿನ್ನ ಧ್ಯೇಯವನ್ನು ಕೈಬಿಡು.

೯. "ಪ್ರಾಪಂಚಿಕ ಐಶ್ವರ್ಯವನ್ನು ಸ್ವಲ್ಪ ಹೊತ್ತು ಅನುಭವಿಸು – ಶಾಸ್ತ್ರಗಳು ಹೇಳಿದ ಸಮಯದಲ್ಲಿ ಮಾತ್ರ ಕಾಡಿಗೆ ಹೋಗತಕ್ಕದ್ದು – ನಿನ್ನ ದುಃಖತಪ್ತ ಬಂಧುಗಳಿಗೆ ಅಗೌರವ ತೋರಿಸಬೇಡ. ಎಲ್ಲ ಜೀವಿಗಳಿಗೂ ಕರುಣೆಯನ್ನು ತೋರಿಸುವುದೇ ನಿಜವಾದ ಅಧ್ಯಾತ್ಮ.

೧೦. "ಅಧ್ಯಾತ್ಮವು ಕೇವಲ ಕಾಡಿನಲ್ಲಿ ಪಡೆಯುವಂತಹುದಲ್ಲ; ಸಂನ್ಯಾಸಿಗಳು ನಗರದಲ್ಲಿದ್ದುಕೊಂಡೂ ಮೋಕ್ಷವನ್ನು ಪಡೆಯಬಹುದು; ಇಚ್ಛೆ ಮತ್ತು ಪ್ರಯತ್ನಗಳು ನಿಜವಾದ ಮಾರ್ಗ; ಕಾಡಿಗೆ ಹೋಗುವುದು ಲಾಂಛನ ಧರಿಸುವುದು ಹೇಡಿಗಳ ಕುರುಹು.

೧೧. "ನಿನ್ನಿಂದಾಗಿ, ಶಾಕ್ಯರಾಜನು, ಕಷ್ಟದ ತೆರೆಗಳಿಂದ ಕೂಡಿದ, ಆಳವಾದ ದುಃಖಸಾಗರದಲ್ಲಿ ಮುಳುಗಿದ್ದಾನೆ. ಆದುದರಿಂದ, ಸಮುದ್ರದಲ್ಲಿ ಮುಳುಗುತ್ತಿರುವ ಎತ್ತಿನಂತೆ ಅವನು ಅಸಹಾಯಕನೂ ಅನಾಥನೂ ಆಗಿರುವುದರಿಂದ, ನೀನು ಅವನನ್ನು ಬಿಡುಗಡೆ ಮಾಡು.

೧೨. "ರಾಣಿಯ ಸ್ಥಿತಿಯನ್ನೂ ಪರಿಗಣಿಸು – ನಿನ್ನನ್ನು ಸಾಕಿ ಸಲಹಿದ ಆಕೆ, ಇನ್ನೂ ಅಗಸ್ತ್ಯ ವಾಸಿಸುತ್ತಿರುವ ಸ್ಥಳಕ್ಕೆ ಹೋಗಿಲ್ಲ. ತನ್ನ ಎಳೆಗರುವನ್ನು ಕಳೆದುಕೊಂಡು ಆಕಳಿನಂತೆ ದುಃಖಿಸುತ್ತಿರುವ ಅವಳ ಕಡೆ ನೀನು ಗಮನ ಹರಿಸುವುದಿಲ್ಲವೆ?

೧೩. "ತನ್ನ ಪ್ರಿಯ ಗಂಡುಹಂಸದಿಂದ ವಿಯೋಗ ಹೊಂದಿದ ಹೆಣ್ಣುಹಂಸದಂತೆ ಅಥವಾ ಕಾಡಿನಲ್ಲಿ ತನ್ನ ಪ್ರಿಯ ಸಲಗದಿಂದ ತಿರಸ್ಕೃತಳಾದ ಹೆಣ್ಣಾನೆಯಂತೆ – ಗಂಡನಿದ್ದು ವಿಧವೆಯಂತೆ ಈಗ ವಿಲಾಪಿಸುತ್ತಿರುವ ನಿನ್ನ ಹೆಂಡತಿಯನ್ನು, ಖಂಡಿತವಾಗಿಯೂ ನೀನು ಕೇವಲ ಒಂದು ನೋಟದಿಂದಲೇ ಸಮಾಧಾನಪಡಿಸುತ್ತೀಯ."

೧೪. ರಾಜಪುರೋಹಿತನ ಈ ಮಾತುಗಳನ್ನು ಕೇಳಿಸಿಕೊಂಡ ಭಗವಾನನು ಒಂದು ಕ್ಷಣ ಚಿಂತಾಕ್ರಾಂತನಾದನು. ಏಕೆಂದರೆ ಅವನಿಗೆ ಸನ್ಮಾರ್ಗಿಗಳ ಸದ್ಗುಣಗಳೆಲ್ಲ ಅವನಿಗೆ ಗೊತ್ತಿದ್ದವು; ಕೊನೆಗೆ ಅವನು ತನ್ನ ವಿನಯಪೂರ್ವಕ ಉತ್ತರ ಕೊಟ್ಟನು.

## ೫. ಬುದ್ಧನ ಉತ್ತರ

೧. "ರಾಜನ ಪಿತೃವಾತ್ಸಲ್ಯವೆಂದರೇನೆಂಬುದು – ಅದರಲ್ಲೂ ಅವನು ನನಗೆ ತೋರಿಸುತ್ತಿದ್ದ ವಾತ್ಸಲ್ಯವನ್ನು – ನಾನು ಚೆನ್ನಾಗಿ ಬಲ್ಲೆ. ಇಷ್ಟೆಲ್ಲಾ ಗೊತ್ತಿದ್ದರೂ, ಇಡೀ ವಿಶ್ವವನ್ನೇ ವ್ಯಾಪಿಸಿಕೊಂಡಿರುವ ಕೇಡು ಮತ್ತು ದುಃಖದಿಂದ ಎಚ್ಚರಗೊಂಡು, ನಾನು ನನ್ನ ಬಂಧುಬಳಗವನ್ನು ಅನಿವಾರ್ಯವಾಗಿ ಬಿಡಬೇಕಾಗಿ ಬಂತು.

೨. "ಒಂದು ವೇಳೆ ನಮ್ಮ ಪ್ರಿಯ ಬಾಂಧವರಿಂದ ವಿಯೋಗವೇ ಇಲ್ಲದಿದ್ದರೆ, ಯಾರು ತಾನೇ ತನ್ನ ಪ್ರಿಯ ಬಾಂಧವರನ್ನು ನೋಡಬಯಸುವುದಿಲ್ಲ? ಆದರೆ ಒಂದು ಸಾರಿ ಆದ ವಿಯೋಗದ ನಂತರವೂ ಮತ್ತೊಂದು ವಿಯೋಗ ಖಂಡಿತ ಬರುತ್ತದೆ. ಆದುದರಿಂದಲೆ, ನನ್ನ ತಂದೆಯು ನನಗೆ ಎಷ್ಟೇ ಪ್ರಿಯವಾದರೂ ಅವರನ್ನು ತೊರೆದುಬಂದದ್ದು.

೩. "ಆದರೆ ರಾಜರ ಶೋಕಕ್ಕೆ ನಾನೇ ಕಾರಣ ಎಂಬುದನ್ನು ಮಾತ್ರ ನಾನು ಒಪ್ಪುವುದಿಲ್ಲ. ಏಕೆಂದರೆ, ಸ್ವಪ್ನರೂಪದಲ್ಲಿರುವ ಸಂಯೋಗವನ್ನು ಅನುಭವಿಸುತ್ತಿರುವ ಅವರು, ನಿಜವಾಗಿಯೂ ಮುಂದೆ ಆಗಬಹುದಾದ ವಿಯೋಗದಿಂದ ನರಳುತ್ತಿದ್ದಾರೆ.

೪. "ಹೀಗೆ, ಪ್ರಪಂಚದ ವಿವಿಧ ಬದಲಾವಣೆಗಳನ್ನು ನೋಡಿರುವ ನೀವು, ನಿಮ್ಮ ಯೋಚನೆಗಳನ್ನು ನಿಶ್ಚಲ ಮಾಡಿಕೊಳ್ಳಿ; ಮಗನಾಗಲಿ, ಬಂಧುವಾಗಲಿ, ಶೋಕಕ್ಕೆ ಕಾರಣವಲ್ಲ – ಶೋಕಕ್ಕೆ ಅಜ್ಞಾನವೊಂದೇ ಕಾರಣ.

೫. "ರಸ್ತೆಯಲ್ಲಿ ಪ್ರಯಾಣ ಮಾಡುತ್ತಿರುವವರು ಹೇಗೆ ಪರಸ್ಪರದಿಂದ ವಿಯೋಗ ಪಡೆಯುತ್ತಾರೋ, ಹಾಗೆಯೇ ನಮಗೆಲ್ಲರಿಗೂ ಕಾಲಕ್ರಮೇಣ ವಿಯೋಗ ಅನಿವಾರ್ಯ. ಹೀಗಿರುವಾಗ, ಯಾವ ಜ್ಞಾನಿ ತಾನೇ ತನ್ನ ಬಂಧುಗಳನ್ನು ಕಳೆದುಕೊಂಡಾಗ ಅವರನ್ನು ಪ್ರೀತಿಸುತ್ತಿದ್ದರೂ ಸಹ – ಶೋಕಪಡುತ್ತಾನೆ?

೬. "ಒಬ್ಬನು ತನ್ನ ಬಂಧುಗಳನ್ನು ಮತ್ತೊಂದು ಲೋಕದಲ್ಲಿ ಬಿಟ್ಟು, ಇಲ್ಲಿಗೆ ಬಂದಿದ್ದಾನೆ; ಇಲ್ಲಿಂದ

ಅಲ್ಲಿಗೆ ಮತ್ತೊಮ್ಮೆ ಕದ್ದುಹೋಗುತ್ತಾನೆ; ಅಲ್ಲಿಂದ ಮತ್ತೆಲ್ಲಿಗೋ ಹೋಗುತ್ತಾನೆ – ಮನುಕುಲ ಇರುವುದೇ ಹೀಗೆ. ಅಂಥವರಿಗೆ ಮುಕ್ತನು ಏನೆಂದು ಕರುಣೆ ತೋರಿಸಬೇಕು?

೭. "ಗರ್ಭದಿಂದ ಹೊರಬಂದ ಕ್ಷಣದಿಂದಲೇ ಸಾವು ನಮ್ಮ ವಿಲಕ್ಷಣ ಉಪಾಧಿಯಾಗುತ್ತದೆ. ಆದುದರಿಂದ, ನಾನು ಕಾಡಿಗೆ ಹೋದುದನ್ನು ಪುತ್ರವಾತ್ಸಲ್ಯದಿಂದಾಗಿ ನೀವೇಕೆ 'ಅವೇಳೆ' ಎಂದಿರಿ?

೮. "ಲೌಕಿಕ ವಸ್ತುಗಳನ್ನು ಪಡೆಯಲು 'ಅವೇಳೆ' ಇರಬಹುದು – ನಿಜವಾಗಿಯೂ ಎಲ್ಲ ವಸ್ತುಗಳ ಜೊತೆಗೂ ಬಿಡಲಾರದಂತೆ ಕಾಲ ಅಂಟಿಕೊಂಡಿರುತ್ತದೆ. ಕಾಲವೇ ಇಡೀ ಪ್ರಪಂಚವನ್ನು ತನ್ನ ವಿವಿಧ ಕಾಲಗಳೊಳಕ್ಕೆ ಎಳೆದುಕೊಳ್ಳುತ್ತದೆ; ಆದರೆ ನಿಜವಾಗಿಯೂ ಶ್ಲಾಘನೀಯವಾದ ಆನಂದ ಮಾತ್ರ ಎಲ್ಲ ಕಾಲಗಳಿಗೂ ಹೊಂದಿಕೊಳ್ಳುತ್ತದೆ.

೯. "ಮಹಾರಾಜರು ತನ್ನ ಇಡೀ ರಾಜ್ಯವನ್ನು ನನಗೆ ಒಪ್ಪಿಸಲು ಬಯಸಿರುವುದು – ಇದೊಂದು ಘನವಾದ, ತಂದೆಗೆ ಯೋಗ್ಯವಾದ ತೀರ್ಮಾನ. ಆದರೆ ರೋಗಿಷ್ಠನೊಬ್ಬನು ದುರಾಸೆಯಿಂದ ಅಪಥ್ಯ ಆಹಾರವನ್ನು ಸ್ವೀಕರಿಸಿದಂತೆ ನಾನು ಅದನ್ನು ಸ್ವೀಕರಿಸುವುದು ಸಲ್ಲ.

೧೦. "ಭ್ರಮೆಗೆ ಆಸರೆಯಾದ ಹಾಗೂ ಕಾತರ, ಲೋಭ ಮತ್ತು ಮೋಹಗಳು ತುಂಬಿರುವ ರಾಜಪದವಿಯನ್ನು ವಿವೇಕಿಯಾದವನು ಸ್ವೀಕರಿಸುವುದು ಎಷ್ಟು ಯೋಗ್ಯ? ಮತ್ತೊಬ್ಬನ ಸೇವೆಯ ಮೂಲಕ ಪಡೆದ ಶ್ರೇಯಸ್ಸು ಧರ್ಮಕ್ಕೆ ವಿರುದ್ಧವಲ್ಲವೆ?

೧೧. "ಸುವರ್ಣಮಯ ಅರಮನೆಯು ನನಗೆ ಬೆಂಕಿಯಂತೆ ಕಾಣುತ್ತದೆ; ಮೃಷ್ಟಾನ್ನ ಭೋಜನ ನನಗೆ ವಿಷಮಯವಾಗಿ ಕಾಣುತ್ತದೆ; ಶಾಂತಿಯನ್ನು ನೀಡುವ ಕಮಲಶಯನ ನನಗೆ ಮೊಸಳೆಗಳಿಂದ ಸುತ್ತುವರಿದಂತೆ ಕಾಣುತ್ತದೆ."

## ೬. ಮಂತ್ರಿಯ ಉತ್ತರ

೧. ಬುದ್ಧನಿಂದ ತನ್ನ ಸದ್ಗುಣ ಹಾಗೂ ವಿವೇಕಕ್ಕೆ ತಕ್ಕಂತಹ ಮತ್ತು ಯಾವುದೇ ಆಸೆಗೆ ಒಳಗಾಗದೆ, ಪ್ರಬಲ ತರ್ಕದಿಂದ ಕೂಡಿದ ಹಾಗೂ ಸಾಕಷ್ಟು ತೂಕವಾದ ಪ್ರವಚನವನ್ನು ಕೇಳಿದ ಮಂತ್ರಿಯು ಹೀಗೆ ಉತ್ತರಿಸಿದನು:

೨. "ನಿನ್ನ ಈ ತೀರ್ಮಾನವು ಉತ್ತಮವಾದುದು– ಬೇರೆ ಪ್ರಸಂಗಗಳಲ್ಲಿ ಸೂಕ್ತವೆನಿಸಿದರೂ, ಈ ಪ್ರಸಂಗದಲ್ಲಲ್ಲ. ವೃದ್ಧಾಪ್ಯದಲ್ಲಿರುವ ನಿನ್ನ ತಂದೆಯನ್ನು ಶೋಕದಲ್ಲಿ ಬಿಟ್ಟುಹೋಗುವುದು ನಿನ್ನ ಕರ್ತವ್ಯವಲ್ಲ – ನಿನ್ನ ಪ್ರೀತಿಯ ಕರ್ತವ್ಯ ಅಲ್ಲ.

೩. "ಕರ್ತವ್ಯ, ಸಂಪತ್ತು, ಸುಖ – ಮುಂತಾದವುಗಳನ್ನು ವಿಚಾರ ಮಾಡುವಾಗ ಅಥವಾ ಕಾಣುವ ಫಲವನ್ನು ತಿರಸ್ಕರಿಸಿ ಕಾಣದಿರುವ ಫಲವನ್ನರಸಿ ಹೋಗುವ ವಿಚಾರ ಮಾಡುವಾಗ ಖಂಡಿತವಾಗಿಯೂ ನಿನ್ನ ಬುದ್ಧಿ ಆಳವಾಗಿ ಚಿಂತಿಸುತ್ತಿಲ್ಲ ಅಥವಾ ಹಾಗೆ ವಿಚಾರ ಮಾಡುವಷ್ಟು ಕುಶಲತೆಯಿಂದ ಕೂಡಿಲ್ಲ.

೪. "ಕೆಲವರು ಪುನರ್ಜನ್ಮ ಇದೆಯೆನ್ನುತ್ತಾರೆ. ಮತ್ತೆ ಕೆಲವರು ಅಷ್ಟೇ ಖಂಡಿತವಾಗಿ ಅದನ್ನು ಅಲ್ಲಗೆಳೆಯುತ್ತಾರೆ. ಹೀಗೆ ಇಂತಹ ವಿಚಾರಗಳು ಸಂದೇಹಾಸ್ಪದವಾಗಿರುವುದರಿಂದ, ನಿನ್ನ ಅದೃಷ್ಟಕ್ಕೆ ತಕ್ಕಂತೆ ಕೈಗೆ ಬಂದ ಸುಖವನ್ನು ಅನುಭವಿಸುವುದು ಒಳಿತು.

೫. “ಈ ಜೀವನದ ನಂತರ ಏನಾದರೂ ಚಟುವಟಿಕೆಗಳಿದ್ದರೆ, ನಾವು ಅವುಗಳ ಮೂಲಕ ಸಂದರ್ಭಾನುಸಾರ ದೊರೆಯುವ ಸುಖವನ್ನು ಅನುಭವಿಸಬಹುದು; ಆದರೆ ಈ ಜೀವನದ ನಂತರ ಯಾವುದೇ ಚಟುವಟಿಕೆಗಳಿಲ್ಲದಿದ್ದರೆ, ಆಗ ಇಡೀ ಜಗತ್ತಿಗೆ ಯಾವ ಶ್ರಮವೂ ಇಲ್ಲದೆ ಮೋಕ್ಷ ಸಿಗುತ್ತದೆ.

೬. “ಕೆಲವರು ಪುನರ್ಜನ್ಮ ಇದೆಯೆನ್ನುತ್ತಾರೆ. ಆದರೆ ಅವರು ಮೋಕ್ಷದ ಸಾಧ್ಯತೆಯನ್ನು ಅಲ್ಲಗಳೆಯುತ್ತಾರೆ; ಅವರ ಪ್ರಕಾರ, ಸ್ವಭಾವತಃ ಬೆಂಕಿ ಹೇಗೆ ಸುಡುತ್ತದೆಯೋ ಅಥವಾ ನೀರು ಹೇಗೆ ದ್ರವರೂಪದಲ್ಲಿರುತ್ತದೆಯೋ ಹಾಗೆ ನಮ್ಮ ಕ್ರಿಯಾಶಕ್ತಿಯಲ್ಲಿ ಒಂದು ವಿಶಿಷ್ಟ ಸ್ವಭಾವವಿರುತ್ತದೆ.

೭. “ಅಂತರ್ಗತವಾದ ಗುಣಗಳಿಂದಲೇ ಎಲ್ಲವೂ – ಒಳಿತು ಮತ್ತು ಕೆಡುಕು, ಅಸ್ತಿತ್ವ ಮತ್ತು ನಾಸ್ತಿತ್ವ ಹುಟ್ಟುತ್ತವೆ. ಹೀಗೆ ಇಡೀ ವಿಶ್ವವೇ ಸ್ವಾಭಾವಿಕವಾಗಿ ಹುಟ್ಟುವುದರಿಂದ, ನಮ್ಮ ಎಲ್ಲ ಪ್ರಯತ್ನವೂ ನಿಷ್ಪ್ರಯೋಜಕ ಎಂದು ಕೆಲವರು ಅಭಿಪ್ರಾಯಪಡುತ್ತಾರೆ.

೮. “ನಮ್ಮ ಇಂದ್ರಿಯಗಳ ಕಾರ್ಯಗಳೆಲ್ಲ ಆಗಲೇ ನಿರ್ಧರಿತವಾಗಿರುವುದರಿಂದ ಹಾಗೂ ಅವುಗಳ ಬಾಹ್ಯವಸ್ತುಗಳ ಹಿತಕಾರಿ ಮತ್ತು ಅಹಿತಕಾರಿ ಗುಣಗಳೂ ನಿರ್ಧರಿಸಲ್ಪಟ್ಟಿರುವುದರಿಂದ, ನಮ್ಮ ಮುಪ್ಪು ಮತ್ತು ದುಃಖಗಳೊಂದಿಗೆ ಇರುವ ಅವುಗಳ ಸಂಬಂಧವನ್ನು ಬದಲಿಸಲು ಯಾವ ಪ್ರಯತ್ನ ಮಾಡಲು ಸಾಧ್ಯ? ಅದೂ ಸ್ವಾಭಾವಿಕವಾಗೇ ಹುಟ್ಟುತ್ತದೆಯಲ್ಲವೆ?

೯. “ಬೆಂಕಿ ನೀರಿನಿಂದ ಆರುತ್ತದೆ ಹಾಗೂ ಬೆಂಕಿಯೇ ನೀರು ಆವಿಯಾಗಲು ಕಾರಣ. ವಿವಿಧ ಭೂತಗಳು ದೇಹದಲ್ಲಿ ಒಂದುಗೂಡಿ ಹಾಗೂ ಏಕತ್ವವನ್ನು ಸ್ಥಾಪಿಸಿ, ಪ್ರಪಂಚವನ್ನು ಸೃಷ್ಟಿಸುತ್ತವೆ.

೧೦. “ಗರ್ಭದಲ್ಲಿರುವ ಭ್ರೂಣದ ಸ್ವಭಾವವು ಕೈ, ಕಾಲು, ಹೊಟ್ಟೆ, ಬೆನ್ನು ಮತ್ತು ತಲೆ ಇವುಗಳ ಸಂಯೋಜನೆಯಿಂದ ಉಂಟಾಗಿದೆ. ಅಲ್ಲದೆ ಅದರ ಜೊತೆಗೆ ಆತ್ಮವೂ ಕೂಡಿಕೊಂಡಿದೆ. ಬಲ್ಲವರು ಇದೆಲ್ಲ ತಂತಾನೆ ಸ್ವಾಭಾವಿಕವಾಗಿ ಹುಟ್ಟಿಕೊಂಡಿದೆ ಎನ್ನುತ್ತಾರೆ.

೧೧. “ಮುಳ್ಳಿನ ಚೂಪಿಗೆ ಕಾರಣರಾರು? ಪಶುಪಕ್ಷಿಗಳ ವಿವಿಧ ಸ್ವಭಾವಗಳಿಗೆ ಕಾರಣರಾರು? ಇದೆಲ್ಲವೂ ಸ್ವಾಭಾವಿಕವಾಗೇ ಹುಟ್ಟಿಕೊಂಡಿದೆ. ಇದು ನಮ್ಮ ಇಚ್ಛೆಯಿಂದ ಹುಟ್ಟಿದವುಗಳಲ್ಲ. ಹಾಗಾದರೆ, ಸಂಕಲ್ಪವೆಂಬುದು ಇರಲು ಹೇಗೆ ಸಾಧ್ಯ?

೧೨. “ಮತ್ತೆ ಕೆಲವರು ಇಡೀ ಸೃಷ್ಟಿಯು ಈಶ್ವರನಿಂದ ಉಂಟಾಯಿತು ಎನ್ನುತ್ತಾರೆ. ಹಾಗಾದರೆ ನಮ್ಮ ಪ್ರಯತ್ನದ ಅಗತ್ಯವೇನಿದೆ? ಪ್ರಪಂಚದ ಕ್ರಿಯೆಗೆ ಯಾವುದು ಕಾರಣವೋ ಅದರ ನಿಷ್ಕ್ರಿಯೆಗೂ ಅದೇ ಕಾರಣವಾಗಬೇಕು.

೧೩. “ಇನ್ನು ಕೆಲವರು ಸೃಷ್ಟಿ ಮತ್ತು ಲಯ ಎರಡಕ್ಕೂ ಆತ್ಮವೇ ಕಾರಣ ಎನ್ನುತ್ತಾರೆ. ಆದರೆ ಅವರು ಪ್ರಯತ್ನವಿಲ್ಲದೆಯೇ ಸೃಷ್ಟಿಯಾಗುವುದಾದರೂ ಮೋಕ್ಷ ಸಾಧ್ಯವಾಗುವುದು ಪ್ರಯತ್ನದ ಮೂಲಕ ಎನ್ನುತ್ತಾರೆ.

೧೪. “ಮನುಷ್ಯನು ಮಕ್ಕಳನ್ನು ಪಡೆಯುವ ಮೂಲಕ ಪಿತೃಗಳ ಋಣವನ್ನೂ, ಪವಿತ್ರ ಗ್ರಂಥಗಳನ್ನು ಪಠಿಸುವ ಮೂಲಕ ಆಚಾರ್ಯರ ಋಣವನ್ನೂ, ಯಜ್ಞಯಾಗಾದಿಗಳ ಮೂಲಕ ದೇವರ ಋಣವನ್ನೂ ತೀರಿಸುತ್ತಾನೆ. ಈ ಋಣಗಳೊಂದಿಗೇ ಅವನು ಹುಟ್ಟುತ್ತಾನೆ. ಯಾರು ಇವುಗಳಿಂದ ಮುಕ್ತನಾಗುತ್ತಾನೋ ಅವನು ನಿಜವಾಗಿಯೂ ಮುಕ್ತ.

೧೫. “ಹೀಗೆ ಬಲ್ಲವರು, ಈ ನಿಯಮಗಳ ಅನುಸಾರ ಪ್ರಯತ್ನ ಮಾಡಿದರೆ ಮೋಕ್ಷ ಸಾಧ್ಯವೆಂದು ಹೇಳುತ್ತಾರೆ. ಆದರೆ ತಮ್ಮ ಎಲ್ಲ ಶಕ್ತಿಯಿಂದ ಪ್ರಯತ್ನ ಮಾಡಲು ಸಿದ್ಧರಾದವರೂ ಸಹ ಮೋಕ್ಷ

ಪಡೆಯಲು ಕಷ್ಟಪಡುತ್ತಾರೆ.

೧೬. "ಆದ್ದರಿಂದ ಸಭ್ಯ ಯುವಕನೇ, ನಿನಗೆ ಮೋಕ್ಷವು ಪ್ರಿಯವಾಗಿದ್ದರೆ, ವಿಧಿಸಲ್ಪಟ್ಟಿರುವ ನಿಯಮಗಳನ್ನು ಸರಿಯಾಗಿ ಪಾಲಿಸು; ಹಾಗೆ ಮಾಡಿದರೆ ನೀನು ಅದನ್ನು ಪಡೆಯುತ್ತೀಯ; ಹಾಗೂ ರಾಜನ ಶೋಕ ಕೊನೆಗಾಣುತ್ತದೆ.

೧೭. "ಜೀವನದ ಕೆಡುಕುಗಳನ್ನೂ ಕುರಿತ ನಿನ್ನ ಧ್ಯಾನಗಳು, ಕಾಡಿನಿಂದ ಮನೆಗೆ ಮರಳುವುದರಲ್ಲಿ ಕೊನೆಗೊಳ್ಳುವುದಲ್ಲ ಎಂದು ನೀನು ಚಿಂತಿಸುವುದು ಬೇಡ, ಮಗೂ. ಹಿಂದೆಯೂ ಸಹ ಅನೇಕರು ವಾನಪ್ರಸ್ಥದಿಂದ ಮನೆಗೆ ಮರಳಿದ್ದಾರೆ." ಇಲ್ಲಿ ಅವನು ಅಂಬರೀಶ, ಧ್ರುಮಕೇಶ, ರಾಮ ಮತ್ತಿತರರ ವೃತ್ತಾಂತಗಳನ್ನು ತಿಳಿಸಿದನು.

## ೭. ಬುದ್ಧನ ನಿರ್ಧಾರ

೧. ರಾಜನ ಕಣ್ಮಣಿಯಾಗಿದ್ದ ಹಾಗೂ ಖಂಡಿತವಾದಿಯಾಗಿದ್ದ ಮಂತ್ರಿಯ ಪ್ರೀತಿಪೂರ್ವಕ ಹಾಗೂ ನಿಷ್ಠಾವಂತ ಮಾತುಗಳನ್ನಾಲಿಸಿದ ರಾಜಕುಮಾರನು ತನ್ನ ಉತ್ತರವನ್ನು ಮಂಡಿಸಿದ. ಅವನ ಉತ್ತರ ಏನನ್ನೂ ಬಿಡಲಿಲ್ಲ. ಬದಲಿಸಲಿಲ್ಲ. ಅರ್ಥಮಾಡಿಕೊಳ್ಳಲು ಕಷ್ಟವಾಗಿರಲಿಲ್ಲ, ಅವಸರದಿಂದಲೂ ಕೂಡಿರಲಿಲ್ಲ.

೨. "ಏನಿದೆ, ಏನಿಲ್ಲ ಎಂಬುದರ ಬಗೆಗಿನ ನನ್ನ ಸಂದೇಹವನ್ನು ಇತರರ ಮಾತುಗಳು ಪರಿಹರಿಸಲಾರವು. ಅದರ ಬಗೆಗಿನ ಸತ್ಯವನ್ನು ನಾನೇ ಸಂನ್ಯಾಸದ ಅಥವಾ ಮೌನದ ಮೂಲಕ ನಿರ್ಧರಿಸಿ ಅರ್ಥಮಾಡಿಕೊಳ್ಳುತ್ತೇನೆ.

೩. "ಗೊತ್ತಿಲ್ಲದ ವಿಷಯಗಳನ್ನವಲಂಬಿಸಿದ, ವಿವಾದಕ್ಕೊಳಗಾದ ಮತ್ತು ನೂರಾರು ಪೂರ್ವಗ್ರಹಗಳಿಂದ ಕೂಡಿದ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವುದು ನನ್ನಿಂದಾಗದು. ಬೇರೆಯವರ ನಂಬಿಕೆಯ ಮೇಲೆ ಯಾವ ಬುದ್ಧಿವಂತ ಮುಂದುವರಿಯುತ್ತಾನೆ? ಮನುಕುಲವು, ಕತ್ತಲೆಯಲ್ಲಿ ಕುರುಡನೊಬ್ಬನಿಂದ ಮಾರ್ಗದರ್ಶನ ಪಡೆಯುವ ಮತ್ತೊಬ್ಬ ಕುರುಡನಂತಿದೆ.

೪. "ಒಂದು ವೇಳೆ ಸತ್ಯ ನನಗೆ ಗೋಚರವಾಗದಿದ್ದರೂ, ಒಳಿತು ಮತ್ತು ಕೆಡುಕುಗಳನ್ನು ಸಂದೇಹಿಸುವವರು ಕೊನೆಗೆ ಒಳಿತನ್ನಾದರೂ ಆಯ್ದುಕೊಳ್ಳಲಿ; ಒಳ್ಳೆಯವರು ಸುಕೃತ್ಯವನ್ನೇ – ಅದು ನಿಷ್ಪ್ರಯೋಜಕವಾದರೂ – ಆರಿಸಿಕೊಳ್ಳಬೇಕು.

೫. "ಸತ್‌ಸಂಪ್ರದಾಯವು ಅನಿಶ್ಚಿತವೆಂಬುದನ್ನು ನೀವು ಅರಿತಿದ್ದರೆ, ವಿಶ್ವಾಸಾರ್ಹನು ಏನನ್ನು ನುಡಿಯುತ್ತಾನೋ ಅದೇ ಸರಿ ಎಂದು ನಂಬಬೇಕಾಗುತ್ತದೆ. ವಿಶ್ವಾಸಾರ್ಹತೆಯೆಂದರೆ ತಪ್ಪಿಲ್ಲದಿರುವುದು ಎಂಬುದು ನೆನಪಿರಲಿ. ದೋಷವಿಲ್ಲದ ವ್ಯಕ್ತಿಯು ಎಂದಿಗೂ ಅಸತ್ಯವನ್ನು ನುಡಿಯಲಾರ.

೬. "ನಾನು ಮನೆಗೆ ಹಿಂದಿರುಗುವ ವಿಚಾರವಾಗಿ ನೀವು ಏನು ಹೇಳಿದಿರಿ, ಆ ಉದಾಹರಣೆಗಳು ಪ್ರಮಾಣವಲ್ಲ. ಏಕೆಂದರೆ, ಕರ್ತವ್ಯವೇನೆಂಬುದನ್ನು ನಿರ್ಧರಿಸಬೇಕಾದಾಗ, ವ್ರತಗೇಡಿಗಳನ್ನು ಹೇಗೆ ಪ್ರಮಾಣವೆಂದು ಹೇಳುತ್ತೀರಿ?

೭ "ಸೂರ್ಯನೇ ಭೂಮಿಯ ಮೇಲೆ ಬೀಳಲಿ, ಹಿಮಾಲಯ ಪರ್ವತವೇ ತನ್ನ ಅಚಲತೆಯನ್ನು

ಕಳೆದುಕೊಳ್ಳಲಿ – ಬಾಹ್ಯ ವಸ್ತುಗಳನ್ನೇ ನೋಡಬಯಸುವ ಇಂದ್ರಿಯಗಳನ್ನುಳ್ಳ ಪ್ರಾಪಂಚಿಕನಾಗಿ ನಾನೆಂದೂ ಮನೆಗೆ ಹಿಂದಿರುಗುವುದಿಲ್ಲ.

೮. "ಉರಿಯುತ್ತಿರುವ ಬೆಂಕಿಯನ್ನು ಹೊಕ್ಕೇನು, ಆದರೆ ನನ್ನ ಉದ್ದೇಶವನ್ನು ಸಾಧಿಸದೆ ನಾನು ಮನೆಗೆ ಹಿಂದಿರುಗುವುದಿಲ್ಲ." ಪೂರ್ಣ ನಿರಾಸಕ್ತಿಯನ್ನು ತೋರಿಸಿದ ಆ ತೀರ್ಮಾನಕ್ಕೆ ತಕ್ಕಂತೆ ಆತ ಎದ್ದು ಹೊರಟುಹೋದನು.

೯. ಈ ಅಚಲ ನಿರ್ಧಾರದ ಮಾತನ್ನು ಕೇಳಿಸಿಕೊಂಡ ಮಂತ್ರಿ ಮತ್ತು ಬ್ರಾಹ್ಮಣ ಇಬ್ಬರೂ ಕಣ್ಣಿನಲ್ಲಿ ನೀರು ತುಂಬಿಕೊಂಡು, ವಿಷಾದಪೂರ್ಣ ನೋಟದಿಂದ ಅವನ ಹಿಂದೆಯೇ ಸ್ವಲ್ಪ ದೂರ ಹೋದರು; ಹಾಗೂ ಶೋಕತಪ್ತರಾದ ಅವರು ನಿಧಾನವಾಗಿ ಕಪಿಲವಸ್ತುವಿಗೆ ಮರಳಿದರು.

೧೦. ರಾಜಕುಮಾರನಿಗೆ ವಾತ್ಸಲ್ಯವನ್ನೂ ರಾಜನಿಗೆ ನಿಷ್ಠೆಯನ್ನೂ ಉಳ್ಳವರಾದ ಅವರು, ಹಿಂದಿರುಗುವಾಗ, ಆಗಾಗ್ಗೆ ನಿಂತು ಹಿಂತಿರುಗಿ ನೋಡುತ್ತಿದ್ದರು. ಆದರೆ ಅವರು ರಸ್ತೆಯಲ್ಲಿ ಅವನನ್ನು ಕಾಣಲೂ ಇಲ್ಲ; ಸಾಧಾರಣ ಜನರಿಗೆ ಮೀರಿದ, ಸೂರ್ಯನಂತೆ ತನ್ನದೇ ಆದ ಪ್ರಭೆಯನ್ನುಳ್ಳ ಅವನ ದೃಶ್ಯವನ್ನು ಮರೆಯಲೂ ಇಲ್ಲ.

೧೧. ಅವನನ್ನು ಮನೆಗೆ ಹಿಂದಿರುಗುವಂತೆ ಮನವೊಲಿಸಲು ಸೋತ ಮಂತ್ರಿಯೂ ಪುರೋಹಿತನೂ ತಡವರಿಸಿದ ಹೆಜ್ಜೆಗಳನ್ನಿಡುತ್ತಾ ಹಿಂದಿರುಗುತ್ತಿರುವಾಗ ಪರಸ್ಪರ ಹೀಗೆ ಮಾತಾಡಿಕೊಂಡರು. "ಮಗನನ್ನು ನೋಡಲು ಕಾತರನಾಗಿರುವ ರಾಜನನ್ನು ನಾವು ಹೇಗೆ ಹೋಗಿ ನೋಡುವುದು?"

# ಭಾಗ : ೫
# ಪರಿವರ್ತನ ಪ್ರಚಾರ – ಪುನರಾರಂಭ

೧. ಗ್ರಾಮ್ಯ ಪ್ರದೇಶದ ಬ್ರಾಹ್ಮಣರ ಪರಿವರ್ತನೆ
೨. ಉತ್ತರಾವತಿಯ ಬ್ರಾಹ್ಮಣರ ಪರಿವರ್ತನೆ

# ೧. ಗ್ರಾಮ್ಯ ಪ್ರದೇಶದ ಬ್ರಾಹ್ಮಣರ ಪರಿವರ್ತನೆ

೧. ರಾಜಗೃಹದ ಹತ್ತಿರ ಗೃಧ್ರಕೂಟ ಪರ್ವತದ ಹಿಂದೆ ಒಂದು ಹಳ್ಳಿಯಿದ್ದು, ಅದರಲ್ಲಿ ಸುಮಾರು ಎಪ್ಪತ್ತು ಕುಟುಂಬಗಳಿದ್ದು, ಅವೆಲ್ಲವೂ ಬ್ರಾಹ್ಮಣರವೇ ಆಗಿದ್ದವು.

೨. ಈ ಜನರನ್ನು ಪರಿವರ್ತಿಸುವ ಉದ್ದೇಶದಿಂದ ಬುದ್ಧ ಅಲ್ಲಿಗೆ ಬಂದು ಒಂದು ಮರದ ಕೆಳಗೆ ಕುಳಿತುಕೊಂಡನು.

೩. ಅವನ ಗಾಂಭೀರ್ಯವನ್ನೂ ತೇಜೋಮಯವಾದ ಅವನ ದೇಹವನ್ನೂ ನೋಡಿದ ಆ ಜನರು ಅವನ ಸುತ್ತ ನಿಂತುಕೊಂಡರು. ಆಗ ಅವನು ನೀವೆಷ್ಟು ಕಾಲದಿಂದ ಬೆಟ್ಟದಲ್ಲಿ ವಾಸವಾಗಿದ್ದೀರಿ, ನಿಮ್ಮ ಕಸುಬೇನು ಎಂದು ಆ ಬ್ರಾಹ್ಮಣರನ್ನು ಕೇಳಿದನು.

೪. ಅದಕ್ಕೆ ಅವರು ಹೀಗೆ ಉತ್ತರಿಸಿದರು. "ನಾವು ಇಲ್ಲಿ ಮೂವತ್ತು ತಲೆಮಾರುಗಳಿಂದ ವಾಸಿಸುತ್ತಿದ್ದೇವೆ ಮತ್ತು ನಮ್ಮ ಕಸುಬು ದನಗಳ ಸಾಕಣೆ."

೫. ಅವರ ಧಾರ್ಮಿಕ ನಂಬಿಕೆಗಳ ಬಗ್ಗೆ ಕೇಳಿದಾಗ ಅವರು ಹೀಗೆ ಹೇಳಿದರು: "ನಾವು ಸೂರ್ಯ, ಚಂದ್ರ, ಮಳೆ, ಅಗ್ನಿ ಇವರಿಗೆ, ಋತುಗಳಿಗೆ ತಕ್ಕಂತೆ, ಪೂಜೆ ಮತ್ತು ಯಜ್ಞಗ್ಗಳನ್ನು ಮಾಡುತ್ತೇವೆ.

೬. "ನಮ್ಮಲ್ಲಿ ಯಾರಾದರೂ ಸತ್ತರೆ, ಅವರು ಬ್ರಹ್ಮಲೋಕದಲ್ಲಿ ಹುಟ್ಟಲಿ, ದೇಹವಿಲ್ಲದೆ ಅಲೆಯುವುದು ತಪ್ಪಲಿ ಎಂದು ಸಾಮೂಹಿಕವಾಗಿ ಪ್ರಾರ್ಥಿಸುತ್ತೇವೆ.

೭. ಆಗ ಬುದ್ಧ ಹೇಳಿದ: "ಇದೇನು ಕ್ಷೇಮಕರ ಹಾದಿಯಲ್ಲ. ಆದರೆ ನಿಮಗೆ ಇದರಿಂದ ಲಾಭವಾಗದು. ನಿಜವಾದ ಹಾದಿಯೆಂದರೆ, ನಿರ್ವಾಣ ಪಡೆಯಲು ನನ್ನನ್ನು ಅನುಸರಿಸುವುದು, ಭಿಕ್ಷುಗಳಾಗುವುದು, ಸಂಪೂರ್ಣ ಮನೋದಾರ್ಢ್ಯವನ್ನು ಪಡೆಯುವುದು". ಮುಂದುವರಿದು ಅವನು ಈ ಮಾತುಗಳನ್ನು ಹೇಳಿದನು:

೮. "ಯಾರು ಸತ್ಯವನ್ನು ಅಸತ್ಯವೆಂದೂ, ಅಸತ್ಯವನ್ನು ಸತ್ಯವೆಂದು ಬಗೆಯುತ್ತಾರೋ, ಅವರು ಪಾಖಂಡಿತನವನ್ನು ಅನುಸರಿಸುತ್ತಿದ್ದಾರೆಂದರ್ಥ. ಅಂಥವರು ಎಂದೂ ನಿಜವಾದ ಸಿದ್ಧಿಯನ್ನು ಪಡೆಯುವುದಿಲ್ಲ.

೯. "ಆದರೆ ಸತ್ಯವನ್ನು ಸತ್ಯವೆಂದೂ, ಅಸತ್ಯವನ್ನು ಅಸತ್ಯವೆಂದೂ ಬಗೆಯುವುದೇ ಪರಿಪೂರ್ಣ ಸನ್ಮಾರ್ಗ, ಅದು ನಿಜವಾದ ಲಾಭವನ್ನು ಕೊಡುತ್ತದೆ.

೧೦. "ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಸಾವಿದೆ – ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.

೧೧. "ಇದು ಎಲ್ಲ ವಸ್ತುಗಳ ಅವಸ್ಥೆಯ ನಿಯಮವಾಗಿದೆ. ಹುಟ್ಟಿದುದು ಸಾಯದೇ ಇರುವಂಥದು ಯಾವುದೂ ಇಲ್ಲ. ಆದುದರಿಂದ ಹುಟ್ಟು–ಸಾವುಗಳಿಂದ ತಪ್ಪಿಸಿಕೊಳ್ಳಬೇಕೆಂದು ಇಚ್ಛೆಪಡುವುದೆಂದರೆ ಧಾರ್ಮಿಕ ಸತ್ಯವನ್ನು ಅರಸುವುದರಲ್ಲಿ ನಮ್ಮ ಮನಸ್ಸನ್ನು ತೊಡಗಿಸಿಕೊಳ್ಳುವುದು."

೧೨. ಈ ಮಾತುಗಳನ್ನು ಕೇಳಿಸಿಕೊಂಡ ಆ ಎಪ್ಪತ್ತು ಬ್ರಾಹ್ಮಣರು ತಾವೂ ಸಮಣರಾಗಬೇಕೆಂದು ಇಚ್ಛಿಸಿದರು; ಬುದ್ಧನು ಅವರನ್ನು ಬರಮಾಡಿಕೊಂಡಿದ್ದರಿಂದ ಅವರು ತಮ್ಮ ತಲೆಯನ್ನು ಬೋಳಿಸಿಕೊಂಡು,

ನಿಜವಾದ ಶಿಷ್ಯರಂತೆ ಕಾಣಿಸತೊಡಗಿದರು.

೧೩. ಆಗ ಅವರೆಲ್ಲರೂ ವಿಹಾರಕ್ಕೆ ಹಿಂದಿರುಗಲು ಹೊರಟರು. ಆಗ ದಾರಿಯಲ್ಲಿ ಅವರನ್ನು ಹೆಂಡತಿ ಮಕ್ಕಳ ಯೋಚನೆ ಕಾಡಿತು. ಆದರೆ ಅಷ್ಟರಲ್ಲಿ ಭಾರೀ ಮಳೆಯಾದುದರಿಂದ ಅವರು ಮುಂದೆ ಸಾಗದಾದರು.

೧೪. ಆ ದಾರಿಯಲ್ಲಿ ಸುಮಾರು ಹತ್ತು ಮನೆಗಳಿದ್ದವು. ಅವುಗಳಲ್ಲೇ ಅವರು ಆಶ್ರಯ ಪಡೆದರು. ಆದರೆ ಅವುಗಳಲ್ಲಿ ಒಂದನ್ನು ಪ್ರವೇಶಿಸಿದ ಕೂಡಲೇ ಮಳೆಯ ನೀರು ಅದರ ಸೂರಿನಿಂದ ಹರಿಯಲಾರಂಭಿಸಿತು ಮತ್ತು ಅದರಿಂದ ರಕ್ಷಣೆ ಪಡೆಯಲು ಸಾಧ್ಯವಿರಲಿಲ್ಲ.

೧೫. ಈ ಬಗ್ಗೆ ಬುದ್ಧನು ಮುಂದಿನ ಮಾತುಗಳನ್ನು ಹೇಳಿದನು: "ಮನೆಯ ಸೂರು ಭದ್ರವಾಗಿಲ್ಲದಿದ್ದರೆ, ಅದರ ಮೂಲಕ ಮಳೆ ನೀರು ಹರಿದು ಹೇಗೆ ಒಳಗೆ ಬೀಳುತ್ತದೆಯೋ ಹಾಗೆಯೇ, ನಮ್ಮ ಯೋಚನೆಗಳನ್ನು ನಾವು ಎಚ್ಚರಿಕೆಯಿಂದ ನಿಯಂತ್ರಿಸದಿದ್ದರೆ, ನಮ್ಮ (ಲೈಂಗಿಕ) ಕಾಮನೆಗಳು ಬೇಗ ನಮ್ಮ ಎಲ್ಲ ಒಳ್ಳೆಯ ತೀರ್ಮಾನಗಳನ್ನು ತೂತು ಮಾಡಿಬಿಡುತ್ತವೆ."

೧೬. "ಆದರೆ ಸೂರಿನ ತೂತನ್ನು ನಿಲ್ಲಿಸಿದಾಕ್ಷಣ ಅದರ ಮೂಲಕ ನೀರು ಹೇಗೆ ಸೋರುವುದಿಲ್ಲವೋ ಹಾಗೆಯೇ ನಮ್ಮ ಆಲೋಚನೆಗಳನ್ನು ನಿಯಂತ್ರಿಸುವ ಮೂಲಕ ಹಾಗೂ ವಿವೇಚನೆಯಿಂದ ಕೆಲಸ ಮಾಡುವ ಮೂಲಕ, ಅಂಥ ಕಾಮನೆಗಳು ನಮ್ಮಲ್ಲಿ ಹುಟ್ಟುವುದೂ ಇಲ್ಲ, ನಮ್ಮನ್ನು ವಿಕ್ಷಿಪ್ತಗೊಳಿಸುವುದೂ ಇಲ್ಲ."

೧೭. ಈ ಮಾತುಗಳನ್ನು ಕೇಳಿಸಿಕೊಂಡ ಆ ಎಪ್ಪತ್ತು ಬ್ರಾಹ್ಮಣರಿಗೆ ತಮ್ಮ ಆಸೆಗಳನ್ನು ಹತ್ತಿಕ್ಕಲು ಸಾಧ್ಯವೆನಿಸಿತು. ಆದರೂ ಅವರು ಪೂರ್ಣವಾಗಿ ಸಂದೇಹದಿಂದ ಮುಕ್ತರಾಗದಿದ್ದರೂ ಅವನೊಂದಿಗೆ ಮುಂದುವರಿದರು.

೧೮. ಅವರು ಹಾಗೆ ಸಾಗುತ್ತಿರುವಾಗ, ಕೆಲವು ಸುಗಂಧದ್ರವ್ಯಗಳಿಂದ ಕೂಡಿದ ಪೊಟ್ಟಣಗಳನ್ನು ನೋಡಿದರು ಹಾಗೂ ಬುದ್ಧನು ಈ ಅವಕಾಶವನ್ನು ಅವರ ಗಮನ ಸೆಳೆಯಲು ಉಪಯೋಗಿಸಿಕೊಂಡನು. ಮುಂದೆ ಸಾಗುತ್ತಿರುವಾಗ ಅಲ್ಲೇ ಬಿದ್ದಿದ್ದ ಕೊಳೆತ ಮೀನಿನ ಎಲುಬುಗಳ ದುರ್ನಾತದ ಕಡೆಗೆ ಅವರ ಗಮನವನ್ನು ಸೆಳೆಯುತ್ತಾ ಹೀಗೆ ಹೇಳಿದನು:

೧೯. "ದುರ್ನಾತದ ವಸ್ತುಗಳಲ್ಲಿ ಕೈಯಾಡಿಸುವವನು ಹೇಗೆ ಆ ವಾಸನೆಯನ್ನೇ ಹೊಂದುತ್ತಾನೋ ದುರ್ಮಾರ್ಗಿಗಳ ಜೊತೆ ಇರುವವನು ಹಾಗೆಯೇ ಅವರ ಗುಣಗಳನ್ನೇ ಗಳಿಸಿಕೊಳ್ಳುತ್ತಾನೆ. ಅವನು ಕೀಳುಮಟ್ಟದಿಂದ ಇನ್ನೂ ಕೀಳುಮಟ್ಟಕ್ಕಿಳಿದು, ವಿವೇಚನೆಯಿಲ್ಲದೆ ದುರ್ಗುಣದಲ್ಲಿ ಪರಿಪೂರ್ಣತೆಯನ್ನು ಸಾಧಿಸುತ್ತಾನೆ.

೨೦. "ಆದರೆ ಸುಗಂಧ ದ್ರವ್ಯಗಳಲ್ಲಿ ಕೈಯಾಡಿಸುವವನು ಹೇಗೆ ಅವುಗಳ ಸುವಾಸನೆಯನ್ನೇ ಪಡೆಯುತ್ತಾನೋ, ಹಾಗೆಯೇ ಸನ್ಮಾರ್ಗಿಗಳ ಜೊತೆ ಇರುವವನು ಅವರ ಗುಣಗಳನ್ನೇ ಪಡೆಯುತ್ತಾನೆ; ವಿವೇಚನೆಯನ್ನು ವೃದ್ಧಿಸಿಕೊಂಡು, ಸದಾಚಾರವನ್ನೇ ಮಾಡಿ, ಪರಿಪೂರ್ಣತೆಯನ್ನು ಸಾಧಿಸಿ, ಸಮಾಧಾನ ಪಡೆಯುತ್ತಾನೆ."

೨೧. ಈ ಮಾತುಗಳನ್ನು ಕೇಳಿಸಿಕೊಂಡ, ಆ ಎಪ್ಪತ್ತು ಬ್ರಾಹ್ಮಣರಿಗೆ, ಮನೆಗೆ ಹಿಂತಿರುಗಿ ದೈಹಿಕ ಲೋಲುಪತೆಯ ಆಸೆಯಲ್ಲಿ ತೊಡಗಬೇಕೆಂಬುದೇ ತಮಗೆ ಅಂಟಿಕೊಂಡಿರುವ ದೋಷ ಎಂದು ಮನವರಿಕೆಯಾಗಿ, ಆ ಯೋಚನೆಯನ್ನೇ ಕೈಬಿಟ್ಟರಲ್ಲದೆ, ಮುಂದೆ ಸಾಗಿ ವಿಹಾರಕ್ಕೆ ಬಂದರು; ಕೊನೆಗೆ ಅರ್ಹತೆ ಸ್ಥಿತಿಯನ್ನು ಪಡೆದರು.

## ೨. ಉತ್ತರಾವತಿಯ ಬ್ರಾಹ್ಮಣರ ಪರಿವರ್ತನೆ

೧. ಒಂದು ಸಾರಿ ಬುದ್ಧನು ಶ್ರಾವಸ್ಥಿಯ ಜೇತವನದಲ್ಲಿ ತಂಗಿದ್ದಾಗ, ತನ್ನ ಸಿದ್ಧಾಂತವನ್ನು ಮಾನವರ ಮತ್ತು ದೇವರುಗಳ ಉಪಯೋಗಕ್ಕಾಗಿ ಬೋಧಿಸುತ್ತಿದ್ದನು. ಅದೇ ಕಾಲದಲ್ಲಿ, ಆ ದೇಶದ ಪೂರ್ವಕ್ಕೆ ಉತ್ತರಾವತಿ ಎಂಬಲ್ಲಿ ಐದುನೂರು ಜನ ಬ್ರಾಹ್ಮಣರ ಸಮಾಜವಿತ್ತು.

೨. ಗಂಗಾನದಿಯ ದಡದಲ್ಲಿ ಧೂಳು, ಮುಂತಾದವುಗಳ ಮೂಲಕ ದೇಹವನ್ನು ಮಲಿನ ಮಾಡಿಕೊಂಡು, ಅದೇ ಋಷಿಯಾಗುವ ದಾರಿಯೆಂದು ತಿಳಿದುಕೊಂಡಿದ್ದ ನಿರ್ಗ್ರಂಥ ಎಂಬ ಸಂನ್ಯಾಸಿಯ ಬಳಿಗೆ ಆ ಬ್ರಾಹ್ಮಣರೆಲ್ಲ ಒಟ್ಟುಗೂಡಿ, ಹೋಗಲು ನಿರ್ಧರಿಸಿದರು.

೩. ದಾರಿಯಲ್ಲಿ ಮರುಭೂಮಿಯಲ್ಲಿ ಅವರಿಗೆ ಮಿತಿಮೀರಿದ ಬಾಯಾರಿಕೆಯಾಯಿತು. ಮರವೊಂದನ್ನು ನೋಡಿ, ಹತ್ತಿರದಲ್ಲೇ ಮನುಷ್ಯರಿರಬೇಕೆಂದು ನಿರೀಕ್ಷಿಸುತ್ತಾ, ವೇಗವಾಗಿ ಆ ಕಡೆ ನಡೆದರು. ಆದರೆ ಅಲ್ಲಿಗೆ ಬಂದಾಗ, ಅಲ್ಲಿ ಜೀವದ ಕುರುಹೇ ಅವರಿಗೆ ಕಾಣಲಿಲ್ಲ.

೪. ಈ ಕುರಿತು ಅವರು ದೊಡ್ಡ ದನಿಮಾಡಿ ರೋದಿಸತೊಡಗಿದರು. ಅಷ್ಟರಲ್ಲೇ ಅವರಿಗೆ ಆ ಮರದಿಂದ 'ಏಕೆ ದುಃಖಿಸುತ್ತಿರುವಿರಿ' ಎಂಬ ಆ ಮರದಲ್ಲೇ ವಾಸವಾಗಿದ್ದ ಭೂತವೊಂದರ ಧ್ವನಿ ಕೇಳಿಸಿತು. ಕಾರಣ ತಿಳಿದ ನಂತರ ಅದು ಅವರಿಗೆ ಹೊಟ್ಟೆತುಂಬ ಮಾಂಸಾಹಾರ ಮತ್ತು ಪಾಯಸಗಳನ್ನೊದಗಿಸಿತು.

೫. ಮುಂದೆ ಹೊರಡಲು ಸಿದ್ಧರಾದ ಬ್ರಾಹ್ಮಣರು ಆ ದೆವ್ವದ ಪೂರ್ವಚರಿತ್ರೆಯನ್ನೂ ದೆವ್ವವಾಗಿ ಹುಟ್ಟಲು ಕಾರಣವನ್ನೂ ಕೇಳಿದರು.

೬. ಸುದತ್ತನು ಆ ವನವನ್ನು ಬುದ್ಧನಿಗೆ ದಾನವಾಗಿ ಕೊಡುವಾಗ ಶ್ರಾವಸ್ತಿಯ ಪುರೋಹಿತರ ಕೂಟಕ್ಕೆ ತಾನು ಹೋಗಿದ್ದುದಾಗಿಯೂ, ರಾತ್ರಿಯೆಲ್ಲ ಧರ್ಮದ ನಿಯಮಗಳನ್ನು ಕೇಳಿದುದಾಗಿಯೂ, ತಾನು ಹೋದಲ್ಲೆಲ್ಲ ತಾನು ತಂದಿದ್ದ ಲೋಟದಲ್ಲಿ ನೀರು ತುಂಬಿ ಪುರೋಹಿತರಿಗೆ ದಾನ ಮಾಡಿದುದಾಗಿಯೂ ಹೇಳಿತು.

೭. ಮಾರನೆಯ ದಿನ ಬೆಳಿಗ್ಗೆ ಅವನು ಮನೆಗೆ ಹಿಂದಿರುಗಿದಾಗ, ಅವನ ಹೆಂಡತಿ ಯಾವ ಅನಿಷ್ಟದಿಂದಾಗಿ ರಾತ್ರಿಯೆಲ್ಲಾ ಮನೆಯಿಂದ ಹೊರಗೆ ಉಳಿದನೆಂದು ಕೋಪದಿಂದ ಕೇಳಿದಳು. ಅದಕ್ಕೆ ಉತ್ತರವಾಗಿ ಅವನು, ತನಗಾವ ಕೇಡೂ ಆಗಿರಲಿಲ್ಲವೆಂದೂ, ಬುದ್ಧನ ಉಪದೇಶ ಕೇಳಲು ಜೇತವನಕ್ಕೆ ಹೋಗಿದ್ದೆನೆಂದೂ ಹೇಳಿದ.

೮. ಇದನ್ನು ಕೇಳಿದ ಅವನ ಹೆಂಡತಿ ಬುದ್ಧನನ್ನು ಹೀನಾಯವಾಗಿ ಬೈಯತೊಡಗಿದಳು. ಹಾಗೂ "ಈ ಗೌತಮನೊಬ್ಬ ಹುಚ್ಚುಗುರು, ಜನರನ್ನು ಮೋಸಗೊಳಿಸುತ್ತಾನೆ" ಅಂದಳು.

೯. "ಅವಳ ಮಾತನ್ನು ಕೇಳಿದ ನಾನು ಅವುಗಳನ್ನು ವಿರೋಧಿಸಲಿಲ್ಲ; ಅಷ್ಟೇ ಅಲ್ಲ, ಅವುಗಳನ್ನು ಒಪ್ಪಿಕೊಂಡೆ. ಹೀಗೆ ನಾನು ಸತ್ತಮೇಲೆ ದೆವ್ವವಾದೆ. ಆದರೆ ನನ್ನ ಪುಕ್ಕಲುತನದಿಂದಾಗಿ ನಾನು ಈ ಮರಕ್ಕೆ ಅಂಟಿಕೊಳ್ಳಬೇಕಾಯಿತು" ಎಂದು ಹೇಳಿದ ಆ ದೆವ್ವ ಮುಂದಿನ ಮಾತುಗಳನ್ನು ಹೇಳಿತು.

೧೦. "ಯಜ್ಞಯಾಗಾದಿಗಳೇ ದುಃಖದ, ಹಗಲು–ರಾತ್ರಿಗಳ ನಿರಂತರ ಭಾರ ಮತ್ತು ಕಾತರದ ಮೂಲ.

೧೧. "ದುಃಖ ನಿವಾರಣೆಗೆ ಮತ್ತು ದೇಹದ ಪಂಚಭೂತಗಳನ್ನು ನಾಶಮಾಡಲು ನಾವು (ಬುದ್ಧನ) ಧರ್ಮವನ್ನು ಆಚರಿಸಬೇಕು, ಹಾಗೂ (ವಿಶ್ವದ ಋಷಿಗಳು ಹೇಳುವ) ಪ್ರಾಪಂಚಿಕ ಧರ್ಮದ ನಿಯಮಗಳಿಂದ ಮುಕ್ತರಾಗಬೇಕು."

೧೨. ಇದನ್ನು ಕೇಳಿದ ಬ್ರಾಹ್ಮಣರು ಬುದ್ಧನು ಆಗ ತಂಗಿದ್ದ ಶ್ರಾವಸ್ತಿಗೆ ಹೋಗಬೇಕೆಂದು ನಿರ್ಧರಿಸಿದರು. ತಮ್ಮ ಭೇಟಿಯ ಉದ್ದೇಶವನ್ನು ಬುದ್ಧನಿಗೆ ತಿಳಿಸಿದಾಗ ಆ ವಿಶ್ವಮಾನ್ಯನಾದ ಅವರಿಗೆ ಹೀಗೆ ಹೇಳಿದನು:

೧೩. "ನಾವು ಜಡೆಗಟ್ಟಿದ ಕೂದಲಿನಿಂದ ಬೆತ್ತಲೆ ತಿರುಗಬಹುದು ಅಥವಾ ಕೆಲವು ಎಲೆಗಳನ್ನು ಅಥವಾ ತೊಗಟೆಯನ್ನು ಹೊದ್ದುಕೊಳ್ಳಬಹುದು; ಅಥವಾ ಧೂಳನ್ನು ಬಳಿದುಕೊಂಡು, ಕಲ್ಲಿನ ಮೇಲೆ ಮಲಗಬಹುದು. ಆದರೆ ಅಶುದ್ಧ ಭಾವನೆಗಳನ್ನು ಹೋಗಲಾಡಿಸಲು ಇದರಿಂದ ಏನು ಪ್ರಯೋಜನವಾದೀತು?

೧೪. "ಆದರೆ ಯಾರು ಕಾದಾಡುವುದಿಲ್ಲವೋ ಅಥವಾ ಕೊಲ್ಲುವುದಿಲ್ಲವೋ ಅಥವಾ ಬೆಂಕಿಯಿಂದ ನಾಶ ಮಾಡುವುದಿಲ್ಲವೋ, ಯಾರು ಜಯವನ್ನು ಪಡೆಯಲು ಆಸೆಪಡುವುದಿಲ್ಲವೋ, ಯಾರು ಎಲ್ಲ ಜೀವಿಗಳ ಒಳಿತನ್ನು ಅಪೇಕ್ಷಿಸುತ್ತಾರೋ, ಅಂಥವರಲ್ಲಿ ದುಷ್ಟ ಸಂಕಲ್ಪಕ್ಕಾಗಲೀ, ದ್ವೇಷಕ್ಕಾಗಲೀ ಆಶ್ರಯವೇ ಇಲ್ಲ.

೧೫. "ಪುಣ್ಯ (ಶಾಂತಿ) ಸಂಪಾದಿಸಲು ಅಥವಾ ಸತ್ತನಂತರ ಮೋಕ್ಷ ಪಡೆಯಲು ಯಾರು ಯಾಗ ಮಾಡುತ್ತಾರೋ ಅಂಥವನ ಸುಖವು ಸತ್ಪುರುಷನಿಗೆ ದಾನ ಮಾಡಿದವನ ಸುಖದ ಕಾಲುಭಾಗವೂ ಇರುವುದಿಲ್ಲ.

೧೬. "ಯಾರು ಸಚ್ಚಾರಿತ್ರದ ಕಡೆಗೆ ಯಾವಾಗಲೂ ಗಮನ ಕೊಡುತ್ತಾರೋ, ಇತರರಿಗೆ ಗೌರವವನ್ನು ತೋರಿಸುತ್ತಾರೋ, ವೃದ್ಧರನ್ನು ಗೌರವಿಸುತ್ತಾರೋ ಅಂಥವರಿಗೆ ನಾಲ್ಕು ಸತ್ಫಲಗಳು ಉಂಟಾಗುತ್ತವೆ. ಅವೆಂದರೆ, ಸೌಂದರ್ಯ ಮತ್ತು ಬಲ ಮತ್ತು ಜೀವನ ಮತ್ತು ಶಾಂತಿ."

೧೭. ತನ್ನ ಗಂಡನಿಂದ ಇದನ್ನೆಲ್ಲ ಕೇಳಿದ ಅವನ ಹೆಂಡತಿಯು ಅವನೊಂದಿಗೆ ರಾಜಿ ಮಾಡಿಕೊಂಡಳು.

# ಭಾಗ : ೬
# ಕೆಳವರ್ಗದವರ ಹಾಗೂ ದೀನರ ಪರಿವರ್ತನೆ

೧. ಕ್ಷೌರಿಕ ಉಪಾಲಿಯ ಪರಿವರ್ತನೆ
೨. ಪೌರಕಾರ್ಮಿಕ ಸುನೀತನ ಪರಿವರ್ತನೆ
೩. ಶೋಭಕ ಮತ್ತು ಸುಪ್ರಿಯ ಎಂಬ ಅಸ್ಪೃಶ್ಯರ ಪರಿವರ್ತನೆ
೪. ಸುಮಂಗಲ ಮತ್ತು ಇತರ ಕೆಳಜಾತಿಯವರ ಪರಿವರ್ತನೆ
೫. ಕುಷ್ಠರೋಗಿ ಸುಪ್ರಬುದ್ಧನ ಪರಿವರ್ತನೆ

## ೧. ಕ್ಷೌರಿಕ ಉಪಾಲಿಯ ಪರಿವರ್ತನೆ

೧. ಹಿಂದಿರುಗುವಾಗ ಕ್ಷೌರಿಕ ಉಪಾಲಿ ಹೀಗೆ ಯೋಚಿಸಿದ: "ಶಾಕ್ಯರು ಕ್ರೂರ ಜನ. ನಾನು ಈ ಆಭರಣಗಳೊಂದಿಗೆ ಹಿಂದಿರುಗಿದರೆ, 'ಇವನು ತನ್ನ ಜೊತೆಗಾರರನ್ನು ಕೊಂದು ಅವರ ಆಭರಣಗಳನ್ನು ಕದ್ದು ಓಡಿಬಂದಿದ್ದಾನೆಂದು' ತಿಳಿದು ನನ್ನನ್ನು ಕೊಂದುಬಿಡುತ್ತಾರೆ. ಶಾಕ್ಯ ಕುಲದ ಯುವಕರು ಹೋದ ದಾರಿಯಲ್ಲೇ ನಾನೂ ಯಾಕೆ ಹೋಗಬಾರದು?"

೨. "ಹೌದು, ನಿಜವಾಗಿಯೂ ಯಾಕೆ ಹೋಗಬಾರದು?" ಉಪಾಲಿ ತನ್ನನ್ನು ತಾನೇ ಕೇಳಿಕೊಂಡ. ಅವನು ಆಭರಣಗಳ ಗಂಟನ್ನು ಬೆನ್ನಿನ ಮೇಲಿಂದ ಇಳಿಸಿ, ಒಂದು ಮರಕ್ಕೆ ನೇತುಹಾಕಿ ಹೀಗೆ ಹೇಳಿಕೊಂಡ: "ಇದು ಯಾರಿಗೆ ಸಿಕ್ಕುತ್ತದೆಯೋ ಅವರು ಇದನ್ನು ಬಹುಮಾನವೆಂದು ಪಡೆಯಲಿ." ಹೀಗೆ ಹೇಳುತ್ತಾ, ಶಾಕ್ಯ ಯುವಕರನ್ನು ಅನುಸರಿಸಲು ಹಿಂತಿರುಗಿದ.

೩. ಶಾಕ್ಯ ಯುವಕರು ದೂರದಿಂದಲೇ ಉಪಾಲಿ ಬರುತ್ತಿದ್ದುದನ್ನು ನೋಡಿದರು, ಅವನು ಹತ್ತಿರ ಬಂದಮೇಲೆ: "ಉಪಾಲಿ ಮತ್ತೇಕೆ ಬಂದೆ?" ಎಂದು ಕೇಳಿದರು.

೪. ಆಗ ಅವನು ಅವರಿಗೆ ತನಗೆ ಅನಿಸಿದುದನ್ನು ತಿಳಿಸಿದನು. ಅದಕ್ಕೆ ಅವರು ಹೀಗೆ ಉತ್ತರಿಸಿದರು: "ಉಪಾಲಿ, ಮನೆಗೆ ಹಿಂದಿರುಗದೆ ಒಳ್ಳೆಯದನ್ನೇ ಮಾಡಿದೆ. ಏಕೆಂದರೆ ಶಾಕ್ಯರು ಕ್ರೂರಿಗಳು, ಅವರು ನಿನ್ನನ್ನು ಕೊಂದೆಬಿಡುತ್ತಿದ್ದರೇನೋ"

೫. ಆಗ ಅವರು ಪವಿತ್ರಾತ್ಮ (ಬುದ್ಧ)ನಿದ್ದ ಸ್ಥಳಕ್ಕೆ ಕ್ಷೌರಿಕ ಉಪಾಲಿಯನ್ನು ಕರೆದುಕೊಂಡು ಹೋದರು. ಅಲ್ಲಿಗೆ ಬಂದು, ಅವರೆಲ್ಲರೂ ಪವಿತ್ರಾತ್ಮನಿಗೆ ನಮಸ್ಕರಿಸಿ, ಒಂದು ಪಕ್ಕದಲ್ಲಿ ಕುಳಿತರು. ಹಾಗೆ ಕುಳಿತನಂತರ ಅವರು ಪವಿತ್ರಾತ್ಮನಿಗೆ ಹೀಗೆ ಹೇಳಿದರು:

೬. "ಪ್ರಭುವೇ, ನಾವು ಶಾಕ್ಯರು ಅಹಂಕಾರಿಗಳು. ಸ್ವಾಮೀ, ಈ ಕ್ಷೌರಿಕ ಉಪಾಲಿಯು ಬಹಳ ಹಿಂದಿನಿಂದ ನಮ್ಮ ಸೇವಕನಾಗಿದ್ದಾನೆ. ನಮಗಿಂತ ಮೊದಲು ಅವನನ್ನೇ ತಮ್ಮ ಸಂಘಕ್ಕೆ ಪವಿತ್ರಾತ್ಮನು ಸೇರಿಸಿಕೊಂಡರೆ, ನಾವು ಅವನಿಗೆ ಆದರ–ಗೌರವಗಳನ್ನು ತೋರಿಸಿ, ಅವನೇ ನಮ್ಮ ಹಿರಿಯನೆಂದು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇವೆ – ಹೀಗಾದರೂ ನಮ್ಮ ಶಾಕ್ಯ ಅಹಂಕಾರ ಮುರಿಯಲಿ!"

೭. ಆಗ ಪವಿತ್ರಾತ್ಮನು ಮೊದಲು ಕ್ಷೌರಿಕ ಉಪಾಲಿಯನ್ನು, ಅನಂತರ ಆ ಶಾಕ್ಯ ಕುಲದ ಯುವಕರನ್ನೂ ತನ್ನ ಸಂಘಕ್ಕೆ ಸೇರಿಸಿಕೊಂಡನು.

## ೨. ಪೌರಕಾರ್ಮಿಕ ಸುನೀತನ ಪರಿವರ್ತನೆ

೧. ರಾಜಗೃಹದಲ್ಲಿ ಸುನೀತನೆಂಬ ಪೌರಕಾರ್ಮಿಕ ಇದ್ದ. ಗೃಹಸ್ಥರು ಬೀದಿಯ ಪಕ್ಕದಲ್ಲಿ ಬಿಸಾಡಿದ್ದ ಕಸವನ್ನು ಗುಡಿಸಿ ಬಂದ ದುಡಿಮೆಯಲ್ಲೇ ತನ್ನ ಜೀವನವನ್ನು ಸಾಗಿಸುತ್ತಿದ್ದ. ಅವನದು ಆನುವಂಶಿಕವಾಗಿ ಬಂದ ಕೀಳು ಕಸುಬಾಗಿತ್ತು.

೨. ಒಂದು ಬೆಳಗಿನ ಜಾವ ಪವಿತ್ರಾತ್ಮನು ಎದ್ದು, ವಸ್ತ್ರಗಳನ್ನು ಧರಿಸಿ, ಅನೇಕ ಭಿಕ್ಷುಗಳೊಡಗೂಡಿ, ಭಿಕ್ಷಾಟನೆಗೆಂದು ರಾಜಗೃಹವನ್ನು ಪ್ರವೇಶಿಸಿದನು.

೩. ಆಗ ಸುನೀತನು ಬೀದಿಯನ್ನು ಗುಡಿಸಿ, ಕಸಕಡ್ಡಿಗಳನ್ನು ಕಲೆಹಾಕಿ, ಅವುಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು, ಅದನ್ನು ಅಡ್ಡೆಗೆ ಹಾಕಿ ಹೊತ್ತುಕೊಂಡು ಹೋಗುತ್ತಿದ್ದನು.

೪. ಆಗ ಸ್ವಾಮಿ ಹಾಗೂ ಅವನ ಪರಿವಾರದವರು ಹತ್ತಿರ ಬರುತ್ತಿದ್ದುದನ್ನು ನೋಡಿದ ಅವನ ಹೃದಯವು ಆನಂದ ಹಾಗೂ ಆಶ್ಚರ್ಯದಿಂದ ತುಂಬಿ ಬಂದಿತು.

೫. ಅಡ್ಡೆಯನ್ನೂ ಬಚ್ಚಿಡಲು ರಸ್ತೆಯಲ್ಲಿ ಸ್ಥಳ ಕಾಣದಿದ್ದಾಗ, ಒಂದು ಗೋಡೆಯ ತಿರುವಿನಲ್ಲಿ ಅದನ್ನು ಇರಿಸಿ, ಗೋಡೆಗೆ ಅಂಟಿಕೊಂಡವನಂತೆ, ಬುದ್ಧನಿಗೆ ಕೈಜೋಡಿಸಿ ನಮಸ್ಕರಿಸುತ್ತಾ ನಿಂತುಕೊಂಡನು.

೬. ಆಗ ಹತ್ತಿರ ಬಂದ ಪ್ರಭುವು ದಿವ್ಯ ಮಾಧುರ್ಯದಿಂದ ಕೂಡಿದ ದನಿಯಲ್ಲಿ ಅವನಿಗೆ ಹೀಗೆ ಹೇಳಿದ: "ಸುನೀತ! ಈ ರೀತಿಯ ಕೀಳು ಜೀವನದಿಂದ ನಿನಗೇನಾಗಬೇಕು? ಮನೆಯನ್ನು ತ್ಯಜಿಸಿ, ಸಂಘಕ್ಕೆ ಸೇರಿಕೊಳ್ಳಲು ನಿನಗೆ ಸಾಧ್ಯವಾಗುತ್ತದೆಯೇನು?"

೭. ಸುನೀತನು ಅಮೃತ ಸಿಂಚನವಾದವನಂತೆ ಸಂತಸಗೊಂಡು, ಹೇಳಿದ: "ಸರ್ವೋತ್ಕೃಷ್ಟರಾದ ತಮ್ಮಂಥವರೇ ಸಂಘಕ್ಕೆ ಸೇರಿರುವಾಗ, ನಾನೇಕೆ ಸೇರಬಾರದು? ಸರ್ವೋತ್ಕೃಷ್ಟರಾದ ತಾವು ನನ್ನನ್ನೂ ಸೇರಿಸಿಕೊಂಡು ಸಹಿಸಿಕೊಳ್ಳಬೇಕು."

೮. ಆಗ ಪ್ರಭುವು "ಬಾ ಭಿಕ್ಕುವೇ" ಎಂದು ಹೇಳಿದಾಗ, ಸುನೀತನು ಆ ಪದವನ್ನು ಕೇಳಿ, ಭಿಕ್ಷುವಿನ ದೀಕ್ಷೆ ಪಡೆದನಲ್ಲದೆ ಭಿಕ್ಷಾಪಾತ್ರೆಯನ್ನೂ ಕಾವಿಬಟ್ಟೆಯನ್ನೂ ಪಡೆದನು.

೯. ಪ್ರಭುವು ವಿಹಾರಕ್ಕೆ ಹೋಗುತ್ತಾ ದಾರಿಯಲ್ಲಿ ಧರ್ಮವನ್ನೂ, ಅಧ್ಯಾತ್ಮವನ್ನೂ ಬೋಧಿಸಿದನು ಹಾಗೂ "ಪವಿತ್ರ ಜೀವನವನ್ನು ಜೀವಿಸುವುದರಿಂದಲೂ ಶಮೆ ಮತ್ತು ಆತ್ಮನಿಯಂತ್ರಣದ ಮೂಲಕವೂ ಮನುಷ್ಯ ಪವಿತ್ರನಾಗುತ್ತಾನೆ." ಎಂದು ಹೇಳಿದನು.

೧೦. ಸುನೀತನು ಅಷ್ಟೊಂದು ದೊಡ್ಡವನು ಹೇಗಾದನು ಎಂದು ಕೇಳಿದಾಗ, ಬುದ್ಧನು ಹೇಳಿದನು: "ಬೀದಿಯ ತಿಪ್ಪೆಯ ಮೇಲೆ ಮಧುರ ಹಾಗೂ ಸುವಾಸಿತ ಹೂವು ಹೇಗೆ ಹುಟ್ಟುತ್ತದೆಯೋ ಹಾಗೆಯೇ ಕೊಳಕು ಹಾಗೂ ಕುರುಡ ಪ್ರಾಪಂಚಿಕರ ಮಧ್ಯೆ ಅಂತರ್ದೃಷ್ಟಿಯುಳ್ಳ ಬುದ್ಧನ ಮಗನು ಹುಟ್ಟುತ್ತಾನೆ."

## ೩. ಶೋಭಕ ಮತ್ತು ಸುಪ್ರಿಯ ಎಂಬ ಅಸ್ಪೃಶ್ಯರ ಪರಿವರ್ತನೆ

೧. ಸೋಪಕನು ಶ್ರಾವಸ್ತಿಯ ಒಬ್ಬ ಪಂಚಮ. ಅವನ ತಾಯಿ ಅವನ ಹೆರಿಗೆಯ ಬೇನೆಯಲ್ಲಿ ಒಂದು ದೀರ್ಘ ಹಾಗೂ ಗಾಢ ಮೂರ್ಛೆಗೊಳಗಾದಳು. ಆದರೆ ಆಕೆಯ ಗಂಡ ಮತ್ತು ಬಂಧುಗಳು "ಈಕೆ ಸತ್ತಿದ್ದಾಳೆ" ಅಂದುಕೊಂಡರು ಹಾಗೂ ಆಕೆಯನ್ನು ಸ್ಮಶಾನಕ್ಕೆ ಒಯ್ದರಲ್ಲದೆ, ಅವಳನ್ನು ಸುಡುವ ಸಿದ್ಧತೆ ನಡೆಸಿದರು.

೨. ಆದರೆ ಪ್ರಚಂಡ ಬಿರುಗಾಳಿಯಿಂದ ಕೂಡಿದ ಮಳೆಯಿಂದಾಗಿ ಚಿತೆಯ ಬೆಂಕಿ ಉರಿಯಲಿಲ್ಲ. ಆದ್ದರಿಂದ ಅವರೆಲ್ಲ ಸೋಪಕನ ತಾಯಿಯನ್ನು ಚಿತೆಯ ಮೇಲೇ ಬಿಟ್ಟು ಹೊರಟು ಹೋದರು.

೩. ಶೋಭಕನ ತಾಯಿ ಆಗ ಇನ್ನೂ ಸತ್ತಿರಲಿಲ್ಲ. ಆದರೆ ಅವಳು ಆಮೇಲೆ ಸತ್ತಳು. ಅವಳು ಸಾಯುವ

ಮೊದಲು ಒಂದು ಮಗುವಿಗೆ ಜನ್ಮವಿತ್ತು ಸತ್ತಳು.

೪. ಸ್ಮಶಾನದ ಕಾವಲುಗಾರನು ಆ ಮಗುವನ್ನು ಸಾಕಿಕೊಂಡನು ಹಾಗೂ ಅದನ್ನು ತನ್ನ ಮಗು ಸುಪ್ರಿಯನೊಂದಿಗೆ ಸಾಕಿ ಸಲುಹಿದನು. ತಾಯಿ ಸೇರಿದ ಶೋಭಕ ಕುಲದ ಹೆಸರೇ ಆ ಮಗುವಿಗೂ ಬಂತು.

೫. ಒಂದು ದಿನ ಪವಿತ್ರಾತ್ಮನು ಸ್ಮಶಾನದ ಹತ್ತಿರ ಹೋಗುತ್ತಿದ್ದನು. ಅವನನ್ನು ನೋಡಿದ ಸೋಪಕ ಅವನ ಬಳಿ ಬಂದ. ಶೋಭಕನು ಅವನಿಗೆ ನಮಸ್ಕರಿಸಿದ ಬಳಿಕ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ವಿನಂತಿಸಿಕೊಂಡ.

೬. ಶೋಭಕನಿಗೆ ಆಗಿನ್ನೂ ಏಳು ವರ್ಷ ಮಾತ್ರ ವಯಸ್ಸಾಗಿತ್ತು. ಆದ್ದರಿಂದ ಪ್ರಭುವು "ನಿಮ್ಮ ತಂದೆಯ ಅನುಮತಿ ಪಡೆದು ಬಾ" ಎಂದನು.

೭. ಶೋಭಕನು ಹೋಗಿ ತನ್ನ ತಂದೆಯನ್ನು ಕರೆತಂದನು. ಸೋಪಕನ ತಂದೆಯು ಬುದ್ಧನಿಗೆ ನಮಸ್ಕರಿಸಿ, ತನ್ನ ಮಗನನ್ನು ಸಂಘಕ್ಕೆ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಂಡನು.

೮. ಬುದ್ಧನಿಗೆ ಅವನು ಪಂಚಮರ ಕುಲಕ್ಕೆ ಸೇರಿದವನೆಂದು ಗೊತ್ತಿದ್ದರೂ, ಅವನನ್ನು ತನ್ನ ಸಂಘಕ್ಕೆ ಸೇರಿಸಿಕೊಂಡನಲ್ಲದೆ, ಅವನಿಗೆ ಉಪದೇಶವನ್ನೂ (ಆಧ್ಯಾತ್ಮಿಕ) ಶಿಕ್ಷಣವನ್ನೂ ಕೊಟ್ಟನು.

೯. ಶೋಭಕನು ಮುಂದೆ ಒಬ್ಬ ಥೇರನಾದನು.

೧೦. ಸುಪ್ರಿಯ ಮತ್ತು ಶೋಭಕ ಬಾಲ್ಯದಿಂದಲೂ ಒಟ್ಟಿಗೇ ಬೆಳೆದವರು. ಸುಪ್ರಿಯನ ತಂದೆಯೇ ಶೋಭಕನನ್ನು ಸಾಕಿ ಸಲಹಿದ್ದರಿಂದ, ಸುಪ್ರಿಯನು ತನ್ನ ಒಡನಾಡಿಯಿಂದ ಬುದ್ಧನ ಉಪದೇಶವನ್ನು (ಆಧ್ಯಾತ್ಮಿಕ) ಶಿಕ್ಷಣವನ್ನು ತಿಳಿದುಕೊಂಡನು; ಸುಪ್ಪಿಯನ ಜಾತಿಗಿಂತ ಸೋಪಕನ ಜಾತಿಯು ಕೀಳಾಗಿದ್ದರೂ, ಸುಪ್ರಿಯನು ತನ್ನನ್ನೂ ಸಂಘಕ್ಕೆ ಸೇರಿಸಿಕೊಳ್ಳುವಂತೆ ಶೋಭಕನನ್ನು ಬೇಡಿಕೊಂಡನು.

೧೧. ಶೋಭಕನು ಒಪ್ಪಿದನು ಹಾಗೂ ಸ್ಮಶಾನದ ಕಾವಲು ಕಾಯುವ ಕೆಳಜಾತಿಗೆ ಸೇರಿದ ಸುಪ್ರಿಯನು ಭಿಕ್ಷುವಾದನು.

## ೪. ಸುಮಂಗಲ ಮತ್ತು ಇತರ ಕೆಳಜಾತಿಯವರ ಪರಿವರ್ತನೆ

೧. ಸುಮಂಗಲನು ಶ್ರಾವಸ್ತಿಯ ಒಬ್ಬ ರೈತ. ಒಂದು ಸಣ್ಣ ಕುಡುಗೋಲು, ನೇಗಿಲು ಮತ್ತು ಸಲಿಕೆಯ ಸಹಾಯದಿಂದ ಹೋದಹೋದಲ್ಲಿ ಕೆಲಸ ಮಾಡುತ್ತಾ ಅವನು ತನ್ನ ಜೀವನವನ್ನು ಸಾಗಿಸುತ್ತಿದ್ದನು.

೨. ಚನ್ನನು ಕಪಿಲವಸ್ತುವಿನ ನಿವಾಸಿ ಹಾಗೂ ಶುದ್ಧೋದನನ ಮನೆಯಲ್ಲಿ ಸೇವಕನಾಗಿದ್ದನು.

೩. ಧನ್ನಿಯನು ರಾಜಗೃಹದ ನಿವಾಸಿ. ಅವನೊಬ್ಬ ಕುಂಬಾರ.

೪. ಕಪ್ಪಟ–ಕುರ ಶ್ರಾವಸ್ತಿಯ ನಿವಾಸಿ. ಅವನಿಗೆ ಗೊತ್ತಿದ್ದ ಒಂದೇ ಜೀವನೋಪಾಯವೆಂದರೆ, ಚಿಂದಿಬಟ್ಟೆ ತೊಟ್ಟು, ಭಿಕ್ಷಾಪಾತ್ರೆ ಹಿಡಿದು ಅಕ್ಕಿಯನ್ನು ಬೇಡುವುದು. ಆದುದರಿಂದ ಅವನಿಗೆ ಕಪ್ಪಟ–ಕುರ (ಚಿಂದಿ–ಅಕ್ಕಿ) ಎಂಬ ಹೆಸರು ಬಂತು. ದೊಡ್ಡವನಾದ ಮೇಲೆ ಹುಲ್ಲು ಮಾರಿ ಜೀವಿಸುತ್ತಿದ್ದ.

೫. ಇವರೆಲ್ಲರೂ ಭಿಕ್ಷುಗಳಾಗಲು ಹಾಗೂ ಸಂಘಕ್ಕೆ ಸೇರಲು ಬುದ್ಧನ ಅಪ್ಪಣೆ ಕೇಳಿದರು. ಬುದ್ಧನು ಸಂಕೋಚವಿಲ್ಲದೆ, ಅವರ ಕೀಳ್ಜಾತಿಯನ್ನೂ ಅವರ ಪೂರ್ವಸ್ಥಿತಿಯನ್ನೂ ಅಲಕ್ಷಿಸಿ, ತನ್ನ ಸಂಘಕ್ಕೆ ಅವರನ್ನು ಸೇರಿಸಿಕೊಂಡನು.

## ೫. ಕುಷ್ಠರೋಗಿ ಸುಪ್ರಬುದ್ಧನ ಪರಿವರ್ತನೆ

೧. ಒಂದು ಸಾರಿ ಸರ್ವೋತ್ತಮನು ರಾಜಗೃಹದ ಬಳಿ ವೇಣುವನದಲ್ಲಿ, ಅಳಿಲುಗಳು ಆಹಾರ ತಿನ್ನುತ್ತಿದ್ದ ಸ್ಥಳದಲ್ಲಿ ವಾಸಿಸುತ್ತಿದ್ದನು.

೨. ಅದೇ ಸಮಯದಲ್ಲಿ ರಾಜಗೃಹದಲ್ಲಿ ಸುಪ್ರಬುದ್ಧನೆಂಬ ಕುಷ್ಠರೋಗಿ ವಾಸಿಸುತ್ತಿದ್ದ. ಅವನು ಬಡವನೂ, ಕುಷ್ಠನೂ, ಅತಿಯಾಗಿ ನರಳುತ್ತಿದ್ದವನೂ ಆಗಿದ್ದ.

೩. ಅದೇ ಸಮಯದಲ್ಲಿ ಸರ್ವೋತ್ತಮನು ಅಲ್ಲೇ ಸಾವಿರಾರು ಜನರ ಮಧ್ಯೆ ಕುಳಿತು ಧರ್ಮೋಪದೇಶ ಮಾಡುತ್ತಿದ್ದನು.

೪. ಸಾವಿರಾರು ಜನರು ಒಟ್ಟಿಗೇ ಕುಳಿತಿರುವುದನ್ನು ದೂರದಿಂದಲೇ ನೋಡಿದ ಕುಷ್ಠರೋಗಿ ಸುಪ್ರಬುದ್ಧನು ಹೀಗೆ ಯೋಚಿಸಿದ: "ಅಷ್ಟು ದೂರದಲ್ಲಿ ಖಂಡಿತ ಮೃದುವಾದ ಹಾಗೂ ಗಟ್ಟಿಯಾದ ಆಹಾರವನ್ನು ದಾನ ಮಾಡುತ್ತಿರುತ್ತಾರೆ. ಆ ಗುಂಪಿನ ಬಳಿ ಒಂದು ವೇಳೆ ನಾನೂ ಹೋದರೆ, ನನಗೂ ಸ್ವಲ್ಪ ಮೃದುವಾದದ್ದೋ ಅಥವಾ ಕಠಿಣವಾದದ್ದೋ ತಿನ್ನಲು ಸಿಕ್ಕಬಹುದು."

೫. ಹೀಗೆಂದುಕೊಂಡು ಸುಪ್ರಬುದ್ಧನು ಆ ಗುಂಪಿನ ಬಳಿ ಸಾರಿದನು ಹಾಗೂ ಅಲ್ಲಿ ಆ ದೊಡ್ಡ ಗುಂಪಿನ ನಡುವೆ ಸರ್ವೋತ್ತಮನು ಕುಳಿತು ಧರ್ಮೋಪದೇಶ ಮಾಡುತ್ತಿರುವುದನ್ನು ಕಂಡನು. ಹಾಗೆ ಸರ್ವೋತ್ತಮನನ್ನು ಕಂಡ ಅವನು ಹೀಗೆ ಯೋಚಿಸಿದ: "ಇಲ್ಲಿ ಆಹಾರದ ದಾನವನ್ನು ಯಾರೂ ಮಾಡುತ್ತಿಲ್ಲ. ಈ ಸಭೆಯಲ್ಲಿ ಗೋತಮನೆಂಬ ಸಮಣನು ಧರ್ಮೋಪದೇಶವನ್ನು ಮಾಡುತ್ತಿದ್ದಾನೆ. ಅವನ ಧರ್ಮೋಪದೇಶವನ್ನು ನಾನೂ ಕೇಳಿದರೆ ಹೇಗೆ?"

೬. ಹೀಗೆಂದುಕೊಂಡ ಅವನು ಒಂದು ಕಡೆ ಕುಳಿತುಕೊಂಡು "ನಾನೂ ಅವನ ಉಪದೇಶವನ್ನು ಕೇಳುತ್ತೇನೆ" ಎಂದುಕೊಂಡ.

೭. ಆಗ ಸರ್ವೋತ್ತಮನು ತನ್ನ ಮನಸ್ಸಿನಲ್ಲೇ ಅಲ್ಲಿ ನೆರೆದಿದ್ದವರ ಮನಸ್ಸನ್ನು ಅಳೆಯುತ್ತಾ ಹೀಗೆ ಯೋಚಿಸಿದ: "ಇಲ್ಲಿ ನೆರೆದಿರುವವರಲ್ಲಿ ಯಾರು ಸತ್ಯವನ್ನು ಗ್ರಹಿಸಲು ಶಕ್ತರಾಗಿದ್ದಾರೆಂದು ತಿಳಿಯಲು ನನಗೆ ಕುತೂಹಲವಾಗಿದೆ." ಆಗ ಅವನು ಗುಂಪಿನಲ್ಲಿ ಕುಳಿತಿದ್ದ ಸುಪ್ರಬುದ್ಧನನ್ನು ನೋಡಿದ. ಅವನನ್ನು ನೋಡಿದ ಕೂಡಲೇ ಅವನಿಗೆ 'ಇವನು ಸತ್ಯವನ್ನು ಗ್ರಹಿಸಬಲ್ಲ'ನೆಂದು ಗೊತ್ತಾಯಿತು.

೮. ಆದುದರಿಂದ, ಕುಷ್ಠರೋಗಿ ಸುಪ್ರಬುದ್ಧನಿಗೋಸ್ಕರ, ಕ್ರಮವಾಗಿ ಈ ಮುಂದಿನ ವಿಷಯಗಳನ್ನು ಬೋಧಿಸಿದನು: 'ಭಿಕ್ಷೆ ನೀಡುವುದು, ಪವಿತ್ರ ಜೀವನ, ಸ್ವರ್ಗಲೋಕ. ಅಲ್ಲದೆ, ಐಂದ್ರಿಕ ಆಸೆಗಳ ಕನಿಷ್ಠತೆ ಮತ್ತು ಕೆಡಕುಗಳ ಬಗ್ಗೆಯೂ, ಆಸವಗಳಿಂದ ಮುಕ್ತನಾಗುವುದರಿಂದಾಗುವ ಲಾಭಗಳ ಬಗ್ಗೆಯೂ ತಿಳಿಸಿದನು.'

೯. ಸುಪ್ರಬುದ್ಧನ ಹೃದಯವು ಮೃದುವೂ, ದೀನವೂ, ಮುಕ್ತವೂ, ಸಂತುಷ್ಟವೂ, ಶ್ರದ್ಧೆಯಿಂದ ತುಂಬಿದುದೂ ಆದುದನ್ನು ಕಂಡ ಸರ್ವೋತ್ತಮನು ಅತ್ಯುತ್ಕೃಷ್ಟ ಧರ್ಮವನ್ನು – ಅಂದರೆ, ದುಃಖ, ದುಃಖದ ಕಾರಣ, ದುಃಖ ನಿವಾರಣೆ ಮತ್ತು ಅದರ ಮಾರ್ಗ – ಇವುಗಳನ್ನು ಬೋಧಿಸಿದನು.

೧೦. ಯಾವುದೇ ಕಲೆಯಿಲ್ಲದ ಬಿಳಿಬಟ್ಟೆಯು ಹೇಗೆ ಬಣ್ಣವನ್ನು ಪಡೆಯಲು ಸಿದ್ಧವಾಗಿರುತ್ತದೆಯೋ ಹಾಗೆಯೇ, ಕುಷ್ಠರೋಗಿ ಸುಪ್ರಬುದ್ಧನಲ್ಲಿ, ಅವನು ಕುಳಿತಲ್ಲಿಯೇ 'ಯಾವುದಕ್ಕೆ ಆದಿ ಇದೆಯೋ ಅದಕ್ಕೆ ಅಂತ್ಯವಿರಲೇಬೇಕು' ಎಂದು ಸತ್ಯದ ಬಗೆಗೆ ಶುದ್ಧ ನಿರಂಜನ ಅಂತರ್‌ದೃಷ್ಟಿ ಅಥವಾ ಜ್ಞಾನ

ಉಂಟಾಯಿತು. ಆಗ ಕುಷ್ಠರೋಗಿ ಸುಪ್ರಬುದ್ಧನು ಸತ್ಯವನ್ನು ನೋಡಿದನು. ಅದನ್ನು ತಲುಪಿದನು. ಅದನ್ನು ಅರಿತನು, ಅದರಲ್ಲೇ ಲೀನವಾದನು. ಎಲ್ಲ ಸಂದೇಹಗಳನ್ನೂ ದಾಟಿದನು, ಎಲ್ಲ ಪ್ರಶ್ನೆಗಳಿಂದ ಮುಕ್ತನಾದನು. ವಿಶ್ವಾಸವನ್ನೂ ಗಳಿಸಿದನು. ಅವನಿಗೆ ಮತ್ತೇನೂ ಬೇಡವಾಗಿ ಪ್ರಭುವಿನ ಉಪದೇಶದಲ್ಲಿ ನೆಲೆಸಿದವನಾಗಿ, ತಾನು ಕುಳಿತಲ್ಲಿಂದ ಜಿಗಿದು, ಪ್ರಭುವಿನ ಬಳಿಸಾರಿ, ಅವನ ಪಕ್ಕದಲ್ಲೇ ಕುಳಿತುಕೊಂಡನು.

೧೧. ಹೀಗೆ ಕುಳಿತುಕೊಂಡ ಅವನು ಸರ್ವೋತ್ತಮನಿಗೆ ಹೀಗೆ ಹೇಳಿದನು: "ಸರ್ವೋತ್ತಮನೇ, ಓ ಸರ್ವೋತ್ತಮ ಪ್ರಭುವೇ, ಓ ಸ್ವಾಮಿಯೇ, ಹೇಗೆ ಪತಿತರನ್ನು ಉದ್ಧಾರಮಾಡಬೇಕೋ, ಅವ್ಯಕ್ತವಾದುದನ್ನು ಹೇಗೆ ವ್ಯಕ್ತಮಾಡಬೇಕೋ, ದಿಕ್ಕು ತಪ್ಪಿದವರಿಗೆ ಹೇಗೆ ಮಾರ್ಗದರ್ಶನ ಮಾಡಬೇಕೋ, ಕತ್ತಲೆಯಲ್ಲಿರುವವರಿಗೆ ಹೇಗೆ ಬೆಳಕು ನೀಡಿ 'ಕಣ್ಣಿದ್ದವರು ರೂಪಗಳನ್ನು ನೋಡಬಹುದು' ಎಂದು ಹೇಳಬೇಕೋ ಹಾಗೆಯೇ ಸರ್ವೋತ್ತಮನು ವಿವಿಧ ರೀತಿಯಲ್ಲಿ ಸತ್ಯವನ್ನು ಪ್ರತಿಪಾದಿಸಿದ್ದಾನೆ. ನಾನು ಸಹ, ಪ್ರಭುವೇ, ಆಶ್ರಯ ಪಡೆಯಲು ಬುದ್ಧನ ಬಳಿ, ಧರ್ಮದ ಬಳಿ ಹಾಗೂ ಸಂಘದ ಬಳಿ ಹೋಗುತ್ತಿದ್ದೇನೆ. ಸರ್ವೋತ್ತಮನು ನನ್ನನ್ನು ತಮ್ಮ ಅನುಯಾಯಿಯಂತೆ ಇಲ್ಲಿಂದ ಮುಂದೆ ಜೀವ ಇರುವವರೆಗೂ ತಮ್ಮ ಆಶ್ರಯದಲ್ಲಿರುವವನಂತೆ ಸ್ವೀಕರಿಸಬೇಕು."

೧೨. ಇದಾದಮೇಲೆ, ಕುಷ್ಠರೋಗಿ ಸುಪ್ರಬುದ್ಧನು ಸರ್ವೋತ್ತಮನ ಉಪದೇಶವನ್ನು ತಿಳಿದವನಾಗಿ ಅದರಲ್ಲೇ ನೆಲೆಗೊಂಡು, ಉನ್ನತಿಗೇರಿ ಹಾಗೂ ಅದರಿಂದ ಸಂತುಷ್ಟಗೊಂಡು, ಸರ್ವೋತ್ತಮನನ್ನು ಶ್ಲಾಘಿಸಿದನು. ಅವನ ಉಪದೇಶವನ್ನು ಸ್ವಾಗತಿಸಿದನು. ಅವನಿಗೆ ಅಭಿನಂದನೆಗಳನ್ನು ಸಲ್ಲಿಸಿ, ತನ್ನ ಆಸನದಿಂದ ಎದ್ದು, ಸರ್ವೋತ್ತಮನಿಗೆ ನಮಸ್ಕರಿಸಿ, ಹೊರಟುಹೋದನು.

೧೩. ದುರದೃಷ್ಟವಶಾತ್, ಹಾದುಹೋಗುತ್ತಿದ್ದ ಒಂದು ಹೋರಿ ಸುಪ್ರಬುದ್ಧನನ್ನು ಎತ್ತಿ ಒಗೆದುದೂ ಅಲ್ಲದೆ ತಿವಿದುದರಿಂದ ಅವನು ಸತ್ತುಹೋದನು.

# ಭಾಗ : ೭
# ಸ್ತ್ರೀಯರ ಪರಿವರ್ತನೆ

೧. ಮಹಾಪ್ರಜಾಪತಿ ಗೋತಮಿ, ಯಶೋಧರೆ ಮತ್ತು ಆಕೆಯ ಒಡನಾಡಿಗಳ ಪರಿವರ್ತನೆ
೨. ಪ್ರಕೃತಿ ಎಂಬ ಚಂಡಾಲಿಕೆಯ ಪರಿವರ್ತನೆ

## ೧. ಮಹಾಪ್ರಜಾಪತಿ ಗೋತಮಿ, ಯಶೋಧರೆ ಮತ್ತು ಆಕೆಯ ಒಡನಾಡಿಗಳ ಪರಿವರ್ತನೆ

೧. ಪವಿತ್ರಾತ್ಮನು ತನ್ನ ತಂದೆಯ ಮನೆಗೆ ಭೇಟಿಕೊಟ್ಟಾಗ, ಸಂಘವನ್ನು ಸೇರಿಕೊಳ್ಳಬೇಕು ಎಂಬ ಆಸೆ ಶಾಕ್ಯ ಗಂಡಸರಲ್ಲಿ ಎಷ್ಟು ಪ್ರಬಲವಾಗಿತ್ತೋ, ಶಾಕ್ಯ ಸ್ತ್ರೀಯರಲ್ಲಿಯೂ ಅಷ್ಟೇ ಪ್ರಬಲವಾಗಿತ್ತು.

೨. ಮಹಾಪ್ರಜಾಪತಿ ಗೋತಮಿಯೇ ಅಂಥ ಹೆಂಗಸರ ಮುಂದಾಳಾಗಿದ್ದಳು.

೩. ಪವಿತ್ರಾತ್ಮನು ನಿಗ್ರೋಧಾರಾಮದಲ್ಲಿ ಶಾಕ್ಯರ ಜೊತೆ ಉಳಿದುಕೊಂಡಿದ್ದಾಗ ಮಹಾ ಪ್ರಜಾಪತಿ ಗೋತಮಿಯು ಅವನ ಬಳಿ ಹೋಗಿ, ಹೀಗೆಂದಳು: "ಪ್ರಭುವೇ, ಹೆಂಗಸರೂ ಪರಿವ್ರಾಜಕರಾಗಲು ಹಾಗೂ ತಥಾಗತ ಘೋಷಿಸಿದ ಸಿದ್ಧಾಂತ ಮತ್ತು ಶಿಕ್ಷಣದಡಿಯಲ್ಲಿ ಅವರೂ ಸಂಘವನ್ನು ಸೇರಲು ಅನುಮತಿಸಿದರೆ, ಒಳ್ಳೆಯದು!"

೪. "ಸಾಕು, ಓ ಗೋತಮಿ! ಅಂಥ ಯೋಚನೆ ನಿನ್ನ ಮನಸ್ಸಿನಲ್ಲಿ ಸುಳಿಯದಿರಲಿ" ಎಂದು ಪವಿತ್ರಾತ್ಮನು ಉತ್ತರಿಸಿದನು. ಎರಡನೆಯ ಸಾರಿ ಹಾಗೂ ಮೂರನೆಯ ಸಾರಿ ಇದೇ ಬೇಡಿಕೆಯನ್ನು ಇವೇ ಶಬ್ದಗಳಲ್ಲಿ ಮುಂದಿಟ್ಟಳು ಮತ್ತು ಮೂರು ಸಾರಿಯೂ ಇದೇ ಉತ್ತರವನ್ನು ಪಡೆದಳು.

೫. ಇದರಿಂದ ಖಿನ್ನಮನಸ್ಕಳೂ ದುಃಖಪೂರಿತಳೂ ಆದ ಮಹಾಪ್ರಜಾಪತಿ ಗೋತಮಿ, ಪವಿತ್ರಾತ್ಮನ ಮುಂದೆ ಬಾಗಿ ನಮಸ್ಕರಿಸಿ ಅಳುತ್ತಾ ಹಾಗೂ ಕಣ್ಣೀರು ಹಾಕುತ್ತಾ ಹೊರಟುಹೋದಳು.

೬. ಪವಿತ್ರಾತ್ಮನು ಪರ್ಯಟನೆಗೆಂದು ನಿಗ್ರೋಧಾರಾಮವನ್ನು ಬಿಟ್ಟು ಮುಂದೆ ಹೋದಾಗ, ಮಹಾಪ್ರಜಾಪತಿ ಮತ್ತು ಶಾಕ್ಯ ಸ್ತ್ರೀಯರನ್ನು ಸಂಘಕ್ಕೆ ಸೇರಿಸಿಕೊಳ್ಳಬೇಕೆಂಬ ಬೇಡಿಕೆಯನ್ನು, ಅಂಥ ಬೇಡಿಕೆಯನ್ನು ಪ್ರಭುವು ನಿರಾಕರಿಸಿದುದನ್ನು ಮತ್ತೊಮ್ಮೆ ಪರಿಗಣಿಸಲು, ಒಂದು ಕಡೆ ಒಟ್ಟುಗೂಡಿದರು.

೭ ಪ್ರಭುವಿನ ನಿರಾಕರಣೆಯನ್ನು ಕೊನೆಯದೆಂದು ಒಪ್ಪಿಕೊಳ್ಳಲು ಶಾಕ್ಯ ಸ್ತ್ರೀಯರು ನಿರಾಕರಿಸಿದರು. ಇನ್ನೂ ಮುಂದೆ ಹೋಗಿ, ಪರಿವ್ರಾಜಕರಂತೆ ವೇಷ ಧರಿಸಿ ಪ್ರಭುವಿಗೆ ಇದು ಮುಗಿದ ವಿಷಯ ಎಂದು ತಿಳಿಸಬೇಕೆಂದೂ ತೀರ್ಮಾನಿಸಿದರು.

೮. ಅದರಂತೆ, ಮಹಾಪ್ರಜಾಪತಿ ಗೋತಮಿಯು ತನ್ನ ಕೂದಲನ್ನು ಕತ್ತರಿಸಿಕೊಂಡಳು ಹಾಗೂ ಕಿತ್ತಳೆ ಬಣ್ಣದ ಉಡುಗೆಗಳನ್ನು ತೊಟ್ಟಳು ಹಾಗೂ ಆ ಸಮಯದಲ್ಲಿ ವೈಶಾಲಿಯ ಮಹಾವನದಲ್ಲಿ ಕೂಟಗರ ಸಭಾಂಗಣದಲ್ಲಿದ್ದ ಪ್ರಭುವನ್ನು ಭೇಟಿಮಾಡಲು ಶಾಕ್ಯ ಕುಲದ ಅನೇಕ ಸ್ತ್ರೀಯರೊಂದಿಗೆ ಹೊರಟಳು.

೯. ಕಾಲಾಂತರದಲ್ಲಿ ಮಹಾಪ್ರಜಾಪತಿ ಗೋತಮಿಯು ತನ್ನ ಸಂಗಡಿಗರೊಡನೆ ವೈಶಾಲಿಗೆ ಬಂದಳು. ಊದಿದ ಕಾಲುಗಳು ಹಾಗೂ ಧೂಳು ತುಂಬಿದ ಮೈಯೊಂದಿಗೆ ಅವಳು ಕೂಟಗರ ಸಭಾಂಗಣಕ್ಕೆ ಬಂದಳು.

೧೦. ಪ್ರಭುವು ನಿಗ್ರೋಧಾರಾಮದಲ್ಲಿ ತಂಗಿದ್ದಾಗ ಅವಳು ಮುಂದಿಟ್ಟ ಬೇಡಿಕೆಯನ್ನೇ ಪುನಃ ಅವನ ಮುಂದಿಟ್ಟಳು ಮತ್ತು ಅವನು ಮತ್ತೆ ನಿರಾಕರಿಸಿದನು.

೧೧. ಎರಡನೆಯ ಸಾರಿಯೂ ನಿರಾಕರಣೆಯನ್ನೇ ಪಡೆದ ಮಹಾಪ್ರಜಾಪತಿಯು ಹಿಂದೆಸರಿದು, ಸಭಾಂಗಣದ ಪ್ರವೇಶ ದ್ವಾರದ ಹೊರಕ್ಕೆ ಬಂದು ಏನು ಮಾಡಬೇಕೆಂದು ತೋಚದೆ ನಿಂತಳು. ಅವಳು ಹಾಗೆ ನಿಂತಿದ್ದಾಗ ಸಭಾಂಗಣದೊಳಕ್ಕೆ ಹೊರಟಿದ್ದ ಆನಂದನು ಅವಳನ್ನು ನೋಡಿ ಗುರುತಿಸಿದನು.

೧೨. ಆಗ ಅವನು "ಕಾಲನ್ನು ಊದಿಸಿಕೊಂಡು, ಮೈತುಂಬ ಧೂಳೂ ತುಂಬಿಕೊಂಡು ಮ್ಲಾನವದನರಾಗಿ, ಅಳುತ್ತಾ, ಕಣ್ಣೀರು ಸುರಿಸುತ್ತಾ, ಪ್ರವೇಶದ್ವಾರದ ಹೊರಗೇಕೆ ನಿಂತಿರುವಿರಿ?" ಎಂದು ಕೇಳಿದನು. ಆಗ ಮಹಾಪ್ರಜಾಪತಿಯು "ಓ ಆನಂದನೇ, ತಥಾಗತನು ಬೋಧಿಸಿದ ಸಿದ್ಧಾಂತ ಮತ್ತು ಧರ್ಮದ ಪ್ರಕಾರ ಸ್ತ್ರೀಯರು ತಮ್ಮ ಮನೆಗಳನ್ನು ತ್ಯಜಿಸಿ ಅನಿಕೇತನ ಸ್ಥಿತಿಗೆ ಹೋಗಲು ಪವಿತ್ರಾತ್ಮನು ಅಪ್ಪಣೆ ನೀಡುತ್ತಿಲ್ಲ" ಎಂದಳು.

೧೩. ಆಗ ಪೂಜ್ಯ ಆನಂದನು ಪವಿತ್ರಾತ್ಮನಿದ್ದಲ್ಲಿಗೆ ಹೋಗಿ, ಪವಿತ್ರಾತ್ಮನಿಗೆ ಬಾಗಿ ನಮಸ್ಕರಿಸಿ, ಒಂದು ಪಕ್ಕದಲ್ಲಿ ಕುಳಿತುಕೊಂಡನು. ಹಾಗೆ ಕುಳಿತುಕೊಂಡ ಪೂಜ್ಯ ಆನಂದನು ಪವಿತ್ರಾತ್ಮನಿಗೆ ಹೀಗೆ ಹೇಳಿದನು: "ಗಮನಿಸಿ, ಪ್ರಭುವೇ! ಮಹಾಗೋತಮಿಯು ಧೂಳು ತುಂಬಿದ ಕಾಲುಗಳನ್ನು ಊದಿಸಿಕೊಂಡು, ಮ್ಲಾನವದನರಾಗಿ, ದುಃಖಿತರಾಗಿ, ಅಳುತ್ತಾ, ಕಣ್ಣೀರು ಸುರಿಸುತ್ತಾ ಪ್ರವೇಶದ್ವಾರದ ಹೊರಗಡೆ ನಿಂತಿದ್ದಾರೆ; ಪವಿತ್ರಾತ್ಮರಾದ ತಾವು ತಾವೇ ಬೋಧಿಸಿದ ಸಿದ್ಧಾಂತ ಹಾಗೂ ಧರ್ಮದ ಪ್ರಕಾರ ಸ್ತ್ರೀಯರು ತಮ್ಮ ಮನೆಗಳನ್ನು ತ್ಯಜಿಸಿ ಅನಿಕೇತನರಾಗಲು ಅನುಮತಿ ನೀಡುತ್ತಿಲ್ಲವಂತೆ. ಪ್ರಭುಗಳೇ, ಅವರು ಇಚ್ಛಿಸಿದಂತೆ, ಸ್ತ್ರೀಯರಿಗೆ ತಾವು ಅನುಮತಿ ನೀಡುವುದು ಸೂಕ್ತವೆನಿಸುತ್ತದೆ.

೧೪. "ಮಹಾಪ್ರಜಾಪತಿಯು ಚಿಕ್ಕಮ್ಮನಾಗಿ, ದಾದಿಯಾಗಿ ಪವಿತ್ರಾತ್ಮರನ್ನು ಸಾಕಿದ್ದಾರೆ; ಅವರಿಗೆ ಹಾಲುಣಿಸಿದ್ದಾರೆ; ಅವರ ತಾಯಿ ತೀರಿಕೊಂಡನಂತರ ತಮ್ಮ ಸ್ವಂತ ಸ್ತನದಿಂದ ಹಾಲುಣಿಸಿದ್ದಾರೆ; ಹೀಗೆ ಅವರು ಪವಿತ್ರಾತ್ಮರಿಗೆ ಸಾಕಷ್ಟು ಸೇವೆ ಸಲ್ಲಿಸಿದ್ದಾರೆಂಬುದು ಸ್ಪಷ್ಟ. ಆದ್ದರಿಂದ ಪ್ರಭುಗಳೇ ತಥಾಗತ ಬೋಧಿಸಿದ ಸಿದ್ಧಾಂತ ಮತ್ತು ಧರ್ಮದ ಪ್ರಕಾರ ಅನುಮತಿ ನೀಡುವುದು ಸೂಕ್ತವೆನಿಸುತ್ತದೆ."

೧೫. "ಸಾಕು ಆನಂದ, ದಯವಿಟ್ಟು ಸ್ತ್ರೀಯರು ಹಾಗೆ ಮಾಡಲು ಬಿಡುವುದು ಬೇಡ." ಆನಂದನು ಎರಡನೇ ಹಾಗೂ ಮೂರನೇ ಸಾರಿ ಅದೇ ಬೇಡಿಕೆಯನ್ನು ಅವೇ ಪದಗಳಲ್ಲಿ ಮುಂದಿಟ್ಟನು ಮತ್ತು ಅದೇ ಉತ್ತರವನ್ನು ಪಡೆದನು.

೧೬. ಆಗ ಪೂಜ್ಯ ಆನಂದನು ಪವಿತ್ರಾತ್ಮನನ್ನು ಕೇಳಿದನು: "ಪ್ರಭುಗಳೇ, ಸ್ತ್ರೀಯರು ಪರಿವ್ರಾಜ ಪಡೆಯಲು ಅನುಮತಿ ಕೊಡದಿರಲು ಕಾರಣವೇನಿರಬಹುದು?

೧೭. "ಶೂದ್ರರೂ ಸ್ತ್ರೀಯರೂ ಮೋಕ್ಷವನ್ನು ಪಡೆಯಲಾರರು; ಏಕೆಂದರೆ ಅವರು ಅಪವಿತ್ರರು ಹಾಗೂ ಕೀಳು ಎಂದು ಬ್ರಾಹ್ಮಣರು ನಂಬುತ್ತಾರೆಂಬುದು ತಮಗೆ ಗೊತ್ತಿದೆ. ಅದಕ್ಕೇ ಅವರು ಶೂದ್ರರನ್ನೂ ಸ್ತ್ರೀಯರನ್ನೂ ಪರಿವ್ರಾಜವನ್ನು ಸ್ವೀಕರಿಸಲು ಬಿಡುವುದಿಲ್ಲ. ಪವಿತ್ರಾತ್ಮರೂ ಬ್ರಾಹ್ಮಣರ ಈ ದೃಷ್ಟಿಯನ್ನೇ ಹೊಂದಿದ್ದಾರೆಯೇ?"

೧೮. "ಬ್ರಾಹ್ಮಣರಿಗೆ ಅನುಮತಿ ನೀಡುವಂತೆ ಶೂದ್ರರಿಗೂ ಪರಿವ್ರಾಜವನ್ನು ಸ್ವೀಕರಿಸಲು ಪವಿತ್ರಾತ್ಮರು ಅನುಮತಿ ನೀಡಿಲ್ಲವೆ? ಪ್ರಭುಗಳೇ, ಸ್ತ್ರೀಯರನ್ನು ಈ ರೀತಿ ಬೇರೆಯಾಗಿ ಕಾಣಲು ಕಾರಣವೇನು?

೧೯. ಪವಿತ್ರಾತ್ಮರ ಸಿದ್ಧಾಂತ ಹಾಗೂ ಧರ್ಮದ ಪ್ರಕಾರ ಸ್ತ್ರೀಯರು ನಿರ್ವಾಣವನ್ನು ಪಡೆಯಲು ಅಶಕ್ತರೆಂದು ಪವಿತ್ರಾತ್ಮರು ನಂಬುತ್ತಾರೆಯೇ?"

೨೦. ಇದಕ್ಕೆ ಪವಿತ್ರಾತ್ಮರು ಉತ್ತರಿಸಿದರು: "ಆನಂದ! ನನ್ನನ್ನು ತಪ್ಪು ತಿಳಿಯಬೇಡ. ನಿಬ್ಬಾಣ ಪಡೆಯುವಲ್ಲಿ ಸ್ತ್ರೀಯರು ಪುರುಷರಷ್ಟೇ ಶಕ್ತರಿದ್ದಾರೆ. ಆನಂದ! ನನ್ನನ್ನು ತಪ್ಪು ತಿಳಿಯಬೇಡ – ನಾನು ಲಿಂಗ ಅಸಮಾನತೆಯನ್ನು ಪ್ರತಿಪಾದಿಸುತ್ತಿಲ್ಲ. ನಾನು ಮಹಾಪ್ರಜಾಪತಿಯ ಬೇಡಿಕೆಯನ್ನು ನಿರಾಕರಿಸುತ್ತಿರುವುದು ಲಿಂಗ ಅಸಮಾನತೆಯನ್ನು ಅವಲಂಬಿಸಿಲ್ಲ. ಅದು ವ್ಯಾವಹಾರಿಕ ಆಧಾರದ ಮೇಲೆ ನಿಂತಿದೆ."

೨೧. "ಪ್ರಭುಗಳೇ ನಿಜವಾದ ಕಾರಣವನ್ನು ತಿಳಿದುಕೊಳ್ಳಲು ನನಗೆ ಸಂತೋಷವಾಗುತ್ತದೆ. ಆದರೆ ವ್ಯಾವಹಾರಿಕ ಕಾರಣಗಳಿಗಾಗಿ ಪ್ರಭುಗಳು ಅವರ ಬೇಡಿಕೆಯನ್ನು ತಿರಸ್ಕರಿಸಲೇಬೇಕೆ? ಅಂಥ ತಮ್ಮ ಕ್ರಮ ಧರ್ಮಕ್ಕೆ ಕೆಟ್ಟ ಹೆಸರು ತರುವುದಿಲ್ಲವೇ? ಹಾಗೂ ಅದು ಲಿಂಗ ಅಸಮಾನತೆಯನ್ನು ಎತ್ತಿ ಹಿಡಿಯುತ್ತದೆ ಎಂಬ ಅಪವಾದಕ್ಕೆ ಗುರಿಯಾಗುವುದಿಲ್ಲವೆ? ಪ್ರಭುಗಳನ್ನು ಕಾಡುತ್ತಿರುವ ಈ ವ್ಯಾವಹಾರಿಕ ಅಡ್ಡಿಗಳನ್ನು ನಿವಾರಿಸುವಂಥ ಕೆಲವು ನಿಯಮಗಳನ್ನು ರೂಪಿಸಲು ಪ್ರಭುಗಳಿಗೆ ಸಾಧ್ಯವಿಲ್ಲವೆ?"

೨೨. "ಸರಿ, ಆನಂದ ಮಹಾಪ್ರಜಾಪತಿ ಒತ್ತಾಯಿಸಿದರೆ ನಾನೇ ಬೋಧಿಸಿದ ಸಿದ್ಧಾಂತ ಹಾಗೂ ಧರ್ಮದ ಪ್ರಕಾರ ಸ್ತ್ರೀಯರು ಪರಿವ್ರಾಜ ಸ್ವೀಕರಿಸಲು ನಾನು ಅನುಮತಿ ನೀಡುತ್ತೇನೆ. ಆದರೆ ಅದಕ್ಕೆ ಎಂಟು ಷರತ್ತುಗಳಿವೆ. ಈ ಎಂಟು ಮುಖ್ಯ ನಿಯಮಗಳನ್ನು ಆಚರಣೆಗೆ ತರುವ ಹೊಣೆಯನ್ನು ಮಹಾಪ್ರಜಾಪತಿ ಗೋತಮಿ ಹೊರಲಿ, ಆಗ ಅವಳಿಗೆ ದೀಕ್ಷೆ."

೨೩. ಆಗ ಪೂಜ್ಯ ಆನಂದನು ಆ ಎಂಟು ಮುಖ್ಯ ನಿಯಮಗಳನ್ನು ಪವಿತ್ರಾತ್ಮನಿಂದ ತಿಳಿದುಕೊಂಡು, ಮಹಾಪ್ರಜಾಪತಿ ಗೋತಮಿಯ ಬಳಿ ಹೋಗಿ, ಪವಿತ್ರಾತ್ಮನು ಹೇಳಿದುದನ್ನೆಲ್ಲ ಆಕೆಗೆ ತಿಳಿಸಿದನು.

೨೪. "ಆನಂದ, ಒಬ್ಬ ಚಿಕ್ಕ ವಯಸ್ಸಿನ ಹುಡುಗ ಅಥವಾ ಹುಡುಗಿ ತನ್ನ ತಲೆಯನ್ನು ತೊಳೆದುಕೊಂಡಾಗ ಹೇಗೆ ಕಮಲದ ಹೂಮಾಲೆ ಅಥವಾ ಮಲ್ಲಿಗೆ ಹೂಮಾಲೆ ಅಥವಾ ಸ್ತಿಮುಟಕ ಹೂಮಾಲೆಯನ್ನು ಎರಡು ಕೈಗಳಿಂದ ಸ್ವೀಕರಿಸಿ ತನ್ನ ತಲೆಯ ಮೇಲಿರಿಸಿಕೊಳ್ಳುತ್ತಾರೋ ಹಾಗೆಯೇ, ಆನಂದ, ನಾನೆ ಈ ಎಂಟು ಮುಖ್ಯ ನಿಯಮಗಳನ್ನು ಸ್ವೀಕರಿಸುತ್ತಿದ್ದೇವೆ – ಅವುಗಳನ್ನೆಂದೂ ನನ್ನ ಜೀವವಿರುವವರೆಗೂ ನಾನು ಮುರಿಯುವುದಿಲ್ಲ" ಎಂದು ಮಹಾಪ್ರಜಾಪತಿ ಆನಂದನಿಗೆ ಹೇಳಿದಳು.

೨೫. ಅನಂತರ ಪೂಜ್ಯ ಆನಂದನು ಪವಿತ್ರಾತ್ಮನ ಬಳಿ ಹಿಂತಿರುಗಿ ಬಂದನು ಹಾಗೂ ಬಾಗಿ ನಮಸ್ಕರಿಸಿ, ಅವನ ಒಂದು ಕಡೆಗೆ ಆಸೀನನಾದನು. ಹಾಗೆ ಕುಳಿತುಕೊಂಡು ಪೂಜ್ಯ ಆನಂದನು ಪವಿತ್ರಾತ್ಮನಿಗೆ ಹೀಗೆ ಹೇಳಿದನು: "ಪ್ರಭುಗಳೇ, ಮಹಾಪ್ರಜಾಪತಿ ಗೋತಮಿ ಎಂಟು ಮುಖ್ಯ ನಿಯಮಗಳನ್ನು ಆಚರಣೆಗೆ ತರುವ ಹೊಣೆಯನ್ನು ಹೊತ್ತಿದ್ದಾರೆ. ಆದ್ದರಿಂದ, ಅವರಿಗೆ ಉಪಸಂಪದ ದೀಕ್ಷೆ (ಸಂಘಕ್ಕೆ ಪ್ರವೇಶ) ಆಗಿದೆ ಎಂದು ಪರಿಗಣಿಸಬಹುದು."

೨೬. ಆಗ ಮಹಾಪ್ರಜಾಪತಿಯು ದೀಕ್ಷೆ ಪಡೆದಳು. ಅಲ್ಲದೆ, ಅವಳ ಜೊತೆ ಬಂದಿದ್ದ ಐದುನೂರು ಜನ ಶಾಕ್ಯ ಸ್ತ್ರೀಯರೂ ಅದೇ ಸಮಯದಲ್ಲಿ ದೀಕ್ಷೆ ಪಡೆದರು. ಹೀಗೆ ದೀಕ್ಷೆ ಪಡೆದ ಮಹಾಪ್ರಜಾಪತಿಯು ಪ್ರಭುವಿನ ಮುಂದೆ ಬಂದು, ನಮಸ್ಕರಿಸಿ ಒಂದು ಪಕ್ಕದಲ್ಲಿ ನಿಂತಳು ಮತ್ತು ಪವಿತ್ರಾತ್ಮನು ಅವಳಿಗೆ ಧರ್ಮವನ್ನೂ, ಸಿದ್ಧಾಂತವನ್ನೂ, ಶಿಕ್ಷಣವನ್ನೂ ಬೋಧಿಸಿದನು.

೨೭. ಉಳಿದ ಐದುನೂರು ಜನ ಭಿಕ್ಷುಣಿಯರಿಗೆ, ಪವಿತ್ರಾತ್ಮನ ಶಿಷ್ಯರಲ್ಲೊಬ್ಬನಾದ ನಂದಕನು ಬೋಧಿಸಿದನು.

೨೮. ಮಹಾಪ್ರಜಾಪತಿಯ ಜೊತೆಗೆ ಭಿಕ್ಷುಣಿಯರಾದ ಶಾಕ್ಯ ಹೆಂಗಸರಲ್ಲಿ ಯಶೋಧರೆಯೂ ಒಬ್ಬಳು. ದೀಕ್ಷೆಯ ನಂತರ ಅವಳಿಗೆ ಭದ್ರಕಜ್ಞಾನ ಎಂಬ ಹೆಸರು ಬಂದಿತು.

## ೨. ಪ್ರಕೃತಿ ಎಂಬ ಚಂಡಾಲಿಕೆಯ ಪರಿವರ್ತನೆ

೧. ಒಮ್ಮೆ ಪವಿತ್ರಾತ್ಮನು ಶ್ರಾವಸ್ತಿಯ ಅನಾಥಪಿಂಡಕನ ಚೇತವನ ಆರಾಮದಲ್ಲಿ ವಾಸಿಸುತ್ತಿದ್ದನು.

೨. ಒಂದು ದಿನ ಅವನ ಶಿಷ್ಯನಾದ ಆನಂದನು ಭಿಕ್ಷೆಗೆಂದು ಊರೊಳಗೆ ಹೋದನು. ಆನಂದನು ತನ್ನ ಊಟದ ನಂತರ ನೀರು ಕುಡಿಯಲೆಂದು ನದಿಯ ಕಡೆ ಹೋಗುತ್ತಿದ್ದನು.

೩. ಆಗ ಅವನು ಹುಡುಗಿಯೊಬ್ಬಳು ನದಿಯ ದಡದಲ್ಲಿ ಕೊಡದಲ್ಲಿ ನೀರು ತುಂಬಿಕೊಳ್ಳುತ್ತಿದ್ದುದನ್ನು ನೋಡಿದನು. ಆನಂದನು ಅವಳನ್ನು ಸ್ವಲ್ಪ ನೀರು ಕೊಡಲು ಕೇಳಿದನು.

೪. ಪ್ರಕೃತಿ ಎಂಬ ಹೆಸರಿನ ಆ ಹುಡುಗಿಯು ತಾನು ಚಂಡಾಲಿಕೆಯೆಂದು ನೀರು ಕೊಡಲು ನಿರಾಕರಿಸಿದಳು.

೫. ಆನಂದನು "ನನಗೆ ಬೇಕಾಗಿರುವುದು ನೀರು. ನನಗೆ ನಿನ್ನ ಜಾತಿ ಬೇಕಾಗಿಲ್ಲ" ಎಂದನು. ಆಗ ಆ ಹುಡುಗಿಯು ತನ್ನ ಕೊಡದಿಂದ ಸ್ವಲ್ಪ ನೀರನ್ನು ಅವನಿಗೆ ಕೊಟ್ಟಳು.

೬. ಆಮೇಲೆ ಆನಂದನು ಚೇತವನದ ಕಡೆ ಹೊರಟನು. ಆ ಹುಡುಗಿಯು ಅವನ ಹಿಂದೆಯೇ ಬಂದು ಅವನು ಎಲ್ಲಿ ತಂಗಿದ್ದಾನೆಂಬುದನ್ನೂ, ಅವನ ಹೆಸರು ಆನಂದನೆಂಬುದನ್ನೂ, ಅವನು ಬುದ್ಧನ ಅನುಯಾಯಿ ಎಂದೂ ತಿಳಿದುಕೊಂಡಳು.

೭. ಮನೆಗೆ ಹಿಂದಿರುಗಿದ ನಂತರ ಆ ಹುಡುಗಿ ನಡೆದುದನ್ನೆಲ್ಲ ತನ್ನ ತಾಯಿಗೆ ಹೇಳಿ, ನೆಲದ ಮೇಲೆ ಬಿದ್ದು ಅಳತೊಡಗಿದಳು.

೮. ತಾಯಿಯು ಅಳಲು ಕಾರಣವೇನೆಂದು ಕೇಳಿದಳು. ಆಗ ಆ ಹುಡುಗಿಯ ಪೂರ್ಣ ವೃತ್ತಾಂತವನ್ನು ತಿಳಿಸಿ, "ನನಗೆ ಮದುವೆ ಮಾಡುವುದಾದರೆ, ನಾನು ಆನಂದನನ್ನು ಮಾತ್ರ ಮದುವೆಯಾಗುತ್ತೇನೆ. ನಾನು ಮತ್ತಾರನ್ನೂ ಮದುವೆಯಾಗುವುದಿಲ್ಲ" ಎಂದಳು.

೯. ಆಗ ಅವಳ ತಾಯಿ ವಿಚಾರಣೆ ಪ್ರಾರಂಭಿಸಿದಳು ಹಾಗೂ ಮನೆಗೆ ಹಿಂದಿರುಗಿದ ನಂತರ ಅಂಥ ಮದುವೆ ಅಸಾಧ್ಯವೆಂಬುದಾಗಿಯೂ, ಆನಂದನು ಬ್ರಹ್ಮಚರ್ಯೆಯ ವ್ರತ ಕೈಗೊಂಡಿದ್ದಾನೆ ಎಂಬುದಾಗಿಯೂ ತಿಳಿಸಿದಳು.

೧೦. ಈ ಸುದ್ದಿಯನ್ನು ಕೇಳಿದ ಹುಡುಗಿಗೆ ಅತೀವ ದುಃಖವಾಗಿ, ತಿನ್ನುವುದನ್ನೇ ಬಿಟ್ಟಳು. ವಿಧಿ ಇದ್ದಂತಾಗಲಿ ಎಂದು ಪರಿಗಣಿಸಲು ಆಕೆ ಸಿದ್ಧಳಾಗಲಿಲ್ಲ. ಆದುದರಿಂದ ಅವಳು "ಅಮ್ಮಾ, ನಿನಗೆ ಮಾಯ–ಮಾಟದ ಕಲೆ ಗೊತ್ತಿದೆಯಲ್ಲವೆ? ಅದನ್ನು ಬಳಸಿಕೊಂಡು ಏಕೆ ನಮ್ಮ ಉದ್ದೇಶವನ್ನು ಕೈಗೂಡಿಸಿಕೊಳ್ಳಬಾರದು?" ಎಂದು ಕೇಳಿದಳು. ಅದಕ್ಕೆ ತಾಯಿಯು "ನೋಡೋಣ, ಸಾಧ್ಯವಾದುದನ್ನೆಲ್ಲ ಮಾಡುತ್ತೇನೆ" ಎಂದಳು.

೧೧. ಮಾತಂಗಿಯು ಆನಂದನನ್ನು ಊಟಕ್ಕೆ ತನ್ನ ಮನೆಗೆ ಕರೆದಳು. ಹುಡುಗಿಗೆ ಬಹಳ ಸಂತೋಷವಾಯಿತು. ಆಗ ತಾಯಿ ತನ್ನ ಮಗಳು ಆನಂದನನ್ನು ಮದುವೆಯಾಗಬೇಕೆಂಬ ಇಚ್ಛೆಯುಳ್ಳವಳಾಗಿದ್ದಾಳೆಂಬುದನ್ನು ಅವನಿಗೆ ತಿಳಿಸಿದಳು. ಅದಕ್ಕೆ ಆನಂದನು "ನಾನು ಬ್ರಹ್ಮಚರ್ಯವ್ರತ ಕೈಗೊಂಡಿದ್ದೇನೆ. ಆದುದರಿಂದ ನಾನು ಯಾವ ಹೆಂಗಸನ್ನೂ ಮದುವೆಯಾಗುವಂತಿಲ್ಲ" ಎಂದುತ್ತರಿಸಿದನು.

೧೨. "ನೀನು ನನ್ನ ಮಗಳನ್ನು ಮದುವೆಯಾಗದಿದ್ದರೆ, ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅಷ್ಟೊಂದು ನಿನ್ನಿಂದ ಮೋಹಿತಳಾಗಿದ್ದಾಳೆ" ಎಂದು ಮಾತಂಗಿ ಆನಂದನಿಗೆ ತಿಳಿಸಿದಳು. ಅದಕ್ಕೆ ಆನಂದನು "ನಾನೇನೂ ಮಾಡಲಾರೆ" ಎಂದುತ್ತರಿಸಿದನು.

೧೩. ಮಾತಂಗಿ ಒಳಗೆ ಹೋಗಿ ತನ್ನ ಮಗಳಿಗೆ ಆನಂದನು ನಿನ್ನನ್ನು ಮದುವೆಯಾಗಲು ನಿರಾಕರಿಸುತ್ತಿರುವುದಾಗಿ ಹೇಳಿದಳು.

೧೪. ಮಗಳು "ಅಮ್ಮಾ, ನಿನ್ನ ಮಾಟ ಮಂತ್ರ ಎಲ್ಲ ಎಲ್ಲಿ?" ಎಂದು ಅಳುತ್ತಾ ಕೇಳಿದಳು. ಅದಕ್ಕೆ ತಾಯಿ "ನನ್ನ ಮಾಟ ಮಂತ್ರ ತಥಾಗತನ ವಿರುದ್ಧ ಕೆಲಸ ಮಾಡಲಾರದು" ಎಂದಳು.

೧೫. ಹುಡುಗಿ ಕೂಗಾಡುತ್ತಾ ಹೇಳಿದಳು: "ಬಾಗಿಲು ಮುಚ್ಚು; ಅವನನ್ನು ಹೊರಹೋಗಲು ಬಿಡಬೇಡ. ಈ ರಾತ್ರಿಯೇ ಅವನು ನನ್ನ ಗಂಡನೇಕಾಗುವುದಿಲ್ಲ ನೋಡುತ್ತೇನೆ."

೧೬. ತಾಯಿಯು ಮಗಳಿಗೆ ಬೇಕಾದುದನ್ನೇ ಮಾಡಿದಳು. ರಾತ್ರಿಯಾದ ಮೇಲೆ ತಾಯಿಯು ಆ ಕೋಣೆಗೆ ಒಂದು ಹಾಸಿಗೆ ತಂದಳು. ಹುಡುಗಿ, ತನ್ನಲ್ಲಿದ್ದ ಉತ್ತಮ ಬಟ್ಟೆಗಳನ್ನು ಧರಿಸಿ ಒಳಗೆ ಕಾಲಿಟ್ಟಳು. ಆದರೆ ಆನಂದ ವಿಚಲಿತನಾಗಲಿಲ್ಲ.

೧೭. ಕೊನೆಗೆ ತಾಯಿ ಮಾಟ ಮಂತ್ರ ಪ್ರಯೋಗಿಸಿದಳು. ಇದರ ಪರಿಣಾಮವಾಗಿ ಕೋಣೆಯಲ್ಲಿ ಬೆಂಕಿ ಹತ್ತಿಕೊಂಡಿತು. ಆಗ ತಾಯಿ ಆನಂದನ ಬಟ್ಟೆಗಳನ್ನು ಹಿಡಿದುಕೊಂಡು "ನೀನು ನನ್ನ ಮಗಳನ್ನು ಮದುವೆಯಾಗಲು ಒಪ್ಪದಿದ್ದರೆ, ನಿನ್ನನ್ನು ಈ ಬೆಂಕಿಯಲ್ಲಿ ಒಗೆಯುತ್ತೇನೆ" ಎಂದಳು. ಆದರೂ ಆನಂದ ಒಪ್ಪಲಿಲ್ಲ. ಕೊನೆಗೆ ತಾಯಿ ಮತ್ತು ಮಗಳು ಅಸಹಾಯಕರಾಗಿ, ಅವನನ್ನು ಬಿಡುಗಡೆ ಮಾಡಿದರು.

೧೮. ಆನಂದನು ಹಿಂತಿರುಗಿದ ನಂತರ ಪವಿತ್ರ ಪ್ರಭುವಿಗೆ ನಡೆದುದನ್ನೆಲ್ಲ ತಿಳಿಸಿದನು.

೧೯. ಎರಡನೆಯ ದಿನ ಆ ಹುಡುಗಿ ಆನಂದನನ್ನು ಹುಡುಕಿಕೊಂಡು ಜೇತವನಕ್ಕೆ ಬಂದಳು. ಆನಂದನು ಭಿಕ್ಷಾಟನೆಗೆಂದು ಹೊರಟಿದ್ದನು. ಅವಳನ್ನು ನೋಡಿದ ಆನಂದನು ಅವಳಿಂದ ತಪ್ಪಿಸಿಕೊಳ್ಳಲು ನೋಡಿದನು. ಆದರೆ ಆ ಹುಡುಗಿ ಅವನು ಹೋದಲ್ಲೆಲ್ಲಾ ಅವನನ್ನು ಹಿಂಬಾಲಿಸಿದಳು.

೨೦. ಆನಂದನು ಜೇತವನಕ್ಕೆ ಹಿಂತಿರುಗಿದಾಗ ವಿಹಾರದ ಬಾಗಿಲಲ್ಲೇ ಆ ಹುಡುಗಿ ಕಾಯುತ್ತಿರುವುದನ್ನು ನೋಡಿದನು.

೨೧. ಆ ಹುಡುಗಿ ತನ್ನ ಹಿಂದೆ ಬಿದ್ದಿರುವುದನ್ನು ಆನಂದನು ಪವಿತ್ರಾತ್ಮನಿಗೆ ತಿಳಿಸಿದನು. ಪವಿತ್ರಾತ್ಮನು ಅವಳನ್ನು ಕರೆಸಿದನು.

೨೨. ಪವಿತ್ರಾತ್ಮನ ಮುಂದೆ ಆ ಹುಡುಗಿ ಬಂದಾಗ, ಅವನು, ಆನಂದನ ಹಿಂದೇಕೆ ಬಿದ್ದಿದ್ದೀಯೆಂದು ಕೇಳಿದನು. ಅದಕ್ಕೆ ಆ ಹುಡುಗಿಯು ಅವನನ್ನು ಮದುವೆಯಾಗಬೇಕೆಂಬ ಉದ್ದೇಶ ತನಗಿದೆಯೆಂದು ತಿಳಿಸಿ "ಅವನು ಅವಿವಾಹಿತನೆಂದು ಕೇಳಿದ್ದೇನೆ ಮತ್ತು ನಾನೂ ಸಹ ಅವಿವಾಹಿತಳೇ" ಎಂದಳು.

೨೩. ಅದಕ್ಕೆ ಭಗವಾನ್ ಹೀಗೆ ಹೇಳಿದ: "ಆನಂದ ಒಬ್ಬ ಭಿಕ್ಷು. ಅವನ ತಲೆಯಲ್ಲಿ ಕೂದಲಿಲ್ಲ. ನೀನೂ ಪೂರ್ಣವಾಗಿ ತಲೆ ಬೋಳಿಸಿಕೊಂಡರೆ, ಮುಂದೆ ಏನು ಮಾಡಬಹುದೋ ನೋಡೋಣ."

೨೪. ಅದಕ್ಕೆ ಆ ಹುಡುಗಿಯು "ನಾನು ಅದಕ್ಕೆ ಸಿದ್ಧಳಿದ್ದೇನೆ" ಎಂದು ಉತ್ತರಿಸಿದಳು. ಭಗವಾನ್ "ತಲೆ ಬೋಳಿಸಿಕೊಳ್ಳಲು ನೀನು ನಿನ್ನ ತಾಯಿಯ ಅಪ್ಪಣೆ ಪಡೆಯಬೇಕು" ಎಂದನು.

೨೫. ಮನೆಗೆ ಹಿಂದಿರುಗಿದ ಆ ಹುಡುಗಿ ತಾಯಿಗೆ ಹೀಗೆ ಹೇಳಿದಳು: "ಅಮ್ಮಾ, ನೀನು ಏನನ್ನು ಸಾಧಿಸುವಲ್ಲಿ ಸೋತೆಯೋ ಅಲ್ಲಿ ನಾನು ಗೆದ್ದಿದ್ದೇನೆ. ನಾನು ತಲೆ ಬೋಳಿಸಿಕೊಂಡರೆ ಆನಂದನೊಡನೆ ನನ್ನನ್ನು ಮದುವೆ ಮಾಡಲು ಭಗವಾನ್ ವಚನವಿತ್ತಿದ್ದಾರೆ."

೨೬. ತಾಯಿಗೆ ಇದರಿಂದ ಸಿಟ್ಟುಬಂದು, "ನೀನು ಹೀಗೆ ಮಾಡಬಾರದು. ನೀನು ನನ್ನ ಮಗಳು. ನೀನು

ನಿನ್ನ ಕೂದಲನ್ನು ಉಳಿಸಿಕೊಳ್ಳಬೇಕು. ಆನಂದನಂಥ ಶ್ರಮಣನನ್ನು ಮದುವೆಯಾಗಲು ಅಷ್ಟೊಂದು ಏಕೆ ಆಸಕ್ತಳಾಗಿದ್ದೀಯಾ? ಅವನಿಗಿಂತ ಇನ್ನೂ ಒಳ್ಳೆಯವನೊಂದಿಗೆ ನಿನ್ನ ಮದುವೆ ಮಾಡುತ್ತೇನೆ" ಎಂದಳು.

೨೭. ಅದಕ್ಕೆ ಮಗಳು ಹೀಗೆಂದಳು: "ನಾನು ಸಾಯುತ್ತೇನೆ ಅಥವಾ ಆನಂದನನ್ನು ಮದುವೆಯಾಗುತ್ತೇನೆಯೇ ಹೊರತು, ನನಗೆ ಮೂರನೇ ದಾರಿಯೇ ಇಲ್ಲ."

೨೮. ತಾಯಿ "ನನಗೇಕೆ ಈ ರೀತಿ ಅವಮಾನ ಮಾಡುತ್ತಿದ್ದೀಯಾ?" ಎಂದು ಕೇಳಿದಳು. ಅದಕ್ಕೆ ಆ ಹುಡುಗಿ "ನೀನು ನನ್ನನ್ನು ಪ್ರೀತಿಸುತ್ತಿದ್ದರೆ, ನಾನು ಇಚ್ಛಿಸಿದಂತೆ ಮಾಡಲು ನನ್ನನ್ನು ಬಿಡು" ಎಂದಳು.

೨೯. ಕೊನೆಗೆ ತಾಯಿ ತನ್ನ ಆಕ್ಷೇಪಣೆಯನ್ನು ಹಿಂತೆಗೆದುಕೊಂಡಳು ಹಾಗೂ ಮಗಳು ತನ್ನ ತಲೆ ಬೋಳಿಸಿಕೊಂಡಳು.

೩೦. ಅನಂತರ ಅವಳು ಪವಿತ್ರ ಪ್ರಭುವಿನ ಎದುರಿಗೆ ಕಾಣಿಸಿಕೊಂಡು "ತಮ್ಮ ಆದೇಶದಂತೆ ನಾನು ನನ್ನ ತಲೆ ಬೋಳಿಸಿಕೊಂಡಿದ್ದೇನೆ" ಎಂದಳು.

೩೧. ಆಗ ಪವಿತ್ರ ಪ್ರಭುವು ಅವಳನ್ನು "ನಿನಗೇನು ಬೇಕು? ಅವನ ದೇಹದ ಯಾವ ಭಾಗ ನಿನಗೆ ಬಹಳ ಇಷ್ಟ?" ಎಂದು ಕೇಳಿದನು. ಅದಕ್ಕೆ ಆ ಹುಡುಗಿ "ಅವನ ಮೂಗನ್ನು ಪ್ರೀತಿಸುತ್ತೇನೆ; ಅವನ ಬಾಯನ್ನು ಪ್ರೀತಿಸುತ್ತೇನೆ. ಅವನ ಕಿವಿಗಳನ್ನು ಪ್ರೀತಿಸುತ್ತೇನೆ. ಅವನ ದನಿಯನ್ನು ಪ್ರೀತಿಸುತ್ತೇನೆ. ಅವನ ಕಣ್ಣನ್ನು ಪ್ರೀತಿಸುತ್ತೇನೆ ಮತ್ತು ಅವನ ನಡಿಗೆಯನ್ನು ಪ್ರೀತಿಸುತ್ತೇನೆ" ಎಂದಳು.

೩೨. ಆಗ ಪವಿತ್ರ ಪ್ರಭುವು ಆ ಹುಡುಗಿಗೆ ಹೀಗೆ ಹೇಳಿದನು: "ಕಣ್ಣು ಕಣ್ಣೀರಿನ ತವರು ಎಂಬುದು, ಮೂಗು ಕೊಳೆಯ ತವರು ಎಂಬುದು, ಬಾಯಿ ಎಂಜಲಿನ ತವರು, ಕಿವಿ ಕೊಳೆಯ ತವರು, ದೇಹವು ಮಲಮೂತ್ರಗಳ ತವರು ಎಂಬುದು ನಿನಗೆ ಗೊತ್ತೇ?"

೩೩. "ಗಂಡಸರು ಮತ್ತು ಹೆಂಗಸರು ಒಟ್ಟಿಗೆ ಸೇರಿದಾಗ ಅವರು ಮಕ್ಕಳನ್ನು ಹುಟ್ಟಿಸುತ್ತಾರೆ. ಎಲ್ಲಿ ಜನನವಿರುತ್ತದೆಯೋ ಅಲ್ಲಿ ಸಾವೂ ಇರುತ್ತದೆ. ಎಲ್ಲಿ ಸಾವು ಇರುತ್ತದೆಯೋ ಅಲ್ಲಿ ದುಃಖವೂ ಇರುತ್ತದೆ. ನನ್ನ ಪ್ರೀತಿಯ ಹುಡುಗಿ, ಆನಂದನನ್ನು ಮದುವೆಯಾಗಿ ನೀನು ಏನು ಸುಖ ಪಡುತ್ತೀಯೋ ನನಗೆ ಗೊತ್ತಿಲ್ಲ."

೩೪. ಆಗ ಆ ಹುಡುಗಿ ಯೋಚಿಸತೊಡಗಿದಳು. ತಾನು ಆನಂದದೊಡನೆ ಮಾಡಿಕೊಳ್ಳಬೇಕೆಂದು ಅಷ್ಟೊಂದು ಆಶಿಸಿದ್ದ ಮದುವೆಗೆ ಯಾವ ಧ್ಯೇಯವೂ ಇಲ್ಲವೆಂಬುದನ್ನು ಒಪ್ಪಿಕೊಂಡ ಅವಳು ಪವಿತ್ರ ಪ್ರಭುವಿಗೆ ಹಾಗೆಂದು ಹೇಳಿದಳು.

೩೫. ಪವಿತ್ರ ಪ್ರಭುವಿಗೆ ವಂದಿಸಿದ ನಂತರ ಆ ಹುಡುಗಿ ಹೇಳಿದಳು: "ಅಜ್ಞಾನದಿಂದಾಗಿ ನಾನು ಆನಂದನ ಬೆನ್ನ ಹಿಂದೆ ಬಿದ್ದಿದ್ದೆ. ಈಗ ನನ್ನ ಬುದ್ಧಿ ಬೆಳಕನ್ನು ಕಾಣುತ್ತಿದೆ. ನೌಕೆಯ ದುರ್ಘಟನೆಯ ನಂತರ ದಡ ಕಾಣುವ ನಾವಿಕಳಂತಿದ್ದೇನೆ ನಾನು. ರಕ್ಷಣೆಯಿಲ್ಲದ ಮುದುಕನೊಬ್ಬನಿಗೆ ರಕ್ಷಣೆ ಸಿಕ್ಕಂತಾಗಿದೆ, ನನ್ನ ಸ್ಥಿತಿ. ಹೊಸ ದೃಷ್ಟಿಯನ್ನು ಪಡೆದ ಕುರುಡನಂತಿದ್ದೇನೆ. ಪವಿತ್ರ ಪ್ರಭುಗಳು ತಮ್ಮ ಹಿತನುಡಿಯಿಂದ, ನಿದ್ರೆಯಿಂದ ನನ್ನನ್ನು ಎಚ್ಚರಿಸಿದ್ದಾರೆ."

೩೬. "ನೀನು ಪವಿತ್ರಳಾಗಿದ್ದೀ ಪ್ರಕೃತಿ. ಏಕೆಂದರೆ, ನೀನು ಚಂಡಾಲಿಕೆಯಾಗಿದ್ದರೂ, ಕುಲೀನ ಪುರುಷರಿಗೂ, ಕುಲೀನ ಸ್ತ್ರೀಯರಿಗೂ ಮಾದರಿಯಾಗಿದ್ದೀಯಾ. ನೀನು ಕೀಳು ಜಾತಿಯವಳು. ಆದರೆ ಬ್ರಾಹ್ಮಣರೇ

ನಿನ್ನಿಂದ ಪಾಠ ಕಲಿಯುತ್ತಾರೆ. ನ್ಯಾಯಸಮ್ಮತ ಹಾಗೂ ಧರ್ಮಪಥವನ್ನು ಬಿಡಬೇಡ, ಆಗ ನೀನು ಸಿಂಹಾಸನವನ್ನು ಅಲಂಕರಿಸಿದ ರಾಣಿಯರಿಗಿಂತಲೂ ಹೆಚ್ಚಾಗಿ ಪ್ರಜ್ವಲಿಸುವೆ."

೩೭. ಮದುವೆಯು ಸಾಧ್ಯವಾಗದಿದ್ದಾಗ, ಭಿಕ್ಷುಣಿಯರ ಸಂಘವನ್ನು ಸೇರುವ ಮಾರ್ಗವೊಂದೇ ಅವಳ ಪಾಲಿಗೆ ಉಳಿದಿತ್ತು.

೩೮. ತನ್ನ ಈ ಇಚ್ಛೆಯನ್ನು ವ್ಯಕ್ತಪಡಿಸಿದಾಗ, ಅವಳು ತೀರ ಕೆಳಜಾತಿಯವಳಾದರೂ ಅವಳನ್ನು ಸಂಘಕ್ಕೆ ಸೇರಿಸಿಕೊಳ್ಳಲಾಯಿತು.

# ಭಾಗ : ೮
# ಪತಿತರ ಮತ್ತು ಅಪರಾಧಿಗಳ ಪರಿವರ್ತನೆ

೧. ಅಲೆಮಾರಿಯ ಪರಿವರ್ತನೆ
೨. ದರೋಡೆಕಾರ ಅಂಗುಲೀಮಾಲನ ಪರಿವರ್ತನೆ
೩. ಇತರ ಅಪರಾಧಿಗಳ ಪರಿವರ್ತನೆ
೪. ಪರಿವರ್ತನೆಯ ಗಂಡಾಂತರ

# ೧. ಅಲೆಮಾರಿಯ ಪರಿವರ್ತನೆ

೧. ಹಿಂದಿನ ಕಾಲದಲ್ಲಿ ಒಬ್ಬ ಅಸ್ತವ್ಯಸ್ತ ವ್ಯಕ್ತಿ ರಾಜಗೃಹದಲ್ಲಿ ವಾಸಿಸುತ್ತಿದ್ದನು. ಅವನು ತನ್ನ ತಂದೆತಾಯಿಗಳನ್ನು ಗೌರವಿಸುತ್ತಿರಲಿಲ್ಲ ಅಥವಾ ತನ್ನ ಹಿರಿಯರಿಗೆ ಮರ್ಯಾದೆ ಕೊಡುತ್ತಿರಲಿಲ್ಲ. ಆದರೆ ಅವನು ತಪ್ಪು ಮಾಡಿದಾಗ ಯಜ್ಞ ಮತ್ತು ಸೂರ್ಯ–ಚಂದ್ರ ಹಾಗೂ ಅಗ್ನಿಯ ಆರಾಧನೆಯನ್ನು ಮಾಡುತ್ತಿದ್ದನು. ಅದರಿಂದ ಪುಣ್ಯ ಬರುತ್ತದೆ, ತಾನು ಸಂತೋಷವಾಗಿರಬಹುದೆಂದು ನಂಬಿದ್ದನು.

೨. ಆದರೆ ತನ್ನೆಲ್ಲ ದೈಹಿಕ ಶ್ರಮಗಳಿಂದಲೂ, ಯಜ್ಞಯಾಗಾದಿಗಳಿಂದಲೂ ಅವನಿಗೆ ಮೂರು ವರ್ಷಗಳ ನಿರಂತರ ಶ್ರಮಸಾಧನೆಯಿಂದ ಏನೂ ಶಾಂತಿ ಸಿಗಲಿಲ್ಲ.

೩. ಕೊನೆಗೆ ಅವನು ಶ್ರಾವಸ್ತಿಗೆ ಹೋಗಿ ಬುದ್ಧನ ಬಗ್ಗೆ ವಿಚಾರಿಸಲು ನಿರ್ಧರಿಸಿದನು. ಅಲ್ಲಿಗೆ ಹೋಗಿ ಅವರ ದೇಹಕಾಂತಿಯನ್ನು ನೋಡಿ ಅವರ ಪಾದದ ಬಳಿ ಅಡ್ಡಬಿದ್ದು ತನಗೆ ತುಂಬ ಸಂತೋಷವಾಯಿತು ಎಂದನು.

೪. ಆಗ ಬುದ್ಧದೇವ ಪ್ರಾಣಿ ಬಲಿಯ ಅವಿವೇಕವನ್ನು ಮತ್ತು ಆ ಬಗೆಯ ಆಚರಣೆಗಳ ನಿರರ್ಥಕತೆಯನ್ನು ವಿವರಿಸಿ ಹೃದಯವನ್ನು ತಟ್ಟದ, ಸಂಬಂಧಿತರ ಬಗ್ಗೆ ಅಪಾರ ಗೌರವವಿಲ್ಲದ ಅಥವಾ ಕರ್ತವ್ಯ ನೆರವೇರಿಸದ ಎಲ್ಲವೂ ವ್ಯರ್ಥ ಎಂದನು. ಕೊನೆಗೆ ಕೆಲವು ಗಾಥಾಗಳನ್ನು ಉಚ್ಚರಿಸಿದನು. ಅವು ವೈಭವಪೂರ್ಣವಾಗಿದ್ದವು. ಅವನ ವ್ಯಕ್ತಿ ಪ್ರಭೆಯಿಂದ ಸುತ್ತಮುತ್ತಣ ಪ್ರದೇಶವೆಲ್ಲ ಜಾಜ್ವಲ್ಯಮಾನವಾಗಿತ್ತು.

೫. ಹಾಗಾಗಿ ಹಳ್ಳಿಗರು, ವಿಶೇಷವಾಗಿ ಮಕ್ಕಳ ತಂದೆತಾಯಿಗಳು ಅವನನ್ನು ಆರಾಧಿಸಲು ಅವನ ಬಳಿ ಬರುತ್ತಿದ್ದರು.

೬. ತಂದೆತಾಯಿಗಳನ್ನು, ಅವರು ತಮ್ಮ ಮಕ್ಕಳ ಬಗ್ಗೆ ಹೇಳುತ್ತಿದ್ದ ವೃತ್ತಾಂತಗಳನ್ನು ಕೇಳಿ ಬುದ್ಧ ಮುಗುಳ್ನಕ್ಕು ಈ ಗಾಥಾಗಳನ್ನು ಪಠಿಸುತ್ತಿದ್ದನು.

೭. "ಮಹಾಪುರುಷ ದುರಾಸೆಯಿಂದ ಸಂಪೂರ್ಣವಾಗಿ ಮುಕ್ತವಾಗಿರುತ್ತಾನೆ. ಜ್ಞಾನೋದಯವನ್ನು ಪಡೆದಿರುವ ಆತ ಜ್ಯೋತಿ ಇರುವ ಜಾಗದಲ್ಲಿ ನೆಲೆಸಿರುತ್ತಾನೆ. ಒಂದು ಪಕ್ಷ ಅವನು ದುಃಖಕ್ಕೆ ಒಳಗಾದರೂ ಸಂತೋಷಪಡುತ್ತಿರುತ್ತಾನೆ. ಭಯಭೀತನಾಗದೆ ಅವನು ತನ್ನ ವಿವೇಕವನ್ನು ಪ್ರಕಟಿಸುತ್ತಾನೆ.

೮. "ವಿವೇಕಿಯಾದ ಮನುಷ್ಯ (ಭದ್ರ) ಲೌಕಿಕ ವ್ಯವಹಾರದಲ್ಲಿ ಆಸಕ್ತನಾಗಿರುವುದಿಲ್ಲ; ಅವನು ಸಂಪತ್ತು, ಮಕ್ಕಳು ಅಥವಾ ಆಸ್ತಿಪಾಸ್ತಿಗಳನ್ನು ಇಷ್ಟಪಡುವುದಿಲ್ಲ; ಸದಾ ಎಚ್ಚರಿಕೆಯಿಂದ ತತ್ತ್ವಗಳನ್ನು ಪಾಲಿಸುತ್ತಾನೆ. ಪರಮ ಜ್ಞಾನಮಾರ್ಗದಲ್ಲಿ ನಡೆಯುವುದರಿಂದ ವಿಚಿತ್ರ ರೀತಿಯ ಸಿದ್ಧಾಂತವನ್ನು (ಅಥವಾ ಐಶ್ವರ್ಯ ಅಥವಾ ಸನ್ಮಾನಗಳನ್ನು) ಬೆನ್ನಟ್ಟುವುದಿಲ್ಲ.

೯. "ಚಂಚಲತೆಯ ಸ್ವಭಾವವನ್ನು ಅರಿತಿರುವ ಜ್ಞಾನಿಯು ತನ್ನ ಗೆಳೆಯನ ಅಸ್ಥಿರವಾದ ಮನಸ್ಸನ್ನು ಬದಲಾಯಿಸಲು ಮರಳಿನ ಮಧ್ಯದಲ್ಲಿರುವ ಮರದಂತೆ ಎಲ್ಲ ಪ್ರಯತ್ನವನ್ನೂ ಮಾಡುತ್ತಾನೆ, ಅಶುದ್ಧ ಮಾರ್ಗದಿಂದ ಶುದ್ಧಮಾರ್ಗಕ್ಕೆ ಅವನನ್ನು ತರುತ್ತಾನೆ."

## ೨. ದರೋಡೆಕೋರ ಅಂಗುಲೀಮಾಲನ ಪರಿವರ್ತನೆ

೧. ಕೋಸಲದ ರಾಜನಾದ ಪ್ರಸೇನಜಿತನ ಸಾಮ್ರಾಜ್ಯದಲ್ಲಿ ಅಂಗುಲೀಮಾಲನೆಂಬ ಹೆಸರಿನ ದರೋಡೆಕೋರ ಇದ್ದನು. ಕೊಲೆಗಡುಕನ ಹಸ್ತಗಳು ರಕ್ತಸಿಕ್ತವಾಗಿದ್ದವು. ಅವನು ಯಾವುದೇ ಜೀವಂತ ವ್ಯಕ್ತಿಯ ಬಗ್ಗೆ ಏನೂ ಕನಿಕರ ತೋರಿಸದೆ ಕೊಲ್ಲುತ್ತಿದ್ದನು. ಅವನಿಂದಾಗಿ ಹಳ್ಳಿಗಳು ಹಳ್ಳಿಗಳಾಗಿ ಉಳಿದಿರಲಿಲ್ಲ, ನಗರಗಳು ನಗರಗಳಾಗಿ ಉಳಿದಿರಲಿಲ್ಲ, ನಾಡುಗಳು ನಾಡುಗಳಾಗಿ ಉಳಿದಿರಲಿಲ್ಲ.

೨. ಅವನು ತಾನು ಕೊಂದ ಪ್ರತಿಯೊಬ್ಬ ನರಮನುಷ್ಯನ ಬೆರಳನ್ನು ತೆಗೆದುಕೊಂಡು ತನಗೆ ಮಾಲೆ ಮಾಡಿಕೊಳ್ಳುತ್ತಿದ್ದನು. ಹಾಗಾಗಿ ಅವನಿಗೆ 'ಅಂಗುಲೀಮಾಲ' ಎಂಬ ಹೆಸರು ಬಂತು.

೩. ಒಮ್ಮೆ ಬುದ್ಧದೇವ ಶ್ರಾವಸ್ತಿಯ ಜೇತವನದಲ್ಲಿ ತಂಗಿದ್ದಾಗ, ಆ ಕೊಲೆಗಡುಕ ಅಂಗುಲೀಮಾಲ ಮಾಡುತ್ತಿದ್ದ ಹಾವಳಿಗಳ ಬಗ್ಗೆ ಕೇಳಿದರು. ಅವನನ್ನು ಸದ್ವ್ಯಕ್ತಿಯನ್ನಾಗಿ ಮಾಡಲು ತಥಾಗತ ನಿರ್ಧರಿಸಿದರು. ಒಂದು ದಿನ ತಮ್ಮ ಊಟವನ್ನು ಮುಗಿಸಿ ಹಾಸಿಗೆಯನ್ನು ಕಟ್ಟಿಟ್ಟು, ಕಾಷಾಯ ಧರಿಸಿ, ಭಿಕ್ಷಾಪಾತ್ರೆ ಹಿಡಿದು, ದರೋಡೆಕೋರ ಅಂಗುಲೀಮಾಲನನ್ನು ಹುಡುಕುತ್ತಾ ಹೋದರು.

೪. ಅವರು ಅತ್ತ ಹೋಗುತ್ತಿರುವುದನ್ನು ನೋಡಿ ಗೋಪಾಲಕರು, ಕುರುಬರು, ಹೊಲ ಉಳುವವರು ಮತ್ತು ದಾರಿಹೋಕರು ಅವರನ್ನು ಕೂಗಿ ಹೇಳಿದರು: "ಭಿಕ್ಕು, ಆ ಕಡೆ ಹೋಗಬೇಡಿ, ಆ ದಾರಿ ದರೋಡೆಕೋರ ಅಂಗುಲೀಮಾಲನ ಕಡೆಗೆ ಹೋಗುತ್ತೆ.

೫. "ಅದೇ, ಹತ್ತು, ಇಪ್ಪತ್ತು, ಮೂವತ್ತು ಅಥವಾ ನಲವತ್ತು ಜನರಿರುವ ತಂಡ ಒಟ್ಟಿಗೇ ಈ ದಾರಿಯಲ್ಲಿ ಹೋದರೂ ಆ ಇಡೀ ಗುಂಪು ಆ ದರೋಡೆಕೋರನ ಕೈಗೆ ಬೀಳುತ್ತದೆ!" ಆದರೆ ಒಂದು ಮಾತನ್ನೂ ಆಡದೆ ತಥಾಗತ ತನ್ನ ದಾರಿಯನ್ನು ಕ್ರಮಿಸಿದರು.

೬. ಎರಡನೆಯ ಬಾರಿ, ಮತ್ತೆ ಮೂರನೆಯ ಬಾರಿ ಅಲ್ಲಿ ಹತ್ತಿರವಿದ್ದವರೆಲ್ಲ ತಮ್ಮ ಎಚ್ಚರಿಕೆಯನ್ನು ಪುನರುಚ್ಚರಿಸಿದರು. ಆದರೆ ಒಂದು ಮಾತನ್ನೂ ಆಡದೆ ತಥಾಗತ ತನ್ನ ದಾರಿಯನ್ನು ಹಿಡಿದು ನಡೆದರು.

೭. ಭಗವಾನ್ ತನ್ನ ಕಡೆಗೆ ಬರುತ್ತಿರುವುದನ್ನು ದೂರದಿಂದಲೇ ದರೋಡೆಕೋರ ನೋಡಿದ. ಹತ್ತರಿಂದ ಐವತ್ತು ಜನ ಯಾತ್ರಿಕರಿರುವ ತಂಡಗಳೂ ತನ್ನ ದಾರಿಯಲ್ಲಿ ಬರುವುದಕ್ಕೆ ಹೆದರುವಾಗ, ಈ ಒಬ್ಬಂಟಿ ಭಿಕ್ಕು ಏಕಾಏಕಿ ಪಟ್ಟು ಹಿಡಿದು ತನ್ನತ್ತಲೇ ಬರುತ್ತಿರುವುದನ್ನು ನೋಡಿ ಅವನಿಗೆ ಅತೀವ ಆಶ್ಚರ್ಯವಾಯಿತು. ಆ ದರೋಡೆಕೋರ ಈ ಭಿಕ್ಷುವನ್ನು ಹತ್ಯೆಗೈಯಲು ಮನಸ್ಸು ಮಾಡಿದ. ಕತ್ತಿ, ಗುರಾಣಿ, ಬಿಲ್ಲುಬಾಣಗಳಿಂದ ಸಜ್ಜಿತನಾಗಿ ಆ ದರೋಡೆಕೋರ ತಥಾಗತನ ಜಾಡುಹಿಡಿದು ಹೊರಟ.

೮. ಭಗವಾನರು ತಮ್ಮ ರೂಢಿಗತ ಹೆಜ್ಜೆಯಲ್ಲಿ ನಡೆಯುತ್ತಿದ್ದಾಗ, ಆ ದರೋಡೆಕೋರ ಎಷ್ಟೇ ಪ್ರಯತ್ನಿಸಿದರೂ ಅವರನ್ನು ತಲುಪಲಾಗಲಿಲ್ಲ.

೯. "ಇದೊಂದು ಅತ್ಯಾಶ್ಚರ್ಯಕರ ವಿಷಯ. ನಾನು ಇದುವರೆಗೆ ಆನೆ ಅಥವಾ ಕುದುರೆ ಅಥವಾ ರಥ ಅಥವಾ ಜಿಂಕೆ ಎಷ್ಟೇ ವೇಗದಲ್ಲಿ ಹೋಗುತ್ತಿದ್ದರೂ ನಾನು ಯಾವಾಗಲೂ ಅವನ್ನು ಹಿಂದೆ ಹಾಕುತ್ತಿದ್ದೆ. ಆದರೆ ಇವತ್ತು ನಾನೆಷ್ಟೇ ಪ್ರಯತ್ನಪಟ್ಟರೂ ತನ್ನದೇ ರೂಢಿಗತ ಹೆಜ್ಜೆಯಲ್ಲಿ ಮುಂದುವರಿಯುತ್ತಿರುವ ಈ ಭಿಕ್ಷುವನ್ನು ಹಿಂದಿಕ್ಕಲು ನಾನು ಅಸಮರ್ಥನಾಗಿದ್ದೇನೆ" ಎಂದು ದರೋಡೆಕೋರ ಯೋಚಿಸಿದ. ಅವನು ನಿಂತು ತಥಾಗತನನ್ನು

ನಿಲ್ಲುವಂತೆ ಕೂಗಿದನು.

೧೦. ತಾವಿಬ್ಬರೂ ಸಂಧಿಸಿದಾಗ ಭಗವಾನನು ಹೇಳಿದರು: "ನಿನಗೋಸ್ಕರ, ಅಂಗುಲೀಮಾಲ, ನಾನು ನಿಂತಿದ್ದೇನೆ. ಕೆಟ್ಟದ್ದನ್ನು ಮಾಡುತ್ತಿರುವ ನಿನ್ನ ಬದುಕನ್ನು ನೀನು ನಿಲ್ಲಿಸುವೆಯಾ? ನಿನ್ನನ್ನು ಗೆಲ್ಲುವುದಕ್ಕಾಗಿಯೇ ಧರ್ಮದ ದಾರಿಗೆ ನಿನ್ನನ್ನು ತರುವುದಕ್ಕಾಗಿಯೇ ನಿನ್ನನ್ನು ನಾನು ಹುಡುಕಿಕೊಂಡು ಬರುತ್ತಿದ್ದೇನೆ. ನಿನ್ನಲ್ಲಿ ಒಳಿತು ಇನ್ನೂ ಸತ್ತಿಲ್ಲ. ಅದಕ್ಕೆ ನೀನು ಅವಕಾಶ ಮಾಡಿಕೊಟ್ಟರೆ ಅದು ನಿನ್ನನ್ನು ಬದಲಾಯಿಸುತ್ತದೆ."

೧೧. ಭಗವಾನರ ಮಾತಿನಿಂದ ಅಂಗುಲೀಮಾಲ ಸೋತನು. "ಕೊನೆಗೆ ಈ ಮುನಿ ನನ್ನನ್ನು ಬೀಳಿಸಿದ" ಎಂದು ಅಂದುಕೊಂಡ.

೧೨. "ನಿನ್ನ ಪವಿತ್ರ ಮಾತುಗಳಿಂದ ಕೆಟ್ಟ ಕೆಲಸಗಳನ್ನು ನಿರಂತರವಾಗಿ ತ್ಯಜಿಸಲು ನನ್ನನ್ನು ಕೇಳುತ್ತಿದ್ದೀಯೆ. ಅದನ್ನು ಪ್ರಯತ್ನಿಸಲು ನಾನು ಸಿದ್ಧನಾಗಿದ್ದೇನೆ." ಎಂದು ಅಂಗುಲೀಮಾಲ ಉತ್ತರಿಸಿದನು.

೧೩. ಅಂಗುಲೀಮಾಲ ತನಗೆ ಬಲಿಯಾದವರ ಬೆರಳುಗಳ ಮಾಲೆಯನ್ನು ಆಳವಾದ ಕಣಿವೆಗೆ ಎಸೆದು ಗುರುದೇವನ ಪಾದಕ್ಕೆ ಅಡ್ಡಬಿದ್ದು ತನ್ನನ್ನು ಭಿಕ್ಕು ಸಂಘಕ್ಕೆ ಸೇರಿಸಿಕೊಳ್ಳಬೇಕೆಂದು ಅಂಗಲಾಚಿದನು.

೧೪. ದೇವತೆಗಳು ಮತ್ತು ಮನುಷ್ಯರ ಮಾರ್ಗದರ್ಶಿಯಾದ ಭಗವಾನನು "ಭಿಕ್ಷುವೇ, ನನ್ನ ಹಿಂದೆ ಬಾ" ಎಂದು ಹೇಳಿದರು. ಅದಾದಮೇಲೆ ಅಂಗುಲೀಮಾಲ ಭಿಕ್ಷುವಾದ.

೧೫. ಭಿಕ್ಷುವಾಗಿ ಬರುತ್ತಿದ್ದ ಅಂಗುಲೀಮಾಲನ ಜೊತೆಗೆ ಬುದ್ಧ ಈಗ ಶ್ರಾವಸ್ತಿಯ ತನ್ನ ವಿಹಾರಸ್ಥಳದ ದಾರಿಯಲ್ಲಿ ಸಾಗುತ್ತಿದ್ದನು. ಇದೇ ಸಮಯದಲ್ಲಿ ಮಹಾರಾಜ ಪಸೇನದಿಯ ಅರಮನೆಯ ಒಳಭಾಗದ ದ್ವಾರಗಳ ಬಳಿ ಒಂದು ದೊಡ್ಡ ಗುಂಪು ಜೋರಾಗಿ ಕೂಗತೊಡಗಿದ್ದಿತು. ಅವನು ಜಯಿಸಿದ ರಾಜ್ಯದಲ್ಲಿ ಅಂಗುಲೀಮಾಲನೆಂಬ ದರೋಡೆಕೋರನಿದ್ದಾನೆ. ಅವನು ಕೊಳ್ಳೆ ಹೊಡೆಯುತ್ತಿದ್ದಾನೆ. ನಿರಪರಾಧಿ ಜನರನ್ನು ಕೊಲ್ಲುತ್ತಿದ್ದಾನೆ. ಗಾಯಗೊಳಿಸುತ್ತಿದ್ದಾನೆ. ತಾನು ಕೊಂದ ಬಲಿಪಶುಗಳ ಬೆರಳುಗಳನ್ನು ಹಾರವಾಗಿ ಧರಿಸಿ ಗರ್ವದಿಂದ ಮೆರೆಯುತ್ತಿದ್ದಾನೆ. ಆದ್ದರಿಂದ ಅವರು ಅವನನ್ನು "ಹತಮಾಡಿ, ಪ್ರಭುವೆ" ಎಂದು ಕೂಗುತ್ತಿದ್ದರು. ಅವನನ್ನು ನೆಲಸಮ ಮಾಡುತ್ತೇನೆಂದು ಪಸೇನದಿ ಮಾತು ಕೊಟ್ಟನು. ಆದರೆ ಅವನು ಸೋತನು.

೧೬. ಒಂದು ಮುಂಜಾನೆ ಬುದ್ಧನನ್ನು ನೋಡಲು ಪಸೇನದಿ ಮಹಾರಾಜ ವಿಹಾರಸ್ಥಳಕ್ಕೆ ಹೋದನು. ಬುದ್ಧ "ಏನು ವಿಷಯ ಮಹಾರಾಜ? ಮಗಧದ ಸೇನೀಯ ಬಿಂಬಿಸಾರನಿಂದ ತೊಂದರೆಯಾಗಿದೆಯೇ ಅಥವಾ ವೈಶಾಲಿಯ ಲಿಚ್ಛವಿಗಳಿಂದ ಅಥವಾ ಬೇರಾವುದಾದರೂ ವಿರೋಧಿಶಕ್ತಿಯಿಂದ ತೊಂದರೆಯೇ?" ಎಂದು ಕೇಳಿದನು.

೧೭. "ಆ ಬಗೆಯ ಯಾವ ತೊಂದರೆಯೂ ಇಲ್ಲ, ಸ್ವಾಮಿ ನನ್ನ ಸಾಮ್ರಾಜ್ಯದಲ್ಲಿ ಅಂಗುಲೀಮಾಲನೆಂಬ ದರೋಡೆಕೋರನಿದ್ದಾನೆ. ಅವನು ನನ್ನ ರಾಜ್ಯದಲ್ಲಿ ತೊಂದರೆಗಳನ್ನುಂಟುಮಾಡಿ ನನ್ನ ಪ್ರಜೆಗಳನ್ನು ಹಿಂಸಿಸುತ್ತಿದ್ದಾನೆ. ಅವನನ್ನು ಮಟ್ಟ ಹಾಕುವ ನನ್ನ ಪ್ರಯತ್ನಗಳೆಲ್ಲ ವಿಫಲವಾಗಿವೆ."

೧೮. "ಮಹಾರಾಜ, ಈಗ ನೀನು ಮುಂಡನ ಮಾಡಿಸಿಕೊಂಡಿರುವ, ಕಾಷಾಯ ವಸ್ತ್ರಧಾರಿಯಾಗಿರುವ, ಕೊಲೆಮಾಡದ, ಕದಿಯದ, ಸುಳ್ಳು ಹೇಳದ, ದಿನಕ್ಕೊಂದೇ ಊಟ ಮಾಡುವ, ಸದ್ಗುಣ ಮತ್ತು ಸದ್ವರ್ತನೆಯ ಉನ್ನತ ಜೀವನ ನಡೆಸುವ ಅಂಗುಲೀಮಾಲನನ್ನು ನೀನು ಒಂದು ಪಕ್ಷ ನೋಡುವುದಾದರೆ, ಅಂಥವನಿಗೆ ನೀನು ಏನು ಮಾಡಲು ಆಶಿಸುತ್ತೀಯೆ?"

೧೯. "ಸ್ವಾಮಿ, ಆತನಿಗೆ ನಾನು ವಂದಿಸುತ್ತೇನೆ ಅಥವಾ ಅವನನ್ನು ಭೆಟ್ಟಿಯಾಗಲು ಎದ್ದು ನಿಲ್ಲುತ್ತೇನೆ ಅಥವಾ ಅವನನ್ನು ಕುಳ್ಳಿರಿಸಲು ಆಹ್ವಾನಿಸುತ್ತೇನೆ ಅಥವಾ ಕಾಷಾಯವಸ್ತ್ರಗಳು ಮತ್ತು ಇನ್ನಿತರ ಅಗತ್ಯ ವಸ್ತುಗಳನ್ನು ಸ್ವೀಕರಿಸಲು ಆತನನ್ನು ಆಹ್ವಾನಿಸುತ್ತೇನೆ ಅಥವಾ ಆತನಿಗೆ ಸಲ್ಲಬೇಕಾದ ರಕ್ಷಣೆ ಪಾಲನೆ ಮತ್ತು ಸೌಕರ್ಯಗಳನ್ನು ವಿಸ್ತರಿಸುತ್ತೇನೆ. ಆದರೆ ಅಷ್ಟೊಂದು ದುಷ್ಟನೂ ದುರ್ಗತಿ ಹೊಂದಿದವನೂ ಆದ ವ್ಯಕ್ತಿಗೆ ಅಂಥ ಸೌಶೀಲ್ಯದ ಛಾಯೆಯನ್ನಾದರೂ ವಿಸ್ತರಿಸುವುದಾದರೂ ಹೇಗೆ?"

೨೦. ಆ ಗಳಿಗೆಯಲ್ಲಿ ಪೂಜ್ಯ ಅಂಗುಲೀಮಾಲ ಬುದ್ಧನಿಗೆ ತೀರ ಸನಿಹದಲ್ಲಿಯೇ ಕುಳಿತಿದ್ದನು. ಬುದ್ಧ ತನ್ನ ಬಲಗೈಯನ್ನು ನೀಡಿ, "ಮಹಾರಾಜ, ಈತನೇ ಅಂಗುಲೀಮಾಲ!" ಎಂದು ಹೇಳಿದನು.

೨೧. ಈ ಮಾತಿಗೆ ಮಹಾರಾಜನು ಭಯದಿಂದ ದಿಗ್ಭ್ರಾಂತನಾದನು. ಅವನ ಮೈಮೇಲಿನ ರೋಮಗಳೆಲ್ಲ ನೆಟ್ಟಗೆ ನಿಂತವು. ಇದನ್ನು ನೋಡಿ ಬುದ್ಧ "ಮಹಾರಾಜ, ಗಾಬರಿಯಾಗಬೇಡ, ಗಾಬರಿಯಾಗಬೇಡ. ಇಲ್ಲಿ ಗಾಬರಿಗೆ ಯಾವ ಕಾರಣವೂ ಇಲ್ಲ" ಎಂದನು.

೨೨. ಆದ್ದರಿಂದ ಮಹಾರಾಜನ ಗಾಬರಿಗಳು ಮತ್ತು ತಲ್ಲಣಗಳು ತಗ್ಗಿದವು. ಅವನು ಪೂಜ್ಯ ಅಂಗುಲೀಮಾಲನ ಬಳಿಗೆ ಹೋಗಿ, "ನೀವು ನಿಜವಾಗಿಯೂ ಪೂಜ್ಯ ಅಂಗುಲೀಮಾಲರೇ?" ಎಂದು ಪ್ರಶ್ನಿಸಿದನು. "ಹೌದು, ಮಹಾರಾಜ."

೨೩. "ಪೂಜ್ಯರೇ, ನಿಮ್ಮ ತಂದೆತಾಯಿಗಳ ಕುಟುಂಬ ಯಾವುದು?" "ಮಹಾರಾಜ, ನನ್ನ ತಂದೆ ಗಗ್ಗ, ನನ್ನ ತಾಯಿ ಮಂತಣಿ."

೩೩. "ತಾವು ಸುಪ್ರೀತರಾಗಿ, ಗಗ್ಗ–ಮಂತಣಿ ಪುತ್ರರೆ; ನಿಮಗೆ ಎಲ್ಲ ಅಗತ್ಯಗಳನ್ನು ಪೂರೈಸುವ ಹೊಣೆ ನಾನು ಹೊರುತ್ತೇನೆ."

೨೫. ಈಗ ಪೂಜ್ಯ ಅಂಗುಲೀಮಾಲ ಕಾಡಿನಲ್ಲಿ ವಾಸಿಸಲು, ಭಿಕ್ಷಾನ್ನದಿಂದ ಬದುಕಲು, ಮೂರು ಬಟ್ಟೆ ತುಂಡುಗಳಿಗಿಂತ ಹೆಚ್ಚು ಧರಿಸದಿರಲು ಪ್ರತಿಜ್ಞೆ ತೆಗೆದುಕೊಂಡಿರುವುದರಿಂದ ಈಗಾಗಲೇ ಸಂಪೂರ್ಣ ಮೂರು ವಸ್ತ್ರಗಳಿರುವುದರಿಂದ ರಾಜನ ವಿನಂತಿಯನ್ನು ನಿರಾಕರಿಸಿದನು.

೨೬. ಆಮೇಲೆ ಮಹಾರಾಜನು ಬುದ್ಧನ ಎದುರು ಹೋಗಿ ಅವನಿಗೆ ನಮನಗಳನ್ನು ಸಲ್ಲಿಸಿ, ಆತನ ಪಕ್ಕದಲ್ಲಿ ಕುಳಿತುಕೊಂಡು, "ಅದ್ಭುತ, ತಂದೆಯೇ! ಪರಮಾಶ್ಚರ್ಯ. ಪಳಗದವನನ್ನು ಪಳಗಿಸುವ ಎಂಥ ಪ್ರಭು ನೀವು, ನಿಗ್ರಹಗೊಳ್ಳದವರನ್ನು ಹೇಗೆ ನಿಗ್ರಹಿಸುತ್ತೀರಿ. ಅಶಾಂತರನ್ನು ಹೇಗೆ ಶಾಂತಗೊಳಿಸುತ್ತೀರಿ! ಬಡಿಗೆ ಮತ್ತು ಕತ್ತಿಗಳಿಂದ ನಾನು ಗೆಲ್ಲಲಾರದವನು ಇಲ್ಲಿದ್ದಾನೆ; ಆದರೆ ಬಡಿಗೆ ಅಥವಾ ಕತ್ತಿ ಇಲ್ಲದೆ ಪ್ರಭು ತಾವು ಆತನನ್ನು ಜಯಿಸಿದ್ದೀರಿ. ಈಗ, ಭಗವಾನ್ ನಾನು ಹೋಗಬೇಕಾಗಿದೆ. ಏಕೆಂದರೆ ನಾನು ನಿರ್ವಹಿಸಬೇಕಾದ ಕರ್ತವ್ಯ ಬಹಳವಿದೆ."

೨೭. "ದೊರೆಗಳ ಚಿತ್ತವಿದ್ದಂತಾಗಲಿ". ಆಗ ತನ್ನ ಪೀಠದಿಂದೆದ್ದು ಮಹಾರಾಜನು ಬುದ್ಧನಿಗೆ ಅಪಾರ ಗೌರವದಿಂದ ನಮಸ್ಕರಿಸಿ ಹೊರಟನು.

೨೮. ಒಂದು ದಿನ ಕಾಷಾಯವಸ್ತ್ರಧಾರಿಯಾಗಿ ಭಿಕ್ಷಾಪಾತ್ರೆ ಹಿಡಿದು ಅಂಗುಲೀಮಾಲ ಶ್ರಾವಸ್ತಿಗೆ ಹೋದನು. ಅವನನ್ನು ಒಬ್ಬ ಮಣ್ಣಿನ ಹೆಂಟೆಯಿಂದ ಹೊಡೆದನು. ಇನ್ನೊಬ್ಬ ಬೀಸಿದ ದೊಣ್ಣೆಯಿಂದ ಅವನಿಗೆ ಏಟು ಬಿತ್ತು. ಮತ್ತೊಬ್ಬನು ತೂರಿದ ಮಡಕೆ ಚೂರಿನಿಂದ ಅವನಿಗೆ ಏಟು ಬಿತ್ತು. ಇದರಿಂದಾಗಿ ಅವನ ತಲೆಯಲ್ಲಿ ರಕ್ತ ಸುರಿಯತೊಡಗಿತು. ಅವನ ಭಿಕ್ಷಾಪಾತ್ರೆ ಚೂರಾಯಿತು. ಅವನ ಬಟ್ಟೆಗಳು

ಹರಿದುಹೋದವು. ಈ ಸ್ಥಿತಿಯಲ್ಲಿ ಅವನು ಬುದ್ಧನ ಮುಂದೆ ಹೋಗಿ ನಿಂತನು. ಅವನನ್ನು ನೋಡಿ, ಹತ್ತಿರ ಕರೆದುಕೊಂಡು, ಬುದ್ಧ, "ಇದನ್ನೆಲ್ಲ ಸಹಿಸಿಕೊ, ಇದನ್ನೆಲ್ಲ ಸಹಿಸಿಕೊ" ಎಂದು ಅಂಗುಲೀಮಾಲನಿಗೆ ಹೇಳಿದನು.

೨೯. ಹೀಗೆ ಬುದ್ಧನ ಉಪದೇಶಗಳನ್ನು ಸ್ವೀಕರಿಸಿ ದರೋಡೆಕೋರ ಅಂಗುಲೀಮಾಲ ಸತ್ಪುರುಷನಾದನು (ಧರ್ಮಾನುಯಾಯಿಯಾದನು).

೩೦. ಬಿಡುಗಡೆಯ ಆನಂದದಿಂದ ತುಂಬಿದ ಅವನು "ಉತ್ಸಾಹವಿಲ್ಲದ ಕಡೆ ಉತ್ಸಾಹವನ್ನು ಯಾರು ತೋರಿಸುತ್ತಾರೋ, ಯಾರು ತಮ್ಮ ಗತಕಾಲವನ್ನು ಸದ್ಗುಣದಿಂದ ಮರೆಮಾಚುತ್ತಾರೋ, ಯಾರು ಯೌವ್ವನದಲ್ಲಿ ಬುದ್ಧನಿಗೆ ತಮ್ಮನ್ನೇ ತಾವು ಅರ್ಪಿಸಿಕೊಳ್ಳುವರೊ ಅವರು ಚಂದ್ರನಂತೆ ಭೂಮಿಯ ಮೇಲೆ ಬೆಳಕನ್ನು ಪ್ರವಹಿಸುತ್ತಾರೆ.

೩೧. "ಈ ಸಂದೇಶವನ್ನು ನನ್ನ ಶತ್ರುಗಳು ಆಲಿಸಲಿ, ಈ ಧಮ್ಮವನ್ನು ಅಪ್ಪಿಕೊಳ್ಳಲಿ, ಅದನ್ನು ಅಪ್ಪಿಕೊಂಡಿರುವ ಜ್ಞಾನಪುತ್ರರನ್ನು ಅನುಸರಿಸಲಿ. ನಮ್ರ ತಾಳ್ಮೆಯ ಪ್ರೇಮದ ಸಂದೇಶವನ್ನು ನನ್ನ ಶತ್ರುಗಳು ಆಲಿಸಲಿ ಮತ್ತು ಅವರ ಬದುಕನ್ನು ಅದೇ ರೀತಿಯಲ್ಲಿ ನಡೆಸಲು ಇದು ಸಕಾಲ."

೩೨. "ನಾನು 'ಅಂಗುಲೀಮಾಲ'ನಾಗಿ, ದರೋಡೆಕೋರನಾಗಿ ಬದುಕುತ್ತಾ ಪ್ರಪಾತಕ್ಕೆ ಬಿದ್ದಿದ್ದೆ, ನನ್ನ ಸ್ವಾಮಿ ನನ್ನನ್ನು ಮೇಲೆತ್ತುವವರೆಗೆ. 'ಅಂಗುಲೀಮಾಲ'ನಾಗಿ ನಾನು ರಕ್ತಸಿಕ್ತನಾಗಿದ್ದೆ, ಈಗ ನಾನು ಉದ್ಧಾರವಾಗಿದ್ದೇನೆ."

## ೩. ಇತರ ಅಪರಾಧಿಗಳ ಪರಿವರ್ತನೆ

೧. ರಾಜಗೃಹದ ದಕ್ಷಿಣ ದಿಕ್ಕಿನಲ್ಲಿ ಒಂದು ದೊಡ್ಡ ಪರ್ವತವಿತ್ತು. ಅದು ಆ ನಗರದಿಂದ ಸುಮಾರು ೨೦೦ ಮೈಲಿ ದೂರದಲ್ಲಿತ್ತು.

೨. ಈ ಪರ್ವತದ ಮೂಲದಲ್ಲಿ ಆಳವಾದ ನಿರ್ಜನ ಕಣಿವೆಯಿತ್ತು. ಅದರ ಮೂಲಕ ದಕ್ಷಿಣ ಇಂಡಿಯಾಕ್ಕೆ ರಸ್ತೆಯಿತ್ತು.

೩. ಇದೇ ಕಣಿವೆಯಲ್ಲಿ ಐನೂರು ಜನ ದರೋಡೆಕೋರರು ನೆಲಸಿದ್ದರು. ಆ ದಾರಿಯಲ್ಲಿ ಸಾಗುತ್ತಿದ್ದ ಎಲ್ಲ ಯಾತ್ರಿಕರನ್ನೂ ಅವರು ಕೊಲೆ ಮಾಡಿ ಕೊಳ್ಳೆ ಹೊಡೆಯುತ್ತಿದ್ದರು.

೪. ಅಲ್ಲಿನ ರಾಜ ಅವರನ್ನು ಹಿಡಿಯಲು ತನ್ನ ಸೈನ್ಯವನ್ನು ಕಳುಹಿಸಿದರೂ ವ್ಯರ್ಥವಾಯಿತು. ಅವರು ಯಾವಾಗಲೂ ತಪ್ಪಿಸಿಕೊಳ್ಳುತ್ತಿದ್ದರು.

೫. ಆ ರಾಜ್ಯದ ನೆರೆಯಲ್ಲಿ ಬುದ್ಧ ವಾಸಿಸುತ್ತಿದ್ದನು. ಈ ಜನರ ಸ್ಥಿತಿಯನ್ನು ಅರ್ಥಮಾಡಿಕೊಂಡು ಅವರು ಒಳ್ಳೆಯ ನಡತೆಯನ್ನು ತಿಳಿದುಕೊಂಡಿಲ್ಲ ಎಂದು ಗ್ರಹಿಸಿದನು. ಅವರಿಗೆ ಉಪದೇಶ ಮಾಡಲು ತಾನು ಈ ಲೋಕಕ್ಕೆ ಬಂದಿದ್ದರೂ ಅವರ ಕಣ್ಣುಗಳು ತನ್ನನ್ನು ನೋಡಿಲ್ಲ. ಅವರ ಕಿವಿಗಳು ನನ್ನ ಧಮ್ಮದ ವಿಷಯ ಕೇಳಿಲ್ಲ. ಆದ್ದರಿಂದ ಅವರ ಬಳಿಗೆ ಹೋಗಬೇಕೆಂದು ನಿರ್ಧರಿಸಿದನು.

೬. ತತ್ಪರಿಣಾಮವಾಗಿ ಅವನು ಶ್ರೀಮಂತ ಉಡುಪಿನಲ್ಲಿ ತನ್ನನ್ನೇ ತಾನು ಬದಲಾಯಿಸಿಕೊಂಡನು. ಖಡ್ಗ ಮತ್ತು ಬಿಲ್ಲನ್ನು ಹಿಡಿದು, ಬೆಳ್ಳಿ ಮತ್ತು ಚಿನ್ನದ ನಾಣ್ಯಗಳ ಚೀಲಗಳನ್ನು ಎರಡು ಬದಿಯಲ್ಲೂ

ತೂಗುಬಿಟ್ಟುಕೊಂಡು, ವಜ್ರವೈಢೂರ್ಯಖಚಿತ ಜೀನು ಹಾಕಿ ಚೆನ್ನಾಗಿ ಸಿಂಗರಿಸಿದ ಕುದುರೆಯ ಮೇಲೆ ಕುಳಿತು ಪ್ರಯಾಣಿಸಿದನು.

೭. ಕಣಿವೆಯನ್ನು ಪ್ರವೇಶಿಸುತ್ತಿದ್ದಂತೆ ಅವನ ಕುದುರೆ ಗಟ್ಟಿಯಾಗಿ ಹೇಷಾರವಗೈದಿತು. ಆ ಕೆನೆತವನ್ನು ಕೇಳಿದ ಕೂಡಲೇ ಐನೂರು ಜನ ದರೋಡೆಕೋರರೂ ಬೆಚ್ಚಿಬಿದ್ದರು. ಆ ಪ್ರಯಾಣಿಕನನ್ನು ನೋಡಿ, "ನಾವೆಂದೂ ಇಂಥ ಲೂಟಿಯನ್ನೇ ನಿರೀಕ್ಷಿಸಿರಲಿಲ್ಲ; ನಾವೆಲ್ಲ ಸೇರಿ ಅವನನ್ನು ಸೆರೆಹಿಡಿಯೋಣ!" ಎಂದು ಆಶ್ಚರ್ಯಚಕಿತರಾಗಿ ನುಡಿದರು.

೮. ಆದ್ದರಿಂದ ಅವರು ಯಾತ್ರಿಕನು ತಪ್ಪಿಸಿಕೊಳ್ಳದಂತೆ ಮುತ್ತಲು ಮುಂದಾದರು. ಆದರೆ ಅವನನ್ನು ನೋಡುತ್ತಿದ್ದಂತೆ ಅವರೆಲ್ಲ ನೆಲಕ್ಕೆ ಬಿದ್ದರು.

೯. ಅವರು ನೆಲಕ್ಕೆ ಬೀಳುತ್ತಿದ್ದಂತೆ, "ಇದಾವ ದೇವರು?", "ಇದಾವ ದೇವರು?" ಎಂದು ಉದ್ಗರಿಸಿದರು.

೧೦. ಪ್ರಪಂಚವನ್ನಾಳುವ ದುಃಖಕ್ಕೆ ಹೋಲಿಸಿದರೆ ನೀವು ಕೊಡುವ ಮತ್ತು ಪಡೆಯುವ ಪೆಟ್ಟುಗಳು ಮತ್ತು ನೋವುಗಳು ಕ್ಷುಲ್ಲಕ; ಹಾಗೂ ಅಪನಂಬಿಕೆ ಮತ್ತು ಅನುಮಾನಗಳಿಂದ ಉಂಟಾಗುವ ಗಾಯಗಳನ್ನು, ಧರ್ಮಗ್ರಂಥಗಳನ್ನು ಆಸ್ಥೆಯಿಂದ ಆಲಿಸುವುದರಿಂದ ಮೂಡುವ ವಿವೇಕ ಮಾತ್ರ ವಾಸಿಮಾಡಬಲ್ಲವು ಎಂದು ಆ ಯಾತ್ರಿಕ ವಿವರಿಸಲು ಪ್ರಾರಂಭಿಸಿದ; ಆಮೇಲೆ ಈ ಮಾತುಗಳನ್ನು ಆತ ನುಡಿದನು:

೧೧. "ದುಃಖದಷ್ಟು ಕೆಟ್ಟದಾದ ಯಾತನಾಮಯ ಗಾಯ ಇನ್ನೊಂದಿಲ್ಲ. ಕೇಡಿನಷ್ಟು ಹರಿತವಾಗಿ ಭೇದಿಸುವ ಬಾಣ ಇನ್ನೊಂದಿಲ್ಲ. ಧರ್ಮಬೋಧನೆಯನ್ನು ಚಿತ್ತವಿಟ್ಟು ಕೇಳುವುದನ್ನು ಬಿಟ್ಟರೆ ಇದಕ್ಕೆ ಪರಿಹಾರವಿಲ್ಲ. ಇದರಿಂದ ಕುರುಡರಿಗೆ ದೃಷ್ಟಿ ಬರುವುದು, ಭ್ರಾಂತರಿಗೆ ಜ್ಞಾನೋದಯವಾಗುವುದು.

೧೨. "ಕಣ್ಣಿಲ್ಲದವರಿಗೆ ಕಣ್ಣುಗಳನ್ನು ಕೊಟ್ಟಾಗ ಅದರಿಂದ ಮಾರ್ಗದರ್ಶನ ಪಡೆದು ಅವರು ಮುನ್ನಡೆಯುವರು.

೧೩. "ಆದ್ದರಿಂದ ಇದು ಅಪನಂಬಿಕೆಯನ್ನು ಹೋಗಲಾಡಿಸಲು, ದುಃಖವನ್ನು ನಿರ್ಮೂಲ ಮಾಡಲು, ಸಂತೋಷವನ್ನು ನೀಡಲು ಸಮರ್ಥವಾಗುತ್ತದೆ; ಯಾರು ಇದನ್ನು ಆಲಿಸುತ್ತಾರೋ ಅವರಿಗೆ ಅತ್ಯುನ್ನತ ಜ್ಞಾನ ಲಭಿಸುತ್ತದೆ."

೧೪. "ಅತ್ಯುನ್ನತ ಪುಣ್ಯವನ್ನು ಗಳಿಸಿದವನಿಗೆ ಈ ಬಿರುದು ಬರುತ್ತದೆ."

೧೫. ಇದನ್ನು ಕೇಳಿದ ಆ ದರೋಡೆಕೋರರು ತಮ್ಮ ಪಾಪಮಯ ಜೀವನಕ್ಕೆ ಪಶ್ಚಾತ್ತಾಪಪಟ್ಟರು; ಅವರ ದೇಹಕ್ಕೆ ಚುಚ್ಚಿಕೊಂಡಿದ್ದ ಪಾಪಶರಗಳು ಬಿದ್ದುಹೋದವು, ಅವರ ಗಾಯಗಳು ವಾಸಿಯಾದವು.

೧೬. ಆಮೇಲೆ ಅವರು ಆತನ ಅನುಯಾಯಿಗಳಾಗಿ ನೆಮ್ಮದಿ ಮತ್ತು ಶಾಂತಿಯನ್ನು ಪಡೆದರು.

## ೪. ಪರಿವರ್ತನೆಯ ಗಂಡಾಂತರ

೧. ಹಿಂದಿನ ಕಾಲದಲ್ಲಿ, ಬೆಟ್ಟಗುಡ್ಡಗಳ ಪ್ರದೇಶವಾದ ರಾಜಗೃಹದಿಂದ ಸುಮಾರು ೫೦೦ ಮೈಲಿಗಳ ದೂರದ ನಾಡಿನಲ್ಲಿ ಬುದ್ಧ ವಾಸಿಸುತ್ತಿದ್ದನು. ಈ ಬೆಟ್ಟಗುಡ್ಡಗಳಲ್ಲಿ ಸುಮಾರು ೧೨೨ ಜನರ ಒಂದು ಬುಡಕಟ್ಟು ವಾಸಿಸುತ್ತಿತ್ತು. ಅವರು ಬೇಟೆಯಾಡುತ್ತಾ ತಾವು ಕೊಂದ ಪ್ರಾಣಿಗಳ ಮಾಂಸದಿಂದ ಜೀವಿಸುತ್ತಿದ್ದರು.

೨. ಬುದ್ಧ ಆ ಸ್ಥಳಕ್ಕೆ ಹೋಗಿ ಹಗಲು ಹೊತ್ತು ತಮ್ಮ ಗಂಡಂದಿರು ಬೇಟೆಗೆ ಹೋಗುತ್ತಿದ್ದಾಗ ಅಲ್ಲಿಯೇ ಉಳಿಯುತ್ತಿದ್ದ ಅವರ ಸ್ತ್ರೀಯರನ್ನು ಪರಿವರ್ತಿಸಿದನು. ಆಮೇಲೆ ಬುದ್ಧ ಈ ಮಾತುಗಳನ್ನು ಹೇಳಿದನು:

೩. "ಮಾನವೀಯನಾದ ವ್ಯಕ್ತಿ ಕೊಲ್ಲುವುದಿಲ್ಲ (ಅಥವಾ ಕೊಲ್ಲದಿರುವುದೇ ಮಾನವೀಯತೆ); ಎಲ್ಲ ಜೀವಿಗಳನ್ನು ರಕ್ಷಿಸುವುದೇ ಅವನ ಗುಣ.

೪. "ಈ ತತ್ತ್ವ ಅವಿನಾಶಿಯಾದುದು; ಇದನ್ನು ಯಾರು ಅನುಸರಿಸುತ್ತಾರೋ ಅವರಿಗೆ ಯಾವ ಆಪತ್ತೂ ಸಂಭವಿಸುವುದಿಲ್ಲ.

೫. "ಸೌಜನ್ಯತೆ, ಪ್ರಾಪಂಚಿಕ ವಿಷಯಗಳ ಬಗ್ಗೆ ಅನಾಸಕ್ತಿ, ಯಾರನ್ನೂ ಹಿಂಸಿಸದಿರುವುದು, ಕಿರಿಕಿರಿಗೆ ಆಸ್ಪದವಿಲ್ಲದಿರುವುದು – ಇದು ಸ್ವರ್ಗಬ್ರಹ್ಮನ (ಅಥವಾ ಬ್ರಹ್ಮದೇವನ) ಲಕ್ಷಣ.

೬. "ಅಶಕ್ತರ ಬಗ್ಗೆ ಯಾವಾಗಲೂ ಆದರ; ಬುದ್ಧನ ಉಪದೇಶದ ಪ್ರಕಾರ ಪರಿಶುದ್ಧವಾಗಿರುವುದು, ಸಾಕಷ್ಟು ಲಭಿಸಿದೆ ಎಂದು ತಿಳಿಯುವುದು, ಯಾವಾಗ ನಿಲ್ಲಿಸಬೇಕು ಎಂದು ಅರಿಯುವುದು – ಇದೇ ಹುಟ್ಟುಸಾವುಗಳ ಆವರ್ತನದಿಂದ ಪಾರಾಗುವ ಕ್ರಮ."

ಈ ಮಾತುಗಳನ್ನು ಕೇಳಿ ಆ ಮಹಿಳೆಯರು ಪರಿವರ್ತನೆಗೊಂಡರು; ಅವರ ಗಂಡಂದಿರು ವಾಪಸ್ಸು ಬಂದಾಗ ಅವರಿಗೆ ಬುದ್ಧನನ್ನು ಕೊಲ್ಲಬೇಕೆಂದು ಮೊದಲು ಮನಸ್ಸಾಯಿತು. ಆದರೆ ಅವರನ್ನು ಅವರ ಮಡದಿಯರು ನಿಯಂತ್ರಿಸಿದರು; ಪ್ರೇಮದ ಸಂದೇಶವನ್ನು ಕೇಳಿ ಅವರೂ ಕೂಡ ಪರಿವರ್ತಿತರಾದರು.

೭. ಆಗ ಬುದ್ಧ ಈ ನುಡಿಗಳನ್ನು ಹೇಳಿದನು:

೮. "ದಯೆಯನ್ನು ಅನುಸರಿಸುವ ವ್ಯಕ್ತಿಯನ್ನು ಏಳು ಅನುಕೂಲಗಳು ಅನುಸರಿಸಿ ಬರುತ್ತವೆ. ಅವನು ಎಲ್ಲ ಜೀವಿಗಳ ಬಗ್ಗೆಯೂ ಮೃದುವಾಗಿರುತ್ತಾನೆ.

೯. "ಆತನ ದೇಹ ಯಾವಾಗಲೂ ಆರೋಗ್ಯ (ಸಂತೋಷ)ವಾಗಿರುತ್ತದೆ; ಆತನಿಗೆ ಶಾಂತಿಪೂರ್ಣ ನಿದ್ದೆ ಅನುಗ್ರಹಿತವಾಗಿರುತ್ತದೆ; ಆತ ಅಧ್ಯಯನಶೀಲನಾಗಿದ್ದಾಗ ಸಮಾಧಾನಚಿತ್ತನಾಗಿರುತ್ತಾನೆ.

೧೦. "ಆತನಿಗೆ ಕೆಟ್ಟ ಕನಸುಗಳು ಬೀಳುವುದಿಲ್ಲ; ಅವನನ್ನು ಸ್ವರ್ಗ (ದೇವತೆಗಳು) ರಕ್ಷಿಸುತ್ತದೆ/ರಕ್ಷಿಸುತ್ತಾರೆ, ಮನುಷ್ಯರು ಪ್ರೀತಿಸುತ್ತಾರೆ; ವಿಷಕಾರಿ ವಿಷಯಗಳಿಂದ ಅವನೆಂದೂ ಕಲುಷಿತನಾಗುವುದಿಲ್ಲ; ಯುದ್ಧದ ಹಿಂಸೆಯಿಂದ ಪಾರಾಗುತ್ತಾನೆ; ಬೆಂಕಿ ಅಥವಾ ನೀರಿನಿಂದ ಆತನು ಪೀಡಿತನಾಗುವುದಿಲ್ಲ.

೧೧. "ಆತ ಎಲ್ಲೇ ವಾಸಿಸಲಿ, ಯಶಸ್ವಿಯಾಗುತ್ತಾನೆ, ಮೃತಪಟ್ಟಾಗ ಬ್ರಹ್ಮಲೋಕವನ್ನು ಸೇರುತ್ತಾನೆ. ಇವೇ ಆ ಹನ್ನೊಂದು ಸೌಲಭ್ಯಗಳು."

೧೨. ಈ ಮಾತುಗಳನ್ನು ಕೇಳಿದ ಮೇಲೆ ಆ ಗಂಡಸರು ಮತ್ತು ಹೆಂಗಸರಿಬ್ಬರನ್ನೂ ಆತನ ಸಂಘಕ್ಕೆ ಸೇರಿಸಿಕೊಳ್ಳಲಾಯಿತು, ಅವರು ಶಾಂತಿಯನ್ನು ಪಡೆದರು.

## ಪರ್ವ – ೩

# ಬುದ್ಧ ಬೋಧಿಸಿದ್ದು ಏನು ?

## ಭಾಗ : ೧

## ಆತನ ಧಮ್ಮದಲ್ಲಿ ಆತನ ಸ್ಥಾನ

೧. ಬುದ್ಧ ತನ್ನದೇ ಆದ ಧರ್ಮದಲ್ಲಿ ತನಗೆ ಯಾವುದೇ ಸ್ಥಾನ ಬಯಸಲಿಲ್ಲ

೨. ಬುದ್ಧ ಮೋಕ್ಷದ ವಾಗ್ದಾನ ಮಾಡಲಿಲ್ಲ. ತಾನು ಮಾರ್ಗದಾತನೇ ಹೊರತು ಮೋಕ್ಷದಾತನಲ್ಲ ಎಂದು ನುಡಿದನು.

೩. ಬುದ್ಧನು ತನಗಾಗಲೀ ತನ್ನ ಧರ್ಮಕ್ಕಾಗಲೀ ಯಾವ ದೈವಿಕತೆಯನ್ನು ಬಯಸಲಿಲ್ಲ. ಧರ್ಮ ಮಾನವನಿಂದ ಮಾನವನಿಗಾಗಿ ಶೋಧಿತವಾಯಿತು. ಅದು ದೈವಪ್ರಣೀತ (ಅಪೌರುಷೇಯ)ವಲ್ಲ.

## ೧. ಬುದ್ಧ ತನ್ನದೇ ಆದ ಧರ್ಮದಲ್ಲಿ ತನಗೆ ಯಾವುದೇ ಸ್ಥಾನ ಬಯಸಲಿಲ್ಲ

೧. ಕ್ರಿಸ್ತ ತಾನು ಕ್ರೈಸ್ತಧರ್ಮದ ಪ್ರವಾದಿ ಎಂದು ಹೇಳಿಕೊಂಡನು.

೨. ಆತ ಇನ್ನೂ ಮುಂದುವರಿದು ತಾನು ದೇವಪುತ್ರ ಎಂದು ಹೇಳಿಕೊಂಡನು.

೩. ಕ್ರಿಸ್ತನು ದೇವಪುತ್ರ ಎಂಬುದನ್ನು ಒಪ್ಪಿಕೊಳ್ಳದ ಹೊರತು ಮನುಷ್ಯರಿಗೆ ಮುಕ್ತಿಯಿಲ್ಲ ಎಂಬ ಷರತ್ತನ್ನು ವಿಧಿಸಿದನು.

೪. ಹೀಗೆ ಕ್ರಿಸ್ತನನ್ನು ದೇವಪುತ್ರ ಮತ್ತು ಪ್ರವಾದಿ ಎಂದು ಒಪ್ಪಿಕೊಳ್ಳುವುದರ ಮೇಲೆ ಕ್ರಿಶ್ಚಿಯನ್ನನಿಗೆ ಮುಕ್ತಿ ಲಭಿಸುತ್ತದೆ ಎನ್ನುವುದರಿಂದ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು.

೫. ಇಸ್ಲಾಂನ ಪ್ರವಾದಿಯಾದ ಮಹಮ್ಮದನು ತಾನು ದೇವರಿಂದ ಕಳುಹಿಸಲ್ಪಟ್ಟ ಪ್ರವಾದಿ ಎಂದು ಹೇಳಿಕೊಂಡನು.

೬. ಎರಡು ಷರತ್ತುಗಳನ್ನು ಒಪ್ಪಿಕೊಳ್ಳದ ಹೊರತು ಮಾನವರಿಗೆ ಮೋಕ್ಷವಿಲ್ಲ ಎಂದು ಅವನು ಮುಂದುವರಿದು ಹೇಳಿದನು.

೭ ಇಸ್ಲಾಂನ ಮೂಲಕ ಮೋಕ್ಷವನ್ನು ಬಯಸುವವರು ಮಹಮ್ಮದನನ್ನು ದೇವರ ಪ್ರವಾದಿ ಎಂದು ಅಂಗೀಕರಿಸಬೇಕು.

೮. ಇಸ್ಲಾಮಿನ ಮೂಲಕ ಮೋಕ್ಷ ಬಯಸುವವರು ಮಹಮ್ಮದನನ್ನು ಕೊನೆಯ ಪ್ರವಾದಿ ಎಂದು ಒಪ್ಪಿಕೊಳ್ಳಬೇಕು.

೯. ಈ ಎರಡು ಷರತ್ತುಗಳನ್ನು ಒಪ್ಪಿಕೊಂಡವರಿಗೆ ಮಾತ್ರ ಇಸ್ಲಾಮಿನಲ್ಲಿ ಮೋಕ್ಷ ಸಿಗುತ್ತದೆಂದು ಖಚಿತಪಡಿಸಲಾಗಿದೆ.

೧೦. ಮಹಮ್ಮದನೇ ದೇವರ ಪ್ರವಾದಿ ಎಂದು ಒಪ್ಪಿಕೊಂಡರೆ ಮುಸ್ಲಿಮರಿಗೆ ಮುಕ್ತಿ ಲಭಿಸುತ್ತದೆ ಎಂದು ಹೇಳುವುದರ ಮೂಲಕ ಮಹಮ್ಮದ್ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು.

೧೧. ಬುದ್ಧ ಅಂಥ ಯಾವ ಷರತ್ತನ್ನೂ ಹಾಕಲಿಲ್ಲ.

೧೨. ಆತ ನಾನು ಶುದ್ಧೋದನನ ಮತ್ತು ಮಹಾಮಾಯರ ಔರಸಪುತ್ರ ಎಂದು ಮಾತ್ರ ಹೇಳಿದನು.

೧೩. ಏಸು ಮತ್ತು ಮಹಮ್ಮದರ ರೀತಿ ಷರತ್ತುಗಳನ್ನು ಹಾಕುವುದರಿಂದ ಅವನು ತನ್ನ ಧರ್ಮದಲ್ಲಿ ತನಗಾಗಿ ಯಾವ ಸ್ಥಾನವನ್ನೂ ಕೊಟ್ಟುಕೊಳ್ಳಲಿಲ್ಲ.

೧೪. ಈ ಕಾರಣದಿಂದಾಗಿಯೇ, ಅಪಾರವಾದ ಸಾಮಗ್ರಿ ಲಭ್ಯವಿದ್ದರೂ ಆತನ ಬಗ್ಗೆ ತೀರ ಅತ್ಯಲ್ಪ ವಿಷಯ ಪ್ರಪಂಚಕ್ಕೆ ಗೊತ್ತಿರುವುದು.

೧೫. ಬುದ್ಧನ ಪರಿನಿರ್ವಾಣವಾದ ಕೂಡಲೇ ರಾಜಗೃಹದಲ್ಲಿ ಪ್ರಥಮ ಬೌದ್ಧ ಪರಿಷತ್ತು ನಡೆಯಿತೆಂದು ಗೊತ್ತಿದೆ.

೧೬. ಆ ಪರಿಷತ್ತಿನ ಅಧ್ಯಕ್ಷತೆಯನ್ನು ಕಶ್ಯಪ ವಹಿಸಿದ್ದನು. ಕಪಿಲವಸ್ತುವಿನವರಾದ ಆನಂದ, ಉಪಾಲಿ ಮತ್ತು ಇತರರು ಅಲ್ಲಿ ಇದ್ದರು. ಇವರು ಬುದ್ಧನ ಜೊತೆ ಆತ ಸಂಚರಿಸಿದ ಕಡೆಯಲ್ಲೆಲ್ಲ ತಿರುಗಾಡಿದ್ದರು.

ಆತನ ಮರಣದ ಸಮಯದಲ್ಲಿ ಕೂಡ ಅವರು ಅವನ ಜೊತೆ ಇದ್ದರು.

೧೭. ಆದರೆ ಅಧ್ಯಕ್ಷನಾದ ಕಶ್ಯಪ ಮಾಡಿದ್ದಾದರೂ ಏನು?

೧೮. ಆತನು ಆನಂದನಿಗೆ ಧಮ್ಮವನ್ನು ಪುನರುಚ್ಚರಿಸು ಎಂದು ಹೇಳಿ, "ಇದು ಸರಿಯಿದೆಯೇ?" ಎಂದು ಪರಿಷತ್ತಿಗೆ ಪ್ರಶ್ನೆ ಹಾಕಲು ಹೇಳಿದನು. ಪರಿಷತ್ತು ಸಕಾರಾತ್ಮಕವಾಗಿ ಉತ್ತರಿಸಿತು. ಆಮೇಲೆ ಕಶ್ಯಪ ಆ ಪ್ರಶ್ನೆಯನ್ನು ಅಂತ್ಯಗೊಳಿಸಿದನು.

೧೯. ಆಮೇಲೆ ಆತ ವಿನಯವನ್ನು ಪುನರುಚ್ಚರಿಸು ಎಂದು ಉಪಾಲಿಗೆ ಹೇಳಿ, "ಇದು ಸರಿಯಾಗಿದೆಯೇ?" ಎಂದು ಪರಿಷತ್ತಿಗೆ ಪ್ರಶ್ನಿಸಿದನು. ಅವರು ಸಕಾರಾತ್ಮಕವಾಗಿ ಉತ್ತರಿಸಿದರು. ಆಮೇಲೆ ಕಶ್ಯಪ ಈ ಪ್ರಶ್ನೆಯನ್ನು ಅಂತ್ಯಗೊಳಿಸಿದನು.

೨೦. ಅನಂತರ ಬುದ್ಧನ ಜೀವನದ ಕೆಲವು ಪ್ರಮುಖ ಘಟನೆಗಳನ್ನು ದಾಖಲಿಸಲು ನೆರೆದಿದ್ದ ಪರಿಷತ್ತಿನಲ್ಲಿ ಯಾರಾದರೊಬ್ಬರಿಗೆ ಮೂರನೆಯ ಪ್ರಶ್ನೆಯನ್ನು ಕಶ್ಯಪ ಕೇಳಬಹುದಿತ್ತು.

೨೧. ಆದರೆ ಕಶ್ಯಪ ಹಾಗೆ ಮಾಡಲಿಲ್ಲ. ಈ ಎರಡು ಪ್ರಶ್ನೆಗಳು ಮಾತ್ರವೇ ಸಂಘಕ್ಕೆ ಸಂಬಂಧಿಸಿದವು ಎಂದು ಆತ ಭಾವಿಸಿದ.

೨೨. ಕಶ್ಯಪ ಏನಾದರೂ ಬುದ್ಧನ ಜೀವನದ ದಾಖಲೆಯನ್ನು ಸಂಗ್ರಹಿಸಿದ್ದರೆ ಇಂದು ನಮಗೆ ಬುದ್ಧನ ಸಮಗ್ರ ಜೀವನಚರಿತ್ರೆ ಲಭಿಸುತ್ತಿತ್ತು.

೨೩. ಬುದ್ಧನ ಜೀವನದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಕಶ್ಯಪನಿಗೆ ಏಕೆ ಹೊಳೆಯಲಿಲ್ಲ?

೨೪. ಅದು ನಿರಾಸಕ್ತಿಯಲ್ಲ. ತನ್ನ ಧರ್ಮದಲ್ಲಿ ತನಗೆ ಯಾವುದೇ ಸ್ಥಾನ ಇರಕೂಡದೆಂದು ಸ್ವತಃ ಬುದ್ಧನೇ ತೀರ್ಮಾನಿಸಿದ್ದ ಎಂಬುದೊಂದೇ ಯಾರಾದರೂ ಊಹಿಸಬಹುದಾದ ಉತ್ತರ.

೨೫. ಬುದ್ಧ ಮತ್ತು ಆತನ ಧರ್ಮ ಸಂಪೂರ್ಣ ಅನನ್ಯವಾಗಿದೆ.

೨೬. ತನ್ನ ಉತ್ತರಾಧಿಕಾರಿಯನ್ನು ನೇಮಿಸುವುದರಲ್ಲಿ ಆತ ತೋರಿದ ನಿರಾಕರಣೆಯಲ್ಲಿಯೂ ಬುದ್ಧ ತನ್ನ ಧರ್ಮದಲ್ಲಿ ತನಗೆ ಯಾವ ಸ್ಥಾನವೂ ಇರಕೂಡದೆಂದು ತೀರ್ಮಾನಿಸಿದ್ದು ಸ್ಪಷ್ಟವಾಗಿದೆ.

೨೭. ಉತ್ತರಾಧಿಕಾರಿಯನ್ನು ನೇಮಿಸಬೇಕೆಂದು ಬುದ್ಧನ ಅನುಯಾಯಿಗಳು ಎರಡು ಮೂರು ಬಾರಿ ಆತನನ್ನು ಬಿನ್ನವಿಸಿಕೊಂಡನು.

೨೮. ಪ್ರತಿಬಾರಿಯೂ ಬುದ್ಧ ನಿರಾಕರಿಸಿದ.

೨೯. "ಧಮ್ಮ ತನಗೆ ತಾನೇ ಉತ್ತರಾಧಿಕಾರಿಯಾಗಿರಬೇಕು" ಎಂಬುದು ಆತನ ಉತ್ತರವಾಗಿತ್ತು.

೩೦. "ತತ್ತ್ವ ತನ್ನಿಂದ ತಾನೇ ಬದುಕಬೇಕು, ವ್ಯಕ್ತಿಯ ಅಧಿಕಾರದಿಂದಲ್ಲ."

೩೧. "ಮನುಷ್ಯನ ಅಧಿಕಾರವನ್ನು ಬಯಸುವ ತತ್ತ್ವ ತತ್ತ್ವವೇ ಅಲ್ಲ."

೩೨. "ಧಮ್ಮದ ಅಧಿಕಾರವನ್ನು ಪ್ರತಿಷ್ಠಾಪಿಸಲು ಅದರ ಸಂಸ್ಥಾಪಕನ ಹೆಸರನ್ನು ಹೇಳುವ ಅಗತ್ಯ ಪ್ರತಿಸಾರಿಯೂ ಬಂದರೆ ಅದು ಧಮ್ಮವೇ ಅಲ್ಲ."

೩೩. ತನ್ನದೇ ಧಮ್ಮದಲ್ಲಿ ತನ್ನ ಸ್ಥಾನ ಕುರಿತು ಅವನು ತೆಗೆದುಕೊಂಡ ನಿಯಮ ಇದಾಗಿತ್ತು.

## ೨. ಬುದ್ಧ ಮೋಕ್ಷದ ವಾಗ್ದಾನ ಮಾಡಲಿಲ್ಲ. ತಾನು ಮಾರ್ಗದಾತನೇ ಹೊರತು ಮೋಕ್ಷದಾತನಲ್ಲ ಎಂದು ನುಡಿದನು.

೧. ಬಹುತೇಕ ಎಲ್ಲ ಧರ್ಮಗಳೂ ಅಪೌರುಷೇಯವೆಂದು ವರ್ಣಿಸಲಾಗಿದೆ. ಆದರೆ ಬುದ್ಧ ಧರ್ಮ ಅಪೌರುಷೇಯವಲ್ಲ.

೨. ಅಪೌರುಷೇಯ ಧರ್ಮವು ದೇವರು ತನ್ನಿಂದ ಸೃಷ್ಟಿಯಾದವರು ತಮ್ಮ ಸೃಷ್ಟಿಕರ್ತ (ದೇವರು)ನನ್ನು ಪೂಜಿಸಲು ಹಾಗೂ ತಮ್ಮ ಆತ್ಮವನ್ನು ಸಂರಕ್ಷಿಸಲು ನೀಡಿರುವ ಸಂದೇಶವಾಗಿರುವುದರಿಂದ ಅದನ್ನು ಅಪೌರುಷವೆನ್ನಲಾಗುತ್ತದೆ.

೩. ಸಾಮಾನ್ಯವಾಗಿ ಈ ಸಂದೇಶವನ್ನು ದೇವರೊಲಿದ ವ್ಯಕ್ತಿಯ ಮೂಲಕ ಕಳುಹಿಸಲಾಗುತ್ತದೆ. ಅವರನ್ನು ಪ್ರವಾದಿಯೆಂದು ಕರೆಯುತ್ತಾರೆ. ಆತನಿಗೆ ಈ ಸಂದೇಶ ಪ್ರಕಾಶವಾಗಿ ಜನರಿಗೆ ಅದನ್ನು ಆತ ವ್ಯಕ್ತಪಡಿಸುತ್ತಾನೆ. ಆಗ ಅದನ್ನು ಧರ್ಮ ಎಂದು ಕರೆಯುತ್ತಾರೆ.

೪. ಆಸ್ತಿಕರಿಗೆ ಮೋಕ್ಷವನ್ನು ಖಾತರಿಪಡಿಸುವ ಹೊಣೆಗಾರಿಕೆ ಪ್ರವಾದಿಯದಾಗಿದೆ.

೫. ಆಸ್ತಿಕರ ಮೋಕ್ಷವೆಂದರೆ ಅವರ ಆತ್ಮಗಳು ನರಕಕ್ಕೆ ಬೀಳದಂತೆ ಉದ್ಧರಿಸುವುದಾಗಿದೆ. ಆದರೆ ಅವರು ದೇವರ ಆಜ್ಞೆಗಳನ್ನು ವಿಧೇಯತೆಯಿಂದ ಪಾಲಿಸಬೇಕಾಗುತ್ತದೆ ಮತ್ತು ಪ್ರವಾದಿಯನ್ನು ದೇವದೂತ ಎಂದು ಪರಿಗಣಿಸಬೇಕಾಗುತ್ತದೆ.

೬. ಬುದ್ಧ ಎಂದೂ ತಾನು ಪ್ರವಾದಿ ಎಂದಾಗಲೀ ಅಥವಾ ದೇವದೂತ ಎಂದಾಗಲೀ ಕರೆದುಕೊಳ್ಳಲಿಲ್ಲ. ಅಂಥ ಮಾತನ್ನು ಆತ ಸದಾ ತಿರಸ್ಕರಿಸುತ್ತಿದ್ದ.

೭. ಇದಕ್ಕಿಂತ ಬಹಳ ಮುಖ್ಯವಾದ ಅಂಶವೆಂದರೆ ಆತನ ಧರ್ಮ ಸಂಶೋಧನೆಯಾಗಿದೆ. ಆದ್ದರಿಂದ ಆತನ ಧರ್ಮವನ್ನು ಅಪೌರುಷೇಯವೆಂದು ಕರೆಯಲಾಗುವ ಧರ್ಮದಿಂದ ಸ್ಪಷ್ಟವಾಗಿ ಪ್ರತ್ಯೇಕಿಸಬೇಕಾಗಿದೆ.

೮. ಭೂಮಿಯ ಮೇಲೆ ಮಾನವ ಜೀವನದ ಪರಿಸ್ಥಿತಿಗಳನ್ನು ಶೋಧಿಸಿ ಅನ್ವೇಷಿಸಿದ್ದರ ಫಲ ಹಾಗೂ ಪ್ರವೃತ್ತಿಸಹಿತ ಹುಟ್ಟುವ ಮಾನವನಲ್ಲಿ ಪ್ರವೃತ್ತಿಗಳು ಹೇಗೆ ಕೆಲಸ ಮಾಡುತ್ತವೆ ಎಂಬ ಅರಿವು ಹಾಗೂ ಇತಿಹಾಸ ಮತ್ತು ಪರಂಪರೆಯ ಪರಿಣಾಮವಾಗಿ ಮನುಷ್ಯ ತನ್ನ ಪ್ರವೃತ್ತಿಗಳು ಮತ್ತು ಸ್ವಭಾವಗಳನ್ನು ರೂಪಿಸಿಕೊಂಡು ಅವು ಹೇಗೆ ಅವನಿಗೆ ಮಾರಕವಾಗಿವೆ ಎಂಬ ಅರಿವಿನಿಂದ ಮೂಡಿರುವ ಆತನ ಧರ್ಮ ಒಂದು ಸಂಶೋಧನೆಯಾಗಿದೆ.

೯. ಎಲ್ಲ ಪ್ರವಾದಿಗಳೂ ಮೋಕ್ಷದಾತರಾಗಿದ್ದಾರೆ. ಆದರೆ ಅಂಥ ಮಾತು ಕೊಡದ ಧರ್ಮಗುರುಗಳಲ್ಲಿ ಬುದ್ಧ ಒಬ್ಬನೇ. ಅವನು ಮೋಕ್ಷದಾತ ಮತ್ತು ಮಾರ್ಗದಾತ ಇವೆರಡಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿದ್ದಾನೆ.

೧೦. ಬುದ್ಧ ಮಾರ್ಗದಾತ ಮಾತ್ರ, ಪ್ರತಿಯೊಬ್ಬರೂ ಸ್ವಪ್ರಯತ್ನದಿಂದ ತನ್ನ ಮುಕ್ತಿಯನ್ನು ತಾನೇ ಕಂಡುಕೊಳ್ಳಬೇಕು.

೧೧. ಇದನ್ನು ಈ ಮುಂದಿನ ಸುತ್ತ (ಉಪದೇಶ)ದಲ್ಲಿ ಬ್ರಾಹ್ಮಣ ಮೌದ್ಗಲಾಯನನಿಗೆ ತುಂಬ ಸ್ಪಷ್ಟವಾಗಿ ತಿಳಿಸಿದ್ದಾನೆ.

೧೨. ಒಮ್ಮೆ ತಥಾಗತ ಶ್ರಾವಸ್ತಿಯ ಪೂರ್ವ ವನದಲ್ಲಿದ್ದ ಮಿಗಾರನ ತಾಯಿಯ ಮಹಡಿ ಮನೆಯಲ್ಲಿ ತಂಗಿದ್ದನು.

೧೩. ಆಗ ಕರಣಿಕ ಬ್ರಾಹ್ಮಣ ಮೌದ್ಗಲಾಯನ ತಥಾಗತನ ಬಳಿಗೆ ಬಂದು ಸ್ನೇಹಪೂರ್ವಕ ಕುಶಲೋಪರಿ ಹೇಳಿಯಾದ ಮೇಲೆ ಆತನ ಹತ್ತಿರ ಕುಳಿತುಕೊಂಡನು. ಆಮೇಲೆ ತಥಾಗತನಿಗೆ ಈ ರೀತಿ ಹೇಳಿದನು:

೧೪. "ಗುರು ಗೌತಮ, ಈ ಅಂತಸ್ತಿನ ಮನೆಗೆ ಹತ್ತಲು ಮೆಟ್ಟಿಲಿನ ಸಾಲುಗಳಿದ್ದು ಅವುಗಳನ್ನು ಏರಿ ಕೊನೆಯ ಹಂತಕ್ಕೆ ಹೋದಾಗ ಈ ಮನೆಯ ಇಡೀ ನೋಟ ನಮಗೆ ಸಿಗುತ್ತದೆ. ಹಾಗೆಯೇ ಬ್ರಾಹ್ಮಣರಾದ ನಮ್ಮ ತರಬೇತಿಯಲ್ಲಿ ಪ್ರಗತಿಯಿದೆ; ಅಂದರೆ ನಮ್ಮ ವೇದಾಧ್ಯಯನದಲ್ಲಿ ಕ್ರಮಬದ್ಧತೆಯಿದೆ.

೧೫. "ಗೌತಮ, ಬಿಲ್ಲು ವಿದ್ಯಾಕ್ರಮದಲ್ಲಿರುವಂತೆ ಬ್ರಾಹ್ಮಣರಾದ ನಮ್ಮಲ್ಲಿ ತರಬೇತಿ, ಅಭಿವೃದ್ಧಿ ಮತ್ತು ಮಾರ್ಗ ಹಂತಹಂತವಾಗಿದೆ. ಉದಾಹರಣೆಗೆ, ಎಣಿಕೆ ಮಾಡುವಂತೆ.

೧೬. "ನಾವು ಖಾಸಗಿ ಶಿಷ್ಯನನ್ನು ತೆಗೆದುಕೊಂಡಾಗ ಅವನಿಗೆ ಈ ರೀತಿ ಎಣಿಸಲು ಹೇಳುತ್ತೇನೆ: "ಒಂದು ಸಲ ಒಂದು, ಎರಡು ಸಲ ಎರಡು, ಮೂರು ಸಲ ಮೂರು, ನಾಲ್ಕು ಸಲ ನಾಲ್ಕು, ಇತ್ಯಾದಿಯಾಗಿ ನೂರರವರೆಗೆ'. ಗುರು ಗೌತಮ, ಈಗ ನಿಮ್ಮ ಧರ್ಮದಲ್ಲಿ ನಿಮ್ಮ ಅನುಯಾಯಿಗಳಿಗೆ ಇದೇ ರೀತಿ ಪ್ರಗತಿಯ ತರಬೇತಿಯನ್ನು ಕೊಡಲು ಸಾಧ್ಯವೇ?"

೧೭. "ಅದು ಸಾಧ್ಯ, ಬ್ರಾಹ್ಮಣ. ಒಬ್ಬ ಜಾಣ ಕುದುರೆ ತರಬೇತಿದಾರನನ್ನೇ ಉದಾಹರಣೆಗೆ ತೆಗೆದುಕೊ. ಅವನು ಉತ್ತಮ ಜಾತಿ ಕುದುರೆಯನ್ನು ತೆಗೆದುಕೊಂಡು ಅದಕ್ಕೆ ಕಡಿವಾಣ ಹಾಕಿ ಪಳಗಿಸುವ ಮೊದಲ ಪಾಠ ಮಾಡುತ್ತಾನೆ. ಆಮೇಲೆ ಮುಂದಿನ ತರಬೇತಿಗೆ ತೊಡಗುತ್ತಾನೆ.

೧೮. "ಅದೇ ರೀತಿ, ಬ್ರಾಹ್ಮಣನೇ; ತಥಾಗತನು ತನ್ನ ಶಿಷ್ಯನನ್ನು ಆರಿಸಿಕೊಂಡು ಅವನಿಗೆ ಪ್ರಥಮ ಪಾಠದ ತರಬೇತಿ ಕೊಡುತ್ತಾನೆ. ಹೇಗೆಂದರೆ, 'ಎಲೈ! ಭಿಕ್ಷುವೇ, ಬಾ. ಸದ್ಗುಣಿಯಾಗು. ನಿನ್ನ ಹೊಣೆಗಾರಿಕೆಯನ್ನು ವಿಧೇಯನಾಗಿ ಅನುಸರಿಸು.'

೧೯. "ಸನ್ಮಾರ್ಗದಲ್ಲಿ ನೀನು ನಿಷ್ಣಾತನಾಗು. ಕ್ಷುಲ್ಲಕ ತಪ್ಪುಗಳ ಅಪಾಯವನ್ನರಿತು ತರಬೇತಿ ಹೊಂದಿ ನೀತಿಮಾರ್ಗವನ್ನು ಅನುಸರಿಸು.

೨೦. "ಇವೆಲ್ಲವನ್ನೂ ಅವನು ಅರಿತುಕೊಂಡ ಕೂಡಲೇ ತಥಾಗತ ಆತನಿಗೆ ಎರಡನೆಯ ಪಾಠವನ್ನು ಈ ರೀತಿ ಹೇಳಿಕೊಡುತ್ತಾನೆ: 'ಎಲೈ ಸೋದರನೇ, ಬಾ. ಕಣ್ಣಿನಿಂದ ಒಂದು ವಸ್ತುವನ್ನು ನೋಡಿ ಅದರ ತೋರಿಕೆಗೆ ಅಥವಾ ವಿವರಗಳಿಗೆ ಮರುಳಾಗಬೇಡ.'

೨೧. "ಹತೋಟಿಯಿಲ್ಲದ ದೃಶ್ಯೇಂದ್ರಿಯದಿಂದ ಉಂಟಾಗುವ ಅತ್ಯಾಸೆಯಿಂದ ಬರುವ ಹತಾಶೆಯನ್ನು ಹತ್ತಿಕ್ಕಲು ಪ್ರಯತ್ನಿಸು. ಈ ದುಸ್ಥಿತಿಗಳು ಪ್ರವಾಹದಂತೆ ಮನುಷ್ಯನನ್ನು ಮುಳುಗಿಸಿಬಿಡುತ್ತವೆ. ಆದ್ದರಿಂದ ದೃಶ್ಯೇಂದ್ರಿಯವನ್ನು ರಕ್ಷಿಸಿಕೊ, ಅದರ ಮೇಲೆ ನಿಯಂತ್ರಣವನ್ನು ಸಾಧಿಸು.

೨೨. "ಹೀಗೆಯೇ ಇನ್ನಿತರ ಇಂದ್ರಿಯಗಳ ಬಗೆಗೂ ನಿಯಂತ್ರಣ ಸಾಧಿಸು. ಕಿವಿಯಿಂದ ಸದ್ದನ್ನುಕೇಳಿದಾಗ ಅಥವಾ ಮೂಗಿನಿಂದ ವಾಸನೆ ಹೀರಿದಾಗ, ನಾಲಗೆಯಿಂದ ರುಚಿಯನ್ನು ನೋಡಿದಾಗ ಅಥವಾ ಸ್ಪರ್ಶೇಂದ್ರಿಯದಿಂದ ವಸ್ತುಗಳನ್ನು ಮುಟ್ಟಿದಾಗ ಮತ್ತು ವಸ್ತುವನ್ನು ಮನಸ್ಸಿನಿಂದ ಗ್ರಹಿಸಿದಾಗ ಅದರ ಹೊರನೋಟಕ್ಕೆ ಅಥವಾ ವಿವರಗಳಿಗೆ ಮಾರುಹೋಗಬೇಡ.

೨೩. "ಇದೆಲ್ಲವನ್ನೂ ಆತ ಸ್ವಾಧೀನಪಡಿಸಿಕೊಂಡ ಕೂಡಲೇ, ಅವನಿಗೆ ತಥಾಗತ ಈ ಮುಂದಿನ ಉಪದೇಶ ನೀಡುತ್ತಾನೆ: ಸೋದರನೇ, ಬಾ! ಮಿತಾಹಾರಿಯಾಗಿರು; ಆಸ್ಥೆಯಿಂದ ಮತ್ತು ಎಚ್ಚರಿಕೆಯಿಂದ ನಿನ್ನ

ಆಹಾರವನ್ನು ತೆಗೆದುಕೊ. ಅದನ್ನು ಆಟಕ್ಕಾಗಿ ಅಥವಾ ಭೋಗಕ್ಕಾಗಿ ಅಥವಾ ವೈಯಕ್ತಿಕ ಮೋಹಕ್ಕಾಗಿ ಅಥವಾ ದೇಹದ ಸೊಬಗಿಗಾಗಿ ತೆಗೆದುಕೊಳ್ಳಬೇಡ, ಆದರೆ ದೇಹದ ದೃಢತ್ವಕ್ಕಾಗಿ, ಅದರ ತ್ರಾಣಕ್ಕಾಗಿ, ತೊಂದರೆಯಿಂದ ರಕ್ಷಿಸಿಕೊಳ್ಳಲು ಹಾಗೂ ಧರ್ಮಜೀವನವನ್ನು ಅನುಷ್ಠಾನ ಮಾಡಲು ಮಾತ್ರ ಆಹಾರವನ್ನು ತೆಗೆದುಕೊ. ಆಗ ಈ ಆಲೋಚನೆ ನಿನ್ನೊಳಗಿರಲಿ: ನಾನು ನನ್ನ ಮೊದಲಿನ ಭಾವನೆಯನ್ನು ನಿಯಂತ್ರಿಸುತ್ತೇನೆ. ಯಾವ ಹೊಸ ಭಾವನೆಗೂ ನಾನು ಅವಕಾಶ ಕೊಡುವುದಿಲ್ಲ. ರಕ್ಷಣೆ ಮತ್ತು ನೆಮ್ಮದಿ ನನ್ನದಾಗಲಿ.

೨೪. "ಬ್ರಾಹ್ಮಣನೇ, ಹೀಗೆ ಅವನು ಊಟದ ಮೇಲೆ ಹತೋಟಿಯನ್ನು ಸಾಧಿಸಿದ ಮೇಲೆ ತಥಾಗತ ಅವನಿಗೆ ಮುಂದಿನ ಉಪದೇಶ ಕೊಡುತ್ತಾನೆ: 'ಬಾ, ಸೋದರನೆ! ಸದಾ ಜಾಗೃತನಾಗಿರು. ಹಗಲು ಹೊತ್ತು ನಡೆಯುವಾಗ ಅಥವಾ ಕುಳಿತಿದ್ದಾಗ ನಿನಗೆ ತೊಂದರೆ ಕೊಡಬಹುದಾದ ವಿಷಯಗಳಿಂದ ನಿನ್ನ ಹೃದಯವನ್ನು ಶುದ್ಧಮಾಡಿಕೊ. ರಾತ್ರಿ ಹೊತ್ತು ಮೊದಲ ಜಾವವನ್ನು ಶತಪಥ ತಿರುಗುತ್ತಾ ಅಥವಾ ಕುಳಿತು ಮೇಲಿನಂತೆ ನಿರ್ಮಲಗೊಳಿಸಿಕೊ. ರಾತ್ರಿಹೊತ್ತು ಎರಡನೇ ಜಾವದಲ್ಲಿ, ಸಿಂಹದ ರೀತಿಯಲ್ಲಿ ಬಲಮಗ್ಗುಲಿಗೆ ಮಲಗಿಕೊ. ಒಂದು ಪಾದವನ್ನು ಇನ್ನೊಂದರ ಮೇಲಿರಿಸಿ ಏಕಾಗ್ರತೆಯಿಂದ ಶಾಂತಮನಸ್ಕನಾಗಿ ಶ್ರಮದ ಬಗ್ಗೆ ನಿನ್ನ ಆಲೋಚನೆಗಳನ್ನು ಹರಿಯಬಿಡು. ಆಮೇಲೆ ರಾತ್ರಿಯ ಮೂರನೆಯ ಜಾವದಲ್ಲಿ ಎದ್ದು ಶತಪಥ ತಿರುಗಾಡುತ್ತಾ ಅಥವಾ ಕುಳಿತುಕೊಂಡು ನಿನ್ನ ಹೃದಯಕ್ಕೆ ಅಡ್ಡಿಯಾಗಬಹುದಾದ ವಿಷಯಗಳನ್ನು ಸ್ವಚ್ಛಗೊಳಿಸು.'

೨೫. "ಆಮೇಲೆ, ಬ್ರಾಹ್ಮಣನೆ! ಭಿಕ್ಕು ಜಾಗೃತಾವಸ್ಥೆಗೆ ನಿಷ್ಠನಾದಾಗ ತಥಾಗತ ಮುಂದಿನ ಪಾಠವನ್ನು ಹೀಗೆ ನೀಡುತ್ತಾನೆ: 'ಎಲೈ, ಸೋದರನೇ, ಬಾ! ಶಾಂತ ಮನಸ್ಕನಾಗಿರು, ಆತ್ಮಸಂಯಮಿಯಾಗಿರು. ಮುಂದಕ್ಕೆ ಹೋಗುವಾಗ ಅಥವಾ ಹಿಂದಕ್ಕೆ ಬರುವಾಗ ನಿನ್ನನ್ನು ನೀನು ನಿಯಂತ್ರಿಸಿಕೊಳ್ಳುತ್ತಿರು. ಮುಂದಕ್ಕೆ ನೋಡುವಾಗ ಅಥವಾ ಹಿಂದಿರುಗಿ ನೋಡುವಾಗ, ಬಾಗುವಾಗ ಅಥವಾ ವಿಶ್ರಾಂತಿ ಪಡೆಯುವಾಗ, ಕಾಷಾಯ ವಸ್ತ್ರ ಧರಿಸುವಾಗ ಅಥವಾ ಕಾಷಾಯ ವಸ್ತ್ರ ಮತ್ತು ಭಿಕ್ಷಾಪಾತ್ರೆ ಹಿಡಿದಿರುವಾಗ, ಉಣ್ಣುವಾಗ, ಕುಡಿಯುವಾಗ, ರುಚಿ ನೋಡುವಾಗ, ಮಲಮೂತ್ರ ವಿಸರ್ಜನೆ ಮಾಡುವಾಗ, ನಡೆಯುವಾಗ, ನಿಂತಿದ್ದಾಗ, ಕುಳಿತಿದ್ದಾಗ, ಮಲಗಿದ್ದಾಗ, ನಿದ್ರಿಸುವಾಗ, ಅಥವಾ ಎಚ್ಚರವಿದ್ದಾಗ, ಮಾತಾಡುವಾಗ ಅಥವಾ ಮೌನಿಯಾಗಿದ್ದಾಗ ನಿನ್ನನ್ನು ನೀನು ಹತೋಟಿಯಲ್ಲಿ ಇಟ್ಟುಕೋ.'

೨೬. 'ಆಮೇಲೆ, ಬ್ರಾಹ್ಮಣನೆ! ಆತ ಆತ್ಮಸಂಯಮಿಯಾದಾಗ ತಥಾಗತ ಅವನಿಗೆ ಈ ಮುಂದಿನ ಪಾಠ ಬೋಧಿಸುತ್ತಾನೆ: 'ಬಾ, ಸೋದರನೆ! ಏಕಾಂತ ನೆಲೆಯನ್ನು ಹುಡುಕು. ಕಾಡು ಅಥವಾ ಮರದ ಬುಡ, ಬೆಟ್ಟ ಅಥವಾ ಗುಹೆ, ಸ್ಮಶಾನ, ಅರಣ್ಯ, ಬಯಲು, ಹುಲ್ಲಿನ ಬಣವೆ. ಹೀಗೆ ಎಲ್ಲಿಯಾದರೂ ಏಕಾಂತವನ್ನು ಅರಸು'. ಅವನು ಹಾಗೆ ಮಾಡುತ್ತಾನೆ. ಅವನು ಊಟವಾದ ಮೇಲೆ ಪದ್ಮಾಸನ ಹಾಕಿ, ದೇಹವನ್ನು ನೆಟ್ಟಗಿರಿಸಿಕೊಂಡು, ಚತುರಾನಂದಗಳನ್ನು ಅನುಷ್ಠಾನಗೊಳಿಸಲು ಮುಂದುವರಿಯುತ್ತಾನೆ.'

೨೭. "ಈಗ, ಬ್ರಾಹ್ಮಣನೆ! ಮನೋನಿಗ್ರಹವನ್ನು ಗಳಿಸದೆ ಆಸೆಯುಳ್ಳವರಾದ ಎಲ್ಲ ಶಿಷ್ಯರಿಗೆ ಈ ರೀತಿಯ ತರಬೇತಿಯನ್ನು ಕೊಡುತ್ತೇನೆ.

೨೮. "ಆದರೆ ಅರ್ಹಂತರಾದ ಭಿಕ್ಕುಗಳು ಯಾರು ಆಸವಗಳನ್ನು ನಾಶ ಮಾಡಿದ್ದಾರೋ, ಯಾರು

ಉತ್ತಮ ಜೀವನ ನಡೆಸಿ ತಮ್ಮ ಕಾರ್ಯ ಮುಗಿಸಿ, ಭಾರ ಇಳಿಸಿಕೊಂಡು, ಮೋಕ್ಷ ಗಳಿಸಿ, ಹುಟ್ಟುಸಾವಿನ ಪಾಶಗಳನ್ನು ಗೆದ್ದು, ಪರಿಪೂರ್ಣ ಅಂತರ್ವೀಕ್ಷಣೆಯಿಂದ ಬಿಡುಗಡೆ ಹೊಂದಿರುತ್ತಾರೋ ಅವರ ಸದ್ಯದ ಬದುಕು ಶಾಂತಿಯುತವಾಗಿರುತ್ತದೆ ಮತ್ತು ಆತ್ಮಸಂಯಮದ ಬಗ್ಗೆ ಅವರು ಜಾಗ್ರತರಾಗಿರುತ್ತಾರೆ."

೨೯. ಹೀಗೆ ಹೇಳಿ ಮುಗಿಸಿದ ಮೇಲೆ, ಕರಣಿಕನಾದ ಬ್ರಾಹ್ಮಣ ಮೊಗ್ಗಲಣನು ತಥಾಗತನಿಗೆ ಹೀಗೆ ಹೇಳಿದನು:

೩೦. "ಗುರು ಗೌತಮ, ದಯಮಾಡಿ ನನಗೆ ತಿಳಿಸಿ. ಪೂಜ್ಯ ಗೌತಮನ ಶಿಷ್ಯರೆಲ್ಲರೂ ಪರಮಶ್ರೇಷ್ಠವಾದ ನಿಬ್ಬಾಣ(ನಿರ್ವಾಣ)ವನ್ನು ಪಡೆಯುತ್ತಾರೆಯೇ; ಅಥವಾ ಅದನ್ನು ಗಳಿಸಲು ಕೆಲವರು ವಿಫಲರಾಗುತ್ತಾರೆಯೇ?"

೩೧. "ಬ್ರಾಹ್ಮಣನೇ, ನನ್ನ ಉಪದೇಶವನ್ನು ಅಂಗೀಕರಿಸಿ, ನನ್ನಿಂದ ತರಬೇತಿ ಹೊಂದಿದ ನನ್ನ ಕೆಲವು ಶಿಷ್ಯರು ನಿಬ್ಬಾಣವನ್ನು ಸಾಧಿಸುತ್ತಾರೆ. ಇತರರಿಗೆ ಸಾಧ್ಯವಾಗುವುದಿಲ್ಲ."

೩೨. "ಗುರು ಗೌತಮ, ಇದಕ್ಕೆ ಕಾರಣವೇನು? ಇದೇಕೆ ಹೀಗೆ ಗುರು ಗೌತಮ? ಇಲ್ಲಿ ನಿರ್ವಾಣವಿದೆ. ನಿರ್ವಾಣಕ್ಕೆ ದಾರಿಯಿದೆ. ಅದಕ್ಕೆ ಪೂಜ್ಯ ಗೌತಮ ಮಾರ್ಗದರ್ಶಕನಾಗಿದ್ದಾನೆ. ಹಾಗಿದ್ದೂ ಏನು ಕಾರಣ, ಏಕೆ ಕೆಲವರು ಶಿಷ್ಯರು ಮಾತ್ರ ಉಪದೇಶವನ್ನು ಅನುಸರಿಸಿ, ತರಬೇತಿ ಹೊಂದಿ ಅದನ್ನು ಸಾಧಿಸುತ್ತಾರೆ. ಇತರರು ಏಕೆ ಸಾಧಿಸುವುದಿಲ್ಲ?"

೩೩. "ಬ್ರಾಹ್ಮಣನೇ, ಆ ಪ್ರಶ್ನೆಗೆ ನಾನು ಉತ್ತರಿಸುತ್ತೇನೆ. ಆದರೆ ನಿನಗೆ ತಿಳಿದಷ್ಟು ಮಟ್ಟಿಗೆ ನನಗೆ ಉತ್ತರಿಸು. ರಾಜಗೃಹದ ರಸ್ತೆಯಲ್ಲಿ ಹೋಗಲು ನೀನು ಕುಶಲಿಯಾಗಿರುವೆಯಾ ಎಂಬುದನ್ನು ನೀನು ನನಗೆ ತಿಳಿಸು, ಬ್ರಾಹ್ಮಣನೇ."

೩೪. "ಹೌದು, ಗುರುವೆ! 'ರಾಜಗೃಹದ ರಸ್ತೆಯಲ್ಲಿ ನಾನು ನಿಜವಾಗಿಯೂ ಪಳಗಿದ್ದೇನೆ.'

೩೫. "ಸರಿ. ಹೀಗೆ ಸೂಚನೆ ಪಡೆದು, ಉಪದೇಶ ಹೊಂದಿದರೂ ಒಬ್ಬನು ತಪ್ಪುದಾರಿಯನ್ನು ಹಿಡಿಯುತ್ತಾನೆ. ಪಶ್ಚಿಮಾಭಿಮುಖವಾಗಿ ಹೊರಡುತ್ತಾನೆ.

೩೬. "ಆಮೇಲೆ ಎರಡನೆಯ ಮನುಷ್ಯ ಬರುತ್ತಾನೆ. ಅದೇ ಕೋರಿಕೆಯಂತೆ ಅದೇ ಸೂಚನೆಗಳನ್ನು ಪಡೆಯುತ್ತಾನೆ. ನಿನ್ನ ಬುದ್ಧಿವಾದವನ್ನು ಅನುಸರಿಸಿ ಅವನು ಸುರಕ್ಷಿತವಾಗಿ ರಾಜಗೃಹ ತಲುಪುತ್ತಾನೆ."

೩೭. "ಇದು ನನ್ನ ವ್ಯವಹಾರ?"

೩೮. "ಈ ವಿಷಯದಲ್ಲಿ ನಾನೇನು ಮಾಡಲಿ, ಬ್ರಾಹ್ಮಣನೇ? ತಥಾಗತ ಮಾರ್ಗವನ್ನು ಮಾತ್ರ ತೋರಿಸುತ್ತಾನೆ."

೩೯. ಇಲ್ಲಿನ ಮಾತುಕತೆಯಿಂದ ಅವನು ಮೋಕ್ಷವನ್ನು ಅಭಯದಾನ ಮಾಡುವುದಿಲ್ಲವೆಂದು ತಿಳಿಸುವ ಪೂರ್ಣ ಹೇಳಿಕೆಯಿದೆ. ಅವನು ಮಾರ್ಗದಾತ ಮಾತ್ರ.

೪೦. ಅಲ್ಲದೆ, ಮುಕ್ತಿಯೆಂದರೇನು?

೪೧. ಮಹಮ್ಮದ್ ಮತ್ತು ಜೀಸಸ್‌ರ ದೃಷ್ಟಿಯಲ್ಲಿ ಮೋಕ್ಷ ಎಂದರೆ ನರಕಕ್ಕೆ ಕಳುಹಿಸಲಿರುವ ಜೀವವನ್ನು ಮಧ್ಯೆ ಪ್ರವೇಶಿಸಿ ಉಳಿಸುವುದು ಪ್ರವಾದಿಯ ಕೆಲಸ.

೪೨. ಬುದ್ಧನ ಅರ್ಥದಲ್ಲಿ ಮುಕ್ತಿ ಎಂದರೆ ನಿರ್ವಾಣ, ನಿರ್ವಾಣ ಎಂದರೆ ರಾಗದ್ವೇಷಗಳ ನಿಯಂತ್ರಣ.

೪೩. ಅಂಥ ಧರ್ಮದಲ್ಲಿ ಮೋಕ್ಷದ ಭರವಸೆಯಾದರೂ ಎಲ್ಲಿ ಸಾಧ್ಯ?

## ೩
## ಬುದ್ಧ ತನಗಾಗಲೀ, ತನ್ನ ಧರ್ಮಕ್ಕಾಗಲೀ ಯಾವ ದೈವಿಕತೆಯನ್ನೂ ಬಯಸಲಿಲ್ಲ. ಧಮ್ಮ ಮಾನವನಿಂದ ಮಾನವನಿಗಾಗಿ ಶೋಧಿತವಾಯಿತು. ಅದು ದೈವಪ್ರಣೀತ(ಅಪೌರುಷೇಯ)ವಲ್ಲ.

೧. ಧರ್ಮದ ಪ್ರತಿಯೊಬ್ಬ ಸ್ಥಾಪಕನೂ ತನಗಾಗಲೀ ಅಥವಾ ತನ್ನ ಉಪದೇಶಕ್ಕಾಗಲೀ ದೈವಿಕತೆಯನ್ನು ಆರೋಪಿಸಿಕೊಂಡಿದ್ದಾನೆ.

೨. ಮೊಸೆಸ್ ತನಗೆ ಯಾವ ದೈವಿಕತೆಯನ್ನೂ ಪ್ರತಿಪಾದಿಸಕೊಳ್ಳದಿದ್ದರೂ ತನ್ನ ಉಪದೇಶಕ್ಕೆ ದೈವಮೂಲವನ್ನು ಪ್ರತಿಪಾದಿಸಿದ್ದಾನೆ. ಹಾಲು ಜೇನು ಹರಿಯುವ ನಾಡನ್ನು ನೀವು ಮುಟ್ಟಬೇಕೆಂದರೆ ನನ್ನ ಉಪದೇಶಗಳನ್ನು ನೀವು ಒಪ್ಪಿಕೊಳ್ಳಬೇಕು. ಏಕೆಂದರೆ ಅವು ಪರಮದೇವರಾದ ಜಿಹೋವನ ಉಪದೇಶಗಳೆಂದು ಅವನು ತನ್ನ ಅನುಯಾಯಿಗಳಿಗೆ ತಿಳಿಸಿದನು.

೩. ಜೀಸಸ್ ತನಗೇ ದೈವತ್ವವನ್ನು ಆರೋಪಿಸಿಕೊಂಡ. ತಾನು ದೇವರ ಮಗನೆಂದು ಹೇಳಿಕೊಂಡ. ಸಹಜವಾಗಿ ಅವನ ಉಪದೇಶಗಳಿಗೆ ದೈವತ್ವದ ಮೂಲ ಪ್ರಾಪ್ತವಾಯಿತು.

೪. ಕೃಷ್ಣ ತಾನು ಸ್ವತಃ ದೇವರು ಎಂದು ಹೇಳಿ, ಭಗವದ್ಗೀತೆ ತನ್ನ ಸ್ವಂತವಾಣಿ ಎಂದು ಘೋಷಿಸಿದ.

೫. ಬುದ್ಧ ತನಗಾಗಲೀ ತನ್ನ ಶಾಸನಕ್ಕಾಗಲೀ ಅಂಥ ಯಾವ ಹಕ್ಕನ್ನೂ ಬಯಸಲಿಲ್ಲ.

೬. ತಾನು ಅನೇಕ ಮಾನವರಲ್ಲಿ ಒಬ್ಬ, ತನ್ನ ಸಂದೇಶ ಮನುಷ್ಯರಿಗೆ ಮನುಷ್ಯ ಬೋಧಿಸಿದ ಉಪದೇಶ ಎಂದು ಹೇಳಿದ್ದಾನೆ.

೭. ಅವನೆಂದೂ ತನ್ನ ಉಪದೇಶ ದೋಷಾತೀತ ಎಂದು ಹೇಳಲಿಲ್ಲ.

೮. ತಾನು ಅರ್ಥ ಮಾಡಿಕೊಂಡಂತೆ ತನ್ನ ಸಂದೇಶವೇ ಮೋಕ್ಷಕ್ಕೆ ಏಕೈಕ ಸತ್ಯಮಾರ್ಗ ಎಂದು ಮಾಡಿದುದೊಂದೇ ಆತ ಮಾಡಿದ ಘೋಷಣೆ.

೯. ಲೋಕ ಜೀವನದ ಸಾರ್ವತ್ರಿಕ ಮಾನವಾನುಭವದ ಮೇಲೆ ಅದು ನೆಲೆಗೊಂಡಿದೆ.

೧೦. ಅದನ್ನು ಯಾರು ಬೇಕಾದರೂ ಪ್ರಶ್ನಿಸಬಹುದು, ಪರೀಕ್ಷಿಸಬಹುದು, ಅದರಲ್ಲಡಗಿರುವ ಸತ್ಯವನ್ನು ಹುಡುಕಬಹುದು ಎಂದು ಆತ ಬಹಿರಂಗಪಡಿಸಿದ್ದಾನೆ.

೧೧. ಇಂಥ ಸವಾಲಿಗೆ ಬೇರಾವ ಮತಸ್ಥಾಪಕನೂ ತನ್ನ ಧರ್ಮವನ್ನು ಸಂಪೂರ್ಣವಾಗಿ ತೆರೆದಿಟ್ಟಿಲ್ಲ.

# ಭಾಗ : ೨
# ಬುದ್ಧ ಧಮ್ಮದ ಬಗ್ಗೆ ವಿವಿಧ ದೃಷ್ಟಿಕೋನಗಳು

೧. ಇತರರು ಅರ್ಥಮಾಡಿಕೊಂಡಂತೆ ಬುದ್ಧನ ಬೋಧನೆ
೨. ಬುದ್ಧ ತಾನೇ ಮಾಡಿದ ವರ್ಗೀಕರಣ

# ೧. ಇತರರು ಅರ್ಥಮಾಡಿಕೊಂಡಂತೆ ಬುದ್ಧನ ಬೋಧನೆ

೧. ಬುದ್ಧನ ಉಪದೇಶಗಳು ಯಾವುವು?

೨. ಈ ಪ್ರಶ್ನೆಯ ಬಗ್ಗೆ ಬುದ್ಧನ ಯಾವುದೇ ಇಬ್ಬರು ಅನುಯಾಯಿಗಳಲ್ಲಿ ಅಥವಾ ಬುದ್ಧ ಧರ್ಮ ಕುರಿತ ವಿದ್ವಾಂಸರುಗಳಲ್ಲಿ ಸಹಮತವಿಲ್ಲ.

೩. ಕೆಲವರ ದೃಷ್ಟಿಯಲ್ಲಿ ಸಮಾಧಿಯೇ ಆತನ ಪ್ರಮುಖ ಉಪದೇಶ.

೪. ಕೆಲವರ ದೃಷ್ಟಿಯಲ್ಲಿ ವಿಪ್ಪಸ್ಸನ(ಒಂದು ಬಗೆಯ ಪ್ರಾಣಾಯಾಮ)ವಾಗಿದೆ.

೫. ಕೆಲವರ ದೃಷ್ಟಿಯಲ್ಲಿ ಬುದ್ಧಧರ್ಮ ನಿಗೂಢವಾದುದು. ಇನ್ನು ಕೆಲವರ ದೃಷ್ಟಿಯಲ್ಲಿ ಅದು ನಿಗೂಢವಲ್ಲ.

೬. ಕೆಲವರ ದೃಷ್ಟಿಯಲ್ಲಿ ಅದು ಶುಷ್ಕ ಅಧ್ಯಾತ್ಮದ ಕಂತೆ.

೭. ಕೆಲವರ ದೃಷ್ಟಿಯಲ್ಲಿ ಅದು ಕೇವಲ ಅನುಭಾವ.

೮. ಕೆಲವರ ದೃಷ್ಟಿಯಲ್ಲಿ ಅದು ಪ್ರಪಂಚದಿಂದ ಪಲಾಯನಕ್ಕೆ ಮಾಡುವ ಸ್ವಾರ್ಥ ಅಮೂರ್ತ ವಾದ.

೯. ಕೆಲವರ ದೃಷ್ಟಿಯಲ್ಲಿ ಅದು ಹೃದಯದ ಪ್ರತಿಯೊಂದು ಅಂತಃಪ್ರೇರಣೆ ಮತ್ತು ಭಾವನೆಗಳನ್ನು ವ್ಯವಸ್ಥಿತವಾಗಿ ಹತ್ತಿಕ್ಕುವ ಕ್ರಮವಾಗಿದೆ.

೧೦. ಬುದ್ಧ ಧರ್ಮವನ್ನು ಕುರಿತು ಇನ್ನೂ ಅನೇಕ ಅಭಿಪ್ರಾಯಗಳನ್ನು ಸಂಗ್ರಹಿಸಬಹುದಾಗಿದೆ.

೧೧. ಈ ಭಿನ್ನಾಭಿಪ್ರಾಯಗಳು ಆಶ್ಚರ್ಯಕರವಾಗಿವೆ.

೧೨. ನಿರ್ದಿಷ್ಟ ವಿಷಯಗಳ ಬಗ್ಗೆ ವಿಚಿತ್ರ ಕಲ್ಪನೆಯನ್ನಿಟ್ಟುಕೊಂಡಿರುವ ವ್ಯಕ್ತಿಗಳ ಕೆಲವು ಅಭಿಪ್ರಾಯಗಳು ಇವು. ಅಂಥವರು ಯಾರು ಎಂದರೆ ಬುದ್ಧ ಧರ್ಮದ ಸಾರಸರ್ವಸ್ವ ಸಮಾಧಿ ಅಥವಾ ವಿಪ್ಪಸ್ಸನ ಅಥವಾ ನಿಗೂಢತೆ ಎಂದು ಹೇಳುವವರದಾಗಿದೆ.

೧೩. ಪ್ರಾಚೀನ ಭಾರತೀಯ ಇತಿಹಾಸದ ವಿದ್ಯಾರ್ಥಿಗಳಾಗಿ ಬುದ್ಧ ಧರ್ಮವನ್ನು ಕುರಿತು ಬಹುಪಾಲು ಲೇಖಕರು ಬರೆದಿರುವುದರ ವಸ್ತುಸ್ಥಿತಿಯ ಫಲವಾಗಿ ಇನ್ನೂ ಕೆಲವು ಅಭಿಪ್ರಾಯಗಳು ಬಂದಿವೆ. ಬುದ್ಧಧರ್ಮದ ಬಗೆಗಿನ ಅವರ ಅಧ್ಯಯನ ಪ್ರಾಸಂಗಿಕ ಮತ್ತು ಸಾಂದರ್ಭಿಕವಾದುದು.

೧೪. ಅವರಲ್ಲಿ ಕೆಲವರು ಬುದ್ಧ ಧರ್ಮದ ಅಭ್ಯಾಸಿಗಳಲ್ಲ.

೧೫. ಧರ್ಮ, ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ವಿವರಿಸುವ ವಿಷಯವಾದ ಮಾನವ ಶಾಸ್ತ್ರದ ವಿದ್ಯಾರ್ಥಿಗಳು ಕೂಡ ಅವರಾಗಿಲ್ಲ.

೧೬. ಉದ್ಭವವಾಗುವ ಪ್ರಶ್ನೆಯೆಂದರೆ "ಬುದ್ಧನಿಗೆ ಸಾಮಾಜಿಕ ಸಂದೇಶ ಇರಲಿಲ್ಲವೇ?" ಎನ್ನುವುದು.

೧೭. ಇದಕ್ಕೆ ಉತ್ತರವನ್ನು ಒತ್ತಾಯಿಸಿದರೆ ಬುದ್ಧಧರ್ಮದ ವಿದ್ಯಾರ್ಥಿಗಳು ಎರಡು ಅಂಶಗಳನ್ನು ಸೂಚಿಸುತ್ತಾರೆ. ಅವರು ಹೇಳುತ್ತಾರೆ:

೧೮. "ಬುದ್ಧ ಅಹಿಂಸೆಯನ್ನು ಬೋಧಿಸಿದನು."

೧೯. "ಬುದ್ಧ ಶಾಂತಿಯನ್ನು ಬೋಧಿಸಿದನು."

೨೦. ಮುಂದುವರಿದು ಕೇಳಿದರೆ "ಬುದ್ಧ ಇನ್ನೇನಾದರೂ ಸಾಮಾಜಿಕ ಸಂದೇಶವನ್ನು ನೀಡಿರುವನೆ?"

೨೧. "ಬುದ್ಧ ನ್ಯಾಯವನ್ನು ಬೋಧಿಸಿರುವನೆ?"
೨೨. "ಬುದ್ಧ ಪ್ರೇಮವನ್ನು ಬೋಧಿಸಿರುವನೆ?"
೨೩. "ಬುದ್ಧ ಸ್ವಾತಂತ್ರ್ಯವನ್ನು ಬೋಧಿಸಿರುವನೆ?"
೨೪. "ಬುದ್ಧ ಸಮಾನತೆಯನ್ನು ಬೋಧಿಸಿರುವನೆ?"
೨೫. "ಬುದ್ಧ ಸೋದರತ್ವವನ್ನು ಬೋಧಿಸಿರುವನೆ?"
೨೬. "ಕಾರ್ಲ್ ಮಾರ್ಕ್ಸ್‌ನಿಗೆ ಬುದ್ಧ ಉತ್ತರ ಕೊಡಬಲ್ಲನೆ?"
೨೭. ಬುದ್ಧ ಧಮ್ಮವನ್ನು ಕುರಿತು ಚರ್ಚಿಸುವಾಗ ಈ ಪ್ರಶ್ನೆಗಳನ್ನು ಎಂದೂ ಕೇಳಿಯೇ ಇಲ್ಲ.
೨೮. ಇದಕ್ಕೆ ನನ್ನ ಉತ್ತರ ಎಂದರೆ ಬುದ್ಧ ಸಾಮಾಜಿಕ ಸಂದೇಶ ನೀಡಿರುವನು. ಅವನು ಈ ಎಲ್ಲ ಪ್ರಶ್ನೆಗಳನ್ನೂ ಉತ್ತರಿಸುತ್ತಾನೆ. ಆದರೆ ಅವುಗಳನ್ನು ಆಧುನಿಕ ಲೇಖಕರು ಹೂತುಬಿಟ್ಟಿದ್ದಾರೆ.

## ೨. ಬುದ್ಧ ತಾನೇ ಮಾಡಿದ ವರ್ಗೀಕರಣ

೧. ಧಮ್ಮದ ಬಗ್ಗೆ ಬುದ್ಧ ವಿಭಿನ್ನ ವರ್ಗೀಕರಣವನ್ನು ಅಳವಡಿಸಿಕೊಂಡಿದ್ದಾನೆ.
೨. ಮೊದಲನೆ ವರ್ಗವನ್ನು ಅವನು ಧಮ್ಮ ಎಂದು ಕರೆದಿದ್ದಾನೆ.
೩. ಅಧಮ್ಮ ಎಂಬ ಹೊಸ ವರ್ಗವನ್ನು ಅವನು ರೂಪಿಸಿದನು. ಆದರೆ ಅದು (ಅಧಮ್ಮ) ಧಮ್ಮ ಎಂಬ ಹೆಸರಿನಲ್ಲಿಯೇ ಪ್ರಚಲಿತವಾಯಿತು.
೪. ಅವನು ಮೂರನೆಯ ವರ್ಗವನ್ನು ರೂಪಿಸಿ ಅದನ್ನು ಸದ್ಧಮ್ಮ ಎಂದು ಕರೆದನು.
೫. ಧಮ್ಮ ತತ್ತ್ವಕ್ಕೆ ಮೂರನೆಯ ವರ್ಗ ಇನ್ನೊಂದು ಹೆಸರು.
೬. ಬುದ್ಧನ ಧಮ್ಮವನ್ನು ಅರ್ಥಮಾಡಿಕೊಳ್ಳಲು ಈ ಮೂರನ್ನು ಅಂದರೆ ಧಮ್ಮ, ಅಧಮ್ಮ ಮತ್ತು ಸದ್ಧಮ್ಮವನ್ನು ಅರ್ಥಮಾಡಿಕೊಳ್ಳಬೇಕು.

## ಭಾಗ : ೩

# ಧರ್ಮ ಎಂದರೇನು?

೧. ಜೀವನದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದೇ ಧರ್ಮ
೨. ಜೀವನದಲ್ಲಿ ಪರಿಪೂರ್ಣತೆಯನ್ನು ಪಡೆಯುವುದೇ ಧರ್ಮ
೩. ನಿರ್ವಾಣದಲ್ಲಿ ಬದುಕುವುದೇ ಧರ್ಮ
೪. ದುರಾಸೆಯನ್ನು ತ್ಯಜಿಸುವುದೇ ಧರ್ಮ
೫. ಎಲ್ಲಿ ಸಂಯುಕ್ತ ವಸ್ತುಗಳೂ ಅಶಾಶ್ವತ ಎಂದು ನಂಬುವುದೇ ಧರ್ಮ
೬. ಕರ್ಮವೇ ನೈತಿಕ ವ್ಯವಸ್ಥೆಯ ಸಾಧನ ಎಂದು ನಂಬುವುದೇ ಧರ್ಮ

# ೧. ಜೀವನದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದೇ ಧರ್ಮ

೧. "ಪರಿಶುದ್ಧತೆಯಲ್ಲಿ ಈ ಮೂರು ರೂಪಗಳಿವೆ..... ದೇಹದ ಪರಿಶುದ್ಧತೆ ಯಾವ ಬಗೆಯದು?"

೨. "ಕೊಲೆ ಮಾಡುವುದು, ಕದಿಯುವುದು, ಪಾಪ ಜೀವನ ನಡೆಸುವುದು ಇವುಗಳಿಂದ ವ್ಯಕ್ತಿ ದೂರವಿದ್ದರೆ ಇದನ್ನು 'ದೇಹದ ಪರಿಶುದ್ಧತೆ' ಎಂದು ಕರೆಯಲಾಗಿದೆ."

೩. "ನುಡಿ ಶುದ್ಧತೆ ಯಾವ ಬಗೆಯದು?"

೪. "ಸುಳ್ಳು ಹೇಳುವುದರಿಂದ ವ್ಯಕ್ತಿ ದೂರವಿರುವುದು."

೫. "ಮನಃಶುದ್ಧತೆ ಯಾವ ಬಗೆಯದು?"

೬. "ಭಿಕ್ಷುಗೆ ವೈಯಕ್ತಿಕ ವಿಷಯಾಸಕ್ತಿಯ ಬಗ್ಗೆ ಎಚ್ಚರಿಕೆಯಿದ್ದರೆ: 'ನನ್ನಲ್ಲಿ ಇಂದ್ರಿಯಲಾಲಸೆ ಇದೆ' ಎಂದುಕೊಳ್ಳುತ್ತಾನೆ. ಅದಿಲ್ಲದಿದ್ದರೆ ಆ ಬಗೆಗೂ ಅವನಿಗೆ ಎಚ್ಚರವಿರುತ್ತದೆ. ಇನ್ನೂ ಮೂಡದ ವಿಷಯಾಸಕ್ತಿ ಹೇಗೆ ಮೂಡುತ್ತದೆಂದು, ಅದು ಮೂಡಿದಾಗ ಹೇಗೆ ಅದನ್ನು ತ್ಯಜಿಸಬೇಕೆಂದು, ಮತ್ತೆ ಮತ್ತೆ ಅದು ಮೂಡದಂತೆ ಹೇಗೆ ನೋಡಿಕೊಳ್ಳಬೇಕೆಂದು ಅವನಿಗೆ ಗೊತ್ತಿರುತ್ತದೆ.

೭. ಅವನಿಗೆ ವೈಯಕ್ತಿಕ ದ್ವೇಷವಿದ್ದರೆ ಅವನಿಗೆ ಅದರ ಬಗ್ಗೆ ಅರಿವಿರುತ್ತದೆ: 'ನನ್ನಲ್ಲಿ ದ್ವೇಷವಿದೆ' ಎಂದುಕೊಳ್ಳುತ್ತಾನೆ. ಅದು ಹೇಗೆ ಮೂಡುತ್ತದೆ, ಅದನ್ನು ಹೇಗೆ ತ್ಯಜಿಸಬೇಕು, ಮುಂದೆ ಅದು ಮೂಡದಂತೆ ಹೇಗೆ ನೋಡಿಕೊಳ್ಳಬೇಕೆಂದು ಅವನಿಗೆ ಗೊತ್ತಿರುತ್ತದೆ.

೮. ವ್ಯಕ್ತಿಗೆ ಸೋಮಾರಿತನ ಹಾಗೂ ಜಡತ್ವ, ಉದ್ರೇಕ ಮತ್ತು ಕಳವಳ.... ಅನುಮಾನ ಮತ್ತು ತಾಕಲಾಟ ಇದ್ದರೆ ಅದರ ಅರಿವು ಅವನಿಗಿರುತ್ತದೆ. ಇವು ಹೇಗೆ ಹುಟ್ಟುತ್ತವೆ, ಅವನ್ನು ಹೇಗೆ ನಿರ್ಮೂಲ ಮಾಡಬೇಕು, ಅವು ಮತ್ತೆ ಮುಂದೆ ಮರುಕಳಿಸದಂತೆ ಹೇಗೆ ನೋಡಿಕೊಳ್ಳಬೇಕೆಂಬುದರ ಅರಿವು ಅವನಿಗಿರುತ್ತದೆ. ಇದನ್ನು 'ಮನಃಶುದ್ಧಿ' ಎಂದು ಕರೆಯಲಾಗಿದೆ.

೯. ಯಾರು ಕಾಯಾ ವಾಚಾ ಮನಸಾ ಪರಿಶುದ್ಧನಾಗಿರುವನೋ', 'ಯಾರು ಶುದ್ಧತೆಯಿಂದ ಪಾಪರಹಿತನೂ, ಸ್ವಚ್ಛನೂ ಮತ್ತು ಧನ್ಯನೂ ಆಗಿರುವನೋ', ಅಂಥವನ್ನು 'ಪಾಪನಾಶಕ' ಎಂದು ಜನ ಕರೆಯುತ್ತಾರೆ."

## (೨)

೧. ಶುದ್ಧಿಯಲ್ಲಿ ಮೂರು ರೂಪಗಳಿವೆ..... ಕಾಯ ಶುದ್ಧಿ, ವಾಚ ಶುದ್ಧಿ, ಮನೋಶುದ್ಧಿ."

೨. ದೇಹದ ಪರಿಶುದ್ಧತೆ ಯಾವ ಬಗೆಯದು?"

೩. ಕೊಲ್ಲುವುದು, ಕದಿಯುವುದು, ವ್ಯಭಿಚಾರ ಮಾಡುವುದು ಇವುಗಳಿಂದ ವಿಮುಖನಾಗಿದ್ದರೆ ಅದನ್ನು 'ಕಾಯಶುದ್ಧಿ' ಎಂದು ಕರೆಯಲಾಗಿದೆ."

೪. ನುಡಿಶುದ್ಧಿ ಯಾವ ಬಗೆಯದು?"

೫. ಸುಳ್ಳು, ಕಾಡುಹರಟೆ ಇವುಗಳಿಂದ ವಿಮುಖನಾಗಿದ್ದರೆ ಅದನ್ನು 'ನುಡಿಶುದ್ಧಿ' ಎಂದು ಕರೆಯಲಾಗಿದೆ."

೬. ಮನೋಶುದ್ಧಿ ಯಾವ ಬಗೆಯದು?"

೭. ದುರಾಸೆ, ವೈರ ಇವುಗಳಿಂದ ವ್ಯಕ್ತಿ ದೂರವಿದ್ದು ಋಜು ದೃಷ್ಟಿ ಇದ್ದರೆ ಅದನ್ನು 'ಮನೋಶುದ್ಧಿ' ಎಂದು ಕರೆಯಬಹುದು.
ಇವು ಪರಿಶುದ್ಧತೆಯ ಮೂರು ರೂಪಗಳು.

## (೩)

೧. ಐದು ದೌರ್ಬಲ್ಯಗಳಿವೆ. ಶಿಕ್ಷಣಕ್ಕೆ ಅವಕಾಶ ನೀಡದ ಈ ಐದು ಯಾವುವು?
೨. ಕೊಲೆ, ಕಳವು, ಕಾಮ ಮತ್ತು ಪಾಪಾಚರಣೆಗಳು, ಸುಳ್ಳು ಹೇಳುವುದು, ಆಲಸಿಗನನ್ನಾಗಿ ಮಾಡುವ ಮಾದಕ ಪಾನೀಯಗಳ ಸೇವನೆ.
೩. ಈ ಐದು ಕಾರಣಗಳಿಂದ ಸೋಲುಂಟಾಗುತ್ತದೆ.
೪. ಈ ಐದು ಮೂಲ ದೌರ್ಬಲ್ಯಗಳನ್ನು ವರ್ಜಿಸಿದರೆ, ಮನೋಜಾಗೃತಿಯ ನಾಲ್ಕು ಉಪೋತ್ಪನ್ನಗಳು ಮೂಡುತ್ತವೆ.
೫. ಪ್ರಪಂಚದಲ್ಲಿ ಸಾಮಾನ್ಯವಾಗಿ ಇರುವ ಆಸೆ, ಅತೃಪ್ತಿ ಇವೆರಡನ್ನು ಗೆದ್ದ ಭಿಕ್ಕು ದೇಹವನ್ನು ದೇಹವೆಂದು, ಶ್ರಮಪೂರ್ಣವೆಂದೂ, ಜಾಗೃತವೆಂದೂ ಮತ್ತು ಸ್ವಸ್ಥಚಿತ್ತವೆಂದೂ ಧ್ಯಾನಿಸುತ್ತಾನೆ.
೬. ಭಾವನೆಗಳನ್ನು ಭಾವನೆಗಳೆಂದು ಆತ ಧ್ಯಾನಿಸುತ್ತಾನೆ.
೭ ಆತ ಮನಸ್ಸನ್ನು ಮನಸ್ಸೆಂದು ಧ್ಯಾನಿಸುತ್ತಾನೆ.
೮. ಪ್ರಪಂಚದಲ್ಲಿ ಸಾಮಾನ್ಯವಾಗಿ ಇರುವ ಆಸೆ, ಅತೃಪ್ತಿಗಳೆರಡನ್ನು ಗೆದ್ದು ಶ್ರಮಪೂರ್ಣವೂ, ಜಾಗೃತವೂ ಮತ್ತು ಸ್ವಸ್ಥಚಿತ್ತನೂ ಆಗಿ ಧ್ಯಾನಿಸುತ್ತಾನೆ.
೯. ಶಿಕ್ಷಣಕ್ಕೆ ಅಡ್ಡಿಯಾದ ಈ ಐದು ಮೂಲ ದೌರ್ಬಲ್ಯಗಳನ್ನು ವರ್ಜಿಸಿದಾಗ ಮನೋಜಾಗೃತಿಯ ನಾಲ್ಕು ಉಪೋತ್ಪನ್ನಗಳು ಮೂಡುತ್ತವೆ.

## (೪)

೧. ನೈತಿಕ ಸೋಲು, ಮಾನಸಿಕ ಸೋಲು, ದೃಷ್ಟಿಕೋನದ ಸೋಲು ಎಂಬ ಈ ಮೂರು ಅಪಜಯಗಳಿವೆ.
೨. ನೈತಿಕ ಸೋಲು ಎಂದರೆ ಯಾವ ಬಗೆಯದು? ಕೊಲೆ, ಕಳವು, ಲೈಂಗಿಕ ಅಪರಾಧ, ಸುಳ್ಳು ಹೇಳುವುದು, ಚಾಡಿ ಹೇಳುವುದು, ಕೆಟ್ಟನುಡಿ ಆಡುವುದು, ಕಾಡುಹರಟೆ ಇವುಗಳನ್ನು 'ನೈತಿಕ ಸೋಲು' ಎನ್ನುತ್ತಾರೆ.
೩. ಮಾನಸಿಕ ಸೋಲು ಯಾವ ಬಗೆಯದು?
೪. ಯಾರ ಹೃದಯ ದುರಾಸೆ ಮತ್ತು ದ್ವೇಷದಿಂದ ತುಂಬಿದೆಯೊ ಅದನ್ನು 'ಮಾನಸಿಕ ಸೋಲು' ಎನ್ನುತ್ತಾರೆ.
೫. ದೃಷ್ಟಿಕೋನದ ಸೋಲು ಯಾವ ಬಗೆಯದು?
೬. ದಾನ ಧರ್ಮದಲ್ಲಿ, ತ್ಯಾಗದಲ್ಲಿ ಏನೂ ಒಳ್ಳೆಯದಿಲ್ಲ. ಒಳ್ಳೆಯ ಮತ್ತು ಕೆಟ್ಟ ಕೆಲಸಗಳಲ್ಲಿ ಯಾವ ಫಲ ಮತ್ತು ಪರಿಣಾಮಗಳಿಲ್ಲ; ಈ ಪ್ರಪಂಚ ಎನ್ನುವುದೇ ಇಲ್ಲ, ಇದರಾಚೆಗೆ

ಏನೇನೂ ಇಲ್ಲ; ತಂದೆಯಿಲ್ಲ, ತಾಯಿಯಿಲ್ಲ, ಸಹಜವಾಗಿ ಹುಟ್ಟುವ ಮಕ್ಕಳಿಲ್ಲ; ಪರಾಕಾಷ್ಠತೆ ತಲಪಿ ಪರಿಪೂರ್ಣತೆ ಪಡೆದು, ತಮ್ಮದೇ ಆದ ಅಂತರ್ವೀಕ್ಷಣಾ ಶಕ್ತಿಯಿಂದ ಲೋಕಾತೀತವಾದುದನ್ನು ಸಾಕ್ಷಾತ್ಕರಿಸಿಕೊಂಡು ಘೋಷಿಸುವ ಸಂನ್ಯಾಸಿಗಳಾಗಲಿ, ಬ್ರಾಹ್ಮಣರಾಗಲಿ ಇಲ್ಲ ಎಂಬ ಅಸಹಜ ಪ್ರಜ್ಞಾಹೀನ ದೃಷ್ಟಿ ಇದ್ದರೆ ಅದನ್ನು 'ದೃಷ್ಟಿಕೋನದ ಸೋಲು' ಎಂದು ಕರೆಯಲಾಗಿದೆ.

೭. ಭಿಕ್ಕುಗಳೇ, ನೈತಿಕ ಸೋಲು, ಮಾನಸಿಕ ಸೋಲು ಮತ್ತು ಸತ್ತನಂತರ ದೇಹ ಛಿದ್ರವಾಗಿ ದುಃಖ ಮಾರ್ಗದಲ್ಲಿ, ವ್ಯರ್ಥಲೋಕದಲ್ಲಿ, ಪಾತಾಳದಲ್ಲಿ, ಶುದ್ಧಿ ಲೋಕದಲ್ಲಿ ಜೀವಿಗಳು ಮರುಹುಟ್ಟು ಪಡೆಯುತ್ತವೆ ಎಂಬ ದೃಷ್ಟಿಕೋನವನ್ನು ಒಪ್ಪದಿರುವಲ್ಲಿನ ಸೋಲು. ಇವೇ ಆ ಮೂರು ಸೋಲುಗಳು.

೮. ಭಿಕ್ಕುಗಳೇ, ಮೂರು ಗೆಲುವುಗಳಿವೆ. ಅವು ಯಾವುವು? ನೈತಿಕ ಗೆಲುವು, ಮಾನಸಿಕ ಗೆಲುವು, ದೃಷ್ಟಿಕೋನದ ಗೆಲುವು.

೯. ಈಗ ನೈತಿಕ ಗೆಲುವು ಯಾವ ಬಗೆಯದು?

೧೦. ವ್ಯಕ್ತಿ ಕೊಲೆ ಮಾಡುವುದಿಲ್ಲ..... ಕಟುನುಡಿ ಮತ್ತು ಕಾಡುಹರಟೆಯಲ್ಲಿ ನಿರತನಾಗುವುದಿಲ್ಲ. ಇದನ್ನು 'ನೈತಿಕ ಗೆಲವು' ಎನ್ನಲಾಗಿದೆ.

೧೧. ಮಾನಸಿಕ ಗೆಲುವು ಯಾವ ಬಗೆಯದು?

೧೨. ವ್ಯಕ್ತಿಗೆ ದುರಾಸೆ ಅಥವಾ ಹೃದಯದಲ್ಲಿ ದ್ವೇಷ ಇರುವುದಿಲ್ಲ. ಇದನ್ನು 'ಮಾನಸಿಕ ಗೆಲುವು' ಎಂದು ಕರೆಯಲಾಗಿದೆ.

೧೩. ದೃಷ್ಟಿಕೋನದ ಗೆಲುವು ಯಾವ ಬಗೆಯದು?

೧೪. ದಾನಧರ್ಮಗಳಲ್ಲಿ, ತ್ಯಾಗದಲ್ಲಿ ಎಲ್ಲ ಒಳ್ಳೆಯದಿದೆ, ಒಳ್ಳೆಯ ಮತ್ತು ಕೆಟ್ಟ ಕೆಲಸಗಳಿಗೆ ಫಲ ಪರಿಣಾಮಗಳಿವೆ. ಪ್ರಪಂಚವಿದೆ, ಅದರಾಚೆಗೆ ಏನೇನೋ ಇದೆ; ತಂದೆ, ತಾಯಿ, ಸಹಜವಾಗಿ ಹುಟ್ಟುವ ಮಕ್ಕಳು, ಎಲ್ಲರೂ ಇದ್ದಾರೆ; ಪರಾಕಾಷ್ಠತೆ ತಲುಪಿ ಪರಿಪೂರ್ಣತೆ ಪಡೆದು, ತಮ್ಮದೇ ಆದ ಅಂತರ್ವೀಕ್ಷಣಾ ಶಕ್ತಿಯಿಂದ ಲೋಕಾತೀತವಾದುದನ್ನು ಸಾಕ್ಷಾತ್ಕರಿಸಿಕೊಂಡು ಘೋಷಿಸುವ ಸಂನ್ಯಾಸಿಗಳು ಬ್ರಾಹ್ಮಣರು ಇದ್ದಾರೆ ಎಂಬ ಸಹಜ ಪ್ರಜ್ಞಾಪೂರ್ವಕ ದೃಷ್ಟಿಯಿದ್ದರೆ ಅದನ್ನು 'ದೃಷ್ಟಿಕೋನದ ಗೆಲವು' ಎನ್ನುತ್ತಾರೆ.

೧೫. ಈ ಮೂರು ವಿಷಯಗಳಲ್ಲಿ ಗೆಲುವನ್ನು ಪಡೆದ ವ್ಯಕ್ತಿಗಳು ಸತ್ತನಂತರ ದೇಹ ಛಿದ್ರವಾದಾಗ ಸಂತೋಷದ ಸ್ಥಿತಿಯಲ್ಲಿ, ಸ್ವರ್ಗಲೋಕದಲ್ಲಿ ಪುನರ್ಜನಿಸುತ್ತಾರೆ. ಭಿಕ್ಕುಗಳೇ, ಇವೇ ಆ ಮೂರು ಗೆಲುವುಗಳು.

## ೨. ಜೀವನದಲ್ಲಿ ಪರಿಪೂರ್ಣತೆಯನ್ನು ಪಡೆಯುವುದೇ ಧರ್ಮ

೧. ಪರಿಪೂರ್ಣತೆಗಳು ಮೂರು. ಅವು:

೨. ಕಾಯಾ, ವಾಚಾ ಮತ್ತು ಮನಸ್ಸಿನ ಪರಿಪೂರ್ಣತೆ.

೩. ಮಾನಸಿಕ ಪರಿಪೂರ್ಣತೆ ಯಾವ ಬಗೆಯದು?

೪. ಆಸವಗಳ ನಿರ್ಮೂಲನೆ, ಈ ಬದುಕಿನಲ್ಲೇ ಸಾಕ್ಷಾತ್ಕಾರ, ಹೃದಯದ ಪರಿಶುದ್ಧತೆ, ತನ್ನೊಳಗೆ ನೆಲೆಸಿರುವ ಆಸವಗಳ ಅಂತರ್ವೀಕ್ಷಣೆಯಿಂದ ಬಿಡುಗಡೆ ಮಾಡಿಕೊಳ್ಳುವ ಸಂಪೂರ್ಣ ಅರಿವು;

ಇದು ಮಾನಸಿಕ ಪರಿಪೂರ್ಣತೆ. ಇವೇ ಮೂರು ದೈಹಿಕ ಪರಿಪೂರ್ಣತೆಗಳು.

೫. ಇವಲ್ಲದೆ ಇನ್ನೂ ಪರಿಪೂರ್ಣತೆಗಳಿವೆ. ಅವುಗಳನ್ನು ಬುದ್ಧ ಸುಭೂತಿಗೆ ವಿವರಿಸಿದನು.

೬. ಸುಭೂತಿ: ಬೋಧಿಸತ್ವನ ದಾನದ ಪರಿಪೂರ್ಣತೆ ಎಂದರೇನು?

೭. ಬುದ್ಧ: ಎಲ್ಲ ವಿಧದ ಜ್ಞಾನದೊಂದಿಗೆ ತನ್ನ ಆಲೋಚನೆಗಳನ್ನು ಸೇರಿಸಿರುವ ಬೋಧಿಸತ್ವನು ಆಂತರಿಕ ಅಥವಾ ಬಾಹ್ಯ ದಾನಗಳನ್ನು ಎಲ್ಲ ಜೀವಿಗಳಿಗೂ ಸಮಾನವಾಗಿ ದಯಪಾಲಿಸುತ್ತಾನೆ, ಹಾಗೂ ಅವುಗಳನ್ನು ಆತ ಪರಮೋಚ್ಚ ಜ್ಞಾನೋದಯಕ್ಕೆ ಸಲ್ಲಿಸುತ್ತಾನೆ; ಅಲ್ಲದೆ ಆತನು ಇತರರನ್ನು ಆ ಕಡೆಗೆ ಪ್ರೇರೇಪಿಸುತ್ತಾನೆ; ಇಲ್ಲಿ ಯಾವುದೇ ಬಗೆಯ ಆತಂಕ ಇರುವುದಿಲ್ಲ.

೮. ಸುಭೂತಿ: ಬೋಧಿಸತ್ವನ ನೈತಿಕ ಪರಿಪೂರ್ಣತೆ ಎಂದರೇನು?

೯. ಬುದ್ಧ: ಸ್ವತಃ ಅವನೇ ಎಂಟು ಬಗೆಯ ಸ್ವಾಸ್ಥ್ಯಕ್ರಿಯೆಯ ಹಂಗಿನಲ್ಲಿ ಬದುಕುತ್ತಾನೆ, ಹಾಗೂ ಇತರರನ್ನು ಅತ್ತಕಡೆಗೆ ಪ್ರೇರೇಪಿಸುತ್ತಾನೆ.

೧೦. ಸುಭೂತಿ: ಬೋಧಿಸತ್ವನ ಸಹನೆಯ ಪರಿಪೂರ್ಣತೆ ಎಂದರೇನು?

೧೧. ಬುದ್ಧ: ಸ್ವತಃ ಅವನೇ ಸಹನೆಯನ್ನು ಸಾಧಿಸಿದ ವ್ಯಕ್ತಿಯಾಗಿರುತ್ತಾನೆ ಹಾಗೂ ಇತರರನ್ನೂ ಆತ ಸಹನಶೀಲರಾಗಲು ಪ್ರೇರೇಪಿಸುತ್ತಾನೆ.

೧೨. ಸುಭೂತಿ: ಬೋಧಿಸತ್ವನ ಓಜಸ್ಸಿನ ಪರಿಪೂರ್ಣತೆ ಎಂದರೇನು?

೧೩. ಬುದ್ಧ: ಅವನು ನಿರಂತರವಾಗಿ ಐದು ಪರಿಪೂರ್ಣತೆಗಳಲ್ಲಿ ನೆಲೆಸಿರುತ್ತಾನೆ; ಇತರರೂ ಹಾಗೆ ಮಾಡುವಂತೆ ಅವರನ್ನು ಪ್ರೇರೇಪಿಸುತ್ತಾನೆ.

೧೪. ಸುಭೂತಿ: ಬೋಧಿಸತ್ವನ ಏಕಾಗ್ರತೆಯ ಪರಿಪೂರ್ಣತೆ ಎಂದರೇನು?

೧೫. ಬುದ್ಧ: ಸ್ವತಃ ಆತನೇ ಸಾಧನೆಯ ಕೌಶಲದಿಂದ ಭಾವಸಮಾಧಿಗಳನ್ನು ಪ್ರವೇಶಿಸುತ್ತಾನೆ; ಆದರೂ ಅವನು ರೂಪಾನುವರ್ತಿಯಾದ ಸಂವಾದಿ ಸ್ವರ್ಗಲೋಕಗಳಲ್ಲಿ ತನಗೆ ಸಾಧ್ಯವಿದ್ದರೂ ಪುನರ್‌ಜನಿಸುವುದಿಲ್ಲ. ಇತರರೂ ಹಾಗೆ ಮಾಡುವಂತೆ ಅವರನ್ನು ಪ್ರೇರೇಪಿಸುತ್ತಾನೆ.

೧೬. ಸುಭೂತಿ: ಬೋಧಿಸತ್ವನ ಜ್ಞಾನದ ಪರಿಪೂರ್ಣತೆ ಎಂದರೇನು?

೧೭. ಬುದ್ಧ: ಆತ ಯಾವುದೇ ಧರ್ಮದಲ್ಲಿ ನೆಲೆ ನಿಲ್ಲುವುದಿಲ್ಲ, ಎಲ್ಲ ಧರ್ಮಗಳ ಸಾರಭೂತ ಮೂಲ ಸ್ವಭಾವದ ಬಗ್ಗೆ ಆತ ಧ್ಯಾನಿಸುತ್ತಾನೆ. ಹಾಗೆಯೇ ಆತ ಇತರರನ್ನೂ ಎಲ್ಲ ಧರ್ಮಗಳ ಬಗ್ಗೆ ಧೇನಿಸಲು ಪ್ರಚೋದಿಸುತ್ತಾನೆ.

೧೮. ಈ ಪರಿಪೂರ್ಣತೆಗಳನ್ನು ಬೆಳೆಸಿಕೊಳ್ಳುವುದೇ ಧಮ್ಮವಾಗಿದೆ.

## ೩. ನಿರ್ವಾಣದಲ್ಲಿ ಬದುಕುವುದೇ ಧರ್ಮ

೧. "ನಿರ್ವಾಣದಂತೆ ಬೇರಾವುದೂ ನೈಜ ಸುಖ ನಿರ್ವಾಣ ನೀಡುವುದಿಲ್ಲ" ಎಂದು ಬುದ್ಧ ಹೇಳಿದ್ದಾನೆ.

೨. ಬುದ್ಧ ಬೋಧಿಸಿದ ಎಲ್ಲ ತತ್ತ್ವಗಳಲ್ಲಿ ನಿಬ್ಬಾಣ ತತ್ವವೇ ಅತ್ಯಂತ ಕೇಂದ್ರೀವಾದುದು.

೩. ನಿರ್ವಾಣ ಎಂದರೇನು? ಬುದ್ಧ ಬೋಧಿಸಿದ ನಿರ್ವಾಣದ ಅರ್ಥ ಮತ್ತು ಸತ್ವದಲ್ಲಿ ಸಂಪೂರ್ಣವಾಗಿ ಆತನ ಹಿಂದಿನವರು ಹೇಳಿರುವುದಕ್ಕಿಂತ ಭಿನ್ನವಾಗಿದೆ.

೪. ನಿರ್ವಾಣ ಎಂದರೆ ಆತ್ಮದ ವಿಮೋಚನೆ ಎಂದು ಅವರು ಅರ್ಥೈಸಿದ್ದರು.

೫. ಹೀಗೆ ನಿರ್ವಾಣವನ್ನು ನಾಲ್ಕು ವಿಧಗಳಲ್ಲಿ ಗ್ರಹಿಸಲಾಗಿದೆ: (೧) ಲೌಕಿಕ (ಐಹಿಕ, ತಿಂದುಂಡು ಮಜವಾಗಿರುವ ರೀತಿ), (೨) ಯೋಗಿಕ, (೩) ಬ್ರಾಹ್ಮಣೀಯ ಮತ್ತು (೪) ಉಪನಿಷದೀಯ.

೬. ನಿರ್ವಾಣದ ಬಗ್ಗೆ ಬ್ರಾಹ್ಮಣೀಯ ಮತ್ತು ಉಪನಿಷದೀಯ ಪರಿಕಲ್ಪನೆಗಳಲ್ಲಿ ಒಂದು ಸಮಾನ ಲಕ್ಷಣವಿತ್ತು, ಆತ್ಮ ಸ್ವತಂತ್ರವಾದ ಅಸ್ತಿತ್ವವುಳ್ಳದ್ದು ಎಂಬ ಪರಿಗಣನೆ ಅವರಲ್ಲಿತ್ತು – ಈ ಸಿದ್ಧಾಂತವನ್ನು ಬುದ್ಧ ನಿರಾಕರಿಸಿದ. ಆದ್ದರಿಂದ ನಿರ್ವಾಣದ ಬಗ್ಗೆ ಬ್ರಾಹ್ಮಣೀಯ ಮತ್ತು ಉಪನಿಷದೀಯ ಬೋಧನೆಯನ್ನು ತಿರಸ್ಕರಿಸುವುದರಲ್ಲಿ ಬುದ್ಧನಿಗೆ ಯಾವ ಕಷ್ಟವೂ ಇರಲಿಲ್ಲ.

೭. ನಿರ್ವಾಣದ ಲೌಕಿಕ ಪರಿಕಲ್ಪನೆ ತೀರಾ ಪ್ರಾಪಂಚಿಕವಾದುದರಿಂದ ಬುದ್ಧನಿಗೆ ಹಿಡಿಸಲಿಲ್ಲ. ಅದು ಮಾನವನ ಪಶುಸಹಜ ಪ್ರವೃತ್ತಿಗಳ ಸಂತೃಪ್ತಿಯಲ್ಲದೆ ಬೇರೇನೂ ಅಲ್ಲ. ಅದರಲ್ಲಿ ಯಾವ ಆಧ್ಯಾತ್ಮಿಕತೆಯೂ ಇಲ್ಲ.

೮. ನಿರ್ವಾಣದ ಅಂಥ ಪರಿಕಲ್ಪನೆಯನ್ನು ಒಪ್ಪಿಕೊಳ್ಳುವುದೆಂದರೆ ಮಾನವನಿಗೆ ಮಾಡುವ ಮಹಾದ್ರೋಹವೆಂದು ಬುದ್ಧ ಭಾವಿಸಿದನು.

೯. ಏಕೆಂದರೆ ಹಸಿವುಗಳ ಸಂತೃಪ್ತಿ ಇನ್ನೂ ಹೆಚ್ಚು ಹಸಿವುಗಳನ್ನು ಮೂಡಿಸುವುದರಲ್ಲಿ ಪರ್ಯಾವಸಾನವಾಗುತ್ತದೆ. ಅಂಥ ಜೀವನ ವಿಧಾನ ಸಂತೋಷವನ್ನು ತರಲಾರದೆಂದು ಆತ ಆಲೋಚಿಸಿದನು. ಬದಲಾಗಿ ಅಂಥ ಸುಖ ಹೆಚ್ಚು ದುಃಖವನ್ನು ತರುವುದು ಖಂಡಿತ.

೧೦. ನಿರ್ವಾಣದ ಯೋಗಶಾಸ್ತ್ರೀಯ ಪರಿಕಲ್ಪನೆ ಶುದ್ಧಾಂಗವಾಗಿ ತಾತ್ಕಾಲಿಕ ಸ್ಥಿತಿಯದು. ಅದು ತಂದುಕೊಡುವ ಸುಖ ನಕಾರಾತ್ಮಕವಾದುದು. ಅದು ಪ್ರಪಂಚದ ಜೊತೆ ನಿಸ್ಸಂಗವಾಗಿರುವುದಲ್ಲಿ ನಿರತವಾಯಿತು. ಅದು ದುಃಖವನ್ನು ಅರುಗು ಮಾಡಿತು. ಆದರೆ ಸುಖವನ್ನು ನೀಡಲಿಲ್ಲ. ಅದು ಏನು ಸುಖ ತರಬಹುದೆಂದು ಹೇಳಿತೊ ಅದು ಯೋಗ ಇರುವವರೆಗೆ ಮಾತ್ರ ಉಳಿಯಿತು. ಅದು ಶಾಶ್ವತವಲ್ಲ. ಅದು ತಾತ್ಕಾಲಿಕ.

೧೧. ನಿರ್ವಾಣದ ಬಗ್ಗೆ ಬುದ್ಧನ ಪರಿಕಲ್ಪನೆ ಆತನಿಗಿಂತ ಹಿಂದಿನವರಿಂದ ಸಂಪೂರ್ಣವಾಗಿ ಭಿನ್ನವಾಗಿದೆ.

೧೨. ನಿರ್ವಾಣದ ಆತನ ಪರಿಕಲ್ಪನೆಯಲ್ಲಿ ಮೂರು ವಿಚಾರಗಳು ಅಡಕವಾಗಿವೆ.

೧೩. ಆತ್ಮದ ಮೋಕ್ಷಕ್ಕಿಂತ ಇಂದ್ರೀಯ ಜೀವಿಯ ಸಂತೋಷ ಭಿನ್ನ ಎಂಬುದು ಅವುಗಳಲ್ಲಿ ಒಂದು.

೧೪. ಬದುಕಿದ್ದಾಗ ಸಂಸಾರದಲ್ಲಿ ಇಂದ್ರೀಯ ಜೀವಿಯ ಸಂತೋಷ ಇದೆ ಎಂಬುದು ಎರಡನೆಯ ವಿಚಾರ. ಆತ್ಮದ ವಿಚಾರ ಮತ್ತು ಸಾವಿನ ನಂತರ ಆತ್ಮದ ಮುಕ್ತಿ ಎಂಬುವು ನಿರ್ವಾಣದ ಬುದ್ಧನ ಪರಿಕಲ್ಪನೆಗೆ ಸಂಪೂರ್ಣವಾಗಿ ಪರಕೀಯವಾಗಿವೆ.

೧೫. ಸದಾ ಉರಿಯುವ ರಾಗಭಾವಗಳ ಜ್ವಾಲೆಯ ಮೇಲೆ ನಿಯಂತ್ರಣವನ್ನು ಸಾಧಿಸುವುದೇ ನಿರ್ವಾಣದ ಬಗೆಗಿನ ಆತನ ಪರಿಕಲ್ಪನೆಯ ಮೂರನೆಯ ಅಂಶ.

೧೬. ಬುದ್ಧ ಗಯೆಯಲ್ಲಿ ತಂಗಿದ್ದಾಗ ಭಿಕ್ಕುಗಳಿಗೆ ನೀಡಿದ ಉಪದೇಶದಲ್ಲಿ ರಾಗಭಾವಗಳು ಬೆಂಕಿಯಂತೆ ಜ್ವಲಿಸುತ್ತಿರುತ್ತವೆ ಎಂಬ ಪಠ್ಯವಿದೆ.

೧೭. "ಓ ಭಿಕ್ಕುಗಳೇ! ಎಲ್ಲವೂ ಉರಿಯುತ್ತಿವೆ. ಓ ಭಿಕ್ಕುಗಳೇ, ಬೆಂಕಿಯಲ್ಲಿ ಉರಿಯುವ ಈ ಎಲ್ಲ ವಸ್ತುಗಳೂ ಯಾವುವು?

೧೮. "ಓ ಭಿಕ್ಕುಗಳೇ! ಕಣ್ಣು ಉರಿಯುತ್ತಿವೆ; ರೂಪಗಳು ಉರಿಯುತ್ತಿವೆ; ಕಣ್ಣೋಟ ಉರಿಯುತ್ತಿವೆ; ಕಣ್ಣು ಗ್ರಹಿಸಿದ ದೃಶ್ಯಗಳು ಉರಿಯುತ್ತಿವೆ; ಹಿತವಾದ, ಅಹಿತವಾದ ಅಥವಾ ಬೇಡವಾದ ದೃಶ್ಯಗಳನ್ನೆಲ್ಲಾ

ಗ್ರಹಿಸಿದ ಕಣ್ಣು ಮತ್ತು ಅದರ ಸಂವೇದನೆ ಉರಿಯುತ್ತಿವೆ.

೧೯. "ಇವುಗಳ ಜೊತೆ ಮತ್ತೆ ಯಾವುದು ಉರಿಯುತ್ತಿವೆ?"

೨೦. "ಇವುಗಳ ಜೊತೆ ದ್ವೇಷ ಉರಿಯುತ್ತಿದೆ, ಮೋಹ ಉರಿಯುತ್ತಿದೆ. ಹುಟ್ಟು, ಮುಪ್ಪು, ಸಾವು, ದುಃಖ, ಅಳಲು, ಗೋಳು, ವ್ಯಸನ ಮತ್ತು ನಿರಾಶೆ ಇವು ಉರಿಯುತ್ತಿವೆ ಎಂದು ಹೇಳುತ್ತೇನೆ."

೨೧. "ಕಿವಿ ಉರಿಯುತ್ತಿದೆ, ಶಬ್ದಗಳು ಉರಿಯುತ್ತಿದೆ, ಮೂಗು ಉರಿಯುತ್ತಿದೆ, ವಾಸನೆಗಳು ಉರಿಯುತ್ತಿವೆ, ನಾಲಗೆ ಉರಿಯುತ್ತಿದೆ, ರಸನೆಗಳು ಉರಿಯುತ್ತಿವೆ, ದೇಹ ಉರಿಯುತ್ತಿದೆ, ವಿಚಾರಗಳು ಉರಿಯುತ್ತಿವೆ, ಏನೇನು ಹಿತಕರ, ಅಹಿತಕರ ಅಥವಾ ಅನಾಸಕ್ತ ಸಂವೇದನೆ ಇದೆಯೋ ಅದು ಮನಸ್ಸು ಗ್ರಹಿಸಿದ ಪ್ರಭಾವದಿಂದ ಹುಟ್ಟಿ ಅದು ಕೂಡ ಉರಿಯುತ್ತಿದೆ.

೨೨. "ಮತ್ತೆ ಇವು ಯಾವುದರ ಜೊತೆ ಉರಿಯುತ್ತಿವೆ?"

೨೩. "ಇವು ರಾಗಜ್ವಾಲೆಯಲ್ಲಿ ಉರಿಯುತ್ತಿವೆ; ದ್ವೇಷಾಗ್ನಿಯಲ್ಲಿ ಉರಿಯುತ್ತಿವೆ; ಮೋಹಾಗ್ನಿಯಲ್ಲಿ ಉರಿಯುತ್ತಿವೆ; ಹುಟ್ಟು, ಮುಪ್ಪು, ಸಾವು, ದುಃಖ, ಅಳಲು, ಚಿಂತೆ, ಗೋಳು ಮತ್ತು ನಿರಾಶೆಗಳು ಉರಿಯುತ್ತಿವೆ ಎಂದು ಹೇಳುತ್ತೇನೆ."

೨೪. "ಓ ಭಿಕ್ಕುಗಳೇ! ಇದನ್ನು ಅರ್ಥ ಮಾಡಿಕೊಂಡ ಜ್ಞಾನಿ ಮತ್ತು ಉದಾತ್ತ ಸ್ವಭಾವದವನು ಹೇವರಿಕೆ ಪಡುತ್ತಾನೆ. ಈ ಹೇವರಿಕೆಯಿಂದ ಅವನು ರಾಗ–ಭಾವ ವರ್ಜಿತನಾಗುತ್ತಾನೆ. ರಾಗ–ಭಾವಗಳನ್ನು ಬಿಟ್ಟುಬಿಡುವುದರಿಂದ ಅವನು ಮುಕ್ತನಾಗುತ್ತಾನೆ; ಮುಕ್ತನಾದಾಗ ಅವನು ನಾನು ಮುಕ್ತನಾದೆ ಎಂಬ ಪ್ರಜ್ಞೆಯನ್ನು ಪಡೆಯುತ್ತಾನೆ."

೨೫. ಹಾಗಾದರೆ ನಿರ್ವಾಣ ಹೇಗೆ ಸಂತೋಷವನ್ನು ಕೊಡಬಲ್ಲದು? ಈ ಪ್ರಶ್ನೆ ವಿವರಣೆಯನ್ನು ಬಯಸುತ್ತದೆ.

೨೬. ಮನುಷ್ಯನಿಗೆ ಆಸೆಯಿರುವುದರಿಂದ ಅವನು ಅಸುಖಿಯಾಗಿದ್ದಾನೆ ಎಂಬುದು ಸಾಮಾನ್ಯ ಭಾವನೆ. ಆದರೆ ಇದು ಯಾವಾಗಲೂ ನಿಜವಲ್ಲ. ಮನುಷ್ಯ ಸಮೃದ್ಧಿಯ ನಡುವೆ ಇದ್ದರೂ ಕೂಡ ಅವನು ಅಸುಖಿಯಾಗಿರುತ್ತಾನೆ.

೨೭. ಅತೃಪ್ತಿ ದುರಾಸೆಯ ಫಲ, ಇದ್ದವರು ಮತ್ತು ಇಲ್ಲದವರಿಗೆಲ್ಲ ದುರಾಸೆ ಜೀವನದ ಜಾಡ್ಯ.

೨೮. ಭಿಕ್ಕುಗಳಿಗೆ ತಾನು ಕೊಟ್ಟ ಒಂದು ಉಪದೇಶದಲ್ಲಿ ಇದನ್ನು ಬುದ್ಧ ಸ್ಪಷ್ಟಪಡಿಸಿದ್ದಾನೆ.

೨೯. "ಸೋದರರೆ, ಲೋಭದಿಂದ ಪ್ರಚೋದಿತರಾಗಿ, ಸಿಟ್ಟಿನಿಂದ (ದೋಷದಿಂದ) ಉಗ್ರರಾಗಿ, ಮೋಹದಿಂದ ಕುರುಡರಾಗಿ, ಮನಸ್ಸು ನಿಶ್ಚೇತನವಾಗಿ, ಮನಸ್ಸು ಬಂಧಿತವಾಗಿ, ಮಾನವರು ತಮ್ಮ ದುರದೃಷ್ಟದ ಬಗ್ಗೆ ಯೋಚಿಸುತ್ತಾರೆ. ಅವರು ಇತರರ ದುರದೃಷ್ಟದ ಬಗ್ಗೆ ಯೋಚಿಸುತ್ತಾರೆ. ಮಾನವರು ಮಾನಸಿಕ ನೋವು ಮತ್ತು ಯಾತನೆಯನ್ನು ಅನುಭವಿಸುತ್ತಾರೆ.

೩೦. "ದುರಾಸೆ, ಕೋಪ ಮತ್ತು ಭ್ರಾಂತಿ ಇವುಗಳನ್ನು ಬಿಟ್ಟರೆ ಮಾನವರು ತಮ್ಮ ದುರದೃಷ್ಟದ ಬಗ್ಗೆಯಾಗಲೀ, ಮಾನಸಿಕ ಹಿಂಸೆ ಮತ್ತು ಯಾತನೆ ಬಗ್ಗೆಯಾಗಲೀ ಯೋಚಿಸುವುದಿಲ್ಲ.

೩೧. "ಹೀಗೆ, ಸೋದರರೆ, ನಿರ್ವಾಣ ಈ ಬದುಕಿನಲ್ಲೇ ಗೋಚರವಾಗುತ್ತದೆ. ಕೇವಲ ಮುಂದಿನ ಜೀವನದಲ್ಲಲ್ಲ; ವಿವೇಕಿಯಾದ ಭಿಕ್ಕುವನ್ನು ಅದು ಆಹ್ವಾನಿಸುತ್ತದೆ, ಆಕರ್ಷಿಸುತ್ತದೆ ಮತ್ತು ಸಮೀಪಕ್ಕೆ ಸೆಳೆಯುತ್ತದೆ."

೩೨. ಮನುಷ್ಯನನ್ನು ಏನು ಆಪೋಶಣೆ ತೆಗೆದುಕೊಳ್ಳುತ್ತದೆ ಮತ್ತು ಯಾವುದು ಅವನನ್ನು ಅಸುಖಿಯನ್ನಾಗಿ ಮಾಡುತ್ತದೆ ಎಂಬುದಕ್ಕೆ ಇಲ್ಲಿ ವಿವರಣೆ ಇದೆ. ಮಾನವನ ರಾಗ–ಭಾವಗಳು ಹೇಗೆ ಕೆಲಸ

ಮಾಡುತ್ತವೆ ಎಂಬುದಕ್ಕೆ ಉರಿಯುವ ಬೆಂಕಿಯ ಉಪಮಾನ ಕೊಡುವುದರ ಮೂಲಕ ಬುದ್ಧ ಅತ್ಯಂತ ಪ್ರಭಾವಕಾರಿಯಾದ ಉಪಮೆಗಳ ಮೂಲಕ ಮಾನವನ ಅಸುಖವನ್ನು ವಿವರಿಸಿದ್ದಾನೆ.

೩೩. ರಾಗ ಭಾವಗಳಿಗೆ ಬಲಿಯಾಗುವುದರಿಂದ ಮನುಷ್ಯ ಅಸುಖಿಯಾಗುತ್ತಾನೆ. ನಿರ್ವಾಣದ ಸ್ಥಿತಿಯನ್ನು ಮನುಷ್ಯ ತಲುಪದಂತೆ ಅವನಿಗೆ ಈ ರಾಗಭಾವಗಳು ಶೃಂಖಲೆಗಳಾಗಿವೆ ಎನ್ನಲಾಗಿದೆ. ಮನುಷ್ಯ ತನ್ನ ರಾಗ ಭಾವಗಳಿಂದ ಬಿಡುಗಡೆಗೊಂಡ ಕ್ಷಣವೇ ಅಂದರೆ ಅವನು ನಿರ್ವಾಣವನ್ನು ತಲುಪಲು ಅರಿತಾಗಲೇ, ಮನುಷ್ಯನ ಸುಖದ ದಾರಿ ತೆರೆಯುತ್ತದೆ.

೩೪. ಬುದ್ಧನ ವಿಶ್ಲೇಷಣೆಯ ಪ್ರಕಾರ ಈ ರಾಗಭಾವಗಳು ಮೂರು ಗುಂಪುಗಳಾಗಿವೆ.

೩೫. ಒಂದು: ಎಲ್ಲ ಬಗೆಯ ಆಸೆಗಳಿಗೆ ಸಂಬಂಧಿಸಿದವು – ಕಾಮ, ಮೋಹ ಮತ್ತು ಲೋಭ.

೩೬. ಎರಡು: ಎಲ್ಲ ಬಗೆಯ ದ್ವೇಷಗಳಿಗೆ ಸಂಬಂಧಿಸಿದವು – ವೈರ, ಕ್ರೋಧ, ಉಪದ್ರವ ಅಥವಾ ಜಿಗುಪ್ಸೆ (ದೋಷ).

೩೭. ಮೂರು: ಎಲ್ಲ ಬಗೆಯ ಅಜ್ಞಾನಕ್ಕೆ ಸಂಬಂಧಿಸಿದವು – ಭ್ರಮೆ, ದಡ್ಡತನ ಮತ್ತು ಮೂರ್ಖತನ (ಮೋಹ ಅಥವಾ ಅವಿದ್ಯೆ).

೩೮. ಒಂದು ಮತ್ತು ಎರಡನೆಯ ಅಗ್ನಿಗಳು ದುಗುಡಗಳಿಗೆ ಮತ್ತು ಇತರ ಎಲ್ಲ ಮಾನವರ ಬಗ್ಗೆ ವ್ಯಕ್ತಿಯ ಇಡೀ ಧೋರಣೆಗಳು ಮತ್ತು ಭಾವನೆಗಳಿಗೆ ಸಂಬಂಧಿಸಿದ್ದರೆ, ಮೂರನೆಯ ಅಗ್ನಿಯು ಸತ್ಯದಿಂದ ಎಲ್ಲಾ ವಿಧದಲ್ಲೂ ದೂರವಾಗಿರುವ ಎಲ್ಲ ವಿಚಾರಗಳಿಗೆ ಸಂಬಂಧಿಸಿದೆ.

೩೯. ನಿರ್ವಾಣದ ಬಗ್ಗೆ ಬುದ್ಧನ ಸಿದ್ಧಾಂತ ಕುರಿತು ಕೆಲವೊಂದು ಅಪಾರ್ಥಗಳಿವೆ.

೩೦. ನಿರ್ವಾಣ ಪದದ ನಿಷ್ಪತ್ತಿಯ ಅರ್ಥ ಆರುವುದು, ನಂದುವುದು.

೩೧. ನಿರ್ವಾಣ ಶಬ್ದದ ಈ ಧಾತುವಿನ ಅರ್ಥವನ್ನು ತೆಗೆದುಕೊಂಡು ಟೀಕಾಕಾರರು ನಿರ್ವಾಣದ ಸಿದ್ಧಾಂತವನ್ನು ಅರ್ಥಹೀನ ಮಾಡಲು ಪ್ರಯತ್ನಿಸಿದ್ದಾರೆ.

೪೨. ಎಲ್ಲ ಮಾನವ ಭಾವನೆಗಳ ನಂದುವಿಕೆಯ ನಿರ್ವಾಣ, ಸಾವಿಗೆ ಸಮಾನ ಎಂದು ಅವರು ವಾದಿಸುತ್ತಾರೆ.

೪೩. ಈ ರೀತಿಯಲ್ಲಿ ಅವರು ನಿರ್ವಾಣ ಸಿದ್ಧಾಂತವನ್ನು ಗೇಲಿಗೆ ಈಡುಮಾಡಲು ಪ್ರಯತ್ನಿಸಿದ್ದಾರೆ.

೪೪. ಅಗ್ನಿ ಉಪದೇಶದ ಭಾಷೆಯನ್ನು ಪರಿಶೀಲಿಸಿದರೆ ನಿರ್ವಾಣಕ್ಕೆ ಆ ಅರ್ಥ ಇಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

೪೫. ಜೀವನ ಉರಿಯುತ್ತಿದೆ ಮತ್ತು ಸಾವು ಎಂದರೆ ನಂದುವುದು ಎಂಬುದಾಗಿ ಅಗ್ನಿ ಉಪದೇಶ ಹೇಳುವುದಿಲ್ಲ. ರಾಗಭಾವಗಳು ಉರಿಯುತ್ತಿವೆ ಎಂದು ಅದು ಹೇಳುತ್ತದೆ.

೪೬. ರಾಗಭಾವಗಳನ್ನು ಸಂಪೂರ್ಣವಾಗಿ ನಂದಿಸಬೇಕೆಂದು ಅಗ್ನಿ ಉಪದೇಶ ಹೇಳುವುದಿಲ್ಲ. ಅದು ಜ್ವಾಲೆಗೆ ಇಂಧನವನ್ನು ಹಾಕಬೇಡಿ ಎನ್ನುತ್ತದೆ.

೪೭. ಎರಡನೆಯದಾಗಿ, ನಿರ್ವಾಣ ಮತ್ತು ಪರಿನಿರ್ವಾಣ ಇವೆರಡರ ವ್ಯತ್ಯಾಸವನ್ನು ಹೇಳುವಲ್ಲಿ ವಿಮರ್ಶಕರು ಸೋತಿದ್ದಾರೆ.

೪೮. ಉದಾನಸುತ್ತ ಹೇಳುವಂತೆ: "ದೇಹ ನಶಿಸಿದಾಗ ಪರಿನಿರ್ವಾಣ ಸಂಭವಿಸುತ್ತದೆ, ಎಲ್ಲ ಗ್ರಹಿಕೆಗಳೂ ನಿಲ್ಲುತ್ತವೆ, ಎಲ್ಲ ಸಂವೇದನೆಗಳೂ ಅಂತ್ಯವಾಗುತ್ತವೆ, ಕ್ರಿಯೆಗಳು ಸ್ಥಗಿತವಾಗುತ್ತವೆ ಮತ್ತು ಪ್ರಜ್ಞೆ ಮಾಯವಾಗುತ್ತವೆ. ಹೀಗೆ ಪರಿನಿರ್ವಾಣ ಎಂದರೆ ಸಂಪೂರ್ಣ ನಂದುವಿಕೆ."

೪೯. ಈ ಅರ್ಥ ನಿಬ್ಬಾಣಕ್ಕೆ ಖಂಡಿತ ಇಲ್ಲ. ನಿಬ್ಬಾಣ ಎಂದರೆ ರಾಗಭಾವದ ಮೇಲೆ ಸಂಪೂರ್ಣ

ಹತೋಟಿಯನ್ನಿಟ್ಟುಕೊಂಡು ಋಜುಮಾರ್ಗದಲ್ಲಿ ಸಾಗಲು ಸಾಧ್ಯವಾಗುವುದು. ಇದಕ್ಕಿಂತ ಹೆಚ್ಚು ಅರ್ಥ ಕೊಡುವುದು ಅದರ ಉದ್ದೇಶವಲ್ಲ.

೫೦. ಋಜುಮಾರ್ಗಕ್ಕೆ ನಿರ್ವಾಣ ಎನ್ನುವುದು ಇನ್ನೊಂದು ಹೆಸರು ಎಂದು ಸ್ವತಃ ಬುದ್ಧನೇ ರಾಧನಿಗೆ ಸ್ಪಷ್ಟಪಡಿಸಿದ್ದಾನೆ.

೫೧. ಒಮ್ಮೆ ತಥಾಗತನ ಬಳಿಗೆ ಪೂಜ್ಯ ರಾಧ ಆಗಮಿಸಿದನು. ತಥಾಗತನಿಗೆ ವಂದಿಸಿ ಅವನು ಆತನ ಪಕ್ಕದಲ್ಲಿ ಕುಳಿತುಕೊಂಡನು. ನಂತರ ತಥಾಗತನನ್ನು ಕುರಿತು ರಾಧ ಹೀಗೆ ಸಂಬೋಧಿಸಿದನು: "ತಂದೆಯೇ, ನಿರ್ವಾಣದ ಉದ್ದೇಶವೇನು, ದಯೆಯಿಟ್ಟು ತಿಳಿಸಿ."

೫೨. "ನಿಬ್ಬಾಣ ಎಂದರೆ ರಾಗಭಾವದಿಂದ ವಿಮೋಚನೆ" ಎಂದು ಬುದ್ಧ ಉತ್ತರಿಸಿದನು.

೫೩. "ಆದರೆ ನಿರ್ವಾಣ, ಗುರುವೇ – ಅದರ ಗುರಿಯೇನು?"

೫೪. "ನಿಬ್ಬಾಣದಲ್ಲಿ ಬೇರು ಬಿಡುವುದರಿಂದಲೇ, ರಾಧ, ಋಜುಮಾರ್ಗದಲ್ಲಿ ಬದುಕಲು ಸಾಧ್ಯ. ನಿಬ್ಬಾಣವೇ ಅದರ ಗುರಿ. ನಿರ್ವಾಣವೇ ಅದರ ಅಂತ್ಯ."

೫೫. ನಿರ್ವಾಣ ಎಂದರೆ ನಂದುವಿಕೆ ಅಲ್ಲ ಎಂದು ಈ ಮುಂದಿನ ಉಪದೇಶದಲ್ಲಿ ಸಾರಿಪುತ್ತನು ಕೂಡ ವಿಶದಪಡಿಸಿದ್ದಾನೆ:

೫೬. ಒಮ್ಮೆ ಶ್ರಾವಸ್ಥಿಯ ಅನಾಥಪಿಂಡಿಕನ ಆರಾಮದಲ್ಲಿ ತಥಾಗತನು ತಂಗಿದ್ದಾಗ ಸಾರಿಪುತ್ತನು ಕೂಡ ಇದ್ದನು.

೫೭. ಭಿಕ್ಕುಗಳನ್ನು ಉದ್ದೇಶಿಸಿ ಗುರು ಹೇಳಿದನು: 'ಭಿಕ್ಕುಗಳೇ, ಪ್ರಾಪಂಚಿಕ ವಸ್ತುಗಳಲ್ಲಿ ನೀವು ಪಾಲುದಾರರಾಗಬೇಡಿ; ನನ್ನ ಸಿದ್ಧಾಂತದ ಪಾಲುದಾರರಾಗಿ. ನಿಮ್ಮ ಮೇಲಿನ ನನ್ನ ಸಹಾನುಭೂತಿಯಿಂದ ಇದನ್ನು ನಾನು ಖಚಿತಪಡಿಸಬೇಕಾಗಿದೆ.'

೫೮. ಹೀಗೆ ಹೇಳಿ ಬುದ್ಧನು ಎದ್ದು ತನ್ನ ಕೋಣೆಗೆ ನಡೆದನು.

೫೯. ಸಾರಿಪುತ್ತ ಹಿಂದೆ ಉಳಿದುಕೊಂಡನು, ನಿರ್ವಾಣ ಎಂದರೆ ಏನು ಎಂದು ವಿವರಿಸಬೇಕಾಗಿ ಭಿಕ್ಕುಗಳು ಅವನನ್ನು ವಿನಂತಿಸಿದರು.

೬೦. ಆಗ ಭಿಕ್ಕುಗಳಿಗೆ ಸಾರಿಪುತ್ತ ಹೀಗೆ ವಿವರಿಸಿದನು: "ಭಿಕ್ಕುಗಳೇ, ದುರಾಸೆ ಕೆಟ್ಟದ್ದು, ಕೆಟ್ಟದ್ದು ಅಸಹ್ಯವಾದದ್ದು.

೬೧. "ಈ ದುರಾಸೆ ಮತ್ತು ಅಸಹ್ಯವನ್ನು ತ್ಯಜಿಸಲು ಮಧ್ಯಮ ಮಾರ್ಗವಿದೆ; ಅದು ನಮಗೆ ನೋಡಲು ಕಣ್ಣುಗಳನ್ನು ದಯಪಾಲಿಸುತ್ತದೆ. ಅರ್ಥ ಮಾಡಿಕೊಳ್ಳಲು ನಮಗೆ ನೆರವಾಗುತ್ತದೆ. ನಮ್ಮನ್ನು ಶಾಂತಿ, ಅಂತರ್‌ದೃಷ್ಟಿ, ಜ್ಞಾನೋದಯ ಮತ್ತು ನಿಬ್ಬಾಣಕ್ಕೆ ಮುನ್ನಡೆಸುತ್ತದೆ.

೬೨. "ಈ ಮಧ್ಯಮ ಮಾರ್ಗ ಅಂದರೇನು? ಅದು ಬೇರೇನೂ ಅಲ್ಲ. ಉದಾತ್ತವಾದ ಅಷ್ಟಾಂಗ ಮಾರ್ಗ – ಋಜು ದೃಷ್ಟಿ, ಋಜು ಗುರಿ, ಋಜು ನುಡಿ, ಋಜು ಕಾರ್ಯ, ಋಜು ಜೀವನ ವಿಧಾನ, ಋಜು ಪ್ರಯತ್ನ, ಋಜು ಮನಸ್ಸು ಮತ್ತು ಋಜು ಏಕಾಗ್ರತೆ; ಭಿಕ್ಕುಗಳೇ, ಮಧ್ಯಮ ಮಾರ್ಗವೆಂದರೆ ಇದೇ.

೬೩. "ಹೌದು, ಭಿಕ್ಕುಗಳೆ, ಕೋಪ ಕೆಟ್ಟದ್ದು. ಕೇಡೆಣಿಕೆ ಕೆಟ್ಟದ್ದು. ಅಸೂಯೆ ಮತ್ತು ಹೊಟ್ಟೆಕಿಚ್ಚು ಕೆಟ್ಟವು. ಜಿಪುಣತನ ಮತ್ತು ದುರಾಸೆ ಕೆಟ್ಟವು. ಢೋಂಗಿತನ, ವಂಚನೆ ಮತ್ತು ದುರಹಂಕಾರ ಕೆಟ್ಟವು. ಧನಲೋಭ ಕೆಟ್ಟದ್ದು. ಆಲಸ್ಯ ಕೆಟ್ಟದ್ದು.

೬೪. "ಧನಲೋಭ ಮತ್ತು ಆಲಸ್ಯವನ್ನು ವರ್ಜಿಸಲು ಮಧ್ಯಮ ಮಾರ್ಗವಿದೆ – ಅದು ನಮಗೆ ನೋಡಲು

ಕಣ್ಣುಗಳನ್ನು ದಯಪಾಲಿಸುತ್ತದೆ. ಅರ್ಥ ಮಾಡಿಕೊಳ್ಳಲು ನಮಗೆ ನೆರವಾಗುತ್ತದೆ. ನಮ್ಮನ್ನು ಶಾಂತಿ, ಅಂತರ್‌ದೃಷ್ಟಿ, ಜ್ಞಾನೋದಯಕ್ಕೆ ಮುನ್ನಡೆಸುತ್ತದೆ.

೬೫. "ನಿರ್ವಾಣ ಎಂದರೆ ಉದಾತ್ತವಾದ ಅಷ್ಟಾಂಗ ಮಾರ್ಗವಲ್ಲದೆ ಬೇರೇನೂ ಅಲ್ಲ

೬೬. ಹೀಗೆ ಪೂಜ್ಯ ಸಾರಿಪುತ್ತ ಹೇಳಿದನು. ಅವನ ಉಪದೇಶವನ್ನು ಕೇಳಿ ಭಿಕ್ಷುಗಳು ಹೃದಯಪೂರ್ವಕವಾಗಿ ಆನಂದಪಟ್ಟರು.

೬೭. ಆದ್ದರಿಂದ ನಿರ್ವಾಣದಲ್ಲಿ ಸತ್ಪಥ ನಿಹಿತವಾಗಿದೆ. ಇದನ್ನು ಬಿಟ್ಟು ಬೇರೆ ಅಪಾರ್ಥ ಮಾಡಿಕೊಳ್ಳಲು ಸಾಧ್ಯವೇ ಇಲ್ಲ.

೬೮. ಸಂಪೂರ್ಣ ನಿರ್ನಾಮ ಒಂದು ಅತಿರೇಕ, ಪರಿನಿಬ್ಬಾಣ ಇನ್ನೊಂದು ಅತಿರೇಕ. ನಿರ್ವಾಣ ಮಧ್ಯಮ ಮಾರ್ಗ.

೬೯. ಹೀಗೆ ಅರ್ಥಮಾಡಿಕೊಂಡರೆ ನಿರ್ವಾಣದ ಬಗ್ಗೆ ಎಲ್ಲ ಗೊಂದಲಗಳೂ ಮರೆಯಾಗುತ್ತವೆ.

## ೪. ದುರಾಸೆಯನ್ನು ತ್ಯಜಿಸುವುದೇ ಧರ್ಮ

೧. 'ಧಮ್ಮಪದ'ದಲ್ಲಿ ಬುದ್ಧ ಹೇಗೆ ಹೇಳುತ್ತಾನೆ: "ಆರೋಗ್ಯಕ್ಕಿಂತ ದೊಡ್ಡ ಭಾಗ್ಯ ಇನ್ನೊಂದಿಲ್ಲ ಮತ್ತು ಸಂತೃಪ್ತ ಮನೋಭಾವನೆಗಿಂತ ಅಮೂಲ್ಯವಾದದ್ದು ಬೇರಿಲ್ಲ."

೨. ಈ ಸಂತೃಪ್ತ ಮನೋಭಾವನೆಯನ್ನು ಮೃದುತನ ಅಥವಾ ಸನ್ನಿವೇಶಗಳಿಗೆ ಶರಣಾಗತಿ ಎಂದು ಅರ್ಥಮಾಡಿಕೊಳ್ಳಬಾರದು.

೩. ಏಕೆಂದರೆ ಅದು ಬುದ್ಧನ ಇತರ ಉಪದೇಶಗಳಿಗೆ ಸಂಪೂರ್ಣವಾಗಿ ವಿರುದ್ಧವಾಗುತ್ತದೆ.

೪. "ಬಡವರೇ ಧನ್ಯರು" ಎಂದು ಬುದ್ಧ ಹೇಳಿಲ್ಲ.

೫. ನರಳುವವರು ತಮ್ಮ ಸ್ಥಿತಿಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸಬಾರದೆಂದು ಬುದ್ಧ ಹೇಳಿಲ್ಲ.

೬. ಅದಕ್ಕೆ ಬದಲಾಗಿ, ಆತ ಸಂಪತ್ತನ್ನು ಸ್ವಾಗತಿಸಿದ ಮತ್ತು ಸುಮ್ಮನೆ ನರಳುವುದಕ್ಕಿಂತ ಪ್ರಬಲ ಕ್ರಿಯೆಯಾದ ವೀರ್ಯವನ್ನೂ ಬೋಧಿಸಿರುತ್ತಾನೆ.

೭. ಸಂತೃಪ್ತಿಯೇ ಸಂಪತ್ತಿನ ಪರಮೋನ್ನತ ರೂಪ ಎಂದು ಬುದ್ಧ ಹೇಳಿದ್ದರ ಅರ್ಥ ಮನುಷ್ಯ ಮಿತಿಮೀರಿಸ ದುರಾಸೆ ತನ್ನನ್ನು ವಶಪಡಿಸಿಕೊಳ್ಳಲು ಅವಕಾಶ ಕೊಡಬಾರದು ಎಂಬುದಾಗಿದೆ.

೮. ಭಿಕ್ಷು ರಥಪಾಲ ಹೀಗೆ ಹೇಳಿದ್ದಾನೆ: "ತಪ್ಪುದಾರಿ ಹಿಡಿದು ಎಂದೂ ದಾನ ಮಾಡದೆ ಸದಾ ಸಂಗ್ರಹಣೆ – ಹೊಸ ಸುಖಗಳಿಗೆ ಆಶೆಪಡುವ ಶ್ರೀಮಂತರನ್ನೂ ಸಮುದ್ರಪರ್ಯಂತ ದಿಗ್ವಿಜಯಗಳಿಗೆ ಅಂದರೆ ಪ್ರಜೆಗಳು ಸಾಯುತ್ತಿದ್ದರೂ ಸಮುದ್ರದಾಚೆಗಿನ ಸಾಮ್ರಾಜ್ಯಗಳ ಮೇಲೆ ಅಧಿಕಾರಕ್ಕಾಗಿ ಆಸೆಪಡುವ ರಾಜರು ಅವರ ಪ್ರಜೆಗಳು ಸಾಯುವುದನ್ನು, ಇನ್ನೂ ಹೆಚ್ಚಿನದಕ್ಕಾಗಿ ಕೊರಗುತ್ತಾ ಸಾಯುವವರನ್ನು ನಾನು ನೋಡಿದ್ದೇನೆ. ಈ ಲೋಕದಲ್ಲಿ ಸುಖಗಳ ಕೊಳಗ ಎಂದೂ ತುಂಬುವುದೇ ಇಲ್ಲ."

೯. ಮಹಾ–ನಿದಾನ–ಸುತ್ತಾಂತದಲ್ಲಿ ಆನಂದನಿಗೆ ಬುದ್ಧ ದುರಾಸೆಯನ್ನು ಗೆಲ್ಲುವ ಅಗತ್ಯವನ್ನು ವಿವರಿಸಿದ್ದಾನೆ. ಅದು ಹೀಗಿದೆ:

೧೦. "ಆನಂದ, ಸಂಪಾದಿಸಬೇಕೆಂಬ ಆಸೆಯಿಂದ ದುರಾಸೆ ಹುಟ್ಟುತ್ತದೆ. ಸಂಪಾದನೆಯ ಆಶೆ ತೀವ್ರ

ರಾಗವಾದಾಗ, ಕೂಡಿಟ್ಟುಕೊಳ್ಳುವ ಮೋಹ ಗಟ್ಟಿಯಾದಾಗ ದುರಾಸೆ ಹುಟ್ಟುತ್ತದೆ.

೧೧. "ಮಿತಿಮೀರಿದ ಸಂಪಾದನೆಯ ಆಸೆಯ ಪರಿಣಾಮವಾಗಿ ದುರಾಸೆ ಅಥವಾ ಸಂಗ್ರಹ ಬುದ್ಧಿಗೆ ಕಾವಲು ವ್ಯವಸ್ಥೆ ಬೇಕಾಗುತ್ತದೆ.

೧೨. "ಈ ದುರಾಸೆ ಅಥವಾ ಲಾಲಸೆಯನ್ನು ಏಕೆ ಖಂಡಿಸಬೇಕು?" "ಏಕೆಂದರೆ ಇದರಿಂದ ಅನೇಕ ಕೆಟ್ಟ ಮತ್ತು ದುಷ್ಟ ಸ್ಥಿತಿಗಳು ಉಂಟಾಗುತ್ತವೆ. ಅವೆಂದರೆ, ಹೊಡೆದಾಟ, ಹಾನಿಗಳು, ಘರ್ಷಣೆ, ವಿರೋಧ ಪ್ರತಿರೋಧಗಳು, ಜಗಳ, ನಿಂದೆ ಮತ್ತು ಸುಳ್ಳು ತಟವಟ ಹುಟ್ಟುತ್ತವೆ" ಎಂದು ಬುದ್ಧ ಆನಂದನಿಗೆ ಹೇಳಿದನು.

೧೩. ಇದು ವರ್ಗ ಹೋರಾಟದ ಸರಿಯಾದ ವಿಶ್ಲೇಷಣೆ ಎಂಬುದರಲ್ಲಿ ಅನುಮಾನವಿಲ್ಲ.

೧೪. ಅದರಿಂದಾಗಿಯೇ ಬುದ್ಧ ದುರಾಸೆ ಮತ್ತು ಲಾಲಸೆಯನ್ನು ನಿಗ್ರಹಿಸಬೇಕೆಂದು ಒತ್ತುಕೊಟ್ಟನು.

## ೫. ಎಲ್ಲ ಸಂಯುಕ್ತ ವಸ್ತುಗಳೂ ಅಶಾಶ್ವತ ಎಂದು ನಂಬುವುದೇ ಧರ್ಮ

೧. ಅನಿತ್ಯ ತತ್ತ್ವಕ್ಕೆ ಮೂರು ಮುಖಗಳಿವೆ.

೨. ಸಂಯುಕ್ತ ವಸ್ತುಗಳಿಗೂ ಅನಿತ್ಯತೆ ಇದೆ.

೩. ವ್ಯಕ್ತಿಗೂ ಅನಿತ್ಯತೆ ಇದೆ.

೪. ಉದ್ದಿಷ್ಟ ವಸ್ತುಗಳ ಸ್ವಸ್ವರೂಪದ ಅನಿತ್ಯತೆ.

೫. ಸಂಯುಕ್ತ ವಸ್ತುಗಳ ಅನಿತ್ಯತೆಯನ್ನು ಬುದ್ಧಧರ್ಮದ ಮಹಾ ತತ್ತ್ವಜ್ಞಾನಿ ಅಸಂಗ ಬಹಳ ಚೆನ್ನಾಗಿ ವಿವರಿಸಿದ್ದಾನೆ.

೬. "ಎಲ್ಲ ವಸ್ತುಗಳೂ ಕಾರಣ ಮತ್ತು ಉದ್ದೇಶಗಳಿಂದ ಹುಟ್ಟುತ್ತವೆ; ಅವುಗಳಿಗೆ ತಮ್ಮದೇ ಆದ ಸ್ವತಂತ್ರ ಅಂತಃಸ್ಸತ್ವ ಇಲ್ಲ. ಸಂಯೋಜನೆಯನ್ನು ಒಡೆದಾಗ ಅವುಗಳ ವಿನಾಶ ಖಚಿತವಾಗುತ್ತದೆ." ಎಂದು ಅಸಂಗ ಹೇಳುತ್ತಾನೆ.

೭. "ಜೀವಿಯ ದೇಹ ಚತುರ್ಭೂತಗಳಾದ ಭೂಮಿ, ನೀರು, ಬೆಂಕಿ ಮತ್ತು ಗಾಳಿ ಇವುಗಳಿಂದ ನಿರ್ಮಿತವಾಗಿದೆ. ಈ ಸಂಯೋಜನೆಯು ನಾಲ್ಕು ಸಂಯುಕ್ತ ಮೂಲ ವಸ್ತುಗಳದು, ಇವನ್ನು ವಿಘಟಿಸಿದಾಗ ಅವುಗಳ ವಿನಾಶ ಉಂಟಾಗುತ್ತದೆ."

೮. "ಇದನ್ನು ಸಂಯುಕ್ತ ಅಸ್ತಿತ್ವದ ಅನಿತ್ಯತೆಯೆಂದು ಕರೆಯಲಾಗಿದೆ."

೯. ಇರುವುದು ಎಂದರೆ ಆಗುವುದು ಎಂಬ ಸೂತ್ರ ಜೀವಿಯ ಅನಿತ್ಯತೆಯನ್ನು ಅತ್ಯುತ್ತಮವಾಗಿ ವರ್ಣಿಸುತ್ತದೆ.

೧೦. ಈ ಅರ್ಥದಲ್ಲಿ ಹಿಂದಿನ ಕ್ಷಣದ ಜೀವಿ ಬದುಕಿದೆ. ಆದರೆ ಈಗ ಬದುಕಿಲ್ಲ, ಮುಂದೆ ಬದುಕುವುದಿಲ್ಲ. ಮುಂದಿನ ಕ್ಷಣದ ಜೀವಿ ಬದುಕುತ್ತದೆ. ಆದರೆ ಹಿಂದೆ ಬದುಕಿಲ್ಲ ಅಥವಾ ಆಗ ಬದುಕುತ್ತಿಲ್ಲ; ಈ ಕ್ಷಣದ ಜೀವಿ ಬದುಕುತ್ತದೆ. ಆದರೆ ಹಿಂದೆ ಬದುಕಿಲ್ಲ ಮತ್ತು ಮುಂದೆ ಬದುಕುವುದಿಲ್ಲ.

೧೧. ಒಟ್ಟಿನಲ್ಲಿ, ಮಾನವ ಜೀವಿ ಸದಾ ಬದಲಾಗುತ್ತಿರುತ್ತದೆ, ಯಾವಾಗಲೂ ಬೆಳೆಯುತ್ತಿರುತ್ತದೆ. ಅವನು ತನ್ನ ಬದುಕಿನ ಎರಡು ಭಿನ್ನ ಗಳಿಗೆಗಳಲ್ಲಿ ಒಂದೇ ಆಗಿರುವುದಿಲ್ಲ.

೧೨. ಅನಿತ್ಯ ಸಿದ್ಧಾಂತದ ಮೂರನೆಯ ಮಜಲನ್ನು ಅರ್ಥಮಾಡಿಕೊಳ್ಳುವುದು ಸಾಮಾನ್ಯ ಮನುಷ್ಯನಿಗೆ ಸ್ವಲ್ಪ ಕಷ್ಟವಾಗುತ್ತದೆ.
೧೩. ಪ್ರತಿಯೊಂದು ಜೀವಿಯೂ ಈಗಲೋ ಆಗಲೋ ಸಾಯುತ್ತದೆಂದು ಅರ್ಥಮಾಡಿಕೊಳ್ಳುವುದು ಬಹಳ ಸುಲಭವಾದ ವಿಷಯ.
೧೪. ಆದರೆ ಮಾನವ ಜೀವಿ ಬದುಕಿದ್ದಾಗಲೇ ಹೇಗೆ ಬದಲಾಗುತ್ತಾ ಹೋಗುತ್ತಾನೆ – ಆಗುವಿಕೆಯನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ.
೧೫. "ಇದು ಹೇಗೆ ಸಾಧ್ಯ?" ಎಂದು ಪ್ರಶ್ನಿಸಿದರೆ, "ಎಲ್ಲವೂ ಅನಿತ್ಯ ಎಂದು ತಿಳಿಯುವುದರಿಂದ ಸಾಧ್ಯ" ಎಂದು ಬುದ್ಧ ಉತ್ತರಿಸುತ್ತಾನೆ.
೧೬. ಇದು ಮುಂದೆ 'ಶೂನ್ಯವಾದ' ಎಂಬುದಕ್ಕೆ ದಾರಿಮಾಡಿತು.
೧೭. ಬುದ್ಧ ಧರ್ಮದ ಶೂನ್ಯವಾದ ಸಂಪೂರ್ಣವಾಗಿ ನಾಸ್ತಿತ್ವವಾದವಲ್ಲ. ಈ ಭೌತ ಜಗತ್ತಿನಲ್ಲಿ ಪ್ರತಿಯೊಂದೂ ನಿರಂತರವಾಗಿ ಬದಲಾಗುತ್ತವೆ ಎಂದು ಅರ್ಥ.
೧೮. ಶೂನ್ಯತೆಯಿಂದಲೇ ಪ್ರತಿಯೊಂದೂ ಸಾಧ್ಯವಾಗುವುದು ಎಂಬುದನ್ನು ಅರ್ಥಮಾಡಿಕೊಳ್ಳುವವರು ಬಹಳ ವಿರಳ. ಅದಿಲ್ಲದೆ ಪ್ರಪಂಚದಲ್ಲಿ ಯಾವುದೂ ಸಾಧ್ಯವಿಲ್ಲ. ಎಲ್ಲ ವಸ್ತುಗಳ ಅನಿತ್ಯತೆಯ ಸ್ವಭಾವದ ಮೇಲೆ ಇತರ ಎಲ್ಲ ವಸ್ತುಗಳ ಸಾಧ್ಯತೆ ನಿಂತಿದೆ.
೧೯. ವಸ್ತುಗಳು ನಿರಂತರ ಬದಲಾವಣೆಗೆ ಸಿಲುಕದೆ, ಶಾಶ್ವತ ಮತ್ತು ಅಪರಿವರ್ತನಶೀಲವಾಗಿದ್ದರೆ, ಒಂದು ಬಗೆಯಿಂದ ಇನ್ನೊಂದು ಬಗೆಗೆ ಜೀವನ ವಿಕಾಸ ಮತ್ತು ಜೀವಿಗಳ ಬೆಳವಣಿಗೆ ಆಗದೆ ಥಟ್ಟನೆ ನಿಂತುಬಿಡುತ್ತಿತ್ತು.

೨೦. ಮಾನವ ಜೀವಿಗಳು ಸಾಯದೆ ಅಥವಾ ಬದಲಾವಣೆಯಾಗದೇ ಒಂದೇ ಸ್ಥಿತಿಯಲ್ಲಿ ನಿರಂತರವಾಗಿ ಮುಂದುವರೆದಿದ್ದರೆ ಎಂಥ ಪರಿಣಾಮವಾಗುತ್ತಿತ್ತು? ಮಾನವ ಜನಾಂಗದ ಪ್ರಗತಿಯೇ ಮೃತ ಸ್ಥಿತಿಗೆ ತಲುಪುತ್ತಿತ್ತು.
೨೧. ಶೂನ್ಯವನ್ನು ಖಾಲಿ ಅಥವಾ ಟೊಳ್ಳು ಎಂದು ಪರಿಗಣಿಸಿದ್ದರೆ ಅಗಾಧ ಕ್ಲಿಷ್ಟತೆ ಉದ್ಭವವಾಗುತ್ತಿತ್ತು.
೨೨. ಆದರೆ ಹಾಗಾಗಿಲ್ಲ. ಶೂನ್ಯ ಅಗಲ ಅಥವಾ ಉದ್ದ ಇಲ್ಲದ ಬಿಂದುವಿನಂತೆ ಸತ್ವವುಳ್ಳದ್ದಾಗಿದೆ.
೨೩. ಎಲ್ಲ ವಸ್ತುಗಳೂ ಅನಿತ್ಯ ಎಂಬ ಸಿದ್ಧಾಂತವನ್ನು ಬುದ್ಧ ಬೋಧಿಸಿದ್ದಾನೆ.
೨೪. ಬುದ್ಧನ ಈ ಸಿದ್ಧಾಂತದ ನೀತಿಯೆಂದರೇನು? ಇದು ಎಲ್ಲಕ್ಕಿಂತ ತುಂಬ ಮುಖ್ಯವಾದ ಪ್ರಶ್ನೆ.
೨೫. ಅನಿತ್ಯತೆಯ ಈ ಸಿದ್ಧಾಂತದ ನೀತಿ ಸರಳವಾಗಿದೆ. ಯಾವುದಕ್ಕೂ ಅಂಟಿಕೊಳ್ಳಬೇಡ.
೨೬. ಅದು ನಿಸ್ಸಂಗತ್ವವನ್ನು, ಸಂಪತ್ತಿನ ಬಗ್ಗೆ, ಸ್ನೇಹಿತರ ಬಗ್ಗೆ, ಇತ್ಯಾದಿ ಬಗ್ಗೆ, ನಿಸ್ಸಂಗತ್ವವನ್ನು ಬೆಳೆಸುತ್ತದೆ. "ಇವುಗಳೆಲ್ಲ ಅನಿತ್ಯ" ಎಂದು ಆತ ಹೇಳಿದ.

## ೬. ಕರ್ಮವೇ ನೈತಿಕ ವ್ಯವಸ್ಥೆಯ ಸಾಧನ ಎಂದು ನಂಬುವುದೇ ಧರ್ಮ

೧. ಭೌತಿಕ ಜಗತ್ತಿನಲ್ಲಿ ಒಂದು ವ್ಯವಸ್ಥೆ ಇದೆ. ಇದು ಮುಂದಿನ ಪ್ರಾಕೃತಿಕ ವಿದ್ಯಮಾನದಿಂದ ಸಾಬೀತಾಗಿದೆ.
೨. ನಕ್ಷತ್ರ ಕಾಯಗಳ ಚಲನೆ ಮತ್ತು ಕ್ರಿಯೆಗಳಲ್ಲಿ ಒಂದು ನಿರ್ದಿಷ್ಟ ವ್ಯವಸ್ಥೆ ಇದೆ.

೩. ನಿಯತ ಕ್ರಮಗಳಲ್ಲಿ ಬಂದುಹೋಗುವ ಋತುಗಳಲ್ಲಿ ಒಂದು ನಿರ್ದಿಷ್ಟ ವ್ಯವಸ್ಥೆ ಇದೆ.

೪. ಬೀಜಗಳು ಮರಗಳಾಗಿ ಬೆಳೆದು, ಮರಗಳು ಹಣ್ಣು ಮತ್ತು ಹಣ್ಣುಗಳು ಬೀಜಗಳನ್ನು ಕೊಡುವುದರಲ್ಲಿ ಒಂದು ನಿರ್ದಿಷ್ಟ ವ್ಯವಸ್ಥೆ ಇದೆ.

೫. ಬುದ್ಧ ಧರ್ಮದ ಪರಿಭಾಷೆಯಲ್ಲಿ ಇವುಗಳನ್ನು ನಿಯಮಗಳೆಂದು ಕರೆಯುತ್ತಾರೆ. ಇವುಗಳು ವ್ಯವಸ್ಥಿತ ಅನುಕ್ರಮದಲ್ಲಿ ಋತುನಿಯಮ, ಬೀಜನಿಯಮಗಳನ್ನು ರೂಪಿಸುತ್ತವೆ.

೬. ಅದೇ ರೀತಿಯಲ್ಲಿ ಮಾನವ ಸಮಾಜಲ್ಲಿ ನೈತಿಕ ವ್ಯವಸ್ಥೆ ಇದೆ. ಅದು ಹೇಗೆ ಹುಟ್ಟುತ್ತದೆ? ಹೇಗೆ ಮುಂದುವರಿಯುತ್ತದೆ?

೭. ದೇವರ ಅಸ್ತಿತ್ವದಲ್ಲಿ ನಂಬಿಕೆ ಉಳ್ಳವರಿಗೆ ಇದನ್ನು ಉತ್ತರಿಸಲು ಕಷ್ಟವಾಗುವುದಿಲ್ಲ. ಅವರ ಉತ್ತರ ಸುಲಭವಾಗಿದೆ.

೮. ನೈತಿಕ ವ್ಯವಸ್ಥೆಯನ್ನು ದೈವ ನಿಯಾಮಕ ಎಂದು ಅವರು ಹೇಳುತ್ತಾರೆ. ದೇವರು ಜಗತ್ತನ್ನು ಸೃಷ್ಟಿಸಿದನು ಮತ್ತು ದೇವರು ಜಗತ್ತಿನ ಪರಮಪಾಲಕ. ಅವನು ನೈತಿಕ ಮತ್ತು ಭೌತಿತ ನಿಯಮದ ಕರ್ತೃ ಎಂದು ಅವರು ಉತ್ತರಿಸುತ್ತಾರೆ.

೯. ಅವರ ಪ್ರಕಾರ, ನೈತಿಕ ನಿಯಮ ಮಾನವನ ಒಳಿತಿಗೇ ಇದೆ. ಏಕೆಂದರೆ ಅದು ದೈವಸಂಕಲ್ಪದಿಂದ ಉಗಮಿಸಿದೆ. ತನ್ನ ಸೃಷ್ಟಿಕರ್ತನಾದ ದೇವರಿಗೆ ಅವನು ವಿಧೇಯನಾಗಿರುತ್ತಾನೆ. ದೈವ ನಿಯಮಕ್ಕೆ ವಿಧೇಯನಾಗಿರುವುದರಿಂದಲೇ ನೈತಿಕ ವ್ಯವಸ್ಥೆ ನಡೆಯುತ್ತಿದೆ.

೧೦. ದೈವ ನಿಯಾಮಕದಿಂದ ನೈತಿಕ ವ್ಯವಸ್ಥೆ ನಡೆಯುತ್ತಿದೆ ಎಂದು ಹೇಳುವ ದೃಷ್ಟಿಕೋನಕ್ಕೆ ಇಂಥ ವಾದದ ಬೆಂಬಲವಿದೆ.

೧೧. ಈ ವಿವರಣೆ ಯಾವುದೇ ರೀತಿಯಿಂದಲೂ ತೃಪ್ತಿಕರವಾಗಿಲ್ಲ. ಏಕೆಂದರೆ ದೇವರಿಂದ ನೈತಿಕ ವ್ಯವಸ್ಥೆ ಹುಟ್ಟಿದೆ, ನೈತಿಕ ವ್ಯವಸ್ಥೆಯ ಆದಿ ಮತ್ತು ಅಂತ್ಯ ದೇವರು, ದೇವರಿಗೆ ವಿಧೇಯನಾಗಿರದೆ ಇರಲು ಮಾನವನಿಗೆ ಸಾಧ್ಯವೇ ಇಲ್ಲ ಎನ್ನುವುದಾದರೆ, ಪ್ರಪಂಚದಲ್ಲಿ ಏಕೆ ಇಷ್ಟೊಂದು ನೈತಿಕ ಅವ್ಯವಸ್ಥೆ ಇದೆ?

೧೨. ದೈವಿಕ ನಿಯಮದ ಅಧಿಕಾರ ಯಾವುದು? ವ್ಯಕ್ತಿಯ ಮೇಲೆ ದೈವಿಕ ನಿಯಮದ ಹತೋಟಿ ಏನು? ಇವು ಸುಸಂಗತ ಪ್ರಶ್ನೆಗಳಾಗಿವೆ. ಆದರೆ ನೈತಿಕ ವ್ಯವಸ್ಥೆಗೆ ದೈವ ನಿಯಾಮಕವೇ ಆಧಾರ ಎಂದು ನಂಬುವವರಿಂದ ಈ ಒಂದಕ್ಕೂ ತೃಪ್ತಿಕರವಾದ ಉತ್ತರವಿಲ್ಲ.

೧೩. ಈ ಕ್ಲಿಷ್ಟತೆಗಳನ್ನು ಹೋಗಲಾಡಿಸುವುದಕ್ಕಾಗಿ ಸಿದ್ಧಾಂತದಲ್ಲಿ ಏನೋ ಸ್ವಲ್ಪ ಬದಲಾವಣೆ ಮಾಡಿಕೊಳ್ಳಲಾಗಿದೆ.

೧೪. ದೇವರ ಆಜ್ಞೆಯಂತೆ ಸೃಷ್ಟಿಯಾಯಿತು ಎನ್ನುವುದರಲ್ಲಿ ಅನುಮಾನವಿಲ್ಲ. ಅವನ ಸಂಕಲ್ಪ ಮತ್ತು ನಿರ್ದೇಶನದಿಂದ ವಿಶ್ವದಲ್ಲಿ ಜೀವ ಪ್ರವೇಶಿಸಿತು ಎನ್ನುವುದೂ ಸಹ ನಿಜ. ಅಗಾಧ ಸಂಯೋಜನೆಯ ಚಾಲಕ ಬಲವಾಗಿ ನೆರವಾಗಲು ಶಕ್ತಿಯನ್ನು ಒಮ್ಮೆಗೇ ಅವನು ನೀಡಿದ ಎಂಬುದೂ ನಿಜ ಎಂದು ಹೇಳಲಾಗಿದೆ.

೧೫. ಆದರೆ ತಾನು ಮೂಲತಃ ನೀಡಿದ ನಿಯಮಗಳಿಗೆ ವಿಧೇಯನಾಗಿ ಪ್ರಕೃತಿಯೇ ಈ ಕೆಲಸ ಮಾಡಬೇಕೆಂದು ದೇವರು ಅದಕ್ಕೇ ಬಿಟ್ಟುಬಿಟ್ಟಿದ್ದಾನೆ.

೧೬. ಆದ್ದರಿಂದ ದೇವರು ನಿರೀಕ್ಷಿಸಿದಂತೆ ನೈತಿಕ ವ್ಯವಸ್ಥೆ ಕೆಲಸ ನಿರ್ವಹಿಸದಿದ್ದರೆ, ಅದು ದೇವರ ತಪ್ಪಲ್ಲ. ಪ್ರಕೃತಿಯದು.

೧೭. ವಾದದಲ್ಲಿ ಮಾಡಿದ ಈ ಬದಲಾವಣೆ ಕೂಡ ಕ್ಲಿಷ್ಟತೆಯನ್ನು ನಿವಾರಿಸದು. ದೇವರನ್ನು ಅವನ ಜವಾಬ್ದಾರಿಯಿಂದ ಮುಕ್ತ ಮಾಡಲು ಮಾತ್ರ ಅದು ನೆರವಾಗುತ್ತದೆ. ದೇವರು ತನ್ನ ನಿಯಮಗಳನ್ನು ಜಾರಿಗೊಳಿಸಲು ಪ್ರಕೃತಿಗೇಕೆ ಬಿಡಬೇಕು? ಎಂಬ ಪ್ರಶ್ನೆ ಉಳಿದೇಬಿಡುತ್ತದೆ. ಅಂಥ ಅನುಪಸ್ಥಿತ ದೇವರ ಅಗತ್ಯವಾದರೂ ಏನು?

೧೮. "ನೈತಿಕ ವ್ಯವಸ್ಥೆ ಹೇಗೆ ನಡೆಯುತ್ತದೆ?" ಎಂಬ ಪ್ರಶ್ನೆಗೆ ಬುದ್ಧ ನೀಡಿರುವ ಉತ್ತರ ಸಂಪೂರ್ಣವಾಗಿ ಭಿನ್ನವಾಗಿದೆ.

೧೯. ಆತನ ಉತ್ತರ ಸರಳವಾಗಿದೆ. "ವಿಶ್ವದಲ್ಲಿ ನೈತಿಕ ವ್ಯವಸ್ಥೆಯನ್ನು ದೇವರು ನಡೆಸುತ್ತಿಲ್ಲ. ಕರ್ಮ ನಿಯಮ ನಡೆಸುತ್ತದೆ". ಆ ಪ್ರಶ್ನೆಗೆ ಇದು ಬುದ್ಧನ ಉತ್ತರ.

೨೦. ವಿಶ್ವದ ನೈತಿಕ ವ್ಯವಸ್ಥೆ ಒಳ್ಳೆಯದಿರಬಹುದು ಅಥವಾ ಕೆಟ್ಟದಿರಬಹುದು. ಆದರೆ ಬುದ್ಧನ ಪ್ರಕಾರ, ನೈತಿಕ ವ್ಯವಸ್ಥೆ ಮನುಷ್ಯನ ಮೇಲೆ ಅವಲಂಬಿತವಾಗಿದೆ. ಬೇರಾರ ಮೇಲೂ ಅಲ್ಲ.

೨೧. ಕರ್ಮ ಎಂದರೆ ಮನುಷ್ಯನ ಕೆಲಸ. ವಿಪಾಕ ಎನ್ನುವುದು ಅದರ ಪರಿಣಾಮ. ನೈತಿಕ ವ್ಯವಸ್ಥೆ ಕೆಟ್ಟದ್ದು ಎಂದರೆ ಮಾನವ ಮಾಡುವ ಅಕುಶಲ (ಕೆಟ್ಟ) ಕರ್ಮವೇ ಕಾರಣವಾಗಿದೆ. ನೈತಿಕ ವ್ಯವಸ್ಥೆ ಒಳ್ಳೆಯದು ಎಂದರೆ ಮಾನವ ಮಾಡುವ ಕುಶಲ (ಒಳ್ಳೆಯ) ಕರ್ಮವೇ ಕಾರಣ.

೨೨. ಕರ್ಮದ ಬಗ್ಗೆ ಬರಿಯ ಮಾತನಾಡುವುದರಿಂದಲೇ ಬುದ್ಧ ಸಂತೃಪ್ತನಾಗಲಿಲ್ಲ. ಆತ ಕರ್ಮದ ಕಟ್ಟಳೆಯ ಬಗ್ಗೆ ಹೇಳಿದ. ಅದು ಕರ್ಮ ನಿಯಮದ ಇನ್ನೊಂದು ಹೆಸರು.

೨೩. ಕರ್ಮದ ಕಟ್ಟಳೆಯ ಮೂಲಕ ಏನನ್ನು ತಿಳಿಸಲು ಬುದ್ಧ ಆಶಿಸಿದ್ದಾನೆಂದರೆ, ಹಗಲನ್ನು ಇರುಳು ಅನುಸರಿಸುವಂತೆ ಕ್ರಿಯೆಯ ಫಲ ಕ್ರಿಯೆಯನ್ನು ಖಂಡಿತವಾಗಿ ಅನುಸರಿಸುತ್ತದೆ ಎಂಬುದನ್ನು. ಅದೊಂದು ನಿಯಮ.

೨೪. ಕುಶಲ ಕರ್ಮದ ಒಳ್ಳೆಯ ಪರಿಣಾಮಗಳನ್ನು ಪಡೆಯದೆ ಇರಲು ಯಾರಿಗೂ ಸಾಧ್ಯವಿಲ್ಲ. ಹಾಗೆಯೇ ಅಕುಶಲ ಕರ್ಮದ ಕೆಟ್ಟ ಪರಿಣಾಮಗಳನ್ನು ಯಾರೂ ತಪ್ಪಿಸಿಕೊಳ್ಳಲು ಆಗುವುದಿಲ್ಲ.

೨೫. ಆದ್ದರಿಂದ, ಕುಶಲ ಕರ್ಮವನ್ನು ಮಾಡಿ. ಅದರಿಂದ ಒಳ್ಳೆಯ ನೈತಿಕ ವ್ಯವಸ್ಥೆಯಾಗಿ, ಮಾನವ ಜನಾಂಗಕ್ಕೆ ಉಪಕಾರವಾಗುತ್ತದೆ. ಅದನ್ನು ಕುಶಲ ಕರ್ಮ ನಡೆಸುತ್ತದೆ. ಅಕುಶಲ ಕರ್ಮವನ್ನು ಮಾಡಬೇಡಿ. ಅದರಿಂದ ಕೆಟ್ಟ ನೈತಿಕ ವ್ಯವಸ್ಥೆ ಉದ್ಭವಿಸಿ ಮಾನವ ಜನಾಂಗ ನೋವನ್ನು ಅನುಭವಿಸುತ್ತದೆ. ಇದು ಬುದ್ಧನ ಉಪದೇಶ.

೨೬. ಕರ್ಮ ಮಾಡಿದ ಘಳಿಗೆಗೂ, ಅದರ ಫಲವನ್ನು ಅನುಭವಿಸುವ ಘಳಿಗೆಗೂ ಮಧ್ಯಂತರವಿದೆ ಎನ್ನಬಹುದು. ಇದು ಸಾಮಾನ್ಯವಾದುದು.

೨೭. ಈ ದೃಷ್ಟಿಯಿಂದ ಕರ್ಮವು (೧) ದಿತ್ತಧಮ್ಮ ವೇದನೀಯ ಕರ್ಮ (ತಕ್ಷಣ ಪರಿಣಾಮದ ಕರ್ಮ), (೨) ಉಪಪಜ್ಜ ವೇದನೀಯ ಕರ್ಮ (ದೂರ ಪರಿಣಾಮದ ಕರ್ಮ) ಮತ್ತು (೩) ಅಪೋರಪರೀಯ ವೇದನೀಯ ಕರ್ಮ (ಅಖಚಿತ ಪರಿಣಾಮದ ಕರ್ಮ) ಎಂದು ಮೂರು ವಿಧವಾಗಿದೆ.

೨೮. ಕರ್ಮವು ಅಹೋಸಿ ಕರ್ಮ ಅಂದರೆ ಪರಿಣಾಮವಿಲ್ಲದ ಕರ್ಮ ಎಂಬ ವರ್ಗಕ್ಕೂ ವಿಭಜಿತವಾಗಬಹುದು. ಈ ಅಹೋಸಿ ಕರ್ಮ ಎನ್ನುವುದು ಕ್ರಿಯಾಶೀಲವಾಗಲು ತೀರ ದುರ್ಬಲವಾದಂಥ ಅಥವಾ ಕ್ರಿಯಾಶೀಲವಾಗಬೇಕಾದ ಸಮಯದಲ್ಲಿ ಬೇರೊಂದು ಕರ್ಮ ನಿಷ್ಫಲಗೊಳಿಸುವ ಎಲ್ಲಾ ಕರ್ಮಗಳನ್ನೂ ಒಳಗೊಳ್ಳುತ್ತದೆ.

೨೯. ಆದರೆ ಈ ಎಲ್ಲಾ ಪರಿಗಣನೆಗಳಿಗೆ ಅವಕಾಶ ಕೊಟ್ಟರೂ, ಕರ್ಮದ ಕಟ್ಟಳೆ ದಾಕ್ಷಿಣ್ಯರಹಿತವಾದುದು ಎಂಬ ಬುದ್ಧನ ವಾದವನ್ನು ಅದು ಯಾವ ಅರ್ಥದಲ್ಲೂ ಕುಂದಿಸುವುದಿಲ್ಲ.

೩೦. ಕರ್ಮದ ಫಲ ಕರ್ಮಿಯನ್ನು ಅನುಸರಿಸಿ ಬರುವುದರಿಂದ ಆ ಬಗ್ಗೆ ಯೋಚಿಸುವಂಥದ್ದು ಏನೂ ಇಲ್ಲ ಎಂಬ ಪರಿಕಲ್ಪನೆಯನ್ನು ಕರ್ಮಸಿದ್ಧಾಂತ ಅನಿವಾರ್ಯವಾಗಿ ಒಳಗೊಂಡಿಲ್ಲ. ಇದು ತಪ್ಪು. ಕೆಲವೊಮ್ಮೆ ಕರ್ಮಿಗೆ ಬದಲಾಗಿ ಇನ್ನೊಬ್ಬನನ್ನು ಕ್ರಿಯೆ ಬಾಧಿಸುತ್ತದೆ. ಏನೇ ಆದರೂ ಅದು ಕರ್ಮದ ನಿಯಮ. ಏಕೆಂದರೆ ಅದು ನೈತಿಕ ವ್ಯವಸ್ಥೆಯನ್ನು ಎತ್ತಿಹಿಡಿಯುತ್ತದೆ ಇಲ್ಲವೇ ತಲೆಕೆಳಗು ಮಾಡುತ್ತದೆ.

೩೧. ವ್ಯಕ್ತಿಗಳು ಬರುತ್ತಾರೆ, ವ್ಯಕ್ತಿಗಳು ಹೋಗುತ್ತಾರೆ. ಆದರೆ ವಿಶ್ವದ ನೈತಿಕ ವ್ಯವಸ್ಥೆ ಇದ್ದೇ ಇರುತ್ತದೆ. ಹಾಗೆಯೇ ಅದನ್ನು ಬೆಂಬಲಿಸುವ ಕರ್ಮದ ನಿಯಮ ಕೂಡ ಇರುತ್ತದೆ.

೩೨. ಈ ಕಾರಣಕ್ಕಾಗಿಯೇ ಬುದ್ಧ ಧರ್ಮದಲ್ಲಿ ನೈತಿಕತೆಗೆ ದೇವರ ಸ್ಥಾನ ಕೊಡಲಾಗಿದೆ.

೩೩. ಹಾಗಾಗಿ, "ವಿಶ್ವದ ನೈತಿಕ ವ್ಯವಸ್ಥೆ ಹೇಗೆ ನಡೆಯುತ್ತದೆ?" ಎಂಬ ಪ್ರಶ್ನೆಗೆ ಬುದ್ಧನ ಉತ್ತರವು ನೇರ, ಸರಳ ಮತ್ತು ನಿರಾಕರಿಸಲಾಗದಂಥದ್ದಾಗಿದೆ.

೩೪. ಆದಾಗ್ಯೂ ಅದರ ನಿಜವಾದ ಅರ್ಥವನ್ನು ಕ್ವಚಿತ್ತಾಗಿ ಗ್ರಹಿಸಲಾಗಿದೆ. ಅನೇಕ ವೇಳೆ, ಬಹುತೇಕ ಯಾವಾಗಲೂ, ಅದನ್ನು ಅಪಾರ್ಥ ಮಾಡಿಕೊಳ್ಳಲಾಗಿದೆ ಅಥವಾ ತಪ್ಪಾಗಿ ವಿವರಿಸಲಾಗಿದೆ. "ನೈತಿಕ ವ್ಯವಸ್ಥೆ ಹೇಗೆ ನಡೆಯುತ್ತದೆ?" ಎಂಬ ಪ್ರಶ್ನೆಗೆ ಉತ್ತರವಾಗಿ ಬುದ್ಧನಿಂದಲೇ ಕರ್ಮ ನಿಯಮ ಪ್ರತಿಪಾದಿತವಾಯಿತೆಂದು ಅನೇಕರು ಅರಿತಿಲ್ಲ.

೩೫. ಅದೇ ಬುದ್ಧನ ಕರ್ಮ ನಿಯಮದ ಉದ್ದೇಶವಾಗಿದೆ.

೩೬. ಸಾಮಾನ್ಯ ನೈತಿಕ ವ್ಯವಸ್ಥೆಯ ಪ್ರಶ್ನೆಗೆ ಮಾತ್ರವೇ ಕರ್ಮ ನಿಯಮ ಸಂಬಂಧಿಸಿದೆ. ಅದು ವ್ಯಕ್ತಿಯ ಅದೃಷ್ಟ ಅಥವಾ ದುರಾದೃಷ್ಟಕ್ಕೆ ಯಾವ ಸಂಬಂಧವನ್ನೂ ಹೊಂದಿಲ್ಲ.

೩೭. ವಿಶ್ವದ ನೈತಿಕ ವ್ಯವಸ್ಥೆಯ ಉಳಿವಿಗೆ ಅದು ಸಂಬಂಧಿಸಿದೆ.

೩೮. ಈ ಕಾರಣಕ್ಕಾಗಿಯೇ ಈ ಕರ್ಮನಿಯಮ ಬುದ್ಧ ಧಮ್ಮದ ಭಾಗವಾಗಿದೆ.

## ಭಾಗ : ೪

# ಯಾವುದು ಧರ್ಮ ಅಲ್ಲ

೧. ಅತಿಮಾನುಷ ಶಕ್ತಿಯಲ್ಲಿ ನಂಬಿಕೆ ಇಡುವುದು ಧರ್ಮ ಅಲ್ಲ
೨. ಈಶ್ವರನಲ್ಲಿ (ದೇವರಲ್ಲಿ) ನಂಬಿಕೆ ಇರುವುದು ಧರ್ಮದ ಮುಖ್ಯ ಅಂಶವಿಲ್ಲ
೩. ಬ್ರಹ್ಮನೊಂದಿಗೆ ಒಂದಾಗುವುದರ ಮೇಲೆ ಆಧಾರಿತವಾದ ಧರ್ಮ ಸುಳ್ಳು ಧರ್ಮವಾಗಿದೆ
೪. ಆತ್ಮದಲ್ಲಿ ನಂಬಿಕೆ ಇಡುವುದು ಧರ್ಮವಲ್ಲ
೫. ಯಜ್ಞಗಳಲ್ಲಿ ನಂಬಿಕೆಯಿರುವುದು ಧರ್ಮವಲ್ಲ
೬. ಊಹೆಯ ಮೇಲೆ ನಿಂತ ನಂಬಿಕೆ ಧರ್ಮವಲ್ಲ
೭. ಧರ್ಮದ ಗ್ರಂಥಗಳನ್ನು ಓದುವುದು ಧರ್ಮವಲ್ಲ
೮. ಧರ್ಮಗ್ರಂಥಗಳು ದೋಷಾತೀತವೆಂದು ನಂಬುವುದು ಧರ್ಮವಲ್ಲ

# ೧. ಅತಿಮಾನುಷ ಶಕ್ತಿಯಲ್ಲಿ ನಂಬಿಕೆ ಇಡುವುದು ಧರ್ಮ ಅಲ್ಲ

೧. ಯಾವಾಗಲಾದರೂ ಯಾವುದೇ ವಿದ್ಯಮಾನ ಸಂಭವಿಸಿದರೆ ಅದು ಹೇಗೆ ನಡೆಯಿತು, ಅದಕ್ಕೆ ಕಾರಣ ಏನು ಎಂದು ತಿಳಿಯಲು ಮಾನವ ಜನಾಂಗ ಉತ್ಸುಕವಾಗಿರುತ್ತದೆ.

೨. ಕೆಲವು ವೇಳೆ ಕಾರಣಕ್ಕೂ ಪರಿಣಾಮಕ್ಕೂ ತೀರಾ ಸಾಮ್ಯತೆ ಮತ್ತು ನಿಕಟತೆ ಇರುವುದರಿಂದ ಆ ಘಟನೆ ನಡೆದುದನ್ನು ವಿವರಿಸುವುದು ಕಷ್ಟವಾಗುವುದಿಲ್ಲ.

೩. ಆದರೆ ಅನೇಕ ಸಲ ಕಾರಣದಿಂದ ಪರಿಣಾಮ ಬಹಳ ದೂರವಿರುವುದರಿಂದ ಪರಿಣಾಮವನ್ನು ವಿವರಿಸಲು ಆಗುವುದಿಲ್ಲ. ಸ್ಪಷ್ಟವಾಗಿ ಅಲ್ಲಿ ಕಾರಣವೇ ಗೋಚರಿಸುವುದಿಲ್ಲ.

೪. ಆಗ ಪ್ರಶ್ನೆ ಏಳುತ್ತದೆ: ಹಾಗಾದರೆ ಹೇಗೆ ಇದು ನಡೆಯಿತು?

೫. ಅಂಥ ಘಟನೆಗೆ ಏನೋ ಅತಿಮಾನುಷ ಶಕ್ತಿಯ ಕಾರಣವೆನ್ನುವುದು ಅತ್ಯಂತ ಸಾಧಾರಣವಾದ ಉತ್ತರ. ಅದನ್ನು ಸಾಮಾನ್ಯವಾಗಿ ಪವಾಡ ಎನ್ನುತ್ತಾರೆ.

೬. ಈ ಪ್ರಶ್ನೆಗೆ ಬುದ್ಧನಿಗಿಂತ ಹಿಂದಿನವರು ತೀರಾ ಭಿನ್ನಭಿನ್ನ ಉತ್ತರವನ್ನು ನೀಡಿದ್ದಾರೆ.

೭. ಪ್ರತಿಯೊಂದು ಘಟನೆಗೂ ಕಾರಣವಿದೆ ಎನ್ನುವುದನ್ನು ಪಕೌದ ಕಾತ್ಯಾನ ನಿರಾಕರಿಸಿದ. ಘಟನೆಗಳು ಸ್ವತಂತ್ರವಾಗಿ ಸಂಭವಿಸುತ್ತವೆಂದು ಆತ ಹೇಳಿದನು.

೮. ಘಟನೆಗೆ ಕಾರಣವಿರಲೇಬೇಕೆಂದು ಮಖಾಲಿ ಘೋಷಾಲ್ ಒಪ್ಪಿದ್ದನು. ಆದರೆ ಕಾರಣವನ್ನು ಮಾನವ ಕರ್ತೃತ್ವದಲ್ಲಿ ಹುಡುಕಬಾರದು; ಅದನ್ನು ಪ್ರಕೃತಿಯಲ್ಲಿ, ನಿಯತಿಯಲ್ಲಿ, ವಸ್ತುಗಳ ಆಂತರಿಕ ನಿಯಮಗಳಲ್ಲಿ, ದೈವನಿರ್ಣಯದಲ್ಲಿ ಅಥವಾ ಅಂಥವುಗಳಲ್ಲಿ ಕಾಣಬೇಕಾಗುತ್ತದೆ ಎಂದು ಅವನು ಬೋಧಿಸಿದನು.

೯. ಈ ಸಿದ್ಧಾಂತಗಳನ್ನು ಬುದ್ಧ ಅಂಗೀಕರಿಸಲಿಲ್ಲ. ಪ್ರತಿಯೊಂದು ಘಟನೆಗೂ ಒಂದು ಕಾರಣವಿರುವುದಷ್ಟೇ ಅಲ್ಲ, ಈ ಕಾರಣ ಯಾವುದೇ ಮಾನವ ಕ್ರಿಯೆಯ ಅಥವಾ ನೈಸರ್ಗಿಕ ನಿಯಮದ ಫಲ ಎಂದು ಹೇಳಿದ.

೧೦. ಒಂದು ಘಟನೆ ಸಂಭವಿಸಲು ಕಾಲ, ಪ್ರಕೃತಿ, ನಿಯತಿ ಇತ್ಯಾದಿ ಸಿದ್ಧಾಂತಗಳು ಕಾರಣ ಎಂಬುದಕ್ಕೆ ವಿರುದ್ಧವಾದ ಆತನ ವಾದ ಈ ರೀತಿಯಾಗಿತ್ತು.

೧೧. ಒಂದು ಘಟನೆ ಸಂಭವಿಸಲು ಕಾಲ, ಪ್ರಕೃತಿ, ನಿಯತಿ ಇತ್ಯಾದಿಗಳು ಏಕೈಕ ಕಾರಣವಾದರೆ, ಆಗ ನಾವು ಯಾರು?

೧೨. ಮನುಷ್ಯನಾದವನು ಕೇವಲ ಕಾಲ, ಪ್ರಕೃತಿ, ನಿಯತಿ, ಅದೃಷ್ಟ, ದೇವರುಗಳ ಕೈಗೊಂಬೆಯೇ?

೧೩. ಮನುಷ್ಯ ಸ್ವತಂತ್ರನಾಗಿಲ್ಲ ಎಂದರೆ ಅವನ ಇರುವಿಕೆಯಿಂದ ಪ್ರಯೋಜನವೇನು? ಅತಿಮಾನುಷ ಕಾರಣಗಳನ್ನೆಲ್ಲಾ ಅವನು ನಂಬುತ್ತಾ ಹೋದರೆ ಅವನ ಬುದ್ಧಿಶಕ್ತಿಯ ಪ್ರಯೋಜನವೇನು?

೧೪. ಮನುಷ್ಯ ಸ್ವತಂತ್ರನಾಗಿದ್ದರೆ, ಆಗ ಎಲ್ಲ ಘಟನೆಗಳೂ ಅವನ ಕ್ರಿಯೆಯ ಅಥವಾ ಪ್ರಕೃತಿಯ

ಕ್ರಿಯೆಯ ಫಲವಾಗಬೇಕಾಗುತ್ತದೆ. ಯಾವುದೇ ಘಟನೆಯೂ ತನ್ನ ಮೂಲದಲ್ಲಿ ಅತಿಮಾನುಷವಾಗಿರಲು ಸಾಧ್ಯವೇ ಇಲ್ಲ.

೧೫. ಒಂದು ಘಟನೆಯ ಸಂಭವಕ್ಕೆ ಕಾರಣ ಕಂಡುಹಿಡಿಯಲು ಮನುಷ್ಯ ಸಮರ್ಥನಾಗದೇ ಇರಬಹುದು. ಆದರೆ ಅವನಿಗೆ ಬುದ್ಧಿಶಕ್ತಿ ಇದ್ದರೆ ಅವನು ಒಂದಲ್ಲ ಒಂದು ದಿನ ಅದನ್ನು ಪತ್ತೆ ಹಚ್ಚಿಯೇ ಹಚ್ಚುತ್ತಾನೆ.

೧೬. ಅತಿಮಾನುಷವಾದವನ್ನು ತಿರಸ್ಕರಿಸುವುದರಲ್ಲಿ ಬುದ್ಧನಿಗೆ ಮೂರು ಉದ್ದೇಶಗಳಿದ್ದವು.

೧೭. ಮೊದಲನೆಯ ಉದ್ದೇಶ: ಮನುಷ್ಯನನ್ನು ವೈಚಾರಿಕ ಮಾರ್ಗದಲ್ಲಿ ನಡೆಸುವುದು.

೧೮. ಎರಡನೆಯ ಉದ್ದೇಶ: ಸತ್ಯವನ್ನು ಅರಸಲು ಮನುಷ್ಯನನ್ನು ಸ್ವತಂತ್ರನನ್ನಾಗಿ ಮಾಡುವುದು.

೧೯. ಮೂರನೆಯ ಉದ್ದೇಶ: ಅನ್ವೇಷಣಾ ಮನೋಭಾವವನ್ನು ಕೊಲ್ಲಲು ಕಾರಣವಾದ ಮೌಢ್ಯದ ಅತ್ಯಂತ ಪ್ರಬಲ ಮೂಲವನ್ನು ನಿರ್ಮೂಲ ಮಾಡುವುದು.

೨೦. ಇದನ್ನೇ ಕರ್ಮ ಅಥವಾ ಕಾರಣದ ನಿಯಮ ಎಂದು ಕರೆಯಲಾಗಿದೆ.

೨೧. ಬುದ್ಧ ಧರ್ಮದಲ್ಲಿ ಈ ಕರ್ಮ ಅಥವಾ ಕಾರಣ ಸಿದ್ಧಾಂತವೇ ಅತ್ಯಂತ ಕೇಂದ್ರವಾದುದು. ಅದು ವಿಚಾರವಾದವನ್ನು ಬೋಧಿಸುತ್ತದೆ. ಬುದ್ಧ ಧರ್ಮ ವಿಚಾರವಾದವಲ್ಲದಿದ್ದರೆ ಬೇರೇನೂ ಅಲ್ಲ.

೨೨. ಆದ್ದರಿಂದಲೇ ಅತಿಮಾನುಷ ಶಕ್ತಿಯ ಆರಾಧನೆ ಧಮ್ಮವಲ್ಲ.

## ೨. ಈಶ್ವರನಲ್ಲಿ (ದೇವರಲ್ಲಿ) ನಂಬಿಕೆ ಇರುವುದು ಧರ್ಮದ ಮುಖ್ಯ ಅಂಶವಲ್ಲ

೧. ಪ್ರಪಂಚವನ್ನು ಯಾರು ಸೃಷ್ಟಿಸಿದರು ಎನ್ನುವುದು ಸಾಮಾನ್ಯ ಪ್ರಶ್ನೆ. ಪ್ರಪಂಚವನ್ನು ದೇವರು ಸೃಷ್ಟಿಸಿದ ಎನ್ನುವುದೂ ಬಹಳ ಸಾಮಾನ್ಯ ಉತ್ತರ.

೨. ಬ್ರಾಹ್ಮಣೀಯ ಸಿದ್ಧಾಂತದಲ್ಲಿ ಈ ದೇವರನ್ನು ಪ್ರಜಾಪತಿ, ಈಶ್ವರ, ಬ್ರಹ್ಮ ಅಥವಾ ಮಹಾಬ್ರಹ್ಮ ಎಂಬ ವೈವಿಧ್ಯಮಯವಾದ ಹೆಸರುಗಳಿಂದ ಕರೆಯಲಾಗಿದೆ.

೩. ಈ ದೇವರು ಯಾರು, ಅವನು ಹೇಗೆ ಅಸ್ತಿತ್ವಕ್ಕೆ ಬಂದನು ಎಂಬ ಪ್ರಶ್ನೆಗೆ ಉತ್ತರವಿಲ್ಲ.

೪. ದೇವರಲ್ಲಿ ನಂಬಿಕೆ ಇರುವವರು ಅವನನ್ನು ಸರ್ವಶಕ್ತ, ಸರ್ವಾಂತರ್ಯಾಮಿ ಮತ್ತು ಸರ್ವಜ್ಞ ಎಂದು ವರ್ಣಿಸುತ್ತಾರೆ.

೫. ಕೆಲವು ನೈತಿಕ ಗುಣಗಳನ್ನು ಸಹ ದೇವರಿಗೆ ಆರೋಪಿಸಲಾಗಿದೆ. ದೇವರನ್ನು ಒಳ್ಳೆಯವನೆಂದು, ನ್ಯಾಯಪರನೆಂದು ಮತ್ತು ಪ್ರೇಮಮಯಿ ಎಂದು ಹೇಳಲಾಗುತ್ತಿದೆ.

೬. ದೇವರನ್ನು ವಿಶ್ವದ ಸೃಷ್ಟಿಕರ್ತನೆಂದು ತಥಾಗತ ಒಪ್ಪಿದನೆ ಎಂಬುದೇ ಪ್ರಶ್ನೆ.

೭ ಅದಕ್ಕೆ ಉತ್ತರ "ಇಲ್ಲ". ಅವನು ಒಪ್ಪಲಿಲ್ಲ.

೮. ದೇವರ ಅಸ್ತಿತ್ವದ ಸಿದ್ಧಾಂತವನ್ನು ಬುದ್ಧ ಏತಕ್ಕೆ ತಿರಸ್ಕರಿಸಿದ ಎಂಬುದಕ್ಕೆ ನಾನಾ ಕಾರಣಗಳಿವೆ.

೯. ಯಾರೂ ದೇವರನ್ನು ನೋಡಿಲ್ಲ. ದೇವರ ಬಗ್ಗೆ ಮಾತ್ರ ಜನ ಮಾತನಾಡುತ್ತಾರೆ.

೧೦. ದೇವರು ಅಜ್ಞಾತ ಮತ್ತು ಅಗೋಚರ.

೧೧. ದೇವರು ಜಗತ್ತನ್ನು ಸೃಷ್ಟಿಸಿದನೆಂದು ಯಾರೂ ಸಾಧಿಸಲು ಸಾಧ್ಯವಿಲ್ಲ. ಜಗತ್ತನ್ನು ಯಾರೂ

ಸೃಷ್ಟಿಸಿಲ್ಲ, ಅದು ವಿಕಾಸವಾಗಿದೆ.

೧೨. ದೇವರನ್ನು ನಂಬುವುದರಿಂದ ಪ್ರಯೋಜನ ಏನಿದೆ? ಅದು ಲಾಭಕರವಲ್ಲ.

೧೩. ದೇವರನ್ನು ಅವಲಂಬಿಸಿದ ಧರ್ಮ ಊಹೆಯ ಮೇಲೆ ನಿಂತ ಧರ್ಮ ಎಂಬುದು ಬುದ್ಧನ ಉವಾಚ.

೧೪. ಆದ್ದರಿಂದ ದೇವರ ಮೇಲೆ ಆಧಾರಿತವಾದ ಧರ್ಮ ಇರಲು ಯೋಗ್ಯವಲ್ಲ.

೧೫. ಮೌಢ್ಯವನ್ನು ಸೃಷ್ಟಿಸುವುದರಲ್ಲಿ ಮಾತ್ರ ಅದು ಕೊನೆಯಾಗುತ್ತದೆ.

೧೬. ತಥಾಗತನು ಈ ಪ್ರಶ್ನೆಯನ್ನು ಅಲ್ಲಿಗೇ ಬಿಡಲಿಲ್ಲ. ಅದರ ಅನೇಕ ಮುಖಗಳನ್ನು ಆತ ಚರ್ಚಿಸಿದ್ದಾನೆ.

೧೭. ಈ ಸಿದ್ಧಾಂತವನ್ನು ಅವನು ತಿರಸ್ಕರಿಸುವುದಕ್ಕೆ ಆಧಾರಗಳು ಹಲವು.

೧೮. ದೇವರ ಅಸ್ತಿತ್ವದ ಸಿದ್ಧಾಂತ ಸತ್ಯದ ಮೇಲೆ ನಿಂತಿಲ್ಲ ಎಂದು ಆತ ವಾದಿಸಿದ.

೧೯. ಈ ಅಂಶವನ್ನು ವಸಿಷ್ಠ ಮತ್ತು ಭಾರದ್ವಾಜ ಎಂಬ ಇಬ್ಬರು ಬ್ರಾಹ್ಮಣರ ಜೊತೆ ನಡೆಸಿದ ಸಂವಾದದಲ್ಲಿ ಸ್ಪಷ್ಟಪಡಿಸಿದ್ದಾನೆ.

೨೦. ಮುಕ್ತಿಗೆ 'ಯಾವುದು ಸರಿಯಾದ ಮಾರ್ಗ, ಯಾವುದು ಸರಿಯಾದ ಮಾರ್ಗ ಅಲ್ಲ' ಎಂಬ ಬಗ್ಗೆ ಅವರಿಬ್ಬರಲ್ಲಿ ವಿವಾದವುಂಟಾಯಿತು.

೨೧. ಅದೇ ಸಮಯದಲ್ಲಿ ತಥಾಗತನು ಕೋಸಲದ ಮೂಲಕ ಸಂಚಾರ ಮಾಡುತ್ತಿದ್ದನು. ಆತನ ಜೊತೆ ಭಿಕ್ಷುಗಳ ದೊಡ್ಡ ತಂಡವಿತ್ತು. ಆತ ಬ್ರಾಹ್ಮಣರ ಹಳ್ಳಿಯಾದ ಮನಃಕಾಪದಲ್ಲಿ ತಂಗಿದನು. ಅಕಿರಾವತಿ ನದಿಯ ದಡದ ಮೇಲಿದ್ದ ಮಾವಿನ ತೋಪಿನಲ್ಲಿ ಆತ ಉಳಿದುಕೊಂಡಿದ್ದನು.

೨೨. ಮನಃಕಾಪ ಎಂಬ ಪಟ್ಟಣದಲ್ಲಿ ವಸಿಷ್ಠ ಮತ್ತು ಭಾರದ್ವಾಜ ವಾಸವಾಗಿದ್ದರು. ತಥಾಗತನು ತಮ್ಮ ಊರಿನಲ್ಲಿ ತಂಗಿರುವುದನ್ನು ಅವರು ಕೇಳಿ, ಅವನಿರುವಲ್ಲಿಗೆ ಹೋಗಿ ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

೨೩. ಭಾರದ್ವಾಜ ಹೇಳಿದನು: "ತರುಕ್ಷಪದವಿಯೇ ನೇರ ಪಥ. ಇದೇ ಮುಕ್ತಿಗೆ ನೇರ ಮಾರ್ಗ, ಅದಕ್ಕನುಸಾರವಾಗಿ ನಡೆದುಕೊಳ್ಳುವುದನ್ನು ಬ್ರಹ್ಮಸಾಯುಜ್ಯದ ಸ್ಥಿತಿಗೆ ನಡೆಸುತ್ತದೆ."

೨೪. ವಸಿಷ್ಠ ಹೇಳಿದನು: "ಓ ಗೌತಮ, ನಾನಾ ಬ್ರಾಹ್ಮಣರು– ಅದ್ಧಾರಿಯ ಬ್ರಾಹ್ಮಣರು, ತಿತ್ತೀರಿಯ ಬ್ರಾಹ್ಮಣರು, ಕಂಚೋಕ ಬ್ರಾಹ್ಮಣರು, ಬೀಹುವರ್ಗೀಯ ಬ್ರಾಹ್ಮಣರು. ನಾನಾ ದಾರಿಗಳನ್ನು ಬೋಧಿಸುತ್ತಾರೆ: ಅವರ ಮಾತಿನಂತೆ ನಡೆದುಕೊಳ್ಳುವವರನ್ನು ಆ ದಾರಿಗಳು ಬ್ರಹ್ಮಸಾಯುಜ್ಯ ಸ್ಥಿತಿಗೆ ನಡೆಸುತ್ತವೆ."

೨೫. "ಹಳ್ಳಿಯ ಅಥವಾ ಪಟ್ಟಣದ ಪಕ್ಕದಲ್ಲಿ ನಾನಾ ದಾರಿಗಳಿದ್ದರೂ ಅವುಗಳೆಲ್ಲ ಹಳ್ಳಿಯಲ್ಲೇ ಒಟ್ಟಿಗೆ ಸಂಧಿಸುವಂತೆ, ನಾನಾ ಬ್ರಾಹ್ಮಣರು ಬೋಧಿಸುವ ನಾನಾ ಪಥಗಳೆಲ್ಲ ಬ್ರಹ್ಮ ಸಾಯುಜ್ಯದ ಸ್ಥಿತಿಯತ್ತ ನಡೆಸುತ್ತವೆ."

೨೬. "ಅವುಗಳೆಲ್ಲ ಸರಿಯಾಗಿ ದಾರಿತೋರುತ್ತವೆಂದು ನಿಮ್ಮ ಅಭಿಪ್ರಾಯವೆ, ವಸಿಷ್ಠ?" ಎಂದು ಬುದ್ಧ ಕೇಳಿದನು. "ನಾನು ಹಾಗೆನ್ನುತ್ತೇನೆ, ಗೌತಮ" ವಸಿಷ್ಠ ಉತ್ತರಿಸಿದನು.

೨೭. "ಆದರೆ ವಸಿಷ್ಠ, ಮೂರು ವೇದಗಳಲ್ಲೂ ಪಾರಂಗತರಾದ ಬ್ರಾಹ್ಮಣರಲ್ಲಿ ಒಬ್ಬನಾದರೂ ಬ್ರಹ್ಮನನ್ನು ಮುಖಾಮುಖಿ ನೋಡಿದ್ದಾನೆಯೇ?"

೨೮. "ನಿಜವಾಗಿಯೂ ಇಲ್ಲ, ಗೌತಮ."

೨೯. "ಮೂರು ವೇದಗಳಲ್ಲಿ ಪಾರಂಗತರಾದ ಗುರುಗಳಲ್ಲಿ ಯಾರೊಬ್ಬನಾದರೂ ಬ್ರಹ್ಮನನ್ನು ಮುಖಾಮುಖಿ ನೋಡಿದ್ದಾನೆಯೇ?"

೩೦. "ನಿಜವಾಗಿಯೂ ಇಲ್ಲ, ಗೌತಮ."

೩೧. "ಬ್ರಹ್ಮನನ್ನು ಯಾರೂ ನೋಡಿಲ್ಲ. ಬ್ರಹ್ಮನ ಬಗ್ಗೆ ಗೃಹೀತ ಜ್ಞಾನವಿಲ್ಲ". "ಹೌದು, ಅದು ನಿಜ", ಎಂದು ವಸಿಷ್ಠ ಹೇಳಿದನು. "ಹಾಗಾದರೆ ಬ್ರಹ್ಮನ ಅಸ್ತಿತ್ವ ಸತ್ಯದ ಮೇಲೆ ಅವಲಂಬಿತವಾಗಿದೆ ಎಂಬ ಬ್ರಾಹ್ಮಣರ ಪ್ರತಿಪಾದನೆಯನ್ನು ನೀನು ಹೇಗೆ ನಂಬುತ್ತೀಯೆ?

೩೨. "ವಸಿಷ್ಠ, ಕುರುಡರ ಗುಂಪಿನಲ್ಲಿ ಮುಂದಿನವನಿಗಾಗಲಿ, ಮಧ್ಯದವನಿಗಾಗಲಿ, ಕೊನೆಯವನಿಗಾಗಲಿ ಏನೂ ಕಾಣಿಸದಿರುವುದರಿಂದ ಒಬ್ಬರಿಗೊಬ್ಬರು ಆತುಕೊಂಡಿರುವಂತೆ, ಈ ಬ್ರಾಹ್ಮಣರ ಮಾತೂ ಕೂಡ ಕುರುಡು ಮಾತಲ್ಲದೆ ಬೇರೇನೂ ಅಲ್ಲ. ಮೊದಲನೆಯವನೂ ಕಾಣಲಾರ, ಮಧ್ಯದವನೂ ಕಾಣಲಾರ, ಕೊನೆಯವನೂ ನೋಡಲಾರ. ಈ ಬ್ರಾಹ್ಮಣರ ಮಾತು ಕೇವಲ ಹಾಸ್ಯಾಸ್ಪದವಾದ, ಒಣ ಪ್ರತಿಷ್ಠೆಯ ಟೊಳ್ಳು ಶಬ್ದಗಳಾಗಿವೆ.

೩೩. "ವಸಿಷ್ಠ, ತಾನು ನೋಡದ ಹೆಣ್ಣನ್ನು ಪ್ರೀತಿಸುವ ವ್ಯಕ್ತಿಯ ಸಂಗತಿಯಲ್ಲವೆ ಇದು?" "ಹೌದು, ಅದು ನಿಜ" ಎಂದು ವಸೆಥ ಉತ್ತರಿಸಿದ.

೩೪. "ಈಗ ನಿನಗೇನು ಅನ್ನಿಸುತ್ತದೆ, ವಸಿಷ್ಠ? ಸರಿಯಪ್ಪ, ನೀನು ಪ್ರೀತಿಸುವ ಮತ್ತು ಹಾತೊರೆಯುವ ಈ ಸ್ಫುರದ್ರೂಪಿ ಹೆಣ್ಣು ಯಾರು? ಅವಳು ಕುಲೀನ ಕನ್ಯೆಯೇ ಅಥವಾ ಬ್ರಾಹ್ಮಣ ಹೆಂಗಸೇ ಅಥವಾ ವೈಶ್ಯಳೇ ಅಥವಾ ಶೂದ್ರಳೇ? ಎಂದು ಜನರು ಕೇಳಿದರೆ ಏನು ಹೇಳುತ್ತೀಯೆ?"

೩೫. ಭಾರದ್ವಾಜ ಮತ್ತು ವಸಿಷ್ಠರನ್ನು ಕುರಿತು ತಥಾಗತನು ಹೀಗೆ ಹೇಳಿದನು: "ಸೃಷ್ಟಿಕರ್ತನೆನ್ನಲಾದ ಮಹಾಬ್ರಹ್ಮನ ಉತ್ಪತ್ತಿಯ ಬಗ್ಗೆ ಈಗ ಬರೋಣ. ಸ್ನೇಹಿತರೆ, ಮೊದಲು ಜನಿಸಿದ ವ್ಯಕ್ತಿ ಹೀಗೆ ಯೋಚಿಸುತ್ತಾನೆ: 'ನಾನು ಬ್ರಹ್ಮ, ಮಹಾಬ್ರಹ್ಮ, ವಿಜಯಿ, ಅಜೇಯ, ಸರ್ವದರ್ಶಿ, ನಿರ್ವಾಹಕ, ಅಧಿದೈವ, ನಿರ್ಮಾಪಕ, ಸೃಷ್ಟಿಕರ್ತ, ಪ್ರಮುಖ, ನಿರ್ವಹಣೆಗಾರ, ನನ್ನೊಡೆಯ, ಈಗಿರುವ ಮತ್ತು ಮುಂದೆ ಹುಟ್ಟುವುದೆಲ್ಲದರ ಜನಕ. ನನ್ನಿಂದಲೇ ಈ ಎಲ್ಲ ಜೀವಿಗಳು ಸೃಷ್ಟಿಯಾಗಿವೆ."

೩೬. "ಅಂದರೆ ಈಗಿರುವ ಮತ್ತು ಮುಂದೆ ಹುಟ್ಟುವುದೆಲ್ಲದರ ಜನಕನೇ ಈ ಬ್ರಹ್ಮ ಎಂದಾಯಿತು."

೩೭. "ಪೂಜನೀಯ ಬ್ರಹ್ಮ, ವಿಜಯಿ, ಅಜೇಯ ಈಗಿರುವ ಮತ್ತು ಮುಂದೆ ಹುಟ್ಟುವುದರೆಲ್ಲದರ ಜನಕ, ಯಾರಿಂದ ನಾವು ಸೃಷ್ಟಿಯಾಗಿದ್ದೇವೆಯೋ ಆತ ಅಮರ, ಅಚಲ, ಚಿರಂತನ, ಅವ್ಯಯನಾದ ಅವನು ಎಲ್ಲ ಕಾಲಕ್ಕೂ ಅದೇ ರೀತಿ ಉಳಿಯುತ್ತಾನೆ ಎಂದು ನೀವು ಹೇಳುತ್ತೀರಿ. ಹಾಗಾದರೆ ಅಂಥ ಬ್ರಹ್ಮನಿಂದ ಸೃಷ್ಟಿಯಾದ ನಾವು ಅಶಾಶ್ವತನಾದ, ಕ್ಷಣಿಕವಾದ, ಅಸ್ಥಿರವಾದ, ಅಲ್ಪ ಬದುಕಿಗೆ, ಸಾಯುವುದು ಪೂರ್ವನಿರ್ಧಾರವಾಗಿರುವಾಗ ಇಲ್ಲಿಗೇಕೆ ಬಂದಿದ್ದೇವೆ?"

೩೮. ಇದಕ್ಕೆ ವಸಿಷ್ಠನಲ್ಲಿ ಉತ್ತರವಿರಲಿಲ್ಲ.

೩೯. ಆತನ ಮೂರನೆಯ ವಾದ ದೇವರ ಸರ್ವಶಕ್ತತೆಗೆ ಸಂಬಂಧಿಸಿದೆ. "ದೇವರು ಸರ್ವಶಕ್ತ ಮತ್ತು ಸೃಷ್ಟಿಯ ಪ್ರಬಲ ಕಾರಣವೂ ಆಗಿದ್ದರೆ, ಇದೇ ಕಾರಣಕ್ಕಾಗಿಯೇ ಮನುಷ್ಯನಿಗೆ ಏನು ಮಾಡಲೂ ಯಾವ ಇಚ್ಛೆಯೂ ಇರಲು ಸಾಧ್ಯವಿಲ್ಲ ಅಥವಾ ಏನನ್ನು ಮಾಡುವ ಅಗತ್ಯವೂ ಇರಲಾರದು ಅಥವಾ ಏನನ್ನೂ ಮಾಡುವ ಇಚ್ಛೆಯಾಗಲಿ ಅಥವಾ ಪ್ರಯತ್ನವಾಗಲಿ ಅವನಲ್ಲಿರಲು ಸಾಧ್ಯವಿಲ್ಲ. ಜಗತ್ತಿನ ವ್ಯವಹಾರಗಳಲ್ಲಿ ಯಾವ ಪಾತ್ರ ವಹಿಸಲಾಗದೆ ಮನುಷ್ಯ ನಿಷ್ಕ್ರಿಯ ಜೀವಿಯಾಗಿರಬೇಕಾಗುತ್ತದೆ.

ಹೀಗಿದ್ದಲ್ಲಿ ಮನುಷ್ಯನನ್ನು ಬ್ರಹ್ಮ ಏತಕ್ಕಾದರೂ ಸೃಷ್ಟಿ ಮಾಡಿದ?"

೪೦. ಇದಕ್ಕೂ ಕೂಡ ವಸಿಷ್ಠನಲ್ಲಿ ಉತ್ತರವಿರಲಿಲ್ಲ.

೪೧. ಆತನ ನಾಲ್ಕನೆಯ ವಾದವೆಂದರೆ, ದೇವರು ಒಳ್ಳೆಯವನಾಗಿದ್ದರೆ ಜನಗಳೇಕೆ ಕಳ್ಳರು, ಸುಳ್ಳರು, ಕೊಲೆಗಡುಕರು, ವ್ಯಭಿಚಾರಿಗಳು, ಚಾಡಿಕೋರರು, ಬಡಕುಬಾಯಿಯ ದೂಷಕರು, ಕೇಡಿಗರು ಮತ್ತು ವಕ್ರಬುದ್ಧಿಯವರಾಗಿರಬೇಕು? ಇದರ ಕಾರಣ ಈಶ್ವರನೇ ಆಗಿರಬೇಕು. ಒಳ್ಳೆಯನಾಗಿರುವ ದೇವರು ಅಸ್ತಿತ್ವದಲ್ಲಿದ್ದರೆ ಹೀಗಾಗಲು ಸಾಧ್ಯವೇ?

೪೨. ಆತನ ಐದನೆಯ ವಾದ ದೇವರು ಸರ್ವಜ್ಞ, ನ್ಯಾಯಪರ ಮತ್ತು ಕರುಣಾಮಯಿ ಎಂಬುದಕ್ಕೆ ಸಂಬಂಧಿಸಿದೆ.

೪೩. "ನ್ಯಾಯಪರ ಮತ್ತು ದಯಾಮಯನಾದ ಪರಮ ಸೃಷ್ಟಿಕರ್ತ ಇದ್ದರೆ ಇಷ್ಟೆಲ್ಲ ಅನ್ಯಾಯ ಪ್ರಪಂಚದಲ್ಲಿ ಏಕಿದೆ?" ಎಂದು ತಥಾಗತ ಪ್ರಶ್ನಿಸಿದ. "ಕಣ್ಣಿದ್ದವನು ಜಿಗುಪ್ಸೆ ತರುವ ದೃಶ್ಯವನ್ನು ಕಾಣಬಹುದು, ಬ್ರಹ್ಮ ಏಕೆ ತನ್ನ ಜೀವಿಗಳನ್ನು ಸರಿಪಡಿಸಬಾರದು? ಆತನ ಶಕ್ತಿ ಸಾಮರ್ಥ್ಯ ಯಾವುದೇ ಪರಿಮಿತಿಯೂ ನಿಗ್ರಹಿಸಲಾರದಷ್ಟು ವಿಶಾಲವಾಗಿದ್ದರೆ, ಆತನ ಕೈ ಹರಸಲು ವಿರಳವಾಗಿ ಚಾಚುವುದೇಕೇ? ಆತನ ಜೀವಿಗಳೆಲ್ಲರೂ ಏಕೆ ಸಂಕಟಕ್ಕೆ ಗುರಿಯಾಗಿದ್ದಾರೆ? ಆತನು ಏಕೆ ಎಲ್ಲರಿಗೂ ಸುಖವನ್ನು ನೀಡುತ್ತಿಲ್ಲ? ವಂಚನೆ, ಸುಳ್ಳು ಮತ್ತು ಮೌಢ್ಯಗಳು ಏಕೆ ತಾಂಡವವಾಡುತ್ತಿವೆ? ಸತ್ಯದ ಮೇಲೆ ಸುಳ್ಳು ಏಕೆ ಜಯ ಸಾಧಿಸುತ್ತದೆ? ಸತ್ಯ ಮತ್ತು ನ್ಯಾಯ ವಿಫಲವಾಗುವುದು ಏತಕ್ಕಾಗಿ? ನಿಮ್ಮ ಬ್ರಹ್ಮ ಮಹಾ ನಿರ್ದಯಿಗಳಲ್ಲಿ ಒಬ್ಬ, ಕೆಟ್ಟದ್ದಕ್ಕೆ ಆಶ್ರಯ ಕೊಡಲು ಮಾತ್ರ ಈ ಪ್ರಪಂಚವನ್ನು ಸೃಷ್ಟಿಸಿದ್ದಾನೆ ಎಂದು ನನ್ನ ಎಣಿಕೆ.

೪೪. "ಪ್ರತಿಯೊಂದು ಜೀವಿಯಲ್ಲೂ ಸುಖ ಅಥವಾ ದುಃಖ ಮತ್ತು ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳನ್ನು ತುಂಬುವಷ್ಟು ಸರ್ವಶಕ್ತನಾದ ದೇವರು ಅಸ್ತಿತ್ವದಲ್ಲಿದ್ದರೆ, ಆಗ ಆ ದೇವರು ಪಾಪದಿಂದ ಕಲುಷಿತಗೊಂಡಿರುತ್ತಾನೆ. ಮನುಷ್ಯ ತನ್ನ ಸಂಕಲ್ಪದಂತೆ ಕೆಲಸ ಮಾಡಲಾರ ಅಥವಾ ದೇವರು ಒಳ್ಳೆಯವನಾಗಿಯೂ ನ್ಯಾಯಪರನಾಗಿಯೂ ಇಲ್ಲ ಅಥವಾ ದೇವರು ಕುರುಡನಾಗಿರುತ್ತಾನೆ."

೪೫. ದೈವ ಸಿದ್ಧಾಂತದ ವಿರುದ್ಧ ಆತನ ಮುಂದಿನ ವಾದವೆಂದರೆ, ದೇವರ ಇರುವಿಕೆಯ ಬಗೆಗಿನ ವಾದವಿವಾದ ಲಾಭದಾಯಕವಲ್ಲ ಎಂಬುದು.

೪೬. ಆತನ ಪ್ರಕಾರ, ಧರ್ಮದ ಕೇಂದ್ರಬಿಂದು ದೇವರೊಂದಿಗಿನ ಮನುಷ್ಯನ ಸಂಬಂಧದಲ್ಲಿ ಇಲ್ಲ. ಅದು ಮನುಷ್ಯ ಮನುಷ್ಯರ ನಡುವಿನ ಸಂಬಂಧದಲ್ಲಿ ಇದೆ. ಎಲ್ಲರೂ ಸುಖವಾಗಿರುವಂತೆ ಮನುಷ್ಯ ಬೇರೆ ಮನುಷ್ಯರೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ಅವನಿಗೆ ಬೋಧಿಸುವುದೇ ಧರ್ಮದ ಉದ್ದೇಶವಾಗಿದೆ.

೪೭. ದೇವರ ಅಸ್ತಿತ್ವದಲ್ಲಿ ನಂಬಿಕೆಯನ್ನು ತಥಾಗತರು ವಿರೋಧಿಸಲು ಮತ್ತೊಂದು ಕಾರಣವೂ ಇತ್ತು.

೪೮. ಧಾರ್ಮಿಕ ವಿಧಿವಿಧಾನಗಳು ಮತ್ತು ಆಚರಣೆಗಳನ್ನು ಆತ ಧಿಕ್ಕರಿಸಿದನು. ಅವುಗಳು ಮೌಢ್ಯದ ಆವಾಸಸ್ಥಾನ, ಮೌಢ್ಯ ಅಷ್ಟಾಂಗಮಾರ್ಗದ ಮುಖ್ಯ ಅಂಶವಾದ ಸಮ್ಮದಿತ್ಥಿಯ ವೈರಿ ಎಂದು ಆತ ಅವನ್ನು ಧಿಕ್ಕರಿಸಿದ.

೪೯. ತಥಾಗತನಿಗೆ ದೇವರಲ್ಲಿ ನಂಬಿಕೆ ಎನ್ನುವುದು ತುಂಬ ಅಪಾಯಕಾರಿ ಸಂಗತಿಯಾಗಿತ್ತು. ದೇವರಲ್ಲಿ ನಂಬಿಕೆ ಆರಾಧನೆ ಮತ್ತು ಪ್ರಾರ್ಥನೆಗಳ ಸಾಫಲ್ಯದಲ್ಲಿ ನಂಬಿಕೆಯನ್ನೂ, ಆರಾಧನೆ ಮತ್ತು ಪ್ರಾರ್ಥನೆಗಳ

ಸಾಫಲ್ಯ ಪುರೋಹಿತಶಾಹಿಯನ್ನೂ ಸೃಷ್ಟಿಸಿತು. ಪುರೋಹಿತ ದುಷ್ಪಪ್ರತಿಭೆಯಾಗಿ ಮೂಢನಂಬಿಕೆಯನ್ನು ಸೃಷ್ಟಿಸಿ ಅದರಿಂದ ಸಮ್ಮದಿತ್ಥಿಯ ಬೆಳವಣಿಗೆಯನ್ನು ಹಾಳುಮಾಡಿದನು.

೩೦. ದೇವರ ಅಸ್ತಿತ್ವದಲ್ಲಿ ನಂಬಿಕೆಯನ್ನು ವಿರೋಧಿಸಿದ ಈ ವಾದಗಳಲ್ಲಿ ಕೆಲವು ಪ್ರಾಯೋಗಿಕವಾಗಿದ್ದರೆ, ಹೆಚ್ಚು ಸಂಖ್ಯೆಯವು ತಾತ್ವಿಕವಾದವುಗಳಾಗಿದ್ದವು. ದೇವರ ಅಸ್ತಿತ್ವದಲ್ಲಿನ ನಂಬಿಕೆಗೆ ಇವು ಮಾರಕವಾಗಿಲ್ಲ ಎನ್ನುವುದು ತಥಾಗತನಿಗೆ ಅರಿವಿತ್ತು.

೩೧. ಹಾಗಿದ್ದರೂ, ಮಾರಕವಾದ ವಾದ ಆತನಲ್ಲಿ ಇರಲಿಲ್ಲ ಎಂದು ಭಾವಿಸಬಾರದು. ದೇವರಲ್ಲಿ ನಂಬಿಕೆಗೆ ನಿಸ್ಸಂಶಯವಾಗಿಯೂ ಮಾರಕವಾದದ್ದು ಆತ ಮಂಡಿಸಿದ ಒಂದು ವಾದವಾಗಿತ್ತು. ಇದು ಅವಲಂಬಿತ ಮೂಲ ಕಾರಣ ಸಿದ್ಧಾಂತ ಎಂದು ವಿವರಿಸಲಾದ ಆತನ ಪತಿತ ಸಮುತ್ಪಾದ ಸಿದ್ಧಾಂತದಲ್ಲಿ ಸೇರಿದೆ.

೩೨. ಈ ಸಿದ್ಧಾಂತದ ಪ್ರಕಾರ, ದೇವರು ಇದ್ದಾನೆ ಅಥವಾ ಇಲ್ಲ ಎನ್ನುವುದು ಪ್ರಶ್ನೆಯಾಗುವುದಿಲ್ಲ. ದೇವರು ಪ್ರಪಂಚವನ್ನು ಸೃಷ್ಟಿಸಿದ ಎನ್ನುವ ಪ್ರಶ್ನೆಯೂ ನಿಜವಾದ ಪ್ರಶ್ನೆಯಿಲ್ಲ. ನಿಜವಾದ ಪ್ರಶ್ನೆಯೆಂದರೆ ಸೃಷ್ಟಿಕರ್ತ ಈ ಪ್ರಪಂಚವನ್ನು ಹೇಗೆ ಸೃಷ್ಟಿಸಿದ ಎನ್ನುವುದು. ಪ್ರಪಂಚ ಹೇಗೆ ಸೃಷ್ಟಿಯಾಯಿತು ಎಂಬ ಪ್ರಶ್ನೆಗೆ ನಮ್ಮ ಉತ್ತರವನ್ನು ಅನುಸರಿಸಿ ಬರುವ ನಿರ್ಣಯವೇ ದೇವರಲ್ಲಿ ನಂಬಿಕೆಗೆ ಸಮರ್ಥನೆಯಾಗಿದೆ.

೩೩. ದೇವರು ಶೂನ್ಯದಿಂದ ಏನನ್ನಾದರೂ ಸೃಷ್ಟಿಸಿದನೆ ಅಥವಾ ಯಾವುದರಿಂದಲಾದರೂ ಅವನು ಇನ್ನಾವುದನ್ನಾದರೂ ಸೃಷ್ಟಿಸಿದನೆ? ಎಂಬುದು ಪ್ರಮುಖ ಪ್ರಶ್ನೆಯಾಗಿದೆ.

೩೪. ಶೂನ್ಯದಿಂದ ಏನನ್ನೋ ಸೃಷ್ಟಿಸಲಾಯಿತು ಎಂಬುದನ್ನು ನಂಬುವುದು ಅಸಾಧ್ಯ.

೩೫. ದೇವರೆನ್ನುವವನು ಯಾವುದರಿಂದಲೋ ಇನ್ನಾವುದನ್ನೋ ಸೃಷ್ಟಿಸಿದ್ದರೆ, ಈ ಸೃಷ್ಟಿಗೆ ಮುನ್ನವೇ ಆ ಮೂಲವಸ್ತು ಅಸ್ತಿತ್ವದಲ್ಲಿತ್ತು. ದೇವರು ಸೃಷ್ಟಿಸುವ ಮೊದಲೇ ಇನ್ನೊಂದು ವಸ್ತು ಇದ್ದುದರಿಂದ ಅವನನ್ನು ಸೃಷ್ಟಿಕರ್ತ ಎಂದು ಕರೆಯಲಾಗುವುದಿಲ್ಲ.

೩೬. ದೇವರು ಏನನ್ನಾದರೂ ಸೃಷ್ಟಿಸುವ ಮೊದಲು ಬೇರೆ ಯಾರೋ ಯಾವುದರಿಂದಲೋ ಏನನ್ನೋ ಸೃಷ್ಟಿಸಿದ್ದನೆಂದರೆ, ಆಗ ದೇವರನ್ನು ಸೃಷ್ಟಿಕರ್ತ ಅಥವಾ ಪ್ರಥಮ ಕಾರಣಕರ್ತ ಎನ್ನಲಾಗುವುದಿಲ್ಲ.

೩೭. ದೇವರ ಅಸ್ತಿತ್ವದಲ್ಲಿ ನಂಬಿಕೆ ವಿರುದ್ಧ ಆತನ ಕೊನೆಯ ಹಾಗೂ ನಿಸ್ಸಂದೇಹವಾದ ವಾದ ಹೀಗಿತ್ತು.

೩೮. ದೇವರು ವಿಶ್ವದ ಸೃಷ್ಟಿಕರ್ತ ಎನ್ನುವ ನಂಬಿಕೆ ಸುಳ್ಳಿನ ತರ್ಕಸರಣಿಯಾಗಿರುವುದರಿಂದ ಅದು ಧರ್ಮವಲ್ಲ. ಅದು ಕೇವಲ ಸುಳ್ಳಿನ ನಂಬಿಕೆಯಾಗಿದೆ.

## ೩. ಬ್ರಹ್ಮನೊಂದಿಗೆ ಒಂದಾಗುವುದರ ಮೇಲೆ ಆಧಾರಿತವಾದ ಧರ್ಮ ಸುಳ್ಳು ಧರ್ಮವಾಗಿದೆ.

೧. ಬುದ್ಧ ತನ್ನ ಧರ್ಮವನ್ನು ಬೋಧಿಸುತ್ತಿದ್ದಾಗ, ವೇದಾಂತ ಎಂಬ ಸಿದ್ಧಾಂತ ಪ್ರಚಲಿತವಾಗಿತ್ತು.

೨. ಈ ಸಿದ್ಧಾಂತದ ಸೂತ್ರಗಳು ಕೆಲವೇ ಇದ್ದು ಸರಳವಾಗಿದೆ.

೩. ಪ್ರಪಂಚದ ಹಿನ್ನೆಲೆಯಲ್ಲಿ ಸರ್ವವ್ಯಾಪ್ತಿಯಾದ ಒಂದು ಸಾಮಾನ್ಯ ಜೀವನ ತತ್ತ್ವವಿದೆ, ಅದನ್ನು ಬ್ರಹ್ಮ ಅಥವಾ ಬ್ರಹ್ಮನ್ ಎಂದು ಕರೆಯುತ್ತಾರೆ.

೪. ಈ ಬ್ರಹ್ಮ ಸತ್ಯವಾಗಿದೆ.
೫. ಜೀವಾತ್ಮ ಎಂದರೆ ಬ್ರಹ್ಮವೇ ಆಗಿದೆ.
೬. ಆತ್ಮವನ್ನು ಬ್ರಹ್ಮನಲ್ಲಿ ಒಂದಾಗಿಸುವುದರಲ್ಲಿ ಮನುಷ್ಯನ ಮುಕ್ತಿ ಅಡಗಿದೆ. ಇದು ಎರಡನೆ ತತ್ತ್ವ
೭. ಜೀವಾತ್ಮ ಮತ್ತು ಬ್ರಹ್ಮ ಒಂದೇ ಎಂದು ಸಾಕ್ಷಾತ್ಕರಿಸಿಕೊಂಡು ಬ್ರಹ್ಮನಲ್ಲಿ ಐಕ್ಯವಾಗುವುದೇ ಈ ಒಂದುಗೂಡಿಕೆ.
೮. ಆತ್ಮವನ್ನೇ ಬ್ರಹ್ಮ ಎಂದು ಸಾಕ್ಷಾತ್ಕರಿಸಿಕೊಳ್ಳಲು ಇರುವ ಮಾರ್ಗವೆಂದರೆ ಸಂಸಾರ ತ್ಯಾಗ.
೯. ಈ ಸಿದ್ಧಾಂತವನ್ನು ವೇದಾಂತ ಎಂದು ಕರೆಯಲಾಗಿದೆ.
೧೦. ಬುದ್ಧನಿಗೆ ಈ ಸಿದ್ಧಾಂತದ ಬಗ್ಗೆ ಗೌರವ ಇರಲಿಲ್ಲ. ಅದು ಹುಸಿ ತರ್ಕಗಳ ಮೇಲೆ ನಿಂತಿದೆ, ಅದು ಮೌಲಿಕವಾದದ್ದೇನನ್ನೂ ಸೃಷ್ಟಿಸುವುದಿಲ್ಲ. ಆದ್ದರಿಂದ ಅದು ಯೋಗ್ಯವಲ್ಲ ಎಂದು ಬುದ್ಧ ಭಾವಿಸಿದನು.
೧೧. ಭಾರಧ್ವಾಜ ಮತ್ತು ವಸಿಷ್ಠ ಎಂಬ ಇಬ್ಬರು ಬ್ರಾಹ್ಮಣರೊಂದಿಗಿನ ತನ್ನ ಸಂವಾದದಲ್ಲಿ ಬುದ್ಧ ಇದನ್ನು ಸ್ಪಷ್ಟಪಡಿಸಿದ್ದಾನೆ.
೧೨. ಒಂದು ವಿಷಯವನ್ನು ಸತ್ಯವೆಂದು ಅಂಗೀಕರಿಸುವ ಮುನ್ನ ಸಾಕ್ಷ್ಯ ಇರಲೇಬೇಕು ಎಂದು ಬುದ್ಧ ವಾದಿಸಿದ.
೧೩. ಸಾಕ್ಷ್ಯಕ್ಕೆ ಎರಡು ವಿಧಾನಗಳಿವೆ: ಗ್ರಹಿಕೆ ಮತ್ತು ಅನುಮಿತ.
೧೪. "ಯಾರಾದರೂ ಬ್ರಹ್ಮನನ್ನು ಗ್ರಹಿಸಿದ್ದೀರಾ? ಬ್ರಹ್ಮನನ್ನು ನೋಡಿದ್ದೀರಾ? ಬ್ರಹ್ಮನೊಂದಿಗೆ ಮಾತಾಡಿದ್ದೀರಾ? ಬ್ರಹ್ಮನನ್ನು ಆಘ್ರಾಣಿಸಿದ್ದೀರಾ?" ಎಂದು ಬುದ್ಧನು ಪ್ರಶ್ನಿಸಿದನು.
೧೫. "ಇಲ್ಲ" ಎಂದು ವಸೆಥ ಉತ್ತರಿಸಿದ.
೧೬. "ಬ್ರಹ್ಮನ ಇರುವಿಕೆಯನ್ನು ಸಾಬೀತುಮಾಡಲು ಇರುವ ಇನ್ನೊಂದು ವಿಧಾನ ಅಸಮರ್ಪಕವಾದುದು."
೧೭. "ಬ್ರಹ್ಮನನ್ನು ಯಾವ ಅನುಮಾನದಿಂದ ತೀರ್ಮಾನಿಸಲಾಗಿದೆ?" ಎಂದು ಬುದ್ಧ ಪ್ರಶ್ನಿಸಿದ. ಪುನಃ ಉತ್ತರವಿರಲಿಲ್ಲ.
೧೮. ಒಂದು ವಸ್ತು ಅಗೋಚರವಾಗಿದ್ದರೂ ಅಸ್ತಿತ್ವದಲ್ಲಿದೆ ಎಂದು ಕೆಲವರು ವಾದಿಸುತ್ತಾರೆ. ಆದ್ದರಿಂದ ಬ್ರಹ್ಮ ಅಗೋಚರನಾಗಿದ್ದರೂ ಇದ್ದಾನೆ ಎಂದು ಅವರು ಹೇಳುತ್ತಾರೆ.
೧೯. ಈ ನೇರ ಹೇಳಿಕೆಯಲ್ಲಿ ಅದು ಒಂದು ಅಸಾಧ್ಯ ಸ್ಥಿತಿ.
೨೦. ಆದರೂ ಚರ್ಚೆಗಾಗಿ ಒಂದು ವಸ್ತು ಅಗೋಚರವಾಗಿದ್ದರೂ ಅಸ್ತಿತ್ವದಲ್ಲಿದೆ ಎಂದುಕೊಳ್ಳೋಣ.
೨೧. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ವಿದ್ಯುತ್. ಅದು ಅಗೋಚರವಾಗಿದ್ದರೂ ಅಸ್ತಿತ್ವದಲ್ಲಿದೆ.
೨೨. ಈ ವಾದ ಸಾಲದು.
೨೩. ಅಗೋಚರ ವಸ್ತು ಬೇರೊಂದು ರೂಪದಲ್ಲಿ ಕಾಣಿಸಿಕೊಳ್ಳಲೇಬೇಕು. ಆಗ ಮಾತ್ರ ಅದನ್ನು ಸತ್ಯ ಎಂದು ಕರೆಯಬಹುದು.
೨೪. ಆದರೆ ಒಂದು ಅಗೋಚರ ವಸ್ತು ಯಾವುದೇ ಗೋಚರ ರೂಪದಲ್ಲಿಯೂ ಕಾಣಿಸಿಕೊಳ್ಳದಿದ್ದರೆ ಅದು ನೈಜವಾಗಿರುವುದಿಲ್ಲ.
೨೫. ವಿದ್ಯುಚ್ಛಕ್ತಿ ಅಗೋಚರವಾಗಿದ್ದರೂ, ತಾನು ಉಂಟುಮಾಡುವ ಪರಿಣಾಮಗಳ ಮೂಲಕ ಅದರ ವಾಸ್ತವಿಕೆಯನ್ನು ನಾವು ಒಪ್ಪಿಕೊಳ್ಳುತ್ತೇವೆ.
೨೬. ವಿದ್ಯುಚ್ಛಕ್ತಿ ಬೆಳಕನ್ನು ಕೊಡುತ್ತದೆ. ಅದು ಅಗೋಚರವಾಗಿದ್ದರೂ ಅದು ನೀಡುವ ಬೆಳಕಿನಿಂದ

ವಿದ್ಯುಚ್ಛಕ್ತಿಯ ವಾಸ್ತವಿಕೆಯನ್ನು ನಾವು ಅಂಗೀಕರಿಸುತ್ತೇವೆ.

೨೭. ಈ ಅಗೋಚರ ಬ್ರಹ್ಮ ಏನನ್ನು ಸೃಷ್ಟಿಸುತ್ತಾನೆ? ಯಾವುದಾದರೂ ಗೋಚರ ಪರಿಣಾಮವನ್ನು ಸೃಷ್ಟಿಸುತ್ತಾನೆಯೆ?

೨೮. ಉತ್ತರ ನೇತ್ಯಾತ್ಮಕವಾಗಿದೆ.

೨೯. ಇನ್ನೊಂದು ಉದಾಹರಣೆ ಕೊಡಬಹುದು. ಕಾನೂನಿನಲ್ಲಿಯೂ ಸಹ ಒಂದು ಪ್ರಮೇಯವನ್ನು ಕಲ್ಪನೆಯನ್ನು ಅದು ಸಾಬೀತಾಗದಿದ್ದರೂ ಅದನ್ನೂ ಮುಖ್ಯ ಪರಿಕಲ್ಪನೆ ಎಂದು ಅಳವಡಿಸಿಕೊಳ್ಳುವುದುಂಟು.

೩೦. ಅಂಥ ಕಾನೂನಿನ ಕಲ್ಪನೆಯನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ.

೩೧. ಆದರೆ ಅಂಥ ಕಾನೂನಿನ ಕಲ್ಪನೆಯನ್ನು ಒಪ್ಪಿಕೊಳ್ಳುವುದೇಕೆ?

೩೨. ಕಾನೂನಿನ ಕಲ್ಪನೆಯನ್ನು ಒಪ್ಪಿಕೊಳ್ಳಲು ಕಾರಣವೇನೆಂದರೆ, ಅದು ಒಂದು ಫಲಪ್ರದವಾದ ಮತ್ತು ನ್ಯಾಯವಾದ ಫಲಿತಾಂಶವನ್ನು ಕೊಡುತ್ತದೆ ಎಂಬುದು.

೩೩. "ಬ್ರಹ್ಮ ಒಂದು ಕಲ್ಪನೆ. ಎಂಥ ಫಲಪ್ರದ ಫಲಿತಾಂಶವನ್ನು ಅದು ಕೊಡುತ್ತದೆ?"

೩೪. ವಸಿಷ್ಠ ಮತ್ತು ಭಾರಧ್ವಾಜ ಮೌನವಾಗಿದ್ದರು.

೩೫. ವಾದವನ್ನು ಚೆನ್ನಾಗಿ ಮನನಾಟುವಂತೆ ಮಾಡಲು ಬುದ್ಧ ವಸೆಥನ ಕಡೆ ತಿರುಗಿ ಕೇಳಿದನು: "ನೀನು ಬ್ರಹ್ಮನನ್ನು ನೋಡಿದ್ದೀಯಾ?"

೩೬. "ಮೂರು ವೇದಗಳಲ್ಲೂ ಪಾರಂಗತರಾದ ಬ್ರಾಹ್ಮಣರಲ್ಲಿ ಒಬ್ಬನಾದರೂ ಬ್ರಹ್ಮನನ್ನು ಮುಖಾಮುಖಿಯಾಗಿ ನೋಡಿರುವವರು ಇದ್ದಾನೆಯೇ?"

೩೭. "ನಿಜವಾಗಿಯೂ ಇಲ್ಲ, ಗೌತಮ."

೩೮. "ವಸಿಷ್ಠ, ಮೂರು ವೇದಗಳಲ್ಲೂ ಪಾರಂಗತರಾದ ಬ್ರಾಹ್ಮಣರ ಗುರುಗಳಲ್ಲಿ ಬ್ರಹ್ಮನನ್ನು ಮುಖಾಮುಖಿಯಾಗಿ ನೋಡಿರುವ ಒಬ್ಬನಾದರೂ ಇದ್ದಾನೆಯೇ?"

೩೯. "ನಿಜವಾಗಿಯೂ ಇಲ್ಲ, ಗೌತಮ."

೪೦. "ಬ್ರಹ್ಮನನ್ನು ಮುಖಾಮುಖಿಯಾಗಿ ನೋಡಿರುವವರು ಇದ್ದಾನೆಯೇ? ಏಳನೇ ತಲೆಮಾರಿನವರೆಗಿನ ಬ್ರಾಹ್ಮಣರಲ್ಲಿ ಒಬ್ಬನಾದರೂ?"

೪೧. "ನಿಜವಾಗಿಯೂ ಇಲ್ಲ, ಗೌತಮ."

೪೨. "ಹಾಗಾದರೆ, ವಸಿಷ್ಠ, ಬ್ರಾಹ್ಮಣರ ಪ್ರಾಚೀನ ಋಷಿಗಳಾದರೂ ಹೀಗೆ ಮಾತನಾಡುತ್ತಾರೆಯೇ?: 'ಬ್ರಹ್ಮ ಎಲ್ಲಿದ್ದಾನೆ, ಬ್ರಹ್ಮ ಇದ್ದಾನೆಯೇ ಎಂಬುದು ನಮಗೆ ಗೊತ್ತಿದೆ; ನಾವು ನೋಡಿದ್ದೇವೆ."

೪೩. "ನಿಜವಾಗಿಯೂ ಇಲ್ಲ, ಗೌತಮ."

೪೪. ಬುದ್ಧ ಆ ಇಬ್ಬರು ಬ್ರಾಹ್ಮಣರನ್ನು ಪ್ರಶ್ನಿಸುತ್ತಾ ಮುಂದುವರೆದನು:

೪೫. "ಈಗ ನೀನೇನು ಹೇಳುವೆ, ವಸಿಷ್ಠ? ಇದು ಹೀಗಿರುವುದರಿಂದ, ಬ್ರಹ್ಮನೊಂದಿಗೆ ಐಕ್ಯವಾಗುವ ಬಗೆಗಿನ ಬ್ರಾಹ್ಮಣರ ಮಾತು ಮೂರ್ಖತನದ ಮಾತಾಗುವುದಿಲ್ಲವೆ?

೪೬. "ವಸಿಷ್ಠ, ಕುರುಡರ ಗುಂಪಿನಲ್ಲಿ ಮುಂದಿನವನಿಗಾಗಲಿ, ಮಧ್ಯದವನಿಗಾಗಲಿ, ಕೊನೆಯವನಿಗಾಗಲಿ ಏನೂ ಕಾಣಿಸದಿರುವುದರಿಂದ ಒಬ್ಬರಿಗೊಬ್ಬರು ಆತುಕೊಂಡಿರುವಂತೆ, ಈ ಬ್ರಾಹ್ಮಣರ ಮಾತೂ ಕೂಡ ಕುರುಡು ಮಾತಲ್ಲದೆ ಬೇರೇನೂ ಅಲ್ಲ. ಮೊದಲನೆಯವನು ಕಾಣಲಾರ, ಮಧ್ಯದವನು

ಕಾಣಲಾರ, ಕೊನೆಯವನೂ ಕಾಣಲಾರ. ಈ ಬ್ರಾಹ್ಮಣರ ಮಾತು ಕೇವಲ ಹಾಸ್ಯಾಸ್ಪದವಾದ, ಒಣ ಪ್ರತಿಷ್ಠೆಯ ಟೊಳ್ಳು ಶಬ್ದಗಳಾಗಿವೆ.

೪೭. "ವಸಿಷ್ಠ, ಇದು 'ದೇಶದ ಅತ್ಯಂತ ಸುಂದರ ಸ್ತ್ರೀಯನ್ನು ಎಷ್ಟು ಬಯಸುತ್ತೇನೆ, ಎಷ್ಟು ಪ್ರೀತಿಸುತ್ತೇನೆ' ಎಂದು ಒಬ್ಬ ಪುರುಷ ಹೇಳಬಹುದಾದ ರೀತಿಯದಾಗುತ್ತದೆ.

೪೮. "ಜನರು ಅವನನ್ನು ಕೇಳುತ್ತಾರೆ: "ಸರಿ, ಸನ್ಮಿತ್ರ! ನೀನು ಹೀಗೆ ಬಯಸುವ, ಪ್ರೀತಿಸುವ ಅತ್ಯಂತ ಸುಂದರ ಸ್ತ್ರೀ ಕುಲೀನ ಸ್ತ್ರೀಯೇ ಅಥವಾ ಬ್ರಾಹ್ಮಣ ಸ್ತ್ರೀಯೇ ಅಥವಾ ವೈಶ್ಯರ ವರ್ಗದವಳೇ ಅಥವಾ ಶೂದ್ರಳೇ?"

೪೯. "ಆದರೆ ಹಾಗೆ ಕೇಳಿದಾಗ, ಅವನು 'ಗೊತ್ತಿಲ್ಲ' ಎಂದು ಉತ್ತರಿಸುತ್ತಾನೆ.

೫೦. "ಜನ ಅವನನ್ನು ಕೇಳುತ್ತಾರೆ: "ಸರಿ, ಸನ್ಮಿತ್ರ! ನೀನು ಹೀಗೆ ಬಯಸುವ, ಪ್ರೀತಿಸುವ ಅತ್ಯಂತ ಸುಂದರ ಸ್ತ್ರೀಯ ಹೆಸರಾಗಲೀ ಅಥವಾ ಅವಳ ಕುಟುಂಬದ ಹೆಸರಾಗಲೀ ನಿನಗೆ ಗೊತ್ತೇ? ಅವಳು ಉದ್ದವಾಗಿದ್ದಾಳೆಯೇ ಅಥವಾ ಕುಳ್ಳಗಿದ್ದಾಳೆಯೇ ಅಥವಾ ಮಧ್ಯಮ ಎತ್ತರದವಳೇ? ಅವಳು ಕಪ್ಪು ಬಣ್ಣದವಳೇ ಅಥವಾ ಶ್ಯಾಮಲವರ್ಣದವಳೇ ಅಥವಾ ಹೊಂಬಣ್ಣದವಳೇ? ಅವಳು ಯಾವ ಹಳ್ಳಿ ಅಥವಾ ಪಟ್ಟಣ ಅಥವಾ ನಗರದಲ್ಲಿ ವಾಸಿಸುತ್ತಾಳೆ? ನಿನಗೆ ಇವೆಲ್ಲ ಗೊತ್ತೇ?" ಎಂದು ಕೇಳಿದಾಗ, ಅವನು "ಗೊತ್ತಿಲ್ಲ" ಎಂದು ಉತ್ತರಿಸುತ್ತಾನೆ.

೫೧. "ಈಗ ನೀನೇನು ಹೇಳುತ್ತೀಯೆ, ವಸಿಷ್ಠ? ಆ ಮನುಷ್ಯನ ಮಾತು ಮೂರ್ಖತನದ ಮಾತಾಗುವುದಿಲ್ಲವೆ?"

೫೨. "ದಿಟವಾಗಿಯೂ. ಗೌತಮ, ಅದು ಹಾಗೇನೆ" ಎಂದು ಇಬ್ಬರು ಬ್ರಾಹ್ಮಣರು ಉತ್ತರಿಸಿದರು.

೫೩. ಆದ್ದರಿಂದ ಬ್ರಹ್ಮ ನಿಜವಲ್ಲ ಮತ್ತು ಅದರ ಮೇಲೆ ಆಧಾರಿತವಾದ ಯಾವುದೇ ಧರ್ಮವೂ ನಿಷ್ಪ್ರಯೋಜಕವಾಗಿದೆ.

## ೪. ಆತ್ಮದಲ್ಲಿ ನಂಬಿಕೆ ಇಡುವುದು ಧರ್ಮವಲ್ಲ

೧. ಆತ್ಮವನ್ನು ಆಧರಿಸಿದ ಧರ್ಮ ಊಹೆಯ ಮೇಲೆ ನಿಂತಿರುವ ಧರ್ಮವಾಗಿದೆ ಎಂದು ಬುದ್ಧ ಹೇಳಿದ್ದಾನೆ.

೨. ಆತ್ಮವನ್ನು ಯಾರೂ ನೋಡಿಲ್ಲ ಅಥವಾ ಅದರ ಜೊತೆ ಸಂಭಾಷಿಸಿಲ್ಲ.

೩. ಆತ್ಮ ಅಜ್ಞಾತ ಮತ್ತು ಅಗೋಚರ.

೪. ಅಸ್ತಿತ್ವದಲ್ಲಿರುವ ವಸ್ತುವೆಂದರೆ ಆತ್ಮವಲ್ಲ. ಆದರೆ ಮನಸ್ಸು–ಮನಸ್ಸು ಆತ್ಮದಿಂದ ಭಿನ್ನವಾಗಿದೆ.

೫. ಆತ್ಮದಲ್ಲಿ ನಂಬಿಕೆ ಇಡುವುದು ಲಾಭಕರವಲ್ಲ.

೬. ಆತ್ಮವನ್ನು ಅವಲಂಬಿಸಿದ ಧರ್ಮ ಸ್ವೀಕಾರಯೋಗ್ಯವಲ್ಲ.

೭. ಅದು ಮೌಢ್ಯವನ್ನು ಸೃಷ್ಟಿಸುವುದರಲ್ಲೇ ಕೊನೆಯಾಗುತ್ತದೆ.

೮. ಬುದ್ಧ ಆ ಪ್ರಶ್ನೆಯನ್ನು ಅಲ್ಲಿಗೇ ಬಿಡಲಿಲ್ಲ. ಅದರ ಅಲ್ಲ ಮುಖಗಳನ್ನೂ ಆತ ಚರ್ಚಿಸಿದ್ದಾನೆ.

೯. ದೇಹದ ಅಸ್ತಿತ್ವದಲ್ಲಿ ನಂಬಿಕೆ ಎಷ್ಟು ಸಾಮಾನ್ಯವೋ ಆತ್ಮದ ಅಸ್ತಿತ್ವದ ನಂಬಿಕೆಯೂ ಅಷ್ಟೇ ಸಾಮಾನ್ಯ.

೧೦. ಆತ್ಮದ ಅಸ್ತಿತ್ವದ ನಂಬಿಕೆ ಕೂಡ ಬ್ರಾಹ್ಮಣೀಯ ಧರ್ಮದ ಒಂದು ಅಂಗವಾಗಿದೆ.

೧೧. ಬ್ರಾಹ್ಮಣ ಧರ್ಮದಲ್ಲಿ ಜೀವವನ್ನು ಆತ್ಮ ಅಥವಾ ಆತ್ಮನ್ ಎಂದು ಕರೆಯಲಾಗಿದೆ.

೧೨. ಬ್ರಾಹ್ಮಣೀಯ ಧರ್ಮದಲ್ಲಿ ಶರೀರಕ್ಕಿಂತ ಪ್ರತ್ಯೇಕವಾಗಿ ನೆಲೆಸಿರುವ ಆದರೆ ಜೀವಿಯ ಹುಟ್ಟಿನಿಂದಲೂ ಇದು ಅವನ ದೇಹದ ಒಳಗೆ ನಿರಂತರವಾಗಿ ಇರುವ ಜೀವವಸ್ತುವನ್ನು ಆತ್ಮ ಎಂದು ಹೆಸರಿಸಲಾಗಿದೆ.

೧೩. ಆತ್ಮದ ನಂಬಿಕೆ ಎಂದರೆ ಅದಕ್ಕೆ ಸಂಬಂಧಿಸಿದ ಇನ್ನಿತರ ನಂಬಿಕೆಗಳನ್ನು ಒಳಗೊಳ್ಳುತ್ತದೆ.

೧೪. ದೇಹ ಸತ್ತಾಗ ಆತ್ಮ ಸಾಯುವುದಿಲ್ಲ. ಇನ್ನೊಂದು ದೇಹ ಅಸ್ತಿತ್ವಕ್ಕೆ ಬಂದಾಗ ಅದರಲ್ಲಿ ಅದು ಜನ್ಮ ತಳೆಯುತ್ತದೆ.

೧೫. ಆತ್ಮಕ್ಕೆ ದೇಹ ಬಾಹ್ಯ ಕವಚವಾಗಿದೆ.

೧೬. ಬುದ್ಧ ಆತ್ಮದಲ್ಲಿ ನಂಬಿಕೆ ಇಟ್ಟಿದ್ದನೆ? ಇಲ್ಲ, ನಂಬಿಕೆ ಇಟ್ಟಿರಲಿಲ್ಲ. ಅವನ ಸಿದ್ಧಾಂತವನ್ನು ಅನ್–ಅತ್ತ, ಅನಾತ್ಮವಾದ ಎಂದು ಕರೆಯಲಾಗಿದೆ.

೧೭. ನಿರ್ದೇಹಿಯಾದ ಆತ್ಮದ ಬಗ್ಗೆ ನಾನಾ ಪ್ರಶ್ನೆಗಳು ಉದ್ಭವಿಸುತ್ತವೆ. ಆತ್ಮ ಎಂದರೆ ಏನು? ಅದು ಎಲ್ಲಿಂದ ಬಂತು? ದೇಹ ಅವಸಾನವಾದಾಗ ಅದು ಏನಾಗುತ್ತದೆ? ಎಲ್ಲಿಗೆ ಹೋಗುತ್ತದೆ? 'ಇಹದ ನಂತರ' ಅದು ಯಾವ ರೂಪ ತಳೆಯುತ್ತದೆ? ಆ ರೂಪದಲ್ಲಿ ಎಷ್ಟು ಕಾಲ ಉಳಿಯುತ್ತದೆ? ಆತ್ಮಸಿದ್ಧಾಂತದ ಪ್ರತಿಪಾದಕರೊಂದಿಗೆ ಬುದ್ಧ ಈ ಪ್ರಶ್ನೆಗಳನ್ನು ಚರ್ಚಿಸಲು ಪ್ರಯತ್ನಿಸಿದ್ದಾನೆ.

೧೮. ಸಾಮಾನ್ಯವಾದ ಪಾಟೀಸವಾಲಿನ ಕ್ರಮದಲ್ಲಿ ಆತ್ಮದ ಬಗೆಗಿನ ವಿಚಾರ ಎಷ್ಟು ಅಸ್ಪಷ್ಟ ಎಂಬುದನ್ನು ತೋರಿಸಲು ಆತ ಮೊದಲಿಗೆ ಪ್ರಯತ್ನಿಸಿದ್ದಾನೆ.

೧೯. ಆತ್ಮದ ಅಸ್ತಿತ್ವದಲ್ಲಿ ನಂಬಿಕೆ ಉಳ್ಳವರನ್ನು ಆತ ಆತ್ಮದ ಆಕಾರ ಮತ್ತು ಗಾತ್ರ ಹೇಗಿದೆ ಎಂದು ಪ್ರಶ್ನಿಸಿದ್ದಾನೆ.

೨೦. ಆತ್ಮಕ್ಕೆ ಸಂಬಂಧಿಸಿದ ವಿಷಯಗಳು ಅಪಾರವಾಗಿದೆ ಎಂದು ಆನಂದನಿಗೆ ಆತ ಹೇಳಿದ್ದಾನೆ. "ನನ್ನ ಆತ್ಮಕ್ಕೆ ರೂಪವಿದೆ, ಅದು ಸೂಕ್ಷ್ಮವಾಗಿದೆ" ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಆತ್ಮಕ್ಕೆ ರೂಪವಿದೆ, ಅದು ಅನಂತ ಮತ್ತು ಸೂಕ್ಷ್ಮ ಎನ್ನುತ್ತಾರೆ. ಮತ್ತೆ ಕೆಲವರು ಅದು ನಿರಾಕಾರ ಮತ್ತು ಅಪಾರ ಎನ್ನುತ್ತಾರೆ.

೨೧. "ಆನಂದ, ಹೀಗೆ ಆತ್ಮದ ಬಗ್ಗೆ ನಾನಾ ವಿಧಗಳಲ್ಲಿ ಉದ್ಘೋಷಿಸಿದ್ದಾರೆ."

೨೨. "ಆತ್ಮದ ಬಗ್ಗೆ ನಂಬಿಕೆ ಇರುವವರು ಆತ್ಮವನ್ನು ಹೇಗೆ ಕಲ್ಪಿಸಿಕೊಂಡಿದ್ದಾರೆ?" ಎಂದು ಬುದ್ಧ ಎತ್ತಿದ ಇನ್ನೊಂದು ಪ್ರಶ್ನೆಯಾಗಿದೆ. "ನನ್ನ ಆತ್ಮ ಭಾವಿಸುತ್ತಿದೆ" ಎಂದು ಕೆಲವರು ಹೇಳುತ್ತಾರೆ. "ಇಲ್ಲ, ನನ್ನ ಆತ್ಮ ಭಾವಿಸುತ್ತಿಲ್ಲ, ನನ್ನ ಆತ್ಮ ಇಂದ್ರಿಯಗ್ರಾಹ್ಯವಲ್ಲ" ಎಂದು ಇತರರು ಹೇಳುತ್ತಾರೆ. "ನನ್ನ ಆತ್ಮವು ಭಾವನೆಯೂ ಅಲ್ಲ; ಇಂದ್ರಿಯಗ್ರಾಹ್ಯವೂ ಅಲ್ಲ ಎನ್ನಲಾಗುವುದಿಲ್ಲ. ನನ್ನ ಆತ್ಮಕ್ಕೆ ಭಾವನೆಯಿದೆ; ಅದಕ್ಕೆ ಇಂದ್ರಿಯ ಗ್ರಾಹ್ಯ ಗುಣವೂ ಇದೆ" ಎಂದು ಮತ್ತೆ ಕೆಲವರು ಹೇಳುತ್ತಾರೆ. ಹೀಗೆ ನಾನಾ ವಿಧಗಳಲ್ಲಿ ಆತ್ಮವನ್ನು ಕಲ್ಪಿಸಿಕೊಂಡಿದ್ದಾರೆ.

೨೩. ಅಸ್ತಿತ್ವದಲ್ಲಿ ನಂಬಿಕೆಯುಳ್ಳವರನ್ನು ಆತ್ಮದ ದೇಹದ ಅವಸಾನದ ನಂತರ ಆತ್ಮದ ಸ್ಥಿತಿ ಏನು ಎಂದು ಬುದ್ಧ ಮತ್ತೆ ಪ್ರಶ್ನಿಸಿದ.

೨೪. ದೇಹಾವಸಾನದ ನಂತರ ಆತ್ಮ ಗೋಚರಿಸುವುದೇ ಎಂಬ ಪ್ರಶ್ನೆಯನ್ನೂ ಬುದ್ಧ ಮುಂದಿಟ್ಟನು.

೨೫. ಅನಂತ ಸಂಖ್ಯೆಯ ಅಸ್ಪಷ್ಟ ಹೇಳಿಕೆಗಳನ್ನು ಅವನು ಕಂಡನು.

೨೬. ದೇಹಾವಸಾನದ ನಂತರ ಆತ್ಮ ತನ್ನ ರೂಪವನ್ನು ಉಳಿಸಿಕೊಳ್ಳುತ್ತದೆಯೇ? ಇದಕ್ಕೆ ಎಂಟು ಭಿನ್ನ

ಊಹಾತ್ಮಕ ಉತ್ತರಗಳು ದೊರೆತವು.

೨೭. ದೇಹದೊಂದಿಗೆ ಆತ್ಮವೂ ಸಾಯುತ್ತದೆಯೇ? ಇದರ ಬಗ್ಗೆ ಅಸಂಖ್ಯಾತ ಊಹಾಪೋಹಗಳು ಇದ್ದವು.

೨೮. ದೇಹ ಅವಸಾನ ಹೊಂದಿದ ಮೇಲೆ ಆತ್ಮದ ಆನಂದ ಅಥವಾ ದುಃಖದ ಬಗ್ಗೆಯೂ ಅವನು ಪ್ರಶ್ನೆ ಮಾಡಿದ. ದೇಹ ಸತ್ತಮೇಲೆ ಆತ್ಮ ಸಂತೋಷಪಡುವುದೇ? ಇದರ ಬಗ್ಗೆಯೂ ಸಂನ್ಯಾಸಿಗಳು ಮತ್ತು ಬ್ರಾಹ್ಮಣರು ಭಿನ್ನಾಭಿಪ್ರಾಯ ಉಳ್ಳವರಾಗಿದ್ದರು. ಅದು ಸಂಪೂರ್ಣವಾಗಿ ಯಾತನಾಮಯವಾಗಿರುತ್ತದೆ ಎಂದು ಕೆಲವರು ಹೇಳಿದರು. ಇನ್ನು ಕೆಲವರು ಅದು ಸಂತೋಷಕರವಾಗಿರುತ್ತದೆ ಎಂದರು. ಅದು ಸಂತೋಷ ಮತ್ತು ಯಾತನೆ ಎರಡನ್ನೂ ಒಳಗೊಂಡಿರುತ್ತದೆ ಎಂದು ಮತ್ತೆ ಕೆಲವರು ಹೇಳಿದರೆ, ಉಳಿದವರು ಅದಕ್ಕೆ ಸಂತೋಷವೂ ಇರುವುದಿಲ್ಲ, ಯಾತನೆಯೂ ಆಗುವುದಿಲ್ಲ ಎಂದರು.

೨೯. ಆತ್ಮದ ಅಸ್ತಿತ್ವದ ಬಗೆಗಿನ ಈ ಎಲ್ಲ ವಾದಗಳಿಗೂ ಬುದ್ಧನ ಉತ್ತರವೆಂದರೆ ಅವನು ಚುಂದನಿಗೆ ಕೊಟ್ಟ ಉತ್ತವೇ ಆಗಿತ್ತು.

೩೦. ಚುಂದನಿಗೆ ಅವನು ಈ ರೀತಿ ಹೇಳಿದನು: "ಈಗ, ಚುಂದ, ಒಂದಲ್ಲ ಒಂದು ದೃಷ್ಟಿಯಲ್ಲಿ ನಂಬಿಕೆ ಮತ್ತು ನಿಷ್ಠೆ ಇಟ್ಟು ನಡೆಯುವ ಸಂನ್ಯಾಸಿಗಳು ಮತ್ತು ಬ್ರಾಹ್ಮಣರಿಗೆ ನಾನು ಹೋಗಿ ಈ ರೀತಿ ಹೇಳುತ್ತೇನೆ: 'ಮಿತ್ರರೆ, ಇದು ಹೀಗೋ?'; 'ಹೌದು. ಇದು ಮಾತ್ರ ನಿಜವಾದದ್ದು, ಬೇರಾವುದೇ ದೃಷ್ಟಿ ಅಸಂಬದ್ಧವಾದುದು' ಎಂದು ಅವರು ಉತ್ತರಿಸಿದರೆ ಅವರ ಮಾತನ್ನು ನಾನು ಒಪ್ಪುವುದಿಲ್ಲ. ಏಕೆ ಹೀಗೆ? ಏಕೆಂದರೆ ಅಂಥ ಪ್ರಶ್ನೆಗಳಿಗೆ ಜನ ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಈ ಅಭಿಪ್ರಾಯ ಅಥವಾ ಆ ಅಭಿಪ್ರಾಯ ನನ್ನ ದೃಷ್ಟಿಗಿಂತ ಮೇಲಿದೆ ಎಂಬುದಾಗಿ ಭಾವಿಸುವುದಿರಲಿ, ಅದು ನನ್ನ ಅಭಿಪ್ರಾಯದ ಮಟ್ಟದಲ್ಲೇ ಇದೆ ಎಂದೂ ಕೂಡ ನಾನು ಪರಿಗಣಿಸಲಾರೆ."

೩೧. ಆತ್ಮದ ಅಸ್ತಿತ್ವದ ವಿರುದ್ಧ ಬುದ್ಧನ ವಾದಗಳು ಏನು ಎಂಬುದೇ ಎಲ್ಲಕ್ಕಿಂತ ಮುಖ್ಯವಾದ ಪ್ರಶ್ನೆ.

೩೨. ದೇವರ ಅಸ್ತಿತ್ವದ ನಿರಾಕರಣೆಗೆ ಬೆಂಬಲವಾಗಿ ಅವನು ಮುಂದಿಟ್ಟ ವಾದ, ಆತ್ಮದ ಅಸ್ತಿತ್ವದ ನಿರಾಕರಣೆಗೆ ಬೆಂಬಲವಾಗಿ ಅವನು ಮಂಡಿಸಿದ ಸಾಮಾನ್ಯ ಪ್ರತಿಪಾದನೆ ಎರಡೂ ಒಂದೇ ಆಗಿವೆ.

೩೩. ದೇವರ ಅಸ್ತಿತ್ವದ ಬಗೆಗಿನ ಚರ್ಚೆಯಂತೆಯೇ ಆತ್ಮದ ಅಸ್ತಿತ್ವದ ಬಗೆಗಿನ ಚರ್ಚೆಯೂ ಲಾಭದಾಯಕವಲ್ಲ ಎಂದು ಅವನು ವಾದಿಸಿದನು.

೩೪. ಆತ್ಮದ ಅಸ್ತಿತ್ವದಲ್ಲಿನ ನಂಬಿಕೆ ದೇವರ ಅಸ್ತಿತ್ವದಲ್ಲಿನ ನಂಬಿಕೆಯಂತೆಯೇ ಸಮ್ಮದಿತ್ಥಿಯ ಬೆಳವಣಿಗೆಯ ವಿರುದ್ಧವಾಗಿದೆ ಎಂಬುದಾಗಿ ಅವನು ವಾದಿಸಿದನು.

೩೫. ದೇವರ ಅಸ್ತಿತ್ವದಲ್ಲಿನ ನಂಬಿಕೆಯಂತೆಯೇ ಆತ್ಮದ ಅಸ್ತಿತ್ವದಲ್ಲಿನ ನಂಬಿಕೆಯೂ ಮೌಢ್ಯದ ಮೂಲವೆಂದು ಅವನು ವಾದಿಸಿದನು. ವಾಸ್ತವವಾಗಿ ಅವನ ದೃಷ್ಟಿಯಲ್ಲಿ ದೇವರ ಅಸ್ತಿತ್ವದಲ್ಲಿನ ನಂಬಿಕೆಗಿಂತಲೂ ಆತ್ಮದ ಅಸ್ತಿತ್ವದಲ್ಲಿನ ನಂಬಿಕೆ ಹೆಚ್ಚು ಅಪಾಯಕಾರಿಯಾದದ್ದು. ಇದು ಪುರೋಹಿತಶಾಹಿಯನ್ನು ಸೃಷ್ಟಿಸಿ, ಮೂಢನಂಬಿಕೆಗಳಿಗೆ ಮೂಲವಾಗುವುದಲ್ಲದೆ ಹುಟ್ಟಿನಿಂದ ಸಾವಿನವರೆಗೆ ಮನುಷ್ಯನ ಮೇಲೆ ಸಂಪೂರ್ಣ ಹತೋಟಿಯನ್ನು ಪುರೋಹಿತ ವರ್ಗಕ್ಕೆ ಕೊಡುತ್ತದೆ.

೩೬. ಇವೆಲ್ಲ ಸಾಮಾನ್ಯ ವಾದಗಳ ಕಾರಣದಿಂದಾಗಿ ಆತ್ಮದ ಅಸ್ತಿತ್ವದ ಬಗ್ಗೆ ಬುದ್ಧ ಯಾವುದೇ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ; ಆತ್ಮದ ಅಸ್ತಿತ್ವದ ವಾದವನ್ನು ಅವನು ತಿರಸ್ಕರಿಸಲಿಲ್ಲ ಎಂದು

ಕೆಲವರು ಹೇಳಿದ್ದಾರೆ. ಇನ್ನು ಕೆಲವರು ಅವನು ಯಾವಾಗಲೂ ಈ ವಿಷಯದಿಂದ ನುಣುಚಿಕೊಳ್ಳುತ್ತಿದ್ದ ಎಂದಿದ್ದಾರೆ.

೩೭. ಈ ಹೇಳಿಕೆಗಳು ಸಂಪೂರ್ಣವಾಗಿ ಸರಿಯಲ್ಲ. ಆತ್ಮದಂಥ ವಸ್ತು ಏನೂ ಇಲ್ಲ ಎಂದು ಅತ್ಯಂತ ಖಚಿತವಾದ ಮಾತಿನಲ್ಲೇ ಬುದ್ಧ ಮಹಾಲಿಗೆ ಹೇಳಿದ್ದಾನೆ. ಆದ್ದರಿಂದಲೇ ಆತ್ಮದ ಬಗೆಗಿನ ಅವನ ವಾದವನ್ನು ಅನಾತ್ಮ ಎಂದು ಕರೆಯಲಾಗಿದೆ.

೩೮. ಆತ್ಮದ ಅಸ್ತಿತ್ವದ ವಿರುದ್ಧದ ಸಾಮಾನ್ಯ ವಾದಗಳಿಂದ ದೂರವಾಗಿ ಆತ್ಮದ ಅಸ್ತಿತ್ವದ ವಿರುದ್ಧ ಬುದ್ಧ ವಿಶೇಷ ವಾದವನ್ನು ಹೊಂದಿದ್ದ. ಅದು ಆತ್ಮವಾದಕ್ಕೆ ಮಾರಕವಾಗಿದೆ ಎಂದೂ ಆತ ಭಾವಿಸಿದ್ದನು.

೩೯. ಆತ್ಮದ ಅಸ್ತಿತ್ವದ ವಿರುದ್ಧವಾಗಿರುವ ಅವನ ವಾದವನ್ನು ನಾಮ–ರೂಪ ಎಂಬ ಪ್ರತ್ಯೇಕ ತತ್ವವೆಂದು ಕರೆಯಲಾಗಿದೆ.

೪೦. ಮಾನವ ವ್ಯಕ್ತಿತ್ವವೆಂದು ಅನ್ಯಥಾ ಕರೆಯಲಾಗುವ ಐಂದ್ರಿಯಕ ವ್ಯಕ್ತಿಯ ಘಟಕ ಧಾತುಗಳ ಹರಿತವೂ, ಕಠಿಣ ವಿಶ್ಲೇಷಣೆಯ ವಿಭಾಜಪರೀಕ್ಷೆ ಅನ್ವಯದ ಫಲವೇ ಆ ತತ್ತ್ವವಾಗಿದೆ.

೪೧. ನಾಮ–ರೂಪ ಎನ್ನುವುದು ಐಂದ್ರಿಯಕ ವ್ಯಕ್ತಿಯ ಸಾಮೂಹಿಕ ಹೆಸರಾಗಿದೆ.

೪೨. ಬುದ್ಧನ ವಿಶ್ಲೇಷಣೆಯ ಪ್ರಕಾರ, ಐಂದ್ರಿಯಕ ಜೀವಿ ಎನ್ನುವುದು ಕೆಲವು ಭೌತಿಕ ಮೂಲಾಂಶಗಳ ಮತ್ತು ಕೆಲವು ಮಾನಸಿಕ ಮೂಲಾಂಶಗಳನ್ನೊಳಗೊಂಡ ಸಂಯುಕ್ತ ವಸ್ತುವಾಗಿದೆ. ಅವುಗಳನ್ನು ಖಂಡಗಳೆಂದು ಕರೆಯುತ್ತಾರೆ.

೪೩. ರೂಪಖಂಡ ಪ್ರಮುಖವಾಗಿ ಭೌತಿಕ ಮೂಲಾಂಶಗಳಾದ ಭೂಮಿ, ನೀರು, ಬೆಂಕಿ ಮತ್ತು ಗಾಳಿಯನ್ನು ಒಳಗೊಂಡಿದೆ. ಇವು ದೇಹ ಅಥವಾ ರೂಪವನ್ನು ನಿರ್ಮಿಸುತ್ತವೆ.

೪೪. ರೂಪಖಂಡದ ಜೊತೆಗೆ ನಾಮಖಂಡ ಎನ್ನುವ ವಸ್ತುವಿದೆ. ಇದು ಐಂದ್ರಿಯಕ ವ್ಯಕ್ತಿಯನ್ನು ರೂಪಿಸುತ್ತದೆ.

೪೫. ಈ ನಾಮಖಂಡವನ್ನು ವಿನಾನ ಅಥವಾ ಪ್ರಜ್ಞೆ ಎಂದು ಕರೆಯಲಾಗಿದೆ. ಈ ನಾಮಖಂಡ ಮೂರು ಮಾನಸಿಕ ಮೂಲಾಂಶಗಳನ್ನು ಒಳಗೊಂಡಿದೆ: (೧) ವೇದನ (ಆರು ಇಂದ್ರಿಯಗಳು ಪ್ರಪಂಚದ ಜೊತೆ ಸಂಪರ್ಕಗೊಂಡಾಗ ಉಂಟಾಗುವ ಸಂವೇದನೆ); (೨) ಸನ್ನ (ಗ್ರಹಿಕೆ); (೩) ಸಂಖರ (ಮನಸ್ಥಿತಿಗಳು); (೪) ಚೇತನವನ್ನು ಸಾಮಾನ್ಯವಾಗಿ ಮಾನಸಿಕ ಮೂಲಾಂಶಗಳ ಇತರ ಮೂರು ಸ್ಥಿತಿಗಳ ಜೊತೆಗೆ ಇದೂ ಒಂದೆಂದು ಕರೆಯಲಾಗಿದೆ. ಆಧುನಿಕ ಮನಶ್ಶಾಸ್ತ್ರಜ್ಞನೂ ಪ್ರಜ್ಞೆಯಿಂದಲೇ ಇತರ ಮನಶ್ಶಾಸ್ತ್ರೀಯ ಅಂಶಗಳು ಉದ್ಭವಿಸುತ್ತವೆಂದು ಹೇಳುತ್ತಾನೆ. ವಿನಾನವೇ ಐಂದ್ರಿಯಕ ವ್ಯಕ್ತಿಯ ಕೇಂದ್ರವಾಗಿದೆ.

೪೬. ಪೃಥ್ವಿ, ನೀರು, ಬೆಂಕಿ ಮತ್ತು ವಾಯು ಎಂಬ ನಾಲ್ಕು ಮೂಲ ಧಾತುಗಳ ಸಂಯೋಜನೆಯ ಫಲವೇ ಪ್ರಜ್ಞೆಯಾಗಿದೆ.

೪೭. ಬುದ್ಧ ಪ್ರತಿಪಾದಿಸಿದ ಪ್ರಜ್ಞೆಯ ಈ ಸಿದ್ಧಾಂತದ ಬಗ್ಗೆ ತಕರಾರು ಎತ್ತಲಾಗಿದೆ.

೪೮. ಈ ಸಿದ್ಧಾಂತಕ್ಕೆ ತಕರಾರು ಮಾಡುವವರು, "ಪ್ರಜ್ಞೆ ಹೇಗೆ ಉತ್ಪನ್ನವಾಗುತ್ತದೆ?" ಎಂದು ಪ್ರಶ್ನಿಸುತ್ತಾರೆ.

೪೯. ಪ್ರಜ್ಞೆ ಹುಟ್ಟಿನೊಡನೆ ಉದ್ಭವಿಸಿ ಸಾವಿನ ಜೊತೆ ಸಾಯುತ್ತದೆ ಎನ್ನುವುದು ನಿಜ. ಆದರೂ ಕೂಡ, ನಾಲ್ಕು ಮೂಲಧಾತುಗಳ ಸಂಯೋಜನೆಯ ಫಲವೇ ಅರಿವು ಎಂದು ಹೇಳಲು ಸಾಧ್ಯವೇ?

೫೦. ಭೌತಿಕ ಮೂಲಧಾತುಗಳ ಸಹಯೋಗ ಅಥವಾ ಮೊತ್ತ ಪ್ರಜ್ಞೆಯನ್ನು ಉಂಟುಮಾಡುತ್ತದೆ ಎನ್ನುವುದು

ಬುದ್ಧನ ಉತ್ತರವಾಗಿರಲಿಲ್ಲ. ಬುದ್ಧ ಹೇಳಿದ್ದೇನೆಂದರೆ ಎಲ್ಲಿ ರೂಪ ಅಥವಾ ಕಾಯ ಇರುತ್ತದೋ ಅದನ್ನು ಅನುಸರಿಸಿ ಪ್ರಜ್ಞೆ ಇರುತ್ತದೆ.

೫೧. ವಿಜ್ಞಾನದಿಂದ ಒಂದು ಸಾಮ್ಯವನ್ನು ಕೊಡುವುದಾದರೆ ಎಲ್ಲಿ ವಿದ್ಯುತ್ ಕ್ಷೇತ್ರ ಇರುತ್ತದೋ ಅಲ್ಲಿ ಯಾವಾಗಲೂ ಅಯಸ್ಕಾಂತ ಕ್ಷೇತ್ರ ಜೊತೆಗಿರುತ್ತದೆ. ಅಯಸ್ಕಾಂತ ಕ್ಷೇತ್ರ ಹೇಗೆ ಸೃಷ್ಟಿಯಾಯಿತು ಅಥವಾ ಉದ್ಭವಿಸಿತು ಎಂದು ಯಾರಿಗೂ ಗೊತ್ತಿಲ್ಲ. ಆದರೆ ಯಾವಾಗಲೂ ವಿದ್ಯುತ್ ಕ್ಷೇತ್ರದ ಜೊತೆಗೆ ಅದು ಅಸ್ತಿತ್ವದಲ್ಲಿರುತ್ತದೆ.

೫೨. ದೇಹ ಮತ್ತು ಪ್ರಜ್ಞೆಯ ನಡುವೆ ಇದೇ ಬಗೆಯ ಸಂಬಂಧ ಇರಬಾರದೇಕೆ?

೫೩. ವಿದ್ಯುತ್ ಕ್ಷೇತ್ರದ ಸಂಬಂಧದ ಅಯಸ್ಕಾಂತ ಕ್ಷೇತ್ರವನ್ನು ಚೋದಿತ ಕ್ಷೇತ್ರ ಎಂದು ಕರೆಯುತ್ತಾರೆ. ರೂಪ–ಕಾಯದ ಸಂಬಂಧವಾಗಿಯೂ ಪ್ರಜ್ಞೆಯನ್ನು ಏಕೆ ಚೋದಿತ ಕ್ಷೇತ್ರವೆಂದು ಕರೆಯಬಾರದು.

೫೪. ಆತ್ಮದ ವಿರುದ್ಧ ಬುದ್ಧನ ವಾದ ಇನ್ನೂ ಪೂರ್ಣವಾಗಿಲ್ಲ. ಆ ಬಗ್ಗೆ ಆತ ಇನ್ನೂ ಏನೋ ಪ್ರಮುಖವಾದುದನ್ನು ಹೇಳುವುದಿದೆ.

೫೫. ಒಮ್ಮೆ ಪ್ರಜ್ಞೆ ಮೂಡಿತೆಂದರೆ ಮನುಷ್ಯ ಐಂದ್ರಿಯಕ ವ್ಯಕ್ತಿಯಾಗುತ್ತಾನೆ. ಆದ್ದರಿಂದ ಪ್ರಜ್ಞೆ ಮನುಷ್ಯನ ಜೀವನದಲ್ಲಿ ಮುಖ್ಯ ಅಂಶವಾಗಿದೆ.

೫೬. ಪ್ರಜ್ಞೆ ಗ್ರಹಿಕಾಮೂಲವಾದುದು, ಭಾವನಾತ್ಮಕವಾದುದು ಮತ್ತು ಇಚ್ಛಾಪೂರ್ವಕವಾದುದು.

೫೭. ಆಂತರಿಕ ಸಂಗತಿಗಳ ಅಥವಾ ಬಾಹ್ಯ ವಸ್ತು ಅಥವಾ ಘಟನೆಗಳ ಗುಣ ಗ್ರಹಿಕೆಗೆ ಅಥವಾ ನಿರ್ಧಾರಣೆಗೆ ಜ್ಞಾನ ಮತ್ತು ವಿಷಯವನ್ನು ನೀಡಿದಾಗ ಪ್ರಜ್ಞೆಯು ಗ್ರಹಿತಾತ್ಮಕವಾಗುತ್ತದೆ.

೫೮. ಭಾವನಾತ್ಮಕ ಅರಿವು ಸಂವೇದನೆಯನ್ನು ಉಂಟುಮಾಡಿ, ಸಂತೋಷಕರ ಅಥವಾ ಸಂಕಟಕರ ದನಿಗಳಿಂದ ವಿಶಿಷ್ಟವಾಗಿ ಕೆಲವು ವ್ಯಕ್ತಿನಿಷ್ಠ ಸ್ಥಿತಿಗಳಲ್ಲಿ ನೆಲೆಸಿದಾಗ ಅರಿವು ಭಾವನಾತ್ಮಕವಾಗುತ್ತದೆ.

೫೯. ಏನೋ ಉದ್ದೇಶವನ್ನು ಸಾಧಿಸುವುದಕ್ಕಾಗಿ ವ್ಯಕ್ತಿ ತನ್ನನ್ನೇ ತಾನು ತೊಡಗಿಸಿಕೊಂಡಾಗ ಅರಿವು ಇಚ್ಛಾಪೂರ್ವಕ ಸ್ಥಿತಿಯಲ್ಲಿ ಇರುತ್ತದೆ. ಇಚ್ಛಾಪೂರ್ವಕ ಅರಿವು ಸಂಕಲ್ಪ ಅಥವಾ ಚಟುವಟಿಕೆಯನ್ನು ಉಂಟುಮಾಡುತ್ತದೆ.

೬೦. ಹೀಗೆ ವ್ಯಕ್ತಿಯ ಎಲ್ಲ ಕ್ರಿಯೆಗಳು ಐಂದ್ರಿಯಕ ವ್ಯಕ್ತಿಯ ಪ್ರಜ್ಞೆಯ ಮೂಲಕ ಮತ್ತು ಅದರ ಫಲವಾಗಿ ನಡೆಯುತ್ತವೆ ಎಂಬುದು ಸ್ಪಷ್ಟವಾಗಿದೆ.

೬೧. ಈ ವಿಶ್ಲೇಷಣೆಯ ನಂತರ, ಆತ್ಮ ನಡೆಸಲು ಉಳಿದಿರುವ ಕ್ರಿಯೆಗಳು ಯಾವುವು ಎಂದು ಬುದ್ಧ ಕೇಳಿದನು. ಆತ್ಮಕ್ಕೆ ವಹಿಸಿರುವ ಎಲ್ಲ ಕ್ರಿಯೆಗಳನ್ನೂ ಪ್ರಜ್ಞೆ ಈಡೇರಿಸುತ್ತದೆ.

೬೨. ಕ್ರಿಯೆಯಿಲ್ಲದ ಆತ್ಮ ಅಸಂಗತವಾದುದು.

೬೩. ಈ ರೀತಿಯಾಗಿ ಬುದ್ಧ ಆತ್ಮದ ಅಸ್ತಿತ್ವವನ್ನು ಅಲ್ಲಗಳೆದನು.

೬೪. ಆದ್ದರಿಂದಲೇ ಆತ್ಮದ ಅಸ್ತಿತ್ವ ಧಮ್ಮದ ಒಂದು ಅಂಶವಾಗಿರಲು ಸಾಧ್ಯವಿಲ್ಲ.

## ೫. ಯಜ್ಞಗಳಲ್ಲಿ ನಂಬಿಕೆಯಿರುವುದು ಧರ್ಮವಲ್ಲ.

(೧)

೧. ಬ್ರಾಹ್ಮಣೀಯ ಧರ್ಮ ಯಜ್ಞಗಳ ಮೇಲೆ ನಿಂತಿತ್ತು.

೨. ಕೆಲವು ಯಜ್ಞಗಳನ್ನು 'ನಿತ್ಯ' ಎಂದೂ, ಇನ್ನು ಕೆಲವು ಯಜ್ಞಗಳನ್ನು 'ನೈಮಿತ್ತಿಕ' ಎಂದೂ ವರ್ಗೀಕರಿಸಲಾಗಿದೆ.

೩. ನಿತ್ಯ ಯಜ್ಞಗಳು ಹೊಣೆಗಾರಿಕೆಗಳಾದ್ದರಿಂದ ಫಲಾಫಲಗಳಿಗೆ ಗಮನ ಕೊಡದೆ ವ್ಯಕ್ತಿ ಅವುಗಳನ್ನು ನಡೆಸಬೇಕಾಗಿತ್ತು.

೪. ಪ್ರಾಪಂಚಿಕ ಅನುಕೂಲವನ್ನು ಪಡೆಯುವುದಕ್ಕಾಗಿ ನೈಮಿತ್ತಿಕ ಯಜ್ಞಗಳನ್ನು ಮಾಡಬೇಕಾಗಿತ್ತು.

೫. ಬ್ರಾಹ್ಮಣೀಯ ಯಜ್ಞಗಳಲ್ಲಿ ಸೋಮಪಾನ, ಪ್ರಾಣಿಬಲಿ ಮತ್ತು ಆಮೋದಗಳಿದ್ದವು.

೬. ಆದರೂ ಈ ಯಜ್ಞಗಳು ಧಾರ್ಮಿಕ ಆಚರಣೆಗಳೆಂದು ಪರಿಗಣಿತವಾಗಿದ್ದವು.

೭. ಯಜ್ಞಗಳ ಮೇಲೆ ಆಧಾರಿತವಾದ ಧರ್ಮವನ್ನು ಬುದ್ಧನು ಯೋಗ್ಯವಾದುದೆಂದು ಪರಿಗಣಿಸಲು ನಿರಾಕರಿಸಿದ.

೮. ಯಜ್ಞಗಳು ಏಕೆ ಧರ್ಮದ ಭಾಗವಲ್ಲವೆಂದು ಹೇಳುತ್ತಿದ್ದ ಅವನ ಜೊತೆ ವಾದಿಸಲು ಹೋದ ಅನೇಕ ಬ್ರಾಹ್ಮಣರಿಗೆ ತನ್ನ ಕಾರಣಗಳನ್ನು ವಿವರಿಸಿದ್ದಾನೆ.

೯. ಈ ವಿಷಯಕ್ಕೆ ಸಂಬಂಧಿಸಿದಂತೆ ಮೂರು ಜನ ಬ್ರಾಹ್ಮಣರು ಆತನ ಜೊತೆ ಸಂವಾದ ನಡೆಸಿದರೆನ್ನಲಾಗುತ್ತದೆ.

೧೦. ಅವರೆಂದರೆ ಕೂಟದಂತ, ಉಜ್ಜಯ ಮತ್ತು ಮೂರನೆಯವನೇ ಉದಯಿನ.

೧೧. ಕೂಟದಂತ ಎಂಬ ಬ್ರಾಹ್ಮಣ ಯಜ್ಞದ ಲಾಭದ ಬಗ್ಗೆ ತಾವು ಏನು ಹೇಳುತ್ತೀರಿ ಎಂದು ತಥಾಗತನನ್ನು ಪ್ರಶ್ನಿಸಿದನು.

೧೨. ತಥಾಗತ ಹೇಳಿದನು: "ಆಗಲಿ, ಓ ಬ್ರಾಹ್ಮಣ, ಎಚ್ಚರಿಕೆಯಿಂದ ಕಿವಿಗೊಟ್ಟು ನಾನು ಹೇಳುವುದನ್ನು ಕೇಳು."

೧೩. "ಆಗಲಿ ಸ್ವಾಮಿ" ಕೂಟದಂತ ಉತ್ತರಿಸಿದನು. ತಥಾಗತ ಮುಂದಿನಂತೆ ಉಪದೇಶಿಸಿದನು.

೧೪. "ಓ ಬ್ರಾಹ್ಮಣ, ಬಹಳ ಹಿಂದೆ ಮಹಾ ವಿಜೇತನೆಂಬ ಮಹಾಬಲಶಾಲಿ ರಾಜನಿದ್ದನು. ಅವನಿಗೆ ಅಪಾರ ಸಂಪತ್ತು ಮತ್ತು ದೊಡ್ಡ ಆಸ್ತಿಯಿತ್ತು; ಚಿನ್ನ ಬೆಳ್ಳಿಗಳ ರಾಶಿಯಿತ್ತು; ಭೋಗದ ಸಾಧನಗಳು, ದವಸಧಾನ್ಯಗಳು ಹೇರಳವಾಗಿದ್ದವು; ಅವನ ಖಜಾನೆಗಳು ಮತ್ತು ಕಣಜಗಳು ತುಂಬಿದ್ದವು.

೧೫. "ಒಮ್ಮೆ ಆ ಮಹಾರಾಜ ಮಹಾ ವಿಜೇತನು ಒಬ್ಬನೇ ಧ್ಯಾನದಲ್ಲಿ ಕುಳಿತಿದ್ದನು. ಆಗ ಈ ಆಲೋಚನೆಯಿಂದ ಆತಂಕಿತನಾದನು: 'ಮರ್ತ್ಯ ಅನುಭವಿಸುವ ಎಲ್ಲ ಭೋಗಭಾಗ್ಯಗಳು ನನಗೆ ಹೇರಳವಾಗಿವೆ. ದಿಗ್ವಿಜಯದಿಂದ ಇಡೀ ಭೂಮಂಡಲವೇ ನನ್ನ ವಶವಾಗಿದೆ. ಒಂದು ಮಹಾಯಜ್ಞವನ್ನು ಮಾಡಿ ನನಗೆ ಹಲವಾರು ವರ್ಷಗಳ ಕಾಲ ಸುಖ ಮತ್ತು ಸೌಖ್ಯಗಳನ್ನು ಖಚಿತಪಡಿಸಿಕೊಳ್ಳುವುದು ಒಳ್ಳೆಯದು.'

೧೬. "ಆಗ ರಾಜಪುರೋಹಿತನಾದ ಬ್ರಾಹ್ಮಣ ದೊರೆಗೆ ಹೇಳಿದನು: 'ಪ್ರಭುವೆ, ರಾಜನ ದೇಶ ಸಂಕಷ್ಟಗಳಿಗೆ ಈಡಾಗಿದೆ. ಎಲ್ಲ ಕಡೆಯೂ ಡಕಾಯಿತರಿದ್ದಾರೆ. ಅವರು ಹಳ್ಳಿಗಳನ್ನು, ಪಟ್ಟಣಗಳನ್ನು ಲೂಟಿ

ಮಾಡುತ್ತಿದ್ದಾರೆ. ರಸ್ತೆಗಳಲ್ಲಿ ಓಡಾಡುವುದು ಸುರಕ್ಷಿತವಲ್ಲ. ಹೀಗಿರುವವರೆಗೆ ರಾಜನು ಹೊಸ ತೆರಿಗೆಯನ್ನು ವಿಧಿಸಿದರೆ ಮಹಾಪ್ರಭುಗಳು ನಿಜವಾಗಿಯೂ ತಪ್ಪು ಮಾಡಿದಂತಾಗುತ್ತದೆ.'

೧೭. 'ಆದರೆ ಒಂದು ಪಕ್ಷ ಮಹಾಪ್ರಭು ಹೀಗೆ ಯೋಚಿಸಬಹುದು: 'ಈ ಪಟಿಂಗರನ್ನು ದಂಡಿಸಿ ಗಡೀಪಾರು ಮಾಡಿ, ದಂಡ ಹಾಕಿ, ಕೋಳ ಹಾಕಿ ಮರಣದಂಡನೆ ವಿಧಿಸಿ ಅವರ ಆಟವನ್ನು ತಡೆಗಟ್ಟುತ್ತೇನೆ!' ಆದರೂ ಅವರ ಸ್ವೇಚ್ಛಾಚಾರವನ್ನು ಸಂತೃಪ್ತಿಕರವಾಗಿ ನಿಲ್ಲಿಸಲು ಸಾಧ್ಯವಾಗಲಿಕ್ಕಿಲ್ಲ. ಶಿಕ್ಷೆಯಿಂದ ತಪ್ಪಿಸಿಕೊಂಡವರು ರಾಜ್ಯವನ್ನು ಒಂದೇ ಸಮನೆ ಹಿಂಸಿಸುತ್ತಾ ಹೋಗುವರು.

೧೮. " 'ಈ ಸ್ಥಿತಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಇರುವುದು ಒಂದೇ ಮಾರ್ಗ. ರಾಜ್ಯದಲ್ಲಿರುವ ಯಾರು ದನಗಳನ್ನು ಸಾಕುತ್ತಾ ಮತ್ತು ಜಮೀನುಗಳನ್ನು ಉಳುತ್ತಿರುವರೋ ಅವರಿಗೆ ಮಹಾರಾಜರು ಆಹಾರ ಮತ್ತು ಬಿತ್ತನೆಯ ಕಾಳುಗಳನ್ನು ಕೊಡಲಿ. ರಾಜ್ಯದಲ್ಲಿ ಯಾರ್‍ಯಾರು ವ್ಯಾಪಾರಕ್ಕೆ ತಮ್ಮನ್ನು ತೊಡಗಿಸಿಕೊಂಡಿರುವರೋ ಅವರಿಗೆ ಮಹಾರಾಜರು ಬಂಡವಾಳ ನೀಡಲಿ. ರಾಜ್ಯದಲ್ಲಿ ಯಾರ್‍ಯಾರು ಸರ್ಕಾರಿ ಸೇವೆಯಲ್ಲಿ ನಿರತರಾಗಿರುವವರೋ ಅವರಿಗೆ ಮಹಾರಾಜರು ಆಹಾರ ಮತ್ತು ಸಂಬಳ ಸಾರಿಗೆಗಳನ್ನು ದಯಪಾಲಿಸಿ.

೧೯. ಆಗ ಆ ಜನರು ತಮ್ಮ ತಮ್ಮ ವೃತ್ತಿಯನ್ನು ಪಾಲಿಸುತ್ತಾ ರಾಜ್ಯವನ್ನು ಇನ್ನು ಮುಂದೆ ಹಿಂಸಿಸುವುದಿಲ್ಲ. ರಾಜರ ಆದಾಯ ವರ್ಧಿಸುತ್ತದೆ; ರಾಜ್ಯ ಸುಭಿಕ್ಷವಾಗಿ ಶಾಂತಿಯಿಂದಿರುತ್ತದೆ; ಜನತೆ ಒಬ್ಬರೊಡನೊಬ್ಬರು ಸಂತೋಷದಿಂದ ಸುಖವಾಗಿದ್ದು, ತಮ್ಮ ಮಕ್ಕಳನ್ನು ತೋಳಿನಲ್ಲಿ ಎತ್ತಿಕೊಂಡು ನಲಿಯುತ್ತಾ ಭಯಭೀತಿಯಿಲ್ಲದೆ ಬಾಗಿಲುಗಳನ್ನು ತೆರೆದುಕೊಂಡು ವಾಸಿಸುತ್ತಾರೆ.

೨೦. 'ಓ, ಬ್ರಾಹ್ಮಣನೆ! ಆಗ ಮಹಾ ವಿಜೇತ ದೊರೆಯು ತನ್ನ ರಾಜಪುರೋಹಿತನ ಮಾತುಗಳನ್ನು ಅಂಗೀಕರಿಸಿ ಆತ ಹೇಳಿದಂತೆ ಮಾಡಿದನು. ಆ ಜನರು ತಮ್ಮ ತಮ್ಮ ವೃತ್ತಿ ಮಾಡುತ್ತಾ ರಾಜ್ಯವನ್ನು ಹಿಂಸಿಸಲಿಲ್ಲ. ರಾಜ್ಯ ಸುಭಿಕ್ಷವಾಗಿ ಶಾಂತಿಯಿಂದಿತ್ತು. ಜನತೆ ಒಬ್ಬರೊಡನೊಬ್ಬರು ಸಂತೋಷದಿಂದ ಸುಖವಾಗಿದ್ದು, ತಮ್ಮ ಮಕ್ಕಳನ್ನು ತೋಳಿನಲ್ಲಿ ಎತ್ತಿಕೊಂಡು ನಲಿಯುತ್ತಾ ಭಯಭೀತಿಯಿಲ್ಲದೆ ಬಾಗಿಲುಗಳನ್ನು ತೆರೆದುಕೊಂಡು ವಾಸಿಸುತ್ತಿದ್ದರು.

೨೧. "ಶಾಂತಿ ಸುವ್ಯವಸ್ಥೆಗಳು ನೆಲೆಸಿದ ಮೇಲೆ, ತನ್ನ ರಾಜಪುರೋಹಿತನನ್ನು ರಾಜ ಮಹಾ ವಿಜೇತ ಕರೆದು ಮತ್ತೆ ಹೇಳಿದನು: 'ಅವ್ಯವಸ್ಥೆ ಕೊನೆಗೊಂಡಿತು. ರಾಜ್ಯ ಶಾಂತವಾಗಿದೆ. ನಾನು ಮಹಾಯಜ್ಞ ಮಾಡಬೇಕೆಂದಿರುವೆ. ಪೂಜ್ಯರಾದ ತಾವು ಹೇಗೆ ನಾನು ಅನೇಕ ವರ್ಷಗಳ ಕಾಲ ಸುಖಸಂತೋಷದಿಂದ ಇರಬಹುದು ಎಂಬುದಕ್ಕೆ ಮಾರ್ಗದರ್ಶನ ಮಾಡಿ.'

೨೨. "ರಾಜಪುರೋಹಿತ ದೊರೆಗೆ ಮಾರುತ್ತರಿಸಿದ: 'ಹಾಗೆಯೇ ಆಗಲಿ. ತಮ್ಮ ರಾಜ್ಯದ ಪಟ್ಟಣ ಮತ್ತು ಹಳ್ಳಿಗಳಲ್ಲಿ ಇರುವ ಕ್ಷತ್ರಿಯರಿಗೆ, ತಮ್ಮ ಅಧೀನರಿಗೆ, ತಮ್ಮ ಮಂತ್ರಿಗಳು ಮತ್ತು ಅಧಿಕಾರಿಗಳಿಗೆ ಅಥವಾ ಸ್ಥಾನಮಾನವುಳ್ಳ ಬ್ರಾಹ್ಮಣರಿಗೆ ಅಥವಾ ಸ್ಥಿತಿವಂತರಾದ ಗೃಹಸ್ಥರಿಗೆ ಹೀಗೆಂದು ಆಹ್ವಾನಗಳನ್ನು ಕಳುಹಿಸಿ: 'ನಾನು ಒಂದು ಮಹಾಯಜ್ಞ ಮಾಡಬೇಕೆಂದಿರುವೆ. ಪೂಜ್ಯರಾದ ತಾವು ನನಗೆ ಅನುಮತಿಯನ್ನು ನೀಡಿ. ಅನೇಕ ವರ್ಷಗಳ ಕಾಲ ನಾನು ಸುಖಸಂತೋಷದಿಂದ ಬದುಕಿರಲು ನಾನು ಏನು ಮಾಡಬೇಕೆಂದು ತಿಳಿಸಿ.'

೨೩. "ಓ ಬ್ರಾಹ್ಮಣ ಕೂಟದಂತನೇ, ಆಗ ದೊರೆಯು ರಾಜಪುರೋಹಿತನ ಮಾತನ್ನು ಸ್ವೀಕರಿಸಿದನು ಹಾಗೂ ಅವನು ಹೇಳಿದಂತೆ ನಡೆದುಕೊಂಡನು. ಅವರೆಲ್ಲರೂ – ಕ್ಷತ್ರಿಯರು ಮತ್ತು ಮಂತ್ರಿಗಳು

ಮತ್ತು ಬ್ರಾಹ್ಮಣರು ಮತ್ತು ಗೃಹಸ್ಥರು – ಒಂದೇ ಉತ್ತರ ನೀಡಿದರು: 'ಮಹಾರಾಜರು ಯಜ್ಞವನ್ನು ಆಚರಿಸಲಿ. ಕಾಲ ಪ್ರಶಸ್ತವಾಗಿದೆ, ಮಹಾಪ್ರಭುವೆ!'

೨೪. "ವಿಜೇತ ದೊರೆ – ಬುದ್ಧಿಶಾಲಿ ಮತ್ತು ಅನೇಕ ವಿಧಗಳಲ್ಲಿ ಪ್ರತಿಭಾವಂತನಾಗಿದ್ದನು. ಅವನ ರಾಜಪುರೋಹಿತನೂ ಅಷ್ಟೇ ಬುದ್ಧಿಶಾಲಿ ಮತ್ತು ಪ್ರತಿಭಾವಂತನಾಗಿದ್ದನು.

೨೫. "ಓ ಬ್ರಾಹ್ಮಣನೇ, ಯಜ್ಞ ಪ್ರಾರಂಭವಾಗುವ ಮುನ್ನ ಮಹಾರಾಜನಿಗೆ ಆ ರಾಜಪುರೋಹಿತ ಅದು ಏನನ್ನು ಒಳಗೊಳ್ಳುವುದೆಂದು ಹೇಳಿದ.

೨೬. "ಮಹಾಪ್ರಭುಗಳು ಮಹಾ ಯಜ್ಞ ಪ್ರಾರಂಭವಾಗುವ ಮುನ್ನ ಅಥವಾ ಮಹಾಯಜ್ಞವನ್ನು ನಡೆಸುವಾಗ ಅಥವಾ ಮಹಾಯಜ್ಞವನ್ನು ಮುಗಿಸಿದ ಮೇಲೆ ಈ ರೀತಿ ಯಾವುದೇ ವಿಷಾದದ ಭಾವನೆಯನ್ನು ತಾಳಬಾರದು: 'ಅಯ್ಯೋ, ಇದರಲ್ಲಿ ನನ್ನ ಸಂಪತ್ತೆಲ್ಲಾ ವ್ಯಯವಾಯಿತು' ಎಂಬ ಭಾವನೆಯನ್ನು ಇಟ್ಟುಕೊಳ್ಳಬಾರದು.

೨೭. "ಓ ಬ್ರಾಹ್ಮಣನೇ, ಆಮೇಲೆ ಯಜ್ಞ ಪ್ರಾರಂಭವಾಗುವ ಮುನ್ನ ಅದರಲ್ಲಿ ಭಾಗವಹಿಸುವವರಲ್ಲಿ ಏನಾದರೂ ಅನುತಾಪ ಉಂಟಾಗಬಹುದಾದರೆ ಅದನ್ನು ತಡೆಗಟ್ಟುವ ಸಲುವಾಗಿ ರಾಜಪುರೋಹಿತ ಹೇಳಿದನು: 'ಈಗ, ಮಹಾಪ್ರಭುವೇ, ತಮ್ಮ ಯಜ್ಞಕ್ಕೆ ಜನರು ಬರುತ್ತಾರೆ; ಕೆಲವರು ಪ್ರಾಣಿವಧೆ ಮಾಡುತ್ತಾರೆ. ಕೆಲವರು ಅದರಿಂದ ದೂರವಿರುತ್ತಾರೆ; ಕೆಲವರು ದಾನ ಕೊಡದೆ ಇರುವುದನ್ನು ಸ್ವೀಕರಿಸುತ್ತಾರೆ. ಕೆಲವರು ಅದನ್ನು ಸ್ವೀಕರಿಸುವುದಿಲ್ಲ; ಕೆಲವರು ಕಾಮಾಸಕ್ತರಾಗಿ ಕೆಟ್ಟದ್ದಾಗಿ ನಡೆದುಕೊಳ್ಳುತ್ತಾರೆ; ಕೆಲವರು ಅದರಿಂದ ದೂರುವಿರುತ್ತಾರೆ; ಕೆಲವರು ಸುಳ್ಳು ಹೇಳುತ್ತಾರೆ, ಕೆಲವರು ಹೇಳುವುದಿಲ್ಲ; ಕೆಲವರು ನಿಂದಿಸುತ್ತಾರೆ, ಕೆಲವರು ನಿಂದಿಸುವುದಿಲ್ಲ; ಕೆಲವರು ಒರಟಾಗಿ ಮಾತನಾಡುತ್ತಾರೆ, ಕೆಲವರು ಹಾಗೆ ಮಾಡುವುದಿಲ್ಲ; ಕೆಲವರು ವ್ಯರ್ಥ ಹರಟೆ ಹೊಡೆಯುತ್ತಾರೆ, ಕೆಲವರು ಹಾಗೆ ಮಾಡುವುದಿಲ್ಲ; ಕೆಲವರು ದುರಾಸೆ ಪಡುತ್ತಾರೆ, ಕೆಲವರು ದುರಾಸೆ ಪಡುವುದಿಲ್ಲ; ಕೆಲವರು ದ್ವೇಷಕ್ಕೆ ಎಡೆಗೊಡುತ್ತಾರೆ, ಕೆಲವರು ಎಡೆಗೊಡುವುದಿಲ್ಲ; ಕೆಲವರು ಕೆಟ್ಟ ಅಭಿಪ್ರಾಯ ಹೊಂದಿರುತ್ತಾರೆ, ಕೆಲವರು ಒಳ್ಳೆಯ ಅಭಿಪ್ರಾಯ ಹೊಂದಿರುತ್ತಾರೆ; ಇವರಲ್ಲಿ ಪ್ರತಿಯೊಬ್ಬರೂ ತಮಗೆ ಇಷ್ಟಬಂದದ್ದು ಮಾಡಲಿ, ಕೆಟ್ಟದ್ದು ಮಾಡುವವರು, ತಮ್ಮಷ್ಟಕ್ಕೆ ಮಾಡಿಕೊಳ್ಳಲಿ. ಒಳ್ಳೆಯದು ಮಾಡುವವರಿಗೆ ಮಹಾಪ್ರಭುಗಳು ಗೌರವ ನೀಡಲಿ, ಮಹಾರಾಜರು ಅವರನ್ನು ಸಂತುಷ್ಟಿಗೊಳಿಸಲಿ, ಅವರಿಂದ ತಮ್ಮ ಹೃದಯದಲ್ಲಿ ಶಾಂತಿ ಸಿಗಲಿ.'

೨೮. "ಆಮೇಲೆ, ಓ ಬ್ರಾಹ್ಮಣನೇ, ಆ ಯಜ್ಞದಲ್ಲಿ ವೃಷಭಗಳಾಗಲೀ, ಆಡುಗಳಾಗಲೀ, ಪಕ್ಷಿಗಳಾಗಲೀ ಅಥವಾ ಕೊಬ್ಬಿದ ಹಂದಿಗಳಾಗಲೀ ಅಥವಾ ಯಾವುದೇ ಬಗೆಯ ಜೀವರಾಶಿಗಳನ್ನೂ ಬಲಿಕೊಡಲಿಲ್ಲ. ಕಂಬಗಳಿಗಾಗಿ ಮರಗಳನ್ನು ಕಡಿಯಲಿಲ್ಲ, ಯಜ್ಞಭೂಮಿಯಲ್ಲಿ ಹರಡಲು ದರ್ಭೆ ಹುಲ್ಲನ್ನು ಕೊಯ್ಯಲಿಲ್ಲ. ಅಲ್ಲಿ ನೇಮಿಸಿಕೊಂಡಿದ್ದ ಗುಲಾಮರು, ಕೆಲಸಗಾರರು ಮತ್ತು ದೂತರನ್ನು ಬಡಿಗೆಗಳಿಂದಾಗಲೀ, ಭಯದಿಂದಾಗಲೀ ಹೆದರಿಸಿ ಕೆಲಸ ಮಾಡಿಸಲಿಲ್ಲ. ಅವರು ತಮ್ಮ ಕೆಲಸಗಳನ್ನು ಕಣ್ಣೀರು ಸುರಿಸುತ್ತ ನಿರ್ವಹಿಸಲಿಲ್ಲ. ಯಾರ್‍ಯಾರು ನೆರವಾಗಲು ಇಷ್ಟಪಟ್ಟರೋ ಅವರು ಕೆಲಸ ಮಾಡಿದರು. ಯಾರಿಗೆ ಇಷ್ಟವಿರಲಿಲ್ಲವೋ ಅವರು ಕೆಲಸ ಮಾಡಲಿಲ್ಲ. ತನಗೆ ಇಷ್ಟವಾದುದನ್ನು ಪ್ರತಿಯೊಬ್ಬರೂ ಮಾಡಿದರು, ಯಾರಿಗೆ ಇಷ್ಟವಾಗಲಿಲ್ಲವೋ ಅವರು ಮಾಡಲಿಲ್ಲ. ಘೃತ, ಎಣ್ಣೆ, ಬೆಣ್ಣೆ, ಹಾಲು, ಜೇನುತುಪ್ಪ ಮತ್ತು ಸಕ್ಕರೆಗಳಿಂದ ಮಾತ್ರ ಆ ಯಜ್ಞ

ನೆರವೇರಿತು.

೨೯. "ನೀನೇನಾದರೂ ಯಜ್ಞ ಮಾಡಬಯಸಿದರೆ ನಿನ್ನ ಯಜ್ಞ ಆ ಮಹಾರಾಜ ವಿಜೇತನ ರೀತಿಯದಾಗಿರಲಿ. ಯಜ್ಞಗಳು ವ್ಯರ್ಥ. ಪ್ರಾಣಿ ಯಜ್ಞಗಳು ಕ್ರೌರ್ಯಗಳು. ಯಜ್ಞಗಳು ಧರ್ಮದ ಭಾಗವಾಗಲು ಸಾಧ್ಯವಿಲ್ಲ. ಪ್ರಾಣಿಬಲಿಯಿಂದ ನೀನು ಸ್ವರ್ಗಕ್ಕೆ ಹೋಗುತ್ತೀಯೆ ಎನ್ನುವ ಧರ್ಮ ಅತ್ಯಂತ ಕೆಟ್ಟ ರೀತಿಯ ಧರ್ಮ."

೩೦. "ಓ ಗೌತಮ, ಪ್ರಾಣಿಬಲಿ ಇಲ್ಲದೆ ಹೆಚ್ಚು ಫಲ ಮತ್ತು ಲಾಭಕರವಾದ ಬೇರೆ ಯಜ್ಞಗಳು ಏನಾದರೂ ಇವೆಯೇ? ಎಂದು ಕೇಳುವ ಕುತೂಹಲವುಳ್ಳವನಾಗಿದ್ದೇನೆ."

೩೧. "ಹೌದು, ಓ ಬ್ರಾಹ್ಮಣ, ಉಂಟು."

೩೨. "ಓ ಗೌತಮ, ಅವು ಯಾವುವು?"

೩೩. "ಜೀವನಾಶದ ವರ್ಜನೆ, ದಾನ ಕೊಡದಿರುವುದನ್ನು ತೆಗೆದುಕೊಳ್ಳದಿರುವುದು, ಕಾಮಾಸಕ್ತಿಯ ವಿಷಯದಲ್ಲಿ ಪಾಪಕರವಾಗಿ ನಡೆದುಕೊಳ್ಳದಿರುವುದು, ಸುಳ್ಳು ಹೇಳದಿರುವುದು, ಬೇಜವಾಬ್ದಾರಿಯ ಮೂಲವಾದ ತೀಕ್ಷ್ಣವಾದ ಮತ್ತುಬರಿಸುವ ಹುಚ್ಚು ಹಿಡಿಸುವ ಮದ್ಯಗಳ ವರ್ಜನೆ, ಈ ತತ್ತ್ವಗಳನ್ನು ಯಾರು ಹೃದಯಪೂರ್ವಕವಾಗಿ ನಂಬಿ ಆಚರಿಸುತ್ತಾರೋ ಅವರದು ಅಪಾರವಾಗಿ ದಾನ ಮಾಡುವುದಕ್ಕಿಂತ, ನಿರಂತರ ಭಿಕ್ಷೆ ನೀಡುವುದಕ್ಕಿಂತ, ವಾಸಸ್ಥಳಗಳನ್ನು ದಾನ ಮಾಡುವುದಕ್ಕಿಂತ, ಉಪದೇಶ ಕೊಡುವುದಕ್ಕಿಂತ ಅತ್ಯುತ್ತಮವಾದ ಯಜ್ಞವಾಗುತ್ತದೆ."

೩೪. ಹೀಗೆ ಅವನು ಉಪದೇಶಿಸಿದ ಮೇಲೆ, ಬ್ರಾಹ್ಮಣನಾದ ಕೂಟದಂತನು ತಥಾಗತನಿಗೆ ಹೇಳಿದನು: "ಓ ಗೌತಮ, ಅತ್ಯಂತ ಶ್ರೇಷ್ಠವಾದ ಮಾತುಗಳು ನಿನ್ನಿಂದ ಬಂದಿವೆ. ಇದು ಅಮೃತವಾಣಿ."

## (೨)

೧. ಈಗ ಬ್ರಾಹ್ಮಣನಾದ ಉಜ್ಜಯ ತಥಾಗತನಿಗೆ ಹೇಳಿದನು:

೨. "ಮಾನ್ಯ ಗೌತಮ ಯಜ್ಞವನ್ನು ಪ್ರಶಂಸಿಸುತ್ತಾನೆಯೇ, ದಯವಿಟ್ಟು ತಿಳಿಸಬೇಕು."

೩. "ಇಲ್ಲ ಬ್ರಾಹ್ಮಣನೇ, ಎಲ್ಲಾ ಯಜ್ಞಗಳನ್ನೂ ನಾನು ಪ್ರಶಂಸಿಸುವುದಿಲ್ಲ. ಆದಾಗ್ಯೂ ಎಲ್ಲಾ ಯಜ್ಞಗಳಿಗೂ ಪ್ರಶಂಸೆಯನ್ನು ನಿರಾಕರಿಸಲಾರ. ಬ್ರಾಹ್ಮಣನೇ, ಯಾವ ಯಜ್ಞದಲ್ಲಿ ಗೋವುಗಳ ವಧೆಯಾಗುತ್ತದೆಯೋ, ಮೇಕೆ ಕುರಿಗಳ ಬಲಿಯಾಗುತ್ತದೆಯೋ, ಕೋಳಿ ಹಂದಿಗಳು ಆಹುತಿಯಾಗುತ್ತವೆಯೋ, ನಾನಾ ಬಗೆಯ ಜೀವರಾಶಿಗಳು ನಾಶವಾಗುತ್ತವೆಯೋ, ವಧೆಯನ್ನು ಒಳಗೊಳ್ಳುವ ಯಜ್ಞಗಳನ್ನು ನಾನು ಪ್ರಶಂಸಿಸುವುದಿಲ್ಲ." "ಹಾಗೇಕೆ?"

೪. "ಬ್ರಾಹ್ಮಣನೇ, ವಧೆಯನ್ನು ಒಳಗೊಳ್ಳುವ ಅಂಥ ಯಜ್ಞದ ಹತ್ತಿರ ಯೋಗ್ಯರಾದವರು ಅಥವಾ ಯೋಗ್ಯಮಾರ್ಗದಲ್ಲಿ ನಡೆಯುವವರು ಸುಳಿಯುವುದಿಲ್ಲ."

೫. "ಆದರೆ ಬ್ರಾಹ್ಮಣನೇ, ಯಾವ ಯಜ್ಞದಲ್ಲಿ ಗೋವುಗಳ ಸಂಹಾರವಾಗುವುದಿಲ್ಲವೋ, ಜೀವರಾಶಿಗಳು ನಾಶವಾಗುವುದಿಲ್ಲವೋ, ಯಾವ ಯಜ್ಞ ಕಟುಕತನವಿರುವುದಿಲ್ಲವೋ ಅಂಥ ಯಜ್ಞವನ್ನು ನಾನು ಪ್ರಶಂಸಿಸುತ್ತೇನೆ. ಉದಾಹರಣೆಗೆ, ಕುಟುಂಬದ ಸೌಖ್ಯಕ್ಕೆ ದೀರ್ಘಕಾಲದಿಂದ ನಡೆದುಬಂದಿರುವ

ದಾನವನ್ನು, ನೈವೇದ್ಯವನ್ನು ನಾನು ಪ್ರಶಂಸಿಸುತ್ತೇನೆ."

೬. "ಏಕೆ ಹಾಗೆ?" "ಏಕೆಂದರೆ, ಬ್ರಾಹ್ಮಣನೇ, ಯೋಗ್ಯರಾದವರು, ಯೋಗ್ಯಮಾರ್ಗದಲ್ಲಿ ನಡೆಯುವವರು ಯಾವ ಯಜ್ಞದಲ್ಲಿ ಕಟುಕತನವಿರುವುದಿಲ್ಲವೋ ಅಲ್ಲಿಗೆ ಬರುತ್ತಾರೆ."

(೩)

೧. ಬ್ರಾಹ್ಮಣ ಉಜ್ಜಯ ಕೇಳಿದ ಪ್ರಶ್ನೆಯನ್ನೇ ಬ್ರಾಹ್ಮಣ ಉದಯನ ತಥಾಗತನನ್ನು ಕೇಳಿದನು.

೨. "ಮಾನ್ಯ ಗೌತಮ ಯಜ್ಞವನ್ನು ಪ್ರಶಂಸಿಸುತ್ತಾರೆಯೇ?"
ಉಜ್ಜಯನಿಗೆ ನೀಡಿದ ಉತ್ತರವನ್ನೇ ಬುದ್ಧ ಅವನಿಗೆ ನೀಡಿದನು.

೩. ಅವನು ನುಡಿದನು:

"ಸಕಾಲದಲ್ಲಿ ಮಾಡಿದ ಯೋಗ್ಯ ಯಜ್ಞವೇ ಸೂಕ್ತ,
ಹಿಂಸೆಯಿಂದ ಮುಕ್ತವಿದ್ದಾಗ, ದೇವಜೀವನದಲ್ಲಿ
ಚೆನ್ನಾಗಿ ತರಬೇತಿ ಹೊಂದಿದಂಥವರು,
ಭೂಮಿಯಲ್ಲೇ ಇದ್ದು ತಮ್ಮ ವಸ್ತ್ರ ಹಿಂದೆ ಸರಿಸಿದವರು
ಕಾಲ ಮುಗಿದು ಹೋಗುವಾಗ ಹತ್ತಿರ ಬರುವವರು.
ಅರ್ಹತೆಯಲ್ಲಿ ನಿಷ್ಣಾತರಾದ ಅಂಥವರನ್ನೇ ಜ್ಞಾನಿಗಳು ಶ್ಲಾಘಿಸುವರು.

"ಋಜು ಜೀವನ ನಡೆಸುವವರು, ಯಜ್ಞ ಅಥವಾ ಶ್ರದ್ಧೆಯ
ಕ್ರಿಯೆಯಲ್ಲಿ ಪುಣ್ಯದ ಋಜುಕ್ಷೇತ್ರಕ್ಕೆ ಅರ್ಪಿಸಿದ
ನೈವೇದ್ಯ ವರ್ಧಿಸುತ್ತದೆ. ದೇವರು ಇದರಿಂದ
ಸುಪ್ರೀತರಾಗುತ್ತಾರೆ. ಹೀಗೆ ನೈವೇದ್ಯ ಅರ್ಪಿಸಿದ
ಶೀಲವಂತರು ವಿವೇಕಿಗಳಾಗಿ, ದುಃಖಮುಕ್ತವಾದ
ಆನಂದಲೋಕವನ್ನು ಪಡೆಯುತ್ತಾರೆ."

## ೬. ಊಹೆಯ ಮೇಲೆ ನಿಂತ ನಂಬಿಕೆ ಧಮ್ಮವಲ್ಲ

(೧)

೧. "(i) ನಾನು ಹಿಂದಿನ ಯುಗಗಳಲ್ಲಿ ಇದ್ದೆನೇ? (ii) ನಾನು ಹಿಂದಿನ ಯುಗಗಳಲ್ಲಿ ಇರಲಿಲ್ಲವೇ? (iii) ಆಗ ನಾನು ಏನಾಗಿದ್ದೆ? (iv) ನಾನು ಯಾವುದರಿಂದ ಯಾವುದಕ್ಕೆ ಸಾಗಿದೆ? (v) ನಾನು ಮುಂಬರುವ ಯುಗಗಳಲ್ಲಿ ಇರುತ್ತೇನೆಯೇ? (vi) ನಾನು ಮುಂಬರುವ ಯುಗಗಳಲ್ಲಿ ಇರುವುದಿಲ್ಲವೇ? (vii) ನಾನು ಆಗ ಏನಾಗಿರುತ್ತೇನೆ? (viii) ಆಗ ನಾನು ಹೇಗೆ ಇರುತ್ತೇನೆ (ix)

ಯಾವುದರಿಂದ ಯಾವುದಕ್ಕೆ ಸಾಗುತ್ತೇನೆ?–ಇಂಥ ಪ್ರಶ್ನೆಗಳನ್ನು ಕೇಳುವುದು ಸಾಮಾನ್ಯವಾಗಿತ್ತು ಅಥವಾ ಮತ್ತೆ ಅವನು ಈಗ ಆತ್ಮದ ಬಗ್ಗೆ ಸಂದೇಹಿಯಾಗಿ ಹೀಗೆ ಕೇಳಿಕೊಳ್ಳುತ್ತಾನೆ– (i) ನಾನು ಇದ್ದೇನೆಯೇ? (ii) ನಾನು ಇಲ್ಲವೇ? (iii) ನಾನು ಯಾರು? (iv) ನಾನು ಹೇಗಿದ್ದೇನೆ? (v) ನನ್ನ ಅಸ್ತಿತ್ವ ಎಲ್ಲಿಂದ ಬಂತು? (vi) ಎಲ್ಲಿಗೆ ಅದು ಹೋಗುತ್ತದೆ?"

೨. ಹೀಗೆ ವಿಶ್ವದ ಬಗ್ಗೆ ವಿವಿಧ ಪ್ರಶ್ನೆಗಳನ್ನು ಎತ್ತಲಾಯಿತು. ಅವುಗಳಲ್ಲಿ ಕೆಲವು ಈ ರೀತಿ ಇದ್ದವು:

೩. ವಿಶ್ವ ಹೇಗೆ ಸೃಷ್ಟಿಯಾಯಿತು? ಅದು ಶಾಶ್ವತವೇ?

೪. ಮೊದಲ ಪ್ರಶ್ನೆಗೆ ಕೆಲವರು ವಿಶ್ವ ಬ್ರಹ್ಮನಿಂದ ಸೃಷ್ಟಿಯಾಯಿತು ಎಂದು ಉತ್ತರಿಸಿದರು. ಇನ್ನು ಕೆಲವರು ಪ್ರಜಾಪತಿಯಿಂದ ಸೃಷ್ಟಿಯಾಯಿತು ಎಂದು ಹೇಳಿದರು.

೫. ಎರಡನೆಯ ಪ್ರಶ್ನೆಗೆ ಉತ್ತರವಾಗಿ ಕೆಲವರು 'ವಿಶ್ವ ಶಾಶ್ವತ' ಎಂದು ಹೇಳಿದರು. ಕೆಲವರು ಶಾಶ್ವತವಲ್ಲ ಎಂದು ಹೇಳಿದರು. ಕೆಲವರು ಅದು ಸಾಂತ ಎಂದರು. ಅದು ಅನಂತ ಎಂದು ಇತರರು ಹೇಳಿದರು.

೬. ಈ ಪ್ರಶ್ನೆಗಳಿಗೆ ಉತ್ತರಿಸಲು ಬುದ್ಧ ನಿರಾಕರಿಸಿದನು. ಅಂಥ ಪ್ರಶ್ನೆಗಳನ್ನು ತಲೆಕೆಟ್ಟವರು ಮಾತ್ರ ಕೇಳಬೇಕು ಮತ್ತು ಉತ್ತರಿಸಬೇಕು ಎಂದು ಆತ ಹೇಳಿದನು.

೭. ಈ ಪ್ರಶ್ನೆಗಳಿಗೆ ಉತ್ತರಿಸಲು ಸರ್ವಜ್ಞತ್ವ ಇರಬೇಕು. ಅದು ಯಾರಿಗೂ ಇಲ್ಲ.

೮. ಈ ಪ್ರಶ್ನೆಗಳಿಗೆ ಉತ್ತರಿಸಲು ತಾನು ಸರ್ವಜ್ಞನಲ್ಲ ಎಂದು ಆತ ಹೇಳಿದನು. ಯಾರಿಗೂ ಎಲ್ಲವನ್ನೂ ತಿಳಿಯಲು ಸಾಧ್ಯವಿಲ್ಲ. ನಾವು ತಿಳಿಯಬೇಕೆಂದಿರುವುದು ಆ ಕಾಲದಲ್ಲಿ ಗೊತ್ತಾಗುತ್ತದೆ ಎಂದೂ ಹೇಳಲಾಗುವುದಿಲ್ಲ. ಎಲ್ಲ ಕಾಲದಲ್ಲಿಯೂ ಅಜ್ಞೇಯವಾದುದು ಏನೋ ಇರುತ್ತದೆ.

೯. ಈ ಕಾರಣಗಳಿಗಾಗಿ ಅಂಥ ತತ್ತ್ವಗಳನ್ನು ತನ್ನ ಧರ್ಮದಿಂದ ಹೊರಗಿಟ್ಟನು.

೧೦. ಇಂಥ ಸಿದ್ಧಾಂತಗಳನ್ನು ಒಳಗೊಂಡ ಧರ್ಮ ಸ್ವೀಕರಿಸಲು ಯೋಗ್ಯವಲ್ಲ ಎಂದು ಅವನು ಪರಿಗಣಿಸಿದನು.

## (೨)

೧. ಬುದ್ಧನ ಸಮಕಾಲೀನರು ತಮ್ಮ ಧರ್ಮದ ಆಧಾರವಾಗಿ ಮಾಡಿಕೊಂಡಿದ್ದ ತತ್ತ್ವಗಳು: (೧) ಆತ್ಮ ಮತ್ತು (೨) ವಿಶ್ವದ ಉಗಮಕ್ಕೆ ಸಂಬಂಧಿಸಿದವುಗಳಾಗಿದ್ದವು.

೨. ಅವರು ಆತ್ಮದ ಬಗ್ಗೆ ಕೆಲವು ಪ್ರಶ್ನೆಗಳನ್ನು ಎತ್ತಿದರು. ಅವೆಂದರೆ : "(೧) ನಾನು ಯುಗಯುಗಗಳ ಹಿಂದೆ ಇದ್ದೆನೆ? (೨) ನಾನು ಯುಗಯುಗಗಳ ಹಿಂದೆ ಇರಲಿಲ್ಲವೇ? (೩) ಆಗ ನಾನು ಏನಾಗಿದ್ದೆ? (೪) ನಾನು ಯಾವುದರಿಂದ ಯಾವುದಕ್ಕೆ ಸಾಗಿದೆ? (೫) ಮುಂಬರುವ ಯುಗಗಳಲ್ಲಿ ನಾನು ಇರುತ್ತೇನೆಯೇ? (೬) ಮುಂಬರುವ ಯುಗಗಳಲ್ಲಿ ನಾನು ಇರುತ್ತೇನೆಯೇ? (೬) ಮುಂಬರುವ ಯುಗಗಳಲ್ಲಿ ನಾನು ಇರುವುದಿಲ್ಲವೇ? (೭) ಆಗ ನಾನು ಏನಾಗಿರುತ್ತೇನೆ? (೮) ಆಗ ನಾನು ಹೇಗಿರುತ್ತೇನೆ ? (೯) ನಾನು ಯಾವುದರಿಂದ ಯಾವುದಕ್ಕೆ ಸಾಗುತ್ತೇನೆ ಅಥವಾ ಅವನು ಈಗ ಆತ್ಮದ ಬಗ್ಗೆ ಹೀಗೆ ಕೇಳಿಕೊಳ್ಳುತ್ತಿದ್ದನು– (i) ನಾನು ಇದ್ದೇನೆಯೇ? (ii) ನಾನು ಇಲ್ಲವೇ? (iii) ನಾನು ಏನಾಗಿದ್ದೇನೆ? (iv) ನಾನು ಹೇಗಿದ್ದೇನೆ? (v) ನನ್ನ ಇರುವಿಕೆ ಎಲ್ಲಿಂದ

ಬಂತು? (vi) ಅದು ಎಲ್ಲಿಗೆ ಸಾಗುತ್ತದೆ?"

೩. ಇತರರು ವಿಶ್ವದ ಉಗಮದ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು.

೪. ಕೆಲವರು ಅದನ್ನು ಬ್ರಹ್ಮ ಸೃಷ್ಟಿಸಿದ್ದಾನೆಂದು ಹೇಳಿದರು.

೫. ಇತರರು ಅದನ್ನು ಪ್ರಜಾಪತಿ ತನ್ನನ್ನು ಬಲಿಕೊಟ್ಟುಕೊಂಡು ಸೃಷ್ಟಿಸಿದನು ಎಂದು ಹೇಳಿದರು.

೬. ಇತರ ಉಪದೇಶಕರು ಇತರ ಪ್ರಶ್ನೆಗಳನ್ನು ಎತ್ತಿದರು: "ಪ್ರಪಂಚ ಶಾಶ್ವತವಾದುದು, ಪ್ರಪಂಚ ಶಾಶ್ವತವಾದುದಲ್ಲ, ಪ್ರಪಂಚ ಸಾಂತವಾದುದು, ಪ್ರಪಂಚ ಅನಂತವಾದುದು, ದೇಹವೇ ಜೀವ, ದೇಹವೇ ಬೇರೆ, ಜೀವವೇ ಬೇರೆ, ಸತ್ಯಶೋಧಕ ಸಾವಿನ ನಂತರ ಇರುತ್ತಾನೆ, ಸತ್ಯಶೋಧಕ ಸಾವಿನ ನಂತರ ಇರುವುದಿಲ್ಲ. ಅವನು ಇರುತ್ತಾನೆ ಹಾಗೂ ಸಾವಿನ ನಂತರ ಇರುವುದಿಲ್ಲ, ಅವನು ಇಲ್ಲ ಹಾಗೂ ಸಾವಿನ ನಂತರ ಇರುವುದಿಲ್ಲ."

೭. ಇಂಥ ಪ್ರಶ್ನೆಗಳನ್ನು ತಲೆಕೆಟ್ಟವರು ಕೇಳುತ್ತಾರೆಂದು ಬುದ್ಧ ಹೇಳಿದನು.

೮. ಈ ಮತೀಯ ಸಿದ್ಧಾಂತಗಳನ್ನು ಬುದ್ಧ ಏಕೆ ಖಂಡಿಸಿದ ಎಂಬುದಕ್ಕೆ ಮೂರು ಕಾರಣಗಳಿದ್ದವು.

೯. ಮೊದಲನೆಯದಾಗಿ, ಅವುಗಳನ್ನು ಧರ್ಮದ ಭಾಗವನ್ನಾಗಿ ಮಾಡುವ ಅಗತ್ಯವಿರಲಿಲ್ಲ.

೧೦. ಎರಡನೆಯದಾಗಿ, ಇವುಗಳನ್ನು ಉತ್ತರಿಸಲು ಸರ್ವಜ್ಞನಾಗಬೇಕಾಗಿದೆ. ಇದನ್ನು ಆತ ತನ್ನ ಉಪದೇಶಗಳಲ್ಲಿ ಒತ್ತಿಹೇಳಿದ.

೧೧. ಅದೇ ಸಮಯದಲ್ಲಿ ಆತ 'ಯಾರೂ ಎಲ್ಲವನ್ನೂ ಕಂಡಿಲ್ಲ, ತಿಳಿದಿಲ್ಲ' ಎಂದು ಹೇಳಿದನು. ಜ್ಞಾನಕ್ಕೆ ಕೊನೆಯೇ ಇಲ್ಲ. ಯಾವಾಗಲೂ ಏನಾದರೂ ತಿಳಿಯುವುದು ಇದ್ದೇ ಇರುತ್ತದೆ.

೧೨. ಮೂರನೆಯ ವಾದವೆಂದರೆ, ಈ ಸಿದ್ಧಾಂತಗಳೆಲ್ಲ ಕೇವಲ ಊಹಾತ್ಮಕವಾದವು. ಅವುಗಳನ್ನು ಪರೀಕ್ಷಿಸಿಲ್ಲ ಮತ್ತು ಅವುಗಳನ್ನು ಎಂದೂ ಪರೀಕ್ಷಿಸಲು ಸಾಧ್ಯವಿಲ್ಲ.

೧೩. ಅವು ಹರಿಯಬಿಟ್ಟ ಕಲ್ಪನೆಯ ಫಲವಾಗಿವೆ. ಅವುಗಳಲ್ಲಿ ವಾಸ್ತವತೆ ಇಲ್ಲ.

೧೪. ಜೊತೆಗೆ ಮನುಷ್ಯ ಮನುಷ್ಯರ ಸಂಬಂಧದಲ್ಲಿ ಈ ಊಹಾತ್ಮಕ ಸಿದ್ಧಾಂತಗಳ ಉಪಯೋಗವೇನು? ಏನೇನೂ ಇಲ್ಲ.

೧೫. ಜಗತ್ತು ಸೃಷ್ಟಿಯಾಯಿತೆಂದು ಬುದ್ಧ ನಂಬಲಿಲ್ಲ. ಜಗತ್ತು ವಿಕಾಸವಾಯಿತೆಂದು ಆತ ನಂಬಿದ್ದ.

## ೭. ಧಮ್ಮದ ಗ್ರಂಥಗಳನ್ನು ಓದುವುದು ಧಮ್ಮವಲ್ಲ

೧. ಬ್ರಾಹ್ಮಣರು ತಮ್ಮೆಲ್ಲ ಒತ್ತನ್ನು ಜ್ಞಾನದ ಮೇಲೆ ಹಾಕಿದ್ದರು. ಎಲ್ಲದರ ಸಾರಸರ್ವಸ್ವ ಜ್ಞಾನ ಎಂದು ಅವರು ಬೋಧಿಸಿದ್ದರು. ಆಮೇಲೆ ಏನನ್ನೂ ಪರಿಗಣಿಸಬೇಕಾಗಿಲ್ಲ ಎಂದಿದ್ದರು.

೨. ಇದಕ್ಕೆ ಪ್ರತಿಯಾಗಿ ಬುದ್ಧ ಎಲ್ಲರಿಗೂ ವಿದ್ಯೆ ಎಂಬುದರ ಪ್ರತಿಪಾದಕನಾಗಿದ್ದನು. ಅಲ್ಲದೆ ಆತ ಜ್ಞಾನಕ್ಕಾಗಿ ಜ್ಞಾನ ಎಂಬುದರ ಬದಲು, ಮನುಷ್ಯ ಜ್ಞಾನವನ್ನು ಬಳಸುವುದರ ಬಗ್ಗೆ ಆತ ಕಾಳಜಿ ವಹಿಸಿದ್ದನು.

೩. ತತ್ಪರಿಣಾಮವಾಗಿ ಆತ ಜ್ಞಾನ ಇರುವವನು ಶೀಲವಂತನಾಗಿರಬೇಕೆಂದೂ, ಶೀಲವಿಲ್ಲದ ಜ್ಞಾನ ಅಪಾಯಕಾರಿಯೆಂದೂ ವಿಶೇಷವಾಗಿ ಒತ್ತಿಹೇಳಿದ್ದ.

೪. ಪ್ರಜ್ಞೆಗಿಂತ ಶೀಲ ಮುಖ್ಯವಾದುದೆಂದು ಆತ ಭಿಕ್ಕು ಪಾತಿಸೇನನಿಗೆ ಹೇಳಿದುದರಲ್ಲಿ ಚೆನ್ನಾಗಿ

ಚಿತ್ರಿತವಾಗಿದೆ.

೫. ಹಿಂದಿನ ಕಾಲದಲ್ಲಿ ಬುದ್ಧ ಶ್ರಾವಸ್ತಿಯಲ್ಲಿ ತಂಗಿದ್ದಾಗ ಪಾತಿಸೇನನೆಂಬ ವೃದ್ಧ ಸಂನ್ಯಾಸಿ ಇದ್ದನು. ಅವನು ಮುಂಗೋಪಿ ಮತ್ತು ದಡ್ಡನಾಗಿದ್ದನು. ಒಂದು ಗಾಥವನ್ನು ಕಂಠಪಾಠ ಮಾಡಿಕೊಳ್ಳಲೂ ಅವನಿಗೆ ಆಗುತ್ತಿರಲಿಲ್ಲ.

೬. ಅದಕ್ಕಾಗಿ ಬುದ್ಧ ತನ್ನ ೫೦೦ ಮಂದಿ ಅರ್ಹಂತರನ್ನು ದಿನಂಪ್ರತಿ ಅವನಿಗೆ ಹೇಳಿಕೊಡಲು ಆಜ್ಞಾಪಿಸಿದ. ಮೂರು ವರ್ಷವಾದರೂ ಒಂದು ಗಾಥವನ್ನು ಜ್ಞಾಪಕದಲ್ಲಿಟ್ಟುಕೊಳ್ಳಲೂ ಅವನಿಗೆ ಸಾಧ್ಯವಾಗಲಿಲ್ಲ.

೭. ಆಗ ದೇಶದ ನಾಲ್ಕು ವರ್ಣದ ಜನರೂ ಅವನ ಅಜ್ಞಾನವನ್ನು ಕಂಡು ಅವನನ್ನು ಗೇಲಿ ಮಾಡತೊಡಗಿದರು. ಅದನ್ನು ನೋಡಿ ಅವನ ಸ್ಥಿತಿಗೆ ಬುದ್ಧ ಕನಿಕರಿಸಿ ಅವನನ್ನು ತನ್ನ ಪಕ್ಕಕ್ಕೆ ಕರೆದನು. ಮುಂದಿನ ಪದ್ಯವನ್ನು ಸೌಮ್ಯವಾಗಿ ಹೇಳಿಕೊಟ್ಟನು: "ಯಾರು ತನ್ನ ಬಾಯಿಯನ್ನು ಬಿಗಿಹಿಡಿಯುತ್ತಾನೋ, ತನ್ನ ಭಾವನೆಗಳನ್ನು ಸಂಯಮದಲ್ಲಿಟ್ಟುಕೊಳ್ಳುತ್ತಾನೋ, ತನ್ನ ದೇಹದಿಂದ ತಪ್ಪು ಮಾಡುವುದಿಲ್ಲವೋ ಅವನಿಗೆ ಬಿಡುಗಡೆ ದೊರೆಯುತ್ತದೆ."

೮. ತನ್ನ ಬಗ್ಗೆ ಗುರುವಿನ ಒಳ್ಳೆಯತನದ ಭಾವನೆಯಿಂದ ಮನ ಕರಗಿದ ಪಾತಿಸೇನನಿಗೆ ತನ್ನ ಹೃದಯ ತೆರೆದಂತಾಯಿತು, ಒಮ್ಮೆಲೆ ಆ ಪದ್ಯವನ್ನು ಪುನರುಚ್ಚರಿಸಿದನು.

೯. ಆಗ ಬುದ್ಧ ಮುಂದುವರಿದು ಅವನಿಗೆ ಹೀಗೆ ಹೇಳಿದನು: "ಈಗ ನೀನು ಮುದುಕನಾಗಿದ್ದೀಯೆ. ಒಂದು ಪದ್ಯವನ್ನು ಮಾತ್ರ ಪುನರುಚ್ಚರಿಸಬಲ್ಲೆ. ಜನರು ಇದನ್ನು ಬಲ್ಲರು. ಆದರೂ ಅವರು ನಿನ್ನನ್ನು ಗೇಲಿ ಮಾಡುತ್ತಾರೆ. ಆದ್ದರಿಂದ ನಿನಗೆ ಈ ಪದ್ಯದ ಅರ್ಥವನ್ನು ವಿವರಿಸುತ್ತೇನೆ. ಗಮನವಿಟ್ಟು ಆಲಿಸು."

೧೦. ಆಗ ಬುದ್ಧ, ದೇಹಕ್ಕೆ ಸಂಬಂಧಿಸಿದ ಮೂರು ಕಾರಣಗಳನ್ನೂ, ಬಾಯಿಗೆ ಸಂಬಂಧಿಸಿದ ನಾಲ್ಕು ಕಾರಣಗಳನ್ನೂ, ಭಾವನೆಗಳಿಗೆ ಸಂಬಂಧಿಸಿದ ಮೂರು ಕಾರಣಗಳನ್ನೂ, ಅವುಗಳನ್ನು ನಿರ್ನಾಮ ಮಾಡುವುದರಿಂದ ಮನುಷ್ಯರು ಬಿಡುಗಡೆ ಪಡೆಯುತ್ತಾರೆಂದೂ ಸ್ಪಷ್ಟಪಡಿಸಿದನು. ಹೀಗೆ ವಿವರಿಸಿದ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡ ಆ ಸಂನ್ಯಾಸಿ ಅರಹಂತನ ಸ್ಥಿತಿಯನ್ನು ಗಳಿಸಿದನು.

೧೧. ಆಗ, ಇದೇ ಸಮಯದಲ್ಲಿ, ಅಲ್ಲಿ ೫೦೦ ಜನ ಭಿಕ್ಷುಣಿಯರು ತಮ್ಮ ವಿಹಾರದಲ್ಲಿ ತಂಗಿದ್ದರು. ತಮಗೆ ಧರ್ಮದಲ್ಲಿ ಮಾರ್ಗದರ್ಶನ ಮಾಡಲು ಒಬ್ಬ ಭಿಕ್ಕುವನ್ನು ಕಳುಹಿಸಿ ಕೊಡಬೇಕೆಂದು ಅವರು ತಮ್ಮಲ್ಲಿ ಒಬ್ಬರನ್ನು ಬುದ್ಧನ ಬಳಿಗೆ ಕಳುಹಿಸಿದರು.

೧೨. ಅವರ ಕೋರಿಕೆಯನ್ನು ಆಲಿಸಿ, ಆ ಉದ್ದೇಶಕ್ಕಾಗಿ ಬುದ್ಧ ಅವರಲ್ಲಿಗೆ ವೃದ್ಧ ಸಂನ್ಯಾಸಿ ಪಾತಿಸೇನ ಹೋಗಬೇಕೆಂದು ಆಶಿಸಿದನು.

೧೩. ಈ ವ್ಯವಸ್ಥೆ ಮಾಡಲಾಗಿದೆಯೆಂದು ಕೇಳಿ ಆ ಭಿಕ್ಕುಣಿಯರೆಲ್ಲ ಒಟ್ಟಿಗೆ ನಗತೊಡಗಿದರು. ಆಮೇಲೆ ಆತ ಮರುದಿನ ಬಂದ ಮೇಲೆ ಗಾಥವನ್ನು ಹಿಮ್ಮುಖವಾಗಿ ಹೇಳಿ ಆ ವೃದ್ಧನನ್ನು ಗೊಂದಲಗೊಳಿಸಿ ಅವನನ್ನು ನಾಚಿಸಲು ತೀರ್ಮಾನಿಸಿದರು.

೧೪. ಆಗ ಆತ ಮಾರನೆಯ ದಿನ ಬಂದ ನಂತರ ಎಲ್ಲ ಭಿಕ್ಕುಣಿಯರು, ಹಿರಿಯರು, ಕಿರಿಯರು ಎಲ್ಲಾ ಕೂಡಿ ಹೋಗಿ ಆತನಿಗೆ ನಮಸ್ಕರಿಸಿದರು. ಹಾಗೆ ಮಾಡುತ್ತಲೇ ಅವರು ಒಬ್ಬರನ್ನೊಬ್ಬರು ನೋಡಿಕೊಂಡು ನಕ್ಕರು.

೧೫. ಆಮೇಲೆ ಅವರು ಕುಳಿತುಕೊಂಡು ಆತನಿಗೆ ಆಹಾರ ನೀಡಿದರು. ಊಟಮಾಡಿ, ಆತ ಕೈತೊಳೆದುಕೊಂಡನು. ತಮಗೆ ಉಪದೇಶಿಸಬೇಕೆಂದು ಅವರು ಆತನನ್ನು ಬೇಡಿಕೊಂಡರು. ಅದರಂತೆ ಆತ ಉನ್ನತ ಪೀಠಕ್ಕೆ ಹೋಗಿ ಕುಳಿತು ಹೀಗೆ ಹೇಳಿದನು:

೧೬. "ಸೋದರಿಯರೇ! ನನ್ನ ಪ್ರತಿಭೆ ಕಡಿಮೆಯದು; ನನ್ನ ಜ್ಞಾನ ಬಹಳ ಕಮ್ಮಿ. ನನಗೆ ಒಂದೇ ಒಂದು ಗಾಥಾ ಗೊತ್ತು. ಆದರೆ ನಾನು ಅದನ್ನು ಉಚ್ಚರಿಸಿ, ಅದರ ಅರ್ಥ ವಿವರಿಸುತ್ತೇನೆ. ನೀವು ದಯವಿಟ್ಟು ಗಮನವಿಟ್ಟು ಆಲಿಸಿ ಅರ್ಥಮಾಡಿಕೊಳ್ಳಿ."

೧೭. ಆಗ ಎಲ್ಲ ಕಿರಿಯ ಭಿಕ್ಕುಣಿಯರು ಆ ಗಾಥಾವನ್ನು ಹಿಮ್ಮುಖವಾಗಿ ಹೇಳಲು ಪ್ರಯತ್ನಿಸಿದರು. ಆದರೆ, ಅಯ್ಯೋ! ಅವರಿಗೆ ತಮ್ಮ ಬಾಯನ್ನೇ ತೆರೆಯಲು ಸಾಧ್ಯವಾಗಲಿಲ್ಲ. ಅವರಿಗೆ ನಾಚಿಕೆಯಾಗಿ ದುಃಖದಿಂದ ತಲೆ ತಗ್ಗಿಸಿದರು.

೧೮. ಆಗ ಪಾತಿಸೇನನು ಬುದ್ಧ ತನಗೆ ಹೇಳಿಕೊಟ್ಟಂತೆ ಆ ಗಾಥಾವನ್ನು ಉಚ್ಚರಿಸಿ ಅದರ ಅರ್ಥವನ್ನು ವಿವರಿಸತೊಡಗಿದನು.

೧೯. ಆಗ ಆ ಎಲ್ಲಾ ಭಿಕ್ಕುಣಿಯರು ಆತನ ಮಾತು ಕೇಳಿ ಸೋಜಿಗಪಟ್ಟರು. ಆ ಉಪದೇಶ ಕೇಳಿ ಆನಂದಪಟ್ಟರು. ಏಕ ಹೃದಯದಿಂದ ಅದನ್ನು ಸ್ವೀಕರಿಸಿ ಅವರು ಅರ್ಹಂತರಾದರು.

೨೦. ಇದಾದ ಮರುದಿವಸ ಪ್ರಸೇನಜಿತ್ ಮಹಾರಾಜ ಬುದ್ಧನನ್ನೂ ಅವನ ಇಡೀ ಭಿಕ್ಷು ಸಮುದಾಯವನ್ನು ತನ್ನ ಅರಮನೆಯ ಆತಿಥ್ಯದಲ್ಲಿ ಪಾಲ್ಗೊಳ್ಳಬೇಕೆಂದು ಆಹ್ವಾನಿಸಿದನು.

೨೧. ಪಾತಿಸೇನನ ಶ್ರೇಷ್ಠತೆ ಮತ್ತು ಪೂಜ್ಯ ಚರ್ಯೆಯನ್ನು ಬುದ್ಧ ಗಮನಿಸಿ ತನ್ನ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಅವನು ತನ್ನ ಹಿಂದೆ ಬರಬೇಕೆಂದು ಆಶಿಸಿದನು.

೨೨. ಆದರೆ ಅವರು ಅರಮನೆಯ ಬಾಗಿಲಿಗೆ ಬಂದಾಗ, ದ್ವಾರಪಾಲಕ, ಆತನ ಬಗ್ಗೆ ತಿಳಿದಿದ್ದರಿಂದ, ಆತನನ್ನು ಸಭಾಂಗಣದ ಒಳಕ್ಕೆ ಬಿಡದೆ ಹೀಗೆ ಹೇಳಿದನು: "ಒಂದೇ ಒಂದು ಗಾಥಾ ಬಲ್ಲ ಭಿಕ್ಕುವಿಗೆ ನಮ್ಮಲ್ಲಿ ಅತಿಥ್ಯವಿಲ್ಲ; ನಿನ್ನಂಥ ಸಾಮಾನ್ಯ ವ್ಯಕ್ತಿಗಳಿಗೆ ಅವಕಾಶವಿಲ್ಲ. ಉತ್ತಮರಿಗೆ ಅವಕಾಶ ಮಾಡಿಕೊಟ್ಟು ನೀನು ಹಿಂತಿರುಗು".

೨೩. ಹಾಗಾಗಿ ಪಾತಿಸೇನ ಬಾಗಿಲ ಹೊರಗಡೆ ಕುಳಿತುಕೊಂಡನು.

೨೪. ಈಗ ಬುದ್ಧ ವೇದಿಕೆಯನ್ನು ಏರಿದನು, ತನ್ನ ಕೈಗಳನ್ನು ತೊಳೆದುಕೊಂಡನು. ಅರೆ! ಭಿಕ್ಷಾಪಾತ್ರೆಯನ್ನು ಹಿಡಿದ ಪಾತಿಸೇನನ ತೋಳು ಕೋಣೆಯನ್ನು ಪ್ರವೇಶಿಸಿತು.

೨೫. ಆಗ ಮಹಾರಾಜ, ಆತನ ಮಂತ್ರಿಗಳು ಮತ್ತು ನೆರೆದಿದ್ದವರೆಲ್ಲ ಆ ದೃಶ್ಯವನ್ನು ಕಂಡು ಆಶ್ಚರ್ಯಪಟ್ಟು, "ಆಹಾ! ಯಾರಿದು?" ಎಂದು ಕೇಳಿದರು.

೨೬. ಇದಕ್ಕೆ ಬುದ್ಧ "ಇವನು ಪಾತಿಸೇನ, ಸಂನ್ಯಾಸಿ. ಆತ ಈಗ ತಾನೇ ಜ್ಞಾನೋದಯ ಪಡೆದಿದ್ದಾನೆ. ಆತ ನನ್ನ ಭಿಕ್ಷಾಪಾತ್ರೆಯನ್ನು ಹಿಡಿದು ಬರಬೇಕೆಂದು ಆಶಿಸಿದ್ದೆ. ಆದರೆ ದ್ವಾರಪಾಲಕ ಆತನಿಗೆ ಪ್ರವೇಶ ನಿರಾಕರಿಸಿದ್ದಾನೆ."

೨೭. ಹೀಗೆಂದಮೇಲೆ ಆತನಿಗೆ ಪ್ರವೇಶ ದೊರಕಿತು. ಅವನು ಸಭಾಂಗಣಕ್ಕೆ ಬಂದನು.

೨೮. ಆಗ ಪ್ರಸೇನಜಿತ್ ಬುದ್ಧನ ಕಡೆ ತಿರುಗಿ ಹೇಳಿದನು: "ಈ ಪಾತಿಸೇನನ ಸಾಮರ್ಥ್ಯ ತೀರ ಕಡಿಮೆ ಎಂದು ನಾನು ಕೇಳಿರುವೆ. ಅವನಿಗೆ ಒಂದೇ ಒಂದು ಗಾಥಾ ಗೊತ್ತಿದೆ. ಆದರೂ ಆತನಿಗೆ ಹೇಗೆ ಜ್ಞಾನೋದಯ ಲಭಿಸಿತು?"

೨೯. ಅದಕ್ಕೆ ಬುದ್ಧ ಉತ್ತರಿಸಿದ: "ಜ್ಞಾನ ಹೆಚ್ಚಾಗಿರಬೇಕಾಗಿಲ್ಲ; ಶೀಲವೇ ಪ್ರಥಮ ಅಂಶ.

೩೦. "ಈ ಒಂದೇ ಗಾಥಾದ ಮಾತುಗಳ ರಹಸ್ಯ ಶಕ್ತಿಯು ತನ್ನ ಚೇತನವನ್ನು ಭೇದಿಸಲು ಪಾತಿಸೇನ ಅವಕಾಶ ಕೊಟ್ಟಿದ್ದಾನೆ. ಅವನ ದೇಹ, ಬಾಯಿ ಮತ್ತು ಭಾವನೆಗಳೆಲ್ಲ ಪರಿಪೂರ್ಣ ಶಾಂತಿಯನ್ನು ಪಡೆದಿವೆ. ಏಕೆಂದರೆ ಮನುಷ್ಯ ಎಷ್ಟೋ ತಿಳಿದುಕೊಂಡಿರಬಹುದು. ಅವನ ಜ್ಞಾನ ಅವನ ಬಾಳನ್ನು ತಟ್ಟದಿದ್ದರೆ, ನಾಶಕ್ಕೆ ದೂಡುವ ಶಕ್ತಿಯಿಂದ ಅವನು ಬಿಡುಗಡೆಯನ್ನು ಪಡೆಯದಿದ್ದರೆ ಅವನ ಅಷ್ಟೆಲ್ಲ ಪಾಂಡಿತ್ಯದಿಂದ ಏನು ಪ್ರಯೋಜನ?"

೩೧. ಆಮೇಲೆ ಬುದ್ಧ ಹೇಳಿದನು:

೩೨. "ಸಾವಿರಾರು ಶ್ಲೋಕಗಳನ್ನು ಹೇಳಿದರೂ ಅವುಗಳನ್ನು ಅರ್ಥಮಾಡಿಕೊಳ್ಳದೆ ಹೋಗುವ ಓರ್ವ ವ್ಯಕ್ತಿಯ ಸಾಮರ್ಥ್ಯವು ಸರಿಯಾಗಿ ಅರ್ಥ ಮಾಡಿಕೊಂಡು ಉಚ್ಚರಿಸುವ ಮತ್ತು ಅದನ್ನು ಕೇಳಿದ ಕೂಡಲೇ ಮನಸ್ಸನ್ನು ಹತೋಟಿಯಲ್ಲಿಡಲು ಸಮರ್ಥವಾಗುವ ಆ ಒಂದು ವಾಕ್ಯಕ್ಕೆ ಆತನ ಸಾಮರ್ಥ್ಯ ಸಮನಾಗುವುದಿಲ್ಲ. ಅರ್ಥಮಾಡಿಕೊಳ್ಳದೆ ಸಾವಿರ ಶಬ್ದಗಳನ್ನು ಉಚ್ಚರಿಸಿದರೆ ಅದರಿಂದ ಆಗುವ ಲಾಭವೇನು? ಆದರೆ ಒಂದು ಸತ್ಯವನ್ನು ಅರ್ಥಮಾಡಿಕೊಂಡು, ಅದನ್ನು ಕೇಳಿ ಅದರಂತೆ ನಡೆದುಕೊಂಡರೆ ಅದರಿಂದ ಬಿಡುಗಡೆ ಸಿಗುತ್ತದೆ.

೩೩. "ಒಬ್ಬ ಅನೇಕ ಪುಸ್ತಕಗಳನ್ನು ಕಂಠಪಾಠ ಮಾಡಲು ಸಮರ್ಥನಿದ್ದರೂ, ಅವುಗಳನ್ನು ವಿವರಿಸಲು ಬರದಿದ್ದರೆ ಅದರಿಂದ ಲಾಭವೇನು? ಆದರೆ ಧರ್ಮದ ಒಂದು ನುಡಿಯನ್ನು ವಿವರಿಸಿ ಅದರಂತೆ ನಡೆದರೆ, ಅದೇ ಉನ್ನತ ಜ್ಞಾನವನ್ನು ಪಡೆಯುವ ಮಾರ್ಗ."

೩೪. ಈ ಮಾತುಗಳನ್ನು ಕೇಳಿ ಇನ್ನೂರು ಮಂದಿ ಭಿಕ್ಕುಗಳು, ಮಹಾರಾಜ ಮತ್ತು ಆತನ ಮಂತ್ರಿಗಳು ಆನಂದತುಂದಿಲರಾದರು.

## ೮. ಧಮ್ಮಗ್ರಂಥಗಳು ದೋಷಾತೀತವೆಂದು ನಂಬುವುದು ಧಮ್ಮವಲ್ಲ

೧. ವೇದಗಳು ಪವಿತ್ರವಷ್ಟೇ ಅಲ್ಲ, ಪ್ರಾಮಾಣ್ಯದ ವಿಷಯದಲ್ಲಿ ಅವು ಅಂತಿಮ ಎಂದು ಬ್ರಾಹ್ಮಣರು ಘೋಷಿಸಿದ್ದರು.

೨. ಬ್ರಾಹ್ಮಣರು ಘೋಷಿಸಿದ್ದ ವೇದಗಳು ಅಂತಿಮವಷ್ಟೇ ಅಲ್ಲ, ಅವು ದೋಷಾತೀತವೆಂದು ಘೋಷಿಸಿದ್ದರು.

೩. ಈ ವಿಷಯದಲ್ಲಿ ಬುದ್ಧ ಸಂಪೂರ್ಣವಾಗಿ ಬ್ರಾಹ್ಮಣರಿಗೆ ವಿರೋಧವಾಗಿದ್ದನು.

೪. ವೇದಗಳು ಪವಿತ್ರ ಎಂಬುದನ್ನು ಆತ ನಿರಾಕರಿಸಿದನು. ವೇದಗಳು ಹೇಳಿದ್ದೇ ಅಂತಿಮ ಎಂಬುದನ್ನು ಆತ ನಿರಾಕರಿಸಿದನು. ವೇದಗಳು ದೋಷಾತೀತ ಎಂಬುದನ್ನು ಆತ ನಿರಾಕರಿಸಿದನು.

೫. ಬುದ್ಧ ತೆಗೆದುಕೊಂಡ ನಿಲುವನ್ನೇ ಅನೇಕರು ತೆಗೆದುಕೊಂಡಿದ್ದರು. ಆದಾಗ್ಯೂ ಆಮೇಲೆ ಅವರು ಅಥವಾ ಅವರ ಅನುಯಾಯಿಗಳು ತಮ್ಮ ತತ್ತ್ವಶಾಖೆಗಳಿಗೆ ಬ್ರಾಹ್ಮಣರ ಸದ್ಭಾವನೆ ಮತ್ತು ಅವರಿಂದ ಗೌರವ ಪಡೆಯುವ ಸಲುವಾಗಿ ಬಾಗಿದರು. ಆದರೆ ಈ ವಿಷಯದಲ್ಲಿ ಬುದ್ಧ ಎಂದೂ ಜಗ್ಗಲಿಲ್ಲ.

೬. ವೇದಗಳು ನೀರಿಲ್ಲದ ಮರುಭೂಮಿ, ದಾರಿಯಿಲ್ಲದ ಕಗ್ಗಾಡು, ವಾಸ್ತವವಾಗಿ ಅವು ವಿನಾಶಕರ ಎಂದು ತ್ರಿವಿಜ್ಜ ಸುತ್ತದಲ್ಲಿ ಬುದ್ಧ ಘೋಷಿಸಿದ್ದಾನೆ. ಬೌದ್ಧಿಕ ಮತ್ತು ನೈತಿಕ ಪಿಪಾಸೆಯುಳ್ಳ ಯಾರೂ ವೇದಗಳಿಂದ ತಮ್ಮ ಪಿಪಾಸೆಯನ್ನು ಹಿಂಗಿಸಿಕೊಳ್ಳಲಾರರು.

೭. ವೇದಗಳ ದೋಷಾತೀತತೆಯ ಬಗ್ಗೆ ಹೇಳುತ್ತಾ, ಯಾವೂದೂ ದೋಷಾತೀತವಲ್ಲ, ವೇದಗಳೂ ದೋಷಾತೀತವಲ್ಲ ಎಂದು ಆತ ನುಡಿದಿದ್ದಾನೆ. ಎಲ್ಲವನ್ನೂ ಪರೀಕ್ಷೆಗೆ, ಮರುಪರೀಕ್ಷೆಗೆ ಒಳಪಡಿಸಬೇಕೆಂದು ಆತ ಹೇಳಿದ್ದಾನೆ.

೮. ಕಾಲಮರಿಗೆ ಕೊಟ್ಟ ಉಪದೇಶದಲ್ಲಿ ಇದನ್ನು ಆತ ಸ್ಪಷ್ಟಪಡಿಸಿದ್ದಾನೆ.

೯. ಒಮ್ಮೆ ತಥಾಗತ ತನ್ನ ಅನುಯಾಯಿಗಳ ದೊಡ್ಡ ಗುಂಪಿನೊಂದಿಗೆ ಕೋಸಲದೇಶದ ಮೂಲಕ ಸಾಗಿಹೋಗುತ್ತಿದ್ದಾಗ ಕೇಶಪುತ್ತ ಪಟ್ಟಣಕ್ಕೆ ಬಂದನು. ಅಲ್ಲಿ ಕಾಲಮರು ವಾಸಿಸುತ್ತಿದ್ದರು.

೧೦. ತಥಾಗತನ ಆಗಮನವನ್ನು ತಿಳಿದ ಕಾಲಮರು ಅವನು ಇದ್ದೆಡೆಗೆ ಬಂದು ಅವನ ಪಕ್ಕ ಕುಳಿತರು. ಹಾಗೆ ಕುಳಿತುಕೊಂಡ ಕೇಶಪುತ್ತದ ಕಾಲಮರು ತಥಾಗತನಿಗೆ ಹೀಗೆ ಹೇಳಿದರು:

೧೧. "ಪ್ರಭು, ಕೇಶಪುತ್ತಕ್ಕೆ ಬರುವ ಕೆಲವು ಸಂನ್ಯಾಸಿಗಳು ಮತ್ತು ವಿರಕ್ತರು ತಮ್ಮ ವಿಚಾರಗಳನ್ನು ವೈಭವೀಕರಿಸಿ ವಿವರಿಸುತ್ತಾ, ಇತರರ ವಿಚಾರಗಳನ್ನು ಖಂಡಿಸಿ, ಛಿದ್ರಮಾಡಿ, ವಿರೋಧಿಸಿ ನಿಂದಿಸುತ್ತಾರೆ. ಇನ್ನು ಕೆಲವರು ಸಂನ್ಯಾಸಿಗಳು ಮತ್ತು ವಿರಕ್ತರು ಕೇಶಪುತ್ತಕ್ಕೆ ಬರುತ್ತಾರೆ. ಅವರೂ ಸಹ ತಮ್ಮ ನಂಬಿಕೆಗಳನ್ನು ವಿವರಿಸಿ ವೈಭವೀಕರಿಸಿ, ಇತರರ ನಂಬಿಕೆಗಳನ್ನು ಧ್ವಂಸ ಮಾಡಿ, ಹತ್ತಿಕ್ಕಿ, ಅವರ ವಿರುದ್ಧ ನಿಲ್ಲುತ್ತಾರೆ.

೧೨. "ಹಾಗಾಗಿ, ಪ್ರಭುವೇ, ನಾವು ಅನಿಶ್ಚಯದಲ್ಲಿ ಮತ್ತು ಸಂದೇಹದಲ್ಲಿ ಇದ್ದೇವೆ. ಈ ಪೂಜ್ಯ ಸಂನ್ಯಾಸಿಗಳಲ್ಲಿ ಯಾರು ಸತ್ಯ ಹೇಳುತ್ತಾರೆ, ಯಾರು ಸುಳ್ಳು ಹೇಳುತ್ತಾರೆ ಎಂದು ನಾವು ತಿಳಿಯದಾಗಿದ್ದೇವೆ."

೧೩. "ಕಾಲಮರೇ, ನಿಜವಾಗಿಯೂ ಅನುಮಾನಿಸಲು ಒಳ್ಳೆಯ ಕಾರಣವಿದೆ. ನಿಮಗೆ ಒಳ್ಳೆಯ ಕಾರಣವಿದೆ ನೀವು ಸಂದೇಹಿಸಲು", ಎಂದು ತಥಾಗತ ನುಡಿದನು. "ಸತ್ಯವಾಗಿಯೂ ಸರಿಯಾದ ಸಂದರ್ಭದಲ್ಲಿಯೇ ನಿಮಗೆ ಅನಿಶ್ಚಯತೆ ಮತ್ತು ಸಂದೇಹ ಉಂಟಾಗಿದೆ."

೧೪. "ಓ ಕಾಲಮರೇ, ಕೇಳಿ" ಎಂದು ತಥಾಗತ ಮುಂದುವರಿಸಿದನು. "ಕೇವಲ ನೀವು ಕೇಳಿರುವುದನ್ನೇ ನಂಬಬೇಡಿ; ಕೇವಲ ಒಬ್ಬರಿಂದ ಇನ್ನೊಬ್ಬರಿಗೆ ಹಸ್ತಾಂತರವಾಗಿರುವುದನ್ನೇ ನೋಡಿ ನಂಬಬೇಡಿ; ಸಾಮಾನ್ಯವಾಗಿ ವರದಿಯಾಗಿರುವುದನ್ನೇ ನಂಬಬೇಡಿ; ಕೇವಲ ಧರ್ಮಗ್ರಂಥಗಳಲ್ಲಿ ಬರೆದಿದೆ ಎಂದಮಾತ್ರಕ್ಕೆ ಹಾಗೆ ನಂಬಬೇಡಿ; ವಿಚಾರದ ಸೂಕ್ಷ್ಮತೆಗಳಂತೆ ನಡೆಯಬೇಡಿ; ತರ್ಕಶಾಸ್ತ್ರದ ಸೂಕ್ಷ್ಮತೆಗಳಂತೆ ನಡೆಯಬೇಡಿ. ಕೇವಲ ತೋರಿಕೆಗಳ ಮೇಲೆ ಆಧಾರಿತವಾದ ವಿಚಾರಗಳಂತೆ ನಡೆಯಬೇಡಿ. ಕೇವಲ ಅನುಕೂಲಕರವಾದ ನಂಬಿಕೆ ಮತ್ತು ಅಭಿಪ್ರಾಯಗಳನ್ನು ಅನುಸರಿಸಬೇಡಿ; ಯಾವುದೋ ಕೇವಲ ಸಾಚಾದಂತೆ ಕಂಡಿದ್ದರಿಂದಲೇ ಅದನ್ನು ನಂಬಬೇಡಿ; ಯಾರೋ ಸಂನ್ಯಾಸಿ ಅಥವಾ ಪೂಜ್ಯ ಹೇಳಿದರೆಂದ ಮಾತ್ರಕ್ಕೆ ಅದನ್ನು ನಂಬಬೇಡಿ."

೧೫. "ಹಾಗಾದರೆ, ನಾವೇನು ಮಾಡಬೇಕು? ಏನು ಪರೀಕ್ಷೆ ನಾವು ಒಡ್ಡಬೇಕು," ಎಂದು ಕಾಲಮರು ಕೇಳಿದರು.

೧೬. "ಆ ಪರೀಕ್ಷೆಗಳೆಂದರೆ ಇವು: ನಿಮ್ಮನ್ನೇ ನೀವು ಕೇಳಿಕೊಳ್ಳಿ – 'ಈ ವಿಷಯಗಳು ಅಹಿತಕರವೇ? ಇವು ನಿಂದಾರ್ಹವೇ? ಇವುಗಳನ್ನು ವಿವೇಕಿಗಳು ಆಕ್ಷೇಪಿಸಿದ್ದಾರೆಯೇ? ಈ ವಿಷಯಗಳನ್ನು ಮಾಡಿದರೆ ಅಥವಾ ಮಾಡಲು ಪ್ರಯತ್ನಿಸಿದರೆ, ಅದು ಕೆಟ್ಟ ಬದುಕಿಗೆ ಮತ್ತು ದುಃಖಕ್ಕೆ ದಾರಿಯಾಗುತ್ತದೆಯೇ?"

೧೭. "ಕಾಲಮರೇ, ನೀವು ಇನ್ನೂ ಮುಂದೆ ಹೋಗಬೇಕು. ಅವರು ಬೋಧಿಸಿದ ಸಿದ್ಧಾಂತ ದುರಾಸೆ,

X

ದ್ವೇಷ, ಭ್ರಮೆ, ಮತ್ತು ಹಿಂಸೆಯನ್ನು ವೃದ್ಧಿಸುತ್ತದೆಯೇ? ಎಂದು ಕೇಳಿಕೊಳ್ಳಿ."

೧೮. "ಇಷ್ಟೇ ಸಾಲದು, ಕಾಲಮರೇ, ನೀವು ಇನ್ನೂ ಮುಂದೆ ಹೋಗಿ, ಇಂಥ ಸಿದ್ಧಾಂತ ಮನುಷ್ಯನನ್ನು ಅವನ ರಾಗಭಾವಗಳ ವಶವರ್ತಿಯನ್ನಾಗಿ ಮಾಡುತ್ತದೆಯೇ? ಜೀವರಾಶಿಯನ್ನು ಕೊಲ್ಲಲು ಅವನಿಗೆ ದಾರಿತೋರುವುದಿಲ್ಲವೇ? ತನಗೆ ಕೊಡದಿರುವುದನ್ನು ತೆಗೆದುಕೊಳ್ಳುವಂತೆ ಮಾಡುವುದಿಲ್ಲವೇ? ಪರಸತಿ ಚೋರನನ್ನಾಗಿಸುವುದಿಲ್ಲವೇ? ಸುಳ್ಳು ಹೇಳುವಂತೆ ಮತ್ತು ಇತರರು ಇಂಥ ಕೃತ್ಯಗಳನ್ನು ಮಾಡುವಂತೆ ಪ್ರೇರೇಪಿಸುವುದಿಲ್ಲವೇ? ಎಂದು ಕೇಳಿಕೊಳ್ಳಬೇಕು."

೧೯. "ಕೊನೆಯದಾಗಿ ಇದನ್ನು ಕೇಳಿಕೊಳ್ಳಬೇಕು: 'ಇವೆಲ್ಲವೂ ಮಾನವನ ಕೆಟ್ಟ ಬಾಳು ಮತ್ತು ದುಃಖಕ್ಕೆ ದಾರಿಯಾಗುವುದಿಲ್ಲವೆ?"

೨೦. "ಈಗ, ಕಾಲಮರೇ, ನೀವು ಏನು ಹೇಳುತ್ತೀರಿ?"

೨೧. "ಈ ವಿಷಯಗಳು ಮಾನವನನ್ನು ಕೆಟ್ಟ ಬಾಳು ಮತ್ತು ದುಃಖಕ್ಕೆ ದಾರಿಮಾಡುತ್ತವೆಯೇ?"

೨೨. "ಅವನನ್ನು ಕೆಟ್ಟ ಬಾಳಿಗೆ ದೂಡುತ್ತದೆ, ಪ್ರಭು" ಎಂದು ಕಾಲಮರು ಉತ್ತರಿಸಿದರು.

೨೩. "ಈ ವಿಷಯಗಳು ಹಿತಕರವೇ ಇಲ್ಲಾ ಅಹಿತಕರವೇ? ನೀವು ಏನು ಹೇಳುತ್ತೀರಿ, ಕಾಲಮರೇ"

೨೪. "ಅವು ಅಹಿತಕರ, ಪ್ರಭು."

೨೫. "ಈ ವಿಷಯಗಳು ನಿಂದಾರ್ಹವೇ?"

೨೬. "ನಿಂದಾರ್ಹ, ಪ್ರಭು" ಕಾಲಮರು ಉತ್ತರಿಸಿದರು.

೨೭. "ವಿವೇಕಿಗಳು ಆಕ್ಷೇಪಿಸಿದ್ದಾರೆಯೇ ಇಲ್ಲಾ ಒಪ್ಪಿದ್ದರೆಯೇ?

೨೮. "ವಿವೇಕಿಗಳು ಆಕ್ಷೇಪಿಸಿದ್ದಾರೆ, ಪ್ರಭು" ಕಾಲಮರು ಉತ್ತರಿಸಿದರು.

೨೯. "ಅವುಗಳನ್ನು ಮಾಡಿದ್ದರಿಂದ ಅಥವಾ ಮಾಡಲು ಪ್ರಯತ್ನಿಸಿದ್ದರಿಂದ, ಅವು ಕೆಟ್ಟ ಬಾಳು ಮತ್ತು ದುಃಖಕ್ಕೆ ದೂಡುತ್ತವೆಯೇ?"

೩೦. "ಅವುಗಳನ್ನು ಮಾಡಿದರೆ ಅಥವಾ ಮಾಡಲು ಪ್ರಯತ್ನಿಸಿದರೆ, ಅವು ಕೆಟ್ಟ ಬಾಳು ಮತ್ತು ದುಃಖಕ್ಕೆ ದೂಡುತ್ತವೆ, ಪ್ರಭು."

೩೧. "ಇಂಥದ್ದನ್ನು ಬೋಧಿಸುವ ಧರ್ಮಗ್ರಂಥವನ್ನು ಅಂತಿಮ ಅಥವಾ ದೋಷಾತೀತ ಎಂದು ಒಪ್ಪಿಕೊಳ್ಳಲು ಸಾಧ್ಯವೇ?"

೩೨. "ಇಲ್ಲ, ಸಾಧ್ಯವಿಲ್ಲ, ಪ್ರಭು" ಎಂದು ಕಾಲಮರು ಹೇಳಿದರು.

೩೩. "ಕಾಲಮರೇ, ಇದೇ ನಾನು ಬೋಧಿಸಿರುವುದು. ನಾನು ಹೇಳಿರುವುದೇನೆಂದರೆ: 'ಕೇವಲ ನೀವು ಕೇಳಿರುವುದನ್ನೇ ನಂಬಬೇಡಿ; ಕೇವಲ ಒಬ್ಬರಿಂದ ಇನ್ನೊಬ್ಬರಿಗೆ ಹಸ್ತಾಂತರವಾಗಿರುವುದನ್ನೇ ನೋಡಿ ನಂಬಬೇಡಿ; ವಿಚಾರದ ಸೂಕ್ಷ್ಮತೆಗಳಂತೆ ನಡೆಯಬೇಡಿ; ತರ್ಕಶಾಸ್ತ್ರದ ಸೂಕ್ಷ್ಮತೆಗಳಂತೆ ನಡೆಯಬೇಡಿ; ಕೇವಲ ತೋರಿಕೆಗಳ ಮೇಲೆ ಆಧಾರಿತವಾದ ವಿಚಾರಗಳಂತೆ ನಡೆಯಬೇಡಿ; ಕೇವಲ ಅನುಕೂಲಕರವಾದ ನಂಬಿಕೆ ಮತ್ತು ಅಭಿಪ್ರಾಯಗಳಂತೆ ನಡೆಯಬೇಡಿ; ಯಾರೋ ಸಂನ್ಯಾಸಿ ಅಥವಾ ಪೂಜ್ಯ ಹೇಳಿದರೆಂಬ ಮಾತ್ರಕ್ಕೆ ಅದನ್ನು ನಂಬಬೇಡಿ.' "

೩೪. "ನಿಜವಾಗಿಯೂ ನಿಮಗೆ ಗೊತ್ತಾದಾಗ ಮಾತ್ರ ಹಾಗೆ ನಡೆಯಿರಿ: 'ಈ ವಿಷಯಗಳು ಅಹಿತಕರವೇ? ಇವು ನಿಂದಾರ್ಹವೇ? ವಿವೇಕಿಗಳು ಇವುಗಳನ್ನು ಆಕ್ಷೇಪಿಸಿದ್ದಾರೆಯೇ? ಈ ವಿಷಯಗಳನ್ನು ಮಾಡಿದರೆ ಅಥವಾ ಪ್ರಯತ್ನಿಸಿದರೆ ಇವು ಕೆಟ್ಟ ಬಾಳು ಮತ್ತು ದುಃಖಕ್ಕೆ ದೂಡುತ್ತವೆಯೇ?' ಎಂದು

ಕೇಳಿ ತಿಳಿದುಕೊಂಡು, ಕಾಲಮರೇ, ನೀವು ಅವುಗಳನ್ನು ವರ್ಜಿಸಬೇಕು."

೩೫. "ಅದ್ಭುತ, ಪ್ರಭು, ಅತ್ಯಂತ ಅದ್ಭುತ! ನಾವು ಪ್ರಭುವಿಗೆ ಶರಣಾಗುತ್ತೇವೆ, ತಥಾಗತನಿಗೆ ಶರಣಾಗುತ್ತೇವೆ. ಆಶ್ರಯಕ್ಕಾಗಿ, ಆತನ ಬೋಧನೆಗಾಗಿ ನಾವು ಆತನಿಗೆ ಮೊರೆಹೋಗುತ್ತೇವೆ. ಇಂದಿನಿಂದ ನಮ್ಮ ಜೀವ ಇರುವ ತನಕ ನಾವು ನಿಮ್ಮಲ್ಲಿ ಶರಣುಹೋಗುತ್ತೇವೆ."

೩೬. ಈ ವಾದದ ತಿರುಳು ಸರಳವಾಗಿದೆ. ನೀವು ಇನ್ನೊಬ್ಬರ ಉಪದೇಶಗಳು ಪ್ರಾಮಾಣ್ಯವೆಂದು ಒಪ್ಪಿಕೊಳ್ಳುವ ಮುನ್ನ ಅದು ಧರ್ಮಗ್ರಂಥಗಳಲ್ಲಿ ಇದೆ ಎಂಬ ಕಾರಣಕ್ಕಾಗಿ ಒಪ್ಪಿಕೊಳ್ಳಬೇಡಿ; ತರ್ಕಶಾಸ್ತ್ರಗಳ ಸೂಕ್ಷ್ಮಗಳಿಗಾಗಿ ಒಪ್ಪಬೇಡಿ; ಕೇವಲ ತೋರಿಕೆಗಳ ಆಧಾರದ ಮೇಲೆ ನಿಂತಿರುವ ವಿಚಾರಗಳನ್ನು ಒಪ್ಪಬೇಡಿ; ಬೋಧಿಸಿದ ನಂಬಿಕೆಗಳು ಮತ್ತು ಅಭಿಪ್ರಾಯಗಳು ಅನುಕೂಲಕರವಾಗಿದೆ ಎಂದ ಮಾತ್ರಕ್ಕೆ ಒಪ್ಪಬೇಡಿ; ಅವು ಸಾಚಾ ಎಂದು ಕಾಣುತ್ತವೆಂದು ಒಪ್ಪಬೇಡಿ; ಯಾರೋ ಸಂನ್ಯಾಸಿ ಅಥವಾ ಪೂಜ್ಯ ಹೇಳಿದ ನಂಬಿಕೆಗಳು ಮತ್ತು ವಿಚಾರಗಳೆಂದು ಒಪ್ಪಬೇಡಿ.

೩೭. ಆದರೆ ನಂಬಿಕೆಗಳು ಮತ್ತು ವಿಚಾರಗಳು ಮನಸ್ಸಿಗೆ ನಾಟುವ ಮುನ್ನ ಅವು ಹಿತಕರವೇ ಅಥವಾ ಅಹಿತಕರವೇ, ನಿಂದಾರ್ಹವೇ ಅಥವಾ ನಿಂದನಾರಹಿತವೇ? ಸುಖಕರವೇ ಅಥವಾ ದುಃಖಕರವೇ ಎಂದು ಪರಿಗಣಿಸಬೇಕು.

೩೮. ಈ ಆಧಾರಗಳ ಮೇಲೆ ಮಾತ್ರ ಯಾರ ಉಪದೇಶವನ್ನೇ ಆಗಲಿ ಒಪ್ಪಿಕೊಳ್ಳಲು ಸಾಧ್ಯ.

## ಭಾಗ : ೫

# ಸದ್ಧರ್ಮ ಎಂದರೆ ಏನು?

**ಪರಿಚ್ಛೇದ ೧ : ಸದ್ಧರ್ಮದ ಕಾರ್ಯಗಳು**

೧. ಮಾಲಿನ್ಯಗಳಿಂದ ಮನಸ್ಸನ್ನು ಪರಿಶುದ್ಧಗೊಳಿಸುವುದು

೨. ಪ್ರಪಂಚವನ್ನು ಸತ್ಯದ ಸಾಮ್ರಾಜ್ಯವನ್ನಾಗಿ ಮಾಡುವುದೇ ಸದ್ಧರ್ಮ

**ಪರಿಚ್ಛೇದ ೨ : ಧರ್ಮ ಸದ್ಧರ್ಮವಾಗಲು ಪ್ರಜ್ಞೆಯನ್ನು ಬೆಳಸಬೇಕು**

೧. ವಿದ್ಯೆಯನ್ನು ಎಲ್ಲರಿಗೂ ತೆರೆದಿಟ್ಟಾಗ ಧರ್ಮ ಸದ್ಧರ್ಮವಾಗುತ್ತದೆ

೨. ಧರ್ಮ ಸದ್ಧರ್ಮವಾಗಲು ಬರಿಯ ವಿದ್ಯೆ ಸಾಕಾಗುವುದಿಲ್ಲ. ಅದು ಶುಷ್ಕ ಪಾಂಡಿತ್ಯಕ್ಕೆ ಎಡೆಮಾಡಿಕೊಡಬಹುದು.

೩. ಪ್ರಜ್ಞೆ ಅಗತ್ಯವೆಂದು ಬೋಧಿಸಿದಾಗ ಧರ್ಮ ಸದ್ಧರ್ಮವಾಗುತ್ತದೆ.

**ಪರಿಚ್ಛೇದ ೩ : ಧರ್ಮ ಸದ್ಧರ್ಮವಾಗಬೇಕಾದರೆ ಮೈತ್ರಿಯನ್ನು ಬೆಳೆಸಬೇಕು**

೧. ಕೇವಲ ಪ್ರಜ್ಞೆಯೊಂದೇ ಸಾಲದು ಎಂದು ಬೋಧಿಸಿದಾಗ ಮಾತ್ರ ಧರ್ಮ ಸದ್ಧರ್ಮವಾಗುತ್ತದೆ:

೨. ಪ್ರಜ್ಞೆ ಮತ್ತು ಶೀಲದ ಜೊತೆಗೆ ಅಗತ್ಯವಾಗಿರುವ ಕರುಣೆಯನ್ನು ಬೋಧಿಸಿದಾಗಲೇ ಧರ್ಮ ಸದ್ಧರ್ಮವಾಗುತ್ತದೆ

೩. ಕರುಣೆಗಿಂತ ಹೆಚ್ಚು ಅವಶ್ಯಕವಾಗಿರುವ ಮೈತ್ರಿಯನ್ನು ಬೋಧಿಸಿದಾಗ ಮಾತ್ರ ಧರ್ಮ ಸದ್ಧರ್ಮವಾಗುತ್ತದೆ.

**ಪರಿಚ್ಛೇದ ೪ : ಧರ್ಮ ಸದ್ಧರ್ಮವಾಗಬೇಕಾದರೆ ಸಾಮಾಜಿಕ ಅಡೆತಡೆಗಳನ್ನು ಕೆಡವಿಹಾಕಬೇಕು**

೧. ಧರ್ಮವು ಸದ್ಧರ್ಮವೆನಿಸಬೇಕಾದರೆ, ಮನುಷ್ಯ–ಮನುಷ್ಯನ ನಡುವಣ ಸಾಮಾಜಿಕ ಅಡೆತಡೆಗಳನ್ನೆಲ್ಲಾ ಅದು ನಿರ್ಮೂಲನ ಮಾಡಬೇಕು.

೨. ಧರ್ಮವು ಸದ್ಧರ್ಮವಾಗಿರಬೇಕಾದರೆ, ಹುಟ್ಟಲ್ಲ ಅಂತಃಸ್ಸತ್ವವು ಮನುಷ್ಯನ ಅಳತೆಗೋಲು ಎಂಬುದನ್ನು ಬೋಧಿಸಬೇಕು.

೩. ಧರ್ಮವು ಸದ್ಧರ್ಮವಾಗಿರಬೇಕಾದರೆ ಮನುಷ್ಯ–ಮನುಷ್ಯನ ನಡುವೆ ಸಮಾನತೆಯನ್ನು ಹೆಚ್ಚಿಸಬೇಕು.

## ಪರಿಚ್ಛೇದ : ೧

# ಸದ್ಧರ್ಮದ ಕಾರ್ಯಗಳು

### ೧. ಮಾಲಿನ್ಯಗಳಿಂದ ಮನಸ್ಸನ್ನು ಪರಿಶುದ್ಧಗೊಳಿಸುವುದು

೧. ಒಮ್ಮೆ ತಥಾಗತನು ಶ್ರಾವಸ್ತಿಯಲ್ಲಿ ತಂಗಿದ್ದನು. ಕೋಸಲದ ಮಹಾರಾಜನಾದ ಪ್ರಸೇನಜಿತ್ ಅಲ್ಲಿಗೆ ರಥದಲ್ಲಿ ಬಂದು, ಇಳಿದು, ಅಪಾರ ಗೌರವದಿಂದ ಪರಮಗುರುವನ್ನು ಸಮೀಪಿಸಿದನು.

೨. ತಮ್ಮ ಉತ್ಕೃಷ್ಟ ವ್ಯಕ್ತಿತ್ವ ಮತ್ತು ತತ್ತ್ವದರ್ಶನದಿಂದ ನಮ್ಮ ಜನರಲ್ಲಿ ನಂಬಿಕೆ ಹುಟ್ಟುವ ದೃಷ್ಟಿಯಿಂದ ತಾವು ನಾಳೆ ನಮ್ಮ ನಗರಕ್ಕೆ ಭೇಟಿ ನೀಡಿ ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ಮಹಾರಾಜ ಬುದ್ಧನನ್ನು ಆಹ್ವಾನಿಸಿದನು.

೩. ಅದಕ್ಕೆ ಬುದ್ಧ ಸಮ್ಮತಿಸಿ ಮರುದಿನ ತಮ್ಮ ಶಿಷ್ಯರ ಜೊತೆ ನಗರವನ್ನು ಪ್ರವೇಶಿಸಿ, ಅದರ ನಾಲ್ಕು ಅಡ್ಡಬೀದಿಗಳಲ್ಲಿ ಸಾಗಿ ಗೊತ್ತಾದ ಸ್ಥಳಕ್ಕೆ ಹೋಗಿ ಆಸೀನನಾದನು.

೪. ಭೋಜನವಾದ ನಂತರ, ಮಹಾರಾಜನ ಕೋರಿಕೆಯ ಮೇರೆಗೆ, ನಾಲ್ಕು ಹೆದ್ದಾರಿಗಳ ಮಧ್ಯದಲ್ಲಿ ಅಪರಿಮಿತ ಸಂಖ್ಯೆಯ ಶ್ರೋತೃಗಳು ಸೇರಿದ್ದಾಗ ಬುದ್ಧ ತನ್ನ ಪ್ರವಚನವನ್ನು ಪ್ರಾರಂಭಿಸಿದನು.

೫. ಈ ಸಮಯದಲ್ಲಿ ಇಬ್ಬರು ವರ್ತಕರು ಅವನ ಪ್ರವಚನವನ್ನು ಆಲಿಸುತ್ತಿದ್ದರು.

೬. ಅವರಲ್ಲಿ ಒಬ್ಬ ತನ್ನಲ್ಲೇ ಅಂದುಕೊಂಡ: "ಇಂಥ ಉಪದೇಶಗಳನ್ನು ಸಾರ್ವಜನಿಕವಾಗಿ ಕೊಡಿಸುವ ರಾಜನ ವಿವೇಕ ಎಷ್ಟು ಉತ್ಕೃಷ್ಟವಾದುದು! ಅವುಗಳ ಉಪಯೋಗ ಎಷ್ಟು ವ್ಯಾಪಕವಾಗಿದೆ! ಅವುಗಳ ಗುಣ ಎಷ್ಟು ಶೋಧನಾತ್ಮಕವಾಗಿವೆ!"

೭. ಇನ್ನೊಬ್ಬ ಹೀಗೆಂದುಕೊಂಡ: "ಈ ಮನುಷ್ಯನನ್ನು ಇಲ್ಲಿಗೆ ಕರೆದುಕೊಂಡು ಬಂದು ಉಪದೇಶ ಕೊಡಿಸುವ ಈ ರಾಜನದು ಎಂಥ ಮೂರ್ಖತನ!"

೮. "ಗಾಡಿಯನ್ನು ಎಳೆಯುವ ಹಸು ಹೋದಕಡೆಯಲ್ಲೆಲ್ಲಾ ಅಂಬಾ ಎಂದು ಅರಚಿಕೊಂಡು ಹಿಂಬಾಲಿಸುವ ಕರುವಿನಂತೆ ಮಹಾರಾಜನನ್ನು ಈ ಬುದ್ಧ ಹಿಂಬಾಲಿಸುತ್ತಿದ್ದಾನೆ" ಎಂದುಕೊಂಡು ಈ ಇಬ್ಬರು ವರ್ತಕರು ಆ ನಗರದಿಂದ ಹೊರಟು ಒಂದು ಛತ್ರದಲ್ಲಿ ತಂಗಿದರು.

೯. ಸ್ವಲ್ಪ ದ್ರಾಕ್ಷಾರಸವನ್ನು ತೆಗೆದುಕೊಂಡಿದ್ದ ಒಳ್ಳೆಯ ವರ್ತಕನನ್ನು ಪ್ರಪಂಚವನ್ನು ಕಾಯುವ ನಾಲ್ಕು ರಕ್ಷಕ ದೇವತೆಗಳು ಸಂಯಮಿಸಿ ಕಾಪಾಡಿದರು.

೧೦. ಇದಕ್ಕೆ ವಿರುದ್ಧವಾಗಿ ಇನ್ನೊಬ್ಬನನ್ನು ಅವನಿಗೆ ನಿದ್ದೆ ಬರುವವರೆಗೂ ದುಷ್ಟಶಕ್ತಿ ಕುಡಿಯಲು ಪ್ರಚೋದಿಸಿ, ಛತ್ರದ ಬೀದಿಯಲ್ಲಿ ಬೀಳುವಂತೆ ಮಾಡಿತು.

೧೧. ಮುಂಜಾವದ ಮಬ್ಬಿನಲ್ಲಿ ಹೊರಟ ಆ ವರ್ತಕರ ಗಾಡಿಗಳು ರಸ್ತೆಯ ಮೇಲೆ ಬಿದ್ದಿದ್ದ ಮನುಷ್ಯನನ್ನು ಕಾಣದೆ ಚಾಲಕರು ಅವನ ಮೇಲೆ ಬಂಡಿಗಳನ್ನು ಬಿಟ್ಟಿದ್ದರಿಂದ ಅವನು ಚಕ್ರಗಳಿಗೆ ಸಿಕ್ಕಿ ಸತ್ತುಹೋದನು.

೧೨. ಇನ್ನೊಬ್ಬ ವರ್ತಕನು ದೂರದೇಶಕ್ಕೆ ಬಂದನು. ಅಲ್ಲಿನ ಪೂಜಾ ಕುದುರೆಯು ಅವನನ್ನು ಆರಿಸಲಾಗಿ ಅವನು ಸಿಂಹಾಸನವನ್ನು ಏರಿ ರಾಜನಾದನು.

೧೩. ಇದಾದಮೇಲೆ ಅವನು ಘಟನೆಗಳು ವಿಚಿತ್ರ ರೀತಿಯಲ್ಲಿ ನಡೆದುದನ್ನು ನೋಡಿ, ಬುದ್ಧನನ್ನು ಕಂಡು ತನ್ನ ಜನಗಳಿಗೆ ಉಪದೇಶ ಮಾಡುವಂತೆ ಆಹ್ವಾನಿಸಲು ಬಂದನು.

೧೪. ಈ ಸಂದರ್ಭದಲ್ಲಿ ಜಗನ್ಮಾನ್ಯ ಗುರುವು, ದುಷ್ಟ ಮನಸ್ಸಿನ ವರ್ತಕನ ಮರಣಕ್ಕೆ ಮತ್ತು ವಿವೇಕಯುತವಾಗಿ ಆಲೋಚಿಸಿದ ವರ್ತಕನ ಅಭ್ಯುದಯಕ್ಕೆ ಕಾರಣವನ್ನು ತಿಳಿಸಿ ಈ ರೀತಿಯಾಗಿ ಹೇಳಿದನು:

೧೫. "ಇದೆಲ್ಲಕ್ಕೂ ಮೂಲ ಮನಸ್ಸು. ಮನಸ್ಸೇ ಯಜಮಾನ; ಮನಸ್ಸೇ ಕಾರಣ."

೧೬. "ಮನಸ್ಸಿನ ಒಳಗೆ ಕೆಟ್ಟ ಭಾವನೆಗಳಿದ್ದರೆ, ಆಗ ಮಾತುಗಳು ಕೆಟ್ಟವಾಗಿರುತ್ತವೆ; ಕೆಲಸಗಳು ಕೆಟ್ಟವಾಗಿರುತ್ತವೆ; ಗಾಡಿಯನ್ನು ಎಳೆಯುವವನ ಹಿಂದೆ ಚಕ್ರ ಹೋಗುವಂತೆ, ಆ ಪಾಪದಿಂದುಂಟಾದ ದುಃಖವು ಮನುಷ್ಯನನ್ನು ಹಿಂಬಾಲಿಸುತ್ತದೆ."

೧೭. "ಇದೆಲ್ಲಕ್ಕೂ ಮನಸ್ಸೇ ಮೂಲ. ಮನಸ್ಸು ಆದೇಶಿಸುತ್ತದೆ, ಮನಸ್ಸು ಸಂಚು ಮಾಡುತ್ತದೆ."

೧೮. "ಮನಸ್ಸಿನಲ್ಲಿ ಒಳ್ಳೆಯ ಆಲೋಚನೆಗಳಿದ್ದರೆ, ಆಗ ಮಾತುಗಳು, ಕೆಲಸಗಳು ಒಳ್ಳೆಯದಾಗಿರುತ್ತವೆ. ವಸ್ತುವನ್ನು ನೆರಳು ಅನುಸರಿಸುವಂತೆ ಅಂಥ ಮನುಷ್ಯನ ಸನ್ನಡತೆಯಿಂದ ಸಂತೋಷ ಲಭಿಸುತ್ತದೆ."

೧೯. ಈ ಮಾತುಗಳನ್ನು ಕೇಳಿ ರಾಜ ಮತ್ತು ಆತನ ಮಂತ್ರಿಗಳು ಹಾಗೂ ಅಸಂಖ್ಯಾತ ಇತರರು ಪರಿವರ್ತಿತರಾಗಿ ಅವನ ಅನುಯಾಯಿಗಳಾಗದರು.

## ೨. ಪ್ರಪಂಚವನ್ನು ಸತ್ಯದ ಸಾಮ್ರಾಜ್ಯವನ್ನಾಗಿ ಮಾಡುವುದೇ ಸದ್ಧರ್ಮ

೧. ಧರ್ಮದ ಉದ್ದೇಶ ಏನು?

೨. ವಿವಿಧ ಧರ್ಮಗಳು ವಿವಿಧ ಉತ್ತರಗಳನ್ನು ನೀಡಿವೆ.

೩. ದೇವರನ್ನು ಅನ್ವೇಷಿಸುವಂತೆ ಮನುಷ್ಯನನ್ನು ಮಾಡುವುದು ಮತ್ತು ಆತ್ಮೋದ್ಧಾರದ ಪ್ರಾಮುಖ್ಯತೆಯನ್ನು ಬೋಧಿಸುವುದು–ಎಂಬುದು ಈ ಪ್ರಶ್ನೆಗೆ ಸಿಗುವ ತೀರಾ ಸಾಮಾನ್ಯ ಉತ್ತರವಾಗಿದೆ.

೪. ಕೆಲವು ಧರ್ಮಗಳು ಮೂರು ಸಾಮ್ರಾಜ್ಯಗಳನ್ನು ಹೇಳುತ್ತವೆ.

೫. ಒಂದು – ಸ್ವರ್ಗ ಸಾಮ್ರಾಜ್ಯ, ಎರಡು – ಮರ್ತ್ಯ ಸಾಮ್ರಾಜ್ಯ, ಮೂರು – ನರಕ ಸಾಮ್ರಾಜ್ಯ.

೬. ಸ್ವರ್ಗ ಸಾಮ್ರಾಜ್ಯವನ್ನು ದೇವರು ಆಳುತ್ತಾನೆಂದು ಹೇಳಲಾಗಿದೆ. ನರಕ ಸಾಮ್ರಾಜ್ಯವನ್ನು ಸೈತಾನನ ಪ್ರಾಬಲ್ಯ ಆಳುತ್ತದೆಂದು ವರ್ಣಿಸಲಾಗಿದೆ. ಮರ್ತ್ಯ ಸಾಮ್ರಾಜ್ಯ ವಿವಾದಿತ ಕ್ಷೇತ್ರವಾಗಿದೆ. ಅದು ಸೈತಾನನ ಪ್ರಾಬಲ್ಯದಲ್ಲಿಲ್ಲ. ದೇವರ ಪಾರಮ್ಯವೂ ಇಲ್ಲಿಗೆ ವಿಸ್ತರಿಸುವುದಿಲ್ಲ. ಒಂದು ದಿನ ಅದು ಬರುತ್ತದೆಂದು ಆಶಿಸಲಾಗಿದೆ.

೭. ನಿಸ್ಸಂದೇಹವಾಗಿ ದೇವರೇ ನೇರವಾಗಿ ಆಳುವುದರಿಂದ ಸ್ವರ್ಗ ಸಾಮ್ರಾಜ್ಯದಲ್ಲಿ ಋಜುತನದ ಸಾಮ್ರಾಜ್ಯ ನೆಲೆಸಿದೆ ಎಂದು ಕೆಲವು ಧರ್ಮಗಳಲ್ಲಿ ಹೇಳಲಾಗಿದೆ.

೮. ಇನ್ನುಳಿದ ಧರ್ಮಗಳ ಪ್ರಕಾರ ಸ್ವರ್ಗದ ಸಾಮ್ರಾಜ್ಯ ಭೂಮಿಯಲ್ಲಿ ಇಲ್ಲ. ಅದು ಸ್ವರ್ಗಕ್ಕೆ ಇನ್ನೊಂದು ಹೆಸರು. ದೇವರು ಮತ್ತು ಅವನ ಪ್ರವಾದಿಯಲ್ಲಿ ನಂಬಿಕೆ ಇರುವವನು ಮಾತ್ರ ಅದನ್ನು ತಲುಪುತ್ತಾನೆ.

ಅವನು ಸ್ವರ್ಗವನ್ನು ಸೇರಿದಾಗ ನಿಷ್ಠಾವಂತರಿಗೆಲ್ಲ ಜೀವನದ ಎಲ್ಲ ಸುಖಭೋಗಗಳು ಲಭಿಸುತ್ತವೆ.

೯. ಸ್ವರ್ಗ ಸಾಮ್ರಾಜ್ಯವನ್ನು ತಲುಪುವುದೇ ಮನುಷ್ಯನ ಉದ್ದೇಶ ಮತ್ತು ಹೇಗೆ ತಲುಪಬೇಕೆನ್ನುವುದೇ ಅದರ ಗುರಿ ಎಂದು ಎಲ್ಲಾ ಧರ್ಮಗಳೂ ಬೋಧಿಸುತ್ತವೆ.

೧೦. "ಧರ್ಮದ ಉದ್ದೇಶ ಏನು?" ಎಂಬ ಪ್ರಶ್ನೆಗೆ ಬುದ್ಧನ ಉತ್ತರ ತುಂಬಾ ಭಿನ್ನವಾಗಿದೆ.

೧೧. ಯಾವುದೋ ಕಾಲ್ಪನಿಕ ಸ್ವರ್ಗವನ್ನು ತಲುಪುವುದೇ ಜೀವನದ ಗುರಿ ಎಂದು ಅವನು ಜನರಿಗೆ ಹೇಳಲಿಲ್ಲ. ಋಜುತನದ ಸಾಮ್ರಾಜ್ಯ ಭೂಮಿಯಲ್ಲೇ ಇದೆ. ಅದನ್ನು ಋಜುತನದಿಂದ ತಲುಪಬೇಕಾಗಿದೆ.

೧೨. ಜನರು ತಮ್ಮ ಸಂಕಟವನ್ನು ನಿರ್ಮೂಲ ಮಾಡಬೇಕಾದರೆ ಅವರು ಇತರರ ಜೊತೆ ಋಜುತನದಿಂದ ನಡೆದುಕೊಳ್ಳಬೇಕು; ಆ ಮೂಲಕ ಭೂಮಿಯನ್ನು ಋಜುತನದ ಸಾಮ್ರಾಜ್ಯವನ್ನಾಗಿ ಮಾಡಬೇಕು ಎಂದು ಜನರಿಗೆ ಅವನು ಬೋಧಿಸಿದನು.

೧೩. ಈ ಅಂಶ ಬುದ್ಧನ ಧಮ್ಮವನ್ನು ಇತರ ಮತಗಳಿಂದ ಪ್ರತ್ಯೇಕಿಸುತ್ತದೆ.

೧೪. ಆತನ ಧಮ್ಮ ಪಂಚಶೀಲ, ಅಷ್ಟಾಂಗಮಾರ್ಗ ಮತ್ತು ಪರಿಮಿತಗಳಿಗೆ ಒತ್ತುಕೊಡುತ್ತದೆ.

೧೫. ಬುದ್ಧ ಏಕೆ ಇವುಗಳನ್ನು ತನ್ನ ಧರ್ಮದ ಆಧಾರವನ್ನಾಗಿ ಮಾಡಿದ? ಏಕೆಂದರೆ ಅವು ಮಾತ್ರ ಮನುಷ್ಯನನ್ನು ಋಜುವನ್ನಾಗಿ ಮಾಡುವ ಜೀವನ ವಿಧಾನವನ್ನಾಗಿ ಸ್ಥಾಪಿಸುತ್ತವೆ.

೧೬. ಮನುಷ್ಯನ ಸಂಕಟ ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯದ ಫಲವಾಗಿದೆ.

೧೭. ಋಜುತನ ಮಾತ್ರ ಈ ಅನ್ಯಾಯವನ್ನು ಮತ್ತು ಅದರ ಫಲವಾದ ಸಂಕಟವನ್ನು ನಿರ್ಮೂಲನ ಮಾಡಬಲ್ಲದು.

೧೮. ಆದ್ದರಿಂದಲೇ ಆತನು 'ಧಮ್ಮ ಕೇವಲ ಬೋಧಿಸುವುದೇ ಅಲ್ಲ, ಋಜು ನಡತೆಯ ಸರ್ವೋಚ್ಚ ಅವಶ್ಯಕತೆಯನ್ನು ಮನಸ್ಸಿನಲ್ಲಿ ನಾಟಿಸಬೇಕು' ಎಂಬುದಾಗಿದೆ.

೧೯. ಋಜುತನವನ್ನು ಒತ್ತಿಹೇಳುವ ಉದ್ದೇಶದಿಂದಲೇ ಧಮ್ಮ ಮಾಡಬೇಕಾದ ಇತರ ಕರ್ತವ್ಯಗಳಿವೆಯೆಂದು ಆತ ಹೇಳಿದನು.

೨೦. ಯಾವುದು ಋಜು ಎಂದು ತಿಳಿಯಲು ಮತ್ತು ಯಾವುದು ಋಜು ಎಂದು ಅನುಸರಿಸಲು ಧಮ್ಮ ಬೋಧಿಸಬೇಕು.

೨೧. ಯಾವುದು ತಪ್ಪು ಮತ್ತು ಯಾವುದನ್ನು ಅನುಸರಿಸುವುದು ತಪ್ಪು ಎಂದು ಧಮ್ಮ ಬೋಧಿಸಬೇಕು.

೨೨. ಧಮ್ಮದ ಈ ಉದ್ದೇಶಗಳ ಜೊತೆಗೆ ಆತ ಭಾವಿಸಿದ ಇತರ ಎರಡು ಉದ್ದೇಶಗಳನ್ನು ಅವು ಬಹು ಪ್ರಮುಖವಾದುವೆಂದು ಆತ ಒತ್ತುನೀಡಿದ.

೨೩. ಪ್ರಾರ್ಥನೆ ಸಲ್ಲಿಕೆ ಅಥವಾ ಶಾಸ್ತ್ರಾಚರಣೆ ಅಥವಾ ಯಜ್ಞ ಮಾಡುವಿಕೆಗಿಂತ ಮನುಷ್ಯನ ಪ್ರವೃತ್ತಿಗಳು ಮತ್ತು ಸ್ವಭಾವಗಳಿಗೆ ಸೂಕ್ತ ತರಬೇತಿ ಕೊಡುವುದು ಮೊದಲನೆಯದು.

೨೪. ಇದನ್ನು ಬುದ್ಧ ತನ್ನ ದೇವದಾಹ ಸುತ್ತದಲ್ಲಿ ಜೈನಧರ್ಮದ ಬಗೆಗಿನ ವಿವರಣೆಯಲ್ಲಿ ಸ್ಪಷ್ಟಪಡಿಸಿದ್ದಾನೆ.

೨೫. ಜೈನಧರ್ಮದ ಸಂಸ್ಥಾಪಕನಾದ ಮಹಾವೀರ, ವ್ಯಕ್ತಿಗತ ಅನುಭವಗಳು ಅವೆಷ್ಟು ಹಿತಕರವಾಗಿರಲಿ ಅಥವಾ ಅಹಿತಕರವಾಗಿರಲಿ, ಹಿಂದಿನ ಜನ್ಮದ ಕೃತ್ಯಗಳಿಂದ ಬರುತ್ತವೆಂದು ದೃಢಪಡಿಸಿದ್ದಾನೆ.

೨೬. ಹೀಗಾಗಿ ಹಿಂದಿನ ದುಷ್ಕೃತ್ಯದ ಅಂತ್ಯ ಮತ್ತು ಶುದ್ಧೀಕರಣದಿಂದ ಮತ್ತು ಹೊಸ ದುಷ್ಕೃತ್ಯಗಳನ್ನು ಮಾಡದಿರುವುದರಿಂದ, ಮುಂದಿನ ಜನ್ಮಕ್ಕೆ ಏನೂ ಸಂಚಯವಾಗುವುದಿಲ್ಲ; ಮುಂದಿನ ಜನ್ಮಕ್ಕೆ ಯಾವ ಸಂಚಯವೂ ಆಗದಿರುವುದರಿಂದ ದುಷ್ಕೃತ್ಯಗಳು ಅಳಿಯುತ್ತವೆ; ದುಷ್ಕೃತ್ಯಗಳು

ಅಳಿಯುವುದರಿಂದ, ಸಂಕಟ ಅಳಿಯುತ್ತವೆ; ಸಂಕಟ ಅಳಿಯುವುದರಿಂದ ಭಾವನೆಗಳು ಅಳಿಯುತ್ತವೆ; ಭಾವನೆಗಳು ಅಳಿಯುವುದರಿಂದ ಎಲ್ಲಾ ಸಂಕಟವೂ ಕೊನೆಗೊಳ್ಳುತ್ತದೆ.

೨೭. ಇದನ್ನು ಜೈನಧರ್ಮ ಒತ್ತಿ ಹೇಳಿತು.

೨೮. ಇದರ ಬಗ್ಗೆ ಬುದ್ಧ ಈ ಪ್ರಶ್ನೆಯನ್ನು ಹಾಕಿದನು: "ಇಲ್ಲಿ ಈಗಲೇ ದುಷ್‌ಸ್ವಭಾವಗಳು ವಿವರ್ಜಿತವಾದವು ಮತ್ತು ಋಜು ಸ್ವಭಾವಗಳು ಅರ್ಜಿತವಾದವು ಎಂದು ನಿನಗೆ ಗೊತ್ತೇ?"

೨೯. ಇದಕ್ಕೆ "ಇಲ್ಲ" ಎಂಬ ಉತ್ತರ ಬಂತು.

೩೦. "ಕೆಟ್ಟ ಸ್ವಭಾವಗಳಿಂದ ಒಳ್ಳೆಯ ಸ್ವಭಾವಗಳಿಗೆ ಮನಸ್ಸನ್ನು ತಿರುಗಿಸುವ ತರಬೇತಿ ಇಲ್ಲದಿದ್ದರೆ ಹಿಂದಿನ ದುಷ್ಕೃತ್ಯಗಳ ಶುದ್ಧೀಕರಣದಿಂದ ಪ್ರಯೋಜನವೇನು? ಹೊಸ ದುಷ್ಕೃತ್ಯಗಳನ್ನು ಮಾಡದೇ ಇರುವುದರಿಂದ ಏನು ಪ್ರಯೋಜನ?" ಎಂದು ಬುದ್ಧ ಕೇಳಿದ್ದಾನೆ.

೩೧. ಆತನ ಅಭಿಪ್ರಾಯದಲ್ಲಿ ಇದು ಮತದ ಒಂದು ಬಹಳ ಗಂಭೀರವಾದ ದೋಷ. ಸತ್‌ಸ್ವಭಾವಕ್ಕೆ ಶಾಶ್ವತ ಒಳ್ಳೆಯತನವೊಂದೇ ಶಾಶ್ವತ ತಳಪಾಯ ಮತ್ತು ಖಾತ್ರಿಯಾಗಿದೆ.

೩೨. ಆದ್ದರಿಂದಲೇ ಬುದ್ಧ ಮನುಷ್ಯನ ಸ್ವಭಾವದ ತರಬೇತಿಗೆ ಸಮನಾದ ಮನಸ್ಸಿನ ತರಬೇತಿಗೆ ಪ್ರಥಮ ಸ್ಥಾನ ಕೊಟ್ಟನು.

೩೩. ಮನುಷ್ಯ ಏಕಾಂಗಿಯಾಗಿ ಆದರೂ ಋಜುವಾದದ್ದರ ಪರ ನಿಲ್ಲುವ ಧೈರ್ಯ ಅತ್ಯಂತ ಮಹತ್ವವಾದುದೆಂದು ಅವನು ಅದಕ್ಕೆ ಎರಡನೆಯ ಸ್ಥಾನ ನೀಡಿದನು.

೩೪. ಈ ಅಂಶವನ್ನು ಸಲ್ಲೇಖ ಸುತ್ತದಲ್ಲಿ ಬುದ್ಧ ದೃಢಪಡಿಸಿದ್ದಾನೆ.

೩೫. ಆತ ಹೀಗೆ ಹೇಳಿದ್ದಾನೆ:

೩೬. "ಇತರರು ತೊಂದರೆ ಮಾಡಿದರೂ ನೀನು ತೊಂದರೆ ಮಾಡುವುದಿಲ್ಲ."

೩೭. "ಇತರರು ಕೊಲೆ ಮಾಡಿದರೂ ನೀನು ಕೊಲೆ ಮಾಡುವುದಿಲ್ಲ."

೩೮. "ಇತರರು ಕಳವು ಮಾಡಿದರೂ ನೀನು ಕಳವು ಮಾಡುವುದಿಲ್ಲ."

೩೯. "ಇತರರು ಉನ್ನತ ಜೀವನ ನಡೆಸದಿದ್ದರೂ ನೀನು ನಡೆಸುತ್ತೀಯೆ."

೪೦. "ಇತರರು ಸುಳ್ಳು, ನಿಂದೆ, ಚಾಡಿ ಅಥವಾ ಹರಟೆಯಲ್ಲಿ ತಲ್ಲೀನರಾಗಬಹುದು. ನೀನು ಹಾಗೆ ಮಾಡುವುದಿಲ್ಲ."

೪೧. "ಇತರರು ದುರಾಸೆಯವರಾಗಬಹುದು. ನೀನು ದುರಾಸೆಪಡುವುದಿಲ್ಲ."

೪೨. "ಇತರರು ಹಾನಿಕರವಾಗಬಹುದು. ನೀನು ಹಾನಿಕರನಾಗುವುದಿಲ್ಲ."

೪೩. "ಇತರರು ತಪ್ಪು ದೃಷ್ಟಿ, ತಪ್ಪು ಉದ್ದೇಶ, ತಪ್ಪು ನುಡಿ, ತಪ್ಪು ಕೆಲಸ, ತಪ್ಪು ಏಕಾಗ್ರತೆ ಮಾಡಬಹುದಾದರೂ, ನೀನು ಅಷ್ಟಾಂಗ ಮಾರ್ಗದ ಋಜುದೃಷ್ಟಿ, ಋಜು ಉದ್ದೇಶ, ಋಜು ನುಡಿ, ಋಜು ಕೆಲಸ, ಋಜು ಜೀವನ ವಿಧಾನ, ಋಜು ಪ್ರಯತ್ನ, ಋಜು ಆಲೋಚನೆ, ಋಜು ಏಕಾಗ್ರತೆಯನ್ನು ಅನುಸರಿಸಬೇಕು."

೪೪. "ಇತರರು ಸತ್ಯದ ಬಗ್ಗೆ, ಬಿಡುಗಡೆಯ ಬಗ್ಗೆ ತಪ್ಪಾಗಿದ್ದರೂ, ನೀನು ಸತ್ಯದ ಬಗ್ಗೆ, ಬಿಡುಗಡೆಯ ಬಗ್ಗೆ ಋಜುವಾಗಿರುತ್ತೀಯೆ."

೪೫. "ಇತರರು ಆಲಸ್ಯವಶಿಗಳಾಗಿದ್ದರೂ, ನೀನು ಅದರಿಂದ ಮುಕ್ತನಾಗಿರುತ್ತೀಯೆ."

೪೬. "ಇತರರು ಉಬ್ಬಿಹೋಗಬಹುದಾದರೂ, ನೀನು ವಿನಯ ಮನಸ್ಕನಾಗಿರುತ್ತೀಯೆ."

೪೭. "ಇತರರು ಸಂಶಯದಿಂದ ವಿಚಲಿತರಾದರೂ, ನೀನು ಅವುಗಳಿಂದ ವಿಮುಕ್ತನಾಗಿರುತ್ತೀಯೆ."

೪೮. "ಇತರರು ಕೋಪ, ದ್ವೇಷ, ಅಸೂಯೆ, ಅನುಮಾನ, ಕೃಪಣತೆ, ದುರಾಸೆ, ಬೂಟಾಟಿಕೆ, ಮೋಸ, ಮೊಂಡುತನ, ದುರಹಂಕಾರ, ದಾಷ್ಟಿಕತನ, ದುಷ್ಟ ಸಹವಾಸ, ಆಲಸ್ಯ, ಅಪನಂಬಿಕೆ, ನಿರ್ಲಜ್ಜೆ, ಹೇಸದಿರುವಿಕೆ, ತಿಳುವಳಿಕೆಯ ಅಭಾವ, ಜಡತೆ, ದಿಗ್ಭ್ರಮೆ, ಅವಿವೇಕಗಳನ್ನು ತುಂಬಿಕೊಂಡಿದ್ದರೂ, ನೀನು ಇವುಗಳಿಂದ ಹೊರತಾಗಿರುತ್ತೀಯೆ."

೪೯. "ಇತರರು ಪ್ರಾಪಂಚಿಕಕ್ಕೆ ಅಂಟಿಕೊಂಡು ಅದನ್ನೇ ತಬ್ಬಿಕೊಂಡರೂ, ಅದರ ಹಿಡಿತವನ್ನು ಬಿಡದಿದ್ದರೂ, ನೀನು ಪ್ರಾಪಂಚಿಕವಲ್ಲದ ವಸ್ತುಗಳಿಗೆ ಅಂಟಿಕೊಂಡು ತ್ಯಾಗವನ್ನು ಅನುಸರಿಸುತ್ತೀಯೆ."

೫೦. "ಕೆಲಸ ಮತ್ತು ನುಡಿಯ ಬಗ್ಗೆ ಹೇಳುವುದಕ್ಕಿಂತ, ಪ್ರಜ್ಞೆಯ ಋಜುಸ್ಥಿತಿಯನ್ನು ಬೆಳೆಸುವ ಸಂಕಲ್ಪ ಹೆಚ್ಚು ಪ್ರಭಾವಕಾರಿಯಾದುದು. ಆದ್ದರಿಂದ, ಚುಂದ, ಮೇಲೆ ಹೇಳಿದ ಎಲ್ಲಾ ನಿರ್ಧಾರಗಳನ್ನು ಬೆಳೆಸಲು ಸಂಕಲ್ಪ ಶಕ್ತಿ ಬೇಕು."

೫೧. ಬುದ್ಧ ಪರಿಭಾವಿಸಿದಂತೆ ಧರ್ಮದ ಉದ್ದೇಶ ಈ ರೀತಿ ಇದೆ.

## ಪರಿಚ್ಛೇದ ೨

# ಧಮ್ಮ ಸದ್ಧರ್ಮವಾಗಲು ಪ್ರಜ್ಞೆಯನ್ನು ಬೆಳೆಸಬೇಕು.

### ೧. ವಿದ್ಯೆಯನ್ನು ಎಲ್ಲರಿಗೂ ತೆರೆದಿಟ್ಟಾಗ ಧಮ್ಮ ಸದ್ಧರ್ಮವಾಗುತ್ತದೆ

೧. ಜ್ಞಾನಾರ್ಜನೆಯನ್ನು ಎಲ್ಲರಿಗೂ ಕೊಡಬಾರದೆಂಬುದೇ ಬ್ರಾಹ್ಮಣೀಯ ಸಿದ್ಧಾಂತವಾಗಿದೆ.

೨. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರಿಗೆ ಮಾತ್ರ ಜ್ಞಾನಾರ್ಜನೆಗೆ ಅವಕಾಶವಿತ್ತರು. ಆದರೆ ಈ ಮೂರು ವರ್ಗಗಳಲ್ಲಿ ಪುರುಷರಿಗೆ ಮಾತ್ರ ಅವಕಾಶ.

೩. ಎಲ್ಲಾ ಸ್ತ್ರೀಯರು, ಅವರು ಬ್ರಾಹ್ಮಣರಾಗಲೀ, ಕ್ಷತ್ರಿಯರಾಗಲೀ, ವೈಶ್ಯರಾಗಲೀ ಮತ್ತೆ ಎಲ್ಲಾ ಶೂದ್ರರು, ಹೆಣ್ಣು ಗಂಡು ಇಬ್ಬರೂ, ಜ್ಞಾನಾರ್ಜನೆಯಿಂದಷ್ಟೇ ಅಲ್ಲ ಅಕ್ಷರಜ್ಞಾನದಿಂದಲೂ ನಿಷೇಧಿತರಾಗಿದ್ದರು.

೪. ಬ್ರಾಹ್ಮಣರ ಈ ಘೋರ ಸಿದ್ಧಾಂತದ ವಿರುದ್ಧ ಬುದ್ಧ ದಂಗೆ ಎದ್ದನು.

೫. ಗಂಡಸರು ಹೆಂಗಸರಾದಿಯಾಗಿ ಎಲ್ಲರಿಗೂ ಜ್ಞಾನದ ಮಾರ್ಗ ತೆರೆದಿರಬೇಕೆಂದು ಆತ ಬೋಧಿಸಿದನು.

೬. ಆತನ ದೃಷ್ಟಿಕೋನವನ್ನು ಬದಲಾಯಿಸಲು ಕೆಲವು ಬ್ರಾಹ್ಮಣರು ಪ್ರಯತ್ನಿಸಿದರು. ಬ್ರಾಹ್ಮಣ ಲೋಹಿಕ್ಕರೊಂದಿಗಿನ ಆತನ ವಿವಾದ ಈ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ.

೭. ಒಮ್ಮೆ ತಥಾಗತನು ಕೋಸಲ ಜಿಲ್ಲೆಗಳ ಮೂಲಕ ಭಿಕ್ಕುಗಳ ಸಮೂಹದ ಜೊತೆ ಸಾಗುತ್ತಿದ್ದಾಗ ಸಾಲವೃಕ್ಷಗಳಿಂದ ಆವೃತವಾಗಿದ್ದ ಸಾಲವತಿಕ ಎಂಬ ಹಳ್ಳಿಗೆ ಬಂದನು.

೮. ಆ ಸಮಯದಲ್ಲಿ ಸಾಲವತಿಕದಲ್ಲಿ ಲೋಹಿಕ್ಕ ಎಂಬ ಬ್ರಾಹ್ಮಣ ವಾಸಿಸುತ್ತಿದ್ದನು. ಹುಲ್ಲುಗಾವಲು, ತೋಪು ಮತ್ತು ಬೆಳೆಯಿಂದ ಜೀವನ ಸಮೃದ್ಧಿಯಿಂದ ತುಳುಕುತ್ತಿದ್ದ ಆ ಸ್ಥಳವನ್ನು ಕೋಸಲದ ರಾಜನಾದ ಪಸೇನದಿ ಅವನಿಗೆ ಉಂಬಳಿಯಾಗಿ ಕೊಟ್ಟು, ಅದಕ್ಕೆ ಅವನೇ ರಾಜನೆಂಬಂತೆ ಅಧಿಕಾರ ನಡೆಸಲು ಅವಕಾಶ ನೀಡಿದ್ದ.

೯. ಶ್ರಮಣ ಅಥವಾ ಬ್ರಾಹ್ಮಣ ಜ್ಞಾನವನ್ನು ಪಡೆದರೆ ಅದನ್ನು ಸ್ತ್ರೀಯರಿಗಾಗಲೀ ಶೂದ್ರರಿಗಾಗಲೀ ತಿಳಿಸಬಾರದೆಂಬ ಅಭಿಪ್ರಾಯವನ್ನು ಲೋಹಿಕ್ಕ ಬ್ರಾಹ್ಮಣ ತಾಳಿದ್ದನು.

೧೦. ಆಗ ಸಾಲವತಿಕದಲ್ಲಿ ತಥಾಗತ ತಂಗಿರುವನೆಂದು ಬ್ರಾಹ್ಮಣ ಲೋಹಿಕ್ಕ ಕೇಳಿದನು.

೧೧. ಇದನ್ನು ಕೇಳಿದ ಅವನು ಭೇಸಿಕ ಎಂಬ ಕ್ಷೌರಿಕನನ್ನು ಕರೆದು ಹೀಗೆ ಹೇಳಿದನು: "ನೋಡು ಭೇಸಿಕ, ಈಗ ಶ್ರಮಣ ಗೌತಮನಿರುವಲ್ಲಿಗೆ ಹೋಗಿ, ನನ್ನ ಹೆಸರಿನಲ್ಲಿ ಆತನ ಅನಾರೋಗ್ಯ ಶಮನವಾಗಿದೆಯೇ, ಆತನ ಆರೋಗ್ಯ, ದೇಹಶಕ್ತಿ ಮತ್ತು ಆರಾಮದ ಸ್ಥಿತಿಯನ್ನು ವಿಚಾರಿಸಿ, ಹೀಗೆ ಹೇಳು : 'ಪೂಜ್ಯ ಗೌತಮ ತನ್ನ ಸಂಘದ ಸೋದರರ ಸಮೇತ ಬ್ರಾಹ್ಮಣ ಲೋಹಿಕ್ಕನ ಮನೆಯಲ್ಲಿ ನಾಳೆ ಭೋಜನವನ್ನು ಸ್ವೀಕರಿಸಬೇಕು.'

೧೨. "ಹಾಗೆಯೇ ಆಗಲಿ, ಸ್ವಾಮಿ" ಎಂದು ಕ್ಷೌರಿಕ ಹೇಳಿದ.

೧೩. ಬ್ರಾಹ್ಮಣ ಲೋಹಿಕ್ಕ ಆದೇಶಿಸಿದಂತೆ ಅವನು ಮಾಡಿದ. ಅವನ ವಿನಂತಿಗೆ ತಥಾಗತ ಮೌನವಾಗಿ ಸಮ್ಮತಿ ನೀಡಿದ.

೧೪. ಮರುದಿನ ಮುಂಜಾನೆಯೇ ತಥಾಗತ ಕಾಷಾಯವಸ್ತ್ರ ಧರಿಸಿ ಕೈಯಲ್ಲಿ ಬೋಗುಣಿ ಹಿಡಿದು ಸಂಘದ ಭಿಕ್ಕುಗಳ ಜೊತೆ ಸಾಲವತಿಕದ ಕಡೆ ನಡೆದನು.

೧೫. ತಥಾಗತನನ್ನು ಕರೆತರಲು ಕಳುಹಿಸಿದ್ದ ಕ್ಷೌರಿಕ ಭೇಸಿಕ ತಥಾಗತನ ಹಿಂದೆ ಒಂದೊಂದೇ ಹೆಜ್ಜೆ ಇಡುತ್ತಾ ನಡೆದನು. ಶ್ರಮಣ ಅಥವಾ ಬ್ರಾಹ್ಮಣ ಯಾವುದೇ ಜ್ಞಾನ ಅಥವಾ ವಿದ್ಯೆಯನ್ನು ಸ್ತ್ರೀಯರು ಮತ್ತು ಶೂದ್ರರಿಗೆ ತಿಳಿಸಕೂಡದೆಂಬ ದುಷ್ಟ ಅಭಿಪ್ರಾಯವನ್ನು ಬ್ರಾಹ್ಮಣ ಲೋಹಿಕ್ಕ ಇಟ್ಟುಕೊಂಡಿದ್ದಾನೆಂಬ ವಿಚಾರವನ್ನು ಅವನು ದಾರಿಯಲ್ಲಿ ತಥಾಗತನಿಗೆ ತಿಳಿಸಿದನು.

೧೬. "ನಿಜ, ಹಾಗಿರಬಹುದು. ಭೇಸಿಕ, ಹಾಗಿರಬಹುದು" ಎಂದು ತಥಾಗತ ಉತ್ತರಿಸಿದನು.

೧೭. ತಥಾಗತ ಲೋಹಿಕ್ಕ ಬ್ರಾಹ್ಮಣನಲ್ಲಿಗೆ ಹೋಗಿ ತನಗಾಗಿ ಸಿದ್ಧಮಾಡಿದ್ದ ಆಸನದ ಮೇಲೆ ಕುಳಿತನು.

೧೮. ತಥಾಗತನ ಮುಂದಾಳುತನದಲ್ಲಿ ಆತನ ಭಿಕ್ಕುಗಳಿಗೆ ಲೋಹಿಕ್ಕ ಬ್ರಾಹ್ಮಣ ತನ್ನ ಕೈಯಿಂದಲೇ ಅವರು ಬೇಡ ಎನ್ನುವವರೆಗೆ ಸಿಹಿ ಭಕ್ಷ್ಯ ಭೋಜ್ಯಗಳನ್ನು ಬಡಿಸಿದನು.

೧೯. ತಥಾಗತ ತನ್ನ ಊಟ ಮುಗಿಸಿದ ಮೇಲೆ ತನ್ನ ಬೋಗುಣಿ ಮತ್ತು ಕೈಗಳನ್ನು ತೊಳೆದುಕೊಂಡ ನಂತರ ಲೋಹಿಕ್ಕ ಬ್ರಾಹ್ಮಣ ಒಂದು ಸಣ್ಣ ಪೀಠವನ್ನು ತಂದು ಆತನ ಬಳಿ ಕುಳಿತುಕೊಂಡನು.

೨೦. ಹಾಗೆ ತನ್ನ ಬಳಿ ಕುಳಿತ ಬ್ರಾಹ್ಮಣನಿಗೆ ತಥಾಗತ ಹೀಗೆ ಕೇಳಿದನು: "ಲೋಹಿಕ್ಕ, ನೀನು ಸ್ತ್ರೀಯರಿಗಾಗಲೀ ಅಥವಾ ಶೂದ್ರರಿಗಾಗಲೀ ಜ್ಞಾನದಾನ ಮಾಡಬಾರದೆಂದು ಹೇಳುತ್ತಿರುವೆಯೆಂದು ಕೇಳಿದೆ. ಅದು ನಿಜವೇ?"

೨೧. "ಹೌದು, ಗೌತಮ" ಎಂದು ಲೋಹಿಕ್ಕ ಉತ್ತರಿಸಿದನು.

೨೨. "ಈಗ ನೀನು ಏನು ಹೇಳುವೆ, ಲೋಹಿಕ್ಕ? ನೀನು ಸಾಲವತಿಕದಲ್ಲಿ ನೆಲೆಸಿಲ್ಲವೆ?"
"ಹೌದು, ಗೌತಮ".

೨೩. "ಹಾಗಾದರೆ, ಒಂದು ಪಕ್ಷ ಯಾರಾದರೂ ಹೀಗೆಂದರು ಎಂದಿಟ್ಟುಕೊಳ್ಳೋಣ: 'ಲೋಹಿಕ್ಕ ಬ್ರಾಹ್ಮಣನ ರಾಜ್ಯವೇ ಸಾಲವತಿಕದಲ್ಲಿ ಇದೆ. ಸಾಲವತಿಕದ ಎಲ್ಲಾ ಕಂದಾಯ ಮತ್ತು ಎಲ್ಲಾ ಉತ್ಪತ್ತಿಯನ್ನೂ ಯಾರಿಗೂ ಕೊಡದೇ ಅವನೇ ಅನುಭೋಗಿಸಲಿ!' ಎಂದರೆ ನಿನ್ನನ್ನು ಅವಲಂಬಿಸಿ ಬದುಕುತ್ತಿರುವ ಜನರಿಗೆ ಸಂಬಂಧಿಸಿದಂತೆ ಅವನು ಅಪಾಯಕಾರಿ ಅಲ್ಲವೇ?"

೨೪. "ಅವನು ಅಪಾಯಕಾರಿ, ಗೌತಮ".

೨೫. "ಅಂಥ ಅಪಾಯಕಾರಿಯಾದರೆ, ಅವನು ಅವರ ಹಿತೈಷಿಯೆಂದು ಭಾವಿಸಲಾಗುತ್ತದೆಯೇ?"

೨೬. "ಇಲ್ಲ. ಅವರ ಹಿತವನ್ನು ಅವನು ಪರಿಗಣಿಸುವುದಿಲ್ಲ. ಗೌತಮ" ಎಂದು ಲೋಹಿಕ್ಕ ಉತ್ತರಿಸಿದನು.

೨೭. "ಅವರ ಹಿತವನ್ನು ಪರಿಗಣಿಸದಿದ್ದರೆ, ಅವನ ಹೃದಯ ಅವರ ಕಡೆ ಪ್ರೇಮದಿಂದಿದೆಯೋ ಅಥವಾ ದ್ವೇಷದಿಂದಿದೆಯೋ?"

೨೮. "ದ್ವೇಷದಿಂದಿದೆ, ಗೌತಮ."

೨೯. "ಅಂದರೆ ವ್ಯಕ್ತಿಯ ಹೃದಯ ದ್ವೇಷದಿಂದಿದ್ದರೆ ಅದು ಅನಾರೋಗ್ಯಕರ ಸಿದ್ಧಾಂತವೇ ಅಥವಾ ಆರೋಗ್ಯಕರ ಸಿದ್ಧಾಂತವೇ?"

೩೦. "ಅದು ಅನಾರೋಗ್ಯಕರ ಸಿದ್ಧಾಂತ, ಗೌತಮ."

೩೧. "ಈಗ ಏನು ಹೇಳುವಿ, ಲೋಹಿಕ್ಕ? ಕೋಸಲದ ಮಹಾರಾಜನಾದ ಪಸೇನದಿ ಕಾಶಿ ಮತ್ತು ಕೋಸಲದ ಅಧಿಪತಿಯಲ್ಲವೇ?"

೩೨. "ಹೌದು, ಅದು ನಿಜ, ಗೌತಮ"

೩೩. "ಹಾಗಾದರೆ ಯಾರಾದರೂ ಹೀಗೆ ಕೇಳಿದರೆಂದು ಇಟ್ಟುಕೋ: 'ಕೋಸಲದ ಮಹಾರಾಜ ಪಸೇನದಿಯು ಕಾಶಿ ಮತ್ತು ಕೋಸಲದ ಅಧಿಪತಿ. ಕಾಶಿ ಮತ್ತು ಕೋಸಲದ ಎಲ್ಲಾ ಕಂದಾಯ ಮತ್ತು ಎಲ್ಲಾ ಉತ್ಪತ್ತಿಯನ್ನು, ಯಾರಿಗೂ ಏನನ್ನೂ ಕೊಡದೆ, ಅವನೇ ಅನುಭವಿಸಲಿ' ಎಂದರೆ ಆ ರೀತಿ ಹೇಳುವವನು, ಕೋಸಲದ ಪಸೇನದಿ ಮಹಾರಾಜನನ್ನು ಆಶ್ರಯಿಸುವ ಎಲ್ಲ ಜನರಿಗೂ, ನೀನೂ ಸೇರಿದಂತೆ, ಅಪಾಯಕಾರಿ ಹೌದೋ ಅಲ್ಲವೋ?"

೩೪. "ಅವನು ಅಪಾಯಕಾರಿ ಆಗುತ್ತಾನೆ, ಗೌತಮ."

೩೫. "ಅಂಥ ಅಪಾಯಕಾರಿ ಅವರ ಹಿತವನ್ನು ಪರಿಗಣಿಸುವನೆಂದು ಹೇಳಲು ಸಾಧ್ಯವೇ?"

೩೬. "ಅವನು ಅವರ ಹಿತವನ್ನು ಪರಿಗಣಿಸುವುದಿಲ್ಲ, ಗೌತಮ."

೩೭. "ಅವರ ಹಿತವನ್ನು ಪರಿಗಣಿಸುವ ಅವನ ಹೃದಯ ಅವರ ಬಗ್ಗೆ ಪ್ರೇಮದಿಂದ ಇರುವುದೊ ಅಥವಾ ದ್ವೇಷದಿಂದಲೊ?"

೩೮. "ದ್ವೇಷದಿಂದ ಇದೆ, ಗೌತಮ."

೩೯. "ಅಂದರೆ ಮಾನವರ ಹೃದಯ ದ್ವೇಷದಿಂದ ಇದ್ದರೆ, ಅದು ಅನಾರೋಗ್ಯಕರ ಸಿದ್ಧಾಂತವೋ ಅಥವಾ ಆರೋಗ್ಯಕರ ಸಿದ್ಧಾಂತವೋ?"

೪೦. "ಅದು ಅನಾರೋಗ್ಯಕರ ಸಿದ್ಧಾಂತ, ಗೌತಮ."

೪೧. "ಹಾಗಾದರೆ, ಲೋಹಿಕ್ಕ, ಸಾಲವತಿಕವನ್ನು ಆಕ್ರಮಿಸಿಕೊಂಡಿರುವ ನೀನು ಯಾರಿಗೂ ಏನನ್ನೂ ಕೊಡದೆ ಅದರ ಎಲ್ಲ ಕಂದಾಯ ಮತ್ತು ಉತ್ಪಾದನೆಯನ್ನು ಅನುಭವಿಸಬೇಕು ಎಂದರೆ, ಹಾಗೂ ಕೋಸಲದ ಮಹಾರಾಜ ಪಸೇನದಿಯು ಕಾಶಿ ಮತ್ತು ಕೋಸಲದ ಮೇಲೆ ರಾಜ್ಯಭಾರ ಮಾಡುವುದರಿಂದ, ಯಾರಿಗೂ ಏನನ್ನೂ ಕೊಡದೆ ಅವುಗಳ ಎಲ್ಲ ಕಂದಾಯ ಮತ್ತು ಉತ್ಪಾದನೆಯನ್ನು ರಾಜನೇ ಅನುಭವಿಸಬೇಕು ಎಂದರೆ ನಿನ್ನನ್ನು ಅವಲಂಬಿಸಿರುವವರಿಗೆಲ್ಲ ಅಪಾಯವಾಗುತ್ತದೆ ಅಥವಾ ರಾಜನನ್ನು ಆಶ್ರಯಿಸಿರುವವರಿಗೆಲ್ಲ ಅಪಾಯುವಾಗುತ್ತದೆ. ಹೀಗೆ ಇತರರಿಗೆ ಅಪಾಯಕಾರಿಯಾಗಿರುವವರಿಗೆಲ್ಲ ಸಹಾನುಭೂತಿ ಇರುವುದಿಲ್ಲ, ಅವರ ಹೃದಯ ದ್ವೇಷಮಯವಾಗಿರುತ್ತದೆ. ದ್ವೇಷದಿಂದ ಕೂಡಿರುವ ಹೃದಯವಿರುವುದು ಅನಾರೋಗ್ಯಕರ ಸಿದ್ಧಾಂತ.

೪೨. "ಹಾಗೆಯೇ, ಲೋಹಿಕ್ಕ, ಶ್ರಮಣ ಅಥವಾ ಬ್ರಾಹ್ಮಣನಾದವನು ಸ್ತ್ರೀಯರಿಗೆ ಮತ್ತು ಶೂದ್ರರಿಗೆ ವಿದ್ಯಾದಾನ ಮಾಡಬಾರದು ಎನ್ನುವವನು ದ್ವೇಷಮಯಿಯಾಗಿರುತ್ತಾನೆ.

೪೩. "ಹಾಗೆಯೇ ಹೀಗೆ ಹೇಳುವವನು ಇತರರ ದಾರಿಯಲ್ಲಿ ಅಡ್ಡಿಆತಂಕಗಳನ್ನು ಉಂಟುಮಾಡುತ್ತಾನೆ; ಅವರ ಹಿತದ ಬಗ್ಗೆ ಅವನಿಗೆ ಸಹಾನುಭೂತಿ ಇರುವುದಿಲ್ಲ.

೪೪. "ಅವರ ಹಿತದ ಬಗ್ಗೆ ಸಹಾನುಭೂತಿ ಇಲ್ಲದ ಅವನ ಹೃದಯ ದ್ವೇಷದಲ್ಲಿ ಸ್ಥಿರವಾಗುತ್ತದೆ. ಹೃದಯ ದ್ವೇಷದಲ್ಲಿ ನೆಲೆಗೊಂಡರೆ ಅದು ಅನಾರೋಗ್ಯಕರ ಸಿದ್ಧಾಂತವಾಗುತ್ತದೆ."

## ೨. ಧರ್ಮ ಸದ್ಧರ್ಮವಾಗಲು ಬರಿಯ ವಿದ್ಯೆ ಸಾಕಾಗುವುದಿಲ್ಲ. ಅದು ಶುಷ್ಕ ಪಾಂಡಿತ್ಯಕ್ಕೆ ಎಡೆಮಾಡಿಕೊಡಬಹುದು.

೧. ಒಮ್ಮೆ ಕೌಸಾಂಬಿ ದೇಶದಲ್ಲಿ ಬುದ್ಧನು ತಂಗಿ 'ಸುಂದರ ದನಿ' ಎಂಬ ವಿಹಾರದಲ್ಲಿ ನೆರೆದಿದ್ದ ಜನರಿಗೆ ಬೋಧನೆ ಮಾಡುತ್ತಿದ್ದ. ಅಲ್ಲಿ ಒಬ್ಬ ಬ್ರಹ್ಮಚಾರಿಯೂ ಇದ್ದ.

೨. ಧರ್ಮಗ್ರಂಥಗಳ ಜ್ಞಾನದಲ್ಲಿ ತನಗೆ ಸರಿಸಾಟಿಯಾದವರು ಯಾರೂ ಇಲ್ಲ ಎಂದು ಭಾವಿಸಿಕೊಂಡು ಮತ್ತು ವಾದದಲ್ಲಿ ತನಗೆ ಸಮಾನರು ಯಾರೂ ಇಲ್ಲ ಎಂದುಕೊಂಡು ತಾನು ಹೋದಕಡೆಯಲ್ಲೆಲ್ಲ ಹೊತ್ತಿಸಿದ ದೀಪವೊಂದನ್ನು ಹಿಡಿದುಕೊಂಡು ಹೋಗುವುದು ಅವನ ಪದ್ಧತಿಯಾಗಿತ್ತು.

೩. ಒಂದು ದಿನ ಒಂದು ಪಟ್ಟಣದ ಸಂತೆಮಾಳದಲ್ಲಿ ಅವನನ್ನು ಈ ರೀತಿಯಾಗಿ ನೋಡಿದ ಒಬ್ಬ ವ್ಯಕ್ತಿ ಅವನ ವಿಚಿತ್ರ ವರ್ತನೆಗೆ ಕಾರಣ ಕೇಳಿದನು. ಅದಕ್ಕೆ ಅವನು ಉತ್ತರಿಸಿದನು:

೪. "ಪ್ರಪಂಚ ತುಂಬ ಕತ್ತಲಾಗಿದೆ. ಜನರು ಬಹಳ ಭ್ರಮೆಯಲ್ಲಿದ್ದಾರೆ. ಆದ್ದರಿಂದ ನನ್ನ ಕೈಲಾದಷ್ಟು ಬೆಳಕು ನೀಡಲು ಈ ದೀಪವನ್ನು ಒಯ್ಯುತ್ತಿದ್ದೇನೆ."

೫. ಇದನ್ನು ನೋಡಿದ ಬುದ್ಧ, "ಏನಲ್ಲಿ? ದೀಪದಿಂದ ನೀನು ಏನನ್ನು ಮಾಡುತ್ತಿದ್ದೀ?" ಎಂದು ಆ ಬ್ರಹ್ಮಚಾರಿಯನ್ನು ಕೇಳಿದನು.

೬. ಬ್ರಹ್ಮಚಾರಿ ಉತ್ತರಿಸಿದನು: "ಜನರೆಲ್ಲ ಮಬ್ಬಿನಲ್ಲಿ ಕತ್ತಲೆಯಲ್ಲಿ ಮುಳುಗಿಹೋಗಿದ್ದಾರೆ. ಅವರಿಗೆ ಬೆಳಕು ನೀಡಲು ಈ ದೀಪ ಒಯ್ಯುತ್ತಿದ್ದೇನೆ."

೭. ಆಗ ತಥಾಗತ ಅವನನ್ನು ಮತ್ತೆ ಕೇಳಿದನು: "ಧರ್ಮಶಾಸ್ತ್ರಗಳಲ್ಲಿ ಬರುವ ನಾಲ್ಕು ವಿದ್ಯೆಗಳಲ್ಲಿಯೂ ನೀನು ಅಷ್ಟೊಂದು ಜ್ಞಾನ ಸಂಪಾದಿಸಿದ್ದೀಯಾ? ಅಂದರೆ 'ಶಬ್ದವಿದ್ಯೆ' (ಸಾಹಿತ್ಯ), 'ಜ್ಯೋತಿಶಾಸ್ತ್ರ' (ಆಕಾಯಕಾಯಗಳು ಮತ್ತು ಅವುಗಳ ಪಥಗಳು), 'ಸರ್ಕಾರ' ಮತ್ತು 'ಯುದ್ಧಕಲೆ'ಗೆ ಸಂಬಂಧಿಸಿದ ಜ್ಞಾನವೆಲ್ಲ ನಿನಗೆ ವಶವಾಗಿದೆಯೇ?"

೮. ಈ ವಿಷಯಗಳಲ್ಲಿ ತನಗೆ ಪ್ರವೇಶವಿಲ್ಲ ಎಂದು ಆ ಬ್ರಹ್ಮಚಾರಿ ಒಪ್ಪಿಕೊಂಡು ತನ್ನ ದೀಪವನ್ನು ದೂರ ಎಸೆದನು. ನಂತರ ಬುದ್ಧ ಈ ಮಾತುಗಳನ್ನು ಹೇಳಿದನು:

೯. "ಇತರರನ್ನು ತಿರಸ್ಕರಿಸುವಷ್ಟು ತಾನು ಪಂಡಿತ ಎಂದು ಭಾವಿಸುವ ವ್ಯಕ್ತಿ ದೀಪ ಹಿಡಿದು ಕುರುಡನಂತಿರುತ್ತಾನೆ – ಸ್ವತಃ ಕುರುಡ, ಇತರರಿಗೆ ಬೆಳಕು ನೀಡುತ್ತಾನೆ!"

## ೩. ಪ್ರಜ್ಞೆ ಅಗತ್ಯವೆಂದು ಬೋಧಿಸಿದಾಗ ಧಮ್ಮ ಸದ್ಧರ್ಮವಾಗುತ್ತದೆ.

೧. ಬ್ರಾಹ್ಮಣರು ವಿದ್ಯೆಯನ್ನು ಮೌಲಿಕವೆಂದು ಭಾವಿಸಿದ್ದರು. ವ್ಯಕ್ತಿ ಶೀಲವಂತನೇ ಅಲ್ಲವೇ ಎಂಬುದನ್ನು ನೋಡದೆ ಅವನಲ್ಲಿ ಕೇವಲ ಪಾಂಡಿತ್ಯ ಮತ್ತು ಜ್ಞಾನ ಇದ್ದರೆ ಅವನನ್ನು ಗೌರವಾರ್ಹ ಎಂದು ಜನರು ಪರಿಗಣಿಸಿದ್ದರು.

೨. ರಾಜ ತನ್ನ ದೇಶದಲ್ಲಿ ಗೌರವಾನ್ವಿತನಾಗಿದ್ದರೆ ಪಂಡಿತ ಪ್ರಪಂಚದಲ್ಲೆಲ್ಲಾ ಮಾನ್ಯನಾಗುತ್ತಾನೆಂದು ನಿಜವಾಗಿಯೂ ಅವರು ಹೇಳಿದ್ದರು. ಅದರ ಸೂಚ್ಯಾರ್ಥ ರಾಜನಿಗಿಂತಲೂ ಪಂಡಿತ ಮೇಲೆಂದು.

೩. ವಿದ್ಯೆಗೂ ಪ್ರಜ್ಞೆಗೂ ಅಂದರೆ ಜ್ಞಾನಕ್ಕೂ ಅಂತರ್ದೃಷ್ಟಿಗೂ ಇರುವ ವ್ಯತ್ಯಾಸವನ್ನು ಬುದ್ಧ ತೋರಿಸಿಕೊಟ್ಟಿದ್ದಾನೆ.

೪. ಪ್ರಜ್ಞೆಗೂ ವಿದ್ಯೆಗೂ ವ್ಯತ್ಯಾಸ ಉಂಟೆಂದು ಬ್ರಾಹ್ಮಣರೂ ಹೇಳಿದ್ದರು ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

೫. ಅದು ನಿಜವಿರಬಹುದು. ಆದರೆ ಬುದ್ಧ ಹೇಳುವ ಪ್ರಜ್ಞೆಗೂ ಬ್ರಾಹ್ಮಣರು ಹೇಳುವ ಪ್ರಜ್ಞೆಗೂ ವ್ಯತ್ಯಾಸವಿದೆ.

೬. 'ಅಂಗುತ್ತರ ನಿಕಾಯ'ದಲ್ಲಿ ವರದಿಯಾಗಿರುವ ಉಪದೇಶದಲ್ಲಿ ಬುದ್ಧ ಈ ವ್ಯತ್ಯಾಸವನ್ನು ಚೆನ್ನಾಗಿ ತೋರಿಸಿಕೊಟ್ಟಿದ್ದಾನೆ.

೭. ಒಂದು ಸಂದರ್ಭದಲ್ಲಿ ರಾಜಗೃಹದ ಹತ್ತಿರ ಅಳಿಲುಗಳ ಆಹಾರದ ಸ್ಥಳವಾದ ವೇಣುವನದಲ್ಲಿ ಬುದ್ಧ ತಂಗಿದ್ದನು.

೮. ಆ ಸಂದರ್ಭದಲ್ಲಿ ಮಗಧ ದೇಶದ ದೊಡ್ಡ ಅಧಿಕಾರಿಯಾಗಿದ್ದ ವಸ್ಸಕಾರನೆಂಬ ಬ್ರಾಹ್ಮಣ ತಥಾಗತನನ್ನು ನೋಡಲು ಬಂದನು; ಬಂದವನು ಆತನನ್ನು ಸೌಜನ್ಯಯುತವಾಗಿ ಅಭಿವಂದಿಸಿದನು. ಉಭಯ ಕುಶಲೋಪರಿ ಸಾಂಪ್ರತ ಆದಮೇಲೆ ಒಂದು ಕಡೆ ಕುಳಿತುಕೊಂಡನು. ನಂತರ ವಸ್ಸಕಾರ ಬ್ರಾಹ್ಮಣ ತಥಾಗತನಿಗೆ ಹೀಗೆ ಹೇಳಿದನು:

೯. "ಗುರು ಗೌತಮ, ವ್ಯಕ್ತಿಯಲ್ಲಿ ನಾಲ್ಕು ಗುಣಗಳಿದ್ದರೆ ಆತನನ್ನು ಮಹಾಜ್ಞಾನಿ ಎಂದು, ದೊಡ್ಡ ಮನುಷ್ಯ ಎಂದು ನಾವು ಬ್ರಾಹ್ಮಣರು ಕರೆಯುತ್ತೇವೆ. ಆ ನಾಲ್ಕು ಗುಣಗಳು ಯಾವುವು?

೧೦. "ಗುರು ಗೌತಮ, ಇದರಲ್ಲಿ ಆತ ವಿದ್ವಾಂಸ. ಯಾವುದನ್ನೇ ಕೇಳಲಿ, ಅದನ್ನು ಉಚ್ಚರಿಸಿದ ಕೂಡಲೇ ಅವನು ಅದರ ಅರ್ಥವನ್ನು ಅರಿಯುತ್ತಾನೆ, 'ಇದು ಇದರ ಅರ್ಥ' ಎಂದು ಹೇಳುತ್ತಾನೆ. ಅಲ್ಲದೆ ಆತನಿಗೆ ಒಳ್ಳೆಯ ಜ್ಞಾಪಕ ಶಕ್ತಿ ಇದೆ. ಬಹಳ ಹಿಂದೆ ನಡೆದ, ಬಹಳ ಹಿಂದೆ ನುಡಿದ ವಿಷಯವನ್ನು ನೆನಪಿಸಿಕೊಂಡು ಹೇಳಬಲ್ಲ.

೧೧. "ಮತ್ತೆ ಗೃಹಸ್ಥನ ಎಲ್ಲ ವ್ಯವಹಾರದಲ್ಲಿ ಆತ ಕುಶಲಿಯಾಗಿ ಜಾಗ್ರತನಾಗಿರುತ್ತಾನೆ. ಅದರಲ್ಲಿ ಆತ ವಿವೇಕಯುತನಾಗಿ ಯಾವುದು ಯೋಗ್ಯ, ಯಾವುದನ್ನು ವ್ಯವಸ್ಥೆ ಮಾಡಬೇಕು ಎಂದು ತಪಾಸಣೆ ಮಾಡಲು ಸಮರ್ಥನಾಗಿರುತ್ತಾನೆ.

೧೨. "ಈಗ, ಗುರು ಗೌತಮ, ಮನುಷ್ಯ ಈ ಗುಣಗಳನ್ನು ಪಡೆದಿದ್ದರೆ ಆತನನ್ನು ದೊಡ್ಡ ಜ್ಞಾನಿ, ದೊಡ್ಡ ಮನುಷ್ಯ ಎಂದು ನಾವು ಹೇಳುತ್ತೇವೆ. ನಾನು ಪ್ರಶಂಸೆಗೆ ಯೋಗ್ಯನಾಗಿದ್ದರೆ ಗುರು ಗೌತಮ ನನ್ನನ್ನು ಪ್ರಶಂಸಿಸಲಿ. ಅದಕ್ಕೆ ಪ್ರತಿಯಾಗಿ, ನಾನು ನಿಂದಾರ್ಹನೆಂದು ಭಾವಿಸಿದರೆ ಅದಕ್ಕಾಗಿ ನನ್ನನ್ನು ನಿಂದಿಸಲಿ."

೧೩. "ಸರಿ, ಬ್ರಾಹ್ಮಣ, ನಿನ್ನನ್ನು ನಾನು ಪ್ರಶಂಸಿಸುವುದೂ ಇಲ್ಲ, ನಿಂದಿಸುವುದೂ ಇಲ್ಲ. ಈ ಮುಂದಿನ ನಾಲ್ಕು ಗುಣಗಳಿದ್ದರೆ ನಾನು ಆತನನ್ನು ದೊಡ್ಡ ಜ್ಞಾನಿ ಎಂದು ಕರೆಯುತ್ತೇನೆ. ಅವು ನೀನು ಹೇಳಿದವುಗಳಿಗಿಂತ ಸಂಪೂರ್ಣ ಭಿನ್ನವಾಗಿವೆ.

೧೪. "ಬ್ರಾಹ್ಮಣನೆ, ಬಹು ಜನ ಹಿತಾಯ ಬಹು ಜನ ಸುಖಾಯಕ್ಕಾಗಿ ಒಬ್ಬನಿದ್ದಾನೆ. ಅವನಿಂದಾಗಿ ಅನೇಕರು ಉತ್ತಮ ವಿಧಾನವನ್ನು ಅನುಸರಿಸುತ್ತಾರೆ; ಅಂದರೆ ಯಾರು ಸುಂದರವಾದ ಸ್ವಭಾವ ಮತ್ತು ಯಾವುದು ಲಾಭಕರವಾದ ಸ್ವಭಾವ ಎಂಬುದರಲ್ಲಿ ಸ್ಥಿರರಾಗುತ್ತಾರೆ.

೧೫. "ಯಾವುದೇ ವಿಚಾರ ಸರಣಿಯಲ್ಲಿ ಅವನು ಆಸಕ್ತನಾದರೆ ಆ ವಿಚಾರ ಸರಣಿಗೆ ಅವನು ತನ್ನನ್ನು ಅನ್ವಯಿಸಿಕೊಳ್ಳುತ್ತಾನೆ; ಯಾವ ವಿಚಾರ ಸರಣಿಗೆ ಅವನು ಆಸಕ್ತನಲ್ಲವೋ ಅದಕ್ಕೆ ಅವನು ಅಂಟಿಕೊಳ್ಳುವುದಿಲ್ಲ.

೧೬. "ಯಾವ ಉದ್ದೇಶಕ್ಕಾಗಿ ಅವನು ಸಂಕಲ್ಪಿಸುತ್ತಾನೊ ಅವನು ಹಾಗೆ ಮಾಡುತ್ತಾನೆ ಅಥವಾ ಸಂಕಲ್ಪಿಸದಿದ್ದರೆ ಅವನು ಹಾಗೆ ಮಾಡುವುದಿಲ್ಲ. ಹೀಗೆ ಅವನು ಆಲೋಚನಾ ವಿಧಾನದಲ್ಲಿ ತನ್ನ ಮನಸ್ಸಿನ ಒಡೆಯನಾಗುತ್ತಾನೆ.

೧೭. "ಅಲ್ಲದೆ ಅವನು ಕಷ್ಟವಿಲ್ಲದೆ ತೊಂದರೆಯಿಲ್ಲದೆ ಇಷ್ಟಾನುಸಾರ ಉನ್ನತ ಆಲೋಚನೆಗೆ ಸಂಬಂಧಿಸಿದ ಈ ಬದುಕಿನಲ್ಲಿ ಆನಂದಕರವಾಗಿರುವ ನಾಲ್ಕು ಧ್ಯಾನಮನ್ನತೆಯ ಸ್ಥಿತಿಗಳನ್ನು ತಲುಪುತ್ತಾನೆ.

೧೮. "ಅಲ್ಲದೆ ಆಸವ(ಬಂಧನ)ಗಳ ವಿನಾಶದಿಂದ ಈ ಜೀವನದಲ್ಲೇ ಅದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಹೃದಯವನ್ನು ಬಂಧಮುಕ್ತ ಮಾಡಿಕೊಳ್ಳುತ್ತಾನೆ. ಜ್ಞಾನದಿಂದ ವಿಮೋಚನೆಗೊಂಡು ಅದರಲ್ಲೇ ನೆಲೆಸುತ್ತಾನೆ.

೧೯. "ಬ್ರಾಹ್ಮಣನೇ, ಈ ವಿಷಯದಲ್ಲಿ ನಾನು ನಿನ್ನನ್ನು ನಿಂದಿಸುವುದಾಗಲೀ, ಪ್ರಶಂಸಿಸುವುದಾಗಲೀ ಮಾಡುವುದಿಲ್ಲ. ಯಾರು ಈ ನಾಲ್ಕು ವಿವಿಧ ಗುಣಗಳನ್ನು ಗಳಿಸಿದ್ದಾನೋ ಅವನನ್ನು ನಾನು ದೊಡ್ಡ ಜ್ಞಾನಿ, ದೊಡ್ಡ ಮನುಷ್ಯ ಎಂದು ಘೋಷಿಸುತ್ತೇನೆ."

೨೦. "ಅದ್ಭುತ, ಗುರು ಗೌತಮ! ಪರಮಾಶ್ಚರ್ಯ, ಗುರು ಗೌತಮ! ಇದನ್ನು ಎಷ್ಟು ಚೆನ್ನಾಗಿ ಮಾನ್ಯ ಗೌತಮ ಹೇಳಿದ್ದಾನೆ!

೨೧. "ಇದೇ ಈ ನಾಲ್ಕು ಗುಣಗಳನ್ನು ಮಾನ್ಯ ಗೌತಮ ಪಡೆದಿರುವನೆಂದು ನಾನು ನಂಬುತ್ತೇನೆ. ಮಾನ್ಯ ಗೌತಮ ಬಹುಜನ ಹಿತಾಯ ಬಹುಜನ ಸುಖಾಯಕ್ಕಾಗಿ ನಿರತನಾಗಿದ್ದಾನೆ. ಅವನಿಂದಾಗಿ ಬಹುಮಂದಿ ಉತ್ತಮ ವಿಧಾನದಲ್ಲಿ ಅಂದರೆ ಯಾವುದು ಸುಂದರ ಸ್ವಭಾವವೊ, ಯಾವುದು ಲಾಭಕರ ಸ್ವಭಾವವೊ ಅದರಲ್ಲಿ ನೆಲಸಿದ್ದಾರೆ.

೨೨. "ನಿಜವಾಗಿಯೂ, ಮಾನ್ಯ ಗೌತಮ, ತನಗೆ ಇಷ್ಟವಾದ ವಿಚಾರಸರಣಿಗೆ ತನ್ನನ್ನು ಒಡ್ಡಿಕೊಳ್ಳುತ್ತಾನೆ..... ಆಲೋಚನಾ ವಿಧಾನದಲ್ಲಿ ಮಾನ್ಯ ಗೌತಮ ತನ್ನ ಮನಸ್ಸಿನ ಒಡೆಯನೆಂಬುದು ಖಾತ್ರಿ.

೨೩. "ಖಚಿತವಾಗಿಯೂ ಮಾನ್ಯ ಗೌತಮ ಇಷ್ಟಾನುಸಾರ ನಾಲ್ಕು ಧ್ಯಾನ ಸ್ಥಿತಿಗಳನ್ನು ತಲುಪುತ್ತಾನೆ... ನಿಜವಾಗಿಯೂ ಮಾನ್ಯ ಗೌತಮ ಆಸವಗಳ ವಿನಾಶದಿಂದ ಹೃದಯ ಬಿಡುಗಡೆಯನ್ನು ಗಳಿಸಿ, ಜ್ಞಾನದಿಂದ ವಿಮೋಚನೆ ಪಡೆದು ಅದರಲ್ಲಿ ನೆಲೆಸಿದ್ದಾನೆ."

೨೪. ಬುದ್ಧನ ಪ್ರಜ್ಞೆಗೂ, ಬ್ರಾಹ್ಮಣರ ಪ್ರಕಾರದ ಪ್ರಜ್ಞೆಗೂ ಸ್ಪಷ್ಟ ಮಾತುಗಳಲ್ಲಿ ಇಲ್ಲಿ ವ್ಯತ್ಯಾಸವನ್ನು ಹೇಳಲಾಗಿದೆ.

೨೫. ವಿದ್ಯೆಗಿಂತ ಪ್ರಜ್ಞೆ ಮುಖ್ಯವಾದುದೆಂದು ಇಲ್ಲಿ ಬುದ್ಧ ತನ್ನ ವಾದವನ್ನು ಮಂಡಿಸಿದ್ದಾನೆ.

## ಪರಿಚ್ಛೇದ : ೩

## ಧರ್ಮ ಸದ್ಧರ್ಮವಾಗಬೇಕಾದರೆ ಮೈತ್ರಿಯನ್ನು ಬೆಳೆಸಬೇಕು

### ೧. ಕೇವಲ ಪ್ರಜ್ಞೆಯೊಂದೇ ಸಾಲದು ಎಂದು ಬೋಧಿಸಿದಾಗ ಮಾತ್ರ ಧರ್ಮ ಸದ್ಧರ್ಮವಾಗುತ್ತದೆ : ಅದನ್ನು ಶೀಲ ಅನುಸರಿಸಬೇಕು.

೧. ಪ್ರಜ್ಞೆ ಅಗತ್ಯ. ಆದರೆ ಶೀಲ ಇನ್ನೂ ಅಗತ್ಯ. ಶೀಲವಿಲ್ಲದ ಪ್ರಜ್ಞೆ ಅಪಾಯಕಾರಿಯಾದುದು.

೨. ಬರೀ ಪ್ರಜ್ಞೆ ಅಪಾಯಕಾರಿಯಾದುದು.

೩. ಪ್ರಜ್ಞೆ ಎನ್ನುವುದು ಮನುಷ್ಯನ ಕೈಯಲ್ಲಿನ ಖಡ್ಗ.

೪. ಶೀಲವುಳ್ಳ ವ್ಯಕ್ತಿಯ ಕೈಯಲ್ಲಿ ಅದು ಮನುಷ್ಯನನ್ನು ಅಪಾಯದಿಂದ ರಕ್ಷಿಸಬಹುದು.

೫. ಆದರೆ ಶೀಲವಿಲ್ಲದ ಮನುಷ್ಯನ ಕೈಯಲ್ಲಿ ಅದು ಕೊಲೆಗೆ ಬಳಕೆಯಾಗಬಹುದು.

೬. ಆದ್ದರಿಂದಲೇ ಪ್ರಜ್ಞೆಗಿಂತ ಶೀಲ ಮುಖ್ಯವಾದುದು.

೭. ಪ್ರಜ್ಞೆ ಎಂದರೆ ವಿಚಾರ ಧಮ್ಮ ಅಥವಾ ಸರಿಯಾಗಿ ಆಲೋಚಿಸುವುದು. ಶೀಲ ಎನ್ನುವುದು ಆಚಾರ ಧಮ್ಮ, ಸರಿಯಾಗಿ ನಡೆದುಕೊಳ್ಳುವುದು.

೮. ಶೀಲದ ಬಗ್ಗೆ ಬುದ್ಧ ಐದು ಮೂಲಭೂತ ತತ್ತ್ವಗಳನ್ನು ವಿಧಿಸಿದ್ದಾನೆ.

೯. ಒಂದು – ಕೊಲ್ಲದೆ ಇರುವುದು.

೧೦. ಎರಡು–ಕಳ್ಳತನ ಕೂಡದು.

೧೧. ಮೂರು–ವ್ಯಭಿಚಾರ ಮಾಡಬಾರದು.

೧೨. ನಾಲ್ಕು–ಸುಳ್ಳು ಹೇಳಕೂಡದು.

೧೩. ಐದು–ಮದ್ಯಪಾನ ಮಾಡಬಾರದು.

೧೪. ಈ ಪ್ರತಿಯೊಂದರ ಬಗ್ಗೆಯೂ ಜನರಿಗೆ–ಕೊಲ್ಲಬೇಡಿ, ಕದಿಯಬೇಡಿ, ಸುಳ್ಳು ಹೇಳಬೇಡಿ, ವ್ಯಭಿಚಾರ ಮಾಡಬೇಡಿ, ಮದ್ಯಪಾನ ಮಾಡಬೇಡಿ ಎಂದು ತಥಾಗತ ಆದೇಶಿಸಿದನು.

೧೫. ಜ್ಞಾನಕ್ಕಿಂತ ಶೀಲಕ್ಕೆ ಬುದ್ಧ ಏಕೆ ಭಾರೀ ಮಹತ್ತ್ವವನ್ನು ಕೊಟ್ಟನೆಂಬುದು ಸ್ಪಷ್ಟವಾಗಿದೆ.

೧೬. ಜ್ಞಾನದ ಬಳಕೆ ಮನುಷ್ಯನ ಶೀಲವನ್ನು ಅವಲಂಬಿಸಿದೆ. ಶೀಲವನ್ನು ಹೊರತುಪಡಿಸಿದರೆ ಜ್ಞಾನಕ್ಕೆ ಬೆಲೆಯಿಲ್ಲ. ಇದು ಆತ ಹೇಳಿದ್ದು.

೧೭. ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದ್ದಾನೆ: "ಈ ಪ್ರಪಂಚದಲ್ಲಿ ಶೀಲಕ್ಕೆ ಸಮಾನವಾದುದು ಯಾವುದೂ ಇಲ್ಲ.

೧೮. "ಶೀಲವೇ ಆದಿ ಮತ್ತು ಆಶ್ರಯ. ಶೀಲವೇ ಎಲ್ಲ ಒಳಿತಿನ ಜನನಿ. ಎಲ್ಲಾ ಒಳ್ಳೆಯ ಸ್ಥಿತಿಗಳಲ್ಲಿ ಶೀಲವೇ ಅಗ್ರಮಾನ್ಯವಾದುದು. ಆದ್ದರಿಂದ ನಿನ್ನ ಶೀಲವನ್ನು ಪರಿಶುದ್ಧಗೊಳಿಸು."

## ೨. ಪ್ರಜ್ಞೆ ಮತ್ತು ಶೀಲದ ಜೊತೆಗೆ ಅಗತ್ಯವಾಗಿರುವ ಕರುಣೆಯನ್ನು ಬೋಧಿಸಿದಾಗಲೇ ಧರ್ಮ ಸದ್ಧರ್ಮವಾಗುತ್ತದೆ.

೧. ಬುದ್ಧ ಧರ್ಮದ ತಳಪಾಯಕ್ಕೆ ಸಂಬಂಧಿಸಿದ ವಿಷಯದಲ್ಲಿ ಕೆಲವೊಂದು ಭಿನ್ನಾಭಿಪ್ರಾಯಗಳಿವೆ.

೨. ಪ್ರಜ್ಞೆಯೊಂದೇ ಆತನ ಧರ್ಮದ ತಳಪಾಯವೇ? ಕರುಣೆಯೊಂದೇ ಆತನ ಧರ್ಮದ ತಳಪಾಯವೇ?

೩. ಈ ವಿವಾದ ಬುದ್ಧನ ಅನುಯಾಯಿಗಳನ್ನು ಎರಡು ಶಾಖೆಗಳನ್ನಾಗಿ ಒಡೆಯಿತು. ಪ್ರಜ್ಞೆಯೇ ಬುದ್ಧ ಧರ್ಮದ ತಳಪಾಯ ಎಂದು ಒಂದು ಶಾಖೆ ಅಭಿಪ್ರಾಯಪಟ್ಟಿತು. ಕರುಣೆಯೇ ಬುದ್ಧ ಧರ್ಮದ ತಳಪಾಯ ಎಂದು ಇನ್ನೊಂದು ಶಾಖೆ ಅಭಿಪ್ರಾಯಪಟ್ಟಿತು.

೪. ಇವತ್ತಿಗೂ ಈ ಶಾಖೆಗಳು ಬೇರೆ ಬೇರೆಯಾಗಿವೆ.

೫. ಬುದ್ಧವಚನದ ಬೆಳಕಿನಲ್ಲಿ ನಿರ್ಣಯಿಸಿದರೆ ಎರಡು ಶಾಖೆಗಳೂ ತಪ್ಪಾಗಿ ಕಾಣುತ್ತವೆ.

೬. ಬುದ್ಧ ಧರ್ಮದ ಎರಡು ಆಧಾರ ಸ್ತಂಭಗಳಲ್ಲಿ ಪ್ರಜ್ಞೆ ಒಂದು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ.

೭. ಕರುಣೆಯೂ ಆತನ ಧರ್ಮದ ಒಂದು ಸ್ತಂಭವೇ ಎಂಬುದರ ಬಗ್ಗೆ ವಿವಾದವಿದೆ.

೮. ಕರುಣೆ ಆತನ ಧರ್ಮದ ಒಂದು ಸ್ತಂಭವೆನ್ನುವುದು ವಿವಾದಾತೀತವಾಗಿದೆ.

೯. ಇದರ ಸಮರ್ಥನೆಗಾಗಿ ಆತನ ಮಾತುಗಳನ್ನೇ ಉತ್ತರಿಸಬಹುದು.

೧೦. ಹಿಂದಿನ ಕಾಲದಲ್ಲಿ ಗಾಂಧಾರ ಎಂಬ ದೇಶವಿತ್ತು. ಅಲ್ಲಿ ತುಂಬ ವಯಸ್ಸಾದ ಒಬ್ಬ ಭಿಕ್ಷುಕ ಇದ್ದನು. ಅವನಿಗೆ ಅಸಹ್ಯವಾದ ಬೇನೆ ಇತ್ತು. ಅದರಿಂದಾಗಿ ಅವನಿದ್ದ ಜಾಗವೆಲ್ಲ ಮಲಿನವಾಗುತ್ತಿತ್ತು.

೧೧. ಆ ಸ್ಥಳದ ಯಾವುದೋ ವಿಹಾರದಲ್ಲಿದ್ದ ಅವನ ಹತ್ತಿರ ಯಾರೂ ಹೋಗುತ್ತಿರಲಿಲ್ಲ; ಕಷ್ಟದಲ್ಲಿ ಅವನಿಗೆ ಏನೂ ಸಹಾಯ ಮಾಡುತ್ತಿರಲಿಲ್ಲ.

೧೨. ಇಲ್ಲಿಗೆ ಬುದ್ಧ ತನ್ನ ೫೦೦ ಜನ ಭಿಕ್ಷುಗಳ ಜೊತೆ ಬಂದನು. ತಮಗೆ ಬೇಕಾದ ಎಲ್ಲಾ ಪಾತ್ರೆ ಪರಟೆಗಳು  ಮತ್ತು ಬಿಸಿ ನೀರನ್ನು ತೆಗೆದುಕೊಂಡು ಅವರು ಆ ಮುದಿ ಭಿಕ್ಷುಕನಿದ್ದಲ್ಲಿಗೆ ಬಂದರು.

೧೩. ಆ ಸ್ಥಳದ ದುರ್ವಾಸನೆ ಅಸಹ್ಯಕರವಾಗಿತ್ತು. ಆ ಮನುಷ್ಯನ ಬಗ್ಗೆ ಭಿಕ್ಷುಗಳಿಗೆಲ್ಲ ತಿರಸ್ಕಾರ ತುಂಬಿತ್ತು. ಆದರೆ ಜಗನ್ಮಾನ್ಯನು ಶಕ್ರದೇವನಿಗೆ ನೀರನ್ನು ತರಲು ಹೇಳಿ ಆಮೇಲೆ ತನ್ನ ಕೈಯಿಂದಲೇ ಆ ಭಿಕ್ಷುಕನ ದೇಹವನ್ನು ತೊಳೆದು, ಅವನ ರೋಗಗಳಿಗೆ ಔಷಧೋಪಚಾರ ಮಾಡಿದನು.

೧೪. ಆಗ ಭೂಮಿಯು ಕಂಪಿಸಿತು. ಆ ಇಡೀ ಸ್ಥಳ ಅಲೌಕಿಕ ತೇಜಸ್ಸಿನಿಂದ ತುಂಬಿಬಿಟ್ಟಿತು. ರಾಜ, ಮಂತ್ರಿಗಳು, ಎಲ್ಲಾ ದೇವತೆಗಳು, ನಾಗಗಳು ಆ ಸ್ಥಳಕ್ಕೆ ಫೇರಾಯಿಸಿ ಬುದ್ಧನಿಗೆ ಗೌರವ ಸಲ್ಲಿಸಿದರು.

೧೫. ಹಾಗೆ ಮಾಡಿದ ಅವರು ಜಗನ್ಮಾನ್ಯನನ್ನು ಸಂಬೋಧಿಸಿ ಇಂತೆಂದರು: "ಅಷ್ಟೊಂದು ಉನ್ನತವಾದ ತಥಾಗತ ಇಂಥ ಕೆಲಸಗಳನ್ನು ಮಾಡಲು ಹೇಗೆ ತನ್ನನ್ನೇ ತಾನು ಕೆಳಗಿಳಿಸಿಕೊಂಡ" ಎಂದು ಪ್ರಶ್ನಿಸಿದರು. ಬುದ್ಧ ಹೀಗೆ ಉತ್ತರಿಸಿದನು:

೧೬. "ತಥಾಗತ ಪ್ರಪಂಚಕ್ಕೆ ಬಂದುದರ ಉದ್ದೇಶವೇ ಬಡವರನ್ನು, ಅಸಹಾಯಕರನ್ನು, ನಿರ್ಗತಿಕರನ್ನು ಗೆಳೆಯರನ್ನಾಗಿ ಮಾಡಿಕೊಳ್ಳುವುದು; ಶರೀರ ಸ್ವಾಸ್ಥ್ಯ ಇಲ್ಲದವರಿಗೆ ಆರೈಕೆ ಮಾಡುವುದು, ಅವರು ಶ್ರಮಣರಾಗಲೀ ಅಥವಾ ಬೇರಾವುದೇ ಧರ್ಮದವರಾಗಲೀ ಅವರಿಗೆ ಸಹಾಯ ಮಾಡುವುದು, ದೀನರು, ತಬ್ಬಲಿಗಳು ಮತ್ತು ವಯಸ್ಸಾದವರಿಗೆ ನೆರವಾಗುವುದು ಮತ್ತು ಇತರರೂ ಹಾಗೆ ಮಾಡುವಂತೆ ಪ್ರೇರೇಪಿಸುವುದು."

## ೩. ಕರುಣೆಗಿಂತ ಹೆಚ್ಚು ಅವಶ್ಯಕವಾಗಿರುವ ಮೈತ್ರಿಯನ್ನು ಬೋಧಿಸಿದಾಗ ಮಾತ್ರ ಧರ್ಮ ಸದ್ಧರ್ಮವಾಗುತ್ತದೆ.

೧. ಕರುಣೆಯನ್ನು ಬೋಧಿಸಿ ಬುದ್ಧ ಸುಮ್ಮನಾಗಲಿಲ್ಲ.

೨. ಕರುಣೆ ಮಾನವ ಜೀವಿಗಳಿಗೆ ಪ್ರೀತಿಯೇ ಆಗಿದೆ. ಬುದ್ಧ ಅದನ್ನೂ ದಾಟಿಹೋಗಿ ಮೈತ್ರಿ ಬೋಧಿಸಿದ. ಮೈತ್ರಿ ಎಂದರೆ ಎಲ್ಲ ಜೀವಿಗಳ ಮೇಲೆಯೂ ಪ್ರೀತಿ.

೩. ಮನುಷ್ಯ ಕರುಣೆಯಲ್ಲಿ ನಿಲ್ಲಬೇಕೆಂದು ಬುದ್ಧ ಬಯಸಲಿಲ್ಲ. ಆದರೆ ಮಾನವ ಜನಾಂಗವನ್ನು ಮೀರಿ ಎಲ್ಲ ಜೀವಂತ ಪ್ರಾಣಿಗಳ ಮೇಲೂ ಮೈತ್ರಿ ಭಾವವನ್ನು ಬೆಳೆಸಿಕೊಳ್ಳಲು ಆಶಿಸಿದನು.

೪. ತಥಾಗತ ಶ್ರಾವಸ್ತಿಯಲ್ಲಿ ತಂಗಿದ್ದಾಗ ಇದನ್ನು ಒಂದು ಸುತ್ತದಲ್ಲಿ ವಿವರಿಸಿದ್ದಾನೆ.

೫. ಮೈತ್ರಿಯ ಬಗ್ಗೆ ಹೇಳುತ್ತ ತಥಾಗತ ಭಿಕ್ಕುಗಳಿಗೆ ಹೀಗೆ ಹೇಳಿದ:

೬. "ಮನುಷ್ಯ ಭೂಮಿಯನ್ನು ಅಗೆಯಲು ಬಂದಾಗ ಅದು ಅವನ ಮೇಲೆ ಕೋಪಿಸಿಕೊಳ್ಳುವುದೇ?"

೭ "ಇಲ್ಲ, ತಂದೆ", ಭಿಕ್ಕುಗಳು ಉತ್ತರಿಸಿದನು.

೮. "ಮನುಷ್ಯ ಅರಗು ಮತ್ತು ಬಣ್ಣಗಳನ್ನು ತೆಗೆದುಕೊಂಡು ಬಂದು ಗಾಳಿಯಲ್ಲಿ ಚಿತ್ರ ಬರೆಯಲು ಬಯಸಿದ ಎಂದು ಇಟ್ಟುಕೊಳ್ಳೋಣ. ಅವನು ಹಾಗೆ ಮಾಡಲು ಸಾಧ್ಯವೇ?"

೯. "ಸಾಧ್ಯವಿಲ್ಲ, ತಂದೆ."

೧೦. "ಏಕೆ?"

"ಏಕೆಂದರೆ ಗಾಳಿಯಲ್ಲಿ ಕಪ್ಪು ಕಲೆಗಳಿಲ್ಲ" – ಭಿಕ್ಕುಗಳು ಉತ್ತರಿಸಿದರು.

೧೧. "ಅದೇ ರೀತಿ ನಿಮ್ಮ ಮನಸ್ಸಿನಲ್ಲಿಯೂ ಕಪ್ಪು ಕಲೆಗಳಿರಬಾರದು. ಅವು ನಿಮ್ಮ ಕೆಟ್ಟ ಭಾವನೆಗಳ ಪ್ರತಿಫಲನಗಳು."

೧೨. "ಉರಿಯುವ ಪಂಜನ್ನು ಹಿಡಿದು ಗಂಗಾನದಿಯನ್ನು ಹೊತ್ತಿಸುತ್ತೇನೆಂದು ಒಬ್ಬ ಬರುತ್ತಾನೆಂದು ಊಹಿಸಿ. ಅವನು ಅದನ್ನು ಹೊತ್ತಿಸಲು ಸಾಧ್ಯವೇ?"

೧೩. "ಇಲ್ಲ, ತಂದೆ."

೧೪. "ಏಕೆ?"

"ಏಕೆಂದರೆ ಗಂಗಾನದಿಗೆ ದಹನ ಗುಣವಿಲ್ಲ."

೧೫. ತನ್ನ ಉಪದೇಶವನ್ನು ಮುಗಿಸುತ್ತಾ ಬುದ್ಧ ಹೇಳಿದ:

"ಭೂಮಿ ತನಗೆ ನೋವಾಯಿತು ಎಂದು ಕೋಪಿಸಿಕೊಳ್ಳದಿರುವಂತೆ, ತನ್ನ ವಿರುದ್ಧ ಗಾಳಿ ಯಾವುದೇ ಕ್ರಿಯೆಗೂ ಅವಕಾಶ ಕೊಡದಂತೆ, ಬೆಂಕಿಯಿಂದ ಯಾವ ರೀತಿಯೂ ವಿಚಲಿತವಾಗದೆ ಹರಿಯುವ ಗಂಗಾನದಿಯಂತೆ, ನೀವು ಭಿಕ್ಕುಗಳು ನಿಮಗಾದ ಎಲ್ಲಾ ಅವಮಾನಗಳನ್ನೂ ಅನ್ಯಾಯಗಳನ್ನೂ ಸಹಿಸಿಕೊಂಡು ನಿಮ್ಮ ಆಕ್ರಮಣಕಾರರ ಮೇಲೆಯೂ ಮೈತ್ರಿಯನ್ನು ತಾಳುತ್ತಾ ಹೋಗಬೇಕು."

೧೬. "ಹೀಗೆ ಭಿಕ್ಕುಗಳೇ, ಮೈತ್ರಿ ನಿರಂತರವಾಗಿ ಹರಿಯುತ್ತಿರಬೇಕು. ನಿಮ್ಮ ಮನಸ್ಸನ್ನು ಭೂಮಿಯಂತೆ ಅಚಲವಾಗಿ, ಗಾಳಿಯಂತೆ ಸ್ವಚ್ಛವಾಗಿ ಮತ್ತು ಗಂಗಾನದಿಯಂತೆ ಆಳವಾಗಿ ಇಟ್ಟುಕೊಳ್ಳಿ. ಹೀಗೆ ಮಾಡಿದರೆ, ಎಷ್ಟೇ ಅಹಿತಕರವಾದ ಕ್ರಿಯೆಯಿಂದಲೂ ನಿಮ್ಮ ಮೈತ್ರಿ ಸುಲಭವಾಗಿ ಕ್ಷೋಭೆಗೊಳ್ಳುವುದಿಲ್ಲ. ಏಕೆಂದರೆ ತೊಂದರೆಕೊಡುವವರೆಲ್ಲ ಬೇಗನೆ ಆಯಾಸಗೊಳ್ಳುತ್ತಾರೆ."

೧೭. "ನಿಮ್ಮ ಮೈತ್ರಿಯ ಪರಿಧಿ ಪ್ರಪಂಚದಷ್ಟೇ ಅನಂತವಾಗಿರಲಿ. ನಿಮ್ಮ ಆಲೋಚನೆ ವಿಶಾಲವೂ ಅಳತೆಯನ್ನು ಮೀರಿದ್ದೂ ಆಗಿರಲಿ; ಅದರಲ್ಲಿ ಯಾವ ದ್ವೇಷ ಭಾವನೆಯೂ ಇಲ್ಲದಿರಲಿ."

೧೮. "ನನ್ನ ಧರ್ಮದ ಪ್ರಕಾರ, ಕರುಣೆಯನ್ನು ಅನುಷ್ಠಾನ ಮಾಡಿದರಷ್ಟೇ ಸಾಲದು; ಮೈತ್ರಿಯ ಅನುಷ್ಠಾನ ಆವಶ್ಯಕ."

೧೯. "ತನ್ನ ಪ್ರವಚನದ ಅವಧಿಯಲ್ಲಿ ತಥಾಗತ ಒಂದು ಕಥೆಯನ್ನು ಭಿಕ್ಕುಗಳಿಗೆ ಹೇಳಿದನು. ಅದು ಜ್ಞಾಪಿಸಿಕೊಳ್ಳಲು ಯೋಗ್ಯವಾಗಿದೆ.

೨೦. "ಒಂದಾನೊಂದು ಕಾಲದಲ್ಲಿ ಶ್ರಾವಸ್ತಿಯಲ್ಲಿ ವಿದೇಶಿಕಾ ಎಂಬ ಮಹಿಳೆಯಿದ್ದಳು. ಆಕೆ ಸೌಮ್ಯ, ನಮ್ರ ಮತ್ತು ಮೃದು ಎಂದು ಹೆಸರಾಗಿದ್ದಳು. ಅವಳ ಬಳಿ ಡಾರ್ಕೀ ಎಂಬ ಬುದ್ಧಿವಂತ ಸೇವಕಿ ಇದ್ದಳು. ಅವಳು ಬೇಗ ಏಳುತ್ತಿದ್ದಳು ಮತ್ತು ಚೆನ್ನಾಗಿ ಕೆಲಸ ಮಾಡುತ್ತಿದ್ದಳು. 'ನನ್ನ ಯಜಮಾನಿಯನ್ನು ಎಲ್ಲರೂ ಹೊಗಳುತ್ತಾರೆ. ಆಕೆಗೆ ನಿಜವಾಗಿಯೂ ಸಿಟ್ಟು ಇದ್ದು ಅದನ್ನು ತೋರಿಸಿಕೊಳ್ಳುತ್ತಿಲ್ಲವೆ ಅಥವಾ ಆಕೆಗೆ ಸಿಟ್ಟೇ ಬರುವುದಿಲ್ಲವೇ? ಅಥವಾ ನಾನು ಚೆನ್ನಾಗಿ ಕೆಲಸ ಮಾಡುವುದರಿಂದ ಆಕೆ ಸಿಟ್ಟು ತೋರಿಸುತ್ತಿಲ್ಲವೇ? ಪರೀಕ್ಷಿಸುತ್ತೇನೆ' ಎಂದು ಡಾರ್ಕೀ ಯೋಚಿಸಿದಳು.

೨೧. "ಸರಿ, ಮರುದಿನ ಆಕೆ ತಡವಾಗಿ ಎದ್ದಳು. 'ಡಾರ್ಕೀ! ಡಾರ್ಕೀ!' ಎಂದು ಯಜಮಾನಿ ಗಟ್ಟಿಯಾಗಿ ಕರೆದಳು. 'ಏನ್ರಮ್ಮ' ಎಂದು ಆ ಹುಡುಗಿ ಉತ್ತರಿಸಿದಳು. 'ಏಕೆ ಇಷ್ಟು ತಡವಾಗಿ ಎದ್ದೆ?' ಎಂದು ಯಜಮಾನಿ ಕೇಳಿದಾಗ, 'ಓ, ಯಾಕೂ ಇಲ್ಲ, ಅಮ್ಮಾವ್ರೆ' ಎಂದು ಹುಡುಗಿ ಉತ್ತರಿಸಿದಳು. 'ಯಾಕೂ ಇಲ್ಲ, ಅಮ್ಮಾವ್ರೆ! ಏಯ್ ತರಲೆ ಹುಡುಗಿ!' ಎಂದು ಯಜಮಾನಿ ಸಿಟ್ಟಿನಿಂದ ಅಸಂತುಷ್ಟಿಯಿಂದ ಮನಸ್ಸಿನಲ್ಲೇ ಅಂದುಕೊಂಡಳು.

೨೨. " 'ಅಂದರೆ ಆಕೆಗೆ ಸಿಟ್ಟಿದೆ. ಅದನ್ನು ತೋರಿಸಿಕೊಳ್ಳುತ್ತಿಲ್ಲ' ಎಂದು ಹುಡುಗಿ ಯೋಚಿಸಿದಳು: 'ನಾನು ನನ್ನ ಕೆಲಸವನ್ನು ಬಹಳ ಚೆನ್ನಾಗಿ ಮಾಡುವುದರಿಂದ ಆಕೆ ತನ್ನ ಸಿಟ್ಟನ್ನು ತೋರಿಸುತ್ತಿಲ್ಲ. ಆಕೆಯನ್ನು ಇನ್ನೂ ಪರೀಕ್ಷಿಸುತ್ತೇನೆ.' ಸರಿ, ಮರುದಿನ ಬೆಳಿಗ್ಗೆ ಅವಳು ಇನ್ನೂ ತಡವಾಗಿ ಎದ್ದಳು. 'ಡಾರ್ಕೀ! ಡಾರ್ಕೀ!' ಎಂದು ಯಜಮಾನಿ ಕಿರುಚಿದಳು. 'ಏನ್ರಮ್ಮ' ಎಂದು ಹುಡುಗಿ ಉತ್ತರಿಸಿದಳು. 'ಏಕೆ ಇಷ್ಟು ತಡವಾಗಿ ಎದ್ದೆ?', 'ಓ ಯಾಕೂ ಇಲ್ಲ'. 'ನಿಜವಾಗಿ ಯಾಕೂ ಇಲ್ಲ, ಏಯ್ ತರಲೆ ಹುಡುಗಿ!' ಎಂದು ತನ್ನ ಸಿಟ್ಟು ಮತ್ತು ಬೇಸರವನ್ನು ಆ ಮಾತುಗಳಲ್ಲಿ ಯಜಮಾನಿ ವ್ಯಕ್ತಪಡಿಸಿದಳು.

೨೩. " 'ಹೌದು, ಆಕೆಗೆ ಸಿಟ್ಟಿದೆ. ಆದರೆ ಅದನ್ನು ತೋರಿಸಿಕೊಳ್ಳುತ್ತಿಲ್ಲ. ಏಕೆಂದರೆ ನಾನು ನನ್ನ ಕೆಲಸವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದೇನೆ. ಆಕೆಯನ್ನು ಇನ್ನೂ ಸ್ವಲ್ಪ ಪರೀಕ್ಷಿಸುತ್ತೇನೆ,' ಎಂದು ಡಾರ್ಕೀ ಯೋಚಿಸಿದಳು. ಸರಿ, ಮರುದಿನ ಬೆಳಿಗ್ಗೆ ಅವಳು ಇನ್ನೂ ತಡವಾಗಿ ಎದ್ದಳು. 'ಡಾರ್ಕೀ! ಡಾರ್ಕೀ!' ಎಂದು ಯಜಮಾನಿ ಕಿರುಚಿದಳು. 'ಏನ್ರಮ್ಮ', 'ಹುಡುಗಿ ಉತ್ತರಿಸಿದಳು. 'ನೀನೇಕೆ ಇಷ್ಟು ತಡವಾಗಿ ಎದ್ದೆ?', 'ಓ, ಅದು ಯಾಕೂ ಇಲ್ಲ, ಅಮ್ಮಾವ್ರೆ.' "

೨೪. " 'ಯಾಕೂ ಇಲ್ಲ ಅಂತೀಯೇನೆ, ತರಲೆ ಹುಡುಗಿ, ಇಷ್ಟು ತಡವಾಗಿ ಎದ್ದು!' " ಎಂದು ಯಜಮಾನಿ ಸಿಟ್ಟು ಮತ್ತು ಬೇಸರದಲ್ಲಿ ರೇಗಾಡಿ ಕಡಾಣಿಯನ್ನು ತೆಗೆದುಕೊಂಡು ಹುಡುಗಿಯ ತಲೆಗೆ ಹೊಡೆದಳು; ರಕ್ತ ಸುರಿಯಲು ಪ್ರಾರಂಭಿಸಿತು.

೨೫. "ತಲೆ ತೂತಾಗಿ ರಕ್ತ ಸುರಿಯುತ್ತಿದ್ದುದರಿಂದ ಡಾರ್ಕೀ ತನ್ನ ಆಕ್ರಂದನಗಳಿಂದ ನೆರೆಹೊರೆಯವರನ್ನು ಕೂಗಿದಳು: 'ನೋಡಿ, ಈ ಅಮ್ಮ ಸಾಧುಸ್ವಭಾವದವರು ಏನು ಮಾಡಿದ್ದಾರೆ! ನೋಡಿ, ಈ ಅಮ್ಮ,

ಸೌಮ್ಯಸ್ವಭಾವದವರು ಏನು ಮಾಡಿದ್ದಾರೆ! ನೋಡಿ, ಈ ಅಮ್ಮ, ಸೌಮ್ಯಸ್ವಭಾವದವರು ಏನು ಮಾಡಿದ್ದಾರೆ! ನೋಡಿ, ಈ ಅಮ್ಮ, ಮೃದುಸ್ವಭಾವದವರು ಏನು ಮಾಡಿದ್ದಾರೆ! ಯಾಕಾಗಿ? ಅವರ ಒಬ್ಬಳೇ ಸೇವಕಿ ತಡವಾಗಿ ಎದ್ದಳೂಂತ ಅವರು ಬಹಳ ಕೋಪಿಷ್ಠರಾಗಿ ಕಡಾಣಿಯನ್ನು ತೆಗೆದುಕೊಂಡು ನನ್ನ ತಲೆಯನ್ನು ಒಡೆದಿದ್ದಾರೆ.'

೨೬. "ಅದರ ಪರಿಣಾಮವಾಗಿ ವಿದೇಶಿಕಾ ಎಂಬ ಈ ಮಹಿಳೆ ಸಾಧು, ಸೌಮ್ಯ ಸ್ವಭಾದವಳು ಎಂಬುದಕ್ಕೆ ಬದಲಾಗಿ ಹಿಂಸಾಮಯಿ ಎಂಬ ಹೆಸರು ಗಳಿಸಿದಳು."

೨೭. "ಇದೇ ರೀತಿಯಲ್ಲಿ ಒಬ್ಬ ಭಿಕ್ಷುವಿನ ವಿರುದ್ಧ ಯಾವುದೇ ಅಹಿತಕರ ವಿಷಯ ಹೇಳದಿರುವ ತನಕ ಅವನು ಸಾಧು, ಸೌಮ್ಯ ಮತ್ತು ನಮ್ರನಾಗಿರಬಹುದು. ಅವನ ಮೇಲೆ ಅಹಿತಕರ ವಿಷಯಗಳನ್ನು ಹೇಳಿದಾಗ ಮಾತ್ರ ಅವನಿಗೆ ಮೈತ್ರಿ-ಸೋದರ ಮಾನವ ಪ್ರೇಮ-ಇದೆಯೆ ಎಂದು ಪರೀಕ್ಷಿಸಬಹುದು."

೨೮. ಆಮೇಲೆ ಆತ ಹೇಳಿದನು: "ತನ್ನ ಊಟ, ಬಟ್ಟೆಯನ್ನು ಪಡೆಯುವುದಕ್ಕಾಗಿ ಮೈತ್ರಿಭಾವವನ್ನು ಪ್ರದರ್ಶಿಸುವವನನ್ನು ನಾನು ಭಿಕ್ಷುವೆಂದು ಕರೆಯುವುದಿಲ್ಲ. ಯಾರಲ್ಲಿ ತತ್ತ್ವಶಃ ಮೈತ್ರಿ ಚಿಮ್ಮುತ್ತಿದೆಯೋ ಅವನನ್ನು ನಾನು ನಿಜವಾದ ಭಿಕ್ಕುವೆಂದು ಮಾನ್ಯ ಮಾಡುತ್ತೇನೆ."

೨೯. "ಧಾರ್ಮಿಕ ಪುಣ್ಯವನ್ನು ಗಳಿಸುವುದಕ್ಕಾಗಿ ಅನುಸರಿಸಿದ ಸಾಧನಗಳಲ್ಲಿ ಯಾವುದೂ ಮೈತ್ರಿಯ ಹದಿನಾರನೆಯ ಒಂದು ಭಾಗದಷ್ಟೂ ಬೆಲೆಯುಳ್ಳದ್ದಾಗಿಲ್ಲ, ಭಿಕ್ಕುಗಳೇ. ಮೈತ್ರಿ ಎಂದರೆ ಸಹೃದಯ ಸ್ವಾತಂತ್ರ್ಯ, ಅದು ಎಲ್ಲವನ್ನೂ ಒಳಗೊಳ್ಳುತ್ತದೆ; ಅದು ಮಿಂಚುತ್ತದೆ, ಹೊಳೆಯುತ್ತದೆ, ಜ್ವಲಿಸುತ್ತದೆ.

೩೦. "ಇದೇ ರೀತಿ, ಓ ಭಿಕ್ಷುಗಳೇ, ಎಲ್ಲಾ ನಕ್ಷತ್ರಗಳ ಬೆಳಕಿಗೂ ಚಂದ್ರನ ಬೆಳಕಿನ ಹದಿನಾರನೆಯ ಒಂದು ಭಾಗದಷ್ಟು ಬೆಲೆಯೂ ಇಲ್ಲ. ಆದರೆ ಚಂದ್ರನ ಬೆಳಕು ಅದನ್ನು ಹೀರಿಕೊಂಡು ಮಿಂಚುತ್ತದೆ, ಹೊಳೆಯುತ್ತದೆ, ಜ್ವಲಿಸುತ್ತದೆ; ಹಾಗೆಯೇ, ಭಿಕ್ಕುಗಳೇ, ಧಾರ್ಮಿಕ ಪುಣ್ಯವನ್ನು ಗಳಿಸಲು ಅನುಸರಿಸುವ ಸಾಧನಗಳು ಮೈತ್ರಿಯ ಹದಿನಾರನೆಯ ಒಂದು ಭಾಗದಷ್ಟೂ ಬೆಲೆಯುಳ್ಳವಲ್ಲ. ಮೈತ್ರಿ ಎಂದರೆ ಸಹೃದಯ ಸ್ವಾತಂತ್ರ್ಯ, ಅದು ಅವುಗಳನ್ನು ಹೀರಿಕೊಳ್ಳುತ್ತದೆ. ಅದು ಮಿಂಚುತ್ತದೆ, ಹೊಳೆಯುತ್ತದೆ, ಪ್ರಜ್ವಲಿಸುತ್ತದೆ.

೩೧. "ಅದೇ ರೀತಿಯಲ್ಲಿ ಓ ಭಿಕ್ಕುಗಳೇ, ಮಳೆಗಾಲದ ಅಂತ್ಯದಲ್ಲಿ ಶುಭ್ರ ಮೇಘರಹಿತ ಆಕಾಶದಲ್ಲಿ ಮೂಡುವ ಸೂರ್ಯ ಅಂತರಿಕ್ಷದ ಎಲ್ಲಾ ಕತ್ತಲೆಯನ್ನೂ ಹೋಗಲಾಡಿಸುತ್ತಾನೆ; ಮಿಂಚುತ್ತಾನೆ, ಹೊಳೆಯುತ್ತಾನೆ, ಪ್ರಜ್ವಲಿಸುತ್ತಾನೆ, ಅದೇ ರೀತಿಯಲ್ಲಿ ಮತ್ತೆ ರಾತ್ರಿಯ ಕೊನೆಯಲ್ಲಿ ಶುಕ್ರ ನಕ್ಷತ್ರ ಮಿಂಚುತ್ತದೆ, ಹೊಳೆಯುತ್ತದೆ ಮತ್ತು ಪ್ರಜ್ವಲಿಸುತ್ತದೆ. ಹಾಗೆಯೇ, ಓ ಭಿಕ್ಕುಗಳೇ, ಧಾರ್ಮಿಕ ಪುಣ್ಯವನ್ನು ಗಳಿಸಲು ಅನುಸರಿಸುವ ಸಾಧನಗಳು ಮೈತ್ರಿಯ ಹದಿನಾರನೆಯ ಒಂದು ಭಾಗದಷ್ಟು ಬೆಲೆಯುಳ್ಳವಲ್ಲ. ಮೈತ್ರಿ ಎಂದರೆ ಸಹೃದಯ ಸ್ವಾತಂತ್ರ್ಯ, ಅದು ಎಲ್ಲವನ್ನೂ ಒಳಗೊಳ್ಳುತ್ತದೆ; ಅದು ಮಿಂಚುತ್ತದೆ, ಅದು ಹೊಳೆಯುತ್ತದೆ, ಅದು ಪ್ರಜ್ವಲಿಸುತ್ತದೆ."

## ಪರಿಚ್ಛೇದ : ೪

# ಧರ್ಮ ಸದ್ಧರ್ಮವಾಗಬೇಕಾದರೆ ಸಾಮಾಜಿಕ ಅಡೆತಡೆಗಳನ್ನು ಕೆಡವಿಹಾಕಬೇಕು

### ೧. ಧರ್ಮವು ಸದ್ಧರ್ಮವೆನಿಸಬೇಕಾದರೆ, ಮನುಷ್ಯ-ಮನುಷ್ಯನ ನಡುವಣ ಸಾಮಾಜಿಕ ಅಡೆತಡೆಗಳನ್ನೆಲ್ಲಾ ಅದು ನಿರ್ಮೂಲನ ಮಾಡಬೇಕು.

೧. ಆದರ್ಶ ಸಮಾಜವೆಂದರೆ ಯಾವುದು? ಬ್ರಾಹ್ಮಣರ ಪ್ರಕಾರ, ಆದರ್ಶ ಸಮಾಜವೆಂದರೆ ಯಾವುದು ಎಂಬುದನ್ನು ವೇದಗಳು ಸ್ಪಷ್ಟಪಡಿಸುತ್ತವೆ; ವೇದಗಳು ದೋಷ ರಹಿತವಾಗಿರುವುದರಿಂದ, ಮನುಷ್ಯನು ಸ್ವೀಕರಿಸಬಹುದಾದ ಏಕೈಕ ಆದರ್ಶ ಸಮಾಜವೆಂದರೆ ಆ ವೇದಗಳಿಂದ ಪ್ರತಿಪಾದಿತವಾದದ್ದು.

೨. ವೇದಗಳು ನಿರ್ಣಯಿಸಿರುವ ಆದರ್ಶ ಸಮಾಜವು ಚಾತುರ್ವರ್ಣ ಎಂಬ ಹೆಸರಿನಿಂದ ಪ್ರತಿಪಾದಿತವಾದದ್ದು.

೩. ವೇದಗಳ ಪ್ರಕಾರ, ಅಂತಹ ಸಮಾಜವು ಮೂರು ಉಪಾಧಿಗಳನ್ನು ಸಫಲಗೊಳಿಸಲೇಬೇಕು.

೪. ಅದರಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ನಾಲ್ಕು ವರ್ಣಗಳು ಇರಲೇಬೇಕು.

೫. ಈ ವರ್ಗಗಳ ನಡುವಣ ಸಹಸಂಬಂಧಗಳು ವರ್ಗೀಕೃತ ಅಸಮಾನತಾ ತತ್ತ್ವದಿಂದ ನಿಯಂತ್ರಿತವಾಗಿರಲೇಬೇಕು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ಈ ಎಲ್ಲಾ ವರ್ಗಗಳು ಸಮಾನತೆಯ ನೆಲೆಯ ಮೇಲೆ ಇರಕೂಡದು. ಅದಕ್ಕೆ ಬದಲಾಗಿ, ಅಂತಸ್ತು, ಹಕ್ಕುಬಾಧ್ಯತೆಗಳು ಮತ್ತು ವಿಶೇಷ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಒಂದರಮೇಲೊಂದರಂತೆ ಇರಬೇಕು.

೬. ಈ ಅಂತಃಶ್ರೇಣಿಯಲ್ಲಿ, ಬ್ರಾಹ್ಮಣರನ್ನು ಅತ್ಯಂತ ಮೇಲಿನ ಸ್ತರದಲ್ಲಿ ಇಡಲಾಗಿದೆ; ಕ್ಷತ್ರಿಯರನ್ನು ಬ್ರಾಹ್ಮಣರ ಕೆಳಗೆ ಆದರೆ ವೈಶ್ಯರ ಮೇಲೆ ಇಡಲಾಗಿದೆ; ವೈಶ್ಯರನ್ನು ಕ್ಷತ್ರಿಯರ ಕೆಳಗೆ ಆದರೆ ಶೂದ್ರರ ಮೇಲೆ ಇಡಲಾಗಿದೆ ಮತ್ತು ಶೂದ್ರರನ್ನು ಎಲ್ಲರಿಗಿಂತ ಕನಿಷ್ಠ ಸ್ಥಾನದಲ್ಲಿ ಇಡಲಾಗಿದೆ.

೭. ಚಾತುರ್ವರ್ಣದ ಮೂರನೆಯ ಲಕ್ಷಣವೆಂದರೆ, ಪ್ರತಿಯೊಂದು ವರ್ಗವೂ ತನಗೆ ನಿಗದಿಪಡಿಸಲಾದ ಉದ್ಯೋಗದಲ್ಲಿಯೇ ನಿರತವಾಗಿರಬೇಕು. ಕಲಿಕೆ, ಬೋಧನೆ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ಪೌರೋಹಿತ್ಯ ಮಾಡುವುದು ಬ್ರಾಹ್ಮಣರ ಉದ್ಯೋಗ. ಆಯುಧಗಳನ್ನು ಹಿಡಿದು ಯುದ್ಧ ಮಾಡುವುದು ಕ್ಷತ್ರಿಯರ ಉದ್ಯೋಗ. ವೈಶ್ಯರ ಉದ್ಯೋಗವೆಂದರೆ ವ್ಯಾಪಾರ ಮತ್ತು ಹಣಕಾಸಿನ ವ್ಯವಹಾರ. ಈ ಮೂರು ಮೇಲ್ವರ್ಗಗಳ ಸೇವೆಯೇ ಶೂದ್ರರ ಉದ್ಯೋಗ.

೮. ಇತರ ವರ್ಗಗಳ ಉದ್ಯೋಗಗಳನ್ನು ಯಾವುದೇ ಒಂದು ವರ್ಗವು ಉಲ್ಲಂಘಿಸಕೂಡದು ಮತ್ತು ಅತಿಕ್ರಮಿಸಕೂಡದು.

೯. ಆದರ್ಶ ಸಮಾಜದ ಈ ಸಿದ್ಧಾಂತವನ್ನು ಬ್ರಾಹ್ಮಣರು ಸಮರ್ಥಿಸಿಕೊಂಡು ಜನತೆಗೆ ಬೋಧಿಸಿದರು.

೧೦. ಈ ಸಿದ್ಧಾಂತದ ಆಂತರ್ಯ ಅಸಮಾನತೆ ಎಂಬುದು ಮೇಲ್ನೋಟಕ್ಕೇ ಕಾಣುತ್ತದೆ. ಈ ಸಾಮಾಜಿಕ ಅಸಮಾನತೆಯು ಯಾವುದೇ ಐತಿಹಾಸಿಕ ಬೆಳವಣಿಗೆಯ ಪರಿಣಾಮವಲ್ಲ. ಅಸಮಾನತೆಯು ಬ್ರಾಹ್ಮಣವಾದದ ಅಧಿಕೃತ ಸಿದ್ಧಾಂತ.

೧೧. ಬುದ್ಧ ಇದರ ಮೂಲ ಮತ್ತು ಶಾಖೋಪಶಾಖೆಗಳನ್ನು ವಿರೋಧಿಸಿದ.

೧೨. ಆತನು ಜಾತಿವಾದದ ಅತ್ಯಂತ ಕಡು ವಿರೋಧಿ ಮತ್ತು ಸಮಾನತೆಯನ್ನು ಎತ್ತಿಹಿಡಿದ ಮೊತ್ತಮೊದಲಿಗ ಮತ್ತು ಅತ್ಯಂತ ನಿಷ್ಠಾವಂತ.

೧೩. ಜಾತಿ ಮತ್ತು ಅಸಮಾನತೆಗಳ ಪರವಾಗಿದ್ದ ಯಾವುದೇ ವಾದವು ಅವನ ಖಂಡನೆಗೆ ಗುರಿಯಾಗದೆ ಉಳಿಯಲಿಲ್ಲ.

೧೪. ಈ ವಿವಾದಕ್ಕೆ ಸಂಬಂಧಿಸಿದಂತೆ ಅನೇಕ ಬ್ರಾಹ್ಮಣರು ಬುದ್ಧನಿಗೆ ಸವಾಲು ಹಾಕಿದ್ದುಂಟು. ಆದರೆ ಅವನು ಅವರ ಬಾಯನ್ನು ಸಂಪೂರ್ಣವಾಗಿ ಮುಚ್ಚಿಸಿದ.

೧೫. ಅಸ್ಸಲಯನ ಸುತ್ತದಲ್ಲಿ ಒಂದು ಕಥೆಯನ್ನು ಹೇಳಲಾಗಿದೆ. ಅದೇಂದರೆ, ಒಂದು ಸಲ, ಬ್ರಾಹ್ಮಣರು ತಮ್ಮವನೇ ಆದ ಅಸ್ಸಲಯನ ಎಂಬಾತನ ಮನವೊಲಿಸಿ, ಆತನು ಬುದ್ಧನ ಬಳಿಗೆ ಹೋಗಿ ಜಾತಿ ಮತ್ತು ಅಸಮಾನತೆಯ ಬಗೆಗೆ ಅವನಿಗಿರುವ ಅಭಿಪ್ರಾಯಗಳನ್ನು ವಿರೋಧಿಸಬೇಕೆಂದು ಕಳುಹಿಸಿದರು.

೧೬. ಅಸ್ಸಲಯನನು ಬುದ್ಧನ ಬಳಿಗೆ ಹೋಗಿ ಬ್ರಾಹ್ಮಣರ ಹಿರಿಮೆಯನ್ನು ತೋರಿಸುವ ವಾದವನ್ನು ಅವನ ಮುಂದಿಟ್ಟ.

೧೭. ಅವನು ಹೇಳಿದ : "ಗೋತಮಾ, ಇತರ ಎಲ್ಲಾ ವರ್ಗಗಳೂ ಕೀಳಾಗಿರುವುದರಿಂದ ಬ್ರಾಹ್ಮಣರು ಮೇಲ್ವರ್ಗದವರೆಂದೂ, ಇತರ ಎಲ್ಲಾ ವರ್ಗಗಳ ಜನರು ಕಪ್ಪಾಗಿರುವುದರಿಂದ ಬ್ರಾಹ್ಮಣರು ಮಾತ್ರ ಶ್ವೇತವರ್ಗಕ್ಕೆ ಸೇರಿದವರಾಗಿದ್ದಾರೆಂದೂ; ಪರಿಶುದ್ಧತೆಯು ಬ್ರಾಹ್ಮಣರಲ್ಲಿ ಮಾತ್ರವಿದೆ, ಅಬ್ರಾಹ್ಮಣರಲ್ಲಿಲ್ಲ. ಮತ್ತು ಬ್ರಾಹ್ಮಣರು ಮಾತ್ರ ಬ್ರಹ್ಮನ ನ್ಯಾಯಬದ್ಧ ಮಕ್ಕಳು, ಅವನ ಬಾಯಿಂದ ಹುಟ್ಟಿದವರು, ಅವನ ಸಂತಾನ, ಅವನ ಸೃಷ್ಟಿ ಮತ್ತು ಅವನ ವಾರಸುದಾರರು ಎಂದು ಬ್ರಾಹ್ಮಣರು ಪ್ರತಿಪಾದಿಸುತ್ತಾರೆ, ಇದರ ಬಗ್ಗೆ ಗೋತಮನು ಏನು ಹೇಳುತ್ತಾನೆ?"

೧೮. ಬುದ್ಧನ ಉತ್ತರವು ಅಸ್ಸಲಯನನ ವಾದವನ್ನು ಸರಳವಾಗಿ ಧೂಳೀಪಟ ಮಾಡಿತು.

೧೯. ಬುದ್ಧ ಹೇಳಿದ: "ಅಸ್ಸಲಯನಾ, ಬ್ರಾಹ್ಮಣರ ಹೆಂಡಂದಿರಿಗೆ ಋತುಕಾಲ ಗರ್ಭ ಧರಿಸುವುದು, ಮಲಗುವುದು ಹಾಗೂ ಹೆರುವುದು ಇದೆ ಎಂಬುದು ಗೊತ್ತಿರಲಿಲ್ಲವೇ? ಅದು ಹೇಗಾದರಿರಲಿ, ಇತರರಂತೆ ಅವರೂ ಕೂಡ ಹೆಂಗಸರ ಗರ್ಭದಿಂದ ಹುಟ್ಟಿದ್ದರೂ ಕೂಡ, ಬ್ರಾಹ್ಮಣರು ಈಗ ನೀನು ಹೇಳಿದಂತೆ ಇದ್ದಾರೆಯೇ?"

೨೦. ಅಸ್ಸಲಯನ ಯಾವುದೇ ಉತ್ತರ ಕೊಡದಾದ.

೨೧. ಮುಂದುವರಿದು ಅಸ್ಸಲಯನನನ್ನು ಬುದ್ಧ ಮತ್ತೊಂದು ಪ್ರಶ್ನೆ ಕೇಳಿದ.

೨೨. "ಅಸ್ಸಲಯನಾ, ಒಂದು ಪಕ್ಷ ಒಬ್ಬ ಯುವ ಉತ್ತಮನು ಬ್ರಾಹ್ಮಣ ಹುಡುಗಿಯೊಬ್ಬಳನ್ನು ಸಂಭೋಗಿಸಿದರೆ, ಅದರಿಂದ ಹುಟ್ಟುವುದೇನಿರಬಹುದು? ಅದು ಒಂದು ಪ್ರಾಣಿಯೋ ಅಥವಾ ಮಾನವ ಜೀವಿಯೋ?"

೨೩. ಮತ್ತೆ ಅಸ್ಸಲಯನ ಯಾವುದೇ ಉತ್ತರ ಕೊಡಲಿಲ್ಲ.

೨೪. "ನೈತಿಕ ಬೆಳವಣಿಗೆಯ ಸಾಧ್ಯತೆಗೆ ಸಂಬಂಧಿಸಿದಂತೆ, ಬ್ರಾಹ್ಮಣನು ಮಾತ್ರ ತನ್ನ ಹೃದಯದಲ್ಲಿ, ದ್ವೇಷ ಮತ್ತು ಕೆಟ್ಟ ಭಾವವಿಲ್ಲದಂತಹ ಪ್ರೀತಿಯನ್ನು ಬೆಳೆಸಿಕೊಳ್ಳಬಲ್ಲನೇ? ಈ ದೇಶದಲ್ಲಿನ ಇತರ ಮೂರು ವರ್ಗಗಳ ಯಾವ ವ್ಯಕ್ತಿಗೂ ಅದು ಸಾಧ್ಯವಿಲ್ಲವೇ?"

೨೫. "ಅದು ಸರಿಯಲ್ಲ. ಎಲ್ಲಾ ವರ್ಗಗಳ ಜನರೂ ಅದನ್ನು ಬೆಳೆಸಿಕೊಳ್ಳಬಲ್ಲರು" ಅಸ್ಸಲಯನ ಉತ್ತರಿಸಿದ.

೨೬. "ಅಸ್ಸಲಯನಾ! ಯೋಣ ಮತ್ತು ಕಾಂಬೋಜ ದೇಶಗಳಲ್ಲಿ ಮತ್ತು ಅವುಗಳ ಅಕ್ಕಪಕ್ಕದಲ್ಲಿರುವ ಇತರ ದೇಶಗಳಲ್ಲಿ, ಎರಡೇ ಎರಡು ವರ್ಗಗಳಿವೆ. ಯಜಮಾನರು ಮತ್ತು ಗುಲಾಮರು. ಅಲ್ಲಿ ಯಜಮಾನ ಗುಲಾಮನಾಗಬಹುದು ಮತ್ತು ತದ್ವಿರುದ್ಧವೂ ಆಗಬಹುದೆಂಬುದು ಕೇಳಿದ್ದೀಯಾ?" ಎಂದು ಬುದ್ಧ ಕೇಳಿದ.

೨೭. "ಹೌದು, ನಾನು ಹಾಗೆಂದು ಕೇಳಿದ್ದೇನೆ." ಅಸ್ಸಲಯನ ಉತ್ತರಿಸಿದ.

೨೮. "ನಿಮ್ಮ ಚಾತುರ್ವರ್ಣವು ಒಂದು ಆದರ್ಶ ಸಮಾಜವೆಂತಾದರೆ ಅದೇಕೆ ವಿಶ್ವವ್ಯಾಪಿಯಾಗಿಲ್ಲ?"

೨೯. ಇವು ಯಾವುದೇ ಒಂದು ವಿಷಯದಲ್ಲೂ ಅಸ್ಸಲಯನ ತನ್ನ ಜಾತಿ ಮತ್ತು ಅಸಮಾನತಾ ಸಿದ್ಧಾಂತವನ್ನು ಸಮರ್ಥಿಸಿಕೊಳ್ಳದಾದ. ಅವನ ಬಾಯನ್ನು ಸಂಪೂರ್ಣವಾಗಿ ಮುಚ್ಚಿಸಲಾಯಿತು. ಕೊನಗೆ ಅವನು ಬುದ್ಧನ ಶಿಷ್ಯನಾಗುವುದರ ಮೂಲಕ ಅವನ ವಾದ ಕೊನೆಗೊಂಡಿತು.

೩೦. ವಸೆತ್ತ ಎಂಬ ಹೆಸರಿನ ಬ್ರಾಹ್ಮಣನೊಬ್ಬನು ಪೂಜ್ಯ ಭಗವಾನನ ಧರ್ಮವನ್ನು ಸ್ವೀಕರಿಸಿದ. ಅವನ ಮತಾಂತರಕ್ಕಾಗಿ ಬ್ರಾಹ್ಮಣರು ಅವನನ್ನು ಹೀಯಾಳಿಸುತ್ತಿದ್ದರು.

೩೧. ಒಂದು ದಿನ ಆತ ಬುದ್ಧನ ಬಳಿಗೆ ಹೋಗಿ, ಅವನ ಬಗ್ಗೆ ಬ್ರಾಹ್ಮಣರು ಏನು ಹೇಳಿದರು ಎಂಬುದನ್ನು ತಿಳಿಸಿದ.

೩೨. ವಸೆತ್ತ ಹೇಳಿದ ಮಾತು: "ಭಗವಾನ್, ಬ್ರಾಹ್ಮಣರು ಹೀಗೆ ಹೇಳುತ್ತಾರೆ; 'ಬ್ರಾಹ್ಮಣನೊಬ್ಬನು ಮಾತ್ರ ಅತ್ಯಂತ ಶ್ರೇಷ್ಠ ಸಾಮಾಜಿಕ ವರ್ಗಕ್ಕೆ ಸೇರಿದವನು. ಇತರ ಅಂತಸ್ತುಗಳಲ್ಲಿರುವವರೆಲ್ಲ ಕೀಳು. ಬ್ರಾಹ್ಮಣನೊಬ್ಬನು ಮಾತ್ರ ಸುಂದರ ರೂಪುಳ್ಳವನು, ಇತರರ ರೂಪು ಕಪ್ಪು. ಬ್ರಾಹ್ಮಣರು ಮಾತ್ರ ಶುದ್ಧ ಜನ್ಮವುಳ್ಳವರು. ಬ್ರಾಹ್ಮಣೇತರರು ಹಾಗಿಲ್ಲ. ಬ್ರಾಹ್ಮಣರು ಮಾತ್ರ ಬ್ರಹ್ಮನ ನೈಜ ಮಕ್ಕಳು. ಅವನ ಬಾಯಿಂದ ಹುಟ್ಟಿದವರು, ಬ್ರಹ್ಮನ ಸಂತಾನ, ಬ್ರಹ್ಮನಿಂದ ಸೃಷ್ಟಿಸಲ್ಪಟ್ಟವರು, ಬ್ರಹ್ಮನ ವಾರಸುದಾರರು.'

೩೩. 'ನಿನ್ನ ಬಗ್ಗೆ ಹೇಳುವುದಾದರೆ, ನೀನು ಅತ್ಯುತ್ತಮ ಸ್ಥಾನವನ್ನು ತ್ಯಜಿಸಿ, ಕೆಳವರ್ಗದವರೊಂದಿಗೆ, ಮಂಡೆ ಬೋಳಿಸಿಕೊಂಡಿರುವ ನಿಸ್ಸಂಗಿಗಳ ಜೊತೆ, ಅಸಭ್ಯ ಹಣವಂತರ, ಕಪ್ಪು ಚರ್ಮವುಳ್ಳವರ ಮತ್ತು ಕಾಲಿನಿಂದ ಹುಟ್ಟಿದವರ ಜೊತೆ ಸೇರಿಕೊಂಡಿದ್ದೀಯಂತೆ. ಇಂತಹ ಮಾರ್ಗ ಸರಿಯಲ್ಲ, ಸೂಕ್ತವಾದುದಲ್ಲ. ಅಲ್ಲದೆ, ಮೇಲ್ವರ್ಗವನ್ನು ತ್ಯಜಿಸಿ ಕೀಳು ವರ್ಗದೊಂದಿಗೆ ಸೇರಿಕೊಳ್ಳುವುದು, ಸಂನ್ಯಾಸಿಗಳು ಸಾಮಾನ್ಯ ಜನಸಮುದಾಯ, ದಸ್ಯುಗಳು ಕಪ್ಪು ಚರ್ಮವುಳ್ಳವರು ಮತ್ತು ನಮ್ಮ ರಕ್ತ ಸಂಬಂಧಿಗಳ ಪದಗಳಿಂದ ಜನಿಸಿದವರ ಜೊತೆ ಸಲ್ಲಾಪ ಮಾಡುವುದು ಸರಿಯಲ್ಲವಂತೆ.'

೩೪. "ಭಗವಾನ್, ಈ ವಿಚಾರಗಳಲ್ಲಿ, ಬ್ರಾಹ್ಮಣರು ತಮ್ಮ ವಿಫುಲವಾದ ನುಡಿಗಳಿಂದ ಇತಿಮಿತಿಯಿಲ್ಲದೆ ಹೀನಾಮಾನ ಬೈದು ಹೀಯಾಳಿಸುತ್ತಾರೆ".

೩೫. "ನಿಜ, ವಸೆತ್ತ", ಬುದ್ಧ ಹೇಳಿದ "ಅವರು ಹಾಗೆ ಹೇಳುವಾಗ, ಪ್ರಾಚೀನ ಜನಜೀವನವನ್ನು ಬ್ರಾಹ್ಮಣರು ಮರೆತಿದ್ದಾರೆ. ಅವರು ಹೇಳುವುದಕ್ಕೆ ತದ್ವಿರುದ್ಧವಾಗಿ, ಇತರ ವರ್ಗಗಳ ಹೆಂಗಸರಂತೆಯೇ, ಬ್ರಾಹ್ಮಣರ ಹೆಂಡಂದಿರೂ ಮಕ್ಕಳ ಜೊತೆಗಿರುವುದೂ, ಅವುಗಳನ್ನು ಬೆಳೆಸುವುದೂ, ಅವುಗಳ

ಪಾಲನೆ–ಪೋಷಣೆ ಮಾಡುವುದೂ ಎಲ್ಲರಿಗೂ ಕಾಣುವ ಸಂಗತಿ. ಹಾಗಿದ್ದರೂ, ಅವರ ಗರ್ಭದಿಂದ ಹುಟ್ಟಿದ ಬ್ರಾಹ್ಮಣರೇ, 'ಬ್ರಾಹ್ಮಣರು ಬ್ರಹ್ಮನ ನಿಜವಾದ ಮಕ್ಕಳು, ಅವನ ಬಾಯಿಂದ ಹುಟ್ಟಿದವರು, ಅವನ ಸಂತಾನ, ಅವನ ಸೃಷ್ಟಿ ಮತ್ತು ಅವನ ವಾರಸುದಾರರು' ಎಂದು ಹೇಳಿಕೊಳ್ಳುತ್ತಿದ್ದಾರೆ. ಇದರಿಂದ ಅವರು ಬ್ರಹ್ಮನ ಸ್ವಭಾವವನ್ನೇ ನಗೆಪಾಟಲಿಗೆ ಈಡುಮಾಡುತ್ತಿದ್ದಾರೆ."

೩೬. ಒಂದು ಸಲ ಮೂರು ಪ್ರಶ್ನೆಗಳ ಬಗ್ಗೆ ವಾದ ಮಾಡಲು ಬ್ರಾಹ್ಮಣನಾದ ಈಸುಕರಿ ಬುದ್ಧನ ಹತ್ತಿರ ಹೋದ.

೩೭. ಅವನು ಕೇಳಿದ ಮೊದಲ ಪ್ರಶ್ನೆ ಉದ್ಯೋಗಗಳ ಶಾಶ್ವತ ವಿಭಜನೆಗೆ ಸಂಬಂಧಿಸಿದ್ದು. ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳಲು ಅವನು ಹೀಗೆ ಹೇಳಲು ಪ್ರಾರಂಭಿಸಿದ: "ನಿನ್ನನ್ನು ಒಂದು ಪ್ರಶ್ನೆ ಕೇಳಲು ನಾನು ಬಂದಿದ್ದೇನೆ. ತಾವು ಎಲ್ಲರಿಗಿಂತ ಶ್ರೇಷ್ಠರಾದುದರಿಂದ ತಾವು ಯಾರ ಸೇವೆಯನ್ನೂ ಮಾಡುವುದಿಲ್ಲ ಎಂದು ಬ್ರಾಹ್ಮಣರು ಹೇಳುತ್ತಾರೆ. ಉಳಿದವರಲ್ಲಿ ಪ್ರತಿಯೊಬ್ಬನೂ ತಮ್ಮ ಸೇವೆಗಾಗಿ ಹುಟ್ಟಿದ್ದಾನೆ ಎಂದು ಅವರು ಹೇಳುತ್ತಾರೆ.

೩೮. "ಗೋತಮಾ, ಸೇವೆಯು ನಾಲ್ಕು ವಿಧವಾದರೆ – ಬ್ರಾಹ್ಮಣರ ಸೇವೆ, ರಾಜರ ಸೇವೆ, ಮಧ್ಯಮ ವರ್ಗದ ಅಥವಾ ರೈತನು ರೈತನಿಂದ ಮಾತ್ರ ಸೇವೆ ಪಡೆಯಬಹುದು. ಮತ್ತೆ ಇನ್ನಾರು ಮಾಡಲು ಸಾಧ್ಯ? ಪೂಜ್ಯ ಗೋತಮನು ಇದರ ಬಗ್ಗೆ ಏನು ಹೇಳುತ್ತಾನೆ?"

೩೯. ಒಂದು ಪ್ರಶ್ನೆ ಕೇಳುವುದರ ಮೂಲಕ ಬುದ್ಧನು ಅವನಿಗೆ ಉತ್ತರಿಸಿದ: "ಬ್ರಾಹ್ಮಣರು ನಿರ್ಧರಿಸಿರುವ ನಾಲ್ಕು ವಿಧವಾದ ವೃತ್ತಿಸೇವೆಯಂತೆಯೇ ಇಡೀ ಪ್ರಪಂಚವಿದೆಯೇ?" ಭಗವಾನ್ ಕೇಳಿದ.

೪೦. "ಎಲ್ಲಾ ವಿಧವಾದ ಸೇವೆಯನ್ನೂ ಸಲ್ಲಿಸಬೇಕು ಅಥವಾ ಎಲ್ಲಾ ವಿಧವಾದ ಸೇವೆಯನ್ನೂ ನಿರಾಕರಿಸಬೇಕು ಎಂದು ನಾನು ಹೇಳುವುದಿಲ್ಲ. ನನ್ನ ಪ್ರಕಾರ, ಒಬ್ಬ ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡದೆ ಕೆಟ್ಟವನನ್ನಾಗಿ ಮಾಡುವಂತಹ ಸೇವೆಯನ್ನು ಸಲ್ಲಿಸಬಾರದು. ಆದರೆ ಅವನನ್ನು ಕೆಟ್ಟವನನ್ನಾಗಿಸದೆ ಉತ್ತಮನನ್ನಾಗಿ ಮಾಡುವಂತಹ ಸೇವೆಯನ್ನು ಸಲ್ಲಿಸಲೇಬೇಕು."

೪೧. "ರಾಜಪುತ್ರರಾಗಲೀ, ಬ್ರಾಹ್ಮಣರಾಗಲೀ, ಮಧ್ಯಮವರ್ಗದವರಾಗಲೀ ಅಥವಾ ರೈತರಾಗಲೀ, ಎಲ್ಲರ ನಡೆನುಡಿಗಳನ್ನೂ ನಿರ್ಧರಿಸುವ ಮಾರ್ಗದರ್ಶಿ ಪರಿಗಣನೆ ಇದೇ ಆಗಿರಬೇಕು. ತನ್ನನ್ನು ಕೆಟ್ಟವನನ್ನಾಗಿಸುವಂತಹ ಸೇವೆಯನ್ನು ಪ್ರತಿಯೊಬ್ಬ ವ್ಯಕ್ತಿಯೂ ನಿರಾಕರಿಸಬೇಕು ಮತ್ತು ತಮ್ಮನ್ನು ಉತ್ತಮನನ್ನಾಗಿಸುವಂತಹ ಸೇವೆಯನ್ನು ಮಾತ್ರ ಆತನು ಒಪ್ಪಿಕೊಳ್ಳಬೇಕು."

೪೨. ಈಸುಕರಿ ಕೇಳಿದ ಮುಂದಿನ ಪ್ರಶ್ನೆ.
"ಒಬ್ಬ ಮನುಷ್ಯನ ಸ್ಥಾನಮಾನ ನಿರ್ಧರಿಸುವಲ್ಲಿ ಆತನ ಕುಲ ಮತ್ತು ವಂಶಾವಳಿಗಳಿಗೆ ಪ್ರಾಮುಖ್ಯತೆ ಏಕಿರಬಾರದು?"

೪೩. ಈ ಪ್ರಶ್ನೆಗೆ ಬುದ್ಧ ಉತ್ತರಿಸಿದ್ದು ಹೀಗೆ : "ಕುಲದ ಪ್ರತಿಷ್ಠೆಗೆ ವಿರುದ್ಧವಾಗಿ ಹೇಳುವುದಾದರೆ, ಒಬ್ಬ ವ್ಯಕ್ತಿಯು ಆತನು ರಾಜಪುತ್ರನಾಗಿರಲಿ, ಬ್ರಾಹ್ಮಣನಾಗಿರಲಿ, ವೈಶ್ಯರಾಗಲಿ ಅಥವಾ ರೈತನಾಗಿರಲಿ, ಅವನು ಹುಟ್ಟಿದ ಸ್ಥಾನ ಅವನ ಅಂಕಿತವನ್ನು ಮಾತ್ರ ನಿರ್ಧರಿಸುತ್ತದೆ. ಬೆಂಕಿಯನ್ನು ಹತ್ತಿಸಲು ಬಳಸಲಾದ ಪದಾರ್ಥದ ಆಧಾರದ ಮೇಲೆಯೇ – ಅದು ಕಟ್ಟಿಗೆಯ ಬೆಂಕಿ ಅಥವಾ ಚಕ್ಕೆಯ ಬೆಂಕಿ ಅಥವಾ ಜರಿಗಿಡದ ಬೆಂಕಿ ಅಥವಾ ಬೆರಣಿ ಬೆಂಕಿ ಎಂದು ಆ ಬೆಂಕಿಯನ್ನು ಕರೆಯಲಾಗುತ್ತದೆ.

ಇದೇ ರೀತಿ, ಪ್ರಸಿದ್ಧ ಅನುಭವಾತೀತ ಸಿದ್ಧಾಂತವೇ ಪ್ರತಿಯೊಬ್ಬ ಮನುಷ್ಯನ ನಿಜವಾದ ಸಂಪತ್ತಿಗೆ ಕಾರಣವಾಗಿದೆ. ನಾಲ್ಕು ವರ್ಗಗಳಲ್ಲೊಂದರಲ್ಲಿ ಅವನ ಹುಟ್ಟು ಕೇವಲ ಆತನ ಅಂಕಿತವನ್ನು ನಿರ್ಧರಿಸುತ್ತದೆ."

೪೪. "ಒಬ್ಬ ಮನುಷ್ಯನು ಒಳ್ಳೆಯವನಾಗಲೀ ಅಥವಾ ಕೆಟ್ಟವನಾಗಲೀ ಆಗಿರುವುದಕ್ಕೆ ಆತನ ವಂಶ ಅಥವಾ ಅವನ ಅಂದಚೆಂದ ಅಥವಾ ಅವನ ಸಂಪತ್ತು ಕಾರಣವಲ್ಲ. ಏಕೆಂದರೆ, ಶ್ರೇಷ್ಠ ವಂಶದಲ್ಲಿ ಹುಟ್ಟಿದಾತನೊಬ್ಬ ಕೊಲೆಗಾರ, ಕಳ್ಳ, ಅವಿವಾಹಿತ ಸ್ತ್ರೀಸಂಭೋಗಿ, ಸುಳ್ಳುಗಾರ, ಪಿಸುಣ, ಕೆಟ್ಟ ನಾಲಿಗೆಯವ, ದುರಾಸೆಯುಳ್ಳವ, ಬದ್ಧದ್ವೇಷಿ ಅಥವಾ ತಪ್ಪು ಅಭಿಪ್ರಾಯುವುಳ್ಳವನಾಗಿರುವುದನ್ನು ಕಾಣಬಹುದು. ಆದ್ದರಿಂದ ಮೇಲ್ವರ್ಗದ ಹುಟ್ಟು, ಒಬ್ಬ ಮನುಷ್ಯನನ್ನು ಉತ್ತಮನನ್ನಾಗಿ ಮಾಡದು. ಅಥವಾ, ಇನ್ನೂ ಹೆಚ್ಚು ಹೇಳಬೇಕೆಂದರೆ, ಶ್ರೇಷ್ಠ ಹುಟ್ಟು ಪಡೆದ ಮನುಷ್ಯನೊಬ್ಬನು ಎಲ್ಲದರ ಬಗ್ಗೆ ತಿಳಿಗೇಡಿ ಆಗಿರುವುದನ್ನೂ ಕಾಣಬಹುದು. ಆದ್ದರಿಂದ ಒಬ್ಬ ಮನುಷ್ಯನನ್ನು ಕೆಟ್ಟವನನ್ನಾಗಿ ಮಾಡುವುದು ಅವನ ವಂಶವಲ್ಲವೆಂದು ನಾನು ಪ್ರತಿಪಾದಿಸುತ್ತೇನೆ."

೪೫. ಈಸುಕರಿ ಹೇಳಿದ ಮೂರನೇ ಪ್ರಶ್ನೆ ಪ್ರತಿಯೊಂದು ವರ್ಣಕ್ಕೂ ನಿಗದಿಪಡಿಸಲಾಗಿರುವ ಜೀವನೋಪಾಯಕ್ಕೆ ಸಂಬಂಧಿಸಿದ್ದು.

೪೬. ಬ್ರಾಹ್ಮಣನಾದ ಈಸುಕರಿ ಭಗವಾನನಿಗೆ ಹೇಳಿದ: "ನಾಲ್ಕು ರೀತಿಯ ಆದಾಯವನ್ನು ಬ್ರಾಹ್ಮಣರು ನಿಗದಿಪಡಿಸಿದ್ದಾರೆ – ಬ್ರಾಹ್ಮಣರಿಗೆ ಭಿಕ್ಷೆಯ ಮೂಲಕ, ಕ್ಷತ್ರಿಯರಿಗೆ ಅವರ ಬಿಲ್ಲುಬಾಣಗಳ ಮೂಲಕ, ಮಧ್ಯಮ ವರ್ಗದವರಿಗೆ, ವ್ಯವಸಾಯ ಮತ್ತು ಪಶುಪಾಲನೆ ಮೂಲಕ ಮತ್ತು ರೈತಾಪಿ ಜನರಿಗೆ ತಮ್ಮ ಭುಜಗಳ ಮೇಲಿನ ಅಡ್ಡೆಗಳಲ್ಲಿ ತುಂಬಿರುವ ಬೆಳೆಗಳನ್ನು ಹೊರುವುದರ ಮೂಲಕ. ಇವರಲ್ಲಿ ಯಾವನಾದರೂ ಬೇರೆ ವೃತ್ತಿಗಾಗಿ ತನ್ನ ವೃತ್ತಿಯನ್ನು ಬಿಟ್ಟರೆ ಅಥವಾ ಅವನು ಏನು ಮಾಡಕೂಡದೋ ಅದನ್ನು ಮಾಡಿದರೆ, ಅಂತಹವನು ತನಗೆ ಯಾವುದು ಸೇರಿಲ್ಲವೋ ಅದನ್ನು ಅಪಹರಿಸುವಂತಹ ಪಾಲಕನಿಗಿಂತ ಉತ್ತಮನಲ್ಲ. ಪೂಜ್ಯ ಗೋತಮನು ಇದಕ್ಕೆ ಏನು ಹೇಳುತ್ತಾನೆ?"

೪೭. "ಬ್ರಾಹ್ಮಣರ ಈ ವರ್ಗೀಕರಣಕ್ಕೆ ಅನುಗುಣವಾಗಿ ಇಡೀ ಪ್ರಪಂಚವಿದೆಯೇ?"

೪೮. "ಇಲ್ಲ" ಈಸುಕರಿ ಉತ್ತರಿಸಿದ.

೪೯. ಅವನಿಗೆ ಭಗವಾನ್ ಹೇಳಿದ: "ಯಾವುದು ಮಹತ್ವದ್ದೆಂದರೆ – ಶ್ರೇಷ್ಠ ಕುಲವಲ್ಲ, ಉತ್ಕೃಷ್ಟ ಆದರ್ಶಗಳು."

೫೦. "ಜಾತಿಯಿಲ್ಲ, ಅಸಮಾನತೆಯಿಲ್ಲ, ಶ್ರೇಷ್ಠತೆಯಿಲ್ಲ, ಕನಿಷ್ಠತೆಯಿಲ್ಲ. ಎಲ್ಲರೂ ಸಮಾನರು." ಎಂಬ ತತ್ತ್ವಕ್ಕೆ ಆತ ಬದ್ಧನಾಗಿದ್ದ.

೫೧. "ಅವರಂತೆ ನಾನು ನನ್ನಂತೆ ಅವರು ಎಂದು ಇತರರೊಂದಿಗೆ ನಿನ್ನನ್ನು ನೀನು ಗುರುತಿಸಿಕೊ." ಎಂದು ಬುದ್ಧ ಹೇಳಿದ.

## ೨. ಧರ್ಮವು ಸದ್ಧರ್ಮವಾಗಿರಬೇಕಾದರೆ, ಹುಟ್ಟಲ್ಲ ಅಂತಃಸ್ಸತ್ವವು ಮನುಷ್ಯನ ಅಳತೆಗೋಲು ಎಂಬುದನ್ನು ಬೋಧಿಸಬೇಕು.

೧. ಬ್ರಾಹ್ಮಣರು ಬೋಧಿಸಿದ ಚಾತುರ್ವರ್ಣ ಸಿದ್ಧಾಂತವು ಹುಟ್ಟನ್ನು ಅವಲಂಬಿಸಿದೆ.

೨. ಒಬ್ಬ ಮನುಷ್ಯನು, ಬ್ರಾಹ್ಮಣ ತಂದೆತಾಯಂದಿರಿಗೆ ಹುಟ್ಟಿದ್ದರಿಂದ ಬ್ರಾಹ್ಮಣನೆನಿಸಿಕೊಳ್ಳುತ್ತಾನೆ. ಕ್ಷತ್ರಿಯ

ತಂದೆತಾಯಿಗಳಿಗೆ ಹುಟ್ಟಿದ್ದರಿಂದ ಕ್ಷತ್ರಿಯನೆನಿಸುತ್ತಾನೆ. ವೈಶ್ಯ ತಂದೆತಾಯಿಗಳಿಗೆ ಹುಟ್ಟಿದ್ದರಿಂದ ವೈಶ್ಯನೆನಿಸಿಕೊಳ್ಳುತ್ತಾನೆ ಮತ್ತು ಶೂದ್ರ ತಂದೆತಾಯಿಗಳಿಗೆ ಹುಟ್ಟಿದ್ದರಿಂದ ಶೂದ್ರನೆನಿಸಿಕೊಳ್ಳುತ್ತಾನೆ.

೩. ಬ್ರಾಹ್ಮಣರ ಪ್ರಕಾರ ಒಬ್ಬ ಮನುಷ್ಯನ ಅಂತಃಸ್ಸತ್ವವು ಮತ್ತಾವುದನ್ನೂ ಆಧರಿಸದೆ, ಅವನ ಹುಟ್ಟನ್ನು ಆಧರಿಸಿರುತ್ತದೆ.

೪. ಈ ಸಿದ್ಧಾಂತವೂ ಕೂಡ ಚಾತುರ್ವರ್ಣ ಸಿದ್ಧಾಂತದಷ್ಟೇ, ಬುದ್ಧನಿಗೆ ಅಸಹ್ಯಕರವಾಗಿತ್ತು.

೫. ಅವನ ಸಿದ್ಧಾಂತವು ಬ್ರಾಹ್ಮಣರ ಸಿದ್ಧಾಂತಕ್ಕೆ ತದ್ವಿರುದ್ಧವಾಗಿತ್ತು. ಒಬ್ಬ ಮನುಷ್ಯನ ಅಳತೆಗೋಲು ಅವನ ಹುಟ್ಟಲ್ಲ, ಅವನ ಅಂತಃಸ್ಸತ್ವ ಎಂಬುದೇ ಅವನ ಸಿದ್ಧಾಂತ.

೬. ಬುದ್ಧನು ತನ್ನ ಸಿದ್ಧಾಂತವನ್ನು ಸ್ಥಾಪಿಸಿದ ಸನ್ನಿವೇಶವು ವಿಶಿಷ್ಟ ಕುತೂಹಲಕಾರಿಯಾಗಿದೆ.

೭. ಒಂದು ಸಲ ಅನಾಥಾಪಿಂಡಿಕಾಶ್ರಮದಲ್ಲಿ ಭಗವಾನನಿದ್ದ. ಒಂದು ದಿನ ಬೆಳಿಗ್ಗೆ ಆತನು ತನ್ನ ಭಿಕ್ಷಾಪಾತ್ರೆ ಹಿಡಿದು ಶ್ರಾವಸ್ತಿ ಗ್ರಾಮಕ್ಕೆ ಬಂದ.

೮. ಆ ಸಮಯದಲ್ಲಿ ಬಲಿಕುಂಡ ಅಲ್ಲಿ ಉರಿಯುತ್ತಿತ್ತು ಮತ್ತು ಬಲಿ ಕೊಡಲು ಸಿದ್ಧತೆ ನಡೆದಿತ್ತು. ಶ್ರಾವಸ್ತಿಯಲ್ಲಿ ಭಿಕ್ಷೆಗಾಗಿ ಭಗವಾನನು ಮನೆಯಿಂದ ಮನೆಗೆ ಹೋಗುತ್ತಿರುವಾಗ, ಬ್ರಾಹ್ಮಣ ಅಗ್ಗಿಕನ ಮನೆಯ ಮುಂದೆ ಬಂದ.

೯. ಸ್ವಲ್ಪ ದೂರದಲ್ಲಿಯೇ ಬರುತ್ತಿದ್ದ ಭಗವಾನನ್ನು ನೋಡಿ ಅಗ್ಗಿಕನು ಕೋಪಿಷ್ಠನಾಗಿ ಹೇಳಿದ: “ಅಲ್ಲೇ ನಿಲ್ಲು! ನಾಚಿಕೆಯಿಲ್ಲದವನೇ! ಅಲ್ಲೇ ನಿಲ್ಲು! ದುಷ್ಟ ಸನ್ಯಾಸಿಯೇ ಅಲ್ಲೇ ನಿಲ್ಲು! ದರಿದ್ರ ಜಾತಿಹೀನನೇ, ಅಲ್ಲೇ ನಿಲ್ಲು!”

೧೦. ಅವನು ಆ ರೀತಿ ಹೇಳಿದಾಗ, ಭಗವಾನನು ಅವನಿಗೆ ಹೀಗೆ ಹೇಳುತ್ತಾನೆ: “ಬ್ರಾಹ್ಮಣನೇ, ಜಾತಿಹೀನನು ಯಾರು? ಅಥವಾ ಒಬ್ಬ ವ್ಯಕ್ತಿಯನ್ನು ಜಾತಿಹೀನನನ್ನಾಗಿ ಮಾಡುವ ಸ್ಥಿತಿಗಳಾವುವು ಎಂಬುದು ನಿನಗೆ ಗೊತ್ತಿದೆಯೇ?”

೧೧. “ಇಲ್ಲ ಗೋತಮ, ಜಾತಿಭ್ರಷ್ಟನು ಯಾರೆಂದು ನನಗೆ ಗೊತ್ತಿಲ್ಲ. ಒಬ್ಬ ಮನುಷ್ಯನನ್ನು ಜಾತಿಹೀನನನ್ನಾಗಿ ಮಾಡುವ ಸ್ಥಿತಿಗತಿಗಳಾವುವು ಎಂಬುದೂ ನನಗೆ ಗೊತ್ತಿಲ್ಲ.”

೧೨. “ಯಾವನು ಜಾತಿಭ್ರಷ್ಟ ಎಂದು ತಿಳಿಯುವುದರಿಂದ ಏನೂ ನಷ್ಟವಿಲ್ಲ” ಎಂದು ಭಗವಾನನು ಸಮರ್ಥಿಸಿದ.

“ಅದನ್ನು ನಾನು ತಿಳಿಯಬೇಕೆಂದು ನೀನು ಈಗ ನನ್ನನ್ನು ಒತ್ತಾಯಿಸುತ್ತಿದ್ದೀಯೆ. ಆಗಲಿ, ಪ್ರಾರಂಭಿಸು. ಅದನ್ನು ನನಗೆ ವಿವರಿಸು.” ಬ್ರಾಹ್ಮಣ ಅಗ್ಗಿಕ ಹೇಳಿದ.

೧೩. ಬ್ರಾಹ್ಮಣನು ಒಳ್ಳೆಯ ಪ್ರತಿಕ್ರಿಯೆಯನ್ನು ತೋರಿದ್ದರಿಂದ, ಆ ಪೂಜ್ಯನು ಈ ರೀತಿ ಹೇಳಿದ:

೧೪. “ನಿನಗೆ ತಿಳಿದಿರಲಿ, ಯಾವ ಮನುಷ್ಯನು, ಸಿಡಿಮಿಡಿ ಸ್ವಭಾವದವನೋ, ದುಷ್ಟನೋ, ನಿಂದಕನೋ, ತನ್ನ ಅಭಿಪ್ರಾಯಗಳಲ್ಲಿ ವಿಕೃತನೋ ಮತ್ತು ವಂಚಕನೋ, ಅಂಥವನು ಜಾತಿಭ್ರಷ್ಟ.

೧೫. “ಈ ಪ್ರಪಂಚದಲ್ಲಿ ಒಂದು ಸಲ ಹುಟ್ಟಿದ ಅಥವಾ ಎರಡು ಸಲ ಹುಟ್ಟಿದ ಜೀವಿಗಳನ್ನು ಯಾವಾತ ಹಿಂಸಿಸುತ್ತಾನೆಯೋ, ಯಾವಾತನಲ್ಲಿ ಪ್ರಾಣಿಗಳ ಬಗ್ಗೆ ಅನುಕಂಪೆಯಿರುವುದಿಲ್ಲವೋ, ಆತನೇ ಜಾತಿಭ್ರಷ್ಟನೆಂದು ತಿಳಿ.

೧೬. “ಯಾವಾತನು ಹಳ್ಳಿಗಳನ್ನು ಮತ್ತು ಕೊಪ್ಪಲುಗಳನ್ನು ಧ್ವಂಸಮಾಡಿ ಲೂಟಿಮಾಡುತ್ತಾನೋ, ಮತ್ತು ದೌರ್ಜನ್ಯಕಾರಿ ಎನಿಸಿಕೊಂಡಿರುತ್ತಾನೋ ಆತನೇ ಜಾತಿಭ್ರಷ್ಟನೆಂದು ತಿಳಿ.

೧೭. "ಹಳ್ಳಿಗಳಲ್ಲಿಯೇ ಆಗಲಿ ಅಥವಾ ಕಾಡಿನಲ್ಲೇ ಆಗಲಿ ಪರರಿಗೆ ಸೇರಿದ್ದ ವಸ್ತುಗಳನ್ನು ಅಥವಾ ತನಗೆ ಕೊಡದಿರುವ ವಸ್ತುಗಳನ್ನು ಯಾವಾತ ಅಪಹರಿಸುತ್ತಾನೋ, ಆತನೇ ಜಾತಿಭ್ರಷ್ಟನೆಂದು ತಿಳಿ.

೧೮. "ಯಾವಾತನು, ನಿಜವಾಗಿಯೂ ಸಾಲವನ್ನು ಕೊಂಡು ವಾಪಸ್ಸು ಕೇಳಿದಾಗ, 'ನಿನಗೆ ನಾನು ಸಾಲ ಕೊಡಬೇಕಾಗಿಲ್ಲ' ಎಂದು ಪರಾರಿಯಾಗುತ್ತಾನೋ ಆತನೇ ಜಾತಿಭ್ರಷ್ಟನೆಂದು ತಿಳಿ.

೧೯. "ರಸ್ತೆಯಲ್ಲಿ ಹೋಗುತ್ತಿರುವವನನ್ನು, ಯಾವಾತನು ಕ್ಷುದ್ರವಾದ ಆಸೆಯಿಂದ ಕೊಂದು ಆತನ ವಸ್ತುಗಳನ್ನು ಅಪಹರಿಸುತ್ತಾನೋ, ಅವನು ಜಾತಿಭ್ರಷ್ಟನೆಂದು ತಿಳಿ.

೨೦. "ಒಬ್ಬಾತನನ್ನು ಸಾಕ್ಷಿದಾರನಾಗಿರಲು ಕೇಳಿದಾಗ, ಆತನು ತನ್ನ ಸ್ವಾರ್ಥಕ್ಕಾಗಿ ಅಥವಾ ಇತರರಿಗಾಗಿ ಅಥವಾ ಸಂಪತ್ತಿಗಾಗಿ, ಸುಳ್ಳು ಸಾಕ್ಷ್ಯ ಹೇಳುವಾತನೇ ಜಾತಿಭ್ರಷ್ಟನೆಂದು ತಿಳಿ.

೨೧. "ಯಾವಾತನು ತನ್ನ ಸ್ವಾರ್ಥಕ್ಕಾಗಿ ತನ್ನ ಸಂಬಂಧಿಗಳ ಅಥವಾ ಸ್ನೇಹಿತರ ಹೆಂಡಂದಿರೊಂದಿಗೆ ಬಲಾತ್ಕಾರದಿಂದ ಅಥವಾ ಸಮ್ಮತಿಯಿಂದ ಅನೈತಿಕ ಸಂಬಂಧ ಹೊಂದಿರುತ್ತಾನೋ ಆತನು ಜಾತಿಭ್ರಷ್ಟನೆಂದು ತಿಳಿ.

೨೨. "ಯಾವಾತನು ತಾನು ಹಣವಂತನಾಗಿದ್ದರೂ, ತಮ್ಮ ಯೌವ್ವನವನ್ನು ಕಳೆದುಕೊಂಡಿರುವ ತಂದೆತಾಯಿಗಳನ್ನು ಪರಿಪೋಷಿಸುವುದಿಲ್ಲವೋ ಆತನು ಜಾತಿಭ್ರಷ್ಟನೆಂದು ತಿಳಿ.

೨೩. "ಯಾವುದು ಒಳ್ಳೆಯದೆಂದು ಕೇಳಿದಾಗ, ಕೆಟ್ಟದ್ದನ್ನು ಬೋಧಿಸಿ, ಒಳ್ಳೆಯದನ್ನು ಮರೆಮಾಚುವ ರೀತಿಯಲ್ಲಿ ಬೋಧಿಸುತ್ತಾನೋ ಆತನು ಜಾತಿಭ್ರಷ್ಟನೆಂದು ತಿಳಿ.

೨೪. "ಜನ್ಮದಿಂದ ಯಾವಾತನೂ ಜಾತಿಭ್ರಷ್ಟನಲ್ಲ. ಹಾಗೆಯೇ ಜನ್ಮದಿಂದ ಯಾವಾತನೂ ಬ್ರಾಹ್ಮಣನಲ್ಲ."

೨೫. ಇದನ್ನು ಕೇಳಿದಾಗ, ಪೂಜ್ಯ ಭಗವಾನನನ್ನು ಕುರಿತು ತಾನಾಡಿದ ಅವಹೇಳನಕರವಾದ ಮಾತುಗಳಿಗಾಗಿ ಅಗ್ಗಿಕನು ತುಂಬ ಹೀನಾಯಪಟ್ಟುಕೊಳ್ಳುತ್ತಾನೆ.

## ೩. ಧರ್ಮವು ಸದ್ಧರ್ಮವಾಗಿರಬೇಕಾದರೆ ಮನುಷ್ಯ– ಮನುಷ್ಯನ ನಡುವೆ ಸಮಾನತೆಯನ್ನು ಹೆಚ್ಚಿಸಬೇಕು.

೧. ಮನುಷ್ಯರು ಅಸಮಾನರಾಗಿ ಹುಟ್ಟಿದ್ದಾರೆ.

೨. ಕೆಲವರು ದಷ್ಟಪುಷ್ಟರಾಗಿದ್ದರೆ ಇತರರು ಬಡಕಲಾಗಿರುತ್ತಾರೆ.

೩. ಕೆಲವರು ಹೆಚ್ಚು ಬುದ್ಧಿಶಕ್ತಿಯುಳ್ಳವರಾಗಿದ್ದರೆ, ಇತರರು ಕಡಿಮೆ ಬುದ್ಧಿಶಕ್ತಿಯುಳ್ಳವರಾಗಿರುತ್ತಾರೆ ಅಥವಾ ಬುದ್ಧಿಹೀನರಾಗಿರುತ್ತಾರೆ.

೪. ಕೆಲವರಿಗೆ ಹೆಚ್ಚು ಶಕ್ತಿಸಾಮರ್ಥ್ಯವಿದ್ದರೆ, ಇತರರಿಗೆ ಕಡಿಮೆಯಿರುತ್ತದೆ.

೫. ಕೆಲವರು ಶ್ರೀಮಂತರಾಗಿದ್ದರೆ, ಇತರರು ಬಡವರಾಗಿರುತ್ತಾರೆ.

೬. 'ಅಸ್ತಿತ್ವಕ್ಕಾಗಿ ಹೋರಾಟ' ಎಂಬ ನಿಯಮಕ್ಕೆ ಎಲ್ಲರೂ ಒಳಗಾಗಬೇಕಾಗುತ್ತದೆ.

೭. ಅಸ್ತಿತ್ವಕ್ಕಾಗಿ ಹೋರಾಟದಲ್ಲಿ, ಅಸಮಾನತೆಯೇ ಕ್ರೀಡಾ ನಿಯಮವೆಂದು ಪರಿಗಣಿಸಿದರೆ, ಅತ್ಯಂತ ಬಲಹೀನರು ಯಾವಾಗಲೂ ಗೋಡೆಯನ್ನು ಆಶ್ರಯಿಸಬೇಕಾಗುತ್ತದೆ.

೮. ಈ ಅಸಮಾನತಾ ನಿಯಮವೇ ಜೀವನದ ನಿಯಮವಾಗಲು ಬಿಡಲೇಬೇಕಾಗುತ್ತದೆಯೇ?

೯. ಅದು ಸರಿ ಎಂದು ಕೆಲವರು ಹೇಳುತ್ತಾರೆ. ಅದು ಅತ್ಯಂತ ಅರ್ಹತೆಯುಳ್ಳವರ ಉಳಿವಿನಲ್ಲಿ

ಪರ್ಯವಸಾನವಾಗುತ್ತದೆ ಎಂಬುದೇ ಅವರ ಉತ್ತರಕ್ಕೆ ಆಧಾರ.

೧೦. ಹಾಗಿದ್ದರೂ, ಸಮಾಜದ ದೃಷ್ಟಿಯಿಂದ ನೋಡಿದಾಗ, 'ಅತ್ಯಂತ ಅರ್ಹರಾದವರೇ', 'ಅತ್ಯುತ್ತಮರೇ?', ಎಂಬ ಪ್ರಶ್ನೆ ಏಳುತ್ತದೆ.

೧೧. ಇದಕ್ಕೆ ಸರಿಯೆಂಬ ಉತ್ತರವನ್ನು ಯಾರೂ ಕೊಡಲಾರರು.

೧೨. ಈ ಶಂಕೆಯ ಕಾರಣಕ್ಕಾಗಿಯೇ ಧಮ್ಮವು ಸಮಾನತೆಯನ್ನು ಬೋಧಿಸುತ್ತದೆ. ಏಕೆಂದರೆ ಅತ್ಯುತ್ತಮರು ಅತ್ಯಂತ ಸಮರ್ಥರಲ್ಲದಿದ್ದಾಗಲೂ, ಸಮಾನತೆಯು ಅತ್ಯುತ್ತಮರ ಉಳಿವಿಗೆ ನೆರವಾಗಬಹುದು.

೧೩. ಸಮಾಜಕ್ಕೆ ಬೇಕಾಗಿರುವುದು ಅತ್ಯುತ್ತಮರೇ ಹೊರತು ಅತ್ಯಂತ ಸಮರ್ಥರಲ್ಲ.

೧೪. ಆದ್ದರಿಂದ, ಧರ್ಮವು ಸಮಾನತೆಯನ್ನು ಏಕೆ ಎತ್ತಿಹಿಡಿಯುತ್ತದೆ ಎಂಬುದಕ್ಕೆ ಇದೇ ಮೂಲಕಾರಣ.

೧೫. ಇದು ಬುದ್ಧನ ದೃಷ್ಟಿ. ಈ ಕಾರಣಕ್ಕಾಗಿಯೇ, ಸಮಾನತೆಯನ್ನು ಬೋಧಿಸದ ಧರ್ಮವು ಸ್ವೀಕರಿಸಲು ಯೋಗ್ಯವಾದುದಲ್ಲ ಎಂದು ಆತನು ವಾದಿಸಿದ.

೧೬. ಇತರರಿಗೆ ದುಃಖವನ್ನುಂಟುಮಾಡಿ ತನಗೆ ಸುಖವನ್ನು ತರುವಂತಹ ಅಥವಾ ತನಗೆ ದುಃಖವನ್ನುಂಟುಮಾಡಿ ಇತರರಿಗೆ ಸುಖವನ್ನು ತರುವಂತಹ ಅಥವಾ ತನಗೂ, ಇತರರಿಗೂ ದುಃಖವನ್ನುಂಟುಮಾಡುವಂತಹ ವರ್ತನೆಗಳನ್ನು ಪ್ರತಿಪಾದಿಸುವಂತಹ ಧರ್ಮವನ್ನು ನೀನು ಗೌರವಿಸಬಲ್ಲೆಯಾ?

೧೭. ತನ್ನ ಸುಖದ ಜೊತೆಜೊತೆಗೆ ಇತರರ ಸುಖವನ್ನೂ ಹೆಚ್ಚಿಸುವಂತಹ ಮತ್ತು ಯಾವುದೇ ದೌರ್ಜನ್ಯವನ್ನು ಸಹಿಸುವಂತಹ ಧರ್ಮವು ಉತ್ತಮ ಧರ್ಮವಲ್ಲವೇ?

೧೮. ಸಮಾನತೆಯನ್ನು ವಿರೋಧಿಸಿದ ಬ್ರಾಹ್ಮಣರಿಗೆ ಬುದ್ಧನು ಕೇಳಿದ ಅತ್ಯಂತ ಸೂಕ್ಷ್ಮ ಪ್ರಶ್ನೆಗಳಲ್ಲಿ ಇವು ಕೆಲವು.

೧೯. ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧರ್ಮ.

# ಪರ್ವ - ೪

## ಭಾಗ : ೨
## ಧರ್ಮ ಮತ್ತು ಧಮ್ಮ

ಭಾಗ ೧ : ಧರ್ಮ ಮತ್ತು ಧಮ್ಮ
ಭಾಗ ೨ : ಪಾರಿಭಾಷಿಕ ಶಬ್ದಗಳು ಮೂಲಭೂತ ವ್ಯತ್ಯಾಸವನ್ನು ಹೇಗೆ ಮರೆಮಾಡುತ್ತವೆ?
ಭಾಗ ೩ : ಬೌದ್ಧ ಜೀವನ ಮಾರ್ಗ
ಭಾಗ ೪ : ಬುದ್ಧನ ಉಪದೇಶಗಳು

# ೧. ಧರ್ಮ ಎಂದರೇನು?

೧. ಧರ್ಮ ಎಂಬುದು ಒಂದು ನಿರ್ದಿಷ್ಟ ಅರ್ಥವಿಲ್ಲದ ಒಂದು ಅಸ್ಪಷ್ಟ ಪದ.

೨. ಅದು ಹಲವು ಅರ್ಥಗಳುಳ್ಳ ಒಂದು ಪದ.

೩. ಧರ್ಮವು ಹಲವು ಹಂತಗಳನ್ನು ಹಾದು ಬಂದಿರುವುದೇ ಇದಕ್ಕೆ ಕಾರಣ. ಧರ್ಮ ಎಂಬುದಕ್ಕೆ ಒಂದು ಹಂತದಲ್ಲಿರುವ ಅರ್ಥ ಅದರ ಕೆಳಗಿನ ಹಂತದಲ್ಲಿ ಇರಲಿಲ್ಲ ಮತ್ತು ಮುಂದಿನ ಹಂತದಲ್ಲಿಯೂ ಅದಕ್ಕೆ ಅದೇ ಅರ್ಥವಿರುವ ಸಂಭವ ಕಡಿಮೆಯಿದ್ದಾಗ್ಯೂ, ಆ ಪರಿಕಲ್ಪನೆಗೆ ಪ್ರತಿಯೊಂದು ಹಂತದಲ್ಲಿಯೂ ಧರ್ಮ ಎಂದು ಕರೆಯಲಾಗಿದೆ.

೪. ಧರ್ಮದ ಪರಿಕಲ್ಪನೆ ಯಾವಾಗಲೂ ಸ್ಥಿರವಾಗಿಲ್ಲ.

೫. ಅದು ಕಾಲಕಾಲಕ್ಕೆ ಬದಲಾಗಿದೆ.

೬. ಮಿಂಚು, ಮಳೆ ಮತ್ತು ಪ್ರವಾಹಗಳಂತಹ ಘಟನೆಗಳಲ್ಲಿ ಹಲವನ್ನು ವಿವರಿಸಲು ಆದಿಮಾನವನಿಗೆ ಸಾಧ್ಯವಾಗಲಿಲ್ಲ. ಆಗ ಅಂತಹ ಘಟನೆಗಳನ್ನು ನಿಯಂತ್ರಿಸಲು ಆತನು ಅನುಸರಿಸಿದ ವಿಲಕ್ಷಣ ಆಚರಣೆಗಳಿಗೆ ಮಾಯ–ಮಾಟವೆಂದು ಹೆಸರಾಯಿತು. ಆದ್ದರಿಂದ ಧರ್ಮವು ಮಾಯಮಾಟದಿಂದ ಅನನ್ಯ ರೂಪ ಪಡೆಯಿತು.

೭. ಅನಂತರ ಧರ್ಮದ ವಿಕಾಸದಲ್ಲಿ ಎರಡನೇ ಹಂತ ಪ್ರಾರಂಭವಾಯಿತು. ಆ ಹಂತದಲ್ಲಿ ನಂಬಿಕೆಗಳು, ಕರ್ಮಾಚರಣೆಗಳು, ಸಮಾರಂಭಗಳು, ಪ್ರಾರ್ಥನೆಗಳು ಮತ್ತು ಬಲಿಗಳೊಂದಿಗೆ ಧರ್ಮವನ್ನು ಸಮೀಕರಿಸಲಾಯಿತು.

೮. ಆಗಲೇ ಧರ್ಮದ ಪರಿಕಲ್ಪನೆಯು ನಿಷ್ಪನ್ನವಾದುದು.

೯. ಆದಿಮಾನವನಿಗೆ ತಿಳಿಯದ ಮತ್ತು ಆತನು ತಿಳಿಯಲಾಗದಿದ್ದಂತಹ ಘಟನೆಗಳಿಗೆ ಕಾರಣವಾದಂತಹ ಒಂದು ಶಕ್ತಿಯಿದೆ ಎಂಬ ನಂಬಿಕೆಯಿಂದ ಧರ್ಮದ ಆಧಾರಾಂಶವು ಪ್ರಾರಂಭವಾಗುತ್ತದೆ. ಆ ಹಂತದಲ್ಲಿ ಮಾಯಮಾಟದ ವಾದವು ತನ್ನ ಸ್ಥಾನವನ್ನು ಕಳೆದುಕೊಂಡಿತು.

೧೦. ಮೂಲತಃ ಆ ಶಕ್ತಿಯು ಅಹಿತಕಾರಿ. ಆದರೂ ಅದು ಹಿತಕಾರಿಯೂ ಆಗಬಹುದೆಂದು ಭಾವಿಸಲಾಯಿತು.

೧೧. ಒಂದು ಹಿತಕಾರಿ ಶಕ್ತಿಯನ್ನು ಜಾಗೃತಗೊಳಿಸಲೂ ಮತ್ತು ಕೋಪಿಷ್ಠ ಶಕ್ತಿಯನ್ನು ಸಂತೃಪ್ತಿಪಡಿಸಲೂ ನಂಬಿಕೆಗಳು, ಮತಾಚರಣೆಗಳು, ಧಾರ್ಮಿಕ ಸಮಾರಂಭಗಳು ಹಾಗೂ ಬಲಿಗಳೂ ಅಗತ್ಯವೆನಿಸಿದವು.

೧೨. ಅನಂತರ ಆ ಶಕ್ತಿಯನ್ನು ದೇವರು ಅಥವಾ ಸೃಷ್ಟಿಕರ್ತ ಎಂದು ಕರೆಯಲಾಯಿತು.

೧೩. ಪ್ರಪಂಚವನ್ನು, ಮನುಷ್ಯನನ್ನು ಸೃಷ್ಟಿಸಿದಾತ ಇದೇ ದೇವರು ಎಂಬ ನಂಬಿಕೆಯ ಹಂತವನ್ನು ತಲುಪಲಾಯಿತು.

೧೪. ಅದನ್ನು ಹಿಂಬಾಲಿಸಿಯೇ, ಮನುಷ್ಯನಿಗೆ ಒಂದು ಆತ್ಮವಿದೆ. ಆ ಆತ್ಮ ಅನಂತ ಮತ್ತು ಈ ಪ್ರಪಂಚದಲ್ಲಿನ

ಮನುಷ್ಯ ವರ್ತನೆಗಳ ಬಗ್ಗೆ ದೇವರಿಗೆ ಉತ್ತರ ಕೊಡಲು ಆತ್ಮನೇ ಹೊಣೆ ಎಂಬ ನಂಬಿಕೆ ಪ್ರಚಲಿತವಾಯಿತು.

೧೫. ಸಂಕ್ಷಿಪ್ತವಾಗಿ ಧರ್ಮದ ಪರಿಕಲ್ಪನೆಯ ವಿಕಾಸ ಇದೇ.

೧೬. ದೇವರಲ್ಲಿ ನಂಬಿಕೆ, ಆತ್ಮನಲ್ಲಿ ನಂಬಿಕೆ, ದೇವರ ಪೂಜೆ, ತಪ್ಪು ಮಾಡುವ ಆತ್ಮನನ್ನು ಸರಿಪಡಿಸುವುದು, ಪ್ರಾರ್ಥನೆಗಳು, ಧಾರ್ಮಿಕ ಸಮಾರಂಭಗಳು ಮತ್ತು ಬಲಿಗಳ ಮೂಲಕ ದೇವರನ್ನು ಸಂತೃಪ್ತಿಗೊಳಿಸುವುದು– ಇವುಗಳೇ ಧರ್ಮ ಎಂಬುದಾಗಿ ನೆಲೆ ನಿಂತಿದೆ. ಈ ಆಚರಣೆಗಳೇ ಧರ್ಮದ ಅರ್ಥ.

## ೨. ಧರ್ಮದಿಂದ ಧಮ್ಮವು ಹೇಗೆ ಭಿನ್ನವಾಗುತ್ತದೆ?

೧. ಧರ್ಮವೆಂದು ಯಾವುದನ್ನು ಕರೆಯಲಾಗುತ್ತದೋ ಅದರಿಂದ, ಬುದ್ಧನು ಯಾವುದನ್ನು ಧಮ್ಮವೆಂದು ಕರೆದನೋ ಅದು ಭಿನ್ನವಾಗಿದೆ.

೨. ಯೂರೋಪಿನ ದೈವಶಾಸ್ತ್ರಜ್ಞರು ಯಾವುದನ್ನು ಧರ್ಮವೆಂದು ಕರೆದರೋ ಅದರೊಂದಿಗೆ ಬುದ್ಧನು ಯಾವುದನ್ನು ಧಮ್ಮವೆಂದು ಕರೆದನೋ ಅದಕ್ಕೆ ಹೋಲಿಕೆಯಿದೆ.

೩. ಆದರೆ ಅವೆರಡರ ನಡುವೆ ಹೆಚ್ಚೇನೂ ನಿಕಟತೆ ಇಲ್ಲ. ಅದಕ್ಕೆ ಬದಲು ಅವೆರಡರ ನಡುವಣ ವ್ಯತ್ಯಾಸಗಳು ಬಹಳ ಹೆಚ್ಚಾಗಿವೆ.

೪. ಈ ಕಾರಣದಿಂದಾಗಿ ಯುರೋಪಿನ ಕೆಲವು ದೈವಶಾಸ್ತ್ರಜ್ಞರು ಬುದ್ಧನ ಧಮ್ಮವನ್ನು ಧರ್ಮವೆಂದು ಪರಿಗಣಿಸಲು ನಿರಾಕರಿಸುತ್ತಾರೆ.

೫. ಇದಕ್ಕಾಗಿ ಯಾವುದೇ ಸಂತಾಪಪಡುವ ಅಗತ್ಯವಿಲ್ಲ. ಇದರಲ್ಲಿ ನಷ್ಟ ಅವರಿಗೇ. ಅದರಿಂದ ಬುದ್ಧನ ಧಮ್ಮಕ್ಕೆ ಯಾವುದೇ ಹಾನಿಯಾಗದು. ಅದಕ್ಕೆ ಬದಲಾಗಿ ಧರ್ಮದಲ್ಲಿ ಇರುವ ಕೊರತೆಯನ್ನು ಅದು ತೋರಿಸುತ್ತದೆ.

೬. ಭಿನ್ನಾಭಿಪ್ರಾಯದಲ್ಲಿ ಸಿಲುಕುವುದಕ್ಕೆ ಬದಲಾಗಿ, ಧಮ್ಮದ ಬಗ್ಗೆ ಒಂದು ಅರಿವನ್ನು ಮೂಡಿಸಿ ಅನಂತರ ಧರ್ಮದಿಂದ ಅದು ಹೇಗೆ ಭಿನ್ನವಾಗುತ್ತದೆ ಎಂದು ತೋರಿಸುವುದು ಉತ್ತಮ.

೭. ಧರ್ಮವು ವೈಯಕ್ತಿಕವಾದುದು ಮತ್ತು ಅದನ್ನು ಸ್ವಂತಕ್ಕೇ ಸೀಮಿತಗೊಳಿಸಿಕೊಳ್ಳಬೇಕು ಎಂದು ಹೇಳಲಾಗಿದೆ. ಸಾರ್ವಜನಿಕ ಜೀವನದಲ್ಲಿ ಅದು ತನ್ನ ಪಾತ್ರವನ್ನು ನಿರ್ವಹಿಸಲು ಯಾರೂ ಬಿಡಕೂಡದು.

೮. ತದ್ವಿರುದ್ಧವಾಗಿ, ಧಮ್ಮವು ಮೂಲಭೂತವಾಗಿ ಹಾಗೂ ಅತ್ಯಗತ್ಯವಾಗಿ ಸಾಮಾಜಿಕವಾದುದು.

೯. ಧಮ್ಮ ಎಂದರೆ ಋಜುತ್ವ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಮನುಷ್ಯ–ಮನುಷ್ಯನ ನಡುವೆ ಸರಿಯಾದ ಸಂಬಂಧಗಳು ಇರುವುದು.

೧೦. ಒಬ್ಬ ಮನುಷ್ಯನು ಏಕಾಂಗಿಯಾಗಿದ್ದರೆ, ಆತನಿಗೆ ಧಮ್ಮದ ಅಗತ್ಯವಿಲ್ಲ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

೧೧. ಆದರೆ ಇಬ್ಬರು ವ್ಯಕ್ತಿಗಳು ಪರಸ್ಪರ ಸಂಬಂಧದಲ್ಲಿ ಜೀವಿಸುತ್ತಿದ್ದರೆ, ಅವರಿಗೆ ಇಷ್ಟವಾಗಲಿ, ಆಗದಿರಲಿ, ಧರ್ಮಕ್ಕೆ ಒಂದು ಸ್ಥಾನ ಕೊಡಲೇಬೇಕಾಗುತ್ತದೆ. ಅದರಿಂದ ಯಾರೊಬ್ಬರೂ ತಪ್ಪಿಸಿಕೊಳ್ಳಲಾಗದು.

೧೨. ಅಂದರೆ ಧಮ್ಮವಿಲ್ಲದೆ ಸಮಾಜವು ನಡೆಯಲಾರದು.
೧೩. ಸಮಾಜವು ಮೂರು ಪರ್ಯಾಯಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗುತ್ತದೆ.
೧೪. ಯಾವುದೇ ಧಮ್ಮವನ್ನು ಸರ್ಕಾರದ ಒಂದು ಸಾಧನವನ್ನಾಗಿ ಬಳಸಿಕೊಳ್ಳದಿರುವುದನ್ನು ಸಮಾಜವು ಆರಿಸಿಕೊಳ್ಳಬಹುದು. ಏಕೆಂದರೆ ಧಮ್ಮವು ಸರ್ಕಾರದ ಒಂದು ಸಾಧನವಾಗದಿದ್ದಲ್ಲಿ ಅದಕ್ಕೆ ಅರ್ಥವಿಲ್ಲ.
೧೫. ಇದರರ್ಥ, ಸಮಾಜವು ಅನಾಯಕತ್ವದ ದಾರಿಯನ್ನು ಆಯ್ಕೆ ಮಾಡುತ್ತದೆ ಎಂದು.
೧೬. ಎರಡನೆಯದಾಗಿ, ಪೊಲೀಸ್ ಅಂದರೆ ಸರ್ವಾಧಿಕಾರವನ್ನು ಸರ್ಕಾರದ ಒಂದು ಸಾಧನವನ್ನಾಗಿ ಸಮಾಜವು ಆರಿಸಿಕೊಳ್ಳಬಹುದು.
೧೭. ಮೂರನೆಯದು, ಧಮ್ಮವನ್ನು ಮತ್ತು ಎಲ್ಲೆಲ್ಲಿ ಜನರು ಧಮ್ಮವನ್ನು ಆಚರಿಸಲು ತಪ್ಪುತ್ತಾರೋ ಅಲ್ಲಲ್ಲಿ ನ್ಯಾಯಾಧಿಕಾರಿಯನ್ನು ಸಮಾಜವು ಆರಿಸಿಕೊಳ್ಳಬಹುದು.
೧೮. ಅನಾಯಕತ್ವ ಮತ್ತು ಸರ್ವಾಧಿಕಾರ ಎರಡರಲ್ಲೂ ಸ್ವಾತಂತ್ರ್ಯದ ಹರಣವಾಗುತ್ತದೆ.
೧೯. ಮೂರನೆಯದರಲ್ಲಿ ಮಾತ್ರ ಸ್ವಾತಂತ್ರ್ಯ ಉಳಿಯುತ್ತದೆ.
೨೦. ಯಾರಿಗೆ ಸ್ವಾತಂತ್ರ್ಯದ ಬಯಕೆಯಿದೆಯೋ ಅವರು ಧಮ್ಮ ಆಚರಿಸಲೇಬೇಕು.
೨೧. ಅಂದಮೇಲೆ ಧಮ್ಮವೆಂದರೆ ಯಾವುದು? ಮತ್ತು ಧಮ್ಮವು ಯಾಕೆ ಅಗತ್ಯ. ಬುದ್ಧನ ಪ್ರಕಾರ ಧಮ್ಮವು ಪ್ರಜ್ಞೆ ಮತ್ತು ಕರುಣೆಗಳ ಸಂಗಮ.
೨೨. ಪ್ರಜ್ಞೆ ಎಂದರೇನು? ಪ್ರಜ್ಞೆಯ ಅಗತ್ಯವೇನು? ಪ್ರಜ್ಞೆ ಎಂದರೆ ಅರಿವು. ಬುದ್ಧನು ತನ್ನ ಧಮ್ಮದ ಎರಡು ಮೂಲೆಗಲ್ಲುಗಳಲ್ಲಿ ಪ್ರಜ್ಞೆಯು ಒಂದೆಂದು ಪ್ರತಿಪಾದಿಸಿದ. ಏಕೆಂದರೆ, ಮೂಢನಂಬಿಕೆಗೆ ಯಾವುದೇ ಅವಕಾಶ ಕೊಡಲು ಅವನಿಗೆ ಇಷ್ಟವಿರಲಿಲ್ಲ.
೨೩. ಕರುಣೆ ಎಂದರೇನು? ಕರುಣೆಯ ಅಗತ್ಯವೇನು? ಕರುಣೆಯೇ ಪ್ರೀತಿ. ಅದಿಲ್ಲದೆ ಸಮಾಜವು ಬದುಕಲೂ ಸಾಧ್ಯವಿಲ್ಲ. ಬೆಳೆಯಲೂ ಸಾಧ್ಯವಿಲ್ಲ. ಈ ಕಾರಣದಿಂದ ಬುದ್ಧನು ಅದನ್ನು ತನ್ನ ಧಮ್ಮದ ಎರಡನೇ ಮೂಲೆಗಲ್ಲಾಗಿ ಸ್ಥಾಪಿಸಿದ.
೨೪. ಇದೇ ಬುದ್ಧನ ಧಮ್ಮದ ಅರ್ಥವಿವರಣೆ.
೨೫. ಧರ್ಮದ ಅರ್ಥವಿವರಣೆಗಿಂತ, ಧಮ್ಮದ ಈ ಅರ್ಥವಿವರಣೆಯು ಅದೆಷ್ಟು ವಿಭಿನ್ನವಾಗಿದೆ.
೨೬. ಬುದ್ಧನು ಧರ್ಮಕ್ಕೆ ಕೊಟ್ಟ ವ್ಯಾಖ್ಯೆಯು ಅದೆಷ್ಟು ಪ್ರಾಚೀನ! ಆದರೂ ಅದೆಷ್ಟು ಆಧುನಿಕ.
೨೭. ಅದು ಪ್ರಾಚೀನವಾದದ್ದಾದರೂ ಅದೆಷ್ಟು ಸ್ವಂತಿಕೆಯುಳ್ಳದ್ದು.
೨೮. ಯಾರಿಂದಲೂ ಎರವಲು ಪಡೆದದ್ದಲ್ಲ. ಆದರೂ ಅದೆಷ್ಟು ಸತ್ಯವಾದದ್ದು.
೨೯. ಪ್ರಜ್ಞೆ ಮತ್ತು ಕರುಣೆಯ ಒಂದು ವಿಶಿಷ್ಟ ಸಂಯೋಗವೇ ಬುದ್ಧನ ಧಮ್ಮ.
೩೦. ಧರ್ಮ ಮತ್ತು ಧಮ್ಮದ ಭಿನ್ನತೆ ಹೀಗಿದೆ.

# ೩. ಧರ್ಮದ ಉದ್ದೇಶ ಮತ್ತು ಧಮ್ಮದ ಉದ್ದೇಶ

೧ ಧರ್ಮದ ಉದ್ದೇಶವೇನು? ಧಮ್ಮದ ಉದ್ದೇಶವೇನು? ಅವೆರಡೂ ಒಂದೇ ಮತ್ತು ಅಭಿನ್ನವೇ? ಅಥವಾ ಅವೆರಡೂ ಭಿನ್ನವಾದವುಗಳೇ?

೨ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಎರಡು ಸಂವಾದಗಳಲ್ಲಿ ಕಂಡುಕೊಳ್ಳಬೇಕು. ಅವೆರಡು ಸಂವಾದಗಳೆಂದರೆ — ಒಂದು ಬುದ್ಧ ಮತ್ತು ಸುನಕ್ಷತ್ರನ ನಡುವೆ ನಡೆದ ಸಂವಾದ ಮತ್ತು ಇನ್ನೊಂದು ಬುದ್ಧ ಮತ್ತು ಪೋಷ್ಟಪದ ಇವರ ನಡುವೆ ನಡೆದ ಸಂವಾದ.

೩ ಮಲ್ಲಗಳ ಪಟ್ಟಣಗಳಲ್ಲೊಂದಾದ ಅನುಪಿಯಾದಲ್ಲಿ ಒಂದು ಸಲ ಆ ಪವಿತ್ರಾತ್ಮನು ವಾಸಿಸುತ್ತಿದ್ದ.

೪ ಒಂದು ಮುಂಜಾನೆ, ಉಡುಪನ್ನು ಧರಿಸಿದ ನಂತರ, ಭಗವಾನನು ತನ್ನ ಮೇಲುವಸ್ತ್ರವನ್ನು ಧರಿಸಿ, ಭಿಕ್ಷಾಪಾತ್ರೆ ಹಿಡಿದು, ಭಿಕ್ಷೆಗಾಗಿ ಪಟ್ಟಣವನ್ನು ಪ್ರವೇಶಿಸಿದ.

೫ ಭಿಕ್ಷೆಗೆ ಹೋಗಲು ಅದು ಬಹಳ ಮುಂಚೆಯೆಂದು ದಾರಿಯಲ್ಲಿ ಆತ ಯೋಚಿಸಿದ. ಆದ್ದರಿಂದ ಆತನು ಅಲೆಮಾರಿ ಭಾರ್ಗವನ ವಿಹಾರಕ್ಕೆ ಹೋಗಿ ಆತನನ್ನು ಭೇಟಿಮಾಡಿದ.

೬ ಪೂಜ್ಯನನ್ನು ಕಂಡ ಭಾರ್ಗವನು ಎದ್ದು ನಮಸ್ಕರಿಸಿ ಹೇಳಿದ: "ದಯವಿಟ್ಟು ಕುಳಿತುಕೊಳ್ಳಿ ಪ್ರಭುವೆ, ನಿಮಗಾಗಿ ಸಿದ್ಧಪಡಿಸಲಾದ ಆಸನವು ಇಲ್ಲಿದೆ."

೭ ಭಗವಾನನು ಆ ಆಸನದ ಮೇಲೆ ಕುಳಿತ. ಆತನ ಪಕ್ಕದಲ್ಲೇ ಒಂದು ಚಿಕ್ಕ ಕಾಲ್ಮಣೆಯ ಮೇಲೆ ಭಾರ್ಗವನೂ ಕುಳಿತ. ಹಾಗೆ ಕುಳಿತ ಅಲೆಮಾರಿ ಭಾರ್ಗವನು ಆ ಪವಿತ್ರಾತ್ಮನಿಗೆ ಈ ರೀತಿ ಹೇಳಿದ:

೮ "ಭಗವಾನ್, ಕೆಲವು ದಿನಗಳ ಹಿಂದೆ, ಅಷ್ಟೇಕೆ, ಸಾಕಷ್ಟು ದಿನಗಳ ಹಿಂದೆ ಲಿಚ್ಛವಿಯರ ಸುನಕ್ಕತ್ತನು ನನ್ನನ್ನು ನೋಡಲು ಬಂದು ಈ ರೀತಿ ಹೇಳಿದ: 'ಭಾರ್ಗವಾ! ನಾನು ಈಗ ತಥಾಗತನನ್ನು ಬಿಟ್ಟುಬಿಟ್ಟಿದ್ದೇನೆ. ನಾನು ಆತನ ಶಿಷ್ಯನಾಗಿ ಈಗ ಉಳಿದಿಲ್ಲ, ಅವನು ಹೇಳಿದ ಸಂಗತಿ ಸತ್ಯವಾದುದೇ?"

೯ "ಭಾರ್ಗವಾ! ಲಿಚ್ಛವಿಯರ ಸುನಕ್ಷತ್ರನು ಹೇಳಿದಂತೆಯೇ ಅದೆಲ್ಲವೂ ನಿಜ" ಎಂದು ಪೂಜ್ಯನು ಹೇಳಿದ.

೧೦ "ಭಾರ್ಗವಾ! ಕೆಲವು ದಿನಗಳ ಹಿಂದೆ, ಅಷ್ಟೇಕೆ ಸಾಕಷ್ಟು ದಿನಗಳ ಹಿಂದೆ, ಲಿಚ್ಛವಿಯರ ಸುನಕ್ಷತ್ರನು ನನ್ನನ್ನು ಕಾಣಲು ಬಂದ ಮತ್ತು ಈ ರೀತಿ ಹೇಳಿದ: 'ಪ್ರಭು, ನಾನು ಈಗ ಮಹಾಮಹಿಮನನ್ನು ಬಿಡುತ್ತೇನೆ. ಆದ್ದರಿಂದ ಮುಂದೆ ನಾನು ಆತನನ್ನು ಗುರುವೆಂದು ತಿಳಿದು ಅಧೀನನಾಗುವುದಿಲ್ಲ' ಅವನು ಹಾಗೆ ಹೇಳಿದಾಗ, ಅವನಿಗೆ ನಾನು ಹೇಳಿದೆ: 'ಸುನಕ್ಷತ್ರ ನನ್ನ ಬಳಿ ಬಂದು ನನ್ನ ಶಿಷ್ಯನಾಗಿರು ಎಂದು ನಾನೆಂದಾದರೂ ನಿನಗೆ ಹೇಳಿದ್ದೇನೆಯೇ?"

೧೧ "ಇಲ್ಲ ಪ್ರಭು! ನೀವು ಹಾಗೆ ಹೇಳಿಲ್ಲ."

೧೨ "ಅಥವಾ 'ಪ್ರಭು, ನಾನು ಮಹಾಮಹಿಮನನ್ನು ಗುರುವೆಂದು ತಿಳಿದು ಅವನ ಅನುಯಾಯಿಯಾಗುತ್ತೇನೆ' ಎಂದು ನೀನು ಎಂದಾದರೂ ನನಗೆ ಹೇಳಿದೆಯಾ?"

೧೩ "ಇಲ್ಲ ಪ್ರಭು, ನಾನು ಹಾಗೆ ಹೇಳಿಲ್ಲ."

೧೪ "ಅನಂತರ, 'ನಾನು ಒಂದನ್ನು ಹೇಳದಿದ್ದಲ್ಲಿ ಮತ್ತು ನೀನು ಮತ್ತೊಂದನ್ನು ಹೇಳದಿದ್ದಲ್ಲಿ ಬಿಟ್ಟುಬಿಡುತ್ತೇನೆಂದು ಹೇಳುತ್ತಿರುವ ನೀನು ಯಾರು ಮತ್ತು ನಾನು ಯಾರು?' ಎಂದು ಅವನನ್ನು

ನಾನು ಕೇಳಿದೆ. ಅಲ್ಲದೆ, ಅವಿವೇಕಿಯೇ! ಇದರಲ್ಲಿ ನಿನ್ನ ಸ್ವಂತ ತಪ್ಪು ಎಷ್ಟಿದೆ ಎಂದುದನ್ನು ತಿಳಿದಿರು."

೧೫ "ಅದು ಸರಿ ಪ್ರಭು! ಸಾಮಾನ್ಯ ಮನುಷ್ಯರ ಶಕ್ತಿಗೆ ಮೀರಿದಂತಹ ಯಾವುದೇ ಗಹನವಾದ ಚಮತ್ಕಾರಗಳನ್ನು ಮಹಾಮಹಿಮನು ಮಾಡಿ ನಮಗೆ ತೋರಿಸಿಲ್ಲ."

೧೬ " 'ಇಲ್ಲಿ ಬಾ ಸುನಕ್ಷತ್ರ, ನನ್ನನ್ನು ನೀನು ಗುರುವಾಗಿ ಸ್ವೀಕರಿಸು. ಸಾಮಾನ್ಯ ಮನುಷ್ಯರ ಶಕ್ತಿಗೆ ಮೀರಿದಂತಹ ಗಹನವಾದ ಚಮತ್ಕಾರಗಳನ್ನು ಮಾಡಿತೋರಿಸುತ್ತೇನೆ' ಎಂದು ಎಂದಾದರೂ ನಾನು ನಿನಗೆ ಹೇಳಿದ್ದೇನೆಯೇ?"

೧೭ "ಪ್ರಭು! ನೀವು ಹಾಗೆ ಹೇಳಿಲ್ಲ."

೧೮ "ಅಥವಾ, 'ಪ್ರಭುವೇ, ಮಹಾಮಹಿಮನನ್ನು ಇಷ್ಟಪಟ್ಟು ನನ್ನ ಗುರುವಾಗಿ ಸ್ವೀಕರಿಸುತ್ತೇನೆ. ಏಕೆಂದರೆ, ಆತನು ಸಾಮಾನ್ಯ ಮನುಷ್ಯನ ಶಕ್ತಿಗೆ ಮೀರಿದಂತಹ ಗಹನವಾದ ಚಮತ್ಕಾರಗಳನ್ನು ನನಗೆ ಮಾಡಿತೋರಿಸುತ್ತೇನೆ', ಎಂದು ಎಂದಾದರೂ ನೀನು ನನಗೆ ಹೇಳಿದ್ದೀಯಾ?"

೧೯ "ನಾನು ಹಾಗೆ ಹೇಳಿಲ್ಲ, ಪ್ರಭು."

೨೦ "ಆದರೆ, ನಾನು ಒಂದನ್ನು ಹೇಳದೆ, ನೀನು ಮತ್ತೊಂದನ್ನು ಹೇಳದೆ, ಮೂರ್ಖ ಮನುಷ್ಯ, 'ಬಿಟ್ಟುಬಿಡುತ್ತೇನೆ' ಎಂದು ಹೇಳುತ್ತಿರುವ ನೀನು ಯಾರು ಮತ್ತು ನಾನು ಯಾರು? ನಿನ್ನ ಯೋಚನೆಯೇನು ಸುನಕ್ಷತ್ರ? ಸಾಮಾನ್ಯ ಮನುಷ್ಯನ ಶಕ್ತಿಯನ್ನು ಮೀರಿದಂತಹ ಗಹನವಾದ ಚಮತ್ಕಾರಗಳನ್ನು ಮಾಡಬಹುದೇ ಅಥವಾ ಮಾಡಲಾಗದೇ ಎಂಬ ಉದ್ದೇಶಕ್ಕಾಗಿ ಮತ್ತು ಧಮ್ಮವು ಅಂತಹ ಚಮತ್ಕಾರಗಳನ್ನು ಮಾಡುವಂತಹ ವ್ಯಕ್ತಿಗೆ ಆಗುವ ಹಾನಿಯನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ ಎಂಬ ಉದ್ದೇಶದಿಂದ ನಾನು ಧಮ್ಮವನ್ನು ಬೋಧಿಸುತ್ತಿದ್ದೇನೆಯೇ?"

೨೧ "ಪ್ರಭು! ಆ ರೀತಿ ಮಾಡಲಿ ಅಥವಾ ಮಾಡದಿರಲಿ, ಮಹಾಮಹಿಮನು ಧಮ್ಮವನ್ನು ಬೋಧಿಸುವುದು ಅದೇ ಉದ್ದೇಶದಿಂದಲ್ಲವೇ?"

೨೨ "ಹಾಗಾದರೆ ಸುನಕ್ಷತ್ರ, ಗಹನವಾದ ಚಮತ್ಕಾರಗಳನ್ನು ಮಾಡಲಿ ಅಥವಾ ಮಾಡದಿರಲಿ, ಅದರ ಉದ್ದೇಶ ಅದಲ್ಲ. ಅವುಗಳನ್ನು ಮಾಡುವುದರಿಂದ ನಿನಗೆ ಏನು ಉಪಯೋಗವಾಗುತ್ತದೆ? ಮೂರ್ಖ, ಇಲ್ಲಿ ನಿನ್ನ ಸ್ವಂತ ತಪ್ಪು ಎಷ್ಟಿದೆ ಎಂಬುದನ್ನು ತಿಳಿದುಕೋ."

೨೩ "ಆದರೆ ಪ್ರಭು, ಮಹಾಮಹಿಮನು ವಸ್ತು ಉಗಮವನ್ನು ನನಗೆ ಬೋಧಿಸಿರುವುದಿಲ್ಲ."

೨೪ "ಅದು ಹೇಗೆ ಸುನಕ್ಷತ್ರ? 'ಸುನಕ್ಷತ್ರ, ಬಾ ನನ್ನ ಶಿಷ್ಯನಾಗಿರು ಮತ್ತು ನಾನು ವಸ್ತುಗಳ ಉಗಮವನ್ನು ನಿನಗೆ ಬೋಧಿಸುತ್ತೇನೆ' ಎಂದು ಎಂದಾದರೂ ನಿನಗೆ ನಾನು ಹೇಳಿದ್ದೇನೆಯೇ?"

೨೫ "ಪ್ರಭು! ನೀವು ಹಾಗೆ ಹೇಳಿಲ್ಲ."

೨೬ "'ನಾನು ಮಹಾಮಹಿಮನ ಶಿಷ್ಯನಾಗುತ್ತೇನೆ. ಏಕೆಂದರೆ ವಸ್ತುಗಳ ಉಗಮವನ್ನು ಆತನು ನನಗೆ ಬೋಧಿಸುತ್ತಾನೆ' ಎಂದು ನೀನು ನನಗೆ ಎಂದಾದರೂ ಹೇಳಿದ್ದೀಯಾ?"

೨೭ "ಪ್ರಭು! ನಾನು ಹಾಗೆ ಹೇಳಿಲ್ಲ."

೨೮ "ಆದರೆ ಒಂದನ್ನು ನಾನು ಹೇಳದೆ, ಮತ್ತೊಂದನ್ನು ನೀನು ಹೇಳದೆ, ಮೂರ್ಖ, ಅಕಾರಣವಾಗಿ ನೀನು ಬಿಟ್ಟುಬಿಡಬೇಕೆಂದಿರುವ ನಾನು ಯಾರು? ಮತ್ತು ನೀನು ಯಾರು? ಸುನಕ್ಷತ್ರ, ನಿನ್ನ ಯೋಚನೆಯೇನು? ವಸ್ತುಗಳ ಉಗಮವನ್ನು ಬೋಧಿಸಲಾಗುತ್ತಿದೆಯೋ ಅಥವಾ ಇಲ್ಲವೋ

ಎಂಬುದನ್ನು ತಿಳಿಸುವ ಉದ್ದೇಶಕ್ಕಾಗಿ ಮತ್ತು ಧಮ್ಮವು ಹಾಗೆ ಮಾಡಬಹುದಾದವನಿಗೆ, ಆಗಬಹುದಾದ ಕೇಡನ್ನು ಸಂಪೂರ್ಣವಾಗಿ ನಾಶಮಾಡುವ ದಾರಿಯನ್ನು ಅದು ನಮಗೆ ತೋರಿಸುತ್ತದೆ ಎಂಬ ಉದ್ದೇಶದಿಂದ ಧಮ್ಮವನು ಬೋಧಿಸುತ್ತಿದ್ದೇನೇನು?"

೨೯ "ಅವುಗಳನ್ನು ತೋರಿಸಲಿ, ತೋರಿಸದಿರಲಿ, ಪ್ರಭು, ಅದೇ ಉದ್ದೇಶಕ್ಕಾಗಿಯೇ ಮಹಾಮಹಿಮನು ಧರ್ಮವನ್ನು ಬೋಧಿಸುತ್ತಾನಲ್ಲವೇ?"

೩೦ "ವಸ್ತು ಉಗಮವನ್ನು ಬೋಧಿಸುವುದು ಅಥವಾ ಬೋಧಿಸದಿರುವುದರಿಂದ, ಆ ವಸ್ತುಗಳಿಗೆ ಭಾದಕವೇನೂ ಆಗದಿರುವಾಗ ವಸ್ತು ಉಗಮವನ್ನು ಬೋಧಿಸುವುದರಿಂದ ನಿನಗೆ ಆಗುವ ಉಪಯೋಗವೇನು, ಸುನಕ್ಕತ್ತಾ?"

೩೧ ವಸ್ತು ಉಗಮವನ್ನು ತಿಳಿಸುವುದರಲ್ಲಿ ಧರ್ಮಕ್ಕೆ ಆಸಕ್ತಿ ಎಂದೂ ಧಮ್ಮಕ್ಕೆ ಆ ಆಸಕ್ತಿಯಿಲ್ಲ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

## (೨) ಭಗವಾನ ಮತ್ತು ಪ್ರೋಷ್ಟಪಾದ ಇವರ ನಡುವೆ ನಡೆದ ಸಂವಾದವು ಧರ್ಮ ಮತ್ತು ಧಮ್ಮಗಳ ನಡುವಣ ಇತರ ಭೇದಗಳನ್ನು ತೋರಿಸುತ್ತದೆ.

೧ ಜೇಟ ಅರಣ್ಯದ ಅನಾಥಪಿಂಡಿಕಾ ವಿಹಾರ ಭೂಮಿಯಲ್ಲಿ ಒಂದು ಸಲ ಭಗವಾನನು ತಂಗಿದ್ದ. ಆ ಸಂದರ್ಭದಲ್ಲಿ, ತತ್ತ್ವಜ್ಞಾನದ ಬಗೆಗಿರುವ ಸಾಮಾನ್ಯ ಪಂಥಗಳ ಬಗ್ಗೆ ಚರ್ಚೆ ನಡೆಸಲೋಸ್ಕರ ಮಲ್ಲಿಕಾರಾಣಿಯ ಉದ್ಯಾನದಲ್ಲಿ ನಿರ್ಮಿತವಾಗಿದ್ದ ಭವನದಲ್ಲಿ, ಅಲೆಮಾರಿ ಸಂನ್ಯಾಸಿ ಪೊತ್ತಪಾದನು ವಾಸಿಸುತ್ತಿದ್ದ.

೨ ಅವನ ಜೊತೆ ಹಲವು ಮಂದಿ ಅನುಯಾಯೀ ಸಂನ್ಯಾಸಿಗಳಿದ್ದರು. ಅವರ ಸಂಖ್ಯೆ ೩೦೦. ಭಗವಾನ್ ಮತ್ತು ಪ್ರೋಷ್ಟಪಾದರ ನಡುವೆ ಸಂವಾದ ನಡೆಯಿತು. ಪ್ರೋಷ್ಟಪಾದನು ಹೇಳಿದ:

೩ "ಅಂದರೆ ಪ್ರಭು, ಅದು ಹಾಗಿದ್ದರೆ, ಪ್ರಪಂಚವು ಅನಂತವೇ? ಇದೇ ಏಕೈಕ ಸತ್ಯವೇ? ಮತ್ತು ಯಾವುದೇ ಇತರ ಅಭಿಪ್ರಾಯ ಸುಳ್ಳೇ? ಎಂಬುದನ್ನಾದರೂ ನನಗೆ ಕೊನೆಯ ಪಕ್ಷ ತಿಳಿಸು."

೪ "ಪ್ರೋಷ್ಟಪಾದ, ನಾನು ನನ್ನ ಯಾವುದೇ ಅಭಿಪ್ರಾಯವನ್ನು ಹೇಳದಿರುವಂತಹ ವಿಷಯವದು" ಎಂದು ಪೂಜ್ಯನು ಉತ್ತರಿಸಿದ.

೫ ಆಗ ಅದೇ ಮಾತುಗಳಲ್ಲಿ ಈ ಕೆಳಗಿನ ಪ್ರಶ್ನೆಗಳನ್ನೆಲ್ಲ ಪ್ರೋಷ್ಟಪಾದ ಕೇಳಿದ.

(i) 'ಪ್ರಪಂಚವು ಅನಂತವಾದುದಲ್ಲವೇ?'
(ii) 'ಪ್ರಪಂಚವು ಸಾಂತವಾದುದೇ?'
(iii) 'ಪ್ರಪಂಚವು ಅನಂತವಾದುದೇ?'
(iv) 'ಆತ್ಮವು ಶರೀರದಂತಯೇ ಇದೆಯೇ?'
(v) 'ಆತ್ಮವು ಒಂದು ವಸ್ತು ಮತ್ತು ದೇಹವು ಮತ್ತೊಂದು ವಸ್ತುವೇ?'
(vi) 'ಸತ್ಯವನ್ನು ಕಂಡುಕೊಂಡ ಮನುಷ್ಯನು ಸತ್ತಮೇಲೂ ಜೀವಿಸಿರುತ್ತಾನೆಯೇ?'
(vii) 'ಮರಣದ ನಂತರ ಅವನು ಪುನಃ ಜೀವಿಸಿರುವುದಿಲ್ಲವೇ?'
(viii) 'ಮರಣದ ನಂತರ ಅವನು ಪುನಃ ಜೀವಿಸಿರುತ್ತಾನೆಯೇ ಮತ್ತು ಪುನಃ ಜೀವಿಸಿರುವುದಿಲ್ಲವೇ?'

(ix) ‘ಮರಣದ ನಂತರ ಅವನು ಪುನಃ ಜೀವಿಸಿರುವುದಾಗಲೀ ಅಥವಾ ಜೀವಿಸದೇ ಇರುವುದಾಗಲೀ ಉಂಟೇ?’

೬. ಪ್ರತಿಯೊಂದು ಪ್ರಶ್ನೆಗೂ ಮಹಾಮಹಿಮನು ಅದೇ ಉತ್ತರ ಕೊಟ್ಟ:

೭. “ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಮಾಡಿಲ್ಲದುದರಲ್ಲಿ ಅದೂ ಕೂಡ ಸೇರಿದೆ.”

೮. “ಆ ವಿಷಯದ ಬಗ್ಗೆ ಮಹಾಮಹಿಮನು ಏಕೆ ತನ್ನ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ?”

೯. “ಏಕೆಂದರೆ ಯಾವುದೇ ಲಾಭಕ್ಕಾಗಿ ಈ ಪ್ರಶ್ನೆಯ ಬಗ್ಗೆ ವಿಚಾರ ಮಾಡಿಲ್ಲ. ಅದು ಧಮ್ಮಕ್ಕೆ ಸಂಬಂಧಿಸಿಲ್ಲ. ನಿಜವಾದ ನಡತೆ ಅಥವಾ ನಿರ್ಲಿಪ್ತತೆ ಅಥವಾ ಲಾಲಸೆಗಳಿಂದ ಮುಕ್ತವಾಗಿ ಶುದ್ಧವಾಗುವುದಕ್ಕಾಗಲೀ, ಅಥವಾ ಶಾಂತ ಸ್ಥಿತಿಗಾಗಲಿ ಹೃದಯವನ್ನು ಸಾಂತ್ವನಗೊಳಿಸುವುದಕ್ಕಾಗಲಿ ಅಥವಾ ನಿಜವಾದ ಜ್ಞಾನಕ್ಕಾಗಲಿ ಸನ್ಮಾರ್ಗದ ಮೇಲುಮೇಲಿನ ಹಂತಗಳ ಬಗ್ಗೆ ಒಳನೋಟ ಪಡೆಯುವುದಕ್ಕಾಗಲಿ, ಅಥವಾ ನಿರ್ವಾಣಕ್ಕಾಗಲಿ ಅದು ನೆರವಾಗುವುದಿಲ್ಲ. ಆದ್ದರಿಂದ ಅದರ ಬಗ್ಗೆ ನಾನು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.”

೧೦ “ಹಾಗಿದ್ದರೆ ಮಹಾಮಹಿಮನು ನಿರ್ಧರಿಸಿರುವುದು ಅದಾವುದನ್ನು?”

೧೧ “ಪ್ರೋಷ್ಟಪಾದ, ದುಃಖವಾವುದು ಎಂಬುದನ್ನು ನಾನು ವಿವರಿಸಿದ್ದೇನೆ. ದುಃಖದ ಮೂಲವಾವುದೆಂಬುದನ್ನು ನಾನು ವಿವರಿಸಿದ್ದೇನೆ. ದುಃಖದ ಅವಸಾನವೇನು ಎಂಬುದನ್ನು ನಾನು ವಿವರಿಸಿದ್ದೇನೆ. ಒಬ್ಬ ಮನುಷ್ಯನು ತನ್ನ ದುಃಖವನ್ನು ನಿವಾರಿಸಿಕೊಳ್ಳಲು ಅನುಸರಿಸಬೇಕಾದ ವಿಧಾನ ಯಾವುದು ಎಂಬುದನ್ನೂ ನಾನು ವಿವರಿಸಿದ್ದೇನೆ.”

೧೨ “ಅದಕ್ಕೆ ಸಂಬಂಧಿಸಿದಂತೆ ಮಹಾಮಹಿಮನು ಒಂದು ಹೇಳಿಕೆಯನ್ನು ಕೊಟ್ಟಿದ್ದೇಕೆ?”

೧೩ “ಏಕೆಂದರೆ, ಪ್ರೋಷ್ಟಪಾದ, ಆ ಪ್ರಶ್ನೆಯು ಅನುಕೂಲಕ್ಕಾಗಿ ಪರಿಗಣಿತವಾಗಿದೆ. ಅದು ಧಮ್ಮಕ್ಕೆ ಸಂಬಂಧಿಸಿದೆ. ಒಳ್ಳೆಯ ನಡತೆಯ ಆರಂಭಕ್ಕೆ, ನಿರ್ಲಿಪ್ತತೆಗೆ, ಲಾಲಸೆಗಳಿಂದ ಮುಕ್ತವಾಗಿ ಶುದ್ಧವಾಗುವುದಕ್ಕೆ, ಶಾಂತ ಸ್ಥಿತಿಗೆ, ಹೃದಯ ಸಾಂತ್ವನಕ್ಕೆ, ನಿಜವಾದ ಜ್ಞಾನಕ್ಕೆ, ಸನ್ಮಾರ್ಗದ ಮೇಲ್ತರದ ಹಂತಗಳ ಒಳನೋಟಕ್ಕೆ ಮತ್ತು ನಿರ್ವಾಣಕ್ಕೆ ಅದು ನೆರವಾಗುತ್ತದೆ. ಅದಕ್ಕೆ ಸಂಬಂಧಿಸಿದಂತೆ ನಾನು ಒಂದು ಹೇಳಿಕೆಯನ್ನು ಮುಂದಿಟ್ಟೆನೆಂಬುದು, ಪ್ರೋಷ್ಟಪಾದ, ಈ ಕಾರಣಕ್ಕಾಗಿಯೇ.”

೧೪ ಯಾವುದು ಧರ್ಮದ ವಿಷಯ ಮತ್ತು ಯಾವುದು ಧಮ್ಮದ ವಿಷಯವಲ್ಲ ಎಂಬುದನ್ನು ಈ ಸಂವಾದದಲ್ಲಿ ಸ್ಪಷ್ಟಪಡಿಸಲಾಗಿದೆ. ಇವೆರಡೂ ಉತ್ತರ–ದಕ್ಷಿಣ ಧ್ರುವಗಳಿದ್ದಂತೆ ಪರಸ್ಪರ ದೂರವಾಗಿವೆ.

೧೫ ಪ್ರಪಂಚದ ಉಗಮವನ್ನು ವಿವರಿಸುವುದೇ ಧರ್ಮದ ಉದ್ದೇಶ. ಪ್ರಪಂಚವನ್ನು ಪುನರ್ನಿರ್ಮಿಸುವುದು ಧಮ್ಮದ ಉದ್ದೇಶ.

## ೪. ನೈತಿಕತೆ ಮತ್ತು ಧರ್ಮ

೧. ಧರ್ಮದಲ್ಲಿ ನೈತಿಕತೆಯ ಸ್ಥಾನಮಾನವೇನು?

೨. ವಾಸ್ತವವಾಗಿ ಧರ್ಮದಲ್ಲಿ ನೈತಿಕತೆಗೆ ಯಾವ ಸ್ಥಾನವೂ ಇಲ್ಲ.

೩. ಧರ್ಮದಲ್ಲಿ ಸೇರಿರುವ ವಿಷಯಗಳೆಂದರೆ, ದೇವರು, ಆತ್ಮ, ಪ್ರಾರ್ಥನೆಗಳು, ಪೂಜೆ ಮತಾಚರಣೆಗಳು, ಮತೀಯ ಸಮಾರಂಭಗಳು ಮತ್ತು ಯಜ್ಞಗಳು.

೪. ಮನುಷ್ಯ–ಮನುಷ್ಯನ ನಡುವಣ ಸಂಬಂಧದೊಳಗೆ ಮಾತ್ರ ನೈತಿಕತೆಯ ಪ್ರವೇಶವಾಗುತ್ತದೆ.
೫. ಶಾಂತಿ ಮತ್ತು ವ್ಯವಸ್ಥೆಯನ್ನು ಉಳಿಸಿಕೊಳ್ಳುವಾಗ ಮಾತ್ರ ಸುಳಿಗಾಳಿಯಾಗಿ ನೈತಿಕತೆ ಧರ್ಮದಲ್ಲಿ ಪ್ರವೇಶಿಸುತ್ತದೆ.
೬. ಧರ್ಮವು ಒಂದು ತ್ರಿಕೋನದ ತುಂಡು.
೭. ನೀವಿಬ್ಬರೂ ದೇವರ ಮಕ್ಕಳಾದುದರಿಂದ, ನಿಮ್ಮ ನೆರೆಹೊರೆಯವನಿಗೆ ನೀನು ಒಳ್ಳೆಯವನಾಗಿರು.
೮. ಅದು ಧರ್ಮದ ವಾದ.
೯. ಪ್ರತಿಯೊಂದು ಮತವೂ ನೈತಿಕತೆಯನ್ನು ಬೋಧಿಸಿದರೂ, ನೈತಿಕತೆಯು ಮತದ ಮೂಲವಲ್ಲ.
೧೦. ಅದು ಧರ್ಮಕ್ಕೆ ಜೋಡಣೆಯಾಗಿರುವ ಒಂದು ಸರಕು ಬಂಡಿ. ಸಮಯ ಸಂದರ್ಭಗಳ ಅಗತ್ಯಕ್ಕನುಗುಣವಾಗಿ ಅದನ್ನು ಸೇರಿಸಲಾಗುತ್ತದೆ ಮತ್ತು ಬಿಚ್ಚಲಾಗುತ್ತದೆ.
೧೧. ಆದ್ದರಿಂದ ಧರ್ಮದ ಕಾರ್ಯನಿರ್ವಹಣೆಯಲ್ಲಿ, ನೈತಿಕತೆಯ ಪಾತ್ರ ಆಕಸ್ಮಿಕ ಮತ್ತು ಸಾಂದರ್ಭಿಕ.
೧೨. ಆದ್ದರಿಂದ ಧರ್ಮದಲ್ಲಿ ನೈತಿಕತೆ ಪರಿಣಾಮಕಾರಿಯಾಗಿಲ್ಲ.

## ೫. ಧಮ್ಮ ಮತ್ತು ನೈತಿಕತೆ

೧. ಧಮ್ಮದಲ್ಲಿ ನೈತಿಕತೆಯ ಸ್ಥಾನವೇನು?
೨. ನೈತಿಕತೆಯೇ ಧಮ್ಮ ಮತ್ತು ಧಮ್ಮವೇ ನೈತಿಕತೆ ಎಂಬುದೇ ಇದಕ್ಕೆ ಸರಳ ಉತ್ತರ.
೩. ಅಂದರೆ ಧಮ್ಮದಲ್ಲಿ ದೇವರಿಲ್ಲದಿದ್ದರೂ ಧಮ್ಮದಲ್ಲಿ ದೇವರ ಸ್ಥಾನವನ್ನು ನೈತಿಕತೆ ಪಡೆದುಕೊಳ್ಳುತ್ತದೆ.
೪. ಧಮ್ಮದಲ್ಲಿ ಪ್ರಾರ್ಥನೆಗಳಿಗೆ, ತೀರ್ಥಯಾತ್ರೆಗೆ, ಮತಾಚರಣೆಗಳಿಗೆ, ಮತೀಯ ಸಮಾರಂಭಗಳಿಗೆ ಅಥವಾ ಯಜ್ಞಗಳಿಗೆ ಯಾವ ಸ್ಥಾನವೂ ಇಲ್ಲ.
೫. ನೈತಿಕತೆ ಧಮ್ಮದ ಸಾರ. ಅದನ್ನು ಬಿಟ್ಟು ಧಮ್ಮವಿಲ್ಲ.
೬. ಮನುಷ್ಯನು ಮನುಷ್ಯನನ್ನು ಪ್ರೀತಿಸಲು ಬೇಕಾದ ನೇರ ಅಗತ್ಯದಿಂದ ನೈತಿಕತೆ ಉದ್ಭವಿಸುತ್ತದೆ.
೭. ಅದಕ್ಕೆ ದೇವರ ಅನುಮತಿಯ ಅಗತ್ಯವಿಲ್ಲ. ದೇವರನ್ನು ಸಂತೃಪ್ತಿಪಡಿಸುವುದಕ್ಕೋಸ್ಕರ ಮನುಷ್ಯನು ನೈತಿಕತೆಯುಳ್ಳವನಾಗಿರಬೇಕಿಲ್ಲ. ತನ್ನ ಒಳ್ಳೆಯದಕ್ಕಾಗಿಯೇ ಮನುಷ್ಯನು ಮನುಷ್ಯನನ್ನು ಪ್ರೀತಿಸಬೇಕು.

## ೬. ಕೇವಲ ನೈತಿಕತೆಯೇ ಸಾಲದು. ಅದು ಪವಿತ್ರವೂ, ವಿಶ್ವವ್ಯಾಪಿಯೂ ಆಗಿರಬೇಕು.

೧ ಒಂದು ವಸ್ತುವು ಯಾವಾಗ ಪವಿತ್ರವೆನಿಸುತ್ತದೆ? ಒಂದು ವಸ್ತುವು ಏಕೆ ಪವಿತ್ರವಿನಿಸುತ್ತದೆ?
೨ ಪ್ರಾಚೀನ ಅಥವಾ ಮುಂದುವರೆದ ಪ್ರತಿಯೊಂದು ಮಾನವ ಸಮಾಜದಲ್ಲೂ ಅದು ಪವಿತ್ರವೆಂದು ಪರಿಗಣಿಸುವ ಕೆಲವು ವಿಷಯಗಳು ಅಥವಾ ನಂಬಿಕೆಗಳು ಇರುತ್ತವೆ. ಉಳಿದವು ಅಪವಿತ್ರವಾದವುಗಳು.
೩ ಒಂದು ವಿಷಯ ಅಥವಾ ನಂಬಿಕೆಯು ಪವಿತ್ರವೆಂದು ಕರೆಯಿಸಿಕೊಳ್ಳುವ ಹಂತವನ್ನು ಮುಟ್ಟಿದೆ ಎಂದರೆ ಅದರರ್ಥ ಅದನ್ನು ಉಲ್ಲಂಘಿಸಲಾಗದೆಂಬುದು. ಅಷ್ಟು ಮಾತ್ರವಲ್ಲ ಅದನ್ನು ಮುಟ್ಟಲೂ

ಆಗದು. ಅದು ನಿಷಿದ್ಧ.

೪ ತದ್ವಿರುದ್ಧವಾಗಿ ಅಪವಿತ್ರವೆನಿಸುವ ವಸ್ತು ಅಥವಾ ನಂಬಿಕೆಯನ್ನು ಅಂದರೆ ಪವಿತ್ರ ಕ್ಷೇತ್ರದಿಂದ ಹೊರತಾದುದನ್ನು ಉಲ್ಲಂಘಿಸಬಹುದು. ಅದರರ್ಥ, ಯಾವುದೇ ಭೀತಿಭಾವವಿಲ್ಲದೆ ಅಥವಾ ಆತ್ಮಸಾಕ್ಷಿಯ ತುಡಿತವಿಲ್ಲದೆ, ಅದಕ್ಕೆ ತದ್ವಿರುದ್ಧವಾಗಿ ಒಬ್ಬನು ವರ್ತಿಸಬಹುದು.

೫ ಪವಿತ್ರವಾದುದು ಒಂದು ಪಾವನವಾದ ವಿಷಯ. ಅದನ್ನು ಉಲ್ಲಂಘಿಸುವುದು ಒಂದು ಅಪಚಾರ.

೬ ಒಂದು ವಿಷಯವನ್ನು ಪವಿತ್ರವನ್ನಾಗಿ ಏಕೆ ಮಾಡಲಾಗುತ್ತದೆ? ನಾವು ಚರ್ಚಿಸುತ್ತಿರುವ ವಿಷಯಕ್ಕೆ ಈ ಪ್ರಶ್ನೆಯನ್ನು ಸೀಮಿತಗೊಳಿಸುವುದಾದರೆ, ನೈತಿಕತೆಯನ್ನು ಪವಿತ್ರವನ್ನಾಗಿ ಏಕೆ ಮಾಡಲಾಯಿತು?

೭ ನೈತಿಕತೆಯನ್ನು ಪವಿತ್ರವನ್ನಾಗಿಸುವಲ್ಲಿ ಮೂರು ಅಂಶಗಳು ತಮ್ಮ ಪಾತ್ರವನ್ನು ನಿರ್ವಹಿಸಿರುವಂತೆ ತೋರುತ್ತದೆ.

೮ ಅತ್ಯಂತ ಉತ್ತಮವಾದುದನ್ನು ಸಂರಕ್ಷಿಸಲು ಬೇಕಾದ ಸಾಮಾಜಿಕ ಅಗತ್ಯ ಮೊದಲನೇ ಅಂಶ.

೯ ಯಾವುದನ್ನು 'ಅಸ್ತಿತ್ವ ಹೋರಾಟ ಮತ್ತು ಅತ್ಯಂತ ಸಮರ್ಥರಾದವರ ಉಳಿವು' ಎಂದು ಹೇಳಲಾಗುತ್ತದೆಯೋ ಆ ತತ್ತ್ವದಲ್ಲಿ ಈ ಪ್ರಶ್ನೆಯ ಹಿನ್ನೆಲೆ ಹುದುಗಿದೆ.

೧೦ ಇದು ಜೀವವಿಕಾಸ ಸಿದ್ಧಾಂತದಿಂದ ಉದ್ಭವಿಸುತ್ತದೆ. ಪ್ರಾಚೀನ ಕಾಲದಲ್ಲಿ ಆಹಾರ ಸರಬರಾಜಿನ ಸಾಧನಗಳು ಸೀಮಿತವಾಗಿದ್ದರಿಂದ ಅಸ್ತಿತ್ವಕ್ಕಾಗಿ ಹೋರಾಟ ಮತ್ತು ಅತ್ಯಂತ ಸಾಮರ್ಥ್ಯವುಳ್ಳವರ ಉಳಿವಿನ ಮೂಲಕ ಜೀವವಿಕಾಸ ಉಂಟಾಗುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ.

೧೧ ಆ ಹೋರಾಟವು ಬಹಳ ಉಗ್ರವಾದುದು. ಪ್ರಕೃತಿಯ ಪಂಜ ಮತ್ತು ಹಲ್ಲು ಕೆಂಪಾಗಿದ್ದವು.

೧೨ ಈ ಉಗ್ರವಾದ ಮತ್ತು ರಕ್ತಸಿಕ್ತವಾಗಿರುವ ಹೋರಾಟದಲ್ಲಿ ಕೇವಲ ಅತ್ಯಂತ ಸಮರ್ಥರು ಮಾತ್ರ ಉಳಿಯುತ್ತಾರೆ.

೧೩ ಸಮಾಜದ ಮೂಲ ಪರಿಸ್ಥಿತಿಯು ಹಾಗಿತ್ತು.

೧೪ ಪ್ರಾಚೀನ ಕಾಲದಲ್ಲೂ ಯಾರೋ ಒಬ್ಬರು, "ಅತ್ಯಂತ ಸಮರ್ಥನಾದವನೇ ಅತ್ಯಂತ ಉತ್ತಮನೇ?" ಎಂಬ ಪ್ರಶ್ನೆಯನ್ನು ಎತ್ತಿರಬಹುದು. ಸಮಾಜದ ಧ್ಯೇಯಗಳು ಮತ್ತು ಗುರಿಗಳ ಸಾಧನೆಗಾಗಿ ಸಂರಕ್ಷಿಸಲ್ಪಟ್ಟರೆ, ಅಸಮರ್ಥರಾದವರೂ, ಕೊನೆಯಲ್ಲಿ ಅತ್ಯುತ್ತಮರೆನಿಸುವುದಿಲ್ಲವೇ?

೧೫ ಆಗ ಅಸ್ತಿತ್ವದಲ್ಲಿದ್ದ ಸಮಾಜವು, 'ಅದು ನಿಜ' ಎಂಬ ಉತ್ತರವನ್ನು ಕೊಟ್ಟಿರುವಂತೆ ಕಾಣುತ್ತದೆ.

೧೬ ಈಗ ದುರ್ಬಲರನ್ನು ಸಂರಕ್ಷಿಸುವ ಮಾರ್ಗವಾವುದು ಎಂಬ ಪ್ರಶ್ನೆ ಏಳುತ್ತದೆ.

೧೭ ಅತ್ಯಂತ ಸಮರ್ಥರೆನಿಸಿದವರ ಮೇಲೆ ಕೆಲವು ನಿಯಂತ್ರಣಗಳನ್ನು ಹಾಕುವುದಕ್ಕಿಂತ ಕಡಿಮೆಯಿಲ್ಲದ ಮಾರ್ಗವದು.

೧೮ ನೈತಿಕತೆಯ ಮೂಲ ಮತ್ತು ಅಗತ್ಯಗಳು ಇದರಲ್ಲಿ ಅಡಕವಾಗಿವೆ.

೧೯ ಈ ನೈತಿಕತೆಯು ಪವಿತ್ರವಾಗಿರಲೇಬೇಕು. ಏಕೆಂದರೆ, ಮೂಲತಃ ಅದನ್ನು ಅತ್ಯಂತ ಸಮರ್ಥರ ಅಂದರೆ ಅತ್ಯಂತ ಬಲಶಾಲಿಗಳ ಮೇಲೆ ಹೇರಲಾಗುತ್ತದೆ.

೨೦ ಇದರ ಪರಿಣಾಮಗಳು ಬಹು ಗಂಭೀರವಾಗಿರುತ್ತವೆ.

೨೧ ಮೊದಲನೆಯದಾಗಿ, ನೈತಿಕತೆಯು ಸಾಮಾಜಿಕವಾಗುವಾಗ ಸಮಾಜವಿರೋಧಿಯಾಗಿ ಪರಿಣಮಿಸುತ್ತದೆಯೇ?

೨೨ ಕಳ್ಳರ ನಡುವೆ ನೈತಿಕತೆ ಇಲ್ಲವೆಂದಲ್ಲ. ವ್ಯಾಪಾರಿಗಳ ನಡುವೆಯೂ ನೈತಿಕತೆಯಿದೆ. ಸ್ವಜಾತಿ

ವ್ಯಕ್ತಿಗಳ ನಡುವೆಯೂ ನೈತಿಕತೆ ಇದೆ ಮತ್ತು ಡಕಾಯಿತರ ತಂಡದಲ್ಲೂ ನೈತಿಕತೆಯಿದೆ.

೨೩ ಆದರೆ ಆ ನೈತಿಕತೆಯು ಬೇರ್ಪಡಿಕೆ ಮತ್ತು ಪ್ರತ್ಯೇಕತೆಯ ಲಕ್ಷಣಗಳಿಂದ ಕೂಡಿದೆ. ಅದು ಗುಂಪು ಹಿತಾಸಕ್ತಿಗಳನ್ನು ಕಾಪಾಡುವ ನೈತಿಕತೆ. ಆದ್ದರಿಂದ ಮೇಲೆ ಹೇಳಿದ ನೈತಿಕತೆಯು ಸಮಾಜವಿರೋಧಿಯಾದುದು.

೨೪ ಬೇರ್ಪಡಿಕೆ ಮತ್ತು ಪ್ರತ್ಯೇಕತೆ ಲಕ್ಷಣಗಳುಳ್ಳ ಈ ಬಗೆಯ ನೈತಿಕತೆಯು, ಪರಿಹಾರ ಒದಗಿಸುವಲ್ಲಿ ತನ್ನ ಸಮಾಜವಿರೋಧಿ ಇಂಗಿತವನ್ನು ತೋರಿಸುತ್ತದೆ.

೨೫ ಸಂರಕ್ಷಿಸಿಕೊಳ್ಳಲು ತನ್ನದೇ ಆದ ಹಿತಾಸಕ್ತಿಗಳನ್ನು ಹೊಂದಿರುವುದರಿಂದ ಒಂದು ಗುಂಪು ನೈತಿಕತೆಯನ್ನು ಆಚರಿಸುವಲ್ಲಿ ಕಂಡುಬರುವುದೂ ಇದೇ ಸತ್ಯ.

೨೬ ಸಮಾಜದ ಈ ರೀತಿಯ ಗುಂಪು ವ್ಯವಸ್ಥೆಯು ಬಹಳ ವ್ಯಾಪಕ ಪರಿಣಾಮಗಳುಳ್ಳದ್ದು.

೨೭ ಒಂದು ಸಮಾಜವು ಸಮಾಜವಿರೋಧಿ ಗುಂಪುಗಳನ್ನು ಹೊಂದಿರುವುದು ಮುಂದುವರೆದರೆ, ಅಂತಹ ಸಮಾಜವು ವಿಸಂಘಟಿತವಾಗಿ ಮತ್ತು ಒಡುಕು ಸಮಾಜವಾಗಿ ಉಳಿಯುತ್ತದೆ.

೨೮ ವಿಸಂಘಟಿತ ಹಾಗೂ ಒಡೆದ ಸ್ಥಿತಿಯಲ್ಲಿರುವ ಒಂದು ಸಮಾಜ ಅಪಾಯಕಾರಿ. ಏಕೆಂದರೆ ಅದು ಅನೇಕ ವಿಧವಾದ ಮಾದರಿಗಳನ್ನು ಮತ್ತು ಆದರ್ಶ ಮೌಲ್ಯಗಳನ್ನು ನಿಗದಿಪಡಿಸುತ್ತದೆ.

೨೯ ಸಾಮಾನ್ಯ ಮಾದರಿಗಳು ಮತ್ತು ಸಾಮಾನ್ಯ ಆದರ್ಶ ಮೌಲ್ಯಗಳ ಅಭಾವದಲ್ಲಿ ಅಂತಹ ಸಮಾಜವು ಸಾಮರಸ್ಯಪೂರ್ಣವಾಗಿರಲಾರದು.

೩೦ ಈ ತರಹದ ವಿವಿಧ ಮಾದರಿಗಳೂ ಮತ್ತು ಆದರ್ಶ ಮೌಲ್ಯಗಳೂ ಇದ್ದಾಗ ಮನಸ್ಸಿನ ಸ್ಥಿಮಿತತೆಯನ್ನು ಕಾಯ್ದುಕೊಳ್ಳುವುದು ವ್ಯಕ್ತಿಗೆ ಅಸಾಧ್ಯ.

೩೧ ತನ್ನ ವೈಚಾರಿಕ ಮತ್ತು ಪ್ರಾಮಾಣಿಕ ಹಕ್ಕುಬಾಧ್ಯತೆಗಳು ಏನಿದ್ದರೂ ಒಂದು ಸಮಾಜವು ಮತ್ತೊಂದು ಸಮಾಜದ ಶ್ರೇಷ್ಠತೆಗೆ ಅಧೀನವಾಗಿದ್ದರೆ, ಅದರಿಂದ ಘರ್ಷಣೆಗಳು ಉಂಟಾಗುತ್ತವೆ.

೩೨ ಎಲ್ಲರಿಗೂ ಪವಿತ್ರವಾಗಿರುವ ನೈತಿಕತೆಯ ಸಾಮಾನ್ಯ ನಿಯಮಗಳನ್ನು ಹೊಂದಿರುವುದೇ ಘರ್ಷಣೆಯನ್ನು ತಡೆಯಬಹುದಾದ ಏಕೈಕ ಮಾರ್ಗ.

೩೩ ನೈತಿಕತೆಯನ್ನು ಪವಿತ್ರವನ್ನಾಗಿ ಹಾಗೂ ವಿಶ್ವವ್ಯಾಪಿಯನ್ನಾಗಿ ಮಾಡುವ ಅಗತ್ಯವನ್ನುಳ್ಳ ಮೂರನೆಯ ಅಂಶವೂ ಉಂಟು. ಅದು ವ್ಯಕ್ತಿಯ ಬೆಳವಣಿಗೆಯನ್ನು ಸಂರಕ್ಷಿಸುವುದಕ್ಕಾಗಿ ಬೇಕು.

೩೪ ಅಸ್ತಿತ್ವಕ್ಕಾಗಿ ಹೋರಾಟದಲ್ಲಿ ಅಥವಾ ಗುಂಪು ನಿಯಮಗಳಲ್ಲಿ ವ್ಯಕ್ತಿಗಳ ಹಿತಾಸಕ್ತಿಗಳು ಸುರಕ್ಷಿತವಾಗಿರುವುದಿಲ್ಲ.

೩೫ ಒಬ್ಬ ವ್ಯಕ್ತಿಯು ಮಾನಸಿಕ ಸಾತತ್ಯ ಪಡೆಯುವುದನ್ನು ಗುಂಪು ತಪ್ಪಿಸುತ್ತದೆ. ಸಮಾಜವು ಸಾಮಾನ್ಯ ಆದರ್ಶಗಳು ಮತ್ತು ಮಾದರಿಗಳನ್ನು ಹೊಂದಿದ್ದಾಗ ಮಾತ್ರ, ಅಂತಹ ಮಾನಸಿಕ ಸಾತತ್ಯ ಸಾಧ್ಯ. ವ್ಯಕ್ತಿಯ ವಿಚಾರಗಳು ಅಡ್ಡದಾರಿ ಹಿಡಿಯುತ್ತವೆ ಮತ್ತು ಇದರಿಂದ ನೋಡುವ ಸಮಗ್ರತೆ ಬಲವಂತಕ್ಕೊಳಗಾಗಿ ವಿಕೃತಗೊಂಡಿರುವ ಮನಸ್ಸು ರೂಪಿತವಾಗಿತ್ತವೆ.

೩೬ ಎರಡನೆಯದಾಗಿ, ಹಾಗೆ ರೂಪುಗೊಂಡ ಗುಂಪು ಭೇದಜ್ಞಾನದತ್ತ ನಮ್ಮನ್ನು ಕೊಂಡೊಯ್ಯುತ್ತದೆ ಮತ್ತು ನ್ಯಾಯವು ದೊರಕದಂತೆ ಮಾಡುತ್ತದೆ.

೩೭ ಹಾಗೆ ರೂಪಗೊಂಡ ಗುಂಪು ಸಮೀಕರಣಕ್ಕೆ ಕಾರಣವಾಗುತ್ತದೆ. ಯಜಮಾನರು ಯಜಮಾನರಾಗಿಯೇ ಉಳಿಯುತ್ತಾರೆ. ಗುಲಾಮನಾಗಿ ಹುಟ್ಟಿದವನು ಗುಲಾಮನಾಗಿಯೇ ಉಳಿಯುತ್ತಾನೆ. ಮಾಲೀಕರು

ಮಾಲೀಕರಾಗಿಯೇ, ಕಾರ್ಮಿಕರು ಕಾರ್ಮಿಕರಾಗಿಯೇ ಉಳಿಯುತ್ತಾರೆ. ಸೌಲಭ್ಯಗಳನ್ನು ಪಡೆಯುವಂಥವರು, ಅನುಕೂಲವಂತವರಾಗಿಯೇ ಉಳಿಯುತ್ತಾರೆ ಮತ್ತು ಬೇಸಾಯಗಾರರು ಬೇಸಾಯಗಾರರಾಗಿಯೇ ಉಳಿಯುತ್ತಾರೆ.

೩೮ ಇದರ ಅರ್ಥ, ಕೆಲವರಿಗೆ ಮಾತ್ರ ಸ್ವಾತಂತ್ರ್ಯ; ಆದರೆ ಅದು ಎಲ್ಲರಿಗೂ ಲಭ್ಯವಿರುವುದಿಲ್ಲ. ಅಂದರೆ ಕೆಲವರಿಗೆ ಮಾತ್ರ ಸಮಾನತೆ; ಆದರೆ ಬಹುಜನಕ್ಕೆ ಯಾವುದೂ ಇರುವುದಿಲ್ಲ.

೩೯ ಇದಕ್ಕೆ ಪರಿಹಾರವೇನು? ಭ್ರಾತೃಭಾವವು ವಿಶ್ವವ್ಯಾಪಿಯಾಗಿ ಪರಿಣಾಮಕಾರಿಯಾಗುವಂತೆ ಮಾಡುವುದೇ ಇದಕ್ಕೆ ಏಕೈಕ ಪರಿಹಾರ.

೪೦ ಭಾತೃತ್ವ ಎಂದರೇನು? ಮನುಷ್ಯ ಮನುಷ್ಯರ ನಡುವಣ ಸೋದರತ್ವಕ್ಕೆ ಅದು ಮತ್ತೊಂದು ಹೆಸರು ಅಷ್ಟೆ. ಅದು ನೈತಿಕತೆಗೆ ಇರುವ ಮತ್ತೊಂದು ಹೆಸರೂ ಹೌದು.

೪೧ ಈ ಕಾರಣದಿಂದಾಗಿಯೇ ಬುದ್ಧನು ಧಮ್ಮವೇ ನೈತಿಕತೆ ಎಂದು ಬೋಧಿಸಿದ. ಧಮ್ಮವು ಪವಿತ್ರವಾದುದು. ಅಂತೆಯೇ ನೈತಿಕತೆ ಕೂಡ.

# ಭಾಗ : ೨
# ಪಾರಿಭಾಷಿಕ ಶಬ್ದಗಳು ಮೂಲಭೂತ ವ್ಯತ್ಯಾಸವನ್ನು ಹೇಗೆ ಮರೆಮಾಡುತ್ತವೆ?

## ವಿಭಾಗ ೧
# ಪುನರ್ಜನ್ಮ

## ಪ್ರಾಸ್ತಾವಿಕ

೧ ಸತ್ತಮೇಲೆ ಏನಾಗುತ್ತದೆ ಎಂಬುದು ಆಗಾಗ್ಗೆ ಕೇಳಿಬರುವ ಪ್ರಶ್ನೆ.

೨ ಬುದ್ಧನ ಸಮಕಾಲೀನರು ಎರಡು ಬೇರೆ ಬೇರೆ ಅಭಿಪ್ರಾಯಗಳನ್ನು ಹೊಂದಿದ್ದರು. ಒಂದು ಗುಂಪಿಗೆ ಅನಂತವಾದಿಗಳು ಎಂದೂ ಮತ್ತೊಂದು ಗುಂಪಿಗೆ ವಿನಾಶವಾದಿಗಳು ಎಂದೂ ಕರೆಯಲಾಗುತ್ತಿತ್ತು.

೩ ಆತ್ಮನಿಗೆ ಯಾವುದೇ ಸಾವಿಲ್ಲ, ಆದ್ದರಿಂದ ಜೀವವು ಅನಂತವಾದುದು. ಅದು ಹುಟ್ಟಿನಿಂದ ಹೊಸದಾಗುತ್ತದೆ ಎಂದು ಅನಂತತಾವಾದಿ ಹೇಳಿದ.

೪ ವಿನಾಶವಾದಿಯ ತತ್ತ್ವವನ್ನು ಉಚ್ಛೇದವಾದ ಎಂಬ ಪದದಲ್ಲಿ ಸಂಕ್ಷಿಪ್ತಪಡಿಸಲಾಗಿದೆ. ಅದರರ್ಥ – ಮರಣವು ಪ್ರತಿಯೊಂದು ವಸ್ತುವಿನ ಕೊನೆ. ಮರಣದ ನಂತರ ಏನೂ ಉಳಿಯುವುದಿಲ್ಲ.

೫ ಬುದ್ಧನು ಅನಂತತಾವಾದಿಯಲ್ಲ. ಏಕೆಂದರೆ, ಆತನೇ ವಿರೋಧಿಸಿದ ಪ್ರತ್ಯೇಕ ಹಾಗೂ ಅಮರನಾದ ಆತ್ಮನಲ್ಲಿ ನಂಬಿಕೆಯಿಡುವ ಅಗತ್ಯ ಆ ವಾದದಲ್ಲಿದೆ.

೬ ಬುದ್ಧನು ವಿನಾಶವಾದಿಯಾಗಿದ್ದನೇ? ಆತ್ಮನ ಅನಸ್ತಿತ್ವದಲ್ಲಿದ್ದ ಆತನ ನಂಬಿಕೆಯಿಂದ, ಬುದ್ಧನು ವಿನಾಶವಾದಿ ಎಂದು ನಿರೀಕ್ಷಿಸುವುದು ಸಹಜವಾಗಿತ್ತು.

೭ ಆದರೆ ಅಲಗದ್ದುಪಮ್ಮ – ಸುತ್ತದಲ್ಲಿ ತಾನು ವಾಸ್ತವವಾಗಿ ವಿನಾಶವಾದಿಯಲ್ಲದಿದ್ದರೂ, ವಿನಾಶವಾದಿಯೆಂದು ನನ್ನನ್ನು ಕರೆಯಲಾಗಿದೆ ಎಂದು ಬುದ್ಧನು ಆಕ್ಷೇಪಿಸುತ್ತಾನೆ.

೮ ಅವನು ಹೇಳುವುದು ಇದು, "ನಾನು ಪ್ರತಿಪಾದಿಸುವುದು ಮತ್ತು ಉಪದೇಶಿಸುವುದು ಇದೇ ಆಗಿದ್ದರೂ, ಕೆಲವು ಮಂದಿ ನಿಸ್ಸಂಗಿಗಳೂ ಮತ್ತು ಬ್ರಾಹ್ಮಣರು ಅನ್ಯಾಯವಾಗಿ, ಪ್ರಮಾದದಿಂದ ಮತ್ತು ತಪ್ಪು ಕಲ್ಪನೆಯಿಂದ, ವಾಸ್ತವಾಂಶಗಳನ್ನು ಕಡೆಗಣಿಸಿ, ನಾನು ನಾಶವಾದಿಯೆಂದೂ, ಮಾನವಜೀವಿಗಳ ವಿಸಂಘಟನೆ, ವಿನಾಶ ಮತ್ತು ನಿರ್ಮೂಲನಗಳನ್ನು ಉಪದೇಶಿಸುತ್ತೇನೆಂದು, ನನ್ನ ಮೇಲೆ ಆರೋಪ ಹೊರಿಸುತ್ತಾರೆ."

೯ "ನಾನು ಯಾವುದಾಗಿಲ್ಲವೋ ಮತ್ತು ಯಾವುದನ್ನು ನಾನು ಪ್ರತಿಪಾದಿಸುವುದಿಲ್ಲವೋ ಅದನ್ನು ಅನ್ಯಾಯವಾಗಿ, ಪ್ರಮಾದದಿಂದಾಗಿ ಮತ್ತು ತಪ್ಪು ಅಭಿಪ್ರಾಯದಿಂದ ಈ ಒಳ್ಳೆಯ ಜನ ನನ್ನ ಮೇಲೆ ಆರೋಪಿಸಿ, ನನ್ನನ್ನು ವಿನಾಶವಾದಿಯನ್ನಾಗಿ ಮಾಡುತ್ತಿದ್ದಾರೆ."

೧೦ ಈ ಹೇಳಿಕೆಯು ಸತ್ಯವಾದುದಾದರೆ ಮತ್ತು ಬೌದ್ಧಧರ್ಮದ ಮೇಲೆ ಒಂದು ಬ್ರಾಹ್ಮಣ ಸಿದ್ಧಾಂತವನ್ನು ಹೇರಲೆಂದು ಆಶಿಸಿದವರು ಮಾಡಿದ ಪ್ರಕ್ಷಿಪ್ತ ವಿಚಾರ ಆಗದಿದ್ದರೆ, ಈ ಹೇಳಿಕೆಯು ಒಂದು ಗಂಭೀರವಾದ ಇಕ್ಕಟ್ಟನ್ನು ಸೃಷ್ಟಿಸುತ್ತದೆ.

೧೧ ಬುದ್ಧನು ಆತ್ಮನ ಅಸ್ತಿತ್ವದಲ್ಲಿ ನಂಬಿಕೆಯಿಟ್ಟಿರಲಿಲ್ಲ. ಹೀಗಿದ್ದೂ ಅವನು ವಿನಾಶವಾದಿಯಲ್ಲವೆಂದು ಹೇಳುವುದು ಹೇಗೆ?

೧೨ ಇದರಿಂದ ಬುದ್ಧನು ಪುನರ್ಜನ್ಮದಲ್ಲಿ ನಂಬಿಕೆ ಇಟ್ಟಿದ್ದನೇ ಎಂಬ ಪ್ರಶ್ನೆಹುಟ್ಟುತ್ತದೆ.

## ೨. ಯಾವುದರ ಪುನರ್ಜನ್ಮ

೧. ಬುದ್ಧನು ಪುನರ್ಜನ್ಮದಲ್ಲಿ ನಂಬಿಕೆಯಿಟ್ಟಿದ್ದನೆ?

೨. ಹೌದೆಂಬುದೇ ಅದಕ್ಕೆ ಉತ್ತರ.

೩. ಈ ಪ್ರಶ್ನೆಯನ್ನು ಮತ್ತೆ ಎರಡು ಭಾಗವಾಗಿ ಮಾಡುವುದು ಉತ್ತಮ (೧) ಯಾವುದರ ಪುನರ್ಜನ್ಮ? (೨) ಯಾರ ಪುನರ್ಜನ್ಮ?

೪. ಇವೆರಡರಲ್ಲಿ ಒಂದೊಂದು ಪ್ರಶ್ನೆಯನ್ನೂ ಪ್ರತ್ಯೇಕವಾಗಿ ಪರಿಗಣಿಸುವುದು ಒಳ್ಳೆಯದು.

೫. ಈಗ 'ಯಾವುದರ ಪುನರ್ಜನ್ಮ?' ಎಂಬ ಮೊದಲ ಪ್ರಶ್ನೆಯನ್ನು ಪರಿಗಣಿಸಬಹುದು.

೬. ಈ ಪ್ರಶ್ನೆಯನ್ನು ಬಹುಮಟ್ಟಿಗೆ ಎಲ್ಲಾ ಕಾಲದಲ್ಲೂ ಕಡೆಗಣಿಸಲಾಗಿದೆ. ಏಕೆಂದರೆ ಎರಡು ಪ್ರಶ್ನೆಗಳ ಮಿಶ್ರಣದಿಂದ ಅಷ್ಟೊಂದು ಗೊಂದಲವುಂಟಾಗಿದೆ.

೭ ಬುದ್ಧನ ಪ್ರಕಾರ, ದೇಹವನ್ನು ರೂಪಿಸುವ ಸೃಷ್ಟಿಯ ನಾಲ್ಕು ಮೂಲದ್ರವ್ಯಗಳಿವೆ – (೧) ಪೃಥ್ವಿ, (೨) ಅಪ್, (೩) ತೇಜ ಮತ್ತು (೪) ವಾಯು

೮. ಮಾನವ ದೇಹದ ಅವಸಾನವಾದಾಗ ಈ ಮೂಲದ್ರವ್ಯಗಳಿಗೆ ಏನಾಗುತ್ತದೆ ಎಂಬುದೇ ಇಲ್ಲಿನ ಪ್ರಶ್ನೆ. ಸತ್ತ ಶರೀರದೊಂದಿಗೆ ಅವುಗಳೂ ಕೂಡ ಸಾಯುತ್ತವೆಯೇ? ಅವು ಕೂಡಾ ಸಾಯುತ್ತವೆ ಎಂದು ಕೆಲವರು ಹೇಳುತ್ತಾರೆ.

೯ ಬುದ್ಧನು ಹಾಗಾಗದು ಎಂದ. ಆಕಾಶದಲ್ಲಿ ತೇಲುತ್ತಿರುವ ತಮ್ಮಂತಹ ದ್ರವ್ಯ ಸಮೂಹವನ್ನು ಅವು ಸೇರುತ್ತವೆ.

೧೦ ಈ ರೀತಿ ತೇಲುತ್ತಿರುವ ಸಮೂಹದೊಂದಿಗೆ ಈ ನಾಲ್ಕು ದ್ರವ್ಯಗಳು ಸೇರಿದಾಗ ಒಂದು ಹೊಸ ಜನ್ಮವಾಗುತ್ತದೆ.

೧೧ ಬುದ್ಧನ ಪ್ರಕಾರ ಪುನರ್ಜನ್ಮವೆಂದರೆ ಇದೇ.

೧೨ ದ್ರವ್ಯಗಳು, ಸತ್ತಿರುವ ಅದೇ ದೇಹದಿಂದ ಬಂದವುಗಳಾಗಿರಬೇಕಾದ ಅಗತ್ಯವಿಲ್ಲ. ಅವು ಬೇರೆ ಬೇರೆ ಸತ್ತ ದೇಹಗಳಿಂದ ಬಂದಿರಲೂಬಹುದು.

೧೩ ದೇಹವು ಸಾಯುತ್ತದೆ ಎಂಬುದನ್ನು ಗಮನಿಸಬೇಕು. ಆದರೆ ದ್ರವ್ಯಗಳು ಯಾವಾಗಲೂ ಜೀವಿಸಿರುತ್ತವೆ.

೧೪ ಈ ರೀತಿಯ ಪುನರ್ಜನ್ಮವನ್ನು ಬುದ್ಧನು ನಂಬಿದ್ದ.

೧೫ ಮಹಾಕೋತ್ತಿತನ ಸಂಗಡ ನಡೆದ ಸಂವಾದದಲ್ಲಿ, ಸಾರಿಪುತ್ರನು ಇದರ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಿದ್ದಾನೆ.

೧೬ ಶ್ರಾವಸ್ತಿಯ ಜೇಟ ತೋಪಿನಲ್ಲಿದ್ದ ಅನಾಥಪಿಂಡಿಕನ ಆಶ್ರಮದಲ್ಲಿ ಒಮ್ಮೆ ಭಗವಾನನು ತಂಗಿದ್ದ. ಒಂದು ಸಂಜೆ ತನ್ನ ಧ್ಯಾನದಿಂದ ಮೇಲೆದ್ದು, ಮಹಾಕೋತ್ತಿತನು ಸಾರಿಪುತ್ರನ ಬಳಿಗೆ ಹೋಗಿ

ತನ್ನನ್ನು ಗೊಂದಲಕ್ಕೀಡುಮಾಡಿರುವ ಕೆಲವು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಬೇಕೆಂದು ಕೇಳಿಕೊಂಡ.
೧೭ ಈ ಕೆಳಗಿನದು ಅವುಗಳಲ್ಲೊಂದು.

೧೮ "ಪ್ರಥಮ ಧ್ಯಾನವು ತನ್ನಿಂದ ಎಷ್ಟು ಅಂಶಗಳನ್ನು ಹೊರದೂಡುತ್ತದೆ ಮತ್ತು ಎಷ್ಟು ಅಂಶಗಳನ್ನು ಧಾರಣೆ ಮಾಡುತ್ತದೆ?" ಎಂದು ಮಹಾಕೋತ್ತಿತ ಕೇಳಿದ.

೧೯ "ಪ್ರತಿಯೊಂದರಲ್ಲೂ ಐದ್ಯೆದು. ಹೊರಹೋಗುವ ಅಂಶಗಳೆಂದರೆ ಲಾಲಸೆಗಳು, ಕೇಡೆಣಿಕೆ, ಜಡತೆ, ಚಿಂತೆ ಮತ್ತು ಶಂಕೆ. ಅವಲೋಕನ, ಚಿಂತನೆ, ಉತ್ಸಾಹ, ಸಂತೃಪ್ತಿ ಮತ್ತು ಕೇಂದ್ರಿಕೃತ ಹೃದಯ ಇವುಗಳು ನೆಲೆ ನಿಲ್ಲುತ್ತವೆ." ಎಂದು ಸಾರಿಪುತ್ರನು ಉತ್ತರಿಸಿದ.

೨೦ "ದೃಷ್ಟಿ, ಶ್ರೋತ, ಘ್ರಾಣ, ರಸನ ಮತ್ತು ಸ್ಪರ್ಶನ – ಈ ಪಂಚೇಂದ್ರಿಯಗಳು ಪ್ರತಿಯೊಂದೂ ತನ್ನದೇ ಆದ ನಿರ್ದಿಷ್ಟ ಕ್ಷೇತ್ರ ಮತ್ತು ಕ್ರಿಯಾ ವಲಯಗಳನ್ನು ಹೊಂದಿದ್ದು ಅವು ಪ್ರತ್ಯೇಕ ಹಾಗೂ ಪರಸ್ಪರ ವಿಭಿನ್ನವಾಗಿದೆ. ಈ ಪಂಚೇಂದ್ರಿಯಗಳಿಗೆ ಇರುವ ಪರಮ ಆಧಾರವೇನು? ಅವುಗಳ ಐದು ಕ್ಷೇತ್ರಗಳು ಮತ್ತು ವಲಯಗಳನ್ನು ಯಾರು ಅನುಭವಿಸುತ್ತಾರೆ?" ಎಂದು ಮಹಾಕೋತ್ತಿತ ಹೇಳಿದ.

೨೧ "ಮನಸ್ಸು" ಎಂದು ಸಾರಿಪುತ್ರ ಹೇಳಿದ.

೨೨ "ಇಂದ್ರಿಯಗಳ ಈ ಐದು ಶಕ್ತಿಸಾಮರ್ಥ್ಯಗಳು ಯಾವುದನ್ನು ಅವಲಂಬಿಸಿವೆ?" ಮಹಾಕೋತ್ತಿತ ಕೇಳಿದ.

೨೩ "ಚೈತನ್ಯವನ್ನು ಅವಲಂಬಿಸಿವೆ" ಸಾರಿಪುತ್ರನ ಉತ್ತರ.

೨೪ "ಚೈತನ್ಯ ಯಾವುದನ್ನು ಅವಲಂಬಿಸಿದೆ?" ಮಹಾಕೋತ್ತಿತನ ಪ್ರಶ್ನೆ.

೨೫ "ಉಷ್ಣತೆಯನ್ನು ಅವಲಂಬಿಸಿದೆ" ಸಾರಿಪುತ್ರನ ಉತ್ತರ.

೨೬ "ಉಷ್ಣತೆ ಯಾವುದನ್ನು ಅವಲಂಬಿಸಿದೆ?" ಮಹಾಕೋತ್ತಿತನ ಪ್ರಶ್ನೆ.

೨೭ "ಚೈತನ್ಯವನ್ನು ಅವಲಂಬಿಸಿದೆ" ಸಾರಿಪುತ್ತನ ಉತ್ತರ.

೨೮ "ಚೈತನ್ಯವು ಉಷ್ಣವನ್ನು ಅವಲಂಬಿಸಿದೆ ಎಂದು ನೀನು ಹೇಳುತ್ತಿಯೇ. ಹಾಗೆಯೇ ಉಷ್ಣತೆಯು ಚೈತನ್ಯವನ್ನು ಅವಲಂಬಿಸಿದೆ ಎಂದೂ ಹೇಳುತ್ತೀಯೆ. ಇದಕ್ಕೆ ಯಾವ ನಿಷ್ಕೃಷ್ಟ ಅರ್ಥವನ್ನು ಕೊಡಬೇಕಾಗುತ್ತದೆ?" ಮಹಾಕೋತ್ತಿತನ ಪ್ರಶ್ನೆ.

೨೯ "ನಾನು ನಿನಗೆ ಒಂದು ದೃಷ್ಟಾಂತ ಕೊಡುತ್ತೇನೆ. ಒಂದು ದೀಪದಲ್ಲಿ ಬೆಳಕು ಜ್ವಾಲೆಯನ್ನು ತೋರಿಸುತ್ತದೆ ಮತ್ತು ಜ್ವಾಲೆಯು ಬೆಳಕನ್ನು ತೋರಿಸುತ್ತದೆ. ಅದರಂತೆಯೇ ಚೈತನ್ಯವು ಉಷ್ಣತೆಯನ್ನು ಅವಲಂಬಿಸಿದೆ ಮತ್ತು ಉಷ್ಣತೆಯು ಚೈತನ್ಯವನ್ನು ಅವಲಂಬಿಸಿದೆ" ಸಾರಿಪುತ್ರನ ಉತ್ತರ.

೩೦ "ಒಂದು ನಿರ್ಜೀವಿ ಮರದ ದಿಮ್ಮಿಯಂತೆ, ದೇಹವನ್ನು ಎಸೆದಾಗ ಮತ್ತು ತ್ಯಜಿಸಿದಾಗ ಅದನ್ನು ಎಷ್ಟು ವಸ್ತು ತೊರೆಯಬೇಕು?" ಮಹಾಕೋತ್ತಿತನ ಪ್ರಶ್ನೆ.

೩೧ "ಚೈತನ್ಯ, ಉಷ್ಣತೆ ಮತ್ತು ಪ್ರಜ್ಞೆ." ಸಾರಿಪುತ್ರನ ಉತ್ತರ.

೩೨ "ಒಂದು ನಿರ್ಜೀವಿ ಹೆಣಕ್ಕೂ, ಗ್ರಹಣ ಶಕ್ತಿ ಮತ್ತು ಭಾವನೆಗಳು ಸ್ಥಗಿತಗೊಂಡ ಸಮಾಧಿಸ್ಥನಾದ ಒಬ್ಬ ಭಿಕ್ಷುವಿಗೂ ಇರುವ ವ್ಯತ್ಯಾಸವೇನು?" ಮಹಾಕೋತ್ತಿತನ ಪ್ರಶ್ನೆ.

೩೩ "ಹೆಣದಲ್ಲಿ ದೇಹದ ನಮ್ಮ ಶಕ್ತಿಗಳಷ್ಟೇ ಅಲ್ಲದೇ ಮಾತು ಮತ್ತು ಮನಸ್ಸು ನಿಷ್ಕ್ರಿಯ ಮತ್ತು ಜಡವಾಗುವುದು ಮಾತ್ರವಲ್ಲ. ಚೈತನ್ಯವು ಉಡುಗಿಹೋಗುತ್ತದೆ. ಉಷ್ಣತೆಯು ತಣ್ಣದಾಗುತ್ತದೆ

ಮತ್ತು ಇಂದ್ರಿಯಗಳ ಶಕ್ತಿ ಸಾಮರ್ಥ್ಯಗಳು ಛಿದ್ರವಾಗುತ್ತವೆ. ಆದರೆ ಸಮಾಧಿಸ್ಥನಾದ ಭಿಕ್ಷುವಿನಲ್ಲಿ, ಉಸಿರಾಟ, ಅವಲೋಕನ ಮತ್ತು ಗ್ರಹಣಶಕ್ತಿಗಳು ನಿಷ್ಕ್ರಿಯ ಹಾಗೂ ಜಡವಾಗಿದ್ದರೂ, ಚೈತನ್ಯವು ಉಳಿದಿರುತ್ತದೆ. ಉಷ್ಣತೆಯು ತುಂಬಿರುತ್ತದೆ ಮತ್ತು ಶಕ್ತಿ ಸಾಮರ್ಥ್ಯಗಳು ಸ್ಪಷ್ಟವಾಗಿರುತ್ತವೆ" ಸಾರಿಪುತ್ರನ ಉತ್ತರ.

೩೪ ಸಾವು ಅಥವಾ ವಿನಾಶದ ಬಗ್ಗೆ ಅತ್ಯಂತ ಉತ್ತಮವಾದ ಮತ್ತು ಪರಿಪೂರ್ಣರೂಪದ ಪ್ರತಿಪಾದನೆ ಬಹುಶಃ ಇದೇ.

೩೫ ಈ ಸಂವಾದದಲ್ಲಿ ಒಂದೇ ಒಂದು ಲೋಪವಿದೆ. ಸಾರಿಪುತ್ರನನ್ನು ಮಹಾಕೋತ್ತಿತನು "ಉಷ್ಣತೆ ಎಂದರೇನು?" ಎಂಬ ಒಂದು ಪ್ರಶ್ನೆಯನ್ನು ಕೇಳಲೇಬೇಕಾಗಿತ್ತು.

೩೬ ಸಾರಿಪುತ್ರನು ಯಾವ ಉತ್ತರವನ್ನೂ ಕೊಡುತ್ತಿದ್ದನೆಂಬುದನ್ನು ಊಹಿಸುವುದು ಸುಲಭವಲ್ಲ. ಉಷ್ಣತೆ ಎಂದರೆ, ಶಕ್ತಿ ಎಂಬುದರಲ್ಲಿ ಶಂಕೆಯಿರಲಾರದು.

೩೭ "ದೇಹವು ಸತ್ತಾಗ ಏನು ಆಗುತ್ತದೆ?" ಎಂಬ ಪ್ರಶ್ನೆಗೆ ವಿಸ್ಕೃತವಾದ ನಿಜವಾದ ಉತ್ತರ "ದೇಹವು ಶಕ್ತಿಯು ಉತ್ಪಾದನೆಯನ್ನು ನಿಲ್ಲಿಸುತ್ತದೆ" ಎಂಬುದು

೩೮ ಆದರೆ ಇದು ಉತ್ತರದ ಒಂದಂಶ ಮಾತ್ರ. ದೇಹವನ್ನು ಬಿಟ್ಟ ಶಕ್ತಿಯು ವಿಶ್ವದಲ್ಲಿ ಅಲೆದಾಡುತ್ತಿರುವ ಶಕ್ತಿ ಸಮೂಹವನ್ನು ಸೇರುತ್ತದೆ – ಎಂಬುದು ಸಾವಿನ ಅರ್ಥ.

೩೯ ಆದ್ದರಿಂದ ವಿನಾಶಕ್ಕೆ ಇಮ್ಮಡಿ ಅರ್ಥ ಉಂಟು. ಅದರ ಒಂದು ಅರ್ಥದಲ್ಲಿ ಶಕ್ತಿಯುತ್ಪಾದನೆ ನಿಲ್ಲುತ್ತದೆ ಎಂದಾಗುತ್ತದೆ. ಇನ್ನೊಂದು ಅರ್ಥದಲ್ಲಿ, ಅದು ತೇಲುತ್ತಿರುವ ಸಾಮಾನ್ಯ ಶಕ್ತಿ ಸಮೂಹದೊಂದಿಗೆ ಸೇರುತ್ತದೆ ಎಂದೂ ಆಗುತ್ತದೆ.

೪೦ ಬಹುಶಃ ವಿನಾಶದ ಈ ಇಮ್ಮಡಿ ಅರ್ಥದ ಕಾರಣವಾಗಿ, ತಾನು ಪೂರ್ಣ ರೀತಿಯ ವಿನಾಶವಾದಿಯಲ್ಲ ಎಂದು ಬುದ್ಧನು ಹೇಳಿದ. ಆತ್ಮಕ್ಕೆ ಸಂಬಂಧಿಸಿದಂತೆ ಮಾತ್ರ ಆತ ವಿನಾಶವಾದಿ. ಆದರೆ ವಸ್ತುವಿಗೆ ಸಂಬಂಧಿಸಿದಂತೆ ಆತನು ವಿನಾಶವಾದಿಯಾಗಿರಲಿಲ್ಲ.

೪೧ ಈ ರೀತಿ ಅರ್ಥೈಸಿದರೆ, ತಾನು ವಿನಾಶವಾದಿಯಲ್ಲ ಎಂದು ಬುದ್ಧನು ಏಕೆ ಹೇಳಿದನೆಂದು ತಿಳಿಯುವುದು ಸುಲಭವಾಗುತ್ತದೆ. ಆತನು ಆತ್ಮದ ಪುನರ್ಜನ್ಮದಲ್ಲಿ ಅಲ್ಲ, ಜಡವಸ್ತುವಿನ ಪುನರಸ್ತಿತ್ವದಲ್ಲಿ ನಂಬಿಕೆಯಿಟ್ಟಿದ್ದ.

೪೨ ಈ ರೀತಿ ಅರ್ಥೈಸಿದರೆ, ಬುದ್ಧನ ಅಭಿಪ್ರಾಯವು ವೈಜ್ಞಾನಿಕ ದೃಷ್ಟಿಯೊಂದಿಗೆ ಸರಿಹೊಂದುತ್ತದೆ.

೪೩ ಈ ಅರ್ಥದಲ್ಲಿ ಮಾತ್ರ, ಬುದ್ಧನು ಪುನರ್ಜನ್ಮದಲ್ಲಿ ನಂಬಿಕೆಯಿಟ್ಟಿದ್ದ ಎಂದು ಹೇಳಬಹುದು.

೪೪ ಶಕ್ತಿಯು ಎಂದೂ ನಾಶವಾಗುವುದಿಲ್ಲ. ವಿಜ್ಞಾನವು ಪ್ರತಿಪಾದಿಸುವುದೂ ಇದನ್ನೇ. ಸತ್ತಮೇಲೆ ಏನೂ ಉಳಿಯುವುದಿಲ್ಲ ಎಂಬ ಅರ್ಥದಲ್ಲಿ, ವಿನಾಶವು ವಿಜ್ಞಾನಕ್ಕೆ ತದ್ವಿರುದ್ಧವಾಗಿರುತ್ತದೆ. ಏಕೆಂದರೆ ಅದು ಶಕ್ತಿಯು ತನ್ನ ಪರಿಮಾಣದಲ್ಲಿ ಸ್ಥಿರವಾಗಿಲ್ಲ ಎಂಬ ಅರ್ಥ ಕೊಡುತ್ತದೆ.

೪೫ ಈ ಇಕ್ಕಟ್ಟಿನಿಂದ ಪಾರಾಗಬೇಕಾದರೆ ಇದೇ ಏಕೈಕ ಮಾರ್ಗ.

## ೩. ಯಾರ ಪುನರ್ಜನ್ಮ?

೧ ಯಾರ ಪುನರ್ಜನ್ಮವೆಂಬುದೇ ಅತ್ಯಂತ ಕಠಿಣ ಪ್ರಶ್ನೆ.

೨ ಸತ್ತುಹೋದ ಅದೇ ಮನುಷ್ಯನು ಮರುಹುಟ್ಟು ಪಡೆಯುತ್ತಾನೆಯೇ?

೩ ಈ ಪ್ರಮೇಯದಲ್ಲಿ ಬುದ್ಧನು ನಂಬಿಕೆಯಿಟ್ಟಿದ್ದನೇ? 'ಅತ್ಯಂತ ಅಸಂಭವ' ಎಂಬುದೇ ಇದಕ್ಕೆ ಉತ್ತರ.

೪ ಇದಕ್ಕೆ ಉತ್ತರ, ಸತ್ತುಹೋದ ಮನುಷ್ಯನ, ಅಸ್ತಿತ್ವದ ಮೂಲದ್ರವ್ಯಗಳೇ ಒಂದಾಗಿ ಸೇರಿ ಹೊಸ ದೇಹವೊಂದನ್ನು ರೂಪಿಸುವುದು ಅವಲಂಬಿಸಿದೆ. ಹಾಗಾದಾಗ, ಅದೇ ಇಂದ್ರಿಯದ ಜೀವಿಯ ಪುನರ್ಜನ್ಮದ ಸಾಧ್ಯತೆ ಉಂಟು.

೫ ಅದಕ್ಕೆ ಬದಲಾಗಿ, ಒಂದು ಸಂಮ್ಮಿಶ್ರಣದಿಂದ ಅಥವಾ ಸತ್ತು ಹೋಗಿರುವ ವಿವಿಧ ಮನುಷ್ಯರ ವಿವಿಧ ಮೂಲದ್ರವ್ಯಗಳಿಂದ ಹೊಸ ದೇಹವು ರೂಪುಗೊಂಡರೆ, ಆಗ ಪುನರ್ಜನ್ಮವುಂಟು. ಆದರೆ ಅದು ಅದೇ ಇಂದ್ರಿಯದ ಜೀವಿಯ ಪುನರ್ಜನ್ಮವಲ್ಲ.

೬ ರಾಜಾ ಪ್ರಸೇನಜಿತ್ತನಿಗೆ ಸೋದರಿ ಖೇಮಾ, ಈ ಅಂಶವನ್ನು ಚೆನ್ನಾಗಿ ವಿವರಿಸಿದ್ದಾಳೆ.

೭ ಅನಾಥಪಿಂಡಿಕ ಆರಾಮ್‌ನಲ್ಲಿನ ಜೇತವನದ ಸಮೀಪ ಒಂದು ಸಲ ಮಹಾಮಹಿಮನು ತಂಗಿದ್ದ.

೮ ಆ ಸಂದರ್ಭದಲ್ಲಿ ಕೋಸಲನರ ನಡುವೆ ತನ್ನ ಸುತ್ತಾಟಗಳನ್ನು ಮುಗಿಸಿದ ನಂತರ ಸೋದರಿ ಖೇಮಾ, ಶ್ರಾವಸ್ತಿ ಮತ್ತು ಸಾಕೇತಗಳ ನಡುವಿದ್ದ ತೋರಣವತ್ತುವಿನಲ್ಲಿ ತನ್ನ ಬಿಡದಿ ಮಾಡಿಕೊಂಡಿದ್ದಳು.

೯ ಆಗ ಕೋಸಲದ ರಾಜ ಪ್ರಸೇನಜಿತ್ತನು ಸಾಕೇತದಿಂದ ಶ್ರಾವಸ್ತಿಗೆ ಪ್ರಯಾಣ ಮಾಡುತ್ತಿದ್ದ. ಸಾಕೇತ ಮತ್ತು ಶ್ರಾವಸ್ತಿ ಮಾರ್ಗಮಧ್ಯದಲ್ಲಿದ್ದ ತೋರಣವತ್ತುವಿನಲ್ಲಿ ಆತನು ಒಂದು ರಾತ್ರಿ ತಂಗಿದ.

೧೦ ಕೋಸಲದ ರಾಜಾ ಪ್ರಸೇನಜಿತನು ತನ್ನ ಆಶ್ರಿತನೊಬ್ಬನನ್ನು ಕರೆದು ಹೇಗೆ ಹೇಳಿದ: "ಗುಣವಂತನೇ ಇಲ್ಲಿ ಬಾ. ಈ ದಿನ ನಾನು ಕಾಲಕ್ಷೇಪ ಮಾಡಲು ನೆರವಾಗುವ ಒಬ್ಬ ಸಂನ್ಯಾಸಿ ಅಥವಾ ಬ್ರಾಹ್ಮಣನನ್ನು ಹುಡುಕು."

೧೧ "ಹಾಗೇ ಆಗಲಿ ಪ್ರಭುವೇ!" ಎಂದು ಆತ ಕೋಸಲದ ರಾಜಾ ಪ್ರಸೇನಜಿತನಿಗೆ ಉತ್ತರಿಸಿದ. ಆ ಮನುಷ್ಯನು ತೋರಣವತ್ತುವನ್ನೆಲ್ಲಾ ಸುತ್ತಿದ. ಆದರೆ ರಾಜಾ ಪ್ರಸೇನಜಿತನು ಸಂಗಡ ಕಾಲ ಕಳೆಯಬಹುದಾದಂಥ ಯಾರೇ ಸಂನ್ಯಾಸಿ ಅಥವಾ ಬ್ರಾಹ್ಮಣ ಕಾಣಸಿಗಲಿಲ್ಲ.

೧೨ ಅನಂತರ ಆತನು ತೋರಣವತ್ತುವಿನಲ್ಲಿ ವಸತಿ ಮಾಡಿದ್ದ ಸೋದರಿ ಖೇಮಾಳನ್ನು ಕಂಡ. ಹಾಗೆ ಕಂಡಕೂಡಲೇ, ಆತನು ಕೋಸಲದ ರಾಜಾ ಪ್ರಸೇನಜಿತ್ತನ ಬಳಿಗೆ ವಾಪಸಾಗಿ ಹೀಗೆ ಹೇಳಿದ:

೧೩ "ಮಹಾಪ್ರಭು! ತಾವು ದರ್ಶನ ಪಡೆಯಲು ಯಾರೇ ವಿರಕ್ತ ಅಥವಾ ಬ್ರಾಹ್ಮಣನಿಲ್ಲ. ಆದರೆ ಮಹಾಪ್ರಭು! ಆ ಮಹಾಮಹಿಮನ ಶಿಷ್ಯೆಯಾದ ಖೇಮಾ ಎಂಬ ಹೆಸರಿನ ಸಾಧ್ವಿಯೊಬ್ಬಳಿದ್ದಾಳೆ. ಈ ಮಹಿಳೆಗೆ ಸಂಬಂಧಿಸಿದಂತೆ ಒಂದು ಒಳ್ಳೆಯ ಸುದ್ದಿ ಹೊರದೇಶಗಳಲ್ಲಿಯೂ ಹಬ್ಬಿದೆ. ಆಕೆ ಒಬ್ಬ ಜ್ಞಾನಿ, ಸುಸಂಸ್ಕೃತೆ, ಪರಿಜ್ಞಾನಿವುಳ್ಳವಳು, ವಿಸ್ತೃತ ವಿದ್ಯಾಸಂಪನ್ನೆ, ಪ್ರಚಂಡ ವಾಗ್ಮಿ ಮತ್ತು ಉತ್ತಮ ಜಾಣ್ಮೆಯುಳ್ಳವಳು."

೧೪ ಅದನ್ನು ಕೇಳಿ, ಕೋಸಲದ ರಾಜಾ ಪ್ರಸೇನಜಿತನು ಸಾಧ್ವಿ ಖೇಮಾಳನ್ನು ಭೇಟಿ ಮಾಡಲು ಹೋದ. ಆಕೆಯನ್ನು ಕಂಡು ನಮಸ್ಕರಿಸಿ ಒಂದು ಪಕ್ಕದಲ್ಲಿ ಕುಳಿತ. ಹಾಗೆ ಕುಳಿತ ನಂತರ

ಆಕೆಯನ್ನು ಕುರಿತು ಈ ಪ್ರಶ್ನೆ ಕೇಳಿದ:

೧೫ "ತಾವು ಏನು ಹೇಳುತ್ತೀರಿ? 'ತಥಾಗತನು ಮರಣದ ನಂತರವೂ ಉಳಿದಿರುತ್ತಾನೆಯೇ?"

೧೬ "ಮಹಾರಾಜಾ! ಆ ಮಹಾಮಹಿಮನು ಅದನ್ನೂ ಕೂಡ ಪ್ರಕಟಪಡಿಸಿಲ್ಲ."

೧೭ "ಹಾಗೆಂದರೆ ಹೇಗೆ ಆರ್ಯೆ! ತಥಾಗತನು ಮರಣದ ನಂತರ ಬದುಕಿರುತ್ತಾನೆಯೇ? ಎಂದು ನಾನು ಕೇಳಿದರೆ, 'ಆ ಮಹಾಮಹಿಮನು ಅದನ್ನೂ ಕೂಡ ಪ್ರಕಟಪಡಿಸಿಲ್ಲ' ಎಂದು ನೀವು ಹೇಳುತ್ತಿದ್ದೀರಿ. ಅಲ್ಲದೆ ನಾನು ಬೇರೆ ಪ್ರಶ್ನೆಗಳನ್ನು ಕೇಳಿದಾಗಲೂ, ನೀವು ಅದೇ ಉತ್ತರ ಹೇಳುತ್ತೀರಿ. ನಿಮ್ಮನ್ನು ಪ್ರಾರ್ಥಿಸುತ್ತೇನೆ. ಇದಕ್ಕೆ ಕಾರಣವೇಣು? ಮಹಾಮಹಿಮನು ಈ ವಿಚಾರವನ್ನು ಏಕೆ ಪ್ರಕಟಪಡಿಸಿಲ್ಲ?"

೧೮ "ಮಹಾರಾಜಾ, ಈ ವಿಚಾರದಲ್ಲಿ ನಾನು ನಿನ್ನನ್ನು ಪ್ರಶ್ನಿಸುತ್ತೇನೆ. ನಿನಗೆ ಸರಿಯೆಂದು ತೋಚಿದ್ದನ್ನು ಹೇಳುತ್ತೀಯಾ? ಮಹಾರಾಜಾ, ನೀನು ಏನು ಹೇಳುತ್ತೀಯೇ? ಗಂಗಾನದಿಯಲ್ಲಿರುವ ಮರಳಿನ ಕಣಗಳನ್ನು ಎಣಿಸಿ ಹೇಳಬಲ್ಲ ಯಾರಾದರೂ ಲೆಕ್ಕಿಗನಿದ್ದಾನೆಯೇ ಅಥವಾ ಸಿದ್ಧ ಅಥವಾ ಗಣಕಯಂತ್ರ ನಿನ್ನಲ್ಲಿದೆಯೇ? ಅವನು ಅಥವಾ ಅದು, ಅಲ್ಲಿ ಅಷ್ಟೊಂದು ನೂರು ಮರಳು ಕಣಗಳಿವೆ ಅಥವಾ ಅಷ್ಟೊಂದು ಸಾವಿರ ಅಥವಾ ಅಷ್ಟೊಂದು ನೂರು ಸಾವಿರಗಳಷ್ಟು ಮರಳು ಕಣಗಳಿವೆ; ಎಂದು ಹೇಳಬಲ್ಲನೇ ಅಥವಾ ಹೇಳಬಲ್ಲದೇ?"

೧೯ "ಇಲ್ಲ ಆರ್ಯೆ! ಖಂಡಿತವಾಗಿಯೂ ಇಲ್ಲ."

೨೦ "ಹಾಗಾದರೆ, ಸಾಗರದಲ್ಲಿ ಅಷ್ಟೊಂದು ಅಳತೆಯ ನೀರಿದೆ, ಅಷ್ಟೊಂದು ನೂರು ಅಥವಾ ಸಾವಿರ ಅಥವಾ ಅಷ್ಟೊಂದು ನೂರು ಸಾವಿರ ಅಳತೆಯ ನೀರಿದೆ ಎಂದು ಅಳತೆ ಮಾಡಬಲ್ಲಂತಹ ಯಾರಾದರೂ ಅಳತೆಗಾರನಿದ್ದಾನೆಯೇ ಅಥವಾ ಸಿದ್ಧ ಅಥವಾ ಅಳತೆ ಯಂತ್ರ ನಿನ್ನಲ್ಲಿದೆಯೇ?"

೨೧ "ಇಲ್ಲ, ಖಂಡಿತವಾಗಿಯೂ ಇಲ್ಲ, ಆರ್ಯೆ."

೨೨ "ಅದು ಏಕೆ ಹಾಗೆ?"

೨೩ "ಆರ್ಯೆ, ಸಾಗರವು ಅಗಾಧವಾಗಿದೆ, ಆಳವಾಗಿದೆ, ವಿಸ್ತಾರವಾಗಿದೆ ಮತ್ತು ಅಳತೆಗೆ ಸಿಗಲಾರದಂತಿದೆ."

೨೪ "ಮಹಾರಾಜಾ! ಅದೇ ರೀತಿಯಲ್ಲಿ ತಥಾಗತನ ದೈಹಿಕ ರೂಪದ ಆಧಾರದ ಮೇಲೆ ಅವನ ವ್ಯಾಖ್ಯೆಯನ್ನು ಕೊಡಲು ಯಾರಾದರೂ ಪ್ರಯತ್ನಿಸಿದಲ್ಲಿ, ತಥಾಗತನ ಆ ದೈಹಿಕ ರೂಪ ಇಲ್ಲವಾಗುತ್ತದೆ. ಅದು ಮೂಲದಲ್ಲೇ ಕತ್ತರಿಸಿ ಬೀಳುತ್ತದೆ. ಅದು ಒಂದು ತಾಳೆಮರದ ತುಂಡಿನಂತಾಗುತ್ತದೆ. ಅದು ಇಲ್ಲದ ರೂಪವನ್ನು ತಾಳುತ್ತದೆ. ಮುಂದೆ ಅದು ಮೇಲೇಳದಂತಹ ಸ್ವಭಾವವನ್ನು ತಾಳುತ್ತದೆ. ದೇಹವೆಂದು ಕರೆಯಲ್ಪಡುವ ವಸ್ತುವಿನಿಂದ, ಮಹಾರಾಜಾ! ಬಿಡುಗಡೆ ಪಡೆದುದೇ 'ತಥಾಗತ'. ಆತನು, ಅಗಾಧ ಸಾಗರದಂತೆ, ಆತನು ಗಹನ, ಸೀಮಾತೀತ ಮತ್ತು ಆಳತೆಗೆ ಸಿಗದವನು. 'ತಥಾಗತನು ಮರಣದ ನಂತರ ಇರುತ್ತಾನೆ' ಎಂದು ಹೇಳುವುದಕ್ಕೆ ಇಲ್ಲಿ ಸ್ಥಾನವಿಲ್ಲ. 'ತಥಾಗತನು ಮರಣದ ನಂತರ ಇರುವುದಿಲ್ಲ' ಎಂಬುದಕ್ಕೂ ಇಲ್ಲಿ ಸ್ಥಾನವಿಲ್ಲ.

೨೫ "ಯಾರಾದರೂ ಭಾವನೆಯ ಆಧಾರದ ಮೇಲೆ ತಥಾಗತನ ವ್ಯಾಖ್ಯೆಯನ್ನು ಕೊಡಲು ಯತ್ನಿಸಿದರೆ, ಅಂತಹ ಭಾವನೆಯೇ ಇಲ್ಲವಾಗುತ್ತದೆ. ಅದು ಮೂಲದಲ್ಲಿಯೇ ಕತ್ತರಿಸಿ ಬೀಳುತ್ತದೆ. ಹಾಗಿದ್ದೂ ಭಾವನೆಯು ತಥಾಗತ ಎಂದು ತಿಳಿಯುವುದಕ್ಕಿಂತ ಮಹಾರಾಜಾ! ಆತನು ಮಹಾಸಾಗರದಂತೆ ಗಹನ, ಸೀಮಾತೀತ ಮತ್ತು ಅಳತೆಗೆ ಸಿಗದಾತ, ಎಂಬುದು ಹೆಚ್ಚು ಸಮಂಜಸವೆನಿಸುತ್ತದೆ. 'ತಥಾಗತನು

ಮರಣದ ನಂತರ ಇರುತ್ತಾನೆ ಎಂದೂ... 'ಮರಣದ ನಂತರ ಇರುವುದಿಲ್ಲ' ಎಂದೂ ಹೇಳುವುದು ಇದಕ್ಕೆ ಅನ್ವಯಿಸುವುದಿಲ್ಲ.

೨೬. ಇದೇ ರೀತಿಯಲ್ಲಿಯೇ ಗ್ರಹಣಶಕ್ತಿ ಕಾರ್ಯಚಟುವಟಿಕೆಗಳು ಮತ್ತು ಪ್ರಜ್ಞೆಗಳ ಆಧಾರದ ಮೇಲೆ ತಥಾಗತನ ವ್ಯಾಖ್ಯೆಯನ್ನು ಕೊಡಲು ಯಾರಾದರೂ ಪ್ರಯತ್ನಿಸಿದರೆ ಅದು ನಿರರ್ಥಕ ..... ಪ್ರಜ್ಞೆಯ ಮೂಲಕ ತಿಳಿಯಲು ಪ್ರಯತ್ನಿಸುವುದರಿಂದ ಮುಕ್ತವಾಗಿರುವುದೆ ಆಳವಾದ, ಸೀಮಾತೀತ ಮತ್ತು ಅಳತೆಗೆ ಮೀರಿದ ಸಾಗರದಂತಿರುವವನೇ ತಥಾಗತ. 'ತಥಾಗತನು ಮರಣದ ನಂತರ ಇರುತ್ತಾನೆ ...... ಮರಣದ ನಂತರ ಇರುವುದಿಲ್ಲ' ಎಂಬುದು ಇಲ್ಲಿ ಅನ್ವಯಿಸುವುದಿಲ್ಲ.

೨೭. ಆಗ ಕೋಸಲದ ರಾಜ ಪ್ರಸೇನಜಿತ್ತನು ಸಾಧ್ವಿ ಖೇಮಾಳ ಮಾತುಗಳಿಂದ ಹರ್ಷಗೊಂಡು ಪುಳಕಿತನಾದನು.

೨೮. ಅನಂತರ ಮತ್ತೊಂದು ಸಂದರ್ಭದಲ್ಲಿ ಆ ಮಹಾಮಹಿಮನ ದರ್ಶನ ಪಡೆಯಲು ರಾಜನು ಹೋದ. ಆತನನ್ನು ಸಂಧಿಸಿದಾಗ, ನಮಸ್ಕರಿಸಿ ಒಂದು ಪಕ್ಕದಲ್ಲಿ ಕುಳಿತುಕೊಂಡ. ಅನಂತರ ರಾಜನು ಆ ಮಹಾಮಹಿಮನಿಗೆ ಹೀಗೆ ಹೇಳಿದ.

೨೯. "ಮಹಾಪ್ರಭು! ನನ್ನದೊಂದು ಪ್ರಾರ್ಥನೆ. ಮರಣದ ನಂತರ ತಥಾಗತನು ಇರುತ್ತಾನೆಯೇ?"

೩೦. "ಮಹಾರಾಜ, ಆ ವಿಷಯ ನನ್ನಿಂದ ವ್ಯಕ್ತವಾಗಿಲ್ಲ."

೩೧. "ಹಾಗಾದರೆ, ಮಹಾಪ್ರಭು, ತಥಾಗತನು ಮರಣದ ನಂತರ ಇರುವುದಿಲ್ಲ."

೩೨. "ಮಹಾರಾಜಾ! ಅದೂ ಕೂಡ ನನ್ನಿಂದ ವ್ಯಕ್ತವಾಗಿಲ್ಲ."

೩೩. ಅನಂತರ ರಾಜನು ಇತರ ಪ್ರಶ್ನೆಗಳನ್ನು ಕೇಳಿ ಅದೇ ಉತ್ತರ ಪಡೆದ.

೩೪. "ಪ್ರಭುವೇ! ನಾನು 'ತಥಾಗತನು ಮರಣದ ನಂತರ ಇರುವನೇ?....... ಆತನು ಮರಣದ ನಂತರ ಇರುವುದಿಲ್ಲವೇ? ಎಂದು ಕೇಳಿದರೆ, 'ಅದು ನನ್ನಿಂದ ವ್ಯಕ್ತವಾಗಿಲ್ಲ' ಎಂದು ಉತ್ತರಿಸುತ್ತೀಯೆ. ಪ್ರಭು, ನನ್ನ ಪ್ರಾರ್ಥನೆ ಇದು. 'ಇದಕ್ಕೆ ಕಾರಣವೇನು? ನಿಮಿತ್ತವೇನು? ಈ ವಿಷಯ ಮಹಾಮಹಿಮನಿಂದ ಏಕೆ ವ್ಯಕ್ತವಾಗಿಲ್ಲ?'

೩೫. "ಮಹಾರಾಜಾ! ಈಗ ನಾನು ನಿನ್ನನ್ನು ಪ್ರಶ್ನಿಸುತ್ತೇನೆ. ಯಾವುದು ಸೂಕ್ತವೆಂದು ನಿನಗನಿಸುತ್ತದೆಯೋ, ಆ ಉತ್ತರವನ್ನು ನೀನು ಹೇಳುತ್ತೀಯಾ? ಮಹಾರಾಜಾ, ಈಗ ನೀನು ಏನು ಹೇಳುತ್ತೀಯೇ? ನಿನ್ನ ಬಳಿ ಒಬ್ಬ ಲೆಕ್ಕಿಗನಿದ್ದಾನೆಯೇ..... (ಉಳಿದದ್ದೆಲ್ಲಾ ಹಿಂದೆ ಹೇಳಿದಂತೆಯೇ)

೩೬. "ಆಶ್ಚರ್ಯಕರ! ಪ್ರಭು! ಅದೆಷ್ಟು ವಿಚಿತ್ರ ಪ್ರಭು! ಗುರು ಶಿಷ್ಯರಿಬ್ಬರ ಅರ್ಥವಿವರಣೆಯು ಅಕ್ಷರ–ಅರ್ಥ ಎರಡರಲ್ಲೂ ಅದೆಷ್ಟು ಹೊಂದಿಕೆಯಾಗುತ್ತದೆ! ಸಂಗತವೆನಿಸುತ್ತದೆ! ಸುಸಂಗತವೆನಿಸುತ್ತದೆ! ಅದು ಯಾವ ಮಾತಿನಲ್ಲಿ ಹೇಳುವುದಾದರೂ ಉತ್ಕೃಷ್ಟವಾದುದು!

೩೭ "ಒಂದು ಸಂದರ್ಭದಲ್ಲಿ ಪ್ರಭು! ನಾನು ಸಾಧ್ವಿ ಖೇಮಾಳ ದರ್ಶನಕ್ಕೆ ಹೋದ. ಆಗ ಈ ವಿಷಯದ ಅರ್ಥವನ್ನು ಆಕೆಯಲ್ಲಿ ಹೇಳಿದೆ. ಮಹಾಮಹಿಮನು ಹೇಳಿದ ಪದಗಳಲ್ಲಿಯೇ ಅದೇ ಉಚ್ಚಾರಾಂಶಗಳಲ್ಲಿಯೇ ಆಕೆಯು ಅದರ ಅರ್ಥವನ್ನು ಹೇಳಿದಳು. ಆಶ್ಚರ್ಯಕರ ಪ್ರಭು! ಗುರು ಶಿಷ್ಯರಿಬ್ಬರ ಅರ್ಥವಿವರಣೆಯು ಅಕ್ಷರ ಮತ್ತು ಅರ್ಥಗಳೆರಡರಲ್ಲೂ ಅದೆಷ್ಟು ಹೊಂದಿಕೊಳ್ಳುತ್ತದೆ, ಸಂಗತವಾಗುತ್ತದೆ. ಅದು ಯಾವ ಮಾತಿನಲ್ಲಿ ಹೇಳುವುದಾದರೂ ಉತ್ಕೃಷ್ಟವಾದುದು!

೩೮ "ಆಗಲಿ ಪ್ರಭು! ನಾವು ಈಗ ಹೋಗಬೇಕಾಗಿದೆ. ನಾವು ಅವಿಶ್ರಾಂತ ಜನ. ನಮಗೆ ಮಾಡಲು ಅನೇಕ ಕೆಲಸಗಳಿವೆ."

೩೯ "ಮಹಾರಾಜಾ! ಒಂದು ಕೆಲಸವನ್ನು ಮಾಡಲು ಸಕಾಲವಾಗಿದೆ ಎಂದು ನಿನಗನಿಸಿದಾಗ, ಆ ಕೆಲಸವನ್ನು ಮಾಡು."

೪೦ ಕೋಸಲದ ರಾಜ, ಪ್ರಸೇನಜಿತ್ತನು ಮಹಾಮಹಿಮನ ಆ ಮಾತುಗಳು ಹರ್ಷವನ್ನುಂಟುಮಾಡಿದವು ಮತ್ತು ಅವುಗಳನ್ನು ಆತ ಸಂತೋಷದಿಂದ ಸ್ವೀಕರಿಸಿದ. ಅನಂತರ ಆತನು ತನ್ನ ಆಸನದಿಂದೆದ್ದು ಉಚಿತ ರೀತಿಯಲ್ಲಿ ನಮಸ್ಕರಿಸಿ ಹೊರಟುಹೋದ.

## ವಿಭಾಗ ೨

# ಕರ್ಮ

## ೧. ಬೌದ್ಧರ ಕರ್ಮಸಿದ್ಧಾಂತವು ಬ್ರಾಹ್ಮಣೀಯ ಕರ್ಮಸಿದ್ಧಾಂತದಂತೆಯೇ ಇದೆಯೇ?

೧ ಈ ಕರ್ಮಸಿದ್ಧಾಂತದಷ್ಟು ಗೊಂದಲವನ್ನುಂಟುಮಾಡಿದ ಮತ್ತೊಂದು ಸಿದ್ಧಾಂತ ಬೌದ್ಧ ಧಮ್ಮದಲ್ಲಿಲ್ಲ.

೨ ಬುದ್ಧನ ಧಮ್ಮದಲ್ಲಿ ಅದರ ಸ್ಥಾನಮಾನವೇನು? ಮತ್ತು ಈಗಾಗಲೇ ಹೇಳಿರುವಂತೆ ಅದರ ಮಹತ್ವವೇನು?

೩ ಅಜ್ಞಾನಿ ಹಿಂದೂಗಳು, ತಿಳುವಳಿಕೆಯ ಅಭಾವದಿಂದಾಗಿ ಕೇವಲ ಪದಗಳ ನಡುವಣ ಸಾಮ್ಯದ ಆಧಾರದ ಮೇಲೆ ಬೌದ್ಧ ಧಮ್ಮವು ಬ್ರಾಹ್ಮಣೀಯ ಧರ್ಮ ಅಥವಾ ಹಿಂದೂ ಧರ್ಮದಂತೆಯೇ ಇದೆ ಎಂದು ಹೇಳುತ್ತಾರೆ.

೪ ಬ್ರಾಹ್ಮಣರಲ್ಲಿ ವಿದ್ಯಾವಂತರ ಹಾಗೂ ಸಂಪ್ರದಾಯಬದ್ಧರ ಗುಂಪುಗಳಿಗೆ ಸೇರಿದವರಿಬ್ಬರೂ ಇದೇ ರೀತಿ ಮಾಡುತ್ತಾರೆ. ಅವರು ಅಜ್ಞಾನಿ ಜನಸಮೂಹವನ್ನು ತಪ್ಪುದಾರಿಗೆಳೆಯಲು ಉದ್ದೇಶಪೂರ್ವಕವಾಗಿ ಹಾಗೆ ಮಾಡುತ್ತಾರೆ.

೫ ಬೌದ್ಧ ಕರ್ಮ ನಿಯಮವು ಬ್ರಾಹ್ಮಣ ಕರ್ಮ ನಿಯಮಕ್ಕಿಂತ ಭಿನ್ನವೆಂದು ಅವರಿಗೆ ಚೆನ್ನಾಗಿ ಗೊತ್ತಿದೆ. ಆದರೂ ಬೌದ್ಧ ಧಮ್ಮವು ಬ್ರಾಹ್ಮಣ ಧರ್ಮದಂತೆಯೇ ಇದೆ ಎಂದು ಅವರು ಹೇಳುತ್ತಲೇ ಇರುತ್ತಾರೆ.

೬ ಅವರ ಸುಳ್ಳು ಮತ್ತು ಕಿಡಿಗೇಡಿತನದ ಅಪಪ್ರಚಾರಕ್ಕೆ ಪದಗಳ ನಡುವಣ ಸಾಮ್ಯ ಅನುಕೂಲವಾಗಿದೆ.

೭ ಆದ್ದರಿಂದ ಈ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು ಅತ್ಯಗತ್ಯ.

೮ ಪದಗಳ ನಡುವೆ ಎಷ್ಟೇ ಸಾಮ್ಯವಿದ್ದರೂ ಕೂಡ ಬುದ್ಧನ ಕರ್ಮ ನಿಯಮವು ತನ್ನ ಒಳಅರ್ಥದಲ್ಲಿ ಬ್ರಾಹ್ಮಣ ಕರ್ಮ ನಿಯಮದಂತಿಲ್ಲ.

೯ ಈ ಎರಡೂ ಪ್ರಮೇಯಗಳು ಎಷ್ಟು ವ್ಯಾಪಕವಾಗಿ ಭಿನ್ನವಾಗಿವೆ ಎಂದರೆ, ಅವರೆಡೂ ಪರಸ್ಪರ ವಿರುದ್ಧವಾಗಿವೆಯಲ್ಲವೆ, ಅವೆರಡರ ಫಲಿತಾಂಶ ಒಂದೇ ಆಗಿರಲಾರದು. ಅವೆರಡೂ ಭಿನ್ನವಾಗಿರಲೇಬೇಕು.

೧೦ ಅನುಕೂಲಕ್ಕೋಸ್ಕರ ಹಿಂದೂ ಕರ್ಮ ನಿಮಯದ ತತ್ತ್ವಗಳು ಸರಣಿಕ್ರಮವಾಗಿವೆ ಎಂದು ಹೇಳಬಹುದು.

೧೧ ಹಿಂದೂ ಕರ್ಮ ನಿಯಮಕ್ಕೆ ಆತ್ಮವೇ ಆಧಾರ. ಬೌದ್ಧ ಧರ್ಮದಲ್ಲಿ ಹಾಗಿಲ್ಲ. ವಾಸ್ತವವಾಗಿ ಬೌದ್ಧಧರ್ಮದಲ್ಲಿ ಆತ್ಮಕ್ಕೆ ಸ್ಥಾನವಿಲ್ಲ.

೧೨ ಬ್ರಾಹ್ಮಣೀಯ ಕರ್ಮ ನಿಯಮವು ಆನುವಂಶಿಕ.

೧೩ ಅದು ಜನ್ಮದಿಂದ ಜನ್ಮಕ್ಕೆ ಹೋಗುತ್ತದೆ. ಇದು ಹೀಗಿರಲು ಕಾರಣ ಆತ್ಮನ ಜನ್ಮಾಂತರ.

೧೪ ಬೌದ್ಧ ಕರ್ಮ ಸಿದ್ಧಾಂತದಲ್ಲಿ ಇದು ಸರಿ ಎನಿಸಲು ಸಾಧ್ಯವಿಲ್ಲ. ಏಕೆಂದರೆ ಅದರ ಪ್ರಕಾರ ಆತ್ಮವೇ ಇಲ್ಲ.

೧೫ ಹಿಂದೂ ಕರ್ಮ ಸಿದ್ಧಾಂತವು ದೇಹದಿಂದ ಭಿನ್ನವಾದ ಆತ್ಮನ ಅಸ್ತಿತ್ವವನ್ನು ಅವಲಂಬಿಸಿದೆ. ದೇಹವು ಸತ್ತಾಗ ಆತ್ಮವು ಸಾಯುವುದಿಲ್ಲ. ಆತ್ಮವು ಹಾರಿಹೋಗುತ್ತದೆ.

೧೬ ಬೌದ್ಧ ಕರ್ಮ ಸಿದ್ಧಾಂತದಲ್ಲಿ ಇದು ಸರಿಯೆನಿಸಲು ಸಾಧ್ಯವಿಲ್ಲ.

೧೭ ಹಿಂದೂ ಕರ್ಮ ಸಿದ್ಧಾಂತದ ಪ್ರಕಾರ, ಒಬ್ಬ ಮನುಷ್ಯನು ಒಂದು ಕರ್ಮವನ್ನು ಮಾಡಿದಾಗ ಏನಾಗುತ್ತದೆ ಎಂಬುದು ಇದು: ಆತನ ಕ್ರಿಯೆಯು ಎರಡು ರೀತಿಯ ಪರಿಣಾಮಗಳನ್ನುಂಟು ಮಾಡುತ್ತದೆ. ಅದು ಕೆಲಸ ಮಾಡುವವನ ಮೇಲೆ ಪ್ರಭಾವ ಬೀರುತ್ತದೆ ಮತ್ತು ಎರಡನೆಯದಾಗಿ, ಅದು ಅವನ ಆತ್ಮನ ಮೇಲೆ ತನ್ನ ಪರಿಣಾಮ ಬೀರುತ್ತದೆ.

೧೮ ಆತನು ಮಾಡಿದ ಪ್ರತಿಯೊಂದು ಕ್ರಿಯೆಯೂ, ಆತನ ಆತ್ಮನ ಮೇಲೆ ಪರಿಣಾಮದ ಮುದ್ರೆಯೊತ್ತುತ್ತದೆ.

೧೯ ಒಬ್ಬ ಮನುಷ್ಯನು ಸತ್ತಾಗ ಮತ್ತು ಆತನ ಆತ್ಮವು ದೇಹದಿಂದ ಬಿಡುಗಡೆ ಪಡೆದಾಗ, ಆ ಆತ್ಮನಲ್ಲಿ ಅಂತಹ ಮುದ್ರೆಗಳು ತುಂಬಿರುತ್ತವೆ.

೨೦ ಆತನ ಮುಂದಿನ ಜನ್ಮದ ಹುಟ್ಟು ಮತ್ತು ಸ್ಥಾನಮಾನಗಳನ್ನು ನಿರ್ಧರಿಸುವುದು ಈ ಮುದ್ರೆಗಳೇ.

೨೧ ಬೌದ್ಧರ ನಿರಾತ್ಮವಾದದೊಂದಿಗೆ, ಈ ಹಿಂದೂ ಸಿದ್ಧಾಂತವು ಸರಿಹೊಂದದು.

೨೨ ಈ ಕಾರಣಗಳಿಂದಾಗಿ, ಬೌದ್ಧ ಕರ್ಮ ಸಿದ್ಧಾಂತವು ಹಿಂದೂ ಕರ್ಮ ಸಿದ್ಧಾಂತದಂತೆ ಇರಲಾರದು ಮತ್ತು ಇಲ್ಲವೂ ಇಲ್ಲ.

೨೩ ಬೌದ್ಧ ಕರ್ಮ ಸಿದ್ಧಾಂತವು, ಬ್ರಾಹ್ಮಣೀಯ ಕರ್ಮ ಸಿದ್ಧಾಂತದಂತೆಯೇ ಇದೆ ಎಂದು ಹೇಳುವುದು, ಈ ಕಾರಣಗಳಿಂದಾಗಿ ಅವಿವೇಕವೆನಿಸುತ್ತದೆ.

೨೪ ಈ ಬಗ್ಗೆ ಹೇಳಬಹುದಾದ್ದು ಏನೆಂದರೆ, ಈ ಮೋಸದ ಬಗ್ಗೆ ಎಚ್ಚರ ವಹಿಸಬೇಕಷ್ಟೆ.

## ೨. ಹಿಂದಿನ ಜನ್ಮದ ಕರ್ಮವು ಮುಂದಿನ ಜೀವನದ ಮೇಲೆ ಪ್ರಭಾವ ಬೀರುತ್ತದೆ ಎಂದು ಬುದ್ಧನು ನಂಬಿದ್ದನೆ?

೧ ಕರ್ಮಸಿದ್ಧಾಂತವನ್ನು ಮೊದಲು ಪ್ರತಿಪಾದಿಸಿದವನು ಬುದ್ಧ. 'ಬಿತ್ತಿದ್ದನ್ನು ಬೆಳೆ' ಎಂದು ಹೇಳಿದವರಲ್ಲಿ ಆತ ಮೊದಲಿಗ.

೨ ಅವನು ಕರ್ಮ ಸಿದ್ಧಾಂತದ ಬಗ್ಗೆ ಎಷ್ಟು ಖಂಡಿತವಾದಿಯಾಗಿದ್ದನೆಂದರೆ, ಕರ್ಮ ನಿಯಮವನ್ನು ನಿಷ್ಠೆಯಿಂದ ಪಾಲಿಸದಿದ್ದಲ್ಲಿ, ನೈತಿಕ ವ್ಯವಸ್ಥೆಯಿರಲು ಸಾಧ್ಯವಿಲ್ಲ ಎಂದು ಆತನು ಸಮರ್ಥಿಸಿದ.

೩ ಬುದ್ಧನ ಕರ್ಮ ಸಿದ್ಧಾಂತವು, ಕರ್ಮ ಮತ್ತು ಇಹಜೀವನದ ಮೇಲೆ ಅದರ ಪ್ರಭಾವ ಇವುಗಳಿಗೆ ಮಾತ್ರ ಅನ್ವಯಿಸುತ್ತದೆ.

೪ ಆದಾಗ್ಯೂ ವಿಸ್ತೃತ ಕರ್ಮ ಸಿದ್ಧಾಂತವೊಂದಿದೆ. ಅದರ ಪ್ರಕಾರ ಪೂರ್ವಜನ್ಮ ಅಥವಾ ಜನ್ಮಗಳಲ್ಲಿ ಮಾಡಿದ ಕರ್ಮವೂ ಅದರಲ್ಲಿ ಸೇರುತ್ತದೆ.

೫ ಒಬ್ಬ ಮನುಷ್ಯನು ಒಂದು ಬಡ ಕುಟುಂಬದಲ್ಲಿ ಹುಟ್ಟಿದನೆಂದರೆ, ಅದಕ್ಕೆ ಕಾರಣ ಆತನ ಪೂರ್ವಜನ್ಮದ

ಪಾಪಕರ್ಮ. ಒಬ್ಬ ಮನುಷ್ಯನು ಒಂದು ಶ್ರೀಮಂತ ಕುಟುಂಬದಲ್ಲಿ ಹುಟ್ಟಿದನೆಂದರೆ ಅದಕ್ಕೆ ಕಾರಣ ಆತನ ಪೂರ್ವಜನ್ಮದ ಪುಣ್ಯಕರ್ಮ.

೬ ಒಬ್ಬ ಮನುಷ್ಯನು ಒಂದು ಸಹಜಾತ ನ್ಯೂನತೆಯಿಂದ ಹುಟ್ಟಿದರೆ, ಅದಕ್ಕೆ ಕಾರಣ ಆತನ ಪೂರ್ವಜನ್ಮದ ಪಾಪಕರ್ಮ.

೭ ಇದು ಒಂದು ಅತ್ಯಂತ ಮಾರಕ ಸಿದ್ಧಾಂತ. ಏಕೆಂದರೆ, ಕರ್ಮದ ಈ ಅರ್ಥದಲ್ಲಿ ಪುರುಷ ಪ್ರಯತ್ನಕ್ಕೆ ಯಾವುದೇ ಮಹತ್ವವಿರುವುದಿಲ್ಲ. ಪ್ರತಿಯೊಬ್ಬ ಮನುಷ್ಯನಿಗೂ ಅವನ ಪೂರ್ವಜನ್ಮದ ಕರ್ಮದಿಂದ ಪ್ರತಿಯೊಂದು ಮೊದಲೇ ನಿರ್ಧಾರವಾಗಿರುತ್ತದೆ.

೮ ಈ ವಿಸ್ತೃತ ಸಿದ್ಧಾಂತವನ್ನು ಅನೇಕ ವೇಳೆ ಬುದ್ಧನಿಗೆ ಆರೋಪಿಸಿರುವುದನ್ನು ಕಾಣಬಹುದು.

೯ ಅಂತಹ ಸಿದ್ಧಾಂತದಲ್ಲಿ ಬುದ್ಧನಿಗೆ ನಂಬಿಕೆ ಇತ್ತೇ?

೧೦ ಈ ವಿಸ್ತೃತ ಸಿದ್ಧಾಂತವನ್ನು ಸರಿಯಾಗಿ ಪರಿಶೀಲಿಸಲು, ಅದನ್ನು ಸಾಮಾನ್ಯವಾಗಿ ವಿವರಿಸುವಂತಹ ಭಾಷೆಯನ್ನು ಬದಲಾವಣೆ ಮಾಡುವುದು ಉತ್ತಮ.

೧೧ ಪೂರ್ವಜನ್ಮದ ಕರ್ಮವು ಮುಂದಕ್ಕೆ ರವಾನಿಸಲ್ಪಟ್ಟದ್ದು ಎನ್ನುವುದಕ್ಕಿಂತ ಪೂರ್ವಜನ್ಮದ ಕರ್ಮವು ಆನುವಂಶಿಕವಾಗಿ ಪಡೆದದ್ದು ಎಂದು ಹೇಳಿದರೆ ಹೆಚ್ಚು ಸಮಂಜಸವೆನಿಸುತ್ತದೆ.

೧೨ ಭಾಷೆಯಲ್ಲಿ ಮಾಡಲಾಗುವ ಈ ಬದಲಾವಣೆಯು ಈ ಸಿದ್ಧಾಂತವನ್ನು ಆನುವಂಶೀಕ ನಿಯಮದಿಂದ ಪರಿಶೀಲಿಸಲು ನಮಗೆ ನೆರವಾಗುತ್ತದೆ. ಅಲ್ಲದೇ ಅದು ಆ ಸಿದ್ಧಾಂತದ ನ್ಯಾಯವಾದ ಮತ್ತು ವಾಸ್ತವಿಕವಾದ ಒಳಾರ್ಥಕ್ಕೆ ಯಾವ ಅಪಾಯವನ್ನೂ ತರುವುದಿಲ್ಲ.

೧೩ ಈ ರೀತಿಯ ಪುನರ್ ಹೇಳಿಕೆಯಿಂದಾಗಿ, ಈ ಮೊದಲು ಬೇರೆ ರೀತಿ ಕೇಳಲಾಗದಿದ್ದ ಎರಡು ಪ್ರಶ್ನೆಗಳನ್ನು ಕೇಳಲು ಸಾಧ್ಯವಾಗುತ್ತದೆ. ಅಲ್ಲದೆ ಆ ಪ್ರಶ್ನೆಗಳಿಗೆ ಉತ್ತರಿಸದೆ ಈ ವಿಷಯವನ್ನು ಸ್ಪಷ್ಟಪಡಿಸಲು ಸಾಧ್ಯವಿಲ್ಲ.

೧೪ ಮೊದಲನೇ ಪ್ರಶ್ನೆ – ಪೂರ್ವಜನ್ಮದ ಕರ್ಮವನ್ನು ಹೇಗೆ ಆನುವಂಶೀಕವಾಗಿ ಪಡೆಯಲಾಗುತ್ತದೆ? ಅದರ ಪ್ರಕ್ರಿಯೆಯೇನು?

೧೫ ಎರಡನೇ ಪ್ರಶ್ನೆ – ಆನುವಂಶೀಯ ಅರ್ಥದಲ್ಲಿ ಪೂರ್ವಜನ್ಮದ ಕರ್ಮದ ಸ್ವಾಭಾವವೇನು? ಅದು ಸ್ವಭಾವಜನ್ಯ ಗುಣಲಕ್ಷಣವೋ ಅಥವಾ ಆರ್ಜಿತ ಗುಣಲಕ್ಷಣವೋ?

೧೬ ನಮ್ಮನ್ನು ಹೆತ್ತವರಿಂದ ಆನುವಂಶೀಕವಾಗಿ ನಾವು ಏನನ್ನು ಪಡೆಯುತ್ತೇವೆ?

೧೭ ವಿಜ್ಞಾನದ ದೃಷ್ಟಿಯಿಂದ ನೋಡಿದಾಗ, ಒಂದು ವೀರ್ಯಾಣುವು ಒಂದು ಅಂಡಾಣುವನ್ನು ಸೇರಿದಾಗ ಜೀವ ಪ್ರಾರಂಭವಾಗುತ್ತದೆ. ವೀರ್ಯಾಣುವಿನ ತಲೆ ಅಂಡಾಣುವಿನ ಕೇಂದ್ರದೊಂದಿಗೆ ಸಂಯೋಗವಾದಾಗ ಗರ್ಭಧಾರಣೆಯಾಗುತ್ತದೆ.

೧೮ ಪ್ರತಿಯೊಂದು ಮಾನವ ಜೀವಿಯೂ ಜೈವಿಕ ಪದಾರ್ಥದ ಎರಡು ತುಣುಕುಗಳ ಸಂಯೋಗದಿಂದ ಪ್ರಾರಂಭವಾಗುತ್ತದೆ. ತಾಯಿಯಿಂದ ಒಂದು ಮೊಟ್ಟೆ, ತಂದೆಯಿಂದ ಬಂದ ಏಕೈಕ ವೀರ್ಯಾಣುವಿನಿಂದ ಫಲಿತವಾಗುತ್ತದೆ.

೧೯ ಮಾನವ ಜನ್ಮವು ಜೈವಿಕವಾದುದು ಎಂದು ಆ ವಿಷಯವಾಗಿ ತನ್ನೊಡನೆ ಚರ್ಚಿಸಲು ಬಂದಿದ್ದ ಯಕ್ಕನೊಬ್ಬನಿಗೆ ಬುದ್ಧನು ಹೇಳಿದ.

೨೦ ಆಗ ಆ ಮಹಾಮಹಿಮನು ರಾಜಗೃಹದ ಇಂದ್ರಶಿಖರವೆಂಬ ಬೆಟ್ಟದ ಮೇಲೆ ತಂಗಿದ್ದನು.

೨೧ ಆಗ ಆ ಯಕ್ಕನು ಆ ಮಹಾಮಹಿಮನ ಸಮೀಪಕ್ಕೆ ಬಂದು ಆತನನ್ನು ಹೀಗೆ ಸಂಬೋಧಿಸಿದ. "ಜಡತ್ವ ರೂಪವು ಜೀವಿಸುತ್ತಿರುವ ಆತ್ಮನಲ್ಲ ಎಂದು ಜ್ಞಾನಿಯಾದ ನೀನು ಹೇಳುತ್ತೀಯೇ. ಹಾಗೆಂದ ಮೇಲೆ ಆತ್ಮವು ಈ ದೇಹವನ್ನು ಹೇಗೆ ಹೊಂದಿರುತ್ತದೆ? ನಮ್ಮ ಮೂಳೆಗಳ ಸಮೂಹ ಮತ್ತು ದೇಹದ ಒಳ ಅಂಗಾಂಗಗಳು ಯಾವಾಗ ಆತ್ಮನಲ್ಲಿಗೆ ಬರುತ್ತದೆ? ತಾಯಿಯ ಗರ್ಭಕೋಶದಲ್ಲಿ ಆತ್ಮನು ಹೇಗೆ ತೇಲಾಡುತ್ತಾನೆ?"

೨೨ ಇದಕ್ಕೆ ಆ ಮಹಾಮಹಿಮನು ಈ ರೀತಿ ಉತ್ತರಿಸುತ್ತಾನೆ: "ಮೊದಲು ಕಲಾಲ ಹುಟ್ಟುತ್ತದೆ. ಅನಂತರ ಅಬುದ್ಧಿ ಹುಟ್ಟುತ್ತದೆ. ಅನಂತರ ಪೇಸಿ ಬೆಳೆಯುತ್ತದೆ. ಮುಂದೆ ಅದು ಘನವಾಗಿ ಬೆಳೆಯುತ್ತದೆ. ಅನಂತರ ಘನದಲ್ಲಿ ಕ್ರಮವಾಗಿ ಕೂದಲು ಮತ್ತು ಉಗುರುಗಳು ಕಾಣಿಸಿಕೊಳ್ಳುತ್ತವೆ. ತಾಯಿಯು ಯಾವ ಯಾವ ಆಹಾರ ಪದಾರ್ಥಗಳನ್ನು ಸೇವಿಸುತ್ತಾಳೋ ಅದರಂತೆ ಮಗುವು ತನ್ನ ತಾಯಿಯ ಗರ್ಭದಲ್ಲಿ ಜೀವಿಸಿ ಬೆಳೆಯುತ್ತದೆ."

೨೩ ಆದರೆ ಹಿಂದೂ ಸಿದ್ಧಾಂತವು ಇದಕ್ಕೆ ಭಿನ್ನವಾಗಿದೆ.

೨೪ ದೇಹವು ಜೈವಿಕವೆಂದು ಅದು ಹೇಳುತ್ತದೆ. ಆದರೆ ಆತ್ಮವು ಜೈವಿಕವಲ್ಲ. ಅದು ಹೊರಗಿನಿಂದ ದೇಹದೊಳಗೆ ಸ್ಥಾಪಿಸಲ್ಪಡುತ್ತದೆ. ಆದರೆ ಇದಕ್ಕೆ ಮೂಲವಾವುದೆಂದು ತೋರಿಸಲು ಈ ಸಿದ್ಧಾಂತಕ್ಕೆ ಸಾಧ್ಯವಾಗಿಲ್ಲ.

೨೫ ಪೂರ್ವಜನ್ಮದ ಸ್ವಭಾವಕ್ಕೆ ಸಂಬಂಧಿಸಿದಂತಹ ಮುಂದಿನ ಪ್ರಶ್ನೆಯನ್ನು ಪರಿಗಣಿಸುವಾಗ ಪೂರ್ವಜನ್ಮವು ಸ್ವಭಾವಜನ್ಯ ಗುಣಲಕ್ಷಣವೋ ಅಥವಾ ಆರ್ಜಿತ ಗುಣಲಕ್ಷಣವೋ ಎಂಬುದನ್ನು ನಿರ್ಧರಿಸಬೇಕಾಗುತ್ತದೆ.

೨೬ ಈ ಪ್ರಶ್ನೆಗೆ ಒಂದು ಉತ್ತರ ದೊರಕದಿದ್ದಲ್ಲಿ, ಅನುವಂಶೀಕತೆಯ ವೈಜ್ಞಾನಿಕ ಸಿದ್ಧಾಂತವನ್ನು ಪರಿಶೀಲಿಸಲು ಸಾಧ್ಯವಾಗಲಾರದು.

೨೭ ಆದರೆ ಈ ಪ್ರಶ್ನೆಗೆ ಒಂದಲ್ಲ ಒಂದು ರೀತಿಯ ಉತ್ತರ ದೊರಕುತ್ತದೆ ಎಂದು ಭಾವಿಸಿದರೆ, ಅದು ಒಂದು ಅರ್ಥವತ್ತಾದ ಅಥವಾ ಅರ್ಥಹೀನ ಸಿದ್ಧಾಂತ ಎಂದು ತಿಳಿದುಕೊಳ್ಳಲು ವಿಜ್ಞಾನದಿಂದ ಯಾವುದೇ ನೆರವು ಪಡೆಯುವುದು ಹೇಗೆ ಸಾಧ್ಯವಾಗುತ್ತದೆ?

೨೮ ವಿಜ್ಞಾನದ ಪ್ರಕಾರ ಒಂದು ಮಗುವು ತನ್ನ ತಂದೆತಾಯಂದಿರ ಗುಣಲಕ್ಷಣಗಳನ್ನು ಆನುವಂಶಿಕವಾಗಿ ಪಡೆಯುತ್ತದೆ.

೨೯ ಹಿಂದೂ ಕರ್ಮ ಸಿದ್ಧಾಂತದ ಪ್ರಕಾರ, ಒಂದು ಮಗುವು ತನ್ನ ದೇಹವನ್ನು ಬಿಟ್ಟು ಉಳಿದೇನನ್ನೂ ತನ್ನ ತಂದೆತಾಯಂದಿರಿಂದ ಆನುವಂಶೀಕವಾಗಿ ಪಡೆಯುವುದಿಲ್ಲ. ಹಿಂದೂ ಸಿದ್ಧಾಂತದಲ್ಲಿ ಮಗುವಿನ ಪೂರ್ವಕರ್ಮವು ಮಗುವಿನಿಂದಲೇ, ಮಗುವಿಗಾಗಿಯೇ ಆನುವಂಶಿಕವಾಗಿ ಪಡೆದದ್ದು ಎಂದು ಪ್ರತಿಪಾದಿತವಾಗಿದೆ.

೩೦ ಇಲ್ಲಿ ತಂದೆತಾಯಿಗಳ ಕೊಡುಗೆ ಏನೂ ಇಲ್ಲ. ಮಗುವು ಎಲ್ಲವನ್ನು ತನ್ನೊಡನೆಯೇ ಬರುವಾಗ ತರುತ್ತದೆ.

೩೧ ಅಂತಹ ಸಿದ್ಧಾಂತವು ಅಸಂಬದ್ಧವಲ್ಲದೆ ಮತ್ತೇನೂ ಅಲ್ಲ.

೩೨ ಹಿಂದೆಯೇ ಹೇಳಿದಂತೆ, ಬುದ್ಧನು ಅಂತಹ ಅಸಂಬದ್ಧತೆಯನ್ನು ನಂಬಲಿಲ್ಲ.

೩೩ "ಅದು ಪೂರ್ವಜನ್ಮ ಪಡೆಯದಿದ್ದರೆ ಸರಿ; ಆದರೆ, ಪೂರ್ವಜನ್ಮ ಪಡೆದರೆ ತಪ್ಪು."

೩೪ "ನನಗೊಂದು ದೃಷ್ಟಾಂತವನ್ನು ಕೊಡಿ".

೩೫ "ಒಂದು ಪಕ್ಷ, ಮಹಾರಾಜಾ! ಒಬ್ಬ ಮನುಷ್ಯನ ಮಾವಿನ ಹಣ್ಣುಗಳನ್ನು ಮತ್ತೊಬ್ಬನು ಕದ್ದರೆ, ಆ ಕಳ್ಳನು ಶಿಕ್ಷಾರ್ಹನೆ?"

೩೬ "ಹೌದು."

೩೭ "ಆದರೆ ಭೂಮಿಯ ಮೇಲೆ ಮತ್ತೊಂದು ರಾಶಿ ಮಾವಿನ ಹಣ್ಣುಗಳನ್ನು ಅವನು ಕದ್ದಿರಲಾರ. ಹಾಗಿದ್ದಲ್ಲಿ, ಅವನು ಹೇಗೆ ಶಿಕ್ಷಾರ್ಹ?"

೩೮ "ಏಕೆಂದರೆ, ಆತನು ಕದ್ದ ಮಾವಿನ ಹಣ್ಣುಗಳು ನೆಟ್ಟು ಬೆಳಿಸಿದ ಮಾವಿನ ಮರದ ಫಲಗಳು."

೩೯ "ಅದೇ ರೀತಿ, ಮಹಾರಾಜಾ! ಈ ನಾಮ ಮತ್ತು ರೂಪವು, ಪಾಪ ಅಥವಾ ಪುಣ್ಯ ಕಾರ್ಯಗಳನ್ನು ಮಾಡುತ್ತವೆ ಮತ್ತು ಅದರಿಂದ ಮತ್ತೊಂದು ನಾಮ ಮತ್ತು ರೂಪವು ಮರುಹುಟ್ಟುತ್ತದೆ. ಅದು ತನ್ನ ಪಾಪಕರ್ಮಗಳಿಂದ ವಿಮುಕ್ತವಾಗುವುದಿಲ್ಲವೇ?"

೪೦ "ಬಹಳ ಚೆನ್ನಾಗಿದೆ, ನಾಗಸೇನಾ!"

೪೧ ರಾಜನು ಕೇಳಿದ, "ನಾಗಸೇನ, ಒಂದು ನಾಮ ಮತ್ತು ರೂಪವು ಕರ್ಮಗಳನ್ನು ಮಾಡಿದಾಗ, ಆ ಕರ್ಮಗಳು ಏನಾಗುತ್ತವೆ?"

೪೨ "ರಾಜಾ, ಬೆಂಬಿಡದ ನೆರಳಿನಂತೆ, ಆ ಕರ್ಮಗಳು ಅದನ್ನು ಹಿಂಬಾಲಿಸುತ್ತವೆ."

೪೩ "ಆ ಕರ್ಮಗಳು ಇಲ್ಲಿವೆ ಅಥವಾ ಅಲ್ಲಿವೆ ಎಂದು ಹೇಳುವುದರ ಮೂಲಕ ಆ ಕರ್ಮಗಳನ್ನು ತೋರಿಸಲು ಯಾರಿಗಾದರೂ ಸಾಧ್ಯವಾಗುತ್ತದೆಯೇ?"

೪೪ "ಇಲ್ಲ."

೪೫ "ನನಗೊಂದು ದೃಷ್ಟಾಂತ ಕೊಡಿ."

೪೬ "ರಾಜಾ, ನೀನು ಈಗ ಏನು ಯೋಚಿಸುತ್ತೀಯೆ? ಮರವು ಇನ್ನೂ ಬಿಡದಿರುವ ಹಣ್ಣುಗಳನ್ನು ಯಾರಾದರೂ ತೋರಿಸಬಲ್ಲಿರಾ?"

೪೭ "ಅವು ಇಲ್ಲಿವೆಯೆ ಅಥವಾ ಅಲ್ಲಿವೆಯೇ?'

೪೮ "ನಿಜವಾಗಿಯೂ ಸಾಧ್ಯವಿಲ್ಲ, ಪ್ರಭು."

೪೯ "ಮಹಾರಾಜಾ, ಅದೇ ರೀತಿಯಲ್ಲಿ, ಜೀವನದ ನಿರಂತರತೆಯು ಕಡಿದುಹೋಗದಿರುವವರೆಗೆ, ಮಾಡಿರುವ ಕರ್ಮಗಳ ಬಗ್ಗೆ ತೋರಿಸಿಕೊಡುವುದು ಅಸಾಧ್ಯ."

೫೦ "ನಾಗಸೇನ, ಬಹಳ ಚೆನ್ನಾಗಿದೆ."

## ೩. ಪೂರ್ವಕರ್ಮವು ಮುಂದಿನ ಜೀವನದ ಮೇಲೆ ಪರಿಣಾಮ ಬೀರುತ್ತದೆ ಎಂದು ಬುದ್ಧನು ನಂಬಿದ್ದನೆ? – ಸಮಾಪ್ತಿ.

೧. ಈ ರೀತಿ ಬುದ್ಧನ ಪೂರ್ವಕರ್ಮಸಿದ್ಧಾಂತವು ವಿಜ್ಞಾನಕ್ಕೆ ಅನುಗುಣವಾಗಿದೆ.

೨. ಪೂರ್ವಕರ್ಮವು ಆನುವಂಶಿಕವಾಗಿ ಪಡೆದದ್ದು ಎಂಬುದನ್ನು ಬುದ್ಧ ನಂಬಲಿಲ್ಲ.

೩ ಹುಟ್ಟು ಆನುವಂಶೀಕವಾದುದು ಮತ್ತು ಮಗುವಿಗೆ ಬರಬಹುದಾದ ಯಾವುದೇ ಆನುವಂಶೀಯ ಗುಣವೂ ತಂದೆತಾಯಿಗಳ ಮೂಲಕ ಬರುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿದ್ದ ಆತ, ಇದನ್ನು ಹೇಗೆ ನಂಬಬಲ್ಲ.

೪ ತರ್ಕವನ್ನು ಬಿಟ್ಟು ನೋಡಿದಾಗ, ಈ ಅಂಶದ ಬಗ್ಗೆ ಕುಲ–ದುಃಖ–ಖಾಂಡ–ಸುತ್ತದಲ್ಲಿ ಹೆಚ್ಚು ನೇರ ಸಾಕ್ಷ್ಯ ಸಿಗುತ್ತದೆ. ಬುದ್ಧ ಮತ್ತು ಜೈನರ ನಡುವೆ ನಡೆದ ಒಂದು ಸಂವಾದ ಈ ಸುತ್ತದಲ್ಲಿದೆ.

೫ ಈ ಸಂವಾದದಲ್ಲಿ ಬುದ್ಧನು ಹೀಗೆ ಹೇಳಿದ್ದಾನೆ, "ನಿರ್ಗ್ರಂಥರೇ, ನೀವು ಹಿಂದೆ ಪಾಪವನ್ನು ಮಾಡಿದ್ದೀರಿ. ಅದನ್ನು ಈಗ ಕಠಿಣ ತಪಸ್ಸಿನಿಂದ ನಾಶಮಾಡಿ. ಇನ್ನು ಮುಂದೆ, ನೀವು ಮಾಡುವ ಪ್ರತಿಯೊಂದು ಮನ, ವಾಚ ಮತ್ತು ಕಾಯಗಳ ನಿಯಂತ್ರಣವೂ ನಿಮ್ಮ ಹಿಂದಿನ ಕೆಟ್ಟ ಕೃತ್ಯಗಳನ್ನು ಇನ್ನು ಮುಂದೆ ನಾಶಮಾಡುತ್ತದೆ. ಆದ್ದರಿಂದ ತಪಸ್ಸಿನ ಮೂಲಕ, ಎಲ್ಲಾ ಹಿಂದಿನ ಪಾಪಕೃತ್ಯಗಳನ್ನು ಹೊರದೂಡುವುದರ ಮೂಲಕ ಮತ್ತು ಹೊಸದಾಗಿ ಕೆಟ್ಟ ಕೃತ್ಯಗಳನ್ನು ಮಾಡದಿರುವುದರಿಂದ, ಭವಿಷ್ಯವು ಸ್ವಚ್ಛವಾಗುತ್ತದೆ. ಭವಿಷ್ಯವು ಸ್ವಚ್ಛವಾಗುವುದರಿಂದ ಭೂತವು ತೊಳೆದು ಹೋಗುತ್ತದೆ. ಭೂತವು ತೊಳೆದು ಹೋಗುವುದರಿಂದ ಇನ್ನು ಮುಂದೆ ದುಃಖವಿರುವುದಿಲ್ಲ ಮತ್ತು ಈಗ ಮತ್ತೇನೂ ನೋವಿನ ಭಾವನೆಗಳಿಲ್ಲದ್ದರಿಂದ ಎಲ್ಲಾ ದುಃಖವೂ ದೂರವಾಗುತ್ತದೆ. ಈ ಉಪದೇಶವು ಶ್ಲಾಘನೀಯವಾಗಿದೆ ಮತ್ತು ಅದು ಸಮ್ಮತವೆನಿಸುತ್ತದೆ ಮತ್ತು ಇದರಿಂದ ನಾವು ಸಂತೋಷಪಡುತ್ತೇವೆ."

೬ ಅನಂತರ ಆ ನಿರ್ಗ್ರಂಥರಿಗೆ ನಾನು ಹೇಳಿದೆ – "ಪೂಜನೀಯರೇ ಈ ಮೊದಲು ನೀವು ಬದುಕಿದ್ದಿರೆ ಅಥವಾ ಬದುಕಿರಲಿಲ್ಲವೆ? ಎಂಬುದು ನಿಮಗೆ ಗೊತ್ತೆ?"

೭ "ಇಲ್ಲ ಪ್ರಭು."

೮ "ಹಿಂದಿನ ಒಂದು ಜನ್ಮದಲ್ಲಿ ನಿಮ್ಮ ಕೆಟ್ಟ ಕೃತ್ಯಗಳ ಬಗ್ಗೆ ನಿಮಗೆ ಪಾಪ ಪ್ರಜ್ಞೆ ಇತ್ತೇ? ಅಥವಾ ಇರಲಿಲ್ಲವೇ? ಎಂಬುದು ನಿಮಗೆ ಗೊತ್ತೇ?"

೯ "ಇಲ್ಲ."

೧೦ "ಆ ಒಂದು ಹಿಂದಿನ ಜನ್ಮದಲ್ಲಿ, ಈ ಅಥವಾ ಆ ವಿಶಿಷ್ಟ ಕೆಟ್ಟ ಕೃತ್ಯದ ಬಗ್ಗೆ ನಿಮ್ಮಲ್ಲಿ ಪಾಪಪ್ರಜ್ಞೆ ಇತ್ತೊ ಇಲ್ಲವೊ ಎಂಬುದು ನಿಮಗೆ ಗೊತ್ತೆ?"

೧೧ "ಇಲ್ಲ."

೧೨ ಎರಡನೆಯದಾಗಿ, ಮನುಷ್ಯನ ಸ್ಥಾನಮಾನವು ಪ್ರತ್ಯಾವರಣದಿಂದಾದಷ್ಟು ಅನುವಂಶೀಯತೆಯಿಂದ ನಿರ್ಧಾರವಾಗುವುದಿಲ್ಲ ಎಂದು ಬುದ್ಧನು ಪ್ರತಿಪಾದಿಸುತ್ತಾನೆ.

೧೩ ದೇವದಹ–ಸುತ್ತದಲ್ಲಿ ಬುದ್ಧನು ಹೇಳಿರುವುದು ಹೀಗೆ: "ಕೆಲವು ಮಂದಿ ಸಂನ್ಯಾಸಿಗಳು ಮತ್ತು ಬ್ರಾಹ್ಮಣರು – ವ್ಯಕ್ತಿಯ ಅನುಭವಗಳು ಯಾವುದೇ ಆಗಿರಲಿ, ಅವು ಸಂತೋಷಕರವಾಗಿರಲಿ, ಅಸಂತೋಷಕರವಾಗಿರಲಿ ಅಥವಾ ಅವೆರಡು ರೀತಿಯವೂ ಆಗಿರಲಿ. ಎಲ್ಲವೂ ಹಿಂದಿನ ಕೃತ್ಯಗಳಿಂದ ಉಂಟಾಗುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿರುವುದು ಮಾತ್ರವಲ್ಲದೆ, ಅದನ್ನು ಸಮರ್ಥಿಸುವುದೂ ಉಂಟು. ಆದ್ದರಿಂದ, ಹಿಂದಿನ ಕೆಟ್ಟ ಕೃತ್ಯಗಳನ್ನು ಮೂಲೋತ್ಪಾಟನೆ ಮಾಡಿ, ತೊಳೆದು ಹಾಕುವುದರಿಂದ ಮತ್ತು ಹೊಸ ದುಷ್ಕೃತ್ಯಗಳನ್ನು ಮಾಡದಿರುವುದರಿಂದ, ಭವಿಷ್ಯಕ್ಕೆ ದುಃಖವು ಇಲ್ಲವಾಗುತ್ತದೆ. ದುಃಖವಿಲ್ಲದಾದಾಗ ಭಾವನೆಗಳೂ ಇಲ್ಲವಾಗುತ್ತವೆ ಮತ್ತು ಭಾವನೆಗಳು ಇಲ್ಲವಾದಾಗ, ಎಲ್ಲಾ ದುಃಖಗಳೂ ನಶಿಸಿ ಹೊರಟುಹೋಗುತ್ತವೆ ಎಂಬುದು ನಿಗ್ಗಂಥರ ಪ್ರತಿಪಾದನೆ.

೧೪ ಅವರವರ ಹುಟ್ಟಿನ ಪರಿಸರದ ಕಾರಣದಿಂದ, ಜೀವಿಗಳು ಸುಖ ಮತ್ತು ದುಃಖಗಳನ್ನು ಅನುಭವಿಸಿದರೆ, ನಿಗ್ಗಂಥರೂ ದೂಷಣೆಗೆ ಪಾತ್ರರಾಗುತ್ತಾರೆ. ಅಷ್ಟು ಮಾತ್ರವಲ್ಲ ಪರಿಸರವು ಕಾರಣವಾಗದಿದ್ದರೂ ಅವರು ದೂಷಣೆಗೆ ಪಾತ್ರರಾಗುತ್ತಾರೆ.

೧೫ ಬುದ್ಧನ ಈ ಹೇಳಿಕೆಗಳು ಅತ್ಯಂತ ಸುಸಂಗತವಾದವು. ಬುದ್ಧನು ಹಿಂದಿನ ಕರ್ಮವನ್ನು ನಂಬಿದ್ದರೆ ಅದರ ಬಗ್ಗೆ ಆತನು ಏಕೆ ಈ ಶಂಕೆಯನ್ನು ವ್ಯಕ್ತಪಡಿಸುತ್ತಿದ್ದ? ಇಹಜೀವನದ ಸುಖದುಃಖಗಳು ಹಿಂದಿನ ಜನ್ಮದ ಕರ್ಮದ ಪರಿಣಾಮಗಳು ಎಂಬು ಬುದ್ಧನು ನಂಬಿದ್ದರೆ, ಇಹಜೀವನದ ಸುಖ–ದುಃಖಗಳು ಪರಿಸರದ ಪ್ರಭಾವದಿಂದುಂಟಾದವುಗಳು ಎಂದು ಬುದ್ಧ ಹೇಗೆ ಪ್ರತಿಪಾದಿಸುತ್ತಿದ್ದ?

೧೬ ಪೂರ್ವಕರ್ಮದ ಸಿದ್ಧಾಂತವು ಸ್ಪಷ್ಟವಾಗಿ ಬ್ರಾಹ್ಮಣೀಯ ಸಿದ್ಧಾಂತ. ಪೂರ್ವಕರ್ಮ ಇಹಜೀವನದ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಬ್ರಾಹ್ಮಣೀಯ ಆತ್ಮಸಿದ್ಧಾಂತದೊಂದಿಗೆ, ಆತ್ಮನ ಮೇಲೆ ಕರ್ಮದ ಪ್ರಭಾವವಾಗುತ್ತದೆ ಎಂಬುದಕ್ಕೆ ಅನುಗುಣವಾಗಿದೆ. ಅದು ಬೌದ್ಧರ ನಿರಾತ್ಮವಾದದೊಂದಿಗೆ ಸ್ಪಷ್ಟವಾಗಿ ಅಸಮಂಜಸವಾಗಿದೆ.

೧೭ ಬೌದ್ಧ ಮತವು, ಹಿಂದೂ ಮತದ ಗುಣಲಕ್ಷಣಗಳನ್ನೇ ಹೊಂದಿದೆ ಎಂದು ತೋರಿಸುವ ಇಚ್ಛೆಯಿಂದಿದ್ದ ಯಾರೋ, ಅಥವಾ ಬೌದ್ಧ ಸಿದ್ಧಾಂತವು ಯಾವುದು ಎಂದು ತಿಳಿಯದಿದ್ದ ಯಾರೋ, ಇದನ್ನು ಸಾಕ್ಷಾತ್ತಾಗಿ ಬೌದ್ಧಮತದಲ್ಲಿ ಸೇರಿಸಿದ್ದಾರೆ.

೧೮ ಬುದ್ಧನು ಅಂತಹ ಸಿದ್ಧಾಂತವನ್ನು ಉಪದೇಶಿಸಿರಲಾರ ಎಂದು ನಂಬುವುದಕ್ಕೆ ಇದೂ ಒಂದು ಕಾರಣ.

೧೯ ಬುದ್ಧನು ಅಂತಹ ಸಿದ್ಧಾಂತವನ್ನು ಉಪದೇಶಿಸಿರಲಾರ ಎಂದು ಖಂಡಿತವಾಗಿ ತಿಳಿಯಲು ಮತ್ತೊಂದು ಹೆಚ್ಚು ಸಾಮಾನ್ಯವಾದ ಕಾರಣವಿದೆ.

೨೦ ಪೂರ್ವಕರ್ಮವು ಭವಿಷ್ಯತ್ತಿನ ಜೀವನದ ನಿಯಂತ್ರಕ ಎಂಬ ಹಿಂದೂ ಸಿದ್ಧಾಂತದ ಆಧಾರ ಒಂದು ದುಷ್ಟ ಸಿದ್ಧಾಂತ. ಅಂತಹ ಸಿದ್ಧಾಂತವನ್ನು ಸೃಷ್ಟಿಸುವ ಉದ್ದೇಶವಾದರೂ ಏನಿದ್ದೀತು?

೨೧ ಇದಕ್ಕೆ ಬಡಜನರು ಮತ್ತು ದಲಿತರ ಸ್ಥಿತಿಗಳ ಬಗ್ಗೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ರಾಜ್ಯ ಅಥವಾ ಸಮಾಜಕ್ಕೆ ನೆರವಾಗುವ ಏಕೈಕ ಉದ್ದೇಶವೆಂಬುದನ್ನು ಯಾರಾದರೂ ಊಹಿಸಬಹುದು.

೨೨ ಅಲ್ಲದಿದ್ದಲ್ಲಿ ಅಂತಹ ಅಮಾನವೀಯ, ಅರ್ಥಹೀನ ಸಿದ್ಧಾಂತವು ಎಂದೂ ಸೃಷ್ಟಿಯಾಗುತ್ತಿರಲಿಲ್ಲ.

೨೩ ಮಹಾ ಕರುಣಾಳುವೆಂದು ಪ್ರಸಿದ್ಧನಾಗಿದ್ದ ಬುದ್ಧನಂಥವನು ಅಂತಹ ಸಿದ್ಧಾಂತವನ್ನು ಸಮರ್ಥಿಸಿದ್ದನೆಂದು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ.

## ವಿಭಾಗ ೩

# ಅಹಿಂಸೆ

### ೧ ಅದರ ಅರ್ಥವಿವರಣೆ ನೀಡಿ: ಅದನ್ನು ಅನುಸರಿಸಿದ ವಿವಿಧ ರೀತಿಗಳು

೧ ಬುದ್ಧನ ಉಪದೇಶಗಳಲ್ಲಿ, ಅಹಿಂಸೆ ಅಥವಾ ಕೊಲ್ಲದಿರುವುದು, ಒಂದು ಬಹಳ ಪ್ರಮುಖ ಭಾಗ.

೨ ಅದು ಕರುಣೆ ಹಾಗೂ ಮೈತ್ರಿಯೊಂದಿಗೆ ನಿಕಟ ಸಂಬಂಧ ಹೊಂದಿದೆ.

೩ ಆತನ ಅಹಿಂಸೆಯು ಅದರ ಹೊಣೆಗಾರಿಕೆಯಲ್ಲಿ ಖಂಡಿತವೇ ಅಥವಾ ಕೇವಲ ಸಾಪೇಕ್ಷವೋ ಎಂಬ ಪ್ರಶ್ನೆಯನ್ನು ಕೇಳಲಾಗಿದೆ. ಅದು ಕೇವಲ ಒಂದು ತತ್ವವೇ? ಅಥವಾ ಅದು ಒಂದು ನಿಯಮವೇ?

೪ ಬುದ್ಧನ ಉಪದೇಶಗಳನ್ನು ಸ್ವೀಕರಿಸುವಂತಹ ಜನರು, ಅಹಿಂಸೆಯು ಒಂದು ನಿರಪೇಕ್ಷ ಕಟ್ಟುಪಾಡು ಎಂಬ ಭಾವವನ್ನು ಸ್ವೀಕರಿಸಲು ಕಷ್ಟಪಡುತ್ತಾರೆ. ಅಹಿಂಸೆಯ ಅಂತಹ ಅರ್ಥವಿವರಣೆಯು, ಕೆಟ್ಟದ್ದಕ್ಕೆ ಒಳ್ಳೆಯದನ್ನು ಪಾಪಕ್ಕೆ ಪುಣ್ಯವನ್ನು ಬಲಿಕೊಡುವುದನ್ನು ಒಳಗೊಂಡಿರುತ್ತದೆ ಎಂದು ಅವರು ಹೇಳುತ್ತಾರೆ.

೫ ಈ ಪ್ರಶ್ನೆಯನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ಅಹಿಂಸೆಯ ಈ ವಿಷಯಕ್ಕಿಂತ ಹೆಚ್ಚು ಗೊಂದಲಮಯವಾದ ಮತ್ತೊಂದು ವಿಷಯವಲ್ಲ.

೬ ಬೌದ್ಧ ಧರ್ಮ ಪ್ರಚಲಿತವಿರುವ ದೇಶಗಳ ಜನರು ಅಹಿಂಸೆಯನ್ನು ಹೇಗೆ ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತಂದರು?

೭ ನಾವು ಗಮನಕೊಡಲೇಬೇಕಾದ ಪ್ರಮುಖ ಪ್ರಶ್ನೆ ಇದು.

೮ ಹೊರದೇಶದ ಧಾಳಿಕಾರರ ವಿರುದ್ಧ ಸಿಲೋನಿನ ಸಂನ್ಯಾಸಿಗಳು ಹೋರಾಡಿದರು ಮತ್ತು ಅವರೊಡನೆ ಹೋರಾಡಲು ಸಿಲೋನಿನ ಜನರನ್ನು ಪ್ರೋತ್ಸಾಹಿಸಿದರು.

೯ ಮತ್ತೊಂದು ಕಡೆ, ಬರ್ಮಾದ ಸಂನ್ಯಾಸಿಗಳು ಹೊರದೇಶದ ಧಾಳಿಕೋರರ ವಿರುದ್ಧ ಹೋರಾಡಲು ನಿರಾಕರಿಸಿದ್ದು ಮಾತ್ರವಲ್ಲದೆ, ಅವರೊಡನೆ ಹೋರಾಡಬಾರದೆಂದು ಬರ್ಮಾದ ಜನರನ್ನು ಕೇಳಿಕೊಂಡರು.

೧೦ ಬರ್ಮಾದ ಜನರು ಮೀನನ್ನು ತಿನ್ನುತ್ತಿರಲಿಲ್ಲ. ಮೊಟ್ಟೆಯನ್ನು ತಿನ್ನುತ್ತಿದ್ದರು.

೧೧ ಅಹಿಂಸೆಯನ್ನು ಅರ್ಥಮಾಡಿಕೊಂಡು ಅನುಸರಿಸಿದ ಪರಿ ಇದು.

೧೨ ಇತ್ತೀಚೆಗೆ ಜರ್ಮನಿಯ ಬೌದ್ಧ ಸಂಘವು ಅಹಿಂಸೆಯನ್ನು ಹೊರತುಪಡಿಸಿ ಇತರ ಎಲ್ಲ ಪಂಚಶೀಲಗಳನ್ನು ಸ್ವೀಕರಿಸುವ ನಿರ್ಣಯವನ್ನು ಕೈಗೊಂಡಿತು.

೧೩. ಅಹಿಂಸಾ ಸಿದ್ಧಾಂತದ ಸ್ಥಿತಿ ಇದು.

## ೨. ಅಹಿಂಸೆಯ ಅರ್ಥ

೧ ಅಹಿಂಸೆಯ ಅರ್ಥವೇನು?

೨ ಬುದ್ಧನು ಅಹಿಂಸೆಯ ಯಾವುದೇ ವ್ಯಾಖ್ಯೆಯನ್ನು ಎಲ್ಲೂ ಕೊಟ್ಟಿಲ್ಲ. ಈ ವಿಷಯದ ಬಗ್ಗೆ ಆತ ನಿರ್ದಿಷ್ಟವಾಗಿ ಏನನ್ನೂ ಹೇಳಿಯೇ ಇಲ್ಲ.

೩ ಆದ್ದರಿಂದ ಸಾಂದರ್ಭಿಕ ಸಾಕ್ಷ್ಯಾಧಾರಗಳ ಮೇಲೆ ಅವನ ಆಶಯವನ್ನು ನಾವು ಪ್ರಕಟಪಡಿಸಬೇಕಾಗಿದೆ.

೪ ಆತನ ಭಿಕ್ಷೆಯ ಅಂಶವಾಗಿ ಮಾಂಸವನ್ನು ಕೊಟ್ಟರೆ ಅದನ್ನು ತಿನ್ನಲು ಬುದ್ಧನ ವಿರೋಧವಿರಲಿಲ್ಲ ಎಂಬುದು ಮೊದಲನೇ ಸಾಂದರ್ಭಿಕ ಸಾಕ್ಷ್ಯಾಧಾರ.

೫ ಪ್ರಾಣಿಯನ್ನು ಕೊಲ್ಲುವ ಕ್ರಿಯೆಯಲ್ಲಿ ಸಹಭಾಗಿಯಾಗದಿದ್ದರೆ ಭಿಕ್ಷುವು ತನಗೆ ಕೊಡಲಾಗುವ ಮಾಂಸವನ್ನು ತಿನ್ನಬಹುದು.

೬ ಭಿಕ್ಷೆಯ ರೂಪದಲ್ಲಿ ಕೊಡಲ್ಪಡುವ ಮಾಂಸವನ್ನು ಭಿಕ್ಷುಗಳು ತಿನ್ನುವುದನ್ನು ನಿಷೇಧಿಸಬೇಕೆಂದು ದೇವದತ್ತನು ಒತ್ತಾಯಿಸಿದ. ಆದರೆ ದೇವದತ್ತನ ವಿರೋಧವನ್ನು ಬುದ್ಧನು ತಡೆದ.

೭ ಈ ವಿಷಯದ ಬಗ್ಗೆ ಇರುವ ಮತ್ತೊಂದು ಸಾಕ್ಷ್ಯಾಧಾರದ ಅಂಶವೆಂದರೆ, ಕೇವಲ ಯಜ್ಞದಲ್ಲಿ ಕೊಡುತ್ತಿದ್ದ ಬಲಿಯನ್ನು ಆತನು ವಿರೋಧಿಸಿದ್ದು. ಇದನ್ನು ಆತನೇ ಹೇಳಿದ್ದಾನೆ.

೮ "ಅಹಿಂಸಾ ಪರಮೋ ಧರ್ಮಃ" ಎಂಬುದು ಒಂದು ವಿಪರೀತ ಸಿದ್ಧಾಂತ. ಅದು ಒಂದು ಜೈನ ಸಿದ್ಧಾಂತ. ಬೌದ್ಧ ಸಿದ್ಧಾಂತವಲ್ಲ.

೯ ಸಾಂದರ್ಭಿಕವೆನಿಸುವುದಕ್ಕಿಂತ ಹೆಚ್ಚು ನೇರವಾಗಿರುವ ಮತ್ತೊಂದು ಸಾಕ್ಷ್ಯಾಧಾರ ಅಂಶವಿದೆ. ಅದು ಒಂದು ರೀತಿಯಲ್ಲಿ ಅಹಿಂಸೆಯ ವ್ಯಾಖ್ಯೆಯೂ ಹೌದು. "ಎಲ್ಲರನ್ನೂ ಪ್ರೀತಿಸು, ಆಗ ನೀನು ಯಾರನ್ನೂ ಕೊಲ್ಲಲು ಇಚ್ಛಿಸಲಾರೆ" ಎಂದು ಬುದ್ಧ ಹೇಳಿದ. ಅಹಿಂಸಾ ತತ್ತ್ವವನ್ನು ಪ್ರತಿಪಾದಿಸುವ ಒಂದು ನೈಜ ರೀತಿ ಇದು.

೧೦ ಇದರಿಂದ ಕಂಡುಬರುವುದೇನೆಂದರೆ, ಅಹಿಂಸಾ ಸಿದ್ಧಾಂತವು "ಕೊಲ್ಲಬೇಡ" ಎಂದು ಹೇಳುವುದಿಲ್ಲ. "ಎಲ್ಲರನ್ನೂ ಪ್ರೀತಿಸು" ಎಂದು ಹೇಳುತ್ತದೆ.

೧೧ ಅಹಿಂಸೆಗೆ ಬುದ್ಧನು ಕೊಟ್ಟ ಅರ್ಥವೇನು? ಎಂಬುದನ್ನು ಈ ಹೇಳಿಕೆಗಳ ಬೆಳಕಿನಲ್ಲಿ ಸ್ಪಷ್ಟವಾಗಿ ತಿಳಿಯಲು ಸುಲಭವಾಗುತ್ತದೆ.

೧೨ ಕೊಲ್ಲುವ ಇಚ್ಛೆ ಮತ್ತು ಕೊಲ್ಲುವ ಅಗತ್ಯಗಳ ನಡುವಣ ವ್ಯತ್ಯಾಸವನ್ನು ತೋರಿಸುವುದು ಬುದ್ಧನ ಆಶಯವೆಂಬುದು ಈ ಹೇಳಿಕೆಗಳ ಬೆಳಕಿನಲ್ಲಿ ಸ್ಪಷ್ಟವಾಗುತ್ತದೆ.

೧೩ ಕೊಲ್ಲಲು ಅಗತ್ಯವೆಲ್ಲಿತ್ತೋ ಅಲ್ಲಿ ಕೊಲ್ಲುವುದನ್ನು ಆತ ನಿಷೇಧಿಸಲಿಲ್ಲ.

೧೪ ಕೊಲ್ಲುವ ಇಚ್ಛೆಯನ್ನು ಬಿಟ್ಟು, ಮತ್ತೇನೂ ಇಲ್ಲದ ಸಂದರ್ಭದಲ್ಲಿ ಕೊಲ್ಲುವುದನ್ನು ಆತ ನಿಷೇಧಿಸಿದ.

೧೫ ಈ ರೀತಿ ಅರ್ಥಮಾಡಿಕೊಂಡರೆ, ಬೌದ್ಧ ಅಹಿಂಸಾ ಸಿದ್ಧಾಂತದಲ್ಲಿ ಯಾವುದೇ ಗೊಂದಲವಿರುವುದಿಲ್ಲ.

೧೬ ಅದು ಪ್ರತಿಯೊಬ್ಬರೂ ಗೌರವಿಸಬೇಕಾದ ಸಂಪೂರ್ಣ ಶುದ್ಧವಾದ ಅಥವಾ ನೈತಿಕವಾದ ಸಿದ್ಧಾಂತ.

೧೭ ಕೊಲ್ಲುವ ಅಗತ್ಯವಿದೆಯೋ ಇಲ್ಲವೋ ಎಂಬುದನ್ನು ಅವನು ಪ್ರತಿಯೊಬ್ಬ ವ್ಯಕ್ತಿಯ ನಿರ್ಧಾರಕ್ಕೆ ಬಿಡುತ್ತಾನೆ ಎಂಬುದರಲ್ಲಿ ಸಂದೇಹವಿಲ್ಲ. ಅದನ್ನು ಮತ್ತೇ ಇನ್ಯಾರಿಗೆ ಬಿಡಬೇಕು. ಮನುಷ್ಯನಿಗೆ ಪ್ರಜ್ಞೆಯಿದೆ. ಆದ್ದರಿಂದ ಅದನ್ನು ಅವನು ಬಳಸಿಕೊಳ್ಳಲೇಬೇಕು.

೧೮ ಸರಿಯಾದ ಬಿಂದುವಿನಲ್ಲಿ ಗೆರೆ ಎಳೆಯುವ ವಿಷಯದಲ್ಲಿ ನೈತಿಕತೆಯುಳ್ಳ ಮನುಷ್ಯನನ್ನು ನಂಬಬಹುದು.

೧೯ ಬ್ರಾಹ್ಮಣೀಯ ಧರ್ಮದಲ್ಲಿ ಕೊಲ್ಲುವ ಇಚ್ಛೆ ಅಂತರ್ಗತವಾಗಿದೆ.

೨೦ ಜೈನಧರ್ಮದಲ್ಲಿ ಎಂದೂ ಕೊಲ್ಲದ ಇಚ್ಛೆ ಅಂತರ್ಗತವಾಗಿದೆ.

೨೧ ಬುದ್ಧನ ಅಹಿಂಸೆಯು ಆತನ ಮಧ್ಯಮ ಮಾರ್ಗಕ್ಕನುಗುಣವಾಗಿದೆ.

೨೨ ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಬುದ್ಧನು ತತ್ತ್ವ ಮತ್ತು ನಿಯಮಗಳ ನಡುವೆ ಭಿನ್ನತೆ ತೋರಿಸಿದ. ಆತನು ಅಹಿಂಸೆಯನ್ನು ಒಂದು ನಿಯಮವನ್ನಾಗಿ ಮಾಡಲಿಲ್ಲ. ಆತನು ಅದನ್ನು ಒಂದು ತಾತ್ತ್ವಿಕ ವಿಷಯವನ್ನಾಗಿ ಅಥವಾ ಜೀವನದ ಮಾರ್ಗವನ್ನಾಗಿ ಸ್ಪಷ್ಟವಾಗಿ ನಿರೂಪಿಸಿದ.

೨೩ ಈ ರೀತಿ ಮಾಡುವಲ್ಲಿ ಆತನು ಬಹು ವಿವೇಕಿಯಾಗಿ ವರ್ತಿಸಿದ ಎಂಬುದರಲ್ಲಿ ಸಂದೇಹವಿಲ್ಲ.

೨೪ ಒಂದು ತತ್ವವು ಸ್ವತಂತ್ರವಾಗಿ ವರ್ತಿಸಲು ನಮಗೆ ಬಿಡುತ್ತದೆ. ಒಂದು ನಿಯಮವು ಹಾಗೆ ಬಿಡುವುದಿಲ್ಲ. ನಿಯಮವು ನಿಮ್ಮನ್ನು ಮುರಿಯುತ್ತದೆ ಅಥವಾ ನೀವು ಆ ನಿಯಮವನ್ನು ಮುರಿಯುತ್ತೀರಿ.

## ವಿಭಾಗ ೪

# ಜನ್ಮಾಂತರ

೧ ಪೂಜ್ಯ ಭಗವಾನನು, ಪುನರ್ಜನ್ಮವುಂಟೆಂದು ಬೋಧಿಸಿದ. ಆದರೆ ಭಗವಾನನು ಜನ್ಮಾಂತರವಿಲ್ಲವೆಂದೂ ಬೋಧಿಸಿದ.

೨ ಅಂತಹ ಎರಡು ಪರಸ್ಪರ ವಿರುದ್ಧ ಸಿದ್ಧಾಂತಗಳನ್ನು ಬೋಧಿಸಿದ್ದಕ್ಕಾಗಿ ಭಗವಾನನು ಟೀಕಿಸುವವರಿಗೆ ಕಡಿಮೆಯಿಲ್ಲ.

೩ ಜನ್ಮಾಂತರವಿಲ್ಲದೆ ಪುನರ್ಜನ್ಮವಿರಲು ಹೇಗೆ ಸಾಧ್ಯ? ಎಂದು ಟೀಕಾಕಾರರು ಕೇಳಿದರು.

೪ ಇಲ್ಲಿ ಜನ್ಮಾಂತರವಿಲ್ಲದೆ ಪುನರ್ಜನ್ಮವಿರುವ ಪ್ರಸಂಗವಿದೆ ಎಂದು ಅವರು ಹೇಳಿದರು. ಈ ರೀತಿ ಇರಲು ಸಾಧ್ಯವೇ?

೫ ಇಲ್ಲಿ ಪರಸ್ಪರ ವಿರೋಧವಿಲ್ಲ. ಜನ್ಮಾಂತರವಿಲ್ಲದಿದ್ದಾಗಲೂ ಪುನರ್ಜನ್ಮವಿರಬಲ್ಲದು.

೬ ರಾಜಾ ಮಿಲಿಂದನ ಪ್ರಶ್ನೆಗಳಿಗೆ ಉತ್ತರಿಸುವಾಗ, ಈ ವಿಷಯವನ್ನು ನಾಗಸೇನನು ಚೆನ್ನಾಗಿ ವಿವರಿಸಿದ್ದಾನೆ.

೭ ಬ್ಯಾಕ್ಟ್ರಿಯದ ರಾಜಾ ಮಿಲಿಂದನು ನಾಗಸೇನನನ್ನು ಕೇಳಿದ: “ಬುದ್ಧನು ಪುನರ್ಜನ್ಮದಲ್ಲಿ ನಂಬಿಕೆ ಇಟ್ಟಿದ್ದನೆ?”

೮ “ಹೌದು” ಎಂಬುದು ಅವನ ಉತ್ತರ.

೯ “ಇದು ಒಂದು ಪರಸ್ಪರ ವಿರುದ್ಧವಾದ ವಿಷಯವಲ್ಲವೆ?”

೧೦ “ಇಲ್ಲ” ನಾಗದೇವನು ಉತ್ತರಿಸಿದ.

೧೧ “ಆತ್ಮವಿಲ್ಲದೆ ಪುನರ್ಜನ್ಮವಿರಬಲ್ಲದೆ?

೧೨ ನಾಗಸೇನ ಹೇಳಿದ, “ಹೌದು, ಇರಲು ಸಾಧ್ಯ.”

೧೩ “ಅದು ಹೇಗಿರಬಲ್ಲದೆಂಬುದನ್ನು ವಿವರಿಸಿ.”

೧೪ ರಾಜನು ಕೇಳಿದ, “ನಾಗಸೇನ, ಎಲ್ಲಿ ಜನ್ಮಾಂತರವಿಲ್ಲವೋ ಅಲ್ಲಿ ಪುನರ್ಜನವಿರಲು ಸಾಧ್ಯವೇ?”

೧೫ “ಹೌದು, ಇರಲು ಸಾಧ್ಯ.”

೧೬ “ಆದರೆ, ಅದು ಹೇಗಿರಬಲ್ಲದು, ಒಂದು ದೃಷ್ಟಾಂತವನ್ನು ಕೊಡಿ.”

೧೭ “ರಾಜಾ, ಒಂದು ಪಕ್ಷ, ಒಬ್ಬ ಮನುಷ್ಯನು ಒಂದು ದೀಪದಿಂದ ಮತ್ತೊಂದು ದೀಪವನ್ನು ಹಚ್ಚಿದರೆ, ಅವುಗಳಲ್ಲಿ ‘ಒಂದು ಜನ್ಮಾಂತರ ಹೊಂದುತ್ತದೆ ಅಥವಾ ಒಂದು ಮತ್ತೊಂದನ್ನು ಸೇರುತ್ತದೆ’ ಎಂದು ಹೇಳಲಾಗುವುದೆ?”

೧೮ “ನಿಜವಾಗಿಯೂ ಸಾಧ್ಯವಿಲ್ಲ.”

೧೯ “ಅದೇ ರೀತಿ, ಮಹಾರಾಜಾ! ಜನ್ಮಾಂತರವಿಲ್ಲದ ಪುನರ್ಜನ್ಮ.”

೨೦ “ಮತ್ತೊಂದು ನಿದರ್ಶನವನ್ನು ಕೊಡಿ.”

೨೧ “ಮಹಾರಾಜಾ! ನೀನು ಚಿಕ್ಕವನಾಗಿದ್ದಾಗ, ನಿನ್ನ ಗುರುವಿನಿಂದ ಕಲಿತ ಯಾವುದಾದರೂ ಒಂದು

ಪದ್ಯವನ್ನು ನೆನಪಿಸಿಕೊಳ್ಳಬಲ್ಲೆಯಾ?"

೨೨ "ಹೌದು, ನಾನು ನೆನಪಿಸಿಕೊಳ್ಳಬಲ್ಲೆ."

೨೩ "ಸರಿ, ಆ ಪದ್ಯವು ನಿನ್ನ ಗುರುವಿನಿಂದ ಜನ್ಮಾಂತರ ಹೊಂದಿತೆ?"

೨೪ "ನಿಜವಾಗಿಯೂ ಇಲ್ಲ."

೨೫ "ಅದೇ ರೀತಿ ಮಹಾರಾಜಾ! ಜನ್ಮಾಂತರವಿಲ್ಲದ ಪುನರ್ಜನ್ಮ."

೨೬ "ಬಹಳ ಚೆನ್ನಾಗಿದೆ, ನಾಗಸೇನ."

೨೭ ಅನಂತರ ರಾಜನು ಕೇಳಿದ, "ನಾಗಸೇನ, ಆತ್ಮನೆಂಬ ವಸ್ತುವಿದೆಯೆ?."

೨೮ "ಬಹಳ ಸ್ಪಷ್ಟವಾದ ಅರ್ಥದಲ್ಲಿ, ರಾಜಾ! ಅಂತಹ ವಸ್ತುವಿಲ್ಲ."

೨೯ "ಬಹಳ ಚೆನ್ನಾಗಿದೆ, ನಾಗಸೇನ."

### ವಿಭಾಗ ೫

# ತಪ್ಪು ತಿಳಿವಳಿಕೆಯ ಕಾರಣಗಳು

೧ ಬುದ್ಧನು ತಾನು ಉಪದೇಶಿಸಿದನೆಂಬುದನ್ನು ಕೇಳಿದ ಶ್ರೋತೃವರ್ಗದಲ್ಲಿ ಬಹುಮಟ್ಟಿಗೆ ಭಿಕ್ಷುಗಳೇ ಇದ್ದರು.

೨ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಬುದ್ಧನು ಹೇಳಿದನೆಂಬುದನ್ನು ಸಾಮಾನ್ಯ ಜನತೆಗೆ ವರದಿ ಮಾಡಿದವರು ಈ ಭಿಕ್ಷುಗಳೇ.

೩ ಬರೆವಣಿಗೆಯ ಕಲೆ ಇನ್ನೂ ಬೆಳೆದಿರಲಿಲ್ಲ. ಆದ್ದರಿಂದ ತಾವು ಕೇಳಿದ್ದನ್ನು ಭಿಕ್ಷುಗಳು ಮನನ ಮಾಡಿಕೊಳ್ಳಬೇಕಾಗಿತ್ತು. ಪ್ರತಿಯೊಬ್ಬ ಭಿಕ್ಷುವೂ ತಾನು ಕೇಳಿದ್ದನ್ನು ಮನನ ಮಾಡಿಕೊಳ್ಳುವುದರಲ್ಲಿ ಜಾಗರೂಕತೆಯಿಂದಿರಲಿಲ್ಲ. ಆದರೆ ಅವರಲ್ಲಿ ಕೆಲವರು ಮನನಮಾಡಿಕೊಳ್ಳುವುದನ್ನೇ, ತಮ್ಮ ವೃತ್ತಿಯಾಗಿಸಿಕೊಂಡಿದ್ದರು. ಅವರನ್ನು ಭಾಣಕರು ಎಂದು ಕರೆಯಲಾಗುತ್ತಿತ್ತು.

೪ ಬೌದ್ಧ ತಾತ್ತ್ವಿಕ ಸಾಹಿತ್ಯವು ಸಾಗರದಷ್ಟು ವಿಸ್ತಾರವಾಗಿದೆ. ಇದೆಲ್ಲವನ್ನೂ ಮನನ ಮಾಡುವುದು ನಿಜವಾಗಿಯೂ ದೊಡ್ಡ ಸಾಹಸದ ಕಾರ್ಯವೇ.

೫ ಬುದ್ಧನು ಹೇಳಿದ್ದನ್ನು ತಪ್ಪಾಗಿ ವರದಿ ಮಾಡಿದುದೂ ಅನೇಕ ವೇಳೆ ಕಂಡಿಬಂದಿದೆ.

೬ ಬುದ್ಧನು ಜೀವಿಸಿರುವಾಗಲೇ, ತಪ್ಪು ವರದಿಯ ಅನೇಕ ಪ್ರಸಂಗಗಳನ್ನು ಅವರ ಗಮನಕ್ಕೆ ತರಲಾಯಿತು.

೭ ದೃಷ್ಟಾಂತಗಳ ಮೂಲಕ ಅಂತಹ ಐದು ಪ್ರಸಂಗಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಒಂದನ್ನು ಅಲಗದ್ದುಪಮ ಸುತ್ತದಲ್ಲಿಯೂ, ಮತ್ತೊಂದನ್ನು ಮಹಾಕಮ್ಮವಿಭಂಗ ಸುತ್ತದಲ್ಲಿಯೂ, ಮೂರನೆಯದೊಂದನ್ನು ಕನ್ನಕತ್ತಾಲ ಸುತ್ತದಲ್ಲಿಯೂ, ನಾಲ್ಕನೆಯದನ್ನು ಮಹಾ–ತಾನಹ–ಸಂಖ್ಯಾ ಸುತ್ತದಲ್ಲಿಯೂ ಮತ್ತು ಐದನೆಯದನ್ನು ಜೀವಕ ಸುತ್ತದಲ್ಲಿಯೂ ಪ್ರಸ್ತಾಪಿಸಲಾಗಿದೆ.

೮ ಬಹುಶಃ ಅಂತಹ ತಪ್ಪು ವರದಿಗಳ ಇನ್ನು ಅನೇಕ ಪ್ರಸಂಗಗಳಿರಬಹುದು. ಏಕೆಂದರೆ, ಭಿಕ್ಷುಗಳು ಕೂಡ, ಬುದ್ಧನ ಬಳಿಗೆ ಹೋಗಿ ಅಂತಹ ಸಮಸ್ಯಾತ್ಮಕ ಪರಿಸ್ಥಿತಿಗಳಲ್ಲಿ ತಾವು ಏನು ಮಾಡಬೇಕು ಎಂದು ಕೇಳಿದ ಪ್ರಸಂಗಗಳನ್ನು ಕಾಣಬಹುದು.

೯ ಕರ್ಮ ಮತ್ತು ಪುನರ್ಜನ್ಮಕ್ಕೆ ಸಂಬಂಧಿಸಿದಂತೆ ತಪ್ಪು ವರದಿ ಪ್ರಸಂಗಗಳು ಸಾಮಾನ್ಯ.

೧೦ ಈ ಸಿದ್ಧಾಂತಗಳಿಗೆ ಬ್ರಾಹ್ಮಣೀಯ ಮತದಲ್ಲಿಯೂ ಸ್ಥಾನಮಾನಗಳಿವೆ. ತತ್ಪರಿಣಾಮವಾಗಿ ಬ್ರಾಹ್ಮಣ ಸೂತ್ರಗಳನ್ನು ಬೌದ್ಧಮತದಲ್ಲಿ ಅಳವಡಿಸಲು ಭಾಣಕರಿಗೆ ಸುಲಭವಾಯಿತು.

೧೧ ಬೌದ್ಧ ತಾತ್ತ್ವಿಕ ಸಾಹಿತ್ಯದಲ್ಲಿ ಹೇಳಿರುವುದೆಲ್ಲಾ ಬುದ್ಧನು ಹೇಳಿದ್ದೇ ಎಂದು ಸ್ವೀಕರಿಸುವಲ್ಲಿ ನಾವು ಬಹಳ ಎಚ್ಚರಿಕೆಯಿಂದಿರಬೇಕು.

೧೨ ಹೀಗಿದ್ದರೂ, ಇದನ್ನು ಪರೀಕ್ಷಿಸಲು ಒಂದು ಪ್ರಮಾಣವಿದೆ.

೧೩ ನಾವು ಆತ್ಮವಿಶ್ವಾಸದಿಂದ ಹೇಳಬಹುದೇನಾದರೂ ಇದ್ದರೆ, ಅದು ಬುದ್ಧನು ವಿಚಾರಶೀಲ ಹಾಗೂ

ತರ್ಕಬದ್ಧನಾಗಿದ್ದ ಎಂಬುದಲ್ಲದೆ ಬೇರೇನೂ ಅಲ್ಲ. ಯಾವುದೇ ವಿಷಯವು ವೈಚಾರಿಕವೂ ತರ್ಕಬದ್ಧವೂ ಆಗಿದ್ದರೆ, ಅದು ಬುದ್ಧನ ಮಾತು ಎಂದು ಸ್ವೀಕರಿಸಬಹುದು.

೧೪ ಮನುಷ್ಯನ ಕಲ್ಯಾಣಕ್ಕೆ ಉಪಯುಕ್ತವಾಗದಂತಹ ಸಂವಾದದಲ್ಲಿ ತೊಡಗಲು ಬುದ್ಧನು ಎಂದೂ ಆಸಕ್ತಿ ವಹಿಸಲಿಲ್ಲ ಎಂಬುದು ಎರಡನೆಯ ವಿಷಯ. ಆದ್ದರಿಂದ ಮನುಷ್ಯನ ಕಲ್ಯಾಣಕ್ಕೆ ಸಂಬಂಧಿಸದ ಯಾವುದೇ ವಿಚಾರವನ್ನು ಬುದ್ಧನಿಗೆ ಆರೋಪಿಸಿ, ಅದು ಅವನ ಮಾತೇ ಎಂದು ಸ್ವೀಕರಿಸಲಾಗದು.

೧೫ ಮೂರನೆಯ ಪರೀಕ್ಷೆಯೂ ಉಂಟು. ಅದೇನೆಂದರೆ, ಬುದ್ಧನು ಎಲ್ಲಾ ವಸ್ತುವಿಷಯಗಳನ್ನು ಎರಡು ವರ್ಗಗಳಾಗಿ ವಿಂಗಡಿಸಿದ. ಅವೇಂದರೆ, ಅವನು ಸ್ಪಷ್ಟವಾಗಿ ತಿಳಿದ ವಿಷಯಗಳು ಮತ್ತು ಸ್ಪಷ್ಟವಾಗಿ ತಿಳಿಯದ ವಿಷಯಗಳು. ಮೊದಲನೇ ವರ್ಗದಲ್ಲಿ ಸೇರುವ ವಿಷಯಗಳ ಬಗ್ಗೆ ಆತನು ತನ್ನ ಅಭಿಪ್ರಾಯಗಳನ್ನು ನಿಖರವಾಗಿ ಮತ್ತು ನಿರ್ಣಯಾತ್ಮಕವಾಗಿ ಹೇಳಿದ್ದಾನೆ. ಎರಡನೇ ವರ್ಗದಲ್ಲಿ ಸೇರುವ ವಿಷಯಗಳ ಬಗ್ಗೆಯೂ ಆತನು ತನ್ನ ಅಭಿಪ್ರಾಯಗಳನ್ನು ತಿಳಿಸಿದ್ದಾನೆ. ಆದರೆ ಅವು ಕೇವಲ ತಾತ್ಕಾಲಿಕ ಅಭಿಪ್ರಾಯಗಳು.

೧೬ ಸಂಶಯ ಮತ್ತು ಭಿನ್ನಾಭಿಪ್ರಾಯವಿರುವ ಪ್ರಶ್ನೆಗಳನ್ನು ಚರ್ಚಿಸುವಲ್ಲಿ, ಅವುಗಳ ಬಗ್ಗೆ ಬುದ್ಧನ ಅಭಿಪ್ರಾಯವೇನೆಂಬುದನ್ನು ನಿರ್ಧರಿಸುವ ಮೊದಲು ಮೇಲ್ಕಂಡ ಮೂರು ಪರೀಕ್ಷೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾದ್ದು ಅತ್ಯಗತ್ಯ.

# ಭಾಗ : ೩
# ಬೌದ್ಧ ಜೀವನ ಮಾರ್ಗ

## ೧. ಒಳಿತು, ಕೆಡುಕು ಮತ್ತು ಪಾಪ ಇವುಗಳನ್ನು ಕುರಿತ ವಿಚಾರ

೧ ಒಳ್ಳೆಯದನ್ನು ಮಾಡು, ಕೆಟ್ಟದ್ದಕ್ಕೆ ಪಾಲುದಾರನಾಗಬೇಡ. ಪಾಪಕೃತ್ಯವನ್ನೂ ಮಾಡಬೇಡ.

೨ ಇದು ಬೌದ್ಧ ಜೀವನಮಾರ್ಗ.

೩ ಯಾವುದು ಒಳ್ಳೆಯದೋ ಅದನ್ನು ಮನುಷ್ಯನು ಮಾಡಬೇಕಾದರೆ, ಆತನು ಪದೇಪದೇ ಅದನ್ನೇ ಮಾಡಬೇಕು. ಆತನು ತನ್ನ ಹೃದಯದ ಆಶಯಗಳನ್ನೆಲ್ಲಾ ಅದರತ್ತ ತಿರುಗಿಸಬೇಕು. ಒಳ್ಳೆಯದನ್ನು ಮಾಡುವುದು ಸಂತಸದ ಸಂಗತಿ.

೪ 'ಅದು ನನ್ನಿಂದಾಗದು' ಎಂಬ ಉತ್ತಮ ಹೇಳಿಕೆಯ ಬಗ್ಗೆ ಲಘುವಾಗಿ ಯೋಚಿಸಬೇಡ. ನೀರಿನ ಗಡಿಗೆ ಹನಿಹನಿಗಳಿಂದ ತುಂಬುತ್ತದೆ. ಸ್ವಲ್ಪದರೊಡನೆ ಸ್ವಲ್ಪವನ್ನು ಸೇರಿಸಿದಾಗ ಒಳ್ಳೆಯದು ಬೆಳೆಯುತ್ತದೆ.

೫ ಆದರೆ ಯಾವುದೇ ವಿಷಾದಕ್ಕೆ ಕಾರಣವಾಗದ ಕಾರ್ಯವು, ಒಳ್ಳೆಯ ಕಾರ್ಯ. ಅದರಿಂದ ಬರುವ ಫಲವು ಸಂತಸ ಮತ್ತು ಸಂತೃಪ್ತಿಗಳಿಂದ ಸ್ವೀಕೃತವಾಗುತ್ತದೆ.

೬ ಒಬ್ಬ ಮನುಷ್ಯನು ಒಳ್ಳೆಯದನ್ನು ಮಾಡಿದರೆ, ಅದನ್ನು ಮತ್ತೆ ಮಾಡಲು ಅವನಿಗೆ ಬಿಡಿ. ಅದರಿಂದ ಆತನು ಸಂತಸಪಡಲು ಬಿಡಿ. ಒಳ್ಳೆಯದರ ಸಂಗ್ರಹ ಆನಂದಕಾರಕ.

೭ ಒಬ್ಬ ಉತ್ತಮ ಮನುಷ್ಯನ ಒಳ್ಳೆಯ ಕಾರ್ಯಗಳು ಫಲಿಸುವವರೆಗೆ ಆತನೂ ಕೆಟ್ಟ ದಿನಗಳನ್ನು ಕಾಣುತ್ತಾನೆ. ಆದರೆ ಆತನ ಒಳ್ಳೆಯ ಕಾರ್ಯಗಳು ಫಲಿಸಿದಾಗ, ಆತನು ಒಳ್ಳೆಯದನ್ನು ಕಾಣುತ್ತಾನೆ.

೮ ಅದು ತನ್ನವರೆಗೂ ಬರಲಾರದು ಎಂದು ತನ್ನ ಹೃದಯದಲ್ಲಿ ಭಾವಿಸುತ್ತಾ, ಯಾರೊಬ್ಬರೂ ಒಳ್ಳೆಯದರ ಬಗ್ಗೆ ಲಘುವಾಗಿ ಚಿಂತಿಸದಿರಲಿ. ನೀರಿನ ಹನಿಗಳು ಬೀಳುವುದರಿಂದಲೂ, ನೀರಿನ ಗಡಿಗೆ ತುಂಬುತ್ತದೆ. ವಿವೇಕಿಯಾದ ಮನುಷ್ಯನು, ಒಳ್ಳೆಯದನ್ನು ಸ್ವಲ್ಪಸ್ವಲ್ಪವಾಗಿ ಸಂಗ್ರಹಿಸಿದರೂ ಕೂಡ, ಅದನ್ನು ತುಂಬಿಕೊಂಡು ಬೆಳೆಯುತ್ತಾನೆ.

೯ ಶ್ರೀಗಂಧದ ಅಥವಾ ತಾವರೆಯ ಅಥವಾ ಮಲ್ಲಿಗೆಯ ಪರಿಮಳವನ್ನು ಮೀರಿ ನಿಲ್ಲುವುದೆಂದರೆ ಸದ್ಗುಣದ ಪರಿಮಳ.

೧೦ ಈ ಪರಿಮಳ ದ್ರವ್ಯದ ಅಥವಾ ಶ್ರೀಗಂಧದ ಪರಿಮಳವು ಮಂಕಾಗಿದ್ದರೆ, ಸದ್ಗುಣದ ಪರಿಮಳವು ಅತ್ಯಂತ ಎತ್ತರದ ಸ್ಥಾನಕ್ಕೆ ಒಯ್ಯುತ್ತದೆ.

೧೧ ಕೆಟ್ಟದ್ದು ತನ್ನತ್ತ ಬಾರದೆಂದು ಹೇಳುತ್ತಾ, ಅದನ್ನು ಲಘುವಾಗಿ ಪರಿಗಣಿಸಬೇಡ. ಹನಿಹನಿಗಳಿಂದ ನೀರಿನ ಗಡಿಗೆ ತುಂಬುತ್ತದೆ ಸ್ವಲ್ಪ ಕೆಟ್ಟದ್ದಕ್ಕೆ ಸ್ವಲ್ಪ ಕೆಟ್ಟದ್ದು ಸೇರಿದರೆ ಕೆಟ್ಟದ್ದು ಸಂಗ್ರಹವಾಗುತ್ತದೆ.

೧೨ ವಿಷಾದಗಳನ್ನುಂಟುಮಾಡುವಂತಹ ಕಾರ್ಯವನ್ನು ಮಾಡುವುದು ಒಳ್ಳೆಯದಲ್ಲ. ಅದರಿಂದ ದೊರಕುವ ಫಲವು ಕಣ್ಣೀರು ಮತ್ತು ಗೋಳಾಟಗಳಿಂದ ತುಂಬಿರುತ್ತದೆ.

೧೩ ಗಾಡಿಯನ್ನು ಎಳೆಯುತ್ತಿರುವ ಪ್ರಾಣಿಯ ಗೊರಸನ್ನು ಹಿಂಬಾಲಿಸುವ ಚಕ್ರದಂತೆ, ತನ್ನ ಕೆಟ್ಟ ಮನಸ್ಸಿನಂತೆ ಮಾತನಾಡಿದರೆ ಅಥವಾ ಕೆಲಸ ಮಾಡಿದರೆ, ದುಃಖ ಅವನನ್ನು ಹಿಂಬಾಲಿಸುತ್ತದೆ.

೧೪ ಕೆಟ್ಟ ವಿಷಯಗಳ ಬೆನ್ನು ಹತ್ತಬೇಡ. ಉದಾಸೀನತೆಯಿಂದ ಜೀವಿಸಬೇಡ. ಕೆಟ್ಟ ವಿಚಾರಗಳನ್ನು ಬೆಳೆಸಿಕೊಳ್ಳಬೇಡ.

೧೫ ಉತ್ತಮವಾದುದರತ್ತ ಧಾವಿಸು. ಎಲ್ಲ ಕೆಟ್ಟ ಆಲೋಚನೆಗಳನ್ನು ದಮನ ಮಾಡು. ಒಳ್ಳೆಯದನ್ನು ಮಾಡುವುದರಲ್ಲಿ ಯಾವಾತ ಎಷ್ಟು ಹಿಂದುಳಿದಿರುತ್ತಾನೋ, ಅವನ ಮನಸ್ಸು ಅಷ್ಟೂ ಕೆಟ್ಟದ್ದರಲ್ಲಿ ಸಂತೋಷಿಸುತ್ತದೆ.

೧೬ ಒಂದು ಕಾರ್ಯವನ್ನು ಮಾಡಿದಾಗ ಅದು ಸಂತಾಪವನ್ನು ತರುವಂತಿದ್ದರೆ, ಅಂತಹ ಕಾರ್ಯ ಒಳ್ಳೆಯದಲ್ಲ. ಅದರಿಂದ ದೊರೆಯುವ ಫಲವು ಕಣ್ಣೀರು ಮತ್ತು ಗೋಳಾಟಗಳಿಂದ ಕೂಡಿರುತ್ತದೆ.

೧೭ ಕೆಟ್ಟ ಕೃತ್ಯ ಮಾಡುವ ಮನುಷ್ಯನು, ಅವನ ಕೆಟ್ಟ ಕೃತ್ಯಗಳು ಫಲಿಸುವವರೆಗೂ, ಸಂತೋಷವನ್ನು ಕಾಣುತ್ತಿರುತ್ತಾನೆ. ಆದರೆ ಆತನ ಕೆಟ್ಟ ಕೃತ್ಯ ಫಲಿಸಿದಾಗ, ಆತನು ಕೆಟ್ಟದ್ದನ್ನು ಕಾಣುತ್ತಾನೆ.

೧೮ "ಅದು ನನ್ನ ಹತ್ತಿರ ನೇರವಾಗಿ ಬರುವುದಿಲ್ಲ" ಎಂದು ಕೆಟ್ಟದ್ದರ ಬಗ್ಗೆ ಯಾವ ಮನುಷ್ಯನೂ ಭಾವಿಸದಿರಲಿ. ಕೇವಲ ನೀರಿನ ಹನಿಗಳು ಬೀಳುವುದರಿಂದ ಗಡಿಗೆ ತುಂಬುತ್ತದೆ. ಅವಿವೇಕಿಯು, ಕೆಟ್ಟದ್ದನ್ನು ಸ್ವಲ್ಪಸ್ವಲ್ಪವಾಗಿ ಸಂಗ್ರಹಿಸಿದರೂ, ಆತನಲ್ಲಿ ಕೆಟ್ಟದ್ದು ತುಂಬುತ್ತದೆ.

೧೯ ಮನುಷ್ಯನು ಒಳ್ಳೆಯದರತ್ತ ಬೇಗ ಬೇಗ ಹೋಗಬೇಕು ಮತ್ತು ಕೆಟ್ಟದ್ದರಿಂದ ತನ್ನ ಆಲೋಚನೆಯನ್ನು ದೂರವಿಡಬೇಕು. ಯಾವುದು ಒಳ್ಳೆಯದೋ ಅದನ್ನು ಒಬ್ಬ ಮನುಷ್ಯನು ಅಲಸ್ಯದಿಂದ ಮಾಡಿದಾಗ ಆತನ ಮನಸ್ಸು ಕೆಟ್ಟದ್ದರಲ್ಲಿ ಸಂತೋಷಿಸುತ್ತದೆ.

೨೦ ಒಬ್ಬ ಮನುಷ್ಯನು ಒಂದು ಪಾಪಕಾರ್ಯವನ್ನು ಮಾಡಿದರೆ, ಅದನ್ನು ಆತನು ಮತ್ತೊಮ್ಮೆ ಮಾಡದಿರಲಿ. ಅದರಲ್ಲಿ ಆತನು ಸಂತೋಷಿಸದಿರಲಿ. ಕೆಡುಕಿನ ಸಂಗ್ರಹ ಯಾತನಾಮಯವಾದುದು.

೨೧ ಪುಣ್ಯದ ನಿಯಮವನ್ನು ಪಾಲಿಸು. ಪಾಪದ ನಿಯಮವನ್ನು ಪಾಲಿಸಬೇಡ. ಈ ಪ್ರಪಂಚದಲ್ಲಿ ಸದ್ಗುಣಿಯು ಆನಂದದಿರುತ್ತಾನೆ.

೨೨ ವಿಷಯಲಂಪಟತನದಿಂದ ದುಃಖ ಉತ್ಪತ್ತಿಯಾಗುತ್ತದೆ. ಅತಿಕಾಮದಿಂದ ಭಯವುಂಟಾಗುತ್ತದೆ. ವಿಷಯಲಂಪಟತನದಿಂದ ಯಾವಾತ ಸಂಪೂರ್ಣವಾಗಿ ಮುಕ್ತನಾಗುತ್ತಾನೋ, ಆತನಿಗೆ ದುಃಖವೂ ಇರುವುದಿಲ್ಲ, ಭಯವೂ ಇರುವುದಿಲ್ಲ.

೨೩ ರೋಗಗಳಲ್ಲಿ ಹಸಿವು ಅತ್ಯಂತ ಹೀನವಾದುದು ಮತ್ತು ಹತಾಶೆಗಳಲ್ಲಿ ಅತ್ಯಂತ ಹೀನವಾದುದು. ಸತ್ಯ ಮತ್ತು ವಾಸ್ತವಾಂಶಗಳಿಗೆ ಅನುಗುಣವಾಗಿ ಪಡೆದ ಈ ತಿಳಿವು ಅಂದರೆ ನಿಬ್ಬಾಣವು, ಅತ್ಯುತ್ಕೃಷ್ಟ ಆನಂದವನ್ನುಂಟುಮಾಡುತ್ತದೆ.

೨೪ ಒಂದು ವಜ್ರವು ಅಮೂಲ್ಯ ರತ್ನಗಳನ್ನು ಒಡೆಯುವಂತೆ, ತನ್ನಿಂದಲೇ ಮಾಡಲಾದ, ತನ್ನಿಂದಲೇ ಪೋಷಿತವಾದ ಕೆಟ್ಟ ಕಾರ್ಯವು, ಆ ಕೆಲಸ ಮಾಡುವವನನ್ನು ಜಜ್ಜುಬಡಿಯುತ್ತದೆ.

೨೫ ಯಾವನ ಕೆಟ್ಟ ಚಾಳಿಯು ಬಹಳ ವಿಪರೀತವಾಗಿರುತ್ತದೆಯೋ, ಅಂಥವನು ತಾನು ಸುತ್ತಿಕೊಂಡ ಮರವನ್ನೇ ಬಳ್ಳಿಯು ನಾಶಮಾಡುವಂತೆ, ತನ್ನ ಶತ್ರುವಿನ ಇಚ್ಛೆಗನುಗುಣವಾಗಿ ತನ್ನನ್ನು ತಾನೇ ಹೀನಾಯ ಸ್ಥಿತಿಗೆ ತಂದುಕೊಳ್ಳುತ್ತಾನೆ.

೨೬ ಕೆಟ್ಟ ಕಾರ್ಯಗಳು ಮತ್ತು ನಮಗೇ ನೋವನ್ನುಂಟುಮಾಡುವಂತಹ ಕಾರ್ಯಗಳನ್ನು ಮಾಡುವುದು ಸುಲಭ. ಆದರೆ ಯಾವ ಕಾರ್ಯಗಳು ಅನುಕೂಲವಾಗಿರುತ್ತವೋ ಮತ್ತು ಒಳ್ಳೆಯದಾಗಿರುತ್ತವೋ ಅಂತಹ ಕಾರ್ಯಗಳನ್ನು ಮಾಡುವುದು ಕಷ್ಟ.

## ೨. ಲಾಲಸೆ ಮತ್ತು ವಿಷಯಲಂಪಟತನವನ್ನು ಕುರಿತ ವಿಚಾರ

೧ ಲಾಲಸೆಗಾಗಲಿ, ವಿಷಯಲಂಪಟತನಕ್ಕಾಗಲಿ ಒಳಗಾಗಬೇಡ.

೨ ಇದು ಬೌದ್ಧ ಜೀವನಮಾರ್ಗ.

೩ ಸಂಪತ್ತಿನ ಸುರಿಮಳೆಯಿದ್ದಾಗಲೂ ಆಸೆಯು ಸಂತೃಪ್ತಿಯಿರುವುದಿಲ್ಲ. "ಆಸೆಗಳು ಅತೃಪ್ತವಾಗಿರುತ್ತದೆ ಮತ್ತು ದುರ್ಭರವಾಗಿರುತ್ತವೆ ತಿಳಿದ ಬುದ್ಧಿವಂತರು ಹೀಗೆನ್ನುತ್ತಾರೆ.

೪ ದೇವಲೋಕಗಳ ಸುಖಗಳಲ್ಲಿಯೂ ವ್ಯಕ್ತಿಗೆ ಸಂತಸವುಂಟಾಗುವುದಿಲ್ಲ. ಲಾಲಸೆಯ ಅಂತ್ಯದಲ್ಲಿ ಅವನ ಸಂತಸವು ಅಂತರ್ಗತವಾಗಿರುತ್ತದೆ. ಅಂಥವನೇ ಅತ್ಯಂತ ಶ್ರೇಷ್ಠ ಜ್ಞಾನಿ ಬುದ್ಧನ ಶಿಷ್ಯ.

೫ ಲಾಲಸೆಯಿಂದ ದುಃಖವಾಗುತ್ತದೆ. ಲಾಲಸೆಯಿಂದ ಭಯವುಂಟಾಗುತ್ತದೆ. ಲಾಲಸೆಯಿಂದ ಯಾವಾತ ಸಂಪೂರ್ಣವಾಗಿ ಮುಕ್ತನಾಗಿರುತ್ತಾನೋ, ಅಂಥವನಿಗೆ ದುಃಖವಾಗಲಿ, ಭಯವಾಗಲಿ ಇರುವುದಿಲ್ಲ.

೬ ಯಾವಾತ ದುರಭಿಮಾನಿಯಾಗಿರುತ್ತಾನೆಯೋ (ಜೀವನದ ನಿಜವಾದ ಉದ್ದೇಶವನ್ನು ಮರೆತು) ಸುಖದತ್ತ ಕೈಚಾಚುತ್ತಾನೋ, ಅಂಥವನು ಕಾಲಾನುಕ್ರಮದಲ್ಲಿ, ಯಾವಾತನು ಧ್ಯಾನದಲ್ಲಿ ತೊಡಗಿಸಿಕೊಂಡಿರುತ್ತಾನೋ, ಅಂಥವನನ್ನು ಕಂಡರೆ ಅಸೂಯೆಪಡುತ್ತಾನೆ.

೭ ಯಾವ ಮನುಷ್ಯನೂ ಯಾವುದಕ್ಕೂ ಅಂಟಿಕೊಳ್ಳದಿರಲಿ. ಅದನ್ನು ಕಳೆದುಕೊಂಡಾಗ ಅವನಿಗೆ ನೋವುಂಟಾಗುತ್ತದೆ. ಯಾರು ಯಾವುದನ್ನೂ ಪ್ರೀತಿಸುವುದಿಲ್ಲವೋ ಮತ್ತು ಯಾರನ್ನೂ ದ್ವೇಷಿಸುವುದಿಲ್ಲವೋ ಅಂಥವರಿಗೆ ಯಾವುದೇ ಬಂಧನವಿರುವುದಿಲ್ಲ.

೮ ಇಂದ್ರಿಯ ಸುಖದಿಂದ ದುಃಖವುಂಟಾಗುತ್ತದೆ. ಇಂದ್ರಿಯ ಸುಖದಿಂದ ಭಯವುಂಟಾಗುತ್ತದೆ. ಯಾವಾತನು ಇಂದ್ರಿಯ ಸುಖದಿಂದ ಮುಕ್ತನಾಗಿರುತ್ತಾನೋ, ಅವನಿಗೆ ದುಃಖವಾಗಲಿ ಅಥವಾ ಭಯವಾಗಲಿ ಗೊತ್ತಿರುವುದಿಲ್ಲ.

೯ ಪ್ರೀತಿ ಮುಂತಾದ ಬಂಧನದಿಂದ ದುಃಖವುಂಟಾಗುತ್ತದೆ, ಭಯವುಂಟಾಗುತ್ತದೆ. ಯಾವಾತನು ಅವುಗಳಿಂದ ಮುಕ್ತನಾಗಿರುತ್ತಾನೋ, ಆತನಿಗೆ ದುಃಖವಾಗಲಿ, ಭಯವಾಗಲಿ ಇರುವುದಿಲ್ಲ.

೧೦ ವಿಷಯಲಂಪಟತನದಿಂದ ದುಃಖವುಂಟಾಗುತ್ತದೆ. ವಿಷಯಲಂಪಟತನದಿಂದ ಭಯವುಂಟಾಗುತ್ತದೆ. ಯಾವಾತನು ವಿಷಯಲಂಪಟತನದಿಂದ ಮುಕ್ತನಾಗಿರುತ್ತಾನೋ, ಅವನಿಗೆ ದುಃಖವಾಗಲಿ, ಭಯವಾಗಲಿ ಗೊತ್ತಿರುವುದಿಲ್ಲ.

೧೧ ದುರಾಸೆಯಿಂದ ದುಃಖವುಂಟಾಗುತ್ತದೆ. ದುರಾಸೆಯಿಂದ ಭಯವುಂಟಾಗುತ್ತದೆ. ದುರಾಸೆಯಿಂದ ಮುಕ್ತನಾದವನಿಗೆ ದುಃಖವಾಗಲಿ, ಭಯವಾಗಲಿ ಇರುವುದಿಲ್ಲ.

೧೨ ಯಾರಿಗೆ ಸದ್ಗುಣ ಮತ್ತು ಬುದ್ಧಿಗಳಿರುತ್ತವೋ, ಯಾರು ನ್ಯಾಯನಿಷ್ಠನೋ, ಸತ್ಯವನ್ನು ಹೇಳುತ್ತಾನೊ ಮತ್ತು ತನ್ನ ಕೆಲಸವಾವುದು ಅದನ್ನು ಮಾಡಿಕೊಂಡು ಹೋಗುತ್ತಾನೋ ಅಂಥವನಿಗೆ ಪ್ರಪಂಚವೆ ಪ್ರಿಯವಾಗಿರುತ್ತದೆ.

೧೩ ಬಹಳ ಕಾಲದವರೆಗೆ ಅಗಲಿದ್ದ ಮತ್ತು ದೂರ ದೇಶದಿಂದ ಸುರಕ್ಷಿತವಾಗಿ ವಾಪಸ್ಸು ಬಂದವನನ್ನು ರಕ್ತಸಂಬಂಧಿಗಳು, ಸ್ನೇಹಿತರು ಮತ್ತು ಪ್ರೀತಿಪಾತ್ರರಾದವರು ನಮಸ್ಕರಿಸುತ್ತಾರೆ.

೧೪ ಅದೇ ರೀತಿ ಯಾವಾತನು ಒಳ್ಳೆಯದನ್ನು ಮಾಡಿರುತ್ತಾನೋ ಮತ್ತು ಇಹಲೋಕದಿಂದ ಇಲ್ಲವಾಗಿರುತ್ತಾನೊ, ಅಂಥವನನ್ನು ದೂರ ದೇಶದಿಂದ ವಾಪಸಾಗುತ್ತಿರುವ ಬಂಧುವನ್ನು ಆತನ

ಬಂಧುಗಳು ಸ್ವಾಗತಿಸುವಂತೆ, ಒಳ್ಳೆಯದನ್ನು ಮಾಡಿದವನ ಕಾರ್ಯಗಳು ಆತನ ಮರಣಾನಂತರವೂ ಸ್ವಾಗತಿಸಲ್ಪಡುತ್ತವೆ.

## ೩. ಹಿಂಸೆ ಮತ್ತು ದ್ವೇಷ

೧ ಯಾರನ್ನೂ ಹಿಂಸಿಸಬೇಡ. ಯಾರ ಮೇಲೂ ದ್ವೇಷ ಬೆಳೆಸಿಕೊಳ್ಳಬೇಡ.

೨ ಇದು ಬೌದ್ಧ ಜೀವನ ಮಾರ್ಗ.

೩ ಚೈತನ್ಯಶೀಲವಾದ ಕುದುರೆಯು ಚಾವಟಿ ಏಟು ಬೀಳುವ ಸ್ಥಿತಿಗೆ ಎಡೆಮಾಡಿಕೊಡದಂತೆ, ಇಡೀ ಪ್ರಪಂಚದಲ್ಲಿ ಸಂತಾಪಕ್ಕೆ ಎಡೆಮಾಡಿಕೊಡದಂತಹ ದೋಷರಹಿತನಾದಂತಹ, ಮನುಷ್ಯನಿರುವನೆ?

೪ ಆತ್ಮವಿಶ್ವಾಸದಿಂದ, ಸದ್ಗುಣದಿಂದ, ಚೈತನ್ಯದಿಂದ, ಧ್ಯಾನದಿಂದ, ಸತ್ಯಾನ್ವೇಷಣೆಯಿಂದ ಜ್ಞಾನ ಮತ್ತು ಚಾರಿತ್ರ್ಯ ಸಿದ್ಧಿಯಿಂದ, ನೆನಪಿನ ಶಕ್ತಿಯಿಂದ ನೀನು ಈ ತೀವ್ರತರ ದುಃಖವನ್ನು ಹಿಂದೆ ಬಿಡು.

೫ ಸಂನ್ಯಾಸಿಯ ಆಚರಣೆಗಳಲ್ಲಿ ಅತ್ಯಂತ ಶ್ಲಾಘನೀಯವಾದುದೆಂದರೆ, ದೀರ್ಘ ದುಃಖದ ಸಹನೆಯ ಆಚರಣೆ; "ಎಲ್ಲದಕ್ಕಿಂತ ಅತ್ಯುತ್ತಮವಾದುದೆಂದರೆ, ನಿರ್ವಾಣ" ಎಂದು ಬುದ್ಧನು ಹೇಳುತ್ತಾನೆ. ಇತರರಿಗೆ ನೋವನ್ನುಂಟುಮಾಡುವಾತ ಸಂನ್ಯಾಸಿಯಲ್ಲ. ಮತ್ತೊಬ್ಬರ ಸಂಕಟಕ್ಕೆ ಕಾರಣನಾಗುವಾತ ಶಿಷ್ಯನಲ್ಲ.

೬ ಕೆಟ್ಟದ್ದನ್ನು ಆಡದಿರುವುದು, ತೊಂದರೆಯನ್ನುಂಟುಮಾಡದಿರುವುದು, ಶಿಸ್ತಿಗೆ ಅನುಗುಣವಾಗಿ, ಸಂಯಮವನ್ನು ಆಚರಿಸುವುದು, ಇವೇ ಬುದ್ಧನ ಬೋಧನೆಗಳು.

೭ ಕೊಲ್ಲಬೇಡ ಮತ್ತು ಕೊಲೆಗೆ ಕಾರಣನಾಗಬೇಡ.

೮ ತನ್ನ ಸುಖವನ್ನು ಯಾರು ಅರಸುತ್ತಿರುವನೋ ಆತನು, ಸುಖಾಪೇಕ್ಷಿಗಳಾಗಿರುವ ಜೀವಿಗಳನ್ನು ಶಿಕ್ಷಿಸುವುದೂ ಇಲ್ಲ, ಕೊಲ್ಲುವುದೂ ಇಲ್ಲ. ಅಂಥವನು ಸುಖವನ್ನು ಪಡೆಯುತ್ತಾನೆ.

೯ ಒಡೆದ ಗಂಟೆಯಂತೆ ನೀನು ಏನನ್ನೂ ಮಾತನಾಡದಿದ್ದರೆ, ಆಗ ನೀನು ನಿಬ್ಬಾಣವನ್ನು ತಲುಪುತ್ತೀಯೇ, ಕೋಪವು ನಿನಗೆ ಗೊತ್ತೇ ಇರುವುದಿಲ್ಲ.

೧೦ ನಿರ್ದೋಷಿಯಾದ ಮತ್ತು ಕೇಡುಮಾಡದ ವ್ಯಕ್ತಿಗೆ ನೋವನ್ನುಂಟುಮಾಡಿದಾತ ಬಹುಬೇಗ ದುಃಖಕ್ಕೊಳಗಾಗುತ್ತಾನೆ.

೧೧ ಯಾವಾತನು ಪ್ರಶಾಂತತೆ ಎಂಬ ಸುಂದರ ಉಡುಪನ್ನು ಧರಿಸಿರುತ್ತಾನೋ ಅವನು ಮೌನಿಯಾಗಿರುತ್ತಾನೆ, ಇಂದ್ರಿಯನಿಗ್ರಹಿಯಾಗಿರುತ್ತಾನೆ, ಸಂಯಮಿ ಶೀಲವಂತನಾಗಿರುತ್ತಾನೆ. ಇತರ ಎಲ್ಲ ಜೀವಿಗಳಲ್ಲಿ ದೋಷ ಹುಡುಕುವುದನ್ನು ಬಿಟ್ಟಿರುತ್ತಾನೆ ಅಂಥವನು ನಿಜವಾಗಿಯೂ ಸಮಣ, ಭಿಕ್ಷು.

೧೨ ಶ್ರೇಷ್ಠ ಕುದುರೆಯು ಚಾವಟಿ ಪ್ರಯೋಗವನ್ನು ತಡೆಯುವಂತೆ, ತನ್ನ ನಾಚಿಕೆ ಸ್ವಭಾವದಿಂದ ನಿಯಂತ್ರಿತನಾಗಿ, ದೂಷಣೆಯನ್ನು ಪ್ರಚೋದಿಸದ ಮನುಷ್ಯನು ಈ ಪ್ರಪಂಚದಲ್ಲಿದ್ದಾನೆಯೇ?

೧೩ ಯಾರಿಗೂ ಕೇಡುಮಾಡದ, ಶುದ್ಧನಾದ ಮತ್ತು ನಿಷ್ಕಪಟಿಯಾದ ಒಬ್ಬ ವ್ಯಕ್ತಿಗೆ, ಮತ್ತೊಬ್ಬ ಮನುಷ್ಯನು ನೋವನ್ನುಂಟುಮಾಡಿದರೆ, ಗಾಳಿಗೆ ವಿರುದ್ಧವಾಗಿ ಎರಚಲಾದ ಧೂಳು, ಎರಚಿದವರ ಮೇಲೆ ಬೀಳುವಂತೆ, ಆ ಪಾಪಕೃತ್ಯದ ಫಲವು ಆ ಅವಿವೇಕಿಯ ಮೇಲೇ ಬೀಳುತ್ತದೆ.

# ೪. ಕೋಪ ಮತ್ತು ದ್ವೇಷ

೧ ಕೋಪವನ್ನು ಪೋಷಿಸದಿರು. ನಿನ್ನ ಶತ್ರುತ್ವವನ್ನು ಮರೆ. ನಿನ್ನ ಶತ್ರುಗಳ ಮನಸ್ಸನ್ನು ಪ್ರೀತಿಯಿಂದ ಜಯಿಸು.

೨ ಇದು ಬೌದ್ಧ ಜೀವನ ಮಾರ್ಗ.

೩ ಕೋಪದ ಜ್ವಾಲೆಯನ್ನು ಶಮನಗೊಳಿಸಬೇಕು.

೪ "ಅವನು ನನ್ನನ್ನು ಹೀನಾಮಾನ ಬಯ್ದ, ನನ್ನನ್ನು ಹಿಂಸಿಸಿದ, ನನ್ನನ್ನು ಸೋಲಿಸಿದ, ನನ್ನನ್ನು ದೋಚಿದ" ಎಂಬ ಆಲೋಚನೆಗೆ ಯಾರು ಇಂಬುಕೊಡುತ್ತಾನೋ, ಅಂಥವನಲ್ಲಿ ಕೋಪವು ಎಂದೂ ಶಮನವಾಗುವುದಿಲ್ಲ.

೫ ಅಂತಹ ಆಲೋಚನೆಗೆ ಯಾರು ಇಂಬು ಕೊಡುವುದಿಲ್ಲವೋ, ಅಂಥವನಲ್ಲಿ ಕೋಪವು ಶಮನವಾಗುತ್ತದೆ.

೬ ಶತ್ರುವು ಶತ್ರುವಿಗೆ, ದ್ವೇಷಿಯು ದ್ವೇಷಿಗೆ ಕೇಡನ್ನುಂಟುಮಾಡುತ್ತಾನೆ. ಆದರೆ ಕೇಡು ಯಾರಿಗೆ ಸೇರಿದ್ದು?

೭ ಒಬ್ಬ ಮನುಷ್ಯನು ತನ್ನ ಕೋಪವನ್ನು ಪ್ರೀತಿಯಿಂದ ಹೋಗಲಾಡಿಸಿಕೊಳ್ಳಲಿ, ಕೆಟ್ಟದ್ದನ್ನು ಒಳ್ಳೆಯದರಿಂದ ಹೋಗಲಾಡಿಸಿಕೊಳ್ಳಲಿ, ದುರಾಸೆಯನ್ನು ಧಾರಾಳತನದಿಂದ ಹೋಗಲಾಡಿಸಿಕೊಳ್ಳಲಿ, ಸುಳ್ಳನ್ನು ಸತ್ಯದಿಂದ ನಾಶಮಾಡಲಿ.

೮ ಸತ್ಯವನ್ನು ಹೇಳು, ಕೋಪಕ್ಕೊಳಗಾಗಬೇಡ, ನಿನ್ನನ್ನು ಏನೂ ಕೇಳದಿದ್ದಾಗಲು ಕೊಡು.

೯ ಮನುಷ್ಯನು ತನ್ನ ಕೋಪವನ್ನು ಬಿಡಲಿ. ತನ್ನ ಗರ್ವವನ್ನು ಕೊನೆಗಾಣಿಸಲಿ. ಆತನು ತನ್ನ ಬಂಧನವನ್ನೆಲ್ಲಾ ಪರಿಹರಿಸಿಕೊಳ್ಳಲಿ. ನಾಮ ಮತ್ತು ರೂಪಗಳಲ್ಲಿ ಲಿಪ್ತನಾಗದ ಯಾವುದೂ ತನ್ನದಲ್ಲ ಎನ್ನುವ ಮನುಷ್ಯನಿಗೆ ಯಾವುದೇ ದುಃಖವುಂಟಾಗದು.

೧೦ ಉರುಳುತ್ತಿರುವ ರಥವನ್ನು ನಡೆಸುವಂತೆ, ಯಾವಾತನು ಉಕ್ಕುತ್ತಿರುವ ತನ್ನ ಕೋಪವನ್ನು ಹಿಡಿತದಲ್ಲಿಟ್ಟುಕೊಳ್ಳುತ್ತಾನೆಯೋ, ಅಂಥವನನ್ನು ನಾನು ನಿಜವಾದ ಸಾರಥಿಯೆಂದು ಕರೆಯುತ್ತೇನೆ. ಇತರರು ಕೇವಲ ಲಗಾಮನ್ನು ಹಿಡಿದಿರುವಂಥವರು.

೧೧ ವಿಜಯ ಶತ್ರುತ್ವಕ್ಕೆ ಕಾರಣವಾಗುತ್ತದೆ. ಪರಾಜಿತನಾದವನು ಹತಾಶನಾಗಿ ಕೆಳಗೆ ಬಿದ್ದಿರುತ್ತಾನೆ. ಪ್ರಶಾಂತನಾಗಿರುವಾತ ವಿಜಯ ಮತ್ತು ಪರಾಜಯಗಳೆರಡನ್ನೂ ಬದಿಗೊತ್ತಿ, ಸಂತೋಷದಿಂದ ವಿಶ್ರಮಿಸುತ್ತಿರುತ್ತಾನೆ.

೧೨ ವಿಷಯಲಂಪಟತನದಂತಹ ಬೆಂಕಿಯಿಲ್ಲ, ದ್ವೇಷದಂತಹ ದುರಾದೃಷ್ಟವಿಲ್ಲ. ಇರುವಿಕೆಯ ಅಂಗಗಳಂತಹ ದುರವಸ್ಥೆ ಮತ್ತೊಂದಿಲ್ಲ, ನಿಬ್ಬಾಣದ ಶಾಂತಿಗಿಂತ ಉತ್ಕೃಷ್ಟವಾದ ಸುಖವು ಮತ್ತೊಂದಿಲ್ಲ.

೧೩ ಯಾವ ಕಾಲದಲ್ಲಿಯೂ ದ್ವೇಷವು ದ್ವೇಷದಿಂದ ನಾಶವಾಗುವುದಿಲ್ಲ. ದ್ವೇಷವು ಪ್ರೀತಿಯಿಂದ ನಾಶವಾಗುತ್ತದೆ. ಇದು ಒಂದು ಪ್ರಾಚೀನ ನಿಯಮ.

## ೫ ಮನುಷ್ಯ, ಮನಸ್ಸು ಮತ್ತು ಕಲ್ಮಷಗಳನ್ನು ಕುರಿತ ವಿಚಾರ

೧ ಮನುಷ್ಯನು ಆತನ ಮನೋವರ್ತನೆಯಂತೆ ಇರುತ್ತಾನೆ.

೨ ಸನ್ಮಾರ್ಗದಲ್ಲಿ ನಡೆಯಲು ಮೊದಲ ಹೆಜ್ಜೆಯೆಂದರೆ, ಒಳ್ಳೆಯದನ್ನು ಅರಸುವಂತೆ ಮನಸ್ಸಿಗೆ ತರಬೇತಿ ಕೊಡುವುದು.

೩ ಬೌದ್ಧ ಜೀವನಮಾರ್ಗದಲ್ಲಿ ಇದೊಂದು ಪ್ರಮುಖ ಉಪದೇಶ.

೪ ಎಲ್ಲರದಲ್ಲಿಯೂ ಮೂಲಾಂಶ ಅಂದರೆ ಮನಸ್ಸು. ಮನಸ್ಸು ಸರ್ವೋತ್ಕೃಷ್ಟವಾದುದು.

೫ ಒಬ್ಬ ಮನುಷ್ಯನು ಕೆಟ್ಟದ್ದನ್ನು ಮಾತನಾಡಿದರೆ ಅಥವಾ ಮಾಡಿದರೆ, ಗಾಡಿಯನ್ನು ಎಳೆಯುತ್ತಿರುವ ಪ್ರಾಣಿಯ ಗೊರಸನ್ನು ಹಿಂಬಾಲಿಸಿ ಉರುಳುವ ಚಕ್ರದಂತೆ, ದುಃಖವು ಅವನನ್ನು ಹಿಂಬಾಲಿಸುತ್ತದೆ.

೬ ಪ್ರಾಮಾಣಿಕ ಮನಸ್ಸಿನಿಂದ ಒಬ್ಬ ಮನುಷ್ಯನು ಮಾತನಾಡಿದರೆ, ಅಥವಾ ಕಾರ್ಯ ಮಾಡಿದರೆ, ಸಂತೋಷವು ಅವನನ್ನು ಎಲ್ಲೂ ಬಿಡದೆ ನೆರಳಿನಂತೆ ಹಿಂಬಾಲಿಸುತ್ತದೆ.

೭ ಈ ಹುಚ್ಚು ಮತ್ತು ಅಸ್ಥಿರವಾದ ಮನಸ್ಸನ್ನು ಕಾಯುವುದು ಕಷ್ಟ. ಅದಕ್ಕೆ ಮಾರ್ಗದರ್ಶನ ಮಾಡುವುದು ಕಷ್ಟ. ಬಿಲ್ಲಿನ ನಾರಿ ಬಾಣವನ್ನು ನೇರವಾಗಿಸುವಂತೆ, ವಿವೇಕಿಯಾದ ಮನುಷ್ಯನು ಮನಸ್ಸನ್ನು ನೇರವಾಗಿಸುತ್ತಾನೆ.

೮ ನೀರಿನಲ್ಲಿ ವಾಸಿಸುವ ಮೀನನ್ನು ನೀರಿನಿಂದ ಹೊರಗೆ ನೆಲದ ಮೇಲೆ ಎಸೆದಾಗ ಅದು ವಿಲಿವಿಲಿ ಒದ್ದಾಡುವಂತೆ ಮಾರನ ಮುಷ್ಟಿಗೆ ಸಿಕ್ಕಿ ವಂಚಿತವಾದ ಮನಸ್ಸು, ಅದೇ ರೀತಿ ಚಡಪಡಿಸುತ್ತದೆ.

೯ ಸದಾ ಸಂತೋಷವನ್ನು ಅರಸಿಕೊಂಡು ಹೋಗುವ ಮನಸ್ಸು ಅಸ್ಥಿರವಾಗಿರುತ್ತದೆ. ಅದನ್ನು ನಿಯಂತ್ರಿಸುವುದು ಕಷ್ಟ ಸಾಧ್ಯ. ಮನಸ್ಸನ್ನು ಸಾಂತ್ವನಗೊಳಿಸುವುದು ಒಳ್ಳೆಯದು. ಸಾಂತ್ವನಗೊಂಡ ಮನಸ್ಸು ಸಂತೋಷವನ್ನು ತರುತ್ತದೆ.

೧೦ ನಿನ್ನನ್ನು ನೀನೇ ಒಂದು ದ್ವೀಪವನ್ನಾಗಿಸಿಕೋ. ಕಷ್ಟಪಟ್ಟು ಶ್ರಮಿಸು. ನಿನ್ನ ಮನಸ್ಸಿನ ಕಲ್ಮಷಗಳು ಹೊರದೂಡಲ್ಪಟ್ಟಾಗ ಮತ್ತು ನೀನು ಪಾಪಪ್ರಜ್ಞೆಯಿಂದ ಮುಕ್ತನಾದಾಗ, ಉತ್ತಮ ಸ್ವರ್ಗೀಯ ಪ್ರಪಂಚವನ್ನು ಪ್ರವೇಶಿಸುತ್ತೀಯೆ.

೧೧ ಬೆಳ್ಳಿಯ ಕಲ್ಮಷಗಳನ್ನು ಅಕ್ಕಸಾಲಿಗನು ಹೊರಹಾಕುವಂತೆ ವಿವೇಕಿಯಾದ ಮನುಷ್ಯನು ತನ್ನ ಮನಸ್ಸಿನ ಕಲ್ಮಷಗಳನ್ನು ಒಂದೊಂದಾಗಿ, ಸ್ವಲ್ಪಸ್ವಲ್ಪವಾಗಿ, ಕಾಲಕಾಲಕ್ಕೆ ಹೊರಕ್ಕೆ ತೂರಲಿ.

೧೨ ಕಬ್ಬಿಣದಿಂದ ಹೊರಹೊಮ್ಮಿದ ಕಲ್ಮಷವು, ಹೊರಹೊಮ್ಮಿದಾಗ ಅದನ್ನೇ ನಾಶಮಾಡುವಂತೆ ಆಕ್ರಮಣಕಾರಿಯ ಸ್ವಂತ ಕೃತ್ಯಗಳು ಅವನನ್ನು ಕೆಟ್ಟ ಮಾರ್ಗಕ್ಕೆ ಕೊಂಡೊಯ್ಯುತ್ತದೆ..

೧೩ ಆದರೆ ಎಲ್ಲಾ ವಿಧವಾದ ದೋಷಗಳಿಂದ ನಿಕೃಷ್ಟವಾದ ದೋಷವೊಂದಿದೆ. ಅಜ್ಞಾನವೇ ಅಂತಹ ಅತ್ಯಂತ ಹೀನಾಯವಾದ ದೋಷ. ಓ ಭಿಕ್ಷುಗಳೆ! ಆ ದೋಷವನ್ನು ಕಿತ್ತೊಗೆಯಿರಿ ಮತ್ತು ದೋಷರಹಿತರಾಗಿರಿ.

೧೪ ಲಜ್ಜೆಯಿಲ್ಲದ ಮನುಷ್ಯನಿಗೆ ಬದುಕುವುದು ಸುಲಭ. ಅವನು ಇಲ್ಲಿರುವ ಕಾಗೆ, ಕೇಡಿಗ, ನಿಂದಕ, ಭಂಡ ಮತ್ತು ನೀಚ ಮನುಷ್ಯ.

೧೫ ಯಾವಾತನು ಯಾವಾಗಲೂ ಶುದ್ಧವಾದುದನ್ನು ಅರಸುತ್ತಾನೋ, ಯಾವಾತನು ಅನಾಸಕ್ತನೋ, ಮೌನಿಯೋ, ದೋಷರಹಿತನೋ ಮತ್ತು ಬುದ್ಧಿಶಾಲಿಯೋ ಅಂತಹ ವಿನಯಶೀಲ ಮನುಷ್ಯನಿಗೆ

ಬದುಕಿ ಬಾಳುವುದು ಕಷ್ಟ.

೧೬ ಯಾವಾತನು ಜೀವವನ್ನು ನಾಶಮಾಡುತ್ತಾನೋ, ಅಸತ್ಯವನ್ನು ಹೇಳುತ್ತಾನೋ, ಪ್ರಪಂಚದಲ್ಲಿ ತನಗೆ ಕೊಡದ ವಸ್ತುವನ್ನು ತೆಗೆದುಕೊಳ್ಳುತ್ತಾನೋ, ಮತ್ತೊಬ್ಬನ ಹೆಂಡತಿಯ ಸಂಗಮಾಡತ್ತಾನೋ, ಮತ್ತು;

೧೭ ಯಾವಾತನು ತಾನೇ ಅಮಲೇರುವ ಪಾನೀಯಗಳಿಗೆ ವಶವರ್ತಿಯಾಗುತ್ತಾನೋ, ಅಂಥವನು, ಈ ಪ್ರಪಂಚದಲ್ಲಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಾನೆ.

೧೮ ಎಲೈ ಮನುಷ್ಯನೆ! ಅಸಂಯಮಿಗಳು ಕೆಟ್ಟ ಸ್ಥಿತಿಯಲ್ಲಿರುತ್ತಾರೆ. ಇದನ್ನು ತಿಳಿದಿರು. ಬಹಳ ಕಾಲ ದುರಾಸೆ ಮತ್ತು ಪಾಪಕೃತ್ಯಗಳು ನಿನ್ನನ್ನು ದುಃಖಕ್ಕೆ ಒಳಗಾಗಿಸದಂತೆ ನೋಡಿಕೋ.

೧೯ ಪ್ರಪಂಚವು ತನ್ನ ನಂಬಿಕೆಗನುಗುಣವಾಗಿ ಅಥವಾ ತನ್ನ ಇಚ್ಛೆಯಂತೆ ಕೊಡುತ್ತದೆ. ಯಾವ ಮನುಷ್ಯನು, ಇತರರಿಗಾಗಿ ಕೊಡಲ್ಪಟ್ಟ ಆಹಾರ ಮತ್ತು ಪಾನೀಯಗಳಿಗಾಗಿ ತಳಮಳಗೊಳ್ಳುತ್ತಾನೋ, ಆತನು ಹಗಲಾಗಲಿ ಅಥವಾ ರಾತ್ರಿಯಾಗಲಿ ವಿಶ್ರಾಂತಿ ಕಾಣಲಾರ.

೨೦ ಆ ಭಾವನೆಯು ಯಾರಲ್ಲಿ ನಾಶವಾಗಿರುತ್ತದೆಯೋ ಅಥವಾ ಅದರ ಮೂಲೋತ್ಪಾಟನೆಯಾಗಿರುತ್ತದೋ ಅಂಥವನು ಹಗಲುರಾತ್ರಿಗಳಲ್ಲಿ ವಿಶ್ರಾಂತಿ ಪಡೆಯುತ್ತಾನೆ.

೨೧ ರಾಗದಂತಹ ಬೆಂಕಿ ಮತ್ತೊಂದಿಲ್ಲ. ದುರಾಸೆಯಂತಹ ರಭಸದ ಪ್ರವಾಹ ಮತ್ತೊಂದಿಲ್ಲ.

೨೨ ಇತರರ ತಪ್ಪು ಸುಲಭವಾಗಿ ಕಾಣುತ್ತದೆ. ಆದರೆ ತನ್ನದೇ ಆದ ತಪ್ಪನ್ನು ಕಾಣುವುದು ಕಷ್ಟ. ತನ್ನ ನೆರೆಹೊರೆಯವರ ತಪ್ಪುಗಳನ್ನು ಮನುಷ್ಯನು ಕಸದಂತೆ ಸೋಸಿ ತೂರುತ್ತಾನೆ. ಆದರೆ ತನ್ನದೇ ಆದ ತಪ್ಪುಗಳನ್ನು ಮೋಸಗಾರನು ಕೆಟ್ಟದಾಳಗಳನ್ನು ಆಟಗಾರನಿಗೆ ಮರೆಮಾಚುವಂತೆ ಮರೆಮಾಚುತ್ತಾನೆ.

೨೩ ಒಬ್ಬ ಮನುಷ್ಯನು ಇತರರ ತಪ್ಪುಗಳನ್ನೇ ಕಾಣುತ್ತಿದ್ದರೆ ಮತ್ತು ತನಗೆ ನೋವಾಗುತ್ತದೆಂದು ಯಾವಾಗಲೂ ಭಾವಿಸುತ್ತಿದ್ದರೆ, ಅದರಿಂದ ಅವನ ಸ್ವಂತ ರಾಗಭಾವಗಳು ಬೆಳೆಯುತ್ತವೆ ಮತ್ತು ಅವನು ಆ ರಾಗಭಾವಗಳನ್ನು ನಾಶಮಾಡುವುದರಿಂದ ಬಹುದೂರ ಉಳಿಯುತ್ತಾನೆ.

೨೪ ಕೆಟ್ಟ ಕೃತ್ಯಗಳನ್ನು ಮಾಡದಿರು, ಒಳ್ಳೆಯದನ್ನು ಬೆಳೆಸಿಕೋ, ನಿನ್ನ ಸ್ವಂತ ಆಲೋಚನೆಗಳನ್ನು ಶುದ್ಧಿ ಮಾಡಿಕೋ — ಇದೇ ಬುದ್ಧನ ಬೋಧನೆ.

## ೬. ಅಹಂ ಮತ್ತು ಅಹಂ-ನಿಗ್ರಹವನ್ನು ಕುರಿತ ವಿಚಾರ

೧ ಯಾರಿಗಾದರೂ ಅಹಂ ಇದ್ದರೆ, ಆತನು ಅಹಂ ನಿಗ್ರಹವನ್ನು ಅನುಷ್ಠಾನ ಮಾಡಲಿ.

೨ ಇದೇ ಬೌದ್ಧ ಜೀವನಮಾರ್ಗ.

೩ ಅಹಂ ಅಹಂನ ಪ್ರಭು. ಮತ್ತಾರು ತಾನೇ ಪ್ರಭುವಾಗಿರಬಲ್ಲರು? ಅಹಂ ಅನ್ನು ಚೆನ್ನಾಗಿ ನಿಯಂತ್ರಿಸಿದ ವ್ಯಕ್ತಿಯು ಯಾರೂ ಕಾಣಲಾಗದಂತಹ ಪ್ರಭುವನ್ನು ಕಂಡುಕೊಳ್ಳುತ್ತಾನೆ.

೪ ಪೂಜ್ಯ ಅರ್ಹಂತ ಆರ್ಯ ಹಾಗೂ ಸದ್ಗುಣಿಯ ನಿಯಮವನ್ನು ನಿಂದಿಸಿ, ಸುಳ್ಳು ಸಿದ್ಧಾಂತವನ್ನು

ಅನುಸರಿಸುವಂತಹ ಅವಿವೇಕಿ ಮನುಷ್ಯನು, ಕತ್ತಕ ಜೊಂಡಿನ ಹಣ್ಣುಗಳಂತೆ, ತನ್ನ ಸ್ವಂತ ವಿನಾಶಕ್ಕೆ ತಾನೇ ಕಾರಣನಾಗುತ್ತಾನೆ.

೫ ತನಗೆ ತಾನೇ ಕೇಡನ್ನು ಮಾಡಿಕೊಳ್ಳುವವ ತಾನೇ ದುಃಖಪಡುತ್ತಾನೆ. ತಾನೇ ಕೇಡನ್ನು ನೋಡಿಕೊಳ್ಳದವ ತಾನೇ ಶುದ್ಧನಾಗುತ್ತಾನೆ. ಶುದ್ಧ ಮತ್ತು ಅಶುದ್ಧಗಳು ತಾವೇ ಏಳುತ್ತವೆ–ಬೀಳುತ್ತವೆ. ಯಾರೂ ಮತ್ತೊಬ್ಬನನ್ನು ಶುದ್ಧಗೊಳಿಸಲಾರ.

೬ ಕೇವಲ ಇಂದ್ರಿಯ ಭೋಗೋಪಭೋಗಗಳನ್ನು ಪಡೆಯುವುದನ್ನೇ ಇಚ್ಛಿಸುವಾತನ ಇಂದ್ರಿಯಗಳು ಅನಿಯಂತ್ರಿತವಾಗಿರುತ್ತವೆ, ತನ್ನ ಆಹಾರದಲ್ಲಿ ಅತಿಯಾಗಿರುತ್ತಾನೆ. ಸೋಮಾರಿ ಮತ್ತು ದುರ್ಬಲನಾಗಿರುತ್ತಾನೆ. ಗಾಳಿಯು ಒಂದು ದುರ್ಬಲವಾದ ಮರವನ್ನು ಬುಡಮೇಲು ಮಾಡುವಂತೆ, ಆತನ ವಿಪರೀತ ವರ್ತನೆಯೇ ಅವನನ್ನು ನಿಜವಾಗಿಯೂ ಹಾಳುಮಾಡುತ್ತದೆ.

೭ ಇಂದ್ರಿಯ ಭೋಗಗಳನ್ನು ಅರಸದೆ ಜೀವಿಸುವಂತಹ ಮನುಷ್ಯನು ಜಿತೇಂದ್ರಿಯ, ಮಿತಾಹಾರಿ, ನಂಬಿಗಸ್ಥ ಮತ್ತು ಬಲಶಾಲಿ ಆಗಿರುತ್ತಾನೆ. ಬಂಡೆಗಲ್ಲಿನ ಪರ್ವತವನ್ನು ಗಾಳಿಯು ಹೇಗೆ ಅಲುಗಿಸಲಾರದೋ ಹಾಗೆ, ಆತನನ್ನು ನಾಶಪಡಿಸಲು ಯಾವ ಶಕ್ತಿಗೂ ಸಾಧ್ಯವಿಲ್ಲ.

೮ ತಾನು ತನಗೆ ಪ್ರಿಯನಾಗಿದ್ದಲ್ಲಿ, ಅಂತಹ ಮನುಷ್ಯನು ತನ್ನ ಬಗ್ಗೆಯೇ ಸೂಕ್ಷ್ಮ ಎಚ್ಚರಿಕೆ ವಹಿಸಬೇಕು.

೯ ಮೊದಲು ನಿನ್ನನ್ನು ನೀನೇ ಸನ್ಮಾರ್ಗದಲ್ಲಿ ನೆಲೆಗೊಳಿಸಿಕೋ. ಅನಂತರ ನೀನು ಇತರರಿಗೆ ಬೋಧನೆ ಮಾಡಬಹುದು. ವಿವೇಕಿ ಮನುಷ್ಯನು ಅಪಕೀರ್ತಿಗೆ ತುತ್ತಾಗುವಂತಹ ಸನ್ನಿವೇಶಕ್ಕೆ ಅವಕಾಶ ಕೊಡದಿರಲಿ.

೧೦ ಸ್ವಯಂ ನಿಯಂತ್ರಣ ಕಷ್ಟವೆಂದು ಅವರು ಹೇಳುತ್ತಾರೆ. ಇತರರಿಗೆ ತಾನು ಬೋಧನೆ ಮಾಡಿದಂತೆ, ತಾನೂ ಕೂಡ ರೂಪುಗೊಂಡರೆ, ಹಾಗೆ ಸ್ವಯಂ ನಿಯಂತ್ರಿತ ವ್ಯಕ್ತಿಯು ಇತರರ ಮೇಲೂ ನಿಯಂತ್ರಣವನ್ನು ಹೊಂದಬಲ್ಲ.

೧೧ ತಾನು ಮಾಡಿದ ಪಾಪಕೃತ್ಯಕ್ಕೆ ತಾನೇ ಬೆಲೆಯನ್ನು ತೆತ್ತ ಮನುಷ್ಯನು ತನ್ನನ್ನು ತಾನೇ ಶುದ್ಧಿಗೊಳಿಸಿಕೊಳ್ಳುತ್ತಾನೆ. ಒಳ್ಳೆಯದು ಮತ್ತು ಕೆಟ್ಟದ್ದು ಶುದ್ಧಿಗೊಳ್ಳುತ್ತವೆ. ಯಾವಾತನೂ ಮತ್ತೊಬ್ಬನನ್ನು ಶುದ್ಧಿಗೊಳಿಸಲಾರ.

೧೨ ಯುದ್ಧದಲ್ಲಿ ಸಾವಿರ ಸಾವಿರ ಜನರನ್ನು ಗೆದ್ದವನು ಯೋಧನೆನಿಸಿದರೂ ಕೂಡ, ತನ್ನನ್ನು ತಾನೇ ಗೆದ್ದವನು ಅಂತಹ ಎಲ್ಲಾ ಯೋಧರಿಗಿಂತ ಶ್ರೇಷ್ಠನೆನಿಸುತ್ತಾನೆ.

೧೩ ಮೊದಲು ನಿನ್ನನ್ನು ನೀನೇ ಸನ್ಮಾರ್ಗದಲ್ಲಿ ಸ್ಥಾಪಿಸಿಕೋ. ಅನಂತರ ಇತರರಿಗೆ ನೀನು ಬೋಧನೆ ಮಾಡಬಹುದು. ವಿವೇಕವಂತನು ಆಕ್ಷೇಪಣೆಗೆ ಅವಕಾಶವನ್ನು ಒದಗಿಸದಿರಲಿ.

೧೪ ಇತರರಿಗೆ, ಬೋಧಿಸಿದಂತೆ ತಾನೂ ಕೂಡ ರೂಪುಗೊಂಡರೆ, ಸ್ವಯಂ–ನಿಯಂತ್ರಿತನಾದರೆ, ಇತರರ ಮೇಲೆ ನಿಯಂತ್ರಣ ಹೊಂದಬಲ್ಲ. ಸ್ವಯಂ ನಿಯಂತ್ರಣ ಕಷ್ಟವೆಂದು ಅವರು ಹೇಳುತ್ತಾರೆ.

೧೫ ನಿಜವಾಗಿ ಪ್ರತಿಯೊಬ್ಬನು ತನಗೆ ತಾನೆ ಪಾಲಕ. ಅಲ್ಲಿ ಮತ್ತೊಬ್ಬ ಪಾಲಕ ಹೇಗಿದ್ದಾನು? ತನ್ನನ್ನು ತಾನೇ ಕಾಯ್ದುಕೊಂಡವನು. ಸಿಗಲು ಸಾಧ್ಯವಿಲ್ಲದಂತಹ ಪಾಲಕನನ್ನು ಪಡೆಯುತ್ತಾನೆ.

೧೬ ಒಬ್ಬ ಮನುಷ್ಯನು ತನಗೆ ತಾನೇ ಪ್ರಿಯನಾಗಿದ್ದಲ್ಲಿ, ತನ್ನ ಮೇಲೆ ತಾನೇ ಸೂಕ್ಷ್ಮ ರೀತಿಯಲ್ಲಿ ಎಚ್ಚರವಹಿಸಲಿ.

೧೭ ತಾನು ಮಾಡಿದ ದುಷ್ಕೃತ್ಯಕ್ಕೆ ದಂಡ ತೆರುವ ಮನುಷ್ಯ ತನ್ನನ್ನು ತಾನೇ ಶುದ್ಧೀಕರಿಸಿಕೊಳ್ಳುತ್ತಾನೆ.

ಒಳ್ಳೆಯದು ಮತ್ತು ಕೆಟ್ಟದ್ದು ನಾನಾ ರೀತಿ ಶುದ್ಧೀಕರಿಸಲ್ಪಡುತ್ತವೆ. ಒಬ್ಬನು ಮತ್ತೊಬ್ಬನನ್ನು ಶುದ್ಧೀಕರಿಸಲು ಸಾಧ್ಯವಿಲ್ಲ.

೧೮ ಮನುಷ್ಯನು ನಿಜವಾಗಿಯೂ ತನಗೆ ತಾನೇ ಪಾಲಕ, ಮತ್ತೊಬ್ಬ ಪಾಲಕ ಹೇಗಿದ್ದಾನು? ತನ್ನನ್ನು ತಾನೇ ಕಾಯ್ದುಕೊಂಡವನು, ಸಿಗಲು ಸಾಧ್ಯವಿಲ್ಲದಂತಹ ಪಾಲಕನನ್ನು ಪಡೆಯುತ್ತಾನೆ.

## ೭. ಪ್ರಜ್ಞೆ, ನ್ಯಾಯ ಮತ್ತು ಸತ್ಸಂಗ

೧ ಪ್ರಜ್ಞಾವಂತನಾಗಿರು, ನ್ಯಾಯನಿಷ್ಠನಾಗಿರು ಮತ್ತು ಸತ್ಸಂಗವನ್ನು ಆರಿಸಿಕೋ.

೨ ಇದೇ ಬೌದ್ಧ ಜೀವನ ಮಾರ್ಗ.

೩ ಯಾವುದರಿಂದ ದೂರವಿರಬೇಕು ಎಂದು ತೋರಿಸುವಂತಹ, ನಿನಗೆ ಬುದ್ಧಿವಾದವನ್ನು ಹೇಳುವಂತಹ ಮತ್ತು ಬುದ್ಧಿವಂತನಾದ ಆ ಪ್ರಾಜ್ಞನನ್ನು ನೀನು ರಹಸ್ಯ ಸಂಪತ್ತಿನ ಬಗ್ಗೆ ಹೇಳುವ ಮನುಷ್ಯನನ್ನು ಹಿಂಬಾಲಿಸು. ಅವನನ್ನು ಹಿಂಬಾಲಿಸುವಂಥವನಿಗೆ ಹಿಂಬಾಲಿಸುವಂತೆ ಆತನನ್ನು ಕೇಡಾಗದು.

೪ ಅವನು ನಿನಗೆ ಎಚ್ಚರಿಕೆ ಕೊಡಲು, ನಿನ್ನ ತಪ್ಪು ತೋರಿಸಲು, ನಿನಗೆ ಬೋಧಿಸಲು ಮತ್ತು ಅನುಚಿತವಾದುದನ್ನು ಮಾಡದಂತೆ ತಡೆಯಲು ನೀನು ಅವಕಾಶ ಕೊಡು. ಅವನು ಒಳ್ಳೆಯವರ ಪ್ರೀತಿಪಾತ್ರನು. ಕೆಟ್ಟವರು ಅವನನ್ನು ದ್ವೇಷಿಸುತ್ತಾರೆ.

೫ ಕೆಟ್ಟ ಕೃತ್ಯಗಳನ್ನು ಮಾಡುವಂಥವರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಡ. ಕೀಳು ಜನರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಡ. ಒಳ್ಳೆಯವರನ್ನು ನಿನ್ನ ಸ್ನೇಹಿತರನ್ನಾಗಿ ಮಾಡಿಕೋ. ಮನುಷ್ಯರಲ್ಲಿ ಅತ್ಯುತ್ತಮರಾದವರ ಸ್ನೇಹವನ್ನು ಸಂಪಾದಿಸಿಕೋ.

೬ ಧಮ್ಮವನ್ನು ಯಾವಾತ ಆಸ್ವಾದಿಸುತ್ತಾನೋ, ಆತನು ಪ್ರಶಾಂತಮನಸ್ಕನಾಗಿ ಸಂತಸದಿಂದ ಜೀವಿಸುತ್ತಾನೆ. ಉತ್ತಮರು ಉಪದೇಶಿಸಿದ ಧಮ್ಮದಲ್ಲಿ ಭಿಕ್ಷುವು ಯಾವಾಗಲೂ ಆನಂದಿಸುತ್ತಾನೆ.

೭ ಬಾವಿ ತೋಡುವವರು, ತಮಗೆ ಬೇಕಾದ ಕಡೆಗೆ ನೀರು ಹರಿಸುತ್ತಾರೆ, ಬಿಲ್ಲುಗಾರರು ಬಾಣವನ್ನು ಬಗ್ಗಿಸುತ್ತಾರೆ, ಬಡಗಿಗಳು ಮರದ ದಿಮ್ಮಿಯನ್ನು ಬಗ್ಗಿಸುತ್ತಾರೆ. ಪ್ರಾಜ್ಞರು ತಮ್ಮನ್ನು ತಾವೇ ರೂಪಿಸಿಕೊಳ್ಳುತ್ತಾರೆ.

೮ ಒಂದು ಗಟ್ಟಿಯಾದ ಬಂಡೆಯು ಗಾಳಿಗೆ ಅಲುಗದಿರುವಂತೆ, ಪ್ರಾಜ್ಞರು ಸ್ತುತಿನಿಂದೆಗಳ ಪ್ರಭಾವಕ್ಕೆ ಒಳಗಾಗುವುದಿಲ್ಲ.

೯ ಧಮ್ಮವನ್ನು ಕೇಳಿದ ಮೇಲೆ, ಆಳವಾದ ತೆರೆಗಳಿಲ್ಲದ, ನಿಶ್ಚಲವಾದ ಸರೋವರದಂತೆ, ಪ್ರಾಜ್ಞರು ಪ್ರಶಾಂತರಾಗುತ್ತಾರೆ.

೧೦ ವಾಸ್ತವವಾಗಿ, ಒಳ್ಳೆಯ ಮನುಷ್ಯರು, ಎಲ್ಲಾ ಸಂದರ್ಭಗಳಲ್ಲಿಯೂ ಎಚ್ಚರಿಕೆಯಿಂದ ವರ್ತಿಸುತ್ತಾರೆ. ಇಂದ್ರಿಯ ತೃಪ್ತಿಯ ಇಚ್ಛೆಯಿಂದ ಅವರು ಮಾತನಾಡುವುದಿಲ್ಲ. ಸುಖ ಅಥವಾ ದುಃಖದ ಸಂಸರ್ಗವಾದಾಗಲೂ, ಪ್ರಾಜ್ಞರು ಆನಂದತುಂದಿಲರಾಗುವುದಿಲ್ಲ ಅಥವಾ ಹತಾಶರಾಗುವುದಿಲ್ಲ.

೧೧ ಪಾಪಕೃತ್ಯವು ಇನ್ನೂ ಪರಿಪಕ್ವವಾಗದಿದ್ದಾಗ, ಅದು ಜೇನಿನಂತೆ ಸಿಹಿ ಎಂದು ಅವಿವೇಕಿಯು ತಿಳಿಯುತ್ತಾನೆ. ಆದರೆ ಪಾಪಕೃತ್ಯವು ಪರಿಪಕ್ವವಾದಾಗ ಆತನು ದುಃಖಿತನಾಗುತ್ತಾನೆ.

೧೨ ತನ್ನ ದುಷ್ಕೃತ್ಯಗಳನ್ನು ತಾನು ಯಾವಾಗ ಮಾಡುತ್ತೇನೆ ಎಂಬ ಅರಿವು ಅವಿವೇಕಿಗೆ ಇರುವುದಿಲ್ಲ. ಆದರೆ ಬೆಂಕಿಯಲ್ಲಿ ಉರಿದುಹೋಗುವಂತೆ ಆ ದುಷ್ಟನು ತನ್ನ ದುಷ್ಕೃತ್ಯಗಳಿಂದಲೇ ಸುಟ್ಟು ಬೂದಿಯಾಗುತ್ತಾನೆ.

೧೩ ಎಚ್ಚರದಿಂದಿರುವವನಿಗೆ ರಾತ್ರಿ ದೀರ್ಘವಾಗುತ್ತದೆ; ಆಯಾಸಗೊಂಡವನಿಗೆ ಒಂದು ಮೈಲಿಯೂ ದೂರವೆನಿಸುತ್ತದೆ. ನಿಜವಾದ ಧಮ್ಮವನ್ನು ತಿಳಿಯದ ಅವಿವೇಕಿಗೆ ಜೀವನವು ದೀರ್ಘವಾಗುತ್ತದೆ.

೧೪ ಒಬ್ಬ ಪ್ರಯಾಣಿಕನು, ತನಗಿಂತ ಉತ್ತಮನಾದವನ್ನು ಅಥವಾ ತನಗೆ ಸಮಾನನಾದವನನ್ನು ಸಂಧಿಸದಿದ್ದರೆ, ಆತನು ಏಕಾಕಿಯಾಗಿಯೇ ಪ್ರಯಾಣಿಸಲಿ ತನ್ನ ಏಕಾಕಿ ಪ್ರಯಾಣವನ್ನು ನಿಶ್ಚಿತವಾಗಿ ಮುಂದುವರೆಸಲಿ. ಅವಿವೇಕಿಗಳ ಜೊತೆ ಸ್ನೇಹಸಂಬಂಧ ಸಾಧ್ಯವಿಲ್ಲ.

೧೫ "ಈ ಗಂಡುಮಕ್ಕಳು ನನಗೆ ಸೇರಿದವರು, ಈ ಸಂಪತ್ತು ನನಗೆ ಸೇರಿದ್ದು", ಎಂಬಂತಹ ಆಲೋಚನೆಗಳಿಂದ, ಅವಿವೇಕಿಯು ಅತೀವ ಸಂಕಟಕ್ಕೊಳಗಾಗುತ್ತಾನೆ. ಅವನು ಸ್ವತಃ ತನಗೆ ತಾನೇ ಸೇರಿಲ್ಲದಿರುವಾಗ, ಗಂಡುಮಕ್ಕಳು ಮತ್ತು ಸಂಪತ್ತು ಅದು ಹೇಗೆ ಅವನಿಗೆ ಸೇರಿರುತ್ತವೆ?

೧೬ ತನ್ನ ಅವಿವೇಕಿತನವನ್ನು ಅರಿತುಕೊಳ್ಳುವಂಥ ಅವಿವೇಕಿಯು, ಕೊನೆಯ ಪಕ್ಷ ಅಷ್ಟರಮಟ್ಟಿಗಾದರೂ ವಿವೇಕಿಯೆನಿಸುತ್ತಾನೆ. ಆದರೆ ತಾನು ವಿವೇಕಿಯೆಂದು ತಿಳಿಯುವ ಅವಿವೇಕಿಯು, ವಾಸ್ತವವಾಗಿ, ಅವಿವೇಕಿ ಎಂದೇ ಕರೆಯಲ್ಪಡುತ್ತಾನೆ.

೧೭ ಸೌಟು ಸಾರಿನ ರುಚಿಯನ್ನು ಎಷ್ಟರಮಟ್ಟಿಗೆ ತಿಳಿಯಬಲ್ಲಹೋ ಅಷ್ಟರಮಟ್ಟಿಗೆ ತನ್ನ ಜೀವಿತಾದ್ಯಂತ ಅವಿವೇಕಿಯೊಬ್ಬನು, ವಿವೇಕಿಯೊಬ್ಬನ ಸಂಗಡವಿದ್ದರೂ ಕೂಡ, ಸತ್ಯವನ್ನು ತಿಳಿಯಲಾರ.

೧೮ ಒಬ್ಬ ಬುದ್ಧಿವಂತನಾದ ಮನುಷ್ಯನು ಒಬ್ಬ ಪ್ರಾಜ್ಞನ ಜೊತೆ ಒಂದು ನಿಮಿಷವಿದ್ದರೂ ನಾಲಿಗೆಯು ಸಾರಿನ ರುಚಿಯನ್ನು ಕಂಡುಕೊಳ್ಳುವಂತೆ ತಕ್ಷಣ ಸತ್ಯದರ್ಶನ ಪಡೆಯಬಲ್ಲ.

೧೯ ಅತಿಕಡಿಮೆ ತಿಳಿವಳಿಕೆಯುಳ್ಳ ಅವಿವೇಕಿಗಳು, ತಮಗೆ ತಾವೇ ಕಡುಶತ್ರುಗಳಾಗಿರುತ್ತಾರೆ – ಯಾಕೆಂದರೆ, ಕಹಿಫಲಗಳನ್ನು ಕೊಡುವಂತಹ ಪಾಪಕೃತ್ಯಗಳನ್ನು ಅವರು ಮಾಡುತ್ತಾರೆ.

೨೦ ತನ್ನ ಯಾವ ಕೃತ್ಯಕ್ಕಾಗಿ ಒಬ್ಬ ಮನುಷ್ಯನು ತಾನು ಪಶ್ಚಾತ್ತಾಪಪಡಲೇಬೇಕಾಗುತ್ತದೆಯೋ ಮತ್ತು ಅದರ ಫಲವನ್ನು ದುಃಖಸಂತಪ್ತ ಮುಖದಿಂದ ಅಳುತ್ತಾ ಸ್ವೀಕರಿಸಬೇಕಾಗುತ್ತದೆಯೋ ಅಂತಹ ಕೃತ್ಯ ಸರಿಯಾದುದಲ್ಲ.

೨೧ ತನ್ನ ಯಾವ ಕಾರ್ಯಕ್ಕಾಗಿ ಒಬ್ಬ ಮನುಷ್ಯನು ಪಶ್ಚಾತ್ತಾಪಪಡಬೇಕಾಗಿಲ್ಲವೊ ಮತ್ತು ಅದರ ಸತ್ಫಲವನ್ನು ಸಂತೋಷದಿಂದ ಮತ್ತು ಹರ್ಷಚಿತ್ತದಿಂದ ಸ್ವೀಕರಿಸುತ್ತಾನೋ, ಅಂತಹ ಕಾರ್ಯ ಸತ್ಕಾರ್ಯ.

೨೨ ತಾನು ಮಾಡಿದ ಕೆಟ್ಟ ಕಾರ್ಯವು ಪರಿಪಕ್ವವಾಗುವವರೆಗೂ, ಅವಿವೇಕಿಯು, ಅದು ಜೇನಿನಂತಿದೆ ಎಂದು ಯೋಚಿಸುತ್ತಾನೆ. ಆದರೆ ಅದು ಪರಿಪಕ್ವವಾದಾಗ ಆತನು ದುಃಖವನ್ನನುಭವಿಸುತ್ತಾನೆ.

೨೩ ತಾನು ಮಾಡಿದ ದುಷ್ಕೃತ್ಯವು, ಅದನ್ನು ತಿಳಿದ ನಂತರ, ಅವಿವೇಕಿಗೆ ದುಃಖದಾಯಕವಾಗಿ ಪರಿಣಮಿಸುತ್ತದೆ. ಅನಂತರ ಅದು ಆತನ ಉಲ್ಲಾಸಕರ ಜೀವನವನ್ನು ನಾಶಮಾಡುತ್ತದೆಯಲ್ಲದೆ ಅದು ಆತನ ತಲೆಯನ್ನು ಸೀಳಿಬಿಡುತ್ತದೆ.

೨೪ ಸುಳ್ಳು ಪ್ರಸಿದ್ಧಿಗಾಗಿ, ಭಿಕ್ಕುಗಳಲ್ಲಿ ಮೊದಲನೆಯವನಾಗಬೇಕೆಂದು, ಆಶ್ರಮಗಳಲ್ಲಿ ಮುಖ್ಯಸ್ಥನ ಸ್ಥಾನ ಪಡೆಯಲೆಂದು ಮತ್ತು ಇತರ ಜನರ ನಡುವೆ ಪೂಜೆಗೊಳ್ಳಬೇಕೆಂದು, ಅವಿವೇಕಿಯು ಆಸೆಪಡುವನು.

೨೫ ಒಬ್ಬ ಮನುಷ್ಯನ ತಲೆ ನರೆತ ಮಾತ್ರಕ್ಕೆ ಅವನು ಹಿರಿಯನೆನಿಸುವುದಿಲ್ಲ. ಅವನ ವಯಸ್ಸು ಪರಿಪಕ್ವವಾಗಿರಬಹುದು. ಆದರೆ ಆತನನ್ನು "ಮುದುಕ ಮತ್ತು ನಿಷ್ಪ್ರಯೋಜಕ" ಎಂದು ಕರೆಯಲಾಗುತ್ತದೆ.

೨೬ ಯಾವಾತನಲ್ಲಿ ಸತ್ಯ, ಸದ್ಗುಣ, ಕರುಣೆ, ಸಂಯಮ, ಸೌಮ್ಯಭಾವ, ಈ ಗುಣಗಳಿರುತ್ತವೋ ಮತ್ತು ಯಾವಾತನು ಮನಸ್ಸಿನ ಕಲ್ಮಷಗಳಿಂದ ಮುಕ್ತನೋ, ಅಂಥವನನ್ನು ಹಿರಿಯನೆಂದು ಕರೆಯಲಾಗುತ್ತದೆ.

೨೭ ಅಸೂಯಾಪರನೂ, ಲೋಭಿಯೂ ಮತ್ತು ಅಪ್ರಾಮಾಣಿಕನೂ ಆದ ಮನುಷ್ಯನು ವಾಚಾಳಿತನದಿಂದ ಅಥವಾ ಸೌಂದರ್ಯದಿಂದ ಗೌರವಾನ್ವಿತನಾಗುವುದಿಲ್ಲ.

೨೮ ಯಾರಲ್ಲಿ ಇದೆಲ್ಲಾ ನಾಶವಾಗಿದೆಯೋ ಮತ್ತು ಮೂಲೋತ್ಪಾಟನೆಯಾಗಿದೆಯೋ ಅಂಥವನು ದ್ವೇಷ ಮತ್ತು ಪಾಪಗಳಿಂದ ಮುಕ್ತನಾಗಿ ಪೂಜ್ಯನೆನಿಸುತ್ತಾನೆ.

೨೯ ಒಂದು ವಿಷಯವನ್ನು ಹಿಂಸೆಯಿಂದ ನಿರ್ಧರಿಸುವಾತ ನ್ಯಾಯನಿಷ್ಠನಲ್ಲ. ಯಾವಾತನು ಸರಿ ತಪ್ಪುಗಳೆರಡನ್ನೂ ವಿವೇಚಿಸಬಲ್ಲನೋ, ಯಾವಾತನು ವಿದ್ಯಾವಂತನಾಗಿರುವನೋ ಮತ್ತು ಇತರರಿಗೆ ಹಿಂಸೆಯಿಂದಲ್ಲದೆ, ಧಮ್ಮದಿಂದ ಮಾರ್ಗದರ್ಶನ ಮಾಡುತ್ತಾನೋ, ಮತ್ತು ಧಮ್ಮದ ಪಾಲಕನಾಗಿರುತ್ತಾನೋ, ಆತನು ಬುದ್ಧಿವಂತನೂ ನ್ಯಾಯನಿಷ್ಠ ಎನಿಸುತ್ತಾನೆ.

೩೦ ಒಬ್ಬ ಮನುಷ್ಯನು ನಿರರ್ಥಕವಾಗಿ ಅತಿಯಾಗಿ ಮಾತಮಾಡುವುದರಿಂದ ವಿದ್ಯಾವಂತನೆನಿಸುವುದಿಲ್ಲ. ಯಾವಾತನು ತಾಳ್ಮೆಯಿಂದಿರುವನೊ ದ್ವೇಷ ಮತ್ತು ಭಯಗಳಿಂದ ಮುಕ್ತನಾಗಿರುವನೊ ಆತನು ವಿದ್ಯಾವಂತನೆನಿಸುತ್ತಾನೆ.

೩೧ ಅತಿಯಾಗಿ ಮಾತನಾಡುವವನು ಧಮ್ಮಾವಲಂಬಿ ಎನಿಸುವುದಿಲ್ಲ. ಒಬ್ಬ ಮನುಷ್ಯನು ಅಲ್ಪ ವಿದ್ಯಾವಂತನಾಗಿದ್ದರೂ ಕೂಡ, ಆತನು ಧಮ್ಮದ ಸ್ವರೂಪವನ್ನು ಕಂಡುಕೊಂಡಿದ್ದರೆ ಧಮ್ಮಾವಲಂಬಿಯಾಗಿರುತ್ತಾನೆ; ಎಂದೂ ಧಮ್ಮವನ್ನು ಕಡೆಗಣಿಸದ ವ್ಯಕ್ತಿಯಾಗುತ್ತಾನೆ.

೩೨ ಒಬ್ಬ ಮನುಷ್ಯನು, ತನ್ನ ಜೊತೆಜೊತೆಗೇ ನಡೆಯುವಂಥ, ವಿವೇಕವಂತನಾದ ಮತ್ತು ಸಾತ್ವಿಕ ಜೀವನ ನಡೆಸುವಂತಹ ಒಬ್ಬ ವಿವೇಕಿಯಾದ ಮನುಷ್ಯನನ್ನು ಕಂಡುಕೊಂಡರೆ, ಎಲ್ಲಾ ಅಪಾಯಗಳನ್ನೂ ಪರಿಹರಿಸಿಕೊಂಡು, ಸಂತೋಷಚಿತ್ತನಾಗಿ ಆದರೆ ವಿಚಾರಪರನಾಗಿ ಅವನ ಜೊತೆಜೊತೆಯಾಗಿ ಇವನೂ ನಡೆಯಬಹುದು.

೩೩ ತನ್ನ ಸಹಚರನಾಗಿರಲು ಒಬ್ಬ ವಿವೇಕಿಯಾದ ಸ್ನೇಹಿತನನ್ನು ಪಡೆಯಲಾರದ, ವಿವೇಕವಂತನು ತನ್ನ ಪರಾಜಿತ ರಾಜ್ಯವನ್ನು ಹಿಂದೆ ಬಿಟ್ಟುಹೋಗುವ ರಾಜನಂತೆ, ಅರಣ್ಯದ ಆನೆಯಂತೆ ಒಂಟಿಯಾಗಿ ಮುನ್ನಡೆದರೂ ಸಾತ್ವಿಕ ಜೀವನ ನಡೆಸುತ್ತಾನೆ.

೩೪ ಒಂಟಿಯಾಗಿ ಬಾಳುವುದು ಉತ್ತಮ. ಅವಿವೇಕಿಯೊಂದಿಗೆ ಸ್ನೇಹವೆಂಬುದಿಲ್ಲ. ಅರಣ್ಯದಲ್ಲಿನ ಆನೆಯಂತೆ, ಯಾವುದೇ ಇಚ್ಛೆಯಿಲ್ಲದೆ ಮನುಷ್ಯನು ಒಂಟಿಯಾಗಿ ನಡೆಯಲಿ, ಆತನು ಯಾವುದೇ ಪಾಪಕೃತ್ಯ ಮಾಡಿದಿರಲಿ.

೩೫ ಯಾವುದೇ ಕಾರಣವಿರಲಿ, ಸಮಯ ಬಂದಾಗ ಸ್ನೇಹಿತರು ಹಿತವಾಗುತ್ತಾರೆ. ಸುಖಾನುಭವವು ಹಿತವಾಗುತ್ತದೆ. ಕಾರಣವೇನಿದ್ದರೂ ಒಳ್ಳೆಯ ಕಾರ್ಯ ಹಿತವಾಗಿರುತ್ತದೆ. ಸಾಯುವ ಸಮಯದಲ್ಲಿಯೂ ಒಂದು ಒಳ್ಳೆಯ ಕಾರ್ಯ ಹಿತವಾಗಿರುತ್ತದೆ. ಎಲ್ಲಾ ರೀತಿಯ ಸಂತಾಪವನ್ನು ಬಿಟ್ಟುಬಿಡುವುದು ಹಿತಕರವಾಗಿರುತ್ತದೆ.

೩೬ ಪ್ರಪಂಚದಲ್ಲಿ ತಾಯಿಯ ಸ್ಥಾನ ಹಿತಕರವಾಗಿರುತ್ತದೆ. ತಂದೆಯ ಸ್ಥಾನ ಹಿತಕರವಾಗಿರುತ್ತದೆ. ಸಮಣನ

ಸ್ಥಾನ ಹಿತಕರವಾಗಿರುತ್ತದೆ.

೩೭ ವೃದ್ಧಾಪ್ಯದವರೆಗೂ ನಿಲ್ಲುವಂತಹ ಸದ್ಗುಣವು ಹಿತಕರವಾಗಿರುತ್ತದೆ. ಗಟ್ಟಿಯಾಗಿ ಬೇರೂರಿದ ನಂಬಿಕೆ ಹಿತಕರವಾಗಿರುತ್ತದೆ. ಬುದ್ಧಿಶಕ್ತಿಯ ಸಾಧನೆ ಹಿತಕರವಾಗಿರುತ್ತದೆ. ದುಷ್ಕೃತ್ಯಗಳಿಂದ ವಿಮುಖನಾಗುವುದು ಹಿತಕರವಾಗಿರುತ್ತದೆ.

೩೮ ಅವಿವೇಕಿಗಳ ಗುಂಪಿನಲ್ಲಿ ಯಾರು ಸಹಚರಿಸುತ್ತಾನೋ ಆತನು ಬಹಳ ತೀವ್ರತರವಾಗಿ ದುಃಖಿತನಾಗುತ್ತಾನೆ. ಶತ್ರುವಿನ ಜೊತೆಯಿದ್ದಂತೆ, ಅವಿವೇಕಿಗಳ ಸಂಗವು ಯಾವಾಗಲೂ ಸಂಕಟಕಾರಿ. ವಿವೇಕವಂತರ ಸಂಗವು ಬಂಧುಗಳ ಸಮಾಗಮದಂತೆ ಹಿತಕರವಾಗಿರುತ್ತದೆ.

೩೯ ಆದ್ದರಿಂದ ನಾವು, ವಿವೇಕಿಯೂ, ಬುದ್ಧಶಾಲಿಯೂ, ವಿದ್ಯಾವಂತನೂ ಹೆಚ್ಚು ಕಷ್ಟಸಹಿಷ್ಣುವೂ, ಕರ್ತವ್ಯಶೀಲನೂ ಮತ್ತು ಉತ್ತಮನೂ ಆದವನನ್ನೇ ಹಿಂಬಾಲಿಸಬೇಕು. ಚಂದ್ರನು ನಕ್ಷತ್ರಪಥವನ್ನು ಹಿಂಬಾಲಿಸುವಂತೆ ನಾವು ಅಂತಹ ಒಳ್ಳೆಯವನೂ, ವಿವೇಕವಂತನೂ ಆದವನನ್ನೇ ಹಿಂಬಾಲಿಸಬೇಕು.

೪೦ ದುರಭಿಮಾನವನ್ನು ಹಿಂಬಾಲಿಸದಿರು, ಪ್ರೀತಿ ಮತ್ತು ಇಂದ್ರಿಯ ಭೋಗೋಪಭೋಗಗಳ ಸುಖಾನುಭವವನ್ನು ಹಿಂಬಾಲಿಸದಿರು. ಯಾವನು ಪ್ರಾಮಾಣಿಕನಾಗಿರುತ್ತಾನೋ, ಅವನು ಸಮೃದ್ಧ ಸಂತಸವನ್ನು ಪಡೆಯುತ್ತಾನೆ.

೪೧ ಒಬ್ಬ ವಿದ್ಯಾವಂತ ಮನುಷ್ಯನು, ಪ್ರಾಮಾಣಿಕತನದಿಂದ ತನ್ನ ದುರಭಿಮಾನವನ್ನು ಹೊರದೂಡಿದಾಗ, ವಿವೇಕದ ಸೋಪಾನದ ಎತ್ತರವನ್ನು ಏರುತ್ತಾ ಆ ಪ್ರಾಜ್ಞನು ಅವಿವೇಕಿಗಳನ್ನು ಕಾಣುತ್ತಾನೆ. ಪ್ರಸ್ಥಭೂಮಿಯಲ್ಲಿ ನಿಂತಿರುವವರನ್ನು ನೋಡುತ್ತಿರುವ ಪರ್ವತದ ಮೇಲಿರುವವರಂತೆ, ಆ ಪ್ರಾಜ್ಞನು, ದುಃಖದಿಂದ ಮುಕ್ತನಾಗಿ, ದುಃಖಿಸುತ್ತಿರುವ ಜನಸಮೂಹವನ್ನು ನೋಡುತ್ತಾನೆ.

೪೨ ವಿವೇಚನಾರಹಿತರ ನಡುವೆ ಪ್ರಜ್ಞಾವಂತನಾಗಿ, ನಿದ್ರಿಸುತ್ತಿರುವವರ ನಡುವೆ ಎಚ್ಚರದಿಂದಿರುವವನಾಗಿ, ಸುಸ್ತಾದ ಕುದುರೆಯನ್ನು ಹಿಂದೆಬಿಟ್ಟು ಮುಂದುವರಿಯುವ ಶಕ್ತಿಶಾಲಿಯಂತೆ, ಪ್ರಾಜ್ಞ ಮನುಷ್ಯನು ಮುಂದುವರೆಯುತ್ತಾನೆ.

## ೮. ಆಲೋಚನಾಶೀಲತೆ ಮತ್ತು ಪ್ರಜ್ಞಾಶೀಲತೆಗಳನ್ನು ಕುರಿತ ವಿಚಾರ

೧ ಪ್ರತಿಯೊಂದರಲ್ಲೂ ಆಲೋಚನಾಶೀಲನಾಗಿರು; ಪ್ರತಿಯೊಂದರಲ್ಲೂ ಪ್ರಜ್ಞಾಶೀಲನಾಗಿರು; ಎಲ್ಲಾ ವಿಷಯಗಳಲ್ಲೂ ಪ್ರಾಮಾಣಿಕನಾಗಿರು ಮತ್ತು ಧೈರ್ಯದಿಂದಿರು.

೨ ಇದೇ ಬೌದ್ಧ ಜೀವನಮಾರ್ಗ.

೩ ನಾವು ಏನಾಗಿದ್ದೀವೋ ಅದೆಲ್ಲಾ ನಾವು ಮಾಡಿದ ಆಲೋಚನೆಯ ಫಲ; ಅದು ನಮ್ಮ ಆಲೋಚನೆಗಳ ಮೇಲೆ ರೂಪಗೊಂಡಿದೆ, ಅದು ನಿಮ್ಮ ಆಲೋಚನೆಗಳ ಮೇಲೆ ರೂಪಗೊಂಡಿದೆ. ಒಬ್ಬ ಮನುಷ್ಯನು ಕೆಟ್ಟ ಆಲೋಚನೆಯಿಂದ ಮಾತನಾಡಿದರೆ ಅಥವಾ ಕಾರ್ಯ ಮಾಡಿದರೆ, ನೋವು ಅವನನ್ನು ಹಿಂಬಾಲಿಸುತ್ತದೆ. ಶುದ್ಧ ಆಲೋಚನೆಯ ಮೂಲಕ ಒಬ್ಬ ಮನುಷ್ಯನು ಮಾತನಾಡಿದರೆ ಅಥವಾ ಕಾರ್ಯ ಮಾಡಿದರೆ, ಸಂತೋಷವು ಅವನನ್ನು ಹಿಂಬಾಲಿಸುತ್ತದೆ. ಆದ್ದರಿಂದ ಶುದ್ಧ ಆಲೋಚನೆಗಳು ಮುಖ್ಯ.

೪ ಅವಿಚಾರಿಯಾಗಿರಬೇಡ, ನಿನ್ನ ಆಲೋಚನೆಯ ಮೇಲೆ ನಿನ್ನ ಗಮನವಿರಲಿ! ಕೆಸರಿನಲ್ಲಿ ಹೂತುಕೊಂಡಿರುವ ಆನೆಯು ಹೇಗೆ ಹೊರಬರುತ್ತದೋ ಹಾಗೆ, ನಿನ್ನನ್ನು ನೀನೇ ಕೆಟ್ಟ ಮಾರ್ಗದಿಂದ ಬಿಡಿಸಿಕೋ.

೫ ಪ್ರಾಜ್ಞನು ತನ್ನ ಆಲೋಚನೆಗಳನ್ನು ಕಾಯ್ದುಕೊಳ್ಳುತ್ತಾನೆ. ಏಕೆಂದರೆ, ಅವುಗಳನ್ನು ಕಾಣುವುದು ಕಷ್ಟ. ಅವುಗಳು ಕೃತ್ರಿಮವಾಗಿರುತ್ತದೆ ಮತ್ತು ಮನಸ್ಸು ಬಂದಂತೆಲ್ಲಾ ಅವು ಹೊರನುಗ್ಗುತ್ತವೆ; ಚೆನ್ನಾಗಿ ಕಾಯ್ದುಕೊಂಡಿರಲಾರದ ಆಲೋಚನೆಗಳು ಸಂತೋಷವನ್ನು ತರುತ್ತವೆ.

೬ ಚೆನ್ನಾಗಿ ಕಟ್ಟಿಲ್ಲದ ಒಂದು ಗುಡಿಸಲನ್ನು ಮಳೆಯು ಕೆಡವಿಹಾಕುವಂತೆ ಆಲೋಚನಾಶೀಲವಲ್ಲದ ಮನಸ್ಸಿನ ಮೂಲಕ ಭಾವೋದ್ರೇಕ ತೂರಿಬರುತ್ತದೆ.

೭ ಚೆನ್ನಾಗಿ ಬಿಗಿದ ಚಾವಣಿಯ ಮನೆಯನ್ನು ಮಳೆಯು ಹಾಳುಮಾಡದಿರುವಂತೆ, ಚೆನ್ನಾಗಿ ಆಲೋಚನಾಶೀಲವಾಗಿರುವ ಮನಸ್ಸಿನ ಮೂಲಕ ಭಾವೋದ್ರೇಕ ಹೊರಹೊಮ್ಮಲಾರದು.

೮ ನನ್ನ ಈ ಮನಸ್ಸು ತನ್ನ ಇಷ್ಟದಂತೆ, ತಾನು ಅಪೇಕ್ಷಿಸಿದಂತೆ, ತನಗೆ ಆಹ್ಲಾದಕರವಾದ ರೀತಿಯಲ್ಲಿ ಈ ಮೊದಲು ಅಲೆಯುತ್ತಿತ್ತು. ಅದರೆ ಅಂಕುಶವನ್ನು ಹಿಡಿದಿರುವ ಕೋಪೋದ್ರಿಕ್ತ ಆನೆಯನ್ನು ಮಾವುತನು ನಿಗ್ರಹಿಸುವಂತೆ, ಈಗ ನಾನು ಅದನ್ನು ಸಂಪೂರ್ಣವಾಗಿ ನಿಗ್ರಹಿಸಬಲ್ಲೆ.

೯ ತನಗೆ ಇಚ್ಛೆ ಬಂದ ಕಡೆ ಓಡುತ್ತಿರುವ ಮತ್ತು ಬಲವಾದ ಹಿಡಿತದಲ್ಲಿಟ್ಟುಕೊಳ್ಳಲು ಕಷ್ಟಸಾಧ್ಯವೆನಿಸಿರುವ ಮನಸ್ಸನ್ನು ಪಳಗಿಸುವುದು ಒಳ್ಳೆಯದು. ಪಳಗಿದ ಮನಸ್ಸು ಸಂತೋಷವನ್ನು ತರುತ್ತದೆ.

೧೦ ಬಹುದೂರ ಓಡಬಲ್ಲ ಮನಸ್ಸಿಗೆ ಕಡಿವಾಣ ಹಾಕುವಂಥವರು, ಅಳಿಯಾಸೆಯಿಂದ ಕೂಡಿದ ಪ್ರಲೋಭನೆಯ ಬಂಧನಗಳಿಂದ ಮುಕ್ತರಾಗುತ್ತಾರೆ.

೧೧ ಒಬ್ಬ ಮನುಷ್ಯನ ನಂಬಿಕೆಯು ಅಸ್ಥಿರವಾಗಿದ್ದರೆ, ನಿಜವಾದ ಧಮ್ಮವನ್ನು ಆತನು ತಿಳಿಯದಿದ್ದರೆ, ಆತನ ಮನಃಶಾಂತಿಯು ಕದಡಿದ್ದರೆ, ಅಂಥವನ ಜ್ಞಾನವು ಎಂದೂ ಪರಿಪೂರ್ಣವಾಗಿರುವುದಿಲ್ಲ.

೧೨ ಒಬ್ಬ ದ್ವೇಷಿಗೆ ಮತ್ತೊಬ್ಬ ದ್ವೇಷಿಯು ಅಥವಾ ಒಬ್ಬ ಶತ್ರುವಿಗೆ ಮತ್ತೊಬ್ಬ ಶತ್ರುವು ಏನೇ ಮಾಡಿರಲಿ, ತಪ್ಪಾಗಿ ನಿರ್ದೇಶಿತವಾದ ಆತನ ಮನಸ್ಸೇ ಆತನಿಗೆ ಹೆಚ್ಚು ತೊಂದರೆ ಮಾಡಿಯೇ ಮಾಡುತ್ತದೆ.

೧೩ ಚೆನ್ನಾಗಿ ನಿರ್ದೇಶಿತವಾದ ಮನಸ್ಸು ನಮಗೆ ಮಾಡುವಷ್ಟು ಒಳಿತನ್ನು ತಾಯಿಯಾಗಲಿ, ತಂದೆಯಾಗಲಿ ಅಥವಾ ಮತ್ತಾರೆ ಬಂಧು–ಬಾಂಧವರಾಗಲಿ ಮಾಡಲು ಸಾಧ್ಯವಿಲ್ಲ.

## ೯. ಜಾಗರೂಕತೆ, ಶ್ರದ್ಧೆ ಮತ್ತು ಧೈರ್ಯಗಳನ್ನು ಕುರಿತ ವಿಚಾರ

೧ ಪ್ರಜ್ಞಾವಂತ ಮನುಷ್ಯನು ತಾನು ಜಾಗರೂಕನಾಗಿದ್ದಾಗ, ಅಲಕ್ಷತೆಯನ್ನು ತನ್ನಿಂದ ಹೊರದೂಡಿ ವಿವೇಕದ ಗೋಪುರವನ್ನು ಹತ್ತುತ್ತಾ ಆತನು ಕೆಳಗೆ ನೋಡಿದರೆ ಪರ್ವತದ ಮೇಲೆ ನಿಂತ ವಿವೇಕಿಯು ಕಣಿವೆಯಲ್ಲಿನ ಅವಿವೇಕಗಳನ್ನು ನೋಡುವಂತೆ ದುಃಖದಿಂದ ಮುಕ್ತನಾದ ದುಃಖಸಂತಪ್ತ ಮಾನವ ಜನಾಂಗವನ್ನು ಕಾಣುತ್ತಾನೆ.

೨ ಸಂತಪ್ತ ಸಣ್ಣ ಕುದುರೆಗಳನ್ನು ಹಿಂದೆ ಬಿಟ್ಟು ವೇಗವಾಗಿ ಓಡುತ್ತಿರುವ ಜೂಜಿನ ಕುದುರೆಯಂತೆ, ಅಲಕ್ಷ್ಯತೆಯಿಂದ ಕೂಡಿದವರ ನಡುವೆ ಜಾಗರೂಕರಂತೆ ನಿದ್ರಿಸುತ್ತಿರುವವರ ನಡುವೆ ಎಚ್ಚರದಿಂದಿರುವವರಂತೆ ಪ್ರಾಜ್ಞರು ಮುಂದೆ ಮುಂದೆ ಸಾಗುತ್ತಾರೆ.

೩ ನಿನ್ನನ್ನು ನೀನೇ ಅಲಕ್ಷ್ಯಕ್ಕೆ ಶರಣಾಗಿಸಬೇಡ. ದೈಹಿಕ ಲಾಲಸೆಯೊಂದಿಗೆ ಏನೂ ಸಂಬಂಧವಿಟ್ಟುಕೊಳ್ಳಬೇಡ. ಜಾಗೃತ ಮನುಷ್ಯನು ಧ್ಯಾನಕ್ಕೆ ಒಳಗಾಗುತ್ತಾನೆ.

೪ ಶ್ರದ್ಧೆಯು ಮರಣವಿಲ್ಲದೆಡೆಗೆ ಕೊಂಡೊಯ್ಯುತ್ತದೆ; ನಿರ್ಲಕ್ಷತೆಯೇ ಮರಣಮುಖಿ. ಶ್ರದ್ಧೆಯಲ್ಲಿ ಮುಂದುವರಿಯುವವರು ಸಾಯುವುದಿಲ್ಲ. ಆದರೆ ಗೊತ್ತುಗುರಿಯಿಲ್ಲದಿರುವವರು ಆಗಲೇ ಸತ್ತಂತಿರುತ್ತಾರೆ.

೫ ಮತ್ತೊಂದು ಉದ್ದೇಶಕ್ಕಾಗಿ ಅದು ಎಷ್ಟೇ ಮಹತ್ತ್ವದ್ದೆನ್ನಿಸಿದರೂ ಕೂಡ ನಿನ್ನ ಮೂಲ ಉದ್ದೇಶದಿಂದ ವಿಮುಖನಾಗದಿರು. ನೀನು ಒಂದು ಸಲ ನಿನ್ನ ಗುರಿಯನ್ನು ಕಂಡುಕೊಂಡ ಮೇಲೆ ಅದನ್ನು ಶೀಘ್ರವಾಗಿ ಹಾಗೂ ಗಟ್ಟಿಯಾಗಿ ಹಿಡಿದುಕೋ.

೬ ಎಚ್ಚರಿಕೆಯಿಂದಿರು! ಅಲಸತೆಯನ್ನು ತೊರೆ, ನಿಜವಾದ ಮಾರ್ಗದಲ್ಲಿ ಪ್ರಯಾಣ ಮಾಡು. ಈ ರೀತಿ ಯಾವಾತ ನಡೆಯುತ್ತಾನೋ ಆತನು, ಪ್ರಪಂಚದಲ್ಲಿ ಸುಖವಾಗಿರುತ್ತಾನೆ.

೭ ಸೋಮಾರಿತನ ಒಂದು ಶಾಪ. ಅದು ಅಪಕೀರ್ತಿ ತರುತ್ತದೆ. ನಿರಂತರ ಆಲಸ್ಯವು ಹೊಲೆಗೆಡಿಸುತ್ತದೆ. ಶ್ರಮಪೂರಿತ ಸಾಧನೆಯಿಂದ ಮತ್ತು ಒಳನೋಟದಿಂದ ಅಲಸತೆಯೆಂಬ ವಿಷಪೂರಿತ ಬಾಣವನ್ನು ಕಿತ್ತೆಸೆಯಬೇಕು.

೮ ಅಲಸತೆಯೊಳಗೆ ನಿನ್ನನ್ನು ನೀನೇ ಮುಳುಗಿಸಿಕೊಳ್ಳಬೇಡ. ದೈಹಿಕ ಲಾಲಸೆಯೊಂದಿಗೆ ನಿನ್ನ ಸಂಬಂಧವಿಲ್ಲದಿರಲಿ. ಜಾಗರೂಕರಾದವರು, ಧ್ಯಾನಕ್ಕೆ ಪಕ್ಕಾದವರು ಅಪಾರ ಸಂತೋಷವನ್ನು ಪಡೆಯುತ್ತಾರೆ.

೯ ಶ್ರದ್ಧಾವಂತ ಮನುಷ್ಯನು ಜಾಗೃತನಾಗಿ ಆತನು ಮರೆಗುಳಿಯಾಗದಿದ್ದರೆ, ಆತನ ಕಾರ್ಯಗಳು ಶುದ್ಧವಾಗಿದ್ದರೆ, ಆತನು ವಿಚಾರಪೂರ್ವಕವಾಗಿ ವರ್ತಿಸಿದರೆ, ಆತನು ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಂಡರೆ, ಧಮ್ಮಕ್ಕೆ ಅನುಗುಣವಾಗಿ ಜೀವಿಸಿದರೆ, ಆತನ ಖ್ಯಾತಿ ಹೆಚ್ಚುತ್ತದೆ.

## ೧೦. ದುಃಖ ಮತ್ತು ಸುಖ; ದಾನ ಮತ್ತು ದಯೆಗಳನ್ನು ಕುರಿತ ವಿಚಾರ

೧ ಬಡತನವು ದುಃಖಕ್ಕೆ ಕಾರಣವಾಗುತ್ತದೆ.

೨ ಆದರೆ ಬಡತನದ ನಿರ್ಮೂಲ ಮಾತ್ರವೇ ಸುಖ ನೀಡಲಾರದು.

೩ ಸಂತೋಷವನ್ನುಂಟುಮಾಡುವುದು ಮೇಲುಸ್ತರದ ಜೀವನವಲ್ಲ. ಮೇಲುಸ್ತರದ ಸಂಸ್ಕೃತಿ.

೪ ಇದೇ ಬೌದ್ಧ ಜೀವನಮಾರ್ಗ.

೫ ರೋಗಗಳಲ್ಲೆಲ್ಲಾ ಅತ್ಯಂತ ಹೀನವಾದದ್ದು ಹಸಿವು.

೬ ಆರೋಗ್ಯವು ಕೊಡುಗೆಗಳಲ್ಲಿ ಅತ್ಯಂತ ದೊಡ್ಡದು. ಸಂತೃಪ್ತಿಯು ಸಂಪತ್ತುಗಳಲ್ಲಿ ಅತ್ಯಂತ ಶ್ರೇಷ್ಠವಾದುದು; ವಿಶ್ವಾಸವು ಸಂಬಂಧಗಳಲ್ಲಿ ಅತ್ಯುತ್ಕೃಷ್ಟವಾದುದು; ನಿಬ್ಬಾಣವು ಸುಖಗಳಲ್ಲಿ ಅತ್ಯಂತ ಉತ್ಕೃಷ್ಟವಾದುದು.

೭ ನಮ್ಮನ್ನು ದ್ವೇಷಿಸುವವರನ್ನು ದ್ವೇಷಿಸದೆ, ಸಂತೋಷವಾಗಿ ಬದುಕುವುದನ್ನು ನಾವು ಕಲಿಯಬೇಕು.

೮ ರೋಗಗಳಿಂದ ನರಳುತ್ತಿರುವವರ ನಡುವೆ, ರೋಗಗಳಿಂದ ಮುಕ್ತರಾಗಿ ಸಂತೋಷದಿಂದ ಬಾಳುವುದನ್ನು ನಾವು ಕಲಿಯಬೇಕು.

೯ ದುರಾಸೆಯುಳ್ಳವರ ನಡುವೆ ದುರಾಸೆಯಿಂದ ಮುಕ್ತರಾಗಿ ಸಂತಸದಿಂದಿರುವುದನ್ನು ನಾವು ಕಲಿಯಬೇಕು.

೧೦ ಹೊಲಗಳು ಕಳೆಯಿಂದ ಹಾನಿಗೊಳಗಾಗುವಂತೆ, ಮಾನವತೆಯು ಇಂದ್ರಿಯಲಾಲಸೆಯಿಂದ ಹಾನಿಗೊಳಗಾಗಿದೆ. ಆದ್ದರಿಂದ ಇಂದ್ರಿಯಲಾಲಸೆ ಇಲ್ಲದವರಿಗೆ ಮಾಡಿದ ದಾನವು ಶ್ರೇಷ್ಠ ಫಲವನ್ನು ಕೊಡುತ್ತದೆ.

೧೧ ಹೊಲಗಳು ಕಳೆಗಳಿಂದ ಹಾನಿಗೊಳಗಾಗುವಂತೆ, ದುರಭಿಮಾನದಿಂದ ಮಾನವತೆಯು ಹಾನಿಗೊಳಗಾಗಿದೆ. ಆದ್ದರಿಂದ ದುರಭಿಮಾನದಿಂದ ಮುಕ್ತರಾದವರಿಗೆ ಕೊಟ್ಟ ದಾನವು ಶ್ರೇಷ್ಠ ಪ್ರತಿಫಲ ಕೊಡುತ್ತದೆ.

೧೨ ಹೊಲಗಳು ಕಳೆಗಳಿಂದ ಹಾನಿಗೊಳಗಾಗುವಂತೆ, ಮಾನವತೆಯು ಇಂದ್ರಿಯಲಾಲಸೆಯಿಂದ ಹಾನಿಗೊಳಗಾಗಿದೆ. ಆದ್ದರಿಂದ ಇಂದ್ರಿಯಲಾಲಸೆಯಿಂದ ಮುಕ್ತರಾದವರಿಗೆ ಕೊಟ್ಟ ದಾನವು ಶ್ರೇಷ್ಠ ಪ್ರತಿಫಲ ತರುತ್ತದೆ.

೧೩ ಧಮ್ಮಕ್ಕೆ ಕೊಟ್ಟ ದಾನವು ಎಲ್ಲ ಕೊಡುಗೆಗಳಿಗಿಂತ ಉತ್ತಮವಾದುದು. ಧಮ್ಮದ ಸಿಹಿಯು ಧಮ್ಮವನ್ನೇ ಮೀರಿ ನಿಲ್ಲುತ್ತದೆ. ಧಮ್ಮದಲ್ಲಿನ ಹರ್ಷ ಇತರ ಇಲ್ಲಾ ಹರ್ಷಗಳಿಗೂ ಹೆಚ್ಚಿನದು.

೧೪ ಪರಾಜಿತನಾದವನು ದುಃಖಿಯಾಗುವುದರಿಂದ, ಜಯವು ದ್ವೇಷವನ್ನು ಬೆಳೆಸುತ್ತದೆ. ಜಯಾಪಜಯಗಳೆರಡನ್ನೂ ತೊರೆದವನು ಸಂತೃಪ್ತನು. ಆತನು ಸಂತೋಷದಿಂದಿರುತ್ತಾನೆ.

೧೫ ಭಾವೋದ್ರೇಕಕ್ಕೆ ಸಮಾನವಾದ ಬೆಂಕಿಯಲ್ಲ. ದ್ವೇಷಕ್ಕೆ ಸರಿಸಮಾನವಾದ ಬಾಣವಿಲ್ಲ. ಈ ದೇಹದಂತಹ ಯಾತನೆ ಮತ್ತೊಂದಿಲ್ಲ. ವಿಶ್ರಾಂತಿಗಿಂತ ಮಿಗಿಲಾದ ಸಂತೋಷವಿಲ್ಲ.

೧೬ ಇತರರ ಕೆಟ್ಟ ನುಡಿಗಳು ಮತ್ತು ಕೆಟ್ಟ ಕೃತ್ಯಗಳತ್ತ, ಇತರರು ಏನು ಮಾಡುತ್ತಾರೆ ಮತ್ತು ಏನು ಮಾಡುವುದಿಲ್ಲ ಎಂಬುದರ ಬಗ್ಗೆ ನಿನ್ನ ಗಮನವನ್ನು ಕೇಂದ್ರೀಕರಿಸಬೇಡ. ನೀನು ಏನು ಮಾಡಿದ್ದೀಯೆ ಮತ್ತು ಏನನ್ನು ಮಾಡದೆ ಬಿಟ್ಟಿದ್ದೀಯೆ ಎಂಬುದರತ್ತ ನಿನ್ನ ಗಮನ ಹರಿಸು.

೧೭ ಸಚ್ಚಾರಿತ್ರಶೀಲನಿಗೆ, ಶುದ್ಧತೆಯನ್ನು ಅರಸುವಾತನಿಗೆ, ನಿರ್ಲಿಪ್ತನಿಗೆ, ವಿಮುಕ್ತನಿಗೆ ಜೀವನದಲ್ಲಿ ಪರಿಶುದ್ಧತೆ ಬಯಸುವಾತನಿಗೆ, ಬದುಕು ಎಂದೆಂದೂ ಕಷ್ಟಕರವಾಗುತ್ತದೆ.

೧೮ ಚೈತನ್ಯಪೂರ್ಣವಾದ ಕುದುರೆಯು ಚಾವಟಿಯ ಏಟಿಗೆ ಅವಕಾಶ ಕೊಡದಿರುವಂತೆ, ವಿಷಾದಕ್ಕೆ ಯಾವುದೇ ಅವಕಾಶ ಕೊಡದಿರುವಂತಹ, ದೋಷರಹಿತನಾದ ಮನುಷ್ಯನು ಈ ಪ್ರಪಂಚದಲ್ಲಿರುವನೆ? ಚಾವಟಿಯ ಅಗತ್ಯವಿಲ್ಲದ ಚೈತನ್ಯಪೂರ್ಣ ಕುದುರೆಯಂತೆ ಉಜ್ವಲನಾಗಿರು, ಚುರುಕಾಗಿರು.

೧೯ ಯಾರಿಗೂ ಕಠಿಣವಾಗಿ ಮಾತನಾಡದಿರು. ಯಾರಿಗೆ ನೀನು ಕಠಿಣವಾಗಿ ಮಾತನ್ನಾಡುತ್ತೀಯೋ ಅವರೂ ಕೂಡ ಅದೇ ರೀತಿ ನಿನಗೆ ಕಠಿಣ ನುಡಿಗಳನ್ನಾಡುತ್ತಾರೆ. ಕ್ರೋಧದ ನುಡಿ ಯಾತನಾಮಯವಾಗಿರುತ್ತದೆ. ಏಟಿಗೆ ಏಟು ನಿನ್ನನ್ನು ತಟ್ಟುತ್ತದೆ.

೨೦ ರಥಕ್ಕೆ ಕಡಾಣಿ ಹೇಗಿರುತ್ತದೋ ಹಾಗೆ, ಪ್ರಪಂಚಕ್ಕೆ ಸ್ವಾತಂತ್ರ್ಯ, ವಿನಯಶೀಲತೆ, ವಿಶ್ವಾಸ ಮತ್ತು ನಿಃಸ್ವಾರ್ಥತೆಗಳಿರುತ್ತದೆ.

೨೧ ಇದೇ ಬೌದ್ಧ ಜೀವನಮಾರ್ಗ.

## ೧೧. ಕಪಟತನವನ್ನು ಕುರಿತ ವಿಚಾರ

೧ ಯಾರೊಬ್ಬರೂ ಸುಳ್ಳು ಮಾತನಾಡದಿರಲಿ. ಮತ್ತೊಬ್ಬರು ಸುಳ್ಳು ಮಾತನಾಡಲು ದಾರಿತೋರದಿರಲಿ; ಅಲ್ಲದೆ ಸುಳ್ಳು ಮಾತನಾಡುವಂಥವನ ಕಾರ್ಯವನ್ನು ಯಾರೂ ಅನುಮೋದಿಸದಿರಲಿ. ಪ್ರತಿಯೊಂದು ರೀತಿಯ ಸುಳ್ಳು ಹೇಳುವಿಕೆ ಮತ್ತು ಸುಳ್ಳು ಮಾತು ನಿಮ್ಮೆಲ್ಲರಿಂದ ದೂರ ಸರಿಯಲಿ.

೨ ಪರಿಪೂರ್ಣನಾದವನು ಹೇಳಿದಂತೆ ನಡೆಯುತ್ತಾನೆ. ಪರಿಪೂರ್ಣನಾದವನು ನಡೆದಂತೆ ನುಡಿಯುತ್ತಾನೆ. ಆತನು ನಡೆದಂತೆ ನುಡಿಯುವುದು ಮತ್ತು ನುಡಿದಂತೆ ನಡೆಯುವುದರಿಂದಲೇ ಆತನನ್ನು ಪರಿಪೂರ್ಣನೆಂದು ಕರೆಯಲಾಗಿದೆ.

೩ ಇದೇ ಬೌದ್ಧ ಜೀವನಮಾರ್ಗ.

## ೧೨. ಸನ್ಮಾರ್ಗಾನುಸರಣೆಯನ್ನು ಕುರಿತ ವಿಚಾರ

೧ ಸನ್ಮಾರ್ಗವನ್ನು ಆರಿಸಿಕೋ, ಅದನ್ನು ಬಿಡಬೇಡ.

೨ ಅನೇಕ ಮಾರ್ಗಗಳಿವೆ. ಅವೆಲ್ಲವೂ ಸನ್ಮಾರ್ಗಕ್ಕೇ ಕೊಂಡೊಯ್ಯುವುದಿಲ್ಲ.

೩ ಸನ್ಮಾರ್ಗವು ಕೆಲವರ ಸಂತೋಷಕ್ಕಾಗಿ ಮಾತ್ರವಿಲ್ಲ. ಎಲ್ಲರ ಸಂತೋಷಕ್ಕಾಗಿ ಇದೆ.

೪ ಅದು ಪ್ರಾರಂಭದಲ್ಲಿ ಒಳ್ಳೆಯದಾಗಿರಬೇಕು. ಮಧ್ಯದಲ್ಲೂ ಒಳ್ಳೆಯದಾಗಿರಬೇಕು ಮತ್ತು ಕೊನೆಯಲ್ಲೂ ಒಳ್ಳೆಯದಾಗಿರಬೇಕು.

೫ ಸನ್ಮಾರ್ಗವನ್ನು ಅನುಸರಿಸುವುದೆಂದರೆ ಬೌದ್ಧ ಜೀವನ ರೀತಿಯನ್ನು ಅನುಸರಿಸುವುದು.

೬ ಅತ್ಯುತ್ತಮ ಮಾರ್ಗವೆಂದರೆ ಅಷ್ಟಾಂಗ ಮಾರ್ಗ. ನಾಲ್ಕು ಪದಗಳೇ ಅತ್ಯುತ್ತಮ ಸತ್ಯಗಳು. ಸದ್ಗುಣಗಳಲ್ಲಿ ಅತ್ಯುತ್ತಮವಾದುದು ಭಾವೋದ್ರೇಕತೆ ಇಲ್ಲದಿರುವುದು. ಮನುಷ್ಯರಲ್ಲಿ ಅತ್ಯುತ್ತಮನಾದವನೆಂದರೆ ಕಾಣಲು ಕಣ್ಣುಳ್ಳವನು.

೭ ಇದೇ ಮಾರ್ಗ, ಬುದ್ಧಿಯನ್ನು ಶುದ್ಧೀಕರಿಸುವಂತಹ ಮತ್ತೊಂದು ಮಾರ್ಗವಿಲ್ಲ ಈ ಮಾರ್ಗದಲ್ಲಿ ಮುನ್ನಡೆ.

೮ ಈ ಮಾರ್ಗದಲ್ಲಿ ನೀನು ಮುನ್ನಡೆದರೆ, ನಿನ್ನ ನೋವಿಗೆ ಕೊನೆಯನ್ನು ಕಾಣುವೆ. ದೇಹದಿಂದ ಮುಳ್ಳುಗಳನ್ನು ತೆಗೆಯುವ ವಿಧಾನವನ್ನು ನಾನು ಅರ್ಥ ಮಾಡಿಕೊಂಡ ನಂತರ ನಾನು ಈ ಮಾರ್ಗವನ್ನು ಉಪದೇಶಿಸಿದೆ.

೯ ನೀನು ಸ್ವತಃ ಪ್ರಯತ್ನಿಸಬೇಕು. ತಥಾಗತರು ಕೇವಲ ಉಪದೇಶಕರು ಮಾತ್ರ.

೧೦ "ಸೃಷ್ಟಿಯಲ್ಲಿ ಎಲ್ಲಾ ವಸ್ತುಗಳೂ ನಾಶವಾಗುತ್ತದೆ" ಎಂದು ತಿಳಿದವನು ಮತ್ತು ಕಂಡವನು, ನೋವಿನಲ್ಲಿಯೂ ಸಹನೆಯಿಂದಿರುತ್ತಾನೆ.

೧೧ "ಎಲ್ಲಾ ರೂಪಗಳೂ ಅಸತ್ಯವಾದವುಗಳು" ಎಂದು ತಿಳಿದವನು ಮತ್ತು ಕಂಡವನು ನೋವಿನಲ್ಲಿಯೂ ಸಹನೆಯಿಂದಿರುತ್ತಾನೆ.

೧೨ ಮೇಲೇಳಲು ಕಾಲ ಬಂದಾಗಲೂ, ಸಕಾಲದಲ್ಲಿ ಚೇತರಿಸಿಕೊಳ್ಳದವನು, ಯಾವಾತನೂ ಚಿಕ್ಕ ವಯಸ್ಕನಾಗಿಯೂ ಬಲಶಾಲಿಯೂ ಆಗಿದ್ದರೂ ಕೂಡ ಅಲಸಿಯಾಗಿರುತ್ತಾನೋ ಅಂಥವನು

ತನ್ನ ಇಚ್ಛೆ ಮತ್ತು ಆಲೋಚನೆಯಲ್ಲಿ ದುರ್ಬಲನಾಗಿರುತ್ತಾನೆ. ಅಂತಹ ಸೋಮಾರಿ ಮತ್ತು ಅಲಸಿಯು ಜ್ಞಾನದ ಮಾರ್ಗವನ್ನು ಎಂದೆಂದೂ ಕಾಣಲಾರ.

೧೩ ತನ್ನ ನುಡಿಯಲ್ಲಿ ಜಾಗರೂಕನಾಗಿರುತ್ತಾ, ಮನೋ ಸಂಯಮವನ್ನು ಧರಿಸಿ, ಮನುಷ್ಯನು ತನ್ನ ದೇಹದಿಂದ ಯಾವುದೇ ತಪ್ಪನ್ನೂ ಎಂದೆಂದೂ ಮಾಡದಿರಲಿ. ಕ್ರಿಯೆಯ ಈ ಮೂರು ಮಾರ್ಗಗಳನ್ನು ಒಬ್ಬ ಮನುಷ್ಯನು ಸ್ವಚ್ಛವಾಗಿ ಇರಿಸಿಕೊಂಡರೆ, ಪ್ರಾಜ್ಞರು ಬೋಧಿಸಿದ ಮಾರ್ಗವನ್ನು ಆತನು ಪಡೆಯುತ್ತಾನೆ.

೧೪ ವಾಸ್ತವತೆಯ ಮೂಲಕ ಜ್ಞಾನ ದೊರೆಯುತ್ತದೆ. ವಾಸ್ತವತೆಯ ಅಭಾವವಿದ್ದಾಗ, ಜ್ಞಾನ ನಷ್ಟವಾಗುತ್ತದೆ. ಲಾಭ ಮತ್ತು ನಷ್ಟಗಳ ಈ ಜೋಡಿಮಾರ್ಗವನ್ನು ತಿಳಿದ ಮನುಷ್ಯ, ಜ್ಞಾನವೃದ್ಧಿಯಾಗುವಂತಹ ಮಾರ್ಗದಲ್ಲಿ ತನ್ನನು ತಾನೇ ತೊಡಗಿಸಿಕೊಳ್ಳಲಿ.

೧೫ ಚೈತ್ರದ ತಾವರೆಯಂತೆ, ನಿನ್ನ ಕೈಯಿಂದಲೇ ಸ್ವಪ್ರೇಮವನ್ನು ತೊರೆದುಬಿಡು. ಶಾಂತಿಮಾರ್ಗವನ್ನು ನೆಮ್ಮಿ ನಡೆ. ನಿರ್ವಾಣವು ಸುಗತನಿಂದ ತೋರಿಸಲ್ಪಟ್ಟಿದೆ.

೧೬ ಅನ್ಯಾಯದ ಕಾನೂನನ್ನು ಅನುಸರಿಸಬೇಡ. ವಿಚಾರಹೀನನಾಗಿ ಜೀವಿಸಬೇಡ. ಸುಳ್ಳು ಸಿದ್ಧಾಂತವನ್ನು ಅನುಸರಿಸಬೇಡ.

೧೭ ಎಚ್ಚರದಿಂದಿರು! ಅಲಸಿಯಾಗಬೇಡ. ಸದ್ಗುಣದ ನಿಯಮವನ್ನು ಪಾಲಿಸು. ಸದ್ಗುಣಿ ಇಹ ಪ್ರಪಂಚದಲ್ಲೇ ಆನಂದದಿಂದ ವಿಶ್ರಮಿಸುತ್ತಾನೆ.

೧೮ ಮೊದಲು ಎಚ್ಚರಗೇಡಿಯಾಗಿದ್ದು, ಅನಂತರ ಸಮಚಿತ್ತತೆ ಪಡೆದುಕೊಳ್ಳುವಂಥವನು, ಮೋಡಗಳಿಂದ ಬಿಡುಗಡೆ ಹೊಂದಿದ ಚಂದ್ರನಂತೆ ಈ ಪ್ರಪಂಚವನ್ನು ಬೆಳಗುತ್ತಾನೆ.

೧೯ ಯಾವಾತನ ಕೆಟ್ಟ ಕಾರ್ಯಗಳು, ಆತನ ಒಳ್ಳೆಯ ಕಾರ್ಯಗಳಿಂದ ಮುಚ್ಚಿಹೋಗುತ್ತವೋ, ಅಂಥವನು ಮೋಡಗಳಿಂದ ಮುಕ್ತನಾದ ಚಂದ್ರನಂತೆ ಈ ಪ್ರಪಂಚವನ್ನು ಬೆಳಗುತ್ತಾನೆ.

೨೦ ಒಬ್ಬ ಮನುಷ್ಯನು ಒಂದು ನಿಯಮವನ್ನು ಉಲ್ಲಂಘಿಸಿದರೆ, ಸುಳ್ಳನ್ನು ಹೇಳಿದರೆ, ಆತನು ಮಾಡದ ಕೆಟ್ಟ ಕೆಲಸವಿರುವುದಿಲ್ಲ.

೨೧ ಸದಾ ಜಾಗೃತರಾದ ಹಗಲು ರಾತ್ರಿ ಅಧ್ಯಯನಶೀಲರಾದ ನಿರ್ವಾಣಕ್ಕಾಗಿ ಶ್ರಮಿಸುತ್ತಿರುವವರ ಭಾವೋದ್ರೇಕಗಳು ಕೊನೆಗೊಳ್ಳುತ್ತವೆ.

೨೨ "ಯಾವಾತನು ಮೌನಿಯಾಗಿ ಕುಳಿತಿರುತ್ತಾನೋ ಆತನನ್ನು ಜನ ನಿಂದಿಸುತ್ತಾರೆ. ಯಾವಾತನು ಹೆಚ್ಚು ಮಾತನಾಡುತ್ತಾನೋ ಅವನನ್ನು ಜನ ನಿಂದಿಸುತ್ತಾರೆ; ಯಾವಾತನು ಸ್ವಲ್ಪ ಮಾತನಾಡುತ್ತಾನೋ ಅವನನ್ನೂ ಕೂಡ ಜನ ನಿಂದಿಸುತ್ತಾರೆ" ಎಂಬುದು ಒಂದು ಹಳೆಯ ನಾಣ್ನುಡಿ. ಅಪವಾದಕ್ಕೆ ಗುರಿಯಾಗದ ಒಬ್ಬನೇ ಒಬ್ಬ ಮನುಷ್ಯ ಈ ಜಗತ್ತಿನಲ್ಲಿಲ್ಲ.

೨೩ ಯಾವಾಗಲೂ ತೆಗಳಿಸಿಕೊಳ್ಳುವಂತಹ ಮತ್ತು ಯಾವಾಗಲೂ ಹೊಗಳಿಸಿಕೊಂಡಂಥ ಮನುಷ್ಯ ಹಿಂದೆಂದೂ ಇರಲಿಲ್ಲ. ಮುಂದೆ ಎಂದೂ ಇರುವುದಿಲ್ಲ. ಇಂದೂ ಕೂಡ ಇಲ್ಲ.

೨೪ ನಾಲಿಗೆಯ ಕ್ರೋಧದ ಬಗ್ಗೆ ಎಚ್ಚರದಿಂದಿರು ಮತ್ತು ನಿನ್ನ ನಾಲಿಗೆಯನ್ನು ನಿಯಂತ್ರಿಸಿಕೋ. ನಿನ್ನ ಮನಸ್ಸಿನ ಪಾಪಗಳನ್ನು ತೊರೆ ಮತ್ತು ನಿನ್ನ ಮನಸ್ಸಿನ ಸದ್ಗುಣಗಳನ್ನು ಅನುಷ್ಠಾನಕ್ಕೆ ತಾ.

೨೫ ಶ್ರದ್ಧೆಯು ನಿರ್ವಾಣದ ಮಾರ್ಗ – ವಿಚಾರಹೀನತೆ ಮರಣದ ಮಾರ್ಗ. ಶ್ರದ್ಧಾವಂತರು ಸಾಯುವುದಿಲ್ಲ. ವಿಚಾರಹೀನರು ಈಗಾಗಲೇ ಸತ್ತಂತೆ ಇರುತ್ತಾರೆ.

## ೧೩. ಸತ್ಯವಾದ ಧಮ್ಮವನ್ನು ಅಸತ್ಯವಾದ ಧರ್ಮದೊಂದಿಗೆ ಬೆರಸಬೇಡ

೧ ಸುಳ್ಳನ್ನು ಸತ್ಯವೆಂದು ಮತ್ತು ಸತ್ಯವನ್ನು ಸುಳ್ಳೆಂದು ಯಾರು ತಪ್ಪಾಗಿ ತಿಳಿಯುತ್ತಾರೋ, ಅಂಥವರಲ್ಲಿ ದೋಷಯುಕ್ತ ಭಾವ ತುಂಬಿರುತ್ತದೆ. ಅಂಥವರು ಸತ್ಯದತ್ತ ಸುಳಿಯಲಾರರು.

೨ ಸತ್ಯವನ್ನು ಸತ್ಯವೆಂದೂ, ಸುಳ್ಳನ್ನು ಸುಳ್ಳೆಂದೂ ತಿಳಿದವರಲ್ಲಿ ನಿಜವಾದ ಭಾವ ತುಂಬಿರುತ್ತದೆ. ಅವರು ಸತ್ಯವನ್ನು ಸಾಧಿಸುತ್ತಾರೆ.

೩ ಸರಿಯಾಗಿ ಕಟ್ಟಿದ ಚಾವಣಿಯ ಮನೆಯಲ್ಲಿ ನೀರು ಇಳಿಯದಂತೆ, ಕೆಟ್ಟದಾಗಿ ತರಬೇತಿ ಹೊಂದಿದ ಮನಸ್ಸಿನಲ್ಲಿ ಲಾಲಸೆ ಒಸರುತ್ತದೆ.

೪ ಚೆನ್ನಾಗಿ ಕಟ್ಟಿದ ಚಾವಣಿಯ ಮನೆಯಲ್ಲಿ ಮಳೆ ನೀರು ಸೋರದಿರುವಂತೆ, ಚೆನ್ನಾಗಿ ತರಬೇತಿ ಹೊಂದಿದ ಮನಸ್ಸಿನಲ್ಲಿ ಲಾಲಸೆ ಇಳಿಯದು.

೫ ಏಳು! ಉಪೇಕ್ಷೆ ಮಾಡಬೇಡ! ಉಪದೇಶಿತ ಸನ್ಮಾರ್ಗದಲ್ಲಿ ನಡೆ. ಉಪದೇಶಿತ ಮಾರ್ಗದಲ್ಲಿ ಯಾವಾತ ನಡೆಯುತ್ತಾನೋ ಅವನು ಈ ಪ್ರಪಂಚದಲ್ಲಿ ಮತ್ತು ಇತರ ಎಲ್ಲಾ ಪ್ರಪಂಚಗಳಲ್ಲಿಯೂ ಸುಖಿಯಾಗಿರುತ್ತಾನೆ.

೬ ಉಪದೇಶಿತ ಸನ್ಮಾರ್ಗದಲ್ಲಿ ನಡೆ, ಕೆಟ್ಟ ಮಾರ್ಗಗಳಲ್ಲಿ ನಡೆಯಬೇಡ. ಉಪದೇಶಿತ ಮಾರ್ಗದಲ್ಲಿ ಯಾರು ನಡೆಯುತ್ತಾರೋ ಆತನು ಈ ಪ್ರಪಂಚದಲ್ಲಿ ಮತ್ತು ಇತರ ಎಲ್ಲಾ ಪ್ರಪಂಚಗಳಲ್ಲಿ ಸಂತೋಷದಿಂದ ಬದುಕುತ್ತಾನೆ.

# ಭಾಗ : ೪
# ಬುದ್ಧನ ಉಪದೇಶಗಳು

## ವಿಭಾಗ – ೧

# ಗೃಹಸ್ಥರಿಗೆ ಉಪದೇಶಗಳು

## ೧. ಸುಖಿ ಗೃಹಸ್ಥ

೧ ಮಹಾಮಹಿಮನಿದ್ದೆಡೆಗೆ ಒಂದು ಸಲ ಅನಾಥಪಿಂಡಿಕನು ಬಂದು ಆತನಿಗೆ ನಮಸ್ಕರಿಸಿ ಪಕ್ಕದಲ್ಲಿದ್ದ ಜಾಗದಲ್ಲಿ ಕುಳಿತುಕೊಂಡ.

೨ ಗೃಹಸ್ಥನ ಸುಖವು ಎಲ್ಲಿದೆ ಎಂಬುದನ್ನು ತಿಳಿಯಲು ಅನಾಥಪಿಂಡಿಕನು ಕುತೂಹಲಿಯಾಗಿದ್ದನು.

೩ ಅದರಂತೆ, ಗೃಹಸ್ಥನ ಸುಖದ ರಹಸ್ಯವನ್ನು ವಿವರಿಸಬೇಕೆಂದು ಅನಾಥಪಿಂಡಿಕನು ಭಗವಾನನನ್ನು ಕೇಳಿದ.

೪ ಒಡೆತನದ ಸಂತೋಷವೇ ಮೊದಲನೆಯದೆಂದು ಭಗವಾನ್ ಹೇಳಿದ. ಮಹತ್ತಾದ ಕಾರ್ಯತತ್ಪರತೆಯಿಂದ, ನ್ಯಾಯವಾಗಿ ಮತ್ತು ಧರ್ಮದಿಂದ ಸಂಪಾದಿಸಿದ, ತೋಳ್ಬಲದಿಂದ ಶೇಖರಿಸಿದ ಮತ್ತು ಶ್ರಮದ ದುಡಿಮೆಯಿಂದ ಗಳಿಸಿದ ಸಂಪತ್ತಿಗೆ ಗೃಹಸ್ಥನು ಒಡೆಯನಾಗಿರತ್ತಾನೆ. 'ನಾನು ನ್ಯಾಯಾರ್ಜಿತ ಸಂಪತ್ತಿನ ಒಡೆಯನಾಗಿದ್ದೇನೆ' ಎಂಬ ಭಾವನೆಯಿಂದಲೇ ಆತನು ಸಂತೋಷ ಪಡೆಯುತ್ತಾನೆ.

೫ ಎರಡನೆಯದು ಅನುಭೋಗದ ಸಂತೋಷ. ಮಹತ್ತಾದ ಕಾರ್ಯತತ್ಪರತೆಯಿಂದ ನ್ಯಾಯವಾಗಿ ಮತ್ತು ಧರ್ಮದಿಂದ ಸಂಪಾದಿಸಿದ, ತೋಳ್ಬಲದಿಂದ ಶೇಖರಿಸಿದ ಮತ್ತು ಶ್ರಮದ ದುಡಿಮೆಯಿಂದ ಗಳಿಸಿದ ಸಂಪತ್ತಿಗೆ ಗೃಹಸ್ಥನು ಒಡೆಯನಾಗಿ, ತನ್ನ ಸಂಪತ್ತನ್ನು ಅನುಭೋಗಿಸುತ್ತಾನೆ ಮತ್ತು ಪುಣ್ಯ ಕಾರ್ಯಗಳನ್ನು ಮಾಡುತ್ತಾನೆ. ಈ ರೀತಿ, 'ನ್ಯಾಯದಿಂದ ಸಂಪಾದಿಸಿದ ನನ್ನ ಸಂಪತ್ತಿನ ಒಳ್ಳೆಯ ಕಾರ್ಯಗಳನ್ನು ನಾನು ಮಾಡುತ್ತಿದ್ದೇನೆ' ಎಂಬ ಭಾವನೆಯಿಂದಲೇ ಆತನು ಸುಖವನ್ನು ಪಡೆಯುತ್ತಾನೆ.

೬ ಮೂರನೆಯದು ಸಾಲದಿಂದ ವಿಮುಕ್ತನಾಗಿರುವುದರಿಂದ ದೊರೆಯುವ ಸುಖ. ಸಣ್ಣದಾಗಲಿ, ದೊಡ್ಡದಾಗಲಿ ಯಾವುದೇ ಸಾಲವನ್ನು ಗೃಹಸ್ಥನು ಕೊಡಬೇಕಾಗಿಲ್ಲವಾದಾಗ, ಅದರಿಂದ ಅವನಿಗೆ ಸುಖವಾಗುತ್ತದೆ. 'ನಾನು ಯಾವ ಮನುಷ್ಯನಿಗೂ ಏನೂ ಕೊಡಬೇಕಾಗಿಲ್ಲ' ಎಂಬ ಭಾವನೆಯಿಂದಲೇ ಆತನು ಸುಖವನ್ನು ಪಡೆಯುತ್ತಾನೆ.

೭ ನಾಲ್ಕನೆಯದು ನಿಂದನೆಯಿಂದ ವಿಮುಕ್ತನಾಗಿರುವುದರಿಂದ ದೊರೆವ ಸುಖ. ಅನಿಂದ್ಯ ಶರೀರ ಕ್ರಿಯೆ, ಅನಿಂದ್ಯ ಮಾತು ಮತ್ತು ಅನಿಂದ್ಯ ಚಿಂತನೆಗಳನ್ನು ಪಡೆದಿರುವ ಗೃಹಸ್ಥನು ಅನಿಂದ್ಯ ಸುಖವನ್ನು ಪಡೆಯುತ್ತಾನೆ.

೮ ಅನಾಥಪಿಂಡಿಕ, ಗೃಹಸ್ಥನು ಈ ನಾಲ್ಕು ರೀತಿಯ ಸುಖಗಳಿಗಾಗಿ ನಿಜವಾಗಿ ಪ್ರಯತ್ನಿಸಿದರೆ, ಅವುಗಳನ್ನು ನಿರಂತರವಾಗಿ ಪಡೆಯಬಲ್ಲ.

## ೨. ಮಗನಿಗಿಂತ ಮಗಳು ಉತ್ತಮಳಾಗಿರಬಹುದು

೧ ಮಹಾಮಹಿಮನು ಒಂದು ಸಲ ಶ್ರಾವಸ್ತಿಯಲ್ಲಿದ್ದಾಗ, ಕೋಸಲದ ರಾಜ ಪ್ರಸೇನಜಿತನು ಆತನನ್ನು ಕಾಣಲು ಬಂದ.

೨ ಪೂಜ್ಯ ಭಗವಾನನೊಂದಿಗೆ, ರಾಜನು ಸಂವಾದದಲ್ಲಿ ತೊಡಗಿದ್ದಾಗ, ಅರಮನೆಯಿಂದ ಬಂದ ವಾರ್ತಾವಾಹಕನೊಬ್ಬ, ರಾಜನ ಸಮೀಪಕ್ಕೆ ಬಂದು, ಮಲ್ಲಿಕಾ ರಾಣಿಯು ಒಂದು ಹೆಣ್ಣುಮಗುವನ್ನು ಹೆತ್ತಳು ಎಂದು ಆತನ ಕಿವಿಯಲ್ಲಿ ಹೇಳಿದ.

೩ ರಾಜನು ಬಹಳ ಸಂತಪ್ತನೂ, ವಿಷಣ್ಣನೂ ಆದಂತೆ ಕಂಡ. ರಾಜನ ಸಂತಾಪಕ್ಕೆ ಕಾರಣವೇನೆಂದು ಪೂಜ್ಯ ಭಗವಾನನು ಕೇಳಿದ.

೪ ಮಲ್ಲಿಕಾರಾಣಿಯು ಹೆಣ್ಣು ಮಗುವನ್ನು ಹೆತ್ತಳೆಂಬ ದುಃಖದ ಸಮಾಚಾರವನ್ನು ಈಗ ತಾನೇ ಕೇಳಿದೆನೆಂದು ರಾಜನು ಹೇಳಿದ.

೫ ಅದನ್ನು ತಿಳಿದು, ಮಹಾಮಹಿಮನು ಆ ವಿಷಯವನ್ನು ವಿಶದೀಕರಿಸುತ್ತಾ ಈ ರೀತಿ ಹೇಳಿದ: "ಹೆಣ್ಣು ಶಿಶುವು ಗಂಡು ಶಿಶುವಿಗಿಂತ ಉತ್ತಮ ಸಂತತಿ ಎಂಬುದನ್ನು ದೃಢಪಡಿಸಬಹುದು. ಏಕೆಂದರೆ ಆಕೆಯು ಪ್ರಾಜ್ಞಳಾಗಿ ಸದ್ಗುಣಿಯಾಗಿ ಬೆಳೆದು, ತನ್ನ ಗಂಡನ ತಾಯಿ ಗೌರವಿಸುವ ಹೆಂಡತಿಯಾಗಿ ಹಾಗೂ ಮಗಳಾಗಬಹುದು.

೬ "ಆಕೆಯು ಪಡೆಯಬಹುದಾದ ಗಂಡು ಮಗುವು ಮಹತ್ಕಾರ್ಯಗಳನ್ನು ಸಾಧಿಸಬಹುದು. ಮಹಾ ರಾಷ್ಟ್ರಗಳನ್ನು ಆಳಬಹುದು. ಹೌದು, ಶ್ರೇಷ್ಠಳಾದ ಹೆಂಡತಿಯು ಪಡೆದ ಅಂತಹ ಮಗನು ತನ್ನ ದೇಶದ ಮಾರ್ಗದರ್ಶಿಯಾಗುತ್ತಾನೆ."

## ೩. ಗಂಡ ಮತ್ತು ಹೆಂಡತಿ

೧ ಮತ್ತೊಂದು ಸಲ ಆ ಮಹಾಮಹಿಮನು, ಮಧುರಾ ಮತ್ತು ನೇರಂಜಗಳ ನಡುವಣ ಒಂದು ರಾಜಮಾರ್ಗವನ್ನು ಪ್ರವೇಶಿಸಿದ. ಅದರಂತೆಯೇ ಅನೇಕ ಗೃಹಸ್ಥರೂ ಮತ್ತು ಅವರ ಹೆಂಡತಿಯರೂ ಆ ರಾಜಮಾರ್ಗಕ್ಕೆ ಬಂದರು.

೨ ಆಗ ಆ ಮಹಾಮಹಿಮನು ರಸ್ತೆಯನ್ನು ಬಿಟ್ಟು, ಅದರ ಬದಿಯಲ್ಲಿದ್ದ ಒಂದು ಮರದ ನೆರಳಲ್ಲಿ ಕುಳಿತ. ಆ ಮಹಾಮಹಿಮನು ಮರದ ಕೆಳಗೆ ಕುಳಿತಿರುವುದನ್ನು ಗೃಹಸ್ಥರೂ ಅವರ ಹೆಂಡಂದಿರೂ ಕಂಡರು.

೩ ಆ ಕೂಡಲೇ, ಅವರೆಲ್ಲಾ ಆ ಮಹಾಮಹಿಮನ ಸಮೀಪಕ್ಕೆ ಬಂದರು. ಹಾಗೆ ಬಂದು, ಅವರೆಲ್ಲಾ ಆತನಿಗೆ ನಮಸ್ಕರಿಸಿ ಆತನ ಒಂದು ಪಕ್ಕದಲ್ಲಿ ಕುಳಿತು, ಗಂಡ ಮತ್ತು ಹೆಂಡತಿಯ ಸಂಬಂಧಗಳ ಬಗ್ಗೆ ಆ ಮಹಾಮಹಿಮನನ್ನು ಕೇಳಿದರು. ಆಗ, ಅವರಿಗೆ ಆ ಮಹಾಮಹಿಮನು ಈ ರೀತಿ ಹೇಳಿದ:

೪ "ಗೃಹಸ್ಥರೇ, ಜೊತೆಯಲ್ಲಿ ವಾಸಿಸುತ್ತಿರುವ ಗಂಡ ಮತ್ತು ಹೆಂಡತಿ ನಾಲ್ಕು ರೀತಿ ಇರಬಹುದು: ಒಬ್ಬ ನಿಕೃಷ್ಟ ಗಂಡಸು, ಒಬ್ಬಳು ನಿಕೃಷ್ಟ ಹೆಂಗಸಿನೊಂದಿಗೆ ವಾಸಿಸುತ್ತಿರುವುದು; ಒಬ್ಬ ನಿಕೃಷ್ಟ

ಗಂಡಸು, ಒಬ್ಬಳು ದೇವತೆಯೊಂದಿಗೆ ವಾಸಿಸುತ್ತಿರುವುದು; ಒಬ್ಬ ದೇವನು ಒಬ್ಬಳು ನಿಕೃಷ್ಟ ಹೆಂಗಸಿನೊಂದಿಗೆ ವಾಸಿಸುತ್ತಿರುವುದು ಮತ್ತು ಒಬ್ಬ ದೇವನು ಒಬ್ಬಳು ದೇವತೆಯೊಂದಿಗೆ ವಾಸಿಸುತ್ತಿರುವುದು.

೫ "ಗೃಹಸ್ಥರೇ, ಒಬ್ಬ ಗಂಡನು ಕೊಲ್ಲುತ್ತಾನೆ, ಕದಿಯುತ್ತಾನೆ, ಅನಾಚಾರ ಮಾಡುತ್ತಾನೆ. ಮದ್ಯವನ್ನು ಕುಡಿಯುವುದರಲ್ಲಿ ಮಗ್ನನಾಗಿರುತ್ತಾನೆ. ದುಷ್ಟನೂ ಪಾಪಿಯೂ ಆಗಿರುತ್ತಾನೆ. ದುರಾಸೆಯಿಂದ ತುಂಬಿದ ಹೃದಯವುಳ್ಳ ಆತನು ಗೃಹಸ್ಥನ ಜೀವನ ನಡೆಸುತ್ತಾನೆ ಮತ್ತು ಸಜ್ಜನರನ್ನು ನಿಕೃಷ್ಟವಾಗಿ ಕಾಣುತ್ತಾನೆ ಮತ್ತು ಅವರನ್ನು ನಿಂದಿಸುತ್ತಾನೆ. ಅದೇ ರೀತಿ, ಆತನ ಹೆಂಡತಿಯೂ, ಕೊಲ್ಲುತ್ತಾಳೆ, ಕದಿಯುತ್ತಾಳೆ, ಹಾದರ ಮಾಡುತ್ತಾಳೆ, ಮದ್ಯವನ್ನು ಕುಡಿಯುವುದರಲ್ಲಿ ಮಗ್ನಳಾಗಿರುತ್ತಾಳೆ. ದುಷ್ಟೆಯೂ ಪಾತಕಿಯೂ ಆಗಿರುತ್ತಾಳೆ. ದುರಾಸೆಯಿಂದ ತುಂಬಿದ ಹೃದಯವುಳ್ಳ ಆಕೆಯು ಗೃಹಸ್ಥ ಜೀವನ ನಡೆಸುತ್ತಾಳೆ. ಅಲ್ಲದೆ ಸಜ್ಜನರನ್ನು ಆಕೆಯು ನಿಕೃಷ್ಟವಾಗಿ ಕಂಡು, ನಿಂದಿಸುತ್ತಾಳೆ. ಈ ರೀತಿ ಗೃಹಸ್ಥರೇ, ನಿಜವಾಗಿ ಒಬ್ಬ ನಿಕೃಷ್ಟ ಗಂಡಸು ಒಬ್ಬಳು ನಿಕೃಷ್ಟ ಹೆಂಗಸಿನೊಂದಿಗೆ ಬಾಳುತ್ತಾನೆ.

೬ "ಗೃಹಸ್ಥರೇ, ಒಬ್ಬ ಗಂಡನು ಕೊಲ್ಲುತ್ತಾನೆ, ಕದಿಯುತ್ತಾನೆ, ಅನಾಚಾರ ಮಾಡುತ್ತಾನೆ, ಮದ್ಯವನ್ನು ಕುಡಿಯುವುದರಲ್ಲಿ ಮಗ್ನನಾಗಿರುತ್ತಾನೆ. ದುಷ್ಟನೂ ಪಾಪಿಯೂ ಆಗಿರುತ್ತಾನೆ. ದುರಾಸೆಯಿಂದ ತುಂಬಿದ ಹೃದಯವುಳ್ಳ ಆತನು ಗೃಹಸ್ಥ ಜೀವನ ನಡೆಸುತ್ತಾನೆ ಮತ್ತು ಸಜ್ಜನರನ್ನು ನಿಕೃಷ್ಟವಾಗಿ ಕಾಣುತ್ತಾನೆ ಮತ್ತು ಅವರನ್ನು ದೂಷಿಸುತ್ತಾನೆ. ಆದರೆ ಆತನ ಹೆಂಡತಿಯು ಕೊಲೆ, ಕಳವು, ಹಾದರ, ಸುಳ್ಳು ಹೇಳುವುದು ಮತ್ತು ಮದ್ಯ ಸೇವನೆ ಇವುಗಳಿಂದ ವಿಮುಖಳಾಗಿ, ಸದ್ಗುಣಿಯೂ ಮತ್ತು ಸಚ್ಚಾರಿತ್ರಶೀಲಳೂ ಆಗಿರುತ್ತಾಳೆ. ದುರಾಸೆಯ ಲೇಪನದಿಂದ ಮುಕ್ತವಾದ ಹೃದಯವುಳ್ಳ ಆಕೆಯು ಕುಟುಂಬ ಜೀವನ ನಡೆಸುತ್ತಾಳೆ. ಇವಳು ಸಜ್ಜನರನ್ನು ನಿಂದಿಸುವುದಿಲ್ಲ. ಈ ರೀತಿ, ಗೃಹಸ್ಥರೇ, ನಿಜವಾಗಿಯೂ ಒಬ್ಬ ನಿಕೃಷ್ಟ ಗಂಡಸು ಒಬ್ಬಳು ದೇವತೆಯೊಂದಿಗೆ ಬಾಳುತ್ತಾನೆ.

೭ "ಗೃಹಸ್ಥರೇ, ಕೊಲೆ, ಕಳ್ಳತನ, ವ್ಯಭಿಚಾರ, ಸುಳ್ಳು ಹೇಳುವುದು ಮತ್ತು ಮದ್ಯಸೇವನೆ ಇವುಗಳಿಂದ ಗಂಡನು ವಿಮುಖನಾಗುತ್ತಾನೆ. ಅವನು ಸದ್ಗುಣಿ ಮತ್ತು ಸಚ್ಚಾರಿತ್ರ್ಯವಂತ, ದುರಾಸೆಯ ಲೇಪನದಿಂದ ಮುಕ್ತವಾದ ಹೃದಯವುಳ್ಳ ಆತನು ಗೃಹಸ್ಥ ಜೀವನ ನಡೆಸುತ್ತಾನೆ. ಆತನು ಸದ್ಗುಣಿಗಳನ್ನು ನಿಂದಿಸುವುದಿಲ್ಲ ಮತ್ತು ನಿಕೃಷ್ಟವಾಗಿ ಕಾಣುವುದಿಲ್ಲ. ಆದರೆ ಆತನ ಹೆಂಡತಿ, ಕೊಲೆ, ಕಳ್ಳತನ, ವ್ಯಭಿಚಾರ, ಸುಳ್ಳು ಹೇಳುವುದು ಮತ್ತು ಮದ್ಯಸೇವನೆ ಇವುಗಳಲ್ಲಿ ನಿರತಳಾಗಿರುತ್ತಾಳೆ. ಆಕೆ ದುಷ್ಟೆ ಮತ್ತು ಪಾತಕಿ. ದುರಾಸೆ ತುಂಬಿರುವ ಹೃದಯವುಳ್ಳ ಆಕೆ ಗೃಹಸ್ಥ ಜೀವನ ನಡೆಸುತ್ತಾಳೆ. ಸದ್ಗುಣಿಗಳನ್ನು ನಿಕೃಷ್ಟವಾಗಿ ಕಂಡು, ಹೀನಾಮಾನ ಬಯ್ಯುತ್ತಾಳೆ. ಈ ರೀತಿ, ಗೃಹಸ್ಥರೇ, ಒಬ್ಬ ದೇವನು, ಒಳ್ಳೆಯ ನೀಚ ಹೆಂಗಸಿನೊಂದಿಗೆ ಬಾಳುತ್ತಾನೆ.

೮ "ಗೃಹಸ್ಥರೇ, ಕೊಲೆ, ಕಳ್ಳತನ, ವ್ಯಭಿಚಾರ, ಸುಳ್ಳು ಹೇಳುವುದು ಮತ್ತು ಮದ್ಯಸೇವನೆ ಇವುಗಳಿಂದ ಗಂಡಹೆಂಡತಿ ಇಬ್ಬರೂ ವಿಮುಕ್ತರಾಗಿರುತ್ತಾರೆ. ಇವರಿಬ್ಬರೂ ಸದ್ಗುಣಿಗಳು ಮತ್ತು ಸದಾಚಾರಿಗಳು. ದುರಾಸೆಯ ಮಾಲಿನ್ಯದಿಂದ ಮುಕ್ತನಾದ ಮನಸ್ಸುಳ್ಳ ಅವರು ಗೃಹಸ್ಥ ಜೀವನ ನಡೆಸುತ್ತಾರೆ. ಸದ್ಗುಣಿಗಳನ್ನು ನಿಕೃಷ್ಟವಾಗಿ ಕಾಣುವುದಿಲ್ಲ ಮತ್ತು ಅವರನ್ನು ಹೀನಾಮಾನ ಬಯ್ಯುವುದಿಲ್ಲ. ಈ ರೀತಿ, ಗೃಹಸ್ಥರೇ, ದೇವನೊಬ್ಬ ದೇವತೆಯೊಂದಿಗೆ ಬಾಳುತ್ತಾನೆ.

೯ "ಗೃಹಸ್ಥರೇ, ಇವೇ, ಒಟ್ಟಿಗೆ ಬಾಳುವ ನಾಲ್ಕು ರೀತಿಗಳು."

## ವಿಭಾಗ – ೨
## ಚಾರಿತ್ರ್ಯವನ್ನು ಪರಿಪಾಲಿಸಲು ಬೇಕಾದ ಉಪದೇಶಗಳು

### ೧. ಮನುಷ್ಯನ ಅವನತಿಗೆ ಕಾರಣ?

೧ ಶ್ರಾವಸ್ತಿಯ ಸಮೀಪದ ಜೇತತೋಪಿನಲ್ಲಿದ್ದ ಆನಂದಪಿಂಡಿಕ ಎಂಬ ಸನ್ಯಾಸಿ ಮಠದಲ್ಲಿ ಪೂಜ್ಯ ಭಗವಾನನು ಒಂದು ಸಂದರ್ಭದಲ್ಲಿ ವಾಸಿಸುತ್ತಿದ್ದ.

೨ ಅದೊಂದು ದಿನ, ರಾತ್ರಿ ಸರಿಹೊತ್ತಿನ ನಂತರ, ತನ್ನ ಮೈಕಾಂತಿಯಿಂದ ಇಡೀ ಜೇತವನವನ್ನು ಬೆಳಗಿಸಿದಂತಹ ದೇವನೊಬ್ಬನು ಪೂಜ್ಯನಲ್ಲಿಗೆ ಬಂದು, ಆತನ ಸಮೀಪ ಸರಿದು, ಭಕ್ತಿಪೂರ್ವಕವಾಗಿ ನಮಸ್ಕರಿಸಿ, ಒಂದು ಪಕ್ಕದಲ್ಲಿ ನಿಂತುಕೊಂಡ. ಆ ರೀತಿ ನಿಂತುಕೊಂಡ ನಂತರ, ಗೀತೆಯ ಮೂಲಕ ಆ ಪೂಜ್ಯನನ್ನು ಸಂಬೋಧಿಸಿದ:

೩ "ಪವಿತ್ರಾತ್ಮನಾದ ನಿನ್ನನ್ನು ಪ್ರಶ್ನಿಸಲು ನಾನು ಬಂದಿದ್ದೇನೆ. ಓ! ಗೋತಮಾ! ಅವನತಿಯ ದಾರಿ ಹಿಡಿದಿರುವ ಮನುಷ್ಯನ ಬಗ್ಗೆ ನಾನು ಕೇಳುತ್ತಿದ್ದೇನೆ. ಒಬ್ಬನ ಅವನತಿಗೆ ಕಾರಣವೇನೆಂದು ದಯವಿಟ್ಟು ನನಗೆ ತಿಳಿಸು". ಮನುಷ್ಯನ ಅವನತಿಯ ಕಾರಣಗಳನ್ನು ತಿಳಿಸಲು ಆ ಪವಿತ್ರಾತ್ಮನು ಸಂತೋಷದಿಂದ ಒಪ್ಪಿದ.

೪ "ಪ್ರಗತಿಶೀಲನಾದವನನ್ನು ಸುಲಭವಾಗಿ ತಿಳಿಯಬಹುದು. ಅದೇ ರೀತಿ ಅವನತಿಯ ದಾರಿ ಹಿಡಿದಿರುವವನನ್ನೂ ಸುಲಭವಾಗಿ ತಿಳಿಯಬಹುದು. ಧಮ್ಮದಲ್ಲಿ ಪ್ರೀತಿ ಇರುವವನು ಪ್ರಗತಿಶೀಲ, ಧಮ್ಮದ್ವೇಷಿ, ಅವನತಿಯ ಮಾರ್ಗ ಹಿಡಿದಾತ.

೫ "ದುಷ್ಟರು ಆತನ ಆತ್ಮೀಯರು. ಆತನಿಗೆ ಸಂತಸಕೊಡುವಂಥದ್ದು ಸದ್ಗುಣಿಗಳಲ್ಲಿ ಯಾವುದೂ ಆತನಿಗೆ ಕಾಣುವುದಿಲ್ಲ. ದುಷ್ಟರ ಅಭಿಪ್ರಾಯಗಳಿಗೆ ಆತನು ಒಲವು ತೋರುತ್ತಾನೆ. ಇದು ಒಬ್ಬನ ಅವನತಿಯ ಎರಡನೇ ಕಾರಣ.

೬ "ಯಾವ ಮನುಷ್ಯನು ಮಂದಮತಿಯೋ, ಪರಸಂಗಪ್ರಿಯನೋ, ಉದ್ಯೋಗಶೀಲನಲ್ಲವೋ, ಸೋಮಾರಿಯೋ ಮತ್ತು ಕೋಪವನ್ನು ಪ್ರಕಟಿಸುತ್ತಾನೋ ಅಂಥವನು ಅವನತಿ ದಾರಿ ಹಿಡಿದಾತ — ಇದು ಅವನತಿಯ ಮೂರನೇ ಕಾರಣ.

೭ "ಯಾವಾತನು, ತಾನು ಸಂಪತ್ತುಳ್ಳವನಾಗಿದ್ದರೂ, ಯೌವ್ವನ ಕಳೆದು ವೃದ್ಧರಾದ ತಂದೆತಾಯಿಯರನ್ನು ಪೋಷಿಸುವುದಿಲ್ಲವೋ ಅಂಥವನು ಅವನತಿಯ ದಾರಿ ಹಿಡಿದಾತ — ಇದು ಅವನತಿಯ ನಾಲ್ಕನೇ ಕಾರಣ.

೮ "ಒಬ್ಬ ಬ್ರಾಹ್ಮಣನನ್ನು, ಒಬ್ಬ ಸಂನ್ಯಾಸಿಯನ್ನು ಅಥವಾ ಒಬ್ಬ ಭಿಕ್ಷುವನ್ನು, ಯಾವಾತ ಸುಳ್ಳು ಹೇಳುವುದರ ಮೂಲಕ ವಂಚಿಸುತ್ತಾನೋ ಅಂಥವನು ಅವನತಿಯ ದಾರಿ ಹಿಡಿದಾತ — ಇದು ಅವನತಿಯ ಐದನೇ ಕಾರಣ.

೯ "ಯಾವ ಮನುಷ್ಯನು ಬಹಳಷ್ಟು ಆಸ್ತಿಪಾಸ್ತಿ, ಚಿನ್ನ ಮತ್ತು ಆಹಾರ ಪದಾರ್ಥಗಳನ್ನು ಪಡೆದಿದ್ದರೂ ಕೂಡ ಅವನೊಬ್ಬನೇ ಅವೆಲ್ಲವುಗಳ ರುಚಿಯನ್ನು ಸವಿಯುತ್ತಾನೋ, ಅಂಥವನು ಅವನತಿಯ ದಾರಿ ಹಿಡಿದಾತ – ಇದು ಅವನತಿಯ ಆರನೇ ಕಾರಣ.

೧೦ "ಯಾವ ಮನುಷ್ಯನು ತನ್ನ ಹುಟ್ಟು, ಸಂಪತ್ತು ಮತ್ತು ಕುಲಗಳ ಬಗ್ಗೆ ದುರಭಿಮಾನ ಹೊಂದಿರುತ್ತಾನೋ ಮತ್ತು ತನ್ನ ರಕ್ತಸಂಬಂಧಿಗಳನ್ನೇ ಹೀಯಾಳಿಸುತ್ತಾನೋ ಅಂಥವನು ಅವನತಿಯ ದಾರಿ ಹಿಡಿದಾತ – ಇದು ಅವನತಿಯ ಏಳನೇ ಕಾರಣ.

೧೧ "ಯಾವ ಮನುಷ್ಯನು ವ್ಯಭಿಚಾರಿಯೋ, ಮದ್ಯಮತ್ತನೋ, ಜೂಜುಕೋರನೋ ಮತ್ತು ತಾನು ಹೊಂದಿರುವುದನ್ನೆಲ್ಲಾ ಪೋಲು ಮಾಡುತ್ತಾನೋ ಅಂಥವನು ಅವನತಿಯ ದಾರಿ ಹಿಡಿಯುತ್ತಾನೆ – ಇದು ಅವನತಿಯ ಎಂಟನೇ ಕಾರಣ.

೧೨ "ಯಾವಾತನು ತನ್ನ ಸ್ವಂತ ಹೆಂಡಂದಿರಿಂದ ಸಂತೃಪ್ತಿ ಪಡೆಯದೆ, ವೇಶ್ಯೆಯರೊಂದಿಗೆ ಮತ್ತು ಇತರರ ಹೆಂಡತಿಯರೊಂದಿಗೆ ಸಂಪರ್ಕ ಹೊಂದಿರುತ್ತಾನೋ ಅಂಥವನು ಅವನತಿಯ ದಾರಿ ಹಿಡಿಯುತ್ತಾನೆ. ಇದು ಅವನತಿಯ ಒಂಬತ್ತನೇ ಕಾರಣ.

೧೩ "ಯಾವಾತನು ಅಸಂಯಮಿಯಾದ ಮತ್ತು ದುಂದುಗಾರ್ತಿ ಹೆಂಗಸನ್ನು ಅಥವಾ ಅದೇ ಸ್ವಭಾವದ ಗಂಡಸನ್ನು ಅಧಿಕಾರ ಸ್ಥಾನದಲ್ಲಿರಿಸುತ್ತಾನೋ ಅಂಥವನು ಅವನತಿಯ ದಾರಿ ಹಿಡಿಯುತ್ತಾನೆ – ಇದು ಅವನತಿಯ ಹನ್ನೊಂದನೇ ಕಾರಣ.

೧೪ "ಅಲ್ಪ ಸ್ವಲ್ಪ ಸಂಪನ್ಮೂಲಗಳನ್ನು ಹೊಂದಿದ್ದರೂ, ಅಪಾರ ಆಸೆಯಿಂದ ಕೂಡಿರುವ, ಯೋಧರ ಕುಲದಲ್ಲಿ ಹುಟ್ಟಿ, ಪರಮಾಧಿಕಾರಕ್ಕೆ ಆಸೆಪಡುವಂತಹ ಮನುಷ್ಯನು ಅವನತಿಯ ದಾರಿ ಹಿಡಿಯುತ್ತಾನೆ. ಇದು ಅವನತಿಯ ಹನ್ನೆರಡನೇ ಕಾರಣ.

೧೫ "ಸನ್ಮಾನ್ಯ ದೇವನೇ, ಅವನತಿಯ ಈ ಕಾರಣಗಳನ್ನು ತಿಳಿದಿರು. ಅವುಗಳಿಂದ ತಪ್ಪಿಸಿಕೊಳ್ಳಲು ನೀನು ಸಮರ್ಥನಾದರೆ, ನೀನು ಉಳಿಯುತ್ತೀಯೆ".

## ೨. ದುಷ್ಟ ಮನುಷ್ಯ

೧ ಆ ಪೂಜ್ಯ ಪ್ರಭುವು, ಪ್ರಯಾಣ ಮಾಡುತ್ತಿರುವಾಗಲೇ, ಅಭ್ಯಾಸದಂತೆ, ತನ್ನನ್ನು ಹಿಂಬಾಲಿಸುತ್ತಿದ್ದ ಭಿಕ್ಕುಗಳಿಗೆ ಈ ಕೆಳಗಿನ ಪ್ರವಚನವನ್ನು ನೀಡಿದ:

೨ ಭಿಕ್ಕುಗಳನ್ನು ಸಂಬೋಧಿಸಿ ಭಗವಾನನು ಹೇಳಿದ: "ಒಬ್ಬ ದುಷ್ಟ ಮನುಷ್ಯನನ್ನು ಗುರುತಿಸುವುದು ಹೇಗೆಂದು ನಿಮಗೆ ತಿಳಿದಿದೆಯೇ?", "ಇಲ್ಲ ಪ್ರಭು", ಭಿಕ್ಕುಗಳು ಉತ್ತರಿಸಿದರು.

೩ "ದುಷ್ಟ ಮನುಷ್ಯನ ಲಕ್ಷಣಗಳನ್ನು ನಾನು ಹೇಳುತ್ತೇನೆ.

೪ "ಕೇಳಿದಾಗ ಮಾತ್ರವಲ್ಲದೆ, ಕೇಳದಿದ್ದಾಗಲೂ, ಮತ್ತೊಬ್ಬನ ತಪ್ಪುಗಳನ್ನು ತೋರಿಸಿ ಕೊಡುವಂಥ ಮನುಷ್ಯನಿದ್ದಾನೆ. ನಿಜವಾಗಿ ಕೇಳಿದಾಗ ಮತ್ತು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಹಾಕಿದಾಗ, ಅಂಥವನು, ಯಾವ ನಿಗ್ರಹವೂ ಇಲ್ಲದೆ, ಮುಚ್ಚುಮರೆಯಿಲ್ಲದೆ, ಮತ್ತೊಬ್ಬನ ದೋಷವನ್ನು ಪೂರ್ಣವಿವರಗಳೊಂದಿಗೆ ಪ್ರಕಟಪಡಿಸುತ್ತಾನೆ. ಸೋದರರೇ, ಅಂತಹ ಮನುಷ್ಯ ದುಷ್ಟ.

೫ "ಕೇಳದಿದ್ದಾಗ ಮಾತ್ರವಲ್ಲದೆ, ಕೇಳಿದಾಗಲೂ ಮತ್ತೊಬ್ಬನ ಸದ್ಗುಣಗಳನ್ನು ತಿಳಿಸದಂತಹ ಮನುಷ್ಯನಿದ್ದಾನೆ. ನಿಜವಾಗಿ ಕೇಳಿದಾಗ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳಿದಾಗ, ಆತನು ಮತ್ತೊಬ್ಬನ ಬಗ್ಗೆ ಒಳ್ಳೆಯ ಮಾತನ್ನಾಡುತ್ತಾನೆ.

೬ "ಕೇಳದಿದ್ದಾಗ ಮಾತ್ರವಲ್ಲ, ಕೇಳಿದಾಗಲೂ ತನ್ನ ಕೆಟ್ಟ ಗುಣಗಳನ್ನು ಬಹಿರಂಗಪಡಿಸದ ಮನುಷ್ಯನಿದ್ದಾನೆ. ನಿಜವಾಗಿ ಕೇಳಿದಾಗ ಮತ್ತು ಪ್ರಶ್ನೆಗಳಿಂದ ಪೀಡಿಸಿದಾಗ ಆತನು ತನ್ನ ಕೆಟ್ಟ ಗುಣಗಳನ್ನು ಹೇಳುತ್ತಾನೆ. ಆದರೆ ಹಾಗೆ ಹೇಳುವಾಗ, ನಿಯಂತ್ರಿಸುತ್ತಾನೆ ಮತ್ತು ಮರೆಮಾಚುತ್ತಾನೆಯಲ್ಲದೇ ಪೂರ್ಣವಿವರಗಳನ್ನು ಕೊಡುವುದಿಲ್ಲ. ಬಂಧುಗಳೇ ಅಂಥವನು ದುಷ್ಟ ಮನುಷ್ಯ.

೭ "ಇದಲ್ಲದೇ, ಸೋದರರೇ, ಕೇಳಿದಾಗ ಮಾತ್ರವಲ್ಲದೆ, ಕೇಳದಿದ್ದಾಗಲೂ ತನ್ನ ಒಳ್ಳೆಯ ಗುಣಗಳನ್ನು ಬಹಿರಂಗಪಡಿಸುವ ಮನುಷ್ಯನಿದ್ದಾನೆ. ಸೋದರರೇ, ಕೇಳಿದಾಗ ಮತ್ತು ಪ್ರಶ್ನೆಗಳಿಂದ ಪೀಡಿಸಿದಾಗ, ಯಾವುದನ್ನೂ ನಿಯಂತ್ರಿಸದೆ ಮತ್ತು ಮರೆಮಾಚದೆ, ಪೂರ್ಣವಿವರಗಳನ್ನು ಕೊಡುವುದರ ಮೂಲಕ ತನ್ನ ಸ್ವಂತ ಸದ್ಗುಣಗಳನ್ನು ಆತನು ತಿಳಿಸುತ್ತಾನೆ. ಸೋದರರೇ ಅಂಥವನು ದುಷ್ಟ ಮನುಷ್ಯ."

## ೩. ಅತ್ಯುತ್ತಮ ಮನುಷ್ಯ

೧ ಮತ್ತೊಂದು ಪ್ರವಾಸದಲ್ಲಿದ್ದಾಗ, ಆ ಪೂಜ್ಯನು, ತನ್ನ ಜೊತೆಯಲ್ಲಿದ್ದ ಭಿಕ್ಷುಗಳಿಗೆ, ಎಂದಿನಂತೆ ಅಂದೂ ಪ್ರವಚನ ನೀಡಿದ.

೨ ಭಿಕ್ಷುಗಳನ್ನು ಸಂಬೋಧಿಸಿ ಮಹಾಪ್ರಭು ಹೇಳಿದ: "ಸೋದರರೇ, ಪ್ರಪಂಚದಲ್ಲಿ ನಾಲ್ಕು ರೀತಿಯ ಜನರು ಕಾಣಸಿಗುತ್ತಾರೆ.

೩ "ತನ್ನ ಅಥವಾ ಇತರರ ಕಲ್ಯಾಣಕ್ಕಾಗಿ ಶ್ರಮಿಸದಾತ; ತನ್ನ ಕಲ್ಯಾಣ ಮಾಡಿಕೊಳ್ಳದೆ ಇತರರ ಕಲ್ಯಾಣಕ್ಕಾಗಿ ಶ್ರಮಿಸಿದಾತ. ಇತರರ ಕಲ್ಯಾಣ ಮಾಡದೆ, ತನ್ನ ಕಲ್ಯಾಣಕ್ಕಾಗಿ ಶ್ರಮಿಸಿದಾತ; ತನ್ನ ಮತ್ತು ಇತರರ ಕಲ್ಯಾಣಗಳೆರಡಕ್ಕೂ ಶ್ರಮಿಸಿದಾತ.

೪ ತನ್ನ ಕಲ್ಯಾಣಕ್ಕಾಗಿಯಾಗಲಿ, ಇತರರ ಕಲ್ಯಾಣಕ್ಕಾಗಿಯಾಗಲಿ ಶ್ರಮಿಸದಾತ, ಶವದಹನಕ್ಕಾಗಿ ಹೊತ್ತಿಸಿದ ಎರಡು ಕಡೆಯೂ ಹೊತ್ತಿಕೊಂಡು ಮಧ್ಯದಲ್ಲಿ ಸಗಣಿಯಿಂದ ಮೆತ್ತಲ್ಪಟ್ಟ ಕೊಳ್ಳಿಯಂತಿರುತ್ತಾನೆ. ಆತನು ಹಳ್ಳಿಯಾಲ್ಲಾಗಲಿ ಅಥವಾ ಕಾಡಿನಲ್ಲಾಗಲಿ ಯಾವುದೇ ಸೌದೆಯನ್ನು ಹೊತ್ತಿಸುವುದಿಲ್ಲ. ಅಂಥವನು ಪ್ರಪಂಚಕ್ಕೆ ನಿರರ್ಥಕ, ಅಲ್ಲದೆ ಆತನು ತನಗೆ ತಾನೇ ನಿರರ್ಥಕ.

೫ "ತನ್ನ ಕಲ್ಯಾಣಕ್ಕೆ ಎರವಾಗಿ, ಪರರ ಕಲ್ಯಾಣಕ್ಕಾಗಿ ಶ್ರಮಿಸಿದಾತನು, ಈ ಇಬ್ಬರಲ್ಲಿ ಅತ್ಯಂತ ಉತ್ಕೃಷ್ಟ ಹಾಗೂ ಸಮರ್ಥ.

೬ "ಸೋದರರೇ, ತನ್ನ ಮತ್ತು ಪರರ ಕಲ್ಯಾಣಕ್ಕಾಗಿ ಶ್ರಮಿಸಿದಾತ ಈ ನಾಲ್ವರಲ್ಲಿ ಅತ್ಯುತ್ತಮನೂ ಮುಖ್ಯನಾದವನೂ ಆದ ಮನುಷ್ಯ. ಅಂಥವನು ಅತ್ಯಂತ ಮೇಲ್ಮಟ್ಟದವನು, ಶಿಖರಪ್ರಾಯದವನು ಮತ್ತು ಶ್ರೇಷ್ಠನಾದವನು."

# ೪. ಜ್ಞಾನೋದಯ ಪಡೆದ ಮನುಷ್ಯ

೧ ಒಂದು ಸಲ ಆ ಮಹಾಮಹಿಮನು, ಉತ್ಕೃಷ್ಟ ಮತ್ತು ಶ್ರೇಷ್ಠವನ ಪಟ್ಟಣಗಳ ನಡುವಣ ರಾಜಮಾರ್ಗವನ್ನು ತಲುಪಿದ. ಅದೇ ಸಮಯಕ್ಕೆ ದೋಣನೆಂಬ ಬ್ರಾಹ್ಮಣನೂ ಆ ರಾಜಮಾರ್ಗವನ್ನು ತಲುಪಿದ.

೨ ಆಗತಾನೇ ಆ ಮಹಾಮಹಿಮನು ರಸ್ತೆಯನ್ನು ಬಿಟ್ಟು ಪಕ್ಕದಲ್ಲಿದ್ದ ಒಂದು ಮರದ ಕೆಳಗೆ ಪದ್ಮಾಸನದಲ್ಲಿ ಕುಳಿತಿದ್ದ. ಆ ಮಹಾಮಹಿಮನ ಹೆಜ್ಜೆಯ ಶಬ್ದವನ್ನೇ ಅನುಸರಿಸಿ ಹಿಂಬಾಲಿಸಿದ ಬ್ರಾಹ್ಮಣನಾದ ದೋಣನೂ ಆ ಮರದ ಕೆಳಗೆ ಬಂದ ಮತ್ತು ಉಜ್ವಲ ಮತ್ತು ಪ್ರಶಾಂತ ಮುಖಮುದ್ರೆಯುಳ್ಳವನಾಗಿ, ಇಂದ್ರಿಯಗಳನ್ನು ನಿಯಂತ್ರಿಸಿ, ಶಾಂತಿ, ನಮ್ರತೆ, ನಿಗ್ರಹ ಮತ್ತು ಶಕ್ತಿಗಳಿಂದ ಕೂಡಿ ಕುಳಿತಿದ್ದ ಆ ಮಹಾಮಹಿಮನನ್ನು ಕಂಡ. ಅವನ ಬಳಿ ಬಂದ.

೩ ಹಾಗೆ ಸಮೀಪಕ್ಕೆ ಬಂದ ನಂತರ ಆ ಬ್ರಾಹ್ಮಣನು ಆ ಮಹಾಮಹಿಮನನ್ನು ಕೇಳಿದ:
"ಪೂಜ್ಯರಾದ ತಾವು ದೇವನಲ್ಲವೇ?"
"ಬ್ರಾಹ್ಮಣನೇ, ನಿಜವಾಗಿಯೂ ನಾನು ದೇವನಲ್ಲ."
"ಹಾಗಾದರೆ, ಪೂಜ್ಯರಾದ ತಾವು ಗಂಧರ್ವರಲ್ಲವೇ?"
"ಬ್ರಾಹ್ಮಣನೇ, ನಾನು ನಿಜವಾಗಿಯೂ ಗಂಧರ್ವನಲ್ಲ"
"ಅಂದಮೇಲೆ, ಪೂಜ್ಯರಾದ ತಾವು ಯಕ್ಷನಲ್ಲವೇ?"
"ಬ್ರಾಹ್ಮಣನೇ ನಾನು ನಿಜವಾಗಿಯೂ ಯಕ್ಕನಲ್ಲ."
"ಹಾಗಾದರೆ, ಪೂಜ್ಯರಾದ ತಾವು ಮನುಷ್ಯನಲ್ಲವೇ?"
"ಬ್ರಾಹಣನೇ, ನಾನು ನಿಜವಾಗಿಯೂ ಮನುಷ್ಯನಲ್ಲ."

೪ ಆ ಪೂಜ್ಯನ ಮಾತನ್ನು ಕೇಳಿ ಬ್ರಾಹ್ಮಣ ದೋಣನು ಹೀಗೆ ಹೇಳಿದ:– ನೀನು ಒಬ್ಬ ದೇವನೇ? ಎಂದು ಕೇಳಿದಾಗ, ಇಲ್ಲವೆಂದು ಹೇಳುತ್ತೀಯೆ;
ನೀನು ಒಬ್ಬ ಗಂಧರ್ವನೇ? ಎಂದು ಕೇಳಿದಾಗ, ಇಲ್ಲವೆಂದು ಹೇಳುತ್ತೀಯೇ;
ನೀನು ಒಬ್ಬ ಯಕ್ಷನೇ? ಎಂದು ಕೇಳಿದಾಗ, ಇಲ್ಲವೆಂದು ಹೇಳುತ್ತೀಯೇ;
ನೀನು ಒಬ್ಬ ಮನುಷ್ಯನೇ? ಎಂದು ಕೇಳಿದಾಗ ಇಲ್ಲವೆಂದು ಹೇಳುತ್ತೀಯೇ;
ಹಾಗಾದರೆ ಪೂಜ್ಯನಾದ ನೀನು ಏನಾಗಿರಲು ಸಾಧ್ಯ?"

೫ "ಬ್ರಾಹ್ಮಣಾ, ಮಾದಕ ವಸ್ತುಗಳನ್ನು ತ್ಯಜಿಸುವವರೆಗೂ ನಾನು ನಿಜವಾಗಿಯೂ, ಒಬ್ಬ ದೇವ, ಒಬ್ಬ ಗಂಧರ್ವ. ಒಬ್ಬ ಯಕ್ಷ, ಒಬ್ಬ ಮನುಷ್ಯನಾಗಿದ್ದೆ. ಈ ಮಾದಕ ಪದಾರ್ಥಗಳನ್ನು ನಾನು ಈಗ ತ್ಯಜಿಸಿದ್ದೇನೆ. ತಾಳೆಯ ಮರವು ಮತ್ತೆ ಬೆಳೆಯದಂತೆ ಅದರ ಬೇರುಗಳನ್ನು ಕಿತ್ತು ಹಾಕುವಂತೆ, ಈ ಮಾದಕ ವಸ್ತುಗಳು ಇನ್ನು ಮುಂದೆ ನನ್ನಲ್ಲಿ ಕಾರ್ಯನಿರತವಾಗದ ರೀತಿಯಲ್ಲಿ, ಅವುಗಳ ಮೂಲಗಳನ್ನು ಕತ್ತರಿಸಿ ಹಾಕಿದ್ದೇನೆ.

೬ "ಒಂದು ತಾವರೆ ಅಥವಾ ನೈದಿಲೆ ಹೂವೂ, ನೀರಿನಲ್ಲಿ ಹುಟ್ಟಿ, ನೀರಿನಲ್ಲಿ ಬೆಳೆದು, ನೀರಿನ ಮೇಲೆದ್ದು ನಿಂತು, ನೀರಿನಿಂದ ಮಲಿನವಾಗದಂತೆಯೇ, ಬ್ರಾಹ್ಮಣಾ, ನಾನು ಈ ಪ್ರಪಂಚದಲ್ಲಿ ಹುಟ್ಟಿ, ಈ ಪ್ರಪಂಚದಲ್ಲಿ ಬೆಳೆದು, ನಾನು ವಾಸಿಸುತ್ತಿರುವ ಈ ಪ್ರಪಂಚದಿಂದ ಮಲಿನವಾಗದೆ, ಅದನ್ನು ನಾನು ತ್ಯಜಿಸಿದ್ದೇನೆ.

೭ "ಆದ್ದರಿಂದ, ಹೇ ಬ್ರಾಹ್ಮಣಾ! ಜ್ಞಾನೋದಯ ಪಡೆದವನೆಂದು ನನ್ನನ್ನು ಪರಿಗಣಿಸು".

## ೫. ನ್ಯಾಯನಿಷ್ಠ ಹಾಗೂ ಒಳ್ಳೆಯ ಮನುಷ್ಯ

೧ ಸಧರ್ಮಿಗಳನ್ನು ಸಂಬೋಧಿಸಿ ಆ ಮಹಾಮಹಿಮ ಹೇಳಿದ: "ಯಾರು ಒಳ್ಳೆಯವರು ಮತ್ತು ನ್ಯಾಯಶೀಲರು ಎಂದು ನೀವು ನಿರ್ಧರಿಸಬೇಕಾದರೆ, ನಾಲ್ಕು ರೀತಿಯ ಜನರ ನಡುವೆ ವ್ಯತ್ಯಾಸಗಳನ್ನು ಗುರುತಿಸಲು ನೀವು ಕಲಿಯಬೇಕು.

೨ "ಸೋದರರರೇ, ಪರರ ಕಲ್ಯಾಣವನ್ನು ಕಡೆಗಣಿಸಿ ತಮ್ಮ ಕಲ್ಯಾಣಕ್ಕಾಗಿ ಶ್ರಮಿಸುವ ಒಂದು ವರ್ಗದ ಜನರಿದ್ದಾರೆ.

೩ "ಸೋದರರರೇ, ಕಾಮಲಾಲಸೆಯನ್ನು ತನ್ನಿಂದ ಕಿತ್ತೊಗೆಯಲು ಶ್ರಮಿಸುವ ಮನುಷ್ಯನಿದ್ದಾನೆ. ಆದರೆ ಆತನು, ಕಾಮಲಾಲಸೆಯನ್ನು ಕಿತ್ತೊಗೆಯುವಂತೆ ಪರರನ್ನು ಒತ್ತಾಯಿಸುವುದಿಲ್ಲ. ತನ್ನಲ್ಲಿನ ಇಚ್ಛೆಯನ್ನು ಮೂಲೋತ್ಪಾಟನ ಮಾಡಲು ಆತನು ಶ್ರಮಿಸುತ್ತಾನೆ. ಆದರೆ ಕೆಟ್ಟ ಇಚ್ಛೆಯನ್ನು ಕಿತ್ತೊಗೆಯುವಂತೆ ಆತನು ಪರರನ್ನು ಒತ್ತಾಯಿಸುವುದಿಲ್ಲ. ಅದರಂತೆಯೇ, ತನ್ನಲ್ಲಿನ ಅಜ್ಞಾನವನ್ನು ನಾಶಮಾಡಲು ಆತನು ಶ್ರಮಿಸುತ್ತಾನೆ. ಆದರೆ, ಇತರರಲ್ಲಿರುವ ಅಜ್ಞಾನವನ್ನು ನಾಶ ಮಾಡಿಕೊಳ್ಳುವಂತೆ, ಅವರನ್ನು ಆತನು ಒತ್ತಾಯಿಸುವುದಿಲ್ಲ.

೪ "ಸೋದರರರೇ, ನಿಜವಾಗಿಯೂ, ಇತರರ ಕಲ್ಯಾಣವನ್ನು ಕಡೆಗಣಿಸಿ ತನ್ನ ಕಲ್ಯಾಣವನ್ನು ಸಾಧಿಸುವಂತಹ ಮನುಷ್ಯನೀತ.

೫ "ಸೋದರರರೇ, ತಮ್ಮ ಕಲ್ಯಾಣವನ್ನು ಮಾಡಿಕೊಳ್ಳದೆ, ಪರರ ಕಲ್ಯಾಣಕ್ಕಾಗಿ ದುಡಿಯವ ಒಂದು ವರ್ಗದ ಜನರಿದ್ದಾರೆ.

೬ "ಸೋದರರರೇ, ತನ್ನ ಕಾಮಲಾಲಸೆ, ಕೆಟ್ಟ ಇಚ್ಛೆ ಮತ್ತು ಅಜ್ಞಾನವನ್ನು ಕಿತ್ತೊಗೆಯಲು ಶ್ರಮಿಸದ ಮನುಷ್ಯನೊಬ್ಬನು, ಇತರರಲ್ಲಿರುವ ಕಾಮಲಾಲಸೆ, ಕೆಟ್ಟ ಇಚ್ಛೆ ಮತ್ತು ಅಜ್ಞಾನವನ್ನು ಕಿತ್ತೊಗೆಯುವಂತೆ ಅವರನ್ನು ಒತ್ತಾಯಿಸುತ್ತಾನೆ.

೭ "ಸೋದರರರೇ, ನಿಜವಾಗಿಯೂ, ತನ್ನ ಕಲ್ಯಾಣವನ್ನು ಮಾಡಿಕೊಳ್ಳದೆ, ಪರರ ಕಲ್ಯಾಣಕ್ಕಾಗಿ ಶ್ರಮಿಸುವಂತಹ ಮನುಷ್ಯನೀತ.

೮ "ಸೋದರರರೇ, ತಮ್ಮ ಕಲ್ಯಾಣಕ್ಕಾಗಲಿ, ಪರರ ಕಲ್ಯಾಣಕ್ಕಾಗಲಿ ಶ್ರಮಿಸದ ಒಂದು ವರ್ಗದ ಜನರಿದ್ದಾರೆ.

೯ "ಸೋದರರರೇ, ತನ್ನಲ್ಲಿರುವ ಕಾಮಲಾಲಸೆ, ಕೆಟ್ಟ ಇಚ್ಛೆ ಮತ್ತು ಅಜ್ಞಾನವನ್ನು ಕಿತ್ತೊಗೆಯಲು ಶ್ರಮಿಸದ, ಅಂತೆಯೇ, ಪರರ ಕಾಮಲಾಲಸೆ, ಕೆಟ್ಟ ಇಚ್ಛೆ ಮತ್ತು ಅಜ್ಞಾನವನ್ನು ಕಿತ್ತೊಗೆಯುವಂತೆ ಅವರನ್ನು ಒತ್ತಾಯಿಸದ ಮನುಷ್ಯನಿದ್ದಾನೆ.

೧೦ "ಸೋದರರರೇ, ತನ್ನ ಕಲ್ಯಾಣಕ್ಕಾಗಲಿ, ಇತರರ ಕಲ್ಯಾಣಕ್ಕಾಗಲಿ, ಶ್ರಮಿಸದ ಮನುಷ್ಯನೀತ.

೧೧ "ಸೋದರರರೇ, ತಮ್ಮ ಸ್ವಂತ ಮತ್ತು ಪರರ ಕಲ್ಯಾಣಕ್ಕಾಗಿ ಶ್ರಮಿಸುವ ಒಂದು ವರ್ಗದ ಜನರಿದ್ದಾರೆ.

೧೨ "ಸೋದರರರೇ, ತನ್ನಲ್ಲಿರುವ ಕಾಮಲಾಲಸೆ, ಕೆಟ್ಟ ಇಚ್ಛೆ ಮತ್ತು ಅಜ್ಞಾನಗಳನ್ನು ಕಿತ್ತೊಗೆಯಲು ಶ್ರಮಿಸುವ ಮತ್ತು ಅದರಂತೆಯೇ ಇತರರಲ್ಲಿರುವ ಕಾಮಲಾಲಸೆ, ಕೆಟ್ಟ ಇಚ್ಛೆ ಮತ್ತು ಅಜ್ಞಾನಗಳನ್ನು ಕಿತ್ತೊಗೆಯುವಂತೆ ಅವರನ್ನು ಒತ್ತಾಯಿಸುವ ಮನುಷ್ಯನಿದ್ದಾನೆ.

೧೩ "ಸೋದರರೇ, ತನ್ನ ಸ್ವಂತ ಮತ್ತು ಪರರ ಕಲ್ಯಾಣಕ್ಕಾಗಿ ಶ್ರಮಿಸುವ ಮನುಷ್ಯನೀತ.
೧೪ "ಈ ಕೊನೆಯ ವ್ಯಕ್ತಿಯೇ ನ್ಯಾಯಶೀಲನೂ, ಒಳ್ಳೆಯವನು ಎಂದು ತಿಳಿಯಬೇಕು."

## ೬. ಸತ್ಕಾರ್ಯಗಳನ್ನು ಮಾಡಬೇಕಾದ ಅಗತ್ಯ

೧ ಒಂದು ಸಂದರ್ಭದಲ್ಲಿ ಆ ಮಹಾಮಹಿಮನು ತನ್ನ ಸಧರ್ಮಿಗಳಿಗೆ ಹೀಗೆ ಹೇಳಿದ:

೨ "ಸೋದರರೇ, ಸತ್ಕಾರ್ಯದ ಬಗ್ಗೆ ಭಯಪಡಬೇಡಿ. ಅದು ಸಂತೋಷಕ್ಕೆ ಮತ್ತೊಂದು ಹೆಸರು. ಏಕೆಂದರೆ 'ಸತ್ಕಾರ್ಯ' ಎಂಬ ಈ ಪದ ಅಪೇಕ್ಷಿತವಾದುದು, ಪ್ರಿಯವಾದುದು, ಮೆಚ್ಚಿಗೆಯಾದುದು, ಮತ್ತು ಆನಂದಕರವಾದುದು. "ಸೋದರರೇ, ಅಪೇಕ್ಷಿತವೂ, ಪ್ರಿಯವೂ ನೆಚ್ಚಿನದೂ, ಆನಂದಕರವೂ ಆದ ಸತ್ಕಾರ್ಯದ ಲಾಭವನ್ನು ಅನೇಕ ದಿನಗಳ ಕಾಲ ಪಡೆದಿರುವುದಕ್ಕೆ ನಾನೇ ಸಾಕ್ಷಿ.

೩ "ಈ ಫಲವು ಯಾವ ಕಾರ್ಯಗಳಿಂದ ಉಂಟಾದುದು? ನಾನು ಈಗ ಈ ರೀತಿ ಸಂತೋಷ ಮತ್ತು ಸಂತುಷ್ಟಿಗಳಿಂದ ಫಲಿತವಾಗಿರಲು ನನ್ನ ಯಾವ ಕಾರ್ಯ ಕಾರಣವಾಯಿತು? ಎಂದು ನಾನು ಅನೇಕ ಸಲ ಕೇಳಿಕೊಳ್ಳುತ್ತೇನೆ.

೪ "ನನಗೆ ದೊರಕುವ ಉತ್ತರವೆಂದರೆ: 'ಮೂರು ಸತ್ಕಾರ್ಯಗಳ ಫಲವಿದು. ದಾನ, ಸ್ವ–ನಮ್ರತೆ ಮತ್ತು ಸ್ವ–ಸಂಯಮ – ಈ ಮೂರು ಸತ್ಕಾರ್ಯಗಳಿಂದ ನನ್ನಲ್ಲಿ ಈ ಪರಿಪಕ್ವತೆಯುಂಟಾಗಿದೆ.

೫ "ಪವಿತ್ರವೂ, ಉತ್ಸವಕಾರಿಯೂ, ಸಂತೋಷದಾಯಿಯೂ, ಅನುಗ್ರಹಪ್ರದವೂ ಆದ ಬೆಳಗು. ಸುದಿನ. ಅದು ಸತ್ಪಾತ್ರರಿಗೆ ಭಿಕ್ಷೆಯನ್ನು ಕೊಟ್ಟ ಸಂತಸದ ಕಾಲ; ಸತ್ಕಾರ್ಯಗಳು, ಸನ್ನುಡಿಗಳು, ಸುವಿಚಾರಗಳು, ಸದಾಶಯಗಳು, ಅವುಗಳನ್ನು ಅನುಸರಣೆ ಮಾಡುವವರಿಗೆ ಶುಭ ಲಾಭವನ್ನು ತರುವಂತಹ ಕಾಲ.

೬ "ಅಂತಹ ಲಾಭವನ್ನು ಪಡೆದವರು ಸಂತೋಷವಾಗಿರುತ್ತಾರೆ ಮತ್ತು ತಮ್ಮ ಮಾರ್ಗದಲ್ಲಿ ಪ್ರಗತಿಶೀಲರಾಗಿರುತ್ತಾರೆ. ಆದ್ದರಿಂದ, ನೀವೂ ಕೂಡ, ರೋಗರುಜಿನಗಳಿಂದ ಮುಕ್ತರಾದ ಮತ್ತು ನಿಮ್ಮ ಬಂಧುಬಾಂಧವರೊಂದಿಗೆ ಸಂತೋಷದಿಂದಿರುವ ಈ ಮಾರ್ಗದಲ್ಲಿ ಯಶೋವಂತರಾಗಿರಿ."

## ೭ ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯ

೧ ಶ್ರಾವಸ್ತಿಯ ಜೇತವನದಲ್ಲಿದ್ದ ಒಂದು ಸಂದರ್ಭದಲ್ಲಿ, ಆ ಮಹಾಮಹಿಮನು ತನ್ನ ಸಧರ್ಮಿಗಳಿಗೆ ಹೀಗೆ ಹೇಳಿದ:

೨ "ಸೋದರರೇ, ಪರಿಶುದ್ಧ ಮತ್ತು ಸುಖಕರವಾದ ಜೀವನಕ್ಕಾಗಿ ಒಳ್ಳೆಯ ಹಾಗೂ ಮಹತ್ತ್ವಪೂರ್ಣ ನಿರ್ಣಯಗಳನ್ನು ತೆಗೆದುಕೊಂಡು ಆಚರಣೆಗೆ ತರಬೇಕಾದ ಅಗತ್ಯ ಹೆಚ್ಚಾಗಿದೆ.

೩ "ನಿಮ್ಮ ನಿರ್ಣಯಗಳು ಎಂಥವಿರಬೇಕೆಂಬುದನ್ನು ನಾನು ಹೇಳುತ್ತೇನೆ.

೪ "ನನ್ನ ಜೀವಿತಾದ್ಯಂತ ನನ್ನ ತಂದೆತಾಯಿಗಳಿಗೆ ಬೆಂಬಲ ಕೊಡುವಂತಾಗಲಿ; ನನ್ನ ಕುಲದ ಹಿರಿಯರನ್ನು ನಾನು ಗೌರವದಿಂದ ಕಾಣುವಂತಾಗಲಿ; ನಾನು ಸವಿನುಡಿಗಳನ್ನು ನುಡಿಯುವಂತಾಗಲಿ; ನಾನು ಯಾರ ಬಗ್ಗೆಯೂ ಕೆಟ್ಟ ಮಾತನ್ನು ಆಡದಂತಾಗಲಿ; ನನ್ನ ಹೃದಯವನ್ನು ಸ್ವಾರ್ಥವೆಂಬ ಮಲಿನ

ವಸ್ತುವಿನಿಂದ ವಿಮುಕ್ತ ಮಾಡಿಕೊಂಡು, ನನ್ನ ಮನೆಯಲ್ಲಿ ಉದಾರಿಯಾಗಿ, ಶುದ್ಧಹಸ್ತನಾಗಿ, ತ್ಯಾಗದಲ್ಲಿ ಸಂತೋಷವನ್ನು ಕಂಡುಕೊಂಡು, ಕೊಡುಗೆಗಳನ್ನು ಇತರರೊಡನೆ ಹಂಚಿಕೊಳ್ಳುವುದರಲ್ಲಿ ಸಂತೋಷಪಡುವಂತಹ ಭಾಗ್ಯದಿಂದ ಕೂಡಿ, ನಾನು ಉತ್ತಮ ಮನುಷ್ಯನೆನಿಸಿಕೊಳ್ಳುವಂತಾಗಲಿ ಎಂದು ನಿರ್ಣಯಿಸಿಕೊಳ್ಳಿ.

೫ "ನನ್ನ ಜೀವಿತಾದ್ಯಂತ ನಾನು ಕೋಪರಹಿತನಾಗಿರಲಿ ಮತ್ತು ಕೋಪ ಬಂದರೆ ಅದನ್ನು ಕೂಡಲೇ ನಾನು ನಿಯಂತ್ರಿಸುವಂತಾಗಲೀ ಎಂದು ನಿರ್ಣಯಿಸಿ."

೬ "ಸೋದರರರೇ, ಇವೇ ಆ ಆರು ನಿರ್ಣಯಗಳು ಇವುಗಳನ್ನು ಸ್ವೀಕರಿಸಿ ಆಚರಣೆಗೆ ತಂದಾಗ ನೀವು ಪರಿಶುದ್ಧಿಯನ್ನು ಮತ್ತು ಆನಂದ ಸ್ಥಿತಿಯನ್ನು ಪಡೆಯುತ್ತೀರಿ."

## ವಿಭಾಗ – ೩

# ಋಜುತ್ವಕ್ಕೆ ಸಂಬಂಧಿಸಿದ ಉಪದೇಶಗಳು ಮತ್ತು ಸದಾಚಾರ

## ೧. ಋಜುತ್ವ ಯಾವುದು?

೧ ಒಂದು ಸಂದರ್ಭದಲ್ಲಿ, ತನ್ನ ಭಿಕ್ಷುಬಾಂಧವರ ಒಂದು ದೊಡ್ಡ ಸಮೂಹದೊಂದಿಗೆ ಆ ಮಹಾಮಹಿಮನು, ಕೋಸಲದಲ್ಲಿ ಭಿಕ್ಷಾಯಾತ್ರೆ ಮಾಡುತ್ತಿದ್ದಾಗ, ಸಲ ಎಂಬ ಹೆಸರಿನ ಕೋಸಲದ ಬ್ರಾಹ್ಮಣರ ಒಂದು ಹಳ್ಳಿಗೆ ಬಂದ.

೨ ಕೋಸಲದಲ್ಲಿ ಭಿಕ್ಷಾಯಾತ್ರೆ ಮಾಡುತ್ತಾ ತಮ್ಮ ಹಳ್ಳಿಗೆ ಪೂಜ್ಯ ಭಗವಾನನು ಬಂದಿದ್ದಾನೆಂಬುದು ಬ್ರಾಹ್ಮಣ ಕುಟುಂಬಗಳ ಯಜಮಾನರ ಕಿವಿಗೆ ಬಿತ್ತು.

೩ ಆತನಿದ್ದಲ್ಲಿಗೇ ಹೋಗಿ ಆತನನ್ನು ಕಾಣುವುದು ಒಳ್ಳೆಯದೆಂದು ಅವರಿಗನಿಸಿತು. ಹೀಗಾಗಿ 'ಸಾಲ'ದ ಬ್ರಾಹ್ಮಣರು ಆ ಪೂಜ್ಯನ ಬಳಿಗೆ ಹೋದರು. ನಾಗರಿಕ ನಮಸ್ಕಾರ ಪ್ರತಿನಮಸ್ಕಾರಗಳ ನಂತರ ಅವರು ಆತನ ಒಂದು ಪಕ್ಕದಲ್ಲಿ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತರು.

೪ ಋಜುತ್ವಕ್ಕೆ ಆತನು ಕೊಡುವ ಅರ್ಥವೇನು ಎಂದು ಅವರು ಆ ಪೂಜ್ಯನನ್ನು ಕೇಳಿದರು.

೫ ಆಗ ಏಕಾಗ್ರಚಿತ್ತನಾದ ಆ ಮಹಾಮಹಿಮನು ಆ ಬ್ರಾಹ್ಮಣರಿಗೆ ಹೇಳಿದ: "ಮೂರು ರೀತಿಯ ಅನಾಚಾರ ಮತ್ತು ದುಷ್ಟತನಗಳು ದೇಹಕ್ಕಿವೆ; ನಾಲ್ಕು ರೀತಿಯ ಅನಾಚಾರ ಮತ್ತು ದುಷ್ಟತನಗಳು ಮಾತಿಗಿವೆ ಮತ್ತು ಮೂರು ರೀತಿಯ ಅನಾಚಾರ ಮತ್ತು ದುಷ್ಟತನಗಳು ಆಲೋಚನೆಗಳಿಗಿವೆ.

೬ "ದೈಹಿಕ ಅನಾಚಾರಗಳೆಂದರೆ – ಒಬ್ಬ ಮನುಷ್ಯನು ಬೇಡನಂತೆ ಜೀವಿಸುತ್ತಿರಬಹುದು:

(i) ಆತನ ಕೈಗಳು ರಕ್ತದಲ್ಲಿ ಮಿಂದಿರುತ್ತವೆ – ಆತನು ಕೊಲ್ಲುವ ಮತ್ತು ಕೊಚ್ಚುವ ಕಾರ್ಯದಲ್ಲಿ ನಿರತನಾಗಿರುತ್ತಾನೆ. ಅವನು ಜೀವಿಗಳ ಬಗ್ಗೆ ನಿರ್ದಯಿಯಾಗಿರಬಹುದು.

(ii) ಆತನು ಹಳ್ಳಿಗಳಲ್ಲಿ ಮತ್ತು ಕಾಡುಗಳಲ್ಲಿ, ತನಗೆ ಸೇರದಿರುವ, ಪರರಿಗೆ ಸೇರಿರುವ ವಸ್ತುಗಳನ್ನು ಕಳ್ಳನೋಪಾದಿಯಲ್ಲಿ ಅಪಹರಿಸಬಹುದು, ಅಥವಾ

(iii) ಆತನು, ತಾಯಿ ಅಥವಾ ತಂದೆ ಅಥವಾ ಸೋದರ ಅಥವಾ ಸೋದರಿ ಅಥವಾ ಸಂಬಂಧಿಗಳ ಸಂರಕ್ಷಣೆಯಲ್ಲಿ ಅವಿವಾಹಿತ ಹುಡುಗಿಯೊಂದಿಗೆ, ಅದೇ ರೀತಿ, ಮದುವೆಗೆ ನಿಶ್ಚಿತಾರ್ಥವಾಗಿರುವ, ಅಥವಾ ಮಾತುಕೊಡಲಾಗಿರುವ ಹಾಗೂ ನಿಶ್ಚಿತಾರ್ಥದ ಮಾಲೆಗಳನ್ನು ಧರಿಸಿರುವಂತಹ ಹುಡುಗಿಯರೊಂದಿಗೆ ಸಂಭೋಗ ಮಾಡುವಂಥ ಅತ್ಯಾಚಾರಿ ಇರಬಹುದು.

೭ ಮಾತಿನ ದುರಾಚಾರಕ್ಕೆ ಸಂಬಂಧಿಸಿದಂತೆ – ಒಬ್ಬ ಮನುಷ್ಯನು (೧) ಸುಳ್ಳುಗಾರನಾಗಿದ್ದು, ಒಂದು ಸಮಾವೇಶ ಅಥವಾ ಗ್ರಾಮಸಭೆಯಲ್ಲಿ ಅಥವಾ ಕುಟುಂಬ ಪರಿಷತ್ತಿನಲ್ಲಿ ಅಥವಾ ಅರಮನೆಯಲ್ಲಿ ಅಥವಾ ತನ್ನ ವೃತ್ತಿ ಸಂಘದಲ್ಲಿ, ಸಾಕ್ಷಿಯನ್ನು ಹೇಳಲು ಕೇಳಿದಾಗ, ತನಗೆ ಗೊತ್ತಿಲ್ಲದಿದ್ದರೂ

ಗೊತ್ತಿದೆಯೆಂದೂ ಅಥವಾ ತಾನು ಕಂಡಿಲ್ಲದಿದ್ದರೂ ಕಂಡಿದ್ದೇನೆಂದೂ ಅಥವಾ ಕಂಡಿದ್ದರೂ ಕಂಡಿಲ್ಲವೆಂದೂ ಸ್ವಹಿತಕ್ಕಾಗಿ ಅಥವಾ ಇತರರ ಹಿತಕ್ಕಾಗಿ ಅಥವಾ ಅಲ್ಪಸ್ವಲ್ಪ ಲಾಭಕ್ಕಾಗಿ, ಆತನು ಪ್ರಯತ್ನಪೂರ್ವಕವಾಗಿ ಸುಳ್ಳು ಹೇಳಬಹುದು. ಅಥವಾ (೨)ಆತನು ಚಾಡಿಕೋರನಾಗಿರಬಹುದು; ಒಂದು ಗುಂಪಿನ ಜನರನ್ನು ಮತ್ತೊಂದು ಗುಂಪಿನ ಜನರ ಮೇಲೆ ಎತ್ತಿಕಟ್ಟುವ ಇಚ್ಛೆಯಿಂದ, ಆತನು ಇಲ್ಲಿ ಕೇಳಿದ್ದನ್ನು ಅವರ ಕಿವಿಯ ಮೇಲೆ ಹಾಕುವ ಮತ್ತು ಅಲ್ಲಿ ಕೇಳಿದ್ದನ್ನು ಇವರ ಕಿವಿಯ ಮೇಲೆ ಹಾಕುವ ಕೆಲಸ ಮಾಡಬಹುದು. ಅಂಥವನು ಶಾಂತಿಯನ್ನು ಕದಡುವ ಮತ್ತು ಅಶಾಂತಿಯನ್ನು ಹಬ್ಬಿಸುವಂತಹ ವ್ಯಕ್ತಿ: ವೈಷಮ್ಯ ಹುಟ್ಟಿಸುವುದೇ ಆತನ ಸಂತೋಷ, ಹರ್ಷ ಮತ್ತು ಆಮೋದವಾಗಿರುವುದರಿಂದ, ವೈಷಮ್ಯ ಭಾವವೇ ಆತನ ಹೇಳಿಕೆಗಳಿಗೆ ಪ್ರೇರಕವಾಗಿರುತ್ತದೆ ಅಥವಾ (೩) ಆತನು ಕೆಟ್ಟ ನಾಲಿಗೆಯವನಾಗಿದ್ದು ಆತನು ಹೇಳುವಂತಹ ಮಾತುಗಳೆಲ್ಲ ಒರಟಾಗಿಯೂ, ಕಠಿಣವಾಗಿಯೂ ಇರುವುದರಿಂದ, ಇತರರಿಗೆ ನೋವನ್ನುಂಟುಮಾಡಲು ಅವರನ್ನು ಘಾಸಿಗೊಳಿಸಲು, ಅವರ ಕೋಪವನ್ನು ಕೆರಳಿಸಲು ಮತ್ತು ಅವರಲ್ಲಿ ವ್ಯಗ್ರತೆಯನ್ನುಂಟುಮಾಡಲು ಕಾರಣವಾಗಿರುತ್ತವೆ. ಅಥವಾ (೪) ಆತನು ಒಬ್ಬ ಹರಟೆಕೋರನಾಗಿದ್ದು ಸಮಯಸಂದರ್ಭಗಳನ್ನರಿಯದೆ, ಸತ್ಯ ಸಂಗತಿಗಳನ್ನು ಕಡೆಗಣಿಸಿ, ಯಾವಾಗಲೂ ನಿರರ್ಥಕ ಪ್ರಲಾಪಗಳಲ್ಲಿ ತೊಡಗಿರಬಹುದು; ಎಂದೂ ಸಿದ್ಧಾಂತಕ್ಕಾಗಲೀ ನಿಯಮಕ್ಕಾಗಲೀ ಸಂಬಂಧಿಸದ ಆದರೆ ಯಾವಾಗಲೂ ಕ್ಷುಲ್ಲಕ, ಸಮಯೋಚಿತವಲ್ಲದ ಕ್ಷುದ್ರ ವಿಷಯಗಳ ಬಗ್ಗೆ ಅಥವಾ ಗೊತ್ತುಗುರಿಯಿಲ್ಲದ ಮತ್ತು ಉಪಯುಕ್ತವಲ್ಲದ ವಸ್ತುವಿಷಯಗಳ ಬಗ್ಗೆ ಗಳಹುತ್ತಿರಬಹುದು.

೮ "ದುರ್ವಿಚಾರಕ್ಕೆ ಸಂಬಂಧಿಸಿದಂತೆ, ಒಬ್ಬ ಮನುಷ್ಯನು (೧) ಲೋಭಿಯಾಗಿದ್ದು ಪರರ ಸಾಧನ ಸಾಮಗ್ರಿಗಳನ್ನು ತನ್ನವೇ ಎಂದು ಹಂಬಲಿಸುತ್ತಾ ಅವುಗಳನ್ನು ದೋಚಿಕೊಳ್ಳಬಹುದು. ತನ್ನ ಸುತ್ತಮುತ್ತಲಿನ ಜೀವಿಗಳು ಸಾಯಲಿ, ಧ್ವಂಸವಾಗಲಿ, ವಿನಾಶವಾಗಲಿ ಅಥವಾ ಅವು ಇಲ್ಲವಾಗಲಿ ಎಂದು ಅಪೇಕ್ಷಿಸುವ, ಕೇಡುಬಯಸುವ ದುಷ್ಟ ಹೃದಯದವನಿರಬಹುದು ಅಥವಾ (೨) ಪ್ರಪಂಚವನ್ನು ನೋಡುವ ದೃಷ್ಟಿಯಲ್ಲಿ ಆತನು ದೋಷಪೂರಿತನಾಗಿರಬಹುದು ಅಥವಾ ಆತನು ತಪ್ಪಾದ ಪರಿಕಲ್ಪನೆಗಳನ್ನು ಹೊಂದಿರಬಹುದು – ಭಿಕ್ಷೆ ಅಥವಾ ತ್ಯಾಗ ಅಥವಾ ದೀಕ್ಷೆಗಳಂತಹ ವಿಷಯಗಳಿಲ್ಲವೆಂದೂ, ಒಳ್ಳೆಯ ಮತ್ತು ಕೆಟ್ಟ ಕೃತ್ಯಗಳು, ಅವುಗಳ ಫಲ ಮತ್ತು ಫಲಾನುಭವಗಳೆಂಬವು ಇಲ್ಲವೆಂದೂ, ಈ ಪ್ರಪಂಚ ಅಥವಾ ಮತ್ತಾವ ಪ್ರಪಂಚವೆಂಬುದೂ ಇಲ್ಲವೆಂದೂ; ಇನ್ನೆಲ್ಲಿಯೋ ತಂದೆತಾಯಿಗಳು ಅಥವಾ ಬಂಧುಬಾಂಧವರೆಂಬುವರು ಇಲ್ಲವೆಂದೂ ಸಂಯಮ ಮಾರ್ಗದಲ್ಲಿ ಮುಂದುವರೆದು ನೇರ ನುಡಿಯಿಂದ ಕೂಡಿ ಇಹ ಮತ್ತು ಪರಗಳೆಂಬುದನ್ನು ಅರಿತು, ಅದನ್ನು ಇತರರಿಗೂ ತಿಳಿಸಬಲ್ಲಂಥ ಬ್ರಾಹ್ಮಣರಾಗಲಿ ಅಥವಾ ಸಂನ್ಯಾಸಿಗಳಾಲಿ ಇಲ್ಲವೆಂದೂ, ಆತನು ಭಾವಿಸಬಹುದು.

೯ "ತದ್ವಿರುದ್ಧವಾಗಿ, ದೇಹಕ್ಕೆ ಮೂರು ರೀತಿಯ, ಮಾತಿಗೆ ನಾಲ್ಕು ರೀತಿಯ ಮತ್ತು ಆಲೋಚನೆಗಳಿಗೆ ಮೂರು ರೀತಿಯ ಸದಾಚಾರಗಳು ಮತ್ತು ಒಳ್ಳೆಯತನಗಳಿವೆ.

೧೦ "ದೇಹದ ಸದಾಚಾರಕ್ಕೆ ಸಂಬಂಧಿಸಿದಂತೆ, ಒಬ್ಬ ಮನುಷ್ಯನು, (೧) ತನ್ನಿಂದ ಆಗಬಹುದಾದ ಎಲ್ಲಾ ರೀತಿಯ ಕೊಲೆಯನ್ನೂ ತೊರೆಯುತ್ತಾನೆ ಮತ್ತು ಯಾವುದನ್ನೇ ಕೊಲ್ಲುವುದರಿಂದ ದೂರವಿರುತ್ತಾನೆ. ಕುಡುಗೋಲು ಮತ್ತು ಕತ್ತಿಗಳನ್ನು ಅತ್ತ ಎಸೆದು ಆತನು ನಿಷ್ಕಪಟ ಹಾಗೂ

ದಯಾಪೂರ್ಣ ಬದುಕನ್ನು ನಡೆಸುತ್ತಾನೆ. ಜೀವಿಸಿರುವ ಪ್ರತಿಯೊಂದರ ಮೇಲೂ ಆತನು ಕರುಣೆ ಮತ್ತು ಅನುಕಂಪಗಳನ್ನು ಹೊಂದಿರುತ್ತಾನೆ. (೨) ತನ್ನಿಂದ ಕಳ್ಳತನವನ್ನು ದೂರ ಮಾಡುತ್ತಾನೆ. ಮತ್ತು ಇತರರು ತನಗೆ ಕೊಟ್ಟದ್ದನ್ನುಳಿದು ಮತ್ತೇನನ್ನೂ ಅವರಿಂದ ಆತನು ತೆಗೆದುಕೊಳ್ಳುವುದಿಲ್ಲ. ಆತನು ಪ್ರಾಮಾಣಿಕ ಬದುಕನ್ನು ಸಾಗಿಸುತ್ತಾನೆ. (೩) ವಿಷಯ ಸುಖಕ್ಕಾಗಿ ತನ್ನಿಂದ ಆಗಬಹುದಾದ ಎಲ್ಲ ಅನಾಚಾರವನ್ನು ದೂರ ಮಾಡಿ ಆತನು ಅವಿವಾಹಿತರೊಡನೆ ಸಂಭೋಗವನ್ನು ತೊರೆಯುತ್ತಾನೆ. ತಂದೆ, ತಾಯಿ, ಸೋದರ, ಸೋದರಿ ಅಥವಾ ಸಂಬಂಧಿಗಳ ಪಾಲನೆಯಲ್ಲಿರುವ ಹುಡುಗಿಯೊಂದಿಗೆ ಲೈಂಗಿಕ ಸಂಬಂಧ ಹೊಂದಿರುವುದಿಲ್ಲ. ವಿವಾಹ ನಿಶ್ಚಿತಾರ್ಥವಾಗಿರುವ ವಿವಾಹಕ್ಕಾಗಿ ವಾಗ್ದಾನವಾಗಿರುವ ಮತ್ತು ನಿಶ್ಚಿತಾರ್ಥದ ಮಾಲೆಯನ್ನು ಧರಿಸಿರುವ ಹುಡುಗಿಯರೊಂದಿಗೆ ಆತನು ಲೈಂಗಿಕ ಸಂಬಂಧ ಹೊಂದಿರುವುದಿಲ್ಲ.

೧೧ "ಮಾತಿನ ಸದಾಚಾರಕ್ಕೆ ಸಂಬಂಧಿಸಿದಂತೆ – (೧) ಒಬ್ಬ ಮನುಷ್ಯನು ಸುಳ್ಳನ್ನು ತನ್ನಿಂದ ದೂರ ಮಾಡುತ್ತಾನೆ ಮತ್ತು ಸುಳ್ಳು ಹೇಳುವುದರಿಂದ ದೂರವಿರುತ್ತಾನೆ. ಸಮಾವೇಶ ಅಥವಾ ಗ್ರಾಮಸಭೆ, ಕೌಟುಂಬಿಕ ಮಂಡಲಿ ಅಥವಾ ಅರಮನೆ ಅಥವಾ ಆತನ ವೃತ್ತಿಸಂಘಗಳ ಎದುರು ಸಾಕ್ಷಿಯನ್ನು ಹೇಳಲು ಕರೆದಾಗ, ಆತನು ತನಗೆ ಗೊತ್ತಿಲ್ಲದಾಗ, ಗೊತ್ತಿಲ್ಲವೆಂದೂ ತನಗೆ ಗೊತ್ತಿದ್ದಾಗ, ಗೊತ್ತಿದೆಯೆಂದೂ ತಾನು ನೋಡದಿದ್ದಾಗ ನೋಡಿಲ್ಲವೆಂದೂ ಮತ್ತು ತಾನು ನೋಡಿದ್ದಾಗ ನೋಡಿದ್ದನೆಂದೂ ಹೇಳುತ್ತಾನೆ. ಮತ್ತು ತನ್ನ ಹಿತಾಸಕ್ತಿಗಾಗಲಿ ಅಥವಾ ಪರರ ಹಿತಾಸಕ್ತಿಯಿಂದಾಗಲಿ ಅಥವಾ ಮತ್ತಾವುದೇ ಕ್ಷುಲ್ಲಕ ಲಾಭಕ್ಕಾಗಿ ಆತನು ಪ್ರಯತ್ನಪೂರ್ವಕವಾಗಿ ಸುಳ್ಳು ಹೇಳುವುದಿಲ್ಲ. (೨) ತನ್ನಿಂದ ಆತನು ಎಲ್ಲ ವಿಧವಾದ ಚಾಡಿಕೋರತನವನ್ನು ದೂರ ಮಾಡುತ್ತಾನೆ ಮತ್ತು ಮತ್ತೆಲ್ಲಿಯಾದರೂ ಕೇಳಿದ ವಿಷಯವನ್ನು ಇಲ್ಲಿ ಹೇಳುವುದಿಲ್ಲ. ಆತನು ಸಾಮರಸ್ಯವನ್ನು ಹೆಚ್ಚಿಸುವಂಥವನು, ಹಾಗೆಯೇ ಪ್ರೀತಿ ವಿಶ್ವಾಸವನ್ನು ಉಳಿಸುವಂಥವನು. ಏಕೆಂದರೆ ಮೈತ್ರಿಯು ಆತನ ಸಂತೋಷ, ನಲಿವು ಮತ್ತು ಹಿಗ್ಗು. (೩) ಆತನ ಮಾತಿನಲ್ಲಿ ಯಾವುದೇ ಕಹಿಭಾವವಿರುವುದಿಲ್ಲ. ಅಲ್ಲದೆ ಕಟುನುಡಿಗಳಿಂದ ಆತನು ವಿಮುಖನಾಗುತ್ತಾನೆ, ಆತನು ಏನು ಹೇಳುತ್ತಾನೊ ಅದು ಕಠೋರವಾಗಿರದೆ ಸಂತೋಷಕರವಾಗಿರುತ್ತದೆ, ಸ್ನೇಹಪೂರ್ಣವಾಗಿರುತ್ತದೆ, ಆತ್ಮೀಯವಾಗಿರುತ್ತದೆ, ಸೌಜನ್ಯಪೂರ್ಣವಾಗಿರುತ್ತದೆ, ಹಿತಕರವಾಗಿರುತ್ತದೆ ಮತ್ತು ಎಲ್ಲರಿಗೂ ಪ್ರಿಯವಾಗಿರುತ್ತದೆ. (೪) ಆತನು ಹರಟೆಕೋರನಾಗಿರುವುದಿಲ್ಲ, ಹರಟೆಯಿಂದ ಆತನು ದೂರವಿರುತ್ತಾನೆ, ಸತ್ಯ ಸಂಗತಿಗೆ ಅನುಗುಣವಾಗಿ ಹಾಗೂ ಸಂದರ್ಭಾನುಸಾರವಾಗಿಯೂ, ಯಾವಾಗಲೂ ಉಪಯುಕ್ತ ರೀತಿಯಲ್ಲಿಯೂ ಸಿದ್ಧಾಂತ ಹಾಗೂ ನಿಯಮಗಳಿಗೆ ಅನುಸಾರವಾಗಿಯೂ ಆತನು ಆಡುವ ಮಾತು ಸಂದರ್ಭೋಚಿತವಾಗಿರುತ್ತದೆ, ಸ್ಮರಣೀಯವಾಗಿರುತ್ತದೆ, ಜ್ಞಾನದಾಯಿಯಾಗಿರುತ್ತದೆ, ಚೆನ್ನಾಗಿ ನಿಯಂತ್ರಿತವಾಗಿರುತ್ತದೆ ಮತ್ತು ಲಾಭದಾಯಕವಾಗಿರುತ್ತದೆ.

೧೨ "ಸದ್ವಿಚಾರಗಳಿಗೆ ಸಂಬಂಧಿಸಿದಂತೆ – (೧) ಒಬ್ಬ ಮನುಷ್ಯನು ಇತರರ ಸಾಧನ ಸಲಕರಣೆಗಳನ್ನು ಅಪಹರಿಸುವುದರಿಂದ ದೂರವಿರುತ್ತಾನೆ. ಇತರರ ಸಾಧನಸಾಮಗ್ರಿಗಳು ತನ್ನವೇ ಎಂಬ ಹಂಬಲದಿಂದ ಆತನು ಎಂದೂ ಅಪಹರಿಸುವುದಿಲ್ಲ. (೨) ಯಾವುದೇ ರೀತಿಯ ದ್ರೋಹ ಮತ್ತು ಕೆಡುಕನ್ನುಂಟುಮಾಡುವ ವಿಚಾರವನ್ನು ಆತನು ಹೊಂದಿರುವುದಿಲ್ಲ, ತನ್ನ ಸುತ್ತಮುತ್ತಲಿನ ಜೀವಿಗಳು ಎಲ್ಲಾ ರೀತಿಯ ಶತ್ರುತ್ವ ಮತ್ತು ದೌರ್ಜನ್ಯಗಳಿಂದ ಮುಕ್ತವಾಗಿ, ಶಾಂತಿ ಮತ್ತು ಸಂತೋಷಗಳಿಂದ

ಬಾಳಬೇಕೆಂಬುದೇ ಆತನ ಸದಾಶಯ. (೩) ಆತನು ತನ್ನ ಮನೋಭಾವ ಮತ್ತು ತಿಳಿವಳಿಕೆಗಳಲ್ಲಿ ಸರಿಯಾಗಿರುತ್ತಾನೆ.

೧೩ "ಸದಾಚಾರ ಮತ್ತು ದುರಾಚಾರಗಳಿಗೆ ನಾನು ಕೊಡುವ ಅರ್ಥವಿದು."

## ೨. ಋಜುತ್ವದ ಅಗತ್ಯ

೧ ಅನಂತರ ಪಾಟಲಿಗ್ರಾಮದ ಶ್ರೀಸಾಮಾನ್ಯ ಸೋದರರನ್ನು ಸಂಬೋಧಿಸಿ ಆ ಮಹಾಮಹಿಮ ಹೀಗೆ ಹೇಳಿದ:

೨ "ಗೃಹಸ್ಥರೇ, ದುಷ್ಟ ಮತ್ತು ಅನೀತಿವಂತನಿಗೆ ಆಗುವಂತಹ ಹಾನಿಗಳುಂಟು.

೩ "ದುಷ್ಟ ಮತ್ತು ಅನೀತಿವಂತ ಮನುಷ್ಯನು ತನ್ನ ಆಲಸ್ಯದಿಂದಾಗಿ, ತನ್ನ ಸಂಪತ್ತನ್ನು ಬಹಳವಾಗಿ ಕಳೆದುಕೊಳ್ಳುತ್ತಾನೆ.

೪ "ಅದಲ್ಲದೆ, ಆತನ ಬಗ್ಗೆ ಕೆಟ್ಟ ಸಮಾಚಾರ ಹಬ್ಬಿರುತ್ತದೆ. ಆದ್ದರಿಂದ ಪ್ರಪಂಚದ ದೃಷ್ಟಿಯಲ್ಲಿ ಆತನು ಅಪಕೀರ್ತಿಗೆ ಪಾತ್ರನಾಗಿರುತ್ತಾನೆ.

೫ "ಅವನು ಯಾರ ಸಹವಾಸವನ್ನೇ ಮಾಡಲಿ – ಅವರು ಕ್ಷತ್ರಿಯರಾಗಿರಲಿ ಅಥವಾ ಬ್ರಾಹ್ಮಣರಾಗಿರಲಿ, ಅಥವಾ ಕುಟುಂಬದ ಯಜಮಾನರಾಗಿರಲಿ, ಅಥವಾ ವಿರಕ್ತರಾಗಿರಲಿ, ಅಂಥವರ ಜೊತೆ ಆತನು ಕಪಟತನದಿಂದ ಅಥವಾ ಗೊಂದಲಮಯ ಮನಸ್ಸಿನಿಂದ ಸೇರಬೇಕಾಗುತ್ತದೆ. ಆತನು ಭಯರಹಿತನಾಗಿರುವುದಿಲ್ಲ. ಇದು ಮೂರನೆಯ ಹಾದಿ.

೬ "ಅಲ್ಲದೆ ಅವನಿಗೆ ಮನಃಶಾಂತಿ ಇರುವುದಿಲ್ಲ. ಸಾಯುವಾಗ ಕ್ಷೋಭೆಯಿಂದ ಕೂಡಿರುತ್ತಾನೆ.

೭ "ಗೃಹಸ್ಥರೇ, ದುಷ್ಟ ಹಾಗೂ ಅನೀತಿವಂತ ಮನುಷ್ಯನಿಗೆ ಅಂತಹ ಕೇಡುಗಳುಂಟಾಗುತ್ತದೆ.

೮ "ಸದ್ಗುಣಿಯಾಗಿ ಬದುಕುವ ಸದಾಚಾರಿಯಾದ ಮನುಷ್ಯನಿಗೆ ಉಂಟಾಗುವ ಪ್ರಯೋಜನಗಳನ್ನು ಪರಿಶೀಲಿಸಿ.

೯ "ಸದ್ಗುಣಿಯಾಗಿ ಮತ್ತು ಸದಾಚಾರದಿಂದ ಬದುಕುತ್ತಿರುವ ಮನುಷ್ಯನು ತನ್ನ ಪರಿಶ್ರಮದಿಂದಲೇ ಹೇರಳ ಸಂಪತ್ತನ್ನು ಗಳಿಸುತ್ತಾನೆ.

೧೦ "ಅಲ್ಲದೆ ಅವನು ಸುಪ್ರಸಿದ್ಧನಾಗಿರುತ್ತಾನೆ. ಆತನಿಗೆ ಎಲ್ಲಾ ಕಡೆಯೂ ಗೌರವಾದರಗಳು ಲಭಿಸುತ್ತವೆ.

೧೧ "ಆತನು ಯಾರ ಸಹವಾಸದಲ್ಲೇ ಇರಲಿ – ಅವರು ಕ್ಷತ್ರಿಯರಾಗಿರಲಿ, ಬ್ರಾಹ್ಮಣರಾಗಿರಲಿ ಅಥವಾ ಕುಟುಂಬದ ಯಜಮಾನರಾಗಿರಲಿ ಅಥವಾ ವಿರಕ್ತರಾಗಿರಲಿ – ಆತನು ಧೈರ್ಯವಾಗಿ ಮತ್ತು ಆತ್ಮವಿಶ್ವಾಸದಿಂದ ಅವರೊಡನೆ ಸೇರುತ್ತಾನೆ.

೧೨ "ಅಲ್ಲದೆ, ಆತನು ಮನಃಶಾಂತಿಯಿಂದ ಜೀವಿಸುತ್ತಾನೆ ಮತ್ತು ಸಾಯುವಾಗ ಪ್ರಶಾಂತ ಮನಸ್ಸುಳ್ಳವನಾಗಿರುತ್ತಾನೆ.

೧೩ "ತಿಳಿಗೇಡಿಯು ತಾನು ಕೆಟ್ಟದ್ದನ್ನು ಮಾಡುತ್ತಿರುವಾಗ ತನ್ನ ತಪ್ಪನ್ನು ತಿಳಿದಿರುವುದಿಲ್ಲ. ಬೆಂಕಿಯೋಪಾದಿಯಲ್ಲಿ, ಆತನು ತನ್ನ ಕೆಟ್ಟ ಕೃತ್ಯಗಳನ್ನೇ ಸೇವಿಸುತ್ತಾನೆ.

೧೪ "ನಿರುಪದ್ರವಿಗಳೂ, ಸರಳ ಮನಸ್ಕರೂ ಆದ ಜನರಿಗೆ ಯಾವಾತ ಕೇಡನ್ನುಂಟುಮಾಡುತ್ತಾನೋ

ಅಂಥವನು, ಬಹುಬೇಗ ತೀವ್ರತರ ಹಾನಿಗೆ ಒಳಗಾಗುತ್ತಾನೆ ಅಥವಾ ವಿಕೃತ ಮನಸ್ಕನಾಗಿ ತನ್ನೆಲ್ಲಾ ಸಂಪತ್ತನ್ನೂ, ರಕ್ತಸಂಬಂಧಿಗಳನ್ನು ಕಳೆದುಕೊಳ್ಳುತ್ತಾನೆ."

## ೩. ಋಜುತ್ವ ಮತ್ತು ಪ್ರಾಪಂಚಿಕ ಹಕ್ಕುಗಳು

೧ ಒಂದು ಸಂದರ್ಭದಲ್ಲಿ, ಅಳಿಲುಗಳಿಗೆ ಆಹಾರವನ್ನು ಕೊಡಲಾಗುತ್ತಿದ್ದ ರಾಜಗೃಹದ ಒಂದು ಬಿದಿರಿನ ತೋಪಿನಲ್ಲಿ, ಆ ಮಹಾಮಹಿಮನು ತಂಗಿದ್ದ. ದಕ್ಷಿಣ ದಿಕ್ಕಿನ ಗುಡ್ಡಗಳ ಆಸುಪಾಸಿನಲ್ಲಿ ಸಾರಿಪುತ್ತನು ಬಹುದೊಡ್ಡ ಭಿಕ್ಷುಸಮೂಹದೊಂದಿಗೆ ಭಿಕ್ಷಾಯಾತ್ರೆಯನ್ನು ಕೈಗೊಂಡಿದ್ದ.

೨ ತನ್ನ ಪ್ರವಾಸ ಕಾಲದಲ್ಲಿ ಸಾರಿಪುತ್ತನು, ರಾಜಗೃಹದಲ್ಲಿ ಒಂದು ಮಳೆಗಾಲವನ್ನು ಕಳೆದಿದ್ದ ಭಿಕ್ಷುವೊಬ್ಬನನ್ನು ಸಂಧಿಸಿದ. ಸ್ನೇಹಪೂರ್ವಕ ಹಾಗೂ ಸಭ್ಯತಾ ನಮಸ್ಕಾರ ಮತ್ತು ಪ್ರತಿನಮಸ್ಕಾರಗಳ ನಂತರ, ಸಾರಿಪುತ್ತನು ಮಹಾಮಹಿಮನ ಆರೋಗ್ಯದ ಬಗ್ಗೆ ಆತನನ್ನು ವಿಚಾರಿಸಿದ. ಆತನು ಆರೋಗ್ಯವಂತನಾಗಿದ್ದಾನೆ ಮತ್ತು ಸೋದರ ಭಿಕ್ಷುಗಳೂ ಕೂಡ ಆರೋಗ್ಯದಿಂದಿದ್ದಾರೆ ಎಂದು ತಿಳಿದ ಮೇಲೆ, ರಾಜಗೃಹದ ತಂಡುಲಪಾಲ ಬಾಗಿಲಿನ ಧನಂಜನಿ ಎಂಬ ಬ್ರಾಹ್ಮಣನ ಆರೋಗ್ಯದ ಬಗ್ಗೆಯೂ ಸಾರಿಪುತ್ತನು ವಿಚಾರಿಸಿ ಆತನೂ ಅರೋಗ್ಯದಿಂದಿದ್ದಾನೆ ಎಂದು ತಿಳಿದ.

೩ "ಬ್ರಾಹ್ಮಣ ಧನಂಜನಿಯು ಉತ್ಸಾಹದಿಂದಿದ್ದಾನೆಯೆ ಮತ್ತು ಶ್ರದ್ಧಾವಂತನಾಗಿದ್ದಾನೆಯೆ ಎಂದು ಆ ಭಿಕ್ಷುವನ್ನು ಸಾರಿಪುತ್ತನು ಮತ್ತೆ ಕೇಳಿದ.

೪ "ಧನಂಜನಿಯಲ್ಲಿ ಶ್ರದ್ಧಾಪೂರ್ವಕವಾದ ಉತ್ಸಾಹವಿರುವುದು ಹೇಗೆ ಸಾಧ್ಯ! ಆತನು ಬ್ರಾಹ್ಮಣರು ಮತ್ತು ಗೃಹಸ್ಥರನ್ನು ಶೋಷಣೆ ಮಾಡಲು ರಾಜನನ್ನೂ, ಮತ್ತು ರಾಜನನ್ನು ಲೂಟಿ ಮಾಡಲು ಬ್ರಾಹ್ಮಣರು ಮತ್ತು ಗೃಹಸ್ಥರನ್ನು ಬಳಸಿಕೊಳ್ಳುತ್ತಾನೆ. ಅಲ್ಲದೆ, ಶಾಂತಿಪ್ರಿಯ ಹಿನ್ನೆಲೆಯಿದ್ದ, ಶಾಂತಿಪೂರ್ಣಗಳಾಗಿದ್ದ ಆತನ ಹೆಂಡತಿಯೂ ಸತ್ತುಹೋಗಿದ್ದಾಳೆ. ಶಾಂತಿಪ್ರಿಯ ಹಿನ್ನೆಲೆಯಿಲ್ಲದ ಹಾಗೂ ಶಾಂತಿಪ್ರಿಯಳಲ್ಲದ ಮತ್ತೊಬ್ಬಳನ್ನು ಆತನು ತನ್ನ ಹೆಂಡತಿಯನ್ನಾಗಿ ಮಾಡಿಕೊಂಡಿದ್ದಾನೆ' ಎಂದು ಆ ಭಿಕ್ಷು ಹೇಳಿದ.

೫ "ಇದು ಕೆಟ್ಟ ಸುದ್ದಿ. ಧನಂಜನಿ ಉತ್ಸಾಹಶಾಲಿಯಾಗಿಲ್ಲವೆಂದು ಕೇಳುವುದು ಕೆಟ್ಟ ಸುದ್ದಿ. ಬಹುಶಃ ಎಲ್ಲಾದರೂ, ಎಂದಾದರೂ ನಾನು ಅವನನ್ನು ಭೇಟಿಯಾಗಬಹುದು. ಆಗ ಅವನೊಡನೆ ಈ ವಿಷಯವನ್ನು ಪ್ರಸ್ತಾಪಿಸಲು ಇಷ್ಟಪಡುತ್ತೇನೆ.'

೬ ತನಗೆ ಇಷ್ಟಬಂದಷ್ಟು ದಿನ ದಕ್ಷಿಣ ದಿಕ್ಕಿನ ಬೆಟ್ಟಗಳಲ್ಲಿ ವಾಸಿಸಿದ ಮೇಲೆ, ರಾಜಗೃಹವನ್ನು ಮುಟ್ಟುವವರೆಗೂ, ಸಾರಿಪುತ್ತನು ತನ್ನ ಭಿಕ್ಷಾಪ್ರವಾಸವನ್ನು ಮುಂದುವರೆಸಿದ. ರಾಜಗೃಹವನ್ನು ಸೇರಿದ ಮೇಲೆ, ಅಲ್ಲಿ ಬಿದಿರುತೋಪಿನಲ್ಲಿ ತನ್ನ ವಸತಿಯನ್ನು ಮಾಡಿಕೊಂಡ.

೭ ಮುಂಜಾನೆ, ಭಿಕ್ಷುವಿನ ಉಡುಪು ಧರಿಸಿ, ಭಿಕ್ಷಾಪಾತ್ರೆಯನ್ನು ಕೈಯಲ್ಲಿ ಹಿಡಿದು, ಬ್ರಾಹ್ಮಣ ಧನಂಜನಿಯು, ಕೊಟ್ಟಿಗೆಯಲ್ಲಿ ತನ್ನ ಹಸುಗಳ ಹಾಲನ್ನು ಕರೆಯುವುದನ್ನು ನೋಡಲು ನಗರದಿಂದ ಹೋದ ಸಮಯದಲ್ಲಿ, ಸಾರಿಪುತ್ರನು ಭಿಕ್ಷಾರ್ಥಿಯಾಗಿ ರಾಜಗೃಹಕ್ಕೆ ಹೋದ.

೮ ಭಿಕ್ಷೆಯನ್ನು ಪಡೆದು, ಊಟ ಮುಗಿಸಿದ ಅನಂತರ, ಸಾರಿಪುತ್ತನು, ಬ್ರಾಹ್ಮಣನನ್ನು ಹುಡುಕಿಕೊಂಡು ಹೊರಟ. ಆತನು ಬರುತ್ತಿರುವುದನ್ನು ಕಂಡು ಬ್ರಾಹ್ಮಣನು ಆತನ ಭೇಟಿಗಾಗಿ ಎದುರು ಬಂದ. 'ಊಟ ಮಾಡುವುದಕ್ಕೆ ಮೊದಲು, ಸ್ವಲ್ಪ ಹಾಲು ಕುಡಿಯಲು ಸಮಯವಿದೆ' ಎಂದು ಆತನು ಸಾರಿಪುತ್ರನಿಗೆ ಹೇಳಿದ.

೯ "ಇಲ್ಲ ಬ್ರಾಹ್ಮಣ, ಇಂದು ನಾವು ಊಟವನ್ನು ಮುಗಿಸಿದ್ದೇನೆ ಮತ್ತು ಮಧ್ಯಾಹ್ನದ ಬಿಸಿಲಿನಲ್ಲಿ ನಾನು ಮರದ ನೆರಳಿನಲ್ಲಿ ವಿಶ್ರಾಂತಿ ಪಡೆಯುತ್ತೇನೆ. ನೀನು ನನ್ನನ್ನು ಕಾಣಲು ಅಲ್ಲಿಗೆ ಬಾ."

೧೦ ಅದಕ್ಕೆ ಧನಂಜನಿ ಒಪ್ಪಿದ ಮತ್ತು ತನ್ನ ಊಟದ ನಂತರ ಸಾರಿಪುತ್ರನಲ್ಲಿಗೆ ಹೋದ. ಸ್ನೇಹಪೂರ್ವಕವಾಗಿ ನಮಸ್ಕರಿಸಿ, ಆತನ ಪಕ್ಕದಲ್ಲಿ ಕುಳಿತ.

೧೧ "ಧನಂಜನಿ, ಉತ್ಸಾಹ, ಶ್ರದ್ಧೆ ಮತ್ತು ಸದಾಚಾರಗಳು ನಿನ್ನಲ್ಲಿವೆ ಎಂದು ನಾನು ನಂಬಲೇ?" ಎಂದು ಸಾರಿಪುತ್ತನು ಕೇಳಿದ.

೧೨ "ನನ್ನ ತಂದೆತಾಯಿ, ನನ್ನ ಹೆಂಡತಿ ಮತ್ತು ಕುಟುಂಬ ವರ್ಗ, ನನ್ನ ಗುಲಾಮರು ಮತ್ತು ನನ್ನ ಸೇವಕರು ಇವರನ್ನೆಲ್ಲ ನಾನು ಸಲಹಬೇಕಾಗಿರುವುದರಿಂದಲೂ, ಮತ್ತು ನನ್ನ ಪರಿಚಿತರು, ಅತಿಥಿಗಳು ಮತ್ತು ಸ್ನೇಹಿತರನ್ನು ಸಂತೋಷಪಡಿಸಬೇಕಾಗಿರುವುದರಿಂದಲೂ ಮತ್ತು ಮದ್ಯ ಮತ್ತು ಪಾನೀಯಗಳಿಂದ ನನ್ನನ್ನು ತೃಪ್ತಿಪಡಿಸಿಕೊಳ್ಳುವುದು ಮಾತ್ರವಲ್ಲದೆ, ಸತ್ತುಹೋಗಿರುವ ನನ್ನ ರಕ್ತಸಂಬಂಧಿಗಳು ಮತ್ತು ದೇವದೇವತೆಗಳು ಹಾಗೂ ರಾಜ ಇವರುಗಳಿಗೆಲ್ಲಾ ಕೊಡುಗೆ ಕೊಡಬೇಕಾಗಿರುವುದರಿಂದಲೂ, ಹಾಗಿರಲು ಹೇಗೆ ಸಾಧ್ಯ?"

೧೩ "ನೀನು ಯೋಚಿಸುತ್ತಿರುವುದೇನು ಧನಂಜನಿ? ತನ್ನ ತಂದೆತಾಯಂದಿರಿಗೋಸ್ಕರ ಸದಾಚಾರದಿಂದ ಮತ್ತು ಸಮತಾಭಾವದಿಂದ ದೂರವಾದ ಒಬ್ಬ ಮನುಷ್ಯನು ವಿಚಾರಣೆಗೆ ಒಳಗಾದಾಗ, ಆತನು, ತನ್ನ ತಂದೆತಾಯಂದಿರಿಗೋಸ್ಕರ ಸದಾಚಾರ ಮತ್ತು ಸಮತಾಭಾವಗಳಿಂದ ದೂರವಾಗಬೇಕಾಗಿ ಬಂದದ್ದರಿಂದ ತನ್ನನ್ನು ಯಾರೂ ವಿಚಾರಣೆಗೊಳಪಡಿಸಬಾರದೆಂದು ಆತನು ಕೇಳಿಕೊಂಡರೆ, ಅದು ಸರಿಯೆನಿಸುತ್ತದೆಯೇ?"

೧೪ "ಇಲ್ಲ; ಏನೇ ಮನವಿ ಮಾಡಿದರೂ ಕೂಡ, ಮೇಲ್ವಿಚಾರಕರು ಆತನನ್ನು ಸೆರೆಮನೆಗೆ ನೂಕುತ್ತಾರೆ."

೧೫ "ತನ್ನ ಪರವಾಗಿ ಆತನು ವಾದಿಸುವುದು ಮತ್ತು ತನ್ನ ಹೆಂಡತಿ ಮತ್ತು ಕುಟುಂಬ ವರ್ಗದವರಿಗೋಸ್ಕರವಾಗಿ ತಾನು ಸದಾಚಾರ ಮತ್ತು ಸಂಪನ್ನತೆಗಳಿಂದ ಕೆಳಗೆ ಬಿದ್ದದ್ದರಿಂದ, ತನ್ನ ಪರವಾಗಿ ವಾದಿಸಬೇಕೆಂದು ಅವರನ್ನು ಕೇಳಿಕೊಂಡರೆ ಅದು ಸರಿಯೆನಿಸುತ್ತದೆಯೇ?"

೧೬ "ಇಲ್ಲ".

೧೭ "ಆತನ ಗುಲಾಮರು ಮತ್ತು ಸೇವಕರು ಅವನ ಪರವಾಗಿ ಕೇಳಿಕೊಂಡರೆ ಅದು ಸರಿಯೆನಿಸುತ್ತದೆಯೇ?"

೧೮ "ಇಲ್ಲವೇ ಇಲ್ಲ".

೧೯ "ಅಥವಾ ಆತನ ಸ್ನೇಹಿತರು ಮತ್ತು ಅವನ ಪರಿಚಿತರು ಅವನ ಪರವಾಗಿ ಮನವಿ ಮಾಡಿಕೊಂಡರೆ ಸರಿಯೆನಿಸುತ್ತದೆಯೆ?"

೨೦ "ಇಲ್ಲವೇ ಇಲ್ಲ".

೨೧ "ಅಥವಾ ಆತನ ರಕ್ತಸಂಬಂಧಿಗಳು ಅಥವಾ ಅತಿಥಿಗಳು ಆತನಿಗಾಗಿ ಮನವಿ ಮಾಡಿಕೊಂಡರೆ ಸರಿಯೆನಿಸುತ್ತದೆಯೇ?"

೨೨ "ಇಲ್ಲವೇ ಇಲ್ಲ."

೨೩ "ಅಥವಾ ಸತ್ತುಹೋಗಿರುವ ಆತನ ಸಂಬಂಧಿಗಳು, ಆತನ ಮೇಲೆ ದೇವದೇವತೆಗಳು ಮತ್ತು ರಾಜನಿಗಿರುವ ಹಕ್ಕುಗಳ ಬಗ್ಗೆ ಮನವಿ ಮಾಡಿಕೊಂಡರೆ, ಅದು ಸರಿಯೆನಿಸುತ್ತದೆಯೇ?"

೨೪ "ಇಲ್ಲವೇ ಇಲ್ಲ."

೨೫ "ಮಾಂಸ ಮತ್ತು ಪಾನೀಯಗಳಿಂದ ತನ್ನನ್ನು ತಾನು ತೃಪ್ತಿಪಡಿಸಿಕೊಳ್ಳಲೋಸ್ಕರ ತಾನು ಸದಾಚಾರ ಮತ್ತು ಸಂಪನ್ನತೆಗಳಿಂದ ವಿಮುಖನಾದೆ ಅಥವಾ ತನ್ನ ಪರವಾಗಿ ಮನವಿ ಮಾಡಿಕೊಳ್ಳಬೇಕೆಂದು ಇತರರನ್ನು ಕೇಳಿಕೊಳ್ಳುವುದು ಸರಿಯೆನಿಸುತ್ತದೆಯೆ?"

೨೬ "ಇಲ್ಲವೇ ಇಲ್ಲ".

೨೭ "ನೀನು ಯೋಚಿಸುವುದೇನು, ಧನಂಜನಿ? ಯಾರು ಉತ್ತಮ ಮನುಷ್ಯ? ತನ್ನ ತಂದೆತಾಯಿಗಳಿಗೋಸ್ಕರ ತಾನು ಸದಾಚಾರ ಮತ್ತು ಸಂಪನ್ನತೆಗಳನ್ನು ತ್ಯಜಿಸುವವನೋ ಅಥವಾ ತನ್ನ ತಂದೆತಾಯಿಗಳಿಗೆ ಏನೇ ಆದರೂ, ತಾನು ಸದಾಚಾರ ಮತ್ತು ಸಂಪನ್ನತೆಗಳ ಮಾರ್ಗದಲ್ಲಿ ನಡೆಯುವಾತನೋ?"

೨೮ "ಎರಡನೆಯವನು, ಏಕೆಂದರೆ ಸದಾಚಾರ ಮತ್ತು ಸಂಪನ್ನತೆಗಳ ಮಾರ್ಗದಲ್ಲಿ ನಡೆಯುವುದು, ಅವುಗಳನ್ನು ಬಿಡುವುದಕ್ಕಿಂತ ಉತ್ತಮ" ಧನಂಜನಿ ಉತ್ತರಿಸಿದ.

೨೯ "ಅದಲ್ಲದೆ, ಧನಂಜನಿ, ನ್ಯಾಯಬದ್ಧವಾದ ಮತ್ತು ಸದಾಚಾರಸಂಪನ್ನವಾದ ಇತರ ಕ್ರಿಯಾಮಾರ್ಗಗಳೂ ಉಂಟು. ಅವುಗಳನ್ನು ಅನುಸರಿಸುವುದರಿಂದ ಆತನು ತನ್ನ ತಂದೆತಾಯಿಗಳನ್ನು ಸಲಹಬಹುದು. ಆತನು ಕೆಟ್ಟ ಕೃತ್ಯಗಳಿಂದ ಮುಕ್ತನಾಗಿ ತಲೆಯೆತ್ತಿ ನಡೆಯಬಹುದು. ಆದ್ದರಿಂದ ಹೆಂಡತಿ ಮತ್ತು ಕುಟುಂಬವರ್ಗ ಹಾಗೂ ಇತರ ಎಲ್ಲರನ್ನೂ ನೋಡಿಕೊಳ್ಳುವುದಕ್ಕೂ ಇದೇ ವಿಚಾರ ಅನ್ವಯಿಸುವುದಿಲ್ಲವೆ?"

೩೦ "ಆಗುತ್ತದೆ, ಸಾರಿಪುತ್ತಾ."

೩೧ ಸಾರಿಪುತ್ರನು ಏನು ಹೇಳಿದನೋ ಅದರಿಂದ ಹರ್ಷಿತನಾದ ಆ ಬ್ರಾಹ್ಮಣನು, ಅವನಿಗೆ ಧನ್ಯವಾದಗಳನ್ನು ಹೇಳಿದನಂತರ, ಮೇಲೆದ್ದು ತನ್ನ ದಾರಿ ಹಿಡಿದುಹೋದ.

## ೪. ಋಜು ನಡತೆಯಲ್ಲಿ ಪರಿಪೂರ್ಣತೆಯನ್ನು ಪಡೆಯುವುದು ಹೇಗೆ?

೧ ಶ್ರಾವಸ್ತಿಯ ಜೇತವನದಲ್ಲಿ ಮಹಾಮಹಿಮನು ತಂಗಿದ್ದ ಒಂದು ಸಂದರ್ಭದಲ್ಲಿ ಆತನನ್ನು ನೋಡಲು ಐನೂರು ಗೃಹಸ್ಥರು ಬಂದರು. ಅವರಲ್ಲಿ ಧಮ್ಮಿಕನೂ ಒಬ್ಬ.

೨ "ಸನ್ನಡತೆಯಲ್ಲಿ ಪರಿಪೂರ್ಣತೆಯನ್ನು ಸಂಪಾದಿಸಲು ನಿನ್ನ ಶಿಷ್ಯರಿಗೆ ಯಾವ ನಿಯಮಗಳು ನೆರವಾಗುತ್ತವೆ?" ಎಂದು ಧಮ್ಮಿಕನು ಪ್ರಭುವನ್ನು ಕೇಳಿದ.

೩ "ನಾನು ಈ ಪ್ರಶ್ನೆಯನ್ನು ನಿನ್ನಲ್ಲಿ ಯಾಕೆ ಕೇಳುತ್ತಿದ್ದೇನೆಂದರೆ, ಲೋಕಕಲ್ಯಾಣದ ಬಗ್ಗೆ ನೀನು ಅತ್ಯಂತ ಸರಿಸಾಟಿಯಿಲ್ಲದ ನ್ಯಾಯಾಧೀಶ."

೪ ಶಿಕ್ಷಣ ಪಡೆದ ಜೈನರು ಮತ್ತು ಅಲೆಮಾರಿ ಸಂನ್ಯಾಸಿಗಳೆಲ್ಲಾ ನಿನ್ನನ್ನು ಸೋಲಿಸಲು ಅಸಮರ್ಥರಾದರು. ತಮ್ಮ ವಯಸ್ಸಿನಲ್ಲಿ ಹಣ್ಣಾದ, ಶಿಕ್ಷಣ ಪಡೆದ ಬ್ರಾಹ್ಮಣರೂ, ತಮ್ಮ ಅಭಿಪ್ರಾಯವನ್ನು ತಿಳಿಸಲು ಕಾತುರರಾಗಿದ್ದ ಇತರರೊಡನೆ ಸೇರಿ, ನಿನ್ನ ಸಮಗ್ರ ಸತ್ಯವನ್ನು ಅವಲಂಬಿಸುವಂತಾಯಿತು. ಏಕೆಂದರೆ,

ಸೂಕ್ಷ್ಮವಾದ ಆ ಸತ್ಯವನ್ನು ಎಲ್ಲರೂ ಹಂಬಲಿಸುವಷ್ಟು ಚೆನ್ನಾಗಿ ನೀನು ಉಪದೇಶಿಸಿರುವೆ. ಪ್ರಭು! ಕೃಪೆ ಮಾಡಿ ನಮಗೆ ಒಂದು ಉತ್ತರವನ್ನು ಹೇಳು."

೫. "ಶ್ರೀಸಾಮಾನ್ಯ ಅನುಯಾಯಿಗಳು ನಿರ್ದುಷ್ಟ ತತ್ತ್ವವನ್ನು ನಿನ್ನ ಮಾತುಗಳಿಂದಲೇ ಕಲಿಯಲಿ."

೬. ತನ್ನ ಶ್ರೀಸಾಮಾನ್ಯ ಅನುಯಾಯಿಗಳ ಮೇಲಿನ ಅನುಕಂಪೆಯಿಂದ ಆ ಪವಿತ್ರಾತ್ಮನು ಹೀಗೆ ಹೇಳಿದ: "ನಾನು ಹೇಳುವುದನ್ನು ಕೇಳಿ. ಸದಾಚಾರದ ನಿಯಮಗಳನ್ನು ನಾನು ವಿವರಿಸುತ್ತೇನೆ. ಅವುಗಳನ್ನು ತಿಳಿದುಕೊಂಡು ಅನುಷ್ಠಾನಕ್ಕೆ ತನ್ನಿ.

೭. "ಕೊಲ್ಲಬೇಡಿ, ಪ್ರಾಣಾಪಹರಣ ಮಾಡಬೇಡಿ, ವಧೆಗೆ ಸಮ್ಮತಿಸಬೇಡಿ. ಜೀವಿ ಅದು ಶಕ್ತಿಶಾಲಿಯಾಗಿರಲಿ ಅಥವಾ ದುರ್ಬಲವಾಗಿರಲಿ ಅದನ್ನು ಹಿಂಸಿಸಬೇಡಿ.

೮. "ಯಾವ ಗೃಹಸ್ಥನೇ ಆಗಲಿ ತಿಳಿದೂ ಕಳ್ಳತನ ಮಾಡಕೂಡದು ಅಥವಾ ಕಳ್ಳತನಕ್ಕೆ ಅಪ್ಪಣೆ ಮಾಡಕೂಡುದು ಅಥವಾ ಯಾವುದೇ ಕಳ್ಳತನವನ್ನು ಪ್ರೋತ್ಸಾಹಿಸಕೂಡದು. ಇತರರು ಕೊಟ್ಟದ್ದನ್ನು ಮಾತ್ರ ಸ್ವೀಕರಿಸಬೇಕು.

೯ "ಅದು ಬೆಂಕಿಯ ಹೊಂಡವೋ ಎಂಬಂತೆ ಅಸಂಯಮದಿಂದ ದೂರವಿರು ಅಥವಾ ಸಂಯಮವನ್ನು ಹಾಳುಮಾಡಿಕೊಂಡು ಯಾರೇ ವಿವಾಹಿತ ಮಹಿಳೆಯೊಂದಿಗೆ ವ್ಯಭಿಚಾರಕ್ಕಿಳಿಯಬೇಡ.

೧೦ "ಧರ್ಮಸಭೆಗಳಲ್ಲಿ, ನ್ಯಾಯಾಲಯಗಳಲ್ಲಿ ಮತ್ತು ತನ್ನ ಮಾತಿನಲ್ಲಿ ಯಾರೇ ಗೃಹಸ್ಥನು ಸುಳ್ಳಾಡದಿರಲಿ ಅಥವಾ ಆತನು ಸುಳ್ಳನ್ನು ಪ್ರೇರೇಪಿಸದಿರಲಿ ಅಥವಾ ಸಮ್ಮತಿಸದಿರಲಿ – ಆತನು ಅಸತ್ಯವನ್ನು ತ್ಯಾಗ ಮಾಡಲಿ.

೧೧ "ಶ್ರೀಸಾಮಾನ್ಯನೇ, ಈ ನಿಯಮವನ್ನು ಪಾಲಿಸು — ಮದ್ಯಪಾನವನ್ನು ತ್ಯಜಿಸು; ಯಾರೂ ಮದ್ಯಪಾನವನ್ನು ಮಾಡುವಂತೆ ಮಾಡಬೇಡ ಮತ್ತು ಯಾರೂ ಕುಡಿಯುವುದಕ್ಕೆ ಅನುಮತಿಸಬೇಡ; ಮದ್ಯಪಾನವು ಹುಚ್ಚುತನಕ್ಕೆ ಹೇಗೆ ಕಾರಣವಾಗುವುದೆಂಬುದನ್ನು ಗಮನಿಸು.

೧೨ "ಅವಿವೇಕಿಗಳು ಮದ್ಯಪಾನ ಮಾಡುವುದರ ಮೂಲಕ ಪಾಪ ಮಾಡುತ್ತಾರೆ ಮತ್ತು ತಮ್ಮ ಬಂಧುಗಳು ಪಾಪಕೃತ್ಯ ಮಾಡುವಂತೆ ಪ್ರೇರೇಪಿಸುತ್ತಾರೆ. ಆದ್ದರಿಂದ, ಹುಚ್ಚುಹಿಡಿಸುವ ಈ ಪಾಪದಿಂದ, ಈ ದೋಷದಿಂದ, ಅವಿವೇಕಿಗಳ ಆನಂದದಿಂದ ದೂರ ಓಡಿಹೋಗು.

೧೩ "ಕೊಲ್ಲಬೇಡ, ಕಳವು ಮಾಡಬೇಡ, ಸುಳ್ಳಾಡಬೇಡ; ಮಾದಕ ಪಾನೀಯಗಳಿಂದ ದೂರವಿರು, ಹಾದರದಿಂದ ದೂರವಿರು, ಕೆಟ್ಟುಹೋದ ಆಹಾರವನ್ನು ರಾತ್ರಿಯ ವೇಳೆ ಮುಟ್ಟಬೇಡ.

೧೪ "ಸುಗಂಧ ದ್ರವ್ಯ ಮತ್ತು ಹೂವಿನ ಹಾರ ಇವೆರಡನ್ನೂ ತ್ಯಜಿಸು. ನಿನ್ನ ಹಾಸಿಗೆಯನ್ನು ನೆಲದ ಮೇಲೆ ಹಾಸು, ವಾರಗಳು ಕಳೆದಂತೆ ನಿನ್ನ ವ್ರತಗಳನ್ನು ಗಟ್ಟಿಮಾಡಿಕೋ. ಪ್ರಶಾಂತ ಹೃದಯಿಗಳೊಂದಿಗೆ ಈ ಅಷ್ಟಮಡಿ ಹಬ್ಬವನ್ನು ಅನುಸರಿಸು.

೧೫ "ಪ್ರಶಾಂತ ಹಾಗೂ ಕೃತಜ್ಞತಾಪೂರ್ಣ ಹೃದಯದಿಂದ ಮುಂಜಾನೆ ಈ ವ್ರತಗಳನ್ನು ಪಾಲಿಸುತ್ತಾ ವಿವೇಕಿಯಾಗಿ ನಿನ್ನ ಆರ್ಜನೆಯಿಂದಲೇ ಭಿಕ್ಷುಗಳಿಗೆ ಆಹಾರ ಪಾನೀಯಗಳನ್ನು ಕೊಡು.

೧೬ "ನಿನ್ನ ತಂದೆತಾಯಿಯರನ್ನು ಚೆನ್ನಾಗಿ ಪಾಲಿಸು, ಸದಾಚಾರ ಜೀವನ ವೃತ್ತಿಯನ್ನು ಅವಲಂಬಿಸು. ಹೀಗೆ ಮಾಡಿದರೆ ಮೇಲಿನ ಬೆಳಕಿನ ಲೋಕಗಳನ್ನು ಶ್ರೀಸಾಮಾನ್ಯನು ಖಚಿತವಾಗಿ ತಲುಪುತ್ತಾನೆ."

## ೫. ಋಜುತ್ವದ ಮಾರ್ಗದಲ್ಲಿ ನಡೆಯಲು ಯಾರೂ ಸಂಗಾತಿಗಾಗಿ ಕಾಯಬೇಕಿಲ್ಲ.

೧ ಯುದ್ಧದಲ್ಲಿ ತನ್ನತ್ತ ಬಿಡುವ ಬಾಣಗಳನ್ನು ಆನೆಯು ಧರಿಸುವಂತೆ, ಪ್ರಪಂಚದಲ್ಲಿನ ಪ್ರತಿಯೊಂದು ಕೆಟ್ಟದ್ದಕ್ಕೂ ನಾನು ಜನರ ಕಠಿಣ ಮಾತುಗಳನ್ನು ಕೇಳಲೇಬೇಕಾಗುತ್ತದೆ.

೨ ಪಳಗಿಸಿದ ಆನೆಯು ರಾಜನನ್ನು ಯುದ್ಧರಂಗಕ್ಕೆ ಕೊಂಡೊಯ್ಯುತ್ತದೆ, ಪಳಗಿಸಿದಾಗ ಅದರ ಬೆನ್ನಮೇಲೆ ರಾಜನು ಕೂರುತ್ತಾನೆ. ಯಾವ ಕಠಿಣ ಮಾತಿಗೂ ವ್ಯಗ್ರನಾಗದೆ ಪಳಗಿದ ವ್ಯಕ್ತಿಯು ಎಲ್ಲ ಜೀವಿಗಳಲ್ಲಿಯೂ ಅತ್ಯುತ್ತಮ.

೩ ಚೆನ್ನಾಗಿ ಪಳಗಿಸಿದ ಹೇಸರಗತ್ತೆಗಳು ಉಪಯುಕ್ತ; ಹೆಸರಾಂತ ತಳಿಯ ಸಿಂದಿಯನ್ ಕುದುರೆಗಳು ಚೆನ್ನ; ನಿಜವಾಗಿಯೂ ಬಲಶಾಲಿಯಾದ ಸಲಗವು ಚೆನ್ನ; ಅಂತೆಯೇ ಸ್ವಸಂಯಮಿಯಾದವನು ಎಲ್ಲಾ ಮನುಷ್ಯರಿಗಿಂತಲೂ ಉತ್ತಮ.

೪ ಆದಾಗ್ಯೂ ಅಂತಹ ಪದವಿಗಳು ನಮಗೆ ಪ್ರಯೋಜನಕಾರಿಯಾಗಲಾರವು. ಅವು ನಿಬ್ಬಾಣಕ್ಕೆ ಮಾರ್ಗದರ್ಶಿಯಾಗಲಾರವು. ಸ್ವಸಂಯಮ ಮತ್ತು ಸ್ವನಿಯಂತ್ರಣಗಳಿಂದ ಮಾತ್ರ ನಾವು ಆ ಮಾರ್ಗವನ್ನು ಸೇರಬಲ್ಲೆವು.

೫ ಪ್ರಾಮಾಣಿಕತೆಯಲ್ಲೂ ಆನಂದಪಡು; ನಿನ್ನ ಆಲೋಚನೆಗಳಲ್ಲಿ ಎಚ್ಚರವಹಿಸು, ಆಯಾಸ ಪಡಬೇಡ, ಕೆಟ್ಟ ಮಾರ್ಗದಿಂದ ನಿನ್ನನ್ನು ನೀನೇ ಮೇಲೆತ್ತಿಕೋ. ಸಲಗನನ್ನು ಕೆಸರಿನಿಂದ ಹೊರತೆಗೆ.

೬ ಪ್ರಾಮಾಣಿಕನಾದ, ದೃಢಚಿತ್ತನಾದ ಮತ್ತು ಬುದ್ಧಿಶಾಲಿಯಾದ ಸಹ ಪ್ರಾಮಾಣಿಕರನ್ನು ನೀನು ಕಂಡುಕೋ. ನಿನ್ನ ಎಲ್ಲಾ ಆತಂಕಗಳನ್ನು ಹಿಂದೆ ಬಿಟ್ಟು ಅವರ ಜೊತೆ ಸಂತೋಷವಾಗಿ ಮತ್ತು ಇಚ್ಛಾಪೂರ್ವಕವಾಗಿ ಹೆಜ್ಜೆ ಹಾಕು.

೭ ಪ್ರಾಮಾಣಿಕನಾದ ದೃಢಚಿತ್ತನಾದ ಹಾಗೂ ಬುದ್ಧಿಶಾಲಿಯಾದ ಸಹಪ್ರಯಾಣಿಕನು ನಿನಗೆ ಸಿಗಲಿಲ್ಲವೇ? ಶತ್ರುಗಳಿಂದ ಹಿಂಬಾಲಿಸಲ್ಪಟ್ಟ ರಾಜನು ತನ್ನ ಗಡಿಪ್ರದೇಶಗಳನ್ನು ತೊರೆಯುವಂತೆ, ಕಾಡಿನಲ್ಲಿರುವ ಸಲಗನಂತೆ, ಏಕಾಂಗಿಯಂತೆ ನಿನ್ನ ದಾರಿಯಲ್ಲಿ ನೀನು ನಡೆ.

೮ ಒಂಟಿ ಬಾಳೇ ಉತ್ತಮ, ಏಕೆಂದರೆ ಅವಿವೇಕಿಗಳು ಜೊತೆಗಾರರಾಗಿರಲು ಸಾಧ್ಯವಿಲ್ಲ. ಒಂಟಿಯಾಗಿ ಬಾಳು, ಯಾವುದೇ ಪಾಪಕಾರ್ಯವನ್ನೂ ಮಾಡಬೇಡ. ಬಲಶಾಲಿ ಸಲಗನು ಏಕಾಂಗಿಯಾಗಿ ಕಾಡಿನಲ್ಲಿ ಆಹಾರವನ್ನು ತಿನ್ನುವಂತೆ, ಅತ್ಯಲ್ಪ ಅಗತ್ಯಗಳನ್ನು ಹೊಂದಿ ಒಂಟಿಯಾಗಿ ಬದುಕು.

೯ ಎಲ್ಲಾ ಕೆಟ್ಟ ಯೋಚನೆಗಳನ್ನೂ ಕಿತ್ತೊಗೆ.

೧೦ ಕಿತ್ತೊಗೆಯುವ ಮಾರ್ಗ ಹೀಗಿದೆ:

೧೧ ಹೀಗೆಂದು ನಿರ್ಣಯಿಸು: ಇತರರು ಅಪಾಯಕಾರಿಗಳಾಗಿರಬಹುದಾದರೂ, ನೀನು ಅಪಾಯಕಾರಿಯಾಗಿರುವುದಿಲ್ಲ.

೧೨ ಇತರರು ಕೊಲ್ಲಬಹುದು; ನೀನು ಮಾತ್ರ ಎಂದೆಂದೂ ಕೊಲ್ಲುವುದಿಲ್ಲ.

೧೩ ಇತರರು ಕದಿಯಬಹುದು; ನೀನು ಮಾತ್ರ ಕದಿಯುವುದಿಲ್ಲ.

೧೪ ಇತರರು ಶ್ರೇಷ್ಠತರ ಬದುಕನ್ನು ಮಾಡದಿರಬಹುದು; ನೀನು ಮಾತ್ರ ಮಾಡುತ್ತೀಯೆ.

೧೫ ಇತರರು ಸುಳ್ಳು ಹೇಳಬಹುದು, ದೂರು ಹೊರಿಸಬಹುದು, ದೂಷಿಸಬಹುದು ಅಥವಾ ಗೊಡ್ಡು ಹರಟೆಯಲ್ಲಿ ತೊಡಗಬಹುದು; ನೀನು ಮಾತ್ರ ಹಾಗೆ ಮಾಡುವುದಿಲ್ಲ.

೧೬ ಇತರರು ಅಪಹರಣಕಾರರಾಗಿರಬಹುದು; ನೀನು ಮಾತ್ರ ಹಾಗಿರುವುದಿಲ್ಲ.

೧೭ ಇತರರು ಪ್ರತೀಕಾರ ಭಾವವುಳ್ಳವರಾಗಿರಬಹುದು; ನೀನು ಮಾತ್ರ ಹಾಗಿರುವುದಿಲ್ಲ.

೧೮ ಇತರರು ತಪ್ಪು ಅಭಿಪ್ರಾಯಗಳಿಗೆ, ತಪ್ಪು ಉದ್ದೇಶಗಳಿಗೆ, ತಪ್ಪು ನುಡಿಗೆ, ತಪ್ಪು ನಡೆಗೆ, ತಪ್ಪು ಜೀವನ ವಿಧಾನಗಳಿಗೆ, ತಪ್ಪು ಪ್ರಯತ್ನಕ್ಕೆ, ತಪ್ಪು ಮನಸ್ಕತೆಗೆ ಮತ್ತು ತಪ್ಪು ಏಕಾಗ್ರತೆಗೆ ಒಳಗಾಗಿದ್ದರೂ, ನೀನು ಮಾತ್ರ ಸದೃಷ್ಟಿ, ಸದಾಶಯ, ಸನ್ನುಡಿ, ಸನ್ನಡೆ, ಉತ್ತಮ ಜೀವನೋಪಾಯ, ಸರಿಯಾದ ಪರಿಶ್ರಮ, ಸನ್ಮನಸ್ಕತೆ ಮತ್ತು ಶುದ್ಧ ಚಿತ್ತೈಕಾಗ್ರತೆ — ಈ ಶ್ರೇಷ್ಠ ಅಷ್ಟಮಡಿ ಮಾರ್ಗವನ್ನು ಅನುಸರಿಸಬೇಕು.

೧೯ ಇತರರು ಸತ್ಯ ಮತ್ತು ವಿಮೋಚನೆ ಬಗ್ಗೆ ತಪ್ಪು ಅಭಿಪ್ರಾಯ ಹೊಂದಿದ್ದರೂ, ನೀನು ಮಾತ್ರ ಸತ್ಯ ಮತ್ತು ವಿಮೋಚನೆ ಬಗ್ಗೆ ನ್ಯಾಯವಾದ ಅಭಿಪ್ರಾಯ ಹೊಂದಿರುತ್ತೀಯೇ.

೨೦ ಇತರರು ಆಲಸ್ಯ ಮತ್ತು ಜಡತೆಗಳಲ್ಲಿ ಸಿಲುಕಿಕೊಂಡಿದ್ದರೂ, ನೀನು ಅವುಗಳಿಂದ ಬಿಡುಗಡೆ ಪಡೆಯುವೆ.

೨೧ ಇತರರು ಅಹಂಕಾರದಿಂದ ಬೀಗುತ್ತಿರಬಹುದು. ಆದರೆ ನೀನು ಮಾತ್ರ ವಿನಯಶೀಲನಾಗಿರುತ್ತೀಯೆ.

೨೨ ಇತರರು ಶಂಕೆಗಳಿಂದ ಕ್ಷೋಭೆಗೊಂಡಿರಬಹುದಾದರೂ, ನೀನು ಮಾತ್ರ ಅವುಗಳಿಂದ ಬಿಡುಗಡೆ ಪಡೆದಿರುತ್ತೀಯೆ.

೨೩ ಇತರರು ಕ್ರೋಧ, ಪ್ರತೀಕಾರ ಭಾವ, ಈರ್ಷ್ಯೆ, ಅಸೂಯೆ, ಜಿಪುಣತನ, ದುರಾಶೆ, ಕಪಟತನ, ವಂಚಕಬುದ್ಧಿ, ಕಠಿಣ ಮನಸ್ಕತೆ, ದುರಹಂಕಾರ, ಲಜ್ಜೆಗೇಡಿತನ, ನೀಚತನ, ತಿಳಿಗೇಡಿತನ, ನಿಷ್ಕ್ರಿಯತೆ, ದಿಗ್ಭ್ರಮೆ, ಅವಿವೇಕಿತನ — ಇವುಗಳಿಗೆ ತಮ್ಮಲ್ಲಿ ಎಡೆಮಾಡಿಕೊಟ್ಟಿದ್ದರೂ, ನೀನು ಮಾತ್ರ ಅವೆಲ್ಲವುಗಳ ವಿರುದ್ಧದ ಗುಣಗಳನ್ನು ಹೊಂದಿರುತ್ತೀಯೆ ಎಂದು ನಿರ್ಣಯಿಸುವುದರ ಮೂಲಕ ಎಲ್ಲಾ ಕೆಟ್ಟ ಯೋಚನೆಗಳನ್ನೂ ಹೊರದೂಡುತ್ತೀಯೆ.

## ವಿಭಾಗ – ೪

# ನಿರ್ವಾಣದ ಬಗ್ಗೆ ಉಪದೇಶಗಳು

## ೧. ನಿರ್ವಾಣ (ನಿಬ್ಬಾಣ)ವೆಂದರೇನು?

೧ ಸಾರಿಪುತ್ರನು ವಾಸಿಸುತ್ತಿರುವ ಶ್ರಾವಸ್ತಿಯ ಅನಾಥಪಿಂಡಿಕ ಆರಾಮದಲ್ಲಿ ಪೂಜ್ಯಪ್ರಭುವು ಒಂದು ಸಂದರ್ಭದಲ್ಲಿ ತಂಗಿದ್ದ.

೨ ತನ್ನ ಭಿಕ್ಷುಬಂಧುಗಳನ್ನು ಉದ್ದೇಶಿಸಿ ಆತನು ಹೀಗೆ ಹೇಳಿದ: "ಭಿಕ್ಷುಗಳೇ, ನೀವು ಪ್ರಪಂಚದ ವಸ್ತುವಿಷಯಗಳನ್ನು ಹಂಚಿಕೊಳ್ಳುವವರಾಗಬೇಡಿ. ಆದರೆ ನನ್ನ ಸಿದ್ಧಾಂತದ ಪಾಲುದಾರರಾಗಿ. ನಿಮ್ಮ ಮೇಲೆ ನನಗಿರುವ ಅನುಕಂಪೆಯಿಂದ, ನಾನು ನಿಮಗೆ ಈ ಭರವಸೆ ಕೊಡಬೇಕೆಂಬ ಕಾತರದಿಂದಿದ್ದೇನೆ."

೩ ಹಾಗೆ ಹೇಳಿದ ನಂತರ, ಆ ಮಹಾಪ್ರಭು ಮೇಲೆದ್ದು ತನ್ನ ಕುಟೀರವನ್ನು ಸೇರಿದ.

೪ ಸಾರಿಪುತ್ರನು ಅಲ್ಲೇ ಉಳಿದ. ಆಗ ಆತನ ಭಿಕ್ಷುಬಂಧುಗಳು 'ನಿರ್ವಾಣವೆಂದರೇನು?' ಎಂದು ತಿಳಿಸಬೇಕೆಂದು ಆತನನ್ನು ಕೇಳಿಕೊಂಡರು.

೫ ಭಿಕ್ಷುಬಂಧುಗಳ ಪ್ರಶ್ನೆಗೆ ಸಾರಿಪುತ್ರನು ಹೀಗೆ ಉತ್ತರಿಸಿದ: "ಭಿಕ್ಷುಬಂಧುಗಳೇ, ಅತಿಯಾಸೆಯು ತುಚ್ಛವಾದುದು. ತುಚ್ಛವಾದುದು ತೀವ್ರ ಅಸಮಾಧಾನಕ್ಕೆ ಕಾರಣವಾಗುತ್ತದೆ.

೬ "ದುರಾಸೆ ಮತ್ತು ಕೋಪವನ್ನು ಬಿಟ್ಟುಬಿಡಲು ಒಂದು ಮಧ್ಯಮ ಮಾರ್ಗವಿದೆ. ಅದು ನೋಡಲು ನಮಗೆ ಕಣ್ಣುಗಳನ್ನು ಕೊಡುತ್ತದೆ ಮತ್ತು ನಾವು ತಿಳಿದುಕೊಳ್ಳುವಂತೆ ಮಾಡುತ್ತದೆ. ಅದು ನಮ್ಮನ್ನು ಶಾಂತಿ, ಒಳನೋಟ, ಜ್ಞಾನೋದಯ ಮತ್ತ ನಿಬ್ಬಾಣದತ್ತ ಕೊಂಡೊಯ್ಯುತ್ತದೆ.

೭ "ಈ ಮಧ್ಯಮ ಮಾರ್ಗ ಯಾವುದು? ಅದು ನಿಷ್ಪ್ರಯೋಜಕವಾದುದಲ್ಲ. ಆದರೆ ಸುದೃಷ್ಟಿ, ಸದ್ಗುರಿ, ಸನ್ನುಡಿ, ಸತ್ಕ್ರಿಯೆ, ಜೀವಿಸಲು ಸತ್ಸಾಧನ ಸಾಮಗ್ರಿ, ಸದ್‌ಪರಿಶ್ರಮ, ಸನ್ಮನಸ್ಕತೆ ಮತ್ತು ಸದೈಕಾಗ್ರತೆ ಇವುಗಳನ್ನೊಳಗೊಂಡ ಶ್ರೇಷ್ಠ ಅಷ್ಟಾಂಗ ಮಾರ್ಗವೇ ಮಧ್ಯಮ ಮಾರ್ಗ.

೮ "ಹೌದು ಭಿಕ್ಷುಗಳೇ, ಕೋಪವು ತುಚ್ಛವಾದುದು ಮತ್ತು ಮತ್ತೊಬ್ಬರಿಗೆ ಕೇಡೆಣಿಸುವುದು ತುಚ್ಛವಾದುದು. ಅಸೂಯೆ ಮತ್ತು ಮಾತ್ಸರ್ಯಗಳು ತುಚ್ಛವಾದುವುಗಳು. ಕೃಪಣತೆ ಮತ್ತು ದುರಾಸೆಗಳು ತುಚ್ಛವಾದುವುಗಳು. ಕಪಟತನ ಮತ್ತು ವಂಚನೆ ಮತ್ತು ದುರಭಿಮಾನಗಳು ತುಚ್ಛವಾದವುಗಳು. ಒಣಜಂಭ ಮತ್ತು ಅಲಸತೆಗಳು ತುಚ್ಛವಾದವುಗಳು.

೯ "ಅಲಸತೆ ಮತ್ತು ಒಣಜಂಭಗಳನ್ನು ತೊರೆಯುವುದು 'ಮಧ್ಯಮ ಮಾರ್ಗ'. ಈ ಮಾರ್ಗವು ನೋಡಲು ನಮಗೆ ಕಣ್ಣು ಕೊಡುತ್ತದೆ. ತಿಳಿಯಲು ನೆರವಾಗುತ್ತದೆ ಮತ್ತು ನಮ್ಮನ್ನು ಶಾಂತಿ, ಒಳನೋಟ, ಜ್ಞಾನೋದಯಗಳತ್ತ ಒಯ್ಯುತ್ತದೆ.

೧೦ "ನಿಬ್ಬಾಣವು ಮತ್ತಾವುದೂ ಅಲ್ಲ. ಆ ಮಹೋನ್ನತ ಅಷ್ಟಾಂಗ ಮಾರ್ಗ."

೧೧ ಪೂಜ್ಯ ಸಾರಿಪುತ್ರನು ಈ ರೀತಿ ಹೇಳಿದ. ಅವನು ಹೇಳಿದ್ದನ್ನು ಕೇಳಿ ಆ ಭಿಕ್ಷುಗಳು ಹೃದಯದಲ್ಲಿ ಹರ್ಷಿತರಾಗಿ ನಲಿದರು.

## ೨. ನಿರ್ವಾಣದ ಬೇರುಗಳು

(೧)

೧ ಒಂದು ಸಲ ಮಾನ್ಯ ರಾಧ ಆ ಮಹಾಮಹಿಮನನ್ನು ಕಾಣಲು ಬಂದ. ಹಾಗೆ ಬಂದಾತ ಆತನಿಗೆ ನಮಸ್ಕರಿಸಿ ಒಂದು ಪಕ್ಕದಲ್ಲಿ ಕುಳಿತ. ಕುಳಿತ ನಂತರ, ಆ ಮಹಾಮಹಿಮನನ್ನು ಕುರಿತು ಮಾನ್ಯ ರಾಧ ಹೀಗೆ ಹೇಳಿದ: "ಮಹಾಪ್ರಭು, ನಿರ್ವಾಣ ಏಕತ್ಕಾಗಿ? ದಯವಿಟ್ಟು ತಿಳಿಸಿ."

೨ ''ನಿರ್ವಾಣ ಎಂದರೆ ಇಂದ್ರಿಯ ತೃಷೆಯಿಂದ ಬಿಡುಗಡೆ" ಎಂದು ಆ ಮಹಾಪ್ರಭು ಉತ್ತರಿಸಿದ.

೩ "ಆದರೆ, ಮಹಾಪ್ರಭು ನಿರ್ವಾಣದ ಗುರಿಯೇನು?"

೪ "ರಾಧ, ನಿಲ್ದಾಣದಲ್ಲಿ ನೆಲೆ ನಿಂತಾಗ ನಿಜವಾದ ಧಾರ್ಮಿಕ ಜೀವನ ನಡೆಯುತ್ತದೆ. ನಿರ್ವಾಣವು ಅದರ ಗುರಿ, ನಿರ್ವಾಣವೇ ಅದರ ಅಂತ್ಯ.''

(೨)

೧ ಶ್ರಾವಸ್ತಿಯ ಆನಂದಪಿಂಡಿಕ ವನದ ಜೇತತೋಪಿನಲ್ಲಿ ಆ ಮಹಾಮಹಿಮನು ಒಮ್ಮೆ ವಾಸಿಸುತ್ತಿದ್ದ. ಆಗ ಆತನು ತನ್ನ ಸೋದರರನ್ನು, "ಸೋದರರೇ' ಎಂದು ಕರೆದ. "ನಾವಿಲ್ಲಿದ್ದೇವೆ ಪ್ರಭು" ಎಂದು ಆ ಸೋದರರು ಉತ್ತರಿಸಿದರು. ಆ ಮಹಾಮಹಿಮನು ಈ ರೀತಿ ಹೇಳಿದ:

೨ ''ಸೋದರರೇ, ಹೀನ ಪ್ರಪಂಚದೊಂದಿಗೆ ನಮ್ಮನ್ನು ಬಂಧಿಸುವ ಐದು ಶೃಂಖಲೆಗಳನ್ನು ನಾನು ಉಪದೇಶಿಸಿದಂತೆಯೇ ನೆನಪಿನಲ್ಲಿಟ್ಟುಕೊಂಡಿದ್ದೀರಾ?"

೩ ಆಗ ಮಾನ್ಯ ಮಾಲುಂಕ್ಯಪುತ್ತನು ಆ ಮಹಾಮಹಿಮನಿಗೆ ಹೀಗೆ ಹೇಳಿದ:

೪ "ಪ್ರಭು, ನಾನು ಆ ಐದು ಶೃಂಖಲೆಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ."

೫ "ಮಾಲುಂಕ್ಯಪುತ್ರ, ಅವುಗಳನ್ನು ಮನಸ್ಸಿನಲ್ಲಿ ಹೇಗೆ ಧರಿಸಿದ್ದೀಯೇ?"

೬ "ಪ್ರಭು, ತಾವು ಹೇಳಿದಂತೆ, ದೈಹಿಕ ದೃಷ್ಟಿ ಮತ್ತು ತಾವು ಉಪದೇಶಿಸಿದಂತೆ, ಮನಸ್ಸಿನ ಹೊಯ್ದಾಟ, ಮತಾಚರಣೆ ಮತ್ತು ಮತಪ್ರಕ್ರಿಯೆ, ಇಂದ್ರಿಯಾನುಭವದ ಆಮೋದ ಮತ್ತು ಕೇಡೆಣಿಕೆ – ಇವು ನಮ್ಮನ್ನು ಹೀನ ಪ್ರಪಂಚದೊಂದಿಗೆ ಬಂಧಿಸುವ ಶೃಂಖಲೆಗಳು ಎಂಬುದನ್ನು ನಾನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ."

೭ "ಮಾಲುಂಕ್ಯಪುತ್ರ, ಈ ಐದು ಶೃಂಖಲೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ಯಾರಿಗೆ ಬೋಧಿಸಿದ್ದು? ಇತರ ಮತೀಯ ದೃಷ್ಟಿಗಳಲ್ಲಿ ಅಲೆಯುತ್ತಿರುವವರು, ಎಳೆಕೂಸಿನ ದೃಷ್ಟಾಂತವನ್ನು ಬಳಸಿಕೊಂಡು

ಮತ್ತು ಈ ಕೆಳಕಂಡಂತೆ ಹೇಳುತ್ತಾ ನಿನ್ನನ್ನು ಹಳಿಯುವುದಿಲ್ಲವೇ?"

೮ "ಆದರೆ ಮಾಲುಂಕ್ಯಪುತ್ರ, ತನ್ನ ಬೆನ್ನ ಮೇಲೆ ಮಲಗಿರುವ ಮತ್ತು ವಿವೇಕವಿಲ್ಲದ ಎಳೆಶಿಶುವಿಗೆ ದೈಹಿಕ ದೃಷ್ಟಿ ಇರಲಾರದು. ಹಾಗೆಂದ ಮೇಲೆ ದೈಹಿಕ ದೃಷ್ಟಿ ಆ ಶಿಶುವಿನಲ್ಲಿ ಹೇಗೆ ಹುಟ್ಟಬಲ್ಲದು? ಅದಾಗ್ಯೂ ದೈಹಿಕ ದೃಷ್ಟಿಯ ಬಗ್ಗೆ ಆ ಶಿಶುವಿನಲ್ಲಿ ಒಂದು ಅಂತರ್ಗತ ಪ್ರವೃತ್ತಿ ಇರುತ್ತದೆ.

೯ "ಇದೇ ರೀತಿ, ಮಾಲುಂಕ್ಯಪುತ್ರ, ಮಂದಪ್ರಜ್ಞೆಯಿಂದ ಕೂಡಿ, ಅಂಗಾತ ಮಲಗಿರುವ ಎಳೆಶಿಶುವಿನಲ್ಲಿ ಯಾವುದೇ ಮಾನಸಿಕ ಸ್ಥಿತಿಗತಿಗಳಿರಲಾರವು. ಹಾಗಿದ್ದಮೇಲೆ, ಆತನಲ್ಲಿ ಮಾನಸಿಕ ಸ್ಥಿತಿಗತಿಗಳ ಹೊಯ್ದಾಟವಿರಲು ಹೇಗೆ ಸಾಧ್ಯ? ಆದರೂ ಆತನಲ್ಲಿ ಹೊಯ್ದಾಟದ ಪ್ರವೃತ್ತಿ ಅಂತರ್ಗತವಾಗಿರುತ್ತದೆ.

೧೦ "ಇದರಂತೆಯೇ, ಮಾಲುಂಕ್ಯಪುತ್ರ, ಆತನು ಯಾವುದೇ ನೈತಿಕ ಆಚರಣೆ ಮಾಡಲಾರ. ಹೀಗಿದ್ದ ಮೇಲೆ, ಮತಾಚರಣೆ ಮತ್ತು ಮತೀಯ ಪ್ರಕ್ರಿಯೆಗಳನ್ನು ಅವಲಂಬಿಸದ ಕಳಂಕ ಹೇಗಿರಲು ಸಾಧ್ಯ? ಆದಾಗ್ಯೂ ಆತನಲ್ಲಿ ಅದಕ್ಕೆ ಸಂಬಂಧಿಸಿದ ಪ್ರವೃತ್ತಿ ಅಂತರ್ಗತವಾಗಿರುತ್ತದೆ.

೧೧ "ಅದಲ್ಲದೆ, ಮಾಲುಂಕ್ಯಪುತ್ರ, ಆ ಎಳೆಶಿಶುವಿನಲ್ಲಿ ಯಾವುದೇ ಇಂದ್ರಿಯ ತೃಷೆಗಳಿರುವುದಿಲ್ಲ. ಹಾಗಿದ್ದ ಮೇಲೆ, ಇಂದ್ರಿಯ ಸುಖದ ಉದ್ರೇಕತೆಯನ್ನು ಅವನು ತಿಳಿಯಲು ಹೇಗೆ ಸಾಧ್ಯ? ಆದರೆ ಆ ಪ್ರವೃತ್ತಿ ಆತನಲ್ಲಿರುತ್ತದೆ.

೧೨ "ಕೊನೆಯದಾಗಿ, ಮಾಲುಂಕ್ಯಪುತ್ರ, ಆ ಎಳೆಯ ಮಗುವಿಗೆ ಇತರ ಜೀವಿಗಳು ಅಸ್ತಿತ್ವದಲ್ಲಿರುವುದಿಲ್ಲ ಹಾಗೆಂದ ಮೇಲೆ, ಜೀವಿಗಳ ವಿರುದ್ಧ ಅದು ಕೇಡೆಣಿಸುವುದು ಹೇಗೆ? ಆದರೂ ಅದಕ್ಕೆ ಸಂಬಂಧಿಸಿದ ಪ್ರವೃತ್ತಿ ಆತನಲ್ಲಿರುತ್ತದೆ.

೧೩ "ಅಂದಮೇಲೆ, ಮಾಲುಂಕ್ಯಪುತ್ರ, ನಿನ್ನನು ಆಕ್ಷೇಪಿಸಲೆಂದೇ, ಆ ಎಳೆಶಿಶುವಿನ ಕಥೆಯನ್ನು ಬಳಸಿಕೊಂಡು, ಇತರ ಮತೀಯ ದೃಷ್ಟಿಗಳಲ್ಲಿ ಅಲೆಯುತ್ತಿರುವವರು ನಿನ್ನನ್ನು ಖಂಡಿಸುವುದಿಲ್ಲವೇ?"

೧೪ ಇದನ್ನು ಹೇಳಿದಾಗ, ಮಾನ್ಯ ಆನಂದನು, "ಮಹಾಮಹಿಮನೇ, ಇದೇ ತಕ್ಕ ಸಮಯ. ಎಲೈ ಪಥಿಕನೇ, ಮಹಾಮಹಿಮನು ಮಾರ್ಗದರ್ಶನ ನೀಡಲು ಇದೇ ತಕ್ಕ ಸಮಯ."

## ವಿಭಾಗ – ೫

# ಧಮ್ಮದ ಬಗ್ಗೆ ಉಪದೇಶಗಳು

## ೧. ಸಮ್ಯಕ್ ದೃಷ್ಟಿಗೆ ಪ್ರಾಧಾನ್ಯ ಏಕೆ

೧ ಶ್ರೇಷ್ಠವಾದ ಅಷ್ಟಾಂಗಿಕ ಮಾರ್ಗದಲ್ಲಿ ಅತ್ಯಂತ ಗೌರವಾನ್ವಿತವಾದುದೆಂದರೆ ಸಮ್ಯಕ್ ದೃಷ್ಟಿ.

೨ ಉನ್ನತ ಮಟ್ಟದ ಜೀವನದ ಪ್ರತಿಯೊಂದಕ್ಕೂ ಸಮ್ಯಕ್ ಸಂಕಲ್ಪ ಮುನ್ನುಡಿ ಮತ್ತು ಬೀಗದ ಕೈ ಇದ್ದಂತೆ ಮತ್ತು;

೩ ಅಜ್ಞಾನ ಎಂದರೆ ಏನನ್ನೂ ಸರಿಯಾಗಿ ತಿಳಿದುಕೊಳ್ಳದೆ ಇರುವುದು, ಅದು ಎಲ್ಲ ಅನಿಷ್ಟಗಳ ಮೂಲ.

೪ ಸಮ್ಯಕ್ ದೃಷ್ಟಿಯನ್ನು ಬೆಳೆಸಿಕೊಳ್ಳಲು ನಾವು ಜೀವನದ ಪ್ರತಿಯೊಂದು ಆಗುಹೋಗುಗಳನ್ನು ಕಾರಣಾರ್ಥಕ ನಿಯಮದ ಘಟನಾವಳಿ ಎಂದು ತಿಳಿದುಕೊಳ್ಳಬೇಕು.

೫ "ಸೋದರರೆ, ಯಾವ ವ್ಯಕ್ತಿ ವಿಕೃತ ದೃಷ್ಟಿ, ವಿಕೃತ ಧ್ಯೇಯ, ವಿಕೃತ ಮಾತು, ವಿಕೃತ ಕೃತ್ಯಗಳು ಅಥವಾ ವಿಕೃತ ಜೀವನ, ವಿಕೃತ ಪ್ರಯತ್ನ, ಗಮನ ಅಥವಾ ಧ್ಯಾನಗಳನ್ನು ಬೆಳೆಸಿಕೊಳ್ಳುತ್ತಾನೊ, ಯಾರ ಜ್ಞಾನ ಮತ್ತು ವಿಮೋಚನೆ ವಿಕೃತವೊ ಅಂಥ ವಿಕೃತ ದೃಷ್ಟಿಗೆ ತಕ್ಕಂತೆ ಮಾಡಿದ ಅಥವಾ ಸಾಧಿಸಿದ ಪ್ರತಿಯೊಂದು ಕರ್ಮ ಅಥವಾ ಕ್ರಿಯೆ, ಮಾತು ಅಥವಾ ಯೋಚನೆ ಉದ್ದೇಶಪೂರ್ವಕವಾಗಿ ಮಾಡಿದ ಅವನ ಪ್ರತಿಯೊಂದು ಕ್ರಿಯೆ, ಅವನ ಪ್ರತಿಯೊಂದು ಧ್ಯೇಯ, ಅವನ ಪ್ರತಿಯೊಂದು ಪ್ರತಿಜ್ಞೆ – ಇವೆಲ್ಲವೂ ಬೇರೆಯವರಿಗೆ ಕೀಳು ಅಭಿರುಚಿ ಅಸಂತೋಷದಾಯಕ, ಅಸಹ್ಯ, ಲಾಭದಾಯಕವಲ್ಲದ ಮತ್ತು ದುಃಖದಾಯಕ ಪ್ರಸಂಗಗಳಾಗುತ್ತವೆ ಏಕೆ? ಅದಕ್ಕೆ ಕಾರಣ ದುಷ್ಟ ದೃಷ್ಟಿಕೋನ.

೬ ನಾವು ಕೇವಲ ಸರಿಯಾಗಿದ್ದರೆ ಸಾಲದು; ಎಳೆ ಮಗುವು ಸರಿಯಾಗಿಯೇ ಇರುತ್ತದೆ. ಆದರೆ ಸರಿಯಾಗಿರುವುದೆಂದರೆ ಏನೆಂಬುದು ಆ ಮಗುವಿಗೆ ಗೊತ್ತು ಎಂಬುದು ಇದರ ಅರ್ಥವಲ್ಲ. ನಾವು ಸರಿಯಾಗಿರಬೇಕಾದರೆ, ನಮಗೆ ಸರಿಯಾಗಿರುವುದೆಂದರೇನೆಂಬುದು ಗೊತ್ತಿರಬೇಕು.

೭ "ಆನಂದ, ನಾವು ಯಾರನ್ನು ಭಿಕ್ಷು ಎಂದು ಸೂಕ್ತವಾಗಿ ವರ್ಣಿಸಬಹುದು? ಯಾವುದು ವೈಚಾರಿಕವಾಗಿ ಸಾಧ್ಯ, ಯಾವುದು ವೈಚಾರಿಕವಾಗಿ ಅಸಾಧ್ಯ, ಎಂಬುದರ ಪರಿಣತಿ ಯಾರಿಗೆ ಇದೆಯೋ, ಅವರನ್ನು."

## ೨. ಮರಣದ ನಂತರದ ಜೀವನದ ಬಗ್ಗೆ ಏಕೆ ಚಿಂತೆ?

೧ ಒಂದು ಸಾರಿ, ಆರ್ಯ ಮಹಾಕಶ್ಯಪನೂ, ಆರ್ಯ ಸಾರಿಪುತ್ತನೂ ವಾರಾಣಸಿಯ ಹತ್ತಿರದ ಇಸಿ ಪಟ್ಟಣದ ಜೇತನವನದಲ್ಲಿ ತಂಗಿದ್ದರು.

೨ ಆಗ ಆರ್ಯ ಸಾರಿಪುತ್ತನು ಸಾಯಂಕಾಲ ತನ್ನ ಏಕಾಂತವನ್ನು ಮುಗಿಸಿ ಆರ್ಯ ಮಹಾ ಕಶ್ಯಪನ ಬಳಿ ಬಂದು, ಅವನ ಪಕ್ಕದಲ್ಲಿ ಕುಳಿತನು.

೩ ಹಾಗೆ ಕುಳಿತುಕೊಂಡು ಆರ್ಯ ಸಾರಿಪುತ್ರನು ಆರ್ಯ ಮಹಾ ಕಶ್ಯಪನಿಗೆ ಹೀಗೆ ಹೇಳಿದನು: "ಈಗ ಹೇಳು, ಗೆಳೆಯ ಕಶ್ಯಪ, ಸತ್ತನಂತರ ತಥಾಗಥ ಇರುತ್ತಾನೆಯೇ?"

೪ "ಗೆಳೆಯ, ಮಹಾತ್ಮ ತಥಾಗತನು ಸಾವಿನ ನಂತರವೂ ಇರುತ್ತಾನೆಂದು ಹೇಳಿಲ್ಲ."

೫ "ಹಾಗಾದರೆ ಗೆಳೆಯ, ಮರಣದ ನಂತರ ತಥಾಗತನು ಇರುವುದೂ ಸತ್ಯ. ಇಲ್ಲದಿರುವುದೂ ಸತ್ಯ ಎಂದರ್ಥವೇ?".

೬ "ಗೆಳೆಯಾ, ಮಹಾತ್ಮನು ಹಾಗೆಂದು ಸಹ ಹೇಳಿಲ್ಲ."

೭ "ಹಾಗಾದರೆ, ಗೆಳೆಯಾ ಮರಣದ ನಂತರ ತಥಾಗತನು ಇರುವುದೂ ಇಲ್ಲ, ಇಲ್ಲದಿರುವುದೂ ಇಲ್ಲ, ಎಂದರ್ಥವೇ? "ಮಹಾತ್ಮನು ಹಾಗೆಂದು ಹೇಳಿಲ್ಲ."

೮ "ಆದರೆ, ಗೆಳೆಯ, ಮಹಾತ್ಮನು ಹಾಗೇಕೆ ಏನೂ ಹೇಳಿಲ್ಲ."

೯ "ಈ ಪ್ರಶ್ನೆಯಿಂದ ಮನುಕುಲಕ್ಕೆ ಯಾವ ಲಾಭವೂ ಇಲ್ಲ; ಅಲ್ಲದೆ ಪವಿತ್ರ ಜೀವನದ ಮೂಲ ತತ್ವಗಳಿಗೂ ಇದು ಸಂಬಂಧಿಸಿದುದಲ್ಲ. ಈ ಪ್ರಶ್ನೆಯು ನಮ್ಮನ್ನು ಪೂರ್ಣಪ್ರಜ್ಞೆಯೆಡೆಗಾಗಲೀ, ನಿರ್ವಾಣದೆಡೆಗಾಗಲೀ ಕರೆದೊಯ್ಯುವುದಿಲ್ಲ. ಗೆಳೆಯ, ಈ ಕಾರಣಕ್ಕಾಗಿಯೇ ಮಹಾತ್ಮನು ಈ ಬಗ್ಗೆ ಏನೂ ಹೇಳಿಲ್ಲ."

## ೩. ದೇವರಿಗೆ ಸಲ್ಲಿಸುವ ಪ್ರಾರ್ಥನೆ ಮತ್ತು ಭಜನೆ ನಿರರ್ಥಕ

೧ ಒಂದು ಸಾರಿ ಪೂಜ್ಯ ಪ್ರಭುವು ವಸಿಷ್ಠನನ್ನುದ್ದೇಶಿಸಿ ಹೀಗೆ ಹೇಳಿದ:

೨ "ಅಚಿರಾವತಿ ನದಿ ತುಂಬಿ ದಡಮೀರಿ ಹರಿಯುತ್ತಿದ್ದಾಗ, ಒಬ್ಬ ಆಚೆ ದಡಕ್ಕೆ ದಾಟಿ, ಅಲ್ಲಿ ತನ್ನ ಕೆಲಸ ಮಾಡಬೇಕಾಗಿದೆ ಎನ್ನೋಣ. ಆಗ ಅವನು ನದಿಯನ್ನು ದಾಟಬೇಕಾಗುತ್ತದೆ.

೩ "ಆತ ಈಚೆ ದಡದಲ್ಲಿ ನಿಂತು, ಆಚೆ ದಡವನ್ನುದ್ದೇಶಿಸಿ 'ಓ ಆಚೆ ದಡವೇ, ಇಲ್ಲಿ ಬಾ! ಈ ಕಡೆಗೆ ಬಾ!' ಎಂದು ಕರೆಯುತ್ತಾನೆನ್ನೋಣ.

೪ "ಈಗ ವಸೆತ್ತಾ ನೀನೇನು ಹೇಳುವೇ? ಮನುಷ್ಯನ ಪ್ರಾರ್ಥನೆ ಮತ್ತು ಭಜನೆ, ಅವನ ನಿರೀಕ್ಷೆ ಮತ್ತು ಸ್ತುತಿಗಳನ್ನು ಕೇಳಸಿಕೊಂಡ ಆಚೆ ದಡವು ಈಚೆಗೆ ಬರುತ್ತದೆಯೇ?

೫ "ಅದೇ ರೀತಿ ವಸಿಷ್ಠಾ, ಯಾವ ಗುಣಗಳನ್ನು ಬೆಳೆಸಿಕೊಂಡರೆ ಒಬ್ಬ ವ್ಯಕ್ತಿ ಬ್ರಾಹ್ಮಣನೆನಿಸಿಕೊಳ್ಳುತ್ತಾನೆಯೊ, ಅಂಥ ಗುಣಗಳನ್ನು ಬಿಟ್ಟು, ಯಾವ ಗುಣಗಳನ್ನು ಬೆಳೆಸಿಕೊಂಡರೆ ಒಬ್ಬ ವ್ಯಕ್ತಿ ಅಬ್ರಾಹ್ಮಣನೆನಿಸಿಕೊಳ್ಳುತ್ತಾನೆಯೊ ಅಂಥ ಗುಣಗಳನ್ನು ಬೆಳೆಸಿಕೊಂಡ ಹಾಗೂ ಮೂರು ವೇದಗಳಲ್ಲಿ ಪಾರಂಗತರಾದ ಬ್ರಾಹ್ಮಣರು ಹೀಗೆನ್ನುತ್ತಾರೆ:

೬ 'ಇಂದ್ರನನ್ನು ಆಹ್ವಾನಿಸುತ್ತೇವೆ, ಬ್ರಹ್ಮನನ್ನು ಆಹ್ವಾನಿಸುತ್ತೇವೆ, ಈಶನನ್ನು ಆಹ್ವಾನಿಸುತ್ತೇವೆ, ಪ್ರಜಾಪತಿಯನ್ನು ಆಹ್ವಾನಿಸುತ್ತೇವೆ; ಆಹ್ವಾನಿಸುತ್ತೇವೆ, ಆಹ್ವಾನಿಸುತ್ತೇವೆ.

೭ "ಹೀಗೆ ವಸಿಷ್ಠ, ಬ್ರಾಹ್ಮಣರು ಆಹ್ವಾನಿಸುವುದರಿಂದ ಹಾಗೂ ಪ್ರಾರ್ಥಿಸುವುದರಿಂದ, ಹಾಗೂ ನಿರೀಕ್ಷಿಸುವುದರಿಂದ ಹಾಗೂ ಸ್ತುತಿಸುವುದರಿಂದ, ತಮ್ಮ ಮರಣಾನಂತರ ಅವರು ಬ್ರಹ್ಮನೊಂದಿಗೆ ಬೆರೆಯಬೇಕಾಗಿತ್ತು – ಆದರೆ ವಸ್ತುಸ್ಥಿತಿ ಹಾಗಿರಲು ಸಾಧ್ಯವಿಲ್ಲ."

## ೪. ನಿನ್ನನ್ನು ಪವಿತ್ರನನ್ನಾಗಿ ಮಾಡುವುದು ನೀನು ತಿನ್ನುವ ಆಹಾರವಲ್ಲ.

೧ ಒಬ್ಬ ಬ್ರಾಹ್ಮಣ ಪ್ರಭುವನ್ನು ಭೇಟಿ ಮಾಡಿ ಮನುಷ್ಯನ ಗುಣದ ಮೇಲೆ ಆಹಾರ ಪರಿಣಾಮವನ್ನುಂಟುಮಾಡುವುದರ ವಿಷಯ ಪ್ರಸ್ತಾಪಿಸಿದ.

೨ ಆ ಬ್ರಾಹ್ಮಣ ಹೇಳಿದ: "ಸಾವೆ, ತಾಳೆಕಾಯಿ, ದ್ವಿದಳ ಧಾನ್ಯ, ಹಣ್ಣು ಹಂಪಲು, ಚಿಗುರು – ಇವುಗಳನ್ನು ಸರಿಯಾದ ಪ್ರಮಾಣದಲ್ಲಿ ತಿನ್ನುವುದರಿಂದ ನಿಜವಾದ ಜೀವನ ಸಾಧ್ಯವಾಗುತ್ತದೆ. ಕೊಳೆತದ್ದನ್ನು ತಿನ್ನುವುದು ತಪ್ಪು."

೩ ಆಗ ಪೂಜ್ಯ ಪ್ರಭು ಉತ್ತರಿಸಿದ: "ಪೂಜ್ಯರಾದ ತಾವು ಶವವನ್ನು ಮುಟ್ಟಬಾರದೆಂದು ಹೇಳುತ್ತೀರಾದರೂ ಪಕ್ಷಿಗಳ ಮಾಂಸದಿಂದ ಮಾಡಿದ ಪ್ರಿಯವಾದ ಭಕ್ಷ್ಯಗಳನ್ನು ತಿನ್ನುತ್ತೀರಿ – ಹಾಗಾದರೆ ಕೊಳೆತದ್ದು ಎಂದರೇನು ಎಂದು ನಾನು ಕೇಳುತ್ತೇನೆ.

೪ "ಕೊಲ್ಲುವುದು, ಅಂಗಹೀನ ಮಾಡುವುದು, ಬಾಸುಂಡೆ ಬರುವಂತೆ ಹೊಡೆಯುವುದು, ಬಂಧಿಸಿಡುವುದು, ಕಳವು ಮಾಡುವುದು, ಸುಳ್ಳು ಹೇಳುವುದು, ವಂಚಿಸುವುದು, ವ್ಯಭಿಚಾರ ಮಾಡುವುದು, ಇವು ಹೊಲಸೇ ಹೊರತು ಮಾಂಸವಲ್ಲ.

೫ "ಸುಖದ ಬೆನ್ನು ಹತ್ತುವುದು, ಬೇರೆಯವರ ಆಸ್ತಿಗಾಗಿ ಆಸೆ ಪಡುವುದು, ಅನೈತಿಕ ಜೀವನ ನಡೆಸುವುದು, ಸದಾಚಾರ ಜೀವನಕ್ಕೆ ಅಸಮ್ಮತಿ ಸೂಚಿಸುವುದು – ಇವು ಹೊಲಸೇ ಹೊರತು, ಮಾಂಸವಲ್ಲ.

೬ "ಚಾಡಿ ಹೇಳುವುದು, ಕ್ರೌರ್ಯ, ದ್ರೋಹ ಬಗೆಯುವುದು, ನಿರ್ದಾಕ್ಷಿಣ್ಯ ಜಂಬ, ಸಣ್ಣ ಮನಸ್ಸಿನ ಕೃಪಣತನ – ಇವು ಹೊಲಸೇ ಹೊರತು, ಮಾಂಸವಲ್ಲ.

೭ "ಕ್ರೋಧ, ದುರಭಿಮಾನ, ದಂಗೆಯೇಳುವ ಸ್ವಭಾವ, ಕಾಪಟ್ಯ, ಹೊಟ್ಟೆಕಿಚ್ಚು, ಅಬ್ಬರಿಸಿ ಬೆದರಿಸುವುದು, ಗರ್ವ, ದುಷ್ಟರ ಸಂಗ – ಇವು ಹೊಲಸೇ ಹೊರತು, ಮಾಂಸವಲ್ಲ.

೮ "ಕೀಳು ರೀತಿಯಲ್ಲಿ ಬದುಕುವುದು, ಅಪಪ್ರಚಾರ ಮಾಡುವುದು, ವಂಚನೆ, ಮೋಸ, ಚಾತುರ್ಯದಿಂದ ನಂಬಿಸಿ ಮೋಸ ಮಾಡುವುದು, ಕೀಳ್ಮಟ್ಟದ ನೀಚ ಕೃತ್ಯ – ಇವು ಹೊಲಸೇ ಹೊರತು, ಮಾಂಸವಲ್ಲ.

೯ "ಕೊಲ್ಲಬೇಕು, ಕಳವು ಮಾಡಬೇಕು ಎಂಬ ಅದಮ್ಯ ಆಸೆ, ಈ ಅಪರಾಧಗಳು ಪ್ರಳಯಾಂತಕ, ಇವುಗಳನ್ನೆಸಗಿದವರಿಗೆ ನರಕವೇ ಗತಿ; ಇವು ಹೊಲಸೇ ಹೊರತು, ಮಾಂಸವಲ್ಲ.

೧೦ "ಮಾಂಸ ಮತ್ತು ಮತ್ಸ್ಯವರ್ಜನೆಯಿಂದ, ಬೆತ್ತಲೆಯಿರುವುದರಿಂದ, ಜುಟ್ಟು ಬಿಡುವುದರಿಂದ, ತಲೆ ಬೋಳಿಸಿಕೊಳ್ಳುವುದರಿಂದ, ಚರ್ಮದ ಉಡುಗೆಗಳನ್ನು ತೊಡುವುದರಿಂದ, ಪವಿತ್ರಾಗ್ನಿಯನ್ನು ಉರಿಸುವುದರಿಂದ, ಆನಂದ ಪಡೆಯುವ ಉದ್ದೇಶದಿಂದ ಕಠಿಣ ವ್ರತ ಆಚರಿಸುವುದರಿಂದ, ಸ್ನಾನ

ಮಾಡುವುದರಿಂದ, ಸುಟ್ಟ ಪದಾರ್ಥಗಳನ್ನು ನೈವೇದ್ಯ ಮಾಡುವುದರಿಂದ, ಕರ್ಮಗಳನ್ನು ಆಚರಿಸುವುದರಿಂದ, ಸಂಶಯಪಡುವ ಯಾರೂ ಶುದ್ಧವಾಗಲಾರರು.

೧೧ "ನಿಮ್ಮ ಇಂದ್ರಿಯಗಳನ್ನು ನಿಗ್ರಹಿಸಿ; ನಿಮ್ಮ ಶಕ್ತಿಗಳನ್ನು ನಿಯಂತ್ರಿಸಿ, ಸತ್ಯಕ್ಕೆ ಅಂಟಿಕೊಳ್ಳಿ; ದಯೆ ತೋರಿಸಿ. ಎಲ್ಲ ಬಂಧನಗಳನ್ನು ಬಿಡಿಸಿಕೊಂಡು, ಎಲ್ಲ ದುಃಖಗಳನ್ನೂ ಗೆದ್ದ ಸಂನ್ಯಾಸಿಯು ತಾನು ನೋಡಿದ ಅಥವಾ ಕೇಳಿದ ಯಾವುದರಿಂದಲೂ ಕಲುಷಿತಗೊಳ್ಳಲಾರ."

೧೨ ಪ್ರಭು ಬೋಧಿಸಿದ ಈ ಉನ್ನತ ಹಾಗೂ ರಕ್ಷಿಸುವ ಸತ್ಯವನ್ನು ಕೇಳಿದ ಆ ಬ್ರಾಹ್ಮಣ ತನ್ನ ಹೊಲಸನ್ನು ಆಕ್ಷೇಪಿಸುತ್ತಾ, ತನ್ನ ದುರ್ಗುಣಗಳನ್ನು ಗುಡಿಸಿಹಾಕಿ, ಪ್ರಭುವಿನ ಮುಂದೆ ಶರಣಾಗತಿ ಭಾವದಿಂದ ಮೊಣಕಾಲೂರಿ, ತನ್ನನ್ನು ಅಲ್ಲೇ, ಆ ಕ್ಷಣವೇ ಭಿಕ್ಷುವನ್ನಾಗಿ ಸೇರಿಸಿಕೊಳ್ಳಬೇಕೆಂದು ವಿನಂತಿಸಿಕೊಂಡ.

## ೫. ದುಷ್ಕೃತ್ಯಗಳನ್ನು ಗಣಿಸಬೇಕೇ ಹೊರತು, ಆಹಾರವನ್ನಲ್ಲ.

೧ ಹಿಮಾಲಯ ಪ್ರದೇಶದಲ್ಲಿ ಆಮಗಂಧನೆಂಬ ಬ್ರಾಹ್ಮಣ ಸಂನ್ಯಾಸಿಯು ತನ್ನ ಶಿಷ್ಯರೊಂದಿಗೆ ಜೀವಿಸುತ್ತಿದ್ದ.

೨ ಅವರು ಮೀನನ್ನಾಗಲಿ ಮಾಂಸವನ್ನಾಗಲಿ ತಿನ್ನುತ್ತಿರಲಿಲ್ಲ. ಪ್ರತಿವರ್ಷವೂ ಅವರು ಉಪ್ಪು ಮತ್ತು ಹುಳಿ ಹುಡುಕಿಕೊಂಡು ತಮ್ಮ ಆಶ್ರಮದಿಂದ ಕೆಳಗಿಳಿದು ಬರುತ್ತಿದ್ದರು. ಆ ಹಳ್ಳಿಯ ಜನರು ಅವರನ್ನು ಆದರದಿಂದ ಸ್ವಾಗತಿಸಿ, ನಾಲ್ಕು ತಿಂಗಳವರೆಗೆ ಅವರ ಆದರಾತಿಥ್ಯವನ್ನು ನೋಡಿಕೊಳ್ಳುತ್ತಿದ್ದರು.

೩ ಒಮ್ಮೆ ಪೂಜ್ಯ ಪ್ರಭುವು ತನ್ನ ಭಿಕ್ಷುಗಳೊಡಗೂಡಿ ಅದೇ ಹಳ್ಳಿಗೆ ಭೇಟಿ ನೀಡಿದನು. ಅವನ ಧರ್ಮೋಪದೇಶ ಕೇಳಿದ ಆ ಹಳ್ಳಿಯ ಜನರು ಅವನ ಅನುಯಾಯಿಗಳಾದರು.

೪ ಮತ್ತೇ ಅದೇ ವರ್ಷ ಎಂದಿನಂತೆ ಆಮಗಂಧ ಮತ್ತು ಅವನ ಶಿಷ್ಯರು ಆ ಹಳ್ಳಿಗೆ ಹೋದರು. ಆದರೆ ಆ ಹಳ್ಳಿಗರು ಮೊದಲಿನ ಉತ್ಸಾಹವನ್ನು ತೋರಿಸಲಿಲ್ಲ.

೫ ಪ್ರಭುವು ಮೀನನ್ನಾಗಲಿ, ಮಾಂಸವನ್ನಾಗಲಿ ತಿನ್ನಬಾರದೆಂದು ಹೇಳಲಿಲ್ಲ ಎಂಬುದನ್ನು ಕೇಳಿದ ಆಮಗಂಧನಿಗೆ ನಿರಾಶೆಯಾಯಿತು. ಈ ವಿಷಯವನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಆತನು ಆ ಸಮಯದಲ್ಲಿ ಶ್ರಾವಸ್ತಿಯ ಬಳಿ ಜೇತವನದಲ್ಲಿ ಉಳಿದುಕೊಂಡಿದ್ದ ಪೂಜ್ಯ ಪ್ರಭುವಿನ ಬಳಿಗೆ ಹೋಗಿ, ಹೀಗೆಂದನು:

೬ "ಸಾವೆ, ಅವರೆಕಾಯಿ ಮತ್ತು ಬಟಾಣಿ, ತಿನ್ನಲು ಯೋಗ್ಯವಾದ ಸೊಪ್ಪು ಮತ್ತು ಗಡ್ಡೆಗಳು, ಬಳ್ಳಿ ಬಿಟ್ಟ ಹಣ್ಣುಗಳು ಇವುಗಳನ್ನು ಸತ್ಯಮಾರ್ಗದಲ್ಲಿ ಪಡೆದು ತಿನ್ನುವ ಧರ್ಮಿಷ್ಠರು ತಮ್ಮ ಸುಖಕ್ಕೋಸ್ಕರ ಎಂದೂ ಸುಳ್ಳು ಹೇಳುವುದಿಲ್ಲ.

೭ "ಚೆನ್ನಾಗಿ ಕಾಣುವ, ಶುದ್ಧವಾದ ಹಾಗೂ ಉತ್ತಮ ರೀತಿಯಲ್ಲಿ ಇತರರು ಮಾಡಿದ ಹಾಗೂ ಕೊಟ್ಟ ಆಹಾರವನ್ನು ನೀವು ಉಣ್ಣುವಿರಿ. ಆಮಗಂಧ ಅಕ್ಕಿಯಿಂದ ಮಾಡಿದ ಅಂಥ ಆಹಾರವನ್ನು ತಿಂದು ಸುಖಿಸುವವನು, ಅದನ್ನು ಸೇವಿಸುವನು ಅನ್ನದ ಜೊತೆಯಲ್ಲಿ ಹಕ್ಕಿಯ ಮಾಂಸವನ್ನು ಸೇರಿಸಿ ಉತ್ತಮ ರೀತಿಯಲ್ಲಿ ತಯಾರಿಸಿದುದನ್ನು ತಿನ್ನುವಾಗ 'ಆಮಗಂಧನ ಆಕ್ಷೇಪಣೆ ನನಗೆ ಅನ್ವಯಿಸುವುದಿಲ್ಲ' ಎಂದು ನೀವಂದುಕೊಳ್ಳುತ್ತೀರಿ.

೮ "ಹಾಗಾದರೆ, ನಿಮ್ಮ ಆಮಗಂಧ ಯಾವ ರೀತಿಯವರು, ಎಂಬುದರ ಅರ್ಥ ನಾನು ಕೇಳಬಯಸುತ್ತೇನೆ."

೯ ಇದಕ್ಕೆ ಪ್ರಭು ಉತ್ತರಿಸಿದ: "ಪ್ರಾಣಹರಣ ಮಾಡುವುದು, ಹೊಡೆಯುವುದು, ಕತ್ತರಿಸುವುದು, ಬಂಧಿಸುವುದು, ಕದಿಯುವುದು, ಸುಳ್ಳು ಹೇಳುವುದು, ದ್ರೋಹ ಎಸಗುವುದು, ವಂಚಿಸುವುದು, ನಿಷ್ಪ್ರಯೋಜಕ ಜ್ಞಾನ, ವ್ಯಭಿಚಾರ — ಇದು ಆಮಗಂಧವೇ ಹೊರತು, ಮಾಂಸ ತಿನ್ನುವುದಲ್ಲ.

೧೦ "ಈ ಜಗತ್ತಿನಲ್ಲಿ ಯಾವ ವ್ಯಕ್ತಿಗಳು ತಮ್ಮ ಇಂದ್ರಿಯ ಸುಖವನ್ನು ನಿಯಂತ್ರಿಸುವುದಿಲ್ಲವೊ, ಯಾರು ಸಿಹಿ ತಿನಿಸುಗಳನ್ನು ಅತಿಯಾಗಿ ಆಶಿಸುತ್ತಾರೊ, ಯಾರು ಅನೈತಿಕ ಕ್ರಿಯೆಗಳಲ್ಲಿ ತೊಡಗುತ್ತಾರೊ, ಯಾರ ದೃಷ್ಟಿ ನಿಷೇಧಾತ್ಮಕವೂ, ವಿಕೃತವೂ ಅನುಸರಿಸಲು ಕಷ್ಟವೂ ಆಗಿರುತ್ತದೆಯೋ — ಇವೆಲ್ಲ ಆಮಗಂಧವೇ ಹೊರತು, ಮಾಂಸ ತಿನ್ನುವುದಲ್ಲ.

೧೧ "ಈ ಜಗತ್ತಿನಲ್ಲಿ ಯಾವ ವ್ಯಕ್ತಿಗಳು ಒರಟರೂ, ಕಠಿಣರೂ, ಚಾಡಿ ಹೇಳುವವರೂ, ಕ್ರೂರಿಗಳೂ, ನಿರ್ದಯಿಗಳೂ, ಅತಿಯಾದ ಸ್ವಾರ್ಥಿಗಳೂ, ಔದಾರ್ಯವಿಲ್ಲದವರೂ, ಯಾರಿಗೂ ಏನನ್ನೂ ಕೊಡದವರೂ ಆಗಿರುತ್ತಾರೊ — ಅವರು ಆಮಗಂಧವೇ ಹೊರತು ಮಾಂಸಭಕ್ಷಣೆಯಲ್ಲ.

೧೨ "ಕ್ರೋಧ, ಮದ, ಛಲ, ಪ್ರತಿರೋಧ, ಮೋಸ, ದ್ವೇಷ, ತನ್ನನ್ನು ಹೊಗಳಿಸಿಕೊಳ್ಳುವುದು, ವಿಪರೀತ ಸ್ವಾರ್ಥತೆ, ದುರ್ಜನರ ಸಂಘ, ಇದು ಆಮಗಂಧವೇ ಹೊರತು ಮಾಂಸಭಕ್ಷಣೆಯಲ್ಲ.

೧೩ "ಅನೈತಿಕತೆಯುಳ್ಳವರು, ಸಾಲ ಹಿಂದಿರುಗಿಸಲೊಲ್ಲದವರು, ಅಪಪ್ರಚಾರ ಮಾಡುವವರು, ವ್ಯವಹಾರದಲ್ಲಿ ಮೋಸ ಮಾಡುವವರು, ಕಪಟಿಗಳು ಪ್ರಪಂಚಲ್ಲೇ ಅತ್ಯಂತ ನೀಚರಾಗಿದ್ದುಕೊಂಡು ಅಂಥ ದುಷ್ಕೃತ್ಯಗಳನ್ನು ಮಾಡುವವರು — ಇವರೆಲ್ಲ ಆಮಗಂಧವೇ ಹೊರತು ಮಾಂಸಭಕ್ಷಣೆಯಲ್ಲ.

೧೪ "ಯಾರು ಜಗತ್ತಿನಲ್ಲಿ ಪ್ರಾಣಿಗಳ ಬಗೆಗೆ ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತಾರೊ, ಇತರರಿಗೆ ಸೇರಿದುದನ್ನು ಕಿತ್ತುಕೊಂಡು ಅವರನ್ನು ಹಿಂಸಿಸುವುದರಲ್ಲೇ ನಿರತರಾಗಿರುತ್ತಾರೋ, ಯಾರ ವರ್ತನೆ ಅನೈತಿಕ, ಕ್ರೂರ, ಕಠೋರ, ಅವಮಾನಕರವಾಗಿರುತ್ತದೆಯೊ ಇದೆಲ್ಲ ಆಮಗಂಧವೇ ಹೊರತು, ಮಾಂಸಭಕ್ಷಣೆಯಲ್ಲ.

೧೫ "ಯಾರು ಜೀವಿಗಳ ಮೇಲೆ ಲೋಭದಿಂದಲೊ, ದ್ವೇಷದಿಂದಲೊ ಆಕ್ರಮಣ ಮಾಡುತ್ತಾರೋ ದುಷ್ಟತನದಲ್ಲೇ ಯಾವಾಗಲೂ ನಿರತರಾಗಿರುತ್ತಾರೊ ಅವರು ಸಾವಿನ ನಂತರ ಅಂಧಕಾರವನ್ನು ಪ್ರವೇಶಿಸಿ, ತಲೆಕೆಳಗಾಗಿ ನರಕಕ್ಕೆ ಬೀಳುತ್ತಾರೊ; ಅದು ಆಮಗಂಧವೇ ಹೊರತು ಮಾಂಸಭಕ್ಷಣೆಯಲ್ಲ.

೧೬ "ಮೀನು ಅಥವಾ ಮಾಂಸ ವರ್ಜಿಸುವುದು, ಬೆತ್ತಲೆಯಾಗಿರುವುದು, ತಲೆಬೋಳಿಸುವುದು, ಜಟೆಗಟ್ಟಿದ ಕೂದಲು ಬೆಳೆಸುವುದು, ಬೂದಿ ಬಳಿದುಕೊಳ್ಳುವುದು, ಒರಟಾದ ಜಿಂಕೆ ಚರ್ಮವನ್ನು ತೊಡುವುದು, ಯಜ್ಞಕುಂಡದಲ್ಲಿ ಭಾಗವಹಿಸುವುದು, ಅಮರತ್ವವನ್ನು ಪಡೆಯಲು ಈ ಜಗತ್ತಿನಲ್ಲಿ ಮಾಡುವ ವಿವಿಧ ರೀತಿಯ ತಪಸ್ಸು, ಮಂತ್ರಪಠನೆ, ಅರ್ಪಣೆ, ಯಜ್ಞಗಳು, ಆಯಾಕಾಲಕ್ಕೆ ತಕ್ಕಂತೆ ಮಾಡುವ ವ್ರತಗಳು — ಇವಾವೂ ಸಂದೇಹವುಳ್ಳ ವ್ಯಕ್ತಿಯನ್ನು ಶುದ್ಧೀಕರಿಸಲಾರವು.

೧೭ "ಯಾರು ತನ್ನ ಇಂದ್ರಿಯಗಳನ್ನು ಎಚ್ಚರಿಕೆಯಿಂದ ಕಾಯ್ದುಕೊಂಡು ಅವುಗಳನ್ನು ಜಯಿಸಿ ಧರ್ಮದಲ್ಲೇ ನೆಲೆಸುತ್ತಾನೋ, ಯಾರು ಋಜುಮಾರ್ಗವನ್ನು ಅನುಸರಿಸುವುದರಿಂದಲೂ ಮೃದುವರ್ತನೆಯಿಂದಲೂ ಸಂತೋಷಪಡುತ್ತಾನೊ, ಯಾರು ಮೋಹದಿಂದ ತಪ್ಪಿಸಿಕೊಂಡು, ಎಲ್ಲ ದುಃಖಗಳನ್ನು ಗೆಲ್ಲುತ್ತಾನೊ, ಅಂಥ ಜ್ಞಾನಿಯು ತಾನು ನೋಡಿದ ಮತ್ತು ಕೇಳಿದ ವಿಷಯಗಳಿಗೆ ಅಂಟಿಕೊಳ್ಳುವುದಿಲ್ಲ.

೧೮ "ದುಷ್ಕೃತ್ಯಗಳು ಆಮಗಂಧಗಳಾಗುತ್ತವೆಯೆ ಹೊರತು, ಮೀನು ಅಥವಾ ಮಾಂಸ ಭಕ್ಷಣೆಯಲ್ಲ."

## ೬. ಬಹಿರಂಗ ಶುದ್ಧಿ ಸಾಲದು

೧ ಒಮ್ಮೆ ಮಹಾತ್ಮನು ಶ್ರಾವಸ್ತಿಯಲ್ಲಿ ತಂಗಿದ್ದ; ಸಂಗರವ ಎಂಬ ಬ್ರಾಹ್ಮಣ ಸಹ ಅಲ್ಲೇ ವಾಸಿಸುತ್ತಿದ್ದ. ಅವನಿಗೆ ಜಲದಿಂದ ಶುದ್ಧಿಮಾಡಿಕೊಳ್ಳುವುದರಲ್ಲಿ ನಂಬಿಕೆಯಿತ್ತು, ಹಾಗೂ ಜಲಶುದ್ಧಿಯನ್ನು ಆಚರಿಸುತ್ತಿದ್ದ. ಹಗಲು–ರಾತ್ರಿ ಸ್ನಾನ ಮಾಡುವ ಅಭ್ಯಾಸಕ್ಕೆ ಅವನು ಬಲಿಯಾಗಿದ್ದ.

೨ ಒಂದು ದಿನ ಪೂಜ್ಯ ಆನಂದ ಬೆಳಗಿನ ಜಾವದಲ್ಲೆದ್ದು, ವಸ್ತ್ರ ಧರಿಸಿ, ಮೇಲುಡುಗೆಯನ್ನೂ ಭಿಕ್ಷಾಪಾತ್ರೆಯನ್ನೂ ತೆಗೆದುಕೊಂಡು ಶ್ರಾವಸ್ತಿಯಲ್ಲಿ ಭಿಕ್ಷೆ ಮಾಡಹೊರಟ. ಹೀಗೆ ಶ್ರಾವಸ್ತಿಯಲ್ಲಿ ಅವನು ಭಿಕ್ಷಾಟನೆ ಮಾಡಿ, ಊಟ ಮಾಡಿ, ಹಿಂತಿರುಗುವಾಗ ಮಹಾತ್ಮನ ಬಳಿಗೆ ಬಂದು ನಮಸ್ಕರಿಸಿ, ಒಂದು ಪಕ್ಕದಲ್ಲಿ ಕುಳಿತನು. ಹೀಗೆ ಕುಳಿತುಕೊಂಡ ಆರ್ಯ ಆನಂದನು ಹೀಗೆ ನುಡಿದ:

೩ "ಪ್ರಭುವೇ, ಶ್ರಾವಸ್ತಿಯಲ್ಲಿ ಶಾರ್ಙ್ಗರವ ಎಂಬ ಬ್ರಾಹ್ಮಣನಿದ್ದಾನೆ. ಅವನು ಜಲದಿಂದ ಶುದ್ಧಿ ಮಾಡಿಕೊಳ್ಳುವವನು ಹಾಗೂ ಅವನು ಜಲಶುದ್ಧಿ ರೂಢಿ ಮಾಡಿಕೊಂಡಿದ್ದಾನೆ. ಹಗಲು–ರಾತ್ರಿಯೆನ್ನದೆ ಅವನು ಯಾವಾಗಲೂ ಸ್ನಾನ ಮಾಡುವ ಅಭ್ಯಾಸಕ್ಕೊಳಗಾಗಿದ್ದಾನೆ. ಸರ್ವೋತ್ತಮರಾದ ತಾವು ಅವನ ಮೇಲೆ ಕರುಣೆಯಿಟ್ಟು ಅವನನ್ನು ಭೇಟಿಮಾಡಿದರೆ ಒಳ್ಳೆಯದಾದೀತು."

೪ ಭಗವಾನನು ಮೌನದಿಂದಲೇ ಇದಕ್ಕೆ ಸಮ್ಮತಿ ಸೂಚಿಸಿದನು.

೫ ಅದರಂತೆ ಮಾರನೆ ದಿನ ಭಗವಾನನು ಬೇಗನೆ ಎದ್ದು, ಬಟ್ಟೆ ತೊಟ್ಟುಕೊಂಡು, ಮೇಲುಡುಗೆಯನ್ನೂ, ಭಿಕ್ಷಾಪಾತ್ರೆಯನ್ನೂ ತೆಗೆದುಕೊಂಡು, ಸಂಗರವ ವಾಸವಾಗಿದ್ದ ಸ್ಥಳಕ್ಕೆ ಹೋದನು ಹಾಗೂ ಮೊದಲೇ ಸಿದ್ಧಪಡಿಸಿದ್ದ ಆಸನದ ಮೇಲೆ ಕುಳಿತನು.

೬ ಆಗ ಬ್ರಾಹ್ಮಣ ಸಂಗರವ ಭಗವಾನನ ಬಳಿ ಬಂದು ಅವನಿಗೆ ನಮಸ್ಕರಿಸಿದನು. ಉಭಯ ಕುಶಲೋಪರಿಯ ನಂತರ ಅವನು ಬುದ್ಧನ ಪಕ್ಕದಲ್ಲಿ ಬಂದು ಆಸನದ ಮೇಲೆ ಕುಳಿತನು.

೭ ಹೀಗೆ ಕುಳಿತಿದ್ದಾಗ ಭಗವಾನನು ಆ ಬ್ರಾಹ್ಮಣ ಶಾರ್ಙ್ಗರವನನ್ನುದ್ದೇಶಿಸಿ ಹೀಗೆಂದನು: "ಬ್ರಾಹ್ಮಣನೇ, ನೀನು ಜಲದಿಂದ ಶುದ್ಧಿಮಾಡಿಕೊಳ್ಳುವವನು ಹಾಗೂ ಜಲಶುದ್ಧಿ ಅಭ್ಯಾಸವುಳ್ಳವನು, ಹಗಲು–ರಾತ್ರಿಯೆನ್ನದೆ, ನೀನು ಯಾವಾಗಲೂ ಸ್ನಾನ ಮಾಡುವ ಅಭ್ಯಾಸವುಳ್ಳವನು ಎಂದು ಜನರಾಡಿಕೊಳ್ಳುವ ಮಾತು ಸತ್ಯವೇ?"

೮ "ಅದು ಸತ್ಯ, ಪ್ರಭು ಗೌತಮ."

೯ "ಹಾಗಾದರೆ ಬ್ರಾಹ್ಮಣ, ಹೀಗೆ ಸ್ನಾನ ಮಾಡುವುದು, ಇತ್ಯಾದಿ ಅಭ್ಯಾಸವನ್ನು ಯಾವ ಲಾಭಕ್ಕಾಗಿ ಮಾಡುತ್ತಿದ್ದೀಯ?"

೧೦ "ಪ್ರಭು ಗೌತಮ, ಅದರ ಉದ್ದೇಶ ಹೀಗಿದೆ: ನಾನು ಹಗಲಿನಲ್ಲಿ ಏನೇನು ಪಾಪ ಮಾಡುತ್ತೇನೆಯೋ ಅದನ್ನು ಅಂದೇ ಸಾಯಂಕಾಲ ಸ್ನಾನ ಮಾಡುವ ಮೂಲಕ ತೊಳೆದುಕೊಳ್ಳುತ್ತೇನೆ; ನಾನು ರಾತ್ರಿ ಏನೇನು ಪಾಪ ಮಾಡುತ್ತೇನೆಯೋ ಅದನ್ನು ಮಾರನೆ ದಿನ ಬೆಳಿಗ್ಗೆ ಸ್ನಾನ ಮಾಡುವ ಮೂಲಕ ತೊಳೆದುಕೊಳ್ಳುತ್ತೇನೆ. ಹೀಗೆ ಜಲಶುದ್ಧಿ ಇತ್ಯಾದಿಗಳ ಮೂಲಕ ಶುದ್ಧವಾಗಿರುವುದೇ ನಾನು ನಿರೀಕ್ಷಿಸುವ ಲಾಭ."

೧೧ ಆಗ ಮಹಾತ್ಮನು ಹೇಳಿದನು:

೧೨ "ನೀತಿ ನಿಯಮವೇ ಪುಷ್ಕರಣಿ, ಅದು ಶುದ್ಧ ಹಾಗೂ ನಿರ್ಮಲ.

೧೩ "ಇಲ್ಲಿ ಸ್ನಾನ ಮಾಡಿದ ಪುರಾತನರ ಪ್ರತಿಯೊಂದು ಅಂಗವೂ ಶುದ್ಧವಾಗಿದೆ; ಹೀಗೆ, ಅವರು ಆಚೆ ದಡ ತಲುಪಿದ್ದಾರೆ."

೧೪ ಆಗ ಬ್ರಾಹ್ಮಣ ಸಂಗರವ ಮಹಾತ್ಮನನ್ನುದ್ದೇಶಿಸಿ ಹೀಗೆಂದನು: "ಪ್ರಭು ಗೌತಮರೆ, ಚೆನ್ನಾಗಿದೆ. ನಾನು ಪ್ರಭು ಗೌತಮನಿಗೆ ಶರಣು ಹೋಗಿರುವುದರಿಂದ, ಅವರು, ನನ್ನನ್ನು ಇಂದಿನಿಂದಲೇ, ನನ್ನ ಜೀವ ಇರುವವರೆಗೆ, ಅನುಯಾಯಿಯಾಗಿ ಮಾಡಿಕೊಳ್ಳಲಿ."

## ೬. ಪವಿತ್ರ ಜೀವನವೆಂದರೇನು?

೧. ಒಮ್ಮೆ ಪವಿತ್ರ ಪ್ರಭುವು ಪ್ರವಾಸದಲ್ಲಿದ್ದಾಗ, ಎಂದಿನ ರೂಢಿಯಂತೆ ತನ್ನ ಜೊತೆಯಲ್ಲಿ ಬರುತ್ತಿದ್ದ ಭಿಕ್ಷುಗಳಿಗೆ ಈ ಕೆಳಗಿನ ಪ್ರವಚನ ನೀಡಿದನು.

೨. ಭಿಕ್ಷುಗಳನ್ನುದ್ದೇಶಿಸಿ ಪ್ರಭು ಹೇಳಿದನು: "ಸೋದರರೆ, ಪವಿತ್ರ ಜೀವನವೆಂದರೆ ಇತರರನ್ನು ಮೋಸಗೊಳಿಸಲು ಬದುಕುವುದಲ್ಲ; ಅಥವಾ ಅವರ ಒಲವನ್ನು ಗಿಟ್ಟಿಸುವುದಕ್ಕಾಗಲಿ, ಏನನ್ನೋ ಪಡೆಯಲಾಗಲಿ, ಲಾಭ ಅಥವಾ ಕೀರ್ತಿಯನ್ನು ಗಳಿಸಲಾಗಲಿ ಕಷ್ಟದಿಂದ ತಪ್ಪಿಸಿಕೊಳ್ಳುವ ಅಥವಾ ಕೀರ್ತಿಯನ್ನು ಗಳಿಸಲಾಗಲಿ, ಕಷ್ಟದಿಂದ ತಪ್ಪಿಸಿಕೊಳ್ಳುವ ಅಥವಾ ಮುಂದಿನ ಪೀಳಿಗೆಯವರು ಸ್ಮರಿಸಲಿ ಎಂಬ ಉದ್ದೇಶದಿಂದಾಗಲಿ ಬದುಕುವುದಲ್ಲ. ಸೋದರರೇ, ಪವಿತ್ರ ಜೀವನ ಮಾಡುವುದು (ಕಾಯ ಮತ್ತು ವಾಚವನ್ನು) ನಿಯಂತ್ರಿಸುವುದಕ್ಕಾಗಿ (ಪಾಪಗಳನ್ನು) ತೊಳೆದುಕೊಳ್ಳುವುದಕ್ಕಾಗಿ (ಬಂಧನದಿಂದ) ಬಿಡಿಸಿಕೊಂಡು ಲಾಲಸೆಯನ್ನು ತಡೆಯುವುದಕ್ಕಾಗಿ."

# ವಿಭಾಗ – ೬

# ಸಾಮಾಜಿಕ–ರಾಜಕೀಯ ಸಮಸ್ಯೆಗಳನ್ನು ಕುರಿತ ಉಪದೇಶಗಳು

## ೧. ರಾಜಕುಮಾರರ ಕೃಪೆಯನ್ನು ಅವಲಂಬಿಸಬೇಡ

೧ ಒಮ್ಮೆ ಮಹಾತ್ಮನು ರಾಜಗೃಹದ ಬಳಿಯ ವೇಣುವನದಲ್ಲಿ, ಅಳಿಲುಗಳಿಗೆ ಆಹಾರ ನೀಡುವ ಸ್ಥಳದಲ್ಲಿ ತಂಗಿದ್ದನು.

೨ ಅದೇ ವೇಳೆಯಲ್ಲಿ ರಾಜಕುಮಾರ ಅಜಾತಶತ್ರು ಪವಿತ್ರಪ್ರಭುವಿಗೆ ವಿರುದ್ಧವಾಗಿದ್ದ ದೇವದತ್ತನಿಗೆ ಆಶ್ರಯ ನೀಡಿದ್ದನು.

೩ ಅವನು ಬೆಳಿಗ್ಗೆ ಮತ್ತು ರಾತ್ರಿ ದೇವದತ್ತನ ಅನುಚರರಿಗೆ ಐದುನೂರು ಗಾಡಿಗಳಲ್ಲಿ ಐದುನೂರು ಪಾತ್ರೆಗಳಲ್ಲಿ ತಂದ ಆಹಾರವನ್ನೊದಗಿಸುವ ಮೂಲಕ ಅವರನ್ನು ಸಾಕುತ್ತಿದ್ದನು.

೪ ಆಗ ಅನೇಕ ಅನುಯಾಯಿಗಳು ಮಹಾತ್ಮನ ಮುಂದೆ ಬಂದು, ಅವನಿಗೆ ನಮಸ್ಕರಿಸಿ, ಒಂದು ಪಕ್ಕದಲ್ಲಿ ಕುಳಿತುಕೊಂಡರು. ಹಾಗೆ ಕುಳಿತುಕೊಂಡನಂತರ ಅವರು ಮಹಾತ್ಮನಿಗೆ ಇದೆಲ್ಲವನ್ನೂ ನಿವೇದಿಸಿದರು:

೫ ಆ ಅನುಯಾಯಿಗಳನ್ನುದ್ದೇಶಿಸಿ ಪವಿತ್ರ ಪ್ರಭುವು ಹೀಗೆಂದನು: "ಅರಸರಿಂದ ಪಡೆದ ಲಾಭ, ಅವರ ಕೃಪೆ ಮತ್ತು ಹೊಗಳಿಕೆಗೆ ಆಸೆಪಡಬೇಡಿ. ಎಲ್ಲಿಯವರೆಗೆ ರಾಜಕುಮಾರ ಅಜಾತಶತ್ರು ಈ ರೀತಿ ಬೆಳಿಗ್ಗೆ ಮತ್ತು ರಾತ್ರಿ ದೇವದತ್ತನಿಗೆ ಐದುನೂರು ಗಾಡಿಗಳಲ್ಲಿ, ಐದುನೂರು ಪಾತ್ರೆಗಳಲ್ಲಿ ತಂದ ಆಹಾರವನ್ನೊದಗಿಸುತ್ತಾನೋ, ಅಲ್ಲಿಯವರೆಗೂ, ಸೋದರರೇ, ನಾವು ದೇವದತ್ತನ ಅವನತಿಯನ್ನು ನಿರೀಕ್ಷಿಸಬಹುದೇ ಹೊರತು, ಸುಸ್ಥಿತಿಯ ಅಭಿವೃದ್ಧಿಯನ್ನಲ್ಲ.

೬ "ಸೋದರರೇ, ಹುಚ್ಚುನಾಯಿಯ ಮೂತಿಯ ಮೇಲೆ ಯಕೃತ್ತಿನ ತುಂಡುಗಳನ್ನು ಉದುರಿಸಿದಾಗ ಹೇಗೆ ಅದರ ಹುಚ್ಚು ಇನ್ನೂ ಹೆಚ್ಚಾಗುತ್ತದೆಯೊ, ಹಾಗೆಯೇ, ಎಲ್ಲಿಯವರೆಗೆ ರಾಜಕುಮಾರ ಅಜಾತಶತ್ರು ಈ ರೀತಿ ದೇವದತ್ತನನ್ನು ಸಾಕುತ್ತಿರುತ್ತಾನೊ ಅಲ್ಲಿಯವರೆಗೆ ನಾವು ದೇವದತ್ತನ ಅವನತಿಯನ್ನು ನಿರೀಕ್ಷಿಸಬಹುದೇ ಹೊರತು, ಸುಸ್ಥಿತಿಯ ಅಭಿವೃದ್ಧಿಯನ್ನಲ್ಲ. ಸೋದರರೇ ಅದೇ ರೀತಿ, ರಾಜಕುಮಾರರಿಂದ ಪಡೆದ ಲಾಭ, ಕೃಪೆ, ಹೊಗಳಿಕೆ ಸಹ ಭಯಾನಕ.

೭ "ಎಲ್ಲರ ಬಳಿ ಖಂಡಿತ ಬರುವ ಶಾಂತಿಯನ್ನು ಪಡೆಯಲು ಇವು ಕಹಿಯಾದ, ನೋವು ತರುವಂಥ ಅಡ್ಡಿಗಳಾಗುತ್ತವೆ.

೮ "ಆದುದರಿಂದ, ಸೋದರರೇ, ನಿಮ್ಮನ್ನು ನೀವೇ ತಿದ್ದಿಕೊಳ್ಳಬೇಕು: 'ಲಾಭ, ಕೃಪೆ ಮತ್ತು ಹೊಗಳಿಗೆ ನಮ್ಮತ್ತ ಬಂದಾಗ, ನಾವು ಅವುಗಳನ್ನು ತಿರಸ್ಕರಿಸಬೇಕು, ಮತ್ತು ಅವು ನಮ್ಮತ್ತ ಬಂದಾಗ, ಅವು ನಮ್ಮನ್ನು ಹಿಡಿದುಕೊಳ್ಳದಿರಲಿ; ನಮ್ಮ ಹೃದಯದಲ್ಲಿ ಅವು ನೆಲೆಸದಿರಲಿ; ನಾವು ರಾಜಕುಮಾರನ ಗುಲಾಮರಾಗದಿರಲಿ."

## ೨. ರಾಜನು ಸದ್ಗುಣಿಯಾಗಿದ್ದರೆ ಪ್ರಜೆಗಳೂ ಸದ್ಗುಣಿಗಳಾಗಿರುತ್ತಾರೆ

೧ ಒಂದು ಸಾರಿ ಭಿಕ್ಷುಗಳನ್ನುದ್ದೇಶಿಸಿ ಪ್ರಭು ಹೀಗೆಂದನು:

೨ "ಸೋದರರೇ, ರಾಜರೇ ಅಧಾರ್ಮಿಕರಾಗಿದ್ದರೆ, ಅವರ ಮಂತ್ರಿಗಳೂ, ಅಧಿಕಾರಿಗಳೂ ಅಧಾರ್ಮಿಕರಾಗಿರುತ್ತಾರೆ. ಸೋದರರೇ, ಮಂತ್ರಿಗಳು ಅಧಿಕಾರಿಗಳೂ ಅಧಾರ್ಮಿಕರಾಗಿದ್ದರೆ, ಬ್ರಾಹ್ಮಣರೂ, ಗೃಹಸ್ಥರೂ ಅಧಾರ್ಮಿಕರಾಗುತ್ತಾರೆ. ಸೋದರರೇ, ಬ್ರಾಹ್ಮಣರೂ ಗೃಹಸ್ಥರೂ ಅಧಾರ್ಮಿಕರಾಗಿದ್ದರೆ ಪಟ್ಟಣಿಗರೂ, ಹಳ್ಳಿಗರೂ ಅಧಾರ್ಮಿಕರಾಗುತ್ತಾರೆ.

೩ "ಆದರೆ, ಸೋದರರೇ, ರಾಜರು ಧಾರ್ಮಿಕರಾಗಿದ್ದರೆ, ಅವರ ಮಂತ್ರಿಗಳು ಅಧಿಕಾರಿಗಳೂ ಧಾರ್ಮಿಕರಾಗಿರುತ್ತಾರೆ. ಯಾವಾಗ ಮಂತ್ರಿಗಳು ಅಧಿಕಾರಿಗಳೂ ಧಾರ್ಮಿಕರಾಗುತ್ತಾರೊ ಆಗ ಬ್ರಾಹ್ಮಣರೂ ಗೃಹಸ್ಥರೂ ಧಾರ್ಮಿಕರಾಗುತ್ತಾರೆ. ಯಾವಾಗ ಬ್ರಾಹ್ಮಣರೂ ಗೃಹಸ್ಥರೂ ಧಾರ್ಮಿಕರಾಗುತ್ತಾರೊ, ಆಗ ಪಟ್ಟಣಿಗರೂ ಹಳ್ಳಿಗರೂ ಧಾರ್ಮಿಕರಾಗುತ್ತಾರೆ.

೪ "ದನಗಳು ದಾರಿ ಸಾಗುವಾಗ ವಯಸ್ಸಾದ ಹೋರಿ ದಾರಿತಪ್ಪಿದರೆ ಅದನ್ನು ಹಿಂಬಾಲಿಸುವ ಅವೆಲ್ಲವೂ ದಾರಿ ತಪ್ಪುತ್ತವೆ. ಅದೇ ರೀತಿ, ಮನುಷ್ಯರಲ್ಲೂ ಸಹ, ಮುಂದಾಳೆನಿಸಿಕೊಂಡವನು ವಕ್ರಮಾರ್ಗದಲ್ಲಿ ನಡೆದರೆ, ಉಳಿದವರೂ ವಕ್ರಮಾರ್ಗದಲ್ಲಿ ನಡೆಯುತ್ತಾರೆ.

೫ "ಅದೇ ರೀತಿ, ರಾಜ ತಪ್ಪಿ ನಡೆದರೆ ಇಡೀ ರಾಜ್ಯವೇ ನರಳುತ್ತದೆ. ದನಗಳು ದಾರಿ ಸಾಗುವಾಗ ಹೋರಿ ನೇರವಾಗಿ ನಡೆದರೆ ಅವುಗಳೂ ನೇರವಾಗಿ ಚಲಿಸುತ್ತವೆ. ಏಕೆಂದರೆ ಹೋರಿಯ ಮಾರ್ಗ ನೇರವಾಗಿರುತ್ತದೆ. ಅದೇ ರೀತಿ ಮನುಷ್ಯರಲ್ಲಿಯೂ ಸಹ, ಮುಂದಾಳೆನಿಸಿಕೊಂಡವನು ಧರ್ಮಮಾರ್ಗದಲ್ಲಿ ನಡೆದರೆ, ಉಳಿದವರೂ ಸರಿಯಾಗಿ ಬಾಳುತ್ತಾರೆ. ರಾಜರು ಒಳ್ಳೆಯವರಾಗಿದ್ದರೆ, ಇಡೀ ರಾಜ್ಯದ ಜನರೆಲ್ಲ ಸುಖಬಾಳ್ವೆ ನಡೆಸುತ್ತಾರೆ."

## ೩. ರಾಜಕೀಯ ಮತ್ತು ಸೈನಿಕ ಬಲ ನಿಂತಿರುವುದು ಸಾಮಾಜಿಕ ವ್ಯವಸ್ಥೆಯ ಮೇಲೆ

೧ ಒಂದು ಸಾರಿ ಪೂಜ್ಯನು ರಾಜಗೃಹದ ಬಳಿಯ ಗೃಧ್ರಕೂಟ ಎಂಬ ಬೆಟ್ಟದ ಮೇಲೆ ತಂಗಿದ್ದನು.

೨ ಅದೇ ವೇಳೆಯಲ್ಲಿ ಮಗಧ ರಾಜನ ವಿದೇಹ ಮೂಲದ ರಾಣಿಯಿಂದ ಜನಿಸಿದ ಮಗ ಅಜಾತಶತ್ರುವು ವಜ್ಜಿನರ ಮೇಲೆ ದಾಳಿ ಮಾಡಬೇಕೆಂದು ಇಚ್ಛಿಸಿದ್ದ; ಹಾಗೂ ಅವನು ಹೀಗೆ ಯೋಚಿಸಿದ: "ಈ ವಜ್ಜಿನರು ಎಷ್ಟೇ ಬಲಶಾಲಿಗಳೂ ಪರಾಕ್ರಮಿಗಳೂ ಇರಲಿ; ಅವರನ್ನು ನಾನು ಬುಡಸಮೇತ ನಾಶಮಾಡುತ್ತೇನೆ; ಅವರ ಸರ್ವನಾಶ ಮಾಡುತ್ತೇನೆ; ಈ ವಜ್ಜಿನರನ್ನು ಅಧೋಗತಿಗೆ ತರುತ್ತೇನೆ."

೩ ಅದರಂತೆ, ಅವನು ಮಗಧನ ಪ್ರಧಾನಮಂತ್ರಿ ಬ್ರಾಹ್ಮಣ ವಶ್ಯಕರನಿಗೆ ಹೀಗೆ ಹೇಳಿದನು:

೪ "ಈಗ ಬ್ರಾಹ್ಮಣರೇ, ತಾವು ಪವಿತ್ರಾತ್ಮನ ಬಳಿ ಹೋಗಿ ನನ್ನ ಪರವಾಗಿ ಅವರ ಪಾದಗಳಿಗೆ ನಮಸ್ಕರಿಸಿ, ಅವರು ಈಗ ರೋಗರುಜಿನುಗಳಿಂದ ಮುಕ್ತರಾಗಿದ್ದಾರೆಯೇ, ಆರೋಗ್ಯ ಮತ್ತು ಸುಖವನ್ನು ಅನುಭವಿಸುತ್ತಿದ್ದಾರೆಯೇ ಎಂಬುದನ್ನು ವಿಚಾರಿಸಿ.

೫ "ಅಲ್ಲದೆ, ಅವರಿಗೆ 'ಮಗಧ ರಾಜನೂ, ವಿದೇಹ ಪುತ್ರನೂ ಆದ ಅಜಾತಶತ್ರುವು ವೃದ್ಧೀನರು ಎಷ್ಟೇ ಬಲಶಾಲಿಗಳೂ ಪರಾಕ್ರಮಿಗಳೂ ಆಗಿದ್ದರೂ ಅವರ ಮೇಲೆ ದಂಡೆತ್ತಿ ಹೋಗಲು ಆಸಕ್ತನಾಗಿದ್ದಾನೆ,

ಅವರನ್ನು ನಾಶ ಮಾಡುತ್ತಾನೆ, ಅವರನ್ನು ಅಧೋಗತಿಗೆ ತರುತ್ತಾನೆ' ಎಂದು ಹೇಳಿ.

೬ "ಪವಿತ್ರಾತ್ಮರು ಏನು ಭವಿಷ್ಯ ನುಡಿಯುತ್ತಾರೆಂಬುದನ್ನು ಗಮನವಿಟ್ಟು ಕೇಳಿಸಿಕೊಳ್ಳಿ, ಹಾಗೂ ಅದನ್ನು ನನ್ನ ಬಳಿ ಪುನರುಚ್ಚರಿಸಿರಿ. ಏಕೆಂದರೆ ಬುದ್ಧರು ಎಂದಿಗೂ ಅಸತ್ಯ ಹೇಳಲಾರರು."

೭ ಆಗ ಬ್ರಾಹ್ಮಣ ವಸಕರ ರಾಜನ ಮಾತನ್ನು ಕೇಳಿ, "ತಾವು ಹೇಳಿದಂತೆಯೇ ಆಗಲಿ" ಎಂದನು; ಹಾಗೂ, ಉಚ್ಚ ಮಟ್ಟದ ರಥಗಳು ತನ್ನ ಜೊತೆಯಲ್ಲಿ ಬರಲೆಂದು ಆಜ್ಞಾಪಿಸಿ ಆತ ಗೃಧ್ರಕೂಟಕ್ಕೆ ಹೋದನು.

೮ ಆ ಬ್ರಾಹ್ಮಣನು ಅಲ್ಲಿಗೆ ಹೋಗಿ, ಬುದ್ಧನಿಗೆ ನಮಸ್ಕರಿಸಿ, ಯೋಗಕ್ಷೇಮಗಳನ್ನು ವಿಚಾರಿಸಿ, ರಾಜನ ಆಜ್ಞೆಯಂತೆ ಸಂದೇಶವನ್ನು ಮುಟ್ಟಿಸಿದನು.

೯ ಅದೇ ಸಮಯದಲ್ಲಿ ಪೂಜ್ಯ ಆನಂದನು ಪವಿತ್ರಾತ್ಮನ ಹಿಂದೆ ನಿಂತಿದ್ದನು. ಆಗ ಪವಿತ್ರಾತ್ಮನು ಅವನನ್ನುದ್ದೇಶಿಸಿ "ಆನಂದ, ವೃದ್ಧೀನರು ಅಗಾಗ್ಗೆ ಪೂರ್ಣ ಸಾರ್ವಜನಿಕ ಸಭೆಗಳನ್ನು ನಡೆಸುತ್ತಾರೆಂಬುದನ್ನು ನೀನು ಕೇಳಿದ್ದೀಯಾ?" ಎಂದು ಕೇಳಿದನು.

೧೦ ಅದಕ್ಕೆ ಅವನು, "ಹೌದು ಪ್ರಭು. ಹಾಗೆಂದು ಕೇಳಿದ್ದೇನೆ" ಎಂದುತ್ತರಿಸಿದನು.

೧೧ ಪವಿತ್ರಾತ್ಮನು ಹೇಳಿದನು "ಆನಂದ ಎಲ್ಲಿಯವರೆಗೆ ವೃದ್ಧೀನರು ಪೂರ್ಣ ಸಾರ್ವಜನಿಕ ಸಭೆಗಳನ್ನು ನಡೆಸುತ್ತಿರುತ್ತಾರೊ ಅಲ್ಲಿಯವರೆಗೂ ಅವರು ಅಭಿವೃದ್ಧಿ ಹೊಂದುತ್ತಾರೆಯೆ ಹೊರತು, ಅವನತಿ ಹೊಂದುವುದಿಲ್ಲವೆಂದು ನಿರೀಕ್ಷಿಸಬಹುದು.

೧೨ "ಆನಂದ, ಎಲ್ಲಿಯವರೆಗೆ ವೃದ್ಧೀನರು ಒಮ್ಮತದಿಂದ ಕೂಡುತ್ತಾರೊ, ಒಮ್ಮತದಿಂದ ಏಳ್ಗೆ ಪಡೆಯುತ್ತಾರೋ, ಒಮ್ಮತದಿಂದ ಹೊಣೆ ಹೊರಲು ಪ್ರತಿಜ್ಞೆ ಮಾಡುತ್ತಾರೊ,

೧೩ "ಎಲ್ಲಿಯವರೆಗೆ ಯಾವುದು ಸಂಪ್ರದಾಯದಲ್ಲಿಲ್ಲವೊ ಅದನ್ನು ಜಾರಿಗೊಳಿಸುವುದಿಲ್ಲವೊ, ಯಾವುದು ಅನುಷ್ಠಾನದಲ್ಲಿದೆಯೋ ಅದನ್ನು ಎಲ್ಲಿಯವರೆಗೆ ಬಿಡುವುದಿಲ್ಲವೊ, ಎಲ್ಲಿಯವರೆಗೆ ಪುರಾತನ ಕಾಲದಿಂದ ನಡೆದುಕೊಂಡು ಬಂದಿರುವ ವೃದ್ಧೀನರ ಸಂಪ್ರದಾಯಕ್ಕೆ ತಕ್ಕಂತೆ ಅವರು ನಡೆದುಕೊಳ್ಳುತ್ತಾರೊ,

೧೪ "ಎಲ್ಲಿಯವರೆಗೆ ವೃದ್ಧೀನರು ತಮ್ಮ ಪುರಾತನರಿಗೆ ಸನ್ಮಾನ, ಗೌರವ, ಪೂಜೆ, ಸಮ್ಮತಿ ಸೂಚಿಸುತ್ತಾರೋ ಹಾಗೂ ಅವರ ಮಾತನ್ನು ಒಪ್ಪಿಕೊಳ್ಳುವುದೇ ತಮ್ಮ ಕರ್ತವ್ಯವೆಂದು ತಿಳಿಯುತ್ತಾರೊ,

೧೫ "ಎಲ್ಲಿಯವರೆಗೆ ಅವರು ಬೇರೆ ಕುಲಗಳ ಹೆಂಗಸರನ್ನೂ, ಕನ್ಯೆಯರನ್ನೂ ಬಲಾತ್ಕಾರದಿಂದ ಅಥವಾ ಕದ್ದು ತಂದು ತಮ್ಮ ವಶದಲ್ಲಿಟ್ಟುಕೊಳ್ಳುವುದಿಲ್ಲವೊ,

೧೬ "ಎಲ್ಲಿಯವರೆಗೆ ವೃದ್ಧೀನರು ತಮ್ಮ ಧರ್ಮವನ್ನು ಗೌರವಿಸಿ, ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾರೊ,

೧೭ "ಆನಂದ, ಅಲ್ಲಿಯವರೆಗೂ ವೃದ್ಧೀನರು ಅಭಿವೃದ್ಧಿ ಹೊಂದುತ್ತಾರೆಯೆ ಹೊರತು, ಅವನತಿ ಹೊಂದುವುದಿಲ್ಲ; ಹಾಗೂ ಅವರನ್ನು ಯಾರೂ ನಾಶ ಮಾಡಲಾರರು."

೧೮ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಪವಿತ್ರಾತ್ಮನು 'ವೃದ್ಧೀನರು ಎಲ್ಲಿಯವರೆಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟು ಅದನ್ನು ಅನುಸರಿಸುತ್ತಾರೋ, ಅಲ್ಲಿಯವರೆಗೆ ಅವರ ಸಂಸ್ಥಾನಕ್ಕೆ ಯಾವ ಅಪಾಯವೂ ಇಲ್ಲ' ಎಂದು ಘೋಷಿಸಿದನು.

೧೯ ಆಮೇಲೆ ಪೂಜ್ಯನು ವಸಕರನ್ನುದ್ದೇಶಿಸಿ ಹೀಗೆಂದನು:

೨೦ "ಓ, ಬ್ರಾಹ್ಮಣನೇ, ನಾನು ವೈಶಾಲಿಯಲ್ಲಿದ್ದಾಗ, ನಾನೇ ವೃದ್ಧೀನರಿಗೆ ಪ್ರಗತಿಯ ಈ ನಿಯಮಗಳನ್ನು ಬೋಧಿಸಿದ್ದೆ."

೨೧ ಆಗ ಆ ಬ್ರಾಹ್ಮಣ ಉತ್ತರಿಸಿದ: "ಹಾಗಾದರೆ ವೃಧ್ಧೀನರು ಆ ನಿಯಮಗಳನ್ನು ಪಾಲಿಸುವವರೆಗೆ, ನಾವು ಅವರ ಕಲ್ಯಾಣವನ್ನು ನಿರೀಕ್ಷಿಸಬಹುದೇ ಹೊರತು, ಅವನತಿಯಲ್ಲ. ಆದುದರಿಂದ ಗೌತಮರೇ, ವೃಧ್ಧೀನರು ಮಗಧ ರಾಜನಿಂದ ಗೆಲ್ಲಲಾರರು."

೨೨ ಹೀಗೆ, ಪವಿತ್ರಾತ್ಮನ ಮಾತುಗಳನ್ನು ಕೇಳಿಸಿಕೊಂಡ ವಸಕರನು ತನ್ನ ಆಸನದಿಂದ ಮೇಲೆದ್ದು, ಪ್ರಭುವು ಹೇಳಿದುದನ್ನು ರಾಜನಿಗೆ ತಿಳಿಸಲು ರಾಜಗೃಹಕ್ಕೆ ಹಿಂತಿರುಗಿದನು.

## ೪. ಯುದ್ಧ ಮಾಡುವುದು ತಪ್ಪು

೧ ಒಂದು ಸಾರಿ ಹೀಗಾಯಿತು: ಮಗಧ ರಾಜನಾದ ಅಜಾತಶತ್ರುವು ಅಶ್ವಸೈನ್ಯವನ್ನೂ, ಪದಾತಿಸೈನ್ಯವನ್ನೂ ಕೂಡಿಸಿಕೊಂಡು ಪ್ರಸೇನಜಿತ್ತ ರಾಜನ ರಾಜ್ಯದ ಒಂದು ಭಾಗವಾದ ಕಾಶಿಯ ಮೇಲೆ ದಂಡೆತ್ತಿ ಹೋದನು. ಈ ಆಕ್ರಮಣದ ಸುದ್ದಿಯನ್ನು ತಿಳಿದ ಪ್ರಸೇನಜಿತ್ರ ಸಹ ಅಂಥದೇ ಸೈನ್ಯವನ್ನು ಕೂಡಿಸಿಕೊಂಡು ಅವನನ್ನು ಎದುರಾಗಲು ಹೊರಟ.

೨ ಇಬ್ಬರೂ ಪರಸ್ಪರ ಕಾದಾಡಿದರು; ಮತ್ತು ಅಜಾತಶತ್ರು ಪ್ರಸೇನಜಿತ ರಾಜನನ್ನು ಸೋಲಿಸಿದಾಗ, ಪಸೇನದಿಯು ತನ್ನ ರಾಜಧಾನಿ ಶ್ರಾವಸ್ತಿಗೆ ಹಿಮ್ಮೆಟ್ಟಿದನು.

೩ ಆಗ ಶ್ರಾವಸ್ತಿಯಲ್ಲಿದ್ದ ಭಿಕ್ಷುಗಳು ಭಿಕ್ಷಾಟನೆಯಿಂದ ಹಿಂದಿರುಗುತ್ತಿದ್ದರು ಹಾಗೂ ಅವರು ಮಹಾತ್ಮನಿಗೆ ಯುದ್ಧ ಮತ್ತು ಪ್ರಸೇನಜಿತನ ಹಿನ್ನಡೆಯ ಬಗ್ಗೆ ತಿಳಿಸಿದರು.

೪ ಬುದ್ಧ ಹೇಳಿದ, "ಭಿಕ್ಷುಗಳೇ, ಮಗಧ ರಾಜ ಅಜಾತಶತ್ರು, ಏನೇನು ಕೆಟ್ಟದ್ದಿದೆಯೋ ಅದೆಲ್ಲದರ ಸ್ನೇಹಿತ; ಪ್ರಸೇನಜಿತ ರಾಜನು ಏನೇನೂ ಒಳ್ಳೆಯದಿದೆಯೊ ಅದೆಲ್ಲದರ ಸ್ನೇಹಿತ; ಅವನೀಗ ಸೋತಿರುವುದರಿಂದ ಸದ್ಯಕ್ಕಂತೂ ರಾತ್ರಿಯನ್ನು ನರಳುತ್ತಾ ಕಳೆಯುತ್ತಾನೆ.

೫ "ಜಯವು ದ್ವೇಷವನ್ನು ಹುಟ್ಟಿಸುತ್ತದೆ; ಸೋತವನು ನರಳಾಟದಲ್ಲಿ ಜೀವಿಸುತ್ತಾನೆ. ಅಂದರೆ ಯಾರು ಶಾಂತಿಯನ್ನು ಹಾಗೂ ಲೋಭರಹಿತವಾಗಿರುತ್ತಾರೋ ಅವರು ಸುಖವಾಗಿರುತ್ತಾರೆ; ಅವರು ಸೋಲುಗೆಲುವುಗಳೆರಡನ್ನೂ ತ್ಯಜಿಸುತ್ತಾರೆ."

೬ ಇನ್ನೊಂದು ಸಾರಿ ಹೀಗಾಯಿತು: ಈ ಇಬ್ಬರು ರಾಜರು ಎರಡನೆಯ ಬಾರಿಗೆ ಯುದ್ಧದಲ್ಲಿ ಪರಸ್ಪರ ಎದುರಾದರು. ಆದರೆ ಆ ಯುದ್ಧದಲ್ಲಿ ಕೋಸಲ ರಾಜ ಪ್ರಸೇನಜಿತನು ಅಜಾತಶತ್ರುವನ್ನು ಸೋಲಿಸಿದನಲ್ಲದೆ, ಅವನನ್ನು ಜೀವಂತ ಸೆರೆ ಹಿಡಿದನು. ಆಗ ಪ್ರಸೇನಜಿತ ಹೀಗೆ ಯೋಚಿಸಿದ: "ಈ ರಾಜನನ್ನು ನಾನು ಹಿಂಸಿಸದಿದ್ದರೂ, ಅವನು ನನ್ನನ್ನು ಹಿಂಸಿಸಿದ್ದಾನೆ; ಆದರೂ ಅವನು ನನ್ನ ಸೋದರಿಯ ಮಗ; ಅವನ ಎಲ್ಲ ಸೈನ್ಯ, ಆನೆಗಳು, ಕುದುರೆಗಳು, ರಥಗಳು ಮತ್ತು ಪದಾತಿಗಳು – ಇವೆಲ್ಲವನ್ನೂ ನಾನು ಸ್ವಾಧೀನಪಡಿಸಿಕೊಂಡು, ಅವನನ್ನು ಜೀವಂತ ಬಿಟ್ಟರೆ ಹೇಗೆ?" ಅವನು ಹಾಗೇ ಮಾಡಿದ.

೭ ಶ್ರಾವಸ್ತಿಯಲ್ಲಿ ಭಿಕ್ಷಾಟನೆ ಮುಗಿಸಿಕೊಂಡು ಹಿಂತಿರುಗಿದ ಭಿಕ್ಷುಗಳು ಈ ವಿಷಯವನ್ನು ಪವಿತ್ರಾತ್ಮನಿಗೆ ಹೇಳಿದರು. ಆಗ ಪವಿತ್ರಾತ್ಮನು ಹೀಗೆ ಹೇಳಿದ: "ಒಬ್ಬ ಮನುಷ್ಯ ತನ್ನ ಸ್ವಾರ್ಥ ಉದ್ದೇಶಕ್ಕಾಗಿ ಮತ್ತೊಬ್ಬ ಮನುಷ್ಯನನ್ನು ಕೆಡಿಸಬಹುದು; ಆದರೆ ಹೀಗೆ ಬೇರೆಯವರಿಂದ ಕೆಟ್ಟವನು ಬೇರೆಯವರನ್ನು ಕೆಡಿಸಲು ನೋಡುತ್ತಿರುತ್ತಾನೆ.

೮ "ಎಲ್ಲಿಯವರೆಗೆ ತನ್ನ ದುಷ್ಕಾರ್ಯವು ಫಲ ನೀಡುವುದಿಲ್ಲವೊ ಅಲ್ಲಿಯವರೆಗೂ ಆ ಮೂರ್ಖನು 'ಎಂಥ ಸುಸಮಯ! ಎಂಥ ಸದವಕಾಶ!' ಎಂದು ಕನವರಿಸುತ್ತಿರುತ್ತಾನೆ; ಆದರೆ ತನ್ನ ದುಷ್ಕಾರ್ಯ ಫಲ ನೀಡಿದ ಕೂಡಲೇ ಅವನು ನರಳತೊಡಗುತ್ತಾನೆ.

೯ "ಪ್ರತಿಯೊಬ್ಬ ತಲೆಗಡುಕನಿಗೂ ಪ್ರತಿಯಾಗಿ ಮತ್ತೊಬ್ಬ ತಲೆಗಡುಕನಿರುತ್ತಾನೆ; ಒಬ್ಬ ಗೆಲ್ಲುವವನಿದ್ದರೆ, ಅವನನ್ನು ಗೆಲ್ಲುವ ಮತ್ತೊಬ್ಬನಿರುತ್ತಾನೆ. ಬಯ್ಯುವವನಿಗೆ ಸಿಕ್ಕುವುದು ಮತ್ತೊಬ್ಬನ ಬಯ್ಗುಳವೇ.

೧೦ "ಹೀಗೆ ನಮ್ಮ ಕರ್ಮಗಳು ವಿಕಾಸ ಹೊಂದುವುದರಿಂದ ಯಾರು ಇತರರಿಗೆ ಕೇಡು ಮಾಡುತ್ತಾರೋ ಅವರು ಅದಕ್ಕೆ ಪ್ರತಿಯಾಗಿ ಕೇಡನ್ನು ಅನುಭವಿಸುತ್ತಾರೆ."

## ೫. ಶಾಂತಿಯನ್ನು ಗೆದ್ದವನ ಕರ್ತವ್ಯ

೧ ಯುದ್ಧದಲ್ಲಿ ವಿಜಯಿಯಾದವನು ಶಾಂತಿಯನ್ನು ಪಡೆದರೆ, ಅವನು ಸೋತವನನ್ನು ಗುಲಾಮನನ್ನಾಗಿ ಮಾಡಿಕೊಳ್ಳದಿದ್ದರೂ ಕೊನೆಯ ಪಕ್ಷ ಅವನನ್ನು ಅಪಮಾನಿಸುವ ಅಧಿಕಾರವಾದರೂ ಅವನಿಗಿರುತ್ತದೆ. ಆದರೆ ಈ ವಿಷಯವಾಗಿ ಬುದ್ಧನಿಗೆ ಪೂರ್ಣವಾಗಿ ಬೇರೆಯೇ ಆದ ಅಭಿಪ್ರಾಯವಿತ್ತು. ಅವನ ದೃಷ್ಟಿಯಲ್ಲಿ, ಶಾಂತಿಗೆ ಏನಾದರೂ ಅರ್ಥವಿದ್ದರೆ ಗೆದ್ದವನು ತನ್ನ ಜಯವನ್ನು ಸೋತವನ ಸೇವೆಗಾಗಿ ಬಳಸಬೇಕಾಗುತ್ತದೆ. ಆ ವಿಷಯಕ್ಕಾಗಿ ಬುದ್ಧನು ಭಿಕ್ಷುಗಳಿಗೆ ಹೀಗೆ ಹೇಳಿದನು:

೨ "ಶಾಂತಿ ಲಭಿಸಿದಾಗ ಯುದ್ಧ ಕಲೆಯಲ್ಲಿ ಪಾರಂಗತನಾದವನು ತಾನೊಬ್ಬ ಸಮರ್ಥ, ಪ್ರಾಮಾಣಿಕ ಮನುಷ್ಯ, ಹಿತವಾದ ನುಡಿ, ದಯೆ ಮತ್ತು ನಿರಹಂಕಾರ ಉಳ್ಳವನು, ಸರಳವಾದ ಕೃತಜ್ಞತೆಯುಳ್ಳ ಅತಿಥಿ, ಅಧಿಕಪ್ರಸಂಗಿಯಲ್ಲದ, ಇಂದ್ರಿಯನಿಗ್ರಹವುಳ್ಳ, ತೀಕ್ಷ್ಣಮತಿಯಾದ, ಅಬ್ಬರ ಮಾಡದ, ಇತರರನ್ನು ಪೀಡಿಸದ ವ್ಯಕ್ತಿ ಎಂಬುದನ್ನು ಸಿದ್ಧಪಡಿದಬೇಕು. ಅವನು ಸಂಕುಚಿತ ಬುದ್ಧಿಯ ಅಥವಾ ಕೀಳುಮಟ್ಟದ ನಡತೆಯನ್ನು ಪ್ರದರ್ಶಿಸಿ ತೀಕ್ಷ್ಣನಿಂದೆಗೆ ಗುರಿಯಾಗಬಾರದು.

೩ "ಸರ್ವಜೀವಿಗಳೂ ಅಪರಿಮಿತ ಶಾಂತಿ ಮತ್ತು ಸಂಪತ್ತು ಪಡೆಯಲಿ; ಎಲ್ಲ ಜೀವಿಗಳೂ — ಅವು ಅಶಕ್ತವಿರಲಿ, ಸಶಕ್ತವಿರಲಿ, ದೊಡ್ಡವಿರಲಿ, ಸಣ್ಣವಿರಲಿ – ಸರ್ವದಾ ನೆಮ್ಮದಿಯಿಂದಿರಲಿ; ಎಲ್ಲ ಜೀವಿಗಳಿಗೂ ಅವು ಗೋಚರವಿರಲಿ, ಅಗೋಚರವಿರಲಿ, ದೂರವಿರಲಿ, ಹತ್ತಿರವಿರಲಿ, ಈಗಾಗಲೇ ಹುಟ್ಟಿರಲಿ, ಹುಟ್ಟಿಗಾಗಿ ಕಾಯುತ್ತಿರಲಿ, ಶಾಂತಿಯುಂಟಾಗಲಿ!

೪ "ಯಾರೂ ತನ್ನ ಸಹಜೀವಿಗಳನ್ನು ಎಲ್ಲಿಯೂ ಅಪಹಾಸ್ಯ ಮಾಡದಿರಲಿ; ಅಥವಾ ದ್ವೇಷಿಸದಿರಲಿ; ಕ್ರೋಧದಿಂದಾಗಲಿ, ದ್ವೇಷದಿಂದಾಗಲಿ ಯಾರೂ ಬೇರೆಯವರಿಗೆ ಕೇಡನ್ನು ಬಯಸದಿರಲಿ.

೫ "ಹೇಗೆ ತಾಯಿಯೊಬ್ಬಳು ತನ್ನ ಜೀವ ಕೊಟ್ಟಾದರೂ ತನ್ನ ಒಂದೇ ಮಗುವನ್ನು ಅಪಾಯದಿಂದ ರಕ್ಷಿಸುತ್ತಾಳೊ, ಹಾಗೆಯೇ ಸರ್ವಭೂತ ಹಿತಾಸಕ್ತಿ ನಿಮ್ಮದಾಗಲಿ; ವಿಶ್ವದ ಎಲ್ಲ ಎತ್ತರ, ಎಲ್ಲ ಆಳ ಮತ್ತು ಎಲ್ಲ ಅಗಲಗಳಲ್ಲಿರುವ ಜೀವಿಗಳ ಪ್ರೀತಿ, ನಿರ್ಮಲ ಪ್ರೀತಿ, ದ್ವೇಷರಹಿತ ಪ್ರೀತಿ ನಿಮ್ಮದಾಗಲಿ, ದ್ವೇಷವಲ್ಲ.

೬ "ಆದುದರಿಂದ, ನೀವು ನಿಂತಿರಲಿ ಅಥವಾ ನಡೆಯುತ್ತಿರಲಿ ಅಥವಾ ಕುಳಿತಿರಲಿ ಅಥವಾ ಮಲಗಿರಲಿ, ನಿಮ್ಮ ಎಲ್ಲ ಶಕ್ತಿಯನ್ನುಪಯೋಗಿಸಿ 'ಇದೊಂದು ದಿವ್ಯ ಸ್ಥಿತಿಯೆಂದು ಪರಿಗಣಿಸೋಣ' ಎಂದು ಚಿಂತಿಸಿರಿ."

# ಪರ್ವ - ೫

## ಭಾಗ : ೧
## ಸಂಘ

೧. ಸಂಘ ಮತ್ತು ಅದರ ವ್ಯವಸ್ಥೆ
೨. ಸಂಘಕ್ಕೆ ಪ್ರವೇಶ
೩. ಭಿಕ್ಷು ಮತ್ತು ಅವನ ವ್ರತಗಳು
೪. ಭಿಕ್ಷು ಮತ್ತು ಸಂಘ–ವಿರೋಧಿ ದುರಾಚಾರಗಳು
೫. ಭಿಕ್ಷು ಮತ್ತು ನಿಗ್ರಹಗಳು
೬. ಭಿಕ್ಷು ಮತ್ತು ಸದಾಚಾರದ ನಿಯಮಗಳು
೭. ಭಿಕ್ಷು ಮತ್ತು ದುರಾಚಾರಗಳ ವಿಚಾರಣೆ
೮. ಭಿಕ್ಷು ಮತ್ತು ತಪ್ಪೊಪ್ಪಿಗೆ

# ೧. ಸಂಘ ಮತ್ತು ಅದರ ವ್ಯವಸ್ಥೆ

೧ ಪೂಜ್ಯ ಪ್ರಭುವಿನ ಅನುಯಾಯಿಗಳು ಎರಡು ಮಾರ್ಗಗಳಾಗಿ ವಿಭಜಿಸಲ್ಪಟ್ಟರು : ಭಿಕ್ಷುಗಳದ್ದು ಒಂದು ವರ್ಗವಾದರೆ, ಉಪಾಸಕರೆಂದು ಕರೆಯಲ್ಪಡುವ ಸಾಧಾರಣ ಅನುಯಾಯಿಗಳದ್ದು ಮತ್ತೊಂದು ವರ್ಗ.

೨ ಭಿಕ್ಷುಗಳು ಗುಂಪುಗೂಡಿ ಒಂದು ಸಂಘವನ್ನು ರಚಿಸಿಕೊಂಡರೆ, ಉಪಾಸಕರು ಅಂಥದೇನನ್ನೂ ಮಾಡಿಕೊಳ್ಳಲಿಲ್ಲ.

೩ ಬೌದ್ಧ ಭಿಕ್ಷುವು ಮೂಲತಃ ಒಬ್ಬ ಪರಿವ್ರಾಜಕ. ಪರಿವ್ರಾಜಕ ವ್ಯವಸ್ಥೆಯು ಬೌದ್ಧ ಭಿಕ್ಷುಗಳ ವ್ಯವಸ್ಥೆಗಿಂತ ಹಳೆಯದು.

೪ ಹಳೆಯ ಪರಿವ್ರಾಜಕರೆಂದರೆ ಗೃಹಸ್ಥ ಜೀವನವನ್ನು ತ್ಯಜಿಸಿದವರು ಹಾಗೂ ನೆಲೆ ನಿಲ್ಲದೆ ತಿರುಗಾಡುವವರು.

೫ ಅವರು ಅನೇಕ ಗುರುಗಳು ಹಾಗೂ ತತ್ತ್ವಜ್ಞಾನಿಗಳ ಸಂಪರ್ಕ ಸಾಧಿಸಿ, ಅವರ ಪ್ರವಚನಗಳನ್ನು ಕೇಳಿ, ಅವರೊಡನೆ ನೀತಿಶಾಸ್ತ್ರ, ತತ್ತ್ವಶಾಸ್ತ್ರ, ಪ್ರಕೃತಿ, ಅನುಭಾವ, ಮುಂತಾದ ವಿಷಯಗಳನ್ನು ಚರ್ಚಿಸಿ, ಸತ್ಯಸಿದ್ಧಿಯನ್ನು ಪಡೆಯುವ ಉದ್ದೇಶದಿಂದ ಊರಿಂದೂರಿಗೆ ತಿರುಗುವವರು.

೬ ಹಳೆಯ ರೀತಿಯ ಪರಿವ್ರಾಜಕರಲ್ಲಿ ಕೆಲವರು ಒಬ್ಬ ಗುರುವಿನ ಬಳಿಯೇ ಇರುತ್ತಿದ್ದರು. ಮತ್ತೊಬ್ಬ ಗುರು ಸಿಕ್ಕುವವರೆಗೂ. ಮತ್ತೆ ಕೆಲವರು ಯಾವ ಗುರುವನ್ನೂ ಸ್ವೀಕರಿಸದೆ ಸ್ವತಂತ್ರವಾಗಿ ಏಕಾಂಗಿಗಳಾಗಿರುತ್ತಿದ್ದರು.

೭ ಹಳೆಯ ರೀತಿಯ ಪರಿವ್ರಾಜಕರಲ್ಲಿ ಕೆಲವು ಪರ್ಯಟಕ ಸ್ತ್ರೀಯರೂ ಇದ್ದರೂ. ಈ ಸ್ತ್ರೀ ಪರಿವ್ರಾಜಕರು ಕೆಲವು ಸಾರಿ ಪುರುಷ ಪರಿವ್ರಾಜಕರೊಡನೆ ವಾಸಿಸುತ್ತಿದ್ದರು. ಮತ್ತೆ ಕೆಲವು ಸಾರಿ ಏಕಾಂಗಿಗಳಾಗಿ ಸ್ವತಂತ್ರರಾಗಿರುತ್ತಿದ್ದರು.

೮ ಈ ಹಳೆಯ ರೀತಿಯ ಪರಿವ್ರಾಜಕರಿಗೆ ಸಂಘವಿರಲಿಲ್ಲ; ಯಾವುದೇ ರೀತಿಯ ಶಿಸ್ತಿನ ನಿಯಮಗಳಿರಲಿಲ್ಲ ಹಾಗೂ ಸಾಧಿಸಲು ಯಾವುದೇ ಆದರ್ಶಗಳಿರಲಿಲ್ಲ.

೯ ಪವಿತ್ರ ಪ್ರಭುವು ಮೊಟ್ಟಮೊದಲನೆಯ ಸಾರಿ ತನ್ನ ಅನುಯಾಯಿಗಳ ವರ್ಗವನ್ನು ಒಂದು ಸಂಘ ಅಥವಾ ಒಂದು ಭ್ರಾತೃ ಸಂಸ್ಥೆಯನ್ನಾಗಿ ಪರಿವರ್ತಿಸಿ, ಅವರಿಗೆ ಕೆಲವು ನಿಯಮಗಳನ್ನು ಬೋಧಿಸಿದನು ಹಾಗೂ ಅವರೆದುರಿಗೆ ಒಂದು ಆದರ್ಶವನ್ನಿಟ್ಟು ಅದನ್ನು ಅನುಸರಿಸಿ, ಸಾಕ್ಷಾತ್ಕರಿಸಿಕೊಳ್ಳುವಂತೆ ತಿಳಿಸಿದನು.

## ೨. ಸಂಘಕ್ಕೆ ಪ್ರವೇಶ

೧ ಸಂಘದ ಬಾಗಿಲು ಎಲ್ಲರಿಗೂ ತೆರೆದಿದೆ.

೨ ಜಾತಿಯ ಅಡ್ಡಿಯಿಲ್ಲ.

೩ ಲಿಂಗಭೇದವಿಲ್ಲ.

೪ ಅಂತಸ್ತಿನ ಅಡ್ಡಿಯಿಲ್ಲ.

೫ ಸಂಘದಲ್ಲಿ ಜಾತಿಗೆ ಸ್ಥಳವೇ ಇಲ್ಲ.

೬ ಸಂಘದಲ್ಲಿ ಸಾಮಾಜಿಕ ಅಂತಸ್ತಿಗೆ ಸ್ಥಾನವಿಲ್ಲ.

೭ ಸಂಘದಲ್ಲಿ ಎಲ್ಲರೂ ಸಮಾನರು.

೮ ಸಂಘದಲ್ಲಿ ಅಂತಸ್ತು ನಿರ್ಧಾರವಾಗುದ್ದುದು ಯೋಗ್ಯತೆಯ ಮೇಲೆಯೇ ಹೊರತು, ಹುಟ್ಟಿನ ಮೇಲಲ್ಲ.

೯ ಪವಿತ್ರ ಪ್ರಭುವು ಹೇಳಿದಂತೆ, ಸಂಘವು ಒಂದು ಸಮುದ್ರವಿದ್ದಂತೆ, ಭಿಕ್ಷುಗಳು ಸಮುದ್ರದಲ್ಲಿ ಬೀಳುವ ನದಿಗಳಂತೆ.

೧೦ ನದಿಗೆ ತನ್ನದೇ ಆದ ಹೆಸರಿರುತ್ತದೆ ಹಾಗೂ ತನ್ನದೇ ಆದ ಅಸ್ತಿತ್ವವಿರುತ್ತದೆ.

೧೧ ಆದರೆ ನದಿಯು ಒಮ್ಮೆ ಸಮುದ್ರವನ್ನು ಪ್ರವೇಶಿಸಿತೆಂದರೆ ಅದು ತನ್ನ ಪ್ರತ್ಯೇಕ ಹೆಸರನ್ನೂ ಪ್ರತ್ಯೇಕ ಅಸ್ತಿತ್ವವನ್ನೂ ಕಳೆದುಕೊಳ್ಳುತ್ತದೆ.

೧೨ ಅದು ಉಳಿದುದರಲ್ಲಿ (ಸಮುದ್ರದಲ್ಲಿ) ಒಂದಾಗುತ್ತದೆ.

೧೩ ಸಂಘದ ವಿಷಯವೂ ಹಾಗೆಯೇ. ಒಮ್ಮೆ ಭಿಕ್ಷುವು ಸಂಘವನ್ನು ಪ್ರವೇಶಿಸಿದನೆಂದರೆ, ಸಮುದ್ರಕ್ಕೆ ಸೇರಿದ ನೀರಿನಂತೆ, ಉಳಿದವರಲ್ಲಿ ಒಂದಾಗುತ್ತಾನೆ.

೧೪ ಅವನು ತನ್ನ ಜಾತಿಯನ್ನು ಕಳೆದುಕೊಳ್ಳುತ್ತಾನೆ. ತನ್ನ ಅಂತಸ್ತನ್ನು ಕಳೆದುಕೊಳ್ಳುತ್ತಾನೆ, ಎಂದು ಪ್ರಭು ಹೇಳಿದನು.

೧೫ ಸಂಘದಲ್ಲಿ ಗಮನಿಸುತ್ತಿದ್ದ ಒಂದೇ ಭೇದವೆಂದರೆ ಲಿಂಗಭೇದ. ಭಿಕ್ಷುಗಳ ಸಂಘವು ಭಿಕ್ಷುಣಿಯರ ಸಂಘದಿಂದ ವ್ಯವಸ್ಥೆಯಲ್ಲಿ ಬೇರೆಯಾಗಿತ್ತು.

೧೬ ಸಂಘಕ್ಕೆ ಪ್ರವೇಶ ಪಡೆದವರನ್ನು ಎರಡು ವರ್ಗ ಮಾಡಲಾಗುತ್ತಿತ್ತು, – ಒಂದು ಶ್ರಮಣೇರರದು, ಮತ್ತೊಂದು ಭಿಕ್ಷುಗಳದ್ದು.

೧೭ ಇಪ್ಪತ್ತರ ಒಳಗಿನ ಯಾರಾದರೂ ಶ್ರಮಣೇರ ಆಗಬಹುದಿತ್ತು.

೧೮ ತ್ರಿಶರಣಗಳನ್ನೂ, ದಶಾದೇಶಗಳನ್ನೂ, ಸ್ವೀಕರಿಸುವ ಮೂಲಕ ಒಬ್ಬ ಹುಡುಗ ಶ್ರಾಮಣ್ಯನಾಗುತ್ತಿದ್ದ.

೧೯ "ನಾನು ಬುದ್ಧನನ್ನು ಅನುಸರಿಸುತ್ತೇನೆ, ಧರ್ಮವನ್ನು ಅನುಸರಿಸುತ್ತೇನೆ ಮತ್ತು ಸಂಘವನ್ನು ಅನುಸರಿಸುತ್ತೇನೆ", ಎಂಬುದೇ ತ್ರಿಶರಣ.

೨೦ "ಹಿಂಸೆಯನ್ನು ತ್ಯಜಿಸುತ್ತೇನೆ. ಕಳ್ಳತನ ಮಾಡುವುದಿಲ್ಲ. ಬ್ರಹ್ಮಚರ್ಯವನ್ನು ಪಾಲಿಸುತ್ತೇನೆ. ಅಸತ್ಯವನ್ನು ಹೇಳುವುದಿಲ್ಲ, ಮದ್ಯಪಾನದಿಂದ ದೂರವಿರುತ್ತೇನೆ;

೨೧ "ಅಕಾಲದಲ್ಲಿ ಆಹಾರ ಸೇವನೆ ಮಾಡುವುದರಿಂದ ದೂರವಿರುತ್ತೇನೆ, ಅಸಭ್ಯ ಮತ್ತು ಅನೈತಿಕ ಕಾರ್ಯಗಳನ್ನು ಮಾಡುವುದಿಲ್ಲ; ಆಭರಣ ಮತ್ತು ಶೃಂಗಾರದಿಂದ ದೂರ ಇರುತ್ತೇನೆ;

ವೈಭೋಗಗಳಿಂದ ದೂರವಿರುತ್ತೇನೆ; ಚಿನ್ನ ಬೆಳ್ಳಿಯ ಆಸೆಯಿಂದ ದೂರವಿರುತ್ತೇನೆ."

೨೨ ಇವು ದಶಾದೇಶಗಳು.

೨೩ ಶ್ರಮಣೇರನು ಯಾವಾಗ ಬೇಕಾದರೂ ಸಂಘವನ್ನು ಬಿಟ್ಟು ಗೃಹಸ್ಥನಾಗಬಹುದು. ಶ್ರಮಣೇರನು ಯಾವಾಗಲೂ ಭಿಕ್ಷುವೊಬ್ಬನ ಜೊತೆಯಲ್ಲಿದ್ದುಕೊಂಡು, ಅವನ ಸೇವೆಯಲ್ಲಿ ಕಾಲ ಕಳೆಯಬೇಕು. ಅವನು ಪರಿವ್ರಜವನ್ನು ಸ್ವೀಕರಿಸಿದವನಲ್ಲ.

೨೪ ಭಿಕ್ಷು ಸ್ಥಿತಿಯನ್ನು ಎರಡು ಹಂತಗಳಲ್ಲಿ ತಲುಪಬೇಕು. ಮೊದಲನೆ ಹಂತವನ್ನು ಪರಿವ್ರಜವೆಂದೂ ಎರಡನೆಯ ಹಂತವನ್ನು ಉಪಸಂಪದವೆಂದೂ ಕರೆಯಲಾಗುತ್ತದೆ. ಉಪಸಂಪದದ ನಂತರ ಅವನು ಭಿಕ್ಷುವಾಗುತ್ತಾನೆ.

೨೫ ಪರಿವ್ರಜವನ್ನು ಸ್ವೀಕರಿಸಿ, ಕೊನೆಯಲ್ಲಿ ಭಿಕ್ಷುವಾಗಬೇಕೆಂಬ ಉದ್ದೇಶವನ್ನುಳ್ಳ ವ್ಯಕ್ತಿಯು ಮೊದಲು ಉಪಾಧ್ಯನಾಗಲು ಅಧಿಕಾರವುಳ್ಳ ಒಬ್ಬ ಭಿಕ್ಷುವನ್ನು ಹುಡುಕಿಕೊಳ್ಳಬೇಕು. ಕನಿಷ್ಠ ಹತ್ತು ವರ್ಷಗಳು ಭಿಕ್ಷು ಜೀವನವನ್ನು ಕಳೆದ ನಂತರವಷ್ಟೇ ಭಿಕ್ಷುವು ಉಪಾಧ್ಯನಾಗಬಹುದು.

೨೬ ಉಪಾಧ್ಯ ಸ್ವೀಕರಿಸಿದ ಅಂಥ ಸಾಧಕನನ್ನು ಪರಿವ್ರಾಜಕನೆಂದು ಕರೆಯಲಾಗುತ್ತದೆ. ಆ ಸಾಧಕನು ಆ ಉಪಾಧ್ಯನ ಸೇವೆ ಹಾಗೂ ಮಾರ್ಗದರ್ಶನದಲ್ಲಿ ಇರಬೇಕು.

೨೭ ಈ ಮಾರ್ಗದರ್ಶನ ಮುಗಿದ ಮೇಲೆ, ಉಪಸಂಪದಕ್ಕೆಂದೇ ವಿಶೇಷವಾಗಿ ಕರೆದ ಸಂಘದ ಸಭೆಯಲ್ಲಿ ಆ ಉಪಾಧ್ಯನೆ ತನ್ನ ಶಿಷ್ಯನ ಹೆಸರನ್ನು ಸೂಚಿಸಬೇಕು ಹಾಗೂ ಆ ಶಿಷ್ಯನು ತನಗೆ ಉಪಸಂಪದವನ್ನು ನೀಡಬೇಕೆಂದು ಸಂಘವನ್ನು ವಿನಂತಿಸಿಕೊಳ್ಳಬೇಕು.

೨೮ ಅವನು ಭಿಕ್ಷುವಾಗಲು ಯೋಗ್ಯನೂ ಸರಿಯಾದವನೂ ಆಗಿದ್ದಾನೆಂದು ಸಂಘಕ್ಕೆ ಸಮಾಧಾನವಾಗಬೇಕು. ಈ ಉದ್ದೇಶಕ್ಕಾಗಿಯೇ ಒಂದು ಪ್ರಶ್ನಾವಳಿ ಇರುತ್ತದೆ ಮತ್ತು ಸಾಧಕನು ಅವುಗಳನ್ನು ಉತ್ತರಿಸಬೇಕು.

೨೯ ಸಂಘವು ಅನುಮತಿ ಕೊಟ್ಟ ನಂತರವೇ ಅವನಿಗೆ ಉಪಸಂಪದವನ್ನು ನೀಡಬೇಕಾಗುತ್ತದೆ ಹಾಗೂ ಆ ವ್ಯಕ್ತಿ ಭಿಕ್ಷುವಾಗುತ್ತಾನೆ.

೩೦ ಭಿಕ್ಷುಣಿಯರ ಸಂಘಕ್ಕೆ ಪ್ರವೇಶವನ್ನು ನಿರ್ಧರಿಸುವ ನಿಯಮಗಳು ಹೆಚ್ಚೂ ಕಡಿಮೆ ಭಿಕ್ಷುಗಳ ಸಂಘಕ್ಕೆ ಪ್ರವೇಶವನ್ನು ನಿರ್ಧರಿಸುವ ನಿಯಮಗಳೇ ಆಗಿವೆ.

## ೩. ಭಿಕ್ಷು ಮತ್ತು ಅವನ ವ್ರತಗಳು

೧ ಗೃಹಸ್ಥ ಅಥವಾ ಶ್ರಮಣೇರನು ಆದೇಶಗಳನ್ನು ಸ್ವೀಕರಿಸುವುದಲ್ಲದೆ, ಅವುಗಳನ್ನು ಪಾಲಿಸುವುದೂ ಅವನ ಕರ್ತವ್ಯ.

೨ ಭಿಕ್ಷುವು ಆದೇಶಗಳನ್ನು ವ್ರತಗಳೆಂಬಂತೆ ಸ್ವೀಕರಿಸುತ್ತಾನಲ್ಲದೇ ಅವುಗಳನ್ನೆಂದೂ ಉಲ್ಲಂಘಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತಾನೆ. ಅವುಗಳನ್ನು ಉಲ್ಲಂಘಿಸಿದರೆ ಅವನು ಶಿಕ್ಷಾರ್ಹನಾಗುತ್ತಾನೆ.

೩ ಭಿಕ್ಷುವು ಬ್ರಹ್ಮಚಾರಿಯಾಗಿಯೇ ಉಳಿಯುವುದಾಗಿ ಪ್ರತಿಜ್ಞೆ ಮಾಡುತ್ತಾನೆ.

೪ ಭಿಕ್ಷುವು ಕಳ್ಳತನ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತಾನೆ.

೫ ಭಿಕ್ಷುವು ತನ್ನನ್ನು ಹೊಗಳಿಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ.

೬ ಭಿಕ್ಷುವು ಪ್ರಾಣಹಾನಿ ಅಥವಾ ಆತ್ಮಹತ್ಯೆಯಲ್ಲಿ ತೊಡಗುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ.

೭ ಭಿಕ್ಷುವು ನಿಯಮಗಳಿಗೆ ಒಳಪಡದ ಏನನ್ನೂ ಇಟ್ಟುಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ.

೮ ಯಾವ ಭಿಕ್ಷುವು ಈ ಕೆಳಗಿನ ಎಂಟು ವಸ್ತುಗಳನ್ನು ಬಿಟ್ಟು ಮತ್ತೇನನ್ನೂ ಇಟ್ಟುಕೊಳ್ಳಬಾರದು.

(೧) ಮೈಮುಚ್ಚಲು ಮೂರು ಬಟ್ಟೆಗಳು; ಅವೆಂದರೆ

(ಅ) ಅಂತರವಸ್ತ್ರ ಎಂಬ ಒಳಉಡುಪು

(ಆ) ಉತ್ತರಸಂಗ ಎಂಬ ಹೊರ ಉಡುಪು

(ಇ) ಸಂಗತಿ ಎಂಬ ಚಳಿಯಿಂದ ರಕ್ಷಿಸುವ ಮೇಲುಡುಪು

(೨) ಲಂಗೋಟಿ

(೩) ಭಿಕ್ಷಾಪಾತ್ರೆ

(೪) ಕ್ಷೌರದ ಕತ್ತಿ

(೫) ಸೂಜಿ

(೬) ಕಮಂಡಲು

೯ ಭಿಕ್ಷು ಬಡತನದಲ್ಲೇ ಇರುವುದಾಗಿ ಪ್ರತಿಜ್ಞೆ ಮಾಡುತ್ತಾನೆ; ಅವನು ಭಿಕ್ಷಾಟನೆಯಿಂದಲೇ ಆಹಾರ ಪಡೆಯಬೇಕು; ಭಿಕ್ಷಾಟನೆಯಿಂದಲೇ ಬದುಕಬೇಕು; ದಿನಕ್ಕೆ ಒಂದೇ ಊಟ ಮಾಡಿ ಜೀವಿಸಬೇಕು, ಸಂಘಕ್ಕಾಗಿಯೇ ಕಟ್ಟಿಸಿದ ವಿಹಾರ ಇಲ್ಲದಿದ್ದರೆ, ಅವನು ಮರದಡಿಯಲ್ಲಿ ಜೀವಿಸಬೇಕು.

೧೦ ಆದರೆ ಭಿಕ್ಷುವು ವಿಧೇಯತೆಯ ಪ್ರತಿಜ್ಞೆ ಮಾಡುವುದಿಲ್ಲ. ಅವನು ಹೊಸದಾಗಿ ಸಂಘಕ್ಕೆ ಸೇರಿಕೊಂಡಾಗ ಅವನಿಂದ ಹಿರಿಯರಿಗೆ ಗೌರವ ಮತ್ತು ವಿನಯಗಳನ್ನು ನಿರೀಕ್ಷಿಸಲಾಗುತ್ತದೆ. ಅವನ ನಿರ್ವಾಣವೂ, ಅವನು ಗುರುವಾಗಿ ಮಾಡುವ ಕಾರ್ಯವೂ, ಅವನ ಆತ್ಮಸಂಸ್ಕಾರವನ್ನು ಅವಲಂಬಿಸಿರುತ್ತದೆ. ಅವನು ಧಮ್ಮಕ್ಕೆ ವಿಧೇಯನಾಗಿರಬೇಕೇ ಹೊರತು ತನ್ನ ಗುರುಗಳಿಗಲ್ಲ. ಅವನ ಗುರುಗಳಿಗೆ ಅಲೌಕಿಕವಾದ ಜ್ಞಾನವೆಂಬ ವರವಾಗಲಿ, ದಂಡನೆಯಿಂದ ಮುಕ್ತಗೊಳಿಸುವ ಶಕ್ತಿಯಾಗಲಿ ಇಲ್ಲ. ಅವನ ಏಳುಬೀಳುಗಳು ಅವನನ್ನೇ ಅವಲಂಬಿಸಿವೆ. ಅದಕ್ಕೆ ಅವನಿಗೆ ಆಲೋಚನಾ ಸ್ವಾತಂತ್ರ್ಯವಿರಬೇಕು.

೧೧ ಭಿಕ್ಷು ತಾನು ಮಾಡಿದ ಪ್ರತಿಜ್ಞೆಗಳನ್ನು ಉಲ್ಲಂಘಿಸಿದರೆ, ಪರಾಜಿಕ ಎಂಬ ಅಪರಾಧವಾಗುತ್ತದೆ. ಪರಾಜಿಕ ಮಾಡಿದವನನ್ನು ಸಂಘದಿಂದ ಹೊರಹಾಕಲಾಗುವುದು.

## ೪. ಭಿಕ್ಷು ಮತ್ತು ಸಂಘವಿರೋಧಿ ದುರಾಚಾರಗಳು

೧ ಭಿಕ್ಷು ಕೈಕೊಂಡ ವ್ರತದ ಉಲ್ಲಂಘನೆಯು ಧರ್ಮವಿರೋಧಿ ದುರಾಚಾರವಾಗುತ್ತದೆ.

೨ ಈ ದುರಾಚಾರಗಳಲ್ಲದೆ, ಅವನು ಹೊಣೆಗಾರನಾದ ಇತರ ಬೇರೆ ದುರಾಚಾರಗಳೂ ಇದ್ದವು ಅವುಗಳನ್ನು ಸಂಘಾದಿಶೇಷ – ಅಂದರೆ ಸಂಘಕ್ಕೆಸಗಿದ ದ್ರೋಹ - ಎಂದು ಕರೆಯಲಾಗುತ್ತಿತ್ತು.

೩ ವಿನಯಪಿಟಕದಲ್ಲಿ ಸೇರಿಸಲಾಗಿರುವ ದುರಾಚಾರಗಳ ಪಟ್ಟಿಯಲ್ಲಿ ಅಂಥವು ಹದಿಮೂರಿವೆ.

೪ ಅವು ಪರಾಜಿಕಕ್ಕೆ ಸಂಬಂಧಿಸಿದೆ.

## ೫. ಭಿಕ್ಷು ಮತ್ತು ನಿಗ್ರಹಗಳು

೧ ಭಿಕ್ಷುವು ದುರಾಚಾರಗಳಿಂದ ದೂರವಿದ್ದುಕೊಂಡು ಸುಗಮವಾಗಿ ಸಾಗುವುದರ ಜೊತೆಗೆ ಕೆಲವು ನಿಗ್ರಹಗಳನ್ನು ಆಚರಿಸಬೇಕು ಹಾಗೂ ಅವನು ಬೇರೆಯವರಷ್ಟು ಸ್ವತಂತ್ರವಾಗಿರಲಾರ.

೨ ಅಂಥ ನಿಗ್ರಹಗಳ ಗುಂಪಿಗೆ ನಿಸರ್ಗೀಯ– ಪಚಿತ್ತೀಯ ಎಂದು ಹೆಸರು. ಅದರಲ್ಲಿ ಭಿಕ್ಷು ಪಾಲಿಸಬೇಕಾದ ೨೬ ನಿಗ್ರಹ (ನಿಯಮ)ಗಳಿವೆ.

೩ ವಸ್ತ್ರಗಳನ್ನೂ, ಉಣ್ಣೆಯ ಕಂಬಳಿಗಳನ್ನೂ, ಭಿಕ್ಷಾಪಾತ್ರೆ ಮತ್ತು ಔಷಧೀಯ ಅಗತ್ಯಗಳನ್ನೂ ದಾನವಾಗಿ ಸ್ವೀಕರಿಸಬೇಕೇ ಬೇಡವೇ ಎಂಬುದಕ್ಕೆ ಅವು ಸಂಬಂಧಿಸಿವೆ.

೪ ಚಿನ್ನ ಬೆಳ್ಳಿಯನ್ನು ದಾನವಾಗಿ ಸ್ವೀಕರಿಸಬೇಕೇ ಬೇಡವೇ ಎಂಬುದಕ್ಕೂ, ಸಂಘಕ್ಕೆ ಸೇರಿದ ಆಸ್ತಿಯನ್ನು ಭಿಕ್ಷುವು ಮಾರುವ ಅಥವಾ ಕೊಳ್ಳುವ ವ್ಯವಹಾರಕ್ಕೂ, ಸಂಘಕ್ಕೆಂದು ಬಂದ ಆಸ್ತಿಯನ್ನು ಅವನು ಸ್ವಾಧೀನಪಡಿಸಿಕೊಳ್ಳಬಹುದೇ ಎಂಬುದಕ್ಕೂ ಅವು ಸಂಬಂಧಿಸಿವೆ.

೫ ಈ ನಿಯಮಗಳ ಉಲ್ಲಂಘನೆಗೆ ವಿಧಿಸಲಾಗುವ ಶಿಕ್ಷೆಯೆಂದರೆ ಅವನು ಸಂಘದಲ್ಲಿ ಇರಬೇಕು. (ನಿಸರ್ಗೀಯ) ಮತ್ತು ಪಶ್ಚಾತ್ತಾಪ ವ್ಯಕ್ತಪಡಿಸಬೇಕು (ಪ್ರಚಿತ್ತೀಯ).

೬ ಈ ನಿಗ್ರಹಗಳನ್ನಲ್ಲದೆ ಭಿಕ್ಷುವು ಬೇರೆ ಕೆಲವು ನಿಯಮಗಳನ್ನೂ ಪಾಲಿಸಬೇಕು. ಅವುಗಳಿಗೆ ಪಚಿತ್ತೀಯವೆಂದು ಹೆಸರಿಸಿದೆ. ಅವು ತೊಂಬತ್ತೆರಡಿವೆ.

## ೬. ಭಿಕ್ಷು ಹಾಗೂ ಸದಾಚಾರದ ನಿಯಮಗಳು

೧ ಭಿಕ್ಷುವು ಒಳ್ಳೆಯ ರೀತಿಯಲ್ಲಿ ವರ್ತಿಸಬೇಕು. ಅವನು ತನ್ನ ಎಲ್ಲ ಅವಸ್ಥೆಗಳಲ್ಲಿಯೂ, ಎಲ್ಲ ವರ್ತನೆಗಳಲ್ಲಿಯೂ ಅವನೊಬ್ಬ ಆದರ್ಶ ವ್ಯಕ್ತಿಯಾಗಿರಬೇಕು.

೨ ಈ ಉದ್ದೇಶಕ್ಕಾಗಿ ಪೂಜ್ಯ ಪ್ರಭುವು ಅನೇಕ ಸದಾಚಾರದ ನಿಯಮಗಳನ್ನು ರೂಪಿಸಿದನು.

೩ ಈ ಸದಾಚಾರದ ನಿಯಮಗಳಿಗೆ ಸೇಖಿಯ ಧಮ್ಮ ಎಂದು ಹೆಸರು. ಅವುಗಳ ಸಂಖ್ಯೆ ಎಪ್ಪತ್ತೈದು.

## ೭. ಬಿಕ್ಷು ಮತ್ತು ದುರಾಚಾರಗಳ ವಿಚಾರಣೆ

೧ ಈ ವಿಧಿ ಮತ್ತು ನಿಷೇಧಗಳ ಪಾಲನೆಯು ಕೇವಲ ಔಪಚಾರಿಕವಾಗಿರಲಿಲ್ಲ. ಅವು ಸತ್ತ್ವತಃ ಕಾನೂನು ರೀತಿಯಲ್ಲಿದ್ದುವಲ್ಲದೆ, ಆರೋಪಣೆ, ವಿಚಾರಣೆ ಮತ್ತು ಶಿಕ್ಷೆಯನ್ನೊಳಗೊಂಡಿದ್ದವು.

೨ ಕಾನೂನು ರೀತ್ಯ ರಚಿತವಾದ ನ್ಯಾಯಾಲಯದಿಂದ ವಿಚಾರಣೆಯಾಗದ ಹೊರತು, ಯಾವ ಭಿಕ್ಷುವನ್ನೂ ಶಿಕ್ಷಿಸಬಾರದು.

೩ ಎಲ್ಲಿ ದುರಾಚಾರ ನಡೆದಿದೆಯೋ ಅಲ್ಲಿಯ ಭಿಕ್ಷುಗಳೇ ನ್ಯಾಯಾಲಯವನ್ನು ರಚಿಸಬೇಕು.

೪ ಒಂದು ನ್ಯಾಯಾಲಯದಲ್ಲಿ ಸಮರ್ಪಕ ಸಂಖ್ಯೆಯ ಭಿಕ್ಷುಗಳಿಲ್ಲದಿದ್ದರೆ, ವಿಚಾರಣೆ ನಡೆಯಬಾರದು.

೫ ನಿರ್ದಿಷ್ಟ ಆರೋಪವಿಲ್ಲದೆ ಯಾವ ವಿಚಾರಣೆಯೂ ಕಾನೂನುಬದ್ಧವಾಗಲಾರದು.

೬ ಆರೋಪಿಯು ಉಪಸ್ಥಿತಿಯಲ್ಲಿಲ್ಲದಿದ್ದರೆ ವಿಚಾರಣೆಯು ಕಾನೂನುಬದ್ಧವಾಗಲಾರದು.

೭ ಆರೋಪಿಯು ತನ್ನನ್ನು ಸಮರ್ಥಿಸಿಕೊಳ್ಳಲು ಪೂರ್ಣ ಅವಕಾಶ ಕೊಡದಿದ್ದರೆ, ವಿಚಾರಣೆಯು ಕಾನೂನುಬದ್ಧವಾಗಲಾರದು.

೮ ಅಪರಾಧವೆಸಗಿದ ಭಿಕ್ಷುವಿಗೆ ಈ ಕೆಳಗಿನ ಶಿಕ್ಷೆ ನೀಡಬಹುದು:

(೧) ತರ್ಜನೀಯ ಕರ್ಮ (ಎಚ್ಚರಿಕೆ ಕೊಟ್ಟು ಬಿಡುಗಡೆ ಮಾಡುವುದು)

(೨) ನಿಯಶಕರ್ಮ (ಹುಚ್ಚನೆಂದು ಘೋಷಿಸುವುದು)

(೩) ಪ್ರವಜ್ಞೀಯ ಕರ್ಮ (ಸಂಘದಿಂದ ಹೊರಹಾಕುವುದು)

(೪) ಉತ್‌ಕ್ಷೇಪಣೀಯ ಕರ್ಮ (ಬಹಿಷ್ಕಾರ ಹಾಕುವುದು)

(೫) ಪರಿವಾಸ ಕರ್ಮ (ವಿಹಾರದಿಂದ ಹೊರಹಾಕುವುದು)

೯ ವಿಹಾರದಿಂದ ಹೊರಹಾಕಿದ ನಂತರ ಅಬ್ಬಾನಕರ್ಮ ಶಿಕ್ಷೆಯನ್ನು ವಿಧಿಸಬಹುದು. ಅಬ್ಬಾನ ಕರ್ಮವೆಂದರೆ ಸದಸ್ಯತ್ವದಿಂದ ಕಿತ್ತುಹಾಕಿರುವುದನ್ನು ರದ್ದುಗೊಳಿಸುವುದು. ಭಿಕ್ಷುವು ಸಮರ್ಪಕವಾಗಿ ಪರಿವಾಸ ಕರ್ಮ ಆಚರಿಸಿದುದನ್ನು ತಿಳಿದು ಸಮಾಧಾನಗೊಂಡ ಸಂಘವು ಕ್ಷಮಾದಾನ ಮಾಡಿದನಂತರವೇ ಅಬ್ಬಾನಕರ್ಮ ಸಾಧ್ಯ.

## ೮. ಭಿಕ್ಷು ಮತ್ತು ತಪ್ಪೊಪ್ಪಿಗೆ

೧ ಭಿಕ್ಷುಗಳ ಸಂಘದ ರಚನೆಗೆ ಸಂಬಂಧಿಸಿದಂತೆ ಪವಿತ್ರ ಪ್ರಭುವು ಮಾಡಿದ ಅಪೂರ್ವ ಮತ್ತು ಅದ್ವಿತೀಯ ಸಂಸ್ಥೆಯೆಂದರೆ ಉಪಾಸತ ಎಂಬ ಹೆಸರಿನ ತಪ್ಪೊಪ್ಪಿಗೆಯನ್ನು ಸೇರಿಸಿದುದು.

೨ ಪೂಜ್ಯ ಪ್ರಭುವಿಗೆ ತಾನು ಯಾವುದನ್ನು ಅಪರಾಧವೆಂದು ತಿಳಿಸಿದ್ದನೋ ಅದರ ಬಗೆಗಿನ ಕಾರ್ಯಕ್ರಮವನ್ನು ಆಚರಣೆಗೆ ತರಬಹುದೆಂದು ಮನವರಿಕೆಯಾಗಿತ್ತು. ಆದರೆ ಅವನು ವಿಧಿಸಿದ್ದ ಕೆಲವು ನಿಯಮಗಳನ್ನು ಉಲ್ಲಂಘಿಸುವುದು ಅಪರಾಧವಾಗಿರಲಿಲ್ಲ. ಅಂಥ ನಿಯಮಗಳು ಚಾರಿತ್ರ್ಯವನ್ನು ವರ್ಧಿಸಿಕೊಳ್ಳುವುದಕ್ಕೂ ಉಳಿಸಿಕೊಳ್ಳುವುದಕ್ಕೂ ಸಂಬಂಧಪಟ್ಟಿದೆ ಎಂದೂ ಅವನು ಹೇಳಿದನು.

೩ ಆದರೆ ಅವನು ಪರಿಣಾಮಕಾರಿಯಾಗಿ ಆಚರಣೆಗೆ ತರುವ ದಾರಿ ಅವನಿಗಿನ್ನೂ ಸಿಕ್ಕಿರಲಿಲ್ಲ. ಆದುದರಿಂದ, ಎಲ್ಲರೆದುರಿಗೂ ತಪ್ಪೊಪ್ಪಿಕೊಳ್ಳುವುದು ಭಿಕ್ಷುವಿನ ಆತ್ಮಸಾಕ್ಷಿಯನ್ನು ಹೆಚ್ಚಿಸುವುದಲ್ಲದೆ ಋಜುವಲ್ಲದ ಮಾರ್ಗದಲ್ಲಿ ನಡೆಯದಂತೆ ಅದೊಂದು ಮುಳ್ಳಿನಂತಿರಬೇಕೆಂದು ಅವನು ಇಚ್ಛಿಸಿದನು.

೪ ತಪ್ಪೊಪ್ಪಿಗೆಯು (ಪ್ರತಿಮೋಕ್ಷವೆಂಬ) ನಿಯಮಗಳ ಉಲ್ಲಂಘನೆಗೆ ಮಾತ್ರ ಸೀಮಿತವಾಗಿತ್ತು.

೫ ತಪ್ಪೊಪ್ಪಿಗೆ ನಡೆಯಬೇಕಾದರೆ, ನಿರ್ದಿಷ್ಟ ಸ್ಥಳದ ಭಿಕ್ಷುಗಳು ಸಭೆ ಸೇರಬೇಕಾಗುತ್ತಿತ್ತು. ಚತುರ್ದಶಿ, ಪಂಚದಶಿ ಮತ್ತು ಅಷ್ಟಮಿ – ಹೀಗೆ ಒಂದೇ ಪಕ್ಷದ ಮೂರು ದಿನಗಳಂದು ಅಂಥ ಸಭೆಗಳು ನಡೆಯಬೇಕಾಗಿತ್ತು. ಅಂಥ ಸಭೆಗಳಂದು ಭಿಕ್ಷುವು ಉಪವಾಸ ಇರಬಹುದಿತ್ತು. ಅದಕ್ಕೇ ಅಂಥ ದಿನಗಳನ್ನು ಉಪೋಸಥ ಎಂದೂ ಕರೆಯಲಾಗುತ್ತದೆ.

೬ ಸಭೆಯಲ್ಲಿರುವ ಒಬ್ಬ ಭಿಕ್ಷು ಪ್ರತಿಮೋಕ್ಷದಲ್ಲಿರುವ ನಿಯಮಗಳನ್ನು ಒಂದೊಂದಾಗಿ ಓದುತ್ತಾನೆ. ಓದಿಯಾದ ಮೇಲೆ ಅವನು ಭಿಕ್ಷುಗಳ ಸಭೆಯನ್ನುದ್ದೇಶಿಸಿ, “ನಿಮ್ಮಲ್ಲಿ ಯಾರೊಬ್ಬರೂ ಈ ನಿಯಮವನ್ನು ಉಲ್ಲಂಘಿಸಿಲ್ಲವೆಂದು ತಿಳಿಯುತ್ತೇನೆ. ಅದಕ್ಕೆ ನೀವು ಮೌನವಾಗಿದ್ದೀರಿ” ಎನ್ನುತ್ತಾನೆ. ಹೀಗೆ

ಮೂರು ಸಾರಿ ಉಚ್ಚರಿಸುತ್ತಾನೆ. ಇದಾದ ಮೇಲೆ ಮುಂದಿನ ನಿಯಮಕ್ಕೆ ಹೋಗುತ್ತಾನೆ.

೭ ಇಂಥದೇ ತಪ್ಪೊಪ್ಪಿಗೆ ಸಭೆ ಭಿಕ್ಷುಣಿಯರ ಸಂಘದಲ್ಲೂ ಅಗತ್ಯವಾಗಿರುತ್ತದೆ.

೮ ತಪ್ಪೊಪ್ಪಿಗೆ ನಂತರ ಆರೋಪ ಮತ್ತು ವಿಚಾರಣೆ ಮುಂದುವರಿಯಬಹುದು.

೯ ಭಿಕ್ಷು ತಪ್ಪನ್ನು ಒಪ್ಪಿಕೊಳ್ಳದಿದ್ದರೆ ಆಗ ನಿಯಮೋಲ್ಲಂಘನೆಗೆ ಸಾಕ್ಷಿಯಾಗಿದ್ದ ಯಾವ ಭಿಕ್ಷುವಾದರೂ ಅಪರಾಧವನ್ನು ವರದಿ ಮಾಡಬಹುದು; ಆಮೇಲೆ ಆರೋಪ ಮತ್ತು ವಿಚಾರಣೆ ಜರುಗಬಹುದು.

# ಭಾಗ : ೨
# ಭಿಕ್ಷುವನ್ನು ಕುರಿತ ಬುದ್ಧನ ಪರಿಕಲ್ಪನೆ

೧. ಭಿಕ್ಷು ಹೇಗಿರಬೇಕೆಂಬುದನ್ನು ಕುರಿತ ಬುದ್ಧನ ಪರಿಕಲ್ಪನೆ
೨. ಭಿಕ್ಷು ಮತ್ತು ಸಂನ್ಯಾಸಿ
೩. ಭಿಕ್ಷು ಮತ್ತು ಬ್ರಾಹ್ಮಣ
೪. ಭಿಕ್ಷು ಮತ್ತು ಉಪಾಸಕ

## ೧. ಭಿಕ್ಷು ಹೇಗಿರಬೇಕೆಂಬುದನ್ನು ಕುರಿತ ಬುದ್ಧನ ಪರಿಕಲ್ಪನೆ

೧ ಬುದ್ಧನು ಭಿಕ್ಷುಗಳಿಗೆ ಅವರಿಂದ ತಾನೇನು ನಿರೀಕ್ಷಿಸುತ್ತೇನೆಂದು ಹೇಳಿದ್ದಾನೆ. ಇದೇ ಅವನು ಹೇಳಿರುವುದು:

೨ "ಯಾರು ಪಾಪವನ್ನು ತೊಳೆದುಕೊಳ್ಳದೆ ಆತ್ಮಸಂಯಮವನ್ನೂ, ಸತ್ಯವನ್ನೂ ಕಡೆಗಣಿಸುತ್ತಾನೊ ಅವನು ಹಳದಿ ವಸ್ತ್ರವನ್ನುಡಲು ಇಚ್ಛಿಸಿದರೆ, ಅವನು ಆ ವಸ್ತ್ರಕ್ಕೆ ಯೋಗ್ಯನಲ್ಲ.

೩ "ಆದರೆ ಯಾರು ಪಾಪವನ್ನು ತೊಡೆದುಹಾಕಿ, ಎಲ್ಲ ಸದ್ಗುಣಗಳಲ್ಲಿ ನೆಲೆನಿಲ್ಲುತ್ತಾನೋ ಹಾಗೂ ಆತ್ಮ ಸಂಯಮ ಮತ್ತು ಸತ್ಯಶೀಲತೆಯನ್ನು ಬೆಳೆಸಿಕೊಂಡಿರುತ್ತಾನೊ, ಅವನು ನಿಜವಾಗಿಯೂ ಹಳದಿ ವಸ್ತ್ರಕ್ಕೆ ಯೋಗ್ಯ.

೪ "ಒಬ್ಬ ಮನುಷ್ಯ ಭಿಕ್ಷೆ ಬೇಡಿದನೆಂಬ ಒಂದೇ ಕಾರಣಕ್ಕೆ ಭಿಕ್ಷುವಾಗಲಾರ; ಯಾರು ಎಲ್ಲಾ ನಿಯಮಗಳನ್ನು ಸಂಪೂರ್ಣವಾಗಿ ಪಾಲಿಸುತ್ತಾರೊ ಅವರು ಭಿಕ್ಷುಗಳೇ ಹೊರತು ಕೇವಲ ಭಿಕ್ಷೆ ಬೇಡುವವರಲ್ಲ.

೫ "ಯಾರು ದುಷ್ಟತನದಿಂದ ದೂರವಿರುತ್ತಾರೊ, ಇಂದ್ರಿಯನಿಗ್ರಹ ಮಾಡುತ್ತಾರೊ, ಪ್ರಪಂಚದಲ್ಲಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಾರೊ ಅವರು ನಿಜವಾಗಿಯೂ ಭಿಕ್ಷುಗಳೆನಿಸಿಕೊಳ್ಳುತ್ತಾರೆ.

೬ "ಕೇವಲ ಶಿಕ್ಷಣ ಮತ್ತು ವ್ರತಗಳಿಂದಲಾಗಲಿ, ಕೇವಲ ಜ್ಞಾನಾರ್ಜನೆಯಿಂದಾಗಲಿ, ಕೇವಲ ಆನಂದಾತಿರೇಕದಿಂದಾಗಲಿ, ಏಕಾಂಗಿಯಾಗಿ ಮಲಗುವುದರಿಂದಾಗಲಿ, ಪ್ರಾಪಂಚಿಕರಿಗೆ ಗೊತ್ತಿಲ್ಲದ ಮೋಕ್ಷದ ಆನಂದವನ್ನು ನಾನು ಪಡೆಯಲಾರೆ. ಓ, ಭಿಕ್ಷುಗಳೇ, ಯಾವನು ಆಸೆಗಳನ್ನು ನಿರ್ಮೂಲನೆ ಮಾಡಿದ್ದಾನೊ ಅವನು ಮಾತ್ರ ಆತ್ಮವಿಶ್ವಾಸ ಪಡೆಯುತ್ತಾನೆ.

೭ "ಯಾವ ಭಿಕ್ಷುವು ತನ್ನ ಬಾಯಿಯನ್ನು ನಿಯಂತ್ರಿಸುತ್ತಾನೊ, ವಿವೇಚನೆಯಿಂದಲೂ ಶಾಂತಿಯಿಂದಲೂ ಮಾತನಾಡುತ್ತಾನೊ, ಯಾವನು ಧರ್ಮದ ಅರ್ಥವನ್ನು ಬೋಧಿಸುತ್ತಾನೊ, ಅವನ ಮಾತುಗಳು ಮಧುರವಾಗಿರುತ್ತವೆ.

೮ "ಯಾವ ಭಿಕ್ಷುವು ಧರ್ಮದಲ್ಲಿ ನೆಲೆ ನಿಂತಿರುತ್ತಾನೊ, ಧರ್ಮದಿಂದಲೇ ಸಂತೋಷಪಡುತ್ತಾನೊ, ಯಾವನು ಧರ್ಮವನ್ನು ಕುರಿತು ಧ್ಯಾನಿಸುತ್ತಿರುತ್ತಾನೋ, ಯಾವನು ಧರ್ಮವನ್ನು ಜ್ಞಾಪಿಸಿಕೊಳ್ಳುತ್ತಿರುತ್ತಾನೊ, ಅವನು ನಿಜವಾದ ಧರ್ಮದಿಂದ ವಿಚಲಿತನಾಗುವುದಿಲ್ಲ.

೯ "ಅವನು ತಾನು ಪಡೆದುದನ್ನು ದ್ವೇಷಿಸದಿರಲಿ; ಬೇರೆ ಯಾರನ್ನೂ ಅವನು ದ್ವೇಷಿಸದಿರಲಿ; ಬೇರೆಯವರನ್ನು ದ್ವೇಷಿಸುವ ಸಂನ್ಯಾಸಿಗೆ ಮನಶ್ಶಾಂತಿ ದೊರಕುವುದಿಲ್ಲ.

೧೦ "ಭಿಕ್ಷುವು ತಾನು ಸ್ವಲ್ಪವನ್ನೇ ಪಡೆದರೂ ಅದನ್ನು ಅವನು ತುಚ್ಛವಾಗಿ ಕಾಣದಿದ್ದರೆ, ಅವನ ಜೀವನ ಶುದ್ಧವಾಗಿದ್ದರೆ ಮತ್ತು ಅವನು ಸೋಮಾರಿಯಲ್ಲದಿದ್ದರೆ ದೇವತೆಗಳೂ ಸಹ ಅವನನ್ನು ಶ್ಲಾಘಿಸುತ್ತಾರೆ.

೧೧ "ಯಾವನು ತಾನು ನಾಮರೂಪಗಳಲ್ಲವೆಂದು ತಿಳಿಯುತ್ತಾನೋ, ಹಾಗೂ ಆಗಿಹೋದದ್ದನ್ನು ಕುರಿತು ದುಃಖಿಸುವುದಿಲ್ಲವೊ, ಅವನು ನಿಜವಾಗಿಯೂ ಭಿಕ್ಷು ಎನಿಸಿಕೊಳ್ಳುತ್ತಾನೆ.

೧೨ "ಯಾವ ಭಿಕ್ಷುವು ದಯಾಪರನಾಗಿ ವರ್ತಿಸತ್ತಾನೊ ಹಾಗೂ ಬುದ್ಧನ ತತ್ವಗಳಿಂದ ಸಂತೋಷಪಡುತ್ತಾನೊ ಅವನು ಸಹಜ ಮೋಹದ ನಿರ್ಮೂಲನೆಯಿಂದ ಲಭಿಸುವ ನಿಬ್ಬಾಣವೆಂಬ ಆನಂದವನ್ನು ಪಡೆಯುತ್ತಾನೆ.

೧೩ "ಭಿಕ್ಷುಗಳೇ, ಈ ದೋಣಿಯನ್ನು ತೆರವು ಮಾಡಿ! ತೆರವಾದ ದೋಣಿಯು ವೇಗವಾಗಿ ಚಲಿಸುತ್ತದೆ. ರಾಗದ್ವೇಷಗಳಿಂದ ಬಿಡುಗಡೆ ಪಡೆದ ನೀವು ನಿಬ್ಬಾಣ ಪಡೆಯುತ್ತೀರಿ.

೧೪ "ಈ ಐದು ಸಂಕೋಲೆಗಳನ್ನು ಕತ್ತರಿಸಿ, ಆ ಐದನ್ನು ಬಿಟ್ಟು ಹೊರಡಿ, ಆ ಐದನ್ನು ಮೀರಿ ಮೇಲೇಳಿ! ಈ ಐದು ಸಂಕೋಲೆಗಳಿಂದ ಬಿಡಿಸಿಕೊಂಡ ಭಿಕ್ಷುವನ್ನು ಓಘತಿನ್ನ ಅಥವಾ ಪ್ರವಾಹದಿಂದ ಪಾರಾದ ಎಂದು ಕರೆಯಲಾಗುತ್ತದೆ.

೧೫ "ಭಿಕ್ಷುಗಳೇ! ಧ್ಯಾನಿಸಿರಿ, ಎಚ್ಚರತಪ್ಪಬೇಡಿ! ಸುಖಪಡುವುದನ್ನು ಕುರಿತು ಚಿಂತಿಸಬೇಡಿ!

೧೬ "ಜ್ಞಾನವಿಲ್ಲದೆ ಧ್ಯಾನವಿಲ್ಲ, ಧ್ಯಾನವಿಲ್ಲದೆ ಜ್ಞಾನವಿಲ್ಲ. ಜ್ಞಾನ ಮತ್ತು ಧ್ಯಾನ ಎರಡನ್ನೂ ಪಡೆದವನು ನಿಬ್ಬಾಣದ ಹತ್ತಿರಕ್ಕೆ ಬರುತ್ತಾನೆ.

೧೭ "ಯಾವ ಭಿಕ್ಷುವು ತನ್ನ ಖಾಲಿಮನೆಯನ್ನು ಪ್ರವೇಶಿಸುತ್ತಾನೋ ಹಾಗೂ ಶಾಂತಚಿತ್ತವನ್ನು ಪಡೆಯುತ್ತಾನೋ, ಅವನಿಗೆ ಸ್ಪಷ್ಟ ಧರ್ಮಜ್ಞಾನ ಉಂಟಾದಾಗ ಲೌಕಿಕ ಆನಂದಕ್ಕಿಂತ ಹೆಚ್ಚಿನ ಆನಂದ ಉಂಟಾಗುತ್ತದೆ.

೧೮ "ವಿವೇಕಿಯಾದ ಭಿಕ್ಷುವಿಗೆ ಇದೇ ಪ್ರಾರಂಭ; ಇಂದ್ರಿಯಗಳ ಮೇಲೆ ಕಣ್ಣಿಟ್ಟಿರುವುದು, ಸಮಾಧಾನದಿಂದಿರುವುದು, ಧರ್ಮದ ನಿಯಮಕ್ಕೊಳಪಟ್ಟಿರುವುದು, ಶುದ್ಧ ಚಾರಿತ್ರ್ಯವುಳ್ಳವರ ಹಾಗೂ ಸೋಮಾರಿಗಳಲ್ಲದವರ ಸ್ನೇಹಗಳಿಸುವುದು.

೧೯ "ಅವನು ಭಿಕ್ಷೆಯಿಂದಲೇ ಜೀವಿಸಬೇಕು; ತನ್ನ ಕರ್ತವ್ಯದಲ್ಲಿ ಅವನು ಪರಿಪೂರ್ಣನಿರಬೇಕು; ಹೀಗೆ ಸಂಪೂರ್ಣ ಸಂತೋಷಪಡೆದ ನಂತರ, ಅವನು ದುಃಖವನ್ನು ಅಂತ್ಯಗೊಳಿಸುತ್ತಾನೆ.

೨೦ "ಭಿಕ್ಷುಗಳೇ, ನಿಮ್ಮನ್ನು ನೀವೇ ಮೇಲೆತ್ತಿಕೊಳ್ಳಬೇಕು; ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಬೇಕು; ಹೀಗೆ ನಿಮ್ಮ ಸ್ವರಕ್ಷಣೆ ಮತ್ತು ಜಾಗರೂಕತೆಯಿಂದಾಗಿ ನೀವು ಸುಖವಾಗಿ ಬದುಕುತ್ತೀರಿ.

೨೧ "ಏಕೆಂದರೆ ನಿಮಗೆ ನೀವೇ ಒಡೆಯ, ನಿಮಗೆ ನೀವೇ ಆಶ್ರಯ; ಆದುದರಿಂದ ವರ್ತಕನು ಹೇಗೆ ಒಳ್ಳೆಯ ಕುದುರೆಯನ್ನು ನಿಯಂತ್ರಿಸುತ್ತಾನೋ, ಹಾಗೆ ನಿಮ್ಮನ್ನು ನೀವೇ ನಿಯಂತ್ರಿಸಿಕೊಳ್ಳಿ.

೨೨ "ಯಾವ ಭಿಕ್ಷುವು ತನ್ನ ನಿಷ್ಠೆಯಿಂದಾಗಿ ಆನಂದಪಡುತ್ತಾನೊ, ಅವಿವೇಕತನಕ್ಕೆ ಹೆದರುತ್ತಾನೊ, ಅವನು ಎಲ್ಲ ಸಂಕೋಲೆಗಳನ್ನು, ಅವು ಸಣ್ಣವೇ ಇರಲಿ, ದೊಡ್ಡವೇ ಇರಲಿ – ಸುಡುವ ಬೆಂಕಿಯಂತೆ ಚಲಿಸುತ್ತಾನೆ.

೨೩ "ಯಾವ ಭಿಕ್ಷುವು ಧ್ಯಾನದಿಂದಾಗಿ ಆನಂದಿಸುತ್ತಾನೋ, ಅವಿವೇಕತನಕ್ಕೆ ಹೆದರುತ್ತಾನೊ, ಅವನು (ತನ್ನ ಪರಿಪೂರ್ಣ ಸ್ಥಿತಿಯಿಂದ) ವಿಚಲಿತನಾಗಲಾರ; ಅವನು ನಿಬ್ಬಾಣವನ್ನು ಸಮೀಪಿಸಿರುತ್ತಾನೆ.

೨೪ ಗೌತಮ (ಬುದ್ಧ)ನ ಶಿಷ್ಯರು ಯಾವಾಗಲೂ ಹೆಚ್ಚು ಜಾಗರೂಕರಾಗಿರುತ್ತಾರೆ, ಹಾಗೂ ಅವರ ಆಲೋಚನೆಗಳು ಹಗಲೂ ರಾತ್ರಿ ಬುದ್ಧನ ಕುರಿತಾಗಿಯೇ ಇರುತ್ತವೆ.

೨೫ ಗೌತಮನ ಶಿಷ್ಯರು ಯಾವಾಗಲೂ ಹೆಚ್ಚು ಜಾಗರೂಕರಾಗಿರುತ್ತಾರೆ ಹಾಗೂ ಅವರ ಆಲೋಚನೆಗಳು ಹಗಲು–ರಾತ್ರಿ ಸಂಘದಲ್ಲೇ ನೆಲೆ ನಿಂತಿರುತ್ತವೆ.

೨೬ ಗೌತಮನ ಶಿಷ್ಯರು ಯಾವಾಗಲೂ ಹೆಚ್ಚು ಜಾಗರೂಕರಾಗಿರುತ್ತಾರೆ ಹಾಗೂ ಅವರ ಆಲೋಚನೆಗಳು

ಹಗಲು–ರಾತ್ರಿ ಧಮ್ಮದಲ್ಲೇ ನೆಲೆ ನಿಂತಿರುತ್ತವೆ.

೨೭ ಗೌತಮನ ಶಿಷ್ಯರು ಯಾವಾಗಲೂ ಹೆಚ್ಚು ಜಾಗರೂಕರಾಗಿರುತ್ತಾರೆ ಹಾಗೂ ಅವರ ಆಲೋಚನೆಗಳು ಹಗಲು–ರಾತ್ರಿ ಶರೀರದಲ್ಲೇ ನೆಲೆ ನಿಂತಿರುತ್ತವೆ.

೨೮ ಗೌತಮನ ಶಿಷ್ಯರು ಯಾವಾಗಲೂ ಹೆಚ್ಚು ಜಾಗರೂಕರಾಗಿರುತ್ತಾರೆ ಹಾಗೂ ಅವರ ಆಲೋಚನೆಗಳು ಹಗಲು–ರಾತ್ರಿ ದಯೆಯಿಂದಾಗಿ ಆನಂದಿತವಾಗಿರುತ್ತದೆ.

೨೯ ಗೌತಮನ ಶಿಷ್ಯರು ಯಾವಾಗಲೂ ಹೆಚ್ಚು ಜಾಗರೂಕರಾಗಿರುತ್ತಾರೆ ಹಾಗೂ ಅವರ ಮನಸ್ಸು ಹಗಲು–ರಾತ್ರಿ ಧ್ಯಾನದಿಂದ ಆನಂದಿತವಾಗಿರುತ್ತದೆ.

೩೦ ಪ್ರಪಂಚವನ್ನು ತ್ಯಜಿಸುವುದು (ಸಂನ್ಯಾಸಿಯಾಗುವುದು) ಕಷ್ಟ; ಪ್ರಪಂಚದ ಸುಖವನ್ನು ಅನುಭವಿಸುವುದೂ ಕಷ್ಟ; ಆಶ್ರಮವಾಸ ಕಷ್ಟ; ಗೃಹವಾಸ ದುಃಖದಾಯಕ; ಸಮಾನರೊಡನೆ ಬದುಕುವುದು (ಸಮಾನರೊಡನೆ ಹಂಚಿಕೊಳ್ಳುವುದು) ದುಃಖಕರ; ಪರ್ಯಟಕ ಸಂನ್ಯಾಸಿ ನೋವಿನಿಂದ ನರಳುತ್ತಾನೆ.

೩೧ ಪೂರ್ಣ ವಿಶ್ವಾಸವುಳ್ಳ ಮನುಷ್ಯ, ಜೊತೆಗೆ ಸದ್ಗುಣ ಮತ್ತು ಕೀರ್ತಿಗಳನ್ನು ಪಡೆದಿದ್ದರೆ, ಅವನು ಎಲ್ಲಿದ್ದರೂ ಗೌರವಿಸಲ್ಪಡುತ್ತಾನೆ.

## ೨. ಭಿಕ್ಷು ಮತ್ತು ಸಂನ್ಯಾಸಿ

೧ ಭಿಕ್ಷುವು ಸಂನ್ಯಾಸಿಯೇ? ಇದಕ್ಕೆ 'ಅಲ್ಲ' ಎಂಬುದೇ ಉತ್ತರ.

೨ ಪವಿತ್ರ ಪ್ರಭುವೇ ನಿಗ್ರೋಧನೆಂದ ಪರ್ಯಟಕನೊಡನೆ ಚರ್ಚಿಸುವಾಗ ಈ ನಕಾರಾತ್ಮಕ ಉತ್ತರ ಕೊಟ್ಟಿದ್ದಾನೆ.

೩ ಒಮ್ಮೆ ಪವಿತ್ರಾತ್ಮನು ರಾಜಗೃಹದ ಬಳಿಯಿರುವ ಗೃಧ್ರಕೂಟದ ಮೇಲೆ ಉಳಿದುಕೊಂಡಿದ್ದ. ಅದೇ ಸಮಯದಲ್ಲಿ ಪರ್ಯಟನಕಾರ ನಿಗ್ರೋಧನು ತನ್ನ ಅಸಂಖ್ಯಾತ ಸಹ–ಪರ್ಯಟನಕಾರರೊಂದಿಗೆ, ನೆಲೆ ನಿಲ್ಲದವರಿಗೆಂದೇ ಮೀಸಲಾಗಿದ್ದ ರಾಣಿ ಊದುಂಬರಿಕಾ ವನದಲ್ಲಿ ಸಂಚರಿಸುತ್ತಿದ್ದ.

೪ ಆಗ ಮಹಾತ್ಮನು ಗೃಧ್ರಕೂಟದಿಂದ ಇಳಿದು, ಸುಮಗಧ ತೀರದಲ್ಲಿರುವ, ನವಿಲುಗಳಿಗೆ ಆಹಾರ ಕೊಡುವ ಪ್ರದೇಶಕ್ಕೆ ಬಂದನು ಹಾಗೂ ಅಲ್ಲಿಯ ಬಯಲಿನಲ್ಲಿ ಶತಪಥ ಓಡಾಡುತ್ತಿದ್ದನು. ಹೀಗೆ ಓಡಾಡುತ್ತಿದ್ದ ಬುದ್ಧನನ್ನು ನೋಡಿದ ನಿಗ್ರೋಧನ ತನ್ನ ಸಹಚರರಿಗೆ ಸುಮ್ಮನಿರುವಂತೆ ಸೂಚಿಸಿ, "ಸ್ವಾಮಿಗಳೇ, ಸುಮ್ಮನಿರಿ, ಗಲಾಟೆ ಮಾಡಬೇಡಿ. ಶ್ರಮಣ ಗೋತಮನು ಸುಮಗಧದ ದಡದಲ್ಲಿದ್ದಾನೆ" ಎಂದು ಎಚ್ಚರಿಸಿದನು. ಅವನು ಹೀಗೆಂದಾಗ ಸಹ–ಪರ್ಯಟನಕಾರರು ಸುಮ್ಮನಾದರು.

೫ ಆಗ ಮಹಾತ್ಮನು ಪರ್ಯಟನಕಾರ ನಿಗ್ರೋಧನ ಹತ್ತಿರ ಹೋದಾಗ, ನಿಗ್ರೋಧನು ಅವನನ್ನುದ್ದೇಶಿಸಿ ಹೀಗೆ ಹೇಳಿದನು: "ಪ್ರಭು, ಪವಿತ್ರಾತ್ಮನು ದಯಮಾಡಿಸಲಿ! ಪ್ರಭು ಮಹಾತ್ಮರಿಗೆ ಸುಸ್ವಾಗತ! ಇಲ್ಲಿಗೆ ಬರುವುದನ್ನು ತೀರ್ಮಾನಿಸಲು ಪ್ರಭು ಮಹಾತ್ಮರು ಬಹಳ ಸಮಯವನ್ನು ತೆಗೆದುಕೊಂಡಿದ್ದಾರೆ. ಪ್ರಭು ಮಹಾತ್ಮರು ಆಸೀನರಾಗಿ ಸಂತಸಗೊಳ್ಳಲಿ! ಇಲ್ಲಿ ಒಂದು ಆಸನವನ್ನು ಸಿದ್ಧಪಡಿಸಲಾಗಿದೆ."

೬ ಮಹಾತ್ಮನು ಆಗಲೇ ಸಿದ್ಧಪಡಿಸಿದ್ದ ಆಸನದ ಮೇಲೆ ಕುಳಿತನಂತರ, ನಿಗ್ರೋಧನು ಅವನ ಪಕ್ಕದಲ್ಲಿ ಅವನಿಗಿಂತ ಕೆಳಗಿದ್ದ ಆಸನದಲ್ಲಿ ಕುಳಿತನು.

೭ ಆಮೇಲೆ ನಿಗ್ರೋಧನು ಮಹಾತ್ಮನಿಗೆ ಹೀಗೆಂದನು: "ಸಮಣ ಗೋತಮರು ನಮ್ಮ

ಸಭೆಗೆ ಬಂದಿರುವುದರಿಂದ ಅವರನ್ನು ಈ ಪ್ರಶ್ನೆ ಕೇಳಬಯಸುತ್ತೇವೆ: 'ಏನು ಪ್ರಭುವೇ, ಮಹಾತ್ಮರಾದ ತಾವು, ಯಾವ ಧಮ್ಮವನ್ನು ನಿಮ್ಮ ಶಿಷ್ಯರಿಗೆ ಬೋಧಿಸುತ್ತೀರೋ, ಆ ಧಮ್ಮ ಇದೇ ಏನು? ಅಲ್ಲದೆ, ಆನಂದ ಪಡೆಯಲೋಸ್ಕರ ಮಹಾತ್ಮರಿಂದ ಶಿಕ್ಷಣ ಪಡೆದ ಆ ಶಿಷ್ಯರು ನಿಮ್ಮ ಧಮ್ಮವೇ ಅಂತಿಮ ಆಶ್ರಯ ಹಾಗೂ ಸದಾಚಾರದ ಮೂಲತತ್ತ್ವ ಎಂದು ಪರಿಗಣಿಸುತ್ತಾರೋ?' "

೮ "ನಿಗ್ರೋಧ, ನಾನು ಯಾವುದರಲ್ಲಿ ನನ್ನ ಶಿಷ್ಯರಿಗೆ ಶಿಕ್ಷಣ ಕೊಡುತ್ತಿದ್ದೇನೆಯೋ, ಆನಂದವನ್ನು ಪಡೆಯಲೋಸ್ಕರ ಯಾವ ಧಮ್ಮದಲ್ಲಿ ಶಿಕ್ಷಣ ಪಡೆದ ನನ್ನ ಶಿಷ್ಯರು ಅದನ್ನು ಅಂತಿಮ ಆಶ್ರಯ ಸದಾಚಾರದ ಮೂಲತತ್ತ್ವ ಎಂದು ಪರಿಗಣಿಸುತ್ತಾರೋ, ಅದನ್ನು ತಿಳಿದುಕೊಳ್ಳುವುದು, ಬೇರೆ ಮತದವರಿಗೆ, ಬೇರೆ ಬೇರೆ ಸಾಧನೆ ಮಾಡುವವರಿಗೆ, ಬೇರೆ ರೀತಿಯ ತಪ್ಪೊಪ್ಪಿಕೊಳ್ಳುವವರಿಗೆ ಅರ್ಥವಾಗುವುದು ಕಷ್ಟ; ಅದರಲ್ಲೂ ಅಂಥವರು ಸಾಧನೆಯಿಲ್ಲದೆ, ಬೋಧನೆಯಿಲ್ಲದೆ ಅದನ್ನು ತಿಳಿದುಕೊಳ್ಳಲಾರರು.

೯ "ಆದರೆ, ನಿಗ್ರೋಧ, ನಿನ್ನ ತತ್ವದ ಬಗೆಗೆ, ಜೀವನದ ಕಠಿಣ ವ್ರತಗಳನ್ನಾಚರಿಸುವುದರ ಬಗೆಗೆ ಪ್ರಶ್ನೆ ಕೇಳುತ್ತೇನೆ: (ಈ ನಿನ್ನ) ದೇಹದಂಡನೆಯಲ್ಲಿ ಯಾವ ಸಾರ್ಥಕತೆ ಅಥವಾ ನಿರರ್ಥಕತೆ ಅಡಗಿದೆ?"

೧೦ ಆಗ ನಿಗ್ರೋಧನು ಮಹಾತ್ಮನಿಗೆ ಹೀಗೆ ಉತ್ತರಿಸಿದನು: "ಪ್ರಭು, ನಾವು ಕಠಿಣ ದೇಹದಂಡನ ವಿಧಿಗಳನ್ನು ಬೋಧಿಸುತ್ತೇವೆ; ಅವುಗಳನ್ನು ಅತ್ಯಗತ್ಯವೆಂದು ನಾವು ಪರಿಗಣಿಸುತ್ತೇವೆ; ನಾವು ಅವುಗಳಿಗೆ ಬದ್ಧರಾಗಿದ್ದೇವೆ; ಅವುಗಳಲ್ಲಿ ಯಾವ ಸಾರ್ಥಕತೆ, ಯಾವ ನಿರರ್ಥಕತೆ ಅಡಗಿದೆ?"

೧೧ "ನಿಗ್ರೋಧ, ಒಬ್ಬ ಸನ್ಯಾಸಿ ಬೆತ್ತಲೆ ಇರುತ್ತಾನೆನ್ನೋಣ; ಅವನಿಗೆ ಕೆಲವು ದುರಭ್ಯಾಸಗಳಿವೆ; ಅವನು ಕೈ ನೆಕ್ಕುತ್ತಾನೆ; ಯಾವ ಮಾರ್ಗಕ್ಕೂ ಅವನು ಬೆಲೆ ಕೊಡುವುದಿಲ್ಲ; ತನ್ನ ದುರಭ್ಯಾಸವನ್ನು ನಿಲ್ಲಿಸುವುದೂ ಇಲ್ಲ, ಎನ್ನೋಣ. ಅವನು ಬಹಿರಂಗವಾಗಿ ತಂದ ಏನನ್ನೂ ಸ್ವೀಕರಿಸುವುದಿಲ್ಲ. ಬಹಿರಂಗವಾಗಿ ತಯಾರಿಸಿದ ಏನನ್ನೂ ಸ್ವೀಕರಿಸುವುದಿಲ್ಲ; ಯಾವ ಆಮಂತ್ರಣವನ್ನೂ ಸ್ವೀಕರಿಸುವುದಿಲ್ಲ ಎನ್ನೋಣ; ಅಡುಗೆಯ ಪಾತ್ರೆಯ ಕಂಠದಿಂದ (ನೇರವಾಗಿ) ಸುರಿದುದನ್ನಾಗಲೀ, ಹೊಸ್ತಿಲೊಳಗಿದ್ದುದನ್ನಾಗಲಿ, ಒರಳೊಳಗಿದ್ದುದನ್ನಾಗಲಿ, ಸೌದೆಗೆ ಅಂಟಿಕೊಂಡಿದ್ದನ್ನಾಗಲಿ, ಬೀಸುವ ಕಲ್ಲಿನಲ್ಲಿದ್ದುದನ್ನಾಗಲಿ, ಅವನು ಸ್ವೀಕರಿಸಲಾರ; ಒಟ್ಟಿಗೆ ಊಟ ಮಾಡುತ್ತಿರುವ ಇಬ್ಬರಿಂದಾಗಲಿ, ಬಸಿರಿಯಿಂದಾಗಲಿ, ಬಾಣಂತಿಯಿಂದಾಗಲಿ, ಪುರುಷನೊಂದಿಗೆ ಸಂಭೋಗದಲ್ಲಿ ನಿರತಳಾದ ಸ್ತ್ರೀಯಿಂದಾಗಲಿ ಅವನು ಏನನ್ನೂ ಸ್ವೀಕರಿಸುವುದಿಲ್ಲವೆನ್ನೋಣ; ಬರಗಾಲದಲ್ಲಿ ಸಂಗ್ರಹಿಸಿದ ಆಹಾರವನ್ನಾಗಲಿ, ನಾಯಿಗಳಿರುವ ಸ್ಥಳದಿಂದ ತಂದ ಆಹಾರವನ್ನಾಗಲಿ, ನೊಣಗಳು ಗುಂಪುಗುಂಪಾಗಿ ಹಾರಾಡುವ ಸ್ಥಳದಿಂದ ತಂದ ಆಹಾರವನ್ನಾಗಲಿ, ಮೀನು ಅಥವಾ ಮಾಂಸವನ್ನಾಗಲಿ, ಮದ್ಯವನ್ನಾಗಲಿ, ಅಂಬಲಿಯನ್ನಾಗಲಿ, ಅವನು ಸ್ವೀಕರಿಸುವುದಿಲ್ಲ ಎನ್ನೋಣ; ಅವನು ಒಂದೇ ಮನೆಯ ಭಿಕ್ಷೆಯವನಿರಬಹುದು ಅಥವಾ ಒಂದು ತುತ್ತು ಮಾತ್ರ ಉಣ್ಣುವವನಿರಬಹುದು; ಅಥವಾ ಎರಡು ಮನೆಯ ಭಿಕ್ಷೆಯವನಿರಬಹುದು ಅಥವಾ ಎರಡು ತುತ್ತು ಮಾತ್ರ ಉಣ್ಣುವವನಿರಬಹುದು; ಅಥವಾ ಏಳು ಮನೆಗಳ ಭಿಕ್ಷೆಯವನಿರಬಹುದು ಅಥವಾ ಏಳು ತುತ್ತು ಮಾತ್ರ ಉಣ್ಣುವವನಿರಬಹುದು; ಅವನು ಒಂದೇ ಭಿಕ್ಷೆಯ, ಅಥವಾ ಎರಡು ಭಿಕ್ಷೆ ಅಥವಾ ಏಳು ಭಿಕ್ಷೆಯ ಮೇಲೆ ಜೀವಿಸಿಯಾನು. ಅವನು ದಿನಕ್ಕೆ ಒಂದೇ ಸಾರಿ, ಅಥವಾ ಎರಡು ದಿನಗಳಿಗೊಂದೆ ಸಾರಿ ಅಥವಾ ಏಳು ದಿನಗಳಿಗೊಂದೆ ಸಾರಿ ಉಣ್ಣಬಹುದು. ಹೀಗೆ, ಅವನು ನಿಯಮಕ್ಕನುಸಾರವಾಗಿ, ನಿಯಮಿತ ಮಧ್ಯಂತರದಲ್ಲಿ,

ಕೆಲವು ಸಾರಿ ಅರ್ಧ ತಿಂಗಳಿಗೊಮ್ಮೆ, ಆಹಾರ ಸ್ವೀಕರಿಸುವ ಅಭ್ಯಾಸಕ್ಕೆ ಅಂಟಿಕೊಂಡಾನು; ಅವನು ಸೊಪ್ಪು, ಬಿದಿರಕ್ಕಿ, ನಿವರ ಬೀಜ, ತೊಗಲಿಗೆ ಅಂಟಿಕೊಂಡ ಮಾಂಸ, ಅಕ್ಕಿಯ ಹೊಟ್ಟು, ಬತ್ತದ ತೌಡು, ಹಿಟ್ಟು, ಎಣ್ಣೆಕಾಳು, ಹುಲ್ಲು, ಬೆರಣಿ, ಹಣ್ಣು, ಗೆಡ್ಡೆ–ಗೆಣಸು, ಗಾಳಿಗೆ ಮರದಿಂದ ಉದುರಿದ ವಸ್ತು – ಇವನ್ನು ತಿಂದು ಬದುಕಿಯಾನು; ಅವನು ಒರಟು ನಾರುವಸ್ತ್ರ ಅಥವಾ ಮಿಶ್ರವಸ್ತ್ರ, ಬಿಸಾಡಿದ ಶವವಸ್ತ್ರ, ಬಿಸಾಡಿದ ಚಿಂದಿ ಬಟ್ಟೆ; ತಿರಿತ ತೊಗಟೆಯ ಬಟ್ಟೆ, ತೊಟ್ಟುಕೊಳ್ಳಬಹುದು; ಅಥವಾ ಜಿಂಕೆಯ ಚರ್ಮವನ್ನಾಗಲಿ ಅಥವಾ ಅದರ ತುಂಡುಗಳನ್ನು ಸೇರಿಸಿ ಹೊಲೆದುದನ್ನಾಗಲಿ, ಅಥವಾ ಕುಶನಾರಿನ ಬಟ್ಟೆಯನ್ನಾಗಲಿ, ಅಥವಾ ತೊಗಟೆಯನ್ನಾಗಲಿ, ಹರಿದ ಬಟ್ಟೆಯನ್ನಾಗಲಿ, ಮಾನವ ಕೂದಲಿನಿಂದಾದ ಕಂಬಳಿಯನ್ನಾಗಲಿ, ಕುದುರೆಯ ಕೂದಲಿನ ಕಂಬಳಿಯನ್ನಾಗಲಿ, ಗೂಬೆಯ ಪುಕ್ಕದಿಂದ ಹೆಣೆದ ವಸ್ತ್ರವನ್ನಾಗಲಿ ತೊಡಬಹುದು; ಅವನು ತಲೆಕೂದಲನ್ನೂ ಗಡ್ಡವನ್ನೂ ಕಿತ್ತುಕೊಳ್ಳುವವನೂ, ಆ ಅಭ್ಯಾಸಕ್ಕೆ ಬಲಿಯಾದವನೂ ಆಗಿರಬಹುದು; ಯಾವಾಗಲೂ ನಿಂತಿರುವವನೋ, ಅಥವಾ ಹಿಮ್ಮಡಿಯ ಮೇಲು (ಕುಕ್ಕುರುಗಾಲಿನಲ್ಲಿ) ಕುಳಿತಿರುವವನೋ ಅಥವಾ ಹಾಗೆ ಕುಳಿತಿರುವಾಗ ಮುಂದಕ್ಕೆ ಭಾರ ಬಿಟ್ಟು (ಹಿಂದಕ್ಕೆ ಮುಂದಕ್ಕೆ) ತೂಗಾಡುವ ರೂಢಿಯುಳ್ಳವನೋ ಆಗಿರಬಹುದು; ಮುಳ್ಳಿನ ಹಾಸಿಗೆಯ ಮೇಲೆ ಮಲಗಿರುವವನಾಗಿದ್ದು, ತನ್ನ ಆಸನಕ್ಕೆ ಮುಳ್ಳನ್ನೊ ಮೊಳೆಯನ್ನೊ ಹೊಡೆಸಿಕೊಂಡವನಾಗಿರಬಹುದು; ಹಲಗೆಯ ಮೇಲೋ ಮಲಗುವವನಿರಬಹುದು; ಒಂದೇ ಮಗ್ಗುಲಲ್ಲಿ ಮಲಗುವವನಿರಬಹುದು; ಧೂಳು ಮತ್ತು ಕೊಳೆಯನ್ನು ಬಳಿದುಕೊಂಡವನಿರಬಹುದು; ಬಯಲಿನಲ್ಲಿರುವವನೂ, ಎಲ್ಲಿ ಬೇಕೆಂದರಲ್ಲೇ ಕುಳಿತುಕೊಳ್ಳುವವನೂ, ಹೊಲಸು ತಿನ್ನುವವನೂ, ಅಂಥ ಅಭ್ಯಾಸಕ್ಕೊಳಗಾದವನೊ ಆಗಿರಬಹುದು; ಮದ್ಯ ವ್ಯಸನಿಯಲ್ಲದಿರಬಹುದು; (ತಣ್ಣೀರಷ್ಟನ್ನೇ) ಕುಡಿಯುವ ಅಭ್ಯಾಸಕ್ಕೆ ಬಲಿಯಾದವನೊ ಇರಬಹುದು."

೧೨ ಪವಿತ್ರ ಪ್ರಭುವು ಮುಂದುವರಿದು, "ನಿಗ್ರೋಧ, ಒಬ್ಬ ಇಷ್ಟೆಲ್ಲಾ ಮಾಡುತ್ತಾನೆಂದು ತಿಳಿ. ಅವನ ಬಗ್ಗೆ ನಿನಗೇನನ್ನಿಸುತ್ತದೆ? ಇವೆಲ್ಲವನ್ನೂ ಮಾಡಿದವನು ದೇಹದಂಡನೆಯ ಕಠಿಣ ವ್ರತಗಳನ್ನು ಆಚರಿಸಿದ್ದಾನೆಂದರ್ಥವೊ ಅಲ್ಲವೋ?" ಎಂದು ಕೇಳಿದ. ಅದಕ್ಕೆ ನಿಗ್ರೋಧ ಹೇಳಿದ : "ಸತ್ಯವಾಗಿಯೂ ಪ್ರಭು; ಇವುಗಳನ್ನು ಮಾಡಿದವನು ದೇಹದಂಡನೆಯ ಕಠಿಣ ವ್ರತಗಳನ್ನು ಆಚರಿಸಿದ್ದಾನೆಂದೇ ಅರ್ಥ."

೧೩ "ಹಾಗಾದರೆ, ನಿಗ್ರೋಧ, ದೇಹದಂಡನೆಯ ಕಠಿಣ ವ್ರತವು ಈ ರೀತಿ ಆಚರಿಸಲ್ಪಟ್ಟಿದ್ದರೆ ಅದರಲ್ಲಿ ಅನೇಕ ದೋಷಗಳಿವೆ ಎಂದು ಸಾರಿ ಹೇಳುತ್ತೇನೆ."

೧೪ "ಪ್ರಭು, ಅದರಲ್ಲಿ ದೋಷವಿದೆಯೆಂದು ಹೇಗೆ ಸಾರಿ ಹೇಳುತ್ತೀರಿ?"

೧೫ "ನಿಗ್ರೋಧ, ಒಂದು ವೇಳೆ ಒಬ್ಬ ಸಂನ್ಯಾಸಿಯು ಕಠಿಣ ವ್ರತ ಆಚರಿಸಿದರೆ, ಆ ಮೂಲಕ ಅವನು ಅಲ್ಪ ತೃಪ್ತನಾಗುತ್ತಾನೆ, ತನ್ನ ಧ್ಯೇಯ ಸಾಧಿಸಿಯಾಯಿತು ಎಂದು ತಿಳಿಯುತ್ತಾನೆ. ನಿಗ್ರೋಧ, ಈ ರೀತಿಯಾದರೆ, ಆ ಸಂನ್ಯಾಸಿಯಲ್ಲಿ ದೋಷವುಂಟಾಗುತ್ತದೆ.

೧೬ "ಅಲ್ಲದೆ, ನಿಗ್ರೋಧ, ಒಬ್ಬ ಸಂನ್ಯಾಸಿಯು ಕಠಿಣ ವ್ರತ ಆಚರಿಸಿದರೆ, ಆ ಮೂಲಕ, ಅವನು ಸ್ವಪ್ರಶಂಸೆ ಮಾಡಿಕೊಂಡು ಇತರರನ್ನು ಹಳಿಯುತ್ತಾನೆ. ಇದೂ ಸಹ ಆ ಸಂನ್ಯಾಸಿಯಲ್ಲಿ ದೋಷವನ್ನುಂಟು ಮಾಡುತ್ತದೆ.

೧೭ "ಅಲ್ಲದೆ, ನಿಗ್ರೋಧ, ಒಬ್ಬ ಸಂನ್ಯಾಸಿಯು ಕಠಿಣ ವ್ರತ ಆಚರಿಸಿದರೆ, ಆ ಮೂಲಕ, ಅವನಿಗೆ ಮದ

ಬರುತ್ತದೆ ಹಾಗೂ ಮೋಹವುಂಟಾಗುತ್ತದೆ; ಅಲ್ಲದೆ, ಅವನು ಅಜಾಗರೂಕನಾಗುತ್ತಾನೆ. ಇದೂ ಸಹ, ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೧೮ "ಅಲ್ಲದೆ, ನಿಗ್ರೋಧ, ಒಬ್ಬ ಸಂನ್ಯಾಸಿಯು ಕಠಿಣ ವ್ರತ ಆಚರಿಸಿದರೆ, ಅವನಿಗೆ ಕಾಣಿಕೆಗಳು, ಸನ್ಮಾನ ಮತ್ತು ಯಶಸ್ಸು ಸಿಕ್ಕುತ್ತದೆ. ಹೀಗಾಗಿ ಅವನು ಅಲ್ಪ ತೃಪ್ತನಾಗುತ್ತಾನೆ. ಅವನ ಆ ಧ್ಯೇಯ ಸಾಧಿಸಿದಂತಾಯಿತು. ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನು ಉಂಟುಮಾಡುತ್ತದೆ.

೧೯ "ಅಲ್ಲದೆ, ನಿಗ್ರೋಧ, ಕಾಣಿಕೆ, ಸನ್ಮಾನ ಮತ್ತು ಯಶಸ್ಸು ಗಳಿಸುವ ಮೂಲಕ ಅವನು ಸ್ವಪ್ರಶಂಸೆ ಮಾಡಿಕೊಂಡು ಉಳಿದವರನ್ನು ಹಳಿಯುತ್ತಾನೆ. ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೨೦ "ಅಲ್ಲದೆ, ನಿಗ್ರೋಧ, ಕಾಣಿಕೆ ಸನ್ಮಾನ ಮತ್ತು ಯಶಸ್ಸು ಗಳಿಸುವ ಮೂಲಕ ಅವನಲ್ಲಿ ಮದವೂ, ಮೋಹವೂ ಉಂಟಾಗಿ, ಅವನು ಅಜಾಗರೂಕನಾಗುತ್ತಾನೆ. ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೨೧ "ಅಲ್ಲದೆ, ನಿಗ್ರೋಧ, ಸಂನ್ಯಾಸಿಯು ಕಠಿಣ ವ್ರತ ಆಚರಿಸಲು ಪ್ರಾರಂಭಿಸಿದರೆ, 'ಈ ಆಹಾರ ನನಗೆ ಸೇರುತ್ತದೆ, ಈ ಆಹಾರ ನನಗೆ ಸೇರುವುದಿಲ್ಲ' ಎಂದು ಭೇದ ಮಾಡುತ್ತಾನೆ. ಸೇರದ ಆಹಾರವನ್ನು ತಿರಸ್ಕರಿಸುತ್ತಾನೆ; ಸೇರುವ ಆಹಾರದ ಬಗ್ಗೆ ದುರಾಸೆ ಮತ್ತು ಮೋಹವನ್ನು ಬೆಳೆಸಿಕೊಳ್ಳುತ್ತಾನೆ; ಅವುಗಳಲ್ಲಿರುವ ಅಪಾಯವನ್ನು ಮನಗಾಣದೆ, ಅವು ಕ್ಷೇಮಕರ ಅಲ್ಲವೆಂಬುದನ್ನು ತಿಳಿಯದೆ, ಅವುಗಳಿಗೆ ಅಂಟಿಕೊಳ್ಳುತ್ತಾನೆ ಹಾಗೂ ಅವುಗಳನ್ನು ಸೇವಿಸಿ ಸುಖಿಸುತ್ತಾನೆ. ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೨೨ "ಅಲ್ಲದೆ, ನಿಗ್ರೋಧ, ಅವನು ಕಾಣಿಕೆ, ಗೌರವ ಮತ್ತು ಯಶಸ್ಸುಗಳ ಆಸೆಯಿಂದ ಹೀಗೆ ಯೋಚಿಸುತ್ತಾನೆ; ' ರಾಜರು ನನಗೆ ಗೌರವ ಕೊಡುತ್ತಾರೆ; ಅವರ ಅಧಿಕಾರಿಗಳೂ ಹಾಗೆ ಮಾಡುತ್ತಾರೆ; ಅದೇ ರೀತಿ ಗಣ್ಯರೂ, ಬ್ರಾಹ್ಮಣರೂ, ಗೃಹಸ್ಥರೂ, ತತ್ತ್ವಸಂಸ್ಥಾಪಕರೂ ಹಾಗೇ ಮಾಡುತ್ತಾರೆ.' ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷಕ್ಕೆ ಕಾರಣವಾಗುತ್ತದೆ.

೨೩ "ಅಲ್ಲದೆ, ನಿಗ್ರೋಧ, ಆ ಸಂನ್ಯಾಸಿಯು ಏಕಾಂಗಿಯಾಗಿ ವಾಸಿಸುವವನನ್ನೊ, ಬ್ರಾಹ್ಮಣನನ್ನೊ ನೋಡಿ ಹೀಗೆ ಗೊಣಗಬಹುದು: ಆ ಮನುಷ್ಯ ಏನೆಲ್ಲ ತಿಂದು ಬದುಕುತ್ತಾನೆ; ಗೆಡ್ಡೆ–ಗೆಣಸು, ಸೊಪ್ಪು, ಹಣ್ಣು, ಹೊಲಸನ್ನೆಲ್ಲ ತಿಂದು ಬದುಕುತ್ತಾನೆ; ಕೊಂಬೆಯಿಂದ ಬೆಳೆದುದು, ಬೀಜದಿಂದ ಬೆಳೆದುದು, ಎಲ್ಲವನ್ನೂ ತಿನ್ನುತ್ತಾನೆ; ಎಲ್ಲವನ್ನೂ ಒಟ್ಟಿಗೆ ಹಾಕಿಕೊಂಡು ಚಕ್ರವಿಲ್ಲದ ಗುಡುಗಿನಂತಹ ದವಡೆಯಲ್ಲಿ ಕರಕರನೆ ತಿನ್ನುತ್ತಾನೆ; ಜನ ಅವನನ್ನೇ ಪವಿತ್ರ ಮಾನವನೆಂದು ಕರೆಯುತ್ತಾರೆ. ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೨೪ "ಅಲ್ಲದೆ, ನಿಗ್ರೋಧ, ಆ ಸಂನ್ಯಾಸಿಯು ಏಕಾಂಗಿಯಾಗಿರುವವನು ಅಥವಾ ಬ್ರಾಹ್ಮಣನು ಪ್ರಜೆಗಳಿಂದ ಪೂಜಿಸಲ್ಪಡುವುದನ್ನೂ, ಸನ್ಮಾನಿಸಲ್ಪಡುವುದನ್ನೂ, ಕಾಣಿಕೆ ಪಡೆಯುವುದನ್ನೂ ನೋಡುತ್ತಾನೆ. ಅದನ್ನು ಗಮನಿಸಿದ ಆ ಸಂನ್ಯಾಸಿ ಹೀಗೆ ಯೋಚಿಸುತ್ತಾನೆ; ಐಷಾರಾಮದಲ್ಲಿ ವಾಸಿಸುವ ಇವನ ಕಡೆ ಪ್ರಜೆಗಳು ಗಮನ ಹರಿಸುತ್ತಾರೆ; ಅವನನ್ನು ಪೂಜಿಸುತ್ತಾರೆ, ಸನ್ಮಾನಿಸುತ್ತಾರೆ; ಅವನಿಗೆ ಕಾಣಿಕೆ ಸಲ್ಲಿಸುತ್ತಾರೆ; ಆದರೆ ಸಂನ್ಯಾಸಿಯಂತೆ ನಿಜವಾಗಿಯೂ ಕಠಿಣ ವ್ರತ ಆಚರಿಸುವ ನನ್ನ ಕಡೆ ಅವರು ನೋಡುವುದಿಲ್ಲ, ನನಗೆ ಗೌರವ, ಸನ್ಮಾನ ಮತ್ತು ಕಾಣಿಕೆ ಸಲ್ಲಿಸುವುದಿಲ್ಲ. ಹೀಗೆ ಅವನು ಆ

ಪ್ರಜೆಗಳ ಬಗ್ಗೆ ದ್ವೇಷ ಮತ್ತು ಅಸೂಯೆ ಬೆಳೆಸಿಕೊಳ್ಳುತ್ತಾನೆ. ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೨೫ "ಅಲ್ಲದೆ, ನಿಗ್ರೋಧ, ಆ ಸಂನ್ಯಾಸಿಯು ನಿಗೂಢವಾದುದನ್ನು ಆಚರಿಸುತ್ತಾನೆ. ಜನರು ಒಂದು ವೇಳೆ ಅವನನ್ನು 'ಹೀಗೆ ಮಾಡುವುದು ಸರಿಯೇ?' ಎಂದು ಕೇಳಿದರೆ, ಅದು ಸರಿಯಲ್ಲವೆಂದು ಗೊತ್ತಿದ್ದರೂ 'ಹೌದು' ಎನ್ನುತ್ತಾನೆ: ಅಥವಾ ಸರಿಯಾದದ್ದು ಗೊತ್ತಿದ್ದರೂ 'ಅಲ್ಲ' ಎನ್ನುತ್ತಾನೆ. ಹೀಗೆ ಅವನು ಪ್ರಜ್ಞಾಪೂರ್ವಕವಾಗಿ ಅಸತ್ಯ ಹೇಳುತ್ತಾನೆ. ಇದೂ ಸಹ, ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೨೬. "ಅಲ್ಲದೆ, ನಿಗ್ರೋಧ, ಆ ಸಂನ್ಯಾಸಿಯು ದ್ವೇಷ ಮತ್ತು ಅಸೂಯೆ ಬೆಳೆಸಿಕೊಂಡಂತೆ, ಕಾಪಟ್ಯ ಮತ್ತು ಮೋಸ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ಸಾಧ್ಯತೆಯೂ ಇದೆ; ಅವನು ಕುಯುಕ್ತಿಯ ತಂತ್ರಿಯಾಗಬಹುದು; ಕಠಿಣ ಹೃದಯದ ಆಹಂಕಾರಿಯಾಗಬಹುದು; ದುಷ್ಟ ಬಯಕೆಗಳನ್ನು ಬೆಳೆಸಿಕೊಂಡು, ಅವುಗಳ ದಾಸನಾಗಬಹುದು; ಅವನು ಕೆಟ್ಟ ಅಭಿಮತಗಳನ್ನು ಬೆಳೆಸಿಕೊಂಡು ಅಲೌಕಿಕ ಅಭಿಪ್ರಾಯಗಳಿಗೆ ಬಲಿಯಾಗುತ್ತಾನೆ; ಅವನು ತನ್ನ ಅನುಭವಗಳನ್ನು ತಪ್ಪಾಗಿ ಅರ್ಥೈಸುತ್ತಾನೆ; ಸಂನ್ಯಾಸದಿಂದ ವಿಮುಖನಾಗಿ, ಅದರಿಂದ ದೂರ ಹೋಗುತ್ತಾನೆ; ಇದೂ ಸಹ ಆ ಸಂನ್ಯಾಸಿಯಲ್ಲಿ ಒಂದು ದೋಷವನ್ನುಂಟುಮಾಡುತ್ತದೆ.

೨೭. "ನಿಗ್ರೋಧ, ಈ ಬಗ್ಗೆ ನಿನ್ನ ಅಭಿಪ್ರಾಯವೇನು? ದೇಹದಂಡನೆಯ ಕಠಿಣ ವ್ರತಗಳಲ್ಲಿರುವ ಇವು ದೋಷಗಳೊ ಅಥವಾ ಅಲ್ಲವೊ?"

೨೮. "ಪ್ರಭು, ದೇಹದಂಡನೆಯ ಕಠಿಣ ವ್ರತಗಳಲ್ಲಿರುವ ಇವು ಖಂಡಿತವಾಗಿಯೂ ದೋಷಗಳೇ. ಪ್ರಭು, ಸಂನ್ಯಾಸಿಯು ಈ ಎಲ್ಲ ದೋಷಗಳಿಗೂ ಬಲಿಯಾಗುವ ಸಾಧ್ಯತೆಯಿದೆ; ಅವುಗಳಲ್ಲಿ ಯಾವುದಾದರೂ ಒಂದು ಅಥವಾ ಕೆಲವು ದೋಷಗಳಿಗೆ ಬಲಿಯಾಗುವ ಸಾಧ್ಯತೆಯಂತೂ ಬಹಳ.

೨೯. "ಭಿಕ್ಷುಗಳು ಈ ದೋಷಗಳ ಅಪರಾಧದಿಂದ ದೂರವಿರಬೇಕು."

## ೩. ಭಿಕ್ಷು ಮತ್ತು ಬ್ರಾಹ್ಮಣ

೧ ಭಿಕ್ಷುವೆಂದರೂ ಬ್ರಾಹ್ಮಣನೆಂದರೂ ಒಂದೆಯೇ? ಇದಕ್ಕೂ ನಕಾರಾತ್ಮಕ ಉತ್ತರವನ್ನು ಕೊಡಲಾಗಿದೆ.

೨ ಇದರ ಮೇಲಿನ ಚರ್ಚೆಯು ಒಂದೇ ಕಡೆ ಕೇಂದ್ರೀಕೃತವಾಗಿಲ್ಲ. ಅದು ಎಲ್ಲ ಕಡೆ ಚದುರಿಹೋಗಿದೆ. ಆದರೆ ಈ ವ್ಯತ್ಯಾಸಗಳನ್ನು ಸಂಗ್ರಹ ರೂಪದಲ್ಲಿ ಹೇಳಬಹುದು.

೩ ಬ್ರಾಹ್ಮಣನೆಂದರೆ ಪುರೋಹಿತ. ಜನನ, ವಿವಾಹ, ಮರಣ ಇವುಗಳಿಗೆ ಸಂಬಂಧಿಸಿದ ಕರ್ಮಗಳನ್ನು ಮಾಡುವುದೇ ಅವನ ಕರ್ತವ್ಯ.

೪ ಅನಾದಿಯಿಂದ ಮಾಡಿದ ಪಾಪವನ್ನು ತೊಡೆದುಹಾಕಲು ಕೆಲವು ಆಚರಣೆಗಳು ಬೇಕು ಎಂಬ ಸಿದ್ಧಾಂತದ ದೆಸೆಯಿಂದಲೂ, ದೇವರು ಮತ್ತು ಆತ್ಮಗಳಲ್ಲಿನ ನಂಬಿಕೆಯಿಂದಲೂ ಈ ಕರ್ಮಗಳು ಆವಶ್ಯಕವಾಗುತ್ತದೆ.

೫ ಈ ಕರ್ಮಗಳನ್ನು ಮಾಡಲು ಒಬ್ಬ ಪುರೋಹಿತ ಬೇಕು. ಭಿಕ್ಷುವಿಗೆ ಅನಾದಿ ಕರ್ಮದಲ್ಲಿಯಾಗಲಿ,

ದೇವರ ಆತ್ಮಗಳಲ್ಲಿಯಾಗಲಿ ನಂಬಿಕೆಯಿಲ್ಲ. ಆದುದರಿಂದ ಅವನು ಆ ಕರ್ಮಗಳನ್ನು ಮಾಡಬೇಕಾಗಿಲ್ಲ. ಆದುದರಿಂದ ಅವನು ಪುರೋಹಿತನಲ್ಲ.

೬ ಬ್ರಾಹ್ಮಣನಾಗುವುದು ಜಾತಿಯಿಂದ, ಭಿಕ್ಷುವಾಗುವುದು ಸಾಧನೆಯಿಂದ.

೭ ಬ್ರಾಹ್ಮಣನಿಗೆ ಜಾತಿಯಿರುತ್ತದೆ. ಆದರೆ ಭಿಕ್ಷುವಿಗೆ ಜಾತಿಯಿಲ್ಲ.

೮ ಒಂದು ಸಾರಿ ಬ್ರಾಹ್ಮಣನಾದವನು ಯಾವಾಗಲೂ ಬ್ರಾಹ್ಮಣನೇ. ಯಾವ ಪಾಪ ಅಥವಾ ಅಪರಾಧವೂ ಅವನ ಬ್ರಾಹ್ಮಣ್ಯವನ್ನು ನಾಶ ಮಾಡಲಾರದು.

೯ ಆದರೆ ಒಂದು ಸಾರಿ ಭಿಕ್ಷುವಾದವನು ಯಾವಾಗಲು ಭಿಕ್ಷುವೇನಲ್ಲ. ಒಬ್ಬ ಸಾಧನೆಯಿಂದ ಭಿಕ್ಷುವಾಗುತ್ತಾನೆ. ಆದುದರಿಂದ ಅವನು ಭಿಕ್ಷುವಿನ ಯೋಗ್ಯತೆಗೆ ಸಲ್ಲದ ನಡತೆ ಬೆಳೆಸಿಕೊಂಡರೆ ಅವನ ಭಿಕ್ಷುತನ ನಾಶವಾಗುತ್ತದೆ.

೧೦ ಬ್ರಾಹ್ಮಣನಾಗಲು ಯಾವ ಮಾನಸಿಕ ನೈತಿಕ ಶಿಕ್ಷಣವೂ ಬೇಕಿಲ್ಲ. ಅವನು ಧರ್ಮಗ್ರಂಥಗಳನ್ನು ಓದಬೇಕೆಂಬುದಷ್ಟನ್ನೇ ಅವನಿಂದ ನಿರೀಕ್ಷಿಸಲಾಗುತ್ತದೆ (ಬರೇ ನಿರೀಕ್ಷಿಸಲಾಗುತ್ತದೆ) ಅಷ್ಟೆ.

೧೧ ಆದರೆ ಭಿಕ್ಷುವಿನ ವಿಷಯವೇ ಬೇರೆ. ಮಾನಸಿಕ ಮತ್ತು ನೈತಿಕ ಶಿಕ್ಷಣ ಅವನ ಜೀವಾಳ.

೧೨ ಬ್ರಾಹ್ಮಣನಿಗೆ ಅಪರಿಮಿತ ಆಸ್ತಿ ಪಡೆಯಲು ಸ್ವಾತಂತ್ರ್ಯವಿದೆ; ಆದರೆ ಭಿಕ್ಷುವಿಗೆ ಅದು ಸಾಧ್ಯವಿಲ್ಲ.

೧೩ ಇದು ಸಣ್ಣ ವ್ಯತ್ಯಾಸವೇನಲ್ಲ. ಯೋಚನೆಯ ವಿಷಯದಲ್ಲಾಗಲಿ ಕಾರ್ಯದ ವಿಷಯದಲ್ಲಾಗಲಿ ಆಸ್ತಿಯು ಮನುಷ್ಯನ ಮಾನಸಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಬಹಳವಾಗಿ ಮಿತಿಗೊಳಿಸುತ್ತದೆ. ಅದು ಅವೆರಡರ ಮಧ್ಯೆ ಘರ್ಷಣೆ ಉಂಟುಮಾಡುತ್ತದೆ. ಅದಕ್ಕೇ ಬ್ರಾಹ್ಮಣನೂ ಬದಲಾವಣೆಗಳನ್ನು ವಿರೋಧಿಸುತ್ತಾನೆ. ಏಕೆಂದರೆ, ಅವನಿಗೆ ಬದಲಾವಣೆ ಎಂದರೆ, ಅಧಿಕಾರದ ನಷ್ಟ. ಆಸ್ತಿಯ ನಷ್ಟ.

೧೪ ಆಸ್ತಿಯಿಲ್ಲದ ಭಿಕ್ಷುವು ಮಾನಸಿಕವಾಗಿಯೂ ನೈತಿಕವಾಗಿಯೂ ಸ್ವತಂತ್ರ. ಅವನ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಗೆ ಅಡ್ಡಿಯಾಗುವಂಥ ಯಾವ ವೈಯಕ್ತಿಕ ಆಸಕ್ತಿಯೂ ಅವನಲ್ಲಿರುವುದಿಲ್ಲ.

೧೫ ಬ್ರಾಹ್ಮಣರು ಏನೇ ಆಗಲಿ ಪ್ರತಿಯೊಬ್ಬ ಬ್ರಾಹ್ಮಣನೂ ಒಬ್ಬ ವ್ಯಕ್ತಿ ಅಷ್ಟೇ. ಯಾವುದೇ ಧಾರ್ಮಿಕ ಸಂಸ್ಥೆಗೆ ಅವನು ಅಧೀನವಾಗಿಲ್ಲ. ಬ್ರಾಹ್ಮಣನು ಹೇಳಿದ್ದೇ ಕಾನೂನು. ಅವರಿಗೆ ಲೌಕಿಕ ಆಸಕ್ತಿಯು ಸಮಾನವಾದಾಗ ಅವರು ಒಂದಾಗುತ್ತಾರೆ.

೧೬ ಆದರೆ ಭಿಕ್ಷುವು ಯಾವಾಗಲೂ ಸಂಘದ ಸದಸ್ಯ. ಯಾವುದೇ ಸಂಘದ ಸದಸ್ಯನಲ್ಲದ ಭಿಕ್ಷುವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಭಿಕ್ಷು ಹೇಳಿದ್ದೇ ಕಾನೂನಲ್ಲ; ಅವನು ಸಂಘಕ್ಕೆ ಅಧೀನನಾಗಿದ್ದಾನೆ. ಸಂಘವು ಒಂದು ಆಧ್ಯಾತ್ಮಿಕ ಸಂಸ್ಥೆ.

## ೪. ಭಿಕ್ಷು ಮತ್ತು ಉಪಾಸಕ

೧ ಭಿಕ್ಷುವಿನ ಧಮ್ಮಕ್ಕೂ ಉಪಾಸಕ ಅಥವಾ ಸಾಮಾನ್ಯ ಜನರ ಧಮ್ಮಕ್ಕೂ ಗಮನಾರ್ಹ ವ್ಯತ್ಯಾಸವಿದೆ.

೨ ಭಿಕ್ಷು ಬ್ರಹ್ಮಚರ್ಯಕ್ಕೆ ಬದ್ಧನಾಗಿರುತ್ತಾನೆ. ಆದರೆ ಉಪಾಸಕ ಹಾಗಲ್ಲ. ಅವನು ಮದುವೆಯಾಗಬಹುದು.

೩ ಭಿಕ್ಷುವಿಗೆ ಮನೆಯಿರಕೂಡದು, ಕುಟುಂಬವಿರಕೂಡದು. ಆದರೆ ಉಪಾಸಕ ಹಾಗಲ್ಲ. ಉಪಾಸಕನಿಗೆ ಮನೆಯೂ ಇರಬಹುದು, ಕುಟುಂಬವೂ ಇರಬಹುದು.

೪ ಭಿಕ್ಷುವಿಗೆ ಆಸ್ತಿಯಿರಕೂಡದು. ಆದರೆ ಉಪಾಸಕನಿಗೆ ಆಸ್ತಿಯಿರಬಹುದು.

೫ ಭಿಕ್ಷುವು ಪ್ರಾಣಹಾನಿ ಮಾಡುವುದನ್ನು ನಿಷೇಧಿಸಲಾಗಿದೆ. ಆದರೆ ಉಪಾಸಕ ಹಾಗಲ್ಲ. ಅವನು ಮಾಡಬಹುದು.

೬ ಪಂಚಶೀಲಗಳು ಇಬ್ಬರಿಗೂ ಸಮಾನ. ಆದರೆ ಭಿಕ್ಷುವಿಗೆ ಅವು ವ್ರತಗಳು. ಅವುಗಳನ್ನು ಅವನು ದಂಡ ತೆತ್ತಲ್ಲದೆ ಎಂದೂ ಮುರಿಯುವಂತಿಲ್ಲ. ಆದರೆ ಉಪಾಸಕನಿಗೆ ಅವು ತಾನು ಪಾಲಿಸಬೇಕಾದ ನಿಯಮಗಳಷ್ಟೆ.

೭ ಭಿಕ್ಷುವು ಪಂಚಶೀಲಗಳನ್ನು ಕಡ್ಡಾಯಪೂರ್ವಕವಾಗಿ ಪಾಲಿಸಲೇಬೇಕು. ಆದರೆ ಉಪಾಸಕ ಅವುಗಳನ್ನು ಪಾಲಿಸುವುದು ಬಿಡುವುದು ಐಚ್ಛಿಕ.

೮ ಪೂಜ್ಯ ಪ್ರಭು ಇಂಥ ವ್ಯತ್ಯಾಸಗಳನ್ನೇಕೆ ಮಾಡಿದ? ಅದಕ್ಕೇನಾದರೂ ಒಂದು ಒಳ್ಳೆಯ ಕಾರಣ ಇರಬೇಕು. ಏಕೆಂದರೆ ಒಂದು ಒಳ್ಳೆಯ ಕಾರಣವಿಲ್ಲದೆ ಪೂಜ್ಯ ಪ್ರಭುವು ಏನನ್ನೂ ಮಾಡುವುದಿಲ್ಲ.

೯ ಈ ವ್ಯತ್ಯಾಸ ಮಾಡುವ ಕಾರಣವನ್ನು ಪೂಜ್ಯ ಪ್ರಭು ಎಲ್ಲಿಯೂ ಸ್ಪಷ್ಟವಾಗಿ ತಿಳಿಸಿಲ್ಲ. ಎಲ್ಲವನ್ನೂ ನಮ್ಮ ಊಹೆಗೆ (ತರ್ಕಕ್ಕೆ) ಬಿಡಲಾಗಿದೆ. ಏನೇ ಆಗಲಿ, ಈ ವ್ಯತ್ಯಾಸದ ಕಾರಣವನ್ನು ತಿಳಿಯುವುದು ಆವಶ್ಯಕ.

೧೦ ಪೂಜ್ಯ ಪ್ರಭುವು ಧರ್ಮದ ಮೂಲಕ ಭೂಮಿಯ ಮೇಲೆ ಸದಾಚಾರದ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಬಯಸಿದ ಎಂಬುದರಲ್ಲಿ ಸಂದೇಹವೇ ಇಲ್ಲ. ಅದಕ್ಕಾಗಿಯೇ ಅವನು ಧಮ್ಮವನ್ನು ಭಿಕ್ಷುಗಳಿಗೆ ಹೇಗೆ ಬೋಧಿಸಿದನೊ ಹಾಗೆ ಸಾಮಾನ್ಯರಿಗೂ ಯಾವ ಭೇದವೂ ಇಲ್ಲದೆ ಬೋಧಿಸಿದ.

೧೧ ಆದರೆ ಸಾಧಾರಣ ಜನರಿಗೆ (ಉಪಾಸಕರಿಗೆ) ಕೇವಲ ಧರ್ಮವನ್ನು ಬೋಧಿಸುವುದರಿಂದಲೇ ಸದಾಚಾರದ ಮೇಲೆ ನಿಂತ ಆದರ್ಶ ಸಮಾಜದ ಸೃಷ್ಟಿಯಾಗುವುದಿಲ್ಲ ಎಂಬುದೂ ಪೂಜ್ಯ ಪ್ರಭುವಿಗೆ ಗೊತ್ತಿತ್ತು.

೧೨ ಯಾವುದೇ ಆದರ್ಶವೂ ಅನುಷ್ಠಾನಯೋಗ್ಯವಾಗಿರಬೇಕು, ಹಾಗೂ ಅನುಷ್ಠಾನಕ್ಕೆ ತರಲು ಸಾಧ್ಯವೆಂದು ತೋರಿಸುವಂತಾಗಬೇಕು. ಆಗ ಮಾತ್ರ ಜನರು ಅದನ್ನು ಅನುಸರಿಸಲು ಹಾಗೂ ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

೧೩ ಇಂಥ ಒಂದು ಪ್ರಯತ್ನವು ಹುಟ್ಟಬೇಕಾದರೆ, ಆ ಆದರ್ಶಕ್ಕೆ ತಕ್ಕಂತೆ ಕೆಲಸ ಮಾಡುವ ಸಮಾಜದ ಚಿತ್ರ ಆವಶ್ಯಕ. ಆ ಮೂಲಕ, ನಾವು ‘ಆ ಆದರ್ಶವು ಆಚರಿಸಲು ಅಸಾಧ್ಯವಾದುದೇನಲ್ಲ, ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾದುದು’ ಎಂದು ಸಾಮಾನ್ಯ ಜನರಿಗೆ ತೋರಿಸಿ ಕೊಡಬೇಕು.

೧೪ ಸಂಘವು ಪೂಜ್ಯ ಪ್ರಭುವು ಬೋಧಿಸಿದ ಧಮ್ಮವನ್ನು ಸಾಕ್ಷಾತ್ಕಾರ ಮಾಡಿಕೊಡುವ ಒಂದು ಮಾದರಿ ಸಮಾಜ.

೧೫ ಈ ಕಾರಣದಿಂದಲೇ ಪೂಜ್ಯ ಪ್ರಭುವು ಭಿಕ್ಷು ಮತ್ತು ಉಪಾಸಕರಿಗಿರುವ ವ್ಯತ್ಯಾಸವನ್ನು ತೋರಿಸಿಕೊಟ್ಟಿದುದು.

೧೬ ಅಲ್ಲದೆ, ಇಲ್ಲಿ ಉತ್ತರಿಸಬೇಕಾದ ಮತ್ತೊಂದು ಪ್ರಶ್ನೆಯೂ ಇದೆ: ಭಿಕ್ಷುವಿನ ಕರ್ತವ್ಯವೇನು?

೧೭ ಭಿಕ್ಷುವು ತನ್ನೊಬ್ಬನ ಆತ್ಮಸಂಸ್ಕಾರಕ್ಕೆ ತನ್ನನ್ನು ಮುಡುಪಾಗಿಟ್ಟುಕೊಳ್ಳುವವನೊ ಅಥವಾ ಜನಸೇವೆ ಮಾಡಿ, ಅವರಿಗೆ ಮಾರ್ಗದರ್ಶನ ಮಾಡುವವನೊ?

೧೮ ಅವನು ಇವೆರಡು ಕಾರ್ಯಗಳನ್ನೂ ಮಾಡಬೇಕು.

೧೯ ಆತ್ಮಸಂಸ್ಕಾರ ಇಲ್ಲದೆ, ಅವನು ಮಾರ್ಗದರ್ಶನ ಮಾಡಲು ಯೋಗ್ಯವಲ್ಲ. ಅದಕ್ಕೋಸ್ಕರವಾಗಿ, ಅವನು ಪರಿಪೂರ್ಣ, ಉತ್ತಮ ಮನುಷ್ಯ, ಸದಾಚಾರಿ, ಜ್ಞಾನಿಯಾಗಿರಬೇಕು. ಇದಾಗಬೇಕಾದರೆ ಅವನು ಆತ್ಮಸಂಸ್ಕಾರ ಮಾಡಿರಬೇಕು.

೨೦ ಭಿಕ್ಷುವು ಮನೆಯನ್ನು ತ್ಯಜಿಸುತ್ತಾನೆ. ಪ್ರಪಂಚವನ್ನು ತ್ಯಾಗ ಮಾಡುವುದಿಲ್ಲ. ಯಾರು ಮನೆಗೇ ಅಂಟಿಕೊಂಡಿರುತ್ತಾರೋ ಯಾರ ಜೀವನವು ದುಃಖ, ಕಷ್ಟ ಮತ್ತು ಅಸಂತೋಷಕ್ಕೊಳಗಾಗಿರುತ್ತದೆಯೊ, ಯಾರು ಸ್ವ–ಸಹಾಯ ಮಾಡಿಕೊಳ್ಳಲು ಅಸಮರ್ಥರಿರುತ್ತಾರೊ, ಅಂಥವರ ಸೇವೆ ಮಾಡಲು ಅವಕಾಶ ಪಡೆಯುವುದಕ್ಕೋಸ್ಕರ ಅವನು ಮನೆ ಬಿಟ್ಟು ಹೋಗುತ್ತಾನೆ.

೨೧ ಧಮ್ಮದ ಸಾರವಾದ ದಯೆ ನಮ್ಮಲ್ಲಿರಬೇಕಾದರೆ, ನಾವು ಪರರನ್ನು ಪ್ರೀತಿಸಬೇಕು, ಅವರ ಸೇವೆಯನ್ನು ಮಾಡಬೇಕು. ಭಿಕ್ಷು ಇದಕ್ಕೆ ಹೊರತಲ್ಲ.

೨೨ ಒಬ್ಬ ಭಿಕ್ಷುವು ತನ್ನ ಆತ್ಮಸಂಸ್ಕಾರ ಸಾಧನೆಯಲ್ಲಿ ಎಷ್ಟೇ ಪರಿಪೂರ್ಣನಿದ್ದರೂ, ಬೇರೆಯವರ ದುಃಖದ ಕಡೆಗೆ ಅವನು ಅಲಕ್ಷ್ಯ ತೋರಿಸಿದರೆ, ಅವನು ಭಿಕ್ಷುವೇ ಅಲ್ಲ. ಅವನು ಮತ್ತೇನಾದರೂ ಆಗಿರಬಹುದು. ಭಿಕ್ಷುವಂತೂ ಅಲ್ಲ.

# ಭಾಗ : ೩
# ಭಿಕ್ಷುವಿನ ಕರ್ತವ್ಯಗಳು

೧. ಪರಿವರ್ತಿಸುವುದು ಭಿಕ್ಷುವಿನ ಕರ್ತವ್ಯ
೨. ಪವಾಡಗಳ ಮೂಲಕ ಪರಿವರ್ತನೆ ಸಲ್ಲದು
೩. ಬಲಪ್ರಯೋಗದಿಂದ ಪರಿವರ್ತನೆ ಸಲ್ಲದು
೪. ಧರ್ಮ ಪ್ರಚಾರ ಮಾಡಲು ಭಿಕ್ಷು ಹೋರಾಡಬೇಕು

## ೧. ಪರಿವರ್ತಿಸುವುದು ಭಿಕ್ಷುವಿನ ಕರ್ತವ್ಯ

೧. ಯಶ ಮತ್ತು ಅವನ ನಾಲ್ವರು ಸ್ನೇಹಿತರು ಧಮ್ಮಕ್ಕೆ ಪರಿವರ್ತಿತರಾದ ಸುದ್ದಿ ಎಲ್ಲ ಕಡೆಗೂ ಹಬ್ಬಿತು. ಇದರ ಪರಿಣಾಮವಾಗಿ ರಾಜ್ಯದಲ್ಲಿದ್ದ ಪ್ರತಿಷ್ಠಿತ ಕುಟುಂಬಗಳಿಗೂ ಅವರ ಕೆಳಗಿನ ಕುಟುಂಬಗಳಿಗೂ ಸೇರಿದ ಸಾಧಾರಣ ಜನರು ಮಹಾತ್ಮನ ತತ್ತ್ವಬೋಧನೆಗಾಗಿಯೂ, ಅವನ ಮತ್ತು ಅವನ ಧಮ್ಮದ ಆಶ್ರಯ ಪಡೆಯುವುದಕ್ಕಾಗಿಯೂ ಅವನ ಬಳಿ ಬಂದರು.

೨. ಧಮ್ಮದ ಬೋಧನೆ ಪಡೆಯಲು ಅನೇಕರು ಅವರ ಬಳಿ ಬರುತ್ತಿದ್ದರು. ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಉಪದೇಶ ನೀಡುವುದು ಕಷ್ಟ ಎಂಬುದು ಅವನಿಗೆ ಗೊತ್ತಿತ್ತು. ದಿನೇದಿನೇ ಬರುತ್ತಿದ್ದ ಪರಿವ್ರಾಜಕರ ಸಂಖ್ಯೆ ಹೆಚ್ಚಾಗುತ್ತಿದ್ದುದರಿಂದ ಅವರನ್ನು ಕೂಡಿಸಿ ಒಂದು ಧಾರ್ಮಿಕ ಸಂಘಟನೆ ಮಾಡಬೇಕು, ಅದನ್ನು ಸಂಘವೆಂದು ಕರೆಯಬೇಕು, ಎಂಬುದರ ಅವಶ್ಯಕತೆ ಸಹ ಅವನಿಗೆ ಉಂಟಾಯಿತು.

೩. ಅದರಂತೆ, ಅವನು ಪರಿವ್ರಾಜಕರನ್ನು ಸಂಘದ ಸದಸ್ಯರನ್ನಾಗಿ ಮಾಡಿದನಲ್ಲದೆ, ವಿನಯಗಳೆಂದು ಕರೆಯಲಾಗುವ ನಿಯಮಗಳನ್ನು ರೂಪಿಸಿ, ಸಂಘದ ಸದಸ್ಯರು ಅದಕ್ಕೆ ಬದ್ಧರಾಗುವಂತೆ ಮಾಡಿದ.

೪. ಆಮೇಲೆ, ಪೂಜ್ಯಪ್ರಭುವು, ಶಿಷ್ಯನು ಭಿಕ್ಷುವಾಗುವ ಮೊದಲು ಎರಡು ಹಂತದ ಶಿಕ್ಷಣ ಪಡೆಯಬೇಕೆಂದು ವಿಧಿಸಿದನು. ಮೊದಲು ಶಿಷ್ಯನು ಪರಿವ್ರಾಜಕನಾಗಬೇಕು, ಭಿಕ್ಷುವೊಬ್ಬನ ಸಂಗಡ, ಕೆಲವು ವರ್ಷಗಳವರೆಗೆ ಪರಿವ್ರಾಜಕನಾಗೇ ಉಳಿಯಬೇಕು ಹಾಗೂ ಅವನ ಜೊತೆಯಲ್ಲಿದ್ದುಕೊಂಡೇ ಅವನಿಂದ ಶಿಕ್ಷಣ ಪಡೆಯಬೇಕು. ಅವನ ಶಿಕ್ಷಣದ ಅವಧಿ ಮುಗಿದನಂತರ, ಉಪಸಂಪದಕ್ಕೆ ತಾನು ಯೋಗ್ಯನೆಂದು ನಿರ್ಣಯಿಸುವ ಪರೀಕ್ಷಕರ ಸಮಿತಿಯನ್ನು ಅವನು ತೃಪ್ತಿಪಡಿಸಿದರೆ, ಅವನು ಉಪಸಂಪದವನ್ನು ಪಡೆಯಲು ಅನುಮತಿ ಪಡೆಯುತ್ತಾನೆ. ಆಗ ಮಾತ್ರ ಅವನನ್ನು ಭಿಕ್ಷುವಾಗಲು ಹಾಗೂ ಸಂಘದ ಸದಸ್ಯನಾಗಲು ಅವಕಾಶ ನೀಡಲಾಗುತ್ತದೆ.

೫. ಅಂಥ ಏರ್ಪಾಡುಗಳನ್ನು ಮಾಡಲು ಧರ್ಮದ ಪ್ರಾಥಮಿಕ ಹಂತಗಳಲ್ಲಿ ಕಾಲಾವಕಾಶವಿರುತ್ತಿರಲಿಲ್ಲ. ಆದುದರಿಂದ, ಪ್ರಭುವು ಅವರನ್ನೂ ಭಿಕ್ಷುಗಳನ್ನಾಗಿ ಮಾಡಿ, ಎಲ್ಲ ಕಡೆಯಲ್ಲೂ ತನ್ನ ಧಮ್ಮವನ್ನು ಪ್ರಚಾರ ಮಾಡಲು ಅವರನ್ನು ಧರ್ಮಪ್ರಚಾರಕರಂತೆ ಕಳಿಸಿಕೊಡುತ್ತಿದ್ದ.

೬. ಅವರನ್ನು ಹೊರಗೆ ಕಳಿಸಿಕೊಡುವ ಮುನ್ನ ಪೂಜ್ಯನು ಭಿಕ್ಷುಗಳಿಗೆ ಹೀಗೆ ಹೇಳುತ್ತಿದ್ದ: 'ಓ, ಭಿಕ್ಷುಗಳೇ! ನಾನು ಮಾನುಷ ಮತ್ತು ದೈವೀಬಂಧನಗಳೆಲ್ಲದರಿಂದ ಮುಕ್ತನಾಗಿದ್ದೇನೆ. ಈಗ ಹೋಗಿ, ಹಲವರ ಲಾಭಕ್ಕಾಗಿ, ಹಲವರ ಕಲ್ಯಾಣಕ್ಕಾಗಿ, ಪ್ರಚಂಚದ ಬಗೆಗೆ ಅನುಕಂಪ ತೋರಿಸುತ್ತಾ, ಓಡಾಡಿರಿ; ದೇವತೆಗಳ ಮತ್ತು ಮಾನವರ ಒಳಿತಿಗಾಗಿ, ಲಾಭಕ್ಕಾಗಿ, ಕಲ್ಯಾಣಕ್ಕಾಗಿ ಸಂಚರಿಸಿರಿ.

೭. "ನಿಮ್ಮಲ್ಲಿ ಯಾರೇ ಇಬ್ಬರು ಒಂದೇ ದಾರಿಯಲ್ಲಿ ಹೋಗಬೇಡಿ. ಭಿಕ್ಷುಗಳೇ, ಆದಿಯಲ್ಲಿ ಉತ್ತಮವಾದ, ಮಧ್ಯದಲ್ಲಿ ಉತ್ತಮವಾದ, ಅಂತ್ಯದಲ್ಲಿ ಉತ್ತಮವಾದ ತತ್ತ್ವವನ್ನು – ಇಂಗಿತ ಮತ್ತು ಶಬ್ದಾರ್ಥ ಎರಡರಲ್ಲೂ ಬೋಧಿಸಿರಿ; ಉನ್ನತ ಮಟ್ಟದ, ಪರಿಪೂರ್ಣವಾದ, ಪಾವಿತ್ರ್ಯದ ಶುದ್ಧಜೀವನವನ್ನು ಬೋಧಿಸಿ.

೮. "ಪ್ರತಿಯೊಂದು ದೇಶದೊಳಕ್ಕೆ ಹೋಗಿ, ಇನ್ನೂ ಪರಿವರ್ತಿತರಾಗದವರನ್ನು ಪರಿವರ್ತಿಸಿ; ದುಃಖದಿಂದ ಸುಟ್ಟುಹೋಗಿರುವ ಪ್ರಪಂಚದ ಎಲ್ಲ ಕಡೆಗೂ ಹೋಗಿ ಉಪದೇಶಿಸಿ; ಸದ್ಬೋಧನೆಯಿಲ್ಲದವರಿಗೆ ಬೋಧನೆ ನೀಡಿ.

೯. "ಎಲ್ಲೆಲ್ಲಿ ಮಹರ್ಷಿಗಳೂ ರಾಜರ್ಷಿಗಳೂ ಬ್ರಹ್ಮರ್ಷಿಗಳೂ ಇದ್ದಾರೋ, ಎಲ್ಲಿ ಅವರು ತಮ್ಮ ತತ್ತ್ವದ ಮೂಲಕ ಜನರ ಮೇಲೆ ಪ್ರಭಾವ ಬೀರುತ್ತಾರೋ, ಅಲ್ಲಿಗೂ ಹೋಗಿ.

೧೦. "ಆದುದರಿಂದ, ಪ್ರತಿಯೊಬ್ಬರೂ ತಂತಮ್ಮ ಏರ್ಪಾಟು ಮಾಡಿಕೊಂಡು ಪಯಣಿಸಿ; ದಯಾಪೂರ್ವಕವಾಗಿ ಹೋಗಿ! ಅವರನ್ನು ಕಾಪಾಡಿ ಸ್ವೀಕರಿಸಿ!"

೧೧. ಪೂಜ್ಯ ಪ್ರಭು, ಅವರಿಗೆ ಮುಂದುವರಿದು ಹೇಳಿದ:

೧೨. "ಧಮ್ಮದಾನವು ಎಲ್ಲ ದಾನಗಳಿಗಿಂತ ಮೇಲು; ಧಮ್ಮದ ಸಿಹಿಯು ಎಲ್ಲ ಸಿಹಿಗಳಿಗಿಂತ ಮೇಲು; ಧಮ್ಮ ಕೊಡುವ ಆನಂದ, ಎಲ್ಲ ಆನಂದಕ್ಕಿಂತ ಮೇಲು;

೧೩. "ಹೊಲಗಳು ಕಳೆಯಿಂದ ಹಾಳಾಗುತ್ತವೆ; ಮನುಕುಲವು ವ್ಯಾಮೋಹದಿಂದ ಹಾಳಾಗುತ್ತದೆ; ಆದುದರಿಂದ ಧಮ್ಮದಾನವು ದೊಡ್ಡ ಲಾಭವನ್ನುಂಟುಮಾಡುತ್ತದೆ.

೧೪. "ಹೊಲಗಳು ಕಳೆಯಿಂದ ಹಾಳಾಗುತ್ತವೆ; ಮನುಕುಲವು ದ್ವೇಷದಿಂದ ಹಾಳಾಗುತ್ತದೆ; ಆದುದರಿಂದ ಧಮ್ಮದಾನವು ದೊಡ್ಡ ಲಾಭವನ್ನುಂಟುಮಾಡುತ್ತದೆ.

೧೫. "ಹೊಲಗಳು ಕಳೆಯಿಂದ ಹಾಳಾಗುತ್ತವೆ; ಮನುಕುಲವು ಜಂಭದಿಂದ ಹಾಳಾಗುತ್ತದೆ; ಆದುದರಿಂದ, ಧಮ್ಮಧಾನವು ದೊಡ್ಡ ಲಾಭವನ್ನುಂಟುಮಾಡುತ್ತದೆ.

೧೬. "ಹೊಲಗಳು ಕಳೆಯಿಂದ ಹಾಳಾಗುತ್ತವೆ; ಮನುಕುಲವು ಕಾಮದಿಂದ ಹಾಳಾಗುತ್ತದೆ. ಆದುದರಿಂದ ಧಮ್ಮದಾನವು ದೊಡ್ಡ ಲಾಭವನ್ನುಂಟುಮಾಡುತ್ತದೆ."

೧೭. ಆಗ ಧಮ್ಮ ಪ್ರಚಾರಕ್ಕೆ ಅಪ್ಪಣೆ ಪಡೆದ ಅರವತ್ತು ಭಿಕ್ಷುಗಳು ಎಲ್ಲ ದೇಶಗಳಲ್ಲಿಯೂ ಸಂಚರಿಸಿದರು.

೧೮. ಪ್ರಭುವು ಪರಿವರ್ತನೆ ವಿಷಯದಲ್ಲಿ ಅವರಿಗೆ ಇನ್ನೂ ಹೆಚ್ಚಿನ ಉಪದೇಶ ಕೊಟ್ಟನು.

## ೨. ಪವಾಡಗಳ ಮೂಲಕ ಪರಿವರ್ತನೆ ಸಲ್ಲದು

೧. ಒಮ್ಮೆ ಮಹಾತ್ಮನು ಮಲ್ಲರೊಡನೆ, ಅವರ ಊರುಗಳಲ್ಲಿ ಒಂದಾದ ಅನಪೀಯದಲ್ಲಿ ಉಳಿದುಕೊಂಡಿದ್ದ.

೨. ಒಂದು ದಿನ ಮಹಾತ್ಮನು ವಸ್ತ್ರ ಧರಿಸಿ, ಮೇಲುವಸ್ತ್ರ ಹೊದೆದುಕೊಂಡು, ಭಿಕ್ಷಾಪಾತ್ರೆ ಹಿಡಿದುಕೊಂಡು, ಭಿಕ್ಷೆಗೆಂದು ಆ ಊರನ್ನು ಪ್ರವೇಶಿಸಿದನು.

೩. ಆಗ ಮಹಾತ್ಮನು ಹೀಗೆ ಯೋಚಿಸಿದನು: "ಅನ್ನಪೇಯಕ್ಕೆ ಭಿಕ್ಷಾಟನೆಗೆಂದು ಈಗಲೇ ಹೊರಟಿರುವುದು ಬಹಳ ಮುಂಚೆಯೇ ಹೊರಟಂತೆ. ಅದರ ಬದಲು ಪರ್ಯಟಕ ಭಾರ್ಗವ ಇರುವ ವಿಹಾರಕ್ಕೆ ಹೋಗಿ, ಅವನನ್ನು ಕಾಣುವುದು ಒಳಿತು."

೪. ಅಂತೆಯೇ ಮಹಾತ್ಮನು ವಿಹಾರಕ್ಕೆ ಹೋಗಿ, ಭಾರ್ಗವ ಇದ್ದ ಸ್ಥಳಕ್ಕೆ ಬಂದನು.

೫. ಆಗ ಭಾರ್ಗವನು ಮಹಾತ್ಮನಿಗೆ ಹೀಗೆಂದನು: "ಪ್ರಭುಗಳು ಇತ್ತ ದಯಮಾಡಿಸಲಿ. ಮಹಾತ್ಮರಿಗೆ ಸುಸ್ವಾಗತ! ಬಹಳ ಕಾಲದ ನಂತರ ನಮ್ಮ ಸ್ಥಳಕ್ಕೆ ತಾವು ಬರುವ ಅವಕಾಶವನ್ನು ಕಲ್ಪಿಸಿಕೊಂಡಿದ್ದೀರಿ.

ಸ್ವಾಮಿ! ದಯವಿಟ್ಟು ಕುಳಿತುಕೊಳ್ಳಿ. ಇಲ್ಲೊಂದು ಆಸನ ಸಿದ್ಧವಾಗಿದೆ."

೬. ಅದರ ಮೇಲೆ ಮಹಾತ್ಮನು ಕುಳಿತ ಮೇಲೆ ಭಾರ್ಗವನು ಅವನ ಪಕ್ಕದಲ್ಲಿ ಒಂದು ಗಿಡ್ಡ ಆಸನದ ಮೇಲೆ ಕುಳಿತನು. ಹಾಗೆ ಕುಳಿತಮೇಲೆ, ಪರ್ಯಟನಕಾರ ಭಾರ್ಗವ ಮಹಾತ್ಮನಿಗೆ ಹೀಗೆಂದನು :

೭. "ಸ್ವಲ್ಪ ದಿನಗಳ ಹಿಂದೆ ಲಿಚ್ಛವಿ ವಂಶದ ಸುನತ್ತನು ನನ್ನನ್ನು ಭೇಟಿ ಮಾಡಿ ಹೀಗೆ ಹೇಳಿದನು: 'ಭಾರ್ಗವ, ನಾನು ಮಹಾತ್ಮನನ್ನು ಬಿಟ್ಟಿದ್ದೇನೆ. ಈಗ ನಾನು ಅವನ ಕೈಕೆಳಗಿನ ಶಿಷ್ಯನಾಗಿ ಉಳಿದಿಲ್ಲ' ವಿಷಯ ನಿಜವಾಗಿಯೂ ಹೀಗಿದೆಯೇ?"

೮. "ಮಹಾತ್ಮ, ಲಿಚ್ಛವಿಯ ಸುನಕ್ಷತ್ರ ಹೇಳಿದಂತೆ, ಅದು ನಿಜವೇ?"

೯. "ಭಾರ್ಗವ, ಕೆಲವು ದಿನಗಳ ಹಿಂದೆ, ಲಿಚ್ಛವಿಯ ಸುನಕ್ಷತ್ರನು ನನ್ನನ್ನು ಭೇಟಿ ಮಾಡಿ ಹೀಗೆಂದನು: 'ಸ್ವಾಮಿ, ನಾನು ಈಗ ಮಹಾತ್ಮರನ್ನು ಬಿಡುತ್ತೇನೆ. ಇನ್ನು ಮೇಲೆ ನಾನೆಂದೂ ತಮ್ಮ ಕೈಕೆಳಗಿನ ಶಿಷ್ಯನಾಗಿ ಉಳಿಯುವುದಿಲ್ಲ.' ಇದನ್ನು ಅವನು ತಿಳಿಸಿದಾಗ ನಾನೆಂದೆ: 'ಆದರೆ, ಸುನಕ್ಷತ್ತಾ, ನಾನೆಂದಾದರೂ ನಿನಗೆ 'ಸುನಕ್ಷತ್ರ, ನನ್ನ ಕೈಕೆಳಗಿನ ಶಿಷ್ಯನಾಗಿರು' ಎಂದು ಕೇಳಿದ್ದೇನೆಯೆ?'

೧೦. 'ಇಲ್ಲ ಸ್ವಾಮಿ, ತಾವೆಂದೂ ಹಾಗೆ ಕೇಳಿಲ್ಲ' ಎಂದ ಸುನಕ್ಷತ್ತ.

೧೧. ಅಥವಾ 'ನೀನೇ ಎಂದಾದರೂ ನನಗೆ 'ನಾನು ನಿಮ್ಮ ಕೈಕೆಳಗಿನ ಶಿಷ್ಯನಾಗಿ ಉಳಿಯುತ್ತೇನೆ' ಎಂದು ಹೇಳಿದ್ದೀಯಾ'.

೧೨. 'ಇಲ್ಲ ಸ್ವಾಮಿ', ನಾನೆಂದೂ ಹಾಗೆ ಹೇಳಿಲ್ಲ' ಎಂದ ಸುನಕ್ಷತ್ತ.

೧೩. 'ಈಗ, ಹೇಳು, ನಾನೂ ಹಾಗೆ ಹೇಳಿಲ್ಲವೆಂದ ಮೇಲೆ, ಮತ್ತು ನೀನೂ ಹಾಗೆ ಹೇಳಿಲ್ಲವೆಂದಮೇಲೆ ನನ್ನನ್ನು ಬಿಡುವ ಮಾತೇಕೆ ನಾವಾಡಬೇಕು?'

೧೪. 'ಹೌದು, ಪ್ರಭು. ಆದರೆ ಸಾಧಾರಣ ಜನರ ಶಿಸ್ತಿಗಿಂತ ಹೆಚ್ಚಿನ ನಿಗೂಢ ಅದ್ಭುತಗಳನ್ನು ಪ್ರಭುಗಳು ನನಗೆ ಮಾಡಿ ತೋರಿಸಿಲ್ಲ.'

೧೫. 'ಆದರೆ ಸುನಕ್ಷತ್ರ, ನಾನೆಂದಾದರೂ ನಿನಗೆ 'ಬಾ ಸುನಕ್ಕತ್ತಾ, ನನ್ನನ್ನು ಗುರುವಾಗಿ ಸ್ವೀಕರಿಸು, ಸಾಧಾರಣ ಜನರ ಶಕ್ತಿಗೆ ಮೀರಿದ ನಿಗೂಢ ಅದ್ಭುತಗಳನ್ನು ನಿನಗೆ ಮಾಡಿ ತೋರಿಸುತ್ತೇನೆ' ಎಂದು ಎಂದಾದರೂ ಹೇಳಿದ್ದೇನೆಯೇ?'

೧೬. 'ಇಲ್ಲ ಪ್ರಭು, ತಾವು ಹೇಳಿಲ್ಲ.'

೧೭. 'ಅಥವಾ ನೀನೇ 'ಪ್ರಭು, ನಾನು ತಮ್ಮನ್ನು ಗುರುವಾಗಿ ಸ್ವೀಕರಿಸುತ್ತೇನೆ. ಏಕೆಂದರೆ, ತಾವು ಸಾಧಾರಣ ಜನರ ಶಕ್ತಿಗೆ ಮೀರಿದ ನಿಗೂಢ ಅದ್ಭುತಗಳನ್ನು ನನಗೆ ಮಾಡಿ ತೋರಿಸುವಿರಿ' ಎಂದು ನನಗೆ ಎಂದಾದರು ಹೇಳಿದ್ದೀಯ?'

೧೮. 'ಇಲ್ಲ ಪ್ರಭು.'

೧೯. 'ಈಗ ಹೇಳು, ನಾನೂ ಹಾಗೆ ಹೇಳಿಲ್ಲವೆಂದ ಮೇಲೆ, ಮತ್ತು ನೀನೂ ಹಾಗೆ ಹೇಳಿಲ್ಲವೆಂದ ಮೇಲೆ ಮೂರ್ಖ ಮನುಷ್ಯ, ನಾವು ಬಿಡುವ ಮಾತನ್ನೇಕೆ ಆಡಬೇಕು? ಸುನಕ್ಷತ್ತಾ, ಈ ಬಗ್ಗೆ ನಿನ್ನ ಅಭಿಪ್ರಾಯವೇನು?'

೨೦. 'ಸಾಧಾರಣ ಜನರ ಶಕ್ತಿಗೆ ಮೀರಿದ ನಿಗೂಢ ಅದ್ಭುತಗಳನ್ನು ಮಾಡಿ ತೋರಿಸಲಿ ಬಿಡಲಿ, ನಾನು ಧಮ್ಮವನ್ನು ಬೋಧಿಸುವುದು ಜನರು ಮಾಡಿದ ಪಾಪವನ್ನು ನಾಶಮಾಡುವ ಉದ್ದೇಶಕ್ಕಾಗಿ ತಾನೇ?'

೨೧. 'ಅದ್ಭುತ ಪವಾಡಗಳನ್ನು ಮಾಡಲಿ ಬಿಡಲಿ, ಮಹಾತ್ಮರು ಧಮ್ಮವನ್ನು ಬೋಧಿಸುವುದು ನಿಜವಾಗಿಯೂ

ಈ ಉದ್ದೇಶಕ್ಕಾಗಿಯೇ'.

೨೨. "ಆದರೆ, ಭಾಗ್ಗವ, ಸುನಕ್ಷತ್ರನು ಮತ್ತೆ 'ಮಹಾತ್ಮರು ನನಗೆ ಸೃಷ್ಟಿಯ ರಹಸ್ಯವನ್ನು ತಿಳಿಸಲಿಲ್ಲ' ಎಂದನು.

೨೩. 'ಆದರೆ 'ಸುನಕ್ಖತ್ತಾ ನಾನೆಂದಾದರೂ ನಿನಗೆ, ಸುನಕ್ಖತ್ತಾ ಬಾ, ನೀನು ನನ್ನ ಶಿಷ್ಯನಾಗಿರು, ನಿನಗೆ ಸೃಷ್ಟಿಯ ರಹಸ್ಯವನ್ನು ತಿಳಿಸಿಕೊಡುತ್ತೇನೆ, ಎಂದು ಹೇಳಿದ್ದೇನೆಯೇ?'

೨೪. 'ಇಲ್ಲ ಪ್ರಭು, ತಾವು ಹಾಗೆಂದಿಲ್ಲ'

೨೫. 'ಅಥವಾ ನೀನೇ ನನಗೆ ಎಂದಾದರೂ, ನಾನು ಮಹಾತ್ಮರ ಶಿಷ್ಯನಾಗುತ್ತೇನೆ. ಏಕೆಂದರೆ ಅವರು ನನಗೆ ಸೃಷ್ಟಿಯ ರಹಸ್ಯವನ್ನು ಬೋಧಿಸುತ್ತಾರೆ, ಎಂದು ಹೇಳಿದ್ದೀಯಾ?'

೨೬. 'ಇಲ್ಲ ಪ್ರಭು, ನಾನೆಂದೂ ಹಾಗೆ ಹೇಳಿಲ್ಲ.'

೨೭. 'ಆದರೆ ನಾನೂ ಹಾಗೆ ಹೇಳಿಲ್ಲ ಮತ್ತು ನೀನೂ ಹಾಗೆ ಹೇಳಿಲ್ಲವೆಂದ ಮೇಲೆ, ಮೂರ್ಖ ಮಾನವಾ, ನಾವು ಬಿಡುವ ಮಾತನ್ನೇಕೆ ಆಡಬೇಕು? ಏನು ಸುನಕ್ಷತ್ರ? ಸೃಷ್ಟಿಯ ರಹಸ್ಯವನ್ನು ನಾನು ಬೋಧಿಸಲಿ ಬಿಡಲಿ ಪಾಪಿಯ ಎಲ್ಲ ಪಾಪಗಳನ್ನೂ ಪೂರ್ಣ ನಾಶಮಾಡುವ ಉದ್ದೇಶದಿಂದ ನಾನು ಧಮ್ಮವನ್ನು ಬೋಧಿಸುತ್ತಿದ್ದೇನೆಯೊ ಇಲ್ಲವೊ?'

೨೮. 'ಪ್ರಭು ತಾವು ಆ ರಹಸ್ಯಗಳನ್ನು ತಿಳಿಸಲಿ, ಬಿಡಲಿ, ತಾವು ಧಮ್ಮವನ್ನು ಬೋಧಿಸುವುದು ಮಾತ್ರ ಆ ಉದ್ದೇಶದಿಂದಲೇ.'

೨೯. 'ಹಾಗಾದರೆ, ಸುನಕ್ಷತ್ರ, ಆ ಉದ್ದೇಶವನ್ನು ಸಾಧಿಸಿಕೊಳ್ಳಲು ಸೃಷ್ಟಿಯ ರಹಸ್ಯವನ್ನು ತಿಳಿದುಕೊಳ್ಳುವುದು, ಬಿಡುವುದು ಮುಖ್ಯವಲ್ಲ; ಸೃಷ್ಟಿಯ ರಹಸ್ಯವನ್ನು ತಿಳಿದುಕೊಳ್ಳುವುದರಿಂದ ನಿನಗೆ ಯಾವ ಪ್ರಯೋಜನವಿದೆ?'

೩೦. "ಸುನಕ್ಷತ್ರ, ನೀನು ವೃದ್ಧೀನರ ಜೊತೆ ಮಾತನಾಡುವಾಗ ನನ್ನನ್ನು ಅನೇಕ ರೀತಿ ಹೊಗಳಿದ್ದೀಯ.

೩೧. 'ಸುನಕ್ಷತ್ರ, ನೀನು ವೃದ್ಧೀನರ ಜೊತೆ ಮಾತನಾಡುವಾಗ ಧಮ್ಮವನ್ನು ಅನೇಕ ರೀತಿ ಹೊಗಳಿದ್ದೀಯ.

೩೨. 'ಸುನಕ್ಷತ್ರ, ನೀನು ವೃದ್ಧೀನರ ಜೊತೆ ಮಾತನಾಡುವಾಗ ಸಂಘವನ್ನು ಅನೇಕ ರೀತಿ ಹೊಗಳಿದ್ದೀಯ.

೩೩. 'ಸುನಕ್ಷತ್ರ, ಈಗ ನಿನಗೆ ತಿಳಿಸಿಕೊಡುತ್ತೇನೆ; ನಿನ್ನ ಬಗ್ಗೆ ಜನರು ಮುಂದೆ ಹೀಗೆ ಮಾತಾಡಿಕೊಳ್ಳುತ್ತಾರೆ: 'ಗೌತಮ ಸಂನ್ಯಾಸಿಯ ಕೈಕೆಳಗೆ ಲಿಚ್ಛವಿಯ ಸುನಕ್ಷತ್ರ ಪವಿತ್ರ ಜೀವನ ನಡೆಸಲಾರದಾದನು; ಹೀಗೆ ಅದಕ್ಕೆ ಅಂಟಿಕೊಳ್ಳಲಾಗದೆ, ಆ ಸಾಧನೆಯನ್ನು ಬಿಟ್ಟು ಕೀಳು ವಸ್ತುಗಳ ಕಡೆಗೆ ತಿರುಗಿದ್ದಾನೆ.'

೩೪. "ಭಾರ್ಗವ, ನಾನು ಹೀಗೆ ಹೇಳಿದುದನ್ನು ಲಿಚ್ಛವಿ ವಂಶದ ಸುನಕ್ಷತ್ರನು ಕೇಳಿ, ನಾನು ಬೋಧಿಸುವ ತತ್ತ್ವ ಮತ್ತು ಶಿಕ್ಷಣವನ್ನು ಬಿಟ್ಟು, ಸರ್ವನಾಶದ ಕಡೆಗೆ ಹೋಗುವವನಂತೆ ಹೊರಟುಹೋದನು".–

೩೫. ಇದಾದ ಸ್ವಲ್ಪ ಸಮಯದ ನಂತರ ಬುದ್ಧನ ತತ್ತ್ವ ಮತ್ತು ಆಚಾರವನ್ನು ಬಿಟ್ಟು ಹೋದ ಸುನಕ್ಷತ್ರನು 'ಬುದ್ಧನು ಪಡೆದಿರುವ ದಿವ್ಯ ಜ್ಞಾನ ಮತ್ತು ಅತಿಶಯ ವಿವೇಕದಲ್ಲಿ ಮಾನವಾತೀತ ಅಂಶವೇನೂ ಇಲ್ಲ; ಅದು ಅವನ ಸ್ವಂತ ವಿಚಾರಶಕ್ತಿಯು ಬಹಳ ಕಷ್ಟಪಟ್ಟು ರೂಪಿಸಿದ ತತ್ತ್ವ, ಅದು ಅವನ ಸ್ವಂತ ಸಂಶೋಧನೆ; ತನಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಬುದ್ಧನ ಉಪದೇಶವನ್ನು ಕೇಳಿಸಿಕೊಂಡ ಯಾರೇ ಆಗಲಿ, ಅದಕ್ಕೆ ತಕ್ಕಂತೆ ನಡೆದುಕೊಂಡು ತನ್ನ ದುಃಖವನ್ನು ಕೊನೆಗಾಣಿಸಿಕೊಳ್ಳಬೇಕು' ಎಂದು ಸಿಕ್ಕಿದವರಿಗೆಲ್ಲ ಹೇಳತೊಡಗಿದ.

೩೬. ಸುನಕ್ಷತ್ರನು ಹೀಗೆ ಬುದ್ಧನ ಬಗ್ಗೆ ಚಾಡಿ ಹೇಳುತ್ತಿದ್ದರೂ, ಜನರಿಗೆ ಅವನು ಹೇಳುತ್ತಿದ್ದುದು

ಸತ್ಯವಾಗಿತ್ತು. ಏಕೆಂದರೆ, ಬುದ್ಧನು ತನ್ನ ತತ್ತ್ವಪ್ರಸಾರ ಮಾಡಲು ಅತಿಮಾನುಷವಾದ ಅಥವಾ ಪವಾಡಸದೃಶವಾದ ಏನನ್ನೂ ಮಾಡಲಿಲ್ಲ.

## ೩. ಬಲಪ್ರಯೋಗದಿಂದ ಪರಿವರ್ತನೆ ಸಲ್ಲದು

೧. ಒಂದು ಸಾರಿ ಪೂಜ್ಯನು ತನ್ನ ಅನೇಕ–ಸುಮಾರು ಐನೂರು ಜನ–ಭಿಕ್ಷು ಸೋದರರೊಡನೆ ರಾಜಗೃಹ ಮತ್ತು ನಲಂದಾ ನಡುವಿನ ಮಹಾಮಾರ್ಗದಲ್ಲಿ ಹೋಗುತ್ತಿದ್ದನು.

೨. ಅದೇ ಸಮಯದಲ್ಲಿ ಸುಪ್ಪಿಯ ಎಂಬ ಸಂನ್ಯಾಸಿಯು ಬುದ್ಧನ ಬಗ್ಗೆಯೂ, ಧಮ್ಮದ ಬಗ್ಗೆಯೂ, ಸಂಘದ ಬಗ್ಗೆಯೂ ಅನೇಕ ರೀತಿಯ ಅಪಪ್ರಚಾರ ಮಾಡುತ್ತಿದ್ದನು. ಆದರೆ ಅವನ ಕಿರಿಯ ಶಿಷ್ಯನಾದ ಬ್ರಹ್ಮದತ್ತನು ಬುದ್ಧನ ಬಗ್ಗೆಯೂ, ಅವನ ಧಮ್ಮದ ಬಗ್ಗೆಯೂ, ಸಂಘದ ಬಗ್ಗೆಯೂ ಅನೇಕ ರೀತಿಯಲ್ಲಿ ಪ್ರಶಂಸೆ ಮಾಡುತ್ತಿದ್ದನು.

೩. ಹೀಗೆ, ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ಹೊಂದಿದ್ದ ಈ ಗುರು–ಶಿಷ್ಯರಿಬ್ಬರೂ ಬುದ್ಧ ಮತ್ತು ಅವನ ಅನುಯಾಯಿಗಳು ಹೋದೆಡೆಯಲ್ಲೆಲ್ಲಾ ಅವರನ್ನು ಅವರ ಹೆಜ್ಜೆಯ ಮೇಲೆಯೇ ಅನುಸರಿಸಿಕೊಂಡು ಹೋದರು.

೪. ಪೂಜ್ಯನೂ ಅವನ ಶಿಷ್ಯರ ಗುಂಪೂ ರಾತ್ರಿ ಕಳೆಯಲೋಸ್ಕರ ಅಂಬಲತ್ಥಿಕಾ ವಿಹಾರದ ರಾಜಛತ್ರದಲ್ಲಿ ಉಳಿದುಕೊಂಡರು. ಸುಪ್ಪಿಯ ಮತ್ತು ಅವನ ಕಿರಿಯ ಶಿಷ್ಯ ಬ್ರಹ್ಮದತ್ತ ಸಹ ಹಾಗೇ ಮಾಡಿದರು. ಛತ್ರದಲ್ಲಿಯೂ ಸಹ ಆ ಇಬ್ಬರು ಅದೇ ಚರ್ಚೆಯಲ್ಲಿ ತೊಡಗಿದರು.

೫. ಹೊತ್ತಿಗೆ ಮುಂಚೆ ಎದ್ದ ಬುದ್ಧನ ಅನೇಕ ಅನುಯಾಯಿಗಳು ಮೈದಾನದಲ್ಲಿ ಸೇರತೊಡಗಿದರು ಮತ್ತು ಅವರು ಚರ್ಚೆಗೆ ತೆಗೆದುಕೊಂಡ ವಿಷಯವೆಂದರೆ, ಸುಪ್ಪಿಯ ಮತ್ತು ಬ್ರಹ್ಮದತ್ತರ ನಡುವೆ ನಡೆದ ಸಂಭಾಷಣೆ.

೬. ಆಗ, ಅವರ ಮಾತು ಯಾವ ಕಡೆಗೆ ಹರಿಯುತ್ತಿತ್ತು ಎಂಬುದನ್ನು ಗಮನಿಸಿದ ಪೂಜ್ಯನು ಮೈದಾನಕ್ಕೆ ಹೋಗಿ ಮೊದಲೇ ತನಗಾಗಿ ಹಾಸಿದ್ದ ಚಾಪೆಯ ಮೇಲೆ ಕುಳಿತನು. ಹಾಗೆ ಕುಳಿತನಂತರ ಅವನು ಹೀಗೆ ಹೇಳಿದ: "ಯಾವುದನ್ನು ಕುರಿತು ಮಾತಾಡಲು ಇಲ್ಲಿ ಕುಳಿತಿದ್ದೀರಿ? ನಿಮ್ಮ ಸಂಭಾಷಣೆಯ ವಿಷಯ ಏನನ್ನು ಕುರಿತಿದೆ?" ಆಗ ಅವರು ಎಲ್ಲವನ್ನೂ ಹೇಳಿದರು. ಆಗ ಪೂಜ್ಯನು ಹೇಳಿದ:

೭. "ಸೋದರರೇ, ನನ್ನ ವಿರುದ್ಧವಾಗಲಿ, ಧಮ್ಮದ ವಿರುದ್ಧವಾಗಲಿ, ಸಂಘದ ವಿರುದ್ಧವಾಗಲಿ, ಹೊರಗಿನವರು ಮಾತಾಡಿದರೆ, ಆ ಕಾರಣಕ್ಕಾಗಿ ನೀವು ಅವರನ್ನು ದ್ವೇಷಿಸಬಾರದು; ಹೊಟ್ಟೆಯುರಿದುಕೊಳ್ಳಬಾರದು ಅಥವಾ ಅವರಿಗೆ ಕೇಡೆಣಿಸಬಾರದು.

೮. "ಆ ಕಾರಣಕ್ಕಾಗಿ ನೀವು ಕೋಪಗೊಂಡರೆ, ನೋವನುಭವಿಸಿದರೆ, ನೀವೇ ನಿಮ್ಮ ಆತ್ಮಜಯ ಸಾಧಿಸುವುದಕ್ಕೆ ಅಡ್ಡಿಯಾಗುತ್ತೀರಿ. ನಿಮ್ಮ ವಿರುದ್ಧ ಯಾರಾದರೂ ಮಾತಾಡಿದಾಗ, ನೀವು ಕೋಪಗೊಂಡರೆ ಅಥವಾ ಅಸಂತುಷ್ಟಗೊಂಡರೆ, ಬೇರೆಯವರ ಮಾತು ಒಳ್ಳೆಯದೊ ಕೆಟ್ಟದ್ದೊ ಎಂಬುದನ್ನು ನಿರ್ಧರಿಸಲು ನೀವು ಶಕ್ತರಾಗಿರುತ್ತೀರಾ?"

೯. "ಹಾಗೆ ಶಕ್ತರಾಗಿರುವುದಿಲ್ಲ ಪ್ರಭು."

೧೦. "ಹೊರಗಿನವರು ನನ್ನ ವಿರುದ್ಧ, ಧಮ್ಮದ ವಿರುದ್ಧ, ಸಂಘದ ವಿರುದ್ಧ ತೆಗಳಿಕೆಯ ಶಬ್ದಗಳಲ್ಲಿ ಮಾತಾಡಿದರೆ, ನೀವು ಅದರಲ್ಲಿರುವ ತಪ್ಪನ್ನು ಕಂಡುಹಿಡಿಯಬೇಕು ಹಾಗೂ ಅವರಿಗೆ ಆ ತಪ್ಪನ್ನು ತೋರಿಸಿಕೊಡುತ್ತಾ, 'ಇಂಥಿಂಥ ಕಾರಣಕ್ಕಾಗಿ ನೀವು ಹೇಳುತ್ತಿರುವುದು ಸತ್ಯವಲ್ಲ, ಸತ್ಯಸಂಗತಿ ಹಾಗಿಲ್ಲ, ಅಂಥದು ನಮ್ಮಲ್ಲಿಲ್ಲ' ಎಂದು ವಾದಿಸಬೇಕು.

೧೧. "ಆದರೆ, ಸೋದರರೆ, ಹೊರಗಿನವರು ನನ್ನ ಬಗ್ಗೆ, ಧಮ್ಮದ ಬಗ್ಗೆ, ಸಂಘದ ಬಗ್ಗೆ ಹೊಗಳಿಕೆಯ ಮಾತನ್ನಾಡಬಹುದು. ಹಾಗೆ ನನ್ನನ್ನು ಹೊಗಳಿದಾಗ, ನೀವು ಏನೇನು ಹೇಳುತ್ತೀರಿ?

೧೨. "ಒಬ್ಬ ಹೀಗೆನ್ನಬಹುದು: 'ಗೌತಮ ಸಂನ್ಯಾಸಿಯು ಜೀವನಾಶವನ್ನು ಕೈಬಿಡುವ ಮೂಲಕ ಜೀವನಾಶದಿಂದ ದೂರವಿದ್ದಾನೆ; ಕತ್ತಿ ಕುಡುಗೋಲುಗಳನ್ನು ದೂರವಿಟ್ಟಿದ್ದಾನೆ. ಒರಟುತನಕ್ಕೆ ನಾಚಿ, ದಯಾಮಯಿಯಾಗಿ, ಅವನು ಎಲ್ಲ ಜೀವಿಗಳಿಗೂ ಪ್ರೀತಿ ಮತ್ತು ಕರುಣೆ ತೋರಿಸುತ್ತಾನೆ.' ಪರಿವರ್ತಿತಗೊಳ್ಳದವನು ತಥಾಗತನನ್ನು ಹೊಗಳುವಾಗ ಈ ಮಾತನ್ನಾಡಬಹುದು.

೧೩. "ಅಥವಾ ಅವನು ಹೀಗನ್ನಬಹುದು: 'ಯಾರಾದರೂ ಕೊಡದ ಹೊರತು, ಗೌತಮ ಸಂನ್ಯಾಸಿಯು ಏನನ್ನೂ ಸ್ವೀಕರಿಸುವುದಿಲ್ಲ. ಈ ಮೂಲಕ ಅವನು ತನ್ನದಲ್ಲದುದರ ಬಗೆಗೆ ಅಪರಿಗ್ರಹವನ್ನು ಆಚರಿಸುತ್ತಾನೆ. ತನಗೆ ಕೊಟ್ಟಿದುದನ್ನು ಮಾತ್ರ ಅವನು ಸ್ವೀಕರಿಸುತ್ತಾನೆ ಹಾಗೂ ಕಾಣಿಕೆಗಳು ಬರುತ್ತವೆ ಎಂದು ನಿರೀಕ್ಷಿಸುತ್ತಾನೆ. ಅವನು ಪ್ರಾಮಾಣಿಕತೆಯಿಂದಲೂ ಹೃದಯಶುದ್ಧತೆಯಿಂದಲೂ ಬದುಕುತ್ತಾನೆ.'

೧೪. "ಅಥವಾ ಅವನು ಹೀಗೆನ್ನಬಹುದು: ಅಪವಿತ್ರತೆಯನ್ನು ದೂರವಿಡುವ ಮೂಲಕ ಗೌತಮ ಸಂನ್ಯಾಸಿಯು ಶುದ್ಧನೇ ಆಗಿದ್ದಾನೆ. ಅವನು ದುರಾಚಾರದಿಂದಲೂ ಲೈಂಗಿಕ ಕ್ರಿಯೆಗಳಿಂದಲೂ ದೂರವಿದ್ದಾನೆ.

೧೫. "ಅಥವಾ ಅವನು ಹೀಗೆನ್ನಬಹುದು: 'ಸುಳ್ಳು ಮಾತುಗಳನ್ನು ಆಡದಿರುವ ಮೂಲಕ ಗೌತಮ ಸಂನ್ಯಾಸಿಯು ಅಸತ್ಯದಿಂದ ದೂರವಿದ್ದಾನೆ. ಅವನು ಸತ್ಯವನ್ನೇ ನುಡಿಯುತ್ತಾನೆ; ಸತ್ಯದಿಂದ ಅವನೆಂದೂ ವಿಚಲಿತನಾಗುವುದಿಲ್ಲ; ವಿಶ್ವಾಸವುಳ್ಳವನೂ ವಿಶ್ವಾಸಾರ್ಹನೂ ಆದ ಅವನು ಕೊಟ್ಟ ಮಾತಿಗೆ ಎಂದೂ ತಪ್ಪುವುದಿಲ್ಲ.'

೧೬. "ಅಥವಾ ಅವನು ಹೀಗೆನ್ನಬಹುದು: 'ಚಾಡಿ ಮಾತುಗಳನ್ನು ದೂರವಿಡುವ ಮೂಲಕ ಗೌತಮ ಸಂನ್ಯಾಸಿಯು ಚಾಡಿಹೇಳುವ ಅಭ್ಯಾಸದಿಂದ ಮುಕ್ತನಾಗಿದ್ದಾನೆ. ತಾನು ಇಲ್ಲಿ ಕೇಳಿದುದನ್ನು ಇಲ್ಲಿಯ ಜನರೊಡನೆ ಜಗಳ ಹುಟ್ಟಿಸುವ ಸಲುವಾಗಿ ಮತ್ತೆಲ್ಲಿಯೂ ಹೇಳುವುದಿಲ್ಲ. ಬೇರೆ ಕಡೆ ಕೇಳಿದ ಮಾತುಗಳನ್ನು ಅಲ್ಲಿಯ ಜನರೊಡನೆ ಜಗಳ ಹುಟ್ಟಿಸುವ ಸಲುವಾಗಿ ಮತ್ತೆಲ್ಲಿಯೂ ಹೇಳುವುದಿಲ್ಲ. ಹೀಗೆ ಅವನೊಬ್ಬ ಬೇರೆ ಬೇರೆಯಾಗಿರುವವರನ್ನು ಒಂದುಗೂಡಿಸುವವನಾಗಿದ್ದಾನೆ, ಸ್ನೇಹಿತರಾಗಿರುವವರಿಗೆ ಪ್ರೋತ್ಸಾಹ ಕೊಡುವವನಾಗಿದ್ದಾನೆ, ಶಾಂತಿಯನ್ನುಂಟುಮಾಡುವವನೂ, ಶಾಂತಿ ಪ್ರೇಮಿಯೂ, ಶಾಂತಿಗಾಗಿ ಭಾವೋದ್ರೇಕಗೊಳ್ಳುವವನೂ ಶಾಂತಿಯನ್ನುಂಟುಮಾಡುವಂತೆ ಮಾತನಾಡುವವನೂ ಆಗಿದ್ದಾನೆ.'

೧೭. "ಅಥವಾ ಅವನು ಹೀಗೆ ಹೇಳಬಹುದು: 'ಒರಟು ಮಾತುಗಳನ್ನು ಬಿಡುವ ಮೂಲಕ, ಗೌತಮ ಮುನಿಯು ಒರಟು ಭಾಷೆಯಿಂದ ಮುಕ್ತನಾಗಿದ್ದಾನೆ. ಯಾವ ಮಾತುಗಳಲ್ಲಿ ದೋಷವಿರುವುದಿಲ್ಲವೊ ಯಾವ ಮಾತುಗಳು ಕಿವಿಗೆ ಹಿತವಾಗಿಯೂ, ಪ್ರೀತಿಯುಕ್ತವಾಗಿಯೂ, ಹೃದಯಕ್ಕೆ ಮುಟ್ಟುವಂತೆಯೂ ಸುಸಂಸ್ಕೃತವಾಗಿಯೂ ಇರುತ್ತವೆಯೊ, ಯಾವ ಮಾತುಗಳು ಜನರಿಗೆ ಮುದನೀಡುತ್ತವೆಯೊ,

ಮತ್ತು ಜನರಿಗೆ ಇಷ್ಟವಾಗುತ್ತವೆಯೊ, ಅಂಥ ಮಾತುಗಳನ್ನಷ್ಟೇ ಅವನು ಆಡುತ್ತಾನೆ.'

೧೮. "ಅಥವಾ ಅವನು ಹೀಗೆನ್ನಬಹುದು: 'ಹುರುಳಿಲ್ಲದ ಮಾತುಗಳನ್ನು ದೂರವಿಡುವ ಮೂಲಕ, ಗೌತಮ ಮುನಿಯು ನಿಷ್ಪ್ರಯೋಜಕ ಸಂಭಾಷಣೆಯಿಂದ ಮುಕ್ತನಾಗಿದ್ದಾನೆ. ಸಮಯ ಬಂದರೆ ಅವನು ಸತ್ಯಸಂಗತಿಗಳಿಗೆ ಹೊಂದಿಕೊಳ್ಳುವ ಮಾತಾಡುತ್ತಾನೆ; ಆ ಮಾತುಗಳು ಅರ್ಥವತ್ತಾಗಿರುತ್ತವೆ; ಅವು ಧಮ್ಮದ ಬಗ್ಗೆಯೂ, ಸಂಘದ ಶಿಕ್ಷಣದ ಬಗ್ಗೆಯೂ ಆಗಿರುತ್ತದೆ. ಅವನು ಸೂಕ್ತ ಸಮಯದಲ್ಲಿ, ಹೃದಯದಲ್ಲಿ ನೆಲೆಸಲು ಯೋಗ್ಯವಾದಂಥ, ಸಮರ್ಪಕ ಉದಾಹರಣೆಗಳೊಂದಿಗೆ, ಸ್ಪಷ್ಟವಾದ ವರ್ಗೀಕರಣದೊಂದಿಗೆ, ಅನ್ಯವಿಷಯಕ್ಕೆಳಸದ ಮಾತನಾಡುತ್ತಾನೆ.'

೧೯. "ಅಥವಾ ಅವನು ಹೀಗೆನ್ನಬಹುದು: 'ಬೀಜಗಳಿಗೂ ಗಿಡಗಳಿಗೂ ಹಿಂಸೆಯಾಗದಂತೆ ಗೌತಮ ಮುನಿಯು ಹಿಂಸೆಯಿಂದ ದೂರವಿರುತ್ತಾನೆ.

'ಅವನು ದಿನಕ್ಕೊಮ್ಮೆ ಊಟ ಮಾಡುತ್ತಾನೆ; ರಾತ್ರಿಯೂಟವಿಲ್ಲ, ಮಧ್ಯಾಹ್ನದ ನಂತರವೂ ಊಟ ಮಾಡುವುದಿಲ್ಲ.

'ಅವನು ಆಟಗಳಲ್ಲಿಯೂ ಜಾತ್ರೆಗಳಲ್ಲಿಯೂ ನಾಟ್ಯಗಳಲ್ಲಿಯೂ ಹಾಡು ಮತ್ತು ಸಂಗೀತಗಳಲ್ಲಿಯೂ ಪ್ರೇಕ್ಷಕನಾಗಿರಬಯಸುವುದಿಲ್ಲ.

'ಅವನು ಉಡುಗೆಗಳನ್ನು ತೊಡುವುದು, ಆಭರಣಗಳನ್ನು ಧರಿಸುವುದು, ಮಾಲೆಗಳನ್ನು ಧರಿಸುವುದು, ಪರಿಮಳ ದ್ರವ್ಯ ಮತ್ತು ಲೇಪನಗಳನ್ನು ಹಚ್ಚಿಕೊಳ್ಳುವುದು, ಇವುಗಳಿಂದ ದೂರವಿರಬಯಸುತ್ತಾನೆ.

'ಅವನು ವಿಶಾಲವಾದ ಹಾಗೂ ಎತ್ತರವಾದ ಹಾಸಿಗೆಗಳ ಉಪಯೋಗ ಮಾಡಲು ಇಷ್ಟಪಡುವುದಿಲ್ಲ.

'ಅವನು ಬೆಳ್ಳಿ ಅಥವಾ ಚಿನ್ನವನ್ನು ಸ್ವೀಕರಿಸಲು ಇಷ್ಟಪಡುವುದಿಲ್ಲ.

'ಅವನು ಬೇಯಿಸದ ಧಾನ್ಯಗಳನ್ನು ಸ್ವೀಕರಿಸಬಯಸುವುದಿಲ್ಲ.

'ಅವನು ಹೆಂಗಸರು ಅಥವಾ ಕನ್ಯೆಯರನ್ನು ಸ್ವೀಕರಿಸಬಯಸುವುದಿಲ್ಲ.

'ಅವನು ಗುಲಾಮನನ್ನಾಗಲಿ ಗುಲಾಮಳನ್ನಾಗಲಿ ಸ್ವೀಕರಿಸಬಯಸುವುದಿಲ್ಲ.

'ಅವನು ಕುರಿ ಅಥವಾ ಆಡುಗಳನ್ನು ಸ್ವೀಕರಿಸಬಯಸುವುದಿಲ್ಲ.

'ಅವನು ಕೋಳಿ ಅಥವಾ ಹಂದಿಗಳನ್ನು ಸ್ವೀಕರಿಸಬಯಸುವುದಿಲ್ಲ.

'ಅವನು ಆನೆ, ದನ, ಗಂಡು ಕುದುರೆ ಅಥವಾ ಹೆಣ್ಣು ಕುದುರೆಗಳನ್ನು ಸ್ವೀಕರಿಸಲು ಇಚ್ಛಿಸುವುದಿಲ್ಲ.

'ಅವನು ಫಲವತ್ತಾದ ಭೂಮಿಯನ್ನಾಗಲಿ ಬಂಜರುಭೂಮಿಯನ್ನಾಗಲಿ ಸ್ವೀಕರಿಸಲು ಇಷ್ಟಪಡುವುದಿಲ್ಲ.

'ಅವನು ಮಧ್ಯಸ್ಥನಂತಾಗಲಿ ಓಲೆಕಾರನಂತಾಗಲಿ ಕೆಲಸ ಮಾಡಲು ಒಲ್ಲ.

'ಅವನು ಕೊಳ್ಳಲೂ ಮಾರಲೂ ಒಲ್ಲ.

'ಅವನು ತೂಗುವಾಗ, ಕಡ್ಡಿಯಿಂದ ಅಥವಾ ಸೇರಿನಿಂದ ಅಳೆಯುವಾಗ ಮೋಸ ಮಾಡಲು ಇಷ್ಟಪಡುವುದಿಲ್ಲ.

'ಅವನು ಲಂಚ ತೆಗೆದುಕೊಳ್ಳುವುದು, ಮೋಸ ಮಾಡುವುದು, ನಂಬಿದವರಿಗೆ ದ್ರೋಹವೆಸಗುವುದು ಮುಂತಾದ ಋಜುವಲ್ಲದ ಮಾರ್ಗಗಳಿಂದ ದೂರವಿರುವವನು.

'ಅಂಗಹೀನ ಮಾಡುವುದು, ಕೊಲೆ ಮಾಡುವುದು, ಬಂಧನದಲ್ಲಿಡುವುದು, ದಾರಿಯಲ್ಲಿ ಅಡ್ಡಗಟ್ಟಿ ಸುಲಿಗೆ ಮಾಡುವುದು, ಡಕಾಯಿತಿ ಮತ್ತು ಹಿಂಸೆ – ಇವುಗಳಿಂದ ದೂರವಿರುತ್ತಾನೆ.'

೨೦. "ಸೋದರರೆ, ಮತಾಂತರಗೊಳ್ಳದವನು ತಥಾಗತನನ್ನು ಹೊಗಳುವಾಗ ಇಂಥವೇ ಮಾತುಗಳನ್ನು

ಆಡಬಹುದು. ಆದರೆ ನೀವು ಆ ಕಾರಣಕ್ಕಾಗಿ ಆನಂದಿತರಾಗಬಾರದು ಅಥವಾ ಸಂತುಷ್ಟಗೊಳ್ಳಬಾರದು ಅಥವಾ ನಿಮ್ಮ ಹೃದಯ ಉಬ್ಬಬಾರದು. ಹಾಗೇನಾದರೂ ಆದರೆ, ಅದು ನಿಮ್ಮನ್ನು ನೀವು ಜಯಿಸಿಕೊಳ್ಳಲು ಅಡ್ಡಿಯಾಗುತ್ತದೆ. ಯಾರಾದರೂ ಹೊರಗಿನವರು ನನ್ನನ್ನು ಅಥವಾ ಧಮ್ಮವನ್ನು ಅಥವಾ ಸಂಘವನ್ನು ಹೊಗಳಿದರೆ, 'ಇಂಥಿಂಥ ಕಾರಣಗಳಿಗಾಗಿ ಇದು ಸತ್ಯ. ಅದು ಇರುವುದು ಹಾಗೆಯೇ, ನಮ್ಮಲ್ಲಿ ಅಂಥ ಪದ್ಧತಿ ಇದೆ' ಎಂದು ಹೇಳುವ ಮೂಲಕ ಸತ್ಯಸಂಗತಿಯನ್ನು ಒಪ್ಪಿಕೊಳ್ಳಬೇಕು."

## ೪. ಧರ್ಮ ಪ್ರಚಾರ ಮಾಡಲು ಭಿಕ್ಷು ಹೋರಾಡಬೇಕು

೧. ಭಿಕ್ಷುಗಳನ್ನುದ್ದೇಶಿಸಿ ಪ್ರಭು ಒಂದು ಸಾರಿ ಹೀಗೆ ಹೇಳಿದ:

೨. "ಓ, ಶಿಷ್ಯರೇ, ಪ್ರಪಂಚ ನನ್ನೊಡನೆ ಜಗಳವಾಡುತ್ತದೆಯೇ ಹೊರತು, ನಾನು ಪ್ರಪಂಚದೊಡನೆ ಜಗಳವಾಡುವುದಿಲ್ಲ. ಸತ್ಯವನ್ನು ಬೋಧಿಸುವವನು ಎಂದೂ ಜಗತ್ತಿನ ಯಾರೊಡನೆಯೂ ಜಗಳವಾಡುವುದಿಲ್ಲ."

೩. "ಪ್ರಭುಗಳೇ, ನಮ್ಮನ್ನು ನಾವು ಯೋಧರು, ಯೋಧರು ಎಂದು ಕರೆದುಕೊಳ್ಳುತ್ತೇವೆ. ನಾವು ಯಾವ ಅರ್ಥದಲ್ಲಿ ಯೋಧರು?"

೪. "ಓ, ಶಿಷ್ಯರೇ, ನಾವು ಯುದ್ಧ ಮಾಡುತ್ತೇವೆ. ಆದುದರಿಂದ ನಾವು ಯೋಧರೆಂದು ಕರೆಯಲ್ಪಡುತ್ತೇವೆ."

೫. "ಪ್ರಭು, ನಾವು ಯಾವುದರ ಸಲುವಾಗಿ ಹೋರಾಡುತ್ತೇವೆ?"

೬. "ಉನ್ನತ ಮೌಲ್ಯಗಳಿಗಾಗಿ, ಉನ್ನತ ಪ್ರಯತ್ನಗಳಿಗಾಗಿ, ಉನ್ನತ ಜ್ಞಾನಕ್ಕಾಗಿ, ನಾವು ಇವುಗಳಿಗಾಗಿ ಹೋರಾಡುವುದರಿಂದ, ನಾವು ಯೋಧರೆನಿಸಿಕೊಳ್ಳುತ್ತೇವೆ."

೭. "ಎಲ್ಲಿ ಧರ್ಮವು ಅಪಾಯದಲ್ಲಿಯೋ, ಅಲ್ಲಿ ಹೋರಾಡುವುದರಿಂದ ತಪ್ಪಿಸಿಕೊಳ್ಳಬೇಡಿ; ಬಾಯಿ ಮುಚ್ಚಿಕೊಂಡಿರಬೇಡಿ."

# ಭಾಗ : ೪

# ಭಿಕ್ಷು ಮತ್ತು ಸಾಮಾನ್ಯ ಜನರು

೧. ಭಿಕ್ಷೆಯ ಬಂಧನ
೨. ಪರಸ್ಪರ ಪ್ರಭಾವ
೩. ಭಿಕ್ಷುವಿನ ಧರ್ಮ ಮತ್ತು ಉಪಾಸಕನ ಧರ್ಮ

## ೧. ಭಿಕ್ಷೆಯ ಬಂಧನ

೧. ಸಂಘವು ಒಂದು ವ್ಯವಸ್ಥಿತ ಸಂಸ್ಥೆಯಾಗಿದ್ದು, ಅದರ ಸದಸ್ಯತ್ವವು ಎಲ್ಲರಿಗೂ ಮುಕ್ತವಾಗಿರಲಿಲ್ಲ.

೨. ಕೇವಲ ಪರಿವ್ರಾಜಕರಾಗಿದ್ದ ಮಾತ್ರಕ್ಕೆ, ಪರಿವ್ರಾಜಕರೆಲ್ಲರಿಗೂ ಸಂಘದ ಸದಸ್ಯತ್ವ ನೀಡುತ್ತಿರಲಿಲ್ಲ.

೩. ಪರಿವ್ರಾಜಕನು ಉಪಸಂಪದವನ್ನು ಪಡೆದನಂತರವೇ ಅವನು ಸಂಘದ ಸದಸ್ಯನಾಗಬಹುದಿತ್ತು.

೪. ಸಂಘವು ಒಂದು ಸ್ವತಂತ್ರ ಸಂಸ್ಥೆಯಾಗಿತ್ತು. ಅದು ಅದರ ಸಂಸ್ಥಾಪಕನಿಂದ ಸಹ ಸ್ವತಂತ್ರವಾಗಿತ್ತು.

೫. ಅದಕ್ಕೆ ಸ್ವಾಯತ್ತತೆ ಇತ್ತು. ಅದು ತನಗೆ ಬೇಕಾದವರಿಗೆ ಸದಸ್ಯತ್ವ ನೀಡಬಹುದಿತ್ತು. ವಿನಯಪಿಟಕದ ನಿಯಮಕ್ಕೆ ತಕ್ಕಂತೆ ಯಾರು ಯಾರಿಂದಲಾದರೂ ತನ್ನ ಸದಸ್ಯತ್ವವನ್ನು ಕಿತ್ತುಕೊಳ್ಳಬಹುದಿತ್ತು.

೬. ಭಿಕ್ಷುವನ್ನೂ ಸಾಧಾರಣ ಜನರನ್ನೂ ಬಂಧಿಸುವ ಏಕೈಕ ಸೂತ್ರವೆಂದರೆ ಭಿಕ್ಷೆ.

೭. ಭಿಕ್ಷುಗಳು ಭಿಕ್ಷೆಯನ್ನೇ ಅವಲಂಬಿಸಿದ್ದರು ಹಾಗೂ ಸಾಮಾನ್ಯ ಜನರು ಅವರಿಗೆ ಭಿಕ್ಷೆ ನೀಡುತ್ತಿದ್ದರು.

೮. ಸಾಮಾನ್ಯ ಜನರಿಗೆ ಯಾವುದೇ ಸಂಸ್ಥೆಯಿರಲಿಲ್ಲ.

೯. ಸಂಘಕ್ಕೆ ಪ್ರವೇಶದ ಅರ್ಹತೆ ಪಡೆದವರಿಗೆ ಸಂಘದೀಕ್ಷೆಯಿರುತ್ತಿತ್ತು.

೧೦. ಸಂಘದೀಕ್ಷೆಯು ಸಂಘಕ್ಕೆ ಪ್ರವೇಶ ದೀಕ್ಷೆಯನ್ನಲ್ಲದೆ ಧರ್ಮದೀಕ್ಷೆಯನ್ನೂ ಒಳಗೊಂಡಿತ್ತು.

೧೧. ಆದರೆ ಸಂಘಕ್ಕೆ ಪ್ರವೇಶ ಬೇಡ ಏಕೆಂದರೆ, ಸಂಘ ದೀಕ್ಷೆ ಪಡೆದವರು ಗೃಹತ್ಯಾಗ ಮಾಡಬೇಕಾಗುತ್ತದೆಯಾದ್ದರಿಂದ ಕೇವಲ ಧರ್ಮ ದೀಕ್ಷೆಯಷ್ಟೇ ಬೇಕು ಎಂದು ಬಯಸಿದವರಿಗೆ, ಪ್ರತ್ಯೇಕ ಧರ್ಮ ದೀಕ್ಷೆಯಿರುತ್ತಿರಲಿಲ್ಲ.

೧೨. ಇದೊಂದು ಮಹಾ ದೋಷ. ಭಾರತದಲ್ಲಿ ಬೌದ್ಧಧರ್ಮವು ಅವನತಿ ಹೊಂದಲು ಅನೇಕ ಕಾರಣಗಳಲ್ಲಿ ಇದೂ ಒಂದು.

೧೩. ಏಕೆಂದರೆ, ಇಂಥ ಒಂದು ದೀಕ್ಷೆಯು ಇಲ್ಲವಾದ ಕಾರಣ. ಸಾಮಾನ್ಯ ಜನರಿಗೆ ಒಂದು ಧಮ್ಮವನ್ನು ಬಿಟ್ಟು ಮತ್ತೊಂದು ಧರ್ಮವನ್ನು ಅನುಸರಿಸಲು – ಅಥವಾ ಇನ್ನೂ ಕೆಟ್ಟದೆಂದರೆ, ಏಕಕಾಲದಲ್ಲಿ ಬೇರೆ ಬೇರೆ ಧರ್ಮಗಳನ್ನು ಆಚರಿಸಲು ಸ್ವಾತಂತ್ರ್ಯ ಸಿಕ್ಕಿತು.

## ೨. ಪರಸ್ಪರ ಪ್ರಭಾವ

೧. ಆದರೆ ಭಿಕ್ಷೆ ಎಂಬ ಸಮಾನ ಅಂಶ ತಪ್ಪೆಸಗುವ ಸಾಮಾನ್ಯ ಜನರನ್ನು ತಿದ್ದಲು ಭಿಕ್ಷುವಿಗೆ ಸಾಕಷ್ಟು ಅವಕಾಶ ನೀಡಿತು.

೨. ಈ ಸಂದರ್ಭದಲ್ಲಿ ಅಂಗುತ್ತರ ನಿಕಾಯದಲ್ಲಿ ಪ್ರಸ್ತಾಪಿಸಲಾಗಿರುವ ಈ ಕೆಳಗಿನ ನಿಯಮಗಳು ಗಮನಾರ್ಹ.

೩. ಈ ನಿಯಮಗಳೂ ಅಲ್ಲದೆ, ಸಾಮಾನ್ಯ ಜನರಿಗೆ ಯಾವುದೇ ಭಿಕ್ಷುವಿನ ಕುಯುಕ್ತಿ ಅಥವಾ

ದುರ್ನಡತೆಯ ವಿರುದ್ಧ ಬೇರೆ ಭಿಕ್ಷುಗಳಿಗೆ ದೂರು ಸಲ್ಲಿಸುವ ಒಂದು ಸಾಮಾನ್ಯ ಹಕ್ಕೂ ಇತ್ತು.

೪. ಬುದ್ಧನಿಗೆ ಇಂಥ ದೂರು ತಲುಪಿ ಅವನು ಅದನ್ನು ವಿಮರ್ಶಿಸಿದ ಕೂಡಲೆ, ಹಾಗೆ ಮತ್ತೊಮ್ಮೆ ಮಾಡುವ ದುರ್ನಡತೆಯು ಸಂಘಕ್ಕೆಸಗಿದ ಅಪಚಾರ ಎಂದು ಅದಕ್ಕೆ ಸಂಬಂಧಿಸಿದ ನಿಯಮವನ್ನು ವಿನಯಪಿಟಕದಲ್ಲಿ ತಿದ್ದಲಾಗುತ್ತಿತ್ತು.

೫. ವಿನಯಪಿಟಕವೆಂದರೆ ಉಪಾಸಕರ ದೂರಿಗೆ ಪರಿಹಾರವೆಂದೇ ಹೊರತು ಮತ್ತೇನೂ ಅಲ್ಲ.

೬. ಭಿಕ್ಷು ಮತ್ತು ಸಾಮಾನ್ಯ ಜನರ ಸಂಬಂಧ ಹೀಗಿತ್ತು.

## ೩. ಭಿಕ್ಷುವಿನ ಧರ್ಮ ಮತ್ತು ಉಪಾಸಕನ ಧರ್ಮ

೧. ಬೌದ್ಧ ಧರ್ಮವನ್ನು ಟೀಕಿಸುವವರು, ಬೌದ್ಧ ಧರ್ಮವು ಧರ್ಮವೇ ಅಲ್ಲ ಎನ್ನುತ್ತಾರೆ.

೨. ಅಂಥ ಟೀಕೆಗಳ ಕಡೆಗೆ ನಾವು ಗಮನ ಕೊಡಲೇಬಾರದು. ಆದರೆ ಅದಕ್ಕೆ ಉತ್ತರ ಕೊಡುವುದಾದರೆ, ಬೌದ್ಧ ಧರ್ಮವೊಂದೇ ನಿಜವಾದ ಧರ್ಮವೆಂದೂ, ಇದನ್ನು ಒಪ್ಪದವರು ಧರ್ಮದ ಬಗೆಗಿನ ತಮ್ಮ ವ್ಯಾಖ್ಯೆಯನ್ನೇ ಬದಲಿಸಿಕೊಳ್ಳಬೇಕೆಂದೂ ನಾವು ಉತ್ತರಿಸಬೇಕು.

೩. ಮತ್ತೆ ಕೆಲವು ವಿಮರ್ಶಕರು ಅಷ್ಟು ದೂರವೂ ಹೋಗುವುದಿಲ್ಲ. ಬೌದ್ಧ ಧರ್ಮವೆಂದರೆ ಭಿಕ್ಷುಗಳಿಗೆ ಮಾತ್ರ ಸಂಬಂಧಿಸಿದ ಧರ್ಮ ಎನ್ನುತ್ತಾರೆ ಅವರು. ಅದು ಸಾಮಾನ್ಯ ಜನರಿಗೆ ಸಂಬಂಧಿಸಿದ ಧರ್ಮವಲ್ಲ. ಅದು ಸಾಮಾನ್ಯ ಜನರನ್ನು ತನ್ನ ವಲಯದಿಂದ ಹೊರಗಿಟ್ಟಿದೆ.

೪. ಬುದ್ಧನ ಸಂವಾದಗಳಲ್ಲಿ ಭಿಕ್ಷುಗಳ ಪ್ರಸ್ತಾಪ ಎಷ್ಟು ಪುನಃ ಪುನಃ ಬರುತ್ತದೆಯೆಂದರೆ, ಅದರಿಂದ ಆ ವಿಮರ್ಶಕರು ತಮ್ಮ ಟೀಕೆಯನ್ನು ಸಮರ್ಥಿಸಿಕೊಳ್ಳಲು ಅನುಕೂಲವಾಗಿದೆ.

೫. ಆದುದರಿಂದ ಈ ವಿಷಯವನ್ನು ಸ್ಪಷ್ಟಗೊಳಿಸುವುದು ಆವಶ್ಯಕ.

೬. ಧಮ್ಮವು ಇವರಿಬ್ಬರಿಗೂ ಸಾಮಾನ್ಯವಾಗಿತ್ತೆ? ಅಥವಾ, ಅದರ ಯಾವುದಾದರೊಂದು ಅಂಗ ಭಿಕ್ಷುಗಳಿಗೆ ಬಂಧನವಾಗಿದ್ದು, ಸಾಮಾನ್ಯ ಜನರಿಗೆ ಬಂಧವಾಗಿರಲಿಲ್ಲವೆ?

೭. ಬುದ್ಧನ ಉಪದೇಶಗಳೆಲ್ಲ ಭಿಕ್ಷುಗಳನ್ನು ಉದ್ದೇಶಿಸಿ ಮಾಡಿದುವು ಎಂಬ ಕಾರಣದಿಂದ, ಆ ಉಪದೇಶಗಳು ಅವರಿಗೆ ಮಾತ್ರ ಅನ್ವಯವಾಗುತ್ತವೆ ಎಂದು ನಾವು ಊಹಿಸಬಾರದು. ಉಪದೇಶಗಳು ಇಬ್ಬರಿಗೂ ಅನ್ವಯವಾಗುತ್ತವೆ.

೮. ಬುದ್ಧನು (೧) ಪಂಚಶೀಲ (೨) ಅಷ್ಟಾಂಗ ಮಾರ್ಗ ಮತ್ತು (೩) ಪಾರಮಿತಾಗಳನ್ನು ಉಪದೇಶಿಸುವಾಗ, ಅವನು ಸಾಮಾನ್ಯ ಜನರನ್ನೇ ಗಮನದಲ್ಲಿಟ್ಟುಕೊಂಡಿದ್ದ, ಎಂಬುದು ಅವುಗಳಲ್ಲಿರುವ ವಿಷಯದಿಂದ ಸ್ಪಷ್ಟವಾಗುತ್ತದೆ; ಇದಕ್ಕೆ ಯಾವ ವಾದವೂ ಬೇಕಿಲ್ಲ.

೯. ಯಾರು ಗೃಹಜೀವನವನ್ನು ತ್ಯಜಿಸದೆ ಸಕ್ರಿಯ ಜೀವನದಲ್ಲಿ ನಿರತರಾಗಿದ್ದಾರೊ, ಅವರಿಗೆ ಪಂಚಶೀಲ, ಅಷ್ಟಾಂಗ ಮಾರ್ಗ ಮತ್ತು ಪಾರಮಿತಾಗಳು ಆವಶ್ಯಕ. ಅವುಗಳನ್ನು ಅವರು ಉಲ್ಲಂಘಿಸುವ ಸಂಭವವಿದೆಯೇ ಹೊರತು, ಮನೆಯನ್ನು ಆಗಲೇ ತ್ಯಜಿಸಿರುವ, ಯಾವುದೇ ರೀತಿಯ ಪ್ರವೃತ್ತ ಜೀವನವನ್ನು ನಡೆಸದ ಹಾಗೂ ಅವುಗಳನ್ನು ಪ್ರಾಯಶಃ ಎಂದೂ ಉಲ್ಲಂಘಿಸದ ಭಿಕ್ಷುಗಳಿಲ್ಲ.

೧೦. ಆದುದರಿಂದ, ಬುದ್ಧನು ಧರ್ಮವನ್ನು ಬೋಧಿಸಲು ಪ್ರಾರಂಭಿಸಿದಾಗ, ಅದು ಮುಖ್ಯವಾಗಿ ಜನರ ಸಲುವಾಗಿಯೇ ಇದ್ದಿತು.

೧೧. ಆದರೆ, ಹೀಗೆ ಕೇವಲ ತರ್ಕವನ್ನು ಅವಲಂಬಿಸುವ ಅಗತ್ಯವಿಲ್ಲ. ಆ ರೀತಿಯ ಟೀಕೆಯು ಅಸಾಧುವೆಂದು ತೋರಿಸಲು ಕೆಲವು ಪ್ರತ್ಯಕ್ಷ ಆಧಾರಗಳೂ ಉಂಟು.

೧೨. ಅದಕ್ಕೆ ಈ ಕೆಳಗಿನ ಉಪದೇಶವನ್ನು ಉದ್ಧರಿಸಬಹುದು:–

೧೩. ಒಂದು ಸಾರಿ ಪ್ರಭುವು ಶ್ರಾವಸ್ತಿಯ ಜೇತವನದಲ್ಲಿರುವ ಅನಾಥಪಿಂಡಿಕನ ವಿಹಾರದಲ್ಲಿ ತಂಗಿದ್ದಾಗ, ಅವನನ್ನು ಭೇಟಿ ಮಾಡಲು ಧಾರ್ಮಿಕನು ತನ್ನ ಐನೂರು ಸಂಗಡಿಗರೊಡನೆ ಬಂದನು. ಅವನು ಬುದ್ಧನಿಗೆ ಸಲ್ಲಿಸಬೇಕಾದ ವಂದನಾದಿಗಳನ್ನು ಸಲ್ಲಿಸಿದ ಮೇಲೆ, ಒಂದು ಕಡೆ ಕುಳಿತುಕೊಂಡು, ಪ್ರಭುವನ್ನು ಕುರಿತು ಹೀಗೆಂದನು:

೧೪. "ಭಿಕ್ಷುಗಳನ್ನೂ ಉಪಾಸಕರನ್ನೂ, ಅಂದರೆ, ಮನೆಬಿಟ್ಟವರನ್ನೂ ಮನೆಬಿಡದವರನ್ನೂ, ಯಾವ ಆಚಾರವು ಪರಿಪೂರ್ಣರನ್ನಾಗಿ ಮಾಡುತ್ತದೆ?

೧೫. "ನಮ್ಮನ್ನು ಕಾಪಾಡುವಂತಹ ಸತ್ಯವನ್ನು ಉಪಾಸಕರೊಡನೆ ಸುತ್ತ ಕುಳಿತಿರುವ ಭಿಕ್ಷುಗಳು ತಿಳಿದುಕೊಳ್ಳಲಿ"

೧೬. ಇದಕ್ಕೆ ಪ್ರಭು ಹೀಗೆಂದನು : "ಭಿಕ್ಷುಗಳೇ ಕಿವಿಗೊಟ್ಟು ಕೇಳಿ; ಕೇಳಿಸಿಕೊಂಡು ಆ ನಿಯಮಗಳನ್ನು ವಿಧಿಸಿಕೊಳ್ಳಿರಿ.

೧೭. "ಮಧ್ಯಾಹ್ನ ಕಳೆದ ಮೇಲೆ ಭಿಕ್ಷಾಟನೆಗೆ ಹೋಗಬೇಡಿ; ಮುಂಚೆಯೇ ಭಿಕ್ಷೆ ಕೇಳಿ; ಏಕೆಂದರೆ ಅವೇಳೆಯಲ್ಲಿ ಬರುವ ಅತಿಥಿಯನ್ನು ದುರುಗುಟ್ಟಿ ನೋಡುವ ಕಣ್ಣುಗಳು ಸ್ವಾಗತಿಸುತ್ತವೆ.

೧೮. "ನೀವು ಆಹಾರ ಬೇಡುವ ಮೊದಲು ನಿಮ್ಮ ಮನಸ್ಸಿನಿಂದ ರೂಪ, ಶಬ್ದ, ವಾಸನೆ, ರುಚಿ ಮತ್ತು ಅದೃಷ್ಟ ಇವುಗಳಿಗೆ ಸಂಬಂಧಿಸಿದ ಆಸೆಗಳನ್ನು ಕಿತ್ತುಹಾಕಿ.

೧೯. "ಭಿಕ್ಷೆ ಪಡೆದ ಮೇಲೆ, ಒಬ್ಬೊಬ್ಬರೇ ಹಿಂತಿರುಗಿ; ಪ್ರತ್ಯೇಕವಾಗಿ ಕುಳಿತುಕೊಳ್ಳಿ ಹಾಗೂ ಹೊರಗೆ ಅಲೆದಾಡದಂತೆ ಮನಸ್ಸನ್ನು ಒಂದೇ ವಿಷಯದಲ್ಲಿ ಕೇಂದ್ರಿಕರಿಸಿ.

೨೦. "ಭಿಕ್ಕುಗಳೇ, ನೀವು ಒಳ್ಳೆಯ ಜನರೊಡನೆ ಮಾತಾಡುವಾಗ ಧಮ್ಮವಷ್ಟೇ ನಿಮ್ಮ ವಿಷಯವಾಗಿರಬೇಕು.

೨೧. "ಭಿಕ್ಷೆ, ಕೋಣೆ, ಹಾಸಿಗೆ, ನೀರು ಹಾಗೂ ಬಟ್ಟೆಗಳನ್ನು ಉಪಕರಣಗಳಂತೆ ಕಾಣಬೇಕೇ ಹೊರತು, ಮತ್ತಾವುದರಂತೆಯೂ ಅಲ್ಲ.

೨೨. "ಹೀಗೆ ಅವುಗಳನ್ನು ವಿವೇಚನೆಯಿಂದ ಉಪಯೋಗಿಸುವ ಭಿಕ್ಷುವು ಹೇಗೆ ಕಮಲ ಪತ್ರದ ಮೇಲೆ ನೀರಿನ ಹನಿ ನಿಲ್ಲುವುದಿಲ್ಲವೋ ಹಾಗೆ ನಿರ್ಮಲವಾಗಿರುತ್ತಾನೆ.

೨೩. "ಈಗ ನಾನು ಉಪಾಸಕರನ್ನು ಪರಿಪೂರ್ಣರನ್ನಾಗಿ ಮಾಡುವ ಆಚಾರವಾವುದೆಂಬುದನ್ನು ಬೋಧಿಸುತ್ತೇನೆ. ಅವರಿಗೆ ನಾನು ಹೇಳುವುದು ಇದು:

೨೪. "ಕೊಲ್ಲಬೇಡಿ, ಸಾಯುವಂತೆ ಮಾಡಬೇಡಿ; ಕೊಲ್ಲಲು ಅನುಮತಿ ನೀಡಬೇಡಿ; ಪ್ರಬಲ ಜೀವಿಗಳಿಗೇ ಆಗಲಿ, ದುರ್ಬಲ ಜೀವಿಗಳಿಗೇ ಆಗಲಿ ಯಾವ ಸಣ್ಣ ಹಿಂಸೆಯನ್ನೂ ಕೊಡಬೇಡಿ; ಎಲ್ಲ ಜೀವಿಗಳನ್ನೂ ಪ್ರೀತಿಸಿ.

೨೫. "ಯಾವ ಉಪಾಸಕನೂ ಪ್ರಜ್ಞಾಪೂರ್ವಕವಾಗಿ ಕಳ್ಳತನನ ಮಾಡಬಾರದು ಅಥವಾ ಮಾಡಿಸಬಾರದು. ಬೇರೆಯವರು ಕೊಟ್ಟದ್ದಷ್ಟನ್ನೇ ತೆಗೆದುಕೊಳ್ಳಬೇಕು."

೨೬. "ವ್ಯಭಿಚಾರವನ್ನು ಕೆಂಡದ ಗುಂಡಿಯೆಂದು ತಿಳಿಯಿರಿ; ಬ್ರಹ್ಮಚರ್ಯ ಕಳೆದುಕೊಂಡು, ಮದುವೆಯಾದ ಸ್ತ್ರೀಯೊಡನೆ ವ್ಯಭಿಚಾರ ಮಾಡಬೇಡಿ.

೨೭. "ಮನೆಗಳಲ್ಲಾಗಲಿ ನ್ಯಾಯಾಲಯಗಳಲ್ಲಾಗಲಿ ಯಾವ ಉಪಾಸಕನೂ ಸುಳ್ಳು ಹೇಳಲುಬಾರದು, ಹೇಳಲು ಪ್ರಚೋದಿಸಲೂ ಬಾರದು; ಸುಳ್ಳು ಹೇಳಲು ಅನುಮತಿ ನೀಡಬಾರದು; ಅವನು ಅಸತ್ಯವನ್ನು ತ್ಯಜಿಸಬೇಕು.

೨೮. "ಅಲ್ಲದೆ ಅವನು ಈ ನಿಯಮವನ್ನೂ ಪಾಲಿಸಬೇಕು: ಕುಡಿತವನ್ನು ದ್ವೇಷಿಸಬೇಕು; ಯಾರಿಗೂ ಅವನು ಕುಡಿಯುವಂತೆ ಹೇಳಬಾರದು; ಕುಡಿಯಲು ಅನುಮತಿ ನೀಡಬಾರದು. ಕುಡಿತವು ಹೇಗೆ ಹುಚ್ಚಿಗೆ ನಾಂದಿಯಾಗುತ್ತದೆ ಎಂಬುದನ್ನು ಗಮನಿಸಿ.

೨೯. "ಕುಡಿತದ ಮೂಲಕ ಮೂರ್ಖರು ಪಾಪ ಮಾಡುತ್ತಾರೆ ಹಾಗೂ ಮೊದಲೆ ಸಡಿಲ ಮನಸ್ಸಿನ ಸೋದರರನ್ನು ಅದು ಪಾಪವೆಸಗುವಂತೆ ಮಾಡುತ್ತದೆ. ಆದುದರಿಂದ ಹುಚ್ಚನ್ನುಂಟುಮಾಡುವ ಈ ದುರಾಚಾರವನ್ನು, ಈ ದೋಷವನ್ನು, ಮೂರ್ಖರ ಸುಖವನ್ನು, ಬಿಟ್ಟು ದೂರ ಓಡಿರಿ.

೩೦. "ಕೊಲ್ಲಬೇಡಿ, ಕಳಬೇಡಿ, ಹುಸಿಯ ನುಡಿಯಬೇಡಿ; ಕಟು ಮದ್ಯದಿಂದ ದೂರವಿರಿ; ವ್ಯಭಿಚಾರದಿಂದ ದೂರವಿರಿ.

೩೧. "ಹೀಗೆ ಒಂದು ವಾರ ಕಳೆದು ಹೊಸ ವಾರ ಬಂದಾಗ, ನೀವು ದೀಕ್ಷಾಸ್ನಾನ ಮಾಡುವಾಗ, ಈ ವ್ರತಗಳನ್ನು ಕೈಗೊಳ್ಳಬೇಕು ಹಾಗೂ ಶುದ್ಧ ಮನಸ್ಸಿನ ಈ ಅಷ್ಟಾಂಗ ಹಬ್ಬ ಆಚರಿಸಬೇಕು.

೩೨. "ಈ ವ್ರತಗಳನ್ನು ಬೆಳಿಗ್ಗೆ ಶುದ್ಧ ಹಾಗೂ ಕೃತಜ್ಞತಾಪೂರ್ವಕ ಹೃದಯದಿಂದ ಆಚರಿಸಿದ ಮೇಲೆ, ವಿವೇಕದಿಂದಿರಬೇಕು ಹಾಗೂ ಭಿಕ್ಷುಗಳಿಗೆ ಆಹಾರ ಪಾನೀಯಗಳನ್ನು ನೀವಾಗಿಯೇ ನೀಡಬೇಕು.

೩೩. "ನಿಮ್ಮ ತಂದೆತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳಿ. ಋಜುತ್ವದ ಇರುವ ವ್ಯಾಪಾರ ಮಾಡಿ.

೩೪. "ಹೀಗೆ ನಿಷ್ಠಾವಂತನಾದ ಉಪಾಸಕನು ಮೇಲಿರುವ ಜ್ಯೋತಿಸಾಮ್ರಾಜ್ಯವನ್ನು ತಲುಪುತ್ತಾನೆ."

೩೫. ಹೀಗೆ, ಧರ್ಮವು ಇಬ್ಬರಿಗೂ ಒಂದೇ ಆಗಿತ್ತು ಎಂಬುದನ್ನು ಕಾಣಬಹುದು.

೩೬. ಆದರೆ ಈ ಇಬ್ಬರಿಂದ ನಿರೀಕ್ಷಿಸಿದುದರಲ್ಲಿ ಮಾತ್ರ ವ್ಯತ್ಯಾಸವಿದ್ದುದೇನೋ ನಿಜ.

೩೭. ಭಿಕ್ಷುವು ಐದು ವ್ರತಗಳನ್ನು ಕೈಗೊಳ್ಳಬೇಕು.

೩೮. ಅವನು ತಾನು ಕೊಲ್ಲುವುದಿಲ್ಲ ಎಂಬ ವ್ರತ ಕೈಗೊಳ್ಳಬೇಕು.

೩೯. ಅವನು, ತಾನು ಯಾರ ಆಸ್ತಿಯನ್ನೂ – ಅವರು ತಾವಾಗಿಯೇ ಕೊಡದ ಹೊರತು – ಸ್ವಾಧೀನಪಡಿಸಿಕೊಳ್ಳುವುದಿಲ್ಲ ಎಂಬ ವ್ರತವನ್ನು ಕೈಗೊಳ್ಳಬೇಕಿತ್ತು.

೪೦. ಅವನು ತಾನೆಂದೂ ಸುಳ್ಳು ಹೇಳುವುದಿಲ್ಲವೆಂಬ ವ್ರತವನ್ನು ಕೈಗೊಳ್ಳಬೇಕಿತ್ತು.

೪೧. ಸ್ತ್ರೀಯನ್ನು ಸಂಭೋಗಿಸಲು ಪ್ರಯತ್ನ ಮಾಡುವುದಿಲ್ಲ ಎಂಬ ವ್ರತವನ್ನು ಅವನು ಕೈಗೊಳ್ಳಬೇಕು.

೪೨. ಯಾವ ಮತ್ತುಬರಿಸುವ ಪಾನೀಯವನ್ನೂ ತಾನು ಕುಡಿಯುವುದಿಲ್ಲವೆಂಬ ವ್ರತವನ್ನೂ ಅವನು ಕೈಗೊಳ್ಳಬೇಕು.

೪೩. ಈ ಎಲ್ಲ ನಿಯಮಗಳು ಉಪಾಸಕರಿಗೂ ಅನ್ವಯಿಸುತ್ತವೆ.

೪೪. ಆದರೆ ಅವುಗಳಲ್ಲಿರುವ ವ್ಯತ್ಯಾಸವಿಷ್ಟೆ: ಭಿಕ್ಷುಗಳಿಗೆ ಮಾತ್ರ ಅವು ಉಲ್ಲಂಘಿಸಬಾರದ ವ್ರತಗಳು; ಉಪಾಸಕರಿಗೆ ಅವು ಕೇವಲ ನೈತಿಕ ಕರ್ತವ್ಯಗಳು – ಅವುಗಳನ್ನು ಅವರು ಐಚ್ಛಿಕವಾಗಿ ಗೌರವಿಸುತ್ತಾರೆ.

೪೫. ಇದಲ್ಲದೆ, ಇನ್ನೂ ಎರಡು ಗಮನಾರ್ಹ ವ್ಯತ್ಯಾಸಗಳಿವೆ.

೪೬. ಭಿಕ್ಷು ಸ್ವಂತ ಆಸ್ತಿ ಇಟ್ಟುಕೊಳ್ಳಬಾರದು; ಆದರೆ ಉಪಾಸಕರು ಇಟ್ಟುಕೊಳ್ಳಬಹುದು.
೪೭. ಭಿಕ್ಷುವಿಗೆ ಪರಿನಿರ್ವಾಣ ಪಡೆಯುವ ಸ್ವಾತಂತ್ರ್ಯವಿದೆ; ಉಪಾಸಕರಿಗೆ ನಿಬ್ಬಾಣ ಸಾಕು.
೪೮. ಇವೇ ಭಿಕ್ಷು ಮತ್ತು ಉಪಾಸಕರಿಗಿರುವ ವ್ಯತ್ಯಾಸಗಳು.
೪೯. ಆದರೆ ಧರ್ಮ ಮಾತ್ರ ಇಬ್ಬರಿಗೂ ಒಂದೇ.

## ಭಾಗ : ೫

# ಸಾಮಾನ್ಯರಿಗೆ ವಿನಯ

೧. ಶ್ರೀಮಂತರಿಗೆ ವಿನಯ
೨. ಗೃಹಸ್ಥರಿಗೆ ವಿನಯ
೩. ಮಕ್ಕಳಿಗೆ ವಿನಯ
೪. ಶಿಷ್ಯನಿಗೆ ವಿನಯ
೫. ದಂಪತಿಗಳಿಗೆ ವಿನಯ
೬. ಸ್ವಾಮಿ ಮತ್ತು ಭೃತ್ಯರಿಗೆ ವಿನಯ
೭. ತೀರ್ಮಾನಗಳು
೮. ಹುಡುಗಿಯರಿಗೆ ವಿನಯ

## ೧. ಶ್ರೀಮಂತರಿಗೆ ವಿನಯ

### (೧)

೧. ಪೂಜ್ಯಪ್ರಭುವು ಬಡತನವೇ ಅದೃಷ್ಟವಂತ ಜೀವನ ಎಂದು ಹೇಳಿ ಅದನ್ನೇನೂ ಮೇಲಕ್ಕೇರಿಸಲಿಲ್ಲ.

೨. ಅಥವಾ, ನೀವು ಭೂಮಿಯನ್ನು ಪಾರಂಪರ್ಯವಾಗಿ ಪಡೆಯುವಿರಿ, ಆದುದರಿಂದ ಇದ್ದುದರಲ್ಲೇ ಸಂತೃಪ್ತಿ ಪಡೆಯಿರಿ ಎಂದೇನೂ ಅವನು ಬಡವರಿಗೆ ಹೇಳಲಿಲ್ಲ.

೩. ಅದರ ಬದಲು ಅವನು ಸಂಪತ್ತನ್ನು ಸ್ವಾಗತಿಸಿದನು. ಆದರೆ ಸಂಪತ್ತಿನ ಗಳಿಕೆಯು ವಿನಯದ ನಿಯಮಕ್ಕೊಳಪಟ್ಟಿರಬೇಕು ಎಂದಷ್ಟೇ ಅವನು ವಿಧಿಸಿದನು.

### (೨)

೧. ಒಂದು ಸಾರಿ ಮಹಾತ್ಮನಿದ್ದಲ್ಲಿಗೆ ಅನಾಥಪಿಂಡಿಕನೆಂಬುವವನು ಬಂದನು. ಬಂದವನು, ಮಹಾತ್ಮನಿಗೆ ನಮಸ್ಕರಿಸಿ, ಒಂದು ಪಕ್ಕದಲ್ಲಿ ಆಸೀನನಾದ ಮೇಲೆ ಹೀಗೆ ಹೇಳಿದ: "ಗೃಹಸ್ಥನಾದವನು ಬಯಸುವ, ಸಂತೋಷದಾಯಕ, ಹಿತಕರವಾದರೂ ಗಳಿಸಲು ಕಷ್ಟವಾದಂಥ ವಸ್ತುಗಳು ಯಾವುವು ಎಂಬುದನ್ನು ಜ್ಞಾನಿಯಾದಂಥ ತಾವು ತಿಳಿಸುವಿರಾ?"

೨. ಪ್ರಶ್ನೆಯನ್ನು ಕೇಳಿಸಿಕೊಂಡ ಬುದ್ಧನು ಹೀಗೆ ಹೇಳಿದನು: "ಅಂಥ ವಸ್ತುಗಳಲ್ಲಿ ಮೊದಲನೆಯದೆಂದರೆ ನಿಯಮಬದ್ಧವಾಗಿ ಸಂಪತ್ತನ್ನು ಗಳಿಸುವುದು.

೩. "ನಿಮ್ಮ ಸಂಬಂಧಿಗಳು ಸಹ ಸಂಪತ್ತನ್ನು ಸಕ್ರಮವಾಗೇ ಗಳಿಸುವಂತೆ ನೀವು ನೋಡಿಕೊಳ್ಳಬೇಕಾದುದು, ಎರಡನೆಯದು.

೪. "ಮೂರನೆಯದೆಂದರೆ, ಬಹಳ ಕಾಲ ಬದುಕಿ, ದೀರ್ಘಾಯುಷ್ಯವನ್ನೂ ಅನುಭವಿಸುವುದು.

೫. "ನಿಜವಾದ ಗೃಹಸ್ಥನು ಬಯಸುವ, ಸಂತೋಷದಾಯಕವಾದ, ಹಿತಕರವಾದ, ಆದರೆ ಕಷ್ಟಸಾಧ್ಯವಾದ, ಈ ಮೂರು ವಸ್ತುಗಳನ್ನು ಪಡೆಯಬೇಕಾದರೆ, ಅದಕ್ಕೂ ಮುನ್ನ ಅವನು ನಾಲ್ಕೂ ನಿಯಮಗಳನ್ನು ಪಾಲಿಸಬೇಕು. ಅವುಗಳೆಂದರೆ, ವಿಶ್ವಾಸ, ಸದಾಚಾರ, ಔದಾರ್ಯ ಮತ್ತು ಜ್ಞಾನ ಎಂಬ ನಾಲ್ಕು ವರಗಳು.

೬. "ವಿಶ್ವಾಸ ಮತ್ತು ನಂಬಿಕೆಯೆಂಬ ವರವು, ತಥಾಗತನ ಸರ್ವಶ್ರೇಷ್ಠ ಜ್ಞಾನದಲ್ಲಿದೆ. 'ಇವನೇ ಅವನು, ಮಹಾತ್ಮ, ಪೂಜ್ಯನಾಗಿರುವವನು, ಸರ್ವಶ್ರೇಷ್ಠ ಜ್ಞಾನವನ್ನೂ ಪಡೆದಿರುವವನು, ಜ್ಞಾನದಲ್ಲಿಯೂ ಆಚಾರದಲ್ಲಿಯೂ ಪರಿಪೂರ್ಣನಾಗಿರುವವನು, ಪವಿತ್ರನಾಗಿರುವವನು, ಎಲ್ಲ ಪ್ರಪಂಚಗಳನ್ನೂ ತಿಳಿದವನು, ಮನುಕುಲದ ಅನುಪಮ ಶಿಕ್ಷಕ, ದೇವರ ಮತ್ತು ಮಾನವರ ಗುರು' ಎಂಬುದೇ ಆ ಸರ್ವಶ್ರೇಷ್ಠ ಜ್ಞಾನ.

೭. "ಸದಾಚಾರವೆಂಬ ವರವೆಂದರೆ, ಕೊಲ್ಲದಿರುವುದು, ಕಳ್ಳತನ ಮಾಡದಿರುವುದು, ವ್ಯಭಿಚಾರ ಮಾಡದಿರುವುದು, ಸುಳ್ಳು ಹೇಳದಿರುವುದು, ಮದ್ಯಪಾನ ಮಾಡದಿರುವುದು.

೮. "ಔದಾರ್ಯದ ವರವೆಂದರೆ, ಗೃಹಸ್ಥನು ದ್ವೇಷವೆಂಬ ಕಳಂಕದಿಂದ ಮುಕ್ತನಾಗಿರುವುದು, ಉದಾರನೂ ಕೊಡುಗೈ ವೀರನೂ, ಕಾಣಿಕೆಗಳನ್ನು ಕೊಡುವ ಮೂಲಕ ಆನಂದ ಪಡೆಯುವವನು, ಒಳ್ಳೆಯವನೆಂಬ ಕಾರಣದಿಂದ ಬೇಡಿಸಿಕೊಳ್ಳುವವನೂ ಮತ್ತು ಕಾಣಿಕೆಗಳನ್ನು ಕೊಡುವುದಕ್ಕೇ ತನ್ನನ್ನು ಮುಡಿಪಾಗಿಟ್ಟುಕೊಂಡವನೂ ಆಗಿರುವುದು.

೯. "ಜ್ಞಾನದ ವರ ಎಂದರೇನು? ಲೋಭ, ದ್ವೇಷ, ಕೇಡಿಗತನ, ಆಲಸ್ಯ, ತೂಕಡಿಕೆ, ಚಾಂಚಲ್ಯ ಮತ್ತು ಆವೇಗಗಳಿಗೆ ಅಧೀನವಾದ ಗೃಹಸ್ಥನು ಮಾಡಬಾರದ ಕೆಲಸಗಳನ್ನು ಮಾಡುತ್ತಾನಲ್ಲದೆ, ಮಾಡಬೇಕಾದ ಕೆಲಸಗಳನ್ನು ನಿರ್ಲಕ್ಷಿಸುತ್ತಾನೆ; ಇದರಿಂದಾಗಿ ಅವನು ಸುಖದಿಂದಲೂ, ಗೌರವದಿಂದಲೂ ವಂಚಿತನಾಗುತ್ತಾನೆ.

೧೦. "ಲೋಭ, ದ್ವೇಷ, ಕೇಡಿಗತನ, ಆಲಸ್ಯ, ತೂಕಡಿಕೆ, ಚಾಂಚಲ್ಯ, ಆವೇಗ ಮತ್ತು ಶಂಕೆ – ಇವು ಚಿತ್ತದ ದೋಷಗಳು. ಯಾವ ಗೃಹಸ್ಥನು ಈ ಚಿತ್ತದ ದೋಷಗಳಿಂದ ಮುಕ್ತನಾಗುತ್ತಾನೊ ಅವನು ಮಹಾ ವಿವೇಕವನ್ನೂ, ಅತಿಶಯ ಜ್ಞಾನವನ್ನೂ, ಸ್ಪಷ್ಟ ದೃಷ್ಟಿಯನ್ನೂ ಪರಿಪೂರ್ಣ ಜ್ಞಾನವನ್ನೂ ಗಳಿಸುತ್ತಾನೆ.

೧೧. "ಹೀಗೆ ಸಕ್ರಮವಾಗಿಯೂ ನೈತಿಕತೆಯಿಂದಲೂ, ಶ್ರಮದಿಂದಲೂ, ತೋಳ್ಬಲ ಮತ್ತು ಬೆವರಿನಿಂದಲೂ, ಗಳಿಸಿದ ಸಂಪತ್ತು ಒಂದು ಮಹಾನ್ ವರವೇ ಸರಿ. ಅಂಥ ಗೃಹಸ್ಥನು ಸುಖಸಂತೋಷಗಳಿಂದಿರುವುದೂ ಅಲ್ಲದೆ, ತನ್ನ ಸಂತೋಷವನ್ನು ಪೂರ್ಣವಾಗಿ ಕಾಪಾಡಿಕೊಳ್ಳುತ್ತಾನೆ; ಅಲ್ಲದೆ, ತನ್ನ ತಂದೆತಾಯಿ, ಹೆಂಡತಿ–ಮಕ್ಕಳು, ಆಳುಗಳು ಮತ್ತು ಕಾರ್ಮಿಕರು, ಗೆಳೆಯರು ಮತ್ತು ಸಂಗಡಿಗರು – ಇವರೆಲ್ಲರ ಸುಖಸಂತೋಷಗಳನ್ನೂ ಕಾಪಾಡಿ ಅವರ ಪೂರ್ಣ ಸಂತೋಷವನ್ನು ಕಾಪಾಡುತ್ತಾನೆ."

## ೨. ಗೃಹಸ್ಥರಿಗೆ ವಿನಯ

ಈ ವಿಷಯವಾಗಿ ಬುದ್ಧನ ಆಲೋಚನೆಗಳು ಅವನು ಸಿಗಳನೊಡನೆ ಮಾಡಿದ ಸಂಭಾಷಣೆಯಲ್ಲಿ ಮೂಡಿಬಂದಿವೆ.

೧. ಒಂದು ಸಾರಿ ಮಹಾತ್ಮನು ರಾಜಗೃಹದ ವೇಣುವನದಲ್ಲಿರುವ, ಅಳಿಲುಗಳಿಗೆ ಆಹಾರ ನೀಡುವ ಸ್ಥಳದಲ್ಲಿ ತಂಗಿದ್ದನು.

೨. ಆಗ ಒಬ್ಬ ಗೃಹಸ್ಥನ ಮಗನಾದ ಯುವಕನಾದ ಸಿಗಳನು ಒಂದು ದಿನ ಹೊತ್ತಿಗೆ ಮುಂಚೆ ಎದ್ದು, ರಾಜಗೃಹದಿಂದ ಹೊರಬಿದ್ದನು. ಒದ್ದೆ ತಲೆಗೂದಲು ಮತ್ತು ಒದ್ದೆ ಬಟ್ಟೆಯಲ್ಲಿಯೇ ಜೋಡಿಸಿದ ಕೈಗಳನ್ನೂ ಮೇಲೆತ್ತಿಕೊಂಡು, ಭೂಮಿ ಮತ್ತು ಆಕಾಶದ ಎಲ್ಲ ದಿಕ್ಕುಗಳಿಗೆ– ಅಂದರೆ, ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಿಗೂ, ಪಾತಾಳ ಮತ್ತು ಆಕಾಶಕ್ಕೂ ನಮಸ್ಕರಿಸಿದನು.

೩. ಅದೇ ದಿನ, ಮಹಾತ್ಮನೂ ಬೇಗ ಎದ್ದವನೇ, ಬಟ್ಟೆ ತೊಟ್ಟುಕೊಂಡು, ಭಿಕ್ಷಾಪಾತ್ರೆಯನ್ನೂ, ಮೇಲುಹೊದಿಕೆಯನ್ನೂ ಹಿಡಿದುಕೊಂಡು, ಭಿಕ್ಷಾಟನೆಗೆಂದು ರಾಜಗೃಹವನ್ನು ಪ್ರವೇಶಿಸಿದನು. ಆಗ ಪೂಜೆ ಸಲ್ಲಿಸುತ್ತಿದ್ದ ಯುವ ಸಿಗಳನನ್ನು ನೋಡಿದ ಮಹಾತ್ಮನು "ಭೂಮಿಯ ಮತ್ತು ಆಕಾಶದ ದಿಕ್ಕುಗಳನ್ನೇಕೆ ಪೂಜಿಸುತ್ತೀಯ?" ಎಂದು ಕೇಳಿದನು.

೪. "ನನ್ನ ತಂದೆಯು ಸಾಯುವಾಗ ನನಗೆ ಹೀಗೆ ಹೇಳಿದ. 'ಪ್ರಿಯ ಪುತ್ರನೇ, ನೀನು ಭೂವಲಯಗಳನ್ನೂ, ಆಕಾಶವಲಯಗಳನ್ನೂ ಪೂಜಿಸಬೇಕು'. ಆದ್ದರಿಂದ ಸ್ವಾಮಿ, ನನ್ನ ತಂದೆಯ ಮಾತುಗಳನ್ನು ಗೌರವಿಸಲೆಂದೇ ನಾನು ಈ ರೀತಿ ಪೂಜಿಸುತ್ತಿರುವುದು."

೫. "ಇದು ಹೇಗೆ ಪ್ರಾಪಂಚಿಕರ ನಿಜವಾದ ಧರ್ಮವಾಗಿಲು ಸಾಧ್ಯ" ಎಂದು ಪವಿತ್ರಾತ್ಮನು ಕೇಳಿದನು. ಅದಕ್ಕೆ ಉತ್ತರವಾಗಿ ಸಿಗಳನು "ಇದಲ್ಲದೆ ಮನುಷ್ಯ ಧರ್ಮ ಮತ್ತೇನಿರಲು ಸಾಧ್ಯ?" ಎಂದು ಕೇಳಿದನು. ಅಲ್ಲದೆ, "ಒಂದು ವೇಳೆ ಅಂಥದ್ದೇನಾದರೂ ಇದ್ದರೆ, ಮಹಾತ್ಮರು ಅದನ್ನು ನನಗೆ ಬೋಧಿಸಿದರೆ ಲೇಸು" ಎಂದನು.

೬. "ಹಾಗಾದರೆ ಯುವ ಗೃಹಸ್ಥನೇ ನಾನು ಹೇಳುವುದನ್ನು ಕಿವಿಗೊಟ್ಟು ಕೇಳು, ಅದೇನೆಂದು ನಾನು ತಿಳಿಸುತ್ತೇನೆ". ಅದಕ್ಕೆ ಸಿಗಳನು "ಹಾಗೆ ಆಗಲಿ ಪ್ರಭು" ಎಂದು ಪ್ರತಿಕ್ರಿಯಿಸಿದಾಗ, ಮಹಾತ್ಮನು ಹೀಗೆ ಹೇಳಿದನು.

೭ "ಯಾವುದೇ ಧರ್ಮವು ಮಾನವ ಧರ್ಮವಾಗಬೇಕಾದರೆ, ಅದು ದುರ್ನಡತೆಯನ್ನು ಬಿಡುವಂತೆ ಬೋಧಿಸಬೇಕು. ಜೀವಹಾನಿ, ದಾನವಲ್ಲದ ವಸ್ತುಗಳನ್ನೂ ತೆಗೆದುಕೊಳ್ಳುವುದು, ವ್ಯಭಿಚಾರ ಮತ್ತು ಸುಳ್ಳು ಹೇಳುವುದು – ಈ ನಾಲ್ಕು ದುರ್ಗುಣಗಳನ್ನೂ ಮನುಷ್ಯನು ತ್ಯಜಿಸಬೇಕು.

೮. "ಸಿಗಳ, ಎಲ್ಲ ದುಷ್ಕಾರ್ಯಗಳನ್ನೂ ಪಕ್ಷಪಾತ, ದ್ವೇಷ, ಮೂರ್ಖತನ ಮತ್ತು ಭಯ – ಈ ಕಾರಣಗಳಿಂದಾಗಿ ಮಾಡಲಾಗುತ್ತದೆ. ಒಂದು ವೇಳೆ ಮನುಷ್ಯನು ಈ ಕಾರಣಗಳನ್ನು ದೂರವಿಟ್ಟರೆ, ಅವನು ಯಾವ ದುಷ್ಕೃತ್ಯವನ್ನೂ ಮಾಡುವುದಿಲ್ಲ.

೯. "ಯಾವುದೇ ಧರ್ಮವು ಮನುಷ್ಯನ ಧರ್ಮವಾಗಬೇಕಾದರೆ, ಅದು ಸಂಪತ್ತನ್ನು ಹಾಳು ಮಾಡಬಾರದೆಂದು ಅವನಿಗೆ ಬೋಧಿಸಬೇಕು. ಮಾದಕ ಪಾನೀಯಗಳ ಚಟ, ಅವೇಳೆಯಲ್ಲಿ ಬೀದಿಗಳಲ್ಲಿ ಸುತ್ತುವುದು, ಜಾತ್ರೆಗಳಲ್ಲಿ ಅಲೆದಾಡುವುದು, ಜೂಜಾಟದ ಚಟ, ದುಷ್ಟಸಂಗ, ಸೋಮಾರಿತನ – ಇವುಗಳಿಂದ ಸಂಪತ್ತು ನಶಿಸುತ್ತದೆ.

೧೦. "ಸಿಗಳ, ಮತ್ತೇರಿಸುವ ಪಾನೀಯಗಳ ಚಟ ಹೊಂದುವುದರಿಂದ ಆರು ಅಪಾಯಗಳಿವೆ; ಸಂಪತ್ತಿನ ನಷ್ಟ, ಜಗಳಗಳು ಹೆಚ್ಚಾಗುವಿಕೆ, ರೋಗಗಳಿಗೆ ತುತ್ತಾಗುವ ಸಾಧ್ಯತೆ, ಒಳ್ಳೆಯ ನಡತೆಯಿಲ್ಲದಿರುವುದು, ಅಸಭ್ಯ ವರ್ತನೆ, ಬುದ್ಧಿಶಕ್ತಿ ಕಡಿಮೆಯಾಗುವುದು.

೧೧. "ಅವೇಳೆಯಲ್ಲಿ ಬೀದಿಗಳಲ್ಲಿ ಸುತ್ತುವುದರಿಂದ ಆರು ಅಪಾಯಗಳುಂಟಾಗುತ್ತವೆ. ಅವೆಂದರೆ: ಅಂಥವನಿಗೆ ಯಾವ ರಕ್ಷಣೆಯೂ ಇರುವುದಿಲ್ಲ; ಅವನ ಹೆಂಡತಿ ಮಕ್ಕಳಿಗೂ ಯಾವ ರಕ್ಷಣೆಯೂ ಇರುವುದಿಲ್ಲ; ಅವನ ಆಸ್ತಿಪಾಸ್ತಿಗೂ ರಕ್ಷಣೆಯಿರುವುದಿಲ್ಲ; ಯಾರಿಗೂ ಗೊತ್ತಾಗದ ಅಪರಾಧಗಳನ್ನು ಅವನು ಮಾಡಿದ್ದಾನೆಂಬ ಶಂಕೆಗೆ ಗುರಿಯಾಗುತ್ತಾನೆ. ಅನೇಕ ಗಾಳಿಮಾತುಗಳಿಗೆ ಅವನು ಬಲಿಯಾಗುತ್ತಾನೆ. ಇಂಥವೇ ಅನೇಕ ತೊಂದರೆಗಳಿಗೆ ಅವನು ಸಿಕ್ಕಿಹಾಕಿಕೊಳ್ಳುತ್ತಾನೆ.

೧೨. "ಜಾತ್ರೆಗಳಲ್ಲಿ ಅಲೆದಾಡುವುದರಿಂದ ಆರು ಅಪಾಯಗಳು ಉಂಟಾಗುತ್ತವೆ: ಅವನು 'ಈಗ ನೃತ್ಯ ಎಲ್ಲಿ ನಡೆಯುತ್ತಿದೆ? ಈಗ ಎಲ್ಲಿ ಗಾಯನ ನಡೆಯುತ್ತಿದೆ? ಸಂಗೀತ ಎಲ್ಲಿದೆ? ಪಠಣ ಎಲ್ಲಿ ನಡೆಯುತ್ತಿದೆ? ತಾಳಗಳೆಲ್ಲಿವೆ? ತಮಟೆಗಳೆಲ್ಲಿವೆ?' ಎಂದು ಸದಾ ಚಿಂತಿಸುತ್ತಿರುತ್ತಾನೆ.

೧೩. "ಜೂಜಿನ ಮೋಹಕ್ಕೊಳಗಾದವನಿಗೂ ಆರು ಅಪಾಯಗಳಿವೆ. ಅವೆಂದರೆ: ಗೆದ್ದರೆ ದ್ವೇಷವನ್ನು ಗಳಿಸುತ್ತಾನೆ; ಸೋತರೆ, ತಾನು ಕಳೆದುಕೊಂಡ ಹಣದ ಬಗ್ಗೆ ದುಃಖಪಡುತ್ತಾನೆ; ಅವನ ವಾಸ್ತವಿಕ

ಶಕ್ತಿ ವ್ಯಯವಾಗುತ್ತದೆ; ನ್ಯಾಯಾಲಯದಲ್ಲಿ ಅಂಥ ವ್ಯಕ್ತಿಯ ಮಾತಿಗೆ ಬೆಲೆಯಿಲ್ಲ; ಸ್ನೇಹಿತರಿಂದಲೂ ಅಧಿಕಾರಿಗಳಿಂದಲೂ ಅವನು ತಿರಸ್ಕೃತನಾಗುತ್ತಾನೆ; ಹೆಣ್ಣು ಕೊಡುವವರು ಅಥವಾ ತೆಗೆದುಕೊಳ್ಳುವವರು ಅವನ ಬಳಿ ಹೋಗುವುದಿಲ್ಲ, ಏಕೆಂದರೆ, ಅವರು 'ಜೂಜುಕೋರನ ಹತ್ತಿರ ತನ್ನ ಹೆಂಡತಿಯನ್ನು ನೋಡಿಕೊಳ್ಳುವಷ್ಟು ಹಣವಿರುವುದಿಲ್ಲ' ಎನ್ನುತ್ತಾರೆ.

೧೪. "ದುರ್ಜನರ ಸಂಗದಿಂದ ಆರು ಕೇಡುಗಳಿವೆ. ಅವೆಂದರೆ; ಅವನಿಗೆ ಯಾವ ಜೂಜುಕೋರನಾದರೂ, ಯಾವ ವ್ಯಭಿಚಾರಿಯಾದರೂ, ಯಾವ ಕುಡುಕನಾದರೂ, ಯಾವ ಕಪಟಿಯಾದರೂ, ಯಾವ ವಂಚಕನಾದರೂ, ಯಾವ ಕ್ರೂರಿಯಾದರೂ ಅವನ ಸ್ನೇಹಿತ ಅಥವಾ ಸಂಗಡಿಗರಾಗಿರುತ್ತಾರೆ.

೧೫. "ಸೋಮಾರಿತನದಿಂದ ಆರು ಕೇಡುಗಳಿವೆ. ಅವನು 'ಈಗ ಚಳಿಯಿದೆ' ಎಂದು ಏನನ್ನೂ ಮಾಡುವುದಿಲ್ಲ. 'ಈಗ ಸೆಕೆಯಿದೆ' ಎಂದು ಹೇಳಿ ಯಾವ ಕೆಲಸವನ್ನೂ ಮಾಡುವುದಿಲ್ಲ, 'ಇಷ್ಟು ಮುಂಚೆಯೇ ಏಕೆ' ಎಂದು ಹೇಳಿ ಅವನು ಏನನ್ನೂ ಮಾಡುವುದಿಲ್ಲ, 'ಇದು ಬಹಳ ತಡವಾಯಿತು' ಎಂದು ಹೇಳಿ ಅವನು ಕೆಲಸ ಮಾಡುವುದಿಲ್ಲ, 'ಈಗ ನಾನು ಹಸಿದಿದ್ದೇನೆ' ಎಂದು ಹೇಳಿ ಅವನು ಕೆಲಸ ಮಾಡುವುದಿಲ್ಲ, 'ಈಗ ನನಗೆ ಹೊಟ್ಟೆ ತುಂಬಿದೆ' ಎಂದು ಹೇಳಿ ಅವನು ಏನನ್ನೂ ಮಾಡುವುದಿಲ್ಲ – ಹೀಗೆ ಅವನು ಮಾಡಬೇಕಾದುದೆಲ್ಲವೂ ಹಾಗೆ ಉಳಿದು, ಅವನಿಗೆ ಹೊಸ ಸಂಪತ್ತೂ ಬರುವುದಿಲ್ಲ, ಇರುವ ಸಂಪತ್ತು ಕ್ಷೀಣಿಸುತ್ತಾ ಹೋಗುತ್ತದೆ.

೧೬. "ಯಾವುದೇ ಧರ್ಮವು ಮಾನವ ಧರ್ಮವಾಗಬೇಕಾದರೆ, ಅದು ಮನುಷ್ಯನಿಗೆ, 'ನಿಜವಾದ ಸ್ನೇಹಿತ ಯಾರು' ಎಂಬುದನ್ನು ತಿಳಿಸಿಕೊಡಬೇಕು.

೧೭. "ಸ್ನೇಹಿತರೆಂದು ಸೋಗು ಹಾಕುವ ನಾಲ್ಕು ಜನರಿದ್ದಾರೆ. ನಾವು ಅವರನ್ನು ವೈರಿಗಳೆಂದು ಪರಿಗಣಿಸಬೇಕು. ಅವರೆಂದರೆ: ದೋಚಿಕೊಳ್ಳುವ ಪ್ರವೃತ್ತಿಯವನು, ಏನೂ ಕೆಲಸ ಮಾಡದೆ ಬರಿ ಮಾತಾಡುವವನು, ಹೊಗಳುಭಟ್ಟ ಮತ್ತು ದುಂದುಗಾರ.

೧೮. "ಗೆಳೆಯನಂತೆ ಕಾಣುವ ಯಾರನ್ನು ವೈರಿಯೆಂದು ತಿಳಿಯಬೇಕಾಗಿದೆಯೊ ಅವರಲ್ಲಿ ಮೊದಲನೆಯವನು ಒಬ್ಬನು. ಏಕೆಂದರೆ, ಅವನು ದೋಚಿಕೊಳ್ಳುವ ಸ್ವಭಾವದವನಾದುದರಿಂದ ಅವನು ಕೊಡುವುದು ಕಡಿಮೆ, ಕೇಳುವುದು ಹೆಚ್ಚು; ಅವನು ತನ್ನ ಕರ್ತವ್ಯವನ್ನು ಭಯದಿಂದಷ್ಟೇ ಮಾಡುತ್ತಾನೆ, ಅವನಿಗೆ ತನ್ನ ಹಿತದಲ್ಲೇ ಹೆಚ್ಚು ಆಸಕ್ತಿ.

೧೯. "ಏನೂ ಕೆಲಸ ಮಾಡದೆ ಬರೀ ಮಾತಾಡುವವನು ಗೆಳೆಯನಂತೆ ಕಂಡರೂ ಅವನನ್ನು ವೈರಿಯಂತೆ ಕಾಣಬೇಕು. ಏಕೆಂದರೆ ಅವನು ಭೂತಕಾಲಕ್ಕೆ ಸಂಬಂಧಿಸಿದಂತೆ ಗೆಳೆತನ ಮಾಡುತ್ತಾನೆ. ಟೊಳ್ಳು ಮಾತುಗಳಿಂದ ನಿನ್ನ ಒಲುಮೆಯನ್ನು ಸಂಪಾದಿಸಲು ಪ್ರಯತ್ನಿಸುತ್ತಾನೆ. ಆದರೆ ನಿನ್ನ ಕೆಲಸ ಮಾಡುವ ಪ್ರಸಂಗ ಬಂದಾಗ, ತನ್ನ ಅಸಾಮರ್ಥ್ಯಗಳನ್ನು ಪ್ರದರ್ಶಿಸುತ್ತಾನೆ.

೨೦. "ಗೆಳೆಯನಂತೆ ಕಾಣುವ ಹೊಗಳು ಭಟ್ಟನನ್ನೂ ವೈರಿಯಂತೆ ಕಾಣಬೇಕು. ಏಕೆಂದರೆ, ಅವನು ದುಷ್ಕಾರ್ಯಗಳನ್ನು ಮಾಡಲು ಒಪ್ಪಿಗೆ ಕೊಡುತ್ತಾನೆ ಮತ್ತು ಸತ್ಕಾರ್ಯಗಳನ್ನು ಮಾಡಲು ಅಸಮ್ಮತಿ ಸೂಚಿಸುತ್ತಾನೆ; ನಿನ್ನ ಮುಖಸ್ತುತಿ ಮಾಡುತ್ತಾನೆ; ಆದರೆ ಬೇರೆಯವರೆದುರಿಗೆ ನಿನ್ನನ್ನು ತೆಗಳುತ್ತಾನೆ.

೨೧. "ಅದೇ ರೀತಿ, ಗೆಳೆಯನಂತೆ ಕಾಣುವ ದುಂದುಗಾರನನ್ನೂ ವೈರಿಯೆಂದು ಪರಿಗಣಿಸಬೇಕು. ಏಕೆಂದರೆ, ನೀನು ಅವೇಳೆಯಲ್ಲಿ ಗಲ್ಲಿಗಳಿಗೆ ಭೇಟಿ ನೀಡಿದಾಗ, ಅವನು ನಿನ್ನ ಜೊತೆಗಾರನಾಗಿರುತ್ತಾನೆ; ನೀನು ಆಟಗಳನ್ನೂ ಜಾತ್ರೆಗಳನ್ನೂ ನೋಡುವಾಗ, ಅವನು ನಿನ್ನ ಜೊತೆಗಾರನಾಗಿರುತ್ತಾನೆ;

ನೀನು ಜೂಜಿನ ಮೋಹಕ್ಕೊಳಗಾಗಿದ್ದಾಗ, ಅವನು ನಿನ್ನ ಜೊತೆಗಾರನಾಗಿರುತ್ತಾನೆ.

೨೨. "ಹೃದಯ ವೈಶಾಲ್ಯವಿರುವ ಸ್ನೇಹಿತರೆಂದರೆ, ನಾಲ್ಕು ರೀತಿಯವರು ಮಾತ್ರ; ಸಹಾಯ ಮಾಡುವವನು; ಸುಖ ಮತ್ತು ದುಃಖಗಳೆರಡರಲ್ಲಿಯೂ ಒಂದೇ ರೀತಿಯಲ್ಲಿರುವ ಸ್ನೇಹಿತ; ಒಳ್ಳೆಯ ಹಿತೋಪದೇಶ ನೀಡುವ ಸ್ನೇಹಿತ; ಸಹಾನುಭೂತಿಯುಳ್ಳ ಸ್ನೇಹಿತ.

೨೩. "ಯಾವ ಸ್ನೇಹಿತ ಸಹಾಯ ಮಾಡುತ್ತಾನೊ ಅವನನ್ನು ಹೃದಯದಲ್ಲಿಯೂ ಘನವಾದವನು ಎಂದು ಪರಿಗಣಿಸಬೇಕು; ಏಕೆಂದರೆ, ನೀನು ಅಜಾಗರೂಕನಾಗಿದ್ದಾಗ ಅವನು ನಿನ್ನನ್ನು ಕಾಪಾಡುತ್ತಾನೆ; ನೀನು ಅಜಾಗರೂಕನಾಗಿದ್ದಾಗ ಅವನು ನಿನ್ನ ಆಸ್ತಿಯನ್ನು ಕಾಪಾಡುತ್ತಾನೆ; ನೀನು ಭಯಗೊಂಡಾಗ, ಅವನು ನಿನಗೆ ಆಶ್ರಯದಾತನಾಗಿರುತ್ತಾನೆ; ನೀನು ಕೆಲಸ ಮಾಡುವಾಗ, ನಿನಗೆ ಅಗತ್ಯಕ್ಕಿಂತ ಎರಡರಷ್ಟನ್ನು ಅವರು ನಿನಗೆ ಕೊಡುತ್ತಾನೆ.

೨೪. "ಸುಖ ಮತ್ತು ದುಃಖಗಳೆರಡರಲ್ಲಿಯೂ ಒಂದೇ ತೆರನಾಗಿರುವ ಸ್ನೇಹಿತನು ಹೃದಯದಲ್ಲಿಯೂ ಘನವಾದವನು ಎಂದು ತಿಳಿಯಬೇಕು. ಏಕೆಂದರೆ, ಅವನು ನಿನಗೆ ತನ್ನ ಗುಟ್ಟುಗಳನ್ನೆಲ್ಲಾ ಹೇಳಿಕೊಳ್ಳುತ್ತಾನೆ; ನಿನ್ನ ಗುಟ್ಟುಗಳನ್ನೆಲ್ಲ ಗುಟ್ಟಾಗಿಟ್ಟುಕೊಂಡಿರುತ್ತಾನೆ; ನಿನ್ನ ಕಷ್ಟಗಳಲ್ಲಿ ನಿನ್ನನ್ನು ಅವನು ಕೈಬಿಡುವುದಿಲ್ಲ. ನಿನಗೋಸ್ಕರ ಅವನು ತನ್ನ ಪ್ರಾಣವನ್ನಾದರೂ ಕೊಡುತ್ತಾನೆ.

೨೫. "ನೀನು ಏನು ಮಾಡಬೇಕು ಎಂಬುದನ್ನು ಒತ್ತಾಯಪೂರ್ವಕವಾಗಿ ಹೇಳುವ ಸ್ನೇಹಿತನು ಹೃದಯದಲ್ಲಿ ಘನವಾದವನಾಗಿರುತ್ತಾನೆ. ಏಕೆಂದರೆ, ನೀನು ತಪ್ಪು ಮಾಡುವಾಗ, ನಿನ್ನನ್ನು ತಡೆಹಿಡಿಯುತ್ತಾನೆ. ಒಳ್ಳೆಯದನ್ನು ಮಾಡಲು ಒತ್ತಾಯಿಸುತ್ತಾನೆ, ನೀನು ಕೇಳಿರದ ವಿಚಾರಗಳನ್ನು ನಿನಗೆ ತಿಳಿಸುತ್ತಾನೆ, ನಿನಗೆ ಸ್ವರ್ಗದ ದಾರಿ ತಿಳಿಸಿಕೊಡುತ್ತಾನೆ.

೨೬. "ಸಹಾನುಭೂತಿ ತೋರಿಸುವ ಸ್ನೇಹಿತನು ಹೃದಯದಲ್ಲೂ ಶ್ರೀಮಂತನಾಗಿರುತ್ತಾನೆ ಎಂದು ತಿಳಿಯಬೇಕು; ಏಕೆಂದರೆ ನಿನ್ನ ದುರದೃಷ್ಟವನ್ನು ನೋಡಿ ಸಂತೋಷಪಡುವುದಿಲ್ಲ; ಅವನು ನಿನ್ನ ಉನ್ನತಿಯನ್ನು ನೋಡಿ ಸಂತೋಷಪಡುತ್ತಾನೆ; ನಿನ್ನ ಬಗ್ಗೆ ಕೆಟ್ಟದ್ದು ಮಾತಾಡುವವರನ್ನು ಅವನು ತಡೆಹಿಡಿಯುತ್ತಾನೆ; ನಿನ್ನನ್ನು ಹೊಗಳುವವರನ್ನು ಶ್ಲಾಘಿಸುತ್ತಾನೆ."

೨೭. "ಯಾವುದೇ ಧರ್ಮವು ಮಾನವನ ಧರ್ಮವಾಗಬೇಕಾದರೆ, ಅದು ಆರು ದಿಕ್ಕುಗಳನ್ನು ಪೂಜಿಸುವಂತೆ ಬೋಧಿಸುವುದರ ಬದಲು, ತಂದೆತಾಯಿ, ಹೆಂಡತಿ ಮಕ್ಕಳು ಮತ್ತು ಸಂಗಡಿಗರು, ಮನೆಯಾಳುಗಳು ಮತ್ತು ಕಾರ್ಮಿಕರು, ಮತ್ತು ಧರ್ಮಗುರುಗಳನ್ನು ಗೌರವಿಸಲೂ ಪೂಜಿಸಲೂ ಬೋಧಿಸಬೇಕು."

## ೩. ಮಕ್ಕಳಿಗೆ ವಿನಯ

೧. "ಮಗನು ತನ್ನ ತಂದೆತಾಯಿಗಳಿಗೆ ಅವರಿಂದ ಆಶ್ರಯ ಪಡೆದ ನಾನು ಇನ್ನು ಮುಂದೆ ಅವರಿಗೆ ಆಶ್ರಯ ಕೊಡುತ್ತೇನೆ; ಅವರ ಪಾಲಿನ ಕರ್ತವ್ಯಗಳನ್ನು ನಾನು ಮಾಡುತ್ತೇನೆ. ನಮ್ಮ ಕುಲದ ವಂಶವನ್ನೂ ಸಂಪ್ರದಾಯವನ್ನೂ ಕಾಪಾಡಿಕೊಳ್ಳುತ್ತೇನೆ. ನಮ್ಮ ವಂಶಕ್ಕೆ ಯೋಗ್ಯನೆನಿಸಿಕೊಳ್ಳುತ್ತೇನೆ ಎಂದು ಮಾತುಕೊಡಬೇಕು. ಏಕೆಂದರೆ, ತಂದೆತಾಯಿಗಳು ಅವನನ್ನು ಪ್ರೀತಿಸುತ್ತಾರೆ, ಅವನು ದುಷ್ಕೃತ್ಯ ಮಾಡುವಾಗ ಅವನನ್ನು ನಿಯಂತ್ರಿಸುತ್ತಾರೆ, ಸದ್ಗುಣ ಬೆಳೆಸಿಕೊಳ್ಳಲು ಉಪದೇಶಿಸುತ್ತಾರೆ. ಅವನ ಉದ್ಯೋಗದಲ್ಲಿ ಅವನಿಗೆ ಶಿಕ್ಷಣ ನೀಡುತ್ತಾರೆ, ಅವನಿಗೆ ತಮ್ಮ ವಂಶದ ಆಸ್ತಿಯನ್ನು ವಹಿಸಿಕೊಡುತ್ತಾರೆ."

## ೪. ಶಿಷ್ಯನಿಗೆ ವಿನಯ

೧. "ಶಿಷ್ಯನು ಗುರುಗಳು ಬಂದಾಗ ಎದ್ದುನಿಂತು, ನಮಸ್ಕರಿಸಿ, ಅವರ ಆಜ್ಞೆಗಾಗಿ ಕಾಯಬೇಕು; ಕಲಿಯಲು ಆಸಕ್ತಿ ತೋರಿಸಿ ಅವರ ಉಪಚಾರ ಮಾಡಿ ಮತ್ತು ಅವರು ಬೋಧಿಸುವಾಗ ಗಮನವಿತ್ತು, ಅವರ ಸೇವೆ ಮಾಡಬೇಕು. ಏಕೆಂದರೆ, ಗುರುಗಳು ತಮ್ಮ ಶಿಷ್ಯರನ್ನು ಪ್ರೀತಿಸುತ್ತಾರೆ. ಅವನು ಯಾವುದರಲ್ಲಿ ಶಿಕ್ಷಣ ಪಡೆದಿದ್ದಾನೋ ಅದರಲ್ಲಿ ಅವನಿಗೆ ಒಳ್ಳೆಯ ಶಿಕ್ಷಣ ಕೊಡುತ್ತಾರೆ. ಅವನು ಯಾವುದಕ್ಕೆ ಅಂಟಿಕೊಳ್ಳುತ್ತಾನೋ ಅದಕ್ಕೆ ಚೆನ್ನಾಗಿ ಅಂಟಿಕೊಳ್ಳುವಂತೆ ಮಾಡುತ್ತಾರೆ. ಅವರು ಪ್ರತಿಕಲೆಗೆ ಸಂಬಂಧಿಸಿದ ಶಾಸ್ತ್ರವನ್ನು ಕಲಿಸಿಕೊಡುತ್ತಾರೆ. ಅವನ ಗೆಳೆಯರು ಹಾಗೂ ಸಂಗಡಿಗರ ಮುಂದೆ ಅವನನ್ನು ಪ್ರಶಂಸಿಸುತ್ತಾರೆ. ಅವನಿಗೆ ಎಲ್ಲ ಕಡೆಯಲ್ಲೂ ರಕ್ಷಣೆ ಸಿಗುವಂತೆ ಮಾಡುತ್ತಾರೆ."

## ೫. ದಂಪತಿಗಳಿಗೆ ವಿನಯ

೧. "ಗಂಡನು ತನ್ನ ಹೆಂಡತಿಗೆ ಮರ್ಯಾದೆ ತೋರಿಸುವ ಮೂಲಕ, ಸೌಜನ್ಯ ತೋರಿಸುವ ಮೂಲಕ, ನಿಷ್ಠೆ ತೋರಿಸುವ ಮೂಲಕ, ಅವಳಿಗೆ ಅಧಿಕಾರ ನೀಡುವ ಮೂಲಕ, ಅವಳಿಗೆ ಗೌರವ ಸಲ್ಲಿಸುವ ಮೂಲಕ, ಅವಳನ್ನು ಆದರಿಸಬೇಕು. ಏಕೆಂದರೆ, ಹೆಂಡತಿಯು ಗಂಡನನ್ನು ಪ್ರೀತಿಸುತ್ತಾಳೆ; ತನ್ನ ಮತ್ತು ತನ್ನ ಗಂಡನ ಕಡೆಯ ಬಂಧುಗಳಿಗೆ ಆದರಾತಿಥ್ಯವನ್ನೂ ಕೊಡುವ ಮೂಲಕ, ಗಂಡನಿಗೆ ನಿಷ್ಠೆ ತೋರಿಸುವ ಮೂಲಕ, ಅವನು ತಂದುದನ್ನು ಕಾಪಾಡುವ ಮೂಲಕ, ತನ್ನ ಎಲ್ಲ ಕೆಲಸಗಳನ್ನೂ ಶ್ರಮದಿಂದಲೂ ಕೌಶಲ್ಯದಿಂದಲೂ ನಿರ್ವಹಿಸುವ ಮೂಲಕ, ಆಕೆ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಾಳೆ.

೨. "ಕುಲೀನನು ತನ್ನ ಸ್ನೇಹಿತರು ಮತ್ತು ಸಂಗಡಿಗರನ್ನು ಔದಾರ್ಯ, ಸೌಜನ್ಯ ಮತ್ತು ಸದ್ಬುದ್ಧಿಯಿಂದ ಕಾಣುವ ಮೂಲಕವೂ, ಅವರನ್ನು ತನ್ನಂತೆಯೇ ಕಾಣುವ ಮೂಲಕವೂ, ಮಾತಿನಂತೆ ಒಳ್ಳೆಯವನಾಗಿರುವ ಮೂಲಕವೂ, ಉಪಚರಿಸಬೇಕು. ಏಕೆಂದರೆ, ಅವನ ಸ್ನೇಹಿತರು ಮತ್ತು ಆಪ್ತರು ಅವನನ್ನು ಪ್ರೀತಿಸುತ್ತಾರೆ, ಅವನು ಅಜಾಗರೂಕನಾಗಿದ್ದಾಗ ಅವರು ಅವನನ್ನು ರಕ್ಷಿಸುತ್ತಾರೆ; ಅಂಥ ಸಂದರ್ಭದಲ್ಲಿ ಅವನ ಆಸ್ತಿಯನ್ನೂ ರಕ್ಷಿಸುತ್ತಾರೆ; ಅಪಾಯದಲ್ಲಿ ಅವನಿಗೆ ಆಶ್ರಯ ನೀಡುತ್ತಾರೆ, ಅವನು ಸಂಕಟದಲ್ಲಿದ್ದಾಗ ಅವನನ್ನು ಬಿಟ್ಟುಹೋಗುವುದಿಲ್ಲ. ಅವನ ಕುಟುಂಬಕ್ಕೆ ದಾಕ್ಷಿಣ್ಯ ತೋರಿಸುತ್ತಾರೆ."

## ೬. ಸ್ವಾಮಿ ಮತ್ತು ಭೃತ್ಯರಿಗೆ ವಿನಯ

೧. "ಸ್ವಾಮಿಯು ತನ್ನ ಭೃತ್ಯರಿಗೂ ನೌಕರರಿಗೂ, ಅವರವರ ಶಕ್ತಿಗೆ ತಕ್ಕಂತೆ ಕೆಲಸಗಳನ್ನು ಕೊಡುವ ಮೂಲಕವೂ, ಅವರಿಗೆ ಆಹಾರ ಮತ್ತು ಸಂಬಳ ಕೊಡುವ ಮೂಲಕವೂ, ಅವರು ರೋಗಗ್ರಸ್ತರಾದಾಗ ಉಪಚರಿಸುವ ಮೂಲಕವೂ, ಅವರೊಡನೆ ಅಪರೂಪದ ಭಕ್ಷ್ಯಗಳನ್ನು ಹಂಚಿಕೊಳ್ಳುವ ಮೂಲಕವೂ,

ಆಗಾಗ್ಗೆ ಅವರಿಗೆ ಬಿಡುವು ಕೊಡುವ ಮೂಲಕವೂ, ಅವರನ್ನು ನೋಡಿಕೊಳ್ಳಬೇಕು. ಏಕೆಂದರೆ ಭೃತ್ಯರೂ ನೌಕರರೂ ತಮ್ಮ ಒಡೆಯನನ್ನು ಪ್ರೀತಿಸುತ್ತಾರೆ; ಅವರು ಅವನಿಗಿಂತ ಬೇಗ ಏಳುತ್ತಾರೆ, ಅವನು ಮಲಗಿದ ನಂತರ ಅವರು ವಿರಮಿಸುತ್ತಾರೆ; ಅವನು ಕೊಟ್ಟಿದ್ದರಲ್ಲೇ ಅವರು ತೃಪ್ತಿಪಟ್ಟುಕೊಳ್ಳುತ್ತಾರೆ. ತಮ್ಮ ಕೆಲಸವನ್ನು ಅವರು ಚೆನ್ನಾಗಿ ಮಾಡುತ್ತಾರೆ, ಹಾಗೂ ಅವರು ಅವನನ್ನೂ ಶ್ಲಾಘಿಸುತ್ತಾರೆ ಹಾಗೂ ಅವನ ಕೀರ್ತಿಯನ್ನು ಹರಡುತ್ತಾರೆ.

೨. "ಕುಲೀನ ಮನುಷ್ಯನು ಧರ್ಮಬೋಧಕರಿಗೆ ಕಾಯಾ ವಾಚ ಮನಸಾ ಒಲವು ತೋರಿಸುವ ಮೂಲಕವೂ, ಅವರಿಗಾಗಿ ತನ್ನ ಮನೆ ಬಾಗಿಲನ್ನು ತೆರೆದಿಟ್ಟಿರುವ ಮೂಲಕವೂ ಅವರ ತಾತ್ಕಾಲಿಕ ಅಗತ್ಯಗಳನ್ನು ಪೂರೈಸುವ ಮೂಲಕವೂ, ಅವರನ್ನು ನೋಡಿಕೊಳ್ಳಬೇಕು. ಏಕೆಂದರೆ ಧರ್ಮಬೋಧಕರು, ಅವನನ್ನು ದುಷ್ಕೃತ್ಯ ಮಾಡದಂತೆ ತಡೆಹಿಡಿಯುತ್ತಾರೆ, ಸುಕೃತ್ಯ ಮಾಡುವಂತೆ ಒತ್ತಾಯಿಸುತ್ತಾರೆ, ದಯಾಭಾವದಿಂದ ಅವನನ್ನು ಪ್ರೀತಿಸುತ್ತಾರೆ, ಅವನು ಕೇಳಿರದ ವಿಷಯಗಳನ್ನು ಬೋಧಿಸುತ್ತಾರೆ. ಈಗಾಗಲೇ ಅವನು ತಿಳಿದಿರುವುದನ್ನು ಅವರು ತಿದ್ದಿ ಶುದ್ಧ ಮಾಡುತ್ತಾರೆ."

## ೭. ತೀರ್ಮಾನಗಳು

೧. ಮಹಾತ್ಮನು ಹೀಗೆ ನುಡಿದುದನ್ನು ಕೇಳಿಸಿಕೊಂಡ ಯುವ ಗೃಹಸ್ಥ ಶೃಗಾಲ ಹೀಗೆ ಹೇಳಿದ: "ಸುಂದರ, ಪ್ರಭು, ಸುಂದರ! ಇದು ಒಮ್ಮೆ ಬಿಸಾಡಿದುದನ್ನು ಮತ್ತೊಮ್ಮೆ ತಂದು ನಿಲ್ಲಿಸಿದಂತಾಯಿತು; ಅಥವಾ ಅವ್ಯಕ್ತವಾಗಿದ್ದುದನ್ನು ವ್ಯಕ್ತಪಡಿಸಿದಂತಾಯಿತು; ಗೊತ್ತುಗುರಿಯಿಲ್ಲದೆ ತಿರುಗುತ್ತಿದ್ದವರಿಗೆ ದಾರಿ ತೋರಿಸಿದಂತಾಯಿತು ಅಥವಾ ಕತ್ತಲೆಯಲ್ಲಿದ್ದವರಿಗೆ ದೀಪ ತಂದಂತಾಯಿತು; ಅಂಥವರು ಹೀಗೆನ್ನುತ್ತಾರೆ. ಕಣ್ಣಿದ್ದವರು ಇದನ್ನು ನೋಡುತ್ತಾರೆ; ಮಹಾತ್ಮರು ಸತ್ಯವನ್ನು ಅನೇಕ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ.

೨. "ಮತ್ತು ನಾನು–ನಾನೂ ಸಹ–ಆಶ್ರಯ ಪಡೆಯಲು ಬುದ್ಧನಲ್ಲಿಗೆ, ಧರ್ಮ ಮತ್ತು ಸಂಘಕ್ಕೆ ಹೋಗುತ್ತೇನೆ. ಮಹಾತ್ಮರು ನನ್ನನ್ನು ಉಪಾಸಕ ಶಿಷ್ಯನೆಂದೂ, ಇಂದಿನಿಂದ ನನ್ನ ಜೀವ ಇರುವವರೆಗೂ ಆಶ್ರಯ ಪಡೆದವನೆಂದೂ ಸ್ವೀಕರಿಸಲಿ!"

## ೮. ಹುಡುಗಿಯರಿಗೆ ವಿನಯ

೧. ಒಮ್ಮೆ ಮಹಾತ್ಮನು ಜತೀಯವನದ ಹತ್ತಿರವಿರುವ ಭದ್ದಿಯದಲ್ಲಿದ್ದ. ಆಗ ಒಂದು ದಿನ, ಮೆಂಡಕನ ಮೊಮ್ಮಗ ಉಗ್ಗಹನು ಬುದ್ಧನನ್ನು ಭೇಟಿ ಮಾಡಿ ಅವನಿಗೆ ನಮಸ್ಕರಿಸಿ, ಅವನ ಒಂದು ಕಡೆ ಕುಳಿತುಕೊಂಡನು. ಹಾಗೆ ಕುಳಿತ ಮೇಲೆ ಅವನು ಮಹಾತ್ಮನಿಗೆ ಹೀಗೆಂದನು:

೨. "ಪ್ರಭೂ ಮಹಾತ್ಮರೇ, ನಾಳೆ ನನ್ನ ಮನೆಯಲ್ಲಿ (ನಾವು ಮೂವರ ಜೊತೆಗೆ) ತಾವು ನಾಲ್ಕನೆಯದಾಗಿ ಭೋಜನ ಸ್ವೀಕರಿಸುವಂತಾಗಲಿ."

೩. ಮಹಾತ್ಮನು ಮೌನದಿಂದಲೇ ಸಮ್ಮತಿ ಸೂಚಿಸಿದನು.

೪. ಮಹಾತ್ಮನು ಒಪ್ಪಿಕೊಂಡುದುದನ್ನು ಗಮನಿಸಿದ ಉಗ್ಗಹನು ತನ್ನ ಆಸನದಿಂದೆದ್ದು, ಅವನಿಗೆ ನಮಸ್ಕರಿಸಿ, ಅವನ ಅಪ್ಪಣೆ ಪಡೆದು, ಬುದ್ಧನನ್ನು ಬಲಗಡೆ ಮಾಡಿಕೊಂಡು ಹೊರಟುಹೋದನು.

೫. ರಾತ್ರಿ ಕಳೆದು ಬೆಳಗಾದ ನಂತರ ಮಹಾತ್ಮನು ತನ್ನ ಉಡಿಗೆಗಳನ್ನು ತೊಟ್ಟುಕೊಂಡು, ತನ್ನ ಭಿಕ್ಷಾಪಾತ್ರೆಯನ್ನೂ ಮೇಲುಹೊದಿಕೆಯನ್ನೂ ತೆಗೆದುಕೊಂಡು ಉಗ್ಗಲನ ಮನೆಗೆ ಹೋದನು. ಹಾಗೂ ಮೊದಲೇ ಸಿದ್ಧಪಡಿಸಿದ್ದ ಆಸನದ ಮೇಲೆ ಕುಳಿತುಕೊಂಡನು. ಉಗ್ಗಲನು ಮಹಾತ್ಮನಿಗೆ ತಾನೇ ಕೈಯಾರೆ ಸಾಕಷ್ಟು ಆಹಾರವನ್ನು ಬಡಿಸಿ ಅವನನ್ನೂ ತೃಪ್ತಿಪಡಿಸಿದನು.

೬. ಮಹಾತ್ಮನು ಭಿಕ್ಷಾಪಾತ್ರೆಯಿಂದ ತನ್ನ ಕೈಯನ್ನು ಹೊರಗಿಟ್ಟಮೇಲೆ ಉಗ್ಗಲನು ಅವನ ಒಂದು ಪಕ್ಕದಲ್ಲಿ ಕುಳಿತುಕೊಂಡನು. ಹೀಗೆ ಕುಳಿತ ಮೇಲೆ ಅವನೆಂದನು:

೭. "ಪ್ರಭೂ, ಈ ನನ್ನ ಹೆಣ್ಣುಮಕ್ಕಳು ತಂತಮ್ಮ ಗಂಡಂದಿರ ಮನೆಗಳಿಗೆ ಹೋಗುವವರಿದ್ದಾರೆ. ಪ್ರಭು, ಮಹಾತ್ಮರಾದ ತಾವು ಅವರೊಡನೆ ಮಾತಾಡಿ ಬಹುಕಾಲದವರೆಗಿನ ಅವರ ಒಳಿತು ಹಾಗೂ ಸುಖಕ್ಕೋಸ್ಕರ ಅವರಿಗೆ ಹಿತೋಪದೇಶ ಮಾಡಿ;

೮. ಮಹಾತ್ಮನು ಅವರೊಡನೆ ಮಾತಾಡಿದ ನಂತರ, ಅವರಿಗೆ ಹೀಗೆ ಹೇಳಿದನು: "ಹುಡುಗಿಯರೇ, ಈ ಉದ್ದೇಶದಿಂದ ನೀವು ಇದನ್ನು ಕಲಿತುಕೊಳ್ಳಿ: 'ನಮ್ಮ ಒಳಿತಿಗಾಗಿ ನಮ್ಮ ಅಭಿವೃದ್ಧಿಗಾಗಿ, ನಮ್ಮ ಸುಖಕ್ಕಾಗಿ, ಪ್ರೀತಿಯಿಂದ ನಮ್ಮ ತಂದೆತಾಯಿಗಳು ನಮ್ಮನ್ನು ಯಾರಿಗಾದರೂ ಮದುವೆ ಮಾಡಲಿ, ಅವನ ಪ್ರೀತಿಯಿಂದಾಗಿ ನಾನು ಬೆಳಿಗ್ಗೆ ಬೇಗ ಏಳುತ್ತೇನೆ, ಕೊನೆಗೆ ವಿರಮಿಸುತ್ತೇನೆ, ಮನಃಪೂರ್ವಕವಾಗಿ ಕೆಲಸ ಮಾಡುತ್ತೇನೆ, ಎಲ್ಲ ವಸ್ತುಗಳನ್ನೂ ಒಪ್ಪಓರಣವಾಗಿಡುತ್ತೇನೆ, ಮೃದುವಚನಿಯಾಗಿರುತ್ತೇನೆ', ಎಂಬ ಉದ್ದೇಶವನ್ನಿಟ್ಟುಕೊಂಡು ಅದರಂತೆ ಕಲಿಯಿರಿ."

೯. "ಅಲ್ಲದೆ, ಹುಡುಗಿಯರೇ, ಈ ಉದ್ದೇಶ ಇಟ್ಟುಕೊಳ್ಳಿ, ನನ್ನ ಗಂಡನ ಬಂಧುಗಳು – ತಂದೆಯಿರಲಿ ತಾಯಿಯಿರಲಿ – ಸಂನ್ಯಾಸಿಗಳು ದೈವಾಂಶವುಳ್ಳ ಗುರುಗಳನ್ನು ಗೌರವಿಸಿ, ಪೂಜಿಸಿ, ಭಯಭಕ್ತಿಗಳನ್ನು ತೋರಿಸುತ್ತೇವೆ ಹಾಗೂ ಅವರು ಬಂದಾಗ ಅವರಿಗೆ ಆಸನ ಮತ್ತು ನೀರು ಕೊಡುತ್ತೇವೆ. ನಿಮ್ಮ ಕಲಿಕೆ ಹೀಗೂ ಇರಲಿ.'

೧೦. "ಅಲ್ಲದೆ, ಹುಡುಗಿಯರೆ, ನೀವು ಈ ಉದ್ದೇಶವನ್ನೂ ಇಟ್ಟುಕೊಳ್ಳಿ. ನಮ್ಮ ಗಂಡನ ಕುಲದ ಕುಶಲ ಕೈಗಾರಿಕೆಯುಲ್ಲಿ–ಅದು ಉಣ್ಣೆಯದಿರಲಿ ಅಥವಾ ಹತ್ತಿಯದಿರಲಿ–ಕೌಶಲ್ಯದಿಂದಲೂ ಚುರುಕುತನದಿಂದಲೂ ನಿರತರಾಗಿರುತ್ತೇವೆ. ಅದನ್ನು ಮಾಡುವುದು ಮತ್ತು ಮಾಡಿಸುವುದು ನಮ್ಮ ಕರ್ತವ್ಯವೆಂದು ತಿಳಿಯುತ್ತೇವೆ; ನೀವು ಈ ರೀತಿ ಕಲಿಯಿರಿ.

೧೧. "ಅಲ್ಲದೆ, ಹುಡುಗಿಯರೇ, ನಿಮ್ಮ ಉದ್ದೇಶ ಇದೂ ಇರಲಿ; 'ಓಲೆಕಾರರು ಮತ್ತು ಕೆಲಸಗಾರರಲ್ಲಿ ಪ್ರತಿಯೊಬ್ಬರನ್ನೂ ಗುರುತಿಟ್ಟುಕೊಳ್ಳಬೇಕು; ಅವರು ಏನು ಮಾಡಿದ್ದಾರೆಂಬುದರ ಮೂಲಕ ಅವರ ಆಸಕ್ತಿ, ಅವರು ಏನು ಮಾಡಿಲ್ಲ ಎಂಬುದರ ಮೂಲಕ ಅವರ ಅನಾಸಕ್ತಿಯನ್ನೂ ತಿಳಿದುಕೊಳ್ಳಬೇಕು; ನಾವು ರೋಗಿಗಳ ಬಲಾಬಲಗಳನ್ನು ತಿಳಿದುಕೊಳ್ಳಬೇಕು, ಕಠಿಣವಾದ ಆಹಾರ ಮತ್ತು ಮೃದುವಾದ ಆಹಾರಗಳನ್ನು ವಿಂಗಡಿಸಿ, ಅವರವರ ಶಕ್ತಿಗೆ ತಕ್ಕಂತೆ ಅದನ್ನು ಹಂಚಬೇಕು. ಹುಡುಗಿಯರೇ ಈ ನಿಟ್ಟಿನಲ್ಲಿಯೂ ಕಲಿಯಬೇಕು.'

೧೨. "ಅಲ್ಲದೆ, ಹುಡುಗಿಯರೆ, ನಿಮ್ಮ ಕಲಿಕೆ ಈ ನಿಟ್ಟಿನಲ್ಲೂ ಇರಲಿ: 'ನನ್ನ ಗಂಡ ಮನೆಗೆ ತಂದ ಹಣ, ದವಸ ಧಾನ್ಯ, ಬೆಳ್ಳಿ ಬಂಗಾರಗಳನ್ನು ನಾನು ಸುರಕ್ಷಿತವಾಗಿಟ್ಟುಕೊಳ್ಳುತ್ತೇನೆ; ಅವನ್ನು ನಿಗಾವಹಿಸಿ

ಕಾಯ್ದಿಟ್ಟುಕೊಳ್ಳುತ್ತೇನೆ, ದರೋಡೆಕೋರರು, ಕಳ್ಳರು, ಕುಡುಕರು ಮತ್ತು ದುಂದುಗಾರರ ಕೈಗೆ ಸಿಕ್ಕದಂತೆ ಎಚ್ಚರ ವಹಿಸುತ್ತೇನೆ' ಹುಡುಗಿಯರೇ, ನೀವು ಇದನ್ನೂ ಕಲಿಯಿರಿ' "

೧೩. ಈ ಹಿತವಚನಗಳನ್ನು ಕೇಳಿ ಉಗ್ಗಹನ ಹೆಣ್ಣುಮಕ್ಕಳಿಗೆ ತುಂಬಾ ಸಂತೋಷವಾಯಿತು ಮತ್ತು ಪ್ರಭುವಿಗೆ ತುಂಬಾ ಕೃತಜ್ಞರಾದರು.

# ಪರ್ವ - ೬
# ಬುದ್ಧ ಮತ್ತು ಅವನ ಸಮಕಾಲೀನರು

## ಭಾಗ : ೧
## ಬುದ್ಧನಿಗೆ ಉಪಕಾರ ಮಾಡಿದವರು

೧. ಬಿಂಬಸಾರನ ದಾನ
೨. ಅನಾಥ ಪಿಂಡಿಕನ ದಾನ
೩. ಜೀವಕನ ದಾನ
೪. ಆಮ್ರಪಾಲಿಯ ದಾನ
೫. ವಿಶಾಖಳ ಔದಾರ್ಯ

# ೧. ಬಿಂಬಸಾರನ ದಾನ

೧. ರಾಜ ಬಿಂಬಸಾರನು ಪೂಜ್ಯ ಪ್ರಭುವಿನ ಅನುಯಾಯಿ ಮಾತ್ರವಾಗಿರದೆ, ಅವನೊಬ್ಬ ಮಹಾನ್ ಭಕ್ತನೂ ಅವನ ಧಮ್ಮಕ್ಕೆ ಪ್ರೋತ್ಸಾಹ ಕೊಡುವವನೂ ಆಗಿದ್ದನು.

೨. ಬಿಂಬಸಾರನು ಒಬ್ಬ ಉಪಾಸಕ ಶಿಷ್ಯನಾದ ಮೇಲೆ 'ಪೂಜ್ಯ ಪ್ರಭುಗಳು ತಮ್ಮ ಭಿಕ್ಷು ಸೋದರರೊಡನೆ ನಾಳೆ ನನ್ನೊಡನೆ ಭೋಜನ ಸ್ವೀಕರಿಸಲು ಒಪ್ಪುವಿರಾ?" ಎಂದು ಕೇಳಿದನು.

೩. ಪೂಜ್ಯನು ಮೌನದಿಂದಲೇ ತನ್ನ ಸಮ್ಮತಿಯನ್ನು ಸೂಚಿಸಿದನು.

೪. ಮಹಾತ್ಮನು ತನ್ನ ಆಮಂತ್ರಣವನ್ನು ಒಪ್ಪಿಕೊಂಡಿದ್ದಾನೆಂದು ತಿಳಿದ ರಾಜ ಬಿಂಬಸಾರನು ತನ್ನ ಆಸನದಿಂದೆದ್ದು, ಮಹಾತ್ಮನಿಗೆ ಗೌರವಪೂರ್ವಕವಾಗಿ ವಂದಿಸಿ ಬುದ್ಧನನ್ನು ಬಲಗಡೆ ಮಾಡಿಕೊಂಡು ಪ್ರದಕ್ಷಿಣೆ ಹಾಕಿ, ಹೊರಟುಹೋದನು.

೫. ರಾತ್ರಿ ಕಳೆದ ನಂತರ, ಬಿಂಬಸಾರನು ಉತ್ತಮ ಭಕ್ಷ್ಯಗಳನ್ನು ತಯಾರಿಸಲು ಆಜ್ಞಾಪಿಸಿದನು. ಹಾಗೂ ಸಕಾಲದಲ್ಲಿ, ಮಹಾತ್ಮನಿಗೆ ಹೀಗೆ ತಿಳಿಸಿದನು: "ಪ್ರಭು, ಸಮಯವಾಗಿದೆ. ಭೋಜನ ಸಿದ್ಧವಾಗಿದೆ."

೬. ಮಧ್ಯಾಹ್ನಪೂರ್ವದಲ್ಲಿ ಮಹಾತ್ಮನು ತನ್ನ ಒಳವಸ್ತುಗಳನ್ನು ಧರಿಸಿ ಮೇಲುವಸ್ತ್ರವನ್ನು ಹೊದೆದು, ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು, ಮೊದಲು ಜಟಿಲರಾಗಿದ್ದ ತನ್ನ ಸಂನ್ಯಾಸಿಗಳೊಡಗೂಡಿ ರಾಜಗೃಹ ನಗರಿಯನ್ನು ಪ್ರವೇಶಿಸಿದನು.

೭. ಅನಂತರ, ಮಹಾತ್ಮನು ರಾಜ ಬಿಂಬಸಾರನ ಅರಮನೆಗೆ ಹೋದನು. ಅಲ್ಲಿಗೆ ಹೋದನಂತರ, ಅವನೂ ಸಂನ್ಯಾಸಿಗಳೂ ಮೊದಲೇ ಸಿದ್ಧಪಡಿಸಿದ್ದ ಆಸನಗಳ ಮೇಲೆ ಕುಳಿತುಕೊಂಡರು. ರಾಜ ಬಿಂಬಸಾರನು ಸಂನ್ಯಾಸಿಬಂಧುಗಳಿಗೂ ಅವರ ಮುಖ್ಯನಾದ ಬುದ್ಧನಿಗೂ ತಾನೇ ಕೈಯಾರ ಉಣಬಡಿಸಿದನು. ಬುದ್ಧನು ತನ್ನ ಊಟವನ್ನು ಮುಗಿಸಿ, ಭಿಕ್ಷಾಪಾತ್ರೆಯನ್ನೂ ಕೈಗಳನ್ನೂ ತೊಳೆದುಕೊಂಡು ಬಂದ ಮೇಲೆ, ಬಿಂಬಸಾರನು ಅವನ ಹತ್ತಿರ ಕುಳಿತನು.

೮. ಅವನ ಬಳಿ ಕುಳಿತ ನಂತರ ಬಿಂಬಸಾರನು ಹೀಗೆ ಯೋಚಿಸಿದನು: 'ಮಹಾತ್ಮನು ಇರಲು ಯೋಗ್ಯವಾದಂಥ ಸ್ಥಳವನ್ನು ಎಲ್ಲಿ ನೋಡಲಿ? ಅದು ಹಳ್ಳಿಗೆ ಬಹಳ ದೂರವಿರಬಾರದು, ಬಹಳ ಹತ್ತಿರವೂ ಇರಬಾರದು. ಹೋಗಿ ಬರಲು ಯೋಗ್ಯವಾಗಿರಬೇಕು. ಅವನನ್ನು ಹುಡುಕಿಕೊಂಡು ಬರುವ ಜನರಿಗೆ ಅದು ಸುಲಭವಾಗಿ ಸಿಕ್ಕುವಂತಿರಬೇಕು. ಹಗಲಿನಲ್ಲಿ ಬಹಳ ಜನ ಅಲ್ಲಿ ಗುಂಪು ಕೂಡಬಾರದು. ಅಲ್ಲಿ ಹಗಲಿನಲ್ಲಿ ಅತ್ಯಂತ ಕಡಿಮೆ ಶಬ್ದವಿರಬೇಕು. ಅಲ್ಲಿ ರಾತ್ರಿಯಲ್ಲಿ ಅತ್ಯಂತ ಕಡಿಮೆ ಶಬ್ದವಿರಬೇಕು. ಅದು ಪ್ರತ್ಯೇಕವಾಗಿರಬೇಕು. ಜನರಿಗೆ ಕಾಣದಂತಿರಬೇಕು. ನಿವೃತ್ತ ಜೀವನಕ್ಕೆ ಯೋಗ್ಯವಾಗಿರಬೇಕು ಅಂತ ಸ್ಥಳವಲ್ಲಿದೆ?

೯. ಇನ್ನೂ ಮುಂದುವರಿದು, ರಾಜ ಬಿಂಬಸಾರನು ಹೀಗೆ ಯೋಚಿಸಿದ: 'ಇಲ್ಲಿ ನನ್ನ ವಿಹಾರಕ್ಕೆ ಮೀಸಲಾದ ವೇಣುವನವಿದೆ, ಅದು ಪಟ್ಟಣದಿಂದ ಬಹಳ ದೂರವೂ ಇಲ್ಲ. ಬಹಳ ಹತ್ತಿರವೂ

ಇಲ್ಲ. ಹೋಗಿಬರಲು ಬಹಳ ಯೋಗ್ಯವಾಗಿದೆ. ಈ ವಿಹಾರವನವಾದ ವೇಣುವನವನ್ನೂ ಭಿಕ್ಷುಸೋದರರಿಗೆ ಕೊಟ್ಟು ಅವರಿಗೆ ಬುದ್ಧನು ಮುಖ್ಯಸ್ಥವಾಗಿರುವಂತೆ ಕೇಳಿಕೊಂಡರೆ ಹೇಗೆ?'

೧೦. ಅದೇ ರೀತಿ, ರಾಜ ಬಿಂಬಸಾರನು ಒಂದು ಬಂಗಾರದ ಪಾತ್ರೆಯನ್ನು ತೆಗೆದುಕೊಂಡು ಅದರಲ್ಲಿ ನೀರು ತುಂಬಿಕೊಂಡು, ಬುದ್ಧನ ಕೈಗಳ ಮೇಲೆ ಆ ನೀರನ್ನು ಸುರಿದು, ಆ ಪಾತ್ರೆಯನ್ನು ಬುದ್ಧನಿಗೆ ಕಾಣಿಕೆಯಾಗಿ ಕೊಡುತ್ತಾ ಹೀಗೆ ಹೇಳಿದನು: "ಪ್ರಭು, ವಿಹಾರವನವಾದ ಈ ವೇಣುವನವನ್ನು ಭಿಕ್ಷುಸೋದರರಿಗೆ ಕೊಡುತ್ತೇನೆ. ತಾವು ಅವರಿಗೆ ಮುಖ್ಯಸ್ಥರಾಗಿರುತ್ತೀರಿ." ಬುದ್ಧನು ಆ ವನವನ್ನು ಸ್ವೀಕರಿಸಿದನು.

೧೧. ಅನಂತರ ಮಹಾತ್ಮನು, ರಾಜ ಬಿಂಬಸಾರನಿಗೆ ಧರ್ಮ ಪ್ರವಚನದ ಮೂಲಕ ಬೋಧಿಸಿ, ಪ್ರಚೋದಿಸಿ, ಕ್ರಿಯಾಶೀಲನಾಗುವಂತೆ ಮಾಡಿ, ಹಾಗೂ ಸಂತುಷ್ಟಪಡಿಸಿದ ಮೇಲೆ ತನ್ನ ಆಸನದಿಂದೆದ್ದು ಹೊರಟುಹೋದನು.

೧೨. ಇದರ ಪರಿಣಾಮವಾಗಿ ಮಹಾತ್ಮನು ಒಂದು ಧಾರ್ಮಿಕ ಪ್ರವಚನ ನೀಡಿದ ನಂತರ, ಭಿಕ್ಷುಗಳನ್ನುದ್ದೇಶಿಸಿ ಹೀಗೆ ಹೇಳಿದನು: "ಭಿಕ್ಷುಗಳೇ, ನೀವು ಈ ಉಪವನವನ್ನು ದಾನ ಪಡೆಯಲು ನಿಮಗೆ ಅನುಮತಿ ಕೊಟ್ಟಿದ್ದೇನೆ."

## ೨. ಅನಾಥಪಿಂಡಿಕನ ದಾನ

೧. ಅನಾಥಪಿಂಡಿಕನು ತಾನು ಪರಿವರ್ತಿತನಾದ ಮೇಲೆ ಒಮ್ಮೆ ಮಹಾತ್ಮನನ್ನು ನೋಡಲು ಹೋದನು; ಅವನ ಬಲಗಡೆಯ ಆಸನದಲ್ಲಿ ಕುಳಿತುಕೊಂಡ ಮೇಲೆ, ಅವನಿಗೆ ಹೇಳಿದನು:

೨. "ನಾನು ಶ್ರಾವಸ್ತಿಯಲ್ಲಿ ವಾಸವಾಗಿದ್ದೇನೆಂದು ಪ್ರಭುಗಳಿಗೆ ಗೊತ್ತು; ಅಧಿಕ ಉತ್ಪನ್ನಗಳ ಹಾಗೂ ಶಾಂತಿಯ ಸ್ಥಳವದು; ಪಸೇನದಿಯು ಅಲ್ಲಿಯ ಮಹಾರಾಜ.

೩. "ನಾನು ಅಲ್ಲಿ ಒಂದು ವಿಹಾರವನ್ನು ಸ್ಥಾಪಿಸಲು ಇಚ್ಛಿಸಿದ್ದೇನೆ. ದಯವಿಟ್ಟು ಶ್ರಾವಸ್ತಿಗೆ ಬಂದು, ಅದನ್ನು ನನ್ನಿಂದ ಸ್ವೀಕರಿಸರೆಂದು ಪ್ರಾರ್ಥಿಸುತ್ತೇನೆ."

೪. ಮಹಾತ್ಮನು ಮೌನವಾಗಿ ಇದ್ದನು ಹಾಗೂ ಆ ಮೂಲಕವೇ ದಾನವನ್ನು ಸ್ವೀಕರಿಸಲು ಸಮ್ಮತಿ ಸೂಚಿಸಿದನು.

೫. ದಿಕ್ಕು ದೆಸೆಯಿಲ್ಲದವರ ಸ್ನೇಹಿತನೂ, ಅನಾಥ ಮಕ್ಕಳ ಆಶ್ರಯದಾತನೂ ಆದ ಅನಾಥಪಿಂಡಿಕನು ಮನೆಗೆ ಹಿಂತಿರುಗಿದ ಮೇಲೆ, ಚೇತನ ವನವನ್ನೂ ವೀಕ್ಷಿಸಿ, ಅದರಲ್ಲಿ ಹಸಿರು ತೋಪುಗಳಿರುವುದನ್ನೂ, ಚಿಕ್ಕ ತೊರೆಗಳಿರುವುದನ್ನೂ ಗಮನಿಸಿ, ಹೀಗೆ ಆಲೋಚಿಸಿದ: 'ಇದೇ ಮಹಾತ್ಮನ ಭಿಕ್ಷುಸೋದರರಿಗೆ ವಿಹಾರವಾಗಲು ಅತ್ಯಂತ ಸೂಕ್ತವಾದ ಸ್ಥಳ.' ಆಮೇಲೆ, ಅವನು ಯುವರಾಜನ ಬಳಿ ಹೋಗಿ, ತಾನು ಆ ಸ್ಥಳವನ್ನು ಕೊಂಡುಕೊಳ್ಳಲು ಅಪ್ಪಣೆ ಕೇಳಿದನು.

೬. ಆದರೆ ರಾಜಕುಮಾರನು ಆ ಉಪವನವನ್ನು ಮಾರಲು ಒಲವು ತೋರಿಸಲಿಲ್ಲ. ಏಕೆಂದರೆ, ಅದು ಅವನಿಗೆ ಬಹಳ ಮೌಲ್ಯದ್ದಾಗಿತ್ತು. ಮೊದಲು ಅವನು ತಿರಸ್ಕರಿಸಿದ, ಆದರೆ ಕೊನೆಗೆ ಹೀಗೆ ಹೇಳಿದನು: "ಅದರ ನೆಲದ ತುಂಬ ಚಿನ್ನವನ್ನು ಹಾಸಿದರಷ್ಟೇ ನೀನು ಅದನ್ನು ಪಡೆಯಬಹುದು, ಇನ್ನಾವ ಬೆಲೆಗೂ ಅಲ್ಲ."

೭. ಅನಾಥಪಿಂಡಿಕನಿಗೆ ಸಂತೋಷವಾಗಿ, ಅದರ ತುಂಬ ಚಿನ್ನವನ್ನು ಹರಡಲು ಪ್ರಾರಂಭಿಸಿದನು. ಆದರೆ ಜೇತ ಹೇಳಿದ: "ಆ ತೊಂದರೆ ತೆಗೆದುಕೊಳ್ಳಬೇಡ, ನಾನದನ್ನು ಮಾರುವುದಿಲ್ಲ." ಆದರೆ ಅನಾಥಪಿಂಡಿಕನು ಮತ್ತೆ ಮತ್ತೆ ಕೇಳತೊಡಗಿದ. ಹೀಗಾಗಿ, ಅವರಲ್ಲಿ ವಾದ ವಿವಾದ ನಡೆದು ಕೊನೆಗೆ ನ್ಯಾಯಾಧೀಶರ ಬಳಿ ಹೋದರು.

೮. ಅಷ್ಟರಲ್ಲಿ ಜನರು ಹಿಂದೆಂದೂ ನಡೆಯದ ಈ ಪ್ರಸಂಗದ ಬಗ್ಗೆ ಮಾತನಾಡಿಕೊಳ್ಳಲು ಪ್ರಾರಂಭಿಸಿದರು; ರಾಜಕುಮಾರನೂ ಸಹ ವಿವರಗಳನ್ನು ತಿಳಿದುಕೊಂಡ. ಅಲ್ಲದೆ ಅನಾಥಪಿಂಡಿಕನು ಬಹಳ ಶ್ರೀಮಂತನೂ ಅಲ್ಲದೆ ನೇರ ಸ್ವಭಾವದವನು ಮತ್ತು ಪ್ರಾಮಾಣಿಕನೆಂದು ತಿಳಿದುಕೊಂಡ ರಾಜಕುಮಾರನು ಅವನ ಮುಂದಿನ ಆಲೋಚನೆಗಳೇನೆಂದು ಕೇಳಿದ. ಮಹಾತ್ಮನ ಹೆಸರನ್ನು ಕೇಳಿದ ತಕ್ಷಣ ರಾಜಕುಮಾರನು ವಿಹಾರ ಸ್ಥಾಪನೆಯಲ್ಲಿ ತಾನೂ ಪಾಲುದಾರನಾಗುವ ಆಸಕ್ತಿ ತೋರಿಸಿದನು. ಅಲ್ಲದೆ, ಅರ್ಧ ಚಿನ್ನವನ್ನಿಟ್ಟು ಸ್ವೀಕರಿಸಿ ಹೀಗೆಂದನು: "ಭೂಮಿ ನಿನ್ನದು, ಮರಗಳು ನನ್ನವು; ಪ್ರಭುವಿಗೆ ಮರಗಳನ್ನು ನನ್ನ ಪಾಲಿನ ದಾನವೆಂದು ಕೊಡುತ್ತೇನೆ."

೯. ತಳಪಾಯವನ್ನು ಹಾಕಿದ ಮೇಲೆ, ಬಹಳ ಎತ್ತರದ ಸಭಾಂಗಣವನ್ನು ಎಬ್ಬಿಸಲಾಯಿತು. ಅದು ಅಗಲಕ್ಕೆ ತಕ್ಕಂತೆ ಹೊಂದಿಕೊಳ್ಳುವಂತಿದ್ದು, ಮಹಾತ್ಮನು ಕೊಟ್ಟಿದ್ದ ಮಾರ್ಗದರ್ಶನದ ಮೇರೆಗೆ ಇತ್ತು. ಅಲ್ಲದೆ, ಸೂಕ್ತ ಕೆತ್ತನೆಗಳಿಂದಾಗಿ ಅದು ಸುಂದರವಾಗಿ ಅಲಂಕೃತವಾಗಿತ್ತು.

೧೦. ವಿಹಾರವನ್ನು ಜೇತವನವೆಂದು ಕರೆಯಲಾಯಿತು. ಅನಾಥಬಂಧುವು ಪ್ರಭುವನ್ನು ಈ ದಾನ ಸ್ವೀಕರಿಸಲು ಶ್ರಾವಸ್ತಿಗೆ ಆಮಂತ್ರಿಸಿದನು. ಅದರಂತೆ, ಮಹಾತ್ಮನು ಕಪಿಲವಸ್ತುವಿನಿಂದ ಶ್ರಾವಸ್ತಿಗೆ ಬಂದನು.

೧೧. ಮಹಾತ್ಮನು ಜೇತವನವನ್ನು ಪ್ರವೇಶಿಸುತ್ತಿದ್ದಂತೆಯೇ, ಅನಾಥಪಿಂಡಿಕನು ಅವನ ಹಾದಿಯಲ್ಲಿ ಹೂ ಚೆಲ್ಲಿ, ಪರಿಮಳ ದ್ರವ್ಯವನ್ನು ಉರಿಸಿದನು. ಅಲ್ಲದೆ, "ಈ ಜಗತ್ತಿನ ಎಲ್ಲ ಭಿಕ್ಷು ಸೋದರರ ಉಪಯೋಗಕ್ಕಾಗಿ ಈ ಜೇತವನ ವಿಹಾರವನ್ನು ದಾನ ಮಾಡುತ್ತೇನೆ" ಎಂದು ಹೇಳುತ್ತಾ, ಹಾವಿನ ಮೂತಿಯ ಚಿತ್ರವಿದ್ದ ಚಿನ್ನದ ಗಿಂಡಿಯಿಂದ ದಾನದ ದ್ಯೋತಕವಾಗಿ ನೀರು ಸುರಿದನು.

೧೨. ಈ ದಾನವನ್ನು ಸ್ವೀಕರಿಸಿದ ಬುದ್ಧನು ಹೀಗೆ ಉತ್ತರಿಸಿದನು: "ಎಲ್ಲ ದುಷ್ಪರಿಣಾಮಗಳೂ ಇಲ್ಲವಾಗಲಿ; ಈ ದಾನದಿಂದಾಗಿ ಧರ್ಮ ಸಾಮ್ರಾಜ್ಯದ ಅಭಿವೃದ್ಧಿಯಾಗಲಿ; ಅದು ಮನುಕುಲಕ್ಕೆ–ಅದರಲ್ಲೂ ದಾನಿಗೆ–ಶಾಶ್ವತ ಒಳಿತನ್ನು ಮಾಡಲಿ."

೧೩. ಮಹಾದಾನಿ ಎಂಬ ಬಿರುದು ಪಡೆದ ಎಂಬತ್ತು ಮುಖ್ಯ ಶಿಷ್ಯರುಗಳಲ್ಲಿ ಅನಾಥಪಿಂಡಿಕನೂ ಒಬ್ಬ.

## ೩. ಜೀವಕನ ದಾನ

೧. ಪೂಜ್ಯನು ರಾಜಗೃಹದಲ್ಲಿದ್ದಾಗಲೇ ಜೀವಕನೆಂಬ ವೈದ್ಯನು ಪೂಜ್ಯನನ್ನು ದಿನಕ್ಕೆರಡು ಬಾರಿ ಭೇಟಿ ಮಾಡುತ್ತಿದ್ದ.

೨. ರಾಜ ಬಿಂಬಸಾರನು ಪೂಜ್ಯನಿಗೆ ದಾನವಾಗಿ ಕೊಟ್ಟಿದ್ದ ವೇಣುವನವು ಜೀವಕನಿಗೆ ಬಹಳ ದೂರವೆನಿಸಿತು.

೩. ಜೀವಕನಿಗೆ ರಾಜಗೃಹದಲ್ಲಿ ಅಂಬಾವನವೆಂಬ ತನ್ನದೇ ಆದ ಉಪವನವಿದ್ದು, ಅದು ಅವನ ಮನೆಗೆ ಬಹಳ ಹತ್ತಿರವಿತ್ತು.

೪. ಜೀವಕನಿಗೆ ಅಂಬಾವನದಲ್ಲೇ ಎಲ್ಲ ಅನುಕೂಲಗಳಿರುವ ವಿಹಾರವೊಂದನ್ನು ಕಟ್ಟಿ, ವನವನ್ನು ಅದರ ಸಮೇತ ಪೂಜ್ಯನಿಗೇಕೆ ದಾನ ಕೊಡಬಾರದು ಎಂಬ ಯೋಚನೆ ಬಂತು.

೫. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ಅವನು ಪೂಜ್ಯನನ್ನು ಭೇಟಿ ಮಾಡಿ ತನ್ನ ಆಸೆಯನ್ನು ಪೂರೈಸಿಕೊಳ್ಳಲು ಅವಕಾಶ ಮಾಡಿ ಕೊಡಬೇಕೆಂದು ವಿನಂತಿಸಿಕೊಂಡ.

೬. ಪೂಜ್ಯ ಪ್ರಭುವು ಮೌನದ ಮೂಲಕ ತನ್ನ ಸಮ್ಮತಿ ಸೂಚಿಸಿದನು.

## ೪. ಆಮ್ರಪಾಲಿಯ ದಾನ

೧. ನಂದಿಕೆಯಲ್ಲೇ ಬಹಳ ಕಾಲ ಉಳಿದುಕೊಂಡಿದ್ದ ಮಹಾತ್ಮನಿಗೆ ಒಂದು ದಿನ ಬದಲಾವಣೆ ಬೇಕೆನಿಸಿತು. ಆಗ ಅವನು ಆನಂದನನ್ನುದ್ದೇಶಿಸಿ, "ಬಾ ಆನಂದ, ನಾವು ವೇಸಾಲಿಗೆ ಹೋಗೋಣ" ಎಂದನು.

೨. ಆನಂದನು ಮಹಾತ್ಮನ ಮಾತನ್ನು ಒಪ್ಪಿಕೊಳ್ಳುತ್ತಾ "ಹಾಗೇ ಹಾಗಲಿ ಪ್ರಭು" ಎಂದನು.

೩. ಆಮೇಲೆ ಮಹಾತ್ಮನು ಅನೇಕ ಭಿಕ್ಷುಗಳ ಗುಂಪಿನೊಂದಿಗೆ ವೇಸಾಲಿಗೆ ಹೋದನು. ವೇಸಾಲಿಯಲ್ಲಿ ಮಹಾತ್ಮನು ಆಮ್ರಪಾಲಿಯ ಮಾವಿನತೋಪಿನಲ್ಲಿ ಉಳಿದುಕೊಂಡನು.

೪. ಆಗ, ಆಸ್ಥಾನ ನರ್ತಕಿಗೆ ಮಹಾತ್ಮನು ವೇಸಾಲಿಗೆ ಬಂದಿದ್ದಾನೆಂದೂ ತನ್ನ ಮಾವಿನತೋಪಿನಲ್ಲೇ ಅವನು ಉಳಿದುಕೊಂಡಿದ್ದಾನೆಂದೂ ತಿಳಿದುಬಂದಿತು. ಅನೇಕ ಅತಿಥಿ ರಥಗಳು ಸಿದ್ಧವಾಗಲು ಆಜ್ಞಾಪಿಸಿದ ಅವಳು, ತಾನೂ ಒಂದರಲ್ಲಿ ಕುಳಿತಳು. ಅಲ್ಲದೆ, ತನ್ನ ಪರಿವಾರದೊಂದಿಗೆ ವೇಸಾಲಿಯಿಂದ ತನ್ನ ತೋಟದ ಕಡೆ ಹೊರಟಳು. ಎಲ್ಲಿಯವರೆಗೆ ರಥಗಳು ಹೋಗಲು ಸಾಧ್ಯವಿತ್ತೋ ಅಲ್ಲಿಯವರೆಗೂ ಅವಳು ರಥದಲ್ಲಿಯೇ ಹೋದಳು; ಹಾಗೂ, ಮಹಾತ್ಮನಿದ್ದಲ್ಲಿಗೆ ನಡೆದುಕೊಂಡೇ ಹೋದಳು, ಅನಂತರ, ತನ್ನ ಮರ್ಯಾದೆಗೆ ತಕ್ಕಂತೆ ಅವನ ಒಂದು ಬದಿಗೆ ಕುಳಿತಳು. ಅವಳು ಹಾಗೆ ಕುಳಿತ ಮೇಲೆ ಮಹಾತ್ಮನು ಅವಳಿಗೆ ಧರ್ಮೋಪದೇಶ ಮಾಡಿದನು.

೫. ಆಗ ಅವಳು ಮಹಾತ್ಮನನ್ನುದ್ದೇಶಿಸಿ ಹೀಗೆ ಹೇಳಿದಳು: "ಮಹಾತ್ಮರು ತಮ್ಮ ಸೋದರರೊಂದಿಗೆ ನಾಳೆ ನನ್ನ ಮನೆಯಲ್ಲಿ ಭೋಜನ ಸ್ವೀಕರಿಸಿದರೆ ನನಗೆ ಗೌರವ ಸಂದಂತಾಗುತ್ತದೆ; ಆಗಬಹುದೇ?"

೬. ಮಹಾತ್ಮನು ಮೌನದ ಮೂಲಕ ತನ್ನ ಸಮ್ಮತಿಯನ್ನು ಸೂಚಿಸಿದನು. ರಾಜ ನರ್ತಕಿ ಆಮ್ರಪಾಲಿಯು ಮಹಾತ್ಮನು ಒಪ್ಪಿಗೆ ನೀಡಿದುದನ್ನು ತಿಳಿದುಕೊಂಡ ಮೇಲೆ ತನ್ನ ಆಸನಂದಿಂದೆದ್ದು, ಅವನಿಗೆ ನಮಸ್ಕರಿಸಿ, ಹೋಗುವಾಗ ಅವನನ್ನು ಬಲಗಡೆ ಮಾಡಿಕೊಂಡು, ಅಲ್ಲಿಂದ ನಿರ್ಗಮಿಸಿದಳು.

೭. ಆಗ ವೇಸಾಲಿಯ ಲಿಚ್ಛವಿಗಳಿಗೆ ಮಹಾತ್ಮನು ವೇಸಾಲಿಗೆ ಬಂದು, ಆಮ್ರಪಾಲಿಯ ಮಾವಿನತೋಪಿನಲ್ಲಿ ಉಳಿದುಕೊಂಡಿದ್ದಾನೆಂದು ತಿಳಿದುಬಂದಿತು. ಅವರಿಗೂ ಬುದ್ಧನನ್ನು ತಮ್ಮಲ್ಲಿಗೆ ಊಟಕ್ಕೆ ಆಹ್ವಾನಿಸಬೇಕೆಂಬ ಇಚ್ಛೆಯಾಯಿತು. ಆಗ ಅನೇಕ ರಥಗಳು ಸಿದ್ಧವಾಗಲಿ ಎಂದು ಆಜ್ಞಾಪಿಸಿದರಲ್ಲದೆ, ಪ್ರತಿಯೊಬ್ಬರೂ ಒಂದೊಂದು ರಥದಲ್ಲಿ ಕುಳಿತುಕೊಂಡು ತಮ್ಮ ಪರಿವಾರದೊಂದಿಗೆ ವೇಸಾಲಿಯಿಂದ ಹೊರಟರು.

೮. ಅವರೂ ಆಮ್ರಪಾಲಿಯೂ ಪರಸ್ಪರ ಎದುರಾದರು.

೯. ಆಮ್ರಪಾಲಿಯು ತನ್ನ ರಥದ ಅಚ್ಚು ಕಿರಿಯ ಲಿಚ್ಛವಿಗಳ ರಥದ ಅಚ್ಚಿಗೆ ಎದುರಾಗುವಂತೆ, ಚಕ್ರಗಳು ಚಕ್ರಗಳಿಗೆದುರಾಗುವಂತೆ, ನೊಗಗಳು ನೊಗಗಳಿಗೆದುರಾಗುವಂತೆ ತನ್ನ ರಥವನ್ನು ನಡೆಸಿದಳು;

ಆಮೇಲೆ ಲಿಚ್ಛವಿಗಳು ಆಸ್ಥಾನ ನರ್ತಕಿ ಆಮ್ರಪಾಲಿಯನ್ನು "ಆಮ್ರಪಾಲಿ, ನಮ್ಮ ಎದುರಿಗೆ ಹೀಗೆ ರಥ ನಡೆಸುತ್ತೀಯಲ್ಲ, ಹೇಗೆ?" ಎಂದು ಕೇಳಿದರು.

೧೦. "ಪ್ರಭುಗಳೇ, ನಾನು ಮಹಾತ್ಮನನ್ನೂ ಅವನು ಭಿಕ್ಷುಸೋದರನನ್ನೂ ನಾಳೆಗೆ ಬನ್ನಿರೆಂದು ಈಗತಾನೇ ಆಮಂತ್ರಿಸಿ ಬರುತ್ತಿದ್ದೇನೆ" ಎಂದಳು ಆಂಬ್ರಪಾಲಿ.

೧೧. "ಆಮ್ರಪಾಲಿ, ನಾವು ನಿನಗೆ ಒಂದು ಸಾವಿರ ಹೊನ್ನು ಕೊಡುತ್ತೇವೆ, ಈ ಗೌರವವನ್ನು ನಮಗೆ ಬಿಟ್ಟುಕೊಡು."

೧೨. "ಪ್ರಭುಗಳೇ, ಇಡೀ ವೇಸಾಲಿಯನ್ನೂ ಅದರ ಪ್ರಜೆಗಳ ಕ್ಷೇತ್ರವನ್ನೂ ನನಗೆ ಕೊಟ್ಟರೂ ನಾನದನ್ನು ಕೊಡಲಾರೆ."

೧೩. ಲಿಚ್ಛವಿಗಳು ಹತಾಶರಾಗಿ "ಈ ಮಾವಿನ ಹಣ್ಣಿನ ಹುಡುಗಿ ನಮಗಿಂತ ಮುಂದಾಗಿ ಎಲ್ಲ ಮಾಡಿದ್ದಾಳೆ, ನಮಗಿಂತ ಮುಂಚೆ ಎಲ್ಲ ಸಾಧಿಸಿದ್ದಾಳೆ" ಎಂದು ಉದ್ಗಾರಪಡುತ್ತಾ ಆಮ್ರಪಾಲಿಯ ಮಾವಿನ ತೋಪಿನ ಕಡೆಗೆ ಹೊರಟರು.

೧೪. ತಾವು ಬಹಳ ಹಿಂದಿದ್ದೇವೆ ಎಂದು ಅವರಿಗೆ ಗೊತ್ತಿದ್ದರೂ, ಮಹಾತ್ಮರು ಮರುಪರಿಶೀಲನೆ ಮಾಡಿ, ತಮ್ಮ ಆಮಂತ್ರಣಕ್ಕೆ ಆದ್ಯತೆ ಕೊಡಬಹುದೆಂದು ಆಶಿಸಿ ಅವನ ಬಳಿ ಹೋಗಲು ಯೋಚಿಸಿದರು. ಅಂತೆಯೇ ಅವರು ಆಮ್ರಪಾಲಿಯ ತೋಟಕ್ಕೆ ಹೋದರು.

೧೫. ಲಿಚ್ಛವಿಗಳು ಬರುತ್ತಿರುವುದನ್ನು ದೂರದಿಂದಲೇ ನೋಡಿದ ಮಹಾತ್ಮನು ತನ್ನ ಭಿಕ್ಷು ಸೋದರರನ್ನುದ್ದೇಶಿಸಿ ಹೀಗೆ ಹೇಳಿದನು: "ಸೋದರರೇ, ನಿಮ್ಮಲ್ಲಿ ಯಾರು ದೇವತೆಗಳನ್ನು ಎಂದೂ ನೋಡಿಲ್ಲವೋ ಅವರು ಈ ಲಿಚ್ಛವಿ ಗುಂಪನ್ನು ದೃಷ್ಟಿಯಿಟ್ಟು ನೋಡಿರಿ; ಲಿಚ್ಛವಿ ಗುಂಪನ್ನು ನೋಡಿ, ಆ ಗುಂಪನ್ನು ಹೋಲಿಸಿರಿ; ಏಕೆಂದರೆ, ಅವರೇ ಪರಲೋಕದ ದೇವರ ಗುಂಪು."

೧೬. ಎಲ್ಲಿಯವರೆಗೂ ರಥಗಳು ಸಾಗಲು ಸಾಧ್ಯವೋ ಅಲ್ಲಿಯವರೆಗೂ ಕ್ರಮಿಸಿದ ನಂತರ, ಲಿಚ್ಛವಿಗಳು ಕೆಳಗಿಳಿದು, ಅನಂತರ ಅವರು ಮಹಾತ್ಮನಿದ್ದಲ್ಲಿಗೆ ನಡೆದುಹೋದರು, ಹಾಗೂ ತಮ್ಮ ಮರ್ಯಾದೆಗೆ ತಕ್ಕಂತೆ ಅವನ ಪಕ್ಕದಲ್ಲಿ ಆಸೀನರಾದರು.

೧೭. ಆಗ ಅವರು ಮಹಾತ್ಮನನ್ನುದ್ದೇಶಿಸಿ ಹೇಳಿದರು : "ಮಹಾತ್ಮರು ತಮ್ಮ ಭಿಕ್ಷುಸೋದರರೊಡನೆ ನಾಳೆ ನಮ್ಮ ಮನೆಯಲ್ಲಿ ಭೋಜನ ಸ್ವೀಕರಿಸಿದರೆ ನಮಗೆ ಗೌರವ ಸಂದಂತಾಗುತ್ತದೆ ಆಗಬಹುದೆ?"

೧೮. "ಲಿಚ್ಛವಿಗಳೇ, ನಾನಾಗಲೇ ನಾಳೆ ಆಮ್ರಪಾಲಿಯ ಜೊತೆ ಊಟ ಮಾಡುವುದಾಗಿ ಮಾತು ಕೊಟ್ಟಿದ್ದೇನೆ" ಎಂಬುದು ಮಹಾತ್ಮನ ಉತ್ತರವಾಗಿತ್ತು.

೧೯. ಆಗ ಲಿಚ್ಛವಿಗಳಿಗೆ ತಾವು ಸೋತಿರುವುದು ತಿಳಿಯಿತು. ತಮ್ಮ ವಂದನೆಗಳನ್ನು ವ್ಯಕ್ತಪಡಿಸಿ, ಮಹಾತ್ಮನ ಅಪ್ಪಣೆ ಪಡೆದು, ಅವರು ತಮ್ಮ ಆಸನಗಳಿಂದ ಎದ್ದು, ಮಹಾತ್ಮನಿಗೆ ವಂದಿಸಿದರು; ಹಾಗೂ ಅವನನ್ನು ಬಲಗಡೆ ಮಾಡಿಕೊಂಡು ಪ್ರದಕ್ಷಿಣೆ ಮಾಡಿ ಅಲ್ಲಿಂದ ಹೊರಟುಹೋದರು.

೨೦. ರಾತ್ರಿ ಮುಗಿದ ನಂತರ ರಾಜನರ್ತಕಿ ಆಮ್ರಪಾಲಿಯು ತನ್ನ ಮನೆಯಲ್ಲಿ ಸಿಹಿ ಅನ್ನವನ್ನೂ ಹೋಳಿಗೆಯನ್ನೂ ಮಾಡಿಸಿದಳು. ಹಾಗೂ "ಪ್ರಭೂ, ಈಗ ವೇಳೆಯಾಗಿದೆ, ಅಲ್ಲದೆ ಊಟ ಸಿದ್ಧವಾಗಿದೆ" ಎಂದು ಹೇಳಿ ಮಹಾತ್ಮನಿಗೆ ಸಮಯವಾಗಿರುವುದನ್ನು ಸೂಚಿಸಿದಳು.

೨೧. ಆ ದಿನ ಬೆಳಿಗ್ಗೆ ಬೇಗ ಎದ್ದು ಬಟ್ಟೆಗಳನ್ನು ಧರಿಸಿದ್ದ ಮಹಾತ್ಮನು ತನ್ನ ಭಿಕ್ಷಾಪಾತ್ರೆಯನ್ನೂ,

ಮೇಲುಹೊದಿಕೆಯನ್ನೂ ತೆಗೆದುಕೊಂಡು, ತನ್ನ ಪರಿವಾರದೊಡನೆ ಆಂಬ್ರಪಾಲಿಯ ಸೌಧವಿದ್ದಲ್ಲಿಗೆ ಹೋದನು. ಅಲ್ಲಿಗೆ ಬಂದಮೇಲೆ, ಅವನು ಮೊದಲೇ ಸಿದ್ಧಪಡಿಸಿದ್ದ ಆಸನದ ಮೇಲೆ ಕುಳಿತನು. ಆಗ ರಾಜನರ್ತಕಿ ಆಮ್ರಪಾಲಿಯ ಭಿಕ್ಷು ಪರಿವಾರಕ್ಕೂ ಅವರ ಮುಖ್ಯಸ್ಥ ಬುದ್ಧನಿಗೂ ಸಿಹಿ ಅನ್ನವನ್ನೂ ಹೋಳಿಗೆಗಳನ್ನೂ ಬಡಿಸಿದಳು. ಅವರು ಸಾಕು ಎನ್ನುವವರೆಗೂ ಅವರಿಗೆ ಅವಳು ಬಡಿಸಿದಳು.

೨೨. ಪೂಜ್ಯನು ತನ್ನ ಊಟ ಮುಗಿಸಿ, ಭಿಕ್ಷಾಪಾತ್ರೆ ಮತ್ತು ಕೈತೊಳೆದುಕೊಂಡ ನಂತರ, ರಾಜ ನರ್ತಕಿಯು ಒಂದು ಕೆಳಮಟ್ಟದ ಆಸನವನ್ನು ತರಿಸಿ, ಬುದ್ಧನ ಒಂದು ಬದಿಗೆ ಕುಳಿತಳು. ಅನಂತರ ಅವಳ ಮಹಾತ್ಮನನ್ನುದ್ದೇಶಿಸಿ ಹೀಗೆಂದಳು:

೨೩. "ಪ್ರಭು, ನನ್ನ ಉಪವನವನ್ನು ತಮಗೂ ಸಂಘಕ್ಕೂ ದಾನ ಕೊಡುತ್ತೇನೆ." ಮಹಾತ್ಮನು ಆ ದಾನವನ್ನು ಸ್ವೀಕರಿಸಿದನು; ಆಮೇಲೆ ಒಂದು ಧಾರ್ಮಿಕ ಪ್ರವಚನ ಮಾಡಿದ ನಂತರ, ಅವಳಿಂದ ಬೀಳ್ಕೊಂಡನು.

## ೫. ವಿಶಾಖಳ ಔದಾರ್ಯ

೧. ವಿಶಾಖಳು ಶ್ರಾವಸ್ತಿಯ ಶ್ರೀಮಂತ ಮಹಿಳೆ. ಅವಳಿಗೆ ಅನೇಕ ಮಕ್ಕಳೂ ಮೊಮ್ಮಕ್ಕಳೂ ಇದ್ದರು.

೨. ಪೂಜ್ಯನು ಶ್ರಾವಸ್ತಿಯಲ್ಲಿ ಉಳಿದುಕೊಂಡಿದ್ದಾಗ, ವಿಶಾಖಳು ಅವನಿದ್ದಲ್ಲಿಗೆ ಹೋಗಿ, ತನ್ನ ಮನೆಯಲ್ಲಿ ಭೋಜನ ಸ್ವೀಕರಿಸಲು ಅವನಿಗೆ ಆಮಂತ್ರಣ ನೀಡಿದಳು; ಅದಕ್ಕೆ ಪೂಜ್ಯನು ಸಮ್ಮತಿಸಿದನು.

೩. ಆದರೆ ಆ ದಿನ ರಾತ್ರಿ ಮತ್ತು ಮಾರನೆ ಬೆಳಿಗ್ಗೆ ಬಹಳ ಮಳೆ ಬಂದಿತು; ಭಿಕ್ಷುಗಳು ತಮ್ಮ ವಸ್ತ್ರಗಳು ಒಣಗಿಯೇ ಇರಲಿ ಎಂದು ಅವುಗಳನ್ನು ತೆಗೆದಿಟ್ಟು, ತಮ್ಮ ದೇಹದ ಮೇಲೆ ಮಳೆ ನೀರು ಬೀಳಲು ಅವಕಾಶ ಮಾಡಿಕೊಟ್ಟರು.

೪. ಮಾರನೇ ದಿನ ಬುದ್ಧನ ಊಟವಾದ ಮೇಲೆ, ವಿಶಾಖಳು ಅವನ ಬದಿಯಲ್ಲಿ ಕುಳಿತು ಹೀಗೆ ಹೇಳಿದಳು: "ಪ್ರಭು ಪೂಜ್ಯರಿಂದ ನಾನು ಎಂಟು ವರಗಳನ್ನು ಬೇಡುತ್ತೇನೆ."

೫. ಆಗ ಪೂಜ್ಯನು ಹೀಗೆಂದನು : "ಓ, ವಿಶಾಖಾ, ಆ ವರಗಳು ಯಾವುದೆಂದು ಮೊದಲೇ ಗೊತ್ತಾಗದ ಹೊರತು ತಥಾಗತರು ವರಗಳನ್ನು ಕೊಡುವುದಿಲ್ಲ."

೬. ವಿಶಾಖ ಉತ್ತರಿಸಿದಳು: "ಪ್ರಭು, ನಾನು ಕೇಳುವ ವರಗಳು ಯೋಗ್ಯವಾದುವೂ ಆಕ್ಷೇಪಿಸಲಾರದಂಥವೂ ಆಗಿವೆ."

೭. ವರಗಳನ್ನು ಕೇಳಲು ಅನುಮತಿ ಪಡೆದ ಮೇಲೆ ವಿಶಾಖ ಹೇಳಿದಳು: "ಪ್ರಭು, ಸಂಘದವರಿಗೆ ಮಳೆಗಾಲಕ್ಕೆ ಬೇಕಾದ ಬಟ್ಟೆ, ಒಳಗೆ ಬರುವ ಭಿಕ್ಷುಗಳಿಗೆ ಆಹಾರ, ಹೊರಗೆ ಹೋಗುವ ಭಿಕ್ಷುಗಳಿಗೆ ಆಹಾರ, ರೋಗಿಗಳಿಗೆ ಆಹಾರ, ರೋಗಿಗಳನ್ನು ನೋಡಿಕೊಳ್ಳುವವರಿಗೆ ಆಹಾರ, ರೋಗಿಗಳಿಗೆ ಔಷಧಿ, ಸಂಘಕ್ಕೆ ಸತತವಾಗಿ ಹಾಲು–ಅನ್ನದ ಸರಬರಾಜು, ಭಿಕ್ಷುಣಿ ಸೋದರಿಯರಿಗೆ ಸ್ನಾನದ ಬಟ್ಟೆ ಇವುಗಳನ್ನು ದಾನ ಕೊಡಬೇಕೆಂದು ನಾನು ಜೀವನವಿಡೀ ಆಸೆಪಟ್ಟಿದ್ದೇನೆ."

೮. “ವಿಶಾಖ, ಏನನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ತಥಾಗತನಿಂದ ಈ ವರಗಳನ್ನು ಕೇಳುತ್ತಿದ್ದೀಯ?” ಎಂದು ಪ್ರಭು ಕೇಳಿದನು.

೯. ಇದಕ್ಕೆ ಉತ್ತರವಾಗಿ ವಿಶಾಖ ಹೇಳಿದಳು: “ಪ್ರಭೂ ನಾನು ನನ್ನ ಹೆಣ್ಣಾಳನ್ನು ಕರೆದು ‘ಈಗ ಹೋಗಿ, ಭಿಕ್ಷುಸೋದರರಿಗೆ ಭೋಜನ ಸಿದ್ಧವಾಗಿದೆ ಎಂದು ತಿಳಿಸಿ ಬಾ’ ಎಂದು ಹೇಳಕಳಿಸಿದೆ; ಆಕೆ ಅದೇ ರೀತಿ ಹೋದಳು. ಆದರೆ ಅವಳು ವಿಹಾರಕ್ಕೆ ಬಂದಾಗ, ಮಳೆ ಬರುತ್ತಿದ್ದರೂ ಭಿಕ್ಷುಗಳು ತಮ್ಮ ವಸ್ತ್ರಗಳನ್ನು ಬಿಚ್ಚಿಟ್ಟಿದ್ದರು. ಆಗ ಅವಳು ‘ಇವರು ಭಿಕ್ಷುಗಳಲ್ಲ, ಬೆತ್ತಲೆ ಸಂನ್ಯಾಸಿಗಳು. ಅದಕ್ಕೆ ಮಳೆ ನೀರಿನಿಂದ ತೋಯಿಸಿಕೊಳ್ಳುತ್ತಿದ್ದಾರೆ’ ಎಂದು ತಿಳಿದುಕೊಂಡಳು. ಆ ಪ್ರಕಾರ ಅವಳು ಹಿಂದಿರುಗಿ ಬಂದು ಅದನ್ನು ವರದಿ ಮಾಡಿದಳು. ಹೀಗಾಗಿ ನಾನು ಅವಳನ್ನು ಎರಡನೆ ಸಾರಿ ಕಳಿಸಬೇಕಾಯಿತು.

೧೦. “ಪ್ರಭು, ಬೆತ್ತಲೆಯಿರುವುದು ಅಶುದ್ಧ ಹಾಗೂ ಅದು ಜಿಗುಪ್ಸೆ ಹುಟ್ಟಿಸುತ್ತದೆ. ಪ್ರಭು, ನಾನು ಈ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಾನಿರುವವರೆಗೂ ಸಂಘದವರಿಗೆ ಮಳೆಗಾಲಕ್ಕೆ ಬೇಕಾದ ವಿಶೇಷ ವಸ್ತುಗಳನ್ನು ದಾನ ಮಾಡಬೇಕೆಂದು ಇಚ್ಛೆಪಟ್ಟೆ.

೧೧. “ಪ್ರಭು, ನನ್ನ ಎರಡನೆಯ ಇಚ್ಛೆಯ ಬಗ್ಗೆ ಹೇಳಬೇಕೆಂದರೆ ಪರವೂರಿನಿಂದ ಒಳಗೆ ಬರುವ ಭಿಕ್ಷುವು, ನೇರವಾದ ಬೀದಿಯಲ್ಲಿ ಬರಲಾರದೆ, ಭಿಕ್ಷೆ ಎಲ್ಲಿ ಸಿಕ್ಕುತ್ತದೆ ಎಂಬುದು ಗೊತ್ತಿಲ್ಲದೆ, ಭಿಕ್ಷಾಟನೆ ಮಾಡುವಾಗ ದಾರಿಯಲ್ಲಿ ಬಳಲುತ್ತಾನೆ. ಪ್ರಭು, ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡೇ ನಾನಿರುವವರೆಗೂ ಪರವೂರಿಂದ ಸಂಘಕ್ಕೆ ಬರುವವರಿಗೆ ಆಹಾರವನ್ನು ಒದಗಿಸಬೇಕೆಂದು ಇಚ್ಛಿಸಿದೆ.

೧೨. “ಪ್ರಭು, ಮೂರನೆಯದಾಗಿ, ಹೊರಹೋಗುವ ಭಿಕ್ಷುವು ಭಿಕ್ಷಾಟನೆಗೆ ಹೋಗುವಾಗ, ಅವನು ಹಿಂದುಳಿಯಬಹುದು. ಅಥವಾ ಅವನು ಎಲ್ಲಿಗೆ ಹೋಗಬೇಕೆಂದು ಇಚ್ಛಿಸುತ್ತಾನೋ ಅಲ್ಲಿಗೆ ತಡವಾಗಿ ಹೋಗಬಹುದು: ಆಗ ರಸ್ತೆಯಲ್ಲಿ ಹೋಗುವಾಗ ಅವನಿಗೆ ಆಯಾಸವಾಗುತ್ತದೆ.

೧೩. “ಪ್ರಭು, ನಾಲ್ಕನೆಯದಾಗಿ, ರೋಗಿಯಾದ ಭಿಕ್ಷುವಿಗೆ ಸೂಕ್ತ ಆಹಾರ ದೊರೆಯದಿದ್ದರೆ, ಅವನ ರೋಗ ಇನ್ನೂ ಉಲ್ಬಣವಾಗಬಹುದು ಮತ್ತು ಅವನು ಸಾಯಬಹುದು.

೧೪. “ಐದನೆಯದಾಗಿ, ಪ್ರಭು, ರೋಗಿಗಳನ್ನು ನೋಡಿಕೊಳ್ಳುವ ಭಿಕ್ಷುವಿಗೆ ತನ್ನ ಭಿಕ್ಷೆಗಾಗಿ ಹೊರಹೋಗುವ ಅವಕಾಶ ತಪ್ಪುತ್ತದೆ.

೧೫. “ಆರನೆಯದಾಗಿ, ಪ್ರಭು, ರೋಗಿಯಾದ ಭಿಕ್ಷುವಿಗೆ ಸೂಕ್ತ ಔಷಧಿ ಸಿಕ್ಕದಿದ್ದರೆ, ಅವನ ರೋಗ ಉಲ್ಬಣವಾಗಿ ಅವನು ಸಾಯಬಹುದು.

೧೬. “ಪ್ರಭು, ಏಳನೆಯದಾಗಿ, ಹಾಲು ಅನ್ನವು ಮನಸ್ಸನ್ನು ಚುರುಕಾಗಿಸುತ್ತದೆ. ಹಸಿವು ಮತ್ತು ಬಾಯಾರಿಕೆಯನ್ನು ಹೋಗಲಾಡಿಸುತ್ತದೆ. ಆರೋಗ್ಯವಾಗಿರುವವರಿಗೆ ಅದು ಪೂರ್ಣ ಪೌಷ್ಟಿಕವಾಗಿರುತ್ತದೆ, ರೋಗಿಗಳಿಗೆ ಅದು ಔಷಧಿಯಾಗುತ್ತದೆ, ಎಂಬ ಕಾರಣದಿಂದ ಪೂಜ್ಯರಾದ ತಾವು ಮೆಚ್ಚುತ್ತೀರೆಂದು ಕೇಳಿದ್ದೇನೆ. ಆದುದರಿಂದ, ನಾನಿರುವವರೆಗೆ ಸಂಘಕ್ಕೆ ನಿರಂತರವಾಗಿ ಹಾಲು–ಅನ್ನದ ಸರಬರಾಜು ಮಾಡಬೇಕೆಂದು ಬಯಸುತ್ತೇನೆ.

೧೭. “ಕೊನೆಯದಾಗಿ, ಪ್ರಭು, ಅರ್ಚಿರಾವತಿ ನದಿಯಲ್ಲಿ, ರಾಜನರ್ತಕಿಯರು ಮೀಯುವಲ್ಲಿಯೇ, ಭಿಕ್ಷುಣಿಯರೂ–ಅದರಲ್ಲೂ ಬೆತ್ತಲೆಯಾಗಿ–ಮೀಯುವ ಅಭ್ಯಾಸವನ್ನಿಟ್ಟುಕೊಂಡಿದ್ದಾರೆ. ಪ್ರಭು, ರಾಜನರ್ತಕಿಯರು ಈ ಭಿಕ್ಷುಣಿಯರನ್ನು ನೋಡಿ ‘ಮಹಿಳೆಯರೇ, ನೀವು ಚಿಕ್ಕವರಿದ್ದಾಗ

ಬ್ರಹ್ಮಚರ್ಯ ಪಾಲಿಸುವುದರಲ್ಲೇನಿದೆ ಒಳಿತು? ಮುದುಕಿಯರಾದ ಮೇಲೆ ಬ್ರಹ್ಮಚರ್ಯ ಪಾಲಿಸಿರಿ. ಹೀಗೆ ನಿಮಗೆ ಎರಡೂ ಲಾಭಗಳನ್ನು ಗಳಿಸುತ್ತೀರಿ' ಎಂದು ಅಪಹಾಸ್ಯ ಮಾಡುತ್ತಾರೆ. ಪ್ರಭು, ಹೆಂಗಸರಿಗೆ ಬೆತ್ತಲೆಯಿರುವುದೆಂದರೆ, ಅಶುದ್ಧ, ಅಸಹ್ಯ ಮತ್ತು ಜುಗುಪ್ಸೆ ಹುಟ್ಟಿಸುವಂಥದು.

೧೮. "ಈ ಪರಿಸ್ಥಿತಿಗಳೇ, ಪ್ರಭು, ನನ್ನ ದೃಷ್ಟಿಯಲ್ಲಿದ್ದಂತವು."

೧೯. ಪೂಜ್ಯನು ಹೇಳಿದನು: "ಆದರೆ ಓ, ವಿಶಾಖಾ, ತಥಾಗತನಿಂದ ಈ ಎಂಟು ವರಗಳನ್ನು ಕೇಳುವಾಗ, ನಿನಗಾಗುವ ಯಾವ ಲಾಭವನ್ನು ನೀನು ದೃಷ್ಟಿಯಲ್ಲಿಟ್ಟುಕೊಂಡಿದ್ದೆ?"

೨೦. ವಿಶಾಖಾ ಉತ್ತರಿಸಿದಳು: "ಪ್ರಭು, ಮಳೆಗಾಲವನ್ನು ಬೇರೆ ಬೇರೆ ಊರುಗಳಲ್ಲಿ ಕಳೆದ ಭಿಕ್ಷುಗಳು ಪೂಜ್ಯರನ್ನು ನೋಡಲು ಶ್ರಾವಸ್ತಿಗೆ ಬರುತ್ತಾರೆ. ಪೂಜ್ಯರನ್ನು ಭೇಟಿಯಾದ ಮೇಲೆ 'ಪ್ರಭು ಇಂತ ಒಬ್ಬ ಭಿಕ್ಷು ಸತ್ತಿದ್ದಾನೆ. ಅವನಿಗೆ ಮುಂದೇನು ಗತಿ?' ಎಂದು ಕೇಳುತ್ತಾನೆ. ಆಗ ಪೂಜ್ಯರಾದ ತಾವು ಅವನು ಪರಿವರ್ತನೆಯ ಫಲವನ್ನು ಸಂಪಾದಿಸಿದ್ದಾನೆಂದು, ಅಥವಾ ಅವನು ನಿರ್ವಾಣ ಪಡೆದಿದ್ದಾನೆ ಅಥವಾ ಅರ್ಹಂತ ಪದವನ್ನು ಸಂಪಾದಿಸಿದ್ದಾನೆ, ಎಂದು – ಸಂದರ್ಭಕ್ಕೆ ತಕ್ಕಂತೆ– ಹೇಳುತ್ತೀರಿ.

೨೧. "ಆಗ ನಾನು ಅವರ ಬಳಿ ಹೋಗಿ 'ಸ್ವಾಮಿಗಳೇ, ಆ ಭಿಕ್ಷುಸೋದರನು ಹಿಂದೆ ಶ್ರಾವಸ್ತಿಗೆ ಬಂದಿದ್ದವರಲ್ಲಿ ಒಬ್ಬನೇ?' ಎಂದು ಕೇಳುತ್ತೇನೆ; ಹಾಗೂ 'ಖಂಡಿತವಾಗಿಯೂ ನಾನು ಮಳೆಗಾಲಕ್ಕೆಂದು ಕೊಟ್ಟ ವಸ್ತ್ರಗಳನ್ನಾಗಲಿ, ಪರವೂರಿಂದ ಬಂದ ಭಿಕ್ಷುಗಳಿಗೆಂದು ಕೊಟ್ಟ ಆಹಾರವನ್ನಾಗಲಿ, ಪರವೂರಿಗೆ ಹೋಗುವ ಭಿಕ್ಷುಗಳಿಗೆಂದು ಕೊಟ್ಟ ಆಹಾರವನ್ನಾಗಲಿ, ರೋಗಿಗಳಿಗೆಂದು ಕೊಟ್ಟ ಆಹಾರವನ್ನಾಗಲಿ, ರೋಗಿಗಳನ್ನು ಶುಶ್ರೂಷೆ ಮಾಡುವವರಿಗೆಂದು ಕೊಟ್ಟ ಆಹಾರವನ್ನಾಗಲಿ, ರೋಗಿಗಳೆಂದು ಕೊಟ್ಟ ಔಷಧಿಯನ್ನಾಗಲಿ ಅಥವಾ ನಿರಂತರ ಸರಬರಾಜು ಮಾಡಿದ ಹಾಲು–ಅನ್ನವಾಗಲಿ ಅವನು ಅನುಭವಿಸಿರಬೇಕು' ಎಂಬ ತೀರ್ಮಾನಕ್ಕೆ ಬರುತ್ತೇನೆ.

೨೨. "ಆಗ ನನ್ನಲ್ಲಿ ಸಂತೋಷ ಚಿಮ್ಮುತ್ತದೆ; ಹೀಗೆ ಸಂತುಷ್ಟಳಾದಾಗ ನನಗೆ ಆನಂದ ಉಂಟಾಗುತ್ತದೆ; ಹೀಗೆ ಬಂದ ಆನಂದದಿಂದ ನನ್ನ ಇಡೀ ದೇಹ ಮತ್ತು ಆತ್ಮಗಳಿಗೆ ಶಾಂತಿ ಲಭಿಸುತ್ತದೆ; ಈ ಶಾಂತಿಯಿಂದಾಗಿ ಆನಂದಮಯ ತೃಪ್ತಿ ಉಂಟಾಗುತ್ತದೆ. ಈ ಆನಂದದಿಂದಾಗಿ ನನ್ನ ಹೃದಯಕ್ಕೆ ವಿರಾಮ ಸಿಕ್ಕುತ್ತದೆ. ಅದು ನನ್ನ ನೈತಿಕ ಶಕ್ತಿಯ ಪ್ರಯೋಗವೂ, ಸಪ್ತ ವಿವೇಕ ಶಕ್ತಿಯ ಪ್ರಯೋಗವೂ ಆಗುತ್ತದೆ! ಪ್ರಭು, ಪೂಜ್ಯರಿಂದ ಆ ಎಂಟು ವರಗಳನ್ನು ಕೇಳುವಲ್ಲಿ ನಾನು ಈ ಲಾಭವನ್ನೇ ದೃಷ್ಟಿಯಲ್ಲಿಟ್ಟುಕೊಂಡಿದ್ದೆ."

೨೩. ಆಗ ಪೂಜ್ಯನು ಹೇಳಿದನು: "ಒಳ್ಳೆಯದು, ಒಳ್ಳೆಯದು, ವಿಶಾಖಾ ಈ ಲಾಭವನ್ನು ದೃಷ್ಟಿಯಲ್ಲಿಟ್ಟುಕೊಂಡು ತಥಾಗತನಿಂದ ಈ ಎಂಟು ವರಗಳನ್ನು ಕೇಳುವಲ್ಲಿ ನೀನು ಒಳ್ಳೆಯದನ್ನೇ ಮಾಡಿದ್ದೀಯಾ. ಸತ್ಪಾತ್ರರಿಗೆ ದಾನ ಮಾಡುವುದು ಯಥೇಚ್ಛವಾಗಿ ಫಲಗಳನ್ನು ಕೊಡುವ ಒಳ್ಳೆಯ ಭೂಮಿಯಲ್ಲಿ ಒಳ್ಳೆಯ ಬೀಜ ಬಿತ್ತಿದಂತೆ. ಆದರೆ ಇನ್ನೂ ಮೋಹದ ನಿರಂಕುಶ ಪ್ರಭುತ್ವಕ್ಕೊಳಪಟ್ಟಿರುವವರಿಗೆ, ಭಿಕ್ಷೆ ಕೊಡುವುದು ಕೆಟ್ಟ ಭೂಮಿಯಲ್ಲಿ ಬೀಜ ಬಿತ್ತಿದಂತೆ. ಭಿಕ್ಷೆ ಪಡೆದವನ ಮೋಹವು ಪುಣ್ಯದ ಬೆಳವಣಿಗೆಯನ್ನು ಕತ್ತುಹಿಸುಕಿದಂತೆ."

೨೪. ಪೂಜ್ಯನು ವಿಶಾಖಳಿಗೆ ಈ ಮುಂದಿನ ಪದಗಳಲ್ಲಿ ವಂದನೆ ಸಲ್ಲಿಸಿದನು: "ಋಜು ಮಾರ್ಗದಲ್ಲಿ ನಡೆಯುವವಳೂ ಪೂಜ್ಯನ ಶಿಷ್ಯಳೂ ಆದ, ಯಾವುದೇ ಮಹಿಳೆಯು ತನ್ನ ಹೃದಯದ ಸಂತೋಷದಿಂದ ಹಾಗೂ ಯಾವುದೇ ಕೃಪಣ ಮನೋಭಾವವಿಲ್ಲದೆ, ಕೊಡುವ ದಾನವು ದಿವ್ಯವಾದುದು,

ದುಃಖವನ್ನು ದೂರ ಮಾಡುವಂಥದು ಮತ್ತು ಆನಂದದಾಯಕವು. "ದುಷ್ಟತನದಿಂದಲೂ ಅಶುದ್ಧತೆಯಿಂದಲೂ ಮುಕ್ತವಾದ ದಾರಿಯನ್ನು ಹಿಡಿಯುವ ಅವಳು ಆನಂದಮಯ ಜೀವನವನ್ನು ಪಡೆಯುತ್ತಾಳೆ. ಒಳ್ಳೆಯ ಧ್ಯೇಯವುಳ್ಳ ಅವಳು ಸುಖವಾಗಿರುತ್ತಾಳೆ; ಅವಳು ದಾನಧರ್ಮಗಳಲ್ಲಿಯೇ ಆನಂದ ಪಡೆಯುತ್ತಾಳೆ."

೨೫. ವಿಶಾಖಳು ಪೂರ್ವ-ಆರಾಮವನ್ನು ಸಂಘಕ್ಕೆ ನೀಡಿದಳು, ಹಾಗೂ ಸಾಮಾನ್ಯ ಸೋದರಿಯರಿಗೆ ಮೊಟ್ಟಮೊದಲ ಮೇಲ್ವಿಚಾರಕಿಯಾದಳು.

# ಭಾಗ : ೨

# ಬುದ್ಧನ ಶತ್ರುಗಳು

೧. ಥಳುಕಿನಿಂದ ಪರಿವರ್ತನೆ ಎಂಬ ಆರೋಪ
೨. ಪರಾವಲಂಬಿ ಎಂಬ ಆರೋಪ
೩. ಸುಖೀ ಕುಟುಂಬಗಳನ್ನು ಒಡೆದನೆಂಬ ಆರೋಪ
೪. ಜೈನರು ಮತ್ತು ಕೊಲೆಯ ಸುಳ್ಳು ಆರೋಪ
೫. ಜೈನರು ಹಾಗೂ ಅನೈತಿಕತೆಯ ಸುಳ್ಳು ಆರೋಪ
೬. ದೇವದತ್ತನೆಂಬ ದಾಯಾದಿ ಮತ್ತು ಶತ್ರು
೭. ಬ್ರಾಹ್ಮಣರು ಮತ್ತು ಬುದ್ಧ

## ೧. ಥಳುಕಿನಿಂದ ಪರಿವರ್ತನೆ ಎಂಬ ಆರೋಪ

೧. ಒಂದು ಸಾರಿ ಮಹಾತ್ಮನು ಮಹಾವನದಲ್ಲಿರುವ ತ್ರಿಪಾದ ಬೆಟ್ಟದ ವೈಶಾಲಿಯಲ್ಲಿ ತಂಗಿದ್ದನು. ಆಗ ಭದ್ದಿಯ ಎಂಬ ಲಿಚ್ಛವಿಯು ಅವನ ಬಳಿ ಬಂದು ಹೀಗೆಂದನು: "ಪ್ರಭು! ಜನರು 'ಗೌತಮ ಸಂನ್ಯಾಸಿಗಳು ಮಾಟಗಾರರು. ಅವರಿಗೆ ಬೇರೆ ಪಂಥದ ಅನುಯಾಯಿಗಳನ್ನು ಥಳುಕಿನ ಚಮತ್ಕಾರದ ಮೂಲಕ ಮರುಳು ಮಾಡುವುದು ಗೊತ್ತು' ಎಂದು ಮಾತಾಡಿಕೊಳ್ಳುತ್ತಾರೆ.

೨. "ಹೀಗೆ ಹೇಳುವವರು ತಮಗೆ ಮಹಾತ್ಮರನ್ನು ಅಪಾರ್ಥ ಮಾಡುವ ಇಚ್ಛೆ ಇಲ್ಲವೆಂದು ಹೇಳುತ್ತಾರೆ. ಪ್ರಭು, ಲಿಚ್ಛವಿಗಳಾದ ನಾವೇನೋ ಈ ಆರೋಪವನ್ನು ನಂಬುವುದಿಲ್ಲ. ಆದರೆ ಈ ವಿಷಯದಲ್ಲಿ ಮಹಾತ್ಮರು ಏನು ಹೇಳುತ್ತಾರೆಂದು ತಿಳಿದುಕೊಳ್ಳುವ ಬಯಕೆ ನಮಗಿದೆ."

೩. ಪ್ರಭು ಹೇಳಿದ: "ಭದ್ದಿಯ, ಗಾಳಿಮಾತನ್ನಾಗಲಿ, ಸಂಪ್ರದಾಯ ಹೇಳಿದುದನ್ನಾಗಲಿ, ಜನರು ಆಡಿಕೊಂಡಿದುದನ್ನಾಗಲಿ ನೀನು ಒಪ್ಪಿಕೊಳ್ಳಬೇಡ. ಧರ್ಮಗ್ರಂಥಗಳಲ್ಲಿದೆ ಎಂಬ ಕಾರಣಕ್ಕಾಗಲಿ ತರ್ಕಸಮ್ಮತವಾಗಿದೆ ಅಥವಾ ಅದೊಂದು ಅನುಮಿತ ಎಂಬ ಕಾರಣಕ್ಕಾಗಲಿ, ಕಣ್ಣಿಗೆ ಕಾಣುತ್ತದೆ ಎಂಬ ಕಾರಣಕ್ಕಾಗಲಿ, ನಿನ್ನ ಅಭಿಮತಕ್ಕೆ ಹೊಂದಿಕೊಳ್ಳುತ್ತದೆ ಅಥವಾ ನಿನಗೆ ಸರಿಯೆನಿಸುತ್ತದೆ ಎಂಬ ಕಾರಣಕ್ಕಾಗಿ, ಅಥವಾ ಸಂನ್ಯಾಸಿಗೆ ಗೌರವ ಕೊಡಬೇಕು. ಆದುದರಿಂದ ಅದಕ್ಕೂ ಗೌರವ ಕೊಡಬೇಕು ಎಂಬ ಕಾರಣಕ್ಕಾಗಿ, ಯಾವುದನ್ನೂ ಒಪ್ಪಿಕೊಳ್ಳಬೇಡ.

೪. "ಆದರೆ, ಭದ್ದಿಯ, ಸ್ವತಃ ನೀನೇ ಪರೀಕ್ಷೆ ಮಾಡಿ, ನೀನು ಮಾಡುತ್ತಿರುವುದು ಪಾಪ ಅಥವಾ ತಪ್ಪು, ಜ್ಞಾನಿಗಳು ಅದಕ್ಕೆ ಆಕ್ಷೇಪಿಸುತ್ತಾರೆ ಮತ್ತು ನಷ್ಟ ಮತ್ತು ಹಿಂಸೆಯೇ ಅದರ ಪರಿಣಾಮ ಎಂಬ ತೀರ್ಮಾನಕ್ಕೆ ಬಂದರೆ, ನೀನು ಅವುಗಳನ್ನು ವರ್ಜಿಸಬೇಕು.

೫. " ಭದ್ದಿಯ, ಈಗ ನಿನ್ನ ಸಮಸ್ಯೆಗೆ ಬರೋಣ. ನಾನು ಥಳುಕಿನಿಂದ ಪರಿವರ್ತನೆಗೊಳಿಸುತ್ತಿದ್ದೇನೆ ಎಂದು ಆರೋಪಿಸುತ್ತಿರುವ ಜನರು ಮಹದಾಕಾಂಕ್ಷೆಯ ಜನರು; ಇದಕ್ಕೆ ನೀನೇನು ಹೇಳುತ್ತೀಯ?" "ಹೌದು ಪ್ರಭು, ಅವರು ಮಹದಾಕಾಂಕ್ಷೆಯ ಜನರು" ಎಂದು ಭದ್ದಿಯ ಉತ್ತರಿಸಿದನು.

೬. "ಮಹದಾಕಾಂಕ್ಷೆ ಉಳ್ಳವನು ಹೊಟ್ಟೆಕಿಚ್ಚಿಗೆ ಅಧೀನವಾಗಿ, ಅವನ ಬುದ್ಧಿ ಅದಕ್ಕೆ ವಶವಾದಾಗ, ಅವನು ತನ್ನ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಸುಳ್ಳು ಹೇಳುತ್ತಾನೆ, ಅಥವಾ ಅಪರಾಧವೆಸಗುತ್ತಾನೆ; ಇದರ ಬಗ್ಗೆ ನಿನ್ನ ಅಭಿಪ್ರಾಯವೇನು, ಭದ್ದಿಯ?" ಭದ್ದಿಯ "ಪ್ರಭು, ಅದು ನಿಜ" ಎಂದುತ್ತರಿಸಿದನು.

೭. "ಕೇಡು ಮಾಡಬೇಕು, ದ್ವೇಷ ಸಾಧಿಸಬೇಕು ಎಂಬ ಯೋಚನೆಗಳು ಅಂಥವನ ಮನಸ್ಸಿನಲ್ಲಿ ಹುಟ್ಟಿದರೆ, ತನ್ನ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ದಾರಿಯಲ್ಲಿ ಅಡ್ಡಬಂದವರ ಮೇಲೆ ಆರೋಪ ಹೊರಿಸಿರೆಂದು ಅವನು ಜನರನ್ನು ಪ್ರಚೋದಿಸುವುದಿಲ್ಲವೆ? ಈ ಬಗ್ಗೆ ನಿನ್ನ ಅಭಿಪ್ರಾಯವೇನು ಭದ್ದಿಯ?" ಭದ್ದಿಯ "ಹೌದು ಪ್ರಭು, ಅದು ನಿಜ" ಎಂದುತ್ತರಿಸಿದನು.

೮. "ಆದುದರಿಂದ, ಭದ್ದಿಯ, ನನ್ನ ಶಿಷ್ಯರಿಗೆ ಒತ್ತಾಯಪೂರ್ವಕವಾಗಿ ಹೇಳುವುದಿಷ್ಟೆ: 'ನನ್ನ ಪ್ರೀತಿಯ ಜನರೆ, ದುರಾಸೆಯನ್ನು ಸದಾ ನಿಯಂತ್ರಿಸಿ; ಹೀಗೆ ಯಾವಾಗಲೂ ಮಾಡುವುದರಿಂದ, ದುರಾಸೆಯಿಂದ

ಮಾಡುವ ಯಾವುದೇ ಕಾರ್ಯಗಳನ್ನು ನೀವು ಕಾಯೇನವಾಚಾಮನಸಾ ಮಾಡುವುದಿಲ್ಲ. ಕೇಡಿಗತನ ಮತ್ತು ಅಜ್ಞಾನವನ್ನು ಸದಾ ನಿಯಂತ್ರಿಸಿ.'

೯. "ಆದುದರಿಂದ, ಭದ್ದಿಯ, ಯಾವ ಸಂನ್ಯಾಸಿಗಳು ಮತ್ತು ಬ್ರಾಹ್ಮಣರು 'ಗೌತಮ ಸಂನ್ಯಾಸಿಯು ಒಬ್ಬ ಮಾಟಗಾರ, ಅವನಿಗೆ ಬೇರೆ ಪಂಥಗಳ ಜನರನ್ನು ಥಳುಕಿನ ಚಮತ್ಕಾರದ ಮೂಲಕ ಮರುಳು ಮಾಡುವುದು ಗೊತ್ತು' ಎಂದು ಹೇಳುತ್ತಲೂ, ನಾನು ಅಂಥ ವಿಚಾರಗಳನ್ನು ಬೋಧಿಸುವ ಗುರು ಎಂದು ಹೇಳುತ್ತಲೂ, ನನ್ನನ್ನು ನಿಂದಿಸುತ್ತಾರೊ, ಅವರು ಅಸತ್ಯ ಮತ್ತು ಶುದ್ಧ ಸುಳ್ಳು ಹೇಳುವವರು."

೧೦. "ಹಾಗಾದರೆ, ಪ್ರಭು, ಇದು ನಿಜವಾಗಿಯೂ ಶುಭದಾಯಕ ಶಕ್ತಿ! ಈ ಥಳುಕಿನ ಚಮತ್ಕಾರ ನಿಜವಾಗಿಯೂ ಒಳ್ಳೆ ಶೋಧ! ಪ್ರಭು, ನನ್ನ ಪ್ರೀತಿಯ ರಕ್ತಸಂಬಂಧಿಗಳು ಅದೇ ತಳುಕಿಗೆ ಬಲಿಯಾದರೆ ಎಷ್ಟು ಚೆನ್ನ! ಅದು ಅವರ ಅನುಕೂಲಕ್ಕೂ ಸುಖಕ್ಕೂ ಎಷ್ಟೊಂದು ಸಹಾಯಕವಾಗುತ್ತದೆ! ಪ್ರಭು, ಅದೇ ರೀತಿ, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು – ಎಲ್ಲ ವರ್ಗದವರೂ, ಇದೇ ಥಳುಕಿನ ಚಮತ್ಕಾರಕ್ಕೆ ಮರುಳಾದರೆ, ಅದು ಅವರ ಅನುಕೂಲಕ್ಕೂ ಸುಖಕ್ಕೂ ಬಹಳ ಕಾಲದವರೆಗೆ ಸಹಾಯಕವಾದೀತು!"

೧೧. "ಅದು ಸತ್ಯ, ಭದ್ದಿಯ! ಅದು ಸತ್ಯ, ಭದ್ದಿಯ! ಎಲ್ಲ ವರ್ಗದವರೂ ಈ ಚಮತ್ಕಾರಕ್ಕೆ ಮರುಳಾಗಿ ಪಾಪಗಳ ಕಾರಣಗಳನ್ನು ತ್ಯಜಿಸಿದರೆ, ನನ್ನ ಚಮತ್ಕಾರವು ಪ್ರಪಂಚಕ್ಕೆ ಒಂದು ದೊಡ್ಡ ಲಾಭವೂ ಸುಖವೂ ಆಗಿ ಪರಿಣಮಿಸುತ್ತದೆ."

## ೨. ಪರಾವಲಂಬಿ ಎಂಬ ಆರೋಪ !

೧. ಪೂಜ್ಯನು ಪರಾವಲಂಬಿ, ಬೇರೆಯವರನ್ನು ಅವಲಂಬಿಸಿರುವವನು, ಕೆಲಸ ಮಾಡಿ ತನ್ನ ಅನ್ನವನ್ನು ದುಡಿಯದೆ ಇರುವವನು ಎಂದು ಆರೋಪಿಸಲಾಯಿತು. ಆ ಆರೋಪ ಮತ್ತು ಪೂಜ್ಯನು ಅದಕ್ಕೆ ಕೊಟ್ಟ ಉತ್ತರ ಎರಡನ್ನೂ ಈ ಕೆಳಗೆ ನಿರೂಪಿಸಲಾಗಿದೆ.

೨. ಒಂದು ಸಾರಿ ಪೂಜ್ಯ ಪ್ರಭುವು ಬ್ರಾಹ್ಮಣರ ಹಳ್ಳಿಯಾದ ಏಕನಾಲದ ದಕ್ಷಿಣಗಿರಿಯಲ್ಲಿ ಮಗಧದ ಜನರೊಡನೆ ಉಳಿದುಕೊಂಡಿದ್ದನು. ಅದೇ ಸಮಯದಲ್ಲಿ ಕಾಶಿ–ಭಾರದ್ವಾಜನು ಬಿತ್ತನೆಗೋಸ್ಕರ ತನ್ನ ಐನೂರು ನೇಗಿಲುಗಳನ್ನು ಉಪಯೋಗಿಸುತ್ತಿದ್ದನು.

೩. ಪ್ರಭುವು ಹೊತ್ತಿಗೆ ಮುಂಚೆ ಎದ್ದು, ತನ್ನ ವಸ್ತ್ರಗಳನ್ನು ತೊಟ್ಟುಕೊಂಡು, ಕೈಯಲ್ಲಿ ಭಿಕ್ಷಾಪಾತ್ರೆ, ಹಿಡಿದುಕೊಂಡು, ಆ ಬ್ರಾಹ್ಮಣನು ಕೆಲಸ ಮಾಡುತ್ತಿದ್ದಲ್ಲಿಗೆ ಹೋದನು. ಆಗ ಊಟದ ಸಮಯವಾಗಿತ್ತು; ಅಲ್ಲಿ ಪ್ರಭುವು ಒಂದು ಕಡೆ ನಿಂತುಕೊಂಡನು.

೪. ಪ್ರಭು ಭಿಕ್ಷೆಗಾಗಿ ಅಲ್ಲಿ ನಿಂತಿರುವುದನ್ನು ನೋಡಿದ ಆ ಬ್ರಾಹ್ಮಣನು, "ನಾನು ಊಟ ಮಾಡುವ ಮೊದಲು ಉಳುತ್ತೇನೆ ಮತ್ತು ಬಿತ್ತುತ್ತೇನೆ, ಹಾಗೂ ನೇಗಿಲನ್ನು ಭೂಮಿಯಲ್ಲಿ ನಿಲ್ಲಿಸುತ್ತೇನೆ; ನೀವೂ ಊಟ ಮಾಡುವ ಮೊದಲು ಉಳಬೇಕು ಮತ್ತು ಬಿತ್ತಬೇಕು." ಎಂದನು.

೫. "ಬ್ರಾಹ್ಮಣನೇ, ಊಟ ಮಾಡುವ ಮೊದಲು ನಾನೂ ಉಳುತ್ತೇನೆ ಮತ್ತು ಬಿತ್ತುತ್ತೇನೆ."

೬. "ಆದರೆ ನನಗೆ ಪೂಜ್ಯ ಗೌತಮರ ನೊಗವಾಗಲಿ, ನೇಗಿಲಾಗಲಿ, ನೇಗಿಲ ಕುಳವಾಗಲಿ, ಚಾವಟಿಯಾಗಲಿ,

ಎತ್ತಿನ ಜೋಡಿಯಾಗಲಿ ಕಾಣುತ್ತಿಲ್ಲ; ಆದರೂ ತಾವು ಊಟ ಮಾಡುವ ಮೊದಲು ಉಳುವಿರೆಂದೂ ಬಿತ್ತುವಿರೆಂದೂ ಹೇಳುತ್ತೀರಿ.

೭. "ತಾವು ರೈತರೆಂದು ಹೇಳಿಕೊಳ್ಳುತ್ತೀರಿ; ಆದರೆ ನಿಮ್ಮ ಬೇಸಾಯದ ಸಲಕರಣೆಗಳಾವುವೂ ನಮ್ಮ ಕಣ್ಣಿಗೆ ಕಾಣುತ್ತಿಲ್ಲ; ನೀವು ಬೇಸಾಯ ಹೇಗೆ ಮಾಡುತ್ತೀರಿ, ತಿಳಿಸಿ; ನಿಮ್ಮ ಬೇಸಾಯದ ಬಗ್ಗೆ ನಾವು ಹೆಚ್ಚು ಕೇಳಬಯಸುತ್ತೇವೆ."

೮. "ವಿಶ್ವಾಸವೇ ನನ್ನ ಬೀಜ, ಕಠಿಣಜೀವನವೇ ನನ್ನ ಮಳೆ; ವಿವೇಕವೇ ನನ್ನ ನೊಗ ಮತ್ತು ನೇಗಿಲು; ಪಾಪದ ಭಯವೇ ಮೇಟಿ; ಯೋಚನೆಯೇ ನೊಗವನ್ನು ಕಟ್ಟುವ ಮಿಣಿ; ಲಕ್ಷ್ಯವೇ ನನ್ನ ಕುಳ ಮತ್ತು ಚಾವಟಿ" ಎಂದು ಪ್ರಭು ಉತ್ತರಿಸಿದನು.

೯. "ನನ್ನ ಮಾತು ಮತ್ತು ಕ್ರಿಯೆಗಳ ಮೇಲೆ ಎಚ್ಚರದಿಂದ ಇರುತ್ತಾ, ಆಹಾರದ ಮೇಲೆ ನಿಯಂತ್ರಣವನ್ನಿಟ್ಟುಕೊಂಡು, ವಿವೇಕದಿಂದ ಕಳೆಕೀಳುತ್ತೇನೆ; ಪರಮಾನಂದದ ಕೊಯ್ಲು ಮಾಡುವವರೆಗೂ ವಿಶ್ರಮಿಸುವುದಿಲ್ಲ; ಪ್ರಯತ್ನವೇ ನನ್ನ ಬಲವಾದ ಎತ್ತು; ಅದು ಇನ್ನೂ ಉಳದಿರುವ ಭೂಮಿಯನ್ನು ನೋಡಿ ವಿಮುಖವಾಗಿರುವುದಿಲ್ಲ – ಅದು ನನ್ನನ್ನು ಶಾಂತಿಯ ಕಡೆಗೆ ನೇರವಾಗಿ ಕರೆದುಕೊಂಡು ಹೋಗುತ್ತದೆ; ಅಲ್ಲಿ ದುಗುಡ–ದುಮ್ಮಾನಗಳಿರುವುದಿಲ್ಲ. ಹೀಗೆ, ನಾನು ಅಮರತ್ವದ ಬೆಳೆ ಬೆಳೆಯಲೋಸ್ಕರ ಬೇಸಾಯ ಮಾಡುತ್ತೇನೆ;"

## ೩. ಸುಖೀ ಕುಟುಂಬಗಳನ್ನು ಒಡೆದನೆಂಬ ಆರೋಪ

೧. ಮಗಧದ ಸಭ್ಯರಲ್ಲಿ ಅನೇಕ ಯುವ ಗಣ್ಯ ವ್ಯಕ್ತಿಗಳು ಬುದ್ಧನ ಶಿಷ್ಯರಾದುದನ್ನು ತಿಳಿದ ಜನರು ಜುಗುಪ್ಸೆಗೊಂಡರಲ್ಲದೆ ಕೋಪಗೊಂಡರು. ಅವರು ಹೀಗೆ ಆಡಿಕೊಂಡರು. "ಸಮಣ ಗೌತಮನು ತಂದೆತಾಯಿಗಳಿಗೆ ಮಕ್ಕಳಿಲ್ಲದಂತಾಗಲು ಕಾರಣನಾಗಿದ್ದಾನೆ; ಸಮಣ ಗೋತಮನು ಹೆಂಡತಿಯರು ವಿಧವೆಯರಾಗಲು ಕಾರಣನಾಗಿದ್ದಾನೆ; ಸಮಣ ಗೌತಮನು ಕುಟುಂಬಗಳು ಬುಡಮೇಲಾಗಲು ಕಾರಣನಾಗಿದ್ದಾನೆ.

೨. "ಆಗ ಒಂದು ಸಾವಿರ ಜಟಿಲರಿಗೆ ದೀಕ್ಷೆ ಕೊಟ್ಟ; ಮತ್ತೊಂದು ದಿನ ಸಂಜಯನ ಅನುಯಾಯಿಗಳಾದ ಇನ್ನೂರಾ ಐವತ್ತು ಪರ್ಯಟಕ ಸಂನ್ಯಾಸಿಗಳಿಗೆ ದೀಕ್ಷೆ ಕೊಟ್ಟ; ಈಗ ಸಮಣ ಗೌತಮನ ಮಾರ್ಗದರ್ಶನದಲ್ಲಿ ಮಗಧದ ಕುಲೀನರಲ್ಲಿ ಅನೇಕ ಗಣ್ಯ ವ್ಯಕ್ತಿಗಳು ಪವಿತ್ರ ಜೀವನ ನಡೆಸುತ್ತಿದ್ದಾರೆ. ಹೀಗಾದರೆ, ಮುಂದೇನು? ಯಾರಿಗೂ ಗೊತ್ತಿಲ್ಲ!"

೩. ಅಲ್ಲದೆ, ಅವರು ಸಂನ್ಯಾಸಿಗಳನ್ನು ನೋಡಿದಾಕ್ಷಣ ಈ ಮಾತುಗಳಿಂದ ಹೀಯಾಳಿಸುತ್ತಾರೆ: "ಈ ಮಹಾಸಮಣನು ಮಗಧ ಜನರ ಗಿರಿಭಾಜ(ರಾಜಗಾಹ)ಕ್ಕೆ ಬಂದಿದ್ದಾನೆ; ಜೊತೆಯಲ್ಲಿ ಸಂಜಯನ ಅನುಯಾಯಿಗಳೂ ಅವನ ಹಿಂದೆ ಇದ್ದಾರೆ; ಇನ್ನು ಮುಂದೆ ಅವನ ಹಿಂದೆ ಮತ್ತಾರು ಹೋಗುತ್ತಾರೋ!"

೪. ಸಂನ್ಯಾಸಿಗಳು ಈ ಆಪಾದನೆಗಳನ್ನು ಕೇಳಿಸಿಕೊಂಡು, ಅವನ್ನು ಪೂಜ್ಯನಿಗೆ ವರದಿ ಮಾಡಿದರು.

೫. ಅದಕ್ಕೆ ಪೂಜ್ಯನು ಉತ್ತರಿಸಿದ: "ಸಂನ್ಯಾಸಿಗಳೇ, ಈ ಗದ್ದಲ ಬಹಳ ದಿನ ಇರುವುದಿಲ್ಲ; ಇದು ಏಳು ದಿನಗಳವರೆಗೆ ಮಾತ್ರವಿರುತ್ತದೆ; ಏಳು ದಿನಗಳ ನಂತರ ಇಲ್ಲವಾಗುತ್ತದೆ.

೭. "ಸಂನ್ಯಾಸಿಗಳೇ, ಅವರು ನಿಮ್ಮನ್ನು ಹೀಯಾಳಿಸಿದರೆ, ನೀವು 'ಸದ್ಧಮ್ಮದ ಮೂಲಕವೇ ತಥಾಗತರು ಜನರನ್ನು ತಮ್ಮ ಹಿಂದೆ ಕರೆದುಕೊಂಡುಹೋಗುವುದು. ವಿವೇಕಿಗಳ ಬಗ್ಗೆ ಯಾರು ಗೊಣಗುತ್ತಾರೆ? ಧಮ್ಮದ ಹಾದಿಯಲ್ಲಿ ಕರೆದುಕೊಂಡು ಹೋಗುವ ಜ್ಞಾನಿಗಳನ್ನು ನಾವೇಕೆ ದ್ವೇಷಿಸಬೇಕು? ನನ್ನ ಧಮ್ಮದಲ್ಲಿ ಬಲಪ್ರಯೋಗ ಇಲ್ಲ; ಮನೆಯನ್ನು ಸ್ವ–ಇಚ್ಛೆಯಿಂದ ತ್ಯಜಿಸಬಹುದು. ಸ್ವ–ಇಚ್ಛೆಯಿಂದ ಮನೆಗೆ ಅಂಟಿಕೊಳ್ಳಬಹುದು."

೮. "ಪೂಜ್ಯನು ಹೇಳಿಕೊಟ್ಟಂತೆ, ಭಿಕ್ಷುಗಳು ಆ ನಿಂದಕರಿಗೆ ಉತ್ತರ ಕೊಟ್ಟಾಗ, ಜನರಿಗೆ, "ಶಾಕ್ಯಪುತ್ರ ಸಮಣನು ಧಮ್ಮದ ಮೂಲಕ ಜನರನ್ನು ತನ್ನನ್ನು ಅನುಸರಿಸುವಂತೆ ಮಾಡುತ್ತಾನೆಯೇ ಹೊರತು, ಅನಾಚಾರದ ಮೂಲಕವಲ್ಲ" ಎಂದು ಮನವರಿಕೆಯಾಯಿತು ಹಾಗೂ ಅವರು ಪೂಜ್ಯನನ್ನು ನಿಂದಿಸುವುದನ್ನು ನಿಲ್ಲಿಸಿದರು.

## ೪. ಜೈನರು ಮತ್ತು ಕೊಲೆಯ ಸುಳ್ಳು ಆರೋಪ

೧. ತೀರ್ಥಿಕರಿಗೆ ಸಮಣ ಗೌತಮನು ಬಂದಾಗಿನಿಂದ ಜನರು ತಮಗೆ ಗೌರವ ಕೊಡುತ್ತಿಲ್ಲ ಎಂದೆನಿಸಲು ಪ್ರಾರಂಭಿಸಿತು. ಅಲ್ಲದೆ, ಅವರಲ್ಲಿ ಕೆಲವರಿಗೆ ತಮ್ಮ ಅಸ್ತಿತ್ವದ ಬಗ್ಗೆಯೇ ಗೊತ್ತಿರಲಿಲ್ಲ.

೨. ಆದುದರಿಂದ, ತೀರ್ಥಿಕರು "ಕೆಲವರೊಡನೆ ಸಂಚು ಹೂಡಿ ಅವನ ಅಪಮಾನ ಮಾಡಲು ಸಾಧ್ಯವೇ ಎಂಬುದನ್ನು ನೋಡೋಣ. ಪ್ರಾಯಶಃ ಸುಂದರಿಯ ಸಹಾಯದಿಂದ ನಮಗೆ ಜಯ ಸಿಕ್ಕಬಹುದು" ಎಂದು ಯೋಚಿಸಿದರು.

೩. ಅದರಂತೆ ಅವರು ಸುಂದರಿಯನ್ನು ಭೇಟಿ ಮಾಡಿ, ಅವಳಿಗೆ "ಸೋದರಿ, ನೀನು ಅತಿ ಸುಂದರಿಯೂ ಮೋಹಕ ಶಕ್ತಿಯುಳ್ಳವಳೂ ಆಗಿದ್ದೀಯ. ನೀನು ಸಮಣ ಗೌತಮನ ಬಗ್ಗೆ ಒಂದು ಅಪಪ್ರಚಾರ ಮಾಡಿದರೆ, ಜನರು ಅದನ್ನು ನಂಬಬಹುದು, ಆಗ ಅವನ ಪ್ರಭಾವ ಕಡಿಮೆಯಾಗುತ್ತದೆ" ಎಂದನು.

೪. ಸುಂದರಿಯು ಪ್ರತಿದಿನ ಸಾಯಂಕಾಲ, ಜನರು ನಗರಕ್ಕೆ ಹಿಂದಿರುಗುವ ಸಮಯದಲ್ಲಿ, ಹೂಮಾಲೆ, ಕರ್ಪೂರ, ಸುಗಂಧ ದ್ರವ್ಯಗಳೊಡನೆ ಜೇತವನದ ಕಡೆಗೆ ಹೋಗುತ್ತಿದ್ದಳು. ಯಾರಾದರೂ ಅವಳನ್ನು "ಸುಂದರಿ ಎಲ್ಲಿಗೆ ಹೋಗುತ್ತಿದ್ದೀಯ?" ಎಂದು ಕೇಳಿದರೆ, ಅವಳು "ನಾನು ಗಂಧಕುಟೀರದಲ್ಲಿ ಸಮಣ ಗೌತಮನೊಡನೆ ಇರಲು ಹೋಗುತ್ತಿದ್ದೇನೆ" ಎನ್ನುತ್ತಿದ್ದಳು.

೫. ಆಮೇಲೆ ರಾತ್ರಿಯನ್ನು ತೀರ್ಥಿಕರ ಉಪವನಗಳಲ್ಲಿ ಕಳೆದು ಬೆಳಿಗ್ಗೆ ಹಿಂದಿರುಗುತ್ತಿದಳು. ಯಾರಾದರೂ ರಾತ್ರಿಯನ್ನು ಎಲ್ಲಿ ಕಳೆದೆ ಎಂದು ಕೇಳಿದರೆ, ಅವಳು, 'ನಾನು ರಾತ್ರಿಯನ್ನು ಗೌತಮನೊಂದಿಗೆ ಕಳೆದೆ' ಎನ್ನುತ್ತಿದ್ದಳು.

೬. ಕೆಲ ದಿನಗಳಾದ ಮೇಲೆ ತೀರ್ಥಿಕರು ಕೆಲವು ಬಾಡಿಗೆ ಕೊಲೆಗಾರರನ್ನು ಕಂಡು "ಸುಂದರಿಯನ್ನು ಕೊಂದು ಅವಳ ಹೆಣವನ್ನು ಗೌತಮ ಗಂಧಕುಟೀರದ ಬಳಿಯ ತಿಪ್ಪೆಯ ಮೇಲೆ ಹಾಕಿ" ಎಂದು ಹೇಳಿದರು. ಕೊಲೆಗಾರರು ಹಾಗೇ ಮಾಡಿದರು.

೭. ಆಗ ತೀರ್ಥಿಕರು ಸುಂದರಿಯು ಜೇತವನಕ್ಕೆ ಆಗಾಗ್ಗೆ ಭೇಟಿ ಕೊಡುತ್ತಿದ್ದಳೆಂದೂ, ಈಗ ಅವಳು ಕಾಣೆಯಾಗಿದ್ದಾಳೆಂದೂ, ಶಾಂತಿಪಾಲಕ ಮತ್ತು ನ್ಯಾಯಪಾಲಕ ಅಧಿಕಾರಿಗಳಿಗೆ ದೂರಿತ್ತರು.

೮. ಹೀಗೆ ಅವರು ಅಧಿಕಾರಿಗಳ ಸಹಾಯದಿಂದ ತಿಪ್ಪೆಯ ಮೇಲಿದ್ದ ಸುಂದರಿಯ ಶವವನ್ನು ಕಂಡರು.

೯. ಅಲ್ಲದೆ, ತೀರ್ಥಿಕರು 'ಗೌತಮನ ಶಿಷ್ಯರು ತಮ್ಮ ಮುಖಂಡನ ಮಾನವನ್ನು ಕಾಪಾಡಲು ಸುಂದರಿಯನ್ನು ಕೊಂದಿದ್ದಾರೆ' ಎಂದು ಆರೋಪಿಸಿದರು.

೧೦. ಆದರೆ ಕೊಲೆಗಾರರು ಸುಂದರಿಯನ್ನು ಕೊಂದದ್ದಕ್ಕಾಗಿ ಪಡೆದ ಬಹುಮಾನದ ಹಣವನ್ನು ಹಂಚಿಕೊಳ್ಳುವಾಗ ಹೆಂಡದಂಗಡಿಯಲ್ಲಿ ತಮ್ಮತಮ್ಮಲ್ಲೇ ಜಗಳವಾಡತೊಡಗಿದರು.

೧೧. ಅಧಿಕಾರಿಗಳು ತಕ್ಷಣವೇ ಅವರನ್ನು ಬಂಧಿಸಿದರು ಹಾಗೂ ಅವರು ತಮ್ಮ ಅಪರಾಧವನ್ನು ಒಪ್ಪಿಕೊಂಡರಲ್ಲದೆ, ಯಾರ ಪ್ರಚೋದನೆಯಿಂದ ತಾವು ಅಪರಾಧವೆಸಗಿದೆವು ಎಂಬುದನ್ನು ಹೇಳಿ ತೀರ್ಥಿಕರ ಮೇಲೆ ಆರೋಪ ಹೊರಿಸಿದರು.

೧೨. ಇದರಿಂದಾಗಿ ತೀರ್ಥಿಕರು ತಮಗೆ ಇದ್ದ ಅಲ್ಪ–ಸ್ವಲ್ಪ ಪ್ರಭಾವವನ್ನು ಕಳೆದುಕೊಂಡರು.

## ೫. ಜೈನರು ಹಾಗೂ ಅನೈತಿಕತೆಯ ಸುಳ್ಳು ಆರೋಪ

೧. ಸೂರ್ಯೋದಯವಾದೊಡನೆ ಮಿಂಚುಹುಳುಗಳು ಕಾಣೆಯಾಗುವಂತೆ ತೀರ್ಥಿಕರ ಪರಿಸ್ಥಿತಿ ಚಿಂತಾಜನಕವಾಯಿತು. ಜನರು ಅವರಿಗೆ ಗೌರವ ಮತ್ತು ಕಾಣಿಕೆ ಸಲ್ಲಿಸುವುದನ್ನು ನಿಲ್ಲಿಸಿದರು.

೨. ತೀರ್ಥಿಕರು ದೊಡ್ಡ ಬೀದಿಗಳಲ್ಲಿ ನಿಂತು ಹೀಗೆ ಕೂಗತೊಡಗಿದರು: "ಸಮಣ ಗೌತಮನು ಹೇಗೆ ಬುದ್ಧನಾಗಿದ್ದಾನೋ ಹಾಗೆ ನಾವೂ ಆಗಿದ್ದೇವೆ. ನೀವು ಬುದ್ಧನಿಗೆ ಕಾಣಿಕೆ ಕೊಟ್ಟು ಪುಣ್ಯ ಸಂಪಾದಿಸುವುದಾದರೆ, ನಮಗೆ ಕಾಣಿಕೆ ಕೊಡುವುದರ ಮೂಲಕವೂ ನೀವು ಅದನ್ನು ಸಂಪಾದಿಸಬಹುದು. ಆದುದರಿಂದ, ನಮಗೂ ಕಾಣಿಕೆ ನೀಡಿ."

೩. ಆದರೆ ಜನರು ಇದಕ್ಕೆ ಕಿವಿ ಕೊಡಲಿಲ್ಲ. ಆದುದರಿಂದ, ಅವರು ಸಮಣ ಗೌತಮನ ನಡತೆಯ ಬಗ್ಗೆ ಅಪಪ್ರಚಾರ ಮಾಡುವ ಮೂಲಕ ಸಂಘಕ್ಕೆ ಕೆಟ್ಟ ಹೆಸರು ತರುವುದು ಹೇಗೆ ಎಂಬುದರ ಬಗ್ಗೆ ಗುಟ್ಟಾಗಿ ಸಮಾಲೋಚನೆ ಮಾಡಿದರು.

೪. ಅದೇ ಕಾಲದಲ್ಲಿ ಶ್ರಾವಸ್ತಿಯಲ್ಲಿ ಚಿಂಚಾ ಎಂಬ ಪರಿವ್ರಾಜಕಳು ವಾಸಿಸುತ್ತಿದ್ದಳು. ಮೈಕಟ್ಟಿನಲ್ಲಿ ಹಾಗೂ ದೈಹಿಕ ಆಕರ್ಷಣೆಯಲ್ಲಿ ಅವಳು ಮನಮೋಹಕ ಸುಂದರಿಯಾಗಿದ್ದಳು. ಅವಳು ತನ್ನ ಹಾವಭಾವಗಳಿಂದ ಕಾಮೋದ್ದೀಪಕ ಸೊಬಗನ್ನುಂಟುಮಾಡುತ್ತಿದ್ದಳು.

೫. ತೀರ್ಥಿಕರಲ್ಲೆ ಚತುರ ಸಂಚುಗಾರನೊಬ್ಬನು 'ಚಿಂಚಾಳ ಸಹಾಯದಿಂದ ಗೌತಮನ ಬಗ್ಗೆ ಅಪಪ್ರಚಾರ ಮಾಡುವುದು ಸುಲಭ ಹಾಗೂ ಆ ಮೂಲಕ ಅವನ ಅಪಮಾನ ಮಾಡಬಹುದು' ಎಂದು ಹೇಳಿದಾಗ ಉಳಿದ ತೀರ್ಥಿಕರು ಒಪ್ಪಿಗೆ ಕೊಟ್ಟರು.

೬. ಆಗ, ಒಂದು ದಿನ ಚಿಂಚಾಳು ತೀರ್ಥಿಕರಿದ್ದ ಉಪವನಕ್ಕೆ ಬಂದು, ಅವರಿಗೆ ನಮಸ್ಕರಿಸಿ, ಅವರ ಪಕ್ಕದಲ್ಲಿ ಕುಳಿತಳು. ಆದರೆ ಯಾರೂ ಅವಳೊಡನೆ ಮಾತಾಡಲಿಲ್ಲ.

೭. ಇದರಿಂದ ಅಚ್ಚರಿಗೊಂಡ ಅವಳು "ನಾನೇನು ನಿಮಗೆ ತಪ್ಪೆಸಗಿದ್ದೇನೆ? ನಾನು ನಿಮಗೆ ಮೂರು ಸಾರಿ ನಮಸ್ಕರಿಸಿದ್ದೇನೆ: ಆದರೂ ನೀವು ಒಂದು ಮಾತನ್ನೂ ಆಡುತ್ತಿಲ್ಲ" ಎಂದಳು.

೮. ಆಗ ತೀರ್ಥಿಕರು ಹೇಳಿದರು: "ಸೋದರಿ, ಶ್ರಮಣ ಗೌತಮನು ತನ್ನ ಜನಪ್ರಿಯತೆಯಿಂದಾಗಿ ನಮಗೆ ಕೇಡನ್ನೂ ನಷ್ಟವನ್ನು ಉಂಟುಮಾಡುತ್ತಿದ್ದಾನೆಂದು ನಿನಗೆ ಗೊತ್ತಿಲ್ಲವೇ?" "ನನಗೆ ಅದು ಗೊತ್ತಿಲ್ಲ; ಆದರೆ ಅದರ ಪರಿಹಾರಾರ್ಥ ನಾನೇನಾದರೂ ಕೆಲಸ ಮಾಡಬೇಕಾಗಿದೆಯೇನು?"

೯. "ಸೋದರಿ, ನಮಗೆ ಒಳ್ಳೆಯದನ್ನು ಮಾಡಬೇಕೆಂಬ ಇಚ್ಛೆ ನಿನಗಿದ್ದರೆ, ನೀನೇ ನಿನ್ನ ಸ್ವಂತ ಪ್ರಯತ್ನದಿಂದ ಗೌತಮನ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸು. ಹಾಗೂ ಆ ಮೂಲಕ ಅವನ ಬಗ್ಗೆ ಜನರಲ್ಲಿ ದ್ವೇಷ ಮೂಡಿಸು." "ಹಾಗೆ ಆಗಲಿ; ಈಗ ಸಮಾಧಾನಗೊಳ್ಳಿರಿ; ಅದನ್ನು ನನಗೆ ಬಿಡಿ" ಎಂದು ಹೇಳುತ್ತಾ ಅವಳು ಆ ಜಾಗವನ್ನು ಬಿಟ್ಟಳು.

೧೦. ಚಿಂಚಾಳು ಗಂಡಸರನ್ನು ಆಕರ್ಷಿಸುವುದರಲ್ಲಿಯೂ, ಮೋಹಕವಾಗಿ ನಡೆಯುವುದರಲ್ಲಿಯೂ ಪರಿಣತಳಿದ್ದಳು. ಶ್ರಾವಸ್ತಿಯ ಜನರು ಜೇತವನದಲ್ಲಿ ನಡೆಯುತ್ತಿದ್ದ ಧರ್ಮಪ್ರವಚನಗಳನ್ನು ಮುಗಿಸಿಕೊಂಡು ಹಿಂದಿರುಗುತ್ತಿದ್ದಾಗ, ಚಿಂಚಾಳು ಕೆಂಪು ಸೀರೆಯನ್ನುಟ್ಟು ಕೈಯಲ್ಲಿ ಸುಗಂಧದ್ರವ್ಯಗಳನ್ನೂ ಹೂವಿನ ಹಾರಗಳನ್ನೂ ಹಿಡಿದು ಜೇತವನದ ಕಡೆಗೆ ಹೋಗುತ್ತಿದ್ದಳು.

೧೧. ಯಾರಾದರೂ "ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೋಗುತ್ತಿದ್ದೀಯ" ಎಂದು ಅವಳನ್ನು ಕೇಳಿದರೆ, ಅವಳು "ಅದು ನಿಮಗೇಕೆ ಬೇಕು?" ಎಂದುತ್ತರಿಸುತ್ತಿದ್ದಳು. ಜೇತವನದ ಹತ್ತಿರದಲ್ಲಿರುವ ತೀರ್ಥಿಕಾರಾಮ (ತೀರ್ಥಿಕರ ವಿರಾಮಸ್ಥಳ)ದಲ್ಲಿ ರಾತ್ರಿಯನ್ನು ಕಳೆದು, ಬುದ್ಧನಿಗೆ ಗೌರವ ಸಲ್ಲಿಸಲು ಜನರು ಜೇತವನಕ್ಕೆ ಹೋಗುವಾಗ, ಅಂದರೆ ಬೆಳಿಗ್ಗೆ, ಅವಳು ಶ್ರಾವಸ್ತಿಗೆ ಹಿಂದಿರುಗುತ್ತಿದ್ದಳು.

೧೨. ಯಾರಾದರೂ "ರಾತ್ರಿಯನ್ನು ಎಲ್ಲಿ ಕಳೆದೆ?" ಎಂದು ಅವಳನ್ನು ಕೇಳಿದರೆ, ಅವಳು "ಅದು ನಿಮಗೇಕೆ ಬೇಕು? ನಾನು ರಾತ್ರಿಯನ್ನು ಶ್ರಮಣ ಗೌತಮನೊಡನೆ ಜೇತವನದಲ್ಲಿರುವ ಗಂಧ ಕುಟೀರದಲ್ಲಿ ಕಳೆದೆ" ಎನ್ನುತ್ತಿದ್ದಳು. ಈ ಉತ್ತರ ಕೆಲವರ ಮನಸ್ಸಿನಲ್ಲಿ ಸಂದೇಹವನ್ನು ಹುಟ್ಟುಹಾಕತೊಡಗಿತು.

೧೩. ನಾಲ್ಕು ತಿಂಗಳಾದ ಮೇಲೆ, ಹಳೆ ಬಟ್ಟೆಗಳನ್ನು ತನ್ನ ಹೊಟ್ಟೆ ಸುತ್ತ ಸುತ್ತಿಕೊಂಡು ಹೊಟ್ಟೆಯ ಗಾತ್ರವನ್ನು ದೊಡ್ಡದು ಮಾಡಿಕೊಂಡಳು ಹಾಗೂ ತಾನು ಶ್ರಮಣ ಗೌತಮನಿಂದ ಬಸಿರಿಯಾದೆನೆಂದು ಹೇಳತೊಡಗಿದಳು. ಕೆಲವರು ಅದನ್ನು ನಂಬತೊಡಗಿದರು.

೧೪. ಒಂಬತ್ತನೇ ತಿಂಗಳಲ್ಲಿ ಹೊಟ್ಟೆಗೆ ಒಂದು ಉಬ್ಬಿದ ಮರದ ತುಂಡನ್ನು ಕಟ್ಟಿಕೊಂಡು, ಹುಳುಗಳ ಕಡಿತದಿಂದ ತೋಳುಗಳನ್ನು ಉಬ್ಬಿಸಿಕೊಂಡು, ಬುದ್ಧನು ಧರ್ಮಪ್ರವಚನ ನೀಡುತ್ತಿದ್ದಾಗ, ಅವನ ಮುಂದೆ ಬಂದು ಹೀಗೆ ನುಡಿದಳು: "ಮಹಾ ಗುರುಗಳೇ! ನೀವು ಅನೇಕ ಜನರಿಗೆ ಧರ್ಮಪ್ರವಚನ ನೀಡಿದ್ದೀರಿ; ನಿಮ್ಮ ಧ್ವನಿ ಮಧುರವಾಗಿದೆ; ನಿಮ್ಮ ತುಟಿಗಳು ಕೋಮಲವಾಗಿವೆ; ನಿಮ್ಮ ಸಂಗದಿಂದಾಗಿ ನಾನು ಗರ್ಭವತಿಯಾಗಿದ್ದೇನೆ ಮತ್ತು ಹೆರಿಗೆ ಸಮಯ ಹತ್ತಿರವಾಗುತ್ತಿದೆ.

೧೫. "ನನ್ನ ಹೆರಿಗೆಯ ಸ್ಥಳವನ್ನು ತಾವು ನಿರ್ಧರಿಸಿಲ್ಲ, ಅಪತ್ಕಾಲಕ್ಕೆ ಬೇಕಾದ ಔಷಧಿಯನ್ನು ನಾನು ಕಾಣುತ್ತಿಲ್ಲ; ನಿಮ್ಮ ಕೈಯಲ್ಲಿ ಅದನ್ನೆಲ್ಲಾ ಮಾಡಲು ಆಗದಿದ್ದರೆ, ಅದಕ್ಕೆ ನಿಮ್ಮ ಶಿಷ್ಯರಾದ ಕೋಸಲ ರಾಜ, ಅನಾಥಪಿಂಡಿಕ ಅಥವಾ ವಿಶಾಖಾ ಇವರಲ್ಲೊಬ್ಬನನ್ನು ಏಕೆ ನೇಮಿಸಬಾರದು?

೧೬. "ನಿಮಗೆ ಒಬ್ಬ ಹುಡುಗಿಯನ್ನು ಹೇಗೆ ಮರುಳು ಮಾಡಬೇಕೆಂಬುದು ಗೊತ್ತಿರುವಂತೆ ಕಾಣುತ್ತದೆ. ಹಾಗೆ ಮರುಳು ಮಾಡಿ ಹುಟ್ಟಿಸಿದ ನವಜಾತ ಶಿಶುವಿಗೆ ಹೇಗೆ ಶುಶ್ರೂಷೆ ಮಾಡಬೇಕೆಂಬುದು ನಿಮಗೆ ಗೊತ್ತಿಲ್ಲ" ಸಭಾಸದರೆಲ್ಲ ಮೌನವಾಗಿದ್ದರು.

೧೭. ಬುದ್ಧನು ಪ್ರವಚನ ಮುಂದುವರಿಸುವುದನ್ನು ನಿಲ್ಲಿಸಿ ನಿಯಂತ್ರಿತ ಗಾಂಭೀರ್ಯದಿಂದ "ಸೋದರಿ, ನೀನು ಹೇಳುತ್ತಿರುವುದು ಸತ್ಯವಿರಲಿ ಅಸತ್ಯವಿರಲಿ, ಅದೆಲ್ಲ ನಮ್ಮಿಬ್ಬರಿಗೆ ಮಾತ್ರ ಗೊತ್ತು" ಎಂದು ಉತ್ತರಿಸಿದನು.

೧೮. ಚಿಂಚಾ ಗಟ್ಟಿಯಾಗಿ ಕೆಮ್ಮುತ್ತಾ ಹೇಳಿದಳು: "ಓ ಗುರುಗಳೇ ಹೌದು, ಅಂಥ ವಿಷಯ ನಮ್ಮಿಬ್ಬರಿಗೆ ಮಾತ್ರ ಗೊತ್ತಿರಲು ಸಾಧ್ಯ."

೧೯. ಹಾಗೆ ಅವಳು ಕೆಮ್ಮಿದಾಗ ಸೊಂಟದ ಸುತ್ತ ಮರದ ತುಂಡನ್ನು ಕಟ್ಟಿದ್ದ ಹುರಿಯ ಗಂಟು ಸಡಿಲವಾಗಿ, ಆ ತುಂಡು ಅವಳ ಪಾದದ ಮೇಲೆಯೇ ಬಿತ್ತು; ಆಗ ಅವಳಿಗೆ ಕಸಿವಿಸಿಯಾಗಿತು.

೨೦. ಆಗ ಅಲ್ಲಿದ್ದ ಜನರು ಅವಳನ್ನು ಕಲ್ಲು ಮತ್ತು ಕೋಲುಗಳಿಂದ ಹೊಡೆದು ಓಡಿಸಿದರು.

## ೬. ದೇವದತ್ತನೆಂಬ ದಾಯಾದಿ ಮತ್ತು ಶತ್ರು

೧. ದೇವದತ್ತನು ಬುದ್ಧನ ದಾಯಾದಿ. ಆದರೆ ಮೊದಲಿನಿಂದಲೂ ಅವನಿಗೆ ಬುದ್ಧನ ಬಗ್ಗೆ ಹೊಟ್ಟೆಕಿಚ್ಚು ಇತ್ತು ಮತ್ತು ಅವನನ್ನು ತೀವ್ರವಾಗಿ ದ್ವೇಷಿಸುತ್ತಿದ್ದ.

೨. ಬುದ್ಧನು ಗೃಹತ್ಯಾಗ ಮಾಡಿ ಹೊರಟುಹೋದ ಮೇಲೆ, ದೇವದತ್ತನು ಯಶೋಧರೆಯನ್ನು ಪ್ರೀತಿಸಲು ಯತ್ನಿಸಿದ.

೩. ಒಂದು ರಾತ್ರಿ ಯಶೋಧರೆ ಇನ್ನೇನು ಮಲಗಬೇಕೆನ್ನುವಷ್ಟರಲ್ಲಿ ದೇವದತ್ತನು ಭಿಕ್ಷುವಿನ ವೇಷದಲ್ಲಿ ಬಂದಾಗ, ಅವನನ್ನು ಯಾರೂ ತಡೆಯಲಿಲ್ಲ; ಆಗ ಅವನು ನೇರವಾಗಿ ಅವಳ ಕೋಣೆಗೆ ಬಂದನು. ಆಗ ಅವಳು "ಭಿಕ್ಷುಗಳೇ ತಮಗೇನು ಬೇಕು? ನನಗಾಗಿ ನನ್ನ ಪತಿಯಿಂದ ಏನಾದರೂ ಸಂದೇಶ ತಂದಿರುವಿರಾ?" ಎಂದು ಕೇಳಿದಳು.

೪. "ನಿನ್ನ ಗಂಡ ನಿನಗೆ ಎಳ್ಳಷ್ಟೂ ಗಮನ ಕೊಡುವುದಿಲ್ಲ. ಸುಖವಾಗಿದ್ದ ನಿನ್ನ ಸಂಸಾರದಲ್ಲಿ ನಿನ್ನನ್ನು ಕ್ರೂರ ಹಾಗೂ ನೀಚ ರೀತಿಯಲ್ಲಿ ಬಿಟ್ಟುಹೋದ" ಎಂದ ದೇವದತ್ತ.

೫. "ಆದರೆ ಅವನು ಹಲವರ ಒಳ್ಳೆಯದಕ್ಕಾಗಿ ಹಾಗೆ ಮಾಡಿದ" ಎಂದುತ್ತರಿಸಿದಳು ಯಶೋಧರೆ.

೬. "ಅದೇನಾದರೂ ಇರಲಿ; ನಿನಗೆ ಅಸಹ್ಯ ಕ್ರೌರ್ಯ ತೋರಿಸಿದ್ದಕ್ಕಾಗಿ, ಅವನ ಮೇಲೆ ನೀನು ಸೇಡು ತೀರಿಸಿಕೊಳ್ಳಬೇಕು" ಎಂದು ದೇವದತ್ತ ಸೂಚಿಸಿದ.

೭. "ನಿಲ್ಲಿಸಿ ಭಿಕ್ಷುಗಳೇ; ನಿಮ್ಮ ಮಾತು, ನಿಮ್ಮ ಯೋಚನೆ ಅಶುದ್ಧವಾಗಿದೆ" ಎಂದು ಯಶೋಧರೆ ಪ್ರತಿಭಟಿಸಿದಳು.

೮. "ಯಶೋಧರಾ, ನೀನು ನನ್ನನ್ನು ಗುರುತಿಸಲಾರೆಯಾ? ನಾನು ನಿನ್ನನ್ನು ಪ್ರೀತಿಸುವ ದೇವದತ್ತ'

೯. "ದೇವದತ್ತ, ನೀನು ಸುಳ್ಳ ಮತ್ತು ಕೇಡಿಗ ಎಂಬುದು ಗೊತ್ತಿತ್ತು. ನೀನು ನಿಜವಾದ ಸಂನ್ಯಾಸಿಯಲ್ಲ ಎಂಬುದೂ ಗೊತ್ತಿತ್ತು; ಆದರೆ ನೀನು ಇಷ್ಟು ಕೀಳು ಬುದ್ಧಿಯವನೆಂದು ನನಗೆ ಶಂಕೆಯೇ ಬರಲಿಲ್ಲ."

೧೦. "ಯಶೋಧರಾ, ಯಶೋಧರಾ ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂದು ಬೇಡತೊಡಗಿದನು. "ನಿನ್ನ ಗಂಡನು ನಿನಗೆ ತಾತ್ಸಾರವನ್ನಲ್ಲದೆ ಮತ್ತೇನನ್ನೂ ತೋರಿಸುವುದಿಲ್ಲ. ಅವನು ನಿನ್ನ ಬಗ್ಗೆ ಕ್ರೂರವಾಗಿದ್ದಾನೆ. ನನ್ನನ್ನು ಪ್ರೀತಿಸು, ಹಾಗೂ ಅವನ ಕ್ರೌರ್ಯಕ್ಕೆ ಪ್ರತಿಯಾಗಿ ಸೇಡು ತೀರಿಸಿಕೊ."

೧೧. ಯಶೋಧರೆಯ ನಿರ್ವಿಣ್ಣ ಹಾಗೂ ಕಳಾಹೀನ ಮುಖವು ನೇರಳೆ ಬಣ್ಣಕ್ಕೆ ತಿರುಗತೊಡಗಿತು. ಅವಳ ಕೆನ್ನೆಯ ಮೇಲೆ ಕಣ್ಣೀರು ಹರಿಯತೊಡಗಿತು.

೧೨. "ದೇವದತ್ತ ಕ್ರೂರನಾಗಿರುವವನು ನೀನು; ಒಂದು ವೇಳೆ ನಿನ್ನ ಪ್ರೀತಿ ಪ್ರಾಮಾಣಿಕವಾಗಿದ್ದರೂ ಅದು ನನಗೆ ಅಪಮಾನವಾದಂತೆಯೇ ಸೈ. 'ನಿನ್ನನ್ನು ಪ್ರೀತಿಸುತ್ತೇನೆ' ಎಂದು ನೀನು ಹೇಳುವಾಗ, ನೀನು ಕೇವಲ ಸುಳ್ಳು ಹೇಳುತ್ತಿದ್ದೀಯ.

೧೩. "ನಾನು ಚಿಕ್ಕವಳೂ ಸುಂದರಿಯೂ ಆಗಿದ್ದಾಗ, ನೀನು ನನ್ನ ಕಡೆ ನೋಡುತ್ತಿದ್ದುದೇ ಕಡಿಮೆ. ಈಗ ನನಗೆ ವಯಸ್ಸಾಗಿದೆ; ನಾನು ದುಃಖದುಮ್ಮಾನಗಳಿಂದ ಜರ್ಜರಿತಳಾಗಿದ್ದೇನೆ; ಈಗ ರಾತ್ರಿ ಹೊತ್ತು ಬಂದು ನಿನ್ನ ಕ್ರೂರ ಮತ್ತು ಪಾಪದ ಪ್ರೀತಿಯನ್ನು ಘೋಷಿಸಲು ಬಂದಿದ್ದೀಯ. ನೀನೊಬ್ಬ ಕೀಳುಮಟ್ಟದ ಹೇಡಿ."

೧೪. ಕೊನೆಗೆ "ದೇವದತ್ತ ಈ ಜಾಗದಿಂದ ಹೋಗಾಚೆ" ಎಂದು ಅವಳು ಕೂಗಿದಳು. ಆಗ ದೇವದತ್ತ ಆ ಜಾಗ ಬಿಟ್ಟನು.

೧೫. ಬುದ್ಧನು ದೇವದತ್ತನನ್ನು ಸಂಘದ ಮುಖ್ಯಸ್ಥನನ್ನಾಗಿ ಮಾಡದೆ, ಸಾರಿಪುತ್ರನನ್ನೂ ಮೊಗ್ಗಲ್ಲಾನನನ್ನೂ ಮುಖ್ಯಸ್ಥರನ್ನಾಗಿ ಮಾಡಿದುದಕ್ಕೆ ದೇವದತ್ತನಿಗೆ ಅವನ ಮೇಲೆ ಬಹಳ ಸಿಟ್ಟಿತ್ತು; ಬುದ್ಧನನ್ನು ಕೊಲ್ಲಲು ಅವನು ಮೂರು ಸಾರಿ ಪ್ರಯತ್ನ ಮಾಡಿದ; ಆದರೆ ಅವನು ಯಾವೊಂದರಲ್ಲಿಯೂ ಸಫಲನಾಗಲಿಲ್ಲ.

೧೬. ಒಂದು ಸಾರಿ ಪೂಜ್ಯನು ಗೃಧ್ರಕೂಟವೆಂಬ ಬೆಟ್ಟದ ತಪ್ಪಲಿನ ನೆರಳಿನಲ್ಲಿ ಶತಪಥ ಅಡ್ಡಾಡುತ್ತಿದ್ದನು.

೧೭. ದೇವದತ್ತನು ಆ ಬೆಟ್ಟ ಹತ್ತಿ ಪೂಜ್ಯನ ಪ್ರಾಣ ತೆಗೆಯುವ ಉದ್ದೇಶದಿಂದ ಒಂದು ದೊಡ್ಡ ಕಲ್ಲನ್ನೆತ್ತಿ ಕೆಳಗೆಸೆದನು; ಆದರೆ ಅದು ಮತ್ತೊಂದು ಬಂಡೆಯ ಮೇಲೆ ಬಿದ್ದು, ಅಲ್ಲಿಯೇ ನೆಲೆಸಿತು. ಅದರಿಂದ ಒಡೆದ ಒಂದು ಚೂರಷ್ಟೇ ಪೂಜ್ಯನ ಕಾಲಿಗೆ ತಗುಲಿ ರಕ್ತ ಬರಿಸಿತು.

೧೮. ಅವನು ಬುದ್ಧನ ಪ್ರಾಣ ತೆಗೆಯಲು ಎರಡನೆಯ ಪ್ರಯತ್ನ ಮಾಡಿದ.

೧೯. ಈ ಸಾರಿ, ಅವನು ರಾಜಕುಮಾರ ಅಜಾತಶತ್ರುವಿನ ಬಳಿಗೆ ಹೋಗಿ "ನನಗೆ ಕೆಲವು ಜನರನ್ನು ಕೊಡು" ಎಂದು ಕೇಳಿದನು. ಆಗ ರಾಜಕುಮಾರ ಅಜಾತಶತ್ರುವು ತನ್ನ ಜನರಿಗೆ "ಈ ಸಭ್ಯ, ದೇವದತ್ತ ನಿಮಗೆ ಏನು ಹೇಳುತ್ತಾನೋ ಅದನ್ನು ಮಾಡಿ" ಎಂದು ಆಜ್ಞಾಪಿಸಿದನು.

೨೦. ಆಗ ದೇವದತ್ತನು ಅವರಲ್ಲಿ ಒಬ್ಬನಿಗೆ "ಗೆಳೆಯ, ಹೋಗು; ಶ್ರಮಣ ಗೌತಮನು ಇಂಥ ಒಂದು ಸ್ಥಳದಲ್ಲಿ ಉಳಿದುಕೊಂಡಿದ್ದಾನೆ. ಅವನನ್ನು ಕೊಲ್ಲು" ಎಂದು ಆಜ್ಞಾಪಿಸಿದನು. ಆಗ ಆ ಮನುಷ್ಯನು ಹಿಂದಿರುಗಿ ಬಂದು "ನಾನು ಪೂಜ್ಯನ ಪ್ರಾಣ ತೆಗೆಯಲಾರೆ" ಎಂದು ಹೇಳಿದನು.

೨೧. ಆಗ ದೇವದತ್ತನು ಬುದ್ಧನ ಪ್ರಾಣ ತೆಗೆಯಲು ಮೂರನೆಯ ಪ್ರಯತ್ನ ಮಾಡಿದ.

೨೨. ಆ ಸಮಯದಲ್ಲಿ ರಾಜಗೃಹದಲ್ಲಿ ನಲಗಿರಿ ಎಂಬ ಭಯಾನಕ ಹಾಗೂ ನರಹಂತಕ ಆನೆಯಿತ್ತು.

೨೩. ಆಗ ದೇವದತ್ತನು ರಾಜಗೃಹಕ್ಕೆ ಹೋಗಿ, ಆನೆಯ ಲಾಯವನ್ನು ಪ್ರವೇಶಿಸಿ, ಅಲ್ಲಿದ್ದ ಹಸ್ತಿಪಾಲಕರಿಗೆ ಹೀಗೆ ಹೇಳಿದ: "ನನ್ನ ಗೆಳೆಯರೇ, ನಾನು ರಾಜನ ಬಂಧು; ನಾನು ಕೆಳಪದವಿಯಲ್ಲಿದ್ದವರನ್ನು ಮೇಲಿನ ಪದವಿಗೆ ಏರಿಸಬಲ್ಲೆ; ಅವನ ಪಡಿ ಅಥವಾ ಸಂಬಳವನ್ನು ಹೆಚ್ಚಿಸಬಲ್ಲೆ.

೨೪. "ಆದುದರಿಂದ, ನನ್ನ ಗೆಳೆಯರೆ, ರಥಬೀದಿಯಲ್ಲಿ ಸಮಣ ಗೌತಮನು ಬರುವಾಗ, ಈ ನಲಗಿರಿ ಆನೆಯ ಕಟ್ಟುಗಳನ್ನು ಬಿಚ್ಚಿರಿ, ಅದು ರಥಬೀದಿಯಲ್ಲಿ ಹೋಗಲು ಬಿಡಿ."

೨೫. ದೇವದತ್ತನು ಬುದ್ಧನನ್ನು ಕೊಲ್ಲಲು ಬಿಲ್ಲುಗಾರನನ್ನೂ ನೇಮಿಸಿದ. ಅಲ್ಲದೆ, ಬುದ್ಧ ಬರುವ ಬೀದಿಯಲ್ಲಿ ನಲಗಿರಿ ಎಂಬ ಆ ಹುಚ್ಚು ಆನೆಯನ್ನು ಹಗ್ಗ ಬಿಚ್ಚಿ ಬಿಟ್ಟುಬಿಟ್ಟನು.

೨೬. ಆದರೆ ಇದರಲ್ಲೂ ಅವನು ಸಫಲನಾಗಲಿಲ್ಲ; ದೇವದತ್ತನ ಈ ಪ್ರಯತ್ನಗಳು ಎಲ್ಲರಿಗೂ ಗೊತ್ತಾದಾಗ, ಅವನು ನೀಡಲಾಗಿದ್ದ ದತ್ತಿಗಳನ್ನೂ ಕಳೆದುಕೊಂಡ. ಅಲ್ಲದೆ, ರಾಜ (ಅಜಾತಶತ್ರು) ಸಹ ಅವನಿಗೆ ಸಂದರ್ಶನ ಕೊಡುವುದನ್ನು ಸಹ ನಿಲ್ಲಿಸಿದ.

೨೭. ಆಗ ಅವನು ಜೀವಿಸಲು ಮನೆಯಿಂದ ಮನೆಗೆ ಹೋಗಿ ಭಿಕ್ಷೆ ಬೇಡತೊಡಗಿದ. ಅವನು ಮೊದಲು ಅಜಾತಶತ್ರುವಿನಿಂದ ಅನೇಕ ಸವಲತ್ತುಗಳನ್ನು ಪಡೆದುಕೊಂಡಿದ್ದ; ಆದರೆ ಅವಾವೂ ಅವನ ಹತ್ತಿರ ಬಹಳ ದಿನ ಉಳಿಯಲಿಲ್ಲ. ನಲಗಿರಿ ಪ್ರಕರಣವಾದ ಮೇಲಂತೂ ದೇವದತ್ತನು ತನ್ನ ಎಲ್ಲ ಪ್ರಭಾವವನ್ನು ಕಳೆದುಕೊಂಡ.

೨೮. ತನ್ನ ಕಾರ್ಯಗಳಿಂದಾಗಿ ಮಗಧದ ಜನರಿಗೆ ಅಪ್ರಿಯನಾದ ದೇವದತ್ತನು, ಕೋಸಲದ ಪ್ರಸೇನಜಿತನು ತನ್ನನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬಹುದು ಎಂದು ನಿರೀಕ್ಷಿಸಿ, ಮಗಧವನ್ನು ಬಿಟ್ಟು ಕೋಸಲಕ್ಕೆ ಹೋದ. ಆದರೆ ಪ್ರಸೇನಜಿತನು ಅವನನ್ನು ತಿರಸ್ಕರಿಸಿ ಹೊರಗಟ್ಟಿದನು.

## ೭. ಬ್ರಾಹ್ಮಣರು ಮತ್ತು ಬುದ್ಧ

(೧)

೧. ಒಂದು ಸಾರಿ ಪೂಜ್ಯನು ಭಿಕ್ಷುಗಳ ಒಂದು ದೊಡ್ಡ ಗುಂಪಿನೊಡನೆ ಕೋಸಲ ದೇಶದಲ್ಲಿ ಸಂಚರಿಸುತ್ತಿದ್ದಾಗ ಥೂನಾ ಎಂಬ ಬ್ರಾಹ್ಮಣರ ಹಳ್ಳಿಗೆ ಹೋದನು.

೨. "ಶ್ರಮಣ ಗೌತಮನು ನಮ್ಮ ಹಳ್ಳಿಯ ಹೊಲಗಳಿಗೆ ಬಂದಿದ್ದಾನೆಂದು ಹೇಳಲಾಗುತ್ತಿದೆ" ಎಂಬ ಸುದ್ದಿಯನ್ನು ಥೂನಾದ ಬ್ರಾಹ್ಮಣ ಗೃಹಸ್ಥರು ಕೇಳಿದರು.

೩. ಆದರೆ ತಪ್ಪು ಅಭಿಮತಗಳನ್ನು ಹೊಂದಿದ್ದ ಮತ್ತು ಸ್ವಭಾವದಲ್ಲಿ ಕಡುಲೋಭಿಗಳಾಗಿದ್ದ ಆ ಬ್ರಾಹ್ಮಣ ಗೃಹಸ್ಥರು ಪಾಷಂಡಿಗಳಾಗಿದ್ದರು.

೪. ಅವರು "ಶ್ರಮಣ ಗೌತಮನು ಈ ಹಳ್ಳಿಗೆ ಬಂದು ಎರಡು–ಮೂರು ದಿವಸ ಉಳಿದುಕೊಂಡರೆ, ಅವನು ಈ ಎಲ್ಲ ಜನರನ್ನೂ ಪರಿವರ್ತಿಸುತ್ತಾನೆ. ಆಗ ಬ್ರಾಹ್ಮಣ ಧರ್ಮಕ್ಕೆ ಆಶ್ರಯವಿಲ್ಲದಂತಾಗುತ್ತದೆ. ಆದುದರಿಂದ, ಅವನು ನಮ್ಮ ಹಳ್ಳಿಯನ್ನು ಪ್ರವೇಶಿಸದಂತೆ ಮಾಡಬೇಕು" ಎಂದು ಮತಾಡಿಕೊಂಡರು.

೫. ಆ ಹಳ್ಳಿಗೆ ಬರಬೇಕಾದರೆ ಒಂದು ನದಿಯನ್ನು ದಾಟಬೇಕು. ಆದುದರಿಂದ, ಆ ಬ್ರಾಹ್ಮಣರು ಗೌತಮನು ಹಳ್ಳಿಗೆ ಬರುವುದನ್ನು ತಡೆಯಲು ಅಲ್ಲಿದ್ದ ದೋಣಿಗಳನ್ನೆಲ್ಲಾ ದೂರ ತೆಗೆದುಕೊಂಡು ಹೋದರು ಹಾಗೂ ಸೇತುವೆಗಳನ್ನು ಕಾಲುದಾರಿಗಳನ್ನೂ ಉಪಯೋಗಕ್ಕೆ ಬರದಂತೆ ಮಾಡಿದರು.

೬. ಅಲ್ಲಿದ್ದ ಬಾವಿಗಳನ್ನು–ಒಂದನ್ನು ಹೊರತುಪಡಿಸಿ – ಕಳೆ, ಕಸ ಹಾಕಿ ತುಂಬಿದರು, ಮತ್ತು ನೀರಿದ್ದ ಸ್ಥಳಗಳು, ಛತ್ರಗಳು ಮತ್ತು ಗುಡಿಸಲುಗಳನ್ನು ಕಾಣದಂತೆ ಮುಚ್ಚಿದರು.

೭. ಪೂಜ್ಯನಿಗೆ ಈ ದುಷ್ಕೃತ್ಯಗಳ ಬಗೆಗೆ ಗೊತ್ತಾಯಿತು ಹಾಗೂ ಅವನಿಗೆ ಅವರ ಬಗೆಗೆ ಕರುಣೆ ಮೂಡಿ, ತನ್ನ ಭಿಕ್ಷುಗಳ ಗುಂಪಿನೊಂದಿಗೆ ನದಿಯನ್ನು ದಾಟಿ ಮುಂದೆ ಹೋದನು; ಹಾಗೂ ಸ್ವಲ್ಪ ಹೊತ್ತಿನ ನಂತರ ಬ್ರಾಹ್ಮಣರ ಹಳ್ಳಿ ಥೂನಾಕ್ಕೆ ಹೋದನು.

೮. ಅವನು ರಸ್ತೆಯನ್ನು ಬಿಟ್ಟು ಬದಿಯಲ್ಲಿನ ಮರದ ಬುಡದಲ್ಲಿ ಕುಳಿತನು. ಅದೇ ವೇಳೆಯಲ್ಲಿ ಅನೇಕ ಹೆಂಗಸರು ನೀರು ಹೊತ್ತುಕೊಂಡು ಪೂಜ್ಯನನ್ನು ಹಾದುಹೋದರು.

೯. 'ಸಮಣ ಗೌತಮ ಹಳ್ಳಿಗೆ ಬಂದರೆ ಅವನಿಗೆ ಸ್ವಾಗತ, ಇತ್ಯಾದಿಗಳನ್ನು ನೀಡಬಾರದು; ಯಾವುದೇ ಮನೆಗೆ ಬಂದರೂ ಅವನಿಗಾಗಲಿ ಅವನ ಶಿಷ್ಯರಿಗಾಗಲಿ ಆಹಾರ ಅಥವಾ ನೀರನ್ನು ಕೊಡಬಾರದು" ಎಂದು ತೀರ್ಮಾನವನ್ನು ಆ ಹಳ್ಳಿಗರು ಕೈಗೊಂಡಿದ್ದರು.

೧೦. ಆಗ ಬ್ರಾಹ್ಮಣನೊಬ್ಬನ ಹೆಣ್ಣಾಳು ನೀರಿನ ಗಡಿಗೆ ಹೊತ್ತು ತರುತ್ತಿದ್ದಾಗ, ಪೂಜ್ಯನನ್ನೂ ಭಿಕ್ಷುಗಳನ್ನೂ ನೋಡಿ, ಅವರಿಗೆ ಆಯಾಸವಾಗಿದೆ, ನೀರಡಿಕೆಯಾಗಿದೆ ಎಂಬುದನ್ನು ಮನಗಂಡಳು, ಹಾಗೂ ನಿಷ್ಠಾವಂತ ಹೃದಯಿಯಾಗಿದ್ದ ಆ ಹುಡುಗಿ ಅವರಿಗೆ ನೀರನ್ನು ಕೊಡಬೇಕೆಂದುಕೊಂಡಳು.

೧೧. 'ಗೌತಮನಿಗೆ ಏನನ್ನೂ ಕೊಡಬಾರದು. ಔಪಚಾರಿಕ ಗೌರವವನ್ನೂ ಅವನಿಗೆ ಕೊಡಬಾರದು ಎಂದು ಹಳ್ಳಿಯವರು ತೀರ್ಮಾನಿಸಿದ್ದಾರೆ; ಆದರೂ ಉತ್ತಮ ಪುಣ್ಯಾತ್ಮರೂ ಪುಣ್ಯದಾಯಕ ದಾನಗಳಿಗೆ ಸತ್ಪಾತ್ರರೂ ಆದ ಇವರಿಗೆ ಕೇವಲ ನೀರು ಕೊಡುವ ಮೂಲಕ ನಾನು ಮೋಕ್ಷಕ್ಕೆ ಅಡಿಪಾಯ ಹಾಕದಿದ್ದರೆ, ನಾನು ಪರಲೋಕದಲ್ಲಿ ದುಃಖದಿಂದ ಬಿಡುಗಡೆ ಪಡೆಯುತ್ತೇನೆಯೇ?' ಎಂದು ಆ ಹುಡುಗಿ ಯೋಚಿಸಿದಳು.

೧೨. 'ಆಯಿತು, ಸ್ವಾಮಿಗಳೆ! ಈ ಹಳ್ಳಿಯ ಪ್ರತಿಯೊಬ್ಬರೂ ನನ್ನನ್ನು ಹೊಡೆಯಲಿ, ಬಂಧಿಸಲಿ; ಆದರೂ ನಾನು ಈ ಪುಣ್ಯಜೀವಿಗಳಿಗೆ ನೀರು ಕೊಡುತ್ತೇನೆ' ಎಂದು ತೀರ್ಮಾನಿಸಿದಳು, ಅವಳು.

೧೩. ಹೀಗೆ ತೀರ್ಮಾನಿಸಿದ ಆ ಹುಡುಗಿ, ನೀರು ಹೊತ್ತಿದ್ದ ಬೇರೆ ಹೆಂಗಸರು ಅವಳನ್ನು ತಡೆಯಲು ಯತ್ನಿಸಿದರೂ, ತನ್ನ ಪ್ರಾಣದ ಹಂಗು ತೊರೆದು, ತನ್ನ ತಲೆಯ ಮೇಲಿದ್ದ ನೀರಿನ ಗಡಿಗೆಯನ್ನು ಒಂದು ಬದಿಗಿಟ್ಟಳು; ಆ ಮೇಲೆ ಪೂಜ್ಯನನ್ನು ಸಮೀಪಿಸಿ, ಅವನಿಗೆ ನೀರನ್ನು ಕೊಟ್ಟಳು. ಅವನು ಕೈಕಾಲು ತೊಳೆದುಕೊಂಡು ನೀರು ಕುಡಿದನು.

೧೪. ಅವಳ ಒಡೆಯ ಬ್ರಾಹ್ಮಣನಿಗೆ ಅವಳು ಪೂಜ್ಯನಿಗೆ ನೀರು ಕೊಟ್ಟ ವಿಷಯ ತಿಳಿದುಬಂದಿತು. 'ಅವಳು ಹಳ್ಳಿಯ ನಿಯಮವನ್ನು ಉಲ್ಲಂಘಿಸಿದ್ದಾಳೆ, ಈಗ ಜನರು ನನ್ನನ್ನು ದೂಷಿಸುತ್ತಾರೆ' ಎಂದುಕೊಂಡ ಆತನು, ಕೋಪದಿಂದ ಉರಿಯುತ್ತಾ, ಹಲ್ಲುಗಳನ್ನು ಕಡಿಯುತ್ತಾ, ಆ ಹುಡುಗಿಯನ್ನು ನೆಲದ ಮೇಲೆ ಕೆಡವಿ, ಕೈಗಳಿಂದ ಹೊಡೆದನಲ್ಲದೆ, ಕಾಲಿನಿಂದ ಒದ್ದನು. ಈ ಯಾತನೆಯಿಂದ ಆ ಹುಡುಗಿ ಸತ್ತಳು.

## (೨)

೧. ಆಗ ದೋಣನೆಂಬ ಬ್ರಾಹ್ಮಣ ಪೂಜ್ಯನನ್ನು ಕಾಣಲು ಬಂದು, ಅವನಿಗೆ ವಂದಿಸಿದನು. ರೂಢಿಯ ಉಭಯಕುಶಲೋಪರಿಯಾದ ನಂತರ ಅವನು ಬುದ್ಧನ ಒಂದು ಪಕ್ಕಕ್ಕೆ ಕುಳಿತನು. ಹಾಗೆ ಕುಳಿತ ಮೇಲೆ ಬ್ರಾಹ್ಮಣ ದ್ರೋಣನು ಪೂಜ್ಯನನ್ನು ಕುರಿತು ಹೀಗೆಂದನು:

೨. "ಪ್ರಭು, ಗೌತಮರೆ, ತಾವು ವಯಸ್ಸಾದ ಹಾಗೂ ಗೌರವಾನ್ವಿತ ಬ್ರಾಹ್ಮಣರಿಗೆ – ಅಂದರೆ, ವೃದ್ಧಾಪ್ಯದಲ್ಲಿರುವ, ಜೀವನದ ಹಾದಿಯನ್ನು ಬಹಳ ಕಾಲದವರೆಗೆ ತುಳಿದಿರುವ, ಬಹಳ ವಯಸ್ಸಾಗಿರುವ ಬ್ರಾಹ್ಮಣರಿಗೆ– ನಮಸ್ಕರಿಸುವುದಿಲ್ಲ, ಅವರು ಬಂದರೆ ಎದ್ದು ನಿಲ್ಲುವುದಿಲ್ಲ. ಅವರಿಗೆ ಆಸನ ನೀಡುವುದಿಲ್ಲ, ಎಂದು ಕೇಳಿದ್ದೇನೆ.

೩. "ಪ್ರಭು, ಗೌತಮರೆ, ಜನ ಹಾಗೆನ್ನುತ್ತಾರೆ. ಗೌತಮರು ಅಂಥದ್ದೇನನ್ನೂ ಮಾಡುವುದಿಲ್ಲ; ವಯಸ್ಸಾದ, ಗೌರವಾನ್ವಿತ ಬ್ರಾಹ್ಮಣರಿಗೆ ನಮಸ್ಕರಿಸುವುದಿಲ್ಲ, ಇತ್ಯಾದಿ ಎಂದು ಜನರು ಆಡಿಕೊಳ್ಳುತ್ತಾರೆ. ಪ್ರಭು,

ಗೌತಮರೆ ಇದು ಸರಿಯಲ್ಲ."

೪. "ದ್ರೋಣ, ನೀನೂ ಬ್ರಾಹ್ಮಣನೆಂದು ಹೇಳಿಕೊಳ್ಳುವುದಿಲ್ಲವೇನು?"

೫. "ಪ್ರಭು, ಗೌತಮರೆ, ಯಾರಾದರೂ ಬ್ರಾಹ್ಮಣರ ಬಗ್ಗೆ ಸಮಂಜಸವಾಗಿ ಮಾತನಾಡಬೇಕಾದರೆ, ಅವರು ಹೀಗೆನ್ನಬೇಕು: ಈ ಬ್ರಾಹ್ಮಣನು ಎರಡು ಕಡೆಯಿಂದಲೂ ಒಳ್ಳೆಯ ವಂಶದಲ್ಲಿ ಹುಟ್ಟಿದ್ದಾನೆ; ತಂದೆ ಕಡೆಯ ಹಾಗೂ ತಾಯಿಯ ಕಡೆಯ ಅವನ ಹಿಂದಿನ ಏಳು ತಲೆಮಾರುಗಳೂ ಶುದ್ಧವಾಗಿವೆ, ಅಬಾಧಿತವೂ ಅನಿಂದ್ಯವೂ ಆಗಿವೆ; ಅವನು ಶ್ರಮಜೀವಿ, ಎಲ್ಲ ಮಂತ್ರಗಳನ್ನೂ ಮನಸ್ಸಿನಲ್ಲಿಟ್ಟುಕೊಂಡಿದ್ದಾನೆ; ಎಲ್ಲ ಮೂರು ವೇದಗಳನ್ನೂ, ಅವುಗಳ ಶಬ್ದಾನುಕ್ರಮಣಿಕೆಯನ್ನೂ, ಕರ್ಮಗಳನ್ನೂ, ಧ್ವನಿಶಾಸ್ತ್ರವನ್ನೂ, ಪುರಾಣಕಥೆಗಳನ್ನೂ ಕರಗತ ಮಾಡಿಕೊಂಡಿದ್ದಾನೆ; ಗದ್ಯ ಮತ್ತು ವ್ಯಾಕರಣಗಳಲ್ಲಿಯೂ, ಮಹಾಪುರುಷರ ಲಕ್ಷಣಗಳನ್ನು ಗುರುತಿಸುವಲ್ಲಿಯೂ, ಜಗತ್ತಿನ ಆಗುಹೋಗುಗಳನ್ನು ಊಹಿಸುವಲ್ಲಿಯೂ ಅವನು ಪರಿಣಿತನಿದ್ದಾನೆ' ಅದೇ ರೀತಿ, ಪ್ರಭು ಗೌತಮರೆ, ನನ್ನ ವಿಷಯವಾಗಿಯೂ ಈ ರೀತಿಯ ಸೂಕ್ತ ಮಾತುಗಳನ್ನೇ ಆಡಬೇಕು. ಏಕೆಂದರೆ, ನಾನೂ ಸಹ, ಎರಡೂ ಕಡೆಯಿಂದ ಉತ್ತಮ ಕುಲದಲ್ಲಿ ಹುಟ್ಟಿದ್ದೇನೆ, ಇತ್ಯಾದಿ."

೬. "ದ್ರೋಣ, ಹಿಂದಿನ ಬ್ರಾಹ್ಮಣ ಋಷಿಗಳು, ಮಂತ್ರ ರಚಿಸಿದವರು, ಮಂತ್ರ–ಪಾಠಕರು, ಯಾರ ಮಂತ್ರಗಳು, ಶ್ಲೋಕಗಳು, ಋಕ್ಕುಗಳು ಮತ್ತು ಪಾಠಗಳು, ಮುಂತಾದವುಗಳು ಬ್ರಾಹ್ಮಣರಿಗೆ ಗೊತ್ತೋ ಅವರು – ಅಥವಾ, ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅಟ್ಠಕ, ವಾಮಕ, ವಾಮದೇವ, ವಶ್ಯಮಿತ್ರ, ಜಮದಗ್ನಿ, ಅಂಗೀರಸ, ಭಾರದ್ವಾಜ ಮುಂತಾದವರು – ಬ್ರಾಹ್ಮಣರಲ್ಲಿ ಬ್ರಹ್ಮನಂಥವರು, ದೇವತೆಗಳಂಥವರು, ಬದ್ಧರಾಗಿರುವವರು, ಬಂಧಮುಕ್ತರಾಗಿರುವವರು, ಮತ್ತು ಐದನೆಯದಾಗಿ, ಬಹಿಷ್ಕೃತ ಬ್ರಾಹ್ಮಣರು ಎಂಬ ಐದು ಬಗೆಯ ಬ್ರಾಹ್ಮಣರಿದ್ದಾರೆಂದು ಹೇಳಿದ್ದಾರೆ. ದೋಣ, ಇವರಲ್ಲಿ ನೀನು ಯಾವ ವರ್ಗದವನು?"

೭ "ಪ್ರಭು, ಗೌತಮರೆ, ಈ ಐದು ರೀತಿಯ ಬ್ರಾಹ್ಮಣರ ಬಗ್ಗೆ ನಮಗೆ ಗೊತ್ತಿಲ್ಲ; ಆದರೂ, ನಾವು ಬ್ರಾಹ್ಮಣರು ಎಂದಷ್ಟೇ ಗೊತ್ತು. ಪ್ರಭು, ಗೌತಮರು ತಮ್ಮ ಧರ್ಮವನ್ನು ಉಪದೇಶಿಸಿದರೆ, ಒಳ್ಳೆಯದು. ಇದರಿಂದ, ಈ ಐವರ ಬಗ್ಗೆ ಹೆಚ್ಚು ತಿಳಿದುಕೊಂಡೇನು."

೮. "ಹಾಗಾದರೆ, ಬ್ರಾಹ್ಮಣ, ನಾನು ಹೇಳುವುದನ್ನು ಗಮನವಿಟ್ಟು ಕೇಳು!"

೯. "ಆಗಲಿ ಸ್ವಾಮಿ!" ಎಂದು ಅವನು ಉತ್ತರಿಸಿದ. ಆಗ ಮಹಾತ್ಮನು ಹೇಳಿದ:

೧೦. "ಈಗ ಹೇಳು, ದ್ರೋಣ, ಒಬ್ಬ ಬ್ರಾಹ್ಮಣ ಹೇಗೆ ಬ್ರಹ್ಮನಂತಾಗುತ್ತಾನೆ?

೧೧. "ದ್ರೋಣ, ಈಗ ಎರಡೂ ಕಡೆಯಿಂದ ಉತ್ತಮ ಕುಲದಲ್ಲಿ ಹುಟ್ಟಿದ ಬ್ರಾಹ್ಮಣನ ವಿಷಯವನ್ನೇ ತೆಗೆದುಕೊಳ್ಳೋಣ. ತಂದೆತಾಯಿಗಳ ಹಿಂದಿನ ಏಳು ತಲೆಮಾರುಗಳಿಂದ ಅವನ ವಂಶ ಶುದ್ಧವಾಗಿದೆ; ಅಬಾಧಿತವೂ ನಿಷ್ಕಂಳಕವೂ ಆಗಿದೆ. ಅವನು ನಲವತ್ತೆಂಟು ವರ್ಷಗಳವರೆಗೆ ಬ್ರಹ್ಮಚರ್ಯೆ ಆಚರಿಸುತ್ತಾನೆ; ಅಧರ್ಮದ ಪ್ರಕಾರ ಅಲ್ಲ, ಧರ್ಮದ ಪ್ರಕಾರ ಅವನು ಗುರು ಉಪದೇಶಿಸಿದುದಕ್ಕೆ ಗುರುದಕ್ಷಿಣೆ ಕೊಟ್ಟಿದ್ದಾನೆ.

೧೨. "ಧರ್ಮವೆಂದರೇನು, ದ್ರೋಣ? ಅವನು ರೈತನಂತಲ್ಲ, ವ್ಯಾಪಾರಿಯಂತಲ್ಲ, ದನಗಾಹಿಯಂತಲ್ಲ, ಬಿಲ್ಲುಗಾರನಂತಲ್ಲ, ರಾಜನ ಆಳಿನಂತಲ್ಲ, ಅಥವಾ ಮತ್ತಾವುದೋ ಕುಶಲಕರ್ಮಿಯಂತಲ್ಲ; ಅವನು ಕೇವಲ ಭಿಕ್ಷಾಟನೆ ಮಾಡಬೇಕು. ಆದರೆ ಭಿಕ್ಷಾಪಾತ್ರೆಯನ್ನು ಅಲಕ್ಷಿಸಬಾರದು.

೧೩. "ಅವನು ಗುರು ಉಪದೇಶ ಮಾಡಿದುದಕ್ಕೆ ದಕ್ಷಿಣೆ ಕೊಡುತ್ತಾನೆ; ಗಡ್ಡವನ್ನು ಬೋಳಿಸಿಕೊಳ್ಳುತ್ತಾನೆ; ಹಳದಿ ಬಟ್ಟೆಯನ್ನು ತೊಡುತ್ತಾನೆ; ಗೃಹಜೀವನದಿಂದ ಗೃಹರಹಿತ ಜೀವನಕ್ಕೆ ಕಾಲಿಡುತ್ತಾನೆ.

೧೪. "ಹೀಗೆ ಹೊರಬಿದ್ದ ಅವನು ಮೊದಲು ಕಾಲುಭಾಗ ಜಗತ್ತನ್ನು, ಅನಂತರ ಅರ್ಧ, ಅನಂತರ ಮುಕ್ಕಾಲು, ಆಮೇಲೆ ಇಡೀ ಜಗತ್ತನ್ನು, ಅನಂತರ ಮೇಲೆ, ಅನಂತರ ಕೆಳಗೆ, ಅನಂತರ ಅಡ್ಡಡ್ಡವಾಗಿ – ಹೀಗೆ ಪ್ರತಿಯೊಂದನ್ನೂ ಪ್ರೀತಿಭಾವದಿಂದ ಕಾಣುತ್ತಾನೆ; ಪ್ರೀತಿಯ ಮೂಲಕ ಇಡೀ ಜಗತ್ತನ್ನು ಪ್ರವೇಶಿಸುತ್ತಾನೆ; ಅವನ ಪ್ರೀತಿ ಅಪಾರ, ವಿಶಾಲ, ಅಪರಿಮಿತ, ದ್ವೇಷ ಅಥವಾ ದುಷ್ಟತನದಿಂದ ಮುಕ್ತವಾದುದು.

೧೫. "ಅವನು ತನ್ನ ಮನಸ್ಸಿನಲ್ಲಿರುವ ಕರುಣೆ, ಸಹಾನುಭೂತಿ, ಸಮಚಿತ್ತಗಳ ಮೂಲಕ ಮೊದಲು ಕಾಲುಭಾಗ ಜಗತ್ತನ್ನು, ಅನಂತರ ಅರ್ಧ ಜಗತ್ತನ್ನು, ಅನಂತರ ಮುಕ್ಕಾಲು, ಆಮೇಲೆ ಪೂರ್ತಿ ಜಗತ್ತನ್ನು ಪ್ರವೇಶಿಸುತ್ತಾನೆ. ಅನಂತರ ಮೇಲೆ, ಕೆಳಗೆ, ಅಡ್ಡಡ್ಡವಾಗಿ ಪ್ರವೇಶಿಸುತ್ತಾನೆ. ಅವನು ತನ್ನ ಅಪಾರ, ವಿಶಾಲ, ಅಪರಿಮಿತ, ದ್ವೇಷ ಅಥವಾ ದುಷ್ಟತನದಿಂದ ಮುಕ್ತವಾದ ಕರುಣೆ, ಸಹಾನುಭೂತಿ ಮತ್ತು ಸಮಚಿತ್ತಗಳ ಮೂಲಕ ಎಲ್ಲ ಪ್ರದೇಶಗಳನ್ನೂ ಇಡೀ ಜಗತ್ತನ್ನೂ ಪ್ರವೇಶಿಸುತ್ತಾನೆ.

೧೬. "ಹೀಗೆ ರೂಪಿಸಿಕೊಂಡ ನಾಲ್ಕು ಬ್ರಹ್ಮ ಲಕ್ಷಣಗಳನ್ನು ಅವನು ಸ್ಥಿರೀಕರಿಸಿಕೊಂಡು, ಮರಣದಲ್ಲಿ ದೇಹ ಅವಸಾನವಾದಾಗ, ಅವನು ಮೇಲೇರಿ ಕಲ್ಯಾಣಕರ ಬ್ರಹ್ಮಲೋಕಕ್ಕೆ ಹೋಗುತ್ತಾನೆ. ದ್ರೋಣ, ಹೀಗೆ ಬ್ರಾಹ್ಮಣನು ಬ್ರಹ್ಮನಂತಾಗುತ್ತಾನೆ.

೧೭. "ದ್ರೋಣ, ಬ್ರಾಹ್ಮಣನು ದೇವನಂತೆ ಆಗುವುದು ಹೇಗೆ?

೧೮. "ದ್ರೋಣ, ಅಂಥದೇ ವಂಶದ, ಅಂತದೇ ನಡತೆಯ ಮತ್ತೊಬ್ಬ ಬ್ರಾಹ್ಮಣನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಅವನೂ ಸಹ ತನ್ನ ಜೀವನವನ್ನು ಬೇಸಾಯ, ಇತ್ಯಾದಿಯಿಂದ ಸಾಗಿಸದೆ, ಕೇವಲ ಭಿಕ್ಷಾಟನೆಯಿಂದ ಸಾಗಿಸುತ್ತಾನೆ; ಅವನೂ ಸಹ ತಾನು ಪಡೆದ ಶಿಕ್ಷಣಕ್ಕಾಗಿ ಗುರುವಿಗೆ ದಕ್ಷಿಣೆ ಕೊಡುತ್ತಾನೆ; ಅನಂತರ, ಅಧಮ್ಮದ ಪ್ರಕಾರ ಅಲ್ಲ, ಧಮ್ಮದ ಪ್ರಕಾರ, ಹೆಂಡತಿಯನ್ನು ಪಡೆಯುತ್ತಾನೆ.

೧೯. "ಹಾಗಾದರೆ, ಅವನ ಧಮ್ಮವೇನು? ಅವನು ತನ್ನ ವಧುವನ್ನು ಪಡೆಯುವುದು ಕೊಳ್ಳುವ ಮೂಲಕವಾಗಲಿ, ಮಾರುವ ಮೂಲಕವಾಗಲಿ ಅಲ್ಲ; ಅವನ ವಧುವು ತಲೆಯ ಮೇಲೆ ನೀರು ಬಿದ್ದ ಬ್ರಾಹ್ಮಣಿ ಮಾತ್ರ. ಅವನು ಹೊರಜಾತಿಯ ವನ ಅಥವಾ ಬೇಡರ ಅಥವಾ ಮೇದರ, ಕಮ್ಮಾರನ ಅಥವಾ ಮೂಲನಿವಾಸಿಯ ಮಗಳ ಹತ್ತಿರ ಹೋಗದೆ, ಬ್ರಾಹ್ಮಣಿಯ ಹತ್ತಿರ ಮಾತ್ರ ಹೋಗುತ್ತಾನೆ; ಅವನು ಬಸುರಿಯ ಹತ್ತಿರವಾಗಲಿ, ಹಾಲುಣಿಸುವವಳ ಹತ್ತಿರವಾಗಲಿ, ಕಾಮಾಸಕ್ತಳಲ್ಲದವಳ ಹತ್ತಿರವಾಗಲಿ ಹೋಗುವುದಿಲ್ಲ.

೨೦. "ಅವನು ಬಸುರಿಯ ಹತ್ತಿರ ಹೋಗುವುದಿಲ್ಲ, ಏಕೆ ದ್ರೋಣ? ಅವನು ಬಸುರಿಯ ಹತ್ತಿರ ಹೋದರೆ ಮುಂದೆ ಹುಟ್ಟುವ ಗಂಡು ಅಥವಾ ಹೆಣ್ಣು ಮಗುವು ಖಂಡಿತವಾಗಿ ವಿರೂಪಗೊಂಡಿರುತ್ತದೆ. ಆದುದರಿಂದ, ಅವನು ಅಂಥವಳ ಬಳಿ ಹೋಗುವುದಿಲ್ಲ. ಹಾಲುಣಿಸುವವಳ ಹತ್ತಿರ ಅವನೇಕೆ ಹೋಗುವುದಿಲ್ಲ? ಒಂದು ವೇಳೆ ಅಂಥವಳ ಬಳಿ ಹೋದರೆ, ಅವಳ ಹಾಲುಣ್ಣುವ ಹೆಣ್ಣು ಅಥವಾ ಗಂಡು ಮಗುವು ಕಲ್ಮಷ ಉಣ್ಣುವ ಮಗುವಾಗುತ್ತದೆ. ಆದುದರಿಂದ, ಅಂಥವಳ ಬಳಿ ಅವನು ಹೋಗುವುದಿಲ್ಲ.

೨೧. “ಕಾಮಾಸಕ್ತಳಲ್ಲದವಳ ಹತ್ತಿರ ಅವನೇಕೆ ಹೋಗುವುದಿಲ್ಲ? ದ್ರೋಣ, ಒಂದು ವೇಳೆ ಆ ಬ್ರಾಹ್ಮಣನು ಕಾಮಾಸಕ್ತಿಯಿಲ್ಲದವಳ ಹತ್ತಿರ ಹೋದರೆ, ಆ ಬ್ರಾಹ್ಮಣಿಯು ಅವನಿಗೆ ಎಂದೆಂದೂ ಕಾಮನೆಯ, ರಾಸಕ್ರೀಡೆಯ, ಸಂತೋಷದ ಮಾಧ್ಯಮವಾಗಲಾರಳು; ಆ ಬ್ರಾಹ್ಮಣಿಯು ಅವನಿಗೆ ಕೇವಲ ಸಂತಾನವನ್ನು ಕೊಡುವ ಸಾಧನವಾಗುತ್ತಾಳೆ.

೨೨. “ಅವನಿಗೆ ದಾಂಪತ್ಯ ಜೀವನದಲ್ಲಿ ಮಗುವಾದಾಗ, ತನ್ನ ತಲೆ ಮತ್ತು ಗಡ್ಡ ಬೋಳಿಸಿಕೊಂಡು ಗೃಹತ್ಯಾಗ ಮಾಡಿ.... ಹೊರಟು ಹೋಗುತ್ತಾನೆ.

೨೩. “ಹೀಗೆ, ವಿಷಯ ಕಾಮನೆಗಳಿಂದ ದೂರನಾಗಿ ಹೊರಟುಹೋದ ಅವನು ಮೊದಲು ಕಾಲುಭಾಗ ಜಗತ್ತಿನಿಂದ ನಾಲ್ಕನೆಯ ಹಂತವನ್ನು ಪ್ರವೇಶಿಸುತ್ತಾನೆ.

೨೪. “ಹೀಗೆ ನಾಲ್ಕು ಹಂತಗಳನ್ನು ದಾಟಿ, ಸಾವಿನಲ್ಲಿ ದೇಹ ಪತನವಾದಾಗ, ಕಲ್ಯಾಣಕರವಾದ ಸ್ವರ್ಗದಲ್ಲಿ ಕಾಣಿಸಿಕೊಳ್ಳುತ್ತಾನೆ.

೨೫. “ದ್ರೋಣ, ಹೀಗೆ ಬ್ರಾಹ್ಮಣನು ದೇವನಂತಾಗುತ್ತಾನೆ.

೨೬. “ದ್ರೋಣ, ಈಗ ಹೇಳು, ಬ್ರಾಹ್ಮಣ ಹೇಗೆ ಬದ್ಧ ಬ್ರಾಹ್ಮಣನಾಗುತ್ತಾನೆ?

೨೭. “ದ್ರೋಣ, ಈಗ ಅಂಥದೇ ಸದ್ವಂಶದಲ್ಲಿ ಹುಟ್ಟಿದ, ಅಂಥದೇ ನಡತೆಯುಳ್ಳ.... ಅದೇ ರೀತಿ ಮದುವೆಯಾದ ಬ್ರಾಹ್ಮಣನೊಬ್ಬನ ಉದಾಹರಣೆಯನ್ನು ತೆಗೆದುಕೊಳ್ಳೋಣ.

೨೮. “ದಾಂಪತ್ಯದ ಮೂಲಕ ಅವನಿಗೆ ಮಕ್ಕಳು ಹುಟ್ಟಿದಾಗ, ಮಕ್ಕಳ ಮೇಲಿನ ಮೋಹ ಅವನನ್ನು ಹುಚ್ಚನನ್ನಾಗಿ ಮಾಡುತ್ತದೆ, ಹಾಗೂ ಅವನು ತನ್ನ ವಂಶದ ಆಸ್ತಿಪಾಸ್ತಿಗಳಲ್ಲೇ ಆಸಕ್ತನಾಗುತ್ತಾನೆ; ಹಾಗೂ ಗೃಹಜೀವನ ಬಿಟ್ಟು ಗೃಹರಹಿತ ಜೀವನಕ್ಕೆ ಅವನು ಹೋಗುವುದಿಲ್ಲ.

೨೯. “ಬ್ರಾಹ್ಮಣರ ಈ ಹಳೆ ಕಟ್ಟಳೆಗಳಲ್ಲೇ ಅವನು ಉಳಿದುಕೊಳ್ಳುತ್ತಾನೆ; ಅಲ್ಲದೆ ಅವನು ಅವುಗಳನ್ನು ಉಲ್ಲಂಘಿಸುವುದೂ ಇಲ್ಲ. ‘ಅವನು ಸಂಪ್ರದಾಯದ ಕಟ್ಟಳೆಗಳಿಗೆ ಬದ್ಧನಾಗಿದ್ದಾನೆ. ಅವುಗಳನ್ನು ಉಲ್ಲಂಘಿಸುವುದಿಲ್ಲ’ ಎಂಬ ಶಾಸ್ತ್ರೋಕ್ತ ಮಾತೇ ಇದೆ. ಆದುದರಿಂದ ಅಂಥ ಬ್ರಾಹ್ಮಣನು ಬದ್ಧನೆನಿಸಿಕೊಳ್ಳುತ್ತಾನೆ.

೩೦. “ದ್ರೋಣ, ಹೀಗೆ ಬ್ರಾಹ್ಮಣ ಬದ್ಧನಾಗುತ್ತಾನೆ.

೩೧. “ದ್ರೋಣ, ಬ್ರಾಹ್ಮಣನು ಬಂಧನಗಳನ್ನು ಹೇಗೆ ಕಳಚಿಕೊಳ್ಳುತ್ತಾನೆ?

೩೨. “ಈಗ, ದ್ರೋಣ, ಅಂಥದೇ ಸದ್ವಂಶದಲ್ಲಿ ಹುಟ್ಟಿದ ಅಂಥದೇ ನಡತೆಯುಳ್ಳ ಮತ್ತೊಬ್ಬ ಬ್ರಾಹ್ಮಣನ ಉದಾಹರಣೆಗಳನ್ನು ತೆಗೆದುಕೊಳ್ಳೋಣ...ಅವನು ಗುರುದಕ್ಷಿಣೆ ಕೊಡುತ್ತಾನೆ; ಧಮ್ಮದ ಪ್ರಕಾರವೋ ಅಧಮ್ಮದ ಪ್ರಕಾರವೋ ಒಬ್ಬಳನ್ನು ಹೆಂಡತಿ ಮಾಡಿಕೊಳ್ಳುತ್ತಾನೆ; ಅಂದರೆ, ಒಬ್ಬ ಕೊಂಡವಳನ್ನೋ ಮಾರಲ್ಪಟ್ಟವಳನ್ನೊ ಅಥವಾ ತಲೆಯ ಮೇಲೆ ನೀರು ಹಾಕಿಸಿಕೊಂಡ ಬ್ರಾಹ್ಮಣಿಯನ್ನೊ ಮದುವೆಯಾಗುತ್ತಾನೆ.

೩೩. “ಅವನು ಬ್ರಾಹ್ಮಣಿಯ ಹತ್ತಿರವೊ ಒಬ್ಬ ಸಭ್ಯನ ಮಗಳ ಹತ್ತಿರವೊ, ಕೀಳ್ಜಾತಿಯವನ ಮಗಳ ಹತ್ತಿರವೊ ಅಥವಾ ಒಬ್ಬ ಪಾಳೇಗಾರನ ಮಗಳ ಹತ್ತಿರವೊ ಹೋಗುತ್ತಾನೆ; ಅಥವಾ ಹೊರಜಾತಿಯವನ ಅಥವಾ ಬೇಡನ ಅಥವಾ ಮೇದರ ಜಾತಿಯವನ ಅಥವಾ ಬಂಡಿ ಮಾಡುವವನ ಅಥವಾ ಮೂಲ ನಿವಾಸಿಯ ಮಗಳ ಹತ್ತಿರ ಹೋಗುತ್ತಾನೆ; ಅಥವಾ ಬಸಿರಾದವಳ ಅಥವಾ ಹಾಲುಣ್ಣಿಸುವವಳ ಅಥವಾ ಕಾಮಾಸಕ್ತಿಯುಳ್ಳವಳ ಅಥವಾ ಕಾಮಾಸಕ್ತಿಯಿಲ್ಲದವಳ ಹತ್ತಿರ ಹೋಗುತ್ತಾನೆ; ಅವನಿಗೆ

ಆ ಬ್ರಾಹ್ಮಣಿಯು ಒಬ್ಬ ಕಾಮದ ಅಥವಾ ವಿನೋದದ ಅಥವಾ ಸಂತೋಷ ಕೊಡುವ ಅಥವಾ ಸಂತಾನ ಕೊಡುವ ಸಾಧನವಾಗಬಹುದು.

೩೪. "ಅಲ್ಲದೆ, ಅವನು ಸನಾತನ ಬ್ರಾಹ್ಮಣ ಕಟ್ಟಳೆಗಳ ಪರಿಧಿಯಲ್ಲಿರುವುದಿಲ್ಲ; ಅವನು ಅವುಗಳನ್ನು ಉಲ್ಲಂಘಿಸುತ್ತಾನೆ; ಅಲ್ಲದೆ, 'ಅವನು ಕಟ್ಟಳೆಗಳಿಗೆ ಒಳಪಟ್ಟಿರುವುದಿಲ್ಲ, ಅವನು ಅವುಗಳನ್ನು ಉಲ್ಲಂಘಿಸುತ್ತಾನೆ' ಎಂದು ಹೇಳಲಾಗಿದೆ. ಆದುದರಿಂದ, ಅವನನ್ನು 'ಕಟ್ಟಳೆಗಳ ಉಲ್ಲಂಘನೆ ಮಾಡುವವನು' ಎಂದು ಕರೆಯಲಾಗುತ್ತದೆ.

೩೫. "ದ್ರೋಣ, ಹೀಗೆ ಅಂಥ ಬ್ರಾಹ್ಮಣನು ಕಟ್ಟಳೆಗಳ ಉಲ್ಲಂಘನೆ ಮಾಡುವವನಾಗುತ್ತಾನೆ.

೩೬. "ದ್ರೋಣ, ಬ್ರಾಹ್ಮಣನು ಬಹಿಷ್ಕೃತ ಬ್ರಾಹ್ಮಣ ಹೇಗಾಗುತ್ತಾನೆ?

೩೭. "ದ್ರೋಣ, ಈಗ, ಅಂಥದೇ ಒಳ್ಳೆಯ ವಂಶದಲ್ಲಿ ಹುಟ್ಟಿದ ಮತ್ತೊಬ್ಬ ಬ್ರಾಹ್ಮಣನ ಉದಾಹರಣೆಯನ್ನು ತೆಗೆದುಕೊಳ್ಳೋಣ; ಅವನೂ ನಲವತ್ತೆಂಟು ವರ್ಷ ಬ್ರಹ್ಮಚರ್ಯ ನಡೆಸುತ್ತಾ, ಮಂತ್ರಗಳಿಗೆ ನಿಷ್ಠನಾಗುತ್ತಾನೆ; ಅವನ ವಿದ್ಯಾಭ್ಯಾಸ ಮುಗಿದ ಮೇಲೆ ತಾನು ಪಡೆದ ವಿದ್ಯೆಗೆ ಪ್ರತಿಯಾಗಿ ಗುರುವಿಗೆ ದಕ್ಷಿಣೆ ಕೊಡುತ್ತಾನೆ. ಧಮ್ಮದ ಪ್ರಕಾರವೋ ಅಧಮ್ಮದ ಪ್ರಕಾರವೋ, ಅಂದರೆ, ರೈತನಾಗಿ, ವರ್ತಕನಾಗಿ, ದನ ಕಾಯುವವನಾಗಿ, ಬಿಲ್ಲುಗಾರನಾಗಿ, ರಾಜನ ಆಳಾಗಿ ಅಥವಾ ಮತ್ತಾವುದೋ ರೀತಿಯ ಕುಶಲಕರ್ಮಿಯಾಗಿ ಅಥವಾ ಭಿಕ್ಷಾಪಾತ್ರೆಯನ್ನು ತಾತ್ಸಾರ ಮಾಡದೆ, ಕೇವಲ ಭಿಕ್ಷಾಟನೆಯ ಮೂಲಕವೋ ಅವನು ತನ್ನ ಅನ್ನ ಗಳಿಸುತ್ತಾನೆ.

೩೮. "ಗುರುದಕ್ಷಿಣೆ ಕೊಟ್ಟನಂತರ ಅವನು ಧಮ್ಮದ ಪ್ರಕಾರವೋ ಅಧಮ್ಮದ ಪ್ರಕಾರವೋ ಮದುವೆ ಮಾಡಿಕೊಳ್ಳುತ್ತಾನೆ; ಅವನ ಸತಿ ಕೊಳ್ಳಲ್ಪಟ್ಟವಳಾಗಿರಬಹುದು, ಮಾರಲ್ಪಟ್ಟವಳಾಗಿರಬಹುದು; ಅಥವಾ ತಲೆಯ ಮೇಲೆ ನೀರು ಹಾಕಿಸಿಕೊಂಡವಳಾಗಿರಬಹುದು. ಅವನು ಬ್ರಾಹ್ಮಣಿಯ ಹತ್ತಿರವೊ ಮತ್ತಾರ ಹತ್ತಿರವೊ ಹೋಗಬಹುದು; ಅವಳು ಬಸುರಿ ಇರಬಹುದು, ಹಾಲುಣ್ಣಿಸುವವಳಿರಬಹುದು... ಇತ್ಯಾದಿ. ಅವಳು ಅವನಿಗೆ ಕಾಮದ ಅಥವಾ ಸಂತಾನೋತ್ಪತ್ತಿಯ ಸಾಧನವಾಗಿರಬಹುದು. ಅವನು ಈ ಎಲ್ಲ ರೀತಿಯ ಕರ್ಮಗಳನ್ನು ಮಾಡುತ್ತಾ ಜೀವನ ಸಾಗಿಸುತ್ತಾನೆ.

೩೯. "ಆಗ ಅಂಥವನ ಬಗ್ಗೆ ಬ್ರಾಹ್ಮಣರು ಹೀಗೆನ್ನುತ್ತಾರೆ. 'ಇಂಥ ಗೌರವಸ್ಥ ಬ್ರಾಹ್ಮಣ ಇಂಥ ಜೀವನ ನಡೆಸುತ್ತಿದ್ದಾನಲ್ಲ, ಹೇಗೆ?'

೪೦. ಅದಕ್ಕೆ ಅವನು ಹೀಗೆ ಉತ್ತರಿಸುತ್ತಾನೆ: 'ಬೆಂಕಿ ತನ್ನ ಮೇಲಿನ ನಿರ್ಮಲವಲ್ಲದ ವಸ್ತುಗಳನ್ನು ನಿರ್ಮಲ ವಸ್ತುಗಳನ್ನು ಸುಟ್ಟರೂ ಹೇಗೆ ತಾನು ಮಾತ್ರ ನಿರ್ಮಲವಾಗಿಯೇ ಇರುತ್ತದೆಯೋ ಹಾಗೆಯೇ, ಸತ್ಪ್ರಭುಗಳೇ ಬ್ರಾಹ್ಮಣನು ಈ ರೀತಿಯ ಜೀವನ ನಡೆಸಿದರೂ ಅವನು ಅಶುದ್ಧನಾಗುವುದಿಲ್ಲ.'

೪೧. "ಅಲ್ಲದೆ, 'ಅವನು ಈ ಎಲ್ಲ ರೀತಿಯ ಕೆಲಸ ಮಾಡುತ್ತಾ ಜೀವನ ನಡೆಸುತ್ತಾನೆ' ಎಂದಾಗಲೇ ಹೇಳಿಯಾಗಿದೆ. ಆದುದರಿಂದ ಅವನ ಬಹಿಷ್ಕೃತ ಬ್ರಾಹ್ಮಣ ಎಂದು ಕರೆಯಲಾಗುತ್ತದೆ.

೪೨. "ದ್ರೋಣ, ಹೀಗೆ ಬ್ರಾಹ್ಮಣನು ಬಹಿಷ್ಕೃತ ಬ್ರಾಹ್ಮಣನಾಗುತ್ತಾನೆ.

೪೩. "ದ್ರೋಣ, ನಿಜವಾಗಿಯೂ ಪುರಾತನ ಕಾಲದ ಬ್ರಾಹ್ಮಣ ಋಷಿಗಳು, ಮಂತ್ರ ರಚಿಸಿದವರು, ಮಂತ್ರ ಪಾಠಕರು.... ಬ್ರಾಹ್ಮಣರು ಐದು ರೀತಿಯವರೆಂದು ಘೋಷಿಸಿದ್ದಾರೆ; ಅವರೆಂದರೆ, ಬ್ರಹ್ಮನಂಥವರು, ದೇವನಂಥವರು, ಕಟ್ಟಳೆಗಳಿಗೆ ಬದ್ಧರಾದವರು, ಕಟ್ಟಳೆಗಳನ್ನು ಉಲ್ಲಂಘಿಸುವವರು, ಮತ್ತು ಐದನೆಯದಾಗಿ ಬಹಿಷ್ಕೃತ ಬ್ರಾಹ್ಮಣರು.

೪೪. "ದ್ರೋಣ, ಇವರಲ್ಲಿ ನೀನು ಯಾರು?"

೪೫. "ಪ್ರಭು ಗೌತಮರೆ, ಅಂಥವರೇನಾದರೂ ಇದ್ದರೆ, ನಮಗಂತೂ ಬಹಿಷ್ಕೃತ ಬ್ರಾಹ್ಮಣರ ಲಕ್ಷಣಗಳು ಅನ್ವಯಿಸುವುದಿಲ್ಲ.

೪೬. "ಆದರೆ, ಪ್ರಭು, ಗೌತಮ, ನೀವು ಹೇಳುತ್ತಿರುವುದು ಮಾತ್ರ ಅದ್ಭುತವಾದುದು; ಪ್ರಭು, ಗೌತಮರು ನನ್ನನ್ನು ತಮ್ಮ ಉಪಾಸಕ ಶಿಷ್ಯನನ್ನಾಗಿ ಸ್ವೀಕರಿಸಿ, ನನ್ನ ಜೀವನಪರ್ಯಂತ ತಮ್ಮ ಆಶ್ರಯದಲ್ಲಿಟ್ಟುಕೊಳ್ಳಿರಿ."

# ಭಾಗ : ೩

# ಬುದ್ಧನ ತತ್ತ್ವಗಳ ವಿರೋಧಿಗಳು

೧. ಸಂಘಕ್ಕೆ ಮುಕ್ತ ಅವಕಾಶ ನೀಡುವುದರ ವಿರೋಧಿಗಳು
೨. ನಿಯಮಗಳ ಟೀಕಾಕಾರರು
೩. ಅಹಿಂಸಾತತ್ತ್ವದ ಟೀಕಾಕಾರರು
೪. ಸದ್ಗುಣವನ್ನು ಬೋಧಿಸುತ್ತಾನೆ ಮತ್ತು ಖಿನ್ನತೆಯನ್ನು ಸೃಷ್ಟಿಸುತ್ತಾನೆ ಎಂಬ ಆರೋಪ
೫. ಆತ್ಮ ಮತ್ತು ಪುನರ್-ಜನ್ಮ ಸಿದ್ಧಾಂತದ ಟೀಕಾಕಾರರು
೬. ದೇಹಾತ್ಮ ವಿನಾಶವಾದಿ ಎಂಬ ಆಪಾದನೆ

## ೧. ಸಂಘಕ್ಕೆ ಮುಕ್ತ ಅವಕಾಶ ನೀಡುವುದರ ವಿರೋಧಿಗಳು

೧. ಎಲ್ಲಾ ಅನುಯಾಯಿಗಳಿಗೂ ಸಂಘದ ಬಾಗಿಲು ತೆರದಿರಬೇಕು.

೨. ಸಂಘವನ್ನು ಎಲ್ಲರೂ ಪ್ರವೇಶಿಸಬಹುದಾದ ತೆರೆದ ಗುಡಿಯನ್ನಾಗಿ ಮಾಡಿದ್ದಕ್ಕೆ ಬುದ್ಧನನ್ನು ಟೀಕಿಸುವ ಜನರಿದ್ದರು.

೩. ಅವರ ಪ್ರಕಾರ, ಈ ರೀತಿ ಮಾಡುವುದರಿಂದ ಸಂಘವನ್ನು ಸೇರಿದ ಜನಸಾಮಾನ್ಯರು ಅದನ್ನು ಬಿಟ್ಟು ಕೆಳಮಟ್ಟದ ಹಳೆಯ ಬದುಕಿಗೇ ಮತ್ತೆ ಮರಳಬಹುದು. ಹೀಗವರು ಮತ್ತೆ ಪಾಪಕ್ಕೆ ಬೀಳುವುದನ್ನು ಕಂಡು ಜನ "ಶ್ರಮಣ ಗೌತಮನ ಧರ್ಮ ನಿರರ್ಥಕವಾದುದು ಹಾಗಾಗಿಯೇ ಜನರು ಅದನ್ನು ತ್ಯಜಿಸಿದ್ದಾರೆ" ಎಂದು ಹೇಳುವಂತಾಗುತ್ತದೆ.

೪. ಈ ಟೀಕೆಗೆ ಯಾವುದೇ ಆಧಾರವೂ ಇಲ್ಲ. ಭಗವಾನರು ಈ ರೀತಿಯ ಯೋಜನೆಯನ್ನು ರೂಪಿಸಿದ್ದರ ಉದ್ದೇಶವನ್ನೇ ಆ ಜನ ಅರ್ಥಮಾಡಿಕೊಂಡಿಲ್ಲ.

೫. ಅದಕ್ಕೆ ತಥಾಗತನು – ಈ ಧರ್ಮವನ್ನು ಸ್ಥಾಪಿಸುವುದರ ಮೂಲಕ ಬಿಡುಗಡೆಗೆ ಸೂಕ್ತವಾದ ಅತ್ಯುತ್ತಮ ನೀರಿನಿಂದ – ಸದ್ಧರ್ಮ – ತುಂಬಿದ ಸ್ನಾನದ ಕೊಳವನ್ನು ನಿರ್ಮಿಸಿದ್ದೇನೆ ಎಂದನು.

೬. ಪಾಪದ ಕಲೆಯಿಂದ ಮಲಿನವಾಗಿರುವ ಯಾರು ಬೇಕಾದರೂ, ಅದರಲ್ಲಿ ಮಿಂದು ತಮ್ಮ ಪಾಪಗಳನ್ನು ತೊಳೆದುಕೊಳ್ಳಬಹುದು.

೭ ಯಾರಾದರೂ, ಸದ್ಧರ್ಮದ ಕೊಳಕ್ಕೆ ಹೋಗಿ ಸ್ನಾನ ಮಾಡದೆ, ಮತ್ತೆ ಮೊದಲಿನ ಹೀನ ಸ್ಥಿತಿಗೆ ಮರಳಿದರೆ, ಅದಕ್ಕೆ ಅವನು ಹೊಣೆಗಾರನೇ ಹೊರತು ಧರ್ಮವಲ್ಲ.

೮. "ಜನರನ್ನು ಅವರ ಪಾಪದಿಂದ ಬಿಡುಗಡೆಗೊಳಿಸಲು ಈ ಸ್ನಾನದ ಕೊಳವನ್ನು ಕಟ್ಟಿ, ಪಾಪಭರಿತರನ್ನು ಈ ಕೊಳಕ್ಕೆ ಬಿಡದೆ, 'ಮಲಿನರಾದವರು ಯಾರೂ ಕೊಳದಲ್ಲಿ ಇಳಿಯಬೇಡಿ. ಯಾರು ಕೊಳೆಯನ್ನೆಲ್ಲಾ ಕಳೆದುಕೊಂಡು ಶುದ್ಧವಾಗಿರುವರೋ ಅವರು ಮಾತ್ರ ಈ ಕೊಳದಲ್ಲಿ ಇಳಿಯಲಿ' ಎನ್ನಬಹುದೇ?" ಎಂದು ಕೇಳುತ್ತಾರೆ.

೯. "ಹಾಗೆ ಮಾಡಿದರೆ, ನನ್ನ ಧರ್ಮದಿಂದ ಲಾಭವಾದರೂ ಏನು?"

೧೦. ಭಗವಾನರ ಆಸೆ ಲಾಭವನ್ನು ಕೆಲವರಿಗೆ ಮಾತ್ರ ಸೀಮಿತಗೊಳಿಸುವುದಲ್ಲ. ಅದು ಎಲ್ಲರಿಗೂ ತೆರೆದಿರಬೇಕು. ಎಲ್ಲರೂ ಪ್ರಯತ್ನಿಸುವಂತಾಗಬೇಕು. ಇದನ್ನು ಟೀಕಾಕಾರರು ಮರೆಯುತ್ತಾರೆ.

## ೨. ನಿಯಮಗಳ ಟೀಕಾಕಾರರು

೧. ಪಂಚ ಉಪದೇಶಗಳೇ ಸಾಲದೇ? ವ್ರತಗಳ ಆವಶ್ಯಕತೆಯೇನು? ಈ ಪ್ರಶ್ನೆಯನ್ನು ಆಗಾಗ್ಗೆ ಕೇಳಲಾಗುತ್ತದೆ.

೨. ಔಷಧಿಯಿಲ್ಲದೆಯೇ ಕಾಯಿಲೆ ಗುಣವಾಗುವಂತಿದ್ದರೆ, ದೇಹವನ್ನು ಪಥ್ಯ, ವಿರೇಚಕ ಮುಂತಾದವುಗಳಿಂದ ದುರ್ಬಲಗೊಳಿಸುವುದರ ಲಾಭವೇನು?

೩. ಮನೆಯಲ್ಲಿಯೇ ಇರುವ ಸಾಮಾನ್ಯ ಮನುಷ್ಯನೊಬ್ಬ ಇಂದ್ರಿಯ ಸುಖಗಳನ್ನು ಅನುಭವಿಸುತ್ತಲೇ ಶಾಂತಿ ಮತ್ತು ಒಳಿತನ್ನು ಅಂದರೆ ನಿರ್ವಾಣವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಸಾಧ್ಯವಾಗುತ್ತದೆ ಎಂದಾದರೆ, ಭಿಕ್ಷುವೊಬ್ಬನು ದೀಕ್ಷೆಯನ್ನು ಪಡೆದು ಈ ವ್ರತಗಳನ್ನೇಕೆ ಪಾಲಿಸಬೇಕು.

೪. ಈ ವ್ರತಗಳಲ್ಲಿ ಸದ್ಗುಣಗಳು ಅಂತರ್ಗತವಾಗಿದೆ ಎಂಬ ಕಾರಣಕ್ಕಾಗಿಯೇ ಬುದ್ಧನು ಇವುಗಳನ್ನು ರೂಪಿಸಿದನು.

೫. ಈ ವ್ರತಗಳ ನಿಯಂತ್ರಣಕ್ಕೆ ಒಳಪಟ್ಟವನ ಬದುಕಿನಲ್ಲಿ ಒಳ್ಳೆಯತನ ಖಂಡಿತವಾಗಿಯೂ ಬೆಳೆಯುತ್ತದೆ. ಅದು ಮಾನವನು ಅಧೋಗತಿಗಿಳಿಯದಂತೆ ಅವನನ್ನು ತಡೆಯುತ್ತದೆ.

೬. ನಿಯಮಬದ್ಧರಾಗಿದ್ದುಕೊಂಡೂ, ಸ್ವಾವಲಂಬಿಗಳಾಗಿರುವವರು ವಿಮುಕ್ತರಾಗಿರುತ್ತಾರೆ.

೭. ವ್ರತಬದ್ಧರಾಗಿದ್ದರೆ ಅದು ಕಾಮ, ತಿರಸ್ಕಾರ, ಅಹಂಕಾರ ಮುಂತಾದ ದುಷ್ಟ ಆಲೋಚನೆಗಳಿಗೆ ಕಡಿವಾಣ ಹಾಕುತ್ತದೆ.

೮. ಈ ವ್ರತಗಳನ್ನು ಪಾಲಿಸುತ್ತಾ ಅದಕ್ಕೆ ಬದ್ಧರಾಗಿರುವವರು ದೇಹ ಮನಸ್ಸುಗಳೆರಡರಲ್ಲೂ ಪರಿಶುದ್ಧರಾಗಿರುತ್ತಾರೆ.

೯. ಆದರೆ ಕೇವಲ ಈ ಬೋಧನೆಗಳನ್ನು ಮಾತ್ರ ಅನುಸರಿಸುವುದರಿಂದ ಇದು ಸಾಧ್ಯವಾಗುವುದಿಲ್ಲ.

೧೦. ವ್ರತಕ್ಕೆ ಬದ್ಧರಾದಾಗ ಮಾನವ ನೈತಿಕವಾಗಿ ಅವನತಿಹೊಂದದಂತೆ ಅದು ಅವನಿಗೆ ರಕ್ಷಣೆ ನೀಡುತ್ತದೆ. ಆದರೆ ಕೇವಲ ಉಪದೇಶಗಳು, ನೈತಿಕ ಅಧಃಪತನದಿಂದ ಮಾನವನನ್ನು ರಕ್ಷಿಸುವುದಿಲ್ಲ.

೧೧. ವ್ರತಬದ್ಧರಾಗಿ ಬದುಕುವುದು ತುಂಬಾ ಕಠಿಣ. ಆದರೆ, ಉಪದೇಶವನ್ನು ಮಾತ್ರ ಅನುಸರಿಸುವ ಬದುಕು ಹಾಗಲ್ಲ. ಆದ್ದರಿಂದ ವ್ರತಬದ್ಧವಾದ ಜೀವನವನ್ನು ಸಾಗಿಸುವ ಕೆಲವು ವ್ಯಕ್ತಿಗಳಾದರೂ ಮನುಕುಲದ ಹಿತದ ದೃಷ್ಟಿಯಿಂದ ಅನಿವಾರ್ಯವಾಗುತ್ತಾರೆ. ಹಾಗಾಗಿಯೇ ಭಗವಾನ್ ಬುದ್ಧ ಎರಡನ್ನೂ ಬೋಧಿಸಿದರು.

## ೩. ಅಹಿಂಸಾ ತತ್ತ್ವದ ಟೀಕಾಕಾರರು

೧. ಕೆಲವರು ಅಹಿಂಸಾ ತತ್ತ್ವದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದರು. ಅಹಿಂಸೆಯೆಂದರೆ ಕೇಡನ್ನು ವಿರೋಧಿಸದೆ ಇರುವುದು ಅಥವಾ ಕೇಡಿಗೆ ಶರಣಾದಂತೆ ಎಂದು ಅವರು ವಾದಿಸಿದರು.

೨. ಇದು ಭಗವಾನ್ ಬುದ್ಧ ಬೋಧಿಸಿದ ಅಹಿಂಸಾ ತತ್ತ್ವದ ಸಂಪೂರ್ಣ ಅಪವ್ಯಾಖ್ಯಾನ.

೩. ಹಲವಾರು ಸಂದರ್ಭಗಳಲ್ಲಿ ಭಗವಾನ್ ಬುದ್ಧ ಈ ಬಗ್ಗೆ ಯಾವುದೇ ಅಪಾರ್ಥ ಹಾಗೂ ಸಂದಿಗ್ಧಕ್ಕೆ ಅವಕಾಶವಿಲ್ಲದಂತೆ ತನ್ನ ನಿಲುವನ್ನು ಸ್ಪಷ್ಟವಾಗಿ ವಿವರಿಸಿದ್ದಾನೆ.

೪. ಈ ಬಗ್ಗೆ ಉಲ್ಲೇಖಿಸಬೇಕಾದ ಮೊದಲ ಉಲ್ಲೇಖವೆಂದರೆ, ಸೈನಿಕನೊಬ್ಬನು ಸಂಘಕ್ಕೆ ಪ್ರವೇಶ ಕೋರಿಬಂದ ಸಂದರ್ಭದಲ್ಲಿ ಬುದ್ಧ ಹಾಕಿದ ನಿಯಮ.

೫. ಒಮ್ಮೆ ಮಗಧದ ಗಡಿ ಪ್ರದೇಶಗಳಲ್ಲಿ ಸ್ವಲ್ಪ ಅಶಾಂತಿ ತಲೆದೋರಿತು. ಆಗ ಮಗಧದ ದೊರೆ ಸೇನೀಯ ಬಿಂಬಸಾರನು "ಗಡಿ ಪ್ರಾಂತ್ಯಗಳಲ್ಲಿ ಅಪರಾಧಿಗಳನ್ನು ಹುಡುಕಿ, ಅವರಿಗೆ ಶಿಕ್ಷೆ ವಿಧಿಸಿ, ಶಾಂತಿ ಸ್ಥಾಪಿಸಬೇಕೆಂದು" ತನ್ನ ಸೈನ್ಯಕ್ಕೆ ಆಜ್ಞಾಪಿಸುತ್ತಾನೆ. ಸೇನಾಧಿಪತಿಯು ದೊರೆಯ ಆಜ್ಞೆಯನ್ನು ಪಾಲಿಸುತ್ತಾನೆ.

೬. ಸೇನಾಧಿಪತಿಯ ಆಜ್ಞೆ, ಸೈನಿಕರನ್ನು ಗೊಂದಲಕ್ಕೀಡುಮಾಡುತ್ತದೆ. ಯುದ್ಧ ಮಾಡುವವರು ಹಾಗೂ ಹೋರಾಟದಲ್ಲಿ ಸಂತೋಷವನ್ನು ಕಾಣುವವರು ಕೇಡಿಗೆ ಕಾರಣರಾಗುತ್ತಾರೆ ಹಾಗೂ ಹೆಚ್ಚಿನ ಹಾನಿಯನ್ನು ಉಂಟುಮಾಡುತ್ತಾರೆ ಎಂಬ ತಥಾಗತನ ಬೋಧನೆ ಅವರೆಲ್ಲರಿಗೂ ತಿಳಿದಿತ್ತು. ಆದರೆ ಈಗ ಅಪರಾಧಿಗಳನ್ನು ಹಿಡಿದು ಶಿಕ್ಷಿಸಬೇಕೆಂಬ ರಾಜಾಜ್ಞೆ ಇತ್ತು. ಈಗ ತಾವೇನು ಮಾಡಬೇಕೆಂದು ತಮ್ಮಲ್ಲೇ ಕೇಳಿಕೊಳ್ಳುತ್ತಾರೆ.

೭. ಆಗ ಆ ಅಧಿಕಾರಿಗಳು "ನಾವು ಬುದ್ಧನ ಸಂಘಕ್ಕೆ ಸೇರಿಕೊಂಡುಬಿಟ್ಟರೆ ಈ ಹೊಯ್ದಾಟದಿಂದ ತಪ್ಪಿಸಿಕೊಳ್ಳಬಹುದು" ಎಂದು ಯೋಚಿಸುತ್ತಾರೆ.

೮. ಹಾಗಾಗಿ ಆ ಅಧಿಕಾರಿಗಳು ಭಿಕ್ಷುಗಳ ಬಳಿಗೆ ಹೋಗಿ ದೀಕ್ಷೆ ಕೊಡುವಂತೆ ಕೇಳಿಕೊಂಡರು. ಭಿಕ್ಷುಗಳು ಪ್ರವ್ರಾಜ್ಯ ಮತ್ತು ಉಪಸಂಪದ ದೀಕ್ಷೆಗಳನ್ನು ಅವರಿಗೆ ನೀಡಿದರು. ಆ ಅಧಿಕಾರಿಗಳು ಸೈನ್ಯದಿಂದ ಹೊರಗೆ ಬಂದುಬಿಟ್ಟರು.

೯. ಸೈನ್ಯದಲ್ಲಿ ಆ ಅಧಿಕಾರಿಗಳು ಕಾಣಿಸದಿದ್ದಾಗ, ಅವರ ಬಗ್ಗೆ ಸೇನಾಧಿಪತಿಯು ಸೈನಿಕರನ್ನು ವಿಚಾರಿಸಿದ – "ಎಲ್ಲಿ? ಅಧಿಕಾರಿಗಳೊಬ್ಬರೂ, ಕಾಣುತ್ತಿಲ್ಲವಲ್ಲ?" "ದೊರೆ, ಅಧಿಕಾರಿಗಳು ಭಿಕ್ಕುಗಳಾಗಿ ದೀಕ್ಷೆ ಸ್ವೀಕರಿಸಿದ್ದಾರೆ." ಎಂದು ಸೈನಿಕರು ಉತ್ತರಿಸಿದರು.

೧೦. ಆಗ ಸೇನಾಪತಿಗೆ ಗಾಬರಿಯಾಯಿತು. ನಂತರ "ಭಿಕ್ಕುಗಳು, ಅರಮನೆಯ ಸೈನಿಕರಿಗೆ ಹೇಗೆ ದೀಕ್ಷೆ ನೀಡಿದರು?" ಎಂದು ತುಂಬಾ ಸಿಟ್ಟಾದನು.

೧೧. ಸೇನಾಧಿಪತಿಯು ನಡೆದುದನ್ನು ರಾಜನಿಗೆ ತಿಳಿಸಿದನು. ಮತ್ತು ರಾಜ ನ್ಯಾಯಾಧಿಕಾರಿಗಳನ್ನು ಕೇಳಿದನು: "ನನ್ನ ಆತ್ಮೀಯ ಅಧಿಕಾರಿಗಳೇ, ರಾಜನ ಸೇವೆಯಲ್ಲಿರುವವರಿಗೆ ದೀಕ್ಷೆ ನೀಡುವವರು ಯಾವ ಶಿಕ್ಷೆಗೆ ಯೋಗ್ಯರು? ನನಗೆ ತಿಳಿಸಿ."

೧೨. "ರಾಜ, ಅವರಿಗೆ ಶಿರಚ್ಛೇದನ ಮಾಡಬೇಕು. ಕಮ್ಮವಾಕವನ್ನು ಪಠಿಸುವವನ ನಾಲಿಗೆಯನ್ನು ಸೀಳಿ ಹಾಕಬೇಕು. ಸಂಘ ಸ್ಥಾಪಿಸಿದವನ ಎದೆಯ ಅರ್ಧದಷ್ಟು ಎಲುಬುಗಳನ್ನು ಮುರಿದು ಹಾಕಬೇಕು."

೧೩. ನಂತರ ದೊರೆ ಬುದ್ಧನಿರುವ ಸ್ಥಳಕ್ಕೆ ಹೋಗಿ, ಅವನಿಗೆ ನಮಸ್ಕರಿಸಿ ನಂತರ ನಡೆದ ಸಂಗತಿಯನ್ನು ತಿಳಿಸಿದನು.

೧೪. "ಧಮ್ಮವನ್ನು ವಿರೋಧಿಸುವ ಕೆಲವು ದೊರೆಗಳಿರುವ ಸಂಗತಿ ಬುದ್ಧನಿಗೆ ತಿಳಿದಿತ್ತು. ಈ ವಿರೋಧಿ ದೊರೆಗಳು ಸಣ್ಣಪುಟ್ಟ ಕಾರಣಕ್ಕೂ ಭಿಕ್ಕುಗಳಿಗೆ ತೊಂದರೆ ಕೊಡಲು ತುದಿಗಾಲಿನಲ್ಲಿ ನಿಂತಿದ್ದರು. ಹಾಗಿದ್ದಾಗ ಸೈನಿಕರನ್ನು ಸೈನ್ಯ ಬಿಟ್ಟು ಸಂಘವನ್ನು ಸೇರಲು ಭಿಕ್ಷುಗಳು ಪ್ರೇರೇಪಿಸುತ್ತಿದ್ದರು ಎಂದಾಗಿಬಿಟ್ಟಲ್ಲಿ ಅವರು ಬಿಕ್ಷುಗಳನ್ನು ಯಾವ ಮಟ್ಟಕ್ಕೆ ಹಿಂಸಿಸುತ್ತಿದ್ದರು ಎಂಬುದನ್ನು ಊಹಿಸುವುದೂ ಕಷ್ಟ. ಈ ಅನಾಹುತವನ್ನು ತಪ್ಪಿಸಲು ಅವರು ಬುದ್ಧನನ್ನು ಮೊರೆಹೊಕ್ಕರು."

೧೫. ಬುದ್ಧ ರಾಜನಿಗೆ ಉತ್ತರಿಸಿದ: "ಅಹಿಂಸೆಯ ಸೋಗಿನಲ್ಲಿ ಅಥವಾ ಅಹಿಂಸೆಯ ಹೆಸರಿನಲ್ಲಿ ಸೈನಿಕರು, ರಾಜನಿಗೆ ಅಥವಾ ತಮ್ಮ ದೇಶಕ್ಕೆ ಸಲ್ಲಿಸಬೇಕಾದ ಕರ್ತವ್ಯದಿಂದ ತಪ್ಪಿಸಿಕೊಳ್ಳುವಂತೆ ಮಾಡುವುದು ಎಂದೂ ನನ್ನ ಉದ್ದೇಶವಲ್ಲ."

೧೬. ತನ್ನ ಮಾತಿಗೆ ಅನುಗುಣವಾಗಿ ಬುದ್ಧ, ರಾಜ ಸೇವೆಯಲ್ಲಿರುವ ಜನ ಸಂಘಕ್ಕೆ ಸೇರಲು ಸಾಧ್ಯವಾಗದಂತೆ ನಿಯಮವೊಂದನ್ನು ಮಾಡಿದ. ಅದನ್ನು ಭಿಕ್ಕುಗಳಿಗೂ ಬೋಧಿಸಿದ: "ರಾಜ ಸೇವೆಯಲ್ಲಿರುವವರು ಯಾರೂ ಪ್ರವ್ರಾಜ್ಯದೀಕ್ಷೆಯನ್ನು ಪಡೆಯುವುದು ಬೇಡ. ಅಂತಹವನಿಗೆ ದೀಕ್ಷೆಯನ್ನು ನೀಡಿದ್ದ

ಪಕ್ಷದಲ್ಲಿ ಆತ ದುಷ್ಕೃತ್ಯ ಅಪರಾಧವನ್ನು ಮಾಡಿದಂತೆ" ಎಂದು ತಿಳಿಸಿದನು.

೧೭. ಇನ್ನೊಂದು ಸಂದರ್ಭದಲ್ಲಿ ಮಹಾವೀರನ ಅನುಯಾಯಿಯಾದ ಸೇನೆಯ ಮುಖ್ಯಸ್ಥನಾದ ಸಿನ್ಹ ಬುದ್ಧನ ತತ್ತ್ವಕ್ಕೆ ಸಂಬಂಧಿಸಿದಂತೆ ಬುದ್ಧನನ್ನು ಪ್ರಶ್ನಿಸುತ್ತಾನೆ.

೧೮. ಸಿನ್ಹ ಕೇಳುತ್ತಾನೆ: "ತಥಾಗತನ ಬೋಧನೆಗೆ ಸಂಬಂಧಿಸಿದಂತೆ ಇನ್ನೂ ಒಂದು ಅನುಮಾನ ನನ್ನನ್ನು ಕಾಡುತ್ತಲೇ ಇದೆ. ತಥಾಗತನು ನನ್ನ ಅನುಮಾನವನ್ನು ಬಗೆಹರಿಸಿದರೆ, ಬುದ್ಧ ಬೋಧಿಸಿದ ರೀತಿಯಲ್ಲೇ ಧಮ್ಮವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ."

೧೯. ತಥಾಗತ ಒಪ್ಪಿಕೊಂಡಾಗ, ಸಿನ್ಹ ಕೇಳುತ್ತಾನೆ: "ನಾನು ಒಬ್ಬ ಸೈನಿಕ. ಓ ತಥಾಗತನೇ, ಕಾನೂನನ್ನು ಜಾರಿಗೊಳಿಸಲು ಹಾಗೂ ತನ್ನ ಪರವಾಗಿ ಕಾದಾಡಲು ರಾಜ ನನ್ನನ್ನು ನೇಮಿಸಿಕೊಂಡಿದ್ದಾನೆ. ಅಪಾರ ಕರುಣೆಯನ್ನು ಬೋಧಿಸುವ, ಎಲ್ಲಾ ದುಃಖಿಗಳಿಗೂ ದಯೆ ತೋರಬೇಕೆನ್ನುವ ನೀವು ಅಪರಾಧಿಗಳನ್ನು ಶಿಕ್ಷಿಸಲು ಅವಕಾಶ ಕೊಡುತ್ತೀರಾ? ಮತ್ತೆ, ನಮ್ಮ ಮನೆ, ನಮ್ಮ ಹೆಂಡತಿ, ಮಕ್ಕಳು ಹಾಗೂ ಆಸ್ತಿಪಾಸ್ತಿಯ ರಕ್ಷಣೆಗಾಗಿ ಯುದ್ಧ ಮಾಡುವುದನ್ನು ತಪ್ಪು ಎನ್ನುತ್ತೀರಾ? ಸಂಪೂರ್ಣವಾಗಿ ಶರಣಾಗತರಾಗಿ, ದುಷ್ಟರು ನೀಡುವ ಹಿಂಸೆಯನ್ನೆಲ್ಲಾ ಅನುಭವಿಸುತ್ತಾ, ನಮಗೆ ಸೇರಿದ್ದನ್ನೆಲ್ಲಾ ಅವರು ಬಲವಂತವಾಗಿ ತೆಗೆದುಕೊಂಡು ಹೋಗುತ್ತಿದ್ದರೂ ಅದನ್ನು ವಿರೋಧಿಸದೆ ಸಹಿಸಿಕೊಳ್ಳಬೇಕಾ? ನ್ಯಾಯವಾದ ಕಾರಣಕ್ಕೆ ನಡೆದ ಯುದ್ಧಗಳೂ ಸೇರಿದಂತೆ ಎಲ್ಲಾ ಹೋರಾಟಗಳನ್ನೂ ನಿಷೇಧಿಸಬೇಕು ಎನ್ನುವುದು ತಥಾಗತ ಅಭಿಪ್ರಾಯವೇ?"

೨೦. ಬುದ್ಧ ಉತ್ತರಿಸಿದ : "ತಥಾಗತ ಹೇಳುತ್ತಾನೆ: 'ಯಾರು ಶಿಕ್ಷೆಗೆ ಅರ್ಹರೋ ಅವರಿಗೆ ಶಿಕ್ಷೆಯಾಗಬೇಕು. ಹಾಗೂ ಯಾರಿಗೆ ಸಹಾಯದ ಅವಶ್ಯಕತೆಯಿದೆಯೊ ಅವರಿಗೆ ಸಹಾಯ ಮಾಡಲೇಬೇಕು. ಆದರೂ ತಥಾಗತ ಹೇಳುತ್ತಾನೆ, ಯಾವುದೇ ಜೀವಿಗಳನ್ನೂ ಹಿಂಸಿಸಬಾರದು. ಪ್ರೀತಿ ಹಾಗೂ ದಯೆ ತೋರಬೇಕು. ಈ ಕಟ್ಟಳೆಗಳು ಪರಸ್ಪರ ವಿರೋಧಾತ್ಮವಾದುದಲ್ಲ. ಯಾಕೆಂದರೆ ಪ್ರತಿಯೊಬ್ಬ ಅಪರಾಧಿಯೂ ತಾನು ಮಾಡಿದ ತಪ್ಪಿಗಾಗಿ ನೋವನ್ನು ಅನುಭವಿಸುತ್ತಾನೆ. ಆದರೆ, ಅದು ನ್ಯಾಯಾಧೀಶರು ನೀಡಿದ ಶಿಕ್ಷೆಯಿಂದಲ್ಲ. ತಾನು ಮಾಡಿದ ಅಪರಾಧದ ಫಲವಾಗಿ, ಅವನು ಮಾಡಿರುವ ತಪ್ಪುಗಳ ಫಲವಾಗಿಯೇ ಅವನು ನ್ಯಾಯಾಧೀಶ ನೀಡುವ ದಂಡನೆಯನ್ನು ಅನುಭವಿಸುತ್ತಾನೆ. ಶಿಕ್ಷೆ ನೀಡುವಾಗ ನ್ಯಾಯಾಧೀಶ ತನ್ನೆದೆಯಲ್ಲಿ ದ್ವೇಷವಿಟ್ಟುಕೊಂಡಿರುವುದು ಬೇಡ. ಆದರೆ, ಕೊಲೆಗಾರನೂ ಕೂಡ ತಾನು ಮರಣದಂಡನೆಯನ್ನು ಅನುಭವಿಸಬೇಕಾಗಿರುವುದು ಅದು ತನ್ನ ತಪ್ಪಿನ ಫಲವಾಗಿಯೇ ಎನ್ನುವುದನ್ನು ಅರಿತುಕೊಳ್ಳಲಿ. ಶಿಕ್ಷೆ ಅವನ ಆತ್ಮವನ್ನು ಪರಿಶುದ್ಧಗೊಳಿಸುತ್ತದೆ ಎಂದು ಅವನಿಗೆ ಅರಿವಾದ ಕ್ಷಣದಿಂದ ಅವನು ತನ್ನ ವಿಧಿಗಾಗಿ ಪರಿತಪಿಸುವುದನ್ನು ಬಿಟ್ಟು ಅದನ್ನು ಆನಂದಿಸತೊಡಗುತ್ತಾನೆ."

೨೧. ಈ ನಿದರ್ಶನಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ತಥಾಗತ ಬೋಧಿಸಿದ ಅಹಿಂಸಾ ತತ್ತ್ವ ಮೂಲಭೂತವಾದದ್ದು ಎಂಬುದು ತಿಳಿಯುತ್ತದೆ. ಆದರೆ ಅದು ನಿರುಪಾಧಿಕವಾದದ್ದೇನಲ್ಲ.

೨೨. ಅವನು ಹೇಳುವುದು, ಒಳಿತನ್ನು ಪುನರ್‌ಸ್ಥಾಪಿಸುವುದರ ಮೂಲಕ ಕೆಡುಕನ್ನು ಗುಣಪಡಿಸಬೇಕು ಎಂದು. ಅವನು ಎಂದೂ ಕೆಡುಕು ಒಳಿತಿನ ಮೇಲೆ ಸವಾರಿ ಮಾಡಬೇಕು ಎಂದು ಹೇಳಿಲ್ಲ.

೨೩. ಆತ ಅಹಿಂಸೆಯನ್ನು ಪ್ರತಿಪಾದಿಸುತ್ತಾನೆ. ಹಿಂಸೆಯನ್ನು ವಿರೋಧಿಸುತ್ತಾನೆ. ಆದರೆ ಕೆಡುಕಿನಿಂದಾಗಿ ಒಳ್ಳೆಯದು ಪೂರ್ಣವಾಗಿ ಹಾಳಾಗದಂತೆ ಕಾಪಾಡಲು ಹಿಂಸೆ ಅಂತಿಮ ದಾರಿ ಎಂಬುದನ್ನು

ಅವನು ಅಲ್ಲಗಳೆಯುವುದಿಲ್ಲ.

೨೪. ಆದ್ದರಿಂದ ಬುದ್ಧ ಅಪಾಯಕಾರಿಯಾದ ತತ್ತ್ವವನ್ನು ಬೋಧಿಸಿದ ಎಂದರ್ಥವಲ್ಲ. ವಿಮರ್ಶಕರು ಅದರ ಮಹತ್ತ್ವವನ್ನು ಹಾಗೂ ವ್ಯಾಪ್ತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಅಷ್ಟೆ.

## ೪. ಸದ್ಗುಣವನ್ನು ಬೋಧಿಸುತ್ತಾನೆ ಮತ್ತು ಖಿನ್ನತೆಯನ್ನು ಸೃಷ್ಟಿಸುತ್ತಾನೆ ಎಂಬ ಆರೋಪ

### (೧)
### ಖಿನ್ನತೆಗೆ ದುಃಖ ಕಾರಣ

೧. ದುಃಖ ಎಂಬ ಪದಕ್ಕೆ ಕಪಿಲ ನೀಡಿದ ಮೂಲ ಅರ್ಥ ಅತೃಪ್ತಿ ಮತ್ತು ಕೋಲಾಹಲ ಎಂದಾಗಿತ್ತು.

೨. ಮೊದಲಲ್ಲಿ ಅದಕ್ಕೆ ಪಾರಮಾರ್ಥಿಕ ಅರ್ಥವಿತ್ತು.

೩. ನಂತರದಲ್ಲಿ ಅದಕ್ಕೆ ನೋವು ಹಾಗೂ ದುಃಖ ಎಂಬ ಅರ್ಥ ಬಂದಿದೆ.

೪. ಎರಡು ಅರ್ಥಗಳೂ ತೀರಾ ಬೇರೆಯಲ್ಲ. ಅವೆರಡಕ್ಕೂ ತುಂಬಾ ಸಾಮ್ಯವಿದೆ.

೫. ಅತೃಪ್ತಿಯು, ದುಃಖ ಹಾಗೂ ನೋವಿಗೆ ಕಾರಣವಾಗುತ್ತದೆ.

೬. ಅನತಿ ಕಾಲದಲ್ಲಿಯೇ ಅದು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದ ಉಂಟಾಗುವ ದುಃಖ ಹಾಗೂ ನೋವು ಎಂಬ ಅರ್ಥವನ್ನು ಪಡೆದುಕೊಂಡಿತು.

೭ ಬುದ್ಧ ಯಾವ ಅರ್ಥದಲ್ಲಿ ದುಃಖ ಹಾಗೂ ನೋವು ಎಂಬ ಪದಗಳನ್ನು ಬಳಸುತ್ತಾನೆ?

೮. ದಾಖಲಾಗಿರುವ ಒಂದು ಉಪದೇಶದಿಂದ, ಬುದ್ಧನಿಗೆ ದುಃಖಕ್ಕೆ ಬಡತನ ಒಂದು ಕಾರಣ ಎಂಬುದು ತಿಳಿದಿತ್ತು ಎಂಬುದು ಸ್ಪಷ್ಟವಾಗುತ್ತದೆ.

೯. ಆ ಉಪದೇಶದಲ್ಲಿ ಬುದ್ಧ ಹೇಳುತ್ತಾನೆ: "ಭಿಕ್ಕುಗಳೇ, ಲೌಕಿಕನೊಬ್ಬನಿಗೆ ದಾರಿದ್ರ್ಯವು ತೀರ ಯಾತನಾಮಯವಾದ ವಿಚಾರವೇ ಆಗಿದೆ."

೧೦. "ಹೌದು, ಪ್ರಭು."

೧೧. "ಮನುಷ್ಯ ಬಡವನಾಗಿದ್ದಾಗ, ತುರ್ತಿನಲ್ಲಿದ್ದಾಗ, ಸಂಕಟದಲ್ಲಿದ್ದಾಗ, ಸಾಲ ಮಾಡುತ್ತಾನೆ. ಮತ್ತು ಅದು ಕೂಡ ದುಃಖಕರವಲ್ಲವೆ?"

೧೨. "ಖಂಡಿತವಾಗಿ, ಪ್ರಭು."

೧೩. "ಅವನು ಒಮ್ಮೆ ಸಾಲಗಾರನಾದ ಮೇಲೆ, ಅವನು ಮತ್ತೆ ಸಾಲ ಮಾಡುತ್ತಾನೆ. ಅದು ಕೂಡ ದುಃಖಕರವಲ್ಲವೆ?"

೧೪. "ಖಂಡಿತವಾಗಿ, ಪ್ರಭು."

೧೫. "ಮರುಪಾವತಿ ಮಾಡಬೇಕಾಗಿ ಬಂದಾಗ ಅವನು ಮಾಡುವುದಿಲ್ಲ. ಅವರು ಪೀಡಿಸುತ್ತಾರೆ; ಅದೂ ಕೂಡ ದುಃಖಕರವಲ್ಲವೆ?"

೧೬. "ಖಂಡಿತವಾಗಿ, ಪ್ರಭು."

೧೭. 'ಅವರು ಪೀಡಿಸಿದಾಗಲೂ ಅವನು ಮರುಪಾವತಿ ಮಾಡುವುದಿಲ್ಲ. ಆಗ ಅವರು ಮೇಲೆ ಬೀಳುತ್ತಾರೆ. ಅದು ಕೂಡ ದುಃಖಕರವಲ್ಲವೆ?"

೧೮. "ಖಂಡಿತವಾಗಿ, ಪ್ರಭು."

೧೯. "ಸುತ್ತುವರಿದಾಗ ಅವನು ಪಾವತಿ ಮಾಡುವುದಿಲ್ಲ. ಅವರು ಅವನನ್ನು ಬಂಧಿಸುತ್ತಾರೆ; ಅದು ಕೂಡ ದುಃಖಕರವಲ್ಲವೆ?"

೨೦. "ಹಾಗಾಗಿ ಬಿಕ್ಷುಗಳೆ, ದಾರಿದ್ರ್ಯ, ಸಾಲ, ಕಡ ತೆಗೆದುಕೊಳ್ಳುವುದು, ಪೀಡಿಸಿಕೊಳ್ಳುವುದು, ಆಕ್ರಮಣ ಹಾಗೂ ಬಂಧನಕ್ಕೆ ಒಳಗಾಗುವುದು ಇವೆಲ್ಲಾ ಐಹಿಕ ಅವಶ್ಯಕತೆಯಿಂದ ಬರುವ ಸಂಕಟಗಳು."

೨೧. "ಹಾಗಾಗಿ ಭಿಕ್ಷುಗಳೆ, ದಾರಿದ್ರ್ಯ, ಸಾಲ, ಕಡ ತೆಗೆದುಕೊಳ್ಳುವುದು, ಪೀಡಿಸಿಕೊಳ್ಳುವುದು, ಆಕ್ರಮಣ ಹಾಗೂ ಬಂಧನಕ್ಕೆ ಒಳಗಾಗುವುದು ಇವೆಲ್ಲಾ ಐಹಿಕ ಆವಶ್ಯಕತೆಯಿಂದ ಬರುವ ಸಂಕಟಗಳು."

೨೨. "ಜಗತ್ತಿನಲ್ಲೇ ತೀರಾ ದುಃಖಕರವಾದದ್ದು ದಾರಿದ್ರ್ಯ ಹಾಗೂ ಸಾಲ."

೨೩. ಹಾಗಾಗಿ ಬುದ್ಧನ ದುಃಖದ ಪರಿಕಲ್ಪನೆ ಭೌತಿಕವಾದದ್ದು.

## (೨)
## ಖಿನ್ನತೆಗೆ ಅನಿತ್ಯವೇ ಕಾರಣ

೧. ಈ ಟೀಕೆ ಹುಟ್ಟಿಕೊಳ್ಳುವುದಕ್ಕೆ ಇನ್ನೊಂದು ಕಾರಣ ಪ್ರತಿಯೊಂದು ಸಂಯುಕ್ತ ವಸ್ತುವೂ ಅನಿತ್ಯ ಎಂಬ ಸಿದ್ಧಾಂತ.

೨. ಯಾರೂ ಈ ಸಿದ್ಧಾಂತದ ಸತ್ಯತೆಯನ್ನು ಪ್ರಶ್ನಿಸುತ್ತಿಲ್ಲ.

೩. ಯಾವುದೂ ಶಾಶ್ವತವಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

೪. ಈ ಸಿದ್ಧಾಂತ ನಿಜವಾಗಿದ್ದಲ್ಲಿ, ಅದು ಎಷ್ಟೇ ಅಹಿತಕಾರವಾಗಿರಲಿ ಅದನ್ನು ಸತ್ಯಸಂಗತಿಯನ್ನು ಹೇಳುವಂತೆಯೇ ಹೇಳಿಬಿಡಬೇಕು.

೫. ಆದರೆ ಅದಕ್ಕೆ ನಿರಾಶರೇಕಾಗಬೇಕು?

೬. ಬದುಕು ಅಲ್ಪಕಾಲಿಕವಾದಲ್ಲಿ, ಅದು ಅಲ್ಪಕಾಲಿಕ ಅಷ್ಟೆ. ಆ ಬಗ್ಗೆ ಯಾರೂ ನಿರಾಶರಾಗಬೇಕಾಗಿಲ್ಲ.

೭ ಅದು ಕೇವಲ ಅರ್ಥಮಾಡಿಕೊಳ್ಳುವ ರೀತಿಯನ್ನು ಅವಲಂಬಿಸಿದೆ ಅಷ್ಟೆ.

೮. ಬರ್ಮೀಯರು ಅದನ್ನು ತೀರಾ ವಿಭಿನ್ನವಾಗಿ ಅರ್ಥಮಾಡಿಕೊಳ್ಳುತ್ತಾರೆ.

೯. ಬರ್ಮೀಯರು ಸಾವನ್ನು ಅದೇನೋ ಕುಟುಂಬದಲ್ಲಿ ಆನಂದಿಸಬೇಕಾದ ಘಟನೆಯೆಂಬಂತೆ ಆಚರಿಸುತ್ತಾರೆ.

೧೦. ಸಾವು ಸಂಭವಿಸಿದಾಗ ಮನೆಯವರು ಊರಿನ ಜನರಿಗೆಲ್ಲಾ ಔತಣ ನೀಡುತ್ತಾರೆ. ಜನರೆಲ್ಲಾ ನರ್ತಿಸುತ್ತಾ, ಹೆಣವನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಸಾವು ಅನಿವಾರ್ಯ ಘಟನೆಯಾದ್ದರಿಂದ ಯಾರೂ ಅದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ.

೧೧. ನಿತ್ಯ ಅಥವಾ ಶಾಶ್ವತ ಕಲ್ಪನೆ ಎಂಬುದು ಸುಳ್ಳಾಗಿದ್ದರೂ ಅದು ನಿಜವೆಂದು ನಾವು ನಂಬಿರುವುದರಿಂದ, ಅನಿತ್ಯ ಎಂಬುದು ನಿರಾಸೆಯನ್ನು ಉಂಟುಮಾಡುತ್ತದೆ.

೧೨. ಹಾಗಾಗಿ ಬುದ್ಧನ ಬೋಧನೆ ನಿರಾಶೆಯನ್ನು ಹರಡುತ್ತದೆ ಎಂದು ಆಪಾದಿಸಲಾಗದು.

## (೩)
## ಬೌದ್ಧ ಧರ್ಮ ನಿರಾಶವಾದಿಯೇ?

೧. ಬುದ್ಧ ಧರ್ಮವು ನಿರಾಶವಾದವನ್ನು ಹುಟ್ಟುಹಾಕುತ್ತದೆ ಎಂಬ ಆರೋಪವೂ ಇದೆ.

೨. ಈ ಆರೋಪಕ್ಕೆ ಪ್ರಥಮ ಆರ್ಯ ಸತ್ಯ ಸೂತ್ರ ಕಾರಣ. ಅದರಲ್ಲಿ ಜಗತ್ತು ದುಃಖದಿಂದ ಕೂಡಿದೆ ಎನ್ನಲಾಗಿದೆ.

೩. ಆದರೆ ಆಶ್ಚರ್ಯವೆಂದರೆ, ಕೇವಲ ದುಃಖದ ಉಲ್ಲೇಖವಿದೆ ಎಂಬ ಕಾರಣಕ್ಕಾಗಿ ಅದನ್ನು ನಿರಾಶವಾದಿ ಎಂದು ಆರೋಪಿಸಲಾಗುತ್ತಿದೆ.

೪. ಕಾರ್ಲ್ ಮಾರ್ಕ್ಸ್ ಕೂಡ ಜಗತ್ತಿನಲ್ಲಿ ಶೋಷಣೆಯಿದೆ, ಹಾಗೂ ಬಡವರು ಬಡವರಾಗುತ್ತಲೇ ಹೋಗುತ್ತಿದ್ದಾರೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ ಎಂದು ಹೇಳಿದ್ದಾರೆ.

೫. ಆದರೆ ಯಾರೂ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತವನ್ನು ನಿರಾಶವಾದಿ ಸಿದ್ಧಾಂತವೆಂದು ಹೇಳುವುದಿಲ್ಲ.

೬. ಬುದ್ಧನ ಸಿದ್ಧಾಂತದ ಬಗ್ಗೆ ಮಾತ್ರ ಈ ವಿಭಿನ್ನ ಧೋರಣೆಯೇಕೆ?

೭. ಬುದ್ಧ ತನ್ನ ಪ್ರಥಮ ಪ್ರವಚನದಲ್ಲಿ ಹುಟ್ಟು ದುಃಖಕರವಾದದ್ದು, ವೃದ್ಧಾಪ್ಯ ದುಃಖಕರವಾದದ್ದು, ಸಾವು ದುಃಖಕರವಾದದ್ದು ಎಂದು ಹೇಳಿರುವುದಾಗಿ ವರದಿಯಾಗಿದೆ. ಬಹುಶಃ ಇದೇ ಈ ವಿಭಿನ್ನ ಧೋರಣೆಗೆ ಕಾರಣವಿರಬಹುದು. ಇದರಿಂದ ಅವನ ಧರ್ಮಕ್ಕೆ ನಿರಾಶವಾದದ ಬಣ್ಣ ನೀಡಲಾಗಿದೆ.

೮. ಆದರೆ ಅಲಂಕಾರಿಕ ಭಾಷೆಯ ಪರಿಚಯವಿರುವವರಿಗೆ, ಇದು ಉತ್ಪ್ರೇಕ್ಷೆಯ ತಂತ್ರ ಎಂಬುದು ತಿಳಿಯುತ್ತದೆ. ಹಾಗೂ ಪರಿಣಾಮಕಾರಿಯಾಗಿ ವಿಷಯವನ್ನು ಹೇಳುವುದಕ್ಕಾಗಿ ನುರಿತ ಬರಹಗಾರರು ತಂತ್ರವನ್ನು ಬಳಸುತ್ತಾರೆ.

೯. ಮಾನವ ಜನ್ಮ ತೀರಾ ಶ್ರೇಷ್ಠವಾದದ್ದು ಎಂದು ಹೇಳಿರುವ ಬುದ್ಧನ ಪ್ರವಚನವನ್ನು ಗಮನಿಸಿದರೆ, ಹುಟ್ಟು ದುಃಖಕರವಾದದ್ದು ಎನ್ನುವ ಬುದ್ಧನ ಮಾತು ಉತ್ಪ್ರೇಕ್ಷೆ ಎನ್ನುವುದು ಸಾಬೀತಾಗುತ್ತದೆ.

೧೦. ಮತ್ತೆ, ಒಂದು ವೇಳೆ ಬುದ್ಧ ಕೇವಲ ದುಃಖದ ಬಗ್ಗೆ ಮಾತ್ರ ಉಲ್ಲೇಖಿಸಿ ಸುಮ್ಮನಾಗಿದ್ದರೆ ಈ ಆಕ್ಷೇಪ ಪ್ರಸ್ತುತವೆನಿಸುತ್ತಿತ್ತು.

೧೧. ಬುದ್ಧನ ಎರಡನೆಯ ಆರ್ಯ ಸತ್ಯ ದುಃಖದ ನಿವಾರಣೆ ಆಗಲೇಬೇಕೆಂಬ ಆಗ್ರಹ ವ್ಯಕ್ತಪಡಿಸುತ್ತದೆ. ದುಃಖದ ನಿವಾರಣೆ ಅತ್ಯಗತ್ಯ ಕರ್ತವ್ಯ ಎಂಬುದನ್ನು ಒತ್ತಿ ಹೇಳುವುದಕ್ಕಾಗಿಯೇ ಬುದ್ಧ ದುಃಖದ ಇರುವಿಕೆಯ ಬಗ್ಗೆ ಮಾತನಾಡುತ್ತಾನೆ.

೧೨. ದುಃಖದ ನಿವಾರಣೆ ಬಹು ಮುಖ್ಯ ಎಂಬುದು ಬುದ್ಧನ ಅಭಿಪ್ರಾಯವಾಗಿತ್ತು. ಕಪಿಲನು ಕೇವಲ ದುಃಖದ ಬಗ್ಗೆ ಉಲ್ಲೇಖಿಸುತ್ತಾನೆ. ಆದರೆ ಅದರ ಬಗ್ಗೆ ಮತ್ತಿನ್ನೇನೂ ಹೇಳುವುದಿಲ್ಲ ಎಂದು ಬುದ್ಧನಿಗೆ ಅಸಮಾಧಾನವಾಗಿತ್ತು. ಹಾಗಾಗಿಯೇ ಅವನು ಅಲರ ಕಲಾಮು ಮುನಿಯ ಆಶ್ರಮವನ್ನು ತ್ಯಜಿಸಿ ಬಂದುಬಿಡುತ್ತಾನೆ.

೧೩. ಇಂಥ ಧಮ್ಮವನ್ನು ನಿರಾಶವಾದಿ ಎಂದು ಕರೆಯುವುದಾದರೂ ಹೇಗೆ?

೧೪. ಹಾಗಾಗಿ ದುಃಖದ ನಿವಾರಣೆಗಾಗಿ ಅಷ್ಟೊಂದು ಕಾತುರನಾಗಿರುವ ಆಚಾರ್ಯನ ಬಗ್ಗೆ ನಿರಾಶವಾದಿ ಎಂದು ಆಪಾದನೆ ಹೇಗೆ ಸಾಧ್ಯ?

## ೫. ಆತ್ಮ ಮತ್ತು ಪುನರ್ಜನ್ಮ ಸಿದ್ಧಾಂತದ ಟೀಕಾಕಾರರು

೧. ಬುದ್ಧನು ಆತ್ಮವೆಂಬುದಿಲ್ಲ ಎಂದು ಬೋಧಿಸುತ್ತಾನೆ. ಪುನರ್ಜನ್ಮವಿದೆಯೆಂದು ದೃಢಪಡಿಸುತ್ತಾನೆ.

೨. ಇವೆರಡೂ ವಿಚಾರಗಳೂ ಪರಸ್ಪರ ವಿರೋಧಾತ್ಮಕವಾದದ್ದು ಎಂದು ಭಾವಿಸಿ ಬುದ್ಧನನ್ನು ಟೀಕೆ ಮಾಡಿದ ಜನರಿಗೇನು ಕೊರತೆಯಿರಲಿಲ್ಲ.

೩. ಆತ್ಮವೇ ಇಲ್ಲವೆಂದ ಮೇಲೆ ಪುನರ್ಜನ್ಮ ಹೇಗೆ ಸಾಧ್ಯ? ಎಂದು ಅವರು ಪ್ರಶ್ನಿಸಿದರು.

೪. ಇದರಲ್ಲಿ ವೈರುಧ್ಯವೇನೂ ಇಲ್ಲ. ಆತ್ಮವಿಲ್ಲದಿದ್ದಾಗಲೂ ಪುನರ್ಜನ್ಮ ಸಾಧ್ಯ.

೫. ಮಾವಿನ ಮರದ ಓಟೆಯೊಂದಿದೆ. ಅದರಿಂದ ಮಾವಿನ ಸಸಿಯು ಹುಟ್ಟಿಕೊಳ್ಳುತ್ತದೆ. ಈ ಮಾವಿನ ಸಸಿ ಮರವಾಗಿ ಮಾವಿನ ಹಣ್ಣುಗಳನ್ನು ನೀಡುತ್ತದೆ.

೬. ಹೀಗೆ ಮಾವಿನ ಹಣ್ಣು ಪುನರ್ಜನ್ಮ ಪಡೆಯುತ್ತದೆ.

೭ ಆದರೆ ಇಲ್ಲಿ ಆತ್ಮವಿಲ್ಲ.

೮. ಹಾಗಾಗಿ ಆತ್ಮವಿಲ್ಲದೆ ಇದ್ದರೂ ಪುನರ್ಜನ್ಮ ಸಾಧ್ಯ.

## ೬. ದೇಹಾತ್ಮ ವಿನಾಶವಾದಿ ಎಂಬ ಆಪಾದನೆ

೧. ಒಮ್ಮೆ ಬುದ್ಧನು ಶ್ರಾವಸ್ತಿಯ ಜೇತವನದಲ್ಲಿ ತಂಗಿದ್ದನು. ಆಗ ಅರಿತ್ಥ ಎಂಬ ಭಿಕ್ಷುವು ಬುದ್ಧನ ಸಿದ್ಧಾಂತದ ಬಗ್ಗೆ ಬುದ್ಧನಲ್ಲದ ಕೆಲವು ವಿಚಾರಗಳನ್ನು ಬುದ್ಧನದು ಎಂದು ಹೇಳಿ ಬೋಧಿಸುತ್ತಿದ್ದಾನೆ ಎಂದು ಬುದ್ಧನಿಗೆ ವರದಿ ಮಾಡುತ್ತಾರೆ.

೨. ಬುದ್ಧನು ದೇಹಾತ್ಮ ವಿನಾಶವಾದಿಯೇ? ಎಂಬುದೂ ಕೂಡ ಅರಿಷ್ಠನು ತಪ್ಪಾಗಿ ವ್ಯಾಖ್ಯಾನಿಸುತ್ತಿದ್ದ ವಿಚಾರಗಳಲ್ಲಿ ಒಂದಾಗಿತ್ತು.

೩. ತಥಾಗತನು ಅರಿಷ್ಠನಿಗೆ ಹೇಳಿಕಳಿಸುತ್ತಾನೆ. ಅರಿಷ್ಠ ಬರುತ್ತಾನೆ. ಈ ಬಗ್ಗೆ ಪ್ರಶ್ನಿಸಿದಾಗ ಅವನು ವಿಷಣ್ಣವದನವಾಗಿ ಮೌನವಾಗಿ ಕುಳಿತುಕೊಳ್ಳುತ್ತಾನೆ.

೪. ಆಗ ಬುದ್ಧನು ಅವನಿಗೆ ಹೇಳುತ್ತಾನೆ, "ನಾನು ದೇಹಾತ್ಮ ವಿನಾಶವಾದಿ, ಅನೈಕ್ಯತೆಯನ್ನು ಬೋಧಿಸುತ್ತೇನೆ ಹಾಗೂ ಅಸ್ತಿತ್ವದಲ್ಲಿರುವ ಜೀವಿಗಳ ವಿನಾಶವನ್ನು ಬೋಧಿಸುತ್ತೇನೆ ಎಂದು ಕೆಲವು ವಿರಕ್ತರು ಹಾಗೂ ಬ್ರಾಹ್ಮಣರು ತಪ್ಪಾಗಿ ಹಾಗೂ ಸುಳ್ಳು ಸುಳ್ಳೇ ನನ್ನ ಬಗ್ಗೆ ಆಪಾದಿಸುತ್ತಾರೆ. ಅದು ಸತ್ಯದೂರವಾದ ಆಪಾದನೆ.

೫. "ಇದು ನಾನು ಬೋಧಿಸದಿರುವ ಹಾಗೂ ನನಗೆ ಸ್ವಲ್ಪವೂ ಸಮ್ಮತವಿರದ ವಿಚಾರಗಳು.

೬. "ನಾನು ಈವರೆಗೆ ಹಾಗೂ ಇಂದಿಗೂ ಬೋಧಿಸುತ್ತಿರುವುದು ಕೇಡಿನ ಅಸ್ತಿತ್ವ ಮತ್ತು ಅದರ ಸಂಪೂರ್ಣ ನಿರ್ಮೂಲನ ಮಾತ್ರ.

# ಭಾಗ : ೪

# ಸ್ನೇಹಿತರು ಹಾಗೂ ಅಭಿಮಾನಿಗಳು

೧. ಬ್ರಾಹ್ಮಣಿಯಾದ ಧನಂಜನನಿಯ ಭಕ್ತಿ
೨. ವಿಶಾಖಳ ನಿಷ್ಠೆ
೩. ಮಲ್ಲಿಕಾಳ ಭಕ್ತಿ
೪. ಗರ್ಭಿಣಿಯೊಬ್ಬಳ ಹೆಬ್ಬಯಕೆ
೫. ಕೆನಿಯನ ಸ್ವಾಗ
೬. ಪ್ರಸೇನಜಿತನು ಭಗವಾನರನ್ನು ಪ್ರಶಂಸಿಸಿದ್ದು

## ೧. ಬ್ರಾಹ್ಮಣಿಯಾದ ಧನಂಜನನಿಯ ಭಕ್ತಿ

೧. ಬುದ್ಧನಿಗೆ ಹಲವಾರು ಸ್ನೇಹಿತರು ಹಾಗೂ ಅಭಿಮಾನಿಗಳೂ ಇದ್ದಾರೆ. ಅದರಲ್ಲಿ ಧನಂಜನನಿಯೂ ಒಬ್ಬಳು.

೨. ಆಕೆ ಭಾರದ್ವಾಜ ಗೋತ್ರಕ್ಕೆ ಸೇರಿದ ಬ್ರಾಹ್ಮಣನೊಬ್ಬನ ಹೆಂಡತಿ. ಆಕೆಯ ಗಂಡ ಭಗವಾನರನ್ನು ದ್ವೇಷಿಸುತ್ತಿದ್ದ. ಆದರೆ ಧನಂಜನನಿ ಭಗವಾನರ ಭಕ್ತೆ. ಆಕೆಯ ಭಕ್ತಿ ಉಲ್ಲೇಖನೀಯವಾದದ್ದು.

೩. ತಥಾಗತನು ಒಮ್ಮೆ ರಾಜಗೃಹದ ಹತ್ತಿರ ಅಳಿಲಿನ ಮೇವಿನ ತಾಣವೆನಿಸಿಕೊಂಡಿದ್ದ ವೇಣುವನದಲ್ಲಿ ತಂಗಿದ್ದ.

೪. ಆಗ ಭಾರದ್ವಾಜ ಕುಟುಂಬಕ್ಕೆ ಸೇರಿದ ಬ್ರಾಹ್ಮಣನೊಬ್ಬನ ಪತ್ನಿಯಾದ ಧನಂಜನನಿ ಎಂಬುವಳು, ತನ್ನ ಗಂಡನ ಜೊತೆ ರಾಜಗೃಹದಲ್ಲಿ ವಾಸಿಸುತ್ತಿದ್ದಳು.

೫. ಅವಳ ಗಂಡ ಬುದ್ಧನ ಪರಮ ದ್ವೇಷಿಯಾಗಿದ್ದ, ಧನಂಜನನಿ ಬುದ್ಧನ, ಅವನ ಧಮ್ಮದ ಹಾಗೂ ಅವನ ಸಂಘದ ಮಹಾನ್ ಅನುಯಾಯಿ. ಅವಳು ಯಾವಾಗಲೂ ತ್ರಿಸರಣ ಸೂತ್ರಗಳನ್ನು ಪ್ರಶಂಸಿಸುತ್ತಿದ್ದಳು. ಅವಳು ಪ್ರಶಂಸೆ ಪ್ರಾರಂಭವಾದ ತಕ್ಷಣ, ಆಕೆಯ ಗಂಡ ಕಿವಿ ಮುಚ್ಚಿಕೊಳ್ಳುತ್ತಿದ್ದ.

೬. ಒಮ್ಮೆ ತನ್ನ ಬ್ರಾಹ್ಮಣ ಸ್ನೇಹಿತರಿಗೆ ಔತಣ ಕೂಟವನ್ನು ಇಟ್ಟುಕೊಂಡಿದ್ದ. ಅದಕ್ಕೆ ಮೊದಲು ಹೆಂಡತಿಯನ್ನು ಕರೆದು, ಬುದ್ಧನನ್ನು ಹೊಗಳಿ ಅವನ ಅತಿಥಿಗಳಿಗೆ ಬೇಸರವನ್ನುಂಟುಮಾಡದೇ, ಅವಳಿಗೆ ಪ್ರಿಯವಾದ ಬೇರೇನಾದರೂ ಮಾಡಿಕೋ ಎಂದು ಕೇಳಿಕೊಂಡ.

೭. ಧನಂಜನನಿ ಅಂತಹ ಭರವಸೆಯನ್ನು ಕೊಡಲು ತಯಾರಿರಲಿಲ್ಲ. ಆಗ ಅವನು, ತನ್ನ ಚೂರಿಯಿಂದ ಬಾಳೆ ಮರ ತರಿಯುವಂತೆ ಅವಳನ್ನು ತರಿದುಬಿಡುವುದಾಗಿ ಹೆದರಿಸಿದ. ತಾನು ಅದಕ್ಕೆ ಸಿದ್ಧ ಎಂದು ಘೋಷಿಸಿದ್ದಳು. ಮಾತಾಡುವ ಸ್ವತಂತ್ರ್ಯವನ್ನು ಉಳಿಸಿಕೊಂಡಳು. ಮತ್ತು ಅವಳ ತತ್ತ್ವದ ಬಗ್ಗೆ ಐನೂರು ಶ್ಲೋಕಗಳನ್ನು ಹೇಳಿದಳು. ಆಗ ಅವನು ನಿರುಪಾಧಿಕವಾಗಿ ಶರಣಾದ.

೮. ಊಟಕ್ಕೆ ತಟ್ಟೆಗಳನ್ನು ಚಿನ್ನದ ಚಮಚವನ್ನು ಇರಿಸಲಾಯಿತು. ಅತಿಥಿಗಳು ಉಟಕ್ಕೆ ಕುಳಿತರು. ಆಹಾರವನ್ನು ನೀಡುವಾಗ ಅವಳಿಗೆ ಪ್ರಬಲವಾದ ಆವೇಷ ಉಕ್ಕಿ ಬಂತು. ಊಟದ ನಡುವೆಯೇ ಬಿದಿರಿನ ತೋಪಿನ ಕಡೆಗೆ ತಿರುಗಿ ತ್ರಿಸರಣವನ್ನು ಕುರಿತು ಸ್ತುತಿಸಲು ಪ್ರಾರಂಭಿಸಿದ್ದಳು.

೯. ಸಿಟ್ಟಾಗಿ ಅತಿಥಿಗಳು, ಪಾಷಂಡಿಯ ಇರುವಿಕೆಯಿಂದ ಮೈಲಿಗೆಯಿಂದ ಆಹಾರವನ್ನು ಉಗುಳುತ್ತಾ ಆ ಸ್ಥಳದಿಂದ ಹೊರಟುಹೋದರು. ಹಾಳಾದ ಔತಣ ನಡುವೆಯೇ, ಸಿಟ್ಟಾದ ಪತಿ ಆಕೆಗೆ ಛೀಮಾರಿ ಹಾಕಿದನು.

೧೦. ಭಾರದ್ವಾಜನಿಗೆ ಊಟಕ್ಕೆ ನೀಡುವಾಗ ಅವಳು ಅವನ ಮುಂದೆ ಬಂದು ಆ ತ್ರಿಶರಣವನ್ನು ಪ್ರಶಂಸಿದ್ದಳು: "ತಥಾಗತನಿಗೆ ಜಯವಾಗಲಿ, ಅರ್ಹಂತವಾದ ಬುದ್ಧ ಭಗವಾನನಿಗೆ ಜಯವಾಗಲಿ, ಬೌದ್ಧ ತತ್ವಕ್ಕೆ ಜಯವಾಗಲಿ, ಸಂಘಕ್ಕೆ ಜಯವಾಗಲಿ."

೧೧. ಅವಳು ಹೀಗೆ ಹೇಳಿದಾಗ, ಭಾರದ್ವಾಜನು ಸಿಟ್ಟಾದನು ಹಾಗೂ "ದರಿದ್ರದವಳೇ, ಸಂದರ್ಭ

ದೊರಕಿದಾಗಲೆಲ್ಲಾ ನೀನು ಕೇಶಮುಂಡನ ಮಾಡಿಕೊಂಡಿರುವ ಆ ಶ್ರಮಣನನ್ನು ಹೊಗಳಿತ್ತಿರಬೇಕೆ? ನಾನು ಹೋಗಿ ಈಗ ಆ ನಿನ್ನ ಗುರುವಿಗೆ ಬುದ್ಧಿ ಹೇಳುತ್ತೇನೆ." ಎಂದನು.

೧೨. "ಅಯ್ಯ ಬ್ರಾಹ್ಮಣನೆ, ದೇವಲೋಕದಲ್ಲಾಗಲಿ, ಮಾರರಲ್ಲಾಗಲಿ, ಬ್ರಾಹ್ಮಣರಲ್ಲಾಗಲಿ, ಸಂನ್ಯಾಸಿಗಳಲ್ಲಾಗಲಿ, ದೇವತೆಗಳಲ್ಲಾಗಲಿ, ಮನುಷ್ಯರಲ್ಲಾಗಲಿ, ಬುದ್ಧ ಭಗವಾನನಿಗೆ ಛೀಮಾರಿ ಹಾಕಿ ಬುದ್ಧಿ ಹೇಳಲು ಶಕ್ತರಾದವರು ಯಾರೂ ಇಲ್ಲ. ಅರ್ಹಂತ ಬುದ್ಧನೇ ಪರಮೋತ್ಕೃಷ್ಟನು. ಆದರೂ ಪರವಾಗಿಲ್ಲ, ನೀನು ಬುದ್ಧನ ಬಳಿ ಹೋಗು. ಆಗ ನಿನಗೇ ಅರಿವಾಗುತ್ತದೆ." ಎಂದು ಹೇಳಿದಳು.

೧೩. ಆಗ ಕಳವಳಗೊಂಡು, ಚಿಂತಾಕ್ರಾಂತನಾಗಿದ್ದ ಭಾರದ್ವಾಜನು ಬುದ್ಧನ ಬಳಿಗೆ ತೆರಳಿದನು. ಅವನ ಬಳಿ ಸಾರಿದ ಕೂಡಲೇ ಅವನಿಗೆ ನಮಸ್ಕರಿಸಿ, ಸ್ನೇಹ ಸೌಜನ್ಯದಿಂದ ಕುಶಲವನ್ನು ವಿಚಾರಿಸಿ ಒಂದು ಪಕ್ಕದಲ್ಲಿ ಕುಳಿತುಕೊಂಡನು.

೧೪. ಹೀಗೆ ಕುಳಿತ ನಂತರ ಅವನು ಬುದ್ಧನನ್ನು ಕೇಳಿದನು: "ಗೌತಮ, ನಾವು ನೆಮ್ಮದಿಯಿಂದ ಜೀವಿಸಬೇಕಾದರೆ ಯಾವುದನ್ನು ಸಂಹಾರ ಮಾಡಬೇಕು? ನಾವು ಮುಂದೆಂದೂ ಕಣ್ಣೀರು ಸುರಿಸದಂತಿರಬೇಕಾದರೆ ಯಾವುದನ್ನು ಸಂಹಾರ ಮಾಡಬೇಕು? ಎಲ್ಲದಕ್ಕಿಂತ ಹೆಚ್ಚಾಗಿ ನಾನು ಯಾವುದನ್ನು ಸಂಹರಿಸಬೇಕು" ಎಂದು ಕೇಳಿದನು.

೧೫. ಆಗ ತಥಾಗತನು "ನೀನು ಸಂತೋಷವಾಗಿರಬೇಕಾದರೆ ಕೋಪವನ್ನು ಬಿಡಬೇಕು. ನೀನು ಕಣ್ಣೀರು ಸುರಿಸದಂತಿರಬೇಕಾದರೆ ಕೋಪವನ್ನು ತ್ಯಜಿಸಬೇಕು. ಕೋಪವು ವಿಷಮೂಲದ್ದು, ಹುಚ್ಚಿನ ಪರಾಕಾಷ್ಠೆಯುಳ್ಳದ್ದು, ಹಾಗೂ ಮರಣಾಂತಿಕವಾಗಿ ಸಿಹಿಯಾದ್ದು. ಆರ್ಯತತ್ತ್ವಗಳು ಪ್ರಶಂಸಿದ್ದು ಈ ಸಂಹಾರವನ್ನೇ. ಆದ್ದರಿಂದ ನೀನು ನಿಜವಾಗಿಯೂ ಸಂತೋಷದಿಂದ ಇರಬೇಕಾದರೆ ಸಂಹರಿಸಬೇಕಾದುದು ಕೋಪವನ್ನು."

೧೬. ಬುದ್ಧನ ಈ ಉತ್ತರದ ಮಹತ್ತ್ವವನ್ನು ಅರಿತ ಬ್ರಾಹ್ಮಣನು, ಬುದ್ಧನಿಗೆ ಹೇಳಿದನು: "ಈ ಉತ್ತರ ಅತ್ಯುತ್ತಮವಾಗಿದೆ, ಭಗವಾನ್ ಸೊಗಸಾಗಿದೆ! ಕೆಳಗೆ ಎಸೆದಿದ್ದನ್ನು ಸರಿಯಾಗಿ ಎತ್ತಿಡುವಂತೆ ಅಥವಾ ಬಚ್ಚಿಟ್ಟಿದ್ದನ್ನು ತೆರೆದು ತೋರಿಸಿದಂತೆ, ದಾರಿ ತಪ್ಪಿದವನಿಗೆ ದಾರಿ ತೋರಿಸಿದಂತೆ ಅಥವಾ ಕತ್ತಲೆಯಲ್ಲಿ ಹೊರಗಿನ ವಸ್ತುಗಳೆಲ್ಲಾ ಕಾಣಲು ಅನುಕೂಲವಾಗಲು ದೀಪ ತೋರಿಸಿದಂತೆ ಗೋತಮನು ತನ್ನ ತತ್ತ್ವವನ್ನು ಹಲವು ರೀತಿಯಲ್ಲಿ ಮನದಟ್ಟುಮಾಡಿದ್ದಾನೆ. ಭಗವಾನ್, ನಾನೂ ಕೂಡ ಬೌದ್ಧ ತತ್ತ್ವಕ್ಕೆ ಶರಣಾಗುತ್ತೇನೆ. ಸಂಘವನ್ನು ಸೇರುತ್ತೇನೆ. ನಾನು ಗೋತಮನ ಮುಂದಾಳತ್ವದಲ್ಲಿ ಲೌಕಿಕ ಜಗತ್ತನ್ನು ತ್ಯಜಿಸಿ ಸಂಘ ಸೇರುತ್ತೇನೆ."

೧೭. ಹಾಗಾಗಿ ಧನಂಜನನಿ ಕೇವಲ ಬೌದ್ಧ ಅನುಯಾಯಿಯಷ್ಟೇ ಅಲ್ಲ. ತನ್ನ ಗಂಡನನ್ನೂ ಬೌದ್ಧ ಅನುಯಾಯಿಯಾಗಿ ಮಾಡಿದಳು.

## ೨. ವಿಶಾಖಳ ನಿಷ್ಠೆ

೧. ವಿಶಾಖಾಳು ಅಂಗ ದೇಶದ ಭದಿಯಾ ಪಟ್ಟಣದಲ್ಲಿ ಜನಿಸಿದಳು.

೨. ಅವಳ ತಂದೆ ಧನಂಜಯ, ತಾಯಿ ಸುಮನಾ.

೩. ಒಮ್ಮೆ ಬುದ್ಧನು ತನ್ನ ಹಲವಾರು ಭಿಕ್ಕುಗಳ ಜೊತೆ, ಸೇಲ ಬ್ರಾಹ್ಮಣನೊಬ್ಬನ ಆಹ್ವಾನದ ಮೇರೆಗೆ

ಭದಿಯಾ ಪ್ರಾಂತ್ಯಕ್ಕೆ ಭೇಟಿ ನೀಡಿದ್ದನು. ಆಗ ಆ ಬ್ರಾಹ್ಮಣನ ಮೊಮ್ಮಗಳಾದ ವಿಶಾಖಾಳಿಗೆ ಏಳು ವರ್ಷ.

೪. ವಿಶಾಖಾ ಕೇವಲ ಏಳೇ ವರ್ಷವಾಗಿದ್ದರೂ, ತಾನೂ ಬುದ್ಧನನ್ನು ನೋಡಬೇಕೆಂಬ ಆಸೆಯನ್ನು, ತನ್ನ ಅಜ್ಜನೊಂದಿಗೆ ತೋಡಿಕೊಂಡಳು. ಮೇಂಡಕ ಅದಕ್ಕೆ ಒಪ್ಪಿ, ಅವಳ ಜೊತೆ ಐನೂರು ಜೊತೆಗಾರರನ್ನು, ಐನೂರು ಗುಲಾಮರನ್ನು, ಹಾಗೂ ಐನೂರು ರಥಗಳನ್ನು ಕಳುಹಿಸಿಕೊಟ್ಟನು.

೫. ಅವಳು ರಥವನ್ನು ಸ್ವಲ್ಪ ದೂರದಲ್ಲೇ ನಿಲ್ಲಿಸಿ ಕಾಲು ನಡಿಗೆಯಲ್ಲೇ ಬುದ್ಧನನ್ನು ನೋಡಲು ಹೋದಳು.

೬. ಬುದ್ಧ ಅವಳಿಗೆ ಧರ್ಮವನ್ನು ಬೋಧಿಸಿದ. ಅವಳು ಬುದ್ಧನ ಸಾಮಾನ್ಯ ಅನುಯಾಯಿಯಾದಳು.

೭. ಮುಂದಿನ ಹದಿನೈದು ದಿನಗಳವರೆಗೆ ಮೇಂಡಕನು ಬುದ್ಧ ಹಾಗೂ ಅವನ ಸಂಘದವರನ್ನು ಪ್ರತಿದಿನ ತನ್ನ ಮನೆಗೆ ಕರೆದು ಊಟ ಹಾಕಿದ.

೮. ಮುಂದೆ ಪ್ರಸೇನಜಿತನ ಕೋರಿಕೆಯ ಮೇರೆಗೆ, ಬಿಂಬಸಾರ ಧನಂಜನಯನನ್ನು ಕೋಸಲದಲ್ಲಿ ವಾಸಿಸಲು ಕಳುಹಿಸುತ್ತಾನೆ. ಆಗ ವಿಶಾಖಾ ಕೂಡ ತನ್ನ ತಂದೆತಾಯಿಯರ ಜೊತೆ ಸಾಕೇತದಲ್ಲಿ ನೆಲೆಸುತ್ತಾಳೆ.

೯. ಶ್ರಾವಸ್ತಿ ನಗರದ ಶ್ರೀಮಂತ, ಮಿಗಾರ ತನ್ನ ಮಗ ಪುನ್ನವದನನಿಗೆ ಮದುವೆ ಮಾಡಬೇಕೆಂದು ಸೂಕ್ತ ವಧುವನ್ನು ಹುಡುಕಲು ಕೆಲವು ಜನರನ್ನು ಕಳುಹಿಸುತ್ತಾನೆ.

೧೦. ವಧು ಅನ್ವೇಷಣೆಯಲ್ಲಿದ್ದ ಗುಂಪು ಶ್ರಾವಸ್ತಿಗೆ ಬರುತ್ತದೆ. ಹಬ್ಬದ ದಿನ ಕೊಳದಲ್ಲಿ ಸ್ನಾನ ಮಾಡಲು ಹೋಗುತ್ತಿದ್ದ ವಿಶಾಖಳನ್ನು ನೋಡುತ್ತಾರೆ.

೧೧. ಆಗ ಜೋರಾಗಿ ಮಳೆ ಸುರಿಯಲು ಪ್ರಾರಂಭವಾಗುತ್ತದೆ. ವಿಶಾಖಾಳ ಗೆಳತಿಯರು ಆಶ್ರಯಕ್ಕಾಗಿ ಓಡುತ್ತಾರೆ. ಆದರೆ ವಿಶಾಖ ಓಡುವುದಿಲ್ಲ. ಮಾಮೂಲಿನಂತೆ ನಡೆದು ಶ್ರೀಮಂತನ ದೂತರು ನಿಂತಿದ್ದ ಸ್ಥಳಕ್ಕೆ ಬರುತ್ತಾಳೆ.

೧೨. ಅವಳು ಓಡಿ ಬಂದು ತನ್ನ ಬಟ್ಟೆ ತೊಯ್ಯದಂತೆ ಏಕೆ ನೋಡಿಕೊಳ್ಳಲಿಲ್ಲ ಎಂದವರು ಪ್ರಶ್ನಿಸುತ್ತಾರೆ. ಅದಕ್ಕೆ ವಿಶಾಖ ತನ್ನ ಬಳಿ ಹಲವಾರು ಜೊತೆ ಬಟ್ಟೆ ಇದೆಯೆಂದೂ ಹಾಗಾಗಿ ಬಟ್ಟೆ ಮಲಿನವಾದರೆ ಬೇರೊಂದು ಜೊತೆ ಬಟ್ಟೆಯನ್ನು ಧರಿಸಬಹುದೆಂದೂ, ಆದರೆ ಕಾಲು ಮುರಿದುಹೋದಲ್ಲಿ ಬೇರೆ ಕಾಲನ್ನು ಹಾಕಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತಾಳೆ. ಅವಿವಾಹಿತ ಕನ್ಯೆಯರು ಮಾರುಕಟ್ಟೆಯಲ್ಲಿ ಖರೀದಿಗೆ ಇಟ್ಟ ಮಾಲಿನಂತೆ. ಅವರು ಕುರೂಪಗೊಳ್ಳಬಾರದು ಎನ್ನುತ್ತಾಳೆ.

೧೩. ಈಗಾಗಲೇ ಅವಳ ಸೌಂದರ್ಯಕ್ಕೆ ಮಾರುಹೋಗಿದ್ದ ಆ ಗುಂಪು ಈಗ ಅವಳ ಬುದ್ಧಿವಂತಿಕೆಯನ್ನು ಕಂಡು ದಂಗಾದರು. ಅವರು ಅವಳಿಗೆ ಪುಷ್ಪಗುಚ್ಛವೊಂದನ್ನು ನೀಡುತ್ತಾರೆ. ಅದನ್ನು ಆಕೆ, ಮದುವೆಯ ಪ್ರಸ್ತಾಪದ ಸೂಚನೆಯೆಂದು ತಿಳಿದು ಸ್ವೀಕರಿಸುತ್ತಾಳೆ.

೧೪. ವಿಶಾಖಾ ಮನೆಗೆ ಹಿಂತಿರುಗುತ್ತಾಳೆ. ಮದುವೆಯ ಉದ್ದೇಶಕ್ಕಾಗಿ ಬಂದಿದ್ದ ಗುಂಪು ಅವಳನ್ನು ಹಿಂಬಾಲಿಸುತ್ತದೆ. ಪುಣ್ಯವದನನ ಪ್ರಸ್ತಾಪವನ್ನು ಧನಂಜಯನ ಮುಂದಿಡುತ್ತಾರೆ. ಪ್ರಸ್ತಾಪ ಅವನಿಗೆ ಒಪ್ಪಿಗೆಯಾಗುತ್ತದೆ. ಅದನ್ನು ಪತ್ರ ವಿನಿಮಯದ ಮೂಲಕ ಅವನು ದೃಢೀಕರಿಸುತ್ತಾನೆ.

೧೫. ಈ ವಿಷಯ ತಿಳಿದ ಪ್ರಸೇನಜಿತನು ಪುಣ್ಯವದನನ ಜೊತೆ ಗೌರವಸೂಚಕವಾಗಿ ಸಾಕೇತದವರೆಗೂ ಬರುವುದಾಗಿ ಹೇಳಿಕಳುಹಿಸುತ್ತಾನೆ. ದೊರೆ, ಅವನ ಪರಿವಾರ, ಮಿಗಾರ, ಪುನ್ನವದನ ಮತ್ತು

ಅವನ ಪರಿವಾರವನ್ನು ಸ್ವಾಗತಿಸಿ ಧನಂಜಯನು ತಾನೇ ಖುದ್ದಾಗಿ ನಿಂತು ಅವರನ್ನು ಬಗೆಬಗೆಯಾಗಿ ಉಪಚರಿಸುತ್ತಾನೆ.

೧೬. ವಧುವಿಗೆ ಆಭರಣಗಳನ್ನ ತಯಾರಿಸಲು ಐದುನೂರು ಅಕ್ಕಸಾಲಿಗರನ್ನು ನೇಮಕ ಮಾಡುತ್ತಾನೆ. ಧನಂಜಯನು ತನ್ನ ಮಗಳಿಗೆ ಬಳುವಳಿಯಾಗಿ ಐದುನೂರು ಗಾಡಿಗಳ ತುಂಬಾ ಧನವನ್ನೂ ಐದು ನೂರು ಗಾಡಿಗಳ ತುಂಬಾ ಬಂಗಾರದ ಪಾತ್ರೆಗಳನ್ನು ಹಾಗೂ ದನಕರುಗಳನ್ನು ಮತ್ತಿತರ ವಸ್ತುಗಳನ್ನು ನೀಡುತ್ತಾನೆ.

೧೭. ವಿಶಾಖಾಳು ಮನೆಬಿಟ್ಟು ಹೊರಡಬೇಕಾದ ಸಮಯ ಬಂದಾಗ ಧನಂಜಯನು ಆಕೆಗೆ ಹತ್ತು ಬುದ್ಧಿ ಮಾತುಗಳನ್ನು ಹೇಳಿದನು. ಅದನ್ನು ಪಕ್ಕದ ಕೊಠಡಿಯಲ್ಲಿದ್ದ ಮೃಗಾರನು ಕೇಳಿಸಿಕೊಂಡನು. ಈ ಹಿತವಚನಗಳು: "ಬೆಂಕಿಯನ್ನು ಮನೆಯಿಂದ ಹೊರಗೆ ಕೊಡಬೇಡ, ಹೊರಗಡೆಯಿಂದ ಬೆಂಕಿಯನ್ನು ಮನೆಗೆ ತೆಗೆದುಕೊಳ್ಳಬೇಡ. ಯಾವುದನ್ನೇ ಆಗಲಿ ಮರಳಿ ಕೊಡುವವರಿಗೆ ಮಾತ್ರ ಕೊಡು. ಯಾರು ತೆಗೆದುಕೊಂಡದ್ದನ್ನು ಹಿಂತಿರುಗಿಸುವುದಿಲ್ಲವೋ ಅವರಿಗೆ ಕೊಡಬೇಡ. ಪಡೆದದ್ದನ್ನು ಹಿಂತಿರುಗಿಸುವವರಿಗೆ ಕೊಡು ಹಾಗೂ ಹಿಂತಿರುಗಿಸದವರಿಗೆ ಕೊಡಬೇಡ. ಒಂದು ಕಡೆ ಕುಳಿತು ನೆಮ್ಮದಿಯಾಗಿ, ಸಂತೋಷದಿಂದ ಊಟ ಮಾಡಬೇಕು. ಅಗ್ನಿಯನ್ನು ಸಂರಕ್ಷಿಸಬೇಕು ಮತ್ತು ಮನೆ ದೇವರಿಗೆ ಸೂಕ್ತವಾದ ಪೂಜೆ ಪುನಸ್ಕಾರಗಳನ್ನು ಮಾಡಬೇಕು."

೧೮. ಮರುದಿನ ಧನಂಜಯನು ಎಂಟು ಜನ ಗೃಹಸ್ಥರನ್ನು ತನ್ನ ಮಗಳಿಗೆ ಜಾಮೀನುದಾರರನ್ನಾಗಿ ನೇಮಕ ಮಾಡಿದನು. ಅವಳ ಬಗ್ಗೆ ಮಾಡುವ ಆಪಾದನೆಗಳನ್ನ ಪರಿಶೀಲಿಸುವ ಕೆಲಸವನ್ನು ಅವರಿಗೆ ಒಪ್ಪಿಸಿದನು.

೧೯. ಮಿಗಾರನಿಗೆ ತನ್ನ ಸೊಸೆಯನ್ನು ಶ್ರಾವಸ್ತಿಯ ಜನರೆಲ್ಲಾ ನೋಡಲಿ ಎಂಬ ಆಸೆಯಿತ್ತು. ಹಾಗಾಗಿ ವಿಶಾಖಾ ರಥದಲ್ಲಿ ನಿಂತು ಶ್ರಾವಸ್ತಿಯನ್ನು ಪ್ರವೇಶಿಸಿದಳು. ರಸ್ತೆಯ ಎರಡೂ ಕಡೆ ಜನ ನಿಂತು ನೋಡಿದರು. ಕಾಣಿಕೆಗಳ ಮಹಾಪೂರವೇ ಹರಿದುಬಂತು. ಆದರೆ ಆಕೆ ಇವೆಲ್ಲವನ್ನೂ ಊರಿನ ಜನರಿಗೇ ಹಂಚಿದಳು.

೨೦. ಮೃಗಾರ ನಿರ್ಗ್ರಂಥರ ಅನುಯಾಯಿ. ವಿಶಾಖಳನ್ನು ಮನೆ ತುಂಬಿಸಿಕೊಂಡ. ಕೂಡಲೇ ಅವರನ್ನು ಮನೆಗೆ ಆಹ್ವಾನಿಸಿದನು. ಅವರನ್ನು ಸತ್ಕರಿಸುವಂತೆ ವಿಶಾಖಾಳಿಗೆ ಹೇಳಿದನು. ಆದರೆ ಬೆತ್ತಲಾಗಿದ್ದ ಅವರನ್ನು ಕಂಡು ಅಸಹ್ಯಗೊಂಡ ವಿಶಾಖಾ ಅವರನ್ನು ಸತ್ಕರಿಸಲು ಒಪ್ಪಲಿಲ್ಲ.

೨೧. ನಿರ್ಗ್ರಂಥರು ಸಿಟ್ಟಾಗಿ ಆಕೆಯನ್ನು ಮನೆಯಿಂದ ಹೊರಗೆ ಕಳುಹಿಸುವಂತೆ ಒತ್ತಾಯಿಸಿದರು. ಆದರೆ ಮಿಗಾರ ಸೂಕ್ತವಾದ ಸಮಯಕ್ಕಾಗಿ ಕಾದ.

೨೨. ಒಂದು ದಿನ ಮಿಗಾರ ಊಟ ಮಾಡುತ್ತಿದ್ದ. ಪಕ್ಕದಲ್ಲಿ ವಿಶಾಖಾ ಬೀಸಣಿಗೆ ಬೀಸುತ್ತಾ ನಿಂತಿದ್ದಳು. ಆಗ ಸನ್ಯಾಸಿಯೊಬ್ಬ ಹೊರಗೆ ಬಂದು ನಿಂತದ್ದು ಕಾಣಿಸಿತು. ಮೃಗಾರನಿಗೆ ಅವನು ಕಾಣಿಸಲಿ ಎಂಬ ಉದ್ದೇಶದಿಂದ ವಿಶಾಖಾ ಸರಿದು ನಿಂತಳು. ಆದರೆ ಮೃಗಾರ ಸಂನ್ಯಾಸಿಯನ್ನು ಗಮನಿಸದೇ ಊಟವನ್ನು ಮುಂದುವರಿಸಿದ.

೨೩. ಆಗ ವಿಶಾಖಾ ಸನ್ಯಾಸಿಗೆ "ಮುಂದೆ ಹೋಗು, ನನ್ನ ಮಾವ ಊಟ ಮಾಡುತ್ತಿದ್ದಾರೆ" ಎಂದಳು. ಮೃಗಾರ ಸಿಟ್ಟಾಗಿ ಅವಳನ್ನು ಹೊರಗೆ ಅಟ್ಟುವುದಾಗಿ ಹೆದರಿಸಿದ. ಆದರೆ ಆಕೆಯ ಕೋರಿಕೆಯ ಮೇರೆಗೆ ಆಕೆಯ ಜಾಮೀನುದಾರರಿಗೆ ವಿಚಾರವನ್ನು ತಿಳಿಸಿದ.

೨೪. ಅವಳ ಬಗ್ಗೆ ಇದ್ದ ಎಲ್ಲಾ ಆರೋಪಗಳನ್ನು ಪರಿಶೀಲಿಸಿದ ಅವರು ಆಕೆಯನ್ನು ನಿರ್ದೋಷಿಯೆಂದು ತೀರ್ಪು ನೀಡಿದರು.

೨೫. ಆಗ ವಿಶಾಖ ತನ್ನನ್ನು ತವರಿಗೆ ಕಳಿಸಿಬಿಡುವ ಸಿದ್ಧತೆ ಮಾಡುವಂತೆ ಹೇಳಿದಳು. ಮೃಗಾರ ಮತ್ತು ಅವನ ಹೆಂಡತಿ ತಮ್ಮನ್ನು ಕ್ಷಮಿಸುವಂತೆ ಆಕೆಯನ್ನು ಕೇಳಿಕೊಳ್ಳುತ್ತಾರೆ. ಅವರ ಮಾತಿಗೆ ಒಪ್ಪುವ ಮೊದಲು ವಿಶಾಖ ಬುದ್ಧ ಮತ್ತು ಅವನ ಭಿಕ್ಷುಗಳನ್ನು ಮನೆಗೆ ಆಹ್ವಾನಿಸಬೇಕೆಂಬ ಕರಾರು ಹಾಕುತ್ತಾಳೆ.

೨೬. ಆತ ಅದಕ್ಕೆ ಒಪ್ಪಿಕೊಳ್ಳುತ್ತಾನೆ. ಆದರೆ ನಿರ್ಗ್ರಂಥರ ಅನುಯಾಯಿಯಾಗಿದ್ದ ಮೃಗಾರ ಬುದ್ಧನನ್ನು ಸತ್ಕರಿಸುವ ಕೆಲಸವನ್ನು ವಿಶಾಖಳಿಗೇ ಬಿಡುತ್ತಾನೆ. ಮತ್ತೆ ಊಟವಾದ ನಂತರ ತೆರೆಯ ಮರೆಯಲ್ಲಿ ನಿಂತು ಬುದ್ಧನ ಪ್ರವಚನವನ್ನು ಕೇಳಲು ಸಮ್ಮತಿಸುತ್ತಾನೆ.

೨೭. ಅವನು, ಬುದ್ಧನ ಉಪದೇಶದಿಂದ ಅದೆಷ್ಟು ಪ್ರಭಾವಿತನಾದನೆಂದರೆ ಬುದ್ಧನ ಅನುಯಾಯಿಯೇ ಆಗಿಬಿಟ್ಟ.

೨೮. ಅವನಿಗೆ ವಿಶಾಖಳ ಬಗ್ಗೆ ಎಣೆಯಿಲ್ಲದಷ್ಟು ಕೃತಜ್ಞತೆ ಉಂಟಾಯಿತು. ಅವಳನ್ನು ಮಾತೃಸಮಾನಳೆಂದು ಭಾವಿಸಿ, ತಾಯಿಗೆ ದೊರಕಬೇಕಾದ ಎಲ್ಲ ಗೌರವವನ್ನೂ ತೋರಿಸಿದ. ಅಂದಿನಿಂದ ಅವಳು ಮೃಗಾರಮಾತೆ ಎಂದೇ ಪ್ರಸಿದ್ಧಳಾದಳು.

೨೯. ವಿಶಾಖಳ ಭಕ್ತಿ ಅಷ್ಟು ಗಾಢವಾದುದು.

## ೩. ಮಲ್ಲಿಕಾಳ ಭಕ್ತಿ

೧. ಒಮ್ಮೆ ಶ್ರಾವಸ್ತಿಯ ಜೇತವನದಲ್ಲಿ ಬುದ್ಧನು ತಂಗಿದ್ದನು. ಗೃಹಸ್ಥನೊಬ್ಬನ ಪ್ರೀತಿಪಾತ್ರನಾದ ಮಗ ತೀರಿಹೋಗಿದ್ದನು. ಮಗನ ಸಾವಿನಿಂದ ಆತ, ವ್ಯಾಪಾರ, ಊಟ, ಮುಂತಾದವುಗಳೆಲ್ಲದರಲ್ಲೂ ಆಸಕ್ತಿಯನ್ನು ಕಳೆದುಕೊಂಡಿದ್ದನು.

೨. ಸದಾ ಸ್ಮಶಾನಕ್ಕೆ ಹೋಗಿ "ಮಗನೇ ಎಲ್ಲಿದ್ದೀಯೆ, ಎಲ್ಲಿದ್ದೀಯೆ?" ಎಂದು ಆಕ್ರಂದನ ಮಾಡುತ್ತಿದ್ದನು.

೩. ಆ ದುಃಖಿ ತಂದೆ ಬುದ್ಧನ ಬಳಿಗೆ ಬಂದನು. ಸೂಕ್ತವಾದ ಗೌರವವನ್ನು ತೋರಿಸಿದ ನಂತರ ಒಂದು ಬದಿಯಲ್ಲಿ ಕುಳಿತುಕೊಂಡನು.

೪. ಅವನು ಎಲ್ಲದರಲ್ಲೂ ಆಸಕ್ತಿಯನ್ನು ಕಳೆದುಕೊಂಡುಬಿಟ್ಟಿರುವುದನ್ನೂ ಮತ್ತು ತಾನು ಅಲ್ಲಿಗೆ ಬಂದ ಉದ್ದೇಶವನ್ನೂ ಹೇಳದೇ ಇರುವುದನ್ನೂ, ಅವನ ದುರವಸ್ಥೆಯನ್ನೂ ಕಂಡ ಬುದ್ಧ ಅವನನ್ನು "ನೀನು ನೀನೇ ಆಗಿಲ್ಲ, ನಿನ್ನ ಮನಸ್ಸು ತೀರಾ ತಪ್ತವಾಗಿದೆ" ಎಂದನು.

೫. "ನನ್ನ ಪ್ರಾಣಪ್ರಿಯನಾದ ಮಗನನ್ನು ಕಳೆದುಕೊಂಡ ಮೇಲೂ ನನ್ನ ಮನಸ್ಸು ಕಳವಳಗೊಳ್ಳದೆ ಇರುವುದು ಹೇಗೆ ಸಾದ್ಯ?" ಎಂದನು.

೬. ಆಗ ಬುದ್ಧ "ಹೌದು ನಮಗೆ ತೀರಾ ಪ್ರಿಯರಾದವರು ದುಃಖ ಹಾಗೂ ಸಂತಾಪ, ನೋವು, ಯಾತನೆ ಹಾಗೂ ಕ್ಲೇಶವನ್ನು ಉಂಟುಮಾಡುತ್ತಾರೆ" ಎನ್ನುತ್ತಾರೆ.

೭. ಕೋಪಗೊಂಡ ಗೃಹಸ್ಥ "ಇಂಥ ಮಾತನ್ನು ಯಾರು ತಾನೇ ಒಪ್ಪುತ್ತಾರೆ. ನಮಗೆ ಪ್ರಿಯರಾದವರು ನಮಗೆ ಸಂತೋಷವನ್ನು ಹಾಗೂ ಹರುಷವನ್ನೂ ಉಂಟುಮಾಡುತ್ತಾರೆ" ಎನ್ನುತ್ತಾನೆ.

೮. ಹೀಗೆ ಹೇಳುತ್ತಾ ಕೋಪಗೊಂಡ ಆ ಗೃಹಸ್ಥನು ಬುದ್ಧನ ಮಾತುಗಳನ್ನು ಮುಂದಕ್ಕೆ ಕೇಳಿಸಿಕೊಳ್ಳದೆಯೇ ಎದ್ದು ಹೊರಟುಹೋಗುತ್ತಾನೆ.

೯. ಹತ್ತಿರದಲ್ಲಿಯೇ ಕೆಲವು ಜೂಜುಕೋರರು ಜೂಜಾಡುತ್ತಿದ್ದರು. ಅವರ ಬಳಿಗೆ ಬಂದ ಗೃಹಸ್ಥನು, ತಾನು ಬುದ್ಧನ ಬಳಿಗೆ ಹೋಗಿ ತನ್ನ ದುಃಖವನ್ನು ತೋಡಿಕೊಂಡಿದ್ದನ್ನೂ ಹಾಗೂ ಬುದ್ಧನ ಉತ್ತರವನ್ನೂ, ಅದನ್ನು ಕೇಳಿ ತಾನು ಕೋಪಗೊಂಡು ಎದ್ದು ಬಂದದ್ದನ್ನೂ ಹೇಳುತ್ತಾನೆ.

೧೦. ನಮ್ಮ ಪ್ರಿಯರು ನಮಗೆ ಸಂತೋಷವನ್ನು ಉಂಟುಮಾಡುತ್ತಾರೆ ಎಂಬ ಗೃಹಸ್ಥನ ಅಭಿಪ್ರಾಯವನ್ನು ಆ ಜೂಜುಕೋರರು ಒಪ್ಪಿಕೊಳ್ಳುತ್ತಾರೆ. ಆಗ ಗೃಹಸ್ಥನಿಗೆ ಈ ಜೂಜುಕೋರರು ತನ್ನ ಪರವಾಗಿದ್ದಾರೆ ಎಂದು ಮನದಟ್ಟಾಗುತ್ತದೆ.

೧೧. ನಮಗೆ ಪ್ರಿಯರಾದವರು ನಮಗೆ ದುಃಖವುಂಟುಮಾಡುತ್ತಾರೆ ಎಂದು ಬುದ್ಧ ಹೇಳಿದ ಎಂಬ ವಿಚಾರ ಕಿವಿಯಿಂದ ಕಿವಿಗೆ ಹೋಗಿ ಅರಮನೆಯನ್ನು ತಲುಪಿತು. ರಾಣಿ ಮಲ್ಲಿಕಾ ಬಳಿ ಈ ವಿಚಾರವನ್ನು ಪ್ರಸ್ತಾಪಿಸಿದ.

೧೨. "ಭಗವಾನರು ಹಾಗೆ ಹೇಳಿದ್ದಾರೆ ಅಂದಮೇಲೆ ಅದು ಸತ್ಯವಿರಲೇಬೇಕು" ಎಂದಳು ಮಲ್ಲಿಕಾ.

೧೩. "ಗುರುವನ್ನು ಅಂಧಶ್ರದ್ಧೆಯಿಂದ ಅನುಸರಿಸುವ ಶಿಷ್ಯ, ಗುರು ಹೇಳಿದ್ದಕ್ಕೆಲ್ಲಾ 'ಹೌದು, ಭಗವಾನ್: ಹೌದು' ಎಂದು ಒಪ್ಪಿಕೊಳ್ಳುತ್ತಾನೆ. ನೀನು ಕೂಡ ಅದೇ ರೀತಿ ಗೌತಮ ಹೇಳಿದ್ದಕ್ಕೆಲ್ಲಾ 'ಭಗವಾನರು ಹೇಳಿದ ಮೇಲೆ ಅದು ಸರಿ ಇರಲೇಬೇಕು' ಎಂದು ಎಲ್ಲವನ್ನು ಒಪ್ಪಿಕೊಳ್ಳುತ್ತಿದೀಯೆ. ಹೊರಟು ಹೋಗು' ಎನ್ನುತ್ತಾನೆ.

೧೪. ಆಗ ಅವಳು ಬ್ರಾಹ್ಮಣ ನಲಿಧ್ಯಾನನನ್ನು ಕರೆದು ಬುದ್ಧನ ಬಳಿಗೆ ಹೋಗಿ ತನ್ನ ಹೆಸರನ್ನು ಹೇಳಿ, ಅವನ ಕುಶಲವನ್ನು ವಿಚಾರಿಸಿ, ಮೇಲೆ ಹೇಳಿದ ಮಾತುಗಳು ನಿಜವಾಗಿ ಬುದ್ಧನವೇ ಎಂದು ವಿಚಾರಿಸಿಕೊಂಡು ಬರಲು ಕಳುಹಿಸಿಕೊಡುತ್ತಾಳೆ.

೧೫. ಜೊತೆಗೆ ಬುದ್ಧನ ಮಾತುಗಳನ್ನು ಗಮನವಿಟ್ಟು ಕೇಳಿಕೊಂಡು, ಅವನ ಉತ್ತರವನ್ನು ಜಾಗರೂಕತೆಯಿಂದ ವರದಿ ಮಾಡುವಂತೆ ಹೇಳುತ್ತಾಳೆ.

೧೬. ರಾಣಿಯ ಆಜ್ಞೆಗೆ ಅನುಸಾರವಾಗಿ ಆ ಬ್ರಾಹ್ಮಣ ಹೋಗಿ ಬುದ್ಧನನ್ನು ಇಂಥ ಮಾತನ್ನು ಆತ ಆಡಿದ್ದು ದಿಟವೇ ಎಂದು ಕೇಳಿದನು.

೧೭. "ಹೌದು ಬ್ರಾಹ್ಮಣ; ನಮಗೆ ಪ್ರಿಯರಾದವರು ನಮಗೆ ನೋವು, ದುಃಖ, ಯಾತನೆ, ಕ್ಲೇಷವನ್ನು ಉಂಟುಮಾಡುತ್ತಾರೆ. ಅದಕ್ಕೊಂದು ಪುರಾವೆ ಇಲ್ಲಿದೆ."

೧೮. "ಶ್ರಾವಸ್ತಿಯ ಮಹಿಳೆಯೊಬ್ಬಳ ತಾಯಿಯು ತೀರಿಹೋದಳು. ತಾಯಿಯ ಸಾವಿನ ದುಃಖದಿಂದ ಮತಿಗೆಟ್ಟಂತಾದ ಮಗಳು ಬೀದಿ ಬೀದಿ, ಗಲ್ಲಿ ಗಲ್ಲಿ ಅಲೆಯುತ್ತಾ 'ನನ್ನ ತಾಯಿಯನ್ನು ಕಂಡಿದ್ದೀರಾ, ನನ್ನ ತಾಯಿಯನ್ನು ಕಂಡಿದ್ದೀರಾ?' ಎಂದು ಕೇಳತೊಡಗಿದಳು."

೧೯. "ಮತ್ತೊಂದು ಪುರಾವೆಯೆಂದರೆ, ಶ್ರಾವಸ್ತಿಯಲ್ಲಿ ತಂದೆ, ತಾಯಿ, ಗಂಡ, ಮಗ, ಮಗಳು, ಸಹೋದರ ಹಾಗೂ ಸಹೋದರಿಯನ್ನು ಕಳೆದುಕೊಂಡ ಹೆಣ್ಣೊಬ್ಬಳು ತಲೆಕೆಟ್ಟು, ತನ್ನ ಆತ್ಮೀಯರನ್ನು ಪ್ರೀತಿಪಾತ್ರರನ್ನು ಯಾರಾದರೂ ಕಂಡಿದ್ದೀರಾ ಎಂದು ಕೇಳತೊಡಗಿದಳು.

೨೦. "ಇನ್ನೊಂದು ಪುರಾವೆಯೆಂದರೆ, ಶ್ರಾವಸ್ತಿಯ ಪುರುಷನೊಬ್ಬನು ತನ್ನವರೆಲ್ಲರನ್ನೂ ಕಳೆದುಕೊಂಡು ಹುಚ್ಚನಂತೆ ಹಾದಿ ಬೀದಿ ಸುತ್ತುತ್ತಾ ತಾನು ಕಳೆದುಕೊಂಡ ಪ್ರಿಯಬಾಂಧವರನ್ನು ಕಂಡಿದ್ದೀರಾ

ಎಂದು ಕೇಳುತ್ತಿದ್ದನು.

೨೧. "ಇನ್ನೂ ಒಂದು ಪುರಾವೆಯೆಂದರೆ, ಇದೇ ರೀತಿಯಲ್ಲಿ ತನ್ನ ಬಂಧುಬಾಂಧವರನ್ನು ಭೇಟಿಯಾಗಲೆಂದು ಶ್ರಾವಸ್ತಿಯ ಮಹಿಳೆಯೊಬ್ಬಳು ಬಂದಿದ್ದಳು. ಅವಳ ಬಂಧುಗಳು ಅವಳನ್ನು ಅವಳ ಪತಿಯಿಂದ ಬೇರ್ಪಡಿಸಿ, ಒಲ್ಲದ ಬೇರೊಬ್ಬ ಗಂಡಿಗೆ ಕೊಟ್ಟು ಅವಳ ಮದುವೆ ಮಾಡಬೇಕೆಂದಿದ್ದರು.

೨೨. "ಅವಳು ಪತಿಯೊಂದಿಗೆ ಈ ವಿಚಾರವನ್ನು ಹೇಳಿದಾಗ ಅವನು ತಾವಿಬ್ಬರೂ ಒಟ್ಟಿಗೆ ಸಾಯಬೇಕೆಂದು ಯೋಚಿಸಿ, ಅವಳನ್ನೂ ತುಂಡರಿಸಿ ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ."

೨೩. ಈ ವಿಚಾರವೆಲ್ಲವನ್ನು ನಲಿಧ್ಯಾನನು ರಾಣಿಗೆ ಚಾಚೂತಪ್ಪದೆ ವರದಿ ಮಾಡುತ್ತಾನೆ.

೨೪. ಆಗ ರಾಣಿ ದೊರೆಯ ಬಳಿಗೆ ಹೋಗಿ 'ನಿನಗೆ ನಿನ್ನ ಏಕೈಕ ಪುತ್ರಿಯಾದ, ರಾಜಕುಮಾರಿ ವಜಿರಳನ್ನು ಕಂಡರೆ ತುಂಬಾ ಪ್ರೀತಿಯಿಲ್ಲವೇ?"ಎಂದು ಕೇಳಿದಳು.

೨೫. 'ವಜಿರಳಿಗೆ ಏನಾದರೂ ಆದರೆ ನಿನಗೆ ದುಃಖವಾಗುತ್ತದೋ ಇಲ್ಲವೋ?' ಎಂದು ಕೇಳಿದಳು ಮತ್ತು 'ಅವಳಿಗೆ ಏನಾದರೂ ಆದರೆ ಅದು ನನ್ನ ಬದುಕಿನಲ್ಲಿ ಬಹು ದೊಡ್ಡ ಆಘಾತವಾಗುತ್ತದೆ' ಎಂದು ಹೇಳಿದನು.

೨೬. 'ನಿನಗೆ ನನ್ನನ್ನು ಕಂಡರೆ ಪ್ರೀತಿಯಿಲ್ಲವೆ?' ಎಂದಳು. ಅದಕ್ಕೆ ದೊರೆ 'ಹೌದು, ಇದೆ' ಎಂದ"

೨೭. 'ನನಗೇನಾದರೂ ಆದರೆ ನಿನಗೆ ದುಃಖವಾಗುವುದಿಲ್ಲವೆ?' 'ನೀನಗೇನಾದರೂ ಆದರೆ ಮಾತ್ರ ನನಗೆ ಬಹುದೊಡ್ಡ ಆಘಾತವಾಗುತ್ತದೆ' ಎಂದ".

೨೮. 'ಕಾಶಿ ಮತ್ತು ಕೋಸಲದ ಪ್ರಜೆಗಳನ್ನು ಕಂಡರೆ ನಿನಗೆ ಪ್ರೀತಿಯಿಲ್ಲವೆ? ಅವರಿಗೆ ಏನಾದರೂ ಆದರೆ ನಿನಗೆ ಬೇಸರವಾಗುವುದಿಲ್ಲವೆ?' ಎಂದು ಮಲ್ಲಿಕಾ ಕೇಳಿದ್ದಕ್ಕೆ ಅವನು 'ಆಗುತ್ತದೆ' ಎಂದನು.

೨೯. 'ಅವರಿಗೇನಾದರೂ ಆದರೆ ನನಗೆ ಬೇಜಾರಾಗದೇ ಹೇಗೆ ಸಾಧ್ಯ?' ಎಂದನು ದೊರೆ.

೩೦. 'ತಥಾಗತನು ಅದಕ್ಕಿಂತ ಭಿನ್ನವಾದುದೇನನ್ನು ಹೇಳಿದ?' ಎಂದು ಮಲ್ಲಿಕಾ ದೊರೆಯನ್ನು ಕೇಳಿದಳು. 'ಇಲ್ಲ ಮಲ್ಲಿಕಾ' ಎಂದು ದೊರೆ ಪಶ್ಚಾತ್ತಾಪದಿಂದ ಹೇಳಿದ.

## ೪. ಗರ್ಭಿಣಿಯೊಬ್ಬಳ ಹೆಬ್ಬಯಕೆ

೧. ಒಮ್ಮೆ ಬುದ್ಧ ಭಗ್ಗ ಪ್ರಾಂತ್ಯದ, ಸುಂಸುಮರಗಿರ ಎಂಬಲ್ಲಿ ಭೇಸ್ಕಲ ತೋಪಿನಲ್ಲಿ ತಂಗಿದ್ದ. ಅಲ್ಲಿನ ಮೃಗವನದಲ್ಲಿ ಬೋಧಿ ರಾಜಕುಮಾರನ ಅರಮನೆ, ಕಮಲ–ಮಹಲನ್ನು ಆಗಷ್ಟೇ ಕಟ್ಟಿಮುಗಿಸಿದ್ದರು. ಆದರೆ ಅಲ್ಲಿ ಯಾವ ಭಿಕ್ಷುವಾಗಲಿ, ಬ್ರಾಹ್ಮಣನಾಗಲಿ ಅಥವಾ ಇತರರ್ಯಾರೂ ವಾಸ ಮಾಡುತ್ತಿರಲಿಲ್ಲ.

೨. ರಾಜ ಸಂಕಿಕ–ಪುತ್ತ ಎಂಬ ಬ್ರಾಹ್ಮಣ ಯುವಕನೊಬ್ಬನನ್ನು ಕರೆದು, "ಬುದ್ಧನ ಬಳಿಗೆ ಹೋಗು, ನನ್ನ ಪರವಾಗಿ ಅವನ ಪಾದಗಳಿಗೆ ನಮಸ್ಕರಿಸಿ, ಅವನ ಯೊಗಕ್ಷೇಮವನ್ನು ವಿಚಾರಿಸು. ದಯಮಾಡಿ ನಾಳೆಯ ದಿನ ನನ್ನೊಂದಿಗೆ ಭೋಜನಕ್ಕೆ ಬರುವಂತೆ ವಿನಂತಿಸು. ಜೊತೆಗೆ ಅವರ ಪರಿವಾರದವರನ್ನೂ ಕರೆದು ತರಲು ವಿನಂತಿಸು" ಎಂದು ತಿಳಿಸಿದನು.

೩. ಬ್ರಾಹ್ಮಣ ಯುವಕ ರಾಜನ ಕೋರಿಕೆಯನ್ನು ಬುದ್ಧನಿಗೆ ತಿಳಿಸಿದನು. ಬುದ್ಧ ಮೌನವಾಗಿಯೇ ತನ್ನ ಸಮ್ಮತಿಯನ್ನು ಸೂಚಿಸಿದನು. ಬುದ್ಧನ ಸಮ್ಮತಿಯನ್ನು ರಾಜನಿಗೆ ತಿಳಿಸಲಾಯಿತು.

೪. ರಾತ್ರಿ ಕಳೆಯಿತು. ರಾಜ ಅತ್ಯುತ್ತಮವಾದ ಭೋಜನವನ್ನು ತಯಾರಿಸುವಂತೆ ಆಜ್ಞೆ ಮಾಡಿದ. ಹಾಗೂ ಕಮಲ–ಮಹಲ್ ಮಹಡಿಯನ್ನು ಮೆಟ್ಟಲುಗಳನ್ನು ಬಿಳಿಯ ರತ್ನಗಂಬಳಿಯಿಂದ ಅಲಂಕರಿಸಲು ಹೇಳಿದ. ನಂತರ ಬ್ರಾಹ್ಮಣ ಯುವಕನನ್ನು ಕರೆದು, ಎಲ್ಲಾ ಸಿದ್ಧವಾಗಿದೆ ಎಂದು ಬುದ್ಧನಿಗೆ ತಿಳಿಸಿ ಬರಲು ಹೇಳಿದ.

೫. ವಿಷಯ ತಿಳಿದ ಬುದ್ಧ ಆ ದಿನ ಬೆಳಿಗ್ಗೆ ವಸ್ತ್ರವನ್ನು ಧರಿಸಿ, ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು, ರಾಜ ಕಾಯುತ್ತಿದ್ದ ಅರಮನೆಯ ಹೆಬ್ಬಾಗಿಲಿಗೆ ಬಂದ.

೬. ಬುದ್ಧ ಬರುತ್ತಿರುವುದನ್ನು ಗಮನಿಸಿದ ರಾಜ ಮುಂದೆ ಬಂದು, ಬುದ್ಧನಿಗೆ ನಮಸ್ಕರಿಸಿ, ಅವನ ಪರಿವಾರವನ್ನು ಅರಮನೆಯ ಒಳಕ್ಕೆ ಕರೆದೊಯ್ದನು.

೭. ಮೆಟ್ಟಿಲುಗಳ ಬಳಿ, ಬುದ್ಧ ಮೌನವಾಗಿ ನಿಂತ. ಆಗ ದೊರೆ "ರತ್ನಗಂಬಳಿಯ ಮೇಲೆ ನಡೆದು ಬರಲು, ಭಗವಾನರಲ್ಲಿ ಮನವಿ ಮಾಡಿಕೊಳ್ಳುತ್ತೇನೆ; ನನ್ನ ಶ್ರೇಯಸ್ಸು ಹಾಗೂ ಅಭಿವೃದ್ಧಿಗಾಗಿ, ತಥಾಗತರು ರತ್ನಗಂಬಳಿಯ ಮೇಲೆ ನಡೆದುಬರಲಿ ಎಂದು ನಾನು ಬಿನ್ನವಿಸಿಕೊಳ್ಳುತ್ತೇನೆ" ಎಂದು ಪ್ರಾರ್ಥಿಸುತ್ತಾನೆ. ಆದರೆ ಬುದ್ಧ ಸುಮ್ಮನೆಯೇ ನಿಂತಿದ್ದ.

೮. ಎರಡನೆಯ ಸಲ ರಾಜ ಮನವಿ ಮಾಡಿಕೊಂಡಾಗಲೂ ಬುದ್ಧ ಹಾಗೆಯೇ ನಿಂತಿದ್ದ. ಮೂರನೆಯ ಸಲ ವಿನಂತಿಸಿಕೊಂಡಾಗ ಬುದ್ಧ ಆನಂದನ ಕಡೆ ನೋಡಿದ.

೯. ಆನಂದನಿಗೆ ಸಮಸ್ಯೆ ಅರ್ಥವಾಯಿತು. ರತ್ನಗಂಬಳಿಯ ಮೇಲೆ ಭಗವಾನರು ನಡೆಯುವುದಿಲ್ಲ, ಆದ್ದರಿಂದ ಅದನ್ನು ಸುತ್ತಿ ತೆಗೆದಿಡಿ ಎಂದು ಹೇಳಿದ. ಆತ ಅನಂತರ ಅವನನ್ನು ಹಿಂಬಾಲಿಸುವವರನ್ನು ಗಮನದಲ್ಲಿಟ್ಟುಕೊಂಡಿದ್ದಾನೆ ಎಂದು ತಿಳಿಸಿದ.

೧೦. ಹಾಗಾಗಿ ರಾಜ ರತ್ನಗಂಬಳಿಯನ್ನು ಸುತ್ತಿ ತೆಗೆದಿಡಲು ಆಜ್ಞಾಪಿಸಿದ. ನಂತರ ಅರಮನೆಯಲ್ಲಿ ಮಹಡಿಯ ಮೇಲೆ ಆಸನಗಳನ್ನು ಸಿದ್ಧಪಡಿಸಲು ಹೇಳಿದ.

೧೧. ಮಹಡಿಯನ್ನೇರಿದ ಬುದ್ಧ ತನ್ನ ಅನುಯಾಯಿಗಳೊಂದಿಗೆ ಆಸನದಲ್ಲಿ ಕುಳಿತುಕೊಂಡ.

೧೨. ರಾಜನು, ಬುದ್ಧ ಹಾಗೂ ಅವನ ಶಿಷ್ಯರಿಗೆ ಪರಿಶುದ್ಧವಾದ ಹಾಗೂ ಅತ್ಯುತ್ಕೃಷ್ಟವಾದ ಭೋಜನವನ್ನು ಸ್ವತಃ ತಾನೇ ಬಡಿಸಿದನು.

೧೩. ಭಗವಾನರ ಊಟ ಮುಗಿದ ಮೇಲೆ ಬುದ್ಧನ ಪಾದದ ಬಳಿಯಲ್ಲಿ ಕುಳಿತುಕೊಂಡ ರಾಜಕುಮಾರ ಬೋಧಿ, ಭಗವಾನರಿಗೆ "ನಿಜವಾದ ಶ್ರೇಯಸ್ಸನ್ನು ಅಹಿತಕರವಾದ ವಸ್ತುಗಳ ಮೂಲಕ ಹುಡುಕಬೇಕೇ ಹೊರತು ಹಿತಕರವಾದ ವಸ್ತುಗಳ ಮೂಲಕ ಅಲ್ಲ ಎಂದು ನನಗನ್ನಿಸುತ್ತದೆ" ಎಂದನು.

೧೪. ಆಗ ಭಗವಾನರು "ಬಹಳ ಹಿಂದೆ ಅಂದರೆ ಜ್ಞಾನೋದಯವಾಗುವ ಮೊದಲು ನಾನೂ ಹಾಗೆಯೇ ಭಾವಿಸಿದ್ದೆ. ಆಗ ನಾನಿನ್ನು ಹರೆಯದ ಯುವಕನಾಗಿದ್ದೆ. ಕಪ್ಪು ಕೂದಲು ಹಾಗೂ ಅಪರಿಮಿತವಾದ ಸೌಂದರ್ಯವನ್ನು ಹೊಂದಿದ್ದೆ. ನನ್ನ ತಂದೆ–ತಾಯಿಯರು ಎಷ್ಟು ಗೋಗರೆದು ಅತ್ತರೂ ಅದನ್ನು ಲಕ್ಷಿಸದೆ ನನ್ನ ಕೂದಲು ಹಾಗೂ ಗಡ್ಡವನ್ನು ಬೋಳಿಸಿ ಹಳದಿ ಉಡುಗೆಯನ್ನು ತೊಟ್ಟು ಸಂನ್ಯಾಸಿಯಾಗಿ ಮನೆ ಬಿಟ್ಟು ದಿಕ್ಕಿಲ್ಲದ ಯಾತ್ರಿಯಾಗಿ ಹೊರಟುಬಿಟ್ಟೆ. ಒಳಿತನ್ನು ಹುಡುಕಿಕೊಂಡು, ಅನುಪಮವಾದ ಪರಮ ಶಾಂತಿಯನ್ನು ಪಡೆಯುವ ದಾರಿಯನ್ನು ಅರಿಸಿಕೊಂಡು ಹೊರಟ ಯಾತ್ರಾರ್ಥಿಯಾಗಿದ್ದೆ" ಎಂದರು.

೧೫. "ಆದರೆ ಈಗ ನನ್ನ ಅಭಿಪ್ರಾಯ ಬದಲಾಗಿದೆ. ಒಬ್ಬ ಮನುಷ್ಯನಿಗೆ ಬೌದ್ಧ ತತ್ತ್ವದ ಅರಿವಿದ್ದರೆ

ಸಾಕು. ಅವನು ಕೇಡನ್ನು ನಾಶ ಮಾಡಲು ಶಕ್ತನಾಗುತ್ತಾನೆ.

೧೬. ಆಗ ದೊರೆ "ಎಂಥ ತತ್ತ್ವ! ಆಹಾ ಎಂಥ ವ್ಯಾಖ್ಯಾನ! ಎಷ್ಟು ಸಲೀಸಾಗಿ ಅರ್ಥವಾಗುತ್ತದೆ" ಎಂದು ಬುದ್ಧನಿಗೆ ಹೇಳಿದನು.

೧೭. ಆಗ ಬ್ರಾಹ್ಮಣ ಯುವಕ ಶಂಕಕ ಪುತ್ರ ರಾಜಕುಮಾರನು ತಾನು ಅದನ್ನು ದೃಢೀಕರಿಸಿದ್ದರೂ, ತಾನು ಬುದ್ಧ ಹಾಗೂ ಅವನ ಧಮ್ಮದ ಅನುಯಾಯಿಯಾಗಲಾರೆ ಅಥವಾ ಅವನ ಸಂಘದ ಸದಸ್ಯನಾಗಲಾರೆ ಎಂದ.

೧೮. ಅದಕ್ಕೆ ರಾಜ "ಆ ರೀತಿ ಹೇಳಬೇಡ, ಸ್ನೇಹಿತ; ಹೇಳಬೇಡ, ನಾನು ನನ್ನ ತಾಯಿ ಸ್ವತಃ ಹೇಳುವುದನ್ನು ಕೇಳಿದ್ದೇನೆ. ಒಮ್ಮೆ ಭಗವಾನರು ಕೋಸಂಬಿಯಲ್ಲಿ ಗೋಸಿತ ಚೈತ್ರದಲ್ಲಿ ತಂಗಿದ್ದಾಗ, ಗರ್ಭಿಣಿಯಾಗಿದ್ದ ನನ್ನ ತಾಯಿ ಭಗವಾನರಲ್ಲಿಗೆ ಹೋಗಿ, ನಮಸ್ಕರಿಸಿ ಪಕ್ಕದಲ್ಲಿ ಕುಳಿತು ಭಗವಾನರಲ್ಲಿ 'ಹುಟ್ಟುವ ಮಗು ಗಂಡಾಗಿರಲಿ, ಹೆಣ್ಣಾಗಿರಲಿ, ಅದು ಭಗವಾನರ ಮತ್ತು ಅವರ ಧಮ್ಮದ ಅವರ ಸಂಘದ ಅನುಯಾಯಿಯಾಗುತ್ತದೆ; ಮತ್ತು ಭಗವಾನರು, ನನ್ನ ಮಗು ಬದುಕಿರುವವರೆಗೂ ಅದನ್ನು ಅನುಯಾಯಿಯಾಗಿ ಸ್ವೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ'; ಎಂದು ಹೇಳಿದ್ದಾಳೆ."

೧೯. "ಮತ್ತೊಮ್ಮೆ, ಭಗವಾನರು ಈ ಭಗ್ಗ ಪ್ರಾಂತ್ಯದ, ಸುಂಸುಮರ–ಗಿರದಲ್ಲಿ ಭೇಸ್ಕಲ ವನದ ಮೃಗೋದ್ಯಾನದಲ್ಲಿ ತಂಗಿದ್ದಾಗ ದಾದಿಯು ನನ್ನನ್ನು ಭಗವಾನರ ಬಳಿಗೆ ಎತ್ತಿಕೊಂಡು ಹೋಗಿ, ಅವರ ಮುಂದೆ ನಿಂತು: 'ನಿಮ್ಮ ಹಾಗೂ ನಿಮ್ಮ ಧಮ್ಮದ ಹಾಗೂ ನಿಮ್ಮ ಸಂಘದ ಅನುಯಾಯಿಯಾಗಬಯಸುವ ಬೋಧಿ ರಾಜಕುಮಾರ ಇಲ್ಲಿದ್ದಾನೆ' ಎಂದು ತಿಳಿಸಿದಳು."

೨೦. "ನಾನು ಈಗ ಮೂರನೆಯ ಬಾರಿ ಬುದ್ಧ ನಿಮ್ಮ ಶರಣಾಗಿದ್ದೇನೆ. ದಯವಿಟ್ಟು ನನ್ನನ್ನು ಬದುಕಿರುವವರೆಗೂ ತಮ್ಮ ಶಿಷ್ಯನಾಗಿ ಸ್ವೀಕರಿಸಿ ಎಂದು ಕೇಳಿಕೊಳ್ಳುತ್ತಾನೆ."

## ೫. ಕೆನಿಯನ ಸ್ವಾಗತ

೧. ಅಪನಾತ್ ಎಂಬಲ್ಲಿ ಸೇಲ ಎಂಬ ಬ್ರಾಹ್ಮಣನೊಬ್ಬ ವಾಸವಾಗಿದ್ದ. ಅವನು ಮೂರು ವೇದಗಳಲ್ಲೂ, ಕಮ್ಮಗಳಲ್ಲಿ ಮತ್ತದರ ಶಬ್ದಾರ್ಥ ನಿರೂಪಣೆಯಲ್ಲಿ ಪಾರಂಗತನಾಗಿದ್ದ. ಧ್ವನಿಶಾಸ್ತ್ರ, ನಿರುಕ್ತಿ, ಐದನೆಯ ಜ್ಞಾನಶಾಖೆಯಾಗಿ ವೃತ್ತಾಂತಗಳಲ್ಲಿ ಪರಿಣತಿ ಹೊಂದಿದ್ದನು. ಅವನಿಗೆ ಭಾಷ್ಯದ ಪರಿಜ್ಞಾನವಿತ್ತು. ಕುತರ್ಕನಿಪುಣ ಹಾಗೂ ಮಹಾಪುರುಷನ ಲಕ್ಷಣಗಳನ್ನು ಬಲ್ಲವನಾಗಿದ್ದನು. ತನ್ನ ಮುನ್ನೂರು ಜನ ಬ್ರಾಹ್ಮಣ ಶಿಷ್ಯರಿಗೆ ಮಂತ್ರಾಕ್ಷರಗಳನ್ನು ಕಲಿಸುತ್ತಿದ್ದನು.

೨. ಕೆನಿಯನು ಅಗ್ನಿಯ ಆರಾಧಕನಾಗಿದ್ದ. ಬ್ರಾಹ್ಮಣ ಸೇಲನ ಶಿಷ್ಯನಾಗಿದ್ದ. ಸೇಲನು ತನ್ನ ಮುನ್ನೂರು ಶಿಷ್ಯರೊಂದಿಗೆ ಹೊರಟು, ಅನೇಕ ಬಗೆಯಲ್ಲಿ ಕಾರ್ಯನಿರತರಾಗಿದ್ದ ಎಲ್ಲಾ ಅಗ್ನಿ ಆರಾಧಕರನ್ನೂ ವೀಕ್ಷಿಸಿದ. ಅವರೊಡನೆ ಸ್ವತಃ ಕೆನಿಯನೇ ವೃತ್ತಗಳ ರಚನೆಯಲ್ಲಿ ತೊಡಗಿಕೊಂಡಿದ್ದನ್ನು ನೋಡಿದ.

೩. ಇದನ್ನು ಗಮನಿಸಿದ ಬ್ರಾಹ್ಮಣನೊಬ್ಬ ಕೆನಿಯನಿಗೆ ಕೇಳುತ್ತಾನೆ: "ಏನಿದೆಲ್ಲಾ ? ಮದುವೆಯ ಔತಣವೇ? ಅಥವಾ ಮಹಾಯಜ್ಞವೇನಾದರೂ ನಡೆಯಲಿದೆಯೇ? ಎಲ್ಲ, ನಾಳೆಯೇನಾದರೂ ಮಗಧ ರಾಜ್ಯದ ದೊರೆ ಸೆನಿಯ ಬಿಂಬಸಾರ, ಮತ್ತವನ ಪರಿವಾರವನ್ನು ಭೋಜನಕ್ಕೆ ಆಮಂತ್ರಿಸಿರುವೆಯಾ?"

೪. "ಇಲ್ಲ ಮದುವೆಯೂ ಇಲ್ಲ, ದೊರೆ ಮತ್ತವನ ಪರಿವಾರವನ್ನು ಊಟಕ್ಕೂ ಕರೆದಿಲ್ಲ. ನಾನು ಬಹಳ

ದೊಡ್ಡ ಸಮಾರಾಧನೆಯನ್ನು ಹಮ್ಮಿಕೊಂಡಿದ್ದೇನೆ. ಏಕೆಂದರೆ ಭಿಕ್ಷಾಟನೆಗಾಗಿ ಭಗವಾನ್ ಬುದ್ಧನು ಸಾವಿರದ ಇನ್ನೂರ ಐವತ್ತು ಭಿಕ್ಷುಗಳೊಡನೆ ಆಪಣ ಪ್ರಾಂತ್ಯಕ್ಕೆ ಬಂದಿದ್ದಾನೆ."

೫. "ಈಗಿರುವ ಸುದ್ದಿಯ ಪ್ರಕಾರ ಗೌತಮನು, ತಥಾಗತನಾಗಿದ್ದಾನೆ ಅಂದರೆ ಜ್ಞಾನೋದಯ ಹೊಂದಿದವನು ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ."

೬. "ಅವನನ್ನು ಹಾಗೂ ಅವನ ಅನುಯಾಯಿಗಳನ್ನು ನಾಳೆ ಇಲ್ಲಿಗೆ ಔತಣಕ್ಕೆ ಆಹ್ವಾನಿಸಿದ್ದೇನೆ. ಈಗ ಅವನಿಗಾಗಿ ಭೋಜನವನ್ನು ಸಿದ್ಧಪಡಿಸುತ್ತಿದ್ದೇನೆ."

೭. "ಅವನಿಗೆ ಜ್ಞಾನೋದಯವಾಗಿದೆ ಎಂದು ನೀನೂ ಭಾವಿಸುತ್ತೀಯಾ?" ಎಂದು ಸೇಲನು ಕೆನಿಯನನ್ನು ಕೇಳಿದನು. "ಹೌದು, ನಾನೂ ಹಾಗೆ ನಂಬಿದ್ದೇನೆ" ಎಂದನು ಕೆನಿಯ. "ನಿಜವಾಗಿಯೂ?'ಎಂದು ಕೇಳಿದನು ಸೇಲ. "ಹೌದು, ಖಂಡಿತವಾಗಿಯೂ" ಎಂದನು ಕೆನಿಯ.

## ೬. ಪ್ರಸೇನಜಿತನು ಭಗವಾನರನ್ನು ಪ್ರಶಂಸಿಸಿದ್ದು.

೧. ಒಮ್ಮೆ ತಥಾಗತನು ಶ್ರಾವಸ್ತಿಯ ಬಳಿಯಲ್ಲಿದ್ದ ಜೇತವನದಲ್ಲಿ ಅನಾಥಪಿಂಡಿಕನ ಉದ್ಯಾನದಲ್ಲಿ ತಂಗಿದ್ದನು.

೨. ಕೋಸಲದ ದೊರೆ ಪ್ರಸೇನಜಿತನು ಹುಸಿ ಯುದ್ಧದಲ್ಲಿ ವಿಜಯಿಯಾಗಿ ಗೆದ್ದು ಆಗಷ್ಟೇ ಹಿಂದಿರುಗಿದನು. ಮರಳಿ ಬರುವಾಗ ಆ ವನದ ಬಳಿ ಬಂದು ರಥ ಸಾಗುವಷ್ಟು ದೂರ ರಥದಲ್ಲಿ ಹೋಗಿ ಅಲ್ಲಿಂದ ಮುಂದೆ ರಥದಿಂದ ಇಳಿದು ಕಾಲ್ನಡಿಗೆಯಲ್ಲಿ ಬುದ್ಧನ ಬಳಿಗೆ ಹೋದನು.

೩. ಅಲ್ಲಿ ಹಲವಾರು ಭಿಕ್ಷುಗಳು ಬಯಲಿನಲ್ಲಿ ಈ ಕಡೆಯಿಂದ ಆ ಕಡೆಗೆ ಸುತ್ತಾಡುತ್ತಿದ್ದರು. ಕೋಸಲದ ದೊರೆ ಪ್ರಸೇನಜಿತನು ಅವರ ಬಳಿಗೆ ಹೋಗಿ "ಮಾನ್ಯರೇ ತಥಾಗತನಾದ, ಅರ್ಹಂತನಾದ ಬುದ್ಧ ಭಗವಾನನು ಎಲ್ಲಿದ್ದಾನೆ? ಅವನನ್ನು ಕಾಣಬೇಕೆಂದು ನಾನು ಹಂಬಲಿಸುತ್ತಿದ್ದೇನೆ" ಎಂದು ಅವರನ್ನು ಕೇಳಿದನು.

೪. "ಮಹಾರಾಜ, ಅಗೋ, ಆ ಕುಟೀರದಲ್ಲಿ ಅವನಿದ್ದಾನೆ, ಕದವನ್ನು ಹಾಕಿದ್ದಾರೆ. ನೀವು ಹೆದರದೆ ಶಾಂತವಾಗಿ ಹೋಗಿ ಅಂಗಳದಲ್ಲಿ ನಿಂತು ಒಮ್ಮೆ ಕೆಮ್ಮಿ, ಅಗುಳಿಯನ್ನು ಸದ್ದುಮಾಡಿ. ತಥಾಗತರು ನಿಮಗೆ ಬಾಗಿಲು ತೆರೆಯುತ್ತಾರೆ."

೫. ಅದೇ ರೀತಿಯಲ್ಲಿ ಪ್ರಸೇನಜಿತನು ಕುಟೀರಕ್ಕೆ ಹೋಗಿ ಒಮ್ಮೆ ಕೆಮ್ಮಿ, ಅಗುಳಿಯನ್ನು ಬಡಿದಾಗ ತಥಾಗತರು ಬಂದು ಬಾಗಿಲನ್ನು ತೆಗೆದರು.

೬. ಆಗ ಪ್ರಸೇನಜಿತನು ಬುದ್ಧನ ಕಾಲಿಗೆರಗಿ, ಅವನ ಪಾದಗಳನ್ನು ಎರಡು ಕೈಗಳಿಂದಲೂ ಸ್ಪರ್ಶಿಸಿ, ಮುತ್ತಿಕ್ಕಿದನು. ನಂತರ, "ಭಗವಾನ್, ನಾನು ಕೋಸಲದ ದೊರೆ ಪ್ರಸೇನಜಿತ" ಎಂದು ತನ್ನ ಪರಿಚಯವನ್ನು ಮಾಡಿಕೊಂಡನು.

೭. "ಮಹಾರಾಜ, ನನ್ನಲ್ಲಿ ಯಾವ ವಿಶೇಷವನ್ನು ಕಂಡು ಇಷ್ಟೊಂದು ಅಗಾಧವಾದ ಗೌರವಗಳನ್ನು ನನಗೆ ತೋರಿಸುತ್ತಿರುವೆ ಮತ್ತು ಈ ದೇಹಕ್ಕೆ ಇಷ್ಟೊಂದು ಆದರದ ಪ್ರಣಾಮಗಳನ್ನು ಸಲ್ಲಿಸುತ್ತಿರುವೆ?" ಎಂದು ಭಗವಾನರು ಅವನನ್ನು ಕೇಳಿದರು.

# ಪರ್ವ - ೭
# ಯಾತ್ರಿಕನ ಅಂತಿಮ ಪ್ರಯಾಣ

## ಭಾಗ : ೧
## ಆತ್ಮೀಯರೊಂದಿಗೆ ಭೇಟಿ

೧. ಬುದ್ಧನ ಪ್ರವಚನ ಕೇಂದ್ರಗಳು
೨. ಬುದ್ಧನು ಭೇಟಿ ನೀಡಿದ ಸ್ಥಳಗಳು
೩. ತಾಯಿ ಹಾಗೂ ಮಗನ ನಡುವೆ, ಹೆಂಡತಿ ಮತ್ತು ಗಂಡನ ನಡುವೆ ಕೊನೆಯ ಭೇಟಿ
೪. ತಂದೆ–ಮಗನ ಕೊನೆಯ ಭೇಟಿ
೫. ಬುದ್ಧ ಹಾಗೂ ಸಾರಿಪುತ್ರನ ಕೊನೆಯ ಭೇಟಿ

## ೧. ಬುದ್ಧನ ಪ್ರವಚನ ಕೇಂದ್ರಗಳು

೧. ಧರ್ಮಪ್ರಚಾರಕ್ಕಾಗಿ ದೂತರನ್ನು ನೇಮಕ ಮಾಡಿದ ನಂತರ ಬುದ್ಧನು ಒಂದೇ ಕಡೆಯಲ್ಲಿ ಉಳಿದುಬಿಡಲಿಲ್ಲ. ತಾನೂ ಕೂಡ ಧರ್ಮಪ್ರಚಾರದ ಕಾರ್ಯವನ್ನು ಮುಂದುವರಿಸುತ್ತಿದ್ದ.

೨. ಭಗವಾನನು ಕೆಲವು ಸ್ಥಳಗಳನ್ನು ತನ್ನ ಧರ್ಮಪ್ರಚಾರದ ಮುಖ್ಯ ಕೇಂದ್ರಗಳನ್ನಾಗಿ ಮಾಡಿಕೊಂಡಂತೆ ತೋರುತ್ತದೆ.

೩. ಅವುಗಳಲ್ಲಿ ಮುಖ್ಯವಾದವು ಶ್ರಾವಸ್ತಿ ಮತ್ತು ರಾಜಗೃಹ.

೪. ಅವನು ಶ್ರಾವಸ್ತಿಗೆ ಸುಮಾರು ೭೫ ಬಾರಿ ಮತ್ತು ರಾಜಗೃಹಕ್ಕೆ ೨೪ ಬಾರಿ ಭೇಟಿ ನೀಡಿದ್ದ.

೫. ಇನ್ನು ಕೆಲವು ಸ್ಥಳಗಳನ್ನು ಕಿರಿಯ ಕ್ರೇಂದ್ರಗಳನ್ನಾಗಿ ಮಾಡಿಕೊಂಡ.

೬. ಆ ಕೇಂದ್ರಗಳು–ಅವನು ೬ ಬಾರಿ ಭೇಟಿ ನೀಡಿದ ಕಪಿಲವಸ್ತು, ೬ ಬಾರಿ ಭೇಟಿ ನೀಡಿದ ವೈಶಾಲಿ, ೪ ಬಾರಿ ಹೋಗಿದ್ದ ಕಮಾಸನಧಮ್ಮ.

## ೨. ಬುದ್ಧನು ಭೇಟಿ ನೀಡಿದ ಸ್ಥಳಗಳು

೧. ಮೇಲೆ ಹೇಳಿದ ಹಿರಿಯ ಕಿರಿಯ ಕೇಂದ್ರಗಳಲ್ಲದೆ, ತಥಾಗತನು ಧರ್ಮಪ್ರಚಾರದ ಸಂದರ್ಭದಲ್ಲಿ ಇನ್ನೂ ಹಲವಾರು ಸ್ಥಳಗಳಿಗೆ ಭೇಟಿ ನೀಡಿದನು.

೨. ಅವನು ಉಕ್ಕಥ, ನಾಡಿಕ, ಸಾಲ, ಅಸ್ಸಪುರ, ಗೋಷಿತರಂ, ನಲಂದ, ಅಪ್ಪಣ, ಎತುಮ ಮುಂತಾದ ಸ್ಥಳಗಳಿಗೂ ಭೇಟಿ ನೀಡಿದನು.

೩. ಅವನು ಒಪಾಸದ, ಇಚ್ಚ–ನಾಕುಲ, ಚಂಡಾಲಕುಪ್ಪ, ಕುಶಿನಾರ, ಮುಂತಾದ ಸ್ಥಳಗಳಿಗೂ ಹೋಗಿದ್ದನು.

೪. ಇವುಗಳಲ್ಲಿ ದೇಹದಹ, ಪಾವಾ, ಅಂಬಾಸದನ, ಸೇತವ್ಯ, ಆನುಪೇಯ ಮತ್ತು ಉಗುನ್ಮ ಮುಂತಾದ ಗ್ರಾಮಗಳಿಗೂ ಭೇಟಿ ನೀಡಿದನು.

೫. ಅವನು ಭೇಟಿ ನೀಡಿದ ಸ್ಥಳಗಳನ್ನು ಗಮನಿಸಿದರೆ, ಅವನು ಶಾಕ್ಯ ದೇಶ, ಕುರುದೇಶ ಹಾಗೂ ಅಂಗ ದೇಶಗಳಲ್ಲೆಲ್ಲಾ ಪ್ರಯಾಣ ಮಾಡಿದ್ದ ಎಂಬುದು ಸ್ಪಷ್ಟವಾಗುತ್ತದೆ.

೬. ಸ್ಥೂಲವಾಗಿ ಹೇಳುವುದಾದರೆ ಹೆಚ್ಚು ಕಡಿಮೆ ಇಡೀ ಉತ್ತರ ಭಾರತವನ್ನು ಭಗವಾನ್ ಸುತ್ತಿದ್ದ.

೭. ಇವು ಬುದ್ಧನು ಸುತ್ತಾಡಿದ ಕೆಲವು ಸ್ಥಳಗಳು. ಈ ಸ್ಥಳಗಳ ನಡುವಿನ ಒಟ್ಟು ದೂರ ಎಷ್ಟಿರಬಹುದು? ಲುಂಬಿನಿಯಿಂದ ರಾಜಗೃಹಕ್ಕೆ ಸುಮಾರು ೨೫೦ ಕಿ.ಮೀಟರುಗಳಷ್ಟು ದೂರವಿದೆ. ಇದರಿಂದ ಅವನು ಪ್ರಯಾಣಿಸಿದ ಒಟ್ಟು ದೂರದ ಒಂದು ಅಂದಾಜು ದೊರೆಯುತ್ತದೆ.

೮. ಈ ದೂರವನ್ನೆಲ್ಲಾ ಬುದ್ಧನು ಕಾಲ್ನಡಿಗೆಯಲ್ಲಿಯೇ ಕ್ರಮಿಸಿದನು. ಎತ್ತಿನ ಗಾಡಿಯನ್ನು ಕೂಡ ಬಳಸಲಿಲ್ಲ.

೯. ಅವನ ಸಾಮಾನ್ಯ ಅನುಯಾಯಿಗಳು ವಿಹಾರಗಳನ್ನು ಹಾಗೂ ತಂಗುದಾಣಗಳನ್ನು ಕಟ್ಟುವವರೆಗೆ,

ಬುದ್ಧನಿಗೆ ತನ್ನ ಪ್ರಯಾಣದ ಸಂದರ್ಭಗಳಲ್ಲಿ ತಂಗಲು ಸ್ಥಳವೇ ಇರಲಿಲ್ಲ. ನಂತರ ಬುದ್ಧ, ಮತ್ತವನ ಭಿಕ್ಷುಗಳು, ತಮ್ಮ ಪ್ರಯಾಣದ ಸಮಯದಲ್ಲಿ ಈ ವಿಹಾರಗಳನ್ನು ತಂಗುದಾಣವಾಗಿ ಬಳಸಿಕೊಂಡರು. ಹೆಚ್ಚಿನ ಸಂದರ್ಭಗಳಲ್ಲಿ ಅವನು ದಾರಿಬದಿಯ ಮರದ ನೆರಳಿನಲ್ಲಿಯೇ ವಾಸಿಸುತ್ತಿದ್ದ.

೧೦. ತನ್ನ ವಿಚಾರಗಳನ್ನು ಒಪ್ಪಿಕೊಳ್ಳುವ ಜನರ ಅನುಮಾನಗಳನ್ನು ಹಾಗೂ ಸಮಸ್ಯೆಗಳನ್ನು ಪರಿಹರಿಸುತ್ತಾ, ತನ್ನನ್ನು ವಿರೋಧಿಸುವವರ ವಾದಗಳನ್ನು ವಿರೋಧಿಸುತ್ತಾ ಹಾಗೂ ಮಕ್ಕಳಂತೆ ತನ್ನಲ್ಲಿಗೆ ಮಾರ್ಗದರ್ಶನಕ್ಕೆ ಬಂದವರಿಗೆ ತನ್ನ ತತ್ತ್ವಗಳನ್ನು ಬೋಧಿಸುತ್ತಾ, ಬುದ್ಧ ಒಂದು ಕಡೆಯಿಂದ ಇನ್ನೊಂದು ಕಡೆಗೆ, ಕೆಲವೊಮ್ಮೆ ಒಂದು ಹಳ್ಳಿಯಿಂದ ಇನ್ನೊಂದು ಕಡೆಗೆ, ಕೆಲವೊಮ್ಮೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಸಂಚರಿಸುತ್ತಿದ್ದ.

೧೧. ತನ್ನ ಮಾತನ್ನು ಕೇಳಲು ಬಂದವರೆಲ್ಲಾ ಬುದ್ಧಿವಂತರಲ್ಲ, ಹಾಗೂ ಎಲ್ಲರೂ ತೆರೆದ ಹಾಗೂ ಮುಕ್ತ ಮನಸ್ಸಿನಿಂದೇನು ಬರುವುದಿಲ್ಲ ಎಂಬುದು ತಥಾಗತನಿಗೆ ತಿಳಿದಿತ್ತು.

೧೨. ಅವನು ಭಿಕ್ಕುಗಳಿಗೆ ಮೂರು ರೀತಿಯ ಕೇಳುಗರು ಬರುತ್ತಾರೆ ಎಂಬುದರ ಬಗ್ಗೆಯೂ ಎಚ್ಚರಿಕೆಯನ್ನೂ ನೀಡಿದ್ದ.

೧೩. ಪದೇಪದೇ ಭಿಕ್ಕುಗಳ ಹತ್ತಿರಕ್ಕೆ ಹೋಗುತ್ತಿದ್ದರೂ ಏನೂ ತಿಳಿಯಲಾರದ, ಖಾಲಿ ತಲೆಯ ಮೂರ್ಖರು ಒಂದು ರೀತಿಯವರು. ಅವರು ಭಿಕ್ಕುಗಳ ಮಾತಿನ ಆದಿಮಧ್ಯಾಂತಗಳೆಲ್ಲವನ್ನು ಕೇಳಿಸಿಕೊಳ್ಳುತ್ತಿದ್ದರು. ಆದರೆ ಏನನ್ನೂ ಗ್ರಹಿಸಲಾಗುತ್ತಿರಲಿಲ್ಲ. ಅಂಥವರಿಗೆ ಜ್ಞಾನ ಪ್ರಾಪ್ತಿಯಾಗುವುದಿಲ್ಲ.

೧೪. ಇವನಿಗಿಂತ ಉತ್ತಮನೆಂದರೆ, ಏಕಾಗ್ರಚಿತ್ತವಿಲ್ಲದ ಮನುಷ್ಯ. ಅವನು ಪದೆಪದೆ ಭಿಕ್ಕುಗಳ ಬಳಿ ಹೋಗುತ್ತಾನೆ. ಅವರು ಹೇಳಿದ್ದರ ಆದಿಮಧ್ಯಾಂತಗಳೆಲ್ಲವನ್ನು ಕೇಳಿಕೊಳ್ಳುತ್ತಾನೆ. ಅಲ್ಲಿರುವವರೆಗೆ ಪ್ರತಿಯೊಂದು ಅವನಿಗೆ ತಿಳಿಯುತ್ತದೆ. ಆದರೆ, ಅಲ್ಲಿಂದ ಹೊರಟ ಮೇಲೆ ಅವನಿಗೆ ಯಾವುದು ನೆನಪಿನಲ್ಲಿ ಉಳಿಯುವುದಿಲ್ಲ, ತಲೆ ಪೂರ್ತಿ ಖಾಲಿ.

೧೫. ಇವನಿಗಿಂತ ಉತ್ತಮನೆಂದರೆ, ವಿಶಾಲ ವಿವೇಚನೆಯ ಮನುಷ್ಯ. ಅವನೂ ಪದೇ ಪದೇ ಭಿಕ್ಕುಗಳ ಬಳಿಗೆ ಹೋಗುತ್ತಾನೆ. ಅವರ ಮಾತಿನ ಆದಿಮಧ್ಯಾಂತಗಳೆಲ್ಲವನ್ನು ಅವನು ಕೇಳಿಕೊಳ್ಳುತ್ತಾನೆ. ಪ್ರತಿಯೊಂದು ಪದವು ತಿಳಿಯುತ್ತದೆ. ಮನದಟ್ಟಾಗುತ್ತದೆ. ಅಚಲವಾಗಿ, ಯಾವ ಗೊಂದಲವೂ ಇಲ್ಲದೆ, ಧರ್ಮದಲ್ಲಿ ನುರಿತವನಾಗಿ, ಅದಕ್ಕನುಗುಣವಾಗಿ ನಡೆದುಕೊಳ್ಳುತ್ತಾನೆ.

೧೬. ಏನೇ ಇದ್ದರೂ ಬುದ್ಧನು ಸ್ವಲ್ಪವೂ ದಣಿವಿಲ್ಲದೆ ಒಂದೆಡೆಯಿಂದ ಇನ್ನೊಂದೆಡೆಗೆ ಸುತ್ತಾಡುತ್ತ ಜನರಿಗೆ ತನ್ನ ಧರ್ಮವನ್ನು ಬೋಧಿಸುತ್ತಾ ಸಾಗುತ್ತಿದ್ದ.

೧೭. ಭಿಕ್ಕುವಾಗಿ ಬುದ್ಧನ ಬಳಿ ಮೂರೇ ಮೂರು ಚೂರು ಬಟ್ಟೆಯಿದ್ದವು. ಒಂದೇ ಹೊತ್ತು ಆಹಾರವನ್ನು ಸೇವಿಸುತ್ತಿದ್ದ. ತನ್ನ ಆಹಾರವನ್ನು ಪ್ರತಿ ದಿನ ಬೆಳಗ್ಗೆ ಪ್ರತಿ ಮನೆಯಲ್ಲೂ ಬೇಡಿ ಸಂಪಾದಿಸುತ್ತಿದ್ದ.

೧೮. ಆತನದ್ದು ಯಾರಿಗೇ ಆದರೂ ತೀರಾ ಕಠಿಣವಾದಂಥ ಕೆಲಸವಾಗಿತ್ತು. ಅದನ್ನೂ ಅವನು ಸಂತೋಷವಾಗಿಯೇ ಮಾಡುತ್ತಿದ್ದ.

## ೩. ತಾಯಿ ಹಾಗೂ ಮಗನ ನಡುವೆ, ಹೆಂಡತಿ ಮತ್ತು ಗಂಡನ ನಡುವೆ ಕೊನೆಯ ಭೇಟಿ

೧. ಸಾಯುವ ಮೊದಲು ಮಹಾಪ್ರಜಾಪತಿ ಹಾಗೂ ಯಶೋಧರ ತಥಾಗತನನ್ನು ಭೇಟಿ ಮಾಡಿದರು.

೨. ಬಹುಶಃ ಅದು ಅವರ ಕೊನೆಯ ಭೇಟಿಯಾಗಿರಬೇಕು .

೩. ಮಹಾಪ್ರಜಾಪತಿ ಮೊದಲು ಹೋಗಿ ಅವನಿಗೆ ವಂದಿಸಿದ್ದಳು.

೪. ಅತ್ಯುತ್ತಮ ಧಮ್ಮದ ಸಂತೋಷವನ್ನು ನೀಡಿ, ಆಧ್ಯಾತ್ಮಿಕವಾಗಿ ತನಗೆ ಮರುಹುಟ್ಟನ್ನು ನೀಡಿದ್ದಕ್ಕೆ: ಹಾಗೂ ಅವನಿಂದಾಗಿ ಅವಳಲ್ಲಿ ಧಮ್ಮವು ಬೆಳೆದದ್ದಕ್ಕೆ, ಅವನಿಗೆ ತಾನು ಹಾಲೂಡಿಸುವ ಅವಕಾಶ ದೊರಕಿದ್ದಕ್ಕೆ ಮತ್ತು ಅವನ ದೆಸೆಯಿಂದ ಧಮ್ಮದ ಹಾಲನ್ನು ಕುಡಿಯುವಂತಾಗಿದ್ದಕ್ಕೆ ಮತ್ತು ಭವಸಾಗರಕ್ಕೆ ಧುಮುಕಿ ಅದನ್ನು ಈಜಿ ಪಾರಾಗುವಂತೆ ಮಾಡಿದ್ದಕ್ಕೆ ಮತ್ತು ಬುದ್ಧನ ತಾಯಿಯೆಂದು ಕರೆಸಿಕೊಳ್ಳುವ ಅದ್ಭುತ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ಬುದ್ಧನಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾಳೆ.

೫. ಮತ್ತು ನಂತರ ತನ್ನ ಕೋರಿಕೆಯನ್ನು ತಿಳಿಸುತ್ತಾಳೆ:
"ಈಗ ನಾನು ದೇಹತ್ಯಾಗ ಮಾಡಿ ಸಾಯಲಿಚ್ಛಿಸುತ್ತೇನೆ. ಓ ದುಃಖ ನಿವಾರಕನೇ, ದಯವಿಟ್ಟು ಅಪ್ಪಣೆ ಕೊಡು."

೬. ಯಶೋಧರ ತಥಾಗತನನ್ನು ಉದ್ದೇಶಿಸಿ ತನಗೆ ಎಪ್ಪತ್ತೆಂಟು ವರ್ಷಗಳಾಗಿವೆ ಎನ್ನುತ್ತಾಳೆ. ಅದಕ್ಕೆ ತಥಾಗತ ತನಗೆ ಎಂಭತ್ತು ವರ್ಷಗಳಾಗಿವೆ ಎನ್ನುತ್ತಾನೆ.

೭ ತಾನು ಆ ರೀತಿಯೇ ಸಾಯಬೇಕು ಎನ್ನುತ್ತಾಳೆ. ಆಕೆಯ ಧ್ವನಿ ಮಹಾಪ್ರಜಾಪತಿಯ ಧ್ವನಿಗಿಂತ ಹೆಚ್ಚು ಸ್ವಾವಲಂಬಿಯಾಗಿತ್ತು. ಆಕೆ ಸಾಯಲು ಅನುಮತಿಯನ್ನೇನು ಕೇಳಲಿಲ್ಲ. ಅಥವಾ ಅವನಲ್ಲಿ ಆಕೆ ಆಶ್ರಯವನ್ನು ಬಯಸಲಿಲ್ಲ.

೮. ಬದಲಾಗಿ ಆಕೆ ಅವನಿಗೆ "ನನಗೆ ನಾನೇ ಆಶ್ರಯ" ಎನ್ನುತ್ತಾಳೆ.

೯. ಆಕೆ ಬದುಕಿನಲ್ಲಿ ಎಲ್ಲಾ ಮತ್ಸರಗಳನ್ನು ಗೆದ್ದಿದ್ದಳು.

೧೦. ಆಕೆ ಅವನಿಗೆ ಕೃತಜ್ಞತೆಯನ್ನು ಸಲ್ಲಿಸಲು ಬಂದಿದ್ದಳು. ಏಕೆಂದರೆ ಅವನೇ ಅವಳಿಗೆ ಮಾರ್ಗದರ್ಶನ ಹಾಗೂ ಶಕ್ತಿಯನ್ನು ನೀಡಿದ್ದು.

## ೪. ತಂದೆ-ಮಗನ ಕೊನೆಯ ಭೇಟಿ

೧. ಒಮ್ಮೆ ಭಗವಾನ್ ರಾಜಗೃಹದ ವೇಣುವನದಲ್ಲಿ ಉಳಿದುಕೊಂಡಿದ್ದ. ರಾಹುಲ ಅಂಬಾ ಲತಿಕದಲ್ಲಿ ತಂಗಿದ್ದ.

೨. ತಥಾಗತನು ಸಂಜೆ ತನ್ನ ಧ್ಯಾನವು ಮುಗಿದ ನಂತರ ರಾಹುಲನ ಬಳಿಗೆ ಹೋದ. ರಾಹುಲನು ದೂರದಿಂದಲೇ ಬುದ್ಧನನ್ನು ನೋಡಿ, ಅವನಿಗೆ ಆಸನವನ್ನು ಸಿದ್ಧಪಡಿಸಿ ಕಾಲು ತೊಳೆದುಕೊಳ್ಳಲು ನೀರನ್ನು ನೀಡಿದ.

೩. ತನಗಾಗಿ ಅಣಿಮಾಡಿದ ಆಸನದಲ್ಲಿ ಕುಳಿತು, ಬುದ್ಧನು ಕಾಲು ತೊಳೆದುಕೊಂಡನು. ರಾಹುಲನು ಅವನಿಗೆ ನಮಸ್ಕರಿಸಿ ಒಂದು ಬದಿಯಲ್ಲಿ ಕುಳಿತಕೊಂಡ.

೪. "ಯಾರು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುವ ಕ್ರಿಯೆಯಿಂದ ದೂರವಿರುವುದಿಲ್ಲವೋ ಅವರು ಯಾವ ಕೆಟ್ಟ ಕೆಲಸವನ್ನಾದರೂ ಮಾಡಲು ಹಿಂಜರಿಯುವುದಿಲ್ಲ. ಆದ್ದರಿಂದ ನೀನು ಹಾಸ್ಯಕ್ಕಾದರೂ ಸುಳ್ಳು ಹೇಳದಿರುವಂತೆ ಶಿಸ್ತನ್ನು ಬೆಳಸಿಕೊಳ್ಳಬೇಕು" ಎಂದು ತಥಾಗತನು ರಾಹುಲನಿಗೆ ಹೇಳಿದನು.

೫. "ಹಾಗೆಯೇ ನೀನು ನಿನ್ನ ಪ್ರತಿಯೊಂದು ಕ್ರಿಯೆ, ಆಡುವ ಪ್ರತಿಯೊಂದು ಮಾತು ಹಾಗೂ ಪ್ರತಿ ಯೋಚನೆಯ ಬಗ್ಗೆಯೂ ಚಿಂತನೆ ಮಾಡಬೇಕು."

೬. "ನೀನು ಯಾವ ಕೆಲಸವನ್ನು ಮಾಡುವಾಗಲೂ ಅದು ನಿನಗೆ ಹಾಗೂ ಬೇರೆಯವರಿಗೆ ಅನುಕೂಲಕರವಾಗಿದೆಯೇ ಅಥವಾ ಹಾನಿಕಾರಕವಾಗಿದೆಯೇ ಎಂಬುದನ್ನು ಯೋಚಿಸಬೇಕು. ಹಾಗೆಯೇ ಪ್ರತಿ ತಪ್ಪು ಕ್ರಿಯೆಯು ದುಃಖಕ್ಕೆ ಕಾರಣವಾಗುತ್ತದೆ ಮತ್ತು ದುಃಖವನ್ನು ಹೆಚ್ಚಿಸುತ್ತದೆ. ನೀನು ಮಾಡಬೇಕೆಂದಿರುವ ಕೆಲಸ ಈ ಬಗೆಯದು ಎಂದಾದಲ್ಲಿ ನೀನು ಅದನ್ನು ಮಾಡಬಾರದು."

೭. "ಆದರೆ ಅದರಿಂದ ಏನು ತೊಂದರೆ ಇಲ್ಲ, ಒಳಿತೇ ಆಗುತ್ತದೆ ಎಂದಾದಲ್ಲಿ ನೀನು ಅದನ್ನು ಮಾಡಬಹುದು."

೮. "ಪ್ರೀತಿಸುವ ಸ್ನೇಹಭಾವವನ್ನು ಬೆಳಸಿಕೊ; ಏಕೆಂದರೆ ಅದರಿಂದ ಮತ್ತೊಬ್ಬರಿಗೆ ಕೇಡೆಣಿಸುವ ಗುಣ ನಾಶವಾಗುತ್ತದೆ."

೯. "ದಯಾಗುಣವನ್ನು ಮೈಗೂಡಿಸಿಕೋ. ಅದರಿಂದ ಮತ್ತೊಬ್ಬರಿಗೆ ಕಿರುಕುಳ ಕೊಡುವ ಗುಣ ಹೋಗುತ್ತದೆ."

೧೦. "ಬೇರೆಯವರ ಏಳಿಗೆಯನ್ನು ಕಂಡು ಸಂತೋಷಪಡುವ ಗುಣ ಬೆಳಸಿಕೋ; ಏಕೆಂದರೆ, ಅದರಿಂದ ಬೇರೆಯವರನ್ನು ತಾತ್ಸಾರದಿಂದ ಕಾಣುವ ಗುಣ ಹೋಗುತ್ತದೆ."

೧೧. "ಸಮಾಧಾನ ಚಿತ್ತದ ಮನಸ್ಥೈರ್ಯವನ್ನು ಬೆಳಸಿಕೊ; ಏಕೆಂದರೆ ಅದರಿಂದ ಎಲ್ಲಾ ದ್ವೇಷಗಳೂ ಮಾಯವಾಗುತ್ತವೆ."

೧೨. "ದೈಹಿಕ ಕಾಮನೆಗಳಿಂದುಂಟಾಗುವ ಕೇಡಿನ ಬಗ್ಗೆ ಆಲೋಚನೆ ಮಾಡು ಆಗ ಕಾಮೋದ್ರೇಕಗಳು ಇಲ್ಲವಾಗುತ್ತವೆ."

೧೩. "ಇಹದ ಕ್ಷಣಿಕತೆಯ ಬಗ್ಗೆ ಆಲೋಚಿಸು ಆಗ ಅಹಂಕಾರವು ಅಳಿದುಹೋಗುತ್ತದೆ."

೧೪. ತಥಾಗತ ಹೀಗೆಂದ. ತಥಾಗತನ ಮಾತುಗಳನ್ನು ಕೇಳಿ ರಾಹುಲನ ಮನಸ್ಸು ಸಂತೋಷಗೊಂಡಿತು.

## ೫. ಬುದ್ಧ ಹಾಗೂ ಸಾರಿಪುತ್ರನ ಕೊನೆಯ ಭೇಟಿ

೧. ತಥಾಗತನು ಶ್ರಾವಸ್ತಿಯ ಜೇತವನದ ಗೌಧಕುಟಿ ವಿಹಾರದಲ್ಲಿ ತಂಗಿದ್ದನು.

೨. ಐದುನೂರು ಜನ ಭಿಕ್ಷುಗಳೊಡನೆ ಸಾರಿಪುತ್ರನು ಅಲ್ಲಿಗೆ ಬಂದನು.

೩. ಬುದ್ಧನಿಗೆ ನಮಸ್ಕರಿಸಿ ತನ್ನ ಮರಣದ ದಿನ ಬಂದಿದೆ ಎಂದು ಸಾರಿಪುತ್ರ ಹೇಳುತ್ತಾನೆ. ಈ ಜೀವನದ ಕೋಟಲೆಗಳಿಂದ ಮುಕ್ತನಾಗಲು ಬುದ್ಧನು ಅನುಮತಿಯನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾನೆ.

೪. ತನ್ನ ಪರಿನಿರ್ವಾಣಕ್ಕೆ ಯಾವುದಾದರೊಂದು ಸ್ಥಳವನ್ನು ಆಯ್ಕೆಮಾಡಿದ್ದಾನೋ ಎಂಬುವುದರ ಬಗ್ಗೆ ಬುದ್ಧನು ಸಾರಿಪುತ್ರನನ್ನು ವಿಚಾರಿಸುತ್ತಾನೆ.

೫. "ನಾನು ಮಗಧದ ನಲಕ ಎಂಬ ಹಳ್ಳಿಯಲ್ಲಿ ಹುಟ್ಟಿದೆನು. ನಾನು ಜನಿಸಿದ ಮನೆ ಇನ್ನು ಸುಸ್ಥಿತಿಯಲ್ಲಿದೆ. ನಾನು ನನ್ನ ಪರಿನಿರ್ವಾಣಕ್ಕೆ ಅದೇ ಮನೆಯನ್ನು ಆಯ್ಕೆಮಾಡಿಕೊಂಡಿದ್ದೇನೆ" ಎಂದನು.

೬. "ಪ್ರಿಯ ಸಾರಿಪುತ್ರ, ನಿನಗೆ ಯಾವುದು ಸಂತೋಷವೋ ಅದನ್ನೇ ಮಾಡು" ಎಂದು ಬುದ್ಧ ಉತ್ತರಿಸಿದ.

೭. ಸಾರಿಪುತ್ರನು ಬುದ್ಧನ ಕಾಲಿಗೆ ನಮಸ್ಕರಿಸಿ "ಕೇವಲ ನಿನ್ನ ಪಾದಕ್ಕೆ ನಮಸ್ಕರಿಸುವ ಭಾಗ್ಯ ಲಭಿಸಲಿ ಎಂಬ ಏಕೈಕ ಬಯಕೆಯಿಂದ ನಾನು ಒಂದು ಸಾವಿರ ಕಲ್ಪಗಳ ಕಾಲ ಪರಮಿತಗಳನ್ನು ಆಚರಿಸಿದ್ದೆ. ನನ್ನ ಆಸೆ ಈಡೇರಿತು. ನನ್ನ ಸಂತೋಷಕ್ಕೆ ಪಾರವೆ ಇಲ್ಲ" ಎಂದ.

೮. "ನಾವು ಪುನರ್ ಜನ್ಮವನ್ನು ನಂಬುವುದಿಲ್ಲ. ಹಾಗಾಗಿ ಇದೇ ನಮ್ಮ ಕೊನೆಯ ಭೇಟಿ. ಭಗವಾನರು ನನ್ನ ತಪ್ಪುಗಳನ್ನು ಮನ್ನಿಸಲಿ. ನನ್ನ ಕೊನೆಯ ದಿನ ಸಮೀಪಿಸಿದೆ."

೯. "ಸಾರಿಪುತ್ರ! ಮನ್ನಿಸುವಂತಹುದು ಏನೂ ಇಲ್ಲ" ಎಂದನು ಬುದ್ಧ.

೧೦. ಸಾರಿಪುತ್ರ ಹೊರಡಲೆಂದು ಎದ್ದು ನಿಂತಾಗ, ಭಗವಾನ್ ಗೌರವಾರ್ಥವಾಗಿ ಗೌಡಕುಟಿ ವಿಹಾರದ ಮೊಗಸಾಲೆಯಲ್ಲಿ ಎದ್ದು ನಿಂತರು.

೧೧. ನಂತರ ಸಾರಿಪುತ್ರ ತಥಾಗತನಿಗೆ ಹೇಳಿದ "ನಿಮ್ಮನ್ನು ಮೊಟ್ಟ ಮೊದಲಬಾರಿ ನೋಡಿದಾಗ ನನಗೆ ತುಂಬಾ ಸಂತೋಷವಾಯಿತು. ಈಗ ಮತ್ತೆ ನಿಮ್ಮನ್ನು ನೋಡಲು ತುಂಬಾ ಸಂತೋಷವೆನ್ನಿಸುತ್ತಿದೆ. ಇದು ನಾನು ನಿಮ್ಮನ್ನು ನೋಡುವುದು ಇದೇ ಕೊನೆಯ ಬಾರಿ ಎಂಬುದು ನನಗೆ ಗೊತ್ತು. ಇನ್ನು ಮತ್ತೆ ನಿಮ್ಮ ದರ್ಶನ ಸಾಧ್ಯವಿಲ್ಲ."

೧೨. ಅಂಗೈಗಳೆರಡನ್ನು ಜೋಡಿಸುತ್ತಾ ತಥಾಗತನಿಗೆ ಬೆನ್ನು ತೋರಿಸದೆ ಹೊರಟನು.

೧೩. ನಂತರ ತಥಾಗತನು ನೆರೆದಿದ್ದ ಭಿಕ್ಷುಗಳನ್ನು ಉದ್ದೇಶಿಸಿ "ನಿಮ್ಮ ಹಿರಿಯ ಸಹೋದರನನ್ನು ಹಿಂಬಾಲಿಸಿ" ಎಂದನು. ಮೊಟ್ಟಮೊದಲ ಬಾರಿಗೆ ಸಂಘದ ಸದಸ್ಯರು ತಥಾಗತನನ್ನು ಬಿಟ್ಟು ಸಾರಿಪುತ್ರನ ಹಿಂದೆ ನಡೆದರು.

೧೪. ಸಾರಿಪುತ್ರ ತನ್ನ ಹಳ್ಳಿಯನ್ನು ತಲುಪಿದ ಮೇಲೆ ತನ್ನ ಮನೆಯಲ್ಲಿ ತಾನು ಹುಟ್ಟಿದ ಸ್ಥಳದಲ್ಲೇ ಸಾವನ್ನಪ್ಪಿದನು.

೧೫. ಅವನ ದೇಹವನ್ನು ಅಲ್ಲೇ ಸುಟ್ಟು ಚಿತಾಭಸ್ಮವನ್ನು ತಥಾಗತನಲ್ಲಿಗೆ ತರಲಾಯಿತು.

೧೬. ಚಿತಾಭಸ್ಮವನ್ನು ಪಡೆದ ತಥಾಗತ ಸಂಘದ ಸದಸ್ಯರಿಗೆ ಹೇಳಿದ: "ಆತ ತೀರಾ ಮೇಧಾವಿ. ಅವನಿಗೆ ಸಂಗ್ರಹಿಸುವ ಮನೋಭಾವವಿರಲಿಲ್ಲ. ಆತ ಉತ್ಸಾಹಿ ಹಾಗೂ ಶ್ರಮಜೀವಿಯಾಗಿದ್ದ. ಪಾಪ ಕೃತ್ಯವನ್ನು ದ್ವೇಷಿಸುತ್ತಿದ್ದ. ಬಿಕ್ಷುಗಳೇ ಅವನ ಚಿತಾಭಸ್ಮವನ್ನು ನೋಡಿ. ಆತನು ಕ್ಷಮಿಸುವುದರಲ್ಲಿ ಧರಿತ್ರಿಯಷ್ಟೇ ಪ್ರಬಲನಾಗಿದ್ದ. ಕೋಪ ಅವನ ಮನಸ್ಸನ್ನು ಪ್ರವೇಶಿಸಲು ಎಂದೂ ಅವನು ಅವಕಾಶ ಮಾಡಿಕೊಟ್ಟಿರಲಿಲ್ಲ. ಆಸೆ ಎಂದೂ ಅವನನ್ನು ನಿಯಂತ್ರಿಸಲಿಲ್ಲ. ಅವನು ಎಲ್ಲ ಭಾವೋದ್ರೇಕಗಳನ್ನೂ ಮೀರಿಕೊಂಡಿದ್ದ. ಅವನು ಕರುಣೆ, ಸ್ನೇಹ ಹಾಗೂ ಪ್ರೀತಿಗಳ ಆಗರವಾಗಿದ್ದ."

೧೭. ಆ ಸಮಯದಲ್ಲಿ ಮಹಾಮೌದ್ಗಲಾಯನು ರಾಜಗೃಹದ ಬಳಿಯಲ್ಲಿ ಒಂದು ನಿರ್ಜನ ವಿಹಾರವೊಂದರಲ್ಲಿ ವಾಸವಾಗಿದ್ದ. ಅವನು ತಥಾಗತನ ಶತ್ರುಗಳು ನೇಮಿಸಿದ ಕೊಲೆಗಾರರಿಂದ ಕೊಲೆಯಾದ.

೧೮. ಅವನ ಸಾವಿನ ದುಃಖದ ಸುದ್ದಿಯನ್ನು ತಥಾಗತನಿಗೆ ತಿಳಿಸಲಾಯಿತು. ಸಾರಿಪುತ್ತ ಹಾಗೂ ಮಹಾಮೌದ್ಗಲಾಯರಿಬ್ಬರೂ ಬುದ್ಧನ ಪ್ರಮುಖ ಅನುಯಾಯಿಗಳು. ಅವರನ್ನು ಧರ್ಮ

ಸೇನಾಪತಿಗಳೆಂದು ಕರೆಯುತ್ತಿದ್ದರು. ತಥಾಗತನು ತನ್ನ ಧರ್ಮದ ಪ್ರಸಾರಕ್ಕೆ ಅವರನ್ನು ಅವಲಂಬಿಸಿದ್ದ.

೧೯. ಅವನ ಜೀವಿತ ಕಾಲದಲ್ಲೇ ಸಂಭವಿಸಿದ್ದ ಅವರ ಸಾವು ತಥಾಗತನ ಮೇಲೆ ತೀವ್ರವಾದ ಪರಿಣಾಮ ಬೀರಿತು.

೨೦. ಅವನು ಶ್ರಾವಸ್ತಿಯಲ್ಲಿ ಉಳಿಯಲು ಇಷ್ಟಪಡಲಿಲ್ಲ. ಮನಸ್ಸಿನ ಸಮಾಧಾನಕ್ಕಾಗಿ ಮುಂದಿನ ಊರಿಗೆ ಹೋಗಲು ನಿರ್ಧರಿಸಿದ.

# ಭಾಗ : ೨
# ವೈಶಾಲಿಯಿಂದ ನಿರ್ಗಮನ

೧. ವೈಶಾಲಿಗೆ ವಿದಾಯ
೨. ಪಾವಾದಲ್ಲಿ ತಂಗಿದ್ದು
೩. ಕುಶೀನಾರಾಕ್ಕೆ ಆಗಮನ

# ೧. ವೈಶಾಲಿಗೆ ವಿದಾಯ

೧. ತನ್ನ ಅಂತಿಮ ಪ್ರಯಾಣವನ್ನು ಪ್ರಾರಂಭಿಸುವ ಮೊದಲು ತಥಾಗತನು ರಾಜಗೃಹದ ಗೃಧ್ರಕೂಟ ಶಿಖರದಲ್ಲಿ ತಂಗಿದ್ದನು.

೨. ಅಲ್ಲಿ ಕೆಲವು ಕಾಲ ಇದ್ದು ನಂತರ ಆನಂದನನ್ನು ಕರೆದು "ನಾವು ಅಂಬಾ ಲಥಿಕಕ್ಕೆ ಹೋಗೋಣ" ಎಂದು ಹೇಳಿದನು.

೩. ಆನಂದನು "ಹಾಗೇಯೇ ಆಗಲಿ" ಎಂದನು. ಮತ್ತು ಭಿಕ್ಷುಗಳ ದೊಡ್ಡ ಪರಿವಾರದೊಂದಿಗೆ ಅಂಬಾ ಲಥಿಕಕ್ಕೆ ತೆರಳಿದನು.

೪. ಅಂಬಾ ಲಥಿಕದಲ್ಲಿ ಸ್ವಲ್ಪ ದಿನ ಉಳಿದು, ಅಲ್ಲಿಂದ ನಲಂದಕ್ಕೆ ಹೋದರು.

೫. ನಲಂದದಿಂದ ಮಗಧದ ರಾಜಧಾನಿಯಾದ ಪಾಟಲೀಗ್ರಾಮಕ್ಕೆ ಹೋದರು.

೬. ಪಾಟಲೀ ಗ್ರಾಮದಿಂದ ಕೋಟಿಗಾಮಿಗೆ ಮತ್ತು ಅಲ್ಲಿಂದ ನದಿಕ ಎಂಬಲ್ಲಿಗೆ ಹೋದರು.

೭ ಈ ಸ್ಥಳಗಳಲ್ಲೆಲ್ಲಾ ಬುದ್ಧನು ಕೆಲವು ದಿನಗಳ ಕಾಲ ತಂಗಿದ್ದನು ಮತ್ತು ತನ್ನ ಸಂಘದ ಭಿಕ್ಷುಗಳಿಗೆ ಇಲ್ಲವೇ ಗೃಹಸ್ಥರಿಗೆ ಧಾರ್ಮಿಕ ಪ್ರವಚನಗಳನ್ನು ನುಡಿದನು.

೮. ನದಿಕದಿಂದ ಅವನು ವೈಶಾಲಿಗೆ ತೆರಳಿದನು.

೯. ವೈಶಾಲಿಯು ಮಹಾವೀರನ ಜನ್ಮಸ್ಥಳವಾಗಿತ್ತು. ಹಾಗಾಗಿ ಅಲ್ಲಿ ಅವನ ಧರ್ಮದ ಪ್ರಭಾವ ತುಂಬಾ ಗಾಢವಾಗಿತ್ತು.

೧೦. ಆದರೆ ಶೀಘ್ರದಲ್ಲಿಯೇ ಅಲ್ಲಿನ ಜನರನ್ನು ಬೌದ್ಧ ಧರ್ಮದ ಅನುಯಾಯಿಗಳನ್ನಾಗಿ ಮಾಡುವಲ್ಲಿ ಬುದ್ಧ ಸಫಲನಾದ.

೧೧. ಆಗ ಬರದಿಂದಾಗಿ ವೈಶಾಲಿಯಲ್ಲಿ ಭೀಕರ ಕ್ಷಾಮವುಂಟಾಗಿ ಲೆಕ್ಕವಿಲ್ಲದಷ್ಟು ಜನ ದುರ್ಮರಣಕ್ಕೀಡಾದರು.

೧೨. ವೈಶಾಲಿಯ ನಾಗರೀಕರು ಕರೆದಿದ್ದ ಒಂದು ಸಾರ್ವಜನಿಕ ಸಭೆಯಲ್ಲಿ ವೈಶಾಲಿಯ ಜನ ಆ ಬಗ್ಗೆ ಫಿರ್ಯಾದು ಸಲ್ಲಿಸಿದ್ದರು.

೧೩. ಬಹಳ ವಿವಾದಗಳ ನಂತರ ಆ ಸಭೆಯು ಬುದ್ಧನನ್ನು ವೈಶಾಲಿನಗರಕ್ಕೆ ಬರಮಾಡಿಕೊಳ್ಳಬೇಕೆಂದು ತೀರ್ಮಾನಿಸಿತು.

೧೪. ಲಿಚ್ಛವಿ ಜನಾಂಗದ ಮಹಾಲಿಯು ವೈಶಾಲಿ ನಗರದ ಪುರೋಹಿತನೊಬ್ಬನ ಮಗ ಹಾಗೂ ಇವನು ದೊರೆ ಬಿಂಬಸಾರನ ಗೆಳೆಯ. ಬುದ್ಧನನ್ನು ಆಹ್ವಾನಿಸಲು ಮಹಾಲಿಯನ್ನು ಕಳುಹಿಸಿದ್ದರು.

೧೫. ಅವರ ಆಹ್ವಾನವನ್ನು ಮನ್ನಿಸಿ ಬುದ್ಧನು ತನ್ನ ಐದುನೂರು ಶಿಷ್ಯರೊಂದಿಗೆ ಅಲ್ಲಿಗೆ ಹೊರಟನು. ವಜ್ಜಿಗಳ ಪ್ರಾಂತ್ಯದ ಸರಹದ್ದಿನೊಳಗೆ ಬುದ್ಧನು ಕಾಲಿಟ್ಟ ಕೂಡಲೇ ಗುಡುಗು ಮಿಂಚುಗಳು ಪ್ರಾರಂಭವಾಗಿ ಮಳೆ ಸುರಿದು ಅಲ್ಲಿನ ಬರ ಪರಿಹಾರವಾಯಿತು.

೧೬. ಇದು ವೈಶಾಲಿಯ ಜನ ಬುದ್ಧನನ್ನು ಬರಮಾಡಿಕೊಂಡದ್ದರ ಹಿನ್ನೆಲೆ.

೧೭. ಅವರ ಮನಗೆದ್ದ ತಥಾಗತನನ್ನು, ಸ್ವಾಭಾವಿಕವಾಗಿಯೇ ವೈಶಾಲಿಯ ಜನ ಅತ್ಯಂತ ಆದರದಿಂದ ಬರಮಾಡಿಕೊಂಡರು.

೧೮. ನಂತರ 'ವಸ' ಬಂದಿತು. ತಥಾಗತನು ಬೆಲುನಕ್ಕೆ ತನ್ನ ವಸವನ್ನು ಮಾಡಲು ಹೊರಟನು ಮತ್ತು ಸಂಘದ ಸದಸ್ಯರನ್ನು ಅವರ ವಸವನ್ನು ವೈಶಾಲಿಯಲ್ಲೇ ಮಾಡಲು ಕೇಳಿಕೊಂಡನು.

೧೯. ವಸವನ್ನು ಮುಗಿಸಿದ ಮೇಲೆ ಭಗವಾನನು ವೈಶಾಲಿಯನ್ನು ಬಿಟ್ಟು ಪ್ರಯಾಣವನ್ನು ಮುಂದುವರಿಸುವ ಆಲೋಚನೆಯಿಂದ ವೈಶಾಲಿಗೆ ಬಂದನು.

೨೦. ಹಾಗಾಗಿ ತಥಾಗತನು ಪ್ರಾತಃಕಾಲ ಚೀವರವನ್ನು ಧರಿಸಿ, ಕೈಯಲ್ಲಿ ಭಿಕ್ಷಾ ಪಾತ್ರೆಯನ್ನು ಹಿಡಿದು, ಭಿಕ್ಷೆಗಾಗಿ ವೈಶಾಲಿಯನ್ನು ಪ್ರವೇಶಿಸಿದ್ದನು; ಆಹಾರವನ್ನು ಸೇವಿಸಿ, ವೈಶಾಲಿಯ ಮೂಲಕ ಹಾದುಹೋಗುವಾಗ ವೈಶಾಲಿಯ ಮೇಲೆ ಗಜನೋಟ ಹರಿಸಿ, ಆನಂದನನ್ನು ಉದ್ದೇಶಿಸಿ ಹೇಳಿದ: "ಆನಂದ, ಇದೇ ಕೊನೆಯ ಸಲ ತಥಾಗತ ವೈಶಾಲಿಯನ್ನು ನೋಡುವುದು."

೨೧. ಆ ರೀತಿ ಹೇಳುತ್ತಾ, ಅವನು ವೈಶಾಲಿಯ ಜನತೆಗೆ ವಿದಾಯವನ್ನು ಹೇಳಿದನು.

೨೨. ಲಿಚ್ಛವಿಯ ಜನ, ಅವರ ಹಳೆಯ ನಗರದ ಸರಹದ್ದಿನ ಉತ್ತರ ಭಾಗದಲ್ಲಿ, ಅವನನ್ನು ಬೀಳ್ಕೊಟ್ಟ ಸಂದರ್ಭದಲ್ಲಿ ತನ್ನ ಭಿಕ್ಷಾಪಾತ್ರೆಯನ್ನು ಸ್ಮರಣಾರ್ಥವಾಗಿ ಅವರಿಗೆ ನೀಡಿದನು.

೨೩. ವೈಶಾಲಿಗೆ ಅದೇ ಅವನ ಕೊನೆಯ ಭೇಟಿಯಾಯಿತು. ಮತ್ತೊಮ್ಮೆ ಬರಲು ಅವನು ಬದುಕಿರಲಿಲ್ಲ.

## ೨. ಪಾವಾದಲ್ಲಿ ತಂಗಿದ್ದು

೧. ವೈಶಾಲಿಯಿಂದ ತಥಾಗತನು ಬಂದಗಾಮಕ್ಕೆ ತೆರಳಿದ್ದನು.

೨. ಬಂದಗಾಮದಿಂದ ಹಾತಿ ಗ್ರಾಮಕ್ಕೆ ಹೊರಟನು. ಅಲ್ಲಿಂದ ಭೋಗ ನಗರಕ್ಕೆ ಪ್ರಯಾಣ ಮಾಡಿದನು.

೩. ಭೋಗ ನಗರದಿಂದ ಪಾವಾಕ್ಕೆ ಹೋದನು.

೪. ಪಾವಾದಲ್ಲಿ ತಥಾಗತನು ಚುಂದಾ ಎಂಬ ಕಮ್ಮಾರನ ಆಮ್ರವನದಲ್ಲಿ ಉಳಿದುಕೊಂಡ.

೫. ಚುಂದನಿಗೆ ತಥಾಗತನು ಪಾವಾಕ್ಕೆ ಬಂದಿರುವ ಹಾಗೂ ತನ್ನ ಆಮ್ರವನದಲ್ಲಿ ಉಳಿದಿರುವ ವಿಷಯ ತಿಳಿಯಿತು.

೬. ಚುಂದನು ಆಮ್ರವನಕ್ಕೆ ಹೋಗಿ ತಥಾಗತನ ಬಳಿಯಲ್ಲಿ ಕುಳಿತ. ತಥಾಗತ, ಅವನಿಗೆ ಧಾರ್ಮಿಕ ಉಪದೇಶ ನೀಡಿದ.

೭. ಅದರಿಂದ ಸಂತೋಷಗೊಂಡ ಚುಂದನು "ನಾಳೆ ತಥಾಗತರು ನನ್ನ ಮನೆಯಲ್ಲಿ ತನ್ನ ಶಿಷ್ಯರೊಂದಿಗೆ ಭೋಜನವನ್ನು ಸ್ವೀಕರಿಸಬೇಕು" ಎಂದು ಬುದ್ಧನನ್ನು ಪ್ರಾರ್ಥಿಸಿಕೊಂಡನು.

೮. ಬುದ್ಧನು ಮೌನವಾಗಿ ಚುಂದನ ಬೇಡಿಕೆಗೆ ಸಮ್ಮತಿಸಿದನು. ತಥಾಗತನ ಸಮ್ಮತಿಯನ್ನು ತಿಳಿದು, ಚುಂದನು ಮನೆಗೆ ಮರಳಿದನು.

೯. ಮರುದಿನ ಚುಂದನ ಮನೆಯಲ್ಲಿ ಪರಮಾನ್ನ ಹಾಗೂ ಕಡುಬು ಮತ್ತು ಸೂಕರಮದ್ದವ ಮುಂತಾದ ತಿನಿಸುಗಳನ್ನು ಬುದ್ಧನಿಗಾಗಿ ಸಿದ್ಧಪಡಿಸಿದರು. ನಂತರ ತಥಾಗತರ ಬಳಿ ಬಂದು "ಭೋಜನದ ವೇಳೆಯಾಯಿತು, ಊಟಕ್ಕೆ ಬನ್ನಿ" ಎಂದು ಕರೆದನು.

೧೦. ಬುದ್ಧನು ನಿಲುವಂಗಿಯನ್ನು ತೊಟ್ಟುಕೊಂಡು ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ತನ್ನ ಅನುಯಾಯಿಗಳೊಂದಿಗೆ ಚುಂದನ ಮನೆಗೆ ಹೊಗಿ ಊಟ ಮಾಡಿದನು.

೧೧. ಊಟವಾದ ನಂತರ ಭಗವಾನರು ಚುಂದನಿಗೆ ಮತ್ತೊಂದು ಬಾರಿ ಧರ್ಮೋಪದೇಶ ಮಾಡಿ ಅಲ್ಲಿಂದ ಹೊರಟನು.

೧೨. ಚುಂದನ ಮನೆಯ ಭೋಜನ ಬುದ್ಧನ ಆರೋಗ್ಯಕ್ಕೆ ಒಗ್ಗಲಿಲ್ಲ. ಅವನಿಗೆ ತೀವ್ರವಾದ ಅನಾರೋಗ್ಯವುಂಟಾಯಿತು. ತೀವ್ರವಾದ ಯಾತನೆ ಹಾಗೂ ಭೇದಿ ಮರಣದವರೆಗೂ ಅವನನ್ನು ಕಾಡಿತು.

೧೩. ಆದರೆ ಅತ್ಯಂತ ಶಾಂತ ಸ್ವಭಾವದವನೂ ಹಾಗೂ ಸ್ವಚಿತ್ತನೂ ಆದ ತಥಾಗತನು ಯಾವ ಆಕ್ಷೇಪವೂ ಇಲ್ಲದೆ ಆ ನೋವನ್ನು ಸಹಿಸಿಕೊಂಡನು.

೧೪. ಆಮ್ರವನಕ್ಕೆ ಹಿಂದಿರುಗಿದ ಬುದ್ಧ ದೇಹಬಾಧೆ ಸ್ವಲ್ಪ ಕಡಿಮೆಯಾದ ಮೇಲೆ "ನಡಿ ಕುಶೀನಾರಕ್ಕೆ ಹೋಗೋಣ" ಎಂದು ಆನಂದನಿಗೆ ಹೇಳಿದನು. ಇಡೀ ಗುಂಪು ಪಾವಾದಿಂದ ಕುಸಿನಾರಕ್ಕೆ ತೆರಳಿತು.

## ೩. ಕುಶೀನಾರಾಕ್ಕೆ ಆಗಮನ

೧. ತಥಾಗತನು ಅರ್ಧ ದೂರ ಕ್ರಮಿಸಿದ ನಂತರ ಆಯಾಸಗೊಂಡ. ಅವನಿಗೆ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದು ಆವಶ್ಯಕವಾಯಿತು.

೨. ಮಾರ್ಗದ ಬದಿಯಲ್ಲಿದ್ದು ಮರವೊಂದರ ಬುಡದಲ್ಲಿ ಕುಳಿತುಕೊಂಡ ಬುದ್ಧ "ವಸ್ತ್ರವನ್ನು ಹಾಸು, ನನಗೆ ತುಂಬ ದಣಿವಾಗಿದೆ, ಸ್ವಲ್ಪ ವಿಶ್ರಮಿಸಿಕೊಳ್ಳಬೇಕೆನ್ನಿಸಿದೆ" ಎಂದು ಆನಂದನಿಗೆ ಹೇಳಿದನು.

೩. "ಹಾಗೆಯೇ ಆಗಲಿ" ಎಂದು ಆನಂದನು ತಥಾಗತನಿಗೆ ನಾಲ್ಕು ಮಡಿಕೆಯಿದ್ದ ವಸ್ತ್ರವನ್ನು ಮಡಿಕೆ ಬಿಚ್ಚಿ ಹಾಸಿದ.

೪. ಬುದ್ಧನು ತನಗಾಗಿ ಸಿದ್ಧಪಡಿಸಿದ ಆ ಹಾಸಿಗೆಯಲ್ಲಿ ಕುಳಿತುಕೊಂಡ.

೫. ಕುಳಿತುಕೊಂಡ ನಂತರ ಪೂಜ್ಯ ಆನಂದನನ್ನು ಕರೆದು "ಆನಂದ, ಸ್ವಲ್ಪ ನೀರು ತಂದು ಕೊಡು. ನನಗೆ ತುಂಬಾ ಬಾಯಾರಿಕೆಯಾಗುತ್ತಿದೆ. ನೀರು ಕುಡಿಯುತ್ತೇನೆ" ಎಂದು ಕೇಳಿಕೊಂಡನು.

೬. "ಇಲ್ಲಿ ಪಕ್ಕದಲ್ಲಿರುವ ತೊರೆಯ ನೀರು ರಾಡಿಯಾಗಿ ಕೊಳಕಾಗಿದೆ. ಕಾಕುತ್ತ ನದಿಯು ಇಲ್ಲೇ ಬಳಿಯಲ್ಲಿದೆ. ಅದರ ನೀರು ಸ್ಫಟಿಕದಂತೆ ಶುಭ್ರವಾಗಿದೆ, ಸಿಹಿಯಾಗಿದೆ ಮತ್ತು ತಂಪಾಗಿದೆ. ಅದನ್ನು ನೀವು ಕುಡಿಯಬಹುದು ಮತ್ತು ಆ ತಣ್ಣನೆಯ ನೀರಿನಲ್ಲಿ ಕೈಕಾಲುಗಳನ್ನೂ ತಂಪು ಮಾಡಿಕೊಳ್ಳಬಹುದು."

೭. ಬುದ್ಧನು ನದಿಯ ವರೆಗೆ ನಡೆದುಹೋಗುವುದಕ್ಕೂ ಆಗದಷ್ಟು ನಿಶ್ಶಕ್ತನಾಗಿದ್ದ. ಹಾಗಾಗಿ ಪಕ್ಕದ ತೊರೆಯ ನೀರೇ ಸಾಕು ಎಂದ.

೮. ಆನಂದ ನೀರನ್ನು ತೆಗೆದುಕೊಂಡು ಬಂದ. ತಥಾಗತನು ಅದನ್ನು ಕುಡಿದ.

೯. ಸ್ವಲ್ಪ ಹೊತ್ತು ವಿಶ್ರಮಿಸಿದ ನಂತರ ತಥಾಗತನು ತನ್ನ ಅನುಯಾಯಿಗಳೊಡನೆ ಕಾಕುತ್ತ ನದಿಗೆ ಹೋದ. ನೀರಿಗಿಳಿದು ಸ್ನಾನ ಮಾಡಿ, ನೀರು ಕುಡಿದು, ನದಿಯ ಆಚೆ ದಡದಲ್ಲಿದ್ದ ಆಮ್ರವನಕ್ಕೆ ಹೋದನು.

೧೦. ಮರಳಿ ಬಂದ ನಂತರ ಬುದ್ಧನಿಗೆ ಮತ್ತೆ ಬಹಳ ಆಯಾಸವೆನಿಸಿ "ಹೊದಿಕೆಯನ್ನು ಹಾಸು, ನಾನು ಮಲಗುತ್ತೇನೆ, ನನಗೆ ದಣಿವಾಗುತ್ತಿದೆ" ಎಂದು ಆನಂದನಿಗೆ ಹೇಳಿದನು.

೧೧. ಸ್ವಲ್ಪ ಸುಧಾರಿಸಿಕೊಂಡ ನಂತರ ಆನಂದನನ್ನು ಕರೆದು "ಹಿರಣ್ಯವತೀ ನದಿಯ ಆ ಕಡೆ ತೀರದಲ್ಲಿರುವ ಕುಶೀನಾರಾದ ಉಪವನವಾದ ಮಲ್ಲರ ಸಾಲವನಕ್ಕೆ ಹೋಗೋಣ" ಎಂದು ಹೇಳಿದನು.

೧೨. ಆನಂದನ ಜೊತೆ ಸಾಲವನವನ್ನು ತಲುಪಿದ ಕೂಡಲೇ "ನನಗೆ ತುಂಬಾ ಆಯಾಸವಾಗುತ್ತಿದೆ, ಮಲಗುತ್ತೇನೆ" ಎಂದು ಹೇಳಿ, ವಸ್ತ್ರವನ್ನು ಎರಡು ಸಾಲವೃಕ್ಷಗಳ ನಡುವೆ ಹಾಸಲು ಆನಂದನಿಗೆ ಹೇಳಿದ.

೧೩. ಆನಂದ ಹೊದಿಕೆಯನ್ನು ಹಾಸಿದ. ಅದರ ಮೇಲೆ ತಥಾಗತನು ಮಲಗಿದ.

# ಭಾಗ : ೩
# ಬುದ್ಧನ ಕೊನೆಯ ದಿನಗಳು

೧. ಉತ್ತರಾಧಿಕಾರಿಯ ನೇಮಕ
೨. ಕೊನೆಯ ಅನುಯಾಯಿ
೩. ಕೊನೆಯ ಮಾತುಗಳು
೪. ಆನಂದನ ಶೋಕ
೫. ಮಲ್ಲರ ಶೋಕ ಮತ್ತು ಭಿಕ್ಷುವೊಬ್ಬನ ಸಂತಸ
೬. ಅಂತಿಮ ಕ್ರಿಯೆಗಳು
೭. ಚಿತಾಭಸ್ಮಕ್ಕಾಗಿ ಕಲಹ
೮. ಬುದ್ಧನಿಗೆ ನಿಷ್ಠೆ

# ೧. ಉತ್ತರಾಧಿಕಾರಿಯ ನೇಮಕ

೧ ತಥಾಗತನು ಒಮ್ಮೆ ಶಾಕ್ಯರ ಕುಲದಲ್ಲಿ ಬಿಲ್ಗಾರರೆಂದು ಕರೆಯಲಾಗುತ್ತಿದ್ದ ಕುಟುಂಬಕ್ಕೆ ಸೇರಿದ ಆಮ್ರವನದಲ್ಲಿ ತಂಗಿದ್ದ.

೨ ಆಗಷ್ಟೇ ನಾತಪುತ್ರನೆಂಬ ನಿಗಂಥ ಸತ್ತಿದ್ದ. ಅವನ ಸಾವಿನಿಂದ ನಿಗಂಥರು ಪರಸ್ಪರ ಕಿತ್ತಾಡಿಕೊಂಡು ವಾಗ್ಬಾಣಗಳಿಂದ ಗಾಯ ಮಾಡಿಕೊಂಡು ಎರಡು ಗುಂಪಾಗಿದ್ದರು.

೩ ಆಗಷ್ಟೇ ಶಿಷ್ಯವೃತ್ತಿ ಆರಂಭಿಸಿದ್ದ ಚುಂದನು ಪಾವಾದಲ್ಲಿ ಮಳೆಗಾಲವನ್ನು ಕಳೆದು ಪೂಜ್ಯ ಆನಂದನನ್ನು ನೋಡಲು ಬಂದನು. ಅವನಿಗೆ ಅಭಿವಂದಿಸಿ, ನಂತರ ಹೇಳಿದ: "ನಾತಪುತ್ತ ನಿಗಂಥ ಈಗಷ್ಟೇ ಪಾವಾದಲ್ಲಿ ಕಾಲವಾಗಿ ಹೋಗಿದ್ದಾನೆ. ಆತನ ಮರಣಾನಂತರ ಅವನ ಶಿಷ್ಯರು ಗುಂಪಾಗಿ ಹೋಗಿದ್ದಾರೆ. ಅವರನ್ನು ರಕ್ಷಿಸುವವರು ಯಾರೂ ಇಲ್ಲ. ಹಾಗಾಗಿ ಅವರವರಲ್ಲೇ ಕಿತ್ತಾಡಿಕೊಂಡು ಒಬ್ಬರನೊಬ್ಬರು ಗಾಯಗೊಳಿಸಿಕೊಳ್ಳುತ್ತಿದ್ದಾರೆ."

೪ ಅದಕ್ಕೆ ಆನಂದನು, "ಗೆಳೆಯ ಚುಂದ, ಇದು ಭಗವಾನರ ಗಮನಕ್ಕೆ ತರಲು ತಕ್ಕುದಾದ ವಿಷಯವಾಗಿದೆ. ಭಗವಾನರ ಬಳಿಗೆ ಹೋಗೋಣ. ಈ ಬಗ್ಗೆ ಭಗವಾನರಿಗೆ ತಿಳಿಸೋಣ" ಎಂದನು.

೫ "ಹಾಗೆಯೇ ಆಗಲಿ" ಎಂದು ಚುಂದ ಉತ್ತರಿಸಿದ.

೬ ಹಾಗಾಗಿ ಪೂಜ್ಯ ಆನಂದ ಹಾಗೂ ಹೊಸ ಶಿಷ್ಯ ಚುಂದ ತಥಾಗತನ ಬಳಿಗೆ ಹೋದರು. ಅವನಿಗೆ ವಂದಿಸಿ, ನಿಗಂಥರ ವಿಷಯವನ್ನು ತಿಳಿಸಿ, ಉತ್ತಾರಾಧಿಕಾರಿಯೊಬ್ಬನನ್ನು ನೇಮಿಸುವುದರ ಆವಶ್ಯಕತೆಯನ್ನು ಕುರಿತು ತಿಳಿಸಿದನು.

೭ ತಥಾಗತನು ಚುಂದ ಹೇಳಿದ್ದನ್ನು ಕೇಳಿ ನಂತರ ಉತ್ತರಿಸಿದ: "ಚುಂದ, ಲೋಕದಲ್ಲಿ ಮಹಾ ಜ್ಞಾನಿಯಾದ (ಸಮ್ಮಾಸಂಬುದ್ಧನಾದ) ಅರ್ಹಂತನೊಬ್ಬ ಉದಯಿಸುತ್ತಾನೆ. ಅವನು ಸಿದ್ಧಾಂತವೊಂದನ್ನು ಚೆನ್ನಾಗಿ ಪ್ರತಿಪಾದಿಸುತ್ತಾನೆ. ಅದನ್ನವನು ಚೆನ್ನಾಗಿ ವಿವರಿಸುತ್ತಾನೆ. ಅದು ಪರಿಣಾಮಕಾರಿ ಮಾರ್ಗದರ್ಶನವನ್ನು ನೀಡುತ್ತದೆ. ಶಾಂತಿಯನ್ನೂ ತರುತ್ತದೆ. ಆದರೆ ಅಂಥ ಧರ್ಮವನ್ನು ಗುರುಗಳು ಮರಣ ಹೊಂದಿದಾಗ, ಶಿಷ್ಯರು ಸರಿಯಾಗಿ ಗ್ರಹಿಸಿಕೊಳ್ಳದೇ, ಅದನ್ನು ರಕ್ಷಣೆಗೆ ಸರಿಯಾಗಿ ಬಳಸಿಕೊಳ್ಳಲಿಲ್ಲ ಎಂದು ಜನರಿಗೆ ಚೆನ್ನಾಗಿ ಮನವರಿಕೆಯಾಗುತ್ತದೆ.

೮ "ಚುಂದ, ಈಗ ಅಂತಹ ಗುರು ಸತ್ತಾಗ ಶಿಷ್ಯರಿಗೆ ಅನುತಾಪ ಉಂಟಾಗುತ್ತದೆ ಮತ್ತು ಧಮ್ಮಕ್ಕೆ ಬಹು ದೊಡ್ಡ ಅಪಾಯವುಂಟಾಗುತ್ತದೆ.

೯ "ಚುಂದ, ಲೋಕದಲ್ಲಿ ಸಮ್ಮಾಸಂಬುದ್ಧನಾದ ಅರ್ಹಂತನೊಬ್ಬನು ಉದಿಸುತ್ತಾನೆ. ಅವನು ಧಮ್ಮವನ್ನು ಚೆನ್ನಾಗಿ ವಿವರಿಸುತ್ತಾನೆ, ಅದು ಪರಿಣಾಮಕಾರಿಯಾದಂತಹ ಮಾರ್ಗದರ್ಶನವನ್ನೂ ನೀಡುತ್ತದೆ. ಶಾಂತಿಯನ್ನೂ ತರುತ್ತದೆ. ಅಂತಹ ಧರ್ಮವನ್ನು ಗುರು ಮರಣ ಹೊಂದಿದಾಗ ಶಿಷ್ಯರು ಸರಿಯಾಗಿ ಗ್ರಹಿಸಿಕೊಂಡರೆ, ಅತ್ಯುನ್ನತ ಬದುಕಿನ ವ್ಯಾಪ್ತಿ ಅವರಿಗೆ ಅರಿವಾಗಿರುತ್ತದೆ.

೧೦ "ಚುಂದ, ಅಂಥ ಗುರು ಸತ್ತಾಗ ಶಿಷ್ಯರಿಗೆ ಅನುತಾಪವಾಗುವುದಿಲ್ಲ. ಹಾಗಾಗಿ ಒಬ್ಬ ಉತ್ತರಾಧಿಕಾರಿ ಏಕೆ ಬೇಕು?"

೧೧ ಆನಂದ ಇಂಥದ್ದೇ ಪ್ರಶ್ನೆಯನ್ನು ಬೇರೊಂದು ಸಂದರ್ಭದಲ್ಲಿ ಎತ್ತಿದಾಗ ತಥಾಗತನು ಹೇಳಿದ್ದ: "ಏನು ತಿಳಿದಿದ್ದೀಯ ಆನಂದ? ನಾನು ಬೋಧಿಸಿದ್ದಕ್ಕೆ ವ್ಯತಿರಿಕ್ತವಾಗಿ ಒಬ್ಬನೇ ಒಬ್ಬ ಭಿಕ್ಷುವಾದರೂ ನಡೆದುಕೊಂಡಿರುವುದನ್ನು ನೋಡಿದ್ದೀಯಾ?"

೧೨ "ಇಲ್ಲ. ಆದರೆ, ಸುತ್ತಮುತ್ತ ಇರುವವರು ಬುದ್ಧನು ಕಾಲವಾದ ಮೇಲೆ ಸಂಘವನ್ನು ಅಥವಾ ಧರ್ಮವನ್ನು ಗೌರವಿಸುವ ಭಿಕ್ಷುಗಳ ನಡುವೆ ಜಗಳ ತಂದು ಹಾಕಬಹುದು. ಅದು ಎಲ್ಲರಿಗೂ ನೋವನ್ನುಂಟುಮಾಡುತ್ತದೆ.

೧೩ "ಆನಂದ, ಸಂಘದ ಶಿಸ್ತು ಹಾಗೂ ಕ್ರಮದ ಬಗ್ಗೆ ನಡೆಯುವ ಜಗಳ ಮಹತ್ತ್ವದ್ದಲ್ಲ. ಸಂಘದ ಸದಸ್ಯರಲ್ಲಿ (ಶ್ರಮಣರಲ್ಲಿ) ಮಾರ್ಗದ ಬಗ್ಗೆ ಸಂಭವಿಸಬಹುದಾದ ಜಗಳ ನಿಜಕ್ಕೂ ಮಹತ್ತ್ವದಾಗುತ್ತದೆ" ಎನ್ನುತ್ತಾನೆ ತಥಾಗತ.

೧೪ "ಮಾರ್ಗವನ್ನು ಕುರಿತಂತೆ ನಡೆಯುವ ಈ ಜಗಳವನ್ನು ಸರ್ವಾಧಿಕಾರಿಯೊಬ್ಬನಿಂದ ಪರಿಹರಿಸಲು ಸಾಧ್ಯವಿಲ್ಲ. ಹಾಗಾಗಿ ಈ ಜಗಳವನ್ನು ಹೇಗೆ ಪರಿಹಾರ ಮಾಡಲು ಸಾಧ್ಯ?

೧೫ "ಈ ವಿವಾದಗಳನ್ನು ಸರ್ವಾಧಿಕಾರಿಯೊಬ್ಬನಿಂದ ಬಗೆಹರಿಸಲು ಸಾಧ್ಯವಿಲ್ಲ.

೧೬ "ಈ ರೀತಿಯ ವಿವಾದಗಳ ಬಗ್ಗೆ ಸಂಘದವರೇ ತೀರ್ಮಾನ ತೆಗೆದುಕೊಳ್ಳಬೇಕು. ಇಡೀ ಸಂಘವು ಸೇರಿ ಒಮ್ಮತ ಬರುವವರೆಗೂ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಅದಕ್ಕೆ ಅನುಗುಣವಾಗಿ ತೀರ್ಮಾನ ತೆಗೆದುಕೊಳ್ಳಬೇಕು..

೧೭ "ಬಹುಸಂಖ್ಯಾತರ ಒಪ್ಪಿಗೆಯ ಆಧಾರದ ಮೇಲೆ ಅಂತಹ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕೇ ಹೊರತು ಒಬ್ಬ ಉತ್ತರಾಧಿಕಾರಿಯ ನೇಮಕದಿಂದ ಸಾಧ್ಯವಿಲ್ಲ."

## ೨. ಕೊನೆಯ ಅನುಯಾಯಿ

೧ ಆ ಸಮಯದಲ್ಲಿ ಅಲೆಮಾರಿಯಾದ ಸುಬದ್ಧ ಕುಶೀನಾರದಲ್ಲಿ ತಂಗಿದ್ದ. "ಇಂದು ರಾತ್ರಿಯ ಕೊನೆಯ ಝಾವದಲ್ಲಿ ವಿರಕ್ತನಾದ ಬುದ್ಧನು ಪರಿನಿರ್ವಾಣ ಹೊಂದುತ್ತಾನೆ ಎಂಬ ಸುದ್ದಿ ಬಹಳ ಬಲವಾಗಿ ಹಬ್ಬಿತ್ತು." ಆಗ ಅಲೆಮಾರಿ ಸುಬದ್ಧನ ಮನದಲ್ಲೊಂದು ಆಲೋಚನೆ ಬಂದಿತು.

೨ ಹಿರಿಯರು, ಅನುಭವಿಗಳು, ಗುರುಪ್ರಾಯರೂ ಆಗಿರುವ ಭಿಕ್ಷುಗಳೆಲ್ಲರ ಅಭಿಪ್ರಾಯದಲ್ಲಿ ಅರ್ಹರೂ, ಪೂರ್ಣಜ್ಞಾನಿಗಳೂ ಆಗಿರುವ ತಥಾಗತರು ಭೂಮಿಯಲ್ಲಿ ಉದಯಿಸುವುದು ತೀರಾ ಅಪರೂಪಕ್ಕೆ ಒಮ್ಮೆ ಮಾತ್ರ. ಈ ದಿನ ವಿರಕ್ತ ಗೌತಮ ಪರಿನಿರ್ವಾಣ ಹೊಂದುತ್ತಾನೆ ಎನ್ನುತ್ತಾರೆ. ಈಗ ನನ್ನಲ್ಲಿ ಸಂಶಯವೊಂದು ತಲೆದೋರಿದೆ. ನನಗೆ ಗೋತಮನ ಬಗ್ಗೆ ಭರವಸೆಯಿದೆ. ನಾನು ವಿರಕ್ತ ಗೋತಮನ ಬಳಿಗೆ ಹೋದರೆ ನನ್ನ ಸಂಶಯ ನಿವಾರಣೆಯಾಗಬಹುದು ಎನ್ನಿಸುತ್ತದೆ.

೩ ಕೂಡಲೇ, ಅಲೆಮಾರಿ ಸುಬದ್ಧನು ಮಲ್ಲರ ಸಾಲವನಕ್ಕೆ ಹೋಗುವ ಹಾದಿ ಹಿಡಿದ. ಅಲ್ಲಿ ಆನಂದನನ್ನು ಕಾಣುತ್ತಲೇ ಸುಬದ್ಧನು ಆನಂದನಿಗೆ ತನ್ನ ಯೋಚನೆಯನ್ನು ತಿಳಿಸಿದ ಮತ್ತು "ಓ ಒಡೆಯನಾದ ಆನಂದ! ಒಂದೇ ಒಂದು ಬಾರಿ ಗೋತಮನ ದರ್ಶನವನ್ನು ಮಾಡಿಸು" ಎಂದು ಕೇಳಿಕೊಂಡ.

೪ ಅದಕ್ಕೆ ಆನಂದ "ಸಾಕು, ಗೆಳೆಯ ಸುಬದ್ಧ! ತಥಾಗತನಿಗೆ ತೊಂದರೆ ಕೊಡಬೇಡ! ಅವನು ಬಹಳ ದಣಿದಿದ್ದಾನೆ" ಎಂದು ಅಲೆಮಾರಿಯಾದ ಸುಬದ್ಧನಿಗೆ ಹೇಳಿದ.

೫ ಆದರೆ ಸುಬದ್ಧನು ಎರಡನೇ ಸಲ, ಮೂರನೇ ಸಲ ಅದೇ ಬೇಡಿಕೆಯನ್ನು ಮುಂದಿಟ್ಟ ಮತ್ತು ಆನಂದನು ಅದೇ ಉತ್ತರವನ್ನು ನೀಡಿದ.

೬ ಆನಂದ ಸುಬದ್ಧರ ನಡುವಿನ ಮಾತುಕತೆ ಒಳಗಿದ್ದ ಬುದ್ಧನ ಕಿವಿಗೆ ಬಿತ್ತು. ಅವನು ಆನಂದನನ್ನು ಕರೆದು, "ಸಾಕು ಆನಂದ! ಸುಬದ್ಧನನ್ನು ತಡೆಯಬೇಡ. ಅವನು ನನ್ನ ಬಳಿಗೆ ಬರಲಿ. ಸುಬದ್ಧ ಏನನ್ನೋ ಕೇಳಿ ತಿಳಿದುಕೊಳ್ಳಬೇಕು ಎಂಬ ಆಸೆಯಿಂದಲೇ ಬಂದಿದ್ದಾನೆಯೇ ಹೊರತು, ನನಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದಲ್ಲ. ಹಾಗಾಗಿ ನಾನು ಕೊಡುವ ಉತ್ತರವನ್ನು ಅವನು ಬಹಳ ಬೇಗ ಗ್ರಹಿಸಿಕೊಳ್ಳುತ್ತಾನೆ."

೭ ಆಗ ಆನಂದ ಅಲೆಮಾರಿ ಸುಬದ್ಧನನ್ನು ಕರೆದು "ಗೆಳೆಯ ಸುಬದ್ಧ, ಒಳಗೆ ಹೋಗು. ತಥಾಗತನು ನಿನಗೆ ಒಳಗೆ ಬರಲು ಅನುಮತಿ ನೀಡಿದ್ದಾನೆ" ಎಂದನು.

೮ ಅಲೆಮಾರಿ ಸುಬದ್ಧನು ಒಳಕ್ಕೆ ಹೋಗಿ ತುಂಬು ಪ್ರೀತಿಯಿಂದ ತಥಾಗತನಿಗೆ ನಮಸ್ಕರಿಸಿ ಕುಶಲೋಪರಿಯ ನಂತರ ಒಂದು ಪಕ್ಕದಲ್ಲಿ ಕುಳಿತುಕೊಂಡನು. ಹಾಗೆ ಕುಳಿತುಕೊಂಡು ತಥಾಗತನನ್ನು ಕೇಳಿದನು:

೯ "ಭಗವಾನ್ ಗೌತಮನೇ, ಹಲವಾರು ಪಂಥಗಳ, ಸಿದ್ಧಾಂತದ ಪ್ರವರ್ತಕರೂ, ಗುರುಸ್ಥಾನದಲ್ಲಿ ಇರುವವರೂ, ಜನತೆಯಿಂದ ಮಾನ್ಯರಾಗಿರುವ ಮತ್ತು ಸಂತರು ಎಂದು ಗುರುತಿಸಲ್ಪಟ್ಟಿರುವ ಪೂರಣ ಕಚ್ಚಪ, ಮಖ್ಖಾಲಿ ಗೋಸಾಲ, ಅಜಿತ ಕೇಶಕಂಬಳಿ, ಬೆಲತ್ತಿಪುತ್ತ ಸಂಜಯ, ಪುಕುದ ಕಚ್ಚಾಯನ, ನಾಥಕುಲದ ನಿಗಂಥ ಇವರೆಲ್ಲರೂ ತಮ್ಮ ಜ್ಞಾನದ ಮೂಲಕ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆ, ಜ್ಞಾನೋದಯವನ್ನು ಹೊಂದಿದ್ದಾರೆ ಎಂದು ಹೇಳಿಕೊಳ್ಳುತ್ತಾರೆ. ಅವರೆಲ್ಲರೂ ತಮ್ಮ ಜ್ಞಾನದಿಂದಲೇ ಜ್ಞಾನೋದಯ ಹೊಂದಿದರೆ? ಅಥವಾ ಕೆಲವರು ಮಾತ್ರ ಸ್ವಜ್ಞಾನದಿಂದ ಜ್ಞಾನೋದಯ ಹೊಂದಿ ಉಳಿದವರು ಇನ್ನೂ ಹೊಂದಿಲ್ಲವೆ?" ಎಂದು ಬುದ್ಧನನ್ನು ಕೇಳಿದನು.

೧೦ "ಸುಬದ್ಧ ಅದು ಹಾಗಿರಲಿ! ಅವರೆಲ್ಲರೂ ಜ್ಞಾನೋದಯ ಹೊಂದಿದವರೊ ಅಥವಾ ಕೆಲವರು ಮಾತ್ರವೊ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳಬೇಡ. ನಾನು ನಿನಗೆ ಧರ್ಮವನ್ನು ತಿಳಿಸಿಕೊಡುತ್ತೇನೆ. ನೀನು ಗಮನವಿಟ್ಟು ಕೇಳಿ, ಮನದಟ್ಟು ಮಾಡಿಕೋ. ಈಗ ನಾನು ಹೇಳುತ್ತೇನೆ."

೧೧ "ಹಾಗೆಯೇ ಆಗಲಿ" ಎಂದ ಸುಬದ್ಧನು, ಬುದ್ಧನ ಬೋಧನೆಯನ್ನು ಮನಸಿಟ್ಟು ಕೇಳಿಸಿಕೊಂಡ. ಆಗ ತಥಾಗತನು ಈ ರೀತಿ ಹೇಳಿದ:

೧೨ "ಸುಬದ್ಧ, ಯಾವ ಧರ್ಮ ಮತ್ತು ಸಿದ್ಧಾಂತದಲ್ಲಿ ಆರ್ಯ ಅಷ್ಟಾಂಗ ಮಾರ್ಗವು ಕಂಡುಬರುವುದಿಲ್ಲವೊ, ಅಲ್ಲಿ ಅರ್ಹಂತನೊಬ್ಬ ಕಾಣಸಿಗುವುದಿಲ್ಲ. ಮತ್ತು ಯಾವ ಧರ್ಮ ಮತ್ತು ಸಿದ್ಧಾಂತದಲ್ಲಿ ಆರ್ಯ ಅಷ್ಟಾಂಗ ಮಾರ್ಗವು ಕಂಡುಬರುವುದೊ ಅಲ್ಲಿ ಅರ್ಹಂತನನ್ನು ಕಾಣಬಹುದು" ಎಂದು ಬುದ್ಧನು ಹೇಳಿದನು.

೧೩ "ಈ ನನ್ನ ಮತ ಧರ್ಮದಲ್ಲಿ ಆರ್ಯ ಅಷ್ಟಾಂಗ ಮಾರ್ಗಗಳು ಇವೆ. ಹಾಗಾಗಿ ಇಲ್ಲಿ ಸರ್ವಸಂಗ ಪರಿತ್ಯಾಗಿಯಾದ ಅರ್ಹಂತನನ್ನು ಕಾಣಬಹುದು. ಉಳಿದ ಮತಧರ್ಮಗಳಲ್ಲಿ ಅರ್ಹಂತರನ್ನು

ಕಾಣಲಾಗುವುದಿಲ್ಲ. ಆದರೆ ಸುಬದ್ಧ, ಈ ಮತಧರ್ಮವನ್ನು ಭಿಕ್ಷುಗಳು ನಿಷ್ಠೆಯಿಂದ ಪಾಲಿಸಿದರೆ ಈ ಲೋಕದಲ್ಲಿ ಅರ್ಹಂತರಿಗೆ ಕೊರತೆಯಿರುವುದಿಲ್ಲ" ಎಂದನು.

೧೪ "ನಾನು ಸದ್ಧರ್ಮದ ಹುಡುಕಾಟಕ್ಕೆ ಪ್ರಾರಂಭಿಸಿದಾಗ ನನಗೆ ಇಪ್ಪತ್ತೊಂಭತ್ತು ವರ್ಷ ವಯಸ್ಸಾಗಿತ್ತು.

೧೫ "ಸುಬದ್ಧ, ನಾನು ಪ್ರಾಪಂಚಿಕ ಬದುಕನ್ನು ತ್ಯಜಿಸಿ ಋಜುಮಾರ್ಗಕ್ಕೆ ಕಾಲಿಟ್ಟು ೫೦ಕ್ಕೂ ಹೆಚ್ಚು ವರ್ಷಗಳಾಗಿವೆ."

೧೬ ಬುದ್ಧನು ಹೀಗೆ ಹೇಳುತ್ತಿದ್ದಂತೆಯೇ ಸುಬದ್ಧನು, "ನಿನ್ನ ಮಾತುಗಳು ತುಂಬಾ ಉತ್ತಮವಾಗಿವೆ. ತುಂಬ ಸೊಗಸಾಗಿವೆ.

೧೭ "ಇದರಿಂದ ಪತನಗೊಂಡಿರುವುದನ್ನು ಪುನರ್ ಸ್ಥಾಪಿಸುವಂತೆ, ಗೂಢವಾಗಿರುವುದನ್ನು ಬಯಲು ಮಾಡುವಂತೆ, ಹಾದಿ ತಪ್ಪಿದವನಿಗೆ ಸೂಕ್ತ ಮಾರ್ಗವನ್ನು ತೋರುವಂತೆ, ಕತ್ತಲಿನಲ್ಲಿ ದೀಪ ಹಿಡಿದು ಕಣ್ಣಿದ್ದವರಿಗೆ ನೋಡಲು ಅನುಕೂಲವಾಗಿದೆ.

೧೮ "ನನಗೆ ತಥಾಗತನಿಂದ ಸತ್ಯದ ದರ್ಶನವಾಗಿದೆ. ನಾನೂ ಕೂಡ ಸತ್ಯ ಹಾಗೂ ಸಂಘಕ್ಕಾಗಿ ತಥಾಗತನನ್ನೇ ಆಶ್ರಯಿಸುತ್ತೇನೆ."

೧೯ "ಸುಬದ್ಧ, ಬೇರೊಂದು ಪಂಥದ ಅನುಯಾಯಿಯಾಗಿದ್ದು, ನಂತರ ಸಂಘಕ್ಕೆ ಪ್ರವೇಶ ಬಯಸುವವರು ೪ ತಿಂಗಳ ಕಾಲ ನೀತಿ ಪರೀಕ್ಷೆಗೆ ಒಳಪಡಬೇಕಾಗುತ್ತದೆ" ಎಂದನು.

೨೦ "ಹಾಗೊಂದು ನಿಯಮವಿದ್ದಲ್ಲಿ ನಾನು ಖಂಡಿತವಾಗಿಯೂ ಪರೀಕ್ಷಾರ್ಥದಲ್ಲೂ ಇರುತ್ತೇನೆ."

೨೧ ಆದರೆ ಬುದ್ಧನು "ನಾನು ವ್ಯಕ್ತಿಗಳಲ್ಲಿರುವ ವ್ಯತ್ಯಾಸವನ್ನು ಗುರುತಿಸುತ್ತೇನೆ" ಎಂದು ಹೇಳಿ, ಪೂಜ್ಯ ಆನಂದನನ್ನು ಕರೆದು, "ಆನಂದ, ಈಗಲೇ ಸುಬದ್ಧನನ್ನು ಸಂಘಕ್ಕೆ ಸೇರಿಸಿಕೋ," ಎಂದು ಹೇಳಿದನು.

೨೨ ಆನಂದನು "ಹಾಗೆಯೇ ಆಗಲಿ" ಎಂದು ಬುದ್ಧನ ಮಾತಿಗೆ ಒಪ್ಪಿಕೊಂಡನು.

೨೩ ಆಗ ಅಲೆಮಾರಿ ಸುಬದ್ಧನು "ಗೆಳೆಯ ಆನಂದ, ನೀವು ಭಾಗ್ಯಶಾಲಿಗಳು. ಆನಂದ. ನೀವೆಲ್ಲರೂ ನಿಜವಾಗಿಯೂ ಅದೃಷ್ಟವಂತರು. ನಿಮಗೆಲ್ಲಾ ಸ್ವತಃ ಬುದ್ಧನೇ ದೀಕ್ಷೆ ನೀಡಿ ಸಂಘಕ್ಕೆ ಬರಮಾಡಿಕೊಂಡಿದ್ದಾನೆ" ಎಂದು ಹೇಳಿದನು.

೨೪ ಅದಕ್ಕೆ ಆನಂದನು "ಅದು ನಿನ್ನ ವಿಷಯಕ್ಕೂ ಅನ್ವಯಿಸುತ್ತದೆ" ಎಂದು ಸುಬದ್ಧನಿಗೆ ಹೇಳಿದನು.

೨೫ ಹೀಗೆ ಬುದ್ಧನ ಆಣತಿಯಂತೆ ಅಲೆಮಾರಿ ಸುಬದ್ಧನನ್ನು ಸಂಘಕ್ಕೆ ಸೇರಿಸಿಕೊಂಡನು. ಹೀಗೆ ಬುದ್ಧನೇ ದೀಕ್ಷೆ ನೀಡಿ ಸಂಘಕ್ಕೆ ಸೇರಿಸಿಕೊಂಡ ಶಿಷ್ಯರಲ್ಲಿ ಸುಬದ್ಧನೇ ಕೊನೆಯವನು.

## ೩. ಕೊನೆಯ ಮಾತುಗಳು

೧ ನಂತರ ಬುದ್ಧನು ಪೂಜ್ಯ ಆನಂದನಿಗೆ ಈ ರೀತಿ ಹೇಳಿದ:

೨ "ಆನಂದ, ನನ್ನ ಮರಣದ ನಂತರ, ನೀನು ಹೇಳಬಹುದು 'ಇನ್ನು ನಮಗೆ ಗುರುಬೋಧನೆ ಇಲ್ಲ; ನಮಗೆ ಗುರುವೂ ಇಲ್ಲ!' ಹಾಗೆ ಭಾವಿಸಬೇಡ. ನಾನು ಪಾಲಿಸುತ್ತಿದ್ದ ಮತ್ತು ಬೋಧಿಸುತ್ತಿದ್ದ ಧರ್ಮ ಮತ್ತು ನಿಯಮಗಳೇ ನನ್ನ ಮರಣದ ನಂತರ ನಿನಗೆ ಗುರು.

೩ "ಆನಂದ, ಸಂಘದ ಸದಸ್ಯರು ಪರಸ್ಪರ ಒಬ್ಬರನ್ನೊಬ್ಬರು 'ಗೆಳೆಯ' ಎಂದು ಸಂಬೋಧಿಸುತ್ತಿದ್ದರು. ಆದರೆ ನನ್ನ ಮರಣದ ನಂತರ ಈ ಸಂಪ್ರದಾಯ ಮುಂದುವರಿಯುವುದು ಬೇಡ. ಸಂಘದ

ಹಿರಿಯ ಸದಸ್ಯರು ಹೊರ ಸದಸ್ಯರನ್ನು ಹೆಸರು ಹಿಡಿದು ಅಥವಾ ಕುಲನಾಮದಿಂದ ಅಥವಾ ಗೆಳೆಯ ಎಂದು ಸಂಬೋಧಿಸಲಿ. ಆದರೆ ಸಂಘದ ಹೊಸ ಸದಸ್ಯರು ಹಿರಿಯರನ್ನು 'ಭಗವಾನ್' ಎಂದಾಗಲಿ ಅಥವಾ 'ಭಂತೇ' ಎಂದಾಗಲಿ ಸಂಬೋಧಿಸಲಿ."

೪ "ಸಂಘವು ಬಯಸಿದಲ್ಲಿ, ನನ್ನ ಮರಣದ ನಂತರ ಸಣ್ಣಪುಟ್ಟ ನಿಯಮಗಳನ್ನು ರದ್ದುಗೊಳಿಸಲಿ."

೫ "ಆನಂದ, ಭಿಕ್ಷು ಚೆನ್ನ ಎಷ್ಟು ಹಠಮಾರಿ, ದುಷ್ಟ ಹಾಗೂ ಅಶಿಸ್ತಿನ ಮನುಷ್ಯ ಎಂಬುದು ನಿನಗೆ ತಿಳಿಯದ ವಿಚಾರವೇನಲ್ಲ."

೬ "ನನ್ನ ಮರಣದ ನಂತರ ಅವನಿಗೆ ಕಠಿಣತರವಾದ ಶಿಕ್ಷೆಯು ವಿಧಿಸಲ್ಪಡಲಿ."

೭ "ಭಗವಾನ್, 'ಕಠಿಣತರವಾದ ಶಿಕ್ಷೆ' ಎಂದರೇನರ್ಥ?" ಎಂದು ಆನಂದ ಕೇಳಿದನು.

೮ "ಚೆನ್ನ ಏನೇ ಹೇಳಲಿ, ಅವನ ಜೊತೆ ಮಾತನಾಡಬೇಡಿ. ಯಾರೂ ಅವನಿಗೆ ಬುದ್ಧಿ ಹೇಳಬೇಡಿ. ಭಿಕ್ಷುಗಳ್ಯಾರೂ ಅವನಿಗೆ ಯಾವ ಸೂಚನೆಯನ್ನೂ ನೀಡಬೇಡಿ. ಅವನನ್ನು ಒಂಟಿಯಾಗಿ ಬಿಟ್ಟುಬಿಡಿ. ಆಗ ಅವನು ಸುಧಾರಿಸಬಹುದು" ಎಂದನು.

೯ ಬುದ್ಧನು ಸಂಘದ ಭಿಕ್ಷುಗಳನ್ನುದ್ದೇಶಿಸಿ ಮಾತನಾಡಿದನು.

೧೦ "ಸಹೋದರರೇ, ನಿಮ್ಮಲ್ಲಿ ಯಾರ ಮನಸ್ಸಿನಲ್ಲಾದರೂ ಬುದ್ಧನ ಬಗ್ಗೆ ಅಥವಾ ಸಂಘ ಅಥವಾ ಮಾರ್ಗ, ಅಥವಾ ಮಾರ್ಗದ ಸಾಧನೆಯನ್ನು ಕುರಿತು ಅನುಮಾನ ಅಥವಾ ಗೊಂದಲ ಇರಬಹುದು. ಹಾಗೇನಾದರೂ ಇದ್ದಲ್ಲಿ 'ಆ ಬಗ್ಗೆ ನನ್ನಲ್ಲಿ ಚರ್ಚೆ ಮಾಡಬಹುದು. ಆಮೇಲೆ? ನಮ್ಮ ಗುರು ನಮ್ಮ ಎದುರಿಗೇ ಇದ್ದ, ಆದರೆ ಆಗ ನಮಗೆ ತಥಾಗತನನ್ನು ಪ್ರಶ್ನಿಸುವ ಮನಸ್ಸೇ ಇರಲಿಲ್ಲ' ಎಂದು ಪಶ್ಚಾತ್ತಾಪ ಪಡುವಂತಾಗಬಾರದು" ಎಂದು ಹೇಳಿದನು.

೧೧ ಈ ಮಾತುಗಳನ್ನು ಕೇಳಿದಾಗ ಭಿಕ್ಷುಗಳು ಮೌನವಾಗಿದ್ದರು.

೧೨ ಇದೇ ಪ್ರಶ್ನೆಗಳನ್ನು ತಥಾಗತನು ಭಿಕ್ಷುಗಳಿಗೆ ಎರಡನೆಯ ಸಲ ಮತ್ತು ಮೂರನೆಯ ಸಲ ಕೇಳಿದ. ಮೂರನೆಯ ಸಲವೂ ಭಿಕ್ಷುಗಳು ಮೌನವಾಗಿಯೇ ಇದ್ದರು.

೧೩ ಆಗ ತಥಾಗತನು ಹೇಳಿದ: "ಭಿಕ್ಷುಗಳೇ, ಬಹುಶಃ ಒಡೆಯನ ಮೇಲಿನ ಗೌರವದಿಂದ ನೀವು ಏನನ್ನೂ ಕೇಳುತ್ತಿಲ್ಲ ಅನ್ನಿಸುತ್ತದೆ. ಹಾಗಾದರೆ ಭಿಕ್ಷುಗಳೇ, ಒಬ್ಬ ಸ್ನೇಹಿತನಾಗಿ ನನ್ನನ್ನು ಕೇಳಿ."

೧೪ ಆಗಲೂ ಭಿಕ್ಷುಗಳು ಮೌನವಾಗಿಯೇ ಇದ್ದರು.

೧೫ ಆಗ ಆನಂದನು ತಥಾಗತನನ್ನು ಉದ್ದೇಶಿಸಿ ಹೇಳುತ್ತಾನೆ: "ಆಶ್ಚರ್ಯವಾಗಿದೆ ಭಗವಾನ್! ಇದೊಂದು ಅದ್ಭುತ! ಭಿಕ್ಷುಗಳ ಈ ಸಂಘದ ಬಗ್ಗೆ ನನಗೆ ನಂಬಿಕೆ ಹುಟ್ಟಿದೆ. ಬುದ್ಧನ ಬಗ್ಗೆಯಾಗಲಿ, ಧರ್ಮದ ಬಗ್ಗೆಯಾಗಲಿ, ಸಂಘದ ಬಗ್ಗೆಯಾಗಲಿ, ಮಾರ್ಗದ ಬಗ್ಗೆಯಾಗಲಿ ಅಥವಾ ಮಾರ್ಗ ವಿಧಾನದ ಬಗ್ಗೆಯಾಗಲಿ ಯಾವುದೇ ಭಿಕ್ಷುವಿಗಾಗಲೀ ಯಾವುದೇ ಅನುಮಾನವೇ ಆಗಲಿ ಗೊಂದಲವೇ ಆಗಲಿ ಇಲ್ಲ."

೧೬ "ನೀನು ವಿಶ್ವಾಸದಿಂದ ಮಾತಾಡುತ್ತಿದ್ದೀಯ, ಆನಂದ. ಆದರೆ ತಥಾಗತನಲ್ಲಿ ವಾಸ್ತವದ ಬಗ್ಗೆ ಮಾಹಿತಿ ಇದೆ. ಯಾವುದೇ ಭಿಕ್ಷುವಿನಲ್ಲೂ ಈ ಬಗ್ಗೆ ಯಾವುದೇ ಅನುಮಾನವೇ ಆಗಲಿ ಗೊಂದಲವೇ ಆಗಲಿ ಇಲ್ಲ. ಆನಂದ, ನನ್ನ ಈ ಐನೂರು ಸೋದರರಲ್ಲಿ, ತೀರಾ ಹಿಂದುಳಿದವನೂ ಕೂಡ ಪ್ರವಾಹವನ್ನು ಈಜಬಲ್ಲ, ಅವನತಿಯಿಂದ ಪಾರಾಗಬಲ್ಲ. ಉಚ್ಚ ಜ್ಞಾನವನ್ನು ಸಂಪಾದಿಸಬಲ್ಲ."

೧೭ ನಂತರ ತಥಾಗತನು ಸೋದರರಿಗೆ ಹೇಳುತ್ತಾನೆ:

೧೮ "ಬನ್ನಿ ಸೋದರರೆ, ನಾನು ನೆನಪಿಸಿಕೊಡುತ್ತೇನೆ. 'ಸಂಯುಕ್ತ ವಸ್ತುಗಳೆಲ್ಲವೂ ನಾಶ ಹೊಂದಲೇ ಬೇಕು. ಗಮನವಿಟ್ಟು ಧರ್ಮವನ್ನು ಅನುಸರಿಸಿ."

೧೯ ಅವು ತಥಾಗತನ ಕೊನೆಯ ಮಾತುಗಳು.

## ೪. ಆನಂದನ ಶೋಕ

೧ ವಯಸ್ಸಾದಂತೆ ತಥಾಗತನನ್ನು ನೋಡಿಕೊಳ್ಳುವುದಕ್ಕೆ ಪರಿಚಾರಕರು ಬೇಕಾಯಿತು.

೨ ಮೊದಲು ಅವನು ನಂದನನನ್ನು ಆರಿಸಿಕೊಂಡ. ನಂತರ ಆನಂದನನ್ನು ಸಹಾಯಕನನ್ನಾಗಿ ಆರಿಸಿಕೊಂಡ. ಬುದ್ಧನ ಕೊನೆಯ ಕ್ಷಣದವರೆಗೂ ಆನಂದ ಅವನನ್ನು ನೋಡಿಕೊಂಡ.

೩ ಆನಂದ ಬರಿಯ ಸೇವಕನಾಗಿರಲಿಲ್ಲ, ಸದಾ ಬುದ್ಧನೊಂದಿಗೇ ಇರುತ್ತಿದ್ದ, ಅವನ ಆತ್ಮೀಯ ಸಹಚರನಾಗಿದ್ದ.

೪ ತಥಾಗತನು ಕುಶೀನಾರಕ್ಕೆ ಬಂದು, ಸಾಲವೃಕ್ಷಗಳ ನಡುವೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಅವನಿಗೆ ತನ್ನ ಕೊನೆ ಸಮೀಪಿಸುತ್ತಿದೆ ಎಂದರಿವಾಯಿತು ಹಾಗೂ ಆನಂದನಿಗೆ ತನ್ನ ಅಂತರಂಗದ ಮಾತುಗಳನ್ನು ಹೇಳಲು ಸರಿಯಾದ ಸಮಯವೆನಿಸಿತು.

೫ ಹಾಗಾಗಿ ಆನಂದನನ್ನು ಕರೆದು ಹೇಳಿದ: "ಆನಂದ, ಈ ರಾತ್ರಿಯ ಮೂರನೇ ಜಾವ, ಕುಶೀನಾರದ ಉಪವನದಲ್ಲಿ, ಎರಡು ಸಾಲ ವೃಕ್ಷಗಳ ನಡುವೆ ತಥಾಗತನು ಕೊನೆಯುಸಿರೆಳೆಯುತ್ತಾನೆ."

೬ ಈ ರೀತಿ ಭಗವಾನನು ಹೇಳಿದಾಗ, ಪೂಜ್ಯನಾದ ಆನಂದನು: "ಓ ತಥಾಗತನೇ! ದಯವಿಟ್ಟು ಜನಸ್ತೋಮದ ಒಳಿತಿಗಾಗಿ ಹಾಗೂ ಸಂತೋಷಕ್ಕಾಗಿ, ಈ ಜಗದ ಮೇಲೆ ಕರುಣೆ ತೋರಿ, ದೇವರ ಹಾಗೂ ಜನರ ಕ್ಷೇಮಕ್ಕಾಗಿ, ಕಲ್ಪದ ಸಮಯದಲ್ಲಿ ಇರು" ಎಂದು ಬೇಡಿಕೊಂಡ.

೭ ಆನಂದನು ಮೂರು ಸಲ ಬೇಡಿಕೊಂಡ. ಆಗ ಬುದ್ಧ "ಸಾಕು ಆನಂದ, ತಥಾಗತನನ್ನು ಪ್ರಾರ್ಥಿಸಿಕೊಳ್ಳಬೇಡ! ಇಂಥ ಕೋರಿಕೆಯ ಕಾಲ ಮುಗಿದಿದೆ" ಎಂದನು.

೮ "ಆನಂದ, ನನಗೆ ವಯಸ್ಸಾಗಿದೆ. ನನ್ನ ಪಯಣದ ಕೊನೆ ಸಮೀಪಿಸಿದೆ. ನನ್ನ ಆಯುಷ್ಯ ತೀರುತ್ತಿದೆ. ನನಗೆ ಎಂಬತ್ತು ವರ್ಷವಾಯಿತು; ಸವೆದು ಹೋದ ಗಾಡಿ ಹೇಗೆ ಒಂದಲ್ಲ ಒಂದು ದಿನ ಬಿದ್ದುಹೋಗಬೇಕೋ ಹಾಗೆ ತಥಾಗತನ ದೇಹವು ಕೂಡ ಒಂದಲ್ಲ ಒಂದು ದಿನ ಹೋಗಲೇಬೇಕು ಎಂಬುದು ನನ್ನ ಭಾವನೆ" ಎಂದನು. ಇದನ್ನು ಕೇಳಿ ಆನಂದ ಹೊರಟುಹೋದನು.

೯ ಆನಂದನನ್ನು ಕಾಣದೆ ಬುದ್ಧನು ಉಳಿದ ಭಿಕ್ಷುಗಳನ್ನು ಕರೆದು "ಆನಂದ ಎಲ್ಲಿದ್ದಾನೆ?" ಎಂದು ವಿಚಾರಿಸಿದ. ಅದಕ್ಕವರು, "ಆನಂದ ಹೋಗಿ ಅಳುತ್ತಿದ್ದಾನೆ" ಎಂದರು.

೧೦ ಬುದ್ಧನು ಭಿಕ್ಷುವೊಬ್ಬನನ್ನು ಕರೆದು, "ಹೋಗು ತಮ್ಮಾ, ಆನಂದನನ್ನು ಬರಹೇಳು. ನಾನು ಹೇಳಿದೆನೆಂದು ಹೇಳು" ಎಂದನು.

೧೧ ಆತ "ಹಾಗೆಯೇ ಆಗಲಿ" ಎಂದ.

೧೨ ಆನಂದ ಮರಳಿ ಬಂದು, ಬುದ್ಧನ ಪಕ್ಕದಲ್ಲಿ ಕುಳಿತುಕೊಂಡ.

೧೩ ಆಗ ತಥಾಗತನು ಆನಂದನಿಗೆ ಹೇಳಿದ, "ಸಾಕು ಆನಂದ! ಇನ್ನು ಅಳಬೇಡ! ನಮ್ಮ ಆಪ್ತರು, ಇಷ್ಟರು, ಆತ್ಮೀಯರು ಇವರುಗಳಿಂದ ನಾವು ಬೇರ್ಪಟ್ಟು, ಅವರನ್ನು ಬಿಟ್ಟುಹೋಗಬೇಕಾಗುತ್ತದೆ.

ಅದು ಪ್ರಕೃತಿಸಹಜವಾದುದು ಎಂದು ನಾನು ಹಿಂದೆಯೂ ಅನೇಕ ಬಾರಿ ಹೇಳಿಲ್ಲವೇ?"

೧೪ "ಆನಂದ, ನಿನ್ನ ಅಪರಿಮಿತ ಪ್ರೀತಿ, ಕರುಣೆ ಹಾಗೂ ಒಳ್ಳೆತನಗಳಿಂದಾಗಿ ನೀನು ನನಗೆ ಬಹಳ ಕಾಲದಿಂದಲೂ ತುಂಬಾ ಆತ್ಮೀಯನಾಗಿಬಿಟ್ಟಿದ್ದೀಯೇ.

೧೫ "ನೀನು ಬಹಳ ಉತ್ತಮವಾದ ಕಾರ್ಯವನ್ನು ಮಾಡಿದ್ದೀಯೆ. ತೀವ್ರ ಶ್ರದ್ಧೆಯಿಂದ ಪ್ರಯತ್ನಿಸು. ನೀನು ಕೂಡ ವಿಷಯಲಂಪಟತೆ, ವ್ಯಕ್ತಿವಾದ, ಭ್ರಮೆ ಮತ್ತು ಅಜ್ಞಾನದಂಥ ಪಾಪಗಳಿಂದ ಮುಕ್ತನಾಗಬಹದು."

೧೬ ಉಳಿದ ಸೋದರರಿಗೆ ಆನಂದನನ್ನು ಕುರಿತು, ತಥಾಗತನು, "ಆನಂದನು ಅತ್ಯಂತ ವಿವೇಕಿ, ಸೋದರರೆ" ಎಂದು ಹೇಳಿದನು.

೧೭ "ಅವನಿಗೆ ತಥಾಗತನ ಬಳಿಗೆ ಬರಲು ಸೂಕ್ತ ಸಮಯ ಯಾವುದು ಎಂಬುದು ತಿಳಿದಿದೆ. ಸಂಘದ ಉಳಿದ ಸಹೋದರ ಸಹೋದರಿಯರು, ದೊರೆ ಅಥವಾ ದೊರೆಯ ಮಂತ್ರಿಗಳು, ಇತರ ಗುರುಗಳು ಹಾಗೂ ಶಿಷ್ಯರು ಬಂದು ತಥಾಗತನನ್ನು ಭೇಟಿ ಮಾಡಲು ಸೂಕ್ತ ಸಮಯ ಯಾವುದು ಎಂದು ಆನಂದನಿಗೆ ಚೆನ್ನಾಗಿ ತಿಳಿದಿದೆ.

೧೮ "ಸಹೋದರರೇ, ಆನಂದದಲ್ಲಿ ಈ ನಾಲ್ಕು ವಿಶೇಷತೆಗಳಿವೆ.

೧೯ "ಆನಂದನನ್ನು ಭೇಟಿ ಮಾಡಲು ಎಲ್ಲರಿಗೂ ತುಂಬಾ ಸಂತೋಷವಾಗುತ್ತದೆ. ಅವನನ್ನು ಭೇಟಿ ಮಾಡಿದಾಗ ಸಂತುಷ್ಟಗೊಳ್ಳುತ್ತಾರೆ. ಅವನ ಮಾತನ್ನು ಕೇಳಲು ಉತ್ಸುಕರಾಗಿರುತ್ತಾರೆ. ಆನಂದ ಮೌನವಾಗಿದ್ದಾಗ ಎಲ್ಲರಿಗೂ ಕಸಿವಿಸಿಯಾಗುತ್ತದೆ."

೨೦ ಇದಾದ ನಂತರ ಮತ್ತೆ ಆನಂದನು ಬುದ್ಧನ ಮರಣದ ವಿಚಾರವನ್ನು ಪ್ರಸ್ತಾಪಿಸಿದನು. ತಥಾಗತನನ್ನು ಉದ್ದೇಶಿಸಿ, "ತಥಾಗತನು ಈ ಕಾಡಿನಲ್ಲಿರುವ ತಡಿಕೆಗೋಡೆಯ ಕುಟೀರದಲ್ಲಿ ದೇಹ ತ್ಯಾಗ ಮಾಡುವುದು ಬೇಡ. ಭಗವಾನರಿಗೆ ಚಂಪಾ, ರಾಜಗೃಹ, ಶ್ರಾವಸ್ತಿ, ಸಾಕೇತ, ಕೊಸಾಂಬಿ ಮತ್ತು ಬನಾರಸ್ಸಿನಂಥ ಬೃಹತ್ ನಗರಗಳಿವೆ. ಅವುಗಳಲ್ಲೊಂದರಲ್ಲಿ ದೇಹತ್ಯಾಗ ಮಾಡಲಿ" ಎಂದನು.

೨೧ "ಆನಂದ! ಹಾಗೆ ಹೇಳಬೇಡ, ಹಾಗೆನ್ನಬೇಡ ಆನಂದ. ಈ ಕುಶೀನಾರವು ಹಿಂದೆ ಕೇಶವತಿ ಎಂಬ ಹೆಸರಿನಲ್ಲಿ ಮಹಾ ಸುದರ್ಶನ ದೊರೆಯ ರಾಜಧಾನಿಯಾಗಿತ್ತು."

೨೨ ನಂತರ ಬುದ್ಧನು ಆನಂದನಿಗೆ ಎರಡು ಕೆಲಸಗಳನ್ನು ಒಪ್ಪಿಸಿದನು.

೨೩ ಚುಂದನು ತಥಾಗತನಿಗೆ ನೀಡಿದ ಆಹಾರದಿಂದಾಗಿ ಬುದ್ಧನು ಮರಣಹೊಂದಿದನು ಎಂಬ ನಂಬಿಕೆ ಬೆಳೆಯದಂತೆ ಎಚ್ಚರವಹಿಸಬೇಕು ಇಲ್ಲವಾದಲ್ಲಿ ಚುಂದನಿಗೆ ತೊಂದರೆಯಾಗುತ್ತದೆ ಎಂದು ಬುದ್ಧನು ಆನಂದನಿಗೆ ಸೂಚನೆ ನೀಡಿದನು. ಈ ಬಗ್ಗೆ ಜನರ ಮನಸ್ಸು ಕಲುಷಿತವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದನು.

೨೪ ಅವನು ಆನಂದನಿಗೆ ಹೇಳಿದ ಎರಡನೆ ವಿಚಾರ – ಬುದ್ಧನು ಇಲ್ಲಿಗೆ ಬಂದಿದ್ದಾನೆಂದೂ ಮತ್ತು ಈ ರಾತ್ರಿಯ ಮೂರನೆಯ ಝಾವದಲ್ಲಿ ಅವನು ದೇಹತ್ಯಾಗ ಮಾಡುತ್ತಾನೆಂದೂ ಕುಶಿನಾರದ ಮಲ್ಲರಿಗೆ ತಿಳಿಸಬೇಕು.

೨೫ "ನಿನ್ನನ್ನು ಆಕ್ಷೇಪಿಸುವುದಕ್ಕೆ ಎಡೆಕೊಡಬೇಡ. ಏಕೆಂದರೆ, ನಾಳೆ ಮಲ್ಲರು 'ನಮ್ಮ ಹಳ್ಳಿಯಲ್ಲಿಯೇ ತಥಾಗತನ ಮರಣ ಸಂಭವಿಸಿತು. ಆದರೆ ಅವನ ಕೊನೆಯ ಕ್ಷಣಗಳಲ್ಲಿ ಅವನನ್ನು ಕಂಡು, ಮಾತಮಾಡಿ ಅವನ ಬಳಿಯಲ್ಲಿರುವ ಅವಕಾಶವೂ ನಮಗೆ ದೊರಕುವುದಿಲ್ಲ' ಎಂದು ಹೇಳಬಹುದು."

೨೬ ಇದಾದ ಮೇಲೆ ಪೂಜ್ಯ ಆನಂದ ಮತ್ತು ಅನುರುದ್ಧರಿಬ್ಬರೂ ಧಾರ್ಮಿಕ ಸಂವಾದದಲ್ಲಿ ಮಗ್ನರಾದರು.

೨೭ ರಾತ್ರಿಯ ಮೂರನೆಯ ಝಾವದಲ್ಲಿ ಮೊದಲೇ ಮುನ್ಸೂಚಿಸಿದಂತೆ ತಥಾಗತನು ಕೊನೆಯುಸಿರೆಳೆದನು.

೨೮ ತಥಾಗತನು ಸತ್ತ ಕೂಡಲೇ ಆನಂದ ಹಾಗೂ ಇತರ ಸೋದರರು ಜೋರಾಗಿ ಅಳಲಾರಂಭಿಸಿದರು. ಕೆಲವರಂತೂ ಕೆಳಗೆ ಬಿದ್ದು ದುಃಖದ ಆವೇಗ ತಡೆಯಲಾರದೆ ಉರುಳಾಡಿ ಗೋಳಾಡುತ್ತಾ, "ತಥಾಗತನು ಇಷ್ಟು ಬೇಗ ನಮ್ಮನ್ನು ಬಿಟ್ಟು ಹೊರಟುಹೋದನು. ಇಷ್ಟು ಬೇಗ ಜಗತ್ತಿನಿಂದ ಬೆಳಕು ಕಣ್ಮರೆಯಾಯಿತು."

೨೯ ವೈಶಾಖ ಪೌರ್ಣಿಮೆಯ ನಡುರಾತ್ರಿಯಲ್ಲಿ ತಥಾಗತ ಅಸುನೀಗಿದನು. ಅವನು ಕ್ರಿ.ಶ.೪೮೨ ರಲ್ಲಿ ಮರಣ ಹೊಂದಿದನು.

೩೦ ಪಾಲಿ ಕೃತಿಯೊಂದು ಹೇಳುವ ಮಾತು ಬಹಳ ಸತ್ಯ:

೩೧ "ಸೂರ್ಯ ಹಗಲಿನಲ್ಲಿ ಮಾತ್ರ ಬೆಳಗುತ್ತಾನೆ. ಚಂದ್ರ ರಾತ್ರಿಯನ್ನು ಪ್ರಕಾಶಮಾನವನ್ನಾಗಿ ಮಾಡುತ್ತಾನೆ. ಗುರಾಣಿಯನ್ನು ತೊಟ್ಟಾಗ ಯೋಧನು ಶೋಭಿಸುತ್ತಾನೆ. ಬ್ರಾಹ್ಮಣ ಧ್ಯಾನದಲ್ಲಿದ್ದಾಗ ಶೋಭಿಸುತ್ತಾನೆ. ಆದರೆ ತಥಾಗತನು ತನ್ನ ಸ್ವಂತ ವೈಭವದಿಂದ ಹಗಲು ರಾತ್ರಿಗಳೆರಡಲ್ಲೂ ಶೋಭಿಸುತ್ತಾನೆ."

೩೨ "ಅವನು ಪ್ರಶ್ನಾತೀತನಾಗಿಯೂ ಈ ಜಗದ ಬೆಳಕು."

## ೫. ಮಲ್ಲರ ಶೋಕ ಮತ್ತು ಭಿಕ್ಷುವೊಬ್ಬನ ಸಂತಸ

೧ ತಥಾಗತನ ಆಸೆಯಂತೆ ಆನಂದನು ಮಲ್ಲರಿಗೆ ಬುದ್ಧನ ಮರಣದ ವಿಷಯವನ್ನು ತಿಳಿಸಿದನು.

೨ ಈ ವಿಷಯ ಕಿವಿಗೆ ಬಿದ್ದ ಕೂಡಲೇ ಮಲ್ಲರು, ಅವರ ಪತ್ನಿಯರು, ಮಕ್ಕಳು ಮತ್ತು ಸೇವಕಿಯರು ತುಂಬ ದುಃಖಗೊಂಡರು.

೩ ಕೆಲವರು ತಮ್ಮ ಕೂದಲನ್ನು ಕೆದರಿಕೊಂಡು, ತೋಳುಗಳನ್ನು ಚಾಚಿಕೊಂಡು, ನೆಲದ ಮೇಲೆ ಬಿದ್ದು ಉರುಳಾಡಿ ಅತ್ತರು.

೪ ನಂತರ ಮಲ್ಲರೆಲ್ಲರೂ ತಮ್ಮ ಬಂಧುಬಾಂಧವರು ಹಾಗೂ ಪರಿವಾರದವರನ್ನು ಕರೆದುಕೊಂಡು ಬುದ್ಧನ ಅಂತಿಮ ದರ್ಶನಕ್ಕೆಂದು ಶಾಲವನಕ್ಕೆ ಹೋದರು.

೫ "ತಥಾಗತನ ಅಂತಿಮ ದರ್ಶನಕ್ಕೆ ನಾನು, ಮಲ್ಲರನ್ನು ಒಬ್ಬೊಬ್ಬರನ್ನೇ ಕಳುಹಿಸಿದರೆ ತುಂಬಾ ತಡವಾಗಿಬಿಡುತ್ತದಲ್ಲ" ಎಂದು ಆನಂದನು ಯೋಚಿಸಿದನು.

೬ ಹಾಗಾಗಿ ಒಂದೊಂದು ಕುಟುಂಬವನ್ನೂ ಒಂದೊಂದು ಗುಂಪನ್ನಾಗಿ ಮಾಡಿ ಅಂತಿಮ ದರ್ಶನಕ್ಕೆ ಕಳಿಸುವುದು ಎಂದು ನಿರ್ಧರಿಸಿದನು. ಪ್ರತಿ ಕುಟುಂಬದವರು ತಥಾಗತನ ಪಾದಕ್ಕೆರಗಿ ಆದರಪೂರ್ವಕ ವಂದನೆ ಸಲ್ಲಿಸಿದರು.

೭ ಇದೇ ಸಮಯದಲ್ಲಿ ಪಾವಾದಿಂದ ಕುಶೀನಾರಕ್ಕೆ ಹೋಗುವ ಹೆದ್ದಾರಿಯಲ್ಲಿ ಪೂಜ್ಯ ಮಹಾಕಶ್ಯಪನು ತನ್ನ ಅನುಯಾಯಿಗಳೊಡನೆ ಪ್ರಯಾಣ ಮಾಡುತ್ತಿದ್ದನು.

೮ ಅದೇ ಹೊತ್ತಿಗೆ ಪಾವಾದ ಕಡೆ ದಿಗಂಬರ ಸಂನ್ಯಾಸಿಯೊಬ್ಬ ಬರುತ್ತಿದ್ದ.

೯ ದೂರದಲ್ಲಿ ಬರುತ್ತಿದ್ದ ದಿಗಂಬರ ಸಂನ್ಯಾಸಿಯನ್ನು ಮಾನ್ಯ ಕಶ್ಯಪನು ನೋಡಿದನು. ಅವನು

ಬಳಿಸಾರುತ್ತಲೇ "ಗೆಳೆಯಾ, ಖಂಡಿತವಾಗಿ ನಿನಗೆ ನಮ್ಮೊಡೆಯ ತಿಳಿದಿರಬೇಕಲ್ಲವೇ?" ಎಂದು ಆ ಸಾಧುವನ್ನು ಕೇಳಿದನು.

೧೦ "ಇದೆ ಗೆಳೆಯ! ನನಗೆ ಅವನ ಪರಿಚಯವಿದೆ. ಇಂದಿಗೆ ಶ್ರಮಣ ಗೌತಮನು ಮರಣ ಹೊಂದಿ ಒಂದು ವಾರವಾಯಿತು."

೧೧ ಈ ಮಾತನ್ನು ಕೇಳುತ್ತಲೇ ದುಃಖತಪ್ತರಾದ ಅವರೆಲ್ಲರಲೂ ಜೋರಾಗಿ ಅಳತೊಡಗಿದರು.

೧೨ ಅವರ ನಡುವೆ ಸುಭದ್ರನೆಂಬ ಭಿಕ್ಷು ಕುಳಿತಿದ್ದ. ಇವನು ಬುದ್ಧನ ಮುಪ್ಪಿನ ದಿನಗಳಲ್ಲಿ ದೀಕ್ಷೆ ಪಡೆದ ಭಿಕ್ಷುವಾಗಿದ್ದ.

೧೩ ಈ ಸುಭದ್ರ ಉಳಿದ ಭಿಕ್ಕುಗಳನ್ನು ಕುರಿತು ಹೇಳಿದ: "ಸಾಕು ಸೋದರರೇ! ಅಳಬೇಡಿ. ನಮಗೆ ಈ ಮಹಾನ್ ಶ್ರಮಣನ ಕಾಟ ತಪ್ಪಿತು. 'ಇದು ಯೋಗ್ಯ, ಇದು ಯೋಗ್ಯವಲ್ಲದ್ದು' ಎಂದು ಸದಾ ನಮಗೆ ಕಿರುಕುಳ ಕೊಡುತ್ತಿದ್ದ. ಆದರೆ ಇನ್ನು ಮುಂದೆ ನಾವು ನಮಗೆ ಇಷ್ಟಬಂದದ್ದನ್ನು ಮಾಡಬಹುದು. ಇಷ್ಟವಿಲ್ಲದ್ದನ್ನು ಬಿಡಬಹುದು. ಅವನು ಸತ್ತಿದ್ದು ಒಳ್ಳೆಯದೇ ಆಯಿತಲ್ಲವೇ? ಅಳುವುದೇಕೆ? ದುಃಖಿಸುವುದೇಕೆ? ಇದು ಸಂತೋಷಪಡಬೇಕಾದ ವಿಚಾರ" ಎಂದನು.

೧೪ ತಥಾಗತನು ಅಂತಹ ಮಹಾತ್ಮ ಹಾಗೂ ಕಡು ಶಿಸ್ತಿನ ವ್ಯಕ್ತಿಯಾಗಿದ್ದ.

## ೬. ಅಂತಿಮ ಕ್ರಿಯೆಗಳು

೧ "ತಥಾಗತನ ದೇಹವನ್ನೇನು ಮಾಡೋಣ?" ಎಂದು ಕುಶೀನಾರದ ಮಲ್ಲರು ಆನಂದನ ಸಲಹೆಯನ್ನು ಕೇಳಿದರು.

೨ ಆನಂದನು "ರಾಜಾಧಿರಾಜನ, ಕಳೇಬರಕ್ಕೇನು ಮಾಡುತ್ತಾರೋ ಅದನ್ನೇ ತಥಾಗತನ ದೇಹಕ್ಕೂ ಮಾಡಬೇಕು" ಎಂದನು.

೩ "ಚಕ್ರವರ್ತಿಯ ಕಳೇಬರಕ್ಕೆ ಏನು ಮಾಡುತ್ತಾರೆ?" ಎಂದು ಮಲ್ಲರು ಕೇಳಿದರು.

೪ "ಚಕ್ರವರ್ತಿಯ ಶರೀರವನ್ನು ಮೊದಲು ಹೊಸ ಬಟ್ಟೆಯಲ್ಲಿ ಸುತ್ತುತ್ತಾರೆ. ನಂತರ ಎಕ್ಕಿದ ಹತ್ತಿಯಲ್ಲಿ ಅದನ್ನು ಸುತ್ತುತ್ತಾರೆ. ಅದಾದ ಮೇಲೆ ಅದನ್ನು ಮತ್ತೆ ಹೊಸ ಬಟ್ಟೆಯಲ್ಲಿ ಸುತ್ತುತ್ತಾರೆ. ಹೀಗೆ ಒಂದಾದ ಮೇಲೆ ಒಂದರಂತೆ ಒಟ್ಟು ೫೦೦ ಪದರಗಳು ಸುತ್ತುತ್ತಾರೆ. ಹೀಗೆ ಸುತ್ತಿದ ಕಳೇಬರವನ್ನು ಎಣ್ಣೆ ತುಂಬಿದ ಕಬ್ಬಿಣದ ಪಾತ್ರೆಯಲ್ಲಿ ಇಡುತ್ತಾರೆ. ಮತ್ತು ಇನ್ನೊಂದು ಕಬ್ಬಿಣದ ಪಾತ್ರೆಯಲ್ಲಿ ಎಣ್ಣೆ ತುಂಬಿ ಅದಕ್ಕೆ ಮುಚ್ಚುತ್ತಾರೆ. ನಂತರ ಚಿತೆಯನ್ನು ಸಿದ್ಧಪಡಿಸುತ್ತಾರೆ. ಚಕ್ರವರ್ತಿಯ ಕಳೇಬರಕ್ಕೆ ಈ ರೀತಿ ಸಂಸ್ಕಾರ ಮಾಡುತ್ತಾರೆ" ಎಂದು ಆನಂದನು ಮಲ್ಲರಿಗೆ ಹೇಳಿದನು.

೫ "ಸರಿ, ಹಾಗೆಯೇ ಆಗಲಿ" ಎಂದು ಮಲ್ಲರು ಹೇಳಿದರು.

೬ ನಂತರ ಕುಶಿನಾರದ ಮಲ್ಲರು ಹೇಳಿದರು: "ಇಂದು ತಥಾಗತನ ಅಂತ್ಯಕ್ರಿಯೆಯನ್ನು ಮಾಡಲು ಬಹಳ ತಡವಾಗಿ ಬಿಟ್ಟಿದೆ. ಹಾಗಾಗಿ ಅಂತ್ಯಕ್ರಿಯೆಗಳನ್ನು ನಾಳೆ ಮಾಡುತ್ತೇವೆ."

೭ ತಥಾಗತನ ಅಂತ್ಯಕ್ರಿಯೆಗೆ ಸುಗಂಧ ದ್ರವ್ಯಗಳನ್ನು ಮತ್ತು ಪುಷ್ಪಮಾಲಿಕೆಗಳನ್ನು ಸಿದ್ಧಪಡಿಸಲು ಮತ್ತು ಕುಸಿನಾರದಿಂದ ಸಂಗೀತಗಾರರನ್ನು ಕರೆತರಲು ಕುಶಿನಾರದ ಮಲ್ಲರು ತಮ್ಮ ಸೇವಕರಿಗೆ ಆಣತಿ ನೀಡಿದರು.

೮ ಅಂತ್ಯಕ್ರಿಯೆಯಲ್ಲಿ ಗೌರವ ಸಲ್ಲಿಸಲು ನೃತ್ಯ ಮಾಡಿದರು. ಸಂಗೀತವನ್ನು ಏರ್ಪಡಿಸಿದ್ದರು, ಪವಿತ್ರ ಸ್ತೋತ್ರಗಳನ್ನು ಪಠಿಸಿದರು. ಹಾರ ಹಾಗೂ ಸುಗಂಧ ದ್ರವ್ಯಗಳನ್ನು ಅರ್ಪಿಸಿದರು. ತಮ್ಮ ಉಡುಪುಗಳನ್ನು ಬಳಸಿ ದೊಡ್ಡ ಚಪ್ಪರವನ್ನು ಹಾಕಿದರು. ಶವಕ್ಕೆ ಅರ್ಪಿಸಲು ಹಾರ ತುರಾಯಿಗಳನ್ನು ಸಿದ್ಧಪಡಿಸಿದರು. ಇಂಥ ತಯಾರಿಕೆಯಲ್ಲೇ ಒಂದು, ಎರಡು, ಮೂರು, ನಾಲ್ಕು, ಐದು ಕೊನೆಗೆ ಆರು ದಿವಸಗಳು ಕಳೆದುಹೋದವು.

೯ ನಂತರ ಏಳನೆಯ ದಿನ "ತಥಾಗತನ ಕಳೇಬರವನ್ನು ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆಗಳನ್ನು ಮಾಡಿಬಿಡೋಣ" ಎಂದು ಕುಶಿನಾರದ ಮಲ್ಲರು ಮಾತನಾಡಿಕೊಂಡರು.

೧೦ ಅದಕ್ಕಾಗಿ ಎಂಟು ಜನ ಮಲ್ಲ ಪ್ರಮುಖರು ತಲೆಸ್ನಾನ ಮಾಡಿ, ಹೊಸ ಉಡುಗೆಗಳನ್ನು ತೊಟ್ಟು ಬುದ್ಧನ ಚಟ್ಟವನ್ನು ಹೊರಲು ಸಿದ್ಧರಾದರು.

೧೧ ಪಟ್ಟಣದ ಪೂರ್ವಕ್ಕಿದ್ದ ಮುಕತ – ಬಂಧನ ಎಂಬ ಮಲ್ಲರ ಗುಡಿಗೆ ತಥಾಗತನ ಶರೀರವನ್ನು ಒಯ್ದರು. ಅಲ್ಲಿ ಅವನ ಶರೀರವನ್ನು ಇಟ್ಟು ಚಿತೆಗೆ ಬೆಂಕಿ ಇಟ್ಟರು.

೧೨ ಕೆಲಕಾಲದ ನಂತರ ಬುದ್ಧನ ದೇಹ ಉರಿದು ಭಸ್ಮವಾಯಿತು.

## ೭. ಚಿತಾಭಸ್ಮಕ್ಕಾಗಿ ಕಲಹ

೧ ಅಂತ್ಯಸಂಸ್ಕಾರದ ನಂತರ ಕುಶೀನಾರದ ಮಲ್ಲರು ಬುದ್ಧನ ಚಿತಾಭಸ್ಮ ಮತ್ತು ಅಸ್ಥಿಗಳನ್ನು ಸಂಗ್ರಹಿಸಿ ಅದನ್ನು ತಮ್ಮ ಸಭಾಭವನದಲ್ಲಿ ಭರ್ಜಿಗಳ ಜಾಳಂದರ ಮಧ್ಯೆ ಬಿಲ್ಲುಗಳ ಕಾಪಿನಲ್ಲಿರಿಸಿದರು. ಅದನ್ನು ಯಾರೂ ಕಳವು ಮಾಡದಂತೆ ಕಾಯ್ದರು.

೨ ಈ ಚಿತಾಭಸ್ಮಕ್ಕೆ ಏಳು ದಿನಕಾಲ ಗೀತ, ವಾದ್ಯ, ನೃತ್ಯ, ಪುಷ್ಪಮಾಲಿಕೆ, ಸುಗಂಧದ್ರವ್ಯಗಳು ಮುಂತಾದವುಗಳಿಂದ ಗೌರವವನ್ನು ಸಲ್ಲಿಸಿದರು.

೩ ಕುಶೀನಾರದಲ್ಲಿ ಬುದ್ಧನು ನಿರ್ವಾಣ ಹೊಂದಿದ ಸುದ್ದಿ ಮಗಧದ ದೊರೆ ಅಜಾತಶತ್ರುವಿಗೆ ತಿಳಿಯಿತು.

೪ ಆಗ ಚಿತಾಭಸ್ಮದ ಸ್ವಲ್ಪಭಾಗವನ್ನು ತನಗೆ ಕೊಡುವಂತೆ ಅಜಾತಶತ್ರು ಮಲ್ಲರ ಬಳಿಗೆ ದೂತರನ್ನು ಕಳಿಸಿದನು.

೫ ಇದೇ ಬೇಡಿಕೆಯೊಂದಿಗೆ ವೈಶಾಲಿಯ ಲಿಚ್ಛವಿಗಳು, ಕಪಿಲವಸ್ತುವಿನ ಶಾಕ್ಯರು, ಅತ್ತಕಪ್ಪದ ಬೂಲಿಗಳು, ರಾಮಗಾಮದ ಕೋಲಿಯರು ಹಾಗೂ ಪಾವಾದ ಮಲ್ಲರ ಕಡೆಯಿಂದಲೂ ದೂತರು ಕುಶೀನಾರಕ್ಕೆ ಬಂದರು.

೬ ಚಿತಾಭಸ್ಮ ಬೇಕೆಂದು ಬಂದವರಲ್ಲಿ ವ್ಯರ್ಥಾದ್ಯದ ಬ್ರಾಹ್ಮಣನೂ ಒಬ್ಬ ಇದ್ದ.

೭ "ತಥಾಗತನು ನಮ್ಮ ಗ್ರಾಮದಲ್ಲಿ ಅಸುನೀಗಿದ್ದಾನೆ. ಹಾಗಾಗಿ ಅವನು ನಮಗೆ ಸೇರಿದವನು. ತಥಾಗತನ ಚಿತಾಭಸ್ಮ ಹಾಗೂ ಅಸ್ಥಿಯ ಚೂರನ್ನೂ ನಾವು ಯಾರಿಗೂ ಕೊಡುವುದಿಲ್ಲ" ಎಂದು ಕುಶೀನಾರದ ಮಲ್ಲರು ಈ ದೂತರ ಬೇಡಿಕೆಯನ್ನು ತಿರಸ್ಕರಿಸಿಬಿಟ್ಟರು.

೮ ಪರಿಸ್ಥಿತಿ ಬಿಗಡಾಯಿಸುತ್ತಿರುವುದನ್ನು ಕಂಡು, ಅಲ್ಲಿದ್ದ ದ್ರೋಣನೆಂಬ ಬ್ರಾಹ್ಮಣನು ಮಧ್ಯ ಪ್ರವೇಶಿಸಿ "ಮಾನ್ಯರೇ ನನ್ನದೊಂದು ಮಾತನ್ನು ಕೇಳಿ" ಎಂದು ಅವರಲ್ಲಿ ಅರಿಕೆ ಮಾಡಿಕೊಂಡನು.

೯ "ತಾಳ್ಮೆ ಎಂಬುದು ಬುದ್ಧನ ಅತಿ ಮುಖ್ಯ ಬೋಧನೆಗಳಲ್ಲಿ ಒಂದಾಗಿತ್ತು. ಅಂಥ ಪರಮ ಪುರುಷ

ಬುದ್ಧನ ಚಿತಾಭಸ್ಮ ಮತ್ತು ಅಸ್ಥಿಯನ್ನು ಹಂಚಿಕೊಳ್ಳುವಾಗ ಇಂಥ ಜಗಳ! ಹೊಡೆದಾಟ! ಯುದ್ಧದ ಮಾತು! ಖಂಡಿತವಾಗಿಯೂ ಶೋಭೆ ತರುವಂಥದ್ದಲ್ಲ.

೧೦ "ಮಾನ್ಯರೇ ನಾವೆಲ್ಲರೂ ಒಮ್ಮತದಿಂದ ಸ್ನೇಹ ಸೌಹಾರ್ದಗಳಿಂದ ಅದನ್ನು ಎಂಟು ಭಾಗಗಳನ್ನಾಗಿ ವಿಭಾಗ ಮಾಡೋಣ. ಅದರಲ್ಲಿ ಒಂದೊಂದು ಭಾಗವನ್ನೂ ನಾಡಿಗೆ ತೆಗೆದುಕೊಂಡು ಹೋಗಿ ಅಲ್ಲಿ ಬುದ್ಧನ ನೆನಪಿಗೆ ಸ್ತೂಪವನ್ನು ನಿರ್ಮಾಣ ಮಾಡೋಣ" ಎಂಬ ಸಲಹೆಯನ್ನು ನೀಡಿದನು.

೧೧ ಕುಶೀ ನಾರದ ಮಲ್ಲರು ಇದಕ್ಕೆ ಸಮ್ಮತಿಸಿದರು. "ಅಯ್ಯಾ ಬ್ರಾಹ್ಮಣ ನೀನೇ ಇದನ್ನು ನ್ಯಾಯಸಮ್ಮತವಾಗಿ ಎಂಟು ಸಮಭಾಗಗಳನ್ನಾಗಿ ವಿಗಂಡಿಸಿಬಿಡು" ಎಂದು ಅವನಿಗೇ ಹೇಳಿದನು.

೧೨ "ಹಾಗೆಯೇ ಆಗಲಿ" ಎಂದು ಆ ಬ್ರಾಹ್ಮಣ ಅದಕ್ಕೆ ಒಪ್ಪಿಕೊಂಡ.

೧೩ ಅವನು ತಥಾಗತನ ಚಿತಭಸ್ಮವನ್ನು ಎಂಟು ಸಮಭಾಗಗಳನ್ನಾಗಿ ವಿಂಗಡಿಸಿದನು.

೧೪ ಚಿತಾಭಸ್ಮವನ್ನು ವಿಂಗಡನೆ ಮಾಡಿದ ನಂತರ ದ್ರೋಣನು "ಮಾನ್ಯರೇ, ಆ ಭಾಂಡವನ್ನು ನನಗೆ ಕೊಡಿ. ನಾನು ಅದಕ್ಕೊಂದು ಸ್ತೂಪವನ್ನು ನಿರ್ಮಿಸುತ್ತೇನೆ." ಎಂದು ಅವರಿಗೆ ಹೇಳಿದನು.

೧೫ ಅವರು ಅವನಿಗೆ ಆ ಭಾಂಡವನ್ನು ನೀಡಲು ಒಪ್ಪಿದರು.

೧೬ ಹೀಗೆ ಬುದ್ಧನ ಅಸ್ಥಿಯ ಸರಿಯಾದ ಹಂಚಿಕೆಯಾಗಿ, ಜಗಳವು ಶಾಂತಿಯುತವಾಗಿ ಕೊನೆಗೊಂಡಿತು.

## ೮. ಬುದ್ಧನಿಗೆ ನಿಷ್ಠೆ

೧ ಈ ಘಟನೆಗಳೆಲ್ಲ ಶ್ರಾವಸ್ತಿಯಲ್ಲಿ ನಡೆದವು.

೨ ಹಲವಾರು ಭಿಕ್ಷುಗಳು ಬುದ್ಧನಿಗೆ ಉಡುಪನ್ನು ತಯಾರಿಸುವ ತುರಾತುರಿಯಲ್ಲಿ ಇದ್ದರು. ಈ ಮೂರು ತಿಂಗಳಿನಲ್ಲಿ ಉಡುಪು ಸಿದ್ಧವಾಗುವ ಹೊತ್ತಿಗೆ ತಥಾಗತ ಮತ್ತೆ ತನ್ನ ಸಂಚಾರವನ್ನು ಪ್ರಾರಂಭಿಸುತ್ತಿದ್ದ.

೩ ಈ ಹೊತ್ತಿನಲ್ಲಿ ಇಸಿದತ್ತ ಮತ್ತು ಪುರಾಣ ಎಂಬ ಕೋಶಾಧಿಕಾರಿಗಳಿಬ್ಬರು ಯಾವುದೋ ವ್ಯವಹಾರದ ನಿಮಿತ್ತ ಸಾಧುಕನ ಮನೆಯಲ್ಲಿ ತಂಗಿದ್ದರು. ಆಗ "ಹಲವಾರು ಭಿಕ್ಷುಗಳು ಬುದ್ಧನಿಗೆ ಉಡುಪನ್ನು ತಯಾರಿಸುವ ತರಾತುರಿಯಲ್ಲಿ ಇದ್ದಾರೆ. ಬುದ್ಧನು ಈ ಮೂರು ತಿಂಗಳಿನಲ್ಲಿ ಉಡುಪು ಸಿದ್ಧವಾಗುವ ಹೊತ್ತಿಗೆ ಮತ್ತೆ ತನ್ನ ಸಂಚಾರವನ್ನು ಆರಂಭಿಸುತ್ತಾನೆ ಎಂಬುದು ಅವರ ವಿಚಾರವಾಗಿತ್ತು" ಎಂಬ ಸುದ್ದಿ ಅವರ ಕಿವಿಗೆ ಬಿತ್ತು.

೪ ಹಾಗಾಗಿ ಕೋಶಾಧಿಕಾರಿಗಳಾದ ಇಸಿದತ್ತ ಮತ್ತು ಪುರಾಣರು ಹೆದ್ದಾರಿಯಲ್ಲಿ ಒಬ್ಬನನ್ನು ನಿಲ್ಲಿಸಿ, ಅವನಿಗೆ "ಅಯ್ಯಾ, ಅರ್ಹಂತನಾದ ತಥಾಗತನು ಈ ಕಡೆಗೆ ಬರುವುದು ಕಂಡಕೂಡಲೇ ನೀನು ನಮಗೆ ಬಂದು ತಿಳಿಸು" ಎಂದು ಕೇಳಿಕೊಂಡರು.

೫ ಮೂರು ನಾಲ್ಕು ದಿನಗಳ ಕಾಲ ಕಾದ ನಂತರ ಆ ವ್ಯಕ್ತಿಗೆ ತಥಾಗತನು ಬರುತ್ತಿರುವುದು ಕಾಣಿಸಿತು. ಅವನು ಇನ್ನೂ ಸ್ವಲ್ಪ ದೂರದಲ್ಲಿರುವಾಗಲೇ ಆ ವ್ಯಕ್ತಿಯು ಕೋಶಾಧಿಕಾರಿಗಳಾದ ಇಸಿದತ್ತ ಮತ್ತು ಪುರಾಣರ ಬಳಿಗೆ ಹೋಗಿ, "ಒಡೆಯರೇ, ಅರ್ಹಂತನಾದ ತಥಾಗತನು ಈ ಕಡೆಗೇ ಬರುತ್ತಿದ್ದಾನೆ. ನಿಮಗೆ ಏನು ಮಾಡಬೇಕು ಎಂಬ ಆಸೆ ಇದೆಯೋ ಅದನ್ನು ನೀವೀಗ ಮಾಡಬಹುದು" ಎಂದು ಹೇಳಿದನು.

೬ ಇಸಿದತ್ತ ಮತ್ತು ಪುರಾಣರಿಬ್ಬರೂ ತಥಾಗತನತ್ತ ಧಾವಿಸಿದರು. ಅವನಿಗೆ ನಮಸ್ಕರಿಸಿ ಅವನ ಹಿಂದೆಯೇ ಅವನನ್ನು ಹಿಂಬಾಲಿಸಿದರು.

೭ ನಂತರ ಬುದ್ಧನು ಹೆದ್ದಾರಿಯನ್ನು ಬಿಟ್ಟು ನಡೆದುಕೊಂಡು ಹತ್ತಿರದಲ್ಲಿದ್ದ ಮರದ ಬುಡಕ್ಕೆ ಹೋಗಿ ತನಗಾಗಿ ಸಿದ್ಧಪಡಿಸಿದ್ದ ಆಸನದಲ್ಲಿ ಕುಳಿತುಕೊಂಡನು. ಕೋಶಾಧಿಕಾರಿಗಳಾದ ಇಸಿದತ್ತ ಮತ್ತು ಪುರಾಣರು ಅವನಿಗೆ ವಂದಿಸಿ ಅವನ ಸಮೀಪದಲ್ಲಿ ಕುಳಿತುಕೊಂಡರು. ಹಾಗೆ ಕೂತು ತಥಾಗತನಿಗೆ ಈ ರೀತಿ ಹೇಳಿದರು:

೮ "ಭಗವಾನ್, ತಥಾಗತರು ಕೋಸಲ ನಾಡಿಗೆ ಸಂಚಾರಕ್ಕೆ ಹೋಗುತ್ತಾರೆ ಎಂದು ತಿಳಿದು, ಅವರು ನಮ್ಮಿಂದ ದೂರ ಹೋಗುತ್ತಿದ್ದಾರಲ್ಲ ಎಂದು ದುಃಖ ಹಾಗೂ ನಿರಾಸೆಯಾಯಿತು.

೯ "ಭಗವಾನ್, ಮತ್ತೆ ತಥಾಗತರು ಕೋಸಲದಲ್ಲಿ ತಮ್ಮ ಸಂಚಾರ ಮುಗಿಸಿ, ಶ್ರಾವಸ್ತಿಯಿಂದ ಹೊರಗೆ ಹೋಗುತ್ತಿದ್ದಾರೆ ಎಂಬ ಸುದ್ದಿ ತಿಳಿಯಿತು. ತಥಾಗತರು ನಮ್ಮಿಂದ ದೂರವಾಗುತ್ತಿದ್ದಾರೆ ಎಂಬ ಯೋಚನೆಯೇ ನಮ್ಮನ್ನು ನಿರಾಶರನ್ನಾಗಿಸಿತು ಹಾಗೂ ಖಿನ್ನರನ್ನಾಗಿಸಿತು.

೧೦ "ಮತ್ತೆ, ಭಗವಾನ್, ತಥಾಗತರು ಕೋಸಲೆಯನ್ನು ಬಿಟ್ಟು ಮಲ್ಲರ ನಾಡಿನಲ್ಲಿ ಸಂಚಾರ ಪ್ರಾರಂಭಿಸುತ್ತಾರೆ ಎಂಬ ಸುದ್ದಿ ತಿಳಿಯಿತು.... ಅದು ನಿಜ ಎಂದು ತಿಳಿದು ನಮಗೆ ತುಂಬಾ ನಿರಾಸೆ ಹಾಗೂ ಬೇಸರವಾಯಿತು.

೧೧ "ತಥಾಗತರು ಮಲ್ಲರನ್ನು ಬಿಟ್ಟು ವಜ್ಜಿಯರ ನಡುವೆ ಸಂಚಾರ ಮಾಡುತ್ತಾರೆ ಎಂಬ ಸುದ್ದಿ ತಿಳಿಯಿತು... ಅದು ನಿಜ ಎಂಬುದು ತಿಳಿಯಿತು... ಆತ ವಜ್ಜಿಯನ್ನು ಬಿಟ್ಟು ಕಾಶಿಗೆ ಹೋಗುವುದಾಗಿ ತಿಳಿಯಿತು... ಅದು ನಿಜ ಎಂಬುದು ತಿಳಿಯಿತು... ಹಾಗೇ ಕಾಶಿಯ ಜನತೆಯನ್ನು ಬಿಟ್ಟು ಮಾಗಧಕ್ಕೆ ಹೋಗುವುದಾಗಿ ತಿಳಿಯಿತು... ಅದು ನಿಜವೆಂದು ತಿಳಿಯಿತು. ನಮಗೆ ನಿರಾಸೆ ಹಾಗೂ ಬೇಸರ ಉಂಟಾಯಿತು.

೧೨ "ಆದರೆ, ಭಗವಾನ್, ತಥಾಗತನು, ಮಗಧವನ್ನು ಬಿಟ್ಟು ಕಾಶಿಗೆ ಹೋಗುತ್ತಾನೆ ಎಂಬ ಸುದ್ದಿ ತಿಳಿಯಿತು ಮತ್ತು ಅದು ನಿಜ ಎಂಬುದು ತಿಳಿದಾಗ ಮತ್ತೆ ತಥಾಗತನು ನಮ್ಮ ಸಮೀಪದಲ್ಲೇ ಇದ್ದಾನೆ ಎಂದು ನಮಗೆ ಸಂತೋಷವಾಯಿತು.

೧೩ "ಆತ ಕಾಶಿಯಲ್ಲಿ ಮಗಧರ ನಡುವೆ ನಿಜವಾಗಿ ಸಂಚಾರ ನಡೆಸುತ್ತಿದ್ದಾನೆ ಎಂದು ತಿಳಿದು ನಮಗೆ ಅದೇ ರೀತಿಯಲ್ಲಿ ಸಂತೋಷವಾಯಿತು ಹಾಗೂ ಹಿಗ್ಗಿ ಹೋದೆವು.

೧೪ (ಅವರು ಅದೇ ರೀತಿಯಲ್ಲಿ ಕಾಶಿಯಿಂದ ವಜ್ಜಿಗೆ, ವಜ್ಜಿಯಿಂದ ಮಲ್ಲರ ರಾಜ್ಯಕ್ಕೆ ..... ಮಲ್ಲರ ನಾಡಿನಿಂದ ಕೋಸಲರ ರಾಜ್ಯಕ್ಕೆ ಭಗವಾನರ ಪ್ರಯಾಣವನ್ನು ವಿವರಿಸುತ್ತಾರೆ.)

೧೫ "ಆದರೆ ಭಗವಾನ್, ತಥಾಗತನು, ಕೋಸಲದಿಂದ ಶ್ರಾವಸ್ತಿಗೆ ಹೋಗುತ್ತಾನೆ ಎಂದಾಗ ನಮಗೆ ತುಂಬಾ ಸಂತೋಷವಾಯಿತು. ಏಕೆಂದರೆ ಆಗ ತಥಾಗತನು ನಮಗೆ ಸಮೀಪದಲ್ಲಿರುತ್ತಾನೆ ಎಂದು.

೧೬ "ಭಗವಾನ್, ತಥಾಗತನು ಶ್ರಾವಸ್ತಿಯ ಜೇತವನದಲ್ಲಿ ಅನಾಥಪಿಂಡಿಕನ ತೋಟದಲ್ಲಿ ತಂಗುತ್ತಾನೆ ಎಂದಾಗಲಂತೂ ನಮ್ಮ ಸಂತೋಷಕ್ಕೆ ಪಾರವೇ ಇಲ್ಲ. ನಮ್ಮ ಹರುಷ ಮೇರೆ ಮೀರಿತ್ತು. ಏಕೆಂದರೆ, ತಥಾಗತನು ನಮ್ಮ ಬಳಿಯಲ್ಲೇ ಇರುತ್ತಾನೆ ಎಂದು."

# ಪರ್ವ - ೮

## ಸಿದ್ಧಾರ್ಥ ಗೌತಮನೆಂಬ ವ್ಯಕ್ತಿ

## ಭಾಗ : ೧

## ಸಿದ್ಧಾರ್ಥ ಗೌತಮನ ವ್ಯಕ್ತಿತ್ವ

೧. ಸಿದ್ಧಾರ್ಥನ ಚಹರೆ
೨. ಪ್ರತ್ಯಕ್ಷದರ್ಶಿಗಳ ಸಮರ್ಥನೆ
೩. ಸಿದ್ಧಾರ್ಥನ ನಾಯಕತ್ವ ಸಾಮರ್ಥ್ಯ

# ೧. ಸಿದ್ಧಾರ್ಥನ ಚಹರೆ

೧. ಎಲ್ಲಾ ಆಕರಗಳ ಪ್ರಕಾರವೂ ತಥಾಗತನು ತುಂಬ ಸುಂದರ ಹಾಗೂ ರೂಪವಂತ.

೨. ಅವನ ನಿಲುವು ಬಂಗಾರದ ಬೆಟ್ಟದ ಶಿಖರದಂತಿತ್ತು. ಅವನು ಎತ್ತರವಾಗಿ, ದೃಢಕಾಯನಾಗಿ ಮನೋಹರನಾಗಿದ್ದನು.

೩. ಅವನ ನೀಳವಾದ ತೋಳುಗಳು, ಸಿಂಹದ ನಡಿಗೆ, ವೃಷಭದಂತ ಕಣ್ಣುಗಳು, ವಿಶಾಲವಾದ ವಕ್ಷಸ್ಥಲ, ಹೊನ್ನಿನಂತೆ ಹೊಳೆಯುತ್ತಿದ್ದ ಸೌಂದರ್ಯ ಎಲ್ಲರನ್ನೂ ಆಕರ್ಷಿಸುತ್ತಿತ್ತು.

೪. ಅವನ ಹುಬ್ಬು, ಹಣೆ, ಬಾಯಿ, ಕಣ್ಣುಗಳು, ದೇಹ, ಕೈಗಳು, ಪಾದಗಳು, ನಡಿಗೆ – ಪ್ರತಿಯೊಂದೂ ನೋಡುಗನ ಕಣ್ಸೆಳೆಯುತ್ತಿತ್ತು.

೫. ಅವನ ರಾಜಗಾಂಭೀರ್ಯ, ಶೌರ್ಯ ಹಾಗೂ ಅಪ್ರತಿಮ ಸೌಂದರ್ಯ ನೋಡಿದವರೆಲ್ಲರನ್ನೂ ಚಕಿತಗೊಳಿಸುತ್ತಿತ್ತು.

೬. ಬೇರೆಲ್ಲಿಗೋ ಹೋಗುತ್ತಿದ್ದವರು ಅವನನ್ನು ಕಂಡೊಡನೆ ನೋಡುತ್ತಲೇ ನಿಂತುಬಿಡುತ್ತಿದ್ದರು. ನೋಡುತ್ತಿದ್ದವರು, ಅವನನ್ನು ಹಿಂಬಾಲಿಸಿ ಹೋಗಿಬಿಡುತ್ತಿದ್ದರು. ನಿಧಾನವಾಗಿ ನಡೆದುಹೋಗುತ್ತಿದ್ದವರು ಅವನನ್ನು ಕಂಡೊಡನೆ ಅವನ ಹಿಂದೆ ಓಡಿಹೋಗುತ್ತಿದ್ದರು ಮತ್ತು ಕುಳಿತಿದ್ದವರು ಅವನನ್ನು ಕಂಡೊಡನೆ ಚಿಲುಮೆಯಂತೆ ಚಿಮ್ಮಿಬಿಡುತ್ತಿದ್ದರು.

೭ ಅವನನ್ನು ಭೇಟಿಯಾದವರಲ್ಲಿ ಕೆಲವರು ಅವನಿಗೆ ಕೈ ಜೋಡಿಸಿ ನಮಸ್ಕರಿಸುತ್ತಿದ್ದರು. ಮತ್ತೆ ಕೆಲವರು ಅವನಿಗೆ ತಲೆಬಾಗಿ ನಮಿಸುತ್ತಿದ್ದರು. ಇನ್ನು ಕೆಲವರು ಅವನನ್ನು ವಾತ್ಸಲ್ಯದಿಂದ ಮಾತನಾಡಿಸುತ್ತಿದ್ದರು. ಯಾರೊಬ್ಬರೂ ಅವನಿಗೆ ಗೌರವ ತೋರಿಸದೆ ಮುಂದೆ ಹೋಗುತ್ತಿರಲಿಲ್ಲ.

೮ ಅವನನ್ನು ಎಲ್ಲರೂ ಪ್ರೀತಿಸುತ್ತಿದ್ದರು ಹಾಗೂ ಗೌರವಿಸುತ್ತಿದ್ದರು.

೯ ಪುರುಷರು ಮತ್ತು ಮಹಿಳೆಯರು ಸದಾ ಅವನ ಮಾತನ್ನು ಆಲಿಸಲು ಕಾತರರಾಗಿರುತ್ತಿದ್ದರು.

೧೦ ಅವನ ಧ್ವನಿಯು ತುಂಬಾ ಮಧುರವಾಗಿತ್ತು. ಮದ್ದಲೆಯಂತೆ ಘನವಾಗಿ, ಆಳವಾಗಿತ್ತು. ಮೋಹಕವಾಗಿತ್ತು. ನಿರರ್ಗಳವಾಗಿತ್ತು ಹಾಗೂ ರೋಮಾಂಚಕರವಾಗಿತ್ತು. ಇವುಗಳಿಂದಾಗಿ ಅವನ ಮಾತು ಸ್ವರ್ಗೀಯ ಸಂಗೀತದಂತಿತ್ತು.

೧೧ ಅವನ ಧ್ವನಿ ಕೇಳುಗನ ಮನವೊಲಿಸುತ್ತಿತ್ತು. ಮತ್ತವನ ನೋಟ ಭಯಭಕ್ತಿಯನ್ನು ಉಂಟುಮಾಡುತ್ತಿತ್ತು.

೧೨ ಅವನನ್ನು ಬರಿ ನಾಯಕನಷ್ಟೇ ಅಲ್ಲ, ಅವನ ಅನುಯಾಯಿಗಳ ಹೃದಯದಲ್ಲಿ ದೇವರನ್ನಾಗಿ ಕೂಡ ಮಾಡಲು ಅವನ ವ್ಯಕ್ತಿತ್ವವೊಂದೇ ಸಾಕಿತ್ತು.

೧೩ ಅವನು ಮಾತನಾಡಿದರೆ ಸಾಕು ಕೇಳುಗರು ಅವನನ್ನು ಮುತ್ತಿಕೊಳ್ಳುತ್ತಿದ್ದರು.

೧೪ ಅವನೇನು ಹೇಳುತ್ತಿದ್ದ ಎಂಬುದು ಮುಖ್ಯವೇ ಆಗುತ್ತಿರಲಿಲ್ಲ. ಅವನ ಅಭಿಪ್ರಾಯ ಕೇಳುಗನ ಭಾವನೆ ಮತ್ತು ನಿಲುವನ್ನು ಪ್ರಭಾವಿಸುತ್ತಿತ್ತು.

೧೫ ಅವನ ಬೋಧನೆ ಸತ್ಯವಾದುದು ಎಂಬ ಭಾವನೆಯ ಜೊತೆಜೊತೆಗೇ ಮುಕ್ತಿಗೆ ಅದೊಂದೇ

ಮಾರ್ಗ ಎಂಬ ಭಾವನೆಯನ್ನೂ ಕೇಳುಗನ ಮನದಲ್ಲಿ ಉಂಟುಮಾಡುತ್ತಿತ್ತು.

೧೬ ಗುಲಾಮರನ್ನು ಸ್ವತಂತ್ರ ಮನುಷ್ಯರನ್ನಾಗಿ ಮಾಡುವ ಪ್ರಾಮಾಣಿಕತೆಯನ್ನು ಅವನ ಮಾತುಗಳು ಹೊಂದಿವೆ ಎಂಬುದನ್ನು ಕೇಳುಗರು ಗುರುತಿಸಬಲ್ಲವರಾಗಿದ್ದರು.

೧೭ ಮಹಿಳೆ ಮತ್ತು ಪುರುಷರೊಡನೆ ಮಾತನಾಡುತ್ತಿದ್ದಾಗ ಅವನ ನೋಟ ಅವರಲ್ಲಿ ಗೌರವವನ್ನೂ ಮತ್ತು ಭಯಭಕ್ತಿಯನ್ನೂ ಉಂಟುಮಾಡುತ್ತಿತ್ತು. ಅವನ ಸಿಹಿಯಾದ ಧ್ವನಿ ಅವರಲ್ಲಿ ಆನಂದವನ್ನೂ ಹಾಗೂ ಆಶ್ಚರ್ಯವನ್ನೂ ಹುಟ್ಟಿಸುತ್ತಿತ್ತು.

೧೮ ಕಾಡಿನಲ್ಲಿ ಪಶುವಂತಿದ್ದ ಕಳ್ಳ ಅಂಗುಲಿಮಾಲನಲ್ಲಿ ಪರಿವರ್ತನೆ ಉಂಟುಮಾಡಲು ಇನ್ಯಾರಿಗೆ ಸಾಧ್ಯವಾಗುತ್ತಿತ್ತು? ಒಂದೇ ಒಂದು ಮಾತಿನಿಂದ ದೊರೆ ಪಸೇನದಿಗೂ ಮತ್ತವನ ಪತ್ನಿ ಮಲ್ಲಿಕಾಳಿಗೂ ಮತ್ತೆ ಮಧುರ ಬಾಂಧವ್ಯವನ್ನು ಉಂಟುಮಾಡಲು ಬುದ್ಧನಲ್ಲದೆ ಬೇರೆ ಯಾರಿಗೆ ಸಾಧ್ಯವಾಗುತ್ತಿತ್ತು? ಅವನ ಮೋಡಿಗೆ ಒಳಗಾಗುವುದು ಎಂದರೆ ಸದಾ ಕಾಲಕ್ಕೂ ಅವನ ಅನುಯಾಯಿಯಾಗಿರುವುದು ಎಂದರ್ಥ. ಅಂಥ ಮನೋಹರ ವ್ಯಕ್ತಿತ್ವ ತಥಾಗತನದು.

## ೨. ಪ್ರತ್ಯಕ್ಷದರ್ಶಿಗಳ ಸಮರ್ಥನೆ

೧ ಅವನು ಜೀವಿತ ಕಾಲದಲ್ಲಿ ಅವನನ್ನು ನೋಡಿದ, ಭೇಟಿ ಮಾಡಿದ ಪ್ರತ್ಯಕ್ಷದರ್ಶಿಗಳು ಕೂಡ ಈ ಪಾರಂಪರಿಕ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ.

೨ ಅಂಥವರಲ್ಲಿ ಸಾಲನೆಂಬ ಬ್ರಾಹ್ಮಣನೂ ಒಬ್ಬ. ತಥಾಗತನನ್ನು ಮುಖಾಮುಖಿಯಾಗಿ ಕಂಡ ಅವನು ಬುದ್ಧನ ಬಗ್ಗೆ ಈ ಪ್ರಶಂಸೆಯ ಮಾತುಗಳನ್ನಾಡುತ್ತಾನೆ.

೩ ಬುದ್ಧನ ಸನ್ನಿಧಿಗೆ ಬಂದ ಆ ಬ್ರಾಹ್ಮಣ ಬುದ್ಧನಿಗೆ ವಂದಿಸಿ ಒಂದೆಡೆ ಕುಳಿತುಕೊಂಡು ಬುದ್ಧನ ಶರೀರವನ್ನು ೩೨ ಮಹಾಪುರುಷ ಲಕ್ಷಣಗಳಿಗಾಗಿ ನಿಗಾವಹಿಸಿ ನೋಡಿದ. ಅನತಿಕಾಲದಲ್ಲಿಯೇ ಅವನಿಗೆ ಅವು ಗೋಚರವಾದವು.

೪ ಈ ೩೨ ಮಹಾಪುರುಷ ಲಕ್ಷಣಗಳು ಕಂಡುಬಂದರೂ ಕೂಡ ಅವನಿಗೆ ಜ್ಞಾನೋದಯವಾಗಿದೆಯೊ ಇಲ್ಲವೊ ಎಂಬುದು ತಿಳಿಯಿಲಿಲ್ಲ. ಆದರೆ, ಒಬ್ಬ ಅರ್ಹಂತನನ್ನು, ಜ್ಞಾನಿಯನ್ನು ಪ್ರಶಂಸೆ ಮಾಡಿದಾಗ ಅವನು ಜ್ಞಾನೋದಯ ಹೊಂದಿದ್ದಾನೊ ಇಲ್ಲವೊ ಎಂಬ ಸತ್ಯ ಬಯಲಾಗಿಬಿಡುತ್ತದೆ ಎಂದು ವೃದ್ಧರೂ, ಜ್ಞಾನಿಗಳೂ, ಗುರುಗಳ ಗುರುಗಳೂ ಹೇಳುತ್ತಿದ್ದ ಮಾತೊಂದು ಅವನಿಗೆ ನೆನಪಾಯಿತು. ಹಾಗಾಗಿ ಬುದ್ಧನನ್ನು ಹೊಗಳಿ ಮುಖಸ್ತುತಿ ಮಾಡುವುದು ಎಂದು ನಿರ್ಧರಿಸಿಕೊಂಡು ಅವನನ್ನು ಕೆಳಕಂಡಂತೆ ಹೊಗಳಲು ಪ್ರಾರಂಭಿಸಿದ:

೫ "ಪರಿಪೂರ್ಣದೇಹಿಯಾದ ಭಗವಾನ್, ನೀನು ಸುದೇಹಿ, ಸದಭಿರುಚಿಯುಳ್ಳವನು, ಸುವರ್ಣವರ್ಣನು, ಹೊಳೆಯುವ ದಂತಪಂಕ್ತಿಯುಳ್ಳವನು, ಉತ್ಸಾಹಭರಿತನು ಹಾಗೂ ಮಹಾತ್ಮನ ಸಲ್ಲಕ್ಷಣಗಳನ್ನು ಉಳ್ಳವನಾಗಿರುವೆ.

೬ "ಸೂಕ್ಷ್ಮ ದೃಷ್ಟಿಯುಳ್ಳ ನೀನು ಎತ್ತರವಾಗಿ ಸುಂದರವಾಗಿದ್ದೀಯೇ. ಭಿಕ್ಷುಗಳ ನಡುವೆ ಸೌರಮಂಡಲದ ಮಧ್ಯದಲ್ಲಿ ಬೆಳಗುವ ಸೂರ್ಯನಂತಿದ್ದೀಯೆ. ಇಷ್ಟು ಕೋಮಲವಾದ, ಹೊಂಬಣ್ಣದ ಯೌವ್ವನಭರಿತ ಶರೀರವನ್ನು ಕಾಡುಮೇಡಿನಲ್ಲಿ ವಿರಕ್ತನಂತೇಕೆ ಬಳಲಿಸುತ್ತೀಯೆ?

೭ "ನೀನು ಚಕ್ರವರ್ತಿಯಾಗಿ ಈ ಭೂಮಂಡಲವನ್ನು ಆಳು, ಸಾಗರದಿಂದ ಸಾಗರದವರೆಗೆ ನಿನ್ನ ಸಾಮ್ರಾಜ್ಯದ ಹರಹನ್ನು ವಿಸ್ತರಿಸು. ಹೆಮ್ಮೆಯ ರಾಜಕುಮಾರರು ನಿನ್ನ ಕೈಕೆಳಗೆ ಮಾಂಡಲೀಕರಾಗಿ ಇರುತ್ತಾರೆ. ನೀನು ರಾಜಾಧಿರಾಜನಾಗಿ ಮಹಾರಾಜನಾಗಿ ನಿನ್ನ ಅಧಿಪತ್ಯವನ್ನು ನಡೆಸು."

೮ ಬುದ್ಧನ ಮೈಬಣ್ಣ ತುಂಬ ಶುಭ್ರವಾಗಿ ಕಾಂತಿಯುಕ್ತವಾಗಿತ್ತು ಎಂದು ಆನಂದನು ಹೇಳುತ್ತಾನೆ. ಹಾಗಾಗಿಯೇ ಬಂಗಾರದ ವಸ್ತ್ರಗಳನ್ನು ಅವನು ಧರಿಸಿದರೆ ಅದು ಕಾಂತಿಯನ್ನು ಕಳೆದುಕೊಂಡು ಮಂಕಾಗಿ ಕಾಣುತ್ತಿತ್ತು.

೯ ಹಾಗಾಗಿ ಅವನ ವಿರೋಧಿಗಳು ಅವನನ್ನು ಮೋಹಕ ಸೊಗಸುಗಾರ ಎಂದು ಕರೆದುದರಲ್ಲಿ ಅತಿಶಯವೇನಿರಲಿಲ್ಲ.

## ೩. ಸಿದ್ಧಾರ್ಥನ ನಾಯಕತ್ವ–ಸಾಮರ್ಥ್ಯ

೧ ಸಂಘಕ್ಕೆ ಅಧಿಕೃತವಾಗಿ ಒಬ್ಬ ಮುಖಂಡನಿರಲಿಲ್ಲ. ತಥಾಗತನಿಗೆ ಸಂಘದ ಮೇಲೆ ಯಾವ ಅಧಿಕಾರವೂ ಇರಲಿಲ್ಲ. ಅದೊಂದು ಸ್ವ–ಆಡಳಿತಾತ್ಮಕ ಸಂಸ್ಥೆಯಾಗಿತ್ತು.

೨ ಹಾಗಾದರೆ ಸಂಘ ಮತ್ತದರ ಸದಸ್ಯರಿಗೆ ಸಂಬಂಧಿಸಿದಂತೆ ಬುದ್ಧನ ಸ್ಥಾನವೇನಾಗಿತ್ತು?

೩ ಈ ಬಗ್ಗೆ ಬುದ್ಧನ ಸಮಕಾಲೀನರಾದ ಸಕುಲದಾಯಿ ಮತ್ತು ಉದಾಯಿಯ ಸಾಕ್ಷ್ಯಗಳು ನಮ್ಮ ಮುಂದಿವೆ.

೪ ಒಮ್ಮೆ ರಾಜಗೃಹದ ವೇಣುವನದಲ್ಲಿ ಬುದ್ಧನು ತಂಗಿದ್ದ.

೫ ಒಂದು ಹಗಲು ಭಿಕ್ಷಾಟನೆಗೆಂದು ಬುದ್ಧ ರಾಜಗೃಹದ ನಗರದೊಳಕ್ಕೆ ಹೋಗಿದ್ದ. ಆದರೆ ತಾನು ಹೋದದ್ದು ತುಸು ಬೇಗ ಆಯಿತೆಂದೆನಿಸಿ ಅವನು ಅಲೆಮಾರಿಗಳ ವಿಹಾರಭೂಮಿಯಲ್ಲಿದ್ದ ಸಕುಲದಾಯಿಯ ಬಳಿಗೆ ಹೋದನು.

೬ ಆಗ ಸಕುಲದಾಯಿಯು ಹಲವಾರು ಮಂದಿ ಅಲೆಮಾರಿಗಳ ಜೊತೆ ಕುಳಿತುಕೊಂಡಿದ್ದನು. ಅವರೆಲ್ಲರೂ ಇರುವಿಕೆ ಮತ್ತು ಇಲ್ಲದಿರುವಿಕೆಯ ಪ್ರಶ್ನೆಯನ್ನು ಕುರಿತು ಜೋರಾಗಿ ಗಲಾಟೆ ಮಾಡುತ್ತಿದ್ದರು.

೭ ಬುದ್ಧನು ಇನ್ನೂ ದೂರದಲ್ಲಿರುವಾಗಲೇ ಅವನ ಬರವನ್ನು ಗಮನಿಸಿದ ಸಕುಲದಾಯಿಯು "ನಿಶ್ಶಬ್ದ. ಗದ್ದಲ ಮಾಡಬೇಡಿ. ಇಲ್ಲಿಗೆ ಶ್ರಮಣ ಗೌತಮನು ಬರುತ್ತಿದ್ದಾನೆ. ಅವನು ಮೌನಪ್ರಿಯ" ಎಂದು ಅವರನ್ನೆಲ್ಲಾ ಸುಮ್ಮನಾಗಿಸಿದನು.

೮ ಹಾಗಾಗಿ ಅವರೆಲ್ಲರೂ ಮೌನವಾದರು. ಆ ಹೊತ್ತಿಗೆ ಬುದ್ಧನು ಅಲ್ಲಿಗೆ ಬಂದನು. "ಬುದ್ಧನೇ, ನಿನಗೆ ಸ್ವಾಗತ. ಬಹುಕಾಲದಿಂದ ಇಲ್ಲಿಗೆ ಬಾರದೆ ಇಂದು ಬಂದಿದ್ದೀಯೆ. ದಯವಿಟ್ಟು ಕುಳಿತುಕೋ. ನಮ್ಮೊಡನೆ ಸ್ವಲ್ಪ ಕಾಲ ಇರು" ಎಂದು ಸಕುಲದಾಯಿ ಹೇಳಿದನು.

೯ ಅಂತೆಯೇ ಕುಳಿತುಕೊಳ್ಳುತ್ತಾ ಬುದ್ಧನು ಅವರು ಯಾವುದರ ಬಗ್ಗೆ ಚರ್ಚೆ ನಡೆಸುತ್ತಿದ್ದರು? ಯಾವ ವಿಚಾರವಾಗಿ ವಾಗ್ವಾದ ನಡೆಸುತ್ತಿದ್ದರೆಂದು ಸಕುಲದಾಯಿಯನ್ನು ಕೇಳಿದನು.

೧೦. ಸಕುಲದಾಯಿಯು "ಅದು ಹಾಗಿರಲಿ. ಅದರ ಬಗ್ಗೆ ನೀನು ಆಮೇಲೆ ಸಲೀಸಾಗಿ ತಿಳಿದುಕೊಳ್ಳಬಹುದು." ಎಂದನು.

೧೧. ಇತ್ತೀಚೆಗೆ ಮಳೆಗಾಲವನ್ನು ಕಳೆಯಲು ರಾಜಗೃಹಕ್ಕೆ ಬಂದಿದ್ದ, ತುಂಬಾ ಪ್ರಖ್ಯಾತರಾದ ಪ್ರಮುಖರಾದ, ಎಲ್ಲ ಪ್ರಮುಖ ಪಂಥಗಳ ಪ್ರವರ್ತಕರಾದ, ವಿರಕ್ತರೂ, ಗುರುಗಳೂ ಬ್ರಾಹ್ಮಣರೂ ಹಾಗೂ ಅವರ ಶಿಷ್ಯರೂ, ಚರ್ಚಾಗೃಹದಲ್ಲಿ ಸೇರಿ ಚರ್ಚಿಸುತ್ತಿದ್ದರು. ಅಂಗರಾಜ್ಯದ ಮಗಧ ಜನರಿಗೆ ಅದೊಂದು ಸದವಕಾಶ.

೧೨. ಹೀಗೆ ಬಂದವರಲ್ಲಿ ಪುರಾಣಕಶ್ಯಪ, ಮಸ್ಕರೀ ಗೋಶಾಲ, ಆಜಿತ ಕೇಶಕಂಬಳಿ, ಪಕುದ್ಧ ಕಾತ್ಯಾಯನ, ಸಂಜಯ ವೈರಾಟಪುತ್ರ, ನಿರ್ಗ್ರಂಥ ನಾಥಪುತ್ತ, ಮುಂತಾದ ಪ್ರಖ್ಯಾತರಿದ್ದರು. ಅವರೆಲ್ಲಾ ಮಳೆಗಾಲ ಕಳೆಯಲು ಬಂದಿದ್ದರು. ಅವರ ನಡುವೆ ಶ್ರಮಣ ಗೌತಮನೂ ಇದ್ದ. ಅವನು ತನ್ನ ಶಿಷ್ಯರ ಜೊತೆ ಇಲ್ಲಿಗೆ ಬಂದ. ಅವನು ಬಹಳ ಪ್ರಖ್ಯಾತನಾದವನು. ಮಹಾನ್ ಬೋಧಕನೆಂದು ಖ್ಯಾತಿವೆತ್ತವನು. ಮುಕ್ತಿ ಪಂಥದ ಪ್ರವರ್ತಕ. ಜನ ಅವನನ್ನು ಬಹುವಾಗಿ ಗೌರವಿಸುತ್ತಾರೆ.

೧೩. ಇವರಲ್ಲೆಲ್ಲಾ ಅತ್ಯಂತ ಮಾನ್ಯನು ಹಾಗೂ ಶಿಷ್ಯರ ಪ್ರೀತಿ, ಗೌರವ ಹಾಗೂ ಆದರಕ್ಕೆ ಪಾತ್ರನೂ ಆದ ಗುರು ಯಾರು? ಮತ್ತು ಯಾವ ರೀತಿಯ ಗೌರವಾದರಗಳೊಡನೆ ಅವನೊಡನೆ ಇದ್ದಾರೆ?

೧೪. ಪುರಾಣ ಕಶ್ಯಪನ ಬಗ್ಗೆ ಶಿಷ್ಯರಲ್ಲಿ ಗೌರವವಾಗಲಿ ಅಥವಾ ಆದರವಾಗಲಿ ಇಲ್ಲ. ಯಾವ ಗೌರವಾದರಗಳೂ ಇಲ್ಲದೆ ಅವರು ಅವನೊಡನಿದ್ದಾನೆ? ಎಂಬುದು ಕೆಲವರ ಅನುಭವವಾಗಿತ್ತು.

೧೫. ಒಮ್ಮೆ ನೂರಾರು ಜನ ಶಿಷ್ಯರಿಗೆ ತನ್ನ ಸಿದ್ಧಾಂತವನ್ನು ಅವನು ಬೋಧಿಸುತ್ತಿದ್ದನು. ಆಗ ಶಿಷ್ಯನೊಬ್ಬನು ನಡುವೆ ಬಾಯಿ ಹಾಕಿ "ಪುರಾಣ ಕಶ್ಯಪನನ್ನು ಪ್ರಶ್ನಿಸಬೇಡಿ. ಅವನಿಗೆ ಏನೂ ಗೊತ್ತಿಲ್ಲ. ನನ್ನನ್ನು ಕೇಳಿ ನಾನು ನಿಮ್ಮ ಸಂಶಯಗಳನ್ನು ಪರಿಹರಿಸುತ್ತೇನೆ" ಎಂದನು.

೧೬. ಆಗ ಪುರಾಣ ಕಶ್ಯಪನು ಅಂಗಲಾಚಿ, ಕಣ್ಣೀರುದುಂಬಿ "ಮಾನ್ಯರೇ, ದಯೆಯಿಟ್ಟು ಸುಮ್ಮನಿರಿ. ಗಲಾಟೆ ಮಾಡಬೇಡಿ" ಎಂದು ಮನವಿ ಮಾಡಿಕೊಂಡನು.

# ಭಾಗ : ೨
# ಬುದ್ಧನ ಮಾನವೀಯತೆ

೧. ಬುದ್ಧನ ಕಾರುಣ್ಯ–ಮಹಾಕಾರುಣಿಕ
೨. ನೊಂದವರ ದುಃಖನಿವಾರಕ
೩. ರೋಗಿಗಳ ಬಗ್ಗೆ ಬುದ್ಧನ ಕಾಳಜಿ
೪. ಅಸಹಿಷ್ಣುಗಳ ಬಗ್ಗೆ ಬುದ್ಧನ ಸಹಿಷ್ಣುತೆ
೫. ಬುದ್ಧನ ಸಮಾನತಾ ಭಾವನೆ ಹಾಗೂ ಸಮನತಾಚರಣೆ

# ೧. ಬುದ್ಧನ ಕಾರುಣ್ಯ – ಮಹಾಕಾರುಣಿಕ

೧ ಒಮ್ಮೆ ತಥಾಗತನು ಶ್ರಾವಸ್ತಿಯಲ್ಲಿ ತಂಗಿದ್ದಾಗ ದೇವ ಎನ್ನುವನು ಭಿಕ್ಷುಗಳ ಧ್ಯಾನಕ್ಕೆ ಭಂಗ ಉಂಟು ಮಾಡಿ ಕಿರುಕುಳ ಕೊಡುತ್ತಿದ್ದಾನೆ ಎಂದು ಭಿಕ್ಷುಗಳು ಅವನ ಗಮನಕ್ಕೆ ತರುತ್ತಾರೆ.

೨ ಅವನು ನೀಡುತ್ತಿದ್ದ ಕಿರುಕುಳಗಳ ಬಗ್ಗೆ ಕೇಳಿಸಿಕೊಂಡ ಬುದ್ಧ ಭಿಕ್ಷುಗಳಿಗೆ ಕೆಳಗಿನ ಕೆಲವು ಸಲಹೆಗಳನ್ನು ನೀಡಿದ:

೩ "ದೈವೀಕತೆಯನ್ನು ಸಾಧಿಸಿಕೊಂಡ, ಶಾಂತವಾದ ಮನಸ್ಥಿತಿಯನ್ನು ಹೊಂದಲು ಬಯಸುವ ವ್ಯಕ್ತಿಯು ಸಮರ್ಥನೂ ಪ್ರಾಮಾಣಿಕನೂ, ವಿನಯವಂತನೂ, ಉದಾತ್ತಭಾಷಿಯೂ ಹಾಗೂ ಸಂಭಾವಿತನೂ ಆಗಿರಬೇಕು.

೪ "ತೃಪ್ತನೂ, ಜಿತೇಂದ್ರಿಯನೂ, ಸರಳಜೀವಿಯೂ, ವಿವೇಚನೆಯುಳ್ಳವನೂ ಆಗಿರಬೇಕು. ಅಂತೆಯೇ ನಿರ್ಲಜ್ಜನೂ ಮತ್ತು ಸಂಸಾರದ ಬಗ್ಗೆ ಅತಿ ವ್ಯಾಮೋಹಿಯೂ ಆಗಿರಬಾರದು.

೫ "ಇತರ ವಿವೇಕಿಗಳು ಆಕ್ಷೇಪಿಸುವಂಥ ಕ್ಷುದ್ರವಾದ ಕೆಲಸಗಳಿಗೆ ಎಳಸಬಾರದು. 'ಎಲ್ಲರೂ ಸುಖ–ನೆಮ್ಮದಿಗಳಿಂದ ಇರಲಿ, ಅವರ ಮನಸ್ಸು ಆರೋಗ್ಯಕರವಾಗಿರಲಿ' ಎಂದು ಆಶಿಸಬೇಕು.

೬ "ಜೀವಿಗಳು ದುರ್ಬಲವಾಗಿರಲಿ ಅಥವಾ ಸಬಲರಾಗಿರಲಿ, ಕುಬ್ಜರಾಗಿರಲಿ ಅಥವಾ ನೀಳಕಾಯರಾಗಿರಲಿ, ಸ್ಥೂಲರಾಗಿರಲಿ ಅಥವಾ ಸೂಕ್ಷ್ಮರಾಗಿರಲಿ, ದಪ್ಪಗಿರಲಿ ಅಥವಾ ತೆಳ್ಳಗಿರಲಿ, ಅವರೆಲ್ಲರೂ ಸಂತೋಷದಿಂದಿರಲಿ.

೭ "ನಾವು ಕಂಡವರು, ನಾವು ಕಾಣದವರು, ನಮ್ಮ ಹತ್ತಿರ ಇರುವವರು, ದೂರವಿರುವವರು, ಜನ್ಮ ತಳೆದಿರುವವರು, ಇನ್ನೂ ಜನ್ಮ ತಳೆಯಬೇಕಾದವರು, ಎಲ್ಲರೂ ಸಂತೋಷದಿಂದಿರಲಿ.

೮ "ಯಾರೂ ಮತ್ತೊಬ್ಬರನ್ನು ವಂಚಿಸದಿರಲಿ, ಎಲ್ಲೂ ಯಾರನ್ನೂ ತುಚ್ಛವಾಗಿ ಕಾಣದಿರಲಿ, ಕೋಪದಿಂದಾಗಲಿ ಅಥವಾ ದ್ವೇಷದಿಂದಾಗಲಿ ಯಾರೂ ಪರರಿಗೆ ಕೇಡೆಣಿಸದಿರಲಿ.

೯. "ತನ್ನ ಜೀವವನ್ನು ಒತ್ತೆ ಇಟ್ಟು ತಾಯಿಯೊಬ್ಬಳು ತನ್ನ ಏಕೈಕ ಕರುಳಕುಡಿಯನ್ನು ರಕ್ಷಿಸುವಂತೆ ಎಲ್ಲಾ ಜೀವಿಗಳ ಬಗ್ಗೆ ಅಂಥ ಅಪರಿಮಿತ ಮಮತೆಯ ಮನಸ್ಸನ್ನು ಬೆಳೆಸಿಕೊಳ್ಳಲಿ.

೧೦. "ಅವನ ಅಸೀಮ ಪ್ರೇಮದ ವಿಚಾರಗಳು ಮೇಲೆ, ಕೆಳಗೆ, ಅಕ್ಕ–ಪಕ್ಕ ಎಲ್ಲೆಡೆಯಲ್ಲೂ ಯಾವ ಅಡೆತಡೆಯಾಗಲಿ ಅಥವಾ ಶತ್ರುತ್ವವಾಗಲಿ ಇಲ್ಲದಂತೆ ಇಡೀ ವಿಶ್ವವನ್ನು ವ್ಯಾಪಿಸಲಿ.

೧೧. "ಅವನು ನಿಂತಿರಲಿ, ಕುಳಿತಿರಲಿ, ಅಡ್ಡಾಡುತ್ತಿರಲಿ ಅಥವಾ ವಿಶ್ರಮಿಸುತ್ತಿರಲಿ ಆದರೆ ಎಚ್ಚರವಾಗಿರುವಷ್ಟು ಹೊತ್ತೂ ಈ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಅದನ್ನು ಉದಾತ್ತವಾದ ಬದುಕು ಎಂದು ಕರೆಯುತ್ತಾರೆ.

೧೨. "ಭ್ರಮೆಗೆ ಸಿಲುಕದೆ, ಧರ್ಮಾತ್ಮನಾಗಿ, ಅಂತರ್‌ದೃಷ್ಟಿಯನ್ನು ಹೊಂದಿ, ವಿಷಯಾಸಕ್ತಿಯನ್ನು ತ್ಯಜಿಸಿದವನು ಪುನರ್ಜನ್ಮವನ್ನು ಹೊಂದುವುದಿಲ್ಲ.

೧೩. "ಸಂಕ್ಷಿಪ್ತವಾಗಿ ಹೇಳಬೇಕೆಂದರೆ 'ನಿನ್ನ ಶತ್ರುಗಳನ್ನೂ ಪ್ರೀತಿಸು' " ಎಂದು ಬೋಧಿಸಿದನು.

# ೨. ನೊಂದವರ ದುಃಖನಿವಾರಕ

## ೧. ವಿಶಾಖಳನ್ನು ಸಂತೈಸಿದ್ದು

೧ ವಿಶಾಖ ಒಬ್ಬಳು ಉಪಾಸಕಿ. ಭಿಕ್ಷುಗಳಿಗೆ ದಾನವನ್ನು ನೀಡುವುದು ಅವಳ ನಿತ್ಯದ ಪರಿಪಾಠವಾಗಿತ್ತು.

೨ ಒಂದು ದಿನ ಅವಳೊಡನೆಯೇ ವಾಸಿಸುತ್ತಿದ್ದ ಅವಳ ಮೊಮ್ಮಗಳು ಶುದ್ಧತಾ ಕಾಯಿಲೆ ಬಂದು ಸತ್ತುಹೋದಳು.

೩ ವಿಶಾಖಳಿಗೆ ದುಃಖ ತಡೆಯಲಾಗಲಿಲ್ಲ.

೪ ಮೊಮ್ಮಗಳ ಅಂತ್ಯಸಂಸ್ಕಾರದ ನಂತರ ಅವಳು ಬುದ್ಧನ ಬಳಿಗೆ ಹೋಗಿ ಶೋಕತಪ್ತಳಾಗಿ ಒಂದೆಡೆ ಕುಳಿತುಕೊಂಡಳು.

೫ "ವಿಶಾಖಾ, ಇದೇಕೆ ಹೀಗೆ ದುಃಖತಪ್ತಳಾಗಿ ಕಣ್ಣೀರ್ಗರೆಯುತ್ತಾ ಕುಳಿತಿದ್ದೀಯೆ" ಎಂದು ತಥಾಗತನು ಅವಳನ್ನು ಕೇಳಿದನು.

೬ ಅವಳು ತನ್ನ ಮೊಮ್ಮಗಳ ಸಾವಿನ ಸುದ್ದಿಯನ್ನು ಬುದ್ಧನಿಗೆ ತಿಳಿಸಿ "ಅವಳು ತುಂಬಾ ಕರ್ತವ್ಯನಿಷ್ಠಳಾಗಿದ್ದಳು. ಅವಳಂಥ ಮತ್ತೊಬ್ಬ ಹೆಣ್ಣು ಸಿಗುವುದು ಅಸಾಧ್ಯ" ಎಂದಳು.

೭ "ವಿಶಾಖಾ, ಶ್ರಾವಸ್ತಿಯಲ್ಲಿ ಎಷ್ಟು ಮಂದಿ ಯುವತಿಯರಿದ್ದಾರೆ?" ಎಂದರು ತಥಾಗತರು.

೮ "ಭಗವಾನ್, ಜನ ಹೇಳುವ ಪ್ರಕಾರ ಎಷ್ಟೋ ಕೋಟಿ ಇದ್ದಾರೆ."

೯ "ಅವರೆಲ್ಲರೂ ನಿನ್ನ ಮೊಮ್ಮಗಳಂತೆಯೇ ಇದ್ದ ಪಕ್ಷದಲ್ಲಿ ನೀನು ಅವರನ್ನು ಪ್ರೀತಿಸುವುದಿಲ್ಲವೇ?"

೧೦ "ಭಗವಾನ್, ಖಂಡಿತವಾಗಿಯೂ ಪ್ರೀತಿಸುತ್ತೇನೆ" ಎಂದಳು ವಿಶಾಖಾ.

೧೧ "ಶ್ರಾವಸ್ತಿಯಲ್ಲಿ ದಿನವೂ ಎಷ್ಟು ಮಂದಿ ಮರಣ ಹೊಂದುತ್ತಾರೆ?"

೧೨ "ಹಲವಾರು ಮಂದಿ."

೧೩ "ಹಾಗಿದ್ದ ಪಕ್ಷದಲ್ಲಿ ನೀನು ಪ್ರತಿ ಕ್ಷಣವೂ ಯಾರಾದರೊಬ್ಬರಿಗೆ ದುಃಖಿಸುತ್ತಲೇ ಇರಬೇಕಾಗುತ್ತದೆ ಅಲ್ಲವೇ?"

೧೪ "ನಿಜ ಭಗವಾನ್."

೧೫ "ಹಾಗಿದ್ದಲ್ಲಿ ನೀನು ಹಗಲೂ ರಾತ್ರಿ ಅಳುತ್ತಲೇ ಜೀವನವನ್ನು ಸವೆಸುತ್ತೀಯೇನು?"

೧೬ "ನೀನು ಸರಿಯಾಗಿ ಹೇಳಿದೆ. ಈಗ ನನಗೆ ಅರ್ಥವಾಯಿತು."

೧೭ "ಹಾಗಿದ್ದಲ್ಲಿ ಇನ್ನು ಮುಂದೆ ದುಃಖಿಸಬೇಡ."

## ೨. ಕಿಸಾಗೋತಮಿಯನ್ನು ಸಂತೈಸಿದ್ದು

೧ ಶ್ರಾವಸ್ತಿಯ ವರ್ತಕನೊಬ್ಬನ ಮಗನೊಂದಿಗೆ ಕಿಸಾಗೋತಮಿಗೆ ಲಗ್ನವಾಗಿತ್ತು.

೨ ಮದುವೆಯಾದ ಕೆಲವು ದಿನಗಳಲ್ಲಿಯೇ ಅವರಿಗೊಬ್ಬ ಮಗ ಜನಿಸಿದ.

೩ ಮಗುವಿಗೆ ನಡಿಗೆ ಬರುವ ಮುನ್ನವೇ ಹಾವು ಕಚ್ಚಿ ಆ ಮಗು ತೀರಿಹೋಯಿತು.

೪ ಅವಳು ಹಿಂದೆಂದೂ ಸಾವನ್ನೇ ಕಂಡಿಲ್ಲದಿದ್ದರಿಂದ, ಅವಳಿಗೆ ಮಗು ನಿಜವಾಗಿ ಸತ್ತುಹೋಗಿದೆ ಎಂಬ ನಂಬಿಕೆಯೇ ಹುಟ್ಟಲಿಲ್ಲ.

೫ ಹಾವು ಕಚ್ಚಿದ್ದರಿಂದ ಆಗಿದ್ದ ಸಣ್ಣ ಕೆಂಪುಗಾಯವು ಮಗುವಿನ ಸಾವಿಗೆ ಕಾರಣ ಎನ್ನುವಷ್ಟು ತೀವ್ರತರವಾಗಿ ಕಾಣುತ್ತಿರಲಿಲ್ಲ.

೬ ಅವಳು ತೀವ್ರ ಉನ್ಮಾದಾವಸ್ಥೆಯಲ್ಲಿ ತನ್ನ ಮಗುವಿನ ಶವವನ್ನು ಹೊತ್ತುಕೊಂಡು ಮನೆಯಿಂದ ಮನೆಗೆ ಸುತ್ತಲಾರಂಭಿಸಿದಳು. ಶ್ರಾವಸ್ತಿಯ ಜನ ಕಿಸಾಗೋತಮಿಗೆ ಹುಚ್ಚು ಹಿಡಿದಿದೆ ಎಂದೇ ಭಾವಿಸಿದರು.

೭ ಆಗ ವಯೋವೃದ್ಧನೊಬ್ಬ ಕಿಸಾಗೋತಮಿಯನ್ನು ಕರೆದು ಶ್ರಾವಸ್ತಿಯಲ್ಲಿ ತಂಗಿದ್ದ ಬುದ್ಧನ ಬಳಿಗೆ ಹೋಗುವಂತೆ ಸಲಹೆ ನೀಡಿದ.

೮ ಅವಳು ತಥಾಗತನ ಬಳಿಗೆ ಬಂದು ತನ್ನ ಮಗುವನ್ನು ಮರಳಿ ಬದುಕಿಸುವ ಮದ್ದನ್ನು ಬೇಡಿದಳು.

೯ ತಥಾಗತನು ಅವಳ ಕಥೆಯನ್ನು ಹಾಗೂ ರೋದನವನ್ನು ಆಲಿಸಿದನು.

೧೦ ನಂತರ ತಥಾಗತನು "ನಗರದೊಳಕ್ಕೆ ಹೋಗಿ ಸಾವು ಸಂಭವಿಸದಿರುವ ಮನೆಯಿಂದ ಸ್ವಲ್ಪ ಸಾಸುವೆ ಕಾಳನ್ನು ತೆಗೆದುಕೊಂಡು ಬಾ. ಅದರಿಂದ ನಿನ್ನ ಮಗುವನ್ನು ಬದುಕಿಸುತ್ತೇನೆ" ಎಂದು ಗೌತಮಿಗೆ ಹೇಳಿದನು.

೧೧ ಅವಳು ಅದನ್ನು ಬಹಳ ಸುಲಭವೆಂದು ಭಾವಿಸಿ ತನ್ನ ಮಗುವಿನ ಶರೀರವನ್ನು ತೆಗೆದುಕೊಂಡು ನಗರಕ್ಕೆ ಬಂದಳು.

೧೨ ಆದರೆ ಅವಳಿಗೆ ಅದು ಕಷ್ಟವಾಯಿತು. ಏಕೆಂದರೆ ಅವಳು ಹೊಕ್ಕ ಪ್ರತಿಯೊಂದು ಮನೆಯಲ್ಲಿಯೂ ಒಂದಲ್ಲ ಒಂದು ಸಾವು ಸಂಭವಿಸಿತ್ತು.

೧೩ ಗೃಹಸ್ಥನೊಬ್ಬ "ಬದುಕಿರುವವರ ಸಂಖ್ಯೆಗಿಂತ ಸತ್ತವರ ಸಂಖ್ಯೆಯೇ ಹೆಚ್ಚು" ಎಂದನು.

೧೪ ಹಾಗಾಗಿ, ಅವಳು ನಿರಾಶಳಾಗಿ, ಖಾಲಿ ಕೈಯಲ್ಲಿ ಬುದ್ಧನ ಬಳಿಗೆ ಮರಳಿ ಬಂದಳು.

೧೫ ಅವಳ ಮನೆಯ ಸಾವು ವಿಶೇಷವೆಂದು ಅವಳು ದುಃಖಿಸಿದರೂ ಕೂಡ ಸಾವು ಮಾನವನು ಅಳಿಸಲಾಗದ ಅನಿವಾರ್ಯ ವಿಧಿ ಎಂಬುದು ಅವಳಿಗೆ ಅರಿವಾಗಲಿಲ್ಲವೇ ಎಂದು ಬುದ್ಧನು ಅವಳನ್ನು ಕೇಳಿದನು.

೧೬ ನಂತರ ಅವಳು ಮಗುವಿನ ಅಂತ್ಯಕ್ರಿಯೆಯನ್ನು ಪೂರೈಸಿ "ಎಲ್ಲವೂ ಅನಿತ್ಯ, ಅದೇ ಬದುಕಿನ ನಿಯಮ" ಎಂದಳು.

## ೩. ರೋಗಿಗಳ ಬಗ್ಗೆ ಬುದ್ಧನ ಕಾಳಜಿ

### (೧)

೧ ಬುದ್ಧನ ಶಿಷ್ಯನೊಬ್ಬ ಅತಿಸಾರದಿಂದ ಬಳಲುತ್ತಿದ್ದ. ತೀವ್ರವಾಗಿ ಆಯಾಸಗೊಂಡಿದ್ದ ಅವನು ತನ್ನ ಹೇಸಿಗೆಯ ನಡುವೆಯೇ ಬಿದ್ದುಕೊಂಡಿದ್ದನು.

೨ ಭಿಕ್ಷುಗಳ ಬಿಡದಿಯ ಪರಿವೀಕ್ಷಣೆಗೆ ಆನಂದನೊಡನೆ ಹೋಗಿದ್ದ ತಥಾಗತನು ಆ ಭಿಕ್ಷುವಿದ್ದ ಕೊಠಡಿಗೆ ಬಂದನು.

೩ ಭೇದಿಯ ನಡುವೆಯೇ ಬಿದ್ದುಕೊಂಡಿದ್ದ ಅವನನ್ನು ನೋಡಿ ತಥಾಗತನು ಅವನ ಬಳಿಗೆ ಹೋಗಿ "ಸೋದರ ನಿನಗೇನಾಗಿದೆ?" ಎಂದು ಕೇಳಿದನು.

೪ "ನಾನು ಅತಿಸಾರದಿಂದ ಬಳಲುತ್ತಿದ್ದೇನೆ" ಎಂದನು.

೫ "ಯಾರಾದರೂ ನಿನ್ನನ್ನು ನೋಡಿಕೊಳ್ಳುತ್ತಿದ್ದಾರೆಯೇ?"

೬ "ಇಲ್ಲ ಭಗವನ್."

೭ "ಯಾಕೆ ಸಹೋದರ? ಉಳಿದ ಸಹೋದರರು ನಿನ್ನ ಸೇವೆಯನ್ನೇಕೆ ಮಾಡುತ್ತಿಲ್ಲ?"

೮ "ಭಗವನ್, ನನ್ನಿಂದ ಅವರಿಗೇನೂ ಪ್ರಯೋಜನವಿಲ್ಲ. ಹಾಗಾಗಿ ಅವರು ನನ್ನ ಬಗ್ಗೆ ಕಾಳಜಿ ವಹಿಸುತ್ತಿಲ್ಲ."

೯ ತಥಾಗತನು ಪೂಜ್ಯ ಆನಂದನೆಡೆಗೆ ತಿರುಗಿ, "ಆನಂದ, ಹೋಗಿ ನೀರು ತಾ. ನಾನು ಇವನಿಗೆ ಸ್ನಾನ ಮಾಡಿಸಿ ಶುಭ್ರಗೊಳಿಸುತ್ತೇನೆ" ಎಂದನು.

೧೦ "ಹಾಗೆಯೇ ಆಗಲಿ" ಎಂದು ಆನಂದ ತಥಾಗತನಿಗೆ ಹೇಳಿದನು. ಅವನು ಹೋಗಿ ನೀರು ತಂದ ಮೇಲೆ, ತಥಾಗತನು ನೀರನ್ನು ಹೊಯ್ದಾಗ ಆನಂದನು ಭಿಕ್ಷುವಿನ ಮೈದಡವಿ ತೊಳೆದನು. ನಂತರ ತಥಾಗತನು ಅವನ ತಲೆಯನ್ನು ಮತ್ತು ಆನಂದನು ಅವನ ಕಾಲನ್ನೂ ಹಿಡಿದೆತ್ತಿ ಹಾಸಿಗೆಯ ಮೇಲೆ ಮಲಗಿಸಿದರು.

೧೧ ನಂತರ ತಥಾಗತನು, ಆ ಸಂದರ್ಭದಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಸಂಘದ ಸಭೆಯನ್ನು ಕರೆದು, ಉಳಿದ ಸಹೋದರರನ್ನು ಈ ಬಗ್ಗೆ ಪ್ರಶ್ನಿಸಿದನು:

೧೨ "ಸಹೋದರರೇ, ಬಿಡದಿಯ ಕೊಠಡಿಯೊಂದರಲ್ಲಿ ಭಿಕ್ಷುವೊಬ್ಬನು ಕಾಯಿಲೆ ಬಿದ್ದಿದ್ದಾನೆ ಎಂಬುದು ನಿಮಗೆ ತಿಳಿಯದೆ?"

೧೩ "ತಿಳಿದಿದೆ ಭಗವಾನ್."

೧೪ "ಅವನಿಗೇನಾಗಿದೆ?"

೧೫ "ಅವನು ಅತಿಸಾರದಿಂದ ಬಳಲುತ್ತಿದ್ದಾನೆ."

೧೬ "ಯಾರಾದರೂ ಅವನ ಸೇವೆಯನ್ನು ಮಾಡುತ್ತಿದ್ದಾರಾ?"

೧೭ "ಇಲ್ಲ ಭಗವಾನ್."

೧೮ "ಯಾಕೆ? ಯಾಕೆ ಯಾವ ಭ್ರಾತೃವೂ ಅವನನ್ನು ನೋಡಿಕೊಳ್ಳುತ್ತಿಲ್ಲ?"

೧೯ "ಭಗವನ್, ಅವನಿಂದ ಭ್ರಾತೃಗಳಿಗೆ ಯಾವ ಪ್ರಯೋಜನವೂ ಇಲ್ಲ. ಹಾಗಾಗಿ ಅವನನ್ನು ಯಾರೂ ನೋಡಿಕೊಳ್ಳುತ್ತಿಲ್ಲ."

೨೦ "ಭ್ರಾತೃಗಳೇ, ನಿಮ್ಮನ್ನು ನೋಡಿಕೊಳ್ಳಲು ತಂದೆಯಾಗಲಿ ತಾಯಿಯಾಗಲಿ ಇಲ್ಲ. ನಿಮ್ಮನ್ನು ನೀವೇ ಪರಸ್ಪರ ನೋಡಿಕೊಳ್ಳದೇ ಹೋದರೆ, ಯಾರು ನೋಡಿಕೊಳ್ಳುತ್ತಾರೆ? ಭ್ರಾತೃಗಳೇ, ಯಾರು ನನ್ನನ್ನು ನೋಡಿಕೊಳ್ಳುತ್ತಿದ್ದಾನೊ, ಅವನು ರೋಗಿಗಳನ್ನು ನೋಡಿಕೊಳ್ಳಲಿ.

೨೧ "ಅವನಿಗೆ ಗುರುವಿದ್ದಲ್ಲಿ, ಅವನ ಗುರುವೇ ಅವನನ್ನು ಬದುಕಿರುವವರೆಗೂ ನೋಡಿಕೊಳ್ಳಲಿ. ಅವನು ಗುಣ ಹೊಂದುವವರೆಗೆ ಕಾಯಲಿ. ಆತನಿಗೆ ಒಬ್ಬ ಪಾಲಕ ಅಥವಾ ಪೋಷಕ ಅಥವಾ ಶಿಷ್ಯ ಅಥವಾ ಸಹಪಾಠಿ ಇದ್ದಲ್ಲಿ ಅವನೇ ಆತನ ಆರೋಗ್ಯ ನೋಡಿಕೊಳ್ಳಬೇಕು. ಗುಣ ಹೊಂದುವುದನ್ನು ನಿರೀಕ್ಷೆ ಮಾಡಬೇಕು. ಯಾರೂ ಅವನನ್ನು ನೋಡಿಕೊಳ್ಳದೇ ಹೋದರೆ ಅದನ್ನು ಒಂದು ಅಪರಾಧವೆಂದು ಪರಿಗಣಿಸಲಾಗುವುದು."

(೨)

೧ ಒಮ್ಮೆ ತಥಾಗತನು ರಾಜಗೃಹದ ಬಳಿಯ ಮಹಾವನದಲ್ಲಿ ಇಣಚಿಗಳಿಗೆ ಮೇವು ಹಾಕುತ್ತಿದ್ದ ಸ್ಥಳದಲ್ಲಿ ತಂಗಿದ್ದ.

೨ ಆಗ ಪೂಜ್ಯ ವಕ್ಕಾಲಿಯು ಕುಂಬಾರನೊಬ್ಬನ ಮನೆಯಲ್ಲಿ ತಂಗಿದ್ದ. ಅನಾರೋಗ್ಯದಿಂದ ವ್ರಣ ಪೀಡಿತನಾಗಿ, ನೋವಿನಿಂದ, ಸಂಕಟದಿಂದ ಹಾಸಿಗೆ ಹಿಡಿದಿದ್ದ.

೩ ಪೂಜ್ಯ ವಕ್ಕಾಲಿಯು ತನ್ನನ್ನು ನೋಡಿಕೊಳ್ಳುತ್ತಿದ್ದವರನ್ನು ಕರೆದು ಹೇಳಿದ: "ಸ್ನೇಹಿತರೇ, ಇಲ್ಲಿ ಬನ್ನಿ. ತಥಾಗತನ ಬಳಿಗೆ ಹೋಗಿ ನನ್ನ ಪರವಾಗಿ ಪ್ರಣಾಮಗಳನ್ನು ಸಲ್ಲಿಸಿ, ಅವನಿಗೆ ಹೇಳಿ: 'ಭಗವನ್, ಸೋದರ ವಕ್ಕಾಲಿಯೂ ರೋಗಪೀಡಿತನಾಗಿದ್ದಾನೆ. ವ್ರಣದಿಂದ ನರಳುತ್ತಿದ್ದಾನೆ. ಅವನು ತಥಾಗತನ ಪಾದಗಳಿಗೆ ನಮಸ್ಕರಿಸುತ್ತಾನೆ' ನಂತರ 'ಭಗವಾನರು, ಅವನ ಮೇಲಿನ ಕರುಣೆಯಿಂದ ಸೋದರ ವಕ್ಕಾಲಿಯನ್ನು ಭೇಟಿ ಮಾಡಲು ಸಾಧ್ಯವೇ?' ಎಂದು ವಿಚಾರಿಸಿ."

೪ ತಥಾಗತನು ಮೌನವಾಗಿಯೇ ಸಮ್ಮತಿಸಿದ. ನಂತರ ತಥಾಗತನು ನಿಲುವಂಗಿಯನ್ನು ಧರಿಸಿ ಭಿಕ್ಷಾಪಾತ್ರೆಯನ್ನು ಹಿಡಿದು ಪೂಜ್ಯ ವಕ್ಕಾಲಿಯನ್ನು ನೋಡಲು ಹೊರಟನು.

೫ ಪೂಜ್ಯ ವಕ್ಕಾಲಿಯು ತಥಾಗತನು ಬರುವುದನ್ನು ದೂರದಲ್ಲೇ ನೋಡಿದ ಮತ್ತು ಅವನನ್ನು ನೋಡಿ ಹಾಸಿಗೆಯಿಂದ ಎದ್ದ.

೬ ತಥಾಗತನು ಪೂಜ್ಯ ವಕ್ಕಾಲಿಗೆ : "ವಕ್ಕಾಲಿ, ಸಾಕು! ಹಾಸಿಗೆಯಿಂದ ಏಳಬೇಡ. ಆಸನ ಸಿದ್ಧವಿದೆ. ಅದರಲ್ಲಿ ಕೂರುತ್ತೇನೆ." ಸಿದ್ಧಪಡಿಸಿದ ಆಸನದಲ್ಲಿ ಕುಳಿತ ಮತ್ತು ಪೂಜ್ಯ ವಕ್ಕಾಲಿಗೆ ಹೇಳಿದ:

೭ "ವಕ್ಕಾಲಿ, ನೀನು ಎದೆಗುಂದದೇ ನೋವನ್ನು ಸಹಿಸಿಕೊಳ್ಳುತ್ತಿದ್ದೀ ಅಂದುಕೊಂಡಿದ್ದೇನೆ. ನಿನ್ನ ನೋವು ಹೆಚ್ಚುತ್ತಿಲ್ಲ ತಾನೆ? ಕಡಿಮೆಯಾಗುತ್ತಿರಬಹುದಲ್ಲವೆ? ಹೆಚ್ಚಾಗದೆ, ಕಡಿಮೆಯಾಗುತ್ತಿರುವ ಲಕ್ಷಣಗಳು ಕಾಣುತ್ತಿವೆಯೆ?"

೮ "ಇಲ್ಲ, ಭಗವಾನ್, ಸಹಿಸಲಾಗುತ್ತಿಲ್ಲ. ಅತೀವವಾದ ನೋವು ಕಾಣಿಸಿಕೊಳ್ಳುತ್ತಿದೆ. ಕಮ್ಮಿಯಾಗುತ್ತಿಲ್ಲ. ಕಡಿಮೆಯಾಗುತ್ತಿರುವ ಲಕ್ಷಣಗಳೂ ಕಾಣುತ್ತಿಲ್ಲ. ಹೆಚ್ಚಾಗುತ್ತಿರುವ ಲಕ್ಷಣಗಳೇ ಕಾಣುತ್ತಿವೆ."

೯ "ಏನಾದರೂ ಸಂದೇಹಗಳಿವೆಯಾ, ವಕ್ಕಾಲಿ? ಏನಾದರೂ ವಿಷಾದವಿದೆಯಾ?"

೧೦ "ಭಗವಾನ್, ನನಗೆ ಯಾವುದೇ ಸಂದೇಹವೂ ಇಲ್ಲ. ಯಾವ ವಿಷಾದವೂ ಇಲ್ಲ."

೧೧ "ವಕ್ಕಾಲಿ, ನಿನ್ನ ನೈತಿಕತೆಯನ್ನು ಕುರಿತಂತೆ ಆಕ್ಷೇಪಾರ್ಹವಾದದ್ದು ಇದೆ ಎಂದೆನ್ನಿಸುವುದಿಲ್ಲವೆ?"

೧೨ "ಇಲ್ಲ ಭಗವನ್, ನೈತಿಕತೆಯನ್ನು ಕುರಿತಂತೆ ನನ್ನಲ್ಲಿ ಆಕ್ಷೇಪಾರ್ಹವಾದದ್ದು ಏನೂ ಇದ್ದಂತೆ ನನಗನ್ನಿಸುವುದಿಲ್ಲ."

೧೩ "ಹಾಗಿದ್ದ ಪಕ್ಷದಲ್ಲಿ, ನಿನ್ನನ್ನು ಯಾವುದೋ ಚಿಂತೆ ಕಾಡುತ್ತಿರಬೇಕು ಇಲ್ಲವೇ ನೀನು ಯಾವುದರ ಬಗ್ಗೆಯೋ ಪಶ್ಚಾತ್ತಾಪಪಡುತ್ತಿರಬೇಕು."

೧೪ "ಬಹುಕಾಲದಿಂದಲೂ ತಥಾಗತನನ್ನು ಕಾಣಬೇಕೆಂಬ ಹಂಬಲ ನನ್ನದು. ಆದರೆ, ತಥಾಗತನ ದರ್ಶನಕ್ಕೆ ಬರುವಷ್ಟು ಶಕ್ತಿ ನನಗಿರಲಿಲ್ಲ."

೧೫ "ಛೇ! ವಕ್ಕಾಲಿ, ನನ್ನ ಈ ನಶ್ವರ ದೇಹವನ್ನು ನೋಡುವುದರಿಂದೇನಾಗುತ್ತದೆ? ಧರ್ಮವನ್ನು ನೋಡಿದವನು ನನ್ನನ್ನು ನೋಡುತ್ತಾನೆ. ವಕ್ಕಾಲಿ, ನನ್ನನ್ನು ನೋಡಿದವನು ಧರ್ಮವನ್ನು ನೋಡುತ್ತಾನೆ.

ಖಂಡಿತವಾಗಿಯೂ ವಕ್ಕಾಲಿ, ಧರ್ಮವನ್ನು ಗ್ರಹಿಸುವುದು ನನ್ನನ್ನು ದರ್ಶನ ಮಾಡಿದಂತೆ. ನನ್ನನ್ನು ನೋಡುವವನು ಧರ್ಮವನ್ನೂ ಗ್ರಹಿಸುತ್ತಾನೆ."

(೩)

೧ ಒಮ್ಮೆ ಬುದ್ಧನು ಭಗ್ಗಿಗಳ ನಡುವೆ, ಮೃಗವನದ ಭೇಶಕಾಲ ತೋಪಿನಲ್ಲಿದ್ದ ಮಕರ ಸರೋವರದ ಬಳಿ ತಂಗಿದ್ದನು. ಗೃಹಪಿತನಾದ ನಕುಲಪಿತನು ತಥಾಗತನ ಬಳಿ ಸಾರಿ ಅವನಿಗೆ ವಂದಿಸಿ ಒಂದೆಡೆ ಕುಳಿತುಕೊಂಡನು.

೨ ಅಲ್ಲಿ ಕುಳಿತುಕೊಂಡು, "ಒಡೆಯಾ, ನಾನೀಗ ನಲುಗಿಹೋದ ಮುಕುದ. ನನಗೆ ತೀರಾ ವಯಸ್ಸಾಗಿದೆ. ನಾನು ನನ್ನ ಬದುಕಿನ ಅಂತ್ಯವನ್ನು ತಲುಪಿಬಿಟ್ಟಿದ್ದೇನೆ. ನಾನು ರೋಗಗ್ರಸ್ತನಾಗಿದ್ದೇನೆ ಹಾಗೂ ಸದಾ ನೋವಿನಿಂದ ಬಳಲುತ್ತಿದ್ದೇನೆ. ಒಡೆಯಾ, ನನಗೆ ತಥಾಗತನ ಹಾಗೂ ಅವನ ಭಿಕ್ಷುಗಳ ದರ್ಶನವಾಗುವುದೇ ತೀರಾ ಅಪರೂಪ. ತಥಾಗತನು ನನ್ನನು ಸಂತೈಸಿ ಸಂತೋಷಪಡಿಸಲಿ. ಎಷ್ಟೋ ದಿನಗಳ ಕಾಲ ಅದರಿಂದ ನನಗೆ ಅನುಕೂಲವಾಗುತ್ತದೆ ಮತ್ತು ವರವಾಗುತ್ತದೆ" ಎಂದು ನಕುಲಪಿತನು ತಥಾಗತನನ್ನು ಬೇಡಿಕೊಂಡನು.

೩ "ನಿಜ, ನಿಜ, ಗೃಹಪಿತನೇ, ನಿನ್ನ ಶರೀರ ಕ್ಷೀಣವಾಗಿ ಜರ್ಜರಿತವಾಗಿದೆ. ಗೃಹಪಿತನೇ, ಈ ಅವಸ್ಥೆಯಲ್ಲಿ ಒಂದು ಕ್ಷಣ ಆರೋಗ್ಯವಾಗಿರಬೇಕೆಂಬ ನಿರೀಕ್ಷೆಯೇ ಮೂರ್ಖತನದ್ದು. ಆದ್ದರಿಂದ ಗೃಹಪಿತನೇ, 'ನನ್ನ ದೇಹ ರೋಗಗ್ರಸ್ಥವಾಗಿದ್ದರೂ ನನ್ನ ಮನಸ್ಸು ಆರೋಗ್ಯಕರವಾಗಿದೆ' ಎಂದು ಆಲೋಚಿಸುವ ಅಭ್ಯಾಸವನ್ನು ಬೆಳೆಸಿಕೊ. ಗೃಹಪಿತನೇ ಆ ರೀತಿಯ ಮನಸ್ಥಿತಿಯನ್ನು ನೀನು ರೂಢಿಸಿಕೋ."

೪ ನಂತರ ಗೃಹಪತಿಯಾದ ನಕುಲಪಿತನು, ತಥಾಗತನನ್ನು ಸ್ವಾಗತಿಸಿ, ತಥಾಗತನ ಮಾತುಗಳನ್ನು ಸಂತೋಷದಿಂದ ಕೇಳಿದನು. ನಂತರ ತನ್ನ ಆಸನದಿಂದ ಎದ್ದು ತಥಾಗತನಿಗೆ ನಮಸ್ಕರಿಸಿ ವಿರಮಿಸಿದನು.

(೪)

೧ ಒಮ್ಮೆ ತಥಾಗತನು ಕಪಿಲವಸ್ತುವಿನಲ್ಲಿ ಶಾಕ್ಯರ ಜೊತೆ ಅಂಜೂರವೃಕ್ಷಗಳ ವನದಲ್ಲಿ ತಂದಿದ್ದ.

೨ ಆಗ ಹಲವಾರು ಭಿಕ್ಕುಗಳು ತಥಾಗತನಿಗೆ ನಿಲುವಂಗಿಯನ್ನು ತಯಾರಿಸುವುದರಲ್ಲಿ ಮಗ್ನರಾಗಿದ್ದರು. ಅವರು "ಯಾಕೆಂದರೆ, ಮೂರು ತಿಂಗಳು ಕಳೆದ ಮೇಲೆ, ಅವನ ಉಡುಪುಗಳು ಸಿದ್ಧವಾದ ಮೇಲೆ ತಥಾಗತನು ತನ್ನ ಸಂಚಾರವನ್ನು ಮುಂದುವರಿಸುತ್ತಾನೆ" ಎನ್ನುತ್ತಿದ್ದರು.

೩ ಆಗ ಶಾಕ್ಯ ಮಹಾನಾಮನಿಗೆ "ಹಲವಾರು ಭಿಕ್ಷುಗಳು ಉಡುಪನ್ನು ಸಿದ್ಧಪಡಿಸುತ್ತಿದ್ದಾರೆ ........" ಎಂಬ ಮಾತು ಕಿವಿಗೆ ಬಿತ್ತು ........ ಅವನು ತಥಾಗತನ ಬಳಿಗೆ ಹೋದ. ಅವನಿಗೆ ವಂದಿಸಿ, ಪಕ್ಕದಲ್ಲಿ ಕುಳಿತ ಶಾಕ್ಯ ಮಹಾನಾಮ ಹೇಳಿದ:

೪ "ಹಲವಾರು ಭಿಕ್ಕುಗಳು ತಥಾಗತನಿಗೆ ನಿಲುವಂಗಿಯನ್ನು ತಯಾರಿಸುತ್ತಿದ್ದಾರೆ: ಹಾಗೂ ಅವರು ಹೇಳುತ್ತಿದ್ದರು: 'ನಿಲುವಂಗಿ ತಯಾರಾದ ಮೇಲೆ, ಮೂರು ತಿಂಗಳು ಕಳೆದ ನಂತರ ತಥಾಗತನು

ತನ್ನ ಸಂಚಾರವನ್ನು ಮುಂದುವರಿಸುತ್ತಾನೆ'. ಭಗವನ್, ಸಾಮಾನ್ಯನೊಬ್ಬ ಕಾಯಿಲೆ ಬಿದ್ದಾಗ, ನೋವಿನಿಂದ ಅತೀವವಾಗಿ ನರಳುತ್ತಿದ್ದಾಗ ಮತ್ತೊಬ್ಬ ವಿವೇಚನೆಯುಳ್ಳ ಸೋದರರು ಅವನನ್ನು ಹೇಗೆ ಸಂತೈಸಬೇಕು ಎಂಬುದನ್ನು ನಾವು ತಥಾಗತನ ಬಾಯಿಯಿಂದ ಈವರೆಗೆ ಕೇಳಿಲ್ಲ" ಎನ್ನುತ್ತಾನೆ.

೫ "ಮಹಾನಾಮ, ಕಾಯಿಲೆ ಬಿದ್ದಿರುವ ಸಹೋದರನನ್ನು ಮತ್ತೊಬ್ಬ ಸಾಮಾನ್ಯ ಸಹೋದರನು ಸಂತೈಸಬೇಕು. ಸಮಾಧಾನ ಹುಟ್ಟಿಸುವ ನಾಲ್ಕು ಭರವಸೆಯ ಮಾತುಗಳನ್ನು ಆಡಬೇಕು: 'ಧರ್ಮದಿಂದ ಮತ್ತು ಭಿಕ್ಕುಗಳ ಸಂಘದಿಂದ ನೆಮ್ಮದಿ ಪಡೆ. ಅಂತೆಯೇ ಧರ್ಮಕ್ಕೆ ಅತಿ ಪ್ರಿಯವಾದ ಸದ್ಗುಣಗಳನ್ನು ಚಾಚೂ ತಪ್ಪದೆ, ಶುದ್ಧವಾಗಿ ಪಾಲಿಸಬೇಕು. ಅದರಿಂದ ಮಾನಸಿಕ ಸಮತೋಲನ ಉಳಿಯುತ್ತದೆ.'

೬ "ಮಹಾನಾಮ, ಹೀಗೆ ರೋಗಿಯನ್ನು ಇಂಥ ನಾಲ್ಕು ನೆಮ್ಮದಿಯ ಭರವಸೆಗಳಿಂದ ಸಂತೈಸಿದ ನಂತರ ಅವನು ಈ ಕೆಳಗಿನ ಮಾತುಗಳನ್ನಾಡಬೇಕು:

೭ "ಒಂದು ವೇಳೆ ರೋಗಿಯು ತನ್ನ ತಂದೆತಾಯಿಯರಿಗಾಗಿ ಹಂಬಲಿಸುತ್ತಿದ್ದು 'ನನ್ನ ತಾಯಿತಂದೆಯರ ಹಂಬಲವಾಗುತ್ತಿದೆ' ಎಂದು ಹೇಳಿದರೆ, 'ಪ್ರಿಯನೇ, ನೀನು ಸಾಯಲೇಬೇಕು. ನಿನ್ನ ತಂದೆತಾಯಿಯರಿಗಾಗಿ ಹಂಬಲಿಸು ಅಥವಾ ಹಂಬಲಿಸದಿರು, ನೀನು ಸಾಯುತ್ತೀಯೆ. ಹಾಗಾಗಿ ಅವರಿಗಾಗಿ ಹಂಬಲಿಸುವುದನ್ನು ಬಿಡು.'

೮ "ಒಂದು ವೇಳೆ ರೋಗಿಯು, 'ನಾನು ಅವರಿಗಾಗಿ ಹಂಬಲಿಸುವುದನ್ನು ಬಿಟ್ಟಿದ್ದೇನೆ' ಎಂದು ಹೇಳಿದರೆ, ಸಂತೈಸುತ್ತಿರುವ ಸಹೋದರನು 'ಆದರೆ, ಪೂಜ್ಯನೇ, ನೀನು ನಿನ್ನ ಮಕ್ಕಳಿಗಾಗಿ ಹಂಬಲಿಸುತ್ತಲೇ ಇದ್ದೀಯೆ. ನೀನು ಹೇಗಿದ್ದರೂ ಸಾಯಲೇಬೇಕು. ಆದ್ದರಿಂದ ಅವರಿಗಾಗಿ ಹಂಬಲಿಸುವುದನ್ನು ಬಿಡುವುದು ಒಳ್ಳೆಯದು' ಎಂದು ಹೇಳಬೇಕು.

೯ "ಪಂಚೇಂದ್ರಿಯಗಳ ಸುಖವನ್ನು ಕುರಿತೂ ಅವನೊಂದಿಗೆ ಮಾತಾಡಬೇಕು. ಒಂದು ಪಕ್ಷ ರೋಗಿಯು, 'ನನಗೆ ಇಂದ್ರಿಯ ಸುಖಗಳ ಬಗ್ಗೆ ಇನ್ನೂ ಹಂಬಲ ಉಳಿದಿದೆ' ಎಂದು ಹೇಳಿದರೆ 'ಲೌಕಿಕ ಸುಖಗಳಿಗಿಂತ ಸ್ವರ್ಗದ ಸುಖಗಳು ಉತ್ತಮವಾಗಿರುತ್ತವೆ ಮತ್ತು ಹೆಚ್ಚಿನ ಆಯ್ಕೆಯೂ ಇರುತ್ತದೆ. ಆದ್ದರಿಂದ ಈ ಪ್ರಾಪಂಚಿಕ ಸುಖಗಳ ಆಸೆಯನ್ನು ಬಿಟ್ಟು, ನಿನ್ನ ಮನಸ್ಸನ್ನು ನಾಲ್ಕು ಮಹಾನ್ ದೇವದೊರೆಗಳ ಆನಂದದ ಮೇಲೆ ಕೇಂದ್ರಿಕರಿಸು' ಎಂದು ಈ ಸಹೋದರನು ಹೇಳಬೇಕು.

೧೦ "ಮತ್ತೆ ಒಂದು ವೇಳೆ ರೋಗಿಯು 'ನನ್ನ ಮನಸ್ಸು ಸ್ಥಿರವಾಗಿದೆ' ಎಂದು ಹೇಳಿದರೆ, ಆಗ 'ನಿನ್ನ ಮನಸ್ಸನ್ನು ಬ್ರಹ್ಮಲೋಕದ ಮೇಲೆ ಸ್ಥಿರವಾಗಿ ಕೇಂದ್ರೀಕರಿಸು' ಎಂದು ಉಪದೇಶಿಸಬೇಕು. ರೋಗಿಯು 'ಹಾಗೆಯೇ ಮಾಡಿದ್ದೇನೆ' ಎಂದು ಹೇಳಿದರೆ ಆಗ:

೧೧ "ಆತ್ಮೀಯನೇ, ಬ್ರಹ್ಮಲೋಕವೂ ನಶ್ವರ, ಬದಲಾವಣೆ ಹೊಂದುವಂಥದ್ದು. ವ್ಯಕ್ತಿತ್ವದ ಮಿತಿಗಳಿಗೆ ಒಳಪಟ್ಟಿರುವಂಥದ್ದು. ಆದ್ದರಿಂದ ನೀನು ಬ್ರಹ್ಮಲೋಕವನ್ನು ಮೀರಿಕೊಂಡು, ತನ್ನತಾನೆ ಕಳೆದುಕೊಳ್ಳುವುದರ ಮೇಲೆ ಕೇಂದ್ರಿಕರಿಸಬೇಕು.'

೧೨ "ರೋಗಿಯು ಹಾಗೆ ಮಾಡಿದ್ದೇನೆಂದು ಹೇಳಿದರೆ, ಮಹಾನಾಮ, ಆಗ ಹೀಗೆ ಅಚಲನಾದ ಸಾಮಾನ್ಯ ಮನುಷ್ಯನಿಗೂ ಮತ್ತು ಆಸವಗಳಿಂದ ಮುಕ್ತಿ ಹೊಂದಿರುವ ಭಿಕ್ಷುವಿಗೂ, ಮೋಕ್ಷಕ್ಕೆ ಸಂಬಂಧಿಸಿದಂತೆ ಯಾವ ಅಂತರವೂ ಇಲ್ಲ."

## ೪. ಅಸಹಿಷ್ಣುಗಳ ಬಗ್ಗೆ ಬುದ್ಧನ ಸಹಿಷ್ಣುತೆ

೧ ಅಲವಿ ನಗರದಲ್ಲಿ ಯಕ್ಕ ಅಲವಕನ ರಾಜ್ಯದಲ್ಲಿ ತಥಾಗತನು ತಂಗಿದ್ದನು. ಆಗ ಯಕ್ಕ ಅಲವಕನು ತಥಾಗತನ ಬಳಿಗೆ ಬಂದು "ಎಲೈ ಭಿಕ್ಷುವೇ ಇಲ್ಲಿಂದ ಆಚೆಗೆ ತೊಲಗು!" ಎಂದನು.

೨ ತಥಾಗತನು "ಒಳ್ಳೆಯದು ಗೆಳೆಯಾ" ಎಂದು ಹೇಳಿ ಅಲ್ಲಿಂದ ಹೊರಟನು.

೩ ನಂತರ ಯಕ್ಷನು "ಒಳಗೆ ಬಾ" ಎಂದು ಆಜ್ಞೆ ಮಾಡಿದನು.

೪ "ಸರಿ ಗೆಳೆಯಾ" ಎಂದು ಬುದ್ಧನು ಮತ್ತೆ ಪ್ರವೇಶಿಸಿದನು.

೫ ಮತ್ತೆ ಎರಡನೆಯ ಬಾರಿ ಯಕ್ಷ ಅಲವಕನು ತಥಾಗತನಿಗೆ "ಎಲೈ ಭಿಕ್ಕುವೇ, ಇಲ್ಲಿಂದ ತೊಲಗು" ಎಂದನು.

೬ "ಹಾಗೆಯೇ ಆಗಲಿ ಗೆಳೆಯಾ" ಎನ್ನುತ್ತಾ ತಥಾಗತನು ಅಲ್ಲಿಂದ ಹೊರಟನು.

೭ ಎರಡನೆಯ ಬಾರಿಯೂ ಯಕ್ಷನು "ಒಳಗೆ ಬಾ" ಎಂದು ತಥಾಗತನನ್ನು ಕರೆದನು.

೮ "ಹಾಗೆಯೇ ಆಗಲಿ ಗೆಳೆಯಾ" ಎನ್ನುತ್ತಾ ಬುದ್ಧನು ಒಳಕ್ಕೆ ಪ್ರವೇಶಿಸಿದನು.

೯ ಮತ್ತೆ ಮೂರನೆಯ ಬಾರಿಯೂ ಯಕ್ಷ ಅಲವಕನು "ಭಿಕ್ಕುವೇ, ಆಚೆಗೆ ತೊಲಗು" ಎಂದು ತಥಾಗತನಿಗೆ ಹೇಳಿದನು.

೧೦ "ಹಾಗೆಯೇ ಆಗಲಿ ಗೆಳೆಯಾ" ಎಂದು ಭಗವಾನ್ ಆಚೆಗೆ ಹೋದ.

೧೧ "ಒಳಕ್ಕೆ ಬಾ" ಎಂದು ಯಕ್ಷನು ಮತ್ತೆ ಕರೆದನು.

೧೨ ಬುದ್ಧನು "ಸರಿ, ಹಾಗೆಯೇ ಆಗಲಿ, ಗೆಳೆಯ" ಎಂದು ಒಳಕ್ಕೆ ಬಂದನು.

೧೩ ಮತ್ತೆ ನಾಲ್ಕನೇ ಬಾರಿ ಯಕ್ಷನು ಬುದ್ಧನಿಗೆ "ಭಿಕ್ಷುವೇ ಆಚೆಗೆ ತೊಲಗು" ಎಂದು ಆಜ್ಞಾಪಿಸಿದನು.

೧೪ ಈ ಬಾರಿ ಬುದ್ಧನು "ಗೆಳೆಯಾ, ಈಗ ನಾನು ಹೊರಗೆ ಹೋಗುವುದಿಲ್ಲ. ನಿನಗೇನು ಮಾಡಬೇಕೆನಿಸುತ್ತದೋ ಹಾಗೆ ಮಾಡು" ಎಂದನು.

೧೫ ಕೋಪಗೊಂಡ ಯಕ್ಷನು "ಏ ಭಿಕ್ಷು, ನಾನೊಂದು ಪ್ರಶ್ನೆಯನ್ನು ಕೇಳುತ್ತೇನೆ. ನೀನು ಉತ್ತರಿಸದಿದ್ದಲ್ಲಿ ನಿನಗೆ ಹುಚ್ಚು ಹಿಡಿಯುವಂತೆ ಮಾಡುತ್ತೇನೆ ಅಥವಾ ನಿನ್ನ ಎದೆ ಸೀಳಿಬಿಡುತ್ತೇನೆ ಅಥವಾ ನಿನ್ನನ್ನು ಕಾಲುಹಿಡಿದೆತ್ತಿ ನದಿಯ ಆಚೆ ದಡಕ್ಕೆ ಎಸೆದುಬಿಡುತ್ತೇನೆ" ಎಂದನು.

೧೬ "ಗೆಳೆಯಾ, ನನಗೆ ಹುಚ್ಚು ಹಿಡಿಸಬಲ್ಲವರನ್ನಾಗಲಿ, ನನ್ನೆದೆಯನ್ನು ಸೀಳಬಲ್ಲವರನ್ನಾಗಲಿ ಅಥವಾ ನನ್ನ ಕಾಲುಹಿಡಿದೆತ್ತಿ ನದಿಯ ಆಚೆದಡಕ್ಕೆ ನನ್ನನ್ನು ಎಸೆಯಬಲ್ಲವರನ್ನಾಗಲಿ ನಾನು ಈ ಜಗತ್ತಿನಲ್ಲಿ ಕಂಡಿಲ್ಲ. ಆದರೂ ಪರವಾಗಿಲ್ಲ. ನಿನಗಿಷ್ಟ ಬಂದ ಪ್ರಶ್ನೆಯನ್ನು ಕೇಳಬಹುದು."

೧೭ ಯಕ್ಕ ಅಲವಕನು ಬುದ್ಧನನ್ನು ಈ ಕೆಳಗಿನ ಪ್ರಶ್ನೆಗಳನ್ನು ಕೇಳಿದನು:

೧೮ "ಈ ವಿಶ್ವದಲ್ಲಿ ಮಾನವನಿಗೆ ಅತ್ಯಂತ ಅಮೂಲ್ಯವಾದ ಆಸ್ತಿ ಯಾವುದು? ಯಾವ ಶುದ್ಧ ಕ್ರಿಯೆಗಳಿಂದ ಸಂತೋಷವುಂಟಾಗುತ್ತದೆ? ಎಲ್ಲ ರುಚಿಗಳಲ್ಲಿಯೂ ಅತ್ಯಂತ ಮಧುರವಾದುದು ಯಾವುದು? ಎಂಥ ಜೀವನಕ್ರಮ ಅತ್ಯಂತ ಉದಾತ್ತವಾದುದು?"

೧೯ ಅದಕ್ಕೆ ತಥಾಗತನು "ಶ್ರದ್ಧೆಯೇ ಮಾನವನ ಅತ್ಯಮೂಲ್ಯವಾದ ಸೊತ್ತು. ಧಮ್ಮ ಆಚರಣೆ ಸಂತೋಷವನ್ನುಂಟುಮಾಡುತ್ತದೆ. ಎಲ್ಲಾ ರುಚಿಗಳಲ್ಲಿ ಸತ್ಯವೇ ಅತ್ಯಂತ ರುಚಿಯಾದುದು. ವಿವೇಕಯುತವಾದ ಬಾಳ್ವೆಯೇ ಅತ್ಯಂತ ಉದಾತ್ತವಾದುದು" ಎಂದನು.

೨೦ "ಮರುಹುಟ್ಟನ್ನು ತಪ್ಪಿಸಿಕೊಳ್ಳುವುದು ಹೇಗೆ? ಸಂಸಾರ ಸಾಗರವನ್ನು ದಾಟುವುದು ಹೇಗೆ? ದುಃಖವನ್ನು ಜಯಿಸುವುದು ಹೇಗೆ?" ಎಂದು ಯಕ್ಕ ಅಲವಕನು ಬುದ್ಧನನ್ನು ಕೇಳಿದನು.

೨೧ "ಶ್ರದ್ಧೆಯಿಂದ, ಪುನರ್‌ಜನ್ಮವನ್ನು ತಪ್ಪಿಸಿಕೊಳ್ಳಬಹುದು. ಎಚ್ಚರಿಕೆಯಿಂದ ಸಂಸಾರ ಸಾಗರವನ್ನು ದಾಟಬಹುದು. ಪ್ರಯತ್ನಪಡುವುದರಿಂದ ದುಃಖವನ್ನು ಗೆಲ್ಲಬಹುದು. ವಿವೇಕದಿಂದ ಒಬ್ಬ ಪರಿಶುದ್ಧನಾಗಬಹುದು" ಎಂದು ತಥಾಗತನು ಹೇಳಿದನು.

೨೨ ಯಕ್ಕ ಅಲವಕನು "ಜ್ಞಾನವನ್ನು ಹೇಗೆ ಪಡೆಯಬಹುದು? ಧನವನ್ನು ಹೇಗೆ ಸಂಪಾದಿಸಬಹುದು? ಕೀರ್ತಿಯನ್ನು ಹೇಗೆ ಗಳಿಸಬಹುದು? ಗೆಳೆಯರನ್ನು ಹೇಗೆ ಪಡೆಯಬಹುದು? ಸಾವಿನ ನಂತರ ಈ ಲೋಕದಿಂದ ಪರಲೋಕಕ್ಕೆ ಹೋಗುವಾಗ, ಪಶ್ಚಾತ್ತಾಪಪಡದೇ ಇರುವುದು ಹೇಗೆ?" ಎಂದು ಪ್ರಶ್ನಿಸಿದನು.

೨೩ "ಧಮ್ಮ ಮತ್ತು ಅರ್ಹಂತರಲ್ಲಿ ವಿಶ್ವಾಸವಿಟ್ಟರೆ ನಿಬ್ಬಾಣವನ್ನು ಹೊಂದಬಹುದು ಎಂಬ ನಂಬಿಕೆ ಮತ್ತು ವಿಧೇಯತೆಗಳಿಂದ ಶ್ರದ್ಧಾವಂತ ಮತ್ತು ಜಾಗರೂಕ ವ್ಯಕ್ತಿ ವಿವೇಕವನ್ನು ಪಡೆಯುತ್ತಾನೆ.

೨೪ "ಯಾವಾಗಲೂ ಸೂಕ್ತವಾದುದನ್ನೇ ಮಾಡುವ, ಅಚಲನಾದ, ಎಚ್ಚರದಿಂದಿರುವ, ವ್ಯಕ್ತಿಯು ಧನವನ್ನು ಸಂಪಾದಿಸುತ್ತಾನೆ. ದಾನಶೀಲನು ಗೆಳೆಯರನ್ನು ಹೊಂದುತ್ತಾನೆ.

೨೫ "ಸತ್ಯವಂತನಾದ, ಸದಾಚಾರಿಯಾದ, ಸಹನಶೀಲನಾದ ಹಾಗೂ ಉದಾರಿಯಾದ ನಿಷ್ಠಾವಂತ ಗೃಹಸ್ಥನು ಸಾವಿನ ನಂತರ ಪಶ್ಚಾತ್ತಾಪಪಡುವುದಿಲ್ಲ."

೨೬ "ಹೋಗು! ಸತ್ಯ, ಆತ್ಮಸಂಯಮ, ದಾನ ಮತ್ತು ಸಹನೆಗಿಂತ ದೊಡ್ಡ ಗುಣಗಳು ಬೇರೆ ಯಾವುದಾದರೂ ಇವೆಯೇ? ಎಂದು ಬೇರೆ ಅಸಂಖ್ಯಾತ ಬ್ರಾಹ್ಮಣರನ್ನೂ ಮತ್ತು ಭಿಕ್ಷುಗಳನ್ನು ಹೋಗಿ ಕೇಳು" ಎಂದು ತಥಾಗತನು ಯಕ್ಕನಿಗೆ ಹೇಳಿದನು.

೨೭ "ಈಗ, ಬೇರೆ ಬ್ರಾಹ್ಮಣರು ಮತ್ತು ಭಿಕ್ಷುಗಳನ್ನು ಕೇಳಬೇಕಾದ ಅವಶ್ಯಕತೆಯಾದರೂ ಏನಿದೆ? ನನ್ನ ಭವಿಷ್ಯದ ಒಳಿತಿಗೆ ಅವಶ್ಯಕವಾದ ಸಂಪತ್ತು ಯಾವುದು ಎಂದು ನನಗೆ ಅರಿವಾಗಿದೆ" ಎಂದು ಯಕ್ಕ ಅಲವಕನು ಬುದ್ಧನಿಗೆ ಹೇಳಿದನು.

೨೮ "ನಿಜ, ಬುದ್ಧ ನನ್ನ ಉದ್ಧಾರಕ್ಕಾಗಿಯೇ ಅಳವಿಗೆ ಬಂದನು. ಯಾರಿಗೆ ಏನನ್ನಾದರೂ ಕೊಟ್ಟರೆ ಅತಿ ಹೆಚ್ಚಿನ ಲಾಭವಿದೆ ಎಂಬುದು ಇಂದು ನನಗೆ ಅರಿವಾಯಿತು.

೨೯ "ಇಂದಿನಿಂದ ನಾನು ಹಳ್ಳಿಯಿಂದ ಹಳ್ಳಿಗೆ, ನಗರದಿಂದ ನಗರಕ್ಕೆ ಸುತ್ತಾಡುತ್ತಾ ತಥಾಗತನಿಗೆ ಮತ್ತು ಧರ್ಮಕ್ಕೆ ನನ್ನ ಗೌರವವನ್ನು ಸಲ್ಲಿಸುತ್ತೇನೆ."

## ೫. ಬುದ್ಧನ ಸಮಾನತಾ ಭಾವನೆ ಹಾಗೂ ಸಮಾನತಾಚರಣೆ

೧ ತಥಾಗತನು ಸಂಘದ ಸದಸ್ಯರಿಗೆ ಹಾಕುತ್ತಿದ್ದ ನಿಯಮಗಳನ್ನು ಸ್ವತಃ ತಾನೂ ಕೂಡ ಸ್ವಇಚ್ಛೆ ಹಾಗೂ ಸ್ವಸಂತೋಷದಿಂದ ಪಾಲಿಸುತ್ತಿದ್ದನು.

೨ ತಥಾಗತನ ಬಗ್ಗೆ ಇದ್ದ ಅಪರಿಮಿತ ಪ್ರೀತಿ ಮತ್ತು ಗೌರವದಿಂದ ಸಂಘದ ಭಿಕ್ಕುಗಳು ಅವನಿಗೆ ಯಾವ ಬಗೆಯ ರಿಯಾಯ್ತಿಯನ್ನಾದರೂ ತೋರಲು ಸಿದ್ಧವಿದ್ದರೂ ಕೂಡ, ತಾನು ಸಂಘದ ಅಧಿಕೃತ ನಾಯಕ ಹಾಗೂ ತನಗೆ ರಿಯಾಯಿತಿ ಬೇಕೆಂದಾಗಲಿ ಅಥವಾ ತನಗೆ ವಿಶೇಷ ಮರ್ಯಾದೆ

ದೊರಕಬೇಕೆಂದಾಗಲಿ ಬುದ್ಧನು ಎಂದೂ ಬಯಸಲಿಲ್ಲ.

೩ ಸಂಘದ ಭಿಕ್ಷುಗಳು ಒಪ್ಪತ್ತು ಮಾತ್ರ ಊಟ ಮಾಡಬೇಕು ಎಂಬ ನಿಯಮವನ್ನು ಭಿಕ್ಷುಗಳಷ್ಟೇ ಕಟ್ಟುನಿಟ್ಟಾಗಿ ತಥಾಗತನೂ ಪಾಲಿಸುತ್ತಿದ್ದ.

೪ ಸಂಘದ ಭಿಕ್ಕುಗಳು ಖಾಸಗಿ ಆಸ್ತಿಯನ್ನು ಹೊಂದಬಾರದೆಂಬ ನಿಯಮಕ್ಕೆ ಭಿಕ್ಕುಗಳಂತೆಯೇ ತಥಾಗತನು ಬದ್ಧನಾಗಿದ್ದ.

೫ ಮೂರು ಬಟ್ಟೆಗಿಂತ ಹೆಚ್ಚು ಉಡುಪನ್ನು ಸಂಘದ ಭಿಕ್ಕುಗಳು ಹೊಂದಿರಬಾರದೆಂಬ ನಿಯಮವನ್ನು ಭಿಕ್ಕುಗಳಂತೆಯೇ ತಥಾಗತನೂ ಅನುಸರಿಸುತ್ತಿದ್ದನು.

೬ ಒಮ್ಮೆ ಶಾಕ್ಯರ ನಾಡಾದ ಕಪಿಲವಸ್ತುವಿನ ಆಲದವನದಲ್ಲಿ ತಥಾಗತನು ಉಳಿದುಕೊಂಡಿದ್ದನು. ತಥಾಗತನ ತಾಯಿಯಾದ ಮಹಾಪ್ರಜಾಪತಿ ಗೌತಮಿಯು ಬುದ್ಧನ ಬಳಿಗೆ ಬಂದಳು. ಎರಡು ಗಜ ಹೊಸ ವಸ್ತ್ರವನ್ನು ತನ್ನೊಡನೆ ತಂದಿದ್ದಳು. ಅದನ್ನು ಸ್ವತಃ ತಾನೇ ವಿಶೇಷವಾಗಿ ತಥಾಗತನಿಗೆಂದೇ ನೂತಿರುವುದಾಗಿ ಹೇಳಿ ಅದನ್ನು ತೆಗೆದುಕೊಳ್ಳುವ ಕೃಪೆ ತೋರಬೇಕೆಂದು ಕೇಳಿಕೊಂಡಳು.

೭ ಆದರೆ ತಥಾಗತನು "ಅದನ್ನು ಸಂಘಕ್ಕೆ ನೀಡಿಬಿಡು" ಎಂದು ಉತ್ತರಿಸಿದ.

೮. ಗೌತಮಿಯು ಎರಡುಬಾರಿ, ಮೂರು ಬಾರಿ ಒತ್ತಾಯಿಸಿದಳು. ಆದರೆ ಗೌತಮನ ಉತ್ತರವೂ ಬದಲಾಗಲಿಲ್ಲ.

೯. ಆವಾಗ ಆನಂದನು ಮಧ್ಯೆ ಪ್ರವೇಶಿಸಿ, "ಭಗವಾನ್, ದಯವಿಟ್ಟು ಗೌತಮಿ ನೀಡುತ್ತಿರುವ ವಸ್ತ್ರವನ್ನು ಸ್ವೀಕರಿಸು. ತಥಾಗತನ ತಾಯಿ ಸತ್ತಾಗ ಅವಳು ತಥಾಗತನಿಗೆ ಹಾಲೂಡಿಸಿರುವ ಸಾಕುತಾಯಿ. ಅವನಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾಳೆ" ಎಂದು ಪ್ರಾರ್ಥಿಸಿಕೊಂಡನು. ಆದರೆ ಬುದ್ಧನು ಆ ವಸ್ತ್ರವನ್ನು ಸಂಘಕ್ಕೇ ಕೊಡಬೇಕೆಂದು ಪಟ್ಟುಹಿಡಿದನು.

೧೦. ಸಂಘದ ಮೂಲ ನಿಯಮದ ಪ್ರಕಾರ, ಭಿಕ್ಕುಗಳ ಉಡುಪನ್ನು ತಿಪ್ಪೆಯಿಂದ ಆರಿಸಿಕೊಂಡು ಬಂದ ಚಿಂದಿ ಬಟ್ಟೆಗಳಿಂದ ತಯಾರಿಸಬೇಕು. ಶ್ರೀಮಂತ ವರ್ಗದವರು ಸಂಘಕ್ಕೆ ಸೇರುವುದನ್ನು ತಡೆಯಲೆಂದೇ ಬುದ್ಧನು ಈ ನಿಯಮವನ್ನು ಮಾಡಿದ್ದನು.

೧೧. ಒಮ್ಮೆ ಹೊಸ ವಸ್ತ್ರದಿಂದ ಮಾಡಿದ ಉಡುಪನ್ನು ಸ್ವೀಕರಿಸುವಂತೆ ಜೀವಿಕನು ಬುದ್ಧನನ್ನು ಒತ್ತಾಯಿಸಿದನು. ಬುದ್ಧನು ಆ ವಸ್ತ್ರವನ್ನು ಸ್ವೀಕರಿಸಿದನು. ಆದರೆ ಅದೇ ಕ್ಷಣದಿಂದ ಮೂಲ ನಿಯಮವನ್ನು ಸಡಿಲಿಸಿ ಭಿಕ್ಕುಗಳಿಗೂ ಆ ಸವಲತ್ತು ಅನ್ವಯಿಸುವಂತೆ ಮಾಡಿದನು.

## ಭಾಗ : ೩
# ಬುದ್ಧನ ಇಷ್ಟಾನಿಷ್ಟಗಳು

೧. ಬುದ್ಧನಿಗೆ ದಾರಿದ್ರ್ಯದ ಬಗ್ಗೆ ಇದ್ದ ದ್ವೇಷ
೨. ಗಳಿಸಿಡುವ ಪ್ರವೃತ್ತಿಯ ಬಗ್ಗೆ ಬುದ್ಧನ ದ್ವೇಷ
೩. ಸುಂದರವಾದುದನ್ನು ಕಂಡಾಗ ಬುದ್ಧನ ಸಂತೋಷ
೪. ಮನೋಹರವಾಗಿರುವುದರ ಬಗ್ಗೆ ಬುದ್ಧನ ಪ್ರೀತಿ

# ೧. ಬುದ್ಧನಿಗೆ ದಾರಿದ್ರ್ಯದ ಬಗ್ಗೆ ಇದ್ದ ದ್ವೇಷ

೧ ಒಮ್ಮೆ ತಥಾಗತನು ಶ್ರಾವಸ್ತಿಯ ಜೇತವನದಲ್ಲಿ ಅನಾಥಪಿಂಡಿಕನ ಉದ್ಯಾನದಲ್ಲಿ ತಂಗಿದ್ದ. ಗೃಹಪತಿಯಾದ ಅನಾಥಪಿಂಡಿಕನು, ಅಲ್ಲಿಗೆ ಬಂದು ನಮಸ್ಕರಿಸಿ ಪಕ್ಕದಲ್ಲಿ ಕುಳಿತನು. ಕುಳಿತು ಮಾನವನು ಧನವನ್ನೇಕೆ ಸಂಪಾದಿಸಬೇಕು ಎಂದು ತಥಾಗತನನ್ನು ಕೇಳಿದನು.

೨ "ನೀನು ಕೇಳಿದ್ದರಿಂದ ಹೇಳುತ್ತಿದ್ದೇನೆ.

೩ "ಆರ್ಯ ಅನುಯಾಯಿಯ ನಿದರ್ಶನವನ್ನು ತೆಗೆದುಕೊ. ಸಂಪತ್ತನ್ನು ಕೆಲಸ ಮಾಡಿ ಉತ್ಸಾಹದಿಂದ, ತನ್ನ ಶ್ರಮದಿಂದ ಬೆವರು ಸುರಿಸಿ ನ್ಯಾಯಯುತವಾಗಿ ಸಂಪಾದಿಸಿದ್ದರೆ ಅವನು ಸಂತೋಷದಿಂದ ಇರುತ್ತಾನೆ. ಆ ಸಂತೋಷವನ್ನು ಉಳಿಸಿಕೊಳ್ಳುತ್ತಾನೆ. ತಂದೆತಾಯಂದಿರನ್ನೂ ಸಂತೋಷಪಡಿಸುತ್ತಾನೆ. ಅದೇ ರೀತಿ ಅವನ ಹೆಂಡತಿ, ಮಕ್ಕಳು, ಗುಲಾಮರು, ಕೆಲಸಗಾರರು ಎಲ್ಲರೂ ಸಂತೋಷಪಡುತ್ತಾರೆ. ಇದು ಸಂಪತ್ತನ್ನು ಸಂಪಾದಿಸುವುದಕ್ಕೆ ಮೊದಲ ಕಾರಣ.

೪ ''ಹಾಗೆ ಸಿಕ್ಕ ಸಿರಿಯಿಂದ ತನ್ನ ಸ್ನೇಹಿತರನ್ನು ಜೊತೆಗಾರರನ್ನು ಸಂತೋಷಪಡಿಸುತ್ತಾನೆ. ಇದು ಎರಡನೇ ಕಾರಣ.

೫ " ಆ ರೀತಿಯಲ್ಲಿ ಸಂಪತ್ತನ್ನು ಪಡೆದರೆ, ಅವನಿಗೆ, ಬೆಂಕಿ ಹಾಗೂ ನೀರು, ರಾಜ ಹಾಗೂ ಕಳ್ಳರು ಹಾಗೂ ದಾಯಾದಿಗಳಿಂದ ಒದಗಬಹುದಾದ ದುರಾದೃಷ್ಟ ದೂರವಾಗಿ ಅವನ ಆಸ್ತಿಯು ಸುರಕ್ಷಿತವಾಗಿರುತ್ತದೆ. ಇದು ಮೂರನೆಯ ಕಾರಣ.

೬ "ಮತ್ತೇ ಆ ರೀತಿ ಸಂಪಾದಿಸಿದ ಸಂಪತ್ತನ್ನು ಐದು ಬಗೆಯ ಧರ್ಮಕಾರ್ಯಗಳಿಗಾಗಿ ಬಳಸುತ್ತಾನೆ. ಅತಿಥಿಗಳಿಗೆ, ಪಿತೃಗಳಿಗೆ, ರಾಜರಿಗೆ, ಕುಲಬಾಂಧವರಿಗೆ ಮತ್ತು ದೇವತೆಗಳಿಗೆ ಅರ್ಪಿಸಲು ಬಳಸುತ್ತಾನೆ. ಇದು ನಾಲ್ಕನೆಯ ಕಾರಣ.

೭ "ಹೀಗೆ ಸಂಪಾದಿಸಿದ ಸಿರಿಯನ್ನು ಆ ಗೃಹಸ್ಥನು ಸ್ವರ್ಗ ಸೇರುವ, ಅಲ್ಲಿ ಪರಮ ಸುಖವನ್ನು ಪಡೆಯುವ ಉದ್ದೇಶದಿಂದ – ಅಹಂಕಾರ ಮತ್ತು ಮೈಗಳ್ಳತನವನ್ನು ತ್ಯಜಿಸಿದ, ಪ್ರತಿಯೊಂದು ವಿಚಾರವನ್ನೂ ತಾಳ್ಮೆ ಮತ್ತು ವಿನಯದಿಂದ ಎದುರಿಸುವ, ಆತ್ಮನಿಯಂತ್ರಣವನ್ನು, ಆತ್ಮಶಾಂತಿಯನ್ನೂ ಹಾಗೂ ಪರಿಪೂರ್ಣತೆಯನ್ನೂ ಹೊಂದಿರುವ ಶ್ರಮಣರು ಮತ್ತು ದೈವಿಕ ಪುರುಷರಿಗೆ ದಾನ ನೀಡಲು ಬಳಸುತ್ತಾನೆ. ಇದು ಸಿರಿಯನ್ನು ಗಳಿಸಲು ಐದನೆಯ ಕಾರಣ."

೮ ಹೀಗೆ ಅನಾಥಪಿಂಡಿಕನಿಗೆ ಬುದ್ಧನು, ಬಡತನವನ್ನು ಹೊಗಳಿ, ಬಡವರನ್ನು ಸಂತೈಸುವುದಿಲ್ಲ ಮತ್ತು ಬಡತನ ಮಾನವನ ಬದುಕಿನ ಆದರ್ಶ ಸ್ಥಿತಿ ಎಂದು ಉದಾತ್ತೀಕರಿಸುತ್ತಿಲ್ಲ ಎಂಬುದು ಚೆನ್ನಾಗಿ ಅರಿವಾಯಿತು.

## ೨. ಗಳಿಸಿಡುವ ಪ್ರವೃತ್ತಿಯ ಬಗ್ಗೆ ಬುದ್ಧನ ದ್ವೇಷ

೧ ಒಂದು ಬಾರಿ ತಥಾಗತನು ಕುರುಗಳ ನಾಡಾದ ಕಮ್ಮಾಸದಮ್ಮ ನಗರದಲ್ಲಿ ತಂಗಿದ್ದ.

೨ ಆನಂದನು ತಥಾಗತನ ಬಳಿಗೆ ಬಂದು ನಮಸ್ಕರಿಸಿ ಅವನ ಬಳಿ ಕುಳಿತನು.

೩ ಹಾಗೆ ಕುಳಿತ ಆನಂದನು "ತಥಾಗತರೇ, ತಾವು ಬೋಧಿಸಿದ ಕಾರಣತಾವಾದದ ನಿಯಮವು ಅದ್ಭುತವಾಗಿದೆ. ಅದು ಬಹಳ ಗಹನವಾಗಿದೆ. ಅದು ನನಗೆ ತುಂಬ ಸ್ಪಷ್ಟವಾಗಿ ಅರ್ಥವಾಗಿದೆ."

೪ "ಆನಂದ, ಹಾಗೆನ್ನಬೇಡ, ಹಾಗೆನ್ನಲೇಬೇಡ, ಕಾರ್ಯಕಾರಣ ಸಿದ್ಧಾಂತವು ಗಹನವಾಗಿದೆ. ಈ ಸಿದ್ಧಾಂತವನ್ನು ಸರಿಯಾಗಿ ಅರಿತುಕೊಳ್ಳದೆ ಇರುವುದರಿಂದ ಮತ್ತು ಸೂಕ್ಷ್ಮವಾಗಿ ಗ್ರಹಿಸದೆ ಇರುವುದರಿಂದಲೇ ಈ ತಲೆಮಾರು ಇಂಥ ತೊಡಕುಗಳ ಆಗರವಾಗಿದೆ. ಗೋಜಲು ಗೋಜಲಾಗಿರುವ ನೂಲಿನುಂಡೆಯಂತಾಗಿದೆ. ಇದರಿಂದಾಗಿಯೇ ಈ ದುಃಖದ ಸಾಗರವನ್ನು ಪಾರಾಗಿ ಹೋಗುವುದು ಅಸಾಧ್ಯವಾಗಿದೆ.

೫ "ದುರಾಸೆಯೇ ಲೋಭಕ್ಕೆ ಕಾರಣ ಎಂದು ನಾನು ಮೊದಲೇ ಹೇಳಿದ್ದೆ. ಎಲ್ಲಿ ಯಾವ ವಿಧವಾದ ದುರಾಸೆಯೂ ಇರುವುದಿಲ್ಲವೊ ಅಲ್ಲಿ ಲೋಭ ಹೇಗೆ ಸಾಧ್ಯ?"

೬ "ಖಂಡಿತಾ ಸಾಧ್ಯವಿಲ್ಲ ಭಗವನ್."

೭ "ದುರಾಸೆಯು ಲಾಭದ ಹುಡುಕಾಟಕ್ಕೆ ಕಾರಣವಾಗುತ್ತದೆ.

೮ "ಲಾಭದ ಹುಡುಕಾಟ ಆಸೆ ಮತ್ತು ಭಾವೋದ್ರೇಕಕ್ಕೆ ಕಾರಣವಾಗುತ್ತದೆ.

೯ "ಆಸೆ ಮತ್ತು ಭಾವೋದ್ರೇಕವು ಹಟಮಾರಿತನಕ್ಕೆ ಕಾರಣವಾಗುತ್ತದೆ.

೧೦ " ಈ ಹಟವು ಖಾಸಗಿ ಆಸ್ತಿಗೆ ಕಾರಣವಾಗುತ್ತದೆ.

೧೧ "ಖಾಸಗಿ ಆಸ್ತಿಯ ಹಟವು ಅತಿ ಆಸೆಗೆ ಮತ್ತು ಹೆಚ್ಚೆಚ್ಚು ಆಸ್ತಿ ಮಾಡಿಕೊಳ್ಳುವ ಆಸೆಗೆ ಕಾರಣವಾಗುತ್ತದೆ.

೧೨ "ಆಸ್ತಿಯು ಕಾಪಾಡಿಕೊಳ್ಳುವ ಮತ್ತು ಒಡೆತನವನ್ನು ಉಳಿಸಿಕೊಳ್ಳುವ ಮನಸ್ಸನ್ನು ಹುಟ್ಟುಹಾಕುತ್ತದೆ.

೧೩ " ಈ ಆಸ್ತಿಯನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಸ್ವಾಮ್ಯ ಉಳಿಸಿಕೊಳ್ಳುವ ಪ್ರಯತ್ನವು ಹಲವಾರು ಕೆಟ್ಟ ಕೇಡಿಗತನಗಳಿಗೆ, ಹೊಡೆದಾಟ, ಬಡಿದಾಟ, ಚಾರಿತ್ರ್ಯವಧೆ, ಜಗಳ, ಸುಳ್ಳು ಮತ್ತು ಗಲಭೆಗಳಿಗೆ ಪ್ರೇರೇಪಿಸುತ್ತದೆ.

೧೪ "ಆನಂದ, ಇದು ಕಾರಣತಾವಾದದ ಪರಿಣಾಮಗಳ ಸರಪಳಿ. ಲೋಭವಿಲ್ಲದಿದ್ದರೆ ಲಾಭದ ಹುಟುಕಾಟ ಹುಟ್ಟಿಕೊಳ್ಳುತ್ತಿತ್ತೆ? ಲಾಭದ ಹುಡುಕಾಟವಿಲ್ಲದಿದ್ದಲ್ಲಿ ಭಾವೋದ್ರೇಕವಾಗುತ್ತಿತ್ತೆ? ಭಾವೋದ್ರೇಕವಿಲ್ಲದಿದ್ದಲ್ಲಿ ಹಟವೂ ಹುಟ್ಟುತ್ತಿತ್ತೆ? ಹಟವಿಲ್ಲದಿದ್ದಲ್ಲಿ ಖಾಸಗಿ ಆಸ್ತಿಯ ಬಯಕೆ ಉಂಟಾಗುತ್ತಿತ್ತೆ? ಆಸ್ತಿಯೇ ಇಲ್ಲದಿದ್ದಲ್ಲಿ ದುರಾಸೆ ಮತ್ತು ಹೆಚ್ಚಿನ ಆಸ್ತಿಯ ಆಸೆಯಾದರೂ ಹೇಗೆ ಹುಟ್ಟುತ್ತಿತ್ತು?"

೧೫ "ಹುಟ್ಟುತ್ತಿರಲಿಲ್ಲ ಭಗವಾನ್."

೧೬ "ಖಾಸಗಿ ಆಸ್ತಿಯ ವ್ಯಾಮೋಹವಿಲ್ಲದಿದ್ದರೆ ಶಾಂತಿ ಇರುತ್ತಿರಲಿಲ್ಲವೆ?"

೧೭ "ಇರುತ್ತಿತ್ತು ಭಗವಾನ್."

೧೮ "ನಾನು ಭೂಮಿಯನ್ನು ಭೂಮಿಯಾಗಿಯೇ ಗುರುತಿಸುತ್ತೇನೆ. ಆದರೆ, ಅದನ್ನು ಪಡೆಯಬೇಕೆಂಬ

ಲೋಭ ನನಗಿಲ್ಲ" ಎಂದನು ಬುದ್ಧ.

೧೯ "ಆದ್ದರಿಂದ, ಎಲ್ಲಾ ಬಗೆಯ ಲೋಭಗಳನ್ನೂ ಸಂಪೂರ್ಣವಾಗಿ ಬೇರುಸಹಿತ ಕಿತ್ತುಹಾಕಿ, ಅವುಗಳಿಗಾಗಿ ಅತ್ಯಾಸೆ ಪಡುವ ಬದಲು ಅವುಗಳನ್ನು ನಾಶಮಾಡಿ, ತೊರೆದು, ತ್ಯಜಿಸಿ ನಾನು ಜ್ಞಾನೋದಯವನ್ನು ಹೊಂದಿದೆನು.

೨೦ "ಸಹೋದರರೇ, ಹಂಚಿಕೊಳ್ಳಿ – ಐಹಿಕ ಸಾಮಾಗ್ರಿಗಳನ್ನಲ್ಲ, ಬದಲಾಗಿ ನನ್ನ ಸಿದ್ಧಾಂತಗಳನ್ನು ಹಂಚಿಕೊಳ್ಳಿ, ಲೋಭದಿಂದ ಮೋಹ ಹುಟ್ಟುತ್ತದೆ ಮತ್ತು ಮೋಹದಿಂದ ನಾವು ಈ ಮನಸ್ಸಿನ ಗುಲಾಮರಾಗುತ್ತೇವೆ."

೨೧ ಈ ಮಾತುಗಳ ಮೂಲಕ ತಥಾಗತನು ಆನಂದನಿಗೆ ಮತ್ತು ಇತರ ಭಿಕ್ಕುಗಳಿಗೆ ಗಳಿಸಿಡುವ ಪ್ರವೃತ್ತಿಯ ಕೇಡನ್ನು ವಿವರಿಸಿದನು.

## ೩. ಸುಂದರವಾದುದನ್ನು ಕಂಡಾಗ ಬುದ್ಧನ ಸಂತೋಷ

೧ ಬುದ್ಧನಿಗೆ ಸುಂದರವಾದುದನ್ನು ಕಂಡಾಗ ಅದೆಷ್ಟು ಹರುಷವಾಗುತ್ತಿತ್ತೆಂದರೆ, ಬಹುಶಃ ಅವನನ್ನು ಸೌಂದರ್ಯ ಪ್ರೇಮಿ ಬುದ್ಧ ಎಂದು ಬೇಕಾದರೂ ಕರೆಯಬಹುದಿತ್ತು.

೨ ಹಾಗಾಗಿಯೇ ಬುದ್ಧನು ತನ್ನ ಶಿಷ್ಯರಿಗೆ "ಸುಂದರವಾದುದರ ಸಂಸರ್ಗದಲ್ಲಿರಿ" ಎಂದು ಬೋಧಿಸುತ್ತಿದ್ದನು.

೩ ಭಿಕ್ಕುಗಳನ್ನುದ್ದೇಶಿಸಿ ಮಾತನಾಡುತ್ತಾ ಅವನು ಹೇಳಿದ:

೪ "ಭಿಕ್ಕುಗಳೇ, ಒಳ್ಳೆಯ ಮನಸ್ಥಿತಿಗಳು ಇನ್ನೂ ಹುಟ್ಟಿಲ್ಲದಿದ್ದಲ್ಲಿ ಅಥವಾ ಕೆಟ್ಟ ಮನಸ್ಥಿತಿಗಳು ನಾಶವಾಗಿಲ್ಲದಿದ್ದಲ್ಲಿ ಅವೆರಡನ್ನೂ ಮಾಡುವ ಶಕ್ತಿ ಇರುವುದು ನನ್ನ ಪ್ರಕಾರ ಸುಂದರವಾಗಿರುವುದರೊಡನೆ ಸಖ್ಯಕ್ಕೆ ಮಾತ್ರ."

೫ "ಸುಂದರವಾಗಿರುವುದರೊಡನೆ ಸಖ್ಯ ಮಾಡಿಕೊಂಡಿರುವ ವ್ಯಕ್ತಿಯಲ್ಲಿ ಒಳ್ಳೆಯ ಮನಸ್ಥಿತಿಗಳು ಹುಟ್ಟಿಲ್ಲವಾದಲ್ಲಿ ಆ ಸಖ್ಯದಿಂದ ಎಚ್ಚೆತ್ತುಕೊಳ್ಳುತ್ತವೆ ಮತ್ತು ಒಳ್ಳೆಯಕೆಟ್ಟ ಮನಸ್ಥಿತಿಯ ಬಗ್ಗೆ ಆದರೆ ಎರಡೂ ಹುಟ್ಟಿಕೊಳ್ಳುತ್ತವೆ ಮತ್ತು ಕೆಟ್ಟದ್ದರ ಬಗ್ಗೆ ಅನಾದರ ಬೆಳೆಯುತ್ತದೆ.

೬ "ಭಿಕ್ಕುಗಳೇ ವಿವೇಕ ಈವರೆಗೆ ಬಂದಿಲ್ಲದೇ ಹೋಗಿದ್ದಲ್ಲಿ, ಅದು ಹುಟ್ಟಿಕೊಳ್ಳದಂತೆ ಮಾಡುವುದಕ್ಕೆ ಅಥವಾ ಒಂದು ಪಕ್ಷ ಈಗಾಗಲೇ ಅದು ಹುಟ್ಟಿಕೊಂಡಿದ್ದಲ್ಲಿ ಅದರ ಪೂರ್ಣ ವಿಕಾಸವಾಗದಂತೆ ತಡೆಯುವುದಕ್ಕೆ ಕ್ರಮಬದ್ಧವಲ್ಲದ ಆಸಕ್ತಿಯೇ ಕಾರಣ.

೭ "ಯಾರು ಕ್ರಮಬದ್ಧವಲ್ಲ ಆಸಕ್ತಿಯನ್ನು ಆಚರಿಸುತ್ತಾರೊ ಅವರಲ್ಲಿ ಜ್ಞಾನವು ಮೊಳೆಯುವುದಿಲ್ಲ. ಒಂದು ವೇಳೆ ಜ್ಞಾನವು ಈಗಾಗಲೇ ಮೊಳೆತಿದ್ದಲ್ಲಿ ಅದು ಸಂಪೂರ್ಣವಾಗಿ ವಿಕಾಸ ಹೊಂದುವುದಿಲ್ಲ.

೮ "ಭಿಕ್ಕುಗಳೇ, ಬಂಧುಗಳನ್ನು ಕಳೆದುಕೊಂಡಾಗ ಆಗುವ ನಷ್ಟ ಸ್ವಲ್ಪ. ವಿವೇಕವನ್ನು ಕಳೆದುಕೊಳ್ಳುವುದರಿಂದ ಆಗುವ ನಷ್ಟ ಅಪಾರ.

೯ "ಭಿಕ್ಕುಗಳೇ, ಬಂಧುಗಳು ಹೆಚ್ಚಾದಾಗ ಆಗುವ ಲಾಭ ಅತ್ಯಲ್ಪ. ಆದರೆ ಎಲ್ಲಾ ಲಾಭಕ್ಕಿಂತ ಹೆಚ್ಚು ಲಾಭ ವಿವೇಕದ ಹೆಚ್ಚಳ.

೧೦ "ಹಾಗಾಗಿ ನಾ ಹೇಳುತ್ತೇನೆ. ಭಿಕ್ಕುಗಳೇ 'ನಾವು ವಿವೇಕವನ್ನು ಹೆಚ್ಚಿಸಿಕೊಳ್ಳುತ್ತೇವೆ' ಎಂದು

ತಯಾರಾಗಬೇಕು. ಅದನ್ನು ಪಡೆಯಲು ನೀವೇ ಸ್ವತಃ ಪ್ರಯತ್ನಿಸಬೇಕು.

೧೧ "ಕೀರ್ತಿಯನ್ನು ಕಳೆದುಕೊಂಡಾಗ ಆಗುವ ನಷ್ಟ ಅತ್ಯಲ್ಪ. ಆದರೆ, ವಿವೇಕವನ್ನು ಕಳೆದುಕೊಂಡಾಗ ಆಗುವ ನಷ್ಟ ತೀರಾ ಸಂಕಟಕರವಾದುದು."

## ೪. ಮನೋಹರವಾಗಿರುವುದರ ಬಗ್ಗೆ ಬುದ್ಧನ ಪ್ರೀತಿ

೧ ಒಮ್ಮೆ ತಥಾಗತನು ಸಕ್ಕರವೆಂಬ ಶಾಕ್ಯರ ನಡುವೆ ತಂಗಿದ್ದ.

೨ ಆಗ ಪೂಜ್ಯನಾದ ಆನಂದನು ತಥಾಗತನ ಬಳಿಗೆ ಬಂದ. ಅವನಿಗೆ ವಂದಿಸಿ, ಪಕ್ಕದಲ್ಲಿ ಕುಳಿತ. ಆನಂದನು ಹೇಳಿದ:

೩ "ಭಗವಾನ್, ಪವಿತ್ರ ಬದುಕಿನ ಅರ್ಧ, ಮನೋಹರವಾಗಿರುವುದರೊಡನೆ ಸಖ್ಯ, ಸ್ನೇಹ ಹಾಗೂ ಆತ್ಮೀಯತೆಯಲ್ಲಿ ಕಳೆಯುತ್ತದೆ."

೪ "ಹಾಗೆನ್ನಬೇಡ ಆನಂದ! ಕೇವಲ ಅರ್ಧ ಭಾಗವಲ್ಲ. ಇಡೀ ಆಯಸ್ಸೇ ಸುಂದರವಾಗಿರುವುದರ ಜೊತೆ ಆತ್ಮೀಯತೆ, ಒಡನಾಟ ಹಾಗೂ ಸ್ನೇಹದಲ್ಲಿ ಕಳೆಯುತ್ತದೆ.

೫ "ಸೌಂದರ್ಯದ ಗೆಳೆಯನಾಗಿರುವ, ಒಡನಾಡಿಯಾಗಿರುವ ಹಾಗೂ ಆತ್ಮೀಯವಾಗಿರುವ ಭಿಕ್ಕುವು ಆರ್ಯ ಅಷ್ಟಾಂಗ ಮಾರ್ಗವನ್ನು ರೂಢಿಸಿಕೊಂಡಿದ್ದಾನೆ ಮತ್ತು ಅದರ ಉಪಯೋಗವನ್ನು ಪಡೆದುಕೊಳ್ಳುತ್ತಾನೆ ಎಂದು ನಿರೀಕ್ಷಿಸಬಹುದು.

೬ "ಆನಂದ, ಅಂಥ ಒಬ್ಬ ಭಿಕ್ಕು ಆರ್ಯ ಅಷ್ಟಾಂಗ ಮಾರ್ಗವನ್ನು ಹೇಗೆ ರೂಢಿಸಿಕೊಳ್ಳುತ್ತಾನೆ ಮತ್ತು ಬಳಸಿಕೊಳ್ಳುತ್ತಾನೆ?

೭ "ಆನಂದ, ಅವನು ವಿರಕ್ತಿ, ರಾಗದ್ವೇಷರಹಿತತೆ ಮತ್ತು ವ್ಯವಧಾನವನ್ನು ಆಧರಿಸಿದ ಸರಿಯಾದ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು. ಅದು ಆತ್ಮಾರ್ಪಣೆಯಲ್ಲಿ ಪರ್ಯವಸಾನಗೊಳ್ಳುತ್ತದೆ. ಇವುಗಳನ್ನೇ ಆಧರಿಸಿ ಅವನು ಸರಿಯಾದ ಗುರಿಯನ್ನು ಬೆಳೆಸಿಕೊಳ್ಳಬೇಕು. ಅದೇ ರೀತಿಯಲ್ಲಿ, ಸರಿಯಾದ ಮಾತು, ಕ್ರಿಯೆ, ಜೀವನಕ್ರಮ, ಪ್ರಯತ್ನ ಮನಸ್ಸು ಮತ್ತು ಏಕಾಗ್ರಚಿತ್ತತೆಯನ್ನು ಬೆಳೆಸಿಕೊಳ್ಳಬೇಕು. ಇವೆಲ್ಲವೂ ಆತ್ಮಾರ್ಪಣೆಯಲ್ಲಿ ಪರ್ಯವಸಾನಗೊಳ್ಳುತ್ತದೆ.

೮ "ಆನಂದ, ಮನೋಹರವಾಗಿರುವುದರ ಜೊತೆ ಒಡನಾಟ ಹೊಂದಿರುವ ಭಿಕ್ಕುವು ಹೀಗೆ ಅಷ್ಟಾಂಗ ಮಾರ್ಗವನ್ನು ಬೆಳೆಸಿಕೊಳ್ಳುತ್ತಾನೆ ಮತ್ತು ಅದನ್ನು ಒಪ್ಪಿಕೊಳ್ಳುತ್ತಾನೆ.

೯ "ಆನಂದ, ನೀನೂ ಕೂಡ ಈ ವಿಧಾನದ ಮೂಲಕವೇ ನಮ್ಮ ಪವಿತ್ರವಾದ ಬದುಕು ಹೇಗೆ ಮನೋಹರವಾಗಿರುವುದರ ಜೊತೆಗಿನ ಒಡನಾಟವನ್ನು, ಆತ್ಮೀಯತೆಯನ್ನು ಹಾಗೂ ಸಾಂಗತ್ಯವನ್ನು ಒಳಗೊಂಡಿದೆ ಎಂಬುದನ್ನು ಅರಿತುಕೊಳ್ಳಬೇಕು.

೧೦ "ಆನಂದ, ಸಾವಿಗೆ, ನಾಶಕ್ಕೆ, ನೋವಿಗೆ, ದುಃಖಕ್ಕೆ, ಯಾತನೆಗೆ, ನಿರಾಶೆಗೆ ಒಳಪಟ್ಟಿರುವ ಜೀವಿಗಳು ಈ ಮೂಲಕ, ಅಂದರೆ ಮನೋಹರವಾಗಿರುವುದರೊಂದಿಗೆ ಒಡನಾಡುವುದರಿಂದ ಅವುಗಳಿಂದ ಮುಕ್ತಿ ಹೊಂದುತ್ತಾರೆ.

೧೧ "ಹಾಗಾಗಿ, ಆನಂದ, ನೀನೂ ಕೂಡ ಈ ವಿಧಾನದಿಂದಲೇ ಹೇಗೆ ನಮ್ಮ ಪವಿತ್ರವಾದ ಬದುಕು ಮನೋಹರವಾಗಿರುವುದರ ಜೊತೆ ಸಖ್ಯವನ್ನು, ಸಾಂಗತ್ಯವನ್ನು ಮತ್ತು ಆತ್ಮೀಯತೆಯನ್ನು ಹೊಂದಿದೆ ಎನ್ನುವುದನ್ನು ಗ್ರಹಿಸಬೇಕು."

# ಉಪಸಂಹಾರ

೧. ಬುದ್ಧನ ಹಿರಿಮೆಯ ಪ್ರಶಂಸೆ
೨. ಬುದ್ಧ ಧರ್ಮದ ಪ್ರಸಾರಕ್ಕೆ ಪಣ ತೊಡೋಣ
೩. ಬುದ್ಧನ ತಾಯ್ನಾಡಿಯಲ್ಲಿ ಹುಟ್ಟುವಂತಾಗಲಿ ಎಂಬ ಪ್ರಾರ್ಥನೆ

# ೧. ಬುದ್ಧನ ಹಿರಿಮೆಯ ಪ್ರಶಂಸೆ

೧ ಬುದ್ಧನು ೨೫೦೦ ವರ್ಷಗಳ ಹಿಂದೆ ಜನಿಸಿದನು.

೨ ಬುದ್ಧ ಮತ್ತವನ ಧಮ್ಮದ ಬಗ್ಗೆ ಆಧುನಿಕ ಚಿಂತಕರು ಮತ್ತು ವಿಜ್ಞಾನಿಗಳು ಏನೆನ್ನುತ್ತಾರೆ? ಈ ವಿಚಾರದ ಬಗ್ಗೆ ಅವರ ಚಿಂತನೆಗಳ ಒಂದು ಸಂಕಲನ ಉಪಯುಕ್ತವಾಗುತ್ತದೆ.

೩ ಪ್ರೊ॥ ಎಸ್.ಎಸ್. ರಾಘವಾಚಾರ್ ಹೀಗೆನ್ನುತ್ತಾರೆ:

೪ "ಬುದ್ಧನ ಕಾಲಕ್ಕಿಂತ ಹಿಂದಿನ ಯುಗ, ಭಾರತದ ಚರಿತ್ರೆಯಲ್ಲಿ ಕತ್ತಲೆಯ ಯುಗ.

೫ "ಅದು ಬೌದ್ಧಿಕವಾಗಿ ಹಿಂದುಳಿದ ಕಾಲ. ವೇದ ಪ್ರಾಮಾಣ್ಯದ ಸ್ವೀಕಾರ, ಆಗಿನ ಕಾಲದ ಚಿಂತನೆಯ ಲಕ್ಷಣ.

೬ "ನೈತಿಕವಾಗಿ ಅದು ಒಂದು ಅಂಧಯುಗ.

೭ "ಶ್ರದ್ಧಾವಂತ ಹಿಂದುಗಳಿಗೆ, ನೈತಿಕತೆಯೆಂದರೆ, ಪವಿತ್ರ ಗ್ರಂಥಗಳಲ್ಲಿ ವಿಧಿಸಿರುವ ಕರ್ಮ ಹಾಗೂ ಆಚರಣೆಗಳನ್ನು ಸರಿಯಾಗಿ ಆಚರಿಸುವುದೇ ಆಗಿತ್ತು.

೮ "ನಿಜವಾದ ನೈತಿಕ ವಿಚಾರಗಳಾದ ಆತ್ಮತ್ಯಾಗ ಅಥವಾ ಇಚ್ಛೆಯ ಪರಿಶುದ್ಧತೆ ಮುಂತಾದವುಗಳಿಗೆ ಆಗಿನ ಕಾಲದ ನೈತಿಕ ಪ್ರಜ್ಞೆಯಲ್ಲಿ ಸೂಕ್ತವಾದ ಸ್ಥಳವೇ ಇರಲಿಲ್ಲ."

೯ ಶ್ರೀ ಆರ್.ಜೆ. ಜ್ಯಾಕ್ಸನ್ ಹೇಳುತ್ತಾರೆ:

೧೦ "ಬುದ್ಧನ ಬೋಧನೆಯ ವಿಶಿಷ್ಟ ಲಕ್ಷಣವು ಭಾರತದ ಧಾರ್ಮಿಕ ಚಿಂತನೆಯ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

೧೧ "ಋಗ್ವೇದಗಳ ಋಕ್ಕುಗಳಲ್ಲಿ, ಮನುಷ್ಯನ ವಿಚಾರಗಳು ಹೊರಮುಖವಾಗಿ ತನ್ನಿಂದ ಆಚೆಗೆ ದೇವರ ಜಗತ್ತಿನೆಡೆಗೆ ತಿರುಗಿದೆ.

೧೨ "ಬೌದ್ಧಧರ್ಮ ಮನುಷ್ಯನ ಹುಡುಕಾಟವನ್ನು ಒಳಮುಖವಾಗಿ ಅವನಲ್ಲಿಯೇ ಹುದುಗಿರುವ ಶಕ್ತಿಯೆಡೆಗೆ ತಿರುಗಿಸಿತು.

೧೩ "ವೇದಗಳಲ್ಲಿ ಪ್ರಾರ್ಥನೆ, ಸ್ತುತಿ ಹಾಗೂ ಪೂಜೆಯನ್ನು ಕಾಣಬಹುದು.

೧೪ "ಬೌದ್ಧಧರ್ಮದಲ್ಲಿ ಮೊಟ್ಟಮೊದಲ ಬಾರಿಗೆ, ಮನುಷ್ಯನ ಮನಸ್ಸು ಋಜುಮಾರ್ಗದಲ್ಲಿ ನಡೆಯುವುದಕ್ಕೆ ಬೇಕಾದ ತರಬೇತಿಯನ್ನು ಕಾಣುತ್ತೇವೆ."

೧೫ ವಿನ್‌ವುಡ್ ರೀಡ್ ಹೇಳುತ್ತಾನೆ:

೧೬ "ನಾವು ರಕ್ತ ಹಾಗೂ ಕಣ್ಣೀರಿನಿಂದ ಬರೆದ, ಲಕ್ಷಾಂತರ ವರ್ಷಗಳ ವಿಕಾಸದ ಕಥೆಯನ್ನು ಓದಿದಾಗ, ಪ್ರಕೃತಿಯ ಪುಸ್ತಿಕೆಯನ್ನು ತೆರೆದಾಗ ಬದುಕನ್ನು ನಿಯಂತ್ರಿಸುತ್ತಿರುವ ನಿಯಮಗಳನ್ನು, ಬೆಳವಣಿಗೆಯ ನಿಯಮಗಳನ್ನು ಅಧ್ಯಯನ ಮಾಡಿದಾಗ, ಪ್ರೀತಿಯೇ ದೇವರು ಎಂಬ ಸಿದ್ಧಾಂತ ಹೇಗೆ ಬರೀ ಭ್ರಾಂತಿ ಎಂಬುದು ಸ್ಪಷ್ಟವಾಗುತ್ತದೆ.

೧೭ "ಪ್ರತಿಯೊಂದರಲ್ಲೂ ಮೇರೆಮೀರಿದ ಸ್ವೇಚ್ಛಾಚಾರ ಹಾಗೂ ಪರಿತ್ಯಕ್ತ ವ್ಯರ್ಥತೆ ಇದೆ. ಹುಟ್ಟಿದ ಜೀವಿಗಳಲ್ಲಿ ಉಳಿಯುವ ಜೀವಿಗಳ ಪ್ರಮಾಣ ಬಹಳ ಕಡಿಮೆ.

೧೮ "ತಿನ್ನು ಮತ್ತು ತಿನ್ನಲ್ಪಡು ಎನ್ನುವುದು ಸಾಗರ, ಆಕಾಶ ಮತ್ತು ಕಾಡಿನ ನಿಯಮ. ಕೊಲ್ಲುವುದು ಬೆಳವಣಿಗೆಯ ನಿಯಮ."

೧೯ ಇವು ರೀಡ್ ತನ್ನ "ಮಾನವನ ಧರ್ಮಬಲಿ" ಎಂಬ ಗ್ರಂಥದಲ್ಲಿ ಹೇಳುವ ಮಾತುಗಳು. "ಬುದ್ಧನ ಧರ್ಮ ಅದಕ್ಕಿಂತ ಎಷ್ಟೊಂದು ಭಿನ್ನ?"

೨೦ ರಂಜನ್ ರಾಯ್ ಹೇಳುತ್ತಾರೆ:

೨೧ "ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದುದ್ದಕ್ಕೂ ಮೂರು ಸಂರಕ್ಷಣಾ ನಿಯಮಗಳು ಚಾಲ್ತಿಯಲ್ಲಿತ್ತು. ಯಾರೂ ಅದನ್ನು ಪ್ರಶ್ನಿಸಲೇ ಇಲ್ಲ.

೨೨ ಅವುಗಳು ಭೌತವಸ್ತು, ಘನ ಮತ್ತು ಶಕ್ತಿಗೆ ಸಂಬಂಧಿಸಿದ ನಿಯಮಗಳಾಗಿದ್ದವು.

೨೩ ಅವು ಆದರ್ಶವಾದಿಗಳ ಬಹು ಮುಖ್ಯ ಅಸ್ತ್ರಗಳಾಗಿದ್ದವು. ಈ ಆದರ್ಶವಾದಿಗಳು ಅವುಗಳ ಅಸ್ತಿತ್ವ ಅವಿನಾಶಿಯಾದುದು ಎಂಬ ಕಲ್ಪನೆಯನ್ನು ಹೊಂದಿದ್ದರು.

೨೪ ಇವು ಸೃಷ್ಟಿ ಕ್ರಿಯೆಯನ್ನು ನಿಯಂತ್ರಿಸುವ ಅಂಶಗಳೆಂದು ಹತ್ತೊಂಬತ್ತನೆಯ ಶತಮಾನದ ವಿಜ್ಞಾನಿಗಳು ನಂಬಿದ್ದರು.

೨೫ ಇದು ವಿಶ್ವದ ಮೂಲಭೂತ ಸ್ವಭಾವ ಎಂದು ಹತ್ತೊಂಬತ್ತನೆಯ ಶತಮಾನದ ವಿಜ್ಞಾನಿಗಳು ನಂಬಿದ್ದರು.

೨೬ ವಿಶ್ವವು ಅವಿನಾಶಿಯಾದ ಕಣಗಳಿಂದ ರಚನೆಗೊಂಡಿದೆ ಎಂಬುದು ಈ ವಿಜ್ಞಾನಿಗಳ ಗ್ರಹಿಕೆಯಾಗಿತ್ತು.

೨೭ ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಸರ್ ಜೆ.ಜೆ. ಥಾಮ್ಸನ್ ಮತ್ತು ಅವನ ಅನುಯಾಯಿಗಳು ಅಣುವನ್ನು ಒಡೆಯಲು ಪ್ರಾರಂಭಿಸಿದರು.

೨೮ ಆಶ್ಚರ್ಯವೆಂದರೆ, ಅಣು ಒಡೆದು ಚೂರಾಗತೊಡಗಿತು.

೨೯ ಈ ಚೂರುಗಳನ್ನು ಎಲೆಕ್ಟ್ರಾನ್ ಎಂದು ಕರೆಯಲಾಯಿತು. ಅವೆಲ್ಲಾ ಏಕರೀತಿಯಲ್ಲಿರುತ್ತವೆ ಹಾಗೂ ಋಣಾತ್ಮಕವಾದ ವಿದ್ಯುತ್‌ಸಂಚಿತವಾಗಿರುತ್ತವೆ.

೩೦ ಜಗತ್ತಿನ ಹಾಗೂ ಅಸ್ತಿತ್ವದ ನಾಶವಾಗದ ಅಡಿಗಲ್ಲು – ಅಣು ಎಂಬ ಮ್ಯಾಕ್ಸ್‌ವೆಲ್‌ನ ಹೇಳಿಕೆ ಮುರಿದು ಬಿತ್ತು.

೩೧ ಅಣುಗಳು – ಋಣಾತ್ಮಕ ಹಾಗೂ ಧನಾತ್ಮಕ ವಿದ್ಯುತ್‌ನಿಂದ ಪರಿಪೂರಣವಾದ ಪ್ರೋಟಾನ್ ಮತ್ತು ಎಲೆಕ್ಟ್ರಾನ್ ಎಂಬ ಸಣ್ಣ ಸಣ್ಣ ಕಣಗಳಾಗಿ ವಿಭಜನೆಗೊಂಡವು.

೩೨ ಸ್ಥಿರವಾದ, ಬದಲಾಗದ ಘನದ ಪರಿಕಲ್ಪನೆಯನ್ನು ವಿಜ್ಞಾನವು ತಿರಸ್ಕರಿಸಿದ್ದು ಒಳ್ಳೆಯದೇ ಆಯಿತು. ಈ ಶತಮಾನದ ಸಾರ್ವತ್ರಿಕ ನಂಬಿಕೆಯೆಂದರೆ ವಸ್ತುವನ್ನು ಪ್ರತಿ ಹಂತದಲ್ಲೂ ನಾಶಮಾಡಬಹುದು ಎಂಬುದು.

೩೩ ಬುದ್ಧನ ಅನಿಚ್ಚ ಸಿದ್ಧಾಂತ ನಿಜವಾಗಿದೆ.

೩೪ ವಿಶ್ವದ ದಾರಿಯೇ ಸಂಘಟನೆಗೊಳ್ಳುವ ಹಾಗೂ ವಿಘಟನೆಗೊಳ್ಳುವ ಹಾಗೂ ಮತ್ತೆ ಸಂಘಟನೆಗೊಳ್ಳುವ ಪ್ರಕ್ರಿಯೆ ಆಗಿದೆ ಎಂಬುದನ್ನು ಋಜುವಾತುಗೊಳಿಸಿದೆ.

೩೫ ಆಧುನಿಕ ವಿಜ್ಞಾನದ ಪ್ರವೃತ್ತಿ ಒಂದು ಅಂತಿಮ ಸತ್ಯದ, ಅಹಂನ ಐಕ್ಯತೆ ಹಾಗೂ ಭಿನ್ನತೆಯ

ಪ್ರವೃತ್ತಿಯೇ ಆಗಿದೆ.

೩೬ ಆಧುನಿಕ ವಿಜ್ಞಾನವು ಬುದ್ಧನ ಸಿದ್ಧಾಂತಗಳಾದ ಅನಿಚ್ಚ ಹಾಗೂ ಅನಿತ್ಯದ ಕಲ್ಪನೆಯನ್ನು ಪ್ರತಿಧ್ವನಿಸುತ್ತದೆ."

೩೭ ಇ.ಜಿ.ಟೇಲರ್ ತನ್ನ 'ಬೌದ್ಧ ಧರ್ಮ ಹಾಗೂ ಆಧುನಿಕ ಚಿಂತನೆ' ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾನೆ.

೩೮ "ಮನುಷ್ಯನ ಮೇಲೆ ಹೊರಗಿನ ಶಕ್ತಿ ಬಹಳ ಕಾಲ ಅಧಿಕಾರ ನಡೆಸಿದೆ. ಆತ ನಿಜವಾಗಿ ನಾಗರಿಕನಾಗಬೇಕಾದರೆ, ಅವನಿಗೆ ತನ್ನದೇ ತತ್ತ್ವಗಳ ಮೂಲಕ ಆಡಳಿತ ನಡೆಸುವುದು ಸಾಧ್ಯವಾಗಬೇಕು. ಮಾನವ ತನ್ನನ್ನು ತಾನೇ ಆಳಿಕೊಳ್ಳಬೇಕೆಂಬ ಕರೆ ಕೊಟ್ಟ ಅತ್ಯಂತ ಪ್ರಾಚೀನ ನೀತಿ ಸಂಹಿತೆ ಎಂದರೆ ಬೌದ್ಧ ಧರ್ಮ.

೩೯ "ಹಾಗಾಗಿ ಒಂದು ಪ್ರಗತಿಶೀಲ ವಿಶ್ವಕ್ಕೆ ಈ ಉತ್ಕೃಷ್ಟ ಪಾಠವನ್ನು ಕಲಿಸಲು ಬೌದ್ಧ ಧರ್ಮದ ಅವಶ್ಯಕತೆ ಇದೆ."

೪೦ ಏಕಮೂರ್ತಿವಾದಿಯಾದ ಪೂಜ್ಯ ಲೆಸ್ಲಿ ಬೋಲ್ಟನ್ ಹೇಳುತ್ತಾರೆ:

೪೧ "ಬೌದ್ಧ ಧರ್ಮದ ಅತಿ ಪ್ರಮುಖ ಕಾಣಿಕೆ ಅದರ ಆಧ್ಯಾತ್ಮಿಕ ಮನೋವಿಜ್ಞಾನ.

೪೨ "ಬೌದ್ಧರಂತೆ ಏಕಮೂರ್ತಿವಾದಿಯಾದ ಕ್ರೈಸ್ತರೂ ಕೂಡ ಚರ್ಚ್ ಧರ್ಮಗ್ರಂಥಗಳ ಮತ್ತು ಪಂಥಗಳ ಬಾಹ್ಯ ಪ್ರಾಮಾಣ್ಯವನ್ನು ತಿರಸ್ಕರಿಸುತ್ತಾರೆ ಮತ್ತು ಮಾನವನಲ್ಲೇ ತಮಗೆ ಮಾರ್ಗದರ್ಶನ ನೀಡುವ ದಾರಿದೀಪವನ್ನು ಅರಸುತ್ತಾರೆ.

೪೩ "ಕ್ರಿಸ್ತ ಮತ್ತು ಬುದ್ಧನನ್ನು ಏಕಮೂರ್ತಿವಾದಿ ಕ್ರೈಸ್ತರು ಜೀವನಕ್ರಮದ ಶ್ರೇಷ್ಠ ಪ್ರತಿಪಾದಕರು ಎಂಬು ಭಾವಿಸುತ್ತಾರೆ."

೪೪ ಗೊಡ್ಡಾರ್ಡ್ ಡ್ವಿಚ್‌ರು ಹೇಳುತ್ತಾರೆ:

೪೫ "ಹೊರಗಿನ ಸಹಾಯವಿಲ್ಲದೆ ತನ್ನ ಮುಕ್ತಿಯನ್ನು ರೂಪಿಸಿಕೊಳ್ಳಲು ಮಾನವ ಸಮರ್ಥ. ಈ ಸಾಮರ್ಥ್ಯದ ಆಂತರಿಕ ಮಹತ್ತ್ವವನ್ನು ಸೂಕ್ತವಾದ ರೀತಿಯಲ್ಲಿ ಅರಿತುಕೊಂಡ ಖ್ಯಾತಿ ಮತ್ತು ಗೌರವ ಜಗತ್ತಿನ ಧಾರ್ಮಿಕ ಗುರುಗಳಲ್ಲಿ ಸಲ್ಲಬೇಕಾದುದು ಬುದ್ಧನೊಬ್ಬನಿಗೇ.

೪೬ "ಇಡೀ ಮಾನವಕುಲದ ಯೋಗ್ಯತೆಯನ್ನು ಉನ್ನತ ಮಟ್ಟಕ್ಕೆ ಒಯ್ಯುವವನೇ ನಿಜವಾದ ಮಹಾತ್ಮ ಎನ್ನುವುದಾದರೆ ಆಗ ಆ ಕೀರ್ತಿಗೆ ತಥಾಗತನಿಗಿಂತ ಹೆಚ್ಚು ಅರ್ಹರು ಯಾರಾಗಿರಲು ಸಾಧ್ಯ?

೪೭ "ಅವನು ಮಾನವನ ಮೇಲೆ ಮತ್ತೊಂದು ಶಕ್ತಿಯನ್ನಿಟ್ಟು ಅವನನ್ನು ಕೀಳಾಗಿಸದೆ ಮಾನವನನ್ನೇ ಪ್ರೀತಿ ಮತ್ತು ವಿವೇಕಗಳ ಅತ್ಯುನ್ನತ ಶಿಖರಕ್ಕೆ ಕೊಂಡೊಯ್ದನು."

೪೮ "ಬುದ್ಧಿಸಂ" ಎಂಬ ಗ್ರಂಥ ಲೇಖಕರಾದ ಇ.ಜೆ.ಮಿಲ್ಸ್ ಹೇಳುತ್ತಾರೆ:

೪೯ "ಜ್ಞಾನದ ಮೌಲ್ಯ ಮತ್ತು ಅಜ್ಞಾನದಿಂದುಂಟಾಗುವ ಕೇಡು, ಇಂಥ ಮೌಲ್ಯಗಳಿಗೆ ಬೌದ್ಧಧರ್ಮದಷ್ಟು ಒತ್ತುಕೊಟ್ಟ ಧರ್ಮ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ.

೫೦ "ಮನುಷ್ಯ ಸದಾ ಎಚ್ಚರದಿಂದಿರಬೇಕು ಎನ್ನುವುದರ ಬಗ್ಗೆ ಬೌದ್ಧಧರ್ಮದಷ್ಟು ಮಹತ್ವವನ್ನು ಇನ್ಯಾವ ಧರ್ಮವೂ ನೀಡಲಿಲ್ಲ.

೫೧ "ಬೌದ್ಧಿಕ ಬೆಳವಣಿಗೆಗೆ ಬೌದ್ಧ ಧರ್ಮ ರೂಪಿಸಿದಷ್ಟು ಗಂಭೀರವಾದ ಯೋಜನೆಗಳನ್ನು ಬೇರೆ ಯಾವ ಧರ್ಮವೂ ರೂಪಿಸಲಿಲ್ಲ."

೫೨ ಪ್ರೊ. ಡಬ್ಲ್ಯೂ. ಟಿ. ಸ್ಟೇಸ್ ತನ್ನ 'ಬೌದ್ಧ ನೀತಿ'ಯಲ್ಲಿ ಹೇಳುತ್ತಾರೆ:

೫೩ "ಬೌದ್ಧರ ನೈತಿಕ ಆದರ್ಶವಾದ ಅರ್ಹಂತನು ನೈತಿಕವಾಗಿ ಹಾಗೂ ಬೌದ್ಧಿಕವಾಗಿ ಕೂಡ ಶ್ರೇಷ್ಠನಾಗಿರಬೇಕು.

೫೪ "ಅವನೊಬ್ಬ ದಾರ್ಶನಿಕ ಹಾಗೂ ಒಬ್ಬ ಸಚ್ಚಾರಿತ್ರ್ಯವುಳ್ಳ ವ್ಯಕ್ತಿಯೂ ಆಗಿರಲೇಬೇಕು.

೫೫ "ಬೌದ್ಧ ಧರ್ಮದಲ್ಲಿ ಮೋಕ್ಷಕ್ಕೆ ಜ್ಞಾನವು ತೀರಾ ಅನಿವಾರ್ಯವೆಂದು ಪರಿಗಣಿಸಲಾಗಿತ್ತು. ಮೋಕ್ಷದ ಹಾದಿಗೆ ಅಡ್ಡಬರುವ ಎರಡು ಪ್ರಮುಖ ತೊಡರುಗಳಲ್ಲಿ ಅಜ್ಞಾನ ಒಂದು (ಮತ್ತೊಂದು ವ್ಯಾಮೋಹ) ಎಂದು ಪರಿಗಣಿಸಲಾಗಿತ್ತು.

೫೬ "ಆದರೆ ಒಬ್ಬ ಆದರ್ಶ ಕ್ರೈಸ್ತನಾಗಲು ಜ್ಞಾನವು ಅನಿವಾರ್ಯವಾಗಿರಲೇ ಇಲ್ಲ.

೫೭ "ಕ್ರೈಸ್ತ ಧರ್ಮದ ಪ್ರವರ್ತಕನಾದ ಕ್ರಿಸ್ತನ ವ್ಯಕ್ತಿತ್ವ ದಾರ್ಶನಿಕ ಸ್ವರೂಪದ್ದಾಗಲಿಲ್ಲ. ಹಾಗಾಗಿ ಕ್ರಿಶ್ಚಿಯನ್ ಚಿಂತನಾ ಕ್ರಮದಲ್ಲಿ ಮನುಷ್ಯನ ನೈತಿಕ ಮುಖ ಬೌದ್ಧಿಕತೆಯಿಂದ ಪ್ರತ್ಯೇಕಗೊಂಡಿದೆ.

೫೮ "ಪ್ರಪಂಚದಲ್ಲಿ ದುಃಖವು ಮುಖ್ಯವಾಗಿ ಮೂರ್ಖತನ ಹಾಗೂ ಅಂಧಶ್ರದ್ಧೆಯಿಂದ ಆಗಿದೆಯೇ ಹೊರತು, ಕ್ರೂರತನದಿಂದಾಗಿ ಅಲ್ಲ.

೫೯ "ಬುದ್ಧ ಇದಕ್ಕೆ ಅವಕಾಶ ಕೊಡಲಿಲ್ಲ."

೬೦ ಬುದ್ಧ ಹಾಗೂ ಅವನ ಧಮ್ಮ ಎಷ್ಟೊಂದು ಮಹತ್ತರವಾದದ್ದು ಹಾಗೂ ವಿಶಿಷ್ಟವಾದದ್ದು ಎಂಬುದನ್ನು ತೋರಿಸಲು ಇಷ್ಟು ಸಾಕು.

೬೧ ಅಂಥವನೊಬ್ಬ ನಮ್ಮ ನಾಯಕನಾಗಲಿ ಎಂದು ಯಾರು ಮೊದಲು ತಾನೇ ಹೇಳುವುದಿಲ್ಲ.

## ೨. ಬುದ್ಧ ಧಮ್ಮದ ಪ್ರಸಾರಕ್ಕೆ ಪಣತೊಡೋಣ

೧ "ಮಿತಿಯಿಲ್ಲದಷ್ಟು ಜೀವಿಗಳಿವೆ. ಎಲ್ಲೆಡೆಗೂ ಅವನ ಧಮ್ಮವನ್ನು ಹರಡಲು ಪ್ರತಿಜ್ಞೆ ಮಾಡೋಣ.

೨ "ನಮ್ಮಲ್ಲಿ ಲೆಕ್ಕವಿಲ್ಲದಷ್ಟು ವಿಕಲತೆಗಳಿವೆ. ಅವುಗಳನ್ನೆಲ್ಲಾ ಗ್ರಹಿಸಿಕೊಳ್ಳುವ ಶಪಥ ಮಾಡೋಣ.

೩ "ಪ್ರಪಂಚದಲ್ಲಿ ಕೊನೆಯಿಲ್ಲದಷ್ಟು ಸತ್ಯಗಳಿವೆ. ಅವುಗಳನ್ನೆಲ್ಲಾ ಗ್ರಹಿಸಿಕೊಳ್ಳುವ ಶಪಥ ಮಾಡೋಣ.

೪ "ಅನುಪಮ ಬೌದ್ಧ ಮಾರ್ಗವಿದೆ. ಅದನ್ನು ಪರಿಪೂರ್ಣವಾಗಿ ನಿರ್ವಹಿಸುತ್ತೇವೆ ಎಂಬ ಪಣ ತೊಡೋಣ."

## ೩. ಬುದ್ಧನ ತಾಯ್ನಾಡಿನಲ್ಲಿ ಹುಟ್ಟುವಂತಾಗಲಿ ಎಂಬ ಪ್ರಾರ್ಥನೆ.

೧. ಎಲೈ ತಥಾಗತನೆ! ನಾನು ಪೂರ್ಣ ಮನಸ್ಸಿನಿಂದ ನಿನಗೆ ಶರಣಾಗಿದ್ದೇನೆ.
ಯಾವ ತಥಾಗತನ ಪ್ರಭೆ ಅಡ್ಡಿ ಆತಂಕಗಳಿಲ್ಲದೆ ದಶದಿಕ್ಕುಗಳಲ್ಲಿಯೂ ಹರಡಿದೆಯೋ
ಅಂಥ ತಥಾಗತನ ನಾಡಿನಲ್ಲಿ ಜನ್ಮವೆತ್ತಬೇಕೆಂಬುದು ನನ್ನ ತೀವ್ರ ಹಂಬಲ.

೨. ನಿನ್ನ ನಾಡನ್ನು ನನ್ನ ಕನಸಿನಲ್ಲಿ ಕಲ್ಪಿಸಿಕೊಂಡಾಗ
ಅಂಥ ನಾಡು ತ್ರಿಲೋಕದಲ್ಲೆಲ್ಲೂ ಇಲ್ಲವೆಂದು ಅರಿತೆ.

೩. ಅದು ಅಗಸದಂತೆ ಸರ್ವವ್ಯಾಪಿಯಾಗಿದೆ.

ವಿಶಾಲವಾಗಿ, ಹರವಾಗಿ ಸೀಮಾರಹಿತವಾಗಿದೆ.

೪. ನಿನ್ನ ಕರುಣೆ ಸಹಾನುಭೂತಿಗಳು ಧಮ್ಮಕ್ಕನುಗುಣವಾಗಿದೆ.
ನೀನು ಗಳಿಸಿದ ಪುಣ್ಯ ಈ ವಿಶ್ವದ ಎಲ್ಲಾ ಪುಣ್ಯಕ್ಕಿಂತಲೂ ಹಿರಿದಾಗಿತ್ತು.

೫. ನಿನ್ನ ಪ್ರಭೆ ಎಲ್ಲೆಡೆಯಲ್ಲೂ ಪಸರಿಸಿದೆ.
ಸೂರ್ಯ ಚಂದ್ರರೆಂಬ ಕನ್ನಡಿಗಳಂತೆ.

೬. ಅಲ್ಲಿ ಜನಿಸಿದ ಪ್ರತಿಯೊಂದು ಜೀವಿಯೂ
ಬುದ್ಧ, ನಿನ್ನಂತೆಯೇ ಸತ್ಯವನ್ನೇ ನುಡಿಯಲಿ.

೭. ಇದರೊಂದಿಗೆ ಈ ಪ್ರಬಂಧವನ್ನು ಬರೆದಿಡುತ್ತೇನೆ, ಈ ಸಾಲುಗಳನ್ನು ಉಚ್ಚರಿಸುತ್ತೇನೆ.

೮. ಓ ಬುದ್ಧ, ನಿನ್ನೊಡನೆ ಮುಖಾಮುಖಿ ನೋಡುವಂತಾಗಲಿ.

೯. ಮತ್ತು ನನ್ನ ಎಲ್ಲ ಸಹ ಜೀವಿಗಳೊಂದಿಗೆ ನಿನ್ನ ಸ್ವರ್ಗದ ನಾಡಿನಲ್ಲಿ ಹುಟ್ಟುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.

***–Encyclopaedia of Religion and Ethics-Vol.x, p.169***

# ವಿಷಯಸೂಚಿ


**ಅ**

ಅಂಗೀರಸ ೪೪೯
ಅಂಗುಲಿಮಾಲ ೧೮೬, ೧೮೭, ೧೮೮, ೧೮೯, ೫೦೮
ಅಂಬರೀಶ ೧೫೬
ಅಂಬಲತ್ಥಿಕಾ ೪೦೧
ಅಂಬಾ ೨೫೩, ೪೮೧, ೪೮೭
ಅಂಬಾವನ ೪೩೦
ಅಂಬಾಸದನ ೪೭೯
ಅಕಿರಾವತಿ ೨೨೭
ಅಕ್ಷಮಾಲ ೨೦
ಅಗಸ್ತ್ಯ ೨೦, ೧೫೩
ಅಗ್ಗಿಕ ೨೭೪, ೨೭೫
ಅಘಮರ್ಷಣ ೭೫
ಅಚಿರಾವತಿ ೬೧
ಅಟ್ಟಕ ೪೪೯
ಅಧಮ್ಮ ೨೦೬, ೪೫೦, ೪೫೧, ೪೫೨
ಅಧಿಥಾನ ೧೧೪
ಅನಾಥಪಿಂಡಕ ೧೭೮
ಅನಾಥಪಿಂಡಿಕ ೧೩೦, ೧೩೦, ೧೩೧, ೧೩೨, ೧೩೩, ೧೩೮, ೨೧೬, ೨೯೪, ೨೯೭, ೩೩೭, ೩೫೭, ೪೦೯, ೪೧೫, ೪೨೮, ೪೨೯, ೪೪೪, ೪೭೬, ೫೦೪, ೫೨೪
ಅನಾಥಪಿಂಡಿಕಾ ೨೮೪
ಅನುಪಿಯಾ ೨೮೨
ಅನುರುದ್ಧ ೧೦, ೧೫೦, ೧೫೧, ೫೦೦
ಅನೋಮ ೩೩, ೩೪
ಅಪ್ ೯೦, ೨೯೪
ಅಪನಾತ್ ೪೭೫
ಅಬ್ಬಾನ ೩೮೦
ಅಬ್ಬಾನಕರ್ಮ ೩೮೦
ಅಮಿತ ೪, ೧೦
ಅಮಿತೋದ ೪, ೧೦, ೧೫೦
ಅರಾಡಕಾಲಾಯಮ ೬೦, ೬೧
ಅರ್ಚಿರಾವತಿ ೪೩೩
ಅರ್ಶಿಷ್ಮತಿ ೭೦
ಅಲರ ೪೭೩
ಅಲವಕ ೫೧೯, ೫೨೦, ೫೨೧
ಅಲವಿ ೫೧೯
ಅಲಾರಕಲಮ ೧೦
ಅವಿಜ್ಜ ೧೧೭
ಅವಿಜ್ಜೆ ೧೧೨, ೧೧೩
ಅಶೋಕವೃಕ್ಷ ೧೮
ಅಶ್ವಜಿತ್ ೫೨
ಅಸತ್ ೭೫
ಅಸನ್ ೭೫
ಅಸಿತ ೭, ೮, ೯
ಅಸ್ಸಪುರ ೪೭೯
ಅಸ್ಸಲಯನಾ ೨೭೦, ೨೭೧
ಅಸ್ಸಾಜಿ ೧೨೬, ೧೨೭
ಅಹಲ್ಯೆ ೨೦
ಅಹೋಸಿ ೨೨೧

**ಆ**

ಆಂಬ್ರಪಾಲಿ ೪೩೧, ೪೩೨
ಆಚಾರ್ಯರ ೧೫೫

ಆಜೀವೋ ೧೧೩
ಆತ್ಮನ್ ೨೩೪
ಆನುಪೇಯ ೪೭೯
ಆಮಗಂಧ ೩೬೪, ೩೭೩
ಆಮ್ರಪಾಲಿ ೪೩೦, ೪೩೧, ೪೩೨
ಆಮ್ರವನ ೪೮೮, ೪೮೮, ೪೮೯, ೪೯೩
ಆರಾಡಕಾಲಾಯಮ ೬೦
ಆರಾದಕಲಂ ೫೭, ೫೮
ಆರ್ಯತತ್ತ್ವ ೪೬೮
ಆಲಾರ ೧೦೭
ಆವಂತಿ ೩

### ಇ

ಇಂದ್ರ ೨೦, ೪೬, ೪೮, ೨೬೨
ಇಂದ್ರಶಿಖರ ೩೦೩
ಇಸಿ ೩೬೧
ಇಸಿದತ್ತ ೫೦೩, ೫೦೪
ಇಸಿಪಟ್ಟಣ ೧೨೧
ಇಸಿಲಪಟ್ಟಣ ೧೦೭
ಇಸ್ಲಾಂ ೧೯೫

### ಈ

ಈಶಾನ ೨೬೨
ಈಶ್ವರ ೯೫, ೯೫, ೧೩೧, ೧೩೨, ೧೫೫, ೨೨೬, ೨೨೯

### ಉ

ಉಕ್ಕಥ ೪೭೯
ಉಗುನ್ನ ೪೭೯
ಉಗ್ಗಲ ೪೨೨
ಉಗ್ಗಹ ೪೨೧, ೪೨೨, ೪೨೩
ಉಜ್ಜಯ ೨೩೮, ೨೪೧, ೨೪೨
ಉದಯ ೧೬, ೧೭, ೧೯, ೨೧, ೨೪೨
ಉದಯಿನ ೨೩೮
ಉಪಪಜ್ಜ ೨೨೧
ಉಪಾಧ್ಯ ೩೭೭
ಉಪಾಲಿ ೧೫೨, ೧೫೨, ೧೬೭, ೧೯೫, ೧೯೬
ಉಪಾಸಕಿ ೫೧೩
ಉಪಾಸತ ೩೮೦
ಉಪೇಕ್ಖಾ ೧೧೪, ೧೧೫
ಉಪೋಸಥ ೩೮೦

### ಊ

ಊದುಂಬರಿಕಾ ೩೮೭

### ಋ

ಋಗ್ವೇದ ೫೩೧
ಋಜುಕ್ಷೇತ್ರ ೨೪೨
ಋಜುತನ ೨೫೪, ೨೫೫
ಋಜುತ್ವ ೩೪೭, ೩೫೦, ೩೫೪, ೪೧೦
ಋಜುದೃಷ್ಟಿ ೨೫೬

### ಎ

ಎತುಮ ೪೭೯
ಎಲೆಕ್ಟ್ರಾನ್ ೫೩೨
ಎಹಿ ೧೧೮
ಏಹಿ ೧೨೮

### ಔ

ಔತತ್ಯ ೨೦
ಔರಸಪುತ್ರ ೧೯೫

### ಕ

ಕಚ್ಚಪ ೪೯೫
ಕಚ್ಚಯಾನ ೯೦, ೯೧
ಕಚ್ಚಾಯನ ೪೯೫

ಕಪಿಂಗ್ಲಾ ೨೦
ಕಪಿಲ ೪, ೭೭, ೭೮, ೭೯, ೮೦, ೪೭೩
ಕಪಿಲಮುನಿ ೭೭
ಕಪಿಲವರ್ಣ ೫
ಕಪಿಲವಸ್ತು ೩, ೪, ೭, ೧೦, ೨೨, ೩೧, ೩೨, ೩೩, ೩೫, ೩೭, ೩೮, ೪೩, ೫೩, ೧೪೫, ೧೪೬, ೧೫೨, ೧೫೭, ೧೬೯, ೧೯೫, ೪೨೯, ೪೭೯, ೫೦೨, ೫೧೮, ೫೨೨
ಕಮಾಸನಧಮ್ಮ ೪೭೯
ಕಮ್ಮಗಳಲ್ಲಿ ೪೭೫
ಕಮ್ಮವಾಕವನ್ನು ೪೫೯
ಕಮ್ಮಾಂತೊ ೧೧೨
ಕಮ್ಮಾಂತೋ ೧೧೨, ೧೧೩
ಕಮ್ಮಾಸದಮ್ಮ ೫೨೬
ಕರಣಿಕ ೨೦೦
ಕಲಮ ೫೯
ಕಲುದಾಯಿನ್ ೧೪೫
ಕಶ್ಯಪ ೧೨೩, ೧೨೩, ೧೨೪, ೧೨೫, ೧೨೬, ೧೯೬, ೩೬೧, ೫೦೦, ೫೧೦
ಕಸುಬೇನು ೧೬೧
ಕಸ್ಯಪ ೧೨೩, ೧೨೪, ೧೨೫, ೧೨೯
ಕಸ್ಸಪನು ೮೯
ಕಳಂಗ ೩
ಕಾಂಭೋಜ ೩, ೨೭೧
ಕಾತ್ಯಾನ ೨೨೫
ಕಾತ್ಯಾಯನ ೫೧೦
ಕಾಮನ ೩೨, ೬೮
ಕಾರ್ಲ್ ೨೦೬, ೪೭೩
ಕಾಲಮ ೨೪೮, ೨೪೯, ೨೫೦
ಕಾಶಿ ೩೭೦, ೫೦೪
ಕಿಂಬಿಲ ೧೫೧
ಕಿಸಾಗೋತಮಿ ೩೪, ೫೧೩, ೫೧೫
ಕುಮಾರ ೧೮, ೩೮
ಕುರುದೇಶ ೧೩೬, ೪೭೯
ಕುರುಬಾಕ ೧೮
ಕುರುರಾಜ ೧೩೮, ೧೪೦
ಕುರುವಂಶ ೨೦
ಕುಶನಾರಿನ ೩೮೯
ಕುಶಿನಾರ ೪೭೯, ೪೯೯, ೫೦೧, ೫೦೨
ಕುಶೀ ೫೦೩
ಕುಶೀನಾರ ೩, ೪೮೯, ೪೯೦, ೪೯೪, ೪೯೮, ೪೯೯, ೫೦೦, ೫೦೧, ೫೦೨
ಕೃಷ್ಣಾಮೃಗ ೬೨
ಕೆನಿಯ ೪೭೫, ೪೭೬
ಕೇಶಕಂಬಲ ೮೯, ೯೧
ಕೇಶಕಂಬಳಿ ೪೯೫, ೫೧೦
ಕೇಶಪುತ್ತ ೨೪೮
ಕೇಶವತಿ ೪೯
ಕೋಲಿಯ ೪, ೨೪, ೨೫, ೨೬, ೨೭, ೨೮, ೩೦, ೩೧, ೩೩, ೫೩, ೫೪, ೫೦೨
ಕೋಶಲ ೬೧
ಕೋಸಲ ೩, ೨೬, ೨೭, ೨೮, ೩೦, ೬೧, ೧೩೦, ೧೮೬, ೨೨೭, ೨೪೮, ೨೫೩, ೨೫೮, ೨೫೯, ೨೬೦, ೨೯೭, ೨೯೯, ೩೩೮, ೩೪೭, ೩೭೦, ೪೪೪, ೪೪೭, ೪೬೯, ೪೭೩, ೪೭೬, ೫೦೪
ಕೋಸಲೆ ೫೦೪
ಕೌಂಡಿನ್ಯ ೫೨
ಕೌಸಾಂಬಿ ೨೬೧, ೪೭೫
ಕ್ರಿಶ್ಚಿಯನ್ ೧೯೫, ೫೩೪
ಕ್ರಿಸ್ತ ೧೯೫, ೫೩೪
ಕ್ರೈಸ್ತ ೫೩೩, ೫೩೪
ಕ್ರೈಸ್ತಧರ್ಮ ೧೯೫

## ಖ

ಖಾಂಡ ೩೦೫
ಖೇಮಾ ೨೯೭, ೨೯೯

## ಗ

ಗಂಗಾನದಿ ೪೩, ೧೪೦, ೧೬೩, ೨೬೬, ೨೯೮
ಗಂಧಕುಟೀರ ೪೪೨
ಗಜಪತಿ ೬೭
ಗಯ ೬೧
ಗಯಾನಗರ ೬೭
ಗಯೆ ೧೦೯, ೧೨೩, ೨೧೩
ಗವಂಪತಿ ೧೨೨
ಗಾಥಾ ೧೮೫, ೨೪೫, ೨೪೬, ೨೪೭
ಗಿರಿಭಾಜ ೪೪೧
ಗುಪ್ತಧನ ೧೪೭
ಗುರಾಣಿ ೫೦೦
ಗುರುದೇವ ೧೮೭
ಗೃಧ್ರಕೂಟ ೧೬೧, ೩೬೮, ೩೬೯, ೩೮೭, ೪೪೬, ೪೮೭
ಗೊಡ್ಡಾರ್ಡ್ ಡ್ವಿಚ್ ೫೩೩
ಗೋತಮ ೧೭೦, ೨೭೦, ೨೭೨, ೨೭೩, ೨೭೪, ೩೪೦, ೩೮೭, ೪೪೧, ೪೬೮, ೪೯೪
ಗೋತಮಿ ೧೭೫, ೧೭೭
ಗೋಪಾಲಕ ೧೮೬
ಗೋಶಾಲ ೫೧೦
ಗೋಷಿತರಂ ೪೭೯
ಗೋಸಾಲ ೪೯೫
ಗೋಸಿತ ೪೭೫
ಗೌಡಕುಟಿ ೪೮೩
ಗೌತಮ ೩, ೧೦, ೧೪, ೧೫, ೨೦, ೨೨, ೨೪, ೨೫, ೨೬, ೨೮, ೩೧, ೩೩, ೩೪, ೩೬, ೩೭, ೩೮, ೩೯, ೪೩, ೪೪, ೪೬, ೫೧, ೫೨, ೫೩, ೫೪, ೫೭, ೫೮, ೫೯, ೬೦, ೬೧, ೬೨, ೬೩, ೬೪, ೬೭, ೬೮, ೬೯, ೭೦, ೯೦, ೧೦೭, ೧೪೮, ೧೬೩, ೨೦೦, ೨೨೭, ೨೫೮, ೨೫೯, ೨೬೦, ೩೬೬, ೩೭೦, ೩೮೬, ೩೮೭, ೪೪೦, ೪೪೧, ೪೪೨, ೪೪೩, ೪೪೪, ೪೪೬, ೪೪೭, ೪೪೮, ೪೪೯, ೪೫೩, ೪೫೭, ೪೭೬, ೪೯೫, ೫೦೧, ೫೦೯, ೫೧೦, ೫೨೨
ಗೌತಮಿ ೧೨, ೧೨, ೨೯, ೩೦, ೩೧, ೩೨, ೩೩, ೩೯, ೪೦, ೫೧೫, ೫೨೨
ಗೌಧಕುಟಿ ೪೮೨

## ಘ

ಘೋಶಾಲ ೮೯, ೯೧
ಘೋಷಾಲ್ ೨೨೫

## ಚ

ಚಂಡಾಲಕುಪ್ಪ ೪೭೯
ಚಂದ್ರ ೨೦, ೩೨, ೭೦, ೧೮೯, ೩೨೮, ೩೩೩, ೫೩೫
ಚಂಪಾ ೪೯೯
ಚತುರ್ದಶಿ ೩೮೦
ಚನ್ನ ೩೨, ೩೩, ೩೪, ೩೫, ೩೬, ೩೭, ೩೮, ೪೦, ೧೬೯
ಚಿಂಚಾ ೪೪೩, ೪೪೩, ೪೪೪, ೪೪೫
ಚಿಂಚಾಳ ೪೪೩
ಚಿತ್ತಾಲತಾ ೬
ಚುಂದ ೨೩೫, ೨೩೫, ೨೫೭, ೪೮೮, ೪೮೯, ೪೯೩, ೪೯೯
ಚುಂದಾ ೪೮೮
ಚೇತವನ ೧೬೩, ೧೬೩, ೧೭೮, ೧೭೯, ೧೮೬, ೩೭೩, ೪೨೯, ೪೪೪
ಚೈತ್ರ ೩೩೩, ೪೭೫

## ಜ

ಜಗದೀಶ್ವರ ೧೩೩
ಜಯಸೇನ ೪
ಜರ್ಮನಿ ೩೦೮
ಜಿತೇಂದ್ರಿಯ ೫೧೨
ಜಿಹೋವನ ೨೦೧

ಜೀಸಸ್ ೨೦೦, ೨೦೧
ಜೇಟ ೨೮೪, ೨೯೪
ಜೇತ ೪೨೯
ಜೇತತೋಪಿ ೩೪೦, ೩೫೮
ಜೇತವನ ೧೩೩, ೧೩೮, ೨೯೭, ೩೪೦, ೩೪೫, ೩೫೩, ೩೬೧, ೪೦೯, ೪೨೯, ೪೪೨, ೪೪೪, ೪೭೧, ೪೭೪, ೪೭೬, ೪೮೨, ೫೦೪, ೫೨೪
ಜೈನ ೩೦೫
ಜೈನಧರ್ಮ ೨೫೫, ೨೫೬, ೩೧೦
ಜ್ಯಾಕ್ಸನ್ ಆರ್.ಜೆ. ೫೩೧

## ಡ

ಡಾರ್ಕೀ ೨೬೭

## ತ

ತಥಾಗತ ೧೦೨, ೧೩೨, ೧೪೫, ೧೪೮, ೧೪೯, ೧೭೬, ೧೭೯, ೧೮೬, ೧೯೮, ೨೦೦, ೨೧೬, ೨೨೭, ೨೨೮, ೨೨೯, ೨೩೦, ೨೩೮, ೨೪೧, ೨೪೨, ೨೪೮, ೨೫೦, ೨೫೩, ೨೫೮, ೨೫೯, ೨೬೨, ೨೮೨, ೨೯೭, ೨೯೮, ೨೯೯, ೩೩೨, ೩೬೧, ೪೦೨, ೪೦೩, ೪೧೫, ೪೩೨, ೪೩೩, ೪೩೪, ೪೪೨, ೪೫೭, ೪೫೯, ೪೬೦, ೪೬೫, ೪೬೭, ೪೬೮, ೪೭೩, ೪೭೪, ೪೭೬, ೪೭೯, ೪೮೦, ೪೮೧, ೪೮೨, ೪೮೩, ೪೮೪, ೪೮೭, ೪೮೮, ೪೮೯, ೪೯೦, ೪೯೩, ೪೯೪, ೪೯೫, ೪೯೬, ೪೯೭, ೪೯೮, ೪೯೯, ೫೦೦, ೫೦೧, ೫೦೨, ೫೦೩, ೫೦೪, ೫೦೭, ೫೦೮, ೫೦೯, ೫೧೨, ೫೧೩, ೫೧೫, ೫೧೬, ೫೧೭, ೫೧೮, ೫೧೯, ೫೨೦, ೫೨೧, ೫೨೨, ೫೨೪, ೫೨೬, ೫೨೭, ೫೨೮, ೫೩೩, ೫೩೪
ತರ್ಜನೀಯ ೩೮೦
ತೀರ್ಥಿಕರ ೪೪೨, ೪೪೩, ೪೪೪
ತೀರ್ಥಿಕಾರಾಮ ೪೪೪
ತೇಜಸ್ ೯೦
ತ್ರಿಶರಣ ೩೭೬, ೪೬೫, ೪೬೭
ತ್ರಿಪ್ಜ ೨೪೭

## ಥ

ಥಾಮ್ಸನ್ ಜೆ.ಜೆ. ೫೩೨
ಥುಲ್ಲಕೋಟ್ಠಿತ ೧೩೬, ೧೩೮, ೧೪೧
ಥೂನಾ ೪೪೭
ಥೇರ ೧೬೯

## ದ

ದಂಡಪಾಣಿ ೧೪, ೧೫
ದಾದಿ ೧೭೬, ೪೭೫
ದೇವದತ್ತ ೧೦, ೧೩, ೧೪, ೧೫೧, ೩೦೯, ೩೬೭, ೪೪೫, ೪೪೬, ೪೪೭
ದೇವದಾಹ ೪, ೬, ೨೫೫, ೩೦೬
ದೋಣ ೩೪೩, ೪೪೮, ೪೪೯, ೫೦೨, ೫೦೩

## ಧ

ಧನಂಜನನಿ ೪೬೫, ೪೬೭, ೪೬೮
ಧನಂಜನಯ ೪೬೯
ಧನಂಜನಿ ೩೫೧, ೩೫೨, ೩೫೩
ಧನಂಜಯ ೪೬೯, ೪೭೦
ಧಮ್ಮ ೧೦೯, ೧೦೯, ೧೧೦, ೧೧೫, ೧೧೬, ೧೧೭, ೧೨೨, ೧೨೩, ೧೨೬, ೧೨೭, ೧೩೦, ೧೩೨, ೧೮೯, ೧೯೬, ೨೦೬, ೨೧೨, ೨೧೭, ೨೨೨, ೨೨೬, ೨೩೭, ೨೪೨, ೨೪೪, ೨೪೭, ೨೫೫, ೨೫೮, ೨೬೧, ೨೬೪, ೨೭೬, ೨೮೦, ೨೮೧, ೨೮೨, ೨೮೩, ೨೮೪, ೨೮೫, ೨೮೬, ೨೮೯, ೩೦೧, ೩೨೫, ೩೨೬, ೩೨೭, ೩೨೯, ೩೩೦, ೩೩೧, ೩೩೪, ೩೪೦, ೩೬೦, ೩೭೮, ೩೭೯, ೩೮೬, ೩೮೭, ೩೮೮, ೩೯೨, ೩೯೩,

೩೯೪, ೩೯೭, ೩೯೮, ೩೯೯, ೪೦೦, ೪೦೧, ೪೦೨, ೪೦೩, ೪೦೪, ೪೦೭, ೪೦೮, ೪೦೯, ೪೨೭, ೪೪೨, ೪೫೦, ೪೫೧, ೪೫೨, ೪೫೯, ೪೬೦, ೪೬೫, ೪೬೭, ೪೭೩, ೪೭೫, ೪೮೧, ೪೯೩, ೫೨೦, ೫೨೧, ೫೩೧, ೫೩೪, ೫೩೫

ಧಮ್ಮಗ್ರಂಥ ೨೪೭

ಧಮ್ಮದಾನ ೩೯೮

ಧಮ್ಮದ್ವೇಷಿ ೩೪೦

ಧಮ್ಮಧಾನ ೩೯೮

ಧಮ್ಮಾವಲಂಬಿ ೩೨೭

ಧಮ್ಮಿಕ ೩೫೩

ಧರ್ಮಬಲಿ ೫೩೨

ಧರ್ಮರಾಜ ೧೩೩


## ನ


ನಕುಲಪಿತನು ೫೧೮

ನದಿಕ ೪೮೭

ನಲಂದ ೪೦೧, ೪೭೯, ೪೮೭

ನಲಕ ೪೮೩

ನಲಗಿರಿ ೪೪೬, ೪೪೭

ನಲಿಧ್ಯಾನ ೪೭೨, ೪೭೩

ನಹುಷನು ೪೮

ನಾಕುಲ ೪೭೯

ನಾಗ ೧೨೪, ೨೬೫

ನಾಗದೇವ ೩೧೧

ನಾಗರಾಜ ೬೭

ನಾಗಸೇನ ೩೦೫, ೩೧೧, ೩೧೨

ನಾಗಸೇನಾ ೩೦೫

ನಾತಪುತ್ರ ೪೯೩

ನಾಥಕುಲ ೪೯೫

ನಾಥಪುತ್ತ ೫೧೦

ನಾಮಖಂಡ ೨೩೬

ನಾರದ ೫೦೩

ನಾರಾಯಣ ೭೫, ೭೬

ನಿಕ್ಖಾಮ ೧೧೪, ೧೧೫

ನಿಗಂತನಾಥಪುತ್ತ ೯೦, ೯೧

ನಿಗಂಥ ೪೯೩, ೪೯೫

ನಿಗ್ಗಂಥ ೩೦೬

ನಿಬ್ಬಾಣ ೧೭೭, ೨೦೦, ೨೧೨, ೨೧೩, ೨೧೪, ೨೧೫, ೨೧೬, ೨೧೭, ೩೧೮, ೩೨೦, ೩೨೧, ೩೩೦, ೩೫೫, ೩೫೭, ೩೮೫, ೩೮೬, ೫೨೧

ನಿಯಶಕರ್ಮ ೩೮೦

ನೈರಂಜಾ ೬೭

ನೈರಾಂಜನ ೬೧


## ಪ


ಪಂಜಿನಂಥ ೪೮

ಪಕುದ್ಧ ೯೦, ೯೧, ೫೧೦

ಪಕೌದ ೨೨೫

ಪಚಿತ್ತೀಯ ೩೭೯

ಪರಮೇಷ್ಠಿ ೭೫, ೭೬

ಪವಿತ್ರಾತ್ಮ ೧೨೧, ೧೨೨, ೧೨೩, ೧೨೪, ೧೨೭, ೧೨೮, ೧೨೯, ೧೩೦, ೧೩೧, ೧೩೨, ೧೩೩, ೧೩೫, ೧೪೫, ೧೪೭, ೧೪೮, ೧೪೯, ೧೫೨, ೧೬೭, ೧೬೮, ೧೬೯, ೧೭೫, ೧೭೬, ೧೭೭, ೧೭೮, ೧೭೯, ೨೮೨, ೩೪೦, ೩೫೪, ೩೬೮, ೩೬೯, ೩೭೦, ೩೮೭, ೪೧೭

ಪಸನೇದಿ ೪

ಪಸೆನ್‌ಜಿತ್ ೧೩೦

ಪಸೇನದಿ ೧೮೭, ೨೫೮, ೨೫೯, ೨೬೦, ೩೭೦, ೪೨೮, ೫೦೮

ಪಾಂಚಾಲ ೩

ಪಾಂಡವಪರ್ವತ ೪೩

ಪಾಟಲಿಗ್ರಾಮ ೩೫೦

ಪಾಟಲೀ ೪೮೭

ಪಾಟಲೀಗ್ರಾಮ ೪೮೭

ಪಾತಿಸೇನ ೨೪೪, ೨೪೫, ೨೪೬, ೨೪೭
ಪಾವಾ ೪೭೯, ೪೮೮, ೪೮೯, ೪೯೩, ೫೦೦, ೫೦೨
ಪಾಷಂಡಿ ೪೪೭, ೪೬೫, ೪೬೭
ಪಿಪ್ಪಲವನ ೩
ಪುನ್ನ ೬೪
ಪುನ್ನವದನ ೪೬೯
ಪುರಂದರ ೨೦
ಪುರಾಣಕಶ್ಯಪ ೫೧೦
ಪುಷ್ಕರಣಿ ೩೬೫
ಪೇಸಿ ೩೦೪
ಪ್ರಭಾಕರಿ ೭೦
ಪ್ರಭು ೧೬೭, ೧೭೧, ೧೭೫, ೧೭೬, ೧೭೭, ೧೭೯, ೧೮೦, ೧೮೭, ೨೪೮, ೨೪೯, ೨೫೦, ೨೬೨, ೨೯೭, ೨೯೯, ೩೨೩, ೩೫೩, ೩೬೫, ೩೭೩, ೩೭೫, ೩೮೦, ೩೮೭, ೩೯೩, ೪೦೪, ೪೦೯, ೪೧೭, ೪೨೩, ೪೨೭, ೪೨೮, ೪೨೯, ೪೩೦, ೪೩೧
ಪ್ರವ್ರಾಜ್ಯ ೪೫೯
ಪ್ರಸೇನಜಿತ ೧೩೩, ೧೮೬, ೧೯೯, ೨೪೬, ೨೫೩, ೨೯೭, ೩೩೮, ೩೭೦, ೪೪೭, ೪೬೯, ೪೭೬
ಪ್ರೋಟಾನ್ ೫೩೨

### ಫ

ಫಾಲ್ಗುನದಿ ೧೨೩

### ಬ

ಬಂದಗಾಮ ೪೮೮
ಬನಾರಸ್ ೧೨೧, ೧೨೨, ೧೨೩, ೧೩೬, ೪೯೯
ಬರ್ಮಾ ೩೦೮
ಬರ್ಮೀಯರು ೪೬೨
ಬಿಂಬಸಾರ ೪, ೪೬, ೧೩೬, ೪೨೭, ೪೨೮, ೪೨೯, ೪೫೮, ೪೬೯, ೪೭೫, ೪೮೭
ಬಿಂಬಿಸಾರ ೪೩, ೪೩, ೪೪, ೫೨, ೧೨೮, ೧೨೯, ೧೩೦, ೧೮೭
ಬಿಡದಿ ೫೧೫, ೫೧೬
ಬುದ್ಧ ೬, ೮, ೯, ೭೦, ೭೧, ೭೭, ೭೯, ೮೦, ೮೨, ೮೩, ೮೪, ೮೫, ೮೬, ೮೯, ೯೦, ೯೧, ೯೬, ೯೭, ೧೦೨, ೧೦೩, ೧೦೭, ೧೦೮, ೧೦೯, ೧೧೦, ೧೧೧, ೧೧೪, ೧೧೫, ೧೧೭, ೧೨೨, ೧೨೫, ೧೨೬, ೧೨೭, ೧೨೮, ೧೩೦, ೧೩೬, ೧೩೭, ೧೪೭, ೧೪೯, ೧೫೨, ೧೫೩, ೧೫೪, ೧೫೬, ೧೬೩, ೧೬೪, ೧೬೮, ೧೬೯, ೧೭೧, ೧೭೮, ೧೮೫, ೧೮೭, ೧೮೮, ೧೮೯, ೧೯೧, ೧೯೫, ೧೯೬, ೨೦೦, ೨೦೫, ೨೦೬, ೨೧೩, ೨೧೫, ೨೧೬, ೨೧೭, ೨೧೯, ೨೨೧, ೨೨೨, ೨೨೫, ೨೨೬, ೨೨೭, ೨೩೧, ೨೩೫, ೨೩೬, ೨೩೭, ೨೪೩, ೨೪೫, ೨೪೬, ೨೫೩, ೨೫೪, ೨೫೫, ೨೬೩, ೨೬೫, ೨೭೦, ೨೭೧, ೨೭೨, ೨೭೪, ೨೭೬, ೨೮೦, ೨೮೧, ೨೯೩, ೨೯೪, ೨೯೬, ೩೦೧, ೩೦೨, ೩೦೩, ೩೦೫, ೩೦೬, ೩೦೭, ೩೦೮, ೩೦೯, ೩೧೦, ೩೧೩, ೩೧೪, ೩೧೯, ೩೨೦, ೩೨೩, ೩೬೫, ೩೬೯, ೩೭೧, ೩೭೬, ೩೮೫, ೩೮೬, ೩೮೭, ೪೦೦, ೪೦೧, ೪೦೮, ೪೦೯, ೪೧೬, ೪೨೧, ೪೨೨, ೪೨೭, ೪೨೮, ೪೩೦, ೪೩೨, ೪೪೧, ೪೪೩, ೪೪೪, ೪೪೫, ೪೪೬, ೪೪೮, ೪೫೭, ೪೫೯, ೪೬೦, ೪೬೧, ೪೬೨, ೪೬೫, ೪೬೭, ೪೬೮, ೪೬೯, ೪೭೧, ೪೭೨, ೪೭೩, ೪೭೪, ೪೭೫, ೪೭೬, ೪೭೯, ೪೮೦, ೪೮೧, ೪೮೨, ೪೮೩, ೪೮೭, ೪೮೮, ೪೮೯, ೪೯೫, ೪೯೬, ೪೯೭, ೪೯೮, ೪೯೯, ೫೦೦, ೫೦೧, ೫೦೨, ೫೦೩, ೫೦೮, ೫೦೯, ೫೧೨, ೫೧೩, ೫೧೫, ೫೧೯, ೫೨೦, ೫೨೧, ೫೨೨, ೫೨೪, ೫೨೬, ೫೨೭, ೫೨೮, ೫೩೧, ೫೩೨, ೫೩೩, ೫೩೪
ಬುದ್ಧದೇವ ೧೮೫, ೧೮೬

ಬುದ್ಧಧರ್ಮ ೨೦೫, ೨೦೫, ೨೧೮

ಬುಧ ೨೦

ಬೃಹಸ್ಪತಿ ೨೦, ೭೫

ಬೋಧಿಜ್ಞಾನ ೭೦

ಬೋಧಿಸತ್ವ ೫, ೬, ೮, ೭೦, ೭೧, ೭೨, ೨೧೨

ಬೋಲ್ಪನ್ ೫೩೩

ಬೌದ್ಧ ೩೦೧, ೩೦೨, ೩೦೭, ೫೩೩, ೫೩೪

ಬೌದ್ಧಧರ್ಮ ೨೯೩, ೩೦೧, ೪೦೭, ೫೩೧, ೫೩೩

ಬೌದ್ಧಮತ ೩೦೭, ೩೧೩

ಬ್ರಹ್ಮ ೮೫, ೮೫, ೯೫, ೨೨೭, ೨೨೮, ೨೩೦, ೨೩೧, ೨೩೨, ೨೪೩, ೨೬೨, ೨೭೦, ೨೭೧, ೨೭೨, ೪೪೯, ೪೫೦, ೪೫೨

ಬ್ರಹ್ಮದತ್ತ ೪೦೧

ಬ್ರಹ್ಮದೇವ ೧೯೧

ಬ್ರಹ್ಮನ್ ೨೩೦

ಬ್ರಹ್ಮರ್ಷಿ ೩೯೮

ಬ್ರಹ್ಮಲೋಕ ೧೦೨, ೧೬೧, ೧೯೧, ೪೫೦, ೫೧೯

ಬ್ರಹ್ಮಸಾಯುಜ್ಯ ೨೨೭

ಬ್ರಾಹ್ಮಣಸ್ಪತಿ ೭೫


## ಭ


ಭಂತೇ ೪೯೭

ಭಗವಾನ ೧೨೨, ೧೨೪, ೧೨೫, ೧೨೬, ೧೨೯, ೧೩೦, ೧೩೧, ೧೩೩, ೧೩೬, ೧೩೮, ೧೪೫, ೧೪೬, ೧೪೭, ೧೪೯, ೧೫೦, ೧೫೨, ೧೫೩, ೧೮೬, ೧೮೭, ೨೭೧, ೨೭೩, ೨೭೪, ೨೭೫, ೨೮೨, ೨೮೪, ೨೯೪, ೩೧೧, ೩೩೭, ೩೩೮, ೩೪೦, ೩೪೧, ೩೪೭, ೩೬೫, ೪೫೭, ೪೬೫, ೪೬೭, ೪೬೮, ೪೭೨, ೪೭೪, ೪೭೫, ೪೭೬, ೪೭೯, ೪೮೩, ೪೮೮, ೪೯೩, ೪೯೮, ೪೯೯, ೫೦೪, ೫೧೭

ಭಗ್ಗ ೨೮೨, ೪೭೩, ೪೭೫

ಭಗ್ಗಿ ೫೧೮

ಭಟ್ಟ ೪೧೮

ಭದಿಯಾ ೪೬೮, ೪೬೯

ಭದ್ದಿಯ ೧೫೧, ೪೨೧, ೪೩೯, ೪೪೦

ಭದ್ಧಿಯ ೪೩೯

ಭಾಗು ೧೫೧

ಭಾಗ್ಗವ ೩೯೮, ೩೯೯, ೪೦೦

ಭಾಣಕ ೩೧೩

ಭಾರದ್ವಾಜ ೧೧, ೩೨, ೩೩, ೨೩೧, ೨೩೨, ೪೪೦, ೪೬೫, ೪೬೭, ೪೬೮

ಭಾರ್ಗವ ೨೮೨

ಭಿಕ್ಕು ೧೦೩, ೧೦೪, ೧೧೮, ೧೨೧, ೧೨೨, ೧೨೬, ೧೨೮, ೧೬೮, ೧೮೬, ೧೮೭, ೧೯೯, ೨೧೦, ೨೧೧, ೨೧೩, ೨೧೪, ೨೧೬, ೨೪೪, ೨೪೫, ೨೪೬, ೨೪೭, ೨೫೮, ೨೫೯, ೨೬೬, ೨೬೭, ೨೬೮, ೩೨೬, ೩೪೧, ೪೦೯, ೪೫೯, ೪೬೧, ೪೬೮, ೪೮೦, ೫೦೧, ೫೧೮, ೫೧೯, ೫೨೦, ೫೨೧, ೫೨೨, ೫೨೭, ೫೨೮

ಭಿಕ್ಕುಣಿ ೨೪೫, ೨೪೬

ಭಿಕ್ಷಗಳು ೪೮೦

ಭಿಕ್ಷು ೧೧೮, ೧೩೦, ೧೩೧, ೧೩೬, ೧೩೭, ೧೩೮, ೧೩೯, ೧೪೯, ೧೬೧, ೧೬೮, ೧೬೯, ೧೭೯, ೧೮೭, ೧೯೮, ೨೦೯, ೨೧೭, ೨೨೭, ೨೪೬, ೨೬೫, ೨೬೮, ೨೯೫, ೩೦೯, ೩೧೩, ೩೨೦, ೩೨೨, ೩೨೫, ೩೫೧, ೩೫೭, ೩೬೦, ೩೬೬, ೩೬೮, ೩೭೦, ೩೭೩, ೩೭೫, ೩೭೬, ೩೭೭, ೩೭೮, ೩೭೯, ೩೮೦, ೩೮೧, ೩೮೫, ೩೮೬, ೩೮೭, ೩೯೧, ೩೯೨, ೩೯೩, ೩೯೪, ೩೯೭, ೪೦೧, ೪೦೪, ೪೦೭, ೪೦೮, ೪೦೯, ೪೧೦, ೪೧೧, ೪೨೭, ೪೨೮, ೪೨೯, ೪೩೦, ೪೩೧, ೪೩೨, ೪೩೩, ೪೩೪, ೪೪೫, ೪೪೭, ೪೫೯, ೪೬೨, ೪೭೩, ೪೭೪, ೪೭೬, ೪೮೨, ೪೮೭, ೪೯೪, ೪೯೭, ೪೯೮, ೫೦೦, ೫೦೧, ೫೦೮, ೫೧೨, ೫೧೫, ೫೧೬, ೫೧೮, ೫೧೯, ೫೨೦, ೫೨೧

ಭಿಕ್ಷುಣಿ ೧೭೭, ೧೮೧, ೨೪೫, ೩೭೬, ೩೭೭, ೩೮೧, ೪೩೨, ೪೩೩, ೪೩೪
ಭಿಕ್ಷುಬಂಧು ೩೫೭
ಭೃಗುಮುನಿ ೫೭, ೫೮, ೬೧
ಭೇಶಕಾಲ ೫೧೮
ಭೇಸ್ಕಲ ೪೭೩, ೪೭೫

## ಮ

ಮಖಾಲಿ ೮೯, ೯೧, ೨೨೫
ಮಖ್ಖಾಲಿ ೪೯೫
ಮಗಧ ೩, ೪, ೪೩, ೪೬, ೬೧, ೧೨೮, ೧೨೯, ೧೩೦, ೧೮೭, ೨೬೨, ೩೬೮, ೩೭೦, ೪೪೦, ೪೪೧, ೪೪೭, ೪೫೮, ೪೭೫, ೪೮೩, ೪೮೭, ೫೦೨, ೫೦೪, ೫೧೦
ಮಚಲಿಂದ ೧೨೩, ೧೨೪
ಮಜ್ಝಿಮ ೧೦೮
ಮತ್ತಾರ ೧೭೮, ೪೫೨
ಮಮತ ೨೦
ಮಲ್ಲಿಕಾ ೩೩೮, ೪೭೧, ೪೭೨, ೪೭೩, ೫೦೮
ಮಲ್ಲಿಕಾರಾಣಿ ೨೮೪, ೩೩೮
ಮಸ್ಕರೀ ೫೧೦
ಮಹಮ್ಮದ್ ೧೯೫, ೨೦೦
ಮಹಾಕಮ್ಮವಿಭಂಗ ೩೧೩
ಮಹಾಕಶ್ಯಪ ೩೬೧, ೫೦೦
ಮಹಾಕೋತ್ತಿತ ೨೯೪, ೨೯೪, ೨೯೫, ೨೯೬
ಮಹಾಗೋತಮಿ ೧೭೬
ಮಹಾನಾಮ ೧೦, ೧೦, ೩೩, ೫೨, ೧೫೦, ೫೧೮, ೫೧೯
ಮಹಾಬ್ರಹ್ಮ ೧೪೮, ೨೨೬, ೨೨೮
ಮಹಾಮಾಯ ೧೯೫
ಮಹಾಮಾಯೆ ೪, ೫, ೬, ೯, ೧೦
ಮಹಾಲಿ ೨೩೬, ೪೮೭
ಮಹಾವೀರ ೯೦, ೯೧, ೪೬೦, ೪೮೭
ಮಹಾಸಂಯಮಿ ೨೦
ಮಹಾಸಮಣ ೧೨೯, ೧೪೫, ೪೪೧
ಮಹಾಸವಣ ೧೨೯
ಮಹಾಸಾಗರ ೪೮, ೨೯೮
ಮಹಿದ್ಧಿ ೭೫
ಮಾಗಧ ೩, ೫೦೪
ಮಾರ್ಕ್ಸ್ ೨೦೬, ೪೭೩
ಮಾಲುಂಕ್ಯಪುತ್ರ ೩೫೮, ೩೫೯
ಮಿಥಿಲೆ ೩
ಮಿಲಿಂದ ೩೧೧
ಮಿಲ್ಸ್ ಇ.ಜೆ. ೫೩೩
ಮುಕತ ೫೦೨
ಮುಕುದ ೫೧೮
ಮುಸ್ಲಿಮ ೧೯೫
ಮೃಗವನ ೪೭೩, ೫೧೮
ಮೃಗಾರ ೪೭೦, ೪೭೧
ಮೃಗಾರಮಾತೆ ೪೭೧
ಮೃಗೋದ್ಯಾನ ೪೭೫
ಮೆಂಡಕ ೪೨೧, ೪೬೯
ಮೇಣಗಪಟ ೬೨
ಮೇಲೊ ೩೦
ಮೊಗ್ಗಲ್ಲಣ ೧೨೮, ೧೪೫, ೧೪೭, ೨೦೦
ಮೊಗ್ಗಲ್ಲಾನ ೪೪೬
ಮೊಸೆಸ್ ೨೦೧
ಮೌದ್ಗಲಾಯ ೧೨೬, ೧೨೭, ೧೨೮, ೧೯೭, ೧೯೮
ಮೌರ್ಯರು ೩
ಮ್ಯಾಕ್ಸ್‌ವೆಲ್ ೫೩೨

## ಯ

ಯಕ್ಕ ೩೦೩, ೩೪೩, ೫೧೯, ೫೨೦, ೫೨೧
ಯಕ್ಷ ೩೪೩, ೫೨೦
ಯಮುನಾ ೨೦

ಯಯಾತಿ ೨೦
ಯಶಸ್ ೧೨೧, ೧೨೨
ಯಶೋಧರ ೧೪, ೧೫, ೩೧, ೪೪೫, ೪೮೧
ಯಶೋಧರೆ ೧೪, ೧೪, ೧೫, ೩೧, ೩೬, ೩೯, ೪೦, ೧೪೭, ೧೪೮, ೧೪೯, ೧೭೫, ೧೭೭, ೪೪೫
ಯಾಜ್ಞವಲ್ಕ್ಯ ೮೫
ಯುರೋಪು ೨೮೦

## ರ

ರಂಜನ್ ರಾಯ್ ೫೩೨
ರಜಸ್ ೭೯
ರಜೋಗುಣ ೭೯
ರಟ್ಠಪಾಲ ೧೩೭, ೧೩೭, ೧೩೮, ೧೩೯, ೧೪೦, ೧೪೧
ರಾಘವಾಚಾರ್ ೫೩೧
ರಾಚಿ ೪೬
ರಾಜಗಾಹ ೪೪೧
ರಾಜವಾಡೆ ೧೩೬
ರಾಧ ೨೧೬, ೩೫೮
ರಾಮಗಾಮ ೩, ೫೦೨
ರಾಮಪುತ್ರ ೬೦, ೬೧, ೧೦೭
ರಾಹುಲ ೧೫, ೩೦, ೩೧, ೩೬, ೩೯, ೧೪೭, ೧೪೮, ೧೪೯, ೪೮೧, ೪೮೨

## ಲ

ಲಥಿಕ ೪೮೭
ಲಿಚ್ಛವಿ ೩, ೧೮೭, ೨೮೨, ೩೯೯, ೪೦೦, ೪೩೦, ೪೩೧, ೪೩೯, ೪೮೭, ೪೮೮, ೫೦೨
ಲುಂಬಿನಿ ೬, ೪೭೯
ಲೆಸ್ಲಿ ೫೩೩
ಲೋಕೇಶ್ವರ ೧೪೮
ಲೋಹಿಕ್ಕ ೨೫೮, ೨೫೯, ೨೬೦

## ವ

ವಜಿರ ೪೭೩
ವಶಿಷ್ಠ ೨೦
ವಶ್ಯಕರ ೩೬೮
ವಶ್ಯಮಿತ್ರ ೪೪೯
ವಸ ೪೮೭
ವಸಕರ ೩೬೯, ೩೭೦
ವಸವನ್ನು ೪೮೭, ೪೮೮
ವಸಿಷ್ಠ ೨೨೭, ೨೨೮, ೨೨೯, ೨೩೧, ೨೩೨, ೨೩೩, ೨೬೨, ೩೬೧
ವಸೆತ್ತ ೨೭೧
ವಸೆತ್ತಾ ೩೬೧
ವಸೆಥ ೨೨೮, ೨೩೧, ೨೩೨
ವಸ್ಸಕಾರ ೨೬೨
ವಾಮಕ ೪೪೯
ವಿಂಧ್ಯಕೋಷ್ಠಕ ೫೮
ವಿನ್‌ವುಡ್ ರೀಡ್ ೫೩೧
ವಿಪ್ಪಸ್ಸನ ೨೦೫
ವಿಶಾಖಾ ೪೩೨, ೪೩೪, ೪೪೪, ೪೬೮, ೪೬೯, ೪೭೦, ೪೭೧, ೫೧೩
ವಿಶ್ವಕರ್ಮ ೭೬
ವಿಶ್ವಕಿ ೨೦
ವಿಶ್ವಾಮಿತ್ರ ೧೬
ವೃಕ್ಷದೇವತೆ ೬೪
ವೃಷಭದಂತ ೫೦೭
ವೇಣುವನ ೧೨೮, ೧೭೦, ೨೬೨, ೩೬೭, ೪೧೬, ೪೨೭, ೪೨೮, ೪೨೯, ೪೬೫, ೪೬೭, ೪೮೧, ೫೦೯
ವೇಸಾಲಿ ೪೩೦, ೪೩೧
ವೈರಾಟಪುತ್ರ ೫೧೦
ವೈಶಾಲಿ ೩, ೫೯, ೧೭೫, ೧೮೭, ೩೬೯, ೪೩೯, ೪೭೯, ೪೮೭, ೪೮೮, ೫೦೨
ವೈಶ್ಯ ೨೫,೮೧,೮೩,೨೨೮,೨೫೮,೨೬೯,೨೭೨,೨೭೪

## ಶ

ಶಕ್ರ ೪೮
ಶಕ್ರದೇವ ೨೬೫
ಶಾಕ್ಯ ೩, ೪, ೧೧, ೧೪, ೨೨, ೨೩, ೨೪, ೨೫, ೨೬, ೨೭, ೨೮, ೨೯, ೩೦, ೩೩, ೫೩, ೫೪, ೧೪೯, ೧೫೦, ೧೫೧, ೧೬೭, ೧೭೫, ೪೯೩, ೫೦೨, ೫೧೮, ೫೨೨, ೫೨೮
ಶಾಕ್ಯದೇಶ ೧೪೫
ಶಾಕ್ಯಪುತ್ರ ೪೪೨
ಶಾಕ್ಯಮುನಿ ೩೪
ಶಾಕ್ಯರಾಜ ೧೫೧, ೧೫೩
ಶಾಕ್ಯವಂಶ ೬, ೧೦, ೩೮, ೪೩
ಶಾಕ್ಯಸಿಂಹ ೩೪
ಶಾಖ್ಯರು ೩
ಶಾರ್ಙ್ಗರ ೩೬೫
ಶಾಲವನ ೫೦೦
ಶುದ್ಧೋದನ ೪, ೪, ೫, ೬, ೭, ೮, ೯, ೧೦, ೧೧, ೧೫, ೧೬, ೨೧, ೨೨, ೨೩, ೨೯, ೩೦, ೩೧, ೩೨, ೩೩, ೩೮, ೪೦, ೧೪೫, ೧೪೬, ೧೪೭, ೧೪೮, ೧೪೯, ೧೫೨, ೧೬೯, ೧೯೫
ಶೃಂಖಲೆ ೨೧೫, ೩೫೮
ಶೃತಿ ೮೦
ಶೆಟ್ಟಿ ೧೩೬
ಶೆಲ್ವತಿ ೧೩೫
ಶೋಭಕ ೧೬೮, ೧೬೯
ಶ್ರಮಣ ೧೨೮, ೧೮೦, ೨೬೫, ೪೬೮, ೪೯೪, ೫೦೧, ೫೨೪
ಶ್ರಮಣೇರ ೩೭೬, ೩೭೭
ಶ್ರಾವಸ್ತಿ ೧೩೦, ೧೩೮, ೧೬೩, ೧೬೪, ೧೬೮, ೧೬೯, ೧೭೮, ೧೮೫, ೧೮೬, ೧೮೭, ೧೮೮, ೧೯೮, ೨೪೫, ೨೫೩, ೨೬೬, ೨೬೭, ೨೭೪, ೨೯೪, ೨೯೭, ೩೩೮, ೩೪೦, ೩೪೫, ೩೫೩, ೩೫೭, ೩೫೮, ೩೬೫, ೩೭೦, ೩೭೩, ೪೦೯, ೪೨೮, ೪೨೯, ೪೩೨, ೪೩೪, ೪೪೩, ೪೪೪, ೪೬೯, ೪೭೦, ೪೭೧, ೪೭೨, ೪೭೩, ೪೭೪, ೪೭೬, ೪೭೯, ೪೮೨, ೪೮೪, ೪೯೯, ೫೦೩, ೫೦೪, ೫೧೨, ೫೧೩, ೫೧೫, ೫೨೪
ಶ್ರಾವಸ್ಥಿ ೧೬೩, ೨೧೬
ಶ್ರೀಗಂಧ ೩೯, ೪೯, ೩೧೭

## ಸ

ಸಂಕಪ್ಪೊ ೧೧೨
ಸಂಕಪ್ಪೋ ೧೧೩
ಸಂಖರ ೨೩೬
ಸಂಜಯ ೯೦, ೯೧, ೧೨೬, ೧೨೮, ೪೪೧, ೪೯೫, ೫೧೦
ಸಂತೆಮಾಳ ೨೬೧
ಸಂಸ್ಥಾಫರ್ ೨೨
ಸತ್‌ನ ೭೫
ಸಮಣ ೧೪೯, ೧೬೧, ೧೭೦, ೩೨೦, ೩೨೭, ೩೮೭, ೪೪೧, ೪೪೨, ೪೪೩, ೪೪೬, ೪೪೮
ಸಮ್ಯಕ್ ೬೩, ೩೬೦
ಸಮ್ಯಕ್‌ಜ್ಞಾನ ೬೯, ೭೦
ಸಮ್ಯಗ್‌ದೃಷ್ಟಿ ೧೧೧, ೧೧೨, ೧೧೩
ಸರ್ಪತೀರ್ಥಕ ೬೪
ಸಾರಿಪುತ್ತ ೧೨೬, ೧೨೭, ೧೨೮, ೧೪೫, ೧೪೭, ೧೪೯, ೨೧೬, ೨೧೭, ೨೯೫, ೩೫೧, ೩೫೨, ೩೫೩, ೩೬೧, ೪೮೩
ಸಿಂದಿಯನ್ ೩೫೫
ಸಿಗಳ ೪೧೬, ೪೧೭
ಸಿದ್ಧಾರ್ಥ ೩, ೧೦, ೧೧, ೧೨, ೧೩, ೧೪, ೧೫, ೧೬, ೨೧, ೨೨, ೨೩, ೨೪, ೨೫, ೨೬, ೨೭, ೨೮, ೨೯, ೩೦, ೩೧, ೩೨, ೩೩, ೪೩, ೫೩, ೫೪,೫೭,೧೪೫, ೧೪೬, ೧೪೭, ೫೦೭, ೫೦೯
ಸಿನಹು ೪
ಸಿನ್ಹ ೪೬೦

ಸಿರಿ ೫೨೪
ಸುಂಸುಮರ ೪೭೫
ಸುಂಸುಮರಗಿರ ೪೭೩
ಸುಂಸುಮಾರ ૩
ಸುಜಾತ ೬೪, ೬೭
ಸುದತ್ತ ೫, ೧೩೦, ೧೩೧, ೧೬೩
ಸುನಕ್ಖತ್ತಾ ೨೮೨, ೨೮೪, ೩೯೯, ೪೦೦
ಸುನಕ್ಷತ್ರ ೨೮೨, ೨೮೩, ೩೯೯, ೪೦೦
ಸುನತ್ತ ೩೯೯
ಸುನೀತ ೧೬೭, ೧೬೮
ಸುಪ್ಪಿಯ ೪೦೧
ಸುಪ್ಪಿಯನ ೧೬೯
ಸುಪ್ರಬುದ್ಧ ೧೭೦, ೧೭೧
ಸುಪ್ರಿಯ ೧೬೮, ೧೬೯
ಸುಬಾಹು ೧೨೨
ಸುಭದ್ರ ೫೦೧
ಸುಮಂಗಲ ೧೬೯
ಸುಮಗಧ ೩೮೭
ಸುಮನಾ ೪೬೮
ಸುಮೇಧ ೫
ಸುಯಮ ೫
ಸೂರ್ಯ ೭೬, ೧೫೭, ೫೦೮
ಸೂರ್ಯಚಂದ್ರ ೭೫
ಸೂರ್ಯವಂಶ ೪೪
ಸೆನಿಯ ೪೭೫
ಸೇಖಿ ૩೭೯
ಸೇತವ್ಯ ೪೭೯
ಸೇನಿಯ ೧೨೮, ೧೩೦, ೧೮೭, ೪೫೮
ಸೇಲ ೪೬೮, ೪೭೫, ೪೭೬
ಸೈತಾನ ೨೫೪
ಸೌರಸೇನ ૩
ಸ್ಟೇಸ್ ೫೩೪
ಸ್ವಾಮಿ ೧೮, ೨೩, ૩೬, ೧೨೭, ೧೨೮, ೧೬೭, ೧೭೧, ೨೩೮, ೨೫೮, ೩೮೭, ೩೯೯, ೪೨೦, ೪೩೪, ೪೪೮

## ಹ

ಹಿಮವತ್ ೧೭